ಕರ್ನಾಟಕ ವಿಧಾನಸಭೆಯ ನಡೆವಳಿಕೆಗಳು

KARNATAKA LEGISLATIVE ASSEMBLY DEBATES

(B)025206

ಅಧಿಕೃತ ವರದಿ

OFFICIAL REPORT

ಹತ್ತನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE TENTH LEGISLATIVE ASSEMBLY

ಸಂಪುಟ - ೧ (ಕ್ರಮಾಂಕ ೧ ರಿಂದ ೫)

VOLUME I - (NOS. 1 TO 5)

(೧೯ನೇ ಫೆಬ್ರವರಿ ೧೯೯೬ರಿಂದ ೨೦ನೇ ಫೆಬ್ರವರಿ ೧೯೯೬ರವರೆಗೆ ಮತ್ತು ೨೨ನೇ ಫೆಬ್ರವರಿ ೧೯೯೬ರಿಂದ ೨೩ನೇ ಫೆಬ್ರವರಿ ೧೯೯೬ರವರೆಗೆ ಹಾಗೂ ೨೬ನೇ ಫೆಬ್ರವರಿ ೧೯೯೬)

(19th Febrauary 1996 to 20th February 1996 & 22nd February 1996 to 23rd February 1996 & 26th February 1996)

ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯ, ಬೆಂಗಳೂರು

Karnataka Legislature Secretariat, Bangalore

CONTENTS

TO THE

KARNATAKA LEGISLATIVE ASSEMBLY DEBATES

Volume - I (Nos. 1 to 5)

(೧೯ನೇ ಫೆಬ್ರವರಿ ೧೯೯೬ರಿಂದ ೨೦ನೇ ಫೆಬ್ರವರಿ ೧೯೯೬ರವರೆಗೆ ಮತ್ತು ೨೨ನೇ ಫೆಬ್ರವರಿ ೧೯೯೬ರಿಂದ ೨೩ನೇ ಫೆಬ್ರವರಿ ೧೯೯೬ರವರೆಗೆ ಹಾಗೂ ೨೬ನೇ ಫೆಬ್ರವರಿ ೧೯೯೬)

ಸೋಮವಾರ, ೧೯ನೇ ಫೆಬ್ರವರಿ ೧೯೯೬

ಸಾಯನಸೌರ ಮಾಘ, ಶಕ ೧೭

ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ 1-20

ಮಂಗಳವಾರ, ೨೦ನೇ ಫೆಬ್ರವರಿ ೧೯೯೬

ಸಾಯನಸೌರ ಮಾಘ, ಶಕ ೧೭

1. ಸಂತಾಪ ಸೂಚನೆ 21

ಆಂಧ್ರ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀಯುತ ಎನ್.ಟಿ. ರಾಮರಾವ್ ಮತ್ತಿತರ ಮಾಜಿ ಸದಸ್ಯರುಗಳ ನಿಧನದ ಬಗ್ಗೆ 21-32

ಗುರುವಾರ, ೨೨ನೇ ಫೆಬ್ರವರಿ ೧೯೯೬
ಸಾಯನಸೌರ ಮಾಘ, ಶಕ ೧೭

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮಾತಿನ ಮೂಲಕ ನೀಡಲಾದ ಉತ್ತರಗಳು 33-58

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 58-112

3. ಪ್ರಕಟಣೆಗಳು 112

   1. 20.2.96ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು 112

   2. ಬೆಂಗಳೂರು ನಗರ ಚಿಕ್ಕಪೇಟೆ ಕ್ಷೇತ್ರದಿಂದ 10ನೇ ವಿಧಾನಸಭೆಗೆ ಚುನಾಯಿತರಾಗಿದ್ದ ಡಾ|| ಜೀವರಾಜ್ ಆಳ್ವರವರ ರಾಜೀನಾಮೆ 112

3 ಎ) ಸಭೆಯ ಮುಂದಿಡಲಾದ ಕಾಗದ ಪತ್ರಗಳು 112-113

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 114

   (1) ರಾಜ್ಯದಲ್ಲಿ ವಿದ್ಯುತ್‌ಪೂರೈಕೆ ಹದಗೆಟ್ಟಿರುವ ಬಗ್ಗೆ 114-118

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು 118-132

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 132

   (2) ಡಾ|| ಶಾಮಲಾದೇವಿ ಡೆಂಟಲ್ ಕಾಲೇಜಿನಲ್ಲಿ ನಡೆಯುತ್ತಿರುವ ಅವ್ಯವಹಾರ 132-134

   (3) ಅರಕಲಗೂಡಿನ ವಿವಿಧ ಸಭೆ-ಸಮಾರಂಭಗಳಿಗೆ ಸ್ಥಳೀಯ ಶಾಸಕರಿಗೆ ಆಹ್ವಾನಿಸದೆ ಇರುವುದು 134-142

   (4) ತಮಿಳುನಾಡಿಗೆ ಕಾವೇರಿ ನೀರನ್ನು ಬಿಡುವ ಬಗ್ಗೆ 142-146

7. ಗಮನ ಸೆಳೆಯುವ ಸೂಚನೆ 146

   1. ರಾಜ್ಯದ ಬರಗಾಲ ಪೀಡಿತ (ಡಿ.ಪಿ.ಎ.ಪಿ) ಹಾಗೂ ಗುಡ್ಡಗಾಡು ಪ್ರದೇಶದ ಜನರಿಗೆ ಗೋಧಿಯ ಮೇಲೆ ಕೇಂದ್ರ ಸರ್ಕಾರ ಕೊಡುವ ವಿಶೇಷ ಸಹಾಯಧನವನ್ನು ನೀಡದಿರುವುದು 146-149

8. ನಿಯಮ 351ರ ಮೇರೆಗೆ 149

1. ಕಿರಿಯ ಆರೋಗ್ಯ (ಪುರುಷರು) ಸಹಾಯಕರ ಹುದ್ದೆಗೆ ಸಂದರ್ಶನವನ್ನು ಮುಂದೂಡಿರುವುದು 149-150

2. ಭೂ ನ್ಯಾಯ ಮಂಡಲಿ ಕುರಿತು 150-151

3. ಶಿವಮೊಗ್ಗ ಮೊಗ್ಗಾನ್ ಆಸ್ಪತ್ರೆಯ ಅರವಳಿಕೆ ವೈದ್ಯರಾದ ಡಾ॥ ಆನಂದ್‌ರವರ ವಿಚಾರಗಳು 151-152

9. ಚುನಾವಣಾ ಪ್ರಸ್ತಾವ 152

10. ಶಾಸನ ರಚನಾ ಕಾರ್ಯಕಲಾಪಗಳು 152

(ಎ) ವಿಧೇಯಕ ಮಂಡನೆ 152

1. ಕರ್ನಾಟಕ ಭೂ ಸುಧಾರಣೆಯ (ತಿದ್ದುಪಡಿ) ವಿಧೇಯಕ 1996. 152

2. ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 1996 152-153

11. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣೆ ಪ್ರಸ್ತಾವ 153-241

12. ನಿಯಮ 351ರ ಹೇಳಿಕೆ 241-242

13. ಅನುಬಂಧಗಳು I ಮತ್ತು II 243-251

ಶುಕ್ರವಾರ, ೨೩ನೇ ಫೆಬ್ರವರಿ ೧೯೯೬

ಸಾಯನಸೌರ ಮಾಘ, ಶಕ ೧೭

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 253-278

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 278-317

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 317

(1) ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ 317-318

(2) ಕುಂದಾಪುರ ಕ್ಷೇತ್ರದಲ್ಲಿ ನಾಲ್ಕು ಕೊಲೆ ಪ್ರಕರಣಗಳು 318-321

(3) ಹಿಂದುಳಿದ ವರ್ಗದ ಮೀಸಲಾತಿಯ ಈಡಿಗ ಜಾತಿಯ ಪಟ್ಟಿಯಲ್ಲಿ ಈಡಿಗ ಜಾತಿಗೆ ಸೇರಿದ ಹಾಲ ಕ್ಷತ್ರಿಯ ಎಂಬ ಉಪಪದ ಅಧಿಕಾರಿಗಳ ಕಣ್ತಪ್ಪಿನಿಂದಾಗಿ ಬಿಟ್ಟುಹೋಗಿರುವುದು 321-322

(4) ಕರ್ನಾಟಕ ರಾಜ್ಯ ವೃತ್ತಿ ಶಿಕ್ಷಣ ನೌಕರರು ಕಳೆದ 5 ದಿವಸಗಳಿಂದ ಉಪವಾಸವನ್ನು ಮಾಡುತ್ತಿರುವುದು 322

(5) ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ ಮೈನ್ ರೋಡ್‌ಗಳನ್ನು ಅಗಲ ಮಾಡುವುದರಿಂದ ಅಂಗಡಿ, ಮಳಿಗೆಗಳನ್ನು ಹೊಡೆದು ಹಾಕುತ್ತಿರುವುದು 322-324

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು 324

5. ವರದಿಯನ್ನೊಪ್ಪಿಸುವುದು 324

6. ಗಮನ ಸೆಳೆಯುವ ಸೂಚನೆ 324

1. ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17ರ ಶರಾವತಿ ಸೇತುವೆ ರಿಪೇರಿ 324-336

7. ನಿಯಮ 351ರ ಮೇರೆಗೆ 336

1. ಇತಿಹಾಸದ ಪ್ರಸಿದ್ಧ ಕಂಬಳಗಳಿಗೆ ಪ್ರೋತ್ಸಾಹ ನೀಡುವ ಬಗ್ಗೆ 336-337

2. ಸರ್ಕಾರವು ಗಡಿನಾಡು ಪ್ರದೇಶಾಭಿವೃದ್ಧಿಗೆ ಹಣವನ್ನು ಒದಗಿಸುವುದು 337

3. ಶಿವಮೊಗ್ಗ ಜಿಲ್ಲಾ ಪಂಚಾಯಿತಿಯಿಂದ ಮಂಜೂರಾಗಿರುವ ಕಾಮಗಾರಿಗಳು ಕುಂಠಿತಗೊಂಡಿರುವುದು 337-338

4. ವೃತ್ತಿ ಶಿಕ್ಷಣಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆ ಕುರಿತು 338

5. 1993-94 ಮತ್ತು 94-95ರ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಿಗೆ ಹಣ ಪಾವತಿ ಮಾಡುವ ಕುರಿತು 338-339

6. ಮಂಗಳೂರು ಮಹಾನಗರ ಪಾಲಿಕೆಯ ನಾಗರೀಕರ ವಸತಿ ಸಮಸ್ಯೆ 339-340

7. ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಅವಾಸ್ ಯೋಜನೆಗಳಲ್ಲಿ ಕಟ್ಟಲಾಗುವ ಮನೆಗಳನ್ನು ಹಂಚುವ ವಿಚಾರ 340-341

8. ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಕಳ್ಳತನ ದರೋಡೆಗಳು 341-342

9. ರಾಜಾಜಿನಗರದಲ್ಲಿರುವ 6ನೇ ಬಡಾವಣೆಯಲ್ಲಿ 214 ಸರ್ಕಾರಿ ವಸತಿ ಗೃಹಗಳಿಗೆ ದುರಸ್ತಿ ಮತ್ತು ಸುಣ್ಣ ಬಣ್ಣ ಮಾಡಿಸದೆ ಇರುವುದರಿಂದ ಗೋಡೆಗಳು ಶಿಥಿಲಗೊಂಡಿರುವುದು 342-343

8. ನಿಯಮ 69ರ ಮೇರೆಗೆ ಚರ್ಚೆ 343

ರಾಜ್ಯದಲ್ಲಿ ರೈತರು ಬೆಳೆದಿರುವ ಕಬ್ಬನ್ನು ಸಾಗಿಸಲು ನಿಷೇಧ ವಿಧಿಸಿರುವುದರಿಂದ ರಾಜ್ಯದ ರೈತರಿಗೆ ಉಂಟಾಗಿರುವ ತೊಂದರೆ 343-396

ಸೋಮವಾರ, ೨೬ನೇ ಫೆಬ್ರವರಿ ೧೯೯೬

ಸಾಯನಸೌರ ಮಾಘ, ಶಕ ೧೭

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 397-429

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 429-479

3. ಪ್ರಕಟಣೆ 479-480

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 480

1. ಚಾಮರಾಜಪೇಟೆ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಮಸ್ಯೆ 480-483

2. ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವವರು ಸತ್ಯಾಗ್ರಹವನ್ನು ಮಾಡುತ್ತಿರುವುದು 483-486

3. ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡುವುದು 487-489

4. ಕೆ.ಜಿ.ಎಫ್.ನಲ್ಲಿ ಬಹಳ ಜಸ್ಟೀಸ್ ನಡೆಯುತ್ತಿರುವುದು 489-491

5. ನಿಲುವಳಿ ಸೂಚನೆ-ಅನುಮತಿ ಕೋರಿ ಚರ್ಚೆ 491

1. ಕೆಂಟಕಿ ವಿದೇಶಿ ಕೋಳಿ ಮಾಂಸದ ಮಳಿಗೆ ಬಗ್ಗೆ 491-531

6. ನಿಯಮ 351ರ ಮೇರೆಗೆ 531

1. ರಾಜ್ಯ ಸರ್ಕಾರ ಮೋಟಾರು ವಾಹನಗಳ ಮೇಲೆ ವಿಧಿಸಿದ ಜೀವಮಾನ ತೆರಿಗೆ 531-532

2. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ ಕಾರ್ಮಿಕರ ಸಮಸ್ಯೆ. 532

3. ಅರಕಲಗೂಡು ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ 532-533

4. ಕಳ್ಳಂಬೆಳ್ಳ ಕ್ಷೇತ್ರದ ವ್ಯಾಪ್ತಿಯಲ್ಲಿ ನಿವೇಶನ ಹಂಚಿಕೆ 533-534

5. ಕುಂದಾಪುರ ಕ್ಷೇತ್ರದ ಹುಣ್ಸೆಮಕ್ಕಿ ಬೇಳೂರು ರಸ್ತೆ ಕುರಿತು 534-535

6. ಸರ್ವಜ್ಞನ ಜನ್ಮ ಸ್ಥಳವಾದ ಹಿರೇಕೆರೂರು ತಾಲ್ಲೋಕು ಅಬಲೂರಿನಲ್ಲಿ 2 ಹಂತದ ಕೆಲಸಗಳನ್ನು ಹಮ್ಮಿಕೊಳ್ಳುವುದು 535

7. ಶಾಸನ ರಚನಾ ಕಾರ್ಯಕಲಾಪಗಳು 535

ಎ) ವಿಧೇಯಕ ಮಂಡನೆ 535

1. ಬೆಂಗಳೂರು ನಗರ ಯೋಜನಾ ಪ್ರದೇಶವಲಯ ವಿನಿಯಮಗಳ (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕ 1996. 535-536

ಬಿ) ಪರ್ಯಾಲೋಚನಾ ಪ್ರಸ್ತಾವ 536

1. ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ 1996. 536-581

8. ಅನುಬಂಧ 582-586

ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ.

ಸೋಮವಾರ, ದಿನಾಂಕ 19ನೇ ಫೆಬ್ರವರಿ 1996.

ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತಾಧಿವೇಶನವನ್ನು ಉದ್ದೇಶಿಸಿ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಹ್ನ 3.00 ಗಂಟೆಗೆ ಮಾಡಿದ ಭಾಷಣ.

ಮಾನ್ಯ ರಾಜ್ಯಪಾಲರು ಮಧ್ಯಾಹ್ನ 2.55 ಗಂಟೆಗೆ ವಿಧಾನಸೌಧದ ಮುಖ್ಯಯದ್ವಾರದ ಬಳಿ ಇರುವ ದ್ವಾರಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಅಧ್ಯಕ್ಷರು, ಮಾನ್ಯ ಸಭಾಪತಿಯವರು ಮತ್ತು ವಿಧಾನ ಮಂಡಲದ ಕಾರ್ಯದರ್ಶಿಯವರು ಸ್ವಾಗತಿಸಿದರು. ನಂತರ ಪೂರ್ವ ಭಾಗದಲ್ಲಿರುವ ಲಿಫ್ಟಿಗೆ ರಾಜ್ಯಪಾಲರನ್ನು ಕರೆದೊಯ್ಯಲಾಯಿತು. ಮೊದಲನೆಯ ಮಹಡಿಯಲ್ಲಿ ಲಿಫ್ಟ್‌ನಿಂದ ಹೊರ ಬಂದ ಬಳಿಕ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಕಾರ್ಯದರ್ಶಿಯವರು

ಮಾನ್ಯ ಅಧ್ಯಕ್ಷರು ಮಾನ್ಯ ಸಭಾಪತಿವರು

ರಾಜ್ಯಪಾಲರು
ಎ.ಡಿ.ಸಿ.

ಈ ರೀತಿಯ ಮೆರವಣಿಗೆಯು ವಿಧಾನ ಸಭಾ ಸದನದ ಕಡೆಗೆ ಹೊರಟಿತು. ಸಭಾ ಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೆ, ರಾಜ್ಯ ಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು. ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತು ಕೊಂಡಿದ್ದರು.

ಸಭಾಸದನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆ ಇಬ್ಭಾಗವಾಯಿತು. ವೇದಿಕೆಯ ಮೇಲೆ ಮಾನ್ಯ ಸಭಾಪತಿಯವರು ರಾಜ್ಯ ಪಾಲರ ಎಡಭಾಗದಲ್ಲಿಯೂ ಮಾನ್ಯ ಅಧ್ಯಕ್ಷರು ಬಲಭಾಗದಲ್ಲಿಯೂ ಕುಳಿತುಕೊಂಡರು. ರಾಜ್ಯ ಪಾಲರು ವೇದಿಕೆಯ ಮಧ್ಯಭಾಗದ ಆಸನದಲ್ಲಿ ಕುಳಿತುಕೊಂಡರು. ಕಾರ್ಯದರ್ಶಿಯವರು ವೇದಿಕೆಯ ಮುಂದುಗಡೆ ಇರುವ ಆಸನದಲ್ಲಿ ಕುಳಿತು ಕೊಂಡರು.

ರಾಜ್ಯಪಾಲರ ಭಾಷಣ

ಸನ್ಮಾನ್ಯ ರಾಜ್ಯಪಾಲರು : ಸನ್ಮಾನ್ಯ ಸಭಾಪತಿಗಳಿಗೆ, ಸನ್ಮಾನ್ಯ ಸಭಾಧ್ಯಕ್ಷರೆ, ಮತ್ತು ಸನ್ಮಾನ್ಯ ಸದಸ್ಯರೆ,

(At this stage hon mamber sri Vatal Nagaraj startes to read his own speech)

1. It is with great pleasure that I welocome you to this joint Sessoin of the State Legislature. As this is the first Session in the Current year. I offer to you and through you to the people of Karnataka. my good wishes for the New Year. I would also like to take this opportunity to congratulate

my Government on its successful completion on one year in office. The thrust during this period has been on consolidation along with structured change. We have tried to tone up the administration and gear up the machinery for redressal of public grievances. The Janatha Darshan Programmes organised in the districts took the Government virtually to the door-steps of the people and evoked a very good response. I am glad to mention that the griecances and other representations of the people are being clsely monitored by the Public Grievance Organisation, which has now been brought under the direct control of the Chief Minister.

2. In its first year of Office, my Government has also responded to the challenges in the social and economic sphere by fashioning new and innovative policies and programmes for the all-round betterment of the people of Karnataka. In doing so, we have attempted to make full use of all the opportunities thrown up by the new national policy of economic liberalisation, in selected areas, for the benefit of our people. A favourable investment climate has been created which is expected to provide improved infrastructure for economic development and generate substantial employment opportunities within the State.

(ಈ ಹಂತದಲ್ಲಿ ಮಾನ್ಯ ಬಿ.ಐ. ಪಾಟೀಲರ ನೇತೃತ್ವದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಘೋಷಣೆ ಕೂಗುತ್ತಾ ಸಭಾತ್ಯಾಗ ಮಾಡಿದರು)

3. The spitr of consultation , conciliation dialogue and discussion has been the hallmark of my Government's approach to the resolution of law and order problems. you are aware that by adopting this approach a permanent solution was found to a very sensitive problem concernining the disputed Idga Maidan at Hubli, which used to give rise to periodic out-breaks of violence. The same spirit of conciliation and consensus tempered with firmness has helped to defuse tensions in respect of other explosive situations which arose from time to time.

4. It is a matter of pride for us also that as in the case of the elections to Zilla Panchayats and Panchayat Samithis last March, my Government has conducted the municipal elections throughout the Sate of Karnataka, except for Dakshina Kannada and Bangalore City, in a smooth and congenial atmosphere, last month, Besides taking a firm stance in maintaining law and order in all cases, my Government is committed to protecting in particular, the interests of women, weaker sections and minorities in the State.

5. My Government has formulated a new and innovative agricultural policy ensure comprehensive and integrated development of the agriculture sector and bring prosperity to the farming community. This is being implemented with utmost earnestness and a Cabinet Sub-Committee has been entrusted with the responsibility of overseeing and ensuring its timely and effective implementation.

6. My Government intends to provide a sharper focus to the development of rainfed agriculture on a watershed basis. With this in view, we shall be launching a special watershed development programme each revenue division of the State. This will be in addition to the new watershed development programme funded by the Swiss Government, which has already been taken up in five other districts. It shall also be our endeavour to set up a national-level institure for watershed management in the State.

7. We are proposing to set up two hi-tech agricultural parks in the State to encourage adoption of modern technology in agriculture and horticulture. Krishi Prashasti will be extended to cover farmers growing horticultural crops as well so as to recognise the contribution made by outstanding horticulturists in Karnataka.

8. Credit is a very important component of the agricultural production programme of the State. Members are aware that as a reaction to the interest waiver schemem announced by the Government, Nabard stopped re-finance facilities to our co-operative bankas from 1-1-1995. However, I am happy to record that the issue has since been resolved leading to the restoration of the requisite credit flows from Nabard.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಕಪ್ಪು ಬಟ್ಟೆ ಪ್ರದರ್ಶನ ಮಾಡುತ್ತಾ ಸಭಾತ್ಯಾಗ ಮಾಡಿದರು).

9. My Government is making all-out efforts to implement the Upper Krishna Project by 2000 A.D, So as to fully protect the interests of Karnataka in this inter State river. Funds required for the project are being mobilized mainly through the Krishna Bhagya Jala Nigam. The Jala Nigam has already succeeded in raising Rs. 180 crores by private placement. A second tranche of funds amounting to Rs. 250 crores is proposed to be raised by the Nigam very shortly through a public issue. To accelerate the process of rehabilitation and re-settlement, a senior officer has been posted at Bagalkot as Commissioner and delegated with the powers of the Revenue Secretary.

10. In the matter of Couvery water dispute, I am happy to inform the Members that a major break through has been achieved due to the sustatined efforts of my Government and the united stand taken by political parties of the

State on the basic issues involved. For the first time in the history of inter-State water disputes, the limitations involved in adopting a purely juridical approach to solving such problems has been recognised. The Supreme Court requested the Prime Minster of India to mediate in the matter, after consulting both the State Governments and assessing the ground realities. The Prime Minister, in turn, after perusing all the materials painstakingly collected and placed before him by my Government, directed release of 6 T.M.C. of water by Karnataka. As Members know, this was duly complied with by my Government in deference to the wishes of the Prime Minister and in consonance with an unanimous resolution passed at an all party meeting of the State Legislators. At the urging of Karnataka Government, Prime Minister also deputed an Expert Team to make a thorough assessment of the needs and requirements of farmers of both the States, in the contest of the overall shortfall of surface flows in the Cauvery basin in the current year. The report of the Expert Team has not yet been made available to my Government.

11. Karnataka's stand that such disputes should be sorted out through the issue of guidelines on the sharing of inter-State river waters was also vindicated when the Prime Minister, in response to a strong plea made by my Government, convened the long over-due meeting of the National Water Resources Council earlier this month, to discuss the draft guidelines prepared by the Central Water Authority on this issue. Although a complete consensus on the points in dispute could not be achieved at this meeting, it is significant to note that, for the first time, Karnataka was able to place a detailed set of recommendations before that august body, on the principles which should govern the blanced and equitable aportionment of river water between riparian States, which were prepared on the basis of the unanimous resolution passed at a meeting of legislators representing all political parties and technical experts.

12. Generation of power, which is one of the basic requirements of development, received a setback in the year 1995-96 dute to inadequate rainfall in catchment areas of the hydro-reservoirs of the State. As hydel power contruibutes 78% of the total energy generated within the State, my Government was constrained to impose power cuts on various categories of consumers in order to conserve energy availability and ensure equitable distribution till the onset of next monsoon.

13. My Government has been able to mitigate the power shortage somewhat by securing a 10% increase in the allotment being made to the State from the unallocated share of power emenating from central generating stations in the Southern Grid. The State has also been receiving 140 million units of energy * from August till date from Maharashtra to tide over the crisis. A novel arrangement for exchange of waterfor hydel-power has been worked out with Maharashtra by which 210 million units of additional energy will be given to Karnataka in exchange for 7.5 TMC of water which is the joint share of Karnataka and Andhra Pradesh at Koyna. My Government wishes to acknowledge this gesture of good will on the part of our neighbouring State Governments. In addition, our Government Company, Karnataka Power Corporation, has stepped up generation at Raichur Thermal Power Station to a considerable degree.

14. As a long-term measure, Government has decided to establish power plants in various locations in the State, with a total installed capacity of 6910 MW, through private sector agencies. This includes the 1000 MW power plant to be set up by Mangalore Power Company (Cogentrix) near Mangalore.

15. As a short term measure, bids have been invited for setting up a capacity of 400 MW through barge-mounted power stations located on the Karnataka cost, which are expected to be commissioned in 1995 itself. Bids have also been obtained for setting up small multi-fuel power plants at 20 different load centres in the State with a minimum capacity of 20 MW each, all of which are expected to be commissioned within 15 months. The Government has also given approval to KPCL to take up the V and VI units of Raichur Thermal Power Plant, with a capacity of 420 MW and also to set up a 300 MW combined cycle power plant at Bidadi.

16. A major step for ward in promoting the rapid growth in infrastructure as well as high-tech economic activities such as floriculture, has already been taken by amending the Land Reforms Act to facilitate private purchases of agricultural land. within certain ceiling limits, subject to the prior approval of Government. The rules being worked out, to regulate such private purchases of agricultural land, will provide adequate safeguards to protect the interests of the farmers and prevent possible misuse by others.

17. Members will be happy to know that the loan negotiations for the IV Stage Cauvery Water Supply Scheme to the Bangalore City have been

---

Corrected as ordered by the chair on the request of the Hon'ble Chief Minister in the House on 2.3.96

successfully completed with OECF, Japan, and that this Rs. 1070 Crore scheme is expected to take off shortly.

18. My Government has noted with concern the continuing problem of cost and time over runs in the implementation of the urban water supply schemes outside Bangalore. An in-depth look is being taken at the project financing pattern of these water supply schemes with a view to bringing the same on par with the financial package evolved for water supply schemes for Bangalore City. A rationalised minimum rate structure which would generate sufficient resources for municipalities to cover the cost of running these water supply schemes and meeting their debt obligations, is also uder consideration.

19. The development of a modern, intergrated road network is crucial to optimum economic growth A wide range of such communication facilities is therefore beeing planned and implemented, using public funds as well as private investment resources and foreign loan assistance. To begin with, a scheme has been drawn up to provide 50 KM of all weather village roads, in each and every Assembly constituency, by tapping the financial resources of the local agricultural market committees. It is proposed to raise the prescribed market fees from 1% to 2% for the purpse. For the rest, a scheme for development of a network of rural roads with the loan assistance from the World Bank is .under preparation.

20. My Government has taken a decision to up grade State highways by encouraging private sector participation. A link road near Bangalore to connect tow major national highways has also been taken up in order to decongest the traffic in the State capital.

21. The Formulation of a new industrial policy for the State is on the anvil. The thrust will be on providing sound infrastructural facilities, employment generation, creating facilities for research and development, and giving special incentives to women entrepreneurs and technocrats as well as village and tiny sector industries, My Government is equally keen to take due care of the interests of labour while going ahead with the promotion of industries in the State.

22. A comprehensive scheme for rehabilitation of sick small-scale industrial units is being worked out, with a package of reliefs and concessions taht would help meet a long-felt need in this important sector of industrial activity.

23. My Government is sensitive to the ecological issues involved in industrial development, particularly in the coastal region of the State. I am happy to state that the DANIDA - assisted Environmental Master Plan Study

for Dakshin Kannada District has been completed and its recommendations are under active consideration. Containment of environmnetal damage due to mining and quarrying in the ecologically - sensitive areas, conducting botanical as well as biological surveys in the western ghats and establishment of eco-parks, will be our other main thrust areas in the sphere of environment and ecology.

24. In the sphere of health carem our main focus hitherto has been on primary level hospitals. To restore the balance, a massive programme is now being launched to revamp, upgrade, modernise and expend all the health facilities in the State at the secondary level, covering taluka and distrct hospitals, inclusung a large number of teachning hospitals. The programme will benefit nearly 250 hospital in all the districts of the State. Under specific agreements which have just been concluded, World Bank will be providing financial assistance to the tune of Rs. 550 crores and a German agency will be adding an outright grant of about Rs. 80 crores for the project.

25. In the field of primary education, our goals continue to be those of universal access, universal retention and universal achievement. 9350 primary school teachers have already been recruited during the last one year, Impressed by our achievement under the District Primary Education Programme, the Government of India has agreed to extend the programme to cover five more districts in the State in 1996-97. Members will be happy to know that this will infuse additional funds amounting to Rs. 200 Crores during the project period.

26. On the lines of the Morarji Desai Residential Schools, my Government has sanctioned five residential schools exclusively for the benefit of the students of Muslim minority community in the State. These Urdu medium residential schools will be run by reputed Muslim minorit institutions in the educational field.

27. To provide widespread access to learning for working men and women and those who are unable to pursue their educational goals through the formal academic system, an Open University will be started at Mysore from the next academic year.

28. The housing needs of the poor are a matter of great concern for my Government. An official survey which was conducted last summer has revealed that there is immediate need to provide shelter by way of houses and residential sites for about 19 lakh families in the State.

29. My Government intends to provide shelter to all thees identified families in the course of the next 5 years, in a phased manner. With this in view,

a separate Department of Housing has been set up in the State Secretariat. The new Housing Department has in turn drawn up an action plan for distribution of 1,75,000 sites in the rural areas and 78,500 sites in the urban areas. The action plan also envisages the construction of about 1,20,000 houses under the Ashraya, Ambedkar and Indira Avas Housing Programmes. To achieve the goal of Providing one house to every houseless family in the State, a Policy encouraging provate investment in large-scale housing projects has also been finalised.

30. Our deep sense of commitment to the epochmaking system of democratic decentralisation in the State is well-known. In keeping with the promise made on the last occasion, the Karnataka Panchayati Raj Act, 1993, has already been amended to vest executive powers in the elected head of the Zilla Panchayat, Furthere amendments to the Act will be introduces after considering the recommendations of the Expert Committee constituted for the purpose, whose report is expected shortly. .

31. My Governmenvt is implementig various schemes to improve the quality of life if the rural folk through the all-round development of the rural areas. The year a massive programme on rural enviromental sanitation, called "Nirmala Grama Yojana", was launched on Gandhi Jayanthi, It envisages the construction of 100 house hold sanitary latrines per Grama Panchayat. The Initial response to this programme has been very encouraging and about 75,000 households have already been provided with sanitary latrines during the last four months, My Governmenvt is determined to cover at least 30 percent of rural of the century.

32. Certain parts of our State have started facing acute drought conditions from the beginning of this calendar year leading to scarcity of drinking water in villages and smaller towns. My Government will leave no stone unturned in order to help tide over this problem in the next few months.

33. As part of its efforts to create more employment opportunities for youth in the rural areas, my Government has decided to provide adequate representation for them in Government service by increasing the existing weightage in recruitment for candidates studying in village schools. Steps have already been taken to amend the General Recruitment Rules for the purpose.

34. My Government has fulfilled its promise of supplying 10 Kgs of rice at a subsidised rate to all green card holders in rurial areas with effect from

1.4.1995. This scheme has since been extended to cover about 5 lakh families belonging to the urban poor.

35. My Govenmenvt stands wholly committed to the walfare of Scheduled Castes and Tribes. backward classes and minorities. The thrust areas have been identifed as educations, housing and irrigation requirements. Accordingly, one hundred and fiftynine hostels for SCs and STs and seventyfive hostels for BSc and minorities have been started in the corrent fincancial year. About 80 thousand houses are under construction for SCs/STs in the ruralk areas, Similarly. about 25 thousand acres of land belonging to these communities are expected to be irrigated under the Ganga Kalyana Scheme.

36. Increasing the particpation of women, in the process of both decision-marking and implementation of various programmes of the Government, is of prime concern to us. In addition to providing reservations in membership and elected offices in the local bodies, my Government jobs for women, for which the relevant recruitmenvt rules are being amended. Government has also earmarked one-third of the resources in all beneficiary-oriented programmes for women. I am proud to mention that the Karnataka Mahil Abhivrudhi Yojana, as it is known, has become such a trend-setter that the Government of India has asked all State Governments to follow our example.

37. My Government feels that greater efficiency and transparancy in the working of the Stamps and Registration department is a must, both for preventing undue loss of revenue nd exploitation of the public. With this in view, guidance values for sites and properties in each unit area are being worked out. Arrangements are also being made to deliver registration documents within 8 days.

38. A single, comrehensive Endowments Act, applicable to all religious and charitable institutions throughout the State, is being brought before the Legislature shortly. Proposals for improving the service conditions of Archaks and Moulvis working in Muzrai and Wakf Institutions respectively, are also under consideration.

39. As Members ara aware, Karnataka is a veritable treasure-trove for tourists. To take care of the expected boom in the number of tourists, in the years to come, it is proposed to abopt a pro-active policy and provide special incerntives to the private sector to fill up the gaps in the tourist infrastructure. My Government also proposes to bring in a special Bill before the Legislature for regulating tourist activity in the State.

40. Members are aware of the vast reach and potential of Cinema as an art form, an industry a means of mass entertainment and also an effective

instrument of social change. With a view to developing Kannada Cinema in all these respects, my Government proposes to establish a "Kannada Chalan Chitra Academy".

41. I am happy to inform the members that the trusts constituted by my Government in the name of renowned Kannada literators viz., Rashtrakavi Kuvempu, Dr, Da.Ra. Bendre and Dr. Pu.Thi. Narasimhachar, respectively,. have started functioning. with a view to desseminating the invaluable contributions made by these eminent personalities in the field of languiage and literature, My Government will assist these trusts in publishing their wroks.

42. My Government is seriously considering the desirability of re-introducing prohibition in the State, Keeping in view the Provisions of Article 47 of the Directive Principles of State Pilicy in our Constitution.

43. In my address I have touched upon some important areas of concern as well as the main policies and programmes that my Government will be implementing in the course of the year. As all-round economic development with social-justice is my Government's motto, a large number of other plans and schemes to further these objectives are on our agenda and will be announced in due course.

44. Let me conclude my address by wishing Members of both the Houses present here every success in their deliberations.

Jai Hind, Jai Karnataka.

ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣ ಕನ್ನಡದ ಭಾಷಾಂತರ

ಮಾನ್ಯ ರಾಜ್ಯಪಾಲರು,

1. ಸನ್ಮಾನ್ಯ ಸಭಾಪತಿಗಳೇ, ಸನ್ಮಾನ್ಯ ಸಭಾಧ್ಯಕ್ಷರೇ ಮತ್ತು ಸನ್ಮಾನ್ಯ ಸದಸ್ಯರೇ, ತಮ್ಮನ್ನೆಲ್ಲಾ ರಾಜ್ಯ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ಸ್ವಾಗತಿಸಲು ನನಗೆ ಬಹಳ ಸಂತೋಷವಾಗುತ್ತಿದೆ. ಇದು ಈ ವರ್ಷದ ಮೊದಲನೇ ಅಧಿವೇಶನವಾಗಿರುವ ಕಾರಣ, ನಾನು ತಮಗೂ ಮತ್ತು ತಮ್ಮ ಮೂಲಕ ಕರ್ನಾಟಕದ ಜನತೆಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ. ಇದೇ ಸಂದರ್ಭದಲ್ಲಿ ನನ್ನ ಸರ್ಕಾರವು ತನ್ನ ಅಧಿಕಾರಾವಧಿಯ ಒಂದು ವರ್ಷವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಒಂದು ವರ್ಷದ ಅವಧಿಯಲ್ಲಿ ರಚನಾತ್ಮಕ ಬದಲಾವಣೆ ಹಾಗೂ ಬಲವರ್ಧನೆಗೆ ಒತ್ತು ನೀಡಲಾಗಿದೆ. ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸುವುದಕ್ಕಾಗಿ ಆಡಳಿತ ಯಂತ್ರವನ್ನು ಚುರುಕುಗೊಳಿಸಿ, ಅದನ್ನು ಸೂಕ್ತ ರೀತಿಯಲ್ಲಿ ಸಜ್ಜುಗೊಳಿಸಿದ್ದೇವೆ. ಜಿಲ್ಲೆ ಜಿಲ್ಲೆಗಳಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ಏರ್ಪಡಿಸುರುವುದರಿಂದ ಸರ್ಕಾರವನ್ನು ಜನರ ಮನೆ ಬಾಗಿಲಿಗೇ ಕೊಂಡ್ಯೊಯ್ದಂತಾಗಿದೆ

ಹಾಗೂ ಜನರಿಂದ ಅತ್ಯುತ್ತಮ ಪ್ರತಿಕ್ರಿಯೆ ಬಂದಿದೆ. ಸಾರ್ವಜನಿಕ ಕುಂದು ಕೊರತೆ ವಿಚಾರಣೆ ವಿಭಾಗವು ಈಗ ಮುಖ್ಯಮಂತ್ರಿಯವರ ನೇರ ನಿಯಂತ್ರಣದಲ್ಲೇ ಇರುವುದರಿಂದ ಜನರ ಅಹವಾಲುಗಳ ಮತ್ತಿತರ ಮನವಿಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ನಿಕಟ ಮೇಲ್ವಿಚಾರಣೆ ನಡೆಸಲಾಗುತ್ತಿದೆ ಎಂಬ ಅಂಶವನ್ನು ತಿಳಿಸಲು ಸಂತೋಷವಾಗುತ್ತಿದೆ.

2. ತನ್ನ ಅಧಿಕಾರಾವಧಿಯ ಮೊದಲನೇ ವರ್ಷದಲ್ಲಿ ನನ್ನ ಸರ್ಕಾರವು ಕರ್ನಾಟಕದ ಜನತೆಯ ಸರ್ವತೋಮುಖ ಏಳಿಗೆಗಾಗಿ ನವ ನವೀನ ಕಾರ್ಯ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಸಾಮಾಜಿಕ ಮತ್ತು ಆರ್ಥಿಕ ರಂಗಗಳಲ್ಲಿನ ಸವಾಲುಗಳಿಗೆ ಕೂಡ ಪ್ರತಿಸ್ಪಂದಿಸಿದೆ. ಹೀಗೆ ಮಾಡುವಾಗ ಆರ್ಥಿಕ ಉದಾರೀಕರಣದ ಹೊಸ ರಾಷ್ಟ್ರೀಯ ನೀತಿಯಿಂದ ದೊರೆತ ಎಲ್ಲ ಅವಕಾಶಗಳನ್ನು ಆಯ್ದ ರಂಗಗಳಲ್ಲಿ ನಮ್ಮ ಜನತೆಗೆ ಅನುಕೂಲವಾಗುವಂತೆ ಪೂರ್ಣವಾಗಿ ಬಳಸಿಕೊಳ್ಳಲು ಪ್ರಯತ್ನಗಳನ್ನು ಮಾಡಿರುತ್ತೇವೆ. ಹೂಡಿಕೆದಾರರಿಗೆ ಅನುಕೂಲಕರ ವಾತಾವರಣವನ್ನು ಕಲ್ಪಿಸಿದ್ದೇವೆ. ಇದರಿಂದ ಆರ್ಥಿಕ ಅಭಿವೃದ್ಧಿಗೆ ಸುಧಾರಿತ ಮೂಲಭೂತ ಸೌಲಭ್ಯಗಳು ದೊರಕುತ್ತವೆ ಮತ್ತು ರಾಜ್ಯದಲ್ಲಿ ಗಣನೀಯ ಪ್ರಮಾಣದಲ್ಲಿ ಉದ್ಯೋಗಾವಕಾಶಗಳು ಉಂಟಾಗುತ್ತವೆ ಎಂದು ನಿರೀಕ್ಷಿಸಲಾಗಿದೆ.

3. ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಯನ್ನು ಪರಿಹರಿಸಲು ಸಮಾಲೋಚನೆ, ಸಂಧಾನ, ಸಂವಾದ ಹಾಗೂ ಚರ್ಚೆಯಂತಹ ಮಾರ್ಗಗಳನ್ನು ಅನುಸರಿಸುತ್ತಿರುವುದು ನನ್ನ ಸರ್ಕಾರದ ವಿಶೇಷ ವಿಧಾನವಾಗಿದೆ. ಹುಬ್ಬಳ್ಳಿಯ ಈದ್ಗಾ ಮೈದಾನದ ವಿವಾದವು ಪದೇ ಪದೇ ಹಿಂಸೆಗೆ ಎಡೆ ಕೊಡುತ್ತಿದ್ದು, ಮೇಲ್ಕಂಡ ವಿಶಿಷ್ಟ ವಿಧಾನವನ್ನು ಅನುಸರಿಸಿ ಅತ್ಯಂತ ಸೂಕ್ಷ್ಮ ಸಮಸ್ಯೆಗೆ ಒಂದು ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲಾಗಿದೆ ಎಂಬ ವಿಚಾರ ತಮ್ಮೆಲ್ಲರಿಗೂ ತಿಳಿದೇ ಇದೆ. ಆಗಾಗ್ಗೆ ಸಿಡಿದೇಳುತ್ತಿದ್ದ ಇತರ ಸ್ಫೋಟಕ ಸನ್ನಿವೇಶಗಳಲ್ಲೂ ಇದೇ ಬಗೆಯ ದೃಢ ನಿಲುವಿನೊಂದಿಗೆ ಕೂಡಿದ ಸಂಧಾನ ಮತ್ತು ಸಮಾನಾಭಿಪ್ರಾಯ ಗಳಿಸುವ ವಿಧಾನವು ಉಲ್ಬಣ ಪರಿಸ್ಥಿತಿಗಳನ್ನು ಶಮನಗೊಳಿಸಲು ನೆರವಾಗಿದೆ.

4. ಕಳೆದ ಮಾರ್ಚಿಯಲ್ಲಿ ಜಿಲ್ಲಾ ಪಂಚಾಯತಿ ಹಾಗೂ ಪಂಚಾಯತಿ ಸಮಿತಿ ಚುನಾವಣೆಗಳನ್ನು ನಡೆಸಿದ ರೀತಿಯಲ್ಲಿಯೇ ನನ್ನ ಸರ್ಕಾರವು, ಬೆಂಗಳೂರು ನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಬಿಟ್ಟು ಕರ್ನಾಟಕದಾದ್ಯಂತ ಪುರಸಭಾ ಚುನಾವಣೆಗಳನ್ನು ಕಳೆದ ತಿಂಗಳು, ಸರಾಗವಾಗಿ ಮತ್ತು ಸೌಹಾರ್ದಪೂರ್ಣ ವಾತಾವರಣದಲ್ಲಿ ನಡೆಸಿತು ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ. ಎಲ್ಲ ಸಂದರ್ಭಗಳಲ್ಲೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ದೃಢ ನಿಲುವನ್ನು ತೋರುವುದರ ಜೊತೆಗೆ ನನ್ನ ಸರ್ಕಾರವು ರಾಜ್ಯದಲ್ಲಿ ಜನರ ಹಿತರಕ್ಷಣೆ, ಅದರಲ್ಲೂ ಮಹಿಳೆಯರ, ದುರ್ಬಲ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಹಿತರಕ್ಷಣೆಗೆ ಕಂಕಣಬದ್ಧವಾಗಿದೆ.

5. ಕೃಷಿ ವಲಯದಲ್ಲಿ ವ್ಯಾಪಕ ಮತ್ತು ಸಮಗ್ರ ಅಭಿವೃದ್ಧಿಯನ್ನು ಸಾಧಿಸಲು ಮತ್ತು ರೈತ ಸಮುದಾಯಕ್ಕೆ ಸಮೃದ್ಧಿಯನ್ನು ತರಲು ನನ್ನ ಸರ್ಕಾರವು ಹೊಸ ಮತ್ತು ನವೀನ ಕಾರ್ಯನೀತಿಯೊಂದನ್ನು ರೂಪಿಸಿದೆ. ಈ ಕಾರ್ಯನೀತಿಯನ್ನು ಮನಃಪೂರ್ವಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಮತ್ತು ಈ ಕಾರ್ಯನೀತಿಯ ಮೇಲ್ವಿಚಾರಣೆಯ ಹಾಗೂ ಇದು ಸಕಾಲದಲ್ಲಿ ಮತ್ತು ಪರಿಣಾಮಕಾರಿಯಾಗಿ ಕಾರ್ಯಗತಗೊಳ್ಳುವಂತೆ ಮಾಡುವ ಜವಾಬ್ದಾರಿಯನ್ನು ಸಚಿವ ಸಂಪುಟದ ಉಪಸಮಿತಿಗೆ ವಹಿಸಲಾಗಿದೆ.

6. ನನ್ನ ಸರ್ಕಾರವು ಜಲಾನಯನ ಆಧಾರದ ಮೇಲೆ ಮಳೆ ಆಧಾರಿತ ಕೃಷಿಯ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಲು ಉದ್ದೇಶಿಸಿದೆ. ಈ ಅಂಶವನ್ನು

ದೃಷ್ಟಿಯಲ್ಲಿಟ್ಟುಕೊಂಡು ಇಸ್ರೇಲ್ ತಂತ್ರ ಜ್ಞಾನವನ್ನು ಆಧರಿಸಿದ ವಿಶೇಷ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮವನ್ನು, ರಾಜ್ಯದ ಪ್ರತಿಯೊಂದು ರೆವಿನ್ಯೂ ವಿಭಾಗದ ಒಂದು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಿದ್ದೇವೆ. ಸ್ವಿಸ್ ಸರ್ಕಾರವು ಹಣಕಾಸು ಒದಗಿಸಿರುವ ಮತ್ತು ಈಗಾಗಲೇ ಐದು ಇತರ ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿರುವ ಹೊಸ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದ ಜೊತೆಗೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು. ರಾಜ್ಯದಲ್ಲಿ ಜಲಾನಯನ ಪ್ರದೇಶ ನಿರ್ವಹಣೆಗಾಗಿ ರಾಷ್ಟ್ರಮಟ್ಟದ ಸಂಸ್ಥೆಯೊಂದನ್ನು ಸ್ಥಾಪಿಸುವುದು ಸಹ ನಮ್ಮ ಪ್ರಯತ್ನವಾಗಿದೆ.

7. ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವುದಕ್ಕೆ ಪ್ರೋತ್ಸಹ ನೀಡುವ ಸಲುವಾಗಿ ರಾಜ್ಯದಲ್ಲಿ ಎರಡು ಉನ್ನತ ತಂತ್ರಜ್ಞಾನದ ಕೃಷಿ ಪಾರ್ಕ್‌ಗಳನ್ನು ಸ್ಥಾಪಿಸಲು ನಾವು ಉದ್ದೇಶಿಸಿದ್ದೇವೆ. ಕರ್ನಾಟಕದ ಹೆಸರಾಂತ ತೋಟಗಾರಿಕೆ · ತಜ್ಞರು ತೋಟಗಾರಿಕೆ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಗುರುತಿಸಿ ಮಾನ್ಯ ಮಾಡುವ ದೃಷ್ಟಿಯಿಂದ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಿಗೂ ಕೃಷಿ ಪ್ರಶಸ್ತಿ ನೀಡಲಾಗುವುದು.

8. ಕೃಷಿ ಸಾಲ, ರಾಜ್ಯ ಕೃಷಿ ಉತ್ಪಾದನೆ ಕಾರ್ಯಕ್ರಮಗಳ ಒಂದು ಬಹು ಮುಖ್ಯ ಭಾಗ. ಸರ್ಕಾರವು ಬಡ್ಡಿ ಮನ್ನಾ ಯೋಜನೆಯನ್ನು ಘೋಷಿಸಿದ್ದಕ್ಕೆ ಪ್ರತಿಕ್ರಿಯೆಯಾಗಿ ನಬಾರ್ಡ್ ಸಂಸ್ಥೆಯು 1-1-1995ರಿಂದ ನಮ್ಮ ಸಹಕಾರ ಬ್ಯಾಂಕುಗಳಿಗೆ ಪುನರ್ಧನ ನೀಡಿಕೆ ಸೌಲಭ್ಯಗಳನ್ನು ನಿಲ್ಲಿಸಿರುವ ವಿಷಯ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಈ ವಿಷಯ ಈಗ ಬಗೆಹರಿದಿದ್ದು, ನಬಾರ್ಡ್ ಸಂಸ್ಥೆಯು ಸಾಲ ನೀಡಿಕೆ ಸೌಲಭ್ಯವನ್ನು ಪುನಃ ಪ್ರಾರಂಭಿಸಿದೆಯೆಂಬುದನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ.

9. ಅಂತರರಾಜ್ಯ ನದಿಯಾದ ಕೃಷ್ಣ ನದಿ ನೀರಿನ ಬಳಕೆಯಲ್ಲಿ ರಾಜ್ಯದ ಹಿತವನ್ನು ಸಂಪೂರ್ಣವಾಗಿ ಕಾಪಾಡಿಕೊಂಡು ಬರುವಂತೆ ಮಾಡಲು, ಕ್ರಿ.ಶ. 2000 ದ ವೇಳೆಗೆ ಕೃಷ್ಣಾಮೇಲ್ದಂಡೆ ಯೋಜನೆಯನ್ನು ಕಾರ್ಯಗತಗೊಳಿಸಲು ನನ್ನ ಸರ್ಕಾರವು ಸಕಲ ಪ್ರಯತ್ನಗಳನ್ನು ಮಾಡುತ್ತಿದೆ. ಈ ಯೋಜನೆಗೆ ಬೇಕಾದ ಹಣವನ್ನು ಮುಖ್ಯವಾಗಿ ಕೃಷ್ಣ ಭಾಗ್ಯ ಜಲ ನಿಗಮದ ಮೂಲಕವಾಗಿ ಸಂಗ್ರಹಿಸಲಾಗುತ್ತಿದೆ.

ಜಲ ನಿಗಮವು ಈಗಾಗಲೇ ಖಾಸಗೀ ವಲಯದಿಂದ 180 ಕೋಟಿ ರೂ.ಗಳ ಮೊಬಲಗನ್ನು ಪಡೆದುಕೊಳ್ಳುವಲ್ಲಿ ಸಫಲವಾಗಿದೆ. 250 ಕೋಟಿ ರೂ.ಗಳಷ್ಟಾಗುವ ಎರಡನೇ ಹಂತದ ನಿಧಿ ಸಂಗ್ರಹಣೆಯನ್ನು ಅತಿ ಶೀಘ್ರದಲ್ಲಿಯೇ ಪಬ್ಲಿಕ್ ಇಷ್ಯೂ ಮೂಲಕ ಸಂಗ್ರಹಿಸಲು ನಿಗಮವು ಉದ್ದೇಶಿಸಿದೆ. ಪುನರ್ವಸತಿ ಹಾಗೂ ಪುನರ್ವ್ಯವಸ್ಥೆ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಒಬ್ಬ ಹಿರಿಯ ಅಧಿಕಾರಿಯನ್ನು ಆಯುಕ್ತರನ್ನಾಗಿ ಬಾಗಲಕೋಟೆಯಲ್ಲಿ ನೇಮಿಸಲಾಗಿದೆ ಮತ್ತು ಕಂದಾಯ ಇಲಾಖೆಯ ಕಾರ್ಯದರ್ಶಿಯವರ ಅಧಿಕಾರಗಳನ್ನು ಅವರಿಗೆ ನೀಡಲಾಗಿದೆ.

10. ಕಾವೇರಿ ಜಲ ವಿವಾದದ ವಿಷಯದಲ್ಲಿ ನನ್ನ ಸರ್ಕಾರದ ದೃಢವಾದ ಪ್ರಯತ್ನಗಳಿಂದಾದ ಹಾಗೂ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಒಳಗೊಂಡ ಮೂಲಭೂತ ವಿವಾದಗಳ ಬಗ್ಗೆ ತಳೆದ ಒಮ್ಮತದ ನಿಲುವಿನಿಂದಾಗಿ ಭಾರೀ ಮುನ್ನಡೆಯನ್ನು ಸಾಧಿಸಲಾಗಿದೆ ಎಂದು ಸದಸ್ಯರಿಗೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಅಂತರರಾಜ್ಯ ಜಲ ವಿವಾದದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ, ಅಂತಹ ಸಮಸ್ಯೆಗಳನ್ನು ನ್ಯಾಯಾಲಯಗಳ ಮೂಲಕ ಬಗೆ ಹರಿಸಿಕೊಳ್ಳುವುದರಲ್ಲಿ ಇರುವ ಇತಿಮಿತಿಗಳು ಮನವರಿಕೆಯಾಗಿವೆ. ಎರಡೂ ರಾಜ್ಯಗಳೊಡನೆ ಸಮಾಲೋಚಿಸಿದ ನಂತರ ಹಾಗೂ ಆ ರಾಜ್ಯಗಳಿಗೆ ವಾಸ್ತವವಾಗಿ ಅಗತ್ಯವಿರುವ ನೀರಿನ ಪ್ರಮಾಣವನ್ನು ನಿರ್ಧರಿಸಿದ ನಂತರ ಈ ವಿಷಯದಲ್ಲಿ

ಮಧ್ಯಸ್ಥಿಕೆ ಮಾಡಿ ಪರಿಹಾರ ನೀಡುವಂತೆ ಪ್ರಧಾನ ಮಂತ್ರಿಗಳಿಗೆ ಸರ್ವೋಚ್ಛ ನ್ಯಾಯಾಲಯವು ವಿನಂತಿಸಿತು. ಇದಕ್ಕೆ ಪ್ರತಿಸ್ಪಂದಿಸಿ ಪ್ರಧಾನ ಮಂತ್ರಿಯವರು, ನನ್ನ ಸರ್ಕಾರ ಬಹಳ ಕಷ್ಟಪಟ್ಟು ಸಂಗ್ರಹಿಸಿ ಅವರ ಮುಂದೆ ಮಂಡಿಸಿದ ಎಲ್ಲಾ ವಿಷಯ ಸಾಮಗ್ರಿಯನ್ನು ಪರಿಗಣಿಸಿದ ನಂತರ, ಕರ್ನಾಟಕವು 6 ಟಿ.ಎಂ.ಸಿ. ನೀರು ಬಿಡಬೇಕೆಂದು ನಿರ್ದೇಶಿಸಿದರು.

ಪ್ರಧಾನಮಂತ್ರಿಗಳ ಇಚ್ಚೆಗೆ ಮನ್ನಡೆ ನೀಡಿ ಮತ್ತು ಸರ್ವಪಕ್ಷಗಳ ರಾಜ್ಯ ಶಾಸಕರ ಸಭೆಯಲ್ಲಿ ಕೈಗೊಂಡ ಸರ್ವಾನುಮತದ ನಿರ್ಣಯದ ಅನುಸಾರ ಪ್ರಧಾನಮಂತ್ರಿಯವರ ನಿರ್ದೇಶನವನ್ನು ನನ್ನ ಸರ್ಕಾರ ಪಾಲಿಸಿರುವ ಸಂಗತಿ ಸನ್ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಕರ್ನಾಟಕ ಸರ್ಕಾರದ ಒತ್ತಾಯದಂತೆ ಚಾಲ್ತಿ ವರ್ಷದಲ್ಲಿ ಕಾವೇರಿ ಕಣಿವೆ ಪ್ರದೇಶದಲ್ಲಿ ನೀರು ಹರಿವಿನ ಪ್ರಮಾಣದಲ್ಲಿ ಒಟ್ಟಾರೆ ಕೊರತೆಯಾಗಿರುವ ಹಿನ್ನೆಲೆಯಲ್ಲಿ ಎರಡೂ ರಾಜ್ಯಗಳ ರೈತರ ನೀರಿನ ಅವಶ್ಯಕತೆಗಳನ್ನು ಮತ್ತು ಅಗತ್ಯತೆಗಳನ್ನು ಆಮೂಲಾಗ್ರವಾಗಿ ನಿರ್ಧರಿಸುವುದಕ್ಕಾಗಿ ಪ್ರಧಾನಮಂತ್ರಿಯವರು ಒಂದು ತಜ್ಞರ ತಂಡವನ್ನು ಸಹಾ ಕಳುಹಿಸಿದ್ದರು. ತಜ್ಞರ ತಂಡದ ವರದಿಯ ನನ್ನ ಸರ್ಕಾರಕ್ಕೆ ಇನ್ನೂ ದೊರೆತಿಲ್ಲ.

11. ಅಂತಹ ವಿವಾದಗಳನ್ನು, ಅಂತರ ರಾಜ್ಯ ನದೀ ನೀರನ್ನು ಹಂಚಿಕೊಳ್ಳುವ ಬಗ್ಗೆ ಮಾರ್ಗದರ್ಶಕ ಸೂತ್ರಗಳನ್ನು ರೂಪಿಸುವ ಮೂಲಕ ಬಗೆಹರಿಸಿಕೊಳ್ಳುವುದು ಒಳ್ಳೆಯದು ಎಂಬ ಕರ್ನಾಟಕದ ನಿಲುವನ್ನು, ನನ್ನ ಸರ್ಕಾರ ಬಲವಾಗಿ ಒತ್ತಾಯಿಸಿದ ಪರಿಣಾಮವಾಗಿ ಈ ವಿಷಯದಲ್ಲಿ ಕೇಂದ್ರ ಜಲ ಪ್ರಾಧಿಕಾರವು ಸಿದ್ಧಪಡಿಸಿದ ಕರಡು ಮಾರ್ಗದರ್ಶಕ ಸೂತ್ರಗಳನ್ನು ಚರ್ಚಿಸಲು ಪ್ರಧಾನ ಮಂತ್ರಿಯವರು ಈ ತಿಂಗಳ ಪ್ರಾರಂಭದಲ್ಲಿ ನಡೆಸಿದ ಆದರೆ ಬಹಳ ಹಿಂದೆಯೇ ನಡೆಯಬೇಕಾಗಿದ್ದ, ರಾಷ್ಟ್ರೀಯ ಜಲ ಸಂಪನ್ಮೂಲ ಪರಿಷತ್ತಿನ ಸಭೆಯಲ್ಲಿ ಕೂಡ ಸಮರ್ಥಿಸಲಾಗಿದೆ. ಈ ಸಭೆಯಲ್ಲಿ ವಿವಾದಾಂಶಗಳ ಬಗ್ಗೆ ಸಂಪೂರ್ಣ ಒಟ್ಟಾಭಿಪ್ರಾಯ ಸಾಧಿಸಲು ಸಾಧ್ಯವಾಗದಿದ್ದರೂ ನದೀ ತೀರದ ರಾಜ್ಯಗಳ ನಡುವೆ ನದೀ ನೀರನ್ನು ಸಮಾನವಾದ ಮತ್ತು ನ್ಯಾಯಯುತವಾದ ರೀತಿಯಲ್ಲಿ ಹಂಚಿಕೊಳ್ಳುವುದಕ್ಕೆ ಯಾವ ತತ್ವಗಳನ್ನು ಆಧರಿಸಬೇಕೆಂಬ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳ ಶಾಸಕರ ಮತ್ತು ತಾಂತ್ರಿಕ ತಜ್ಞರ ಸಭೆಯ ಒಮ್ಮತದ ತೀರ್ಮಾನವನ್ನು ಆಧರಿಸಿ ಸಿದ್ಧಪಡಿಸಿದ ತತ್ವಗಳ ಆಧಾರದ ಮೇಲೆ ಕರ್ನಾಟಕವು ಪ್ರಥಮ ಬಾರಿಗೆ ಆ ಮಹಾಸಭೆಯ ಮುಂದೆ ಒಂದು ವಿವರವಾದ ಶಿಫಾರಸ್ಸುಗಳ ಪ್ರಸ್ತಾವವನ್ನು ಮಂಡಿಸಿತು.

12. ರಾಜ್ಯದ ಜಲವಿದ್ಯುತ್ ಅಣೆಕಟ್ಟುಗಳ ಮೇಲಿನ ಜಲಾನಯನ ಪ್ರದೇಶಗಳಲ್ಲಿ ಸಾಕಷ್ಟು ಮಳೆಯಾಗದಿರುವ ಕಾರಣ ಅಭಿವೃದ್ಧಿಯ ಮೂಲ ಅವಶ್ಯಕತೆಗಳಲ್ಲಿ ಒಂದಾಗಿರುವ ವಿದ್ಯುತ್ ಉತ್ಪಾದನೆಯು 1995-96ನೇ ಸಾಲಿನಲ್ಲಿ ಕಡಿಮೆಯಾಯಿತು. ಈ ಜಲ ವಿದ್ಯುಚ್ಛಕ್ತಿಯ ಭಾಗವು ರಾಜ್ಯದ ಒಟ್ಟು ವಿದ್ಯುತ್ ಉತ್ಪಾದನೆಯ ಶೇಕಡ 78 ರಷ್ಟು ಹೀಗಾಗಿ, ಲಭ್ಯವಿರುವ ವಿದ್ಯುಚ್ಛಕ್ತಿಯನ್ನು ಕಾಪಾಡುವ ಮತ್ತು ಮುಂದಿನ ಮಳೆಗಾಲ ಪ್ರಾರಂಭವಾಗುವವರೆಗೆ ನ್ಯಾಯಸಮ್ಮತವಾದ ರೀತಿಯಲ್ಲಿ ವಿದ್ಯುಚ್ಛಕ್ತಿ ಹಂಚಿಕೆ ಮಾಡುವ ಸಲುವಾಗಿ ನನ್ನ ಸರ್ಕಾರವು ಅನಿವಾರ್ಯವಾಗಿ ವಿವಿಧ ವರ್ಗದ ಬಳಕೆದಾರರಿಗೆ ವಿದ್ಯುತ್ ಕಡಿತ ಕ್ರಮಗಳನ್ನು ಕೈಗೊಳ್ಳಬೇಕಾಯಿತು.

13. ದಕ್ಷಿಣ ವಿದ್ಯುಚ್ಛಕ್ತಿ ಜಾಲದ ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ಉತ್ಪಾದನೆಯಾಗುವ ವಿದ್ಯುತ್ತಿನಲ್ಲಿ ಹಂಚಿಕೆಯಾಗದೇ ಇರುವ ಪಾಲಿನಿಂದ ರಾಜ್ಯಕ್ಕೆ ನೀಡಲಾಗುತ್ತಿರುವ ಹಂಚಿಕೆಯನ್ನು ಶೇಕಡಾ 10 ರಷ್ಟು ಹೆಚ್ಚು ಪಡೆಯುವ ಮೂಲಕ ವಿದ್ಯುಚ್ಛಕ್ತಿ ಕೊರತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡುವುದು ನನ್ನ

ಸರ್ಕಾರಕ್ಕೆ ಸಾಧ್ಯವಾಗಿದೆ. ಈ ಬಿಕ್ಕಟ್ಟಿನಿಂದ ಪಾರಾಗಲು ಮಹಾರಾಷ್ಟ್ರದಿಂದ ನನ್ನ ಸರ್ಕಾರ * ಆಗಸ್ಟ್‌ನಿಂದ ಇಲ್ಲಿಯವರೆಗೆ 140 ದಶಲಕ್ಷ ಯೂನಿಟ್ಟುಗಳ ವಿದ್ಯುತ್ತನ್ನು ಪಡೆಯಲಾಗಿದೆ. ಜಲ ವಿದ್ಯುತ್ತಿಗಾಗಿ ನೀರನ್ನು ವಿನಿಮಯ ಮಾಡಿಕೊಳ್ಳುವ ನವೀನ ವ್ಯವಸ್ಥೆಯೊಂದನ್ನು ಮಹಾರಾಷ್ಟ್ರ ಸರ್ಕಾರದೊಂದಿಗೆ ರೂಪಿಸಲಾಗಿದೆ. ಕೊಯ್ನಾದಲ್ಲಿ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ಸೇರಿ ಕೊಡುವ 7.5 ಟಿಎಂಸಿ ನೀರಿಗೆ ಬದಲಾಗಿ ಕರ್ನಾಟಕಕ್ಕೆ 210 ದಶಲಕ್ಷ ಯೂನಿಟ್ಟುಗಳ ವಿದ್ಯುತ್ತನ್ನು ಹೆಚ್ಚಿಗೆ ನೀಡಲಾಗುತ್ತದೆ. ನೆರೆಹೊರೆಯ ರಾಜ್ಯಸರ್ಕಾರಗಳು ತೋರಿರುವ ಈ ಸದ್ಭಾವನೆಗೆ ನನ್ನ ಸರ್ಕಾರವು ಕೃತಜ್ಞತೆ ಸಲ್ಲಿಸುತ್ತದೆ. ಅಲ್ಲದೆ, ನಮ್ಮ ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮವು ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ವಿದ್ಯುತ್ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಿದೆ.

14. ಒಂದು ದೀರ್ಘಕಾಲಿಕ ಪರಿಹಾರ ಕ್ರಮವಾಗಿ, ಸರ್ಕಾರವು ರಾಜ್ಯದ ವಿವಿಧ ಸ್ಥಳಗಳಲ್ಲ ಖಾಸಗಿ ವಲಯದ ಏಜೆನ್ಸಿಗಳ ಮೂಲಕ ಒಟ್ಟು 6910 ಮೆಗಾವ್ಯಾಟ್ ಸ್ಥಾಪಿತ ಸಾಮರ್ಥ್ಯದ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ನಿರ್ಧರಿಸಿದೆ. ಈ ಸ್ಥಾವರಗಳಲ್ಲಿ ಮಂಗಳೂರಿನ ಸಮೀಪ ಮಂಗಳೂರು ವಿದ್ಯುತ್ ಕಂಪನಿಯು (ಕೋಜೆಂಟ್ರಿಕ್ಸ್) ಸ್ಥಾಪಿಸಲಿರುವ 1000 ಮೆ.ವ್ಯಾ ಸಾಮರ್ಥ್ಯದ ವಿದ್ಯುತ್ ಸ್ಥಾವರವೂ ಸಹಾ ಸೇರದೆ.

15. ಅಲ್ಪಾವಧಿಯ ಕ್ರಮವಾಗಿ, ಕರ್ನಾಟಕ ಕರಾವಳಿಯಲ್ಲಿ ಬಾರ್ಜುಗಳ ಮೇಲಿನ ವಿದ್ಯುತ್ ಕೇಂದ್ರಗಳ ಮೂಲಕ 400 ಮೆ.ವ್ಯಾ. ಸಾಮರ್ಥ್ಯವನ್ನು ಸ್ಥಾಪಿಸಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಇವು, 1996ರಲ್ಲೇ ಕಾರ್ಯರಂಭ ಮಾಡುವ ನಿರೀಕ್ಷೆಯಿದೆ. ಸರ್ಕಾರವು, ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ 420 ಮೆ.ವ್ಯಾ. ಸಾಮರ್ಥ್ಯದ V ಮತ್ತು VI ನೇ ಘಟಕಗಳನ್ನು ಕೈಗೆತ್ತಿಕೊಳ್ಳಲು ಹಾಗೂ ಬಿಡದಿ ಬಳಿ 300 ಮೆ.ವ್ಯಾ. ಸಾಮರ್ಥ್ಯದ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಕರ್ನಾಟಕ ವಿದ್ಯುತ್ ನಿಗಮಕ್ಕೆ ಅನುಮೋದನೆಯನ್ನು ಸಹಾ ನೀಡಿದೆ.

16. ಸರ್ಕಾರದ ಪೂರ್ವಾನುಮೋದನೆಗೆ ಒಳಪಟ್ಟು, ಕೆಲವು ಗರಿಷ್ಠ ಭೂ ಮಿತಿಗಳೊಳಗೆ ಕೃಷಿ ಭೂಮಿಯ ಖಾಸಗಿ ಖರೀದಿಗೆ ಅನುಕೂಲ ಮಾಡಿಕೊಡಲು ಭೂ ಸುಧಾರಣಾ ಅಧಿನಿಯಮವನ್ನು ತಿದ್ದುಪಡಿ ಮಾಡುವ ಮೂಲಕ ಮೂಲಭೂತ ಸೌಕರ್ಯ ಹಾಗೂ ಪುಷ್ಪ ಕೃಷಿಯಂಥ ಅತ್ಯಾಧುನಿಕ ತಂತ್ರಜ್ಞಾನದಿಂದ ಕೂಡಿದ ಆರ್ಥಿಕ ಚಟುವಟಿಕೆಗಳಲ್ಲಿ ತ್ವರಿತ ಪ್ರಗತಿ ಸಾಧಿಸುವ ದಿಶೆಯಲ್ಲಿ ಮುನ್ನಡೆ ಸಾಧಿಸಿದ್ದೇವೆ. ಕೃಷಿ ಭೂಮಿಯ ಖಾಸಗಿ ಖರೀದಿಯನ್ನು ಕ್ರಮಬದ್ಧಗೊಳಿಸಲು ನಿಯಮಗಳನ್ನು ರೂಪಿಸಲಾಗುತ್ತಿದ್ದು ಇದರಿಂದ ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ಹಾಗೂ ಇತರರಿಂದಾಗಬಹುದಾದ ದುರುಪಯೋಗವನ್ನು ನಿವಾರಿಸಲು ಸಾಧ್ಯವಾಗುವುದು.

17. ಬೆಂಗಳೂರು ನಗರಕ್ಕೆ ಕಾವೇರಿ 4ನೇ ಹಂತದ ನೀರು ಪೂರೈಕೆ ಯೋಜನೆಗಾಗಿ ಜಪಾನಿನ ಒಇಸಿಎಫ್ ಸಂಸ್ಥೆಯೊಂದಿಗೆ ಸಾಲಕ್ಕೆ ಸಂಬಂಧಿಸಿದ ಮಾತುಕತೆಗಳು ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು, 1070 ಕೋಟಿ ರೂ.ಗಳ ಈ ಯೋಜನೆಯು ಇಷ್ಟರಲ್ಲೇ ಪ್ರಾರಂಭವಾಗಲಿದೆ ಎಂಬುದು ಸದಸ್ಯರಿಗೆ ಸಂತೋಷಕರ ವಿಷಯ.

---

* ದಿನಾಂಕ 2.3.96ರಂದು ಸದನದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳ ಕೋರಿಕೆ ಮೇರೆಗೆ ಅಧ್ಯಕ್ಷರು ಮೇಲ್ಕಂಡ ಬದಲಾವಣೆಗೆ ಅವಕಾಶ ನೀಡಿರುತ್ತಾರೆ.

18. ಬೆಂಗಳೂರಿನಿಂದಾಚೆ ನಗರ ನೀರು ಪೂರೈಕೆ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವೆಚ್ಚ ಹಾಗೂ ಸಮಯಗಳೆರಡೂ ಮಿತಿಮೀರುತ್ತಿರುವ ನಿರಂತರ ಸಮಸ್ಯೆಯು ನನ್ನ ಸರ್ಕಾರಕ್ಕೆ ಅಂತಕವುಂಟು ಮಾಡಿದೆ. ಈ ನೀರು ಪೂರೈಕೆ ಯೋಜನೆಗಳಿಗೆ ಹಣಕಾಸು ಒದಗಿಸುವ ವ್ಯವಸ್ಥೆಯನ್ನು, ಬೆಂಗಳೂರು ನಗರದ ನೀರು ಪೂರೈಕೆ ಯೋಜನೆಗಾಗಿ ರೂಪಿಸಿರುವ ಹಣಕಾಸು ಏರ್ಪಾಡಿನ ಮಾದರಿಯಲ್ಲೇ ರೂಪಿಸುವ ದೃಷ್ಟಿಯಿಂದ ಯೋಜನಾ ಹಣಕಾಸು ವ್ಯವಸ್ಥೆಯನ್ನು ಆಳವಾಗಿ ಅಧ್ಯಯನ ಮಾಡಲಾಗುತ್ತಿದೆ. ಈ ನೀರು ಪೂರೈಕೆ ಯೋಜನೆಗಳ ಅನುಷ್ಠಾನಕ್ಕೆ ತಗಲುವ ವೆಚ್ಚವನ್ನು ಹಾಗೂ ತಮ್ಮ ಋಣ-ಭಾರಗಳನ್ನು ಭರಿಸಲು ಮುನಿಸಿಪಾಲಿಟಿಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸಿಕೊಡುವ ಸಮಂಜಸ ಕನಿಷ್ಠ ದರವನ್ನು ನಿಗದಿಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

19. ಗರಿಷ್ಠ ಪ್ರಮಾಣದ ಆರ್ಥಿಕ ಅಭಿವೃದ್ಧಿ ಸಾಧಿಸಲು ಆಧುನಿಕ, ಸಮಗ್ರ ರಸ್ತೆ ಜಾಲವನ್ನು ಅಭಿವೃದ್ಧಿಪಡಿಸುವುದು ಬಹಳ ಮುಖ್ಯ. ಆದುದರಿಂದ ಸಾರ್ವಜನಿಕ ನಿಧಿಗಳು ಹಾಗೂ ಖಾಸಗಿ ಬಂಡವಾಳ ಹೂಡಿಕೆ ಸಂಪನ್ಮೂಲಗಳು ಮತ್ತು ವಿದೇಶಿ ಸಾಲದ ನೆರವನ್ನು ಬಳಸಿಕೊಂಡು ಅಂಥ ಸಂಪರ್ಕ ಸೌಲಭ್ಯಗಳನ್ನು ವ್ಯಾಪಕ ಪ್ರಮಾಣದಲ್ಲಿ ಯೋಚಿಸಿ ಕಾರ್ಯಗತಗೊಳಿಸಲಾಗುತ್ತಿದೆ. ಮೊದಲಿಗೆ, ಸ್ಥಳೀಯ ಕೃಷಿ ಮಾರುಕಟ್ಟೆ ಸಮಿತಿಗಳ ಹಣಕಾಸು ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಮೀ.ಸರ್ವಋತು ಗ್ರಾಮೀಣ ರಸ್ತೆಗಳನ್ನು ನಿರ್ಮಿಸಲು ಒಂದು ಯೋಜನೆಯನ್ನು ರೂಪಿಸಲಾಗಿದೆ. ಈ ಉದ್ದೇಶಕ್ಕಾಗಿ ನಿಗದಿತ ಮಾರುಕಟ್ಟೆ ಶುಲ್ಕವನ್ನು ಶೇಕಡ 1 ರಿಂದ ಶೇಕಡ 2 ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಉಳಿದಂತೆ ವಿಶ್ವಬ್ಯಾಂಕಿನಿಂದ ಸಾಲದ ನೆರವನ್ನು ಪಡೆದು ಗ್ರಾಮೀಣ ರಸ್ತೆ ಜಾಲವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ.

20. ನನ್ನ ಸರ್ಕಾರವು ಖಾಸಗಿ ವಲಯದವರು ಪಾಲ್ಗೊಳ್ಳುವುದನ್ನು ಉತ್ತೇಜಿಸುವ ಮುಲಕ ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲು ನಿರ್ಧರಿಸಿದೆ. ರಾಜ್ಯದ ರಾಜಧಾನಿಯಲ್ಲಿ ವಾಹನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವುದಕ್ಕಾಗಿ, ಬೆಂಗಳೂರಿನ ಸಮಿಪವಿರುವ ಎರಡು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವಂಥ ಸಂಪರ್ಕ ರಸ್ತೆಯೊಂದರ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗಿದೆ.

21. ರಾಜ್ಯಕ್ಕಾಗಿ ಹೊಸ ಕೈಗಾರಿಕಾ ನೀತಿಯೊಂದನ್ನು ರೂಪಿಸುವ ವಿಚಾರವು ಪರಿಗಣನೆಯಲ್ಲಿದೆ. ಸಮೃದ್ಧವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ಉದ್ಯೋಗಾವಕಾಶಗಳ ಸೃಜನ, ಸಂಶೋಧನೆ ಹಾಗೂ ಅಭಿವೃದ್ಧಿ ಸೌಲಭ್ಯಗಳ ಸೃಜನೆಗೆ ಮತ್ತು ಮಹಿಳಾ ಉದ್ಯಮಿಗಳಿಗೆ ಮತ್ತು ತಾಂತ್ರಿಕ ತಜ್ಞರಿಗೆ ಅದೇ ರೀತಿ, ಗ್ರಾಮೋದ್ಯಮಗಳು ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ವಿಶೇಷ ಉತ್ತೇಜನ ನೀಡುವುದರ ಜೊತೆಗೆ ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡುವ ಬಗ್ಗೆಯೂ ನನ್ನ ಸರ್ಕಾರಕ್ಕೆ ಅಷ್ಟೇ ಕಾಳಜಿ ಇದೆ.

22. ರೋಗಗ್ರಸ್ತ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳನ್ನು ಪುನರ್‌ಸ್ವಸ್ಥಗೊಳಿಸುವುದಕ್ಕಾಗಿ ವ್ಯಾಪಕ ಯೋಜನೆಯೊಂದನ್ನು ಸಿದ್ಧಪಡಿಸಲಾಗುತ್ತಿದೆ. ಈ ಯೋಜನೆಯಲ್ಲಿ ಕೈಗಾರಿಕಾ ಕಾರ್ಯ ಚಟುವಟಿಕೆಯ ಈ ಪ್ರಮುಖ ವಲಯದಲ್ಲಿ ದೀರ್ಘ ಕಾಲದ ಆಗತ್ಯತೆಯನ್ನು ಪೂರೈಸಲು ನೆರವಾಗುವಂಥ ಹಲವಾರು ಪರಿಹಾರಗಳು ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ.

23. ನನ್ನ ಸರ್ಕಾರವು, ಕೈಗಾರಿಕಾ ಅಭಿವೃದ್ಧಿಯಲ್ಲಿ ವಿಶೇಷವಾಗಿ ರಾಜ್ಯದ ಕರಾವಳಿ ಪ್ರದೇಶದಲ್ಲಿನ ಕೈಗಾರಿಕಾ ಅಭಿವೃದ್ಧಿಯಲ್ಲಿ ಒಳಗೊಂಡಿರುವ ಜೀವಿ ಪರಿಸ್ಥಿತಿ

ವಿಷಯಗಳಿಗೆ ಸೂಕ್ಷ್ಮ ಗಮನ ನೀಡುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಡ್ಯಾನಿಡಾ ನೆರವಿನ ಪರಿಸರ ಸಂಬಂಧಿ ಬೃಹತ್ ಯೋಜನೆಯ ಅಧ್ಯಯನವು ಪೂರ್ಣಗೊಂಡಿದೆಯೆಂದು ಮತ್ತು ಅದು ಮಾಡಿರುವ ಶಿಫಾರಸುಗಳನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಜೀವಿ ಪರಿಸ್ಥಿತಿ ದೃಷ್ಟಿಯಿಂದ ಸೂಕ್ಷ್ಮವಾದ ಪ್ರದೇಶಗಳಲ್ಲಿ ಆಗುತ್ತಿರುವ ಹಾನಿಯನ್ನು ತಡೆಯುವುದು ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಸಸ್ಯಗಳ ಮತ್ತು ಜೀವಿಗಳ ಬಗ್ಗೆ ಸಮೀಕ್ಷೆ ನಡೆಸುವುದು ಮತ್ತು ಇಕೋ ಪಾರ್ಕ್‌ಗಳನ್ನು ಸ್ಥಾಪಿಸುವುದು - ಇವು ಪರಿಸರ ಮತ್ತು ಜೀವಿ ಪರಿಸ್ಥಿತಿ ಕ್ಷೇತ್ರದಲ್ಲಿ ನೀವು ಒತ್ತು ನೀಡಲಿರುವ ಇತರ ಪ್ರಮುಖ ವಿಷಯಗಳಾಗಿವೆ.

24. ಆರೋಗ್ಯ ರಕ್ಷಣೆ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಪ್ರಾಥಮಿಕ ಹಂತದ ಆಸ್ಪತ್ರೆಗಳ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಿದ್ದೆವು. ಸಮತೋಲನ ಕಾಪಾಡಲು ಎರಡನೇ ಹಂತದಲ್ಲಿ ಅನೇಕ ಬೋಧಕ ಆಸ್ಪತ್ರೆಗಳೂ ಸೇರಿದಂತೆ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ರಾಜ್ಯದಲ್ಲಿನ ಎಲ್ಲ ಆರೋಗ್ಯ ಸೌಲಭ್ಯಗಳನ್ನು ಪುನರ್ ರೂಪಿಸುವ, ಮೇಲ್ದರ್ಜೆಗೇರಿಸುವ, ಆಧುನೀಕರಿಸುವ ಮತ್ತು ವಿಸ್ತೃತಗೊಳಿಸುವ ಬೃಹತ್ ಯೋಜನೆಯೊಂದನ್ನು ಈಗ ಹಮ್ಮಿಕೊಳ್ಳಲಾಗುತ್ತಿದೆ. ಈ ಯೋಜನೆಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಸುಮಾರು 250 ಆಸ್ಪತ್ರೆಗಳಿಗೆ ಅನುಕೂಲವಾಗುತ್ತದೆ. ಇದೀಗ ಮಾಡಿಕೊಂಡಿರುವ ನಿರ್ದಿಷ್ಟ ಕರಾರಿನ ಮೇರೆಗೆ, ಯೋಜನೆಗೆ ವಿಶ್ವಬ್ಯಾಂಕ್ 550 ಕೋಟಿ ರೂಪಾಯಿಗಳಷ್ಟು ಹಣಕಾಸು ನೆರವು ಒದಗಿಸಲಿದೆ ಮತ್ತು ಒಂದು ಜರ್ಮನ್‌ಏಜೆನ್ಸಿಯು 80 ಕೋಟಿ ರೂಪಾಯಿಗಳ ಒಟ್ಟು ಅನುದಾನವನ್ನು ನೀಡಲಿದೆ.

25. ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸಾರ್ವತ್ರಿಕ ಪ್ರವೇಶಾವಕಾಶ, ಮಕ್ಕಳು ಮಧ್ಯದಲ್ಲಿ ಶಾಲೆ ಬಿಟ್ಟುಹೋಗದಂತೆ ನೋಡಿಕೊಳ್ಳುವುದು ಮತ್ತು ಸಾರ್ವತ್ರಿಕ ಸಾಧನೆಗಳ ನಮ್ಮ ಗುರಿಯನ್ನು ಮುಂದುವರೆಸುತ್ತೇವೆ. ಕಳೆದ ಒಂದು ವರ್ಷದಲ್ಲಿ 9,350 ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದಲ್ಲಿ ನಮ್ಮ ಸಾಧನೆಯಿಂದ ಪ್ರಭಾವಿತವಾದ ಭಾರತ ಸರ್ಕಾರವು 1996-97ರಲ್ಲಿ ಈ ಕಾರ್ಯಕ್ರಮವನ್ನು ರಾಜ್ಯದ ಇನ್ನೂ ಐದು ಜಿಲ್ಲೆಗಳಿಗೆ ವಿಸ್ತರಿಸಲು ಸಮ್ಮತಿಸಿದೆ. ಈ ಯೋಜನೆಯ ಅವಧಿಯಲ್ಲಿ ಇದರಿಂದ ಸುಮಾರು 200 ಕೋಟಿ ರೂಪಾಯಿಯಷ್ಟು ಹೆಚ್ಚಿನ ಹಣ ನಮಗೆ ದೊರಕಲಿದೆ ಎಂಬುದನ್ನು ಸದಸ್ಯರಿಗೆ ತಿಳಿಸಲು ನಾನು ಸಂತೋಷಪಡುತ್ತೇನೆ.

26. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಾದರಿಯಲ್ಲಿ ರಾಜ್ಯದಲ್ಲಿ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿಯೇ ಐದು ವಸತಿ ಶಾಲೆಗಳನ್ನು ನಮ್ಮ ಸರ್ಕಾರವು ಮಂಜೂರು ಮಾಡಿದೆ. ಈ ಉರ್ದು ಮಾಧ್ಯಮದ ವಸತಿ ಶಾಲೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿನ ಖ್ಯಾತ ಮುಸ್ಲಿಂ ಅಲ್ಪಸಂಖ್ಯಾತ ಸಂಸ್ಥೆಗಳು ನಡೆಸಲಿವೆ.

27. ನೌಕರಿಯಲ್ಲಿರುವ ಪುರುಷರು ಮತ್ತು ಮಹಿಳೆಯರು ಹಾಗೂ ಪದ್ಧತಿ ಶಿಕ್ಷಣ ವ್ಯವಸ್ಥೆಯ ಮುಖಾಂತರ ತಮ್ಮ ಶೈಕ್ಷಣಿಕ ಗುರಿಗಳನ್ನು ಮುಂದುವರಿಸಲು ಸಾಧ್ಯವಿಲ್ಲದವರ ಕಲಿಕೆಗಾಗಿ ವ್ಯಾಪಕ ಅವಕಾಶಗಳನ್ನು ಕಲ್ಪಿಸುವ ಸಲುವಾಗಿ ಮುಂದಿನ ಶೈಕ್ಷಣಿಕ ವರ್ಷದಿಂದ ಮೈಸೂರಿನಲ್ಲಿ ಒಂದು ಮುಕ್ತ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲಾಗುವುದು.

28. ಬಡ ಜನರಿಗೆ ವಸತಿ ಸೌಕರ್ಯವನ್ನೊದಗಿಸುವ ಬಗ್ಗೆ ನನ್ನ ಸರ್ಕಾರಕ್ಕೆ ತುಂಬಾ ಕಳಕಳಿ ಇದೆ. ರಾಜ್ಯದಲ್ಲಿನ ಸುಮಾರು 19 ಲಕ್ಷ ಕುಟುಂಬಗಳಿಗೆ ಮನೆಗಳು ಮತ್ತು ವಸತಿ ನಿವೇಶನಗಳನ್ನು ನೀಡುವ ಮೂಲಕ ಅವರಿಗೆ ಸೂರು ಒದಗಿಸುವ

ತುರ್ತು ಅಗತ್ಯವಿದೆ ಎಂಬ ಅಂಶ ಕಳೆದ ಬೇಸಿಗೆಯಲ್ಲಿ ನಡೆಸಿದ ಅಧಿಕೃತ ಸಮೀಕ್ಷೆಯಿಂದ ತಿಳಿದುಬಂದಿದೆ.

29. ಈ ಸೌಲಭ್ಯ ಕಲ್ಪಿಸಲು ಗುರುತಿಸಲಾದ ಎಲ್ಲಾ ಕುಟುಂಬಗಳಿಗೆ ಮುಂದಿನ ಐದು ವರ್ಷಗಳಲ್ಲಿ ಹಂತ ಹಂತವಾಗಿ ವಸತಿ ಸೌಕರ್ಯವನ್ನೊದಗಿಸಲು ನನ್ನ ಸರ್ಕಾರವು ಉದ್ದೇಶಿಸಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು, ರಾಜ್ಯ ಸಚಿವಾಲಯದಲ್ಲಿ ಒಂದು ಪ್ರತ್ಯೇಕ ವಸತಿ ಇಲಾಖೆಯನ್ನು ರಚಿಸಲಾಗಿದೆ. ಈ ಹೊಸ ವಸತಿ ಇಲಾಖೆಯು, ಗ್ರಾಮೀಣ ಪ್ರದೇಶಗಳಲ್ಲಿ 1,75,000 ನಿವೇಶನಗಳನ್ನು ಮತ್ತು ನಗರ ಪ್ರದೇಶಗಳಲ್ಲಿ 78,500 ನಿವೇಶನಗಳನ್ನು ವಿತರಿಸುವ ಸಲುವಾಗಿ ಒಂದು ಕ್ರಿಯಾ ಯೋಜನೆಯನ್ನು ರೂಪಿಸಿದೆ. ಈ ಕ್ರಿಯಾಯೋಜನೆಯನ್ವಯ ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ವಸತಿ ಕಾರ್ಯಕ್ರಮಗಳ ಅಡಿಯಲ್ಲಿ ಸುಮಾರು 1,20,000 ಮನೆಗಳನ್ನು ನಿರ್ಮಿಸಲು ಸಹ ಯೋಚಿಸಲಾಗಿದೆ. ರಾಜ್ಯದಲ್ಲಿನ ಮನೆ ಇಲ್ಲದ ಪ್ರತಿಯೊಂದು ಕುಟುಂಬಕ್ಕೆ ಒಂದು ಮನೆಯನ್ನು ಒದಗಿಸುವ ನಮ್ಮ ಗುರಿಯನ್ನು ಸಾಧಿಸಲು ಭಾರೀ ಪ್ರಮಾಣದ ಗೃಹನಿರ್ಮಾಣ ಯೋಜನೆಗೆ ಖಾಸಗಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ಒಂದು ನೀತಿಯನ್ನು ರೂಪಿಸಲಾಗಿದೆ.

30. ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದಂಥ ಯುಗ ಪ್ರವರ್ತಕ ವ್ಯವಸ್ಥೆಯನ್ನು ಜಾರಿಗೆ ತರುವ ಬಗ್ಗೆ ನಾವು ಕಂಕಣಬದ್ಧರಾಗಿರುವುದು ಎಲ್ಲರಿಗೂ ತಿಳಿದೇ ಇದೆ. ಕಳೆದ ಬಾರಿ ನೀಡಿದ್ದ ಭರವಸೆಯಂತೆ ಚುನಾಯಿತ ಜಿಲ್ಲಾ ಪಂಚಾಯತ್ ಮುಖ್ಯಸ್ಥರಿಗೆ ಕಾರ್ಯ ನಿರ್ವಹಣಾಧಿಕಾರಿಗಳನ್ನು ನೀಡಲು 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮಕ್ಕೆ ಈಗಾಗಲೇ ತಿದ್ದುಪಡಿ ಮಾಡಲಾಗಿದೆ. ಮತ್ತಷ್ಟು ತಿದ್ದುಪಡಿ ಮಾಡುವ ಉದ್ದೇಶಕ್ಕಾಗಿ ರಚಿಸಲಾದ ತಜ್ಞ ಸಮಿತಿಯು ಮಾಡುವ ಶಿಫಾರಸುಗಳನ್ನು ಪರಿಗಣಿಸಿದ ತರುವಾಯ ಈ ಅಧಿನಿಯಮಕ್ಕೆ ಇನ್ನಷ್ಟು ತಿದ್ದುಪಡಿಗಳನ್ನು ಮಾಡಲಾಗುವುದು. ತಜ್ಞಸಮಿತಿ ತನ್ನ ವರದಿಯನ್ನು ಸದ್ಯದಲ್ಲೇ ಸಲ್ಲಿಸುವುದೆಂದು ನಿರೀಕ್ಷಿಸಲಾಗಿದೆ.

31. ನನ್ನ ಸರ್ಕಾರ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಯ ಮೂಲಕ ನಮ್ಮ ಗ್ರಾಮೀಣ ಜನರ ಬದುಕಿನ ಗುಣಮಟ್ಟವನ್ನು ಉತ್ತಮ ಪಡಿಸಲು ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ವರ್ಷ ಗಾಂಧಿ ಜಯಂತಿಯಂದು "ನಿರ್ಮಲ ಗ್ರಾಮ ಯೋಜನೆ" ಎಂಬ ಗ್ರಾಮೀಣ ಪರಿಸರ ನೈರ್ಮಲ್ಯ ಕುರಿತ ಒಂದು ಬೃಹತ್ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ 100 ನೈರ್ಮಲ್ಯ ಶೌಚಾಲಯಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಪ್ರಾರಂಭಿಕ ಪ್ರತಿಕ್ರಿಯೆ ಬಹಳ ಪ್ರೋತ್ಸಾಹದಾಯಕವಾಗಿದ್ದು ಕಳೆದ ನಾಲ್ಕು ತಿಂಗಳಲ್ಲಿ ಸುಮಾರು 75,000 ಕುಟುಂಬಗಳಿಗೆ ಈಗಾಗಲೇ ನೈರ್ಮಲ್ಯ ಶೌಚಗೃಹಗಳನ್ನು ಒದಗಿಸಲಾಗಿದೆ. ಈ ಶತಮಾನ ಅಂತ್ಯವಾಗುವುದರೊಳಗೆ ಈ ಕಾರ್ಯಕ್ರಮದ ಅಡಿಯಲ್ಲಿ ಕನಿಷ್ಟ ಶೇಕಡ 30 ರಷ್ಟು ಗ್ರಾಮೀಣ ಕುಟುಂಬಗಳಿಗೆ ಈ ಸೌಲಭ್ಯ ಕಲ್ಪಿಸಲು ನನ್ನ ಸರ್ಕಾರ ನಿರ್ಧರಿಸಿದೆ.

32. ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಈ ಕ್ಯಾಲೆಂಡರ್ ವರ್ಷದ ಪ್ರಾರಂಭದಿಂದಲೇ ತೀವ್ರ ಬರಗಾಲ ಪರಿಸ್ಥಿತಿ ತಲೆದೋರಿದ್ದು, ಗ್ರಾಮಗಳಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿದೆ. ನನ್ನ ಸರ್ಕಾರ ಮುಂದಿನ ಕೆಲವು ತಿಂಗಳಲ್ಲಿ ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿರುವ ಸರ್ವ ಪ್ರಯತ್ನಗಳನ್ನು ಮಾಡುತ್ತದೆ.

33. ಗ್ರಾಮಾಂತರ ಪ್ರದೇಶಗಳ ಯುವಕರಿಗೆ ಹೆಚ್ಚು ಉದ್ಯೋಗಾವಕಾಶ ಸೃಜಿಸುವಷ ಪ್ರಯತ್ನದ ಭಾಗವಾಗಿ ನನ್ನ ಸರ್ಕಾರವು ಸರ್ಕಾರಿ ಸೇವೆಯಲ್ಲಿ ಅವರಿಗೆ ಸಾಕಷ್ಟು ಪ್ರಾತಿನಿಧ್ಯ ಒದಗಿಸಲು ಗ್ರಾಮಾಂತರ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ಅಭ್ಯಾರ್ಥಿಗಳ ನೇಮಕಾತಿಗಾಗಿ ಈಗ ನೀಡುತ್ತಿರುವ ವೇಯ್‌ಟೇಜನ್ನು ಹೆಚ್ಚಿಸಲು ತೀರ್ಮಾನಿಸಿದೆ. ಈ ಉದ್ದೇಶಕ್ಕಾಗಿ ಸಾಮಾನ್ಯ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

34. ನನ್ನ ಸರ್ಕಾರ 1-4-1995ರಿಂದ ಗ್ರಾಮೀಣ ಪ್ರದೇಶದ ಎಲ್ಲಾ ಹಸಿರು ಪಡಿತರ ಚೀಟಿ ಹೊಂದಿರುವವರಿಗೆ ಸಬ್ಸಿಡಿ ದರಗಳಲ್ಲಿ 10 ಕೆ.ಜಿ. ಅಕ್ಕಿ ಸರಬರಾಜು ಮಾಡುವ ತನ್ನ ಆಶ್ವಾಸನೆಯನ್ನು ಈಡೇರಿಸಿದೆ. ಈ ಯೋಜನೆಯನ್ನು ಈಗ ನಗರ ಪ್ರದೇಶದ ಸುಮಾರು 5 ಲಕ್ಷ ಬಡ ಕುಟುಂಬಗಳಿಗೆ ವಿಸ್ತರಿಸಲಾಗಿದೆ.

35. ನನ್ನ ಸರ್ಕಾರ ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಶ್ರೇಯೋಭಿವೃದ್ಧಿಗೆ ಸಂಪೂರ್ಣವಾಗಿ ಬದ್ಧವಾಗಿದೆ. ಶಿಕ್ಷಣ, ವಸತಿ ಮತ್ತು ನೀರಾವರಿ ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡಬೇಕೆಂದು ಗುರುತಿಸಲಾಗಿದೆ, ಅದರಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಒಂದು ನೂರು ಐವತ್ತೊಂಭತ್ತು ವಿದ್ಯಾರ್ಥಿನಿಲಯಗಳನ್ನು ಮತ್ತು ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರಿಗಾಗಿ ಎಪ್ಪತ್ತೈದು ವಿದ್ಯಾರ್ಥಿನಿಲಯಗಳನ್ನು ಪ್ರಸ್ತುತ ಹಣಕಾಸು ವರ್ಷದಲ್ಲಿ ಪ್ರಾರಂಭಿಸಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಗಳು ಪರಿಶಿಷ್ಟ ಪಂಗಡಗಳಿಗಾಗಿ ಸುಮಾರು 70 ಸಾವಿರ ಮನೆಗಳನ್ನು ನಿರ್ಮಾಣಗೊಳ್ಳುತ್ತಿವೆ. ಅದೇ ರೀತಿ ಈ ಸಮುದಾಯದ ವ್ಯಕ್ತಿಗಳ ಸುಮಾರು 25 ಸಾವಿರ ಎಕರೆ ಜಮೀನಿಗೆ ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ನೀರಾವರಿ ಸೌಲಭ್ಯ ದೊರಕಲಿದೆ.

36. ನಿರ್ಧಾರ ಕೈಗೊಳ್ಳುವ ಮತ್ತು ಸರ್ಕಾರದ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಈ ಎರಡೂ ಹಂತಗಳಲ್ಲಿ ಮಹಿಳೆಯರು ಹೆಚ್ಚುಹೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡಬೇಕೆಂಬುದು ನಮ್ಮ ಆಶಯ. ಸ್ಥಳೀಯ ಸಂಸ್ಥೆಗಳ ಸದಸ್ಯತ್ವದಲ್ಲಿ ಮತ್ತು ಚುನಾಯಿತ ಹುದ್ದೆಗಳಲ್ಲಿ ಮೀಸಲಾತಿ ಒದಗಿಸುವುದರ ಜೊತೆಗೆ ನಮ್ಮ ಸರ್ಕಾರವು, ಮಹಿಳೆಯರಿಗೆ ಎಲ್ಲ ಸರ್ಕಾರಿ ಹುದ್ದೆಗಳಲ್ಲಿ ಕನಿಷ್ಠ ಶೇಕಡ 30ರಷ್ಟು ಹುದ್ದೆಗಳನ್ನು ಒದಗಿಸಲು ನಿರ್ಧರಿಸಿದೆ ಮತ್ತು ಈ ಉದ್ದೇಶಕ್ಕಾಗಿ ಸಂಬಂಧಪಟ್ಟ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲಾಗುತ್ತಿದೆ. ಅಲ್ಲದೆ. ಸರ್ಕಾರವು ಎಲ್ಲ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಮೂರನೇ ಒಂದರಷ್ಟು ಸಂಪನ್ಮೂಲಗಳನ್ನು ಮಹಿಳೆಯರಿಗಾಗಿ ಮೀಸಲಿರಿಸಿದೆ. ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ ಎಂದು ಪರಿಚಿತವಾಗಿರುವ ನಮ್ಮ ಮಹಿಳಾ ಅಭಿವೃದ್ಧಿ ಯೋಜನೆಯು ಎಂಥ ಮಾರ್ಗ ಪ್ರವರ್ತಕ ಯೋಜನೆಯಾಗಿದೆಯೆಂದರೆ, ಇದನ್ನೇ ಮಾದರಿಯಾಗಿ ಇರಿಸಿಕೊಳ್ಳುವಂತೆ ಎಲ್ಲ ರಾಜ್ಯ ಸರ್ಕಾರಗಳಿಗೂ ಕೇಂದ್ರ ಸರ್ಕಾರವು ತಿಳಿಸಿದೆ. ಈ ವಿಷಯವನ್ನು ತಿಳಿಸದು ನನಗೆ ಹೆಮ್ಮೆ ಎನಿಸಿದೆ.

37. ಸ್ಟಾಂಪುಗಳು ಮತ್ತು ನೋಂದಣಿ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಆದಾಯದ ನಷ್ಟ ಹಾಗೂ ಸಾರ್ವಜನಿಕರಿಗೆ ಶೋಷಣೆ ಆಗುವುದನ್ನು ತಡೆಗಟ್ಟಿ ಹೆಚ್ಚಿನ ದಕ್ಷತೆ ಹಾಗೂ ಪಾರದರ್ಶಕತೆ ಉಂಟುಮಾಡಬೇಕೆಂಬುದು ನನ್ನ ಸರ್ಕಾರದ ಆಶಯ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರತಿಯೊಂದು ಘಟಕ ಪ್ರದೇಶದಲ್ಲಿ ನಿವೇಶನಗಳು ಮತ್ತು ಸ್ವತ್ತುಗಳು ಮೌಲ್ಯಗಳ ಮಾರ್ಗದರ್ಶಿಕೆಯನ್ನು ಸಿದ್ಧಪಡಿಸಲಾಗುತ್ತಿದೆ. ನೋಂದಣಿ ದಾಖಲೆ ಪತ್ರಗಳನ್ನು 8 ದಿವಸಗಳೊಳಗೆ ತಲುಪಿಸಲು ಸಹ ಏರ್ಪಾಡು ಮಾಡಲಾಗುತ್ತಿದೆ.

38. ರಾಜ್ಯಾದ್ಯಂತ ಎಲ್ಲ ಧಾರ್ಮಿಕ ಮತ್ತು ಧರ್ಮಾದಾಯ ಸಂಸ್ಥೆಗಳಿಗೆ ಅನ್ವಯವಾಗತಕ್ಕ ಏಕೈಕ ಸಮಗ್ರ ದತ್ತಿ ಅಧಿನಿಯಮವನ್ನು ಶೀಘ್ರದಲ್ಲಿಯೇ ವಿಧಾನಮಂಡಲದ ಮುಂದೆ ಮಂಡಿಸಲಾಗುವುದು. ಮುಜರಾಯಿ ಮತ್ತು ವಕ್ಫ್ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅರ್ಚಕರ ಮತ್ತು ಮೌಲ್ವಿಗಳ ಸೇವಾ ಸ್ಥಿತಿಗಳಲ್ಲಿ ಕೆಲಸ ಮಾಡುತ್ತಿರುವ ಅರ್ಚಕರ ಮತ್ತು ಮೌಲ್ವಿಗಳ ಸೇವಾ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕಾಗಿ ಪ್ರಸ್ತಾವಗಳನ್ನು ಸಹ ಪರಿಶೀಲಿಸಲಾಗುತ್ತಿದೆ.

39. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಕರ್ನಾಟಕವು ಪ್ರವಾಸಿಗಳಿಗೆ ನಂದನವನವೇ ಆಗಿದೆ. ಮುಂಬರುವ ವರ್ಷಗಳಲ್ಲಿ ರಾಜ್ಯಕ್ಕೆ ಭೇಟಿ ನೀಡುವ ಪ್ರವಾಸಿಗಳ ಸಂಖ್ಯೆಯಲ್ಲಿ ಉಂಟಾಗುವ ನಿರೀಕ್ಷಿತ ಏರಿಕೆಯನ್ನು ನಿಭಾಯಿಸುವ ಸಲುವಾಗಿ ಚೈತನ್ಯಪೂರ್ಣ ಕಾರ್ಯನೀತಿಯೊಂದನ್ನು ಅಳವಡಿಸಿಕೊಳ್ಳಲು ಮತ್ತು ಪ್ರವಾಸಿಗಳಿಗೆ ಒದಗಿಸುವ ಮೂಲಭೂತ ಸೌಲಭ್ಯಗಳಲ್ಲಿನ ಕೊರತೆಯನ್ನು ತುಂಬಲು ಖಾಸಗಿ ವಲಯದವರಿಗೆ ವಿಶೇಷ ಪ್ರೋತ್ಸಾಹಕಗಳನ್ನು ನೀಡಲು ಉದ್ದೇಶಿಸಲಾಗಿದೆ. ರಾಜ್ಯದಲ್ಲಿ ಪ್ರವಾಸಿ ಕಾರ್ಯಚಟುವಟಿಕೆಗಳ ನಿಯಂತ್ರಣಕ್ಕಾಗಿ ಒಂದು ವಿಶೇಷ ವಿಧೇಯಕವನ್ನು ವಿಧಾನಮಂಡಲದಲ್ಲಿ ಮಂಡಿಸಲು ಸಹಾ ನನ್ನ ಸರ್ಕಾರ ಉದ್ದೇಶಿಸಿದೆ.

40. ಒಂದು ಕಲಾಪ್ರಕಾರವಾಗಿ, ಒಂದು ಉದ್ಯಮವಾಗಿ, ಸಮೂಹ ಮನರಂಜನೆಯ ಒಂದು ಮಾಧ್ಯಮವಾಗಿ ಹಾಗೂ ಸಾಮಾಜಿಕ ಪರಿವರ್ತನೆಯ ಪರಿಣಾಮಕಾರೀ ಮಾಧ್ಯಮವಾಗಿ ಚಲನಚಿತ್ರ ಮಾಧ್ಯಮದ ವ್ಯಾಪಕ ಸಂವಹನ ಸಾಧ್ಯತೆ ಹಾಗೂ ಸಮಾರ್ಥ್ಯಗಳು ಸದಸ್ಯರಿಗೆ ತಿಳಿದೇ ಇವೆ. ಈ ಎಲ್ಲಾ ದೃಷ್ಟಿಗಳಿಂದ ಕನ್ನಡ ಚಲನಚಿತ್ರ ಉದ್ಯಮವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ "ಕನ್ನಡ ಚಲನಚಿತ್ರ ಅಕಾಡೆಮಿ"ಯನ್ನು ಸ್ಥಾಪಿಸಲು ನನ್ನ ಸರ್ಕಾರ ಉದ್ದೇಶಿಸಿದೆ.

41. ಕನ್ನಡ ಸಾರಸ್ವತ ಲೋಕದ ದಿಗ್ಗಜಗಳಾದ ರಾಷ್ಟ್ರಕವಿ ಕುವೆಂಪು, ಡಾ. ದ.ರಾ. ಬೇಂದ್ರೆ ಮತ್ತು ಡಾ. ಪು.ತಿ ನರಸಿಂಹಚಾರ್-ಇವರ ಹೆಸರಿನಲ್ಲಿ ನನ್ನ ಸರ್ಕಾರ ರಚಿಸಿದ ಟ್ರಸ್ಟುಗಳು ಕಾರ್ಯರಂಭಮಾಡಿವೆ ಎಂಬ ವಿಷಯವನ್ನು ಸದಸ್ಯರಿಗೆ ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಕನ್ನಡ ಭಾಷೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಈ ಮೇಧಾವಿಗಳು ನೀಡಿದ ಅಮೂಲ್ಯ ಕೊಡುಗೆಯನ್ನು ಪ್ರಚರಪಡಿಸುವ ದೃಷ್ಟಿಯಿಂದ ನನ್ನ ಸರ್ಕಾರವು ಆ ಮಹನೀಯರ ಕೃತಿಗಳನ್ನು ಪ್ರಕಟಿಸಲು ಈ ಟ್ರಸ್ಟುಗಳಿಗೆ ನೆರವು ನೀಡಲಿದೆ.

42. ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ ರಾಜ್ಯ ಕಾರ್ಯನೀತಿಯ ನಿರ್ದೇಶಕರ ತತ್ವಗಳ 47ನೇ ಅನುಚ್ಛೇದದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ ಪಾನನಿರೋಧವನ್ನು ಪುನಃ ಜಾರಿಗೊಳಿಸಲು ನನ್ನ ಸರ್ಕಾರ ಗಂಭೀರವಾಗಿ ಆಲೋಚಿಸುತ್ತಿದೆ.

43. ಈ ವರ್ಷದಲ್ಲಿ ನನ್ನ ಸರ್ಕಾರ ಹೆಚ್ಚು ಪ್ರಾಮುಖ್ಯತೆ ನೀಡಬೇಕಾಗಿರುವ ವಿಷಯಗಳ ಬಗ್ಗೆ ಹಾಗೂ ಅನುಷ್ಠಾನಗೊಳಿಸಲಿರುವ ಕೆಲವು ಮುಖ್ಯ ಕಾರ್ಯನೀತಿಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಈ ನನ್ನ ಭಾಷಣದಲ್ಲಿ ತಿಳಿಸಿದ್ದೇನೆ. ಸಾಮಾಜಿಕ ನ್ಯಾಯ ಒದಗಿಸುವಂಥ ಸರ್ವತೋಮುಖ ಆರ್ಥಿಕ ಅಭಿವೃದ್ಧಿ ನನ್ನ ಸರ್ಕಾರದ ಧ್ಯೇಯವಾಗಿದ್ದು, ಈ ಉದ್ದೇಶಗಳ ಸಾಧನೆಗಾಗಿ ಹಲವಾರು ಯೋಜನೆಗಳು ಮತ್ತು ಕಾರ್ಯಕ್ರಮಗಳು ನಮ್ಮ ಕಾರ್ಯಕ್ರಮ ಪಟ್ಟಿಯಲ್ಲಿದ್ದು ಕಾಲಾನುಕ್ರಮದಲ್ಲಿ ಅವುಗಳನ್ನು ಪ್ರಕಟಿಸಲಾಗುವುದು.

44. ಕರ್ನಾಟಕ ವಿಧಾನಮಂಡಲದ ಉಭಯ ಸದನಗಳ ಸದಸ್ಯರಿಗೆ, ಅವರ ಚರ್ಚೆಗಳಲ್ಲಿ ಎಲ್ಲಾ ರೀತಿಯ ಯಶಸ್ಸು ಸಿಗಲೆಂದು ಹಾರೈಸುತ್ತಾ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

ಜೈ ಹಿಂದ್, ಜೈ ಕರ್ನಾಟಕ

ಮಧ್ಯಾಹ್ನ 3.30 ಕ್ಕೆ ರಾಜ್ಯ ಪಾಲರ ಭಾಷಣ ಮುಕ್ತಾಯವಾಯಿತು.

(ಸಭೆಯು, ಮಧ್ಯಾಹ್ನ 3-50 ಕ್ಕೆ ಪುನರ್ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಅಧ್ಯಕ್ಷರು : ಸನ್ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದೆ ಮಂಡಿಸುವುದು.

ಕಾರ್ಯದರ್ಶಿಯವರು : ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣ ಪ್ರತಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ದಿನದ ಕಾರ್ಯಕಲಾಪಗಳನ್ನು ಇಲ್ಲಿಗೆ ಮುಗಿಸಿ,. ನಾಳೆ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 3-51 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 20ನೇ ಫೆಬ್ರವರಿ 1996ರ ಮಂಗಳವಾರದಂದು ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು).

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೨೦ನೇ ಫೆಬ್ರವರಿ ೧೯೯೬, ಮಾಘ, ಶಕ ೧೭ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : ೧೧ ಗಂಟೆಗೆ ೧೦ ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರಾದ : (ಶ್ರೀ ರಮೇಶ ಕುಮಾರ್) ಅವರು ಪೀಠದಲ್ಲಿ ಉಪಸ್ಥಿತರಿದ್ದರು

ಸಂತಾಪ ಸೂಚನೆ

ಆಂಧ್ರ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀಯುತ ಎನ್.ಟಿ. ರಾಮರಾವ್ ಮತ್ತಿತರ ಮಾಜಿ ಸದಸ್ಯರುಗಳ ನಿಧನದ ಬಗ್ಗೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಬಿ.ಆರ್. ಕೃಷ್ಣಮೂರ್ತಿ, ತೆಲಗು ಚಿತ್ರಂಗದ ಖ್ಯಾತ ನಟ, ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿಯಾಗಿದ್ದ ಶ್ರೀ ಎನ್.ಟಿ. ರಾಮ್‌ರಾವ್, ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ವೈ.ವಿ. ಜೋಗಣ್ಣವರ್ ಹಾಗೂ ಶ್ರೀ ಪಿ. ಆನಂದಕುಂದ ಹೆಗಡೆ ಮತ್ತು ಕರ್ನಾಟಕ ವಿಧಾನ ಮಂಡಲದ ಪ್ರಥಮ ಕಾರ್ಯದರ್ಶಿಯಾಗಿದ್ದ ಶ್ರೀ ಜಿ.ಎಸ್. ವೆಂಕಟರಮಣ ಅಯ್ಯರ್ ಅವರುಗಳು ನಿಧಾನರಾದುದನ್ನು ಅತ್ಯಂತ ವಿಷಾದದಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ.

1) ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಶ್ರೀ ಬಿ.ಆರ್. ಕೃಷ್ಣಮೂರ್ತಿ ಅವರು ದಿನಾಂಕ 1-2-1996ರಂದು ನಿಧನರಾದರು. ಶ್ರೀಯುತರು ಪದವೀಧರರ ಕ್ಷೇತ್ರದಿಂದ 1992ರಿಂದ 1998ರ ಅವಧಿಗೆ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು. ಹಾಸನ ಜಿಲ್ಲೆಯ ಪ್ರಸಿದ್ಧ ವಕೀಲರಾಗಿದ್ದ ಶ್ರೀಯುತರು, ಜಿಲ್ಲೆಯ ಅನೇಕ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾಗಿ, ನವೋದಯ ಸಂಘದ ಸ್ಥಾಪಕ ಅಧ್ಯಕ್ಷರಾಗಿ ಹಾಗೂ ಕೃಷ್ಣ ಮತ್ತು ಕಾವೇರಿ ಜಲವಿವಾದದ ಬಗ್ಗೆ ವಿಚಾರಗೋಷ್ಠಿಯನ್ನು ನಡೆಸಿ ಜಿಲ್ಲೆಯಲ್ಲಿ ಅನೇಕ ರೀತಿಯ ಸಾಮಾಜಿಕ ಸೇವೆಯನ್ನು ಸಲ್ಲಿಸಿರುತ್ತಾರೆ.

2) ರಾಜಕೀಯ ಹಾಗೂ ಚಿತ್ರರಂಗದಲ್ಲಿ ಅಪಾರ ಹೆಸರು ಮಾಡಿದ ವರ್ಣಮಯ ವ್ಯಕ್ತಿ ಶ್ರೀ ನಂದಮೂರಿ ತಾರಕ ರಾಮರಾವ್ ಅವರು 18.1.1996ರಂದು ಹೈದರಾಬಾದಿನಲ್ಲಿ ನಿಧನರಾದರು.

   ಸರ್ಕಾರಿ ವೃತ್ತಿಯಿಂದ ಜೀವನ ಆರಂಭಿಸಿ, ಚಲನಚಿತ್ರ ಕ್ಷೇತ್ರ ಪ್ರವೇಶಿಸಿದ ಶ್ರೀ ರಾಮರಾಯರು ಚಿತ್ರರಂಗದಲ್ಲಿ ವಾಮನನಂತೆ ಬೆಳೆದರು. ಸುಮಾರು ಐದು ದಶಕಗಳ ಕಾಲ ತೆಲುಗು ಚಿತ್ರರಂಗದ ಮೇರು ನಟರಾಗಿ, ಪ್ರಜಾ ಕೋಟಿಯ ಹೃದಯಕ್ಕೆ ಲಗ್ಗೆ ಇರಿಸಿದ ಶ್ರೀ ಎನ್.ಟಿ.ಆರ್. ಆಂಧ್ರ ಭೂಮಿಯ ಜನಪ್ರಿಯ ವ್ಯಕ್ತಿಯಾದರು. ಚಲನಚಿತ್ರ ಪ್ರೇಮಿಗಳ ಹೃನ್ಮನಗಳಲ್ಲಿ ಶಾಶ್ವತವಾಗಿ ನೆಲೆ ಮಾಡಿದ ಶ್ರೀ ಎನ್.ಟಿ.ಆರ್. ಅವರು 1982ರಲ್ಲಿ ತೆಲುಗುದೇಶಂ ಪಕ್ಷ ಕಟ್ಟುವುದರೊಂದಿಗೆ ರಾಜಕೀಯ ಪ್ರವೇಶ ಮಾಡಿದರು. ಒಂದೇ ವರ್ಷದಲ್ಲಿ ಹೊಸ ಪಕ್ಷ ಕಟ್ಟಿ ತಮ್ಮ ಪಕ್ಷವನ್ನು ಅಧಿಕಾರಕ್ಕೆ ತಂದ ಅಪರೂಪ ಸಾಧಕ ಶ್ರೀ ರಾಮರಾಯರು. 1983ರಲ್ಲಿ ಹಾಗೂ 1995ರಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದರು.

ಬಡಜನರ ಪರವಾಗಿ ತಮ್ಮ ಇಡೀ ರಾಜಕೀಯ ಜೀವನವನ್ನು ಮುಡಿಪಾಗಿರಿಸಿ ಎನ್.ಟಿ.ಆರ್. ರಾಜಕೀಯದಲ್ಲೂ ವಿಶಿಷ್ಟ ವ್ಯಕ್ತಿಯಾಗಿ ಗುರ್ತಿಸಿಕೊಂಡರು. ಸಮಸ್ಯೆಗಳಿಗೆ ಅಂಜದೆ, ಪರಿಸ್ಥಿತಿಗಳಿಗೆ ಅಳುಕದೆ, ಗಂಭೀರ ಪರಿಸ್ಥಿತಿಗಳನ್ನು ಸಹ ಲೀಲಾಜಾಲವಾಗಿ ಎದುರಿಸಿದ ಧೀಮಂತ ನಾಯಕ.

ವಿಕೃತ ಮೌಲ್ಯ ಹಾಗೂ ಶೋಷಣೆಗೆ ಜನಸಾಮಾನ್ಯರು ಗುರಿಯಾಗುತ್ತಿದ್ದಾರೆ ಎಂದು ಮನವರಿಕೆ ಆದಾಗ ಜನತೆಯ ಹಕ್ಕುಗಳ ರಕ್ಷಣೆಗಾಗಿ ಅವರು ಸಿಡಿದರು, ಎದ್ದುನಿಂತರು. ಎಲ್ಲಾ ವೈರುಧ್ಯಗಳ ವಿರುದ್ಧ ಹೋರಾಡಿ ಜನತೆಯ ಮನಸ್ಸಿನಲ್ಲಿ ಭರವಸೆಯ ಹೊಂಗಿರಣವನ್ನು ಹೊಮ್ಮಿಸಿದ್ದರು. ನಿಜವಾಗಿಯೂ ಈ ಶತಮಾನದ ಯುಗಪುರುಷರಲ್ಲಿ ಒಬ್ಬರಾಗಿದ್ದ ಶ್ರೀ ರಾಮರಾಯರು ಮಹಾನ್‌ಕಲಾವಿದ ಮಾತ್ರವಲ್ಲ, ಅವರೊಬ್ಬ ಅಪರೂಪದ ಧೀರೋದಾತ್ತ ಹೋರಾಟಗಾರರು.

ರಾಷ್ಟ್ರೀಯ ಸಂಯುಕ್ತ ರಂಗದ ಅಧ್ಯಕ್ಷರಾಗಿ ದೇಶ ಸೇವೆ ಮಾಡಿದ ಎನ್.ಟಿ.ಆರ್. ಅಸಾಮಾನ್ಯ ರಾಜಕೀಯಕರ್ತರೂ ಆಗಿದ್ದರು. ಬಡಜನರ ರಕ್ಷಕರಾಗಿದ್ದ ಶ್ರೀ ಎನ್.ಟಿ.ಆರ್. ಎರಡು ರೂಪಾಯಿಗೆ ಕಿಲೋ ಅಕ್ಕಿ ನೀಡುವ ಮೂಲಕ ಹಾಗೂ ಪಾನನಿಷೇದ ಜಾರಿ ತರುವ ಮೂಲಕ ಬಡಜನರ ಬಗ್ಗೆ ಇದ್ದ ಕಾಳಜಿಯನ್ನು ಅಭಿವ್ಯಕ್ತಿಗೊಳಿಸಿದರು. ಅಪಾರ ದೇಶಪ್ರೇಮಿ, ವಾಗ್ಮಿ ಕಲಾರಸಿಕರಾಗಿದ್ದರು.

3) ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವೈ.ವಿ. ಜೋಗಣ್ಣವರ್ ಅವರು ದಿನಾಂಕ 28.1.1996ರಂದು ನಿಧನರಾದರು. ಐದನೇ ವಿಧಾನಸಭೆಗೆ ನರಗುಂದ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು ಸಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಹರಿಜನ ಮತ್ತು ಗಿರಿಜನ ಹಿಂದುಳಿದ ವರ್ಗದವರಿಗೆ ನಿವೇಶನ ಕಲ್ಪಿಸಿಕೊಡುವಲ್ಲಿಯೂ ಆಸಕ್ತಿ ವಹಿಸಿದ್ದರು.

4) ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಿ. ಆನಂದಕುಂದ ಹೆಗಡೆ ಅವರು ದಿನಾಂಕ 11.1.1996ರಂದು ನಿಧನರಾದರು. ಆರನೇ ವಿಧಾನಸಭೆಗೆ ಬ್ರಹ್ಮಾವರ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಭಾಗವಹಿಸಿದ್ದರು.

5) ಕರ್ನಾಟಕ ವಿಧಾನಮಂಡಲದ ಮಾಜಿ ಕಾರ್ಯದರ್ಶಿಯಾಗಿದ್ದ ಶ್ರೀ ಜಿ.ಎಸ್. ವೆಂಕಟರಮಣ ಅಯ್ಯರ್ ಅವರು ದಿನಾಂಕ 11.2.1996ರಂದು ನಿಧನರಾದರು. ಶ್ರೀಯುತರು ಕರ್ನಾಟಕ ವಿಧಾನಮಂಡಲದ ಪ್ರಥಮ ಕಾರ್ಯದರ್ಶಿಯಾಗಿ 1965ನೇ ಇಸವಿಯವರೆಗೂ ಉತ್ತಮ ಸೇವೆ ಸಲ್ಲಿಸಿ ಹಿಂದಿನ ಮೈಸೂರು ವಿಧಾನಮಂಡಲದ ಹಾಗೂ ಸಾಂಸದಿಕ ಪರಂಪರೆಯನ್ನು ಉಳಿಸಿ ಬೆಳೆಸಿ ಹೆಚ್ಚಿನ ಮೆಚ್ಚುಗೆ ಗಳಿಸಿದ ವ್ಯಕ್ತಿ ಎಂದರೆ ತಪ್ಪಾಗಲಾರದು.

ಈಗ ಮಾನ್ಯ ಸಭಾನಾಯಕರು ನಿರ್ಣಯ ಮೇಲೆ ಮಾತನಾಡಬೇಕೆಂದು ಸೂಚನೆಯನ್ನು ಮಾಡುತ್ತೇನೆ.

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಪ್ರಥಮದಲ್ಲಿ ನನ್ನ ಜಿಲ್ಲೆಯವರಾದ ಶ್ರೀ ಬಿ.ಆರ್. ಕೃಷ್ಣಮೂರ್ತಿಯವರು ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಹೃದಯಾಘಾತದಿಂದ ನಮ್ಮನ್ನು ಅಗಲಿಹೋಗಿದ್ದಾರೆ. ಈ ಸಂದರ್ಭದಲ್ಲಿ ಅವರು ಒಬ್ಬ ನನ್ನ ಜಿಲ್ಲೆಯ ಸುಪ್ರಸಿದ್ಧ ವಕೀಲರಾಗಿ ಸಾಮಾಜಿಕ ರಂಗದಲ್ಲಿ ಸಾಕಷ್ಟು ಸೇವೆಯನ್ನು ಸಲ್ಲಿಸಿರತಕ್ಕಂಥ ಒಬ್ಬ ಯುವಕ ಮುಂದಾಳಾಗಿದ್ದರು. ದುರಾದೃಷ್ಟ, ಅವರು ಇಷ್ಟೊಂದು ಚಿಕ್ಕ ವಯಸ್ಸಿನಲ್ಲೇ ನಮ್ಮನ್ನು ಅಗಲಿಹೋಗತಕ್ಕಂಥ, ಸನ್ನಿವೇಶ ಬರಬಹುದು ಎಂದು ನಾವು ಯಾರೂ ನಿರೀಕ್ಷಿಸಿರಲಿಲ್ಲ. ಒಂದೇ ಒಂದು ಶಬ್ದದಲ್ಲಿ ಹೇಳುವುದಾದರೆ, ದಿನಾಂಕ 17-2-96ರಂದು ಬೆಳಿಗ್ಗೆ ಐದೂವರೆ ಗಂಟೆಗೆ ಅವರು

ನಿಧನರಾದ ಸುದ್ದಿಯನ್ನು ತಿಳಿದಾಗ ನನಗೆ ವಿಶ್ವಾಸ ಕೂಡ ಬರಲಿಲ್ಲ. ಎಷ್ಟೊಂದು ಅವರ ಮನಸ್ಸಿನಲ್ಲಿ ಆ ಸ್ಥೈರ್ಯ, ಧೈರ್ಯ ಇತ್ತು ಎನ್ನತಕ್ಕಂಥ ಮಾತನ್ನು ಹೇಳುವುದಾದರೆ, 16ನೇ ತಾರೀಖು ಬೆಳಿಗ್ಗೆನೇ ಅವರಿಗೆ ಎದೆನೋವು ಕಾಣಿಸಿಕೊಂಡರೂ ಕೂಡ ಅದು ತನ್ನ ಹೃದಯದ ಬೇನೆ ಅಲ್ಲವೆಂದು ಜತೆಯಲ್ಲಿದ್ದವರಿಗೆ ಹೇಳಿ ಆಸ್ಪತ್ರೆಗೆ ಹೋಗಿ ಪುನಃ ವಾಪಸ್ಸು ಮನೆಗೆ ಹೋಗಿದ್ದಾರೆ. ಇಷ್ಟೊಂದು ರೀತಿಯಲ್ಲಿ ತನ್ನ ಆರೋಗ್ಯದ ಕಡೆ ಕೂಡ ಗಮನಕೊಡದೆ ಸಾಮಾಜಿಕ ಸೇವೆಯಲ್ಲಿ ಕೆಲಸ ಮಾಡಿರತಕ್ಕಂಥ ಒಬ್ಬ ವ್ಯಕ್ತಿ ಅವರಾಗಿದ್ದರು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ದುರಾದೃಷ್ಟ, ಅವರು ನಮ್ಮನ್ನು ಇಂದು ಅಗಲಿಹೋಗಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥನೆ ಮಾಡಿ, ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಿಕೊಳ್ಳತಕ್ಕಂಥಾದ್ದಕ್ಕೆ, ಸಹಿಸಿಕೊಳ್ಳತಕ್ಕಂಥಾದ್ದಕ್ಕೆ ಸರ್ವಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥನೆ ಮಾಡಿ ನನ್ನ ಸಂತಾಪ ಸೂಚನೆಯನ್ನು ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಶ್ರೀ ಎನ್.ಟಿ. ರಾಮರಾವ್ ಅವರ ಬಗ್ಗೆ ಮಾತನಾಡಬೇಕಾದರೆ ತಮಗೆ ಗೊತ್ತಿದೆ, ತಾವು ಏನೇನು ತಮ್ಮ ಸಂತಾಪ ಸೂಚನೆಯಲ್ಲಿ ಮಂಡನೆ ಮಾಡಿದ್ದೀರಿ, ಅದೆಲ್ಲವನ್ನೂ ಕೂಡ ನಾನು ಸಮರ್ಥನೆ ಮಾಡಿ, ಬಹುಶಃ ರಾಷ್ಟ್ರ ರಾಜಕಾರಣದಲ್ಲಿ ಅತ್ಯಂತ ಕಡಿಮೆ ಕಾಲದಲ್ಲಿ ಅಷ್ಟು ಎತ್ತರಕ್ಕೆ ಬೆಳೆದಂಥ ವ್ಯಕ್ತಿಗಳು ನನ್ನ ದೃಷ್ಟಿಯಲ್ಲಿ ಕಡಿಮೆ ಅಂತ ಹೇಳಿ ನಾನು ಭಾವಿಸಿಕೊಳ್ಳುತ್ತೇನೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಿಕ್ಕಿಲ್ಲ, ಸ್ವಾಭಿಮಾನಕ್ಕೆ ಧಕ್ಕೆ ಬಂದಂಥ ಕಾಲದಲ್ಲಿ ಸಿಡಿದೆದ್ದು ನಿಲ್ಲತಕ್ಕಂಥ ಒಬ್ಬ ಹುಟ್ಟು ಹೋರಾಟಗಾರ ಅವರು ಆಗಿದ್ದರು. ತನಗಾಗಲೀ, ತನ್ನ ರಾಜ್ಯಕ್ಕಾಗಲೀ, ತನ್ನ ಜನತೆಗಾಗಲೀ ಎಲ್ಲಿಯಾದರೂ ಕುಂದು ಬರುತ್ತದೆ, ತನ್ನ ರಾಜ್ಯದ ಜನತೆಯ ಗೌರವಕ್ಕೆ ಅಪಾಯವಾಗುತ್ತದೆ ಎಂದು ಕಂಡುಬಂದಾಗ ಅದರ ವಿರುದ್ಧ ಸಿಡಿದೆದ್ದು ಹೋರಾಟ ಮಾಡಿದ ವ್ಯಕ್ತಿ ಅವರಾಗಿದ್ದರು. ಚಿತ್ರರಂಗದಿಂದ ರಾಜಕೀಯ ರಂಗಕ್ಕೆ ಪ್ರವೇಶ ಮಾಡಬೇಕಾದರೆ ಅದರ ಹಿನ್ನಲೆ ಏನು ಎನ್ನತಕ್ಕಂಥಾದ್ದನ್ನು ಸೂಕ್ಷ್ಮವಾಗಿ ಹೇಳಿದ್ದೇನೆ. ನಾನು ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಯಾವ ಸಂದರ್ಭದಲ್ಲಿ ಅವರು ಚಿತ್ರರಂಗದಿಂದ ರಾಜಕೀಯ ರಂಗಕ್ಕೆ ಬಂದರು ಎನ್ನತಕ್ಕ ದಿನಗಳನ್ನು ಸ್ಮರಿಸಿಕೊಂಡರೆ ಆಂಧ್ರದ ಸ್ವಾಭಿಮಾನಕ್ಕೆ ತನ್ನ ದೃಷ್ಟಿಯಲ್ಲಿ ಸ್ವಲ್ಪ ಮಟ್ಟಿಗೆ ಧಕ್ಕೆ ಬಂತು ಎಂದಾಗ ಹೊರಗೆ ಬಂದು ಹೋರಾಟ ಮಾಡಿ ತಾನೇ ಪಕ್ಷವನ್ನು ಕಟ್ಟಿ ತನ್ನ ಹೋರಾಟದ ಫಲದಿಂದ ಸರ್ಕಾರವನ್ನು ಕೈಗೆತ್ತಿಕೊಂಡಂಥ ಒಬ್ಬ ವ್ಯಕ್ತಿ ಬಹುಶಃ ಮತ್ತೆ ಯಾರೂ ಇರಲಾರರೆಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಬೇರೆ ಬೇರೆ ರಾಜ್ಯಗಳಲ್ಲಿ ವಿರೋಧಪಕ್ಷಗಳು ಬಂದಿರಬಹುದು, ಕೆಲವು ರಾಷ್ಟ್ರೀಯ ಪಕ್ಷಗಳು ಬಂದಿರಬಹುದು. ಆದರೆ ಒಂದು ರಾಜ್ಯದಲ್ಲಿ ತನ್ನ ಸ್ವಂತ ಬಲದಿಂದ ಜನರನ್ನು ಸಂಘಟನೆ ಮಾಡಿ, ಜನಗಳ ಆಶೀರ್ವಾದದ ಬಲದಿಂದ ಒಂದು ರಾಷ್ಟ್ರೀಯ ಪಕ್ಷವನ್ನು ಸೋಲಿಸಿ ಅಧಿಕಾರಕ್ಕೆ ಬರತಕ್ಕಂಥಾದ್ದು ಕಷ್ಟ, ಅದು ಅಷ್ಟು ಸುಲಭ ಅಲ್ಲ. ಈ ಎದೆಗಾರಿಕೆಯುಳ್ಳ ಮನುಷ್ಯ, ಅವರು ಹುಟ್ಟು ಹೋರಾಟಗಾರರಾಗಿದ್ದರು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವರಿಗೆ ಬಡವರ ಪರವಾಗಿ ಹೆಚ್ಚು ಕಾಳಜಿ ಇತ್ತು ಎನ್ನುವುದರ ಬಗ್ಗೆ ಹೇಳುವುದಾದರೆ ಎರಡು ನಿದರ್ಶನಗಳು ಅಷ್ಟೇ ಸಾಕು.

ಅವರು ಏನು ಇವತ್ತು ಪಾನನಿರೋಧವನ್ನು ಆ ರಾಜ್ಯದಲ್ಲಿ ತಂದವರಲ್ಲಿ ಮೊದಲಿಗರಾದರು, ಮಹಾತ್ಮಗಾಂಧಿಯವರ ನಿಜವಾದ ಒಂದು ಭಾವನೆ ಏನಿತ್ತು, ಅದಕ್ಕೆ ಸ್ಪಂದಿಸತಕ್ಕಂಥ ರೀತಿಯಲ್ಲಿ ಅವರು ಮೊದಲು ತಮ್ಮ ರಾಜ್ಯದಲ್ಲಿ ಪಾನನಿಷೇಧ ಮಾಡುವುದಕ್ಕೆ ಪ್ರಯತ್ನ ಮಾಡಿದಂಥದ ವ್ಯಕ್ತಿಯಾಗಿದ್ದರು ಎನ್ನತಕ್ಕಂಥ ಮಾತನ್ನು ಈ

ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುವಂಥ ಕಾರ್ಯಕ್ರಮ. ರಾಜ್ಯದ ಅಭಿವೃದ್ಧಿಗೆ ಹಣಕಾಸಿನ ತೊಂದರೆ, ಮುಗ್ಗಟ್ಟು ಎಷ್ಟೇ ಬಂದರೂ ಕೂಡ ಅದನ್ನು ಮೆಟ್ಟಿ ನಿಲ್ಲತಕ್ಕಂಥ ಧೈರ್ಯ ಮಾಡಿ ಜನತೆಯ ಮುಂದೆ ಸೈ ಎನಿಸಿಕೊಂಡರು. ಒಂದು ಮಾತನ್ನು ಬಹುಶಃ ನಾನು ಅಪ್ರತ್ಯಕ್ಷವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ತಾನು ಏನೇ ತಪ್ಪುನೆಪ್ಪುಗಳನ್ನು ಮಾಡಿದರೂ ಸಾರ್ವತ್ರಿಕವಾಗಿ ಒಪ್ಪಿಕೊಳ್ಳತಕ್ಕಂಥ ಮಾನಸಿಕ ಸ್ಥೈರ್ಯ ಅವರಲ್ಲಿ ಇತ್ತು. ಅವರಲ್ಲಿ ವಂಚನೆಯ ಮನೋಭಾವ ಇರಲಿಲ್ಲ, ಇದನ್ನು ಅವರು ತೋರಿಸಿಕೊಟ್ಟರು ಎಂದು ನನ್ನ ಭಾವನೆ. ಒಬ್ಬ ಧೀಮಂತ ನಾಯಕ ನನ್ನ ಇವತ್ತು ಈ ರಾಷ್ಟ್ರದಲ್ಲಿ ನಾವು ಕಳೆದುಕೊಂಡಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ರಾಷ್ಟ್ರ ರಾಜಕಾರಣದಲ್ಲಿ ಪ್ರಬಲವಾದಂಥ ಒಬ್ಬ ವ್ಯಕ್ತಿ ಇವತ್ತು ನಮ್ಮಿಂದ ಕಣ್ಮರೆಯಾಗಿದ್ದಾರೆ. ಆ ಒಂದು ಶೂನ್ಯತೆಯನ್ನು ತುಂಬತಕ್ಕಂಥ ಶಕ್ತಿ ಬೇರೆ ಯಾರಿಗೂ ಇರಲಾರದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಸ್ಮರಿಸಿಕೊಳ್ಳುತ್ತೇನೆ. ಅವರಿಗೆ ಮತ್ತು ಅವರ ಕುಟುಂಬದವರಿಗೆ, ಇವತ್ತು ಕುಟುಂಬದಲ್ಲಿ ಏನೇ. ಇರಲಿ, ಅವರ ಕುಟುಂಬದವರಿಗೆ ಅವರ ದುಃಖದಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ, ಅವರ ಆತ್ಮಕ್ಕೆ ಶಾಂತಿಯನ್ನು ಭಗವಂತನು ಕರುಣಿಸಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಅದೇ ರೀತಿ ಶ್ರೀಮಾನ್ ಜೋಗಣ್ಣನವರ್ ಅವರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ವಿಧಾನಸಭೆಯಲ್ಲಿ ಕೂಡ ಅತ್ಯಂತ ಉತ್ತಮ ಕೆಲಸ ಮಾಡಿ ಅವರು ನಮ್ಮನ್ನು ಇಂದು ಅಗಲಿಹೋಗಿದ್ದಾರೆ. ಶ್ರೀ ಆನಂದಕುಂದ ಹೆಗಡೆಯವರು ಕೂಡ ಈ ಸಭೆಯಲ್ಲಿ ಬ್ರಹ್ಮಾವರ ಕ್ಷೇತ್ರದಿಂದ ಪ್ರತಿನಿಧಿಸಿದ್ದರು ಮತ್ತು ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಈ ರಾಜ್ಯದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ನಿಧನದಿಂದ ಅವರ ಕುಟುಂಬಕ್ಕೆ ಏನು ಇವತ್ತು ಭರಿಸಲಾಗದಂಥ ದುಃಖ ಇದೆ, ನಾವು ಅದರಲ್ಲಿ ಭಾಗಿಯಾಗಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರತಕ್ಕಂಥಾದ್ದಕ್ಕೆ ನಾವೆಲ್ಲರೂ ಒಂದು ಗೂಡಿ ಈ ಒಂದು ನಿರ್ಣಯವನ್ನು ಮಂಡನೆ ಮಾಡುತ್ತಿದ್ದೇವೆ.

ಶ್ರೀ ವೆಂಕಟರಮಣ ಅಯ್ಯರ್ ಅವರು ಬಹುಶಃ ಈ ವಿಧಾನಮಂಡಲದ ಮೊದಲನೆಯ ಕಾರ್ಯದರ್ಶಿಯಾಗಿರಬೇಕೆಂದು ನನ್ನ ಭಾವನೆ. ಏಕೆಂದರೆ ಇದಕ್ಕಿಂತ ಹಿಂದೆ ಎಂ.ಆರ್.ಎ. ರೆಪ್ರಸೆಂಟೇಟಿವ್ ಅಸೆಂಬ್ಲಿ ಬೇರೆ ಇರಬಹುದಾದರೂ, ಈ ವಿಧಾನಸಭೆಗೆ ಶ್ರೀ ವೆಂಕಟರಮಣ ಅಯ್ಯರ್ ಅವರು ಮೊದಲನೇ ಕಾರ್ಯದರ್ಶಿಯಾಗಿ ಅನುಭವಶಾಲಿಯಾದ ಅವರು ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ಅವರದ್ದೇ ಆದ ಪಾಂಡಿತ್ಯವನ್ನು ಹೊಂದಿದಂಥ ವ್ಯಕ್ತಿಯಾಗಿದ್ದರು ಎಂದು ಹೇಳಿದರೆ ತಪ್ಪಾಗಲಾರದು. ಹೀಗೆ ಅಪಾರವಾಗಿ ಸೇವೆ ಸಲ್ಲಿಸಿರತಕ್ಕಂಥ ವ್ಯಕ್ತಿ ನಮ್ಮನ್ನು ಇಂದು ಅಗಲಿಹೋಗಿದ್ದಾರೆ. ಅವರ ಆತ್ಮಕ್ಕೆ ಕೂಡ ಚಿರಶಾಂತಿಯನ್ನು ಭಗವಂತನು ಕೊಡಲಿ ಎಂದು ಪ್ರಾರ್ಥನೆ ಮಾಡಿ, ಈ ಎಲ್ಲ ಮಹನೀಯರುಗಳಿಗೆ ತಾವೇನು ತಮ್ಮ ಪೀಠದಿಂದ ಸಂತಾಪಸೂಚನೆ ನಿರ್ಣಯವನ್ನು ಮಂಡನೆ ಮಾಡಿದ್ದೀರಿ, ಅದನ್ನು ನಾನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ತಾವು ತಂದಿರುವಂಥ ಈ ಸಂತಾಪಸೂಚಕ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, 16.2.96ರ ರಾತ್ರಿ 8 ಗಂಟೆವರೆಗೂ ನಮ್ಮ ಜತೆ ನಗುನಗುತ್ತಾ ಮಾತನಾಡಿಕೊಂಡಿದ್ದಂಥ ಬಿ.ಆರ್. ಕೃಷ್ಣಮೂರ್ತಿ ಅವರು, ಬೆಳಿಗ್ಗೆ ಅವರ ಮೃತಶರೀರವನ್ನು ನೋಡುವಂಥ, ಒಂದು ಪರಿಸ್ಥಿತಿ ನಮಗೆ ಒದಗಿಬಂತು. ವಿಧಿನಿಯಮಾಮಕವೆಂದು

ಕಾಣುತ್ತದೆ. ಅವರು ನನ್ನ ಹತ್ತಿರ ಮಾತನಾಡುತ್ತಾ ಹೇಳಿದರು, ಏನೆಂದರೆ 12 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಂಚಿ ಕಾಮಕೋಟಿ ಸ್ವಾಮಿಗಳ ಇಚ್ಛೆಯಂತೆ ಒಂದು ರೆಸಿಡೆನ್ಷಿಯಲ್ ಸ್ಕೂಲ್‌ನ್ನು ತೆಗೆಯಬೇಕಾಗಿದೆ, ಅದಕ್ಕಾಗಿ ಸ್ವಾಮಿಗಳ ಬೇಟಿಗೋಸ್ಕರ ಕಂಚಿಗೆ ನಾನು 17ರಂದು ಬೆಳಿಗ್ಗೆ ಹೋಗುತ್ತೇನೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದರು. ರಾತ್ರಿ ಹತ್ತು ಗಂಟೆಗೆ ಸ್ವಲ್ಪ ಎದೆನೋವು ಕಾಣಿಸಿತು ಎಂದು ಅವರ ಮಗ ಸಂಜೀವನ ಜೊತೆಗೆ ವೊಕಾರ್ಟ್ ನರ್ಸಿಂಗ್‌ಹೋಮ್ ಹತ್ತಿರ ಹೋಗಿದ್ದಾರೆ. ಆದರೆ ಬೆಳಿಗ್ಗೆ ಬಂದು ತೋರಿಸಿದರಾಯ್ತು ಎಂದು ಹೇಳಿ ಮತ್ತೆ ವಾಪಸ್ಸು ಬಂದು ರಾತ್ರಿ 11.30 ಗಂಟೆಗೆ ಹೋಗಿ ಅಡ್ಮಿಟ್ ಆಗಿ ಬೆಳಗಿನ ಜಾವ ಮೂರು ಗಂಟೆಗೆ ಕೊನೆಯುಸಿರು ಎಳೆದರು ಎಂಬುದನ್ನು ಕೇಳಿ ನಾವು ದಿಗ್ಭ್ರಾಂತರಾದೆವು. ಬಿ.ಆರ್.ಕೆ. ಒಬ್ಬ ಚುರುಕು ನುಡಿಯ, ನೇರವಾಗಿ ಮಾತನಾಡುವಂಥ ಸ್ನೇಹಮಯಿ ವ್ಯಕ್ತಿಯಾಗಿದ್ದರು. ಅವರಿಗೆ ವಿರೋಧಿಗಳು ಯಾರು ಇದ್ದರು ಎಂದು ನಮಗೆ ಗೊತ್ತಿಲ್ಲ. ಒಂದು ರೀತಿ ಅಜಾತಶತ್ರುವಿನಂತೆ ಕೆಲಸ ಮಾಡುವಂಥ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಹಾಸನದಲ್ಲಿ ಇವತ್ತು ಬಿ.ಆರ್. ಕೃಷ್ಣಮೂರ್ತಿ ಅಂದರೆ ಯಾರಿಗೂ ಗೊತ್ತಾಗುವುದಿಲ್ಲ, ಬಿ.ಆರ್.ಕೆ. ಅಂತಾನೇ ಅವರನ್ನು ಎಲ್ಲರೂ ಗುರುತು ಮಾಡುವಂಥಾದ್ದು. ಒಂದು ರೀತಿಯಲ್ಲಿ ನಮ್ಮ ಪಕ್ಷಕ್ಕಂತೂ ದೊಡ್ಡ ಶಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಅವರು 1964ರಲ್ಲಿ ಬಿ.ಕಾಂ. ಮುಗಿಸಿ 1966ರಲ್ಲಿ ಬಿ.ಎಲ್. ಡಿಗ್ರಿ ಪಡೆದು ಎರಡು ಸಲ ಬಾರ್ ಕೌನ್ಸಿಲ್ ಮೆಂಬರ್ ಆಗಿದ್ದರು, ಮೊದಲಿನಿಂದಲೂ ನಮ್ಮ ಸಂಘ ಪರಿವಾರದ ಅನೇಕ ಸಂಸ್ಥೆಗಳಲ್ಲಿ ಬಹಳ ಜವಾಬ್ದಾರಿಯನ್ನು ಹೊತ್ತುಕೊಂಡು ಕೆಲಸ ಮಾಡಿದರು. ಅಖಿಲ ಭಾರತ ಯುವ ವಿದ್ಯಾರ್ಥಿ ಪರಿಷತ್ತಿನಲ್ಲಿ ಅನೇಕ ಜವಾಬ್ದಾರಿಗಳನ್ನು ಹೊತ್ತುಕೊಂಡು ಕೆಲಸ ಮಾಡಿದ್ದರು. ಹಾಸನದಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ಒಬ್ಬ ಲೀಡಿಂಗ್ ಅಡ್ವೊಕೇಟ್ ಆಗಿ ಕೆಲಸ ಮಾಡಿದರು. ಮಲೆನಾಡು ಎಜುಕೇಶನ್ ಸೊಸೈಟಿಯ ಒಬ್ಬ ಹಿರಿಯ ಸದಸ್ಯರಾಗಿ ನಿವೇದಿತ ವಿದ್ಯಾ ಸಂಸ್ಥೆಯ ಫೌಂಡರ್ ಆಗಿ ಕೆಲಸ ಮಾಡಿದಂತಹ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅದೇ ರೀತಿಯಲ್ಲಿ ರಾಜಕಾರಣದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿದಂತಹ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಎನ್.ಟಿ. ರಾಮರಾವ್ ಸಹ ನಿಧನರಾಗಿದ್ದಾರೆ. ಬಹುಶಃ ಪಾನ ನಿಷೇಧವನ್ನು ಜಾರಿಗೆ ತರುವಂತಹ ಒಂದು ಐತಿಹಾಸಿಕ ನಿರ್ಣಯವನ್ನು ಅವರು ಏನು ಮಾಡಿದರು ಬಹುಶಃ ಆ ರೀತಿಯಾದ ನಿರ್ಣಯಗಳನ್ನು ನಾವು ಮಾಡಬೇಕಾಗಿದೆ ಈ ನಾಡಿನ ಜನರ ಉಳಿವಿಗಾಗಿ. ಆ ರೀತಿಯಾದಂತಹ ಒಂದು ಕ್ರಾಂತಿಕಾರವಾದ ಕೆಲಸವನ್ನು ಮಾಡಿದಂತಹ ವ್ಯಕ್ತಿಯನ್ನು ಸಹ ನಾವು ಕಳೆದುಕೊಂಡಿದ್ದೇವೆ. ಅದರ ಜೊತೆಗೆ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂತಹ ಶ್ರೀ ವೈ.ಜಿ. ಜೋಗಣ್ಣನವರು, ಶ್ರೀ ಆನಂದಕುಂದ ಹೆಗಡೆಯವರು ಮತ್ತು ಕರ್ನಾಟಕ ವಿಧಾನ ಮಂಡಲದ ಪ್ರಥಮ ಕಾರ್ಯದರ್ಶಿಯಾಗಿದ್ದ ಶ್ರೀ ಜಿ.ಎಸ್. ವೆಂಕಟರಮಣ ಐಯ್ಯರ್ ಇವರುಗಳು ಸಹ ದೈವಾಧೀನರಾಗಿದ್ದಾರೆ. ಈ ಸಮಯದಲ್ಲಿ ಬಿ.ಆರ್.ಕೆ.ಯವರ ಕುಟುಂಬದವರಿಗೆ ಅವರ ಅಗಲಿಕೆಯನ್ನು ತಡೆದುಕೊಳ್ಳುವಂತಹ ಶಕ್ತಿ ಭಗವಂತ ಅವರಿಗೆ ಕೊಡಲಿ ಅಕಾಲ ಮರಣದ ಪರಿಣಾಮ ದೊಡ್ಡ ನಷ್ಟವೇ ಅವರ ಕುಟುಂಬಕ್ಕೆ ಆಗಿದೆ. ಅದೇ ರೀತಿಯಲ್ಲಿ ಅನೇಕ ಹಿರಿಯ ದೈವಾಧೀನರಾಗಿದ್ದಾರೆ. ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ತಾವು ತಂದಿರತಕ್ಕ ನಿರ್ಣಯಕ್ಕೆ ನನ್ನ ಸಂಪೂರ್ಣ ಸಹಮತವನ್ನು ವ್ಯಕ್ತಮಾಡುತ್ತಾ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿರತಕ್ಕಂಥ ಸಂತಾಪಸೂಚನಾ ನಿರ್ಣಯಕ್ಕೆ ನಾನು ಸಂಪೂರ್ಣ ಬೆಂಬಲವನ್ನು ಸೂಚಿಸುತ್ತಾ, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದಂತಹ ಶ್ರೀಮಾನ್ ಬಿ.ಆರ್. ಕೃಷ್ಣಮೂರ್ತಿಯವರು ಅತ್ಯಂತ ಚಿಕ್ಕವಯಸ್ಸಿನಲ್ಲಿಯೇ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರು ಪದವೀಧರರ ಕ್ಷೇತ್ರದಿಂದ ಚುನಾಯಿತರಾಗಿ ವಿಧಾನ ಪರಿಷತ್ತಿನಲ್ಲಿ ಬಹಳ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿದ್ದರು. ಅವರು ಬಿ.ಜೆ.ಪಿ. ಸದಸ್ಯರಾಗಿದ್ದರೂ ಕೂಡ ಮತ್ತು ಅನೇಕ ಸಂಘ ಪರಿವಾರ ಅಂತಹ ಕಡೆಗಳಲ್ಲಿ ಕೆಲಸ ಮಾಡಿದ್ದರು ಕೂಡ ಯಾವತ್ತೂ ಕೂಡ ಅವರು ವಿಧಾನ ಪರಿಷತ್ತಿನಲ್ಲಿ ಎಕ್ಸ್‌ಟ್ರೀಮ್ಸ್ ವೀವ್ಸ್ ಇಟ್ಟುಕೊಂಡು ಮಾತನಾಡಿದ್ದನ್ನು ನಾನು ಎಂದೂ ಕಂಡಿಲ್ಲ. ಯಾವುದೇ ಒಂದು ಸಮಸ್ಯೆ ಬಂದರೂ ಕೂಡ ಅದರ ಬಗ್ಗೆ ಅವರು ಬಹಳ ಅಭ್ಯಾಸ ಮಾಡಿ ತುಂಬಾ ಅರ್ಥಗರ್ಭಿತವಾಗಿ ಮಾತನಾಡತಕ್ಕಂಥ ವ್ಯಕ್ತಿ.

ಪ್ರಾಕ್ಟಿಕಲ್ ಆಗಿ ಸಲಹೆಗಳನ್ನು ಕೊಡತಕ್ಕಂಥ ಒಬ್ಬ ವ್ಯಕ್ತಿ ಆಗಿದ್ದರು. ಅವರು ಒಬ್ಬ ವಕೀಲರು ಕೂಡ ಆಗಿದ್ದರು. ಯಾವ ವ್ಯಕ್ತಿ ಆ ದಿವಸ ನಮ್ಮ ಕಣ್ಣು ಎದುರೇ ಇದ್ದರು. ಅವರು ಇವತ್ತು ನಮ್ಮ ಸಡನ್ ಆಗಿ ಅಗಲಿ ಹೋಗಿರುವುದಾಗಿ ಇವತ್ತು ನಿಜವಾಗಿಯೂ ನಾವು ಒಬ್ಬ ಒಳ್ಳೆಯ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಅವರ ಕುಟುಂಬಕ್ಕೆ ತುಂಬಲಾರದಂತಹ ನಷ್ಟ ಆಗಿದೆ. ಅವರ ದುಃಖದಲ್ಲಿ ನಾವು ಸಹ ಸಹಭಾಗಿಗಳಾಗಿದ್ದೇವೆ. ಅದೇ ರೀತಿಯಾಗಿ ನಮ್ಮ ಎನ್.ಟಿ. ರಾಮರಾಮರು ವಿಶೇಷವಾಗಿ ನಮ್ಮ ಆಂಧ್ರಪ್ರದೇಶದ ರಾಜಕೀಯದಲ್ಲಿ ಒಂದು ಹೊಸ ತಿರುವು ಕೊಟ್ಟಂತಹ ವ್ಯಕ್ತಿ. ಸ್ವತಃ ಅವರು ಪಕ್ಷವನ್ನು ಕಟ್ಟಿ ಬೆಳಸಿ ಆ ಪಕ್ಷದ ಮುಖ್ಯಮಂತ್ರಿಗಳಾಗಿ ಅನೇಕ ಹೊಸ ಕಾರ್ಯಕ್ರಮಗಳನ್ನು ಬಡವರಿಗಾಗಿ ಅಲ್ಲಿ ಮಾಡಿದಂತಹ ಒಬ್ಬ ಧೀಮಂತ ವ್ಯಕ್ತಿ ಅಷ್ಟೇ ಅಲ್ಲ, ಒಬ್ಬ ಕಲಾವಿದ. ಅದರಲ್ಲೂ ವಿಶೇಷವಾಗಿ ನಮ್ಮ ಕಡೆ ಅವರು ಪೌರಾಣಿಕ ಚಿತ್ರಗಳಲ್ಲಿ ರಾಮನ ಪಾತ್ರ, ಕೃಷ್ಣನ ಪಾತ್ರ ಮಾಡಿದಂತಹ ಪೋಸ್ಟರ್‌ಗಳು ಬಂದರೆ ಜನ ಅದನ್ನ ಕತ್ತರಿಸಿ ಕನ್ನಡಿಯಲ್ಲಿ ಹಾಕಿ ದೇವರು ಎಂದು ಪೂಜೆ ಮಾಡುತ್ತಿದ್ದರು. ಅಂತಹ ಒಂದು ಪರ್ಸನಾಲಿಟಿ ಮತ್ತು ಅಂತಹ ಒಬ್ಬ ಕಲಾವಿದ ಎನ್ನತಕ್ಕಂಥದ್ದರ ಬಗ್ಗೆ ಎಲ್ಲ ಜನರ ಮೆಚ್ಚುಗೆ ಇತ್ತು. ಅಂತಹ ಒಬ್ಬ ಧೀಮಂತ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರು ನ್ಯಾಷನಲ್ ಫ್ರಂಟ್ ಅಧ್ಯಕ್ಷರಾಗಿ ಕೂಡ ಕೆಲಸ ಮಾಡಿದರು. ಬಹುಶಃ ಅವರು ಇರುವವರೆಗೂ ಕೂಡ ಯಾವ ಪ್ರಶ್ನೆಯೂ ಕೂಡ ನ್ಯಾಷನಲ್ ಫ್ರಂಟ್‌ನಲ್ಲಿ ಇರಲಿಲ್ಲ. ಅವರು ಅದರ ಅಧ್ಯಕ್ಷರಾಗಿ ಇರುವವರೆಗೂ ಕೂಡ ಇನ್ನೊಬ್ಬ ವ್ಯಕ್ತಿಯನ್ನು ಹುಡುಕಬೇಕು ಎನ್ನುವಂತಹ ಪ್ರಶ್ನೆ ಇರಲಿಲ್ಲ. ಆದರೆ ಇವತ್ತು ಅವರು ಬಿಟ್ಟು ಹೋದ ಮೇಲೆ ಆ ಕೊರತೆ ಕೂಡ ನ್ಯಾಷನಲ್ ಫ್ರಂಟ್‌ಗೆ ಆಗಿದೆ ಎನ್ನತಕ್ಕಂಥ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅವರ ಮರಣದಿಂದ ಕೇವಲ ಅವರ ಕುಟುಂಬಕ್ಕೆ ಅಷ್ಟೇ ಅಲ್ಲ, ಇಡೀ ಆಂಧ್ರಪ್ರದೇಶ ಮತ್ತು ಇಡೀ ನಮ್ಮ ದೇಶದಲ್ಲಿ ಒಬ್ಬ ವಿರೋಧಪಕ್ಷದ ನಾಯಕನನ್ನು ಕಳೆದುಕೊಂಡಿದ್ದೇವೆ. ಅದೇ ರೀತಿ ಶ್ರೀ ಜೋಗಣ್ಣನವರು ಇವರು ಧಾರವಾಡ ಜಿಲ್ಲೆಯಿಂದ ಬಂದಂತಹ ವ್ಯಕ್ತಿ. ಅವರು ವಿಧಾನ ಸಭೆಯ ಸದಸ್ಯರಾಗಿದ್ದರು. ವಿಶೇಷವಾಗಿ ಬಡವರಿಗಾಗಿ, ದೀನದಲಿತರಿಗಾಗಿ ಅನೇಕ ಹಾಸ್ಟಲ್‌ಗಳು ಸ್ಕೂಲ್‌ಗಳನ್ನು ಮಾಡಿ ತಮ್ಮದ್ದೇ ಆದ ಕೊಡುಗೆಯನ್ನು ಈ ದಲಿತ ಜನಾಂಗಕ್ಕೆ ಕೊಟ್ಟಿದ್ದಾರೆ. ಅವರ ಹೆಚ್ಚಿನ ಸಮಯವನ್ನು ಈ ಬಡವರ ಸೇವೆಗಾಗಿ ಮುಡಿಪಿಟ್ಟಿದ್ದರು. ಅಂತಹ ಒಬ್ಬ ವ್ಯಕ್ತಿಯನ್ನು ಕೂಡ ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರು 1972ನೇ ಇಸವಿಯಲ್ಲಿ ನಮ್ಮ ಜೊತೆ ಶಾಸಕರಾಗಿ ಈ ಮನೆಯಲ್ಲಿದ್ದರು. ಅಂತಹ ಒಬ್ಬ

ಷೆಡ್ಯೂಲ್ಡ್ ಕ್ಯಾಸ್ಟ್ ಮುಖಂಡನನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಇದರಿಂದ ಕೂಡ ತುಂಬಲಾರದ ನಷ್ಟ ಅವರ ಕುಟುಂಬಕ್ಕೆ ಆಗಿದೆ. ಅದೇ ರೀತಿಯಾಗಿ 1972ನೇ ಇಸವಿಯಲ್ಲಿ ಶ್ರೀ ಆನಂದಕುಂದ ಹೆಗಡೆಯವರು ಕೂಡ ನಮ್ಮ ಜೊತೆ ಶಾಸಕರಾಗಿದ್ದರು. ಅವರು ಕೂಡ ಒಬ್ಬ ಒಳೆಯ ಪ್ರಮಾಣಿಕ ವ್ಯಕ್ತಿ. ಅಸೆಂಬ್ಲಿಯಲ್ಲಿ ಕೂಡ ಯಾವುದೇ ಒಂದು ಪ್ರಶ್ನೆ ಬಂದಾಗ ಅದರ ಮೇಲೆ ಆಳವಾಗಿ ಅಭ್ಯಾಸ ಮಾಡಿ ಮಾತನಾಡತಕ್ಕಂಥಾದ್ದು ಮತ್ತು ತಮ್ಮದೇ ಆದ ಕೊಡುಗೆಯನ್ನು ಅವರು ತಮ್ಮ ಮತಕ್ಷೇತ್ರಕ್ಕೆ ಅವರನ್ನು ಕೂಡ ನಾವು ಕಳೆದುಕೊಂಡಿದ್ದೇವೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದಂತೆ ಶ್ರೀ ವೆಂಕಟರಮಣ ಐಯ್ಯರ್ ಅವರು ಪ್ರಥಮ ಕಾರ್ಯದರ್ಶಿಯಾಗಿ ವಿಧಾನ ಸಭೆಯಲ್ಲಿ ಕೆಲಸವನ್ನು ನಡೆಸಿಕೊಂಡು ಬಂದಂಥವರು. ಅದೇ ದಾರಿಯಲ್ಲಿ ಮುಂದೆ ಬರತಕ್ಕಂಥ ಎಲ್ಲಾ ಕಾರ್ಯದರ್ಶಿಗಳು ಈ ಸದನವನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕು ಎನ್ನುವಂತಹ ಮಾರ್ಗದರ್ಶನವನ್ನು ಮಾಡಿಕೊಟ್ಟವರು. ಅವರನ್ನು ಕೂಡ ನಾವು ಇವತ್ತು ಕಳೆದುಕೊಂಡಿದ್ದೇವೆ. ಹೀಗೆ ಎಲ್ಲಾ ಮಹನೀಯರುಗಳನ್ನು ನಾವು ಇವತ್ತು ಏನು ಕಳೆದುಕೊಂಡಿದ್ದೇವೆ ಅವರುಗಳ ಕುಟುಂಬಕ್ಕೆ ಏನು ತುಂಬಲಾರದಷ್ಟು ನಷ್ಟವಾಗಿದೆ ಅದನ್ನು ದೇವರು ಭರಿಸಿಕೊಡಲಿ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಅಧ್ಯಕ್ಷರೇ, ಈ ನಿರ್ಣಯಕ್ಕೆ ಬೆಂಬಲವನ್ನು ಸೂಚನೆ ಮಾಡುತ್ತಾ, ಮಾನ್ಯ ಸದಸ್ಯರು ಅನೇಕ ಜನ ಮಿತ್ರರನ್ನು ನಾವು ಕಳೆದುಕೊಂಡಿದ್ದೇವೆ. ಅವರ ಕುಟುಂಬದವರು ದುಃಖದಲ್ಲಿ ಭಾಗಿಯಾಗಿರತಕ್ಕಂಥ ಸಂದರ್ಭ ಇದು. ಅದರಲ್ಲಿ ಬಿ.ಆರ್. ಕೃಷ್ಣಮೂರ್ತಿಯವರು ಮೇಲ್ಮನೆ ಸದಸ್ಯರಾಗಿ ಬಹಳ ದೊಡ್ಡ ಜವಾಬ್ದಾರಿಯನ್ನು ನಿರ್ವಹಣೆ ಮಾಡಿರತಕ್ಕಂಥಾದ್ದು ನಾವೆಲ್ಲ ಕಣ್ಣಾರೆ ಕಂಡಿರತಕ್ಕಂಥ ವಿಷಯ. ಸದನದ ಕಾರ್ಯಕಲಾಪಗಳಲ್ಲಿ ಅವರು ಸಕ್ರಿಯ ಪಾತ್ರ ವಹಿಸಿ ತಮ್ಮದೇ ಆದ ವಿಚಾರಧಾರೆಯ ಮುಖಾಂತರ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಕೊಡುಗೆಯನ್ನು ಅವರು ನೀಡಿದ್ದಾರೆ. ಅವರು ನಮ್ಮನ್ನು ಅಗಲಿದ್ದಾರೆ, ಅವರ ಆತ್ಮಕ್ಕೆ ನಾವು ಈ ಸಂದರ್ಭದಲ್ಲಿ ಶಾಂತಿಯನ್ನು ಕೋರಿ ಆ ದುಃಖವನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಅವರ ಕುಟುಂಬ ವರ್ಗಕ್ಕೆ ಬರಲಿ ಎನ್ನತಕ್ಕಂಥ ವಿಷಯವನ್ನು ಹೇಳುತ್ತೇನೆ. ಇನ್ನು ಶ್ರೀಮಾನ್ ಎನ್.ಟಿ. ರಾಮರಾವ್ ಅವರು ತೀರಿಕೊಳ್ಳುವುದಕ್ಕಿಂತ ಒಂದು 8 ದಿವಸಗಳ ಹಿಂದೆ ನಾನು ಅವರನ್ನು ಹೈದ್ರಾಬಾದ್‌ನಲ್ಲಿ ಭೇಟಿ ಮಾಡಿದ್ದೆ. ಆ ಕಾಲದಲ್ಲಿ ಅವರು ಆರೋಗ್ಯವನ್ನು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದೇನೆ ಎನ್ನತಕ್ಕಂಥ ಅಭಿಪ್ರಾಯ ಬಂತು. ಇವತ್ತು ಅವರ ಅಗಲಿಕೆಯ ನಷ್ಟ ಅವರ ಕುಟುಂಬ ವರ್ಗಕ್ಕೆ ಅಲ್ಲ, ಆಂಧ್ರಪ್ರದೇಶ ಅಷ್ಟೇ ಅಲ್ಲ, ಇಡೀ ರಾಷ್ಟ್ರಕ್ಕೆ ದೊಡ್ಡ ನಷ್ಟವಾಗಿದೆ. ಅವರು ನ್ಯಾಷನಲ್ ಫ್ರಂಟ್ ಅಧ್ಯಕ್ಷರಾಗಿ ಮುಂದೆ ಬರತಕ್ಕಂಥ ಲೋಕಸಭಾ ಚುನಾವಣೆಯಲ್ಲಿ ಬಹಳ ದೊಡ್ಡ ಪ್ರಮುಖ ಪಾತ್ರ ವಹಿಸತಕ್ಕಂಥ ಸಂದರ್ಭ ಅವರಿಗೆ ಇತ್ತು. ಒಂದು ದಿಕ್ಕನ್ನೇ ಬದಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ಚುನಾವಣೆಗಳು ಹತ್ತಿರ ಹತ್ತಿರ ಬರತಕ್ಕಂಥ ಸಂದರ್ಭದಲ್ಲಿ ಜವಾಬ್ದಾರಿಯನ್ನು ಹೊರತಕ್ಕಂಥ ಶಕ್ತಿವಂತ ರಾಜಕಾರಣಿಗಳು ಇಲ್ಲದೇ ಇದ್ದಾಗ ನಷ್ಟ ಸಹಜವಾಗಿ ಪಕ್ಷ ಅಥವಾ ರಂಗಕ್ಕೆ ಆಗತಕ್ಕಂಥಾದ್ದು ಸಹಜ. ಈ ನಷ್ಟ ಅಪಾರವಾಗಿ ಆಗಿದೆ. ಆಂಧ್ರಪ್ರದೇಶಕ್ಕೆ ಆಗಿರತಕ್ಕಂಥ ನಷ್ಟ ಅಲ್ಲದೇ ಇಡೀ ದೇಶಕ್ಕೆ ನಷ್ಟ ಆಗಿದೆ ಎನ್ನುವಂತಹ ಅಭಿಪ್ರಾಯ ನಾವೆಲ್ಲ ಇರಬೇಕಾಗಿದೆ. ಅವರು ಒಬ್ಬ ಹುಟ್ಟು ಹೋರಾಟಗಾರ ಸಹಜವಾಗಿ ಒಳ್ಳೆಯದಕ್ಕಾಗಿ, ರಾಜ್ಯ ಮತ್ತು ರಾಷ್ಟ್ರಕ್ಕಾಗಿ ಒಳ್ಳೆಯದಕ್ಕಾಗಿ

ಯಾರು ಹೋರಾಟಗಾರರು ಇರುತ್ತಾರೆ, ಅದರಲ್ಲೂ ಕೂಡ ಬಡವರ ನಿಕಟ ಸಂಪರ್ಕವಿರತಕ್ಕಂಥ ವ್ಯಕ್ತಿ. ಅಂತಹವರ ಸಾವು ಕುಟುಂಬ ವರ್ಗಕ್ಕೆ ಅಲ್ಲ ಅದು ಇಡೀ ಸಮಾಜಕ್ಕೆ ರಾಷ್ಟಕ್ಕೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಈ ನಷ್ಟವನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಅವರ ಕುಟುಂಬ ವರ್ಗದವರಿಗೆ ಮತ್ತು ಆಂಧ್ರಪ್ರದೇಶಕ್ಕೆ ಬರಲಿ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

11.30 ಎ.ಎಂ

ಮಾನ್ಯ ಅಧ್ಯಕ್ಷರೆ, ಇನ್ನು ಉಳಿದಿರತಕ್ಕಂಥ ಮಾನ್ಯ ಮಿತ್ರರ ಹೆಸರುಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ, ಶ್ರೀ ವೈ.ವಿ. ಜೋಗಣ್ಣನವರ್, ಶ್ರೀ ಪಿ. ಆನಂದಕುಂದ ಹೆಗಡೆ ಅವರು, ನಾವೆಲ್ಲಾ ಒಟ್ಟಿಗೆ ಶಾಸಕರಾಗಿದ್ದಂಥವರು. ಈ ಸಂದರ್ಭದಲ್ಲಿ ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಇವರ ಅಗಲಿಕೆಯಿಂದುಂಟಾಗಿರುವ ನೋವನ್ನು ಭರಿಸಲು ಅವರ ಕುಟುಂಬ ವರ್ಗದವರಿಗೆ ಶಕ್ತಿ ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಿ ಈ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದಂಥ ಮಾನ್ಯ ಬಿ.ಆರ್. ಕೃಷ್ಣಮೂರ್ತಿಯವರು, ಆಂಧ್ರಪ್ರದೇಶದ , ಮಾಜಿ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಎನ್.ಟಿ. ರಾಮರಾಯರು, ಮಾನ್ಯ ಜೋಗಣ್ಣನವರ್, ಮಾನ್ಯ ಆನಂದಕುಂದ ಹೆಗಡೆ ಮತ್ತು ಕರ್ನಾಟಕ ವಿಧಾನ ಮಂಡಲದ ಮಾಜಿ ಕಾರ್ಯದರ್ಶಿಯಾಗಿದ್ದ ಶ್ರೀ ಜಿ.ಎಸ್. ವೆಂಕಟರಮಣ ಅಯ್ಯರ್ ಇವರುಗಳಿಗೆ ಗೌರವ ಸೂಚಿಸಲು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಶಾಸಕರ ದಿನಾಚರಣೆ ಸಂದರ್ಭದಲ್ಲಿ ನಾನೂ ಅಧ್ಯಕ್ಷರಾದ ತಾವು ಮತ್ತು ರಾಮಚಂದ್ರಗೌಡರು ಹಾಗೂ ಮಾನ್ಯ ಬಿ.ಆರ್. ಕೃಷ್ಣಮೂರ್ತಿಯವರು ಸೇರಿದ್ದೆವು. ಆ ದಿವಸ ಶಾಸಕರ ದಿನಾಚರಣೆ ಬಗ್ಗೆ ಸಂತೋಷದಿಂದ ಮಾತನಾಡಿಕೊಂಡು, ಹಾಡು ಹೇಳಿಕೊಂಡು ನಮ್ಮ ಜೊತೆ ಇದ್ದರು. ಅವರು ಉತ್ತಮವಾದಂಥ ಆತ್ಮೀಯ ಸ್ನೇಹಿತರಾಗಿದ್ದರು. ಅವರು ಸ್ನೇಹಕ್ಕೆ ಅತ್ಯಂತ ಯೋಗ್ಯಕರವಾದ ವ್ಯಕ್ತಿ. ಅವರ ಅಗಲಿಕೆ ಇಷ್ಟು ಬೇಗ ಆಗುತ್ತದೆಂದು ನಾವು ಯಾರೂ ಕಂಡಿರಲಿಲ್ಲ. ಅವರ ಅಗಲಿಕೆಯ ವಿಷಯವನ್ನು ಕೇಳಿದಾಗ ನನಗೆ ನಿಜಕ್ಕೂ ಬಹಳ ನೋವಾಯಿತು. ಅದಕ್ಕಾಗಿ ಇವತ್ತು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣ ಸಹಮತವನ್ನು ವ್ಯಕ್ತಪಡಿಸಿ ಅವರ ಆತ್ಮಕ್ಕೆ ಶಾಂತಿ ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಭಾನಾಯಕರು ಮಂಡಿಸಿರತಕ್ಕಂಥ ಸಂತಾಪಸೂಚಕ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ಮಾನ್ಯ ಬಿ.ಆರ್. ಕೃಷ್ಣಮೂರ್ತಿಯವರ ನಿಧನಕ್ಕೆ ನಾನು ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಮುಖ್ಯವಾಗಿ ಹೇಳುವುದಾದರೆ, ಆಂಧ್ರಪ್ರದೇಶದ ಮಾಜಿ ಮುಖ್ಯ ಮಂತ್ರಿ ಹಾಗೂ ಸುಪ್ರಸಿದ್ಧ ಕಲಾವಿದರಾಗಿದ್ದ ಶ್ರೀ ಎನ್.ಟಿ. ರಾಮರಾಯರ ನಿಧನದಿಂದ ದೇಶದ ರಾಜಕಾರಣಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಅವರು ಮೂಲತಃ ರಾಜಕೀಯ ಈ ದೇಶದ ರಾಜಕಾರಣದಲ್ಲಿ ವ್ಯಕ್ತಿಯಾಗಿರಲಿಲ್ಲ. 1982-83ರ ಕಾಲ ಘಟ್ಟ ಏನಿದೆ ಅದು ಬಹಳ ಪ್ರಮುಖವಾದ ಘಟ್ಟ. ಒಂದು ಕಡೆ ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸತಕ್ಕಂಥ ಪರ್ಯಾಯ ವ್ಯವಸ್ಥೆ ಇಲ್ಲದೆ ಇರತಕ್ಕಂಥ ಸಂದರ್ಭದಲ್ಲಿ ಮತ್ತು ಇಡೀ ದೇಸದ ರಾಜಕೀಯದಲ್ಲಿ ಒಂದು ರೀತಿಯ ಜಿಗುಪ್ಸೆ ಬಂದಿದ್ದಂಥ

ಸಂದರ್ಭದಲ್ಲಿ ಅವರು ರಾಜಕೀಯ ಪ್ರವೇಶ ಮಾಡಿ ಸರ್ವಾಧಿಕಾರಿ ಶಕ್ತಿಗಳಿಗೆ ಪರ್ಯಾಯವಾಗಿ ಪ್ರಜಾಪ್ರಭುತ್ವ ಶಕ್ತಿಯನ್ನು ಬೆಳೆಸುವುದರಲ್ಲಿ ಬಹಳ ಪ್ರಮುಖವಾದಂಥ ಪಾತ್ರವನ್ನು ವಹಿಸಿದ್ದರು. ಅವರು ಮುಖ್ಯ ಮಂತ್ರಿಯಾದ ಮೇಲೆ 1984ರಲ್ಲಿ ನಡೆದ ಪಿತೂರಿಯಿಂದ ಅವರನ್ನು ಪದವಿಯಿಂದ ಇಳಿಸಿದಾಗ ಅವರು ಮಾಡಿದಂಥ ಹೋರಾಟ ನಿಜವಾಗಿಯೂ ಕೂಡ ನಮ್ಮ ದೇಶದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಬಹಳ ಮಹತ್ವವಾದ ಹೋರಾಟವಾಗಿತ್ತು. ಬಹುಶಃ ನಮ್ಮ ದೇಶದ ಇತಿಹಾಸದಲ್ಲಿ ಯಾರೇ ಒಬ್ಬ ಮುಖ್ಯಮಂತ್ರಿ ಪದವಿಯನ್ನು ಕಳೆದುಕೊಂಡ ಮೇಲೆ ಆ ರೀತಿಯಾದಂಥ ಹೋರಾಟವನ್ನು ನಡೆಸಿದ್ದು ಬಹಳ . ವಿರಳ ಮತ್ತು ಇಲ್ಲವೇ ಇಲ್ಲವೆಂದು ನನ್ನ ಅಭಿಪ್ರಾಯ. ಸಾಮಾನ್ಯವಾಗಿ ಪದವಿಯನ್ನು ಕಳೆದುಕೊಂಡ ಮೇಲೆ ರಾಜಕಾರಣದಲ್ಲಿ ಜಿಗುಪ್ಸೆ ಬಂದು ಆ ಹೋರಾಟದ ಹಾದಿಯನ್ನು ಬಿಡುತ್ತಾರೆ. ಆದರೆ ಅವರು ಹಾಗೆ ಮಾಡಲಿಲ್ಲ. ಅದರ ಬದಲು ಧೀಮಂತವಾದ ಹೋರಾಟವನ್ನು ನಡೆಸಿ ಪ್ರಜಾಪ್ರಭುತ್ವದ ನಿಜವಾದ ಮೌಲ್ಯಗಳನ್ನು ಎತ್ತಿ ಹಿಡಿದಂಥ ಒಬ್ಬ ಮಹಾನ್ ನಾಯಕ ಅವರಾಗಿದ್ದರು.

ಅದಾದನಂತರ 1989ರ ಕಾಲ ಘಟ್ಟದಲ್ಲಿ ಎರಡು ಅಪಾಯಕಾರಿ ಶಕ್ತಿಗಳ ವಿರುದ್ಧ ಹೋರಾಟ ಮಾಡಿದಂಥ ಸಂದರ್ಭದಲ್ಲಿ ಅವರು ಕೋಮುವಾದ ಮತ್ತು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಒಂದು ರಂಗವನ್ನು ಕಟ್ಟುವುದರಲ್ಲಿ ಇಡೀ ರಾಷ್ಟ್ರದ ರಾಜಕಾರಣಕ್ಕೆ ಒಂದು ಹೊಸ ಸ್ವರೂಪವನ್ನು ಕೊಡಲಿಕ್ಕೆ ಒಂದು ಮಹತ್ತರವಾದ ಕೊಡುಗೆಯನ್ನು ರಾಷ್ಟ್ರಕ್ಕೆ ಕೊಟ್ಟಿದ್ದಾರೆ. ಅವರು ಸರ್ಕಾರವನ್ನು ನಡೆಸುವಾಗ ತೆಗೆದುಕೊಂಡ ಕೆಲವು ತೀರ್ಮಾನುಗಳು ಸ್ವಲ್ಪ ಗೊಂದಲಮಯವಾಗಿದ್ದರೂ ಕೂಡ ಜನತೆಗೆ ಬಹಳ ಹತ್ತಿರವಾಗಿರತಕ್ಕಂಥ ಮತ್ತು ಪ್ರಿಯವಾಗಿರತಕ್ಕಂಥ ಕೆಲವು ಯೋಜನೆಗಳನ್ನು ಮಾಡಿದರು. ಅದರಲ್ಲಿ ಮುಖ್ಯವಾಗಿ ಪಾನ ನಿಷೇದಂಥ ವಿಷಯದ ಬಗ್ಗೆ ತೀರ್ಮಾನ ಮಾಡಬೇಕಾದರೆ ಬಹಳ ಧೈರ್ಯವನ್ನು ಮತ್ತು ಮುತ್ಸದ್ದಿತನವನ್ನು ತೋರಿಸಬೇಕಾಗುತ್ತಿದೆ. ಜನತೆಗೆ ಅವರು ಏನು ಆಶ್ವಾಸನೆಗಳನ್ನು ಕೊಟ್ಟಿದ್ದರೋ ಅವುಗಳನ್ನು ತಕ್ಷಣ ಜಾರಿಗೊಳಿಸುತ್ತಿದ್ದರು. ಈ ಸಂದರ್ಭದಲ್ಲಿ ಶ್ರೀ ಎನ್.ಟಿ. ರಾಮರಾಯರ ಆ ನಡವಳಿಕೆ ರಾಜಕಾರಣಕ್ಕೆ ಬಹಳ ಉಪಯುಕ್ತವಾದಂಥ ಮಾರ್ಗದರ್ಶನವಾಗುತ್ತದೆ. ಇವತ್ತು ನಮ್ಮ ದೇಶದಲ್ಲಿರತಕ್ಕಂಥ ಸಂಕೀರ್ಣ ರಾಜಕೀಯ ಪರಿಸ್ಥಿತಿಯನ್ನು ಅವರನ್ನು ಕಳೆದುಕೊಂಡಿದ್ದು ಈ ದೇಶಕ್ಕೆ ಬಹಳ ನಷ್ಟವಾಗಿದೆಯೆಂದು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಅದೇ ರೀತಿ ಉಳಿದ ಗಣ್ಯರಾದ ಮಾನ್ಯ ಜೋಗಣ್ಣನವರ್‌ಮತ್ತು ಮಾನ್ಯ ಆನಂದಕುಂದ ಹೆಗಡೆಯವರ ನಿಧನಕ್ಕೆ ನನ್ನ ಸಂತಾಪವನ್ನು ವ್ಯಕ್ತಪಡಿಸಿ, ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಒಡನಾಡಿಯಾಗಿದ್ದ ಬಿ.ಆರ್.ಕೆ. ಅವರು ಕೊನೆ ಉಸಿರು ಎಳೆದಂಥ ಆ ದಿವಸ ಇದೇ ವಿಧಾನಸಭೆಯಲ್ಲಿ ಸಂಜೆಯವರೆಗೂ ನಾವಿಬ್ಬರೂ ಜೊತೆಯಲ್ಲೇ ಇದ್ದೆವು. ಮಾರನೆ ದಿವಸ ಬೆಳಗಿನ ಜಾವ ಅವರ ನಿಧನದ ವಾರ್ತೆ ಕೇಳಿದಾಗ ನನಗೆ ನಂಬಿಲಿಕ್ಕೆ ಸಾಧ್ಯವಾಗಲಿಲ್ಲ. ಒಂದೊಂದು ಸಾರಿ ಅನಿಸುತ್ತದೆ. ಭಗವಂತನೂ ಕೂಡ ಕೆಲವು ಸಂದರ್ಭದಲ್ಲಿ ಸಾಮಾನ್ಯ ಮನುಷ್ಯನು ಮಾಡುವಂಥ ತಪ್ಪನ್ನು ಮಾಡಿಬಿಡುತ್ತಾನೋ ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ. ನಾನೂ ಅವರೂ ಮೊದಲಿನಿಂದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೆವು. ಅವರ ನಿಧನದ ವಾರ್ತೆ ಕೇಳಿದ ನಂತರ ಒಂದು ವಿಷಯ ನನ್ನ ಗಮನಕ್ಕೆ ಬಂತು. ಸುಮಾರು 2 ತಿಂಗಳ ಹಿಂದೆ

ಹಾಸನದ ಅವರ ಮನೆಯಲ್ಲಿ ಕುಳಿತುಕೊಂಡು ರಾಜಕೀಯವಾಗಿ ಮಾತನಾಡುತ್ತಾ ಕೆಲವು ಯೋಜನೆಗಳನ್ನು ರೂಪಿಸುತ್ತಿದ್ದರು. ನಮ್ಮ ಜಿಲ್ಲೆಯವರೇ ಮುಖ್ಯ ಮಂತ್ರಿಯಾಗಿರತಕ್ಕಂಥ ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದೆಂಬ ಬಗ್ಗೆ ಪ್ರಸ್ತಾಪ ಮಾಡಿ ಕೆಲವು ಯೋಜನೆಗಳನ್ನು ರೂಪಿಸುತ್ತಿದ್ದರು. ಆ ಯೋಜನೆಗಳು ಭಾರಿ ಮುಂದೆ ಹೋಗುತ್ತಿದ್ದವು. ನಾನು ತಮಾಷೆಯಾಗಿ ಒಂದು ಮಾತನ್ನು ಅವರಿಗೆ ಹೇಳಿದೆ. ಬಿ.ಆರ್.ಕೆ. ಯವರೇ, ನನಗೀಗ 67ನೇ ವಯಸ್ಸು ನಡೆಯುತ್ತಾ ಇದೆ, ನಮ್ಮ ಪೂರ್ವಿಕರೆಲ್ಲರೂ ಅಣ್ಣ, ತಂದೆ, ತಾಯಿ, ಅಜ್ಜ ಮುಂತಾದ ಎಲ್ಲರೂ 70ನೇ ವಯಸ್ಸಿನಲ್ಲಿ ತೀರಿಕೊಂಡಿದ್ದಾರೆ. ಅಂದರೆ ನನಗೆ ಬಹುಶಃ ಮೂರು ವರ್ಷಗಳ ಆಯುಸ್ಸು ಇರಬಹುದು, ಆದರೆ ನಿಮ್ಮ ಯೋಜನೆಗಳು 30ವರ್ಷಕ್ಕೆ ಹೋಗುತ್ತಾ ಇವೆ, ಮೂರು ವರ್ಷಗಳ ಕಾರ್ಯಕ್ರಮವೇನಾದರೂ ಇದ್ದರೆ ಹೇಳಿ ಅದನ್ನು ನಾನು ಮಾಡುತ್ತೇನೆ, ಮುಂದಿನದೆಲ್ಲ ನೀವು ಯುವಕರು ಇದ್ದೀರಿ, ಇದು ನೀವು ಮಾಡಬೇಕಾದಂಥ ಕಾರ್ಯಕ್ರಮ, ಅದಕ್ಕೆ ತಕ್ಕ ಹಾಗೆ ಯೋಜನೆಗಳನ್ನು ನೀವು ರೂಪಿಸಿಕೊಳ್ಳಿ ಎಂದು ಹೇಳಿದೆ.

ಅವರು ತಮಾಶೆಗೆ ಒಂದು ಮಾತನ್ನು ತಿರುಗಿ ಹೇಳಿದರು. ಆ ಮಾತನ್ನು ಎಷ್ಟು ಸತ್ಯ ಆಯಿತು ಎನ್ನುವುದನ್ನು ನಾನು ಹೇಳಲು ಇಚ್ಛೆ ಪಡುತ್ತೇನೆ. ಅವರು "ಶಿವಪ್ಪನವರೆ ನಮ್ಮ ತಂದೆ ಕೂಡ ಇದೇ ವಯಸ್ಸಿನಲ್ಲಿ ತೀರಿಕೊಂಡರು ಅವರಿಗೆ ಆಗ 54 ವರ್ಷ ವಯಸ್ಸಾಗಿತ್ತು. ನಮ್ಮ ಫ್ಯಾಮಿಲಿಯಲ್ಲಿ ಕೆಲವು ಘಟನೆಗಳು ನಡೆದವು. ಆ ಘಟನೆಯ ಹಿನ್ನಲೆಯಲ್ಲಿ ನಮ್ಮ ತಾಯಿಗೆ ಬೆನ್ನು ನೋವು ಪ್ರಾರಂಭವಾಯಿತು. ಆದಾದ ಸ್ವಲ್ಪ ದಿವಸಕ್ಕೆ ನಮ್ಮ ತಂದೆ ತೀರಿಕೊಂಡರು, ಅಂದ ಮೇಲೆ ನಿಮಗಿಂತ ಮೊದಲು ನಾನೇ ಹೋಗುತ್ತೇನೆ ಎಂಬ ಮಾತನ್ನು ಹೇಳಿದರು. ಅವರು ಹೇಳಿದ ಘಟನೆಗಳೆಲ್ಲವೂ ಮೊನ್ನೆ ನಮ್ಮಲ್ಲಿ ನಡೆದಿದೆ. ನಾನ್ನ ಹೆಂಡತಿಗೂ ಕೂಡ ಈಗ ಬೆನ್ನು ನೋವು ಪ್ರಾರಂಭವಾಗಿದೆ. ಅಂದಮೇಲೆ ಶಿವಪ್ಪನವರೇ ನಾನೇ ನಿಮಗಿಂತ ಮೊದಲು ಹೋಗುತ್ತೇನೆ ಎಂದು ಹೇಳಿದ್ದರು. ಅವರ ನಿಧನದ ವಾರ್ತೆಯನ್ನು ಕೇಳಿದಾಗ ವಿಧಿ ಎಷ್ಟರಮಟ್ಟಿಗೆ ಅವರ ಮರಣದ ವಿಚಾರವನ್ನು ಎರಡು ತಿಂಗಳ ಮೊದಲೇ ಅವರ ಬಾಯಿಲ್ಲಿ ಹೇಳಿಸಿತು. ಅಥವಾ ಅವರಿಗೆ ಆ ವಿಚಾರ ಗೊತ್ತಿತ್ತೋ ಎಂಬುದನ್ನು ಇವೊತ್ತು ಕೂಡ ಯೋಚನೆ ಮಾಡಿದರೆ ನನಗೆ ದುಃಖ ಬರುತ್ತದೆ. ಮಾತನಾಡಲು ಆಗುವುದಿಲ್ಲ, ಎಲ್ಲಾ ರಾಜಕೀಯ ಪಕ್ಷಗಳವರು, ಎಲ್ಲಾ ಇಲಾಖೆಯವರು ಕೂಡ ಬಿ.ಆರ್.ಕೆ. ಎಂದು ಹೇಳಿದರೆ ಸಾಕು ಅವರ ಬಗ್ಗೆ ಬೇರೆ ಮಾತೇ ಇಲ್ಲ, ಅವರು ಚುನಾವಣೆಗೆ ನಿಂತ ಸಂದರ್ಭವನ್ನು ನಾವು ಯೋಚನೆ ಮಾಡಿಕೊಂಡರೆ ಆಶ್ಚರ್ಯವಾಗುತ್ತದೆ. ಅವರು ಯಾವುದೇ ಪಕ್ಷದ ಅಭ್ಯರ್ಥಿಯಾಗಿದ್ದರೂ ಕೂಡ ಎಲ್ಲರೂ ತಮ್ಮ ಸ್ವಂತ ಕೆಲಸದ ರೀತಿಯಲ್ಲಿ ಅವರ ಹಿಂದೆ ಓಡಾಡಿದರು.

ಅನೇಕ ಜನ ವಕೀಲರು ನನ್ನನ್ನು ಭೇಟಿಯಾದಾಗ, ಶಿವಪ್ಪನವರೆ, ನಾವು ನಿಮ್ಮ ಪಾರ್ಟಿಗೆ ಸೇರಿದ್ದೇವೆಂದು ತಿಳಿದುಕೊಂಡು ಬಿಡಬೇಡಿ, ನಾವು ಬಿ.ಆರ್.ಕೆ. ಯವರಿಗಾಗಿ ಓಡಾಡುತ್ತಿದ್ದೇವೆ ಎಂದು ಹೇಳಿದ್ದರು. ಈ ರೀತಿ ಎಲ್ಲರ ಪ್ರೀತಿವಿಶ್ವಾಸಗಳನ್ನು ಗಳಿಸಿಕೊಂಡು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ವ್ಯಕ್ತಿಗಳು ಸಿಗುವುದು ಬಹಳ ಅಪರೂಪ. ಅಂಥ ಒಬ್ಬ ಗಣ್ಯ ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಅವರಿಂದ ಬಹುಶಃ ಅನೇಕ ವಿಚಾರಗಳು ಈ ರಾಜ್ಯಕ್ಕೆ ಬೇಕಾಗಿತ್ತು. ಈ ರಾಜ್ಯಕ್ಕೆ ಮಾತ್ರವಲ್ಲದೆ, ವೈಯಕ್ತಿಕವಾಗಿ ನನಗೆ ಪೂರ್ಣ ನಷ್ಟವಾಗಿದೆ. ನಮ್ಮ ಪಕ್ಷವು ಕೂಡ ಅವರ ಅಗಲುವಿಕೆಯನ್ನು ಭರಿಸಲು ಸಾಕಷ್ಟು ಪ್ರಯತ್ನ ಮಾಡಬೇಕಾಗುತ್ತದೆ. ಇಂತಹ

ಸಂದಿಗ್ಧ ಪರಿಸ್ಥಿತಿಯಲ್ಲಿ ತಾವೇನು ಮಂಡಣೆಯನ್ನು ಮಂಡಿಸುತ್ತಾ ಇದ್ದೀರಿ ಅದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ಅದೇ ರೀತಿ ಇನ್ನೂ ಅನೇಕ ವ್ಯಕ್ತಿಗಳು ಅದರಲ್ಲೂ ನಮ್ಮ ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಬಗ್ಗೆ ಯಾರೂ ಮಾತನಾಡಲಿಕ್ಕೆ ಸಾಧ್ಯವಿಲ್ಲ, ಒಬ್ಬ ಸಾಮಾನ್ಯ ಸರ್ಕಾರಿ ನೌಕರನಾಗಿ ಇಡೀ ರಾಷ್ಟ್ರದಲ್ಲಿ ವಿದೇಶದಲ್ಲೂ ಕೂಡ ಹೆಸರು ಗಳಿಸಿದ ಉತ್ತಮವಾದ ರಾಜಕೀಯಪಟು, ಅವರು ಸಿನಿಮಾದಲ್ಲಿ ಯಾವ ರೀತಿ ಹೆಸರನ್ನು ಗಳಿಸಿದರೋ ಅದೇ ರೀತಿ ಅವರು ರಾಜಕೀಯದಲ್ಲೂ ಕೂಡ ಹೆಸರು ಗಳಿಸಿ ರಾಷ್ಟ್ರದಲ್ಲಿ ಅವರು ಪ್ರಥಮಸ್ಥಾನಕ್ಕೆ ಬರುತ್ತಾರ ಅನ್ನುವ ಮಟ್ಟಕ್ಕೆ ಒಂದು ಸಲ ಬೆಳೆದರು. ಕೇವಲ ಒಂದು ವರ್ಷದಲ್ಲಿ ಇಡೀ ಆಂಧ್ರ ದೇಶದ ರಾಜಕೀಯದ ಬಣ್ಣವನ್ನೇ ಬದಲಾಯಿಸಿದಂತಹ ಒಬ್ಬ ಮಹಾನ್‌ವ್ಯಕ್ತಿ. ಅವರೂ ಕೂಡ ಅದೇ ರೀತಿ ಹಠಾತ್ತಾಗಿ ನಿಧನರಾಗಿರುವುದು, ಇನ್ನೂ ಅನೇಕ ನಮ್ಮ ರಾಜ್ಯದ ಗಣ್ಯರು ನಿಧನರಾಗಿರುವ ಈ ಮಂಡನೆ ಏನು ಮಂಡಿಸಿದ್ದಾರೆ ಇದಕ್ಕೆ ನನ್ನ ಬೆಂಬಲ ಸೂಚಿಸುತ್ತಾ, ಅವರ ಕುಟುಂಬದವರಿಗೆ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತ ಕೊಡಲಿ, ಅವರೆಲ್ಲರ ಆತ್ಮಕ್ಕೆ ಶಾಂತಿಯಿರಲಿ ಎಂದು ಹೇಳಿ ಪ್ರಾರ್ಥನೆ ಮಾಡಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಭೆಯ ನಾಯಕರು ತಂದಂತಹ ಈ ಸಂತಾಪಸೂಚಕ ಸೂಚನೆಯನ್ನು ಬೆಂಬಲಿಸುತ್ತಾ ನಾಡಿನ ಅನೇಕ ನಾಯಕರು, ಹಿರಿಯರು ನಿಧನರಾಗಿದ್ದಾರೆ. ಅವರಲ್ಲಿ ನನ್ನ ಮತಕ್ಷೇತ್ರದ ಹಿಂದಿನ ಶಾಸಕರಾದ ಶ್ರೀ ವೈ.ವಿ. ಸೋಮಣ್ಣನವರು ಸಹಿತ ನಿಧನರಾಗಿದ್ದಾರೆ. ಅವರ ಅವಧಿ ಸುಮಾರು 6 ವರ್ಷಗಳ ಕಾಲ, ಬಹುತೇಕ ಒಬ್ಬ ಶಾಸಕರಾಗಿ ಬಹಳ ಸಣ್ಣ ಹಿನ್ನೆಲೆಯಿಂದ ಬಂದಂತಹ ಪರಿಶಿಷ್ಟ ವರ್ಗಕ್ಕೆ ಸೇರಿದ್ದ ಅವರು ಇವತ್ತಿಗೂ ಸಹ 6 ವರ್ಷದ ಶಾಸಕರಾಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಹಿರಿಯ ರಾಜಕಾರಣಿಯಾಗಿದ್ದರೂ ಅವರ ಇರುವಿಕೆಯಲ್ಲಿ ಎಳ್ಳಷ್ಟೂ ಬದಲಾವಣೆ ಆಗಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ಓಣಿಯಲ್ಲಿ ಸಣ್ಣ ಮನೆಯಲ್ಲಿ ಇವತ್ತೂ ಅವರ ಮಕ್ಕಳ ಬದುಕು ನಡೆಯುತ್ತಿದೆ. ಅಷ್ಟುಮಟ್ಟಿಗೆ ಅವರು ಕಳಂಕರಹಿತವಾದಂಥ ರಾಜಕೀಯ ಜೀವ ಅವರದಾಗಿತ್ತು ಅಷ್ಟೇ ಅಲ್ಲ, ಅವರ ಕಳಕಳಿ ವಿಶೇಷವಾಗಿ ಈ ದಲಿತ ಮಕ್ಕಳಿಗಾಗಿ ಹಾಸ್ಟೆಲ್‌ಗಳನ್ನು, ಶಾಲೆಗಳನ್ನು ಪ್ರಾರಂಭ ಮಾಡಿ ಬದುಕಿನುದ್ದಕ್ಕೂ ಈ ದಲಿತರ ಶಿಕ್ಷಣಕ್ಕಾಗಿ ತಮ್ಮ ಎಲ್ಲ ಶ್ರಮವನ್ನು ವಿನಿಯೋಗಿಸಿದರು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಷ್ಟೇ ಅಲ್ಲ, ಅವರ ಕಾಲ, ಅಧಿಕಾರದಲ್ಲಿದ್ದಾಗ ಇಲ್ಲದಿದ್ದಾಗ ಬಹುತೇಕ ನಮಗೆಲ್ಲ ಮಾದರಿಯಾಗುತ್ತದೆ. ಒಬ್ಬ ಪರಿಶಿಷ್ಟ ವರ್ಗಕ್ಕೆ ಸೇರಿದ ವ್ಯಕ್ತಿ ಬೇರೆ ವರ್ಗದ ಮುಂದುವರೆದ ಜನ ಅಷ್ಟೇ ಗಾಢವಾಗಿ ಪ್ರೀತಿ ಮಾಡುವಂತಹ ವ್ಯಕ್ತಿಯನ್ನು, ನಡವಳಿಕೆಯನ್ನು ಅವರು ರೂಢಿಸಿಕೊಂಡಿದ್ದರು ಎಂಬುದಕ್ಕೆ ನಿದರ್ಶನಗಳಿವೆ. ಅವರ ನಿಧನ ಆ ಭಾಗಕ್ಕೆ ವಿಶೇಷವಾಗಿ ಧಾರವಾಡ ಜಿಲ್ಲೆಗೆ ನಷ್ಟ ಎಂದು ಹೇಳಿ ಅವರು ಬಿಟ್ಟಂತಹ ಆದರ್ಶವನ್ನು ನಾವು ಪಾಲಿಸಲಿಕ್ಕೆ ನಾವು ಪ್ರಯತ್ನ ಮಾಡೋಣ. ಅವರ ಆತ್ಮಕ್ಕೆ ಶಾಂತಿ ಕೋರಿ ಅವರ ಕುಟುಂಬವರ್ಗಕ್ಕೆ ದುಃಖ ಭರಿಸಲಿಕ್ಕೆ ಭಗವಂತ ಶಕ್ತಿಯನ್ನು ಕೊಡಲಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು : ಈ ಎಲ್ಲ ಮಹನೀಯರ ಗೌರವಾರ್ಥವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವಾಚರಿಸಬೇಕೆಂದು ಕೋರುತ್ತೇನೆ.

(ಸದನದ ಎಲ್ಲಾ ಸದಸ್ಯರು ಎದ್ದುನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಲಾಯಿತು)

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಪುನಃ ದಿನಾಂಕ 22-2-96ರ ಗುರುವಾರ ಬೆಳಿಗ್ಗೆ 10-00 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವು ಬೆಳಿಗ್ಗೆ 11-45 ಗಂಟೆಗೆ ಮುಕ್ತಾಯವಾಗಿ ಪುನಃ ದಿನಾಂಕ 22ನೇ ಫೆಬ್ರವರಿ ಮಾಹೆ 1996ರ ಗುರುವಾರದಂದು ಬೆಳಿಗ್ಗೆ 10-00ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೨೨ನೇ ಫೆಬ್ರವರಿ ೧೯೯೬, ಮಾಘ, ಶಕ ೧೭ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : ಶ್ರೀ ರಮೇಶ್ ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಮೈಸೂರು ನಗರದಲ್ಲಿ ಕರಳುಬೇನೆ ರೋಗದ ಬಗ್ಗೆ ತನಿಖೆ

56 - ಶ್ರೀ ಶ್ರೀರಾಮದಾಸ್ (ಕೃಷ್ಣರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿ ಉಂಟಾಗಿದ್ದ ಕರಳುಬೇನೆ ರೋಗಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಹಿರಿಯ ಅಧಿಕಾರಿ ಫಿಲಿಪೋಸ್ ಮಥಾಯಿಯವರನ್ನು ಸರ್ಕಾರ ನೇಮಿಸಿತ್ತೆ.

ಆ) ಹಾಗಿದ್ದಲ್ಲಿ ಸದರಿಯವರ ವರದಿ ಸರ್ಕಾರಕ್ಕೆ ತಲುಪಿದೆಯೇ; ಯಾವ ದಿನಾಂಕಾದಂದು ವರದಿ ಸಲ್ಲಿಸಲ್ಪಟ್ಟಿದೆ ಹಾಗೂ ಇದರ ಬಗ್ಗೆ ಕೈಗೊಂಡಿರುವ ಕ್ರಮವೇನು?

ಇ) ತಪ್ಪಿತಸ್ಥ ಅಧಿಕಾರಿಗಳು ಎಲ್ಲೆಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ? ಸರ್ಕಾರ ಆ ಅಧಿಕಾರಿಗಳ ಮೇಲೆ ಜರುಗಿಸಿದ ಕ್ರಮವೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಹೌದು

ಆ) ದಿ: 30-3-94 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವನ್ನು ಪ್ರಾರಂಭಿಸಲಾಗಿದೆ. ಕರ್ನಾಟಕ ನೀರು ಸರಬರಾಜು ಮಂಡಳಿಯ ಇಂಜನಿಯರ್‌ಗಳ ಮೇಲಿನ ಆರೋಪಗಳು ಹಾಗೂ ಮೈ.ನ.ಪಾ. ಹಿಂದಿನ ಆಯುಕ್ತರ ಮೇಲಿನ ಆರೋಪಗಳು ಸಾಬೀತಾಗಿಲ್ಲದ ಕಾರಣ ದೋಷ ಮುಕ್ತರನ್ನಾಗಿ ಮಾಡಿದೆ. ಉಳಿದವರ ವಿರುದ್ಧ ಅಂದರೆ, ಡಾ|| ಡಿ. ತಿಮ್ಮಯ್ಯ ಹಾಗೂ ಡಾ|| ಎಲ್. ದೇವೇಗೌಡ ಇವರ ಮೇಲೆ ಇಲಾಖಾ ವಿಚಾರಣೆ ನಡೆಯುತ್ತಿದೆ.

ಇ) ಸದರಿಯನ್ನು ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

1) ಶ್ರೀ ಎಸ್.ಎನ್. ಜಯರಾಂ, ಕೆ.ಎ.ಎಸ್. ರವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ.

2) ಶ್ರೀ ಡಿ.ಎಸ್. ನಾಗರಾಜ ರಾವ್‌ರವರು ಅಧೀಕ್ಷಕ ಅಭಿಯಂತರರು ಗುಲ್ಬರ್ಗಾ ಸರ್ಕಲ್, ಗುಲ್ಬರ್ಗಾ.

3) ಶ್ರೀ ಹೊನ್ನೆಗೌಡ, ಸಹಾಯಕ ಕಾರ್ಯಪಾಲಕ ಅಭಿಯಂತರು ನಂ. 4 ಮಂಡ್ಯ ವಿಭಾಗ.

4) ಶ್ರೀ ಡಿ.ಎಲ್. ರಾಜು, ಎ.ಇ.ಇ. ನಂ. 5, ಮೈಸೂರು ವಿಭಾಗ. (5) ಟಿ.ಎನ್. ಮುದ್ದುರಾಜಣ್ಣ, ಕಿರಿಯ ಅಭಿಯಂತರರು ನಂ.6, ಮೈಸೂರು ವಿಭಾಗ.

5) ಶ್ರೀ ಟಿ. ರವೀಂದ್ರ, ಸಹಾಯಕ ಅಭಿಯಂತರರು, ನಂ.6, ಮೈಸೂರು ವಿಭಾಗ. (7) ಡಾ|| ಡಿ. ತಿಮ್ಮಯ್ಯ, ಜಂಟಿ ನಿರ್ದೇಶಕರು, ಐ.ಪಿ.ಪಿ. ಬೆಂಗಳೂರು. (8) ಡಾ|| ಎಲ್. ದೇವೇಗೌಡ, ಹಿರಿಯ ತಜ್ಞರು, ಕೆ.ಆರ್. ಆಸ್ಪತ್ರೆ, ಮೈಸೂರು.

ಸದರಿಯವರ ವಿಚಾರಣೆಯ ಬಗ್ಗೆ ಮೇಲಿನ (ಅ) ಭಾಗದ ಹಿನ್ನಲೆಯಲ್ಲಿ ವಿವರಿಸಲಾಗಿದೆ.

ಶ್ರೀ ಎ. ರಾಮದಾಸ್ : ಮಾನ್ಯ ಸಭಾಧ್ಯಕ್ಷರೇ, ಫಿಲಿಫೋಸ್ ಮಥಾಯಿಯವರು ಮೈಸೂರು ನಗರದಲ್ಲಿ ಕರುಳು ಬೇನೆ ವಿಚಾರದಲ್ಲಿ ಕೊಟ್ಟಂಥ ಉತ್ತರದಲ್ಲಿ, ರಿಪೋರ್ಟಿನಲ್ಲಿ ನೀರಾವರಿ ಇಲಾಖೆಯ ಮತ್ತು ಮೈಸೂರು ನಗರಪಾಲಿಕೆ ಕಮೀಷನರ್‌ರವರು ಆರೋಪದಿಂದ ಮುಕ್ತರಾಗಿದ್ದಾರೆಂದು ಹೇಳಿದ್ದಾರೆ. ನನಗೆ ಆಶ್ಚರ್ಯವಾಗುತ್ತಾ ಇದೆ. ಫಿಲಿಫೋಸ್ ಮಥಾಯಿಯವರ ವರದಿ ನನ್ನಲ್ಲಿಯೂ ಇದೆ. ಅದರಲ್ಲಿ, ಮೊದಲನೆಯದಾಗಿ, ಆರೋಪಿ ನಗರ ಪಾಲಿಕೆಯ ಕಮೀಷನರ್ ಜಯರಾಂ ಎಂದು ಬೈ ನೇಮ್ ಕೊಟ್ಟಿದ್ದಾರೆ. ಎರಡನೆಯದಾಗಿ ವಾಣಿವಿಲಾಸ ವಾಟರ್ ವರ್ಕ್ಸ್‌ನ ಅಧಿಕಾರಿಗಳು ಆರೋಪದಿಂದ ಮುಕ್ತರಾಗಿದ್ದಾರೆಂದು ವರದಿಯಲ್ಲಿ ಕೊಟ್ಟಿದ್ದಾರೆ. ಇದು ಆಶ್ಚರ್ಯಕರವಾಗಿದೆ. ಅದರಲ್ಲಿ, ನೇರವಾಗಿ ಅಲ್ಲಿಯ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಇಬ್ಬರನ್ನು ಆರೋಪಿಗಳನ್ನಾಗಿ ಮಾಡಿ, ಅವರಿಗೆ ಶಿಕ್ಷೆಯನ್ನು ಕೊಡಬೇಕೆಂದು ಇದೆ. ಆದರೆ, ಇಲ್ಲಿ ಆರೋಪದಿಂದ ಮುಕ್ತರಾಗಿದ್ದಾರೆಂದು ಕೊಟ್ಟಿರುವುದು ನೋಡಿ ಆಶ್ಚರ್ಯವಾಗಿದೆ. ಏಕೆ ಈ ರೀತಿಯಾದ ಉತ್ತರವನ್ನು ಕೊಟ್ಟಿದ್ದಾರೆ?

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಸಭಾಧ್ಯಕ್ಷರೇ, ಎಂ.ಡಿ.ಯವರು ಬಹುಶಃ ಆ ರಿಪೋರ್ಟ್ ಕೊಟ್ಟಿದ್ದಾರೆ. ಇಬ್ಬರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ರಿಪೋರ್ಟ್‌ನಲ್ಲಿದೆ, ರೆಕ್‌ಮೆಂಡೇಷನ್‌ನಲ್ಲಿದೆ. ಒಟ್ಟಿನಲ್ಲಿ ಎನ್‌ಕ್ವೈರಿ ಆಫೀಸರ್ ಯಾರನ್ನು ಮಾಡಿದ್ದರೋ, ಅವರ ವರದಿ ಆಧಾರದ ಮೇಲೆ, ಆರೋಪಿಗಳನ್ನು ಯಾರು ಯಾರಿಗೆ ಇನ್‌ಕ್ಲೂಡ್ ಮಾಡಬೇಕೆಂದು ಮಾಡಿದ್ದಾರೆ, ಯಾರಿಗೆ ನಿರಪರಾಧಿಗಳು ಎಂದು ರಿಪೋರ್ಟ್ ಕೊಟ್ಟಿದ್ದಾರೆ, ಅವರನ್ನು ಕೈ ಬಿಡಲಾಗಿದೆ. ಇಬ್ಬರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಅವರ ಬಗ್ಗೆ ಕೂಡ ಸಂಬಂಧಪಟ್ಟ ಅಧಿಕಾರಿಗಳು ವಿಮುಕ್ತ ಮಾಡಿದ್ದಾರೆ.

ಶ್ರೀ ಎ. ರಾಮದಾಸ್ : ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಕೊಡುತ್ತಿರತಕ್ಕ ಉತ್ತರ ಅದು ಉತ್ತರವೇ ಅಲ್ಲ. ನನಗನಿಸುತ್ತದೆ, ಇವರು ಕೊಟ್ಟಂಥ ಉತ್ತರ ತಪ್ಪಾಗಿದೆಯೆಂದು ಹೇಳಿ, ಇನ್ನೊಂದು ವಿಚಾರಣೆ ಆಗಬೇಕಾಗಿದೆಯೋ ಏನೋ ಎನ್ನುವ ವಿಚಾರವಿದೆ. ಕಾರಣ ಏನೆಂದರೆ, ಸರ್ಕಾರದ ಮುಂದೆ ವರದಿ ಇದೆ, ಆ ವರದಿಯನ್ನು ತಮ್ಮ ಮುಂದಿಡುತ್ತಿದ್ದೇನೆ. ಅದರಲ್ಲಿ ನೇರವಾದ ಉತ್ತರ ಒಂದೇ ಒಂದು ವಾಕ್ಯವನ್ನು ತಮ್ಮ ಮುಂದೆ ಓದುವುದಕ್ಕೆ ಇಚ್ಛೆ ಪಡುತ್ತೇನೆ.

"The Health authorities and the Commissioner have totally failed in taking precautionary steps in controlling the Gastro-enteritis."

ಅಂತ ಹೇಳಿ ಕೊನೆಯಲ್ಲಿ ನೇರವಾಗಿ ಯಾವ ಯಾವ ಅಧಿಕಾರಿಗಳ ಮೇಲೆ ಏನೇನು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಮೈಸೂರು ನಗರಪಾಲಿಕೆಯ ಕಮೀಷನರ್ ಆಗಿರುವಂತಹ ಜಯರಾಮ್ ಹೆಲ್ತ್ ಆಫೀಸರ್ ಆಗಿರುವಂತಹ ನಾಗರಾಜರಾವ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ ಹೊನ್ನೇಗೌಡ ರಾಜು ಇವರುಗಳ ಮೇಲೆ ನೇರವಾಗಿ ಕ್ರಮ ಕೈಗೊಳ್ಳಬೇಕು, ಜೊತೆಗೆ ಅಲ್ಲಿಗೆ ಇಂದಿನ ಮುಖ್ಯಮಂತ್ರಿಗಳು ಹೋದಾಗ ಅಲ್ಲಿ ಇರುವಂತಹ ರೆಕಾರ್ಡ್‌ಗಳನ್ನು ಟ್ಯಾಂಪರ್ ಮಾಡಿರುವಂತಾದ್ದರ ಬಗ್ಗೆ ದಾಖಲೆಗಳನ್ನು ಒದಗಿಸಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬೇಕು ಎನ್ನುವಂತಹ ವರದಿಯನ್ನು ಕೂಡ ವರದಿ(3)ರಲ್ಲಿ ಕೊಟ್ಟಿದ್ದಾರೆ. ಆದರೆ ಮಾನ್ಯ ಸಚಿವರು ಇಲ್ಲಿ ಉತ್ತರವನ್ನು ಕೊಡುತ್ತಿರುವುದು ನೋಡಿದರೆ ಬಹಳ ಆಶ್ಚರ್ಯಕರವಾಗಿದೆ. ವಿಶೇಷ ಏನೆಂದರೆ ಇಂದಿನ ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವಂತಹ ಮಾನ್ಯ ಸಿದ್ದರಾಮಯ್ಯನವರು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು ಅಂತ ಹೇಳಿ ಆ ದಿವಸ ಅಲ್ಲಿ ಜನರು ಧರಣೆಯನ್ನು ಕೂಡ ಆಚರಣೆ ಮಾಡಿದರು ಅಂತ ವರದಿ ಕೂಡ ಸರ್ಕಾರಕ್ಕೆ ಬಂದಿದೆ. ಆದರೆ ಸರ್ಕಾರ ಏಕೆ ಈಗ ಈ ರೀತಿ ಮುಚ್ಚುಮರೆ ಮಾಡಿದೆ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಲು ಇಷ್ಟಪಡುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ ಇದರಲ್ಲಿ ಕೆಲವರನ್ನು ಕೈಬಿಡಲಾಗಿದೆ ಎನ್ನುವುದು ಇದೆ ಇದರ ಬಗ್ಗೆ ನಾನು ಮತ್ತೊಮ್ಮೆ ಸ್ವತಃ ವಿಚಾರಣೆ ಮಾಡಿ ಕೆಲವೇ ದಿವಸಗಳಲ್ಲಿ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಎ. ರಾಮದಾಸ್ : ನೇರವಾಗಿ ಸದನದಲ್ಲಿ ಇರುವಂತಹ ಉತ್ತರದಲ್ಲಿ ಸುಳ್ಳು ಹೇಳುವಂತಾದ್ದು ಆದರೆ ಇದು ನನಗೆ ಬಹಳ ನೋವಾಗುವಂತಾದ್ದು.

ಅಧ್ಯಕ್ಷರು : ಅವರು ಸಮರ್ಥನೆ ಏನೂ ಮಾಡುತ್ತಿಲ್ಲ, ಹೆಚ್ಚು ಕಡಿಮೆ ಆಗಿರಬಹುದು ನಾನೇ ಸ್ವತಃ ವಿಚಾರಣೆ ಮಾಡಿ ವಿಷಯ ತಿಳಿಸುತ್ತೇನೆಂದು ಹೇಳಿದ್ದಾರೆ. ಮಂತ್ರಿಗಳು ಅಂದರೆ ಅವರು ದೈವಾಂಶ ಸಂಭೂತರು ಎಂದು ಏನೂ ಅಲ್ಲ, ಅವರಿಗೆ ಎಲ್ಲವೂ ಗೊತ್ತಾಗಿ ಬಿಡುತ್ತದೆ ಎಂದು ಏನೂ ಇಲ್ಲ. ಅವರೂ ಕೂಡ ನಮ್ಮಂತೆ ಕೆಲವು ಲಿಮಿಟೇಶನ್‌ನಲ್ಲಿ ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಪ್ರಾಪರ್ ಕಮ್ಯುನಿಕೇಷನ್ ಇಲ್ಲದೇ ಇರಬಹುದು ಆದ್ದರಿಂದ ಅವರು ನಾನೇ ಸ್ವತಃ ವಿಚಾರಣೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎ. ರಾಮದಾಸ್ : ವರದಿ ನಮ್ಮ ಮುಂದೇ ಇದೇ ಮಾನ್ಯ ಅಧ್ಯಕ್ಷರೇ, ವರದಿಯೇ ಸರ್ಕಾರದ ಮುಂದೆ ಇರುವಾಗ ಸರ್ಕಾರದ ಪ್ರತಿನಿಧಿಗಳು ಏತಕ್ಕೆ ಆ ಮಾತನ್ನು ಹೇಳುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ. ಯಾವ ಅಧಿಕಾರಿಗಳು ತಪ್ಪಿತಸ್ಥರು ಎಂದು ಹೇಳಿದ್ದೇವೆಯೋ ಅವರನ್ನು ಮೈಸೂರಿನಿಂದ ಹೊರಗಡೆ ಹಾಕಬೇಕು, ಮೈಸೂರಿಗೆ ಪೋಸ್ಟ್ ಮಾಡಬಾರದು ಅಂತ ಮಾಡಿದ್ದಾರೆ.

ಅಧ್ಯಕ್ಷರು : ಅಂತಹ ಕೆಟ್ಟವರು ಇದ್ದರೆ ಮೈಸೂರಿನಲ್ಲಿಯೇ ಇಟ್ಟುಕೊಳ್ಳಿ. ಬೇರೆ ಕಡೆ ಕಳುಹಿಸಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ ಇಡೀ ರಾಜ್ಯದಲ್ಲಿ ಏನು ಅನ್ಯಾಯಗಳು ಆಗುತ್ತಿರುತ್ತವೆಯೋ ಆ ಅನ್ಯಾಯಗಳನ್ನು ಈ ಸದನದ ಮೂಲಕ ಸರಿ ಮಾಡಿಕೊಳ್ಳಬೇಕು ಎನ್ನುವಂತಹ ಒಂದೇ ಒಂದು ಉದ್ದೇಶದಿಂದ ನಾವು ಇಲ್ಲಿಗೆ ಬರುತ್ತೇವೆ. ಇಲ್ಲಿಯೂ ಕೂಡ ನಮಗೆ ಅನ್ಯಾಯವಾಗುತ್ತದೆ ಎನ್ನುವಂತಹ ಪರಿಸ್ಥಿತಿ ಬಂದಾಗ ನಾವು ಯಾರ ಹತ್ತಿರ ಹೋಗಬೇಕು ನಾವು ಮತ್ತೆ ಸ್ವರ್ಗಕ್ಕೆ ಹೋಗಬೇಕೋ ಏನೋ ಎನ್ನುವಂತಹ ಭಯವಾಗುತ್ತಿದೆ.

ಅಧ್ಯಕ್ಷರು : ಬೇಡ ನೀವು ಅಷ್ಟು ಬೇಗ ಹೋಗುವುದಕ್ಕೆ ನಾನು ಬಿಡುವುದಿಲ್ಲ, ನೀವು ಇನ್ನೂ ಇಲ್ಲೇ ಇರಬೇಕು ಇನ್ನೂ ಭಾರಿ ಕೆಲಸ ಮಾಡಬೇಕು, ಇಲ್ಲಿ ನಿಮಗೆ ನ್ಯಾಯ ಸಿಗದೇ ಹೋಗುವ ಪ್ರಶ್ನೆ ಇಲ್ಲ. ನಾನು ನ್ಯಾಯ ಒದಗಿಸಿಕೊಡುತ್ತೇನೆ ಮಾನ್ಯ ಮಂತ್ರಿಗಳಿಗೆ ಸ್ವಲ್ಪ ಅವಕಾಶ ಕೊಡೋಣ. ಮಾನ್ಯ ಮಂತ್ರಿಗಳೇ ಸ್ವತಃ ವಿಚಾರಣೆ ಮಾಡಿ ಸದನಕ್ಕೆ ತಿಳಿಸುತ್ತೇನೆಂದು ಹೇಳಿದ್ದಾರೆ. ಅವರು ನನ್ನ ಮತ್ತು ನಿಮ್ಮ ನಂಬಿಕೆಯನ್ನು ಕಳೆದು ಕೊಳ್ಳುವವರೆಗೂ ನಾವು ಅವರ ಮೇಲೆ ವಿಶ್ವಾಸವನ್ನು ಇಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಯಾರು ತಪ್ಪು ಉತ್ತರವನ್ನು ಕೊಡಲು ಪ್ರಯತ್ನ ಮಾಡಿದ್ದಾರೆ. ಅವರ ಮೇಲೆ ಆದರೂ ಕ್ರಮ ತೆಗೆದುಕೊಳ್ಳುತ್ತಾರೋ?

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ಡಿಟೇಲ್ಸ್ ಕಲೆಕ್ಟ್ ಮಾಡಿ ನಾನು ಉತ್ತರ ನೀಡುತ್ತೇನೆ.

ಅಧ್ಯಕ್ಷರು : ಶ್ರೀ ರಾಜಣ್ಣ ತಾವು ಮಾತನಾಡಿ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ಸರ್ಕಾರದ ಪರವಾಗಿ ಯಾರು ಉತ್ತರ ಹೇಳುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ತಮಗೆ ಕಾಗದ ಬರೆದು ತಿಳಿಸಬೇಕು ಇಲ್ಲಾ ಬೇರೆ ಮಂತ್ರಿಗಳಿಗೆ ಆದರೂ ಜವಾಬ್ದಾರಿಯನ್ನು ವಹಿಸಬೇಕು, ಇಲ್ಲಿ ಯಾರೂ ಹೇಳುವವರು ಕೇಳುವವರು ಇಲ್ಲ ಅಂದರೆ ಏನು ಅರ್ಥ ಇದು. ಇದರ ಬಗ್ಗೆ ತಮಗೂ ಮಾಹಿತಿ ಇಲ್ಲ ಉಪ ಮುಖ್ಯಮಂತ್ರಿಗಳಿಗೂ ಇಲ್ಲ.

ಅಧ್ಯಕ್ಷರು : ನಾನು ತಮ್ಮ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್ ಅವರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಮಯ ಎಂಥಾದ್ದು, ಸಮಾರಂಭಗಳು ನಡೆದಿದೆ, ದೊಡ್ಡ ದೊಡ್ಡದಾಗಿ ಮುಖಪುಟದಲ್ಲಿ ಪತ್ರಿಕೆಗಳಲ್ಲಿ ಬಂದಿದೆ. ಇದಕ್ಕೆ ಸಮಯ ಕೇಳುವುದು ಏನು ಇದೆ. ಇವರು ಬಹು ರಾಷ್ಟ್ರೀಯ ಕಂಪನಿಗಳನ್ನು ಸ್ವಾಗತ ಮಾಡಿ, ಅವರಿಗೆ ಕಾಲು ಮಣಿ ಹಾಕಿ ಕಾಲಿಗೆ ಬಿದ್ದು ಅವರ ಪಾದಪೂಜೆ ಮಾಡಿದ್ದಾರೆ. ಮತ್ತೆ ಇದರ ಬಗ್ಗೆ ಕಾಲಾವಕಾಶ ಕೇಳತಕ್ಕಂಥಾದ್ದು ನಿಜವಾಗಿಯೂ ಒಳ್ಳೆಯ ಸಂಪ್ರದಾಯ ಅಲ್ಲ, ಕಾಲಾವಕಾಶ ಏಕೆ ಸ್ವಾಮಿ ಬೇಕು? ನಾವು ನೋಡಿದ್ದೇವೆ, ತಾವು ನೋಡಿದ್ದೀರಿ ಪತ್ರಿಕೆಗಳಲ್ಲಿ, ಪ್ರತಿದಿನ ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳ ಜೊತೆಯಲ್ಲಿ ಸಹಿ ಹಾಕಿರುವಂಥಾದ್ದು ಮುಖಪುಟದಲ್ಲಿ ಫೋಟೋಗಳು ಬಂದಿರತಕ್ಕಂಥಾದ್ದು ಸಮಾರಂಭ ಮಾಡಿರತಕ್ಕಂಥಾದ್ದು ಎಷ್ಟು ಬಹು ರಾಷ್ಟ್ರೀಯ ಕಂಪನಿಗಳು.

ಅಧ್ಯಕ್ಷರು : ಉತ್ತರ ಇಲ್ಲ, ಮಂತ್ರಿಗಳಿಗೆ ಸ್ವಲ್ಪ ಟೈಮ್ ಕೊಡೋಣ.

ಶ್ರೀ ವಾಟಾಳ್ ನಾಗರಾಜ್ : ಅಲ್ಲ ಸ್ವಾಮಿ ಮೊದಲನೇ ದಿನವೇ ಈ ಸರ್ಕಾರ ಈ ರೀತಿ ಮುಗ್ಗರಿಸಿದರೆ ಸರ್ಕಾರದ ಗತಿ ಏನು ಮೊನ್ನೆ ತಾನೇ ಇವರು ಏಟು ತಿಂದಿದ್ದಾರೆ. ಚುನಾವಣೆ ಆದ ನಂತರ ಮೊದಲನೇ ದಿವಸವೇ ಈ ರೀತಿ ಮುಗ್ಗರಿಸಲು ಹೋದರೆ ಪರಿಸ್ಥಿತಿ ಏನು? ಸರ್ಕಾರ ಇದೆಯೋ ಅಥವಾ ಇಲ್ಲವೋ ಎಂದು ಅನಿಸುತ್ತದೆ ನಮಗೆ. ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ

ಮನವಿ ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರ ಇದೆಯೋ ಅಥವಾ ಇಲ್ಲವೋ ಎನ್ನುವುದನ್ನು ತಾವು ಸ್ವಲ್ಪ ದಯಮಾಡಿ ಹೇಳಿಬಿಟ್ಟರೆ ಒಳ್ಳೆಯದು.

ಅಧ್ಯಕ್ಷರು : ಅದು ಬೇರೆ ಪ್ರಶ್ನೆ ಅದಕ್ಕೆ ಆಮೇಲೆ ಅವರು ಉತ್ತರ ಹೇಳುತ್ತಾರೆ. ಈಗ ಸ್ವಲ್ಪ ನಾವು ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಪಟೇಲರು ಸರ್ಕಾರ ಇದೆಯೋ ಇಲ್ಲವೋ ಎಂದು ಸ್ವಲ್ಪ ಹೇಳಿದರೆ ಒಳ್ಳೆಯದು.

ಶ್ರೀ ಜೆ.ಎಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಗೋಲಿಬಾರ್ ಮಾಡಿಸಿ ಜನರನ್ನು ಜೈಲಿಗೆ ಹಾಕಿದರೆ ಮಾತ್ರ ಸರ್ಕಾರ ಇದೆ ಎಂದು ಅವರ ಕಲ್ಪನೆಯೇ? ನಾವು ಆ ತರಹ ಮಾಡಿಲ್ಲ ಸರ್ಕಾರ ಇದೆ ಅಂತ ತೋರಿಸಬೇಕಾದರೆ ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ ಅವರು ಉತ್ತರ ಹೇಳುತ್ತಾರೆ ಬಹುರಾಷ್ಟ್ರೀಯ ಕಂಪನಿಗಳಿಗೆ ಪಾದ ಪೂಜೆ ಮಾಡಿದರು ಅಂತ ಹೇಳಿದರು ಅದೆಲ್ಲಾ ಏನು ಇಲ್ಲ ಪಾದ ಪೂಜೆ ಯಾರೂ ಮಾಡಿಲ್ಲ, ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳು 1991ರಲ್ಲಿ ಒಂದು ಕೈಗಾರಿಕಾ ಉದಾರಿಕರಣ, ಪ್ರಪಂಚೀಕರಣ ಅಂತ ಎಲ್ಲಾ ಮಾಡಿದ ಮೇಲೆ ಎಲ್ಲಾ ಜನರು ಬರುತ್ತಾರೆ ನಾವು ಕೇಂದ್ರದ ಕೈಗಾರಿಕಾ ನೀತಿಯನ್ನು ಒಪ್ಪಿಕೊಂಡು ಅದರ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. ಉತ್ತರಗಳನ್ನು ವಿವರಗಳನ್ನು ಕೊಡುತ್ತೇವೆ, ತಾವು ಕರಾರುಗಳು ಏನು ಎಂದು ಕೇಳಿದ್ದೀರಿ, ನಾವು ಕರಾರುಗಳನ್ನು ಮಾಡಿಕೊಂಡಿದ್ದೇವೆ ಎಂದು ಹೇಳಲು ಆಗುತ್ತದೆಯೇ? ಹಾಗೆ ಹೇಳಿದರೆ ಸರಿಯಾದ ಉತ್ತರ ಕೊಟ್ಟಿಲ್ಲ ಎಂದು ಹೇಳುತ್ತೀರಿ. ಸರಿಯಾದ ಉತ್ತರ ಕೊಡಲು ಸಮಯ ಬೇಕು ಅಂದರೆ ಸಮಯ ಕೊಡುವುದಿಲ್ಲ,

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ಪ್ರಶ್ನೆ. ಈ ಸದನವನ್ನು ಮುಚ್ಚಿಟ್ಟು, ಕರ್ನಾಟಕದ ಜನತೆಯನ್ನು ಮುಚ್ಚಿಟ್ಟು ಇವರಿಗೆ ಇಷ್ಟ ಬಂದಂತೆ ಸಹಿ ಹಾಕಿದ್ದಾರೆ. ಅದರಲ್ಲಿ ಅನುಮಾನವೇ ಇಲ್ಲ, ಇದನ್ನು ಕೇಳಲು ಹೋದರೆ ಜನರನ್ನು ಜೈಲಿಗೆ ಕಳುಹಿಸಿದ್ದೇವೆಯೇ? ಅವರನ್ನು ಹೊಡೆಸಿದ್ದೇವೆಯೇ ಎಂದೆಲ್ಲಾ ಹೇಳಿದರೆ ಏನು ಅರ್ಥ?

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಅದೆಲ್ಲ ಬೇಡ. ಈಗ ಶ್ರೀ ಟಿ.ಎಚ್. ಬಸವರಾಜು ಎಂ. ಬಸವಯ್ಯ,

ಹುಬ್ಬಳ್ಳಿ-ಧಾರವಾಡ ನಗರಪಾಲಿಕೆಯಲ್ಲಿ ಹಂದಿಗಳ ಕಾಟ

113 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹಂದಿಗಳ ಕಾಟ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದರ ನಿವಾರಣೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು? ಮತ್ತು ಎಷ್ಟು ನಿರ್ದಿಷ್ಟ ಅವಧಿಯಲ್ಲಿ ಈ ಸಮಸ್ಯೆ ನಿವಾರಿಸಲಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು):

ಅ) ಬಂದಿದೆ

ಆ) ಹಂದಿಗಳನ್ನು ಗುಂಡಿಕ್ಕಿ ಕೊಲ್ಲುವ ಸಲುವಾಗಿ ಪೋಲೀಸ್ ಕಮೀಷನರರ ಸಂಗಡ ಪತ್ರ ವ್ಯವಹಾರ ನಡೆದಿದ್ದು, ವಿಧಾನವನ್ನು ನಿರ್ಣಯಿಸಲಾಗುತ್ತಿದ್ದು ಆದಷ್ಟು ಬೇಗನೆ ನಿರ್ಮೂಲನೆ ಕುರಿತು ಕ್ರಮ ತೆಗೆದುಕೊಳ್ಳಲಾಗುವುದು.

(ಉತ್ತರ ಲಗತ್ತಿಸಲಾಗಿದೆ)

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹುಬ್ಬಳ್ಳಿ-ಧಾರವಾಡನಗರದಲ್ಲಿ ಮೆದಳು ಜ್ವರ ಮತ್ತು ಟೈಫಾಯಿಟ್ ಜ್ವರ ಮತ್ತು ಜಾಂಡೀಸ್‌ನಿಂದ ಹುಬ್ಬಳ್ಳಿ ಮತ್ತು ಧಾರವಾಡದ ಜನ ನರಳುತ್ತಿದ್ದಾರೆ. ರಸ್ತೆಗಳಲ್ಲಿ ಹಂದಿಗಳು ಅಡ್ಡ ಬರುವುದರಿಂದ ಆಕ್ಸಿಡೆಂಟ್ಸ್ ಆಗುತ್ತಿವೆ. ಇದು ಒಂದು ಗಂಭೀರ ಸಮಸ್ಯೆ ಹುಬ್ಬಳ್ಳಿ ಮತ್ತು ಧಾರವಾಡ ನಗರದಲ್ಲಿ ಆಗಿದೆ. ಇದರ ಬಗ್ಗೆ ನಿರ್ದಿಷ್ಟವಾದ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರು ಹೇಳಿಲ್ಲ. ಕೇವಲ ಪೋಲೀಸ್ ಕಮೀಷನರ್ ಜೊತೆ ಪತ್ರ ವ್ಯವಹಾರ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಎಷ್ಟು ಪತ್ರ ವ್ಯವಹಾರ ಮಾಡಿದರು ಯಾವಾಗ ಮಾಡಿದರು? ಯಾವ ಕ್ರಮ ಕೈಗೊಂಡಿದ್ದಾರೆ ಎನ್ನುವುದಕ್ಕೆ ಸ್ಪಷ್ಟ ಉತ್ತರ ಬಂದಿಲ್ಲ. ನಿರ್ದಿಷ್ಟ ಅವಧಿಯಲ್ಲಿ ಸಮಸ್ಯೆ ಪರಿಹಾರ ಮಾಡುವ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ, ಹಂದಿಗಳ ಕಾಟ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಅಷ್ಟೇ ಅಲ್ಲ, ಇತರ ಅನೇಕ ಕಡೆ ರಸ್ತೆಯಲ್ಲಿ ಬರುತ್ತಿರುತ್ತವೆ ಹಾಗೂ ಎಲ್ಲಾ ಕಡೆ ಇರುತ್ತವೆ. ಹಂದಿಗಳಿಂದ ಮೆದುಳು ಜ್ವರ ಹರಡುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಕೊಲ್ಲಬೇಕು ಎನ್ನುವ ದೃಷ್ಟಿಯಿಂದ ಅದನ್ನು ಕೊಲ್ಲಬೇಕು ಎನ್ನುವ ಒಂದು ಸಲಹೆ ಕೂಡ ಸರ್ಕಾರದಲ್ಲಿ ಇತ್ತು. ಆ ದೃಷ್ಟಿಯಿಂದ ಇಂತಹ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದಾಗ ಆ ಹಂದಿ ಮಾಲಿಕರೆಲ್ಲ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡರು. ಆ ಸ್ಟೇಯನ್ನು ವೇಕೇಟ್ ಮಾಡುವುದಕ್ಕೆ ನಮ್ಮವರು ಪ್ರಯತ್ನ ಮಾಡಿದರು. ಈಗ ವೆಕೇಟ್ ಆಗಿದೆ. ಹಂದಿಗಳನ್ನು ಪೋಲಿಸರ ಮುಖಾಂತರ ಗುಂಡಿಕ್ಕಿ ಕೊಲ್ಲಿಸಬೇಕಾಗುತ್ತದೆ. ಗುಂಡಿಕ್ಕಿ ಕೊಂದ ನಂತರ ಅದನ್ನು ಎಲ್ಲಿಗೆ ಎತ್ತಿ ಹಾಕುವುದು ಎನ್ನುವುದಕ್ಕೆಲ್ಲ ಪತ್ರ ವ್ಯವಹಾರ ನಡೆದಿದ್ದು ಬಹಳಷ್ಟು ಚರ್ಚೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಹಂದಿಗಳನ್ನು ಕೊಲ್ಲುವುದಕ್ಕೆ ತಾವು ಯೋಚನೆ ಮಾಡುತ್ತೀರಿ. ಆದರೆ ಮನುಷ್ಯನನ್ನು ಕೊಲ್ಲುವುದಕ್ಕೆ ಗುಂಡುಗಳನ್ನು ಧಾರಾಳವಾಗಿ ಒದಗಿಸಿಕೊಡುತ್ತೀರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಹಂದಿಗಳನ್ನು ಮತ್ತು ಮನುಷ್ಯರನ್ನು ಒಟ್ಟಿಗೆ ಅಂದರೆ ಒಂದೇ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಬ್ಬರನ್ನೂ ಒಂದೇ ತರಹ ಮಾಡಿದ್ದಾರೆ. ಅವರ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ ಹಂದಿಗಳನ್ನು ಕೊಲ್ಲಿಸಬೇಕೆಂದು ಹೇಳುತ್ತಾರೆ. ಇದುವರೆವಿಗೆ ನಾನು ತಿಳಿದುಕೊಂಡಿರುವುದು ಏನೆಂದರೆ ಪೊಲೀಸರು ಮನುಷ್ಯರನ್ನು ಗುಂಡಿಕ್ಕಿ ಕೊಲ್ಲುತ್ತಿರುವುದು, ಈಗ ಹಂದಿಗಳನ್ನು ಸಹ ಕೊಲ್ಲಿಸತಕ್ಕಂಥದ್ದೆಂದರೆ ಮನುಷ್ಯರನ್ನು ಹಂದಿಗಳ ಮಟ್ಟಕ್ಕೆ ಇಳಿಸಿದ್ದಾರೆಂದು ತೀರ್ಮಾನವಾಯಿತು.

ಶ್ರೀ ಜೆ.ಹೆಚ್. ಪಟೇಲ್ : ಹಂದಿಗಳನ್ನು ಕೊಲ್ಲಿಸತಕ್ಕಂಥ ಯಾವುದೇ ಯೋಜನೆಗಳನ್ನು ಮಾಡಿಲ್ಲ, ಹಂದಿಗಳನ್ನು ಕೊಲ್ಲಿಸಲೂ ಬಾರದು. ಅವುಗಳೇನು ಕಾಡುಪ್ರಾಣಿಗಳು ಅಲ್ಲ, ಅದು ಕೆಲವರಿಗೆ ಉತ್ತಮವಾದ ಆಹಾರವಾಗಿರುವುದರಿಂದ,

ಅವುಗಳಿಂದ ಏನಾದರೂ ರೋಗಗಳು ಹರಡತಕ್ಕಂಥ ಸಂದರ್ಭ ಇದ್ದರೆ, ಕೆಲವು ಸಾರಿ ಹಂದಿಗಳಿಂದ ರೋಗಗಳು ಬರುತ್ತವೆ, ಆ ರೀತಿ ರೋಗ ಬರತಕ್ಕಂಥ ಜಾತಿಯ ಹಂದಿ ಆದರೆ ಅಥವಾ ರೋಗಗ್ರಸ್ಥ ಹಂದಿಗಳನ್ನು ನಾವು ಕೊಲ್ಲಿಸುತ್ತೇವೆ ವಿನಹ ಸಾಮಾನ್ಯವಾಗಿ ಹಂದಿಗಳನ್ನು ಕೊಲ್ಲಿಸುವುದಿಲ್ಲ, ಹಂದಿಗಳು ಬೇಕಾಗುತ್ತವೆ.

"ನಿಂದಕರು ಇರಬೇಕು, ನಿಂದಕರು ಇರಬೇಕು

ಹಂದಿ ಇದ್ದರೆ ಕೇರಿ ಹ್ಯಾಂಗೆ, ಶುದ್ಧವೋ ಹಂಗೆ

ನಿಂದಕರು ಇರಬೇಕು" ಎಂದು ದಾಸರು ಹೇಳಿದ್ದಾರೆ. ಹೀಗೆ ಕೆಲವು ಸಾರಿ ಹಂದಿ ಇರಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಹಂದಿ ಸಾಕುವವರು ನಿರ್ದಿಷ್ಟ ಪ್ರದೇಶಗಳಿಗೆ ತೆಗೆದುಕೊಂಡು ಹೋಗಲಿ. ನಾಗರೀಕರಿಗೆ ಅದರಿಂದ ಆಗತಕ್ಕಂಥ ತೊಂದರೆ ತಪ್ಪಲಿ. ಹಂದಿಗಳಿಂದ ಬರುವ ರೋಗಗಳನ್ನು ತಪ್ಪಿಸುವುದಕ್ಕೋಸ್ಕರ ಹೇಳಿದ್ದೇವೆಯೇ ಹೊರತು ಹಂದಿಗಳನ್ನು ಕೊಲ್ಲಬೇಕೆಂದು ನಾನು ಹೇಳುತ್ತಿಲ್ಲ. ಹಂದಿಗಳ ಕಾಟವನ್ನು ತಪ್ಪಿಸುವುದಕ್ಕೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡರೂ ನಿರ್ಧಿಷ್ಟವಾಗಿ ಯಾವಾಗ, ಎಷ್ಟು ಸಮಯದೊಳಗೆ ಮಾನ್ಯ ಸಚಿವರು ಆ ಒಂದು ಸಮಸ್ಯೆಯನ್ನು ನಿವಾರಣೆ ಮಾಡುತ್ತಾರೆ? ಏಕೆಂದರೆ ಒಂದು ನಿರ್ಧಾರವನ್ನು ತೆಗೆದುಕೊಂಡರೆ ನಿರ್ದಿಷ್ಟ ಸಮಯದಲ್ಲಿ ನಿವಾರಣೆ ಮಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ಅವರು ನಿರ್ದಿಷ್ಟವಾದ ಸಮಯದಲ್ಲಿ ನಿವಾರಣೆ ಮಾಡಬೇಕು. ಮತ್ತು ಯಾವ ರೀತಿಯಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಅದನ್ನು ಸ್ಪಷ್ಟವಾಗಿ ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ, ಹಂದಿಗಳನ್ನು ಕೊಲ್ಲಲೇ ಬೇಕು ಎನ್ನುವ ಉದ್ದೇಶ ಅಲ್ಲ. ಆದರೆ ಅದನ್ನು ಅವಾಯಿಡ್ ಹೇಗೆ ಮಾಡಬೇಕು? ಹಂದಿಗಳ ಕಾಟವಂತೂ ಹುಬ್ಬಳ್ಳಿ ಧಾರವಾಡದಲ್ಲಿ ಹೆಚ್ಚಿಗೆ ಇದೆ. ಮತ್ತು ಎಲ್ಲಾ ಕಡೆ ಇದೆ. ಹಂದಿಗಳ ಮಾಲೀಕರು ಕೋರ್ಟಿಗೆ ಹೋಗಿ ಸ್ಟೇ ತಂದರು, ಅದನ್ನು ವೆಕೇಟ್ ಮಾಡಿಸಿದ್ದೇವೆ. ಈಗ ಆ ಮಾಲೀಕರ ಜೊತೆ ಕುಳಿತು ಮಾತುಕತೆ ಮಾಡಬೇಕು, ಅವರು ಊರಿನ ಹೊರಗಡೆ, ಬೇರೆ ಕಡೆ ಎಲ್ಲಾದರೂ ಬಿಡಬೇಕೇ ಅಥವಾ ಕೊಂದೇ ಬಿಡಬೇಕೇ ಏಕೆಂದರೆ ಯಾವ ರೋಗಗ್ರಸ್ಥ ಹಂದಿಗಳು ಇದ್ದರೆ ಅದನ್ನು ಗುರುತಿಸಿ ಕೊಲ್ಲಬೇಕು. ಹಂದಿ ಮಾಲೀಕರಂತು ಆ ಹಂದಿಗಳನ್ನು ಕೊಲ್ಲಿಸುವುದಿಲ್ಲ. ಮತ್ತು ಅವರಿಗೆ ರೋಗ ಇರುವ ಪಂದಿಗಳನ್ನು ಗುರುತಿಸುವುದಕ್ಕೆ ಸಾಧ್ಯವಿಲ್ಲ, ಇಂತಹ ಯಾವುದಾದರೂ ಹಂದಿಗಳು ಇದ್ದರೆ ಅಂತಹ ಹಂದಿಗಳನ್ನು ಕೊಂದು ಬಿಡಬೇಕು ಎನ್ನುವಂಥ ಒಂದು ಸಲಹೆ ಕೂಡ ಇದೆ. ಈ ಎಲ್ಲದರ ಬಗ್ಗೆ ಪೊಲೀಸ್ ಕಮಿಷನ್‌ರವರ ಜೊತೆ ಪತ್ರವ್ಯವಹಾರ ನಡೆಯಿತು. ಈ ಮಧ್ಯೆ ಕೋರ್ಟಿನಲ್ಲಿ ಸ್ಟೇ ಇತ್ತು, ಆ ಸ್ಟೇ ವೆಕೇಟ್ ಆಯಿತು. ಅದರ ಬಗ್ಗೆ ಮಾತುಕತೆ ನಡೆದಿದೆ. ಬಹಳಷ್ಟು ಬೇಗ ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಈ ಪ್ರಶ್ನೆಯ ಮೂಲ ಉದ್ದೇಶ ವೈಜನಾಥ ಪಾಟೀಲರೆ, Japanese Encyptalities "ಮೆದುಳು ಜ್ವರ" ಎಂದು ಹೇಳುತ್ತಾರಲ್ಲ, ಆ ರೋಗವನ್ನು ಹರಡಿಸತಕ್ಕಂಥ ಕ್ರಿಮಿಕೀಟಗಳು ಏನಿವೆ ಅವು ಹಂದಿಗಳಿಂದ ಉದ್ಭವವಾಗುತ್ತವೆ. ಹಂದಿ ಸಾಕತಕ್ಕಂಥವರು ಅದನ್ನು ತಮ್ಮ ಒಂದು ಸ್ವಂತ ಜಾಗದಲ್ಲಿ ಬಂದೋಬಸ್ತ್ ಮಾಡಿಕೊಂಡು ಅದನ್ನು ಹೊರಗಲ್ಲ ಬೀದಿಯಲ್ಲಿ ಬಿಡದೆ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತಾರೆ. ನಿಮ್ಮ ಇಲಾಖೆಯವರು ಪೊಲೀಸರ ಸಹಕಾರವನ್ನು ಪಡೆದುಕೊಂಡು ಆ ಮಾಲೀಕರು ಯಾರು ಇರುತ್ತಾರೆ ಅವರಿಗೆ ಸೂಚನೆ ಕೊಡಬೇಕು. ಇವೆಲ್ಲವೂ ಕೂಡ ಬಹುಶಃ ನಮ್ಮಲ್ಲಿ ಮಳೆಗಾಲ

ಪ್ರಾರಂಭವಾದಾಗ ಅಲ್ಲಿಂದ ನವೆಂಬರ್ ತಿಂಗಳವರೆಗೆ ಈ ರೋಗ ಹೆಚ್ಚಾಗುತ್ತದೆ. ಇದು ಬಹಳ ಕೆಟ್ಟ ರೋಗ. ಆದ್ದರಿಂದ ಈ ಹಂದಿಗಳನ್ನು ಸಾಕಿರತಕ್ಕಂಥವರು ಅದನ್ನು ಬೀದಿಗೆ ಬಿಟ್ಟು ಬಿಟ್ಟು, ಬೀದಿಯಲ್ಲಿ ಮೇಯ್ದುಕೊಂಡು ಬಂದು ಮತ್ತೆ ಅವರ ವಶಕ್ಕೆ ಸಾಯಂಕಾಲ ಹೋಗುವುದರಿಂದ ಜನರಿಗೆ ತೊಂದರೆಯಾಗುತ್ತದೆ ಎಂದು ಅವರು ಹೇಳುತ್ತಿರುವುದು. ಅಷೇ ಅಲ್ಲವೇ ನಿಮ್ಮ ಮುಖ್ಯ ಉದ್ದೇಶ ಜಗದೀಶ್ ಶೆಟ್ಟರ್. ಭಾಷೆ ವ್ಯತ್ಯಾಸವಾಗುತ್ತದೆ. ಅವರು ಗುಲ್ಬರ್ಗಾದವರು ನೀವು ಧಾರವಾಡದವರು. ಈಗ ಅರ್ಥವಾಯಿತಲ್ಲ ತಮಗೆ. ಅದಕ್ಕೆ ನೀವು ನಿಮ್ಮ ಇಲಾಖೆಯವರ ಜೊತೆಗೆ ಮಾತನಾಡಿ ಕ್ರಮ ಕೈಗೊಳ್ಳಿ.

ಶ್ರೀ ಎನ್. ರಾಜಣ್ಣ : ನನ್ನ ತೋಟದ ಪಕ್ಕಧಲ್ಲಿ ಹಂದಿಗಳನ್ನು ಸಾಕುತ್ತಿದ್ದಾರೆ. ಅದಕ್ಕೆ ಯಾವ ಜ್ವರವೂ ಬರುವುದಿಲ್ಲ, ಅದರಿಂದ ಯಾವ ತೊಂದರೆಯೂ ಬರುವುದಿಲ್ಲ.

ಅಧ್ಯಕ್ಷರು : ಆದ್ದರಿಂದ ತಾವು ದಯಮಾಡಿ ತಮ್ಮ ಇಲಾಖೆಯ ಅಧಿಕಾರಿಗಳು ಯಾರು ಇದ್ದಾರೆ ಅವರಿಗೆ ಸೂಕ್ತ ಎಚ್ಚರಿಕೆಯನ್ನು ಕೊಟ್ಟು ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡತಕ್ಕಂಥದ್ದು.

ದಕ್ಷಿಣ ಕನ್ನಡ ಜಿಲ್ಲೆಯ ಹಂಪನಕಟ್ಟೆ ಸರ್ವಿಸ್ ಬಸ್ ನಿಲ್ದಾಣದ ಬಗ್ಗೆ

114 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಸ್ಥಳವಾದ ಹಂಪನಕಟ್ಟೆ ಸರ್ವಿಸ್ ಬಸ್ ನಿಲ್ದಾಣದ ಬಗ್ಗೆ ವಾದವಿವಾದ ಎದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಾರ್ವಜನಿಕರು ಮತ್ತು ಬಸ್ ಮಾಲೀಕರುಗಳು ಮಂಗಳೂರಿನ ಸಮೀಪದ 2 ಕಿ.ಮೀ. ಸುತ್ತಳತೆಯಲ್ಲಿ ಬಸ್ ನಿಲ್ದಾಣ ಮಾಡಬೇಕೆಂದು ಕೇಳಿದ್ದರೂ ಸುಮಾರು 6 ಕಿ.ಮೀ. ದೂರದಲ್ಲಿ ಬಸ್ ನಿಲ್ದಾಣ ಮಾಡುವ ಬಗ್ಗೆ ಜಿಲ್ಲಾಡಳಿತ ಆದೇಶ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ರಾಜ್ಯ ಸರ್ಕಾರ ಈ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಂಡಿರುವ ಕ್ರಮವೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಹಂಪನಕಟ್ಟೆಯಿಂದ 2 ಕಿ.ಮೀ. ಅಂತರದೊಳಗೆ ಸೂಕ್ತ ಖಾಲಿ ಜಾಗವು ಲಭ್ಯವಿರುವುದಿಲ್ಲ, ಕೊಟ್ಟರದಲ್ಲಿನ ಪ್ರಸ್ತಾಪಿತ ಬಸ್ಸು ನಿಲ್ದಾಣವು ವಿಜಯ್‌ಯಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ 2 ಕಿ.ಮೀ. ಅಂತರದೊಳಗೆ ಇರುವುದು. ಇದು 6 ಕಿ.ಮೀ. ದೂರದಲ್ಲಿದೆ ಎಂದು ಹೇಳುವುದು ಸಮರ್ಪಕವಲ್ಲ.

ಇ) ಕಂಕನಾಡಿ, ಕದ್ರಿಮಲ್ಲಿಕಟ್ಟೆ ಮತ್ತು ಕೊಟ್ಟಾರದಲ್ಲಿ ಪರ್ಯಾಯ ವ್ಯವಸ್ಥೆಯಾಗಿ ಬಸ್ ನಿಲ್ದಾಣಗಳನ್ನು ರಚಿಸಿ ಅಭಿವೃದ್ಧಿ ಪಡಿಸಲಾಗಿದೆ. ಎಲ್ಲಾ ಪ್ರಯಾಣಿಕರಿಗೆ ಅನುಕೂಲವಾಗುವಂತೆ ನಗರದ ಎಲ್ಲಾ ಭಾಗಗಳಿಗೆ ಹೋಗಲು ಸೂಕ್ತ ನಗರಸಾರಿಗೆ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಕೆ. ಜಯರಾಮ ಶೆಟ್ಟಿ : ಮಾನ್ಯ ಸಭಾಧ್ಯಕ್ಷರೆ, ಉತ್ತರ ಪೂರ್ತಿಯಾಗಿ ಅಸ್ಪಷ್ಟವಾಗಿದೆ. ನಾನು ಏನು ಕೇಳಿದ್ದುದು ಅಂದರೆ ಮಂಗಳೂರು ನಗರ ಬಸ್ ನಿಲ್ದಾಣವನ್ನು ಜಿಲ್ಲಾ ಆಡಳಿತವು 6 ಕಿ.ಮೀ. ದೂರದಲ್ಲಿ ನಗರದಿಂದ ಹೊರಗಡೆ

ಸ್ಥಾಪನೆ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾ ಇದೆ. ಆದರೆ ಅದಕ್ಕೆ ಉತ್ತರ ಮಂಗಳೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ 2 ಕಿ.ಮೀ. ಒಳಗೆ ಇದೆ ಎಂದು. ಇದು ಪೂರ್ತಿ ಸುಳ್ಳು ಅಥವಾ ಸತ್ಯಕ್ಕೆ ದೂರವಾದದ್ದು. ಮಂಗಳೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಇರುವುದೇ ಮಂಗಳೂರು ನಗರದಿಂದ ಸುಮಾರು 4 ಕಿ.ಮೀ. ಹೊರಗಡೆ. ಅಲ್ಲಿಂದ ಪುನಃ 2 ಕಿ.ಮೀ. ಎಂದರೆ 6 ಕಿ.ಮೀ. ಎಂದು ತಮ್ಮ ಉತ್ತರದಲ್ಲಿ ಬರುತ್ತಾ ಇದೆ. ನಾನು ಏನು ಹೇಳುತ್ತಿದ್ದೇನೆಂದರೆ ಮಂಗಳೂರಿನಲ್ಲಿ ಯಾವುದೇ ಸರ್ವೀಸ್ ಬಸ್ ನಿಲ್ದಾಣ ಆಗಬೇಕಾದದ್ದು, ಜನರ ಹಿತಕ್ಕೋಸ್ಕರ, ಮಂಗಳೂರು ಜಿಲ್ಲಾಧಿಕಾರಿ ಕಚೇರಿ, ತಾಲ್ಲೂಕು ಕಚೇರಿ, ಜಿಲ್ಲಾ ಪರಿಷತ್‌ನ ಕಾರ್ಯಾಲಯ, ನ್ಯಾಯಾಲಯ ಇವೆಲ್ಲಾ ಮಂಗಳೂರಿನ ಹೃದಯ ಭಾಗದಲ್ಲಿರುವ ಹಂಪನಕಟ್ಟೆ ಬಸ್ ನಿಲ್ದಾಣದ ಹತ್ತಿರದಲ್ಲೇ ಇದೆ. ಶ್ರೀ ಸಾಮಾನ್ಯ ಗ್ರಾಮಾಂತರ ಪ್ರದೇಶದಿಂದ ಬರುವಾಗ 6 ಕಿ.ಮೀ. ದೂರದಲ್ಲಿ ಇಳಿದುಕೊಂಡು ಪುನಃ ಮಂಗಳೂರಿಗೆ ಬರಬೇಕಾದರೆ ಬೇರೆ ಬಸ್ಸಿನ ವ್ಯವಸ್ಥೆ ಆಗಬೇಕಾಗಿದೆ. ಇನ್ನೊಂದು ಕಡೆ ಉತ್ತರದಲ್ಲಿ ಹೇಳುತ್ತಿದ್ದೀರಿ ಅದು ಸರಿಯಾದ ಕಡೆಯಲ್ಲಿ ಜಾಗ ಸಿಗಲಿಲ್ಲವೆಂದು. ಜಿಲ್ಲಾಧಿಕಾರಿಗಳು ನಾವು ಒಂದು ಸಲ ಕುಳಿತು ಮಾತನಾಡುವಾಗ, ಪಂಪಳ್ಳಿ ಮತ್ತು ಬೇರೆ ಹತ್ತಿರದ ಪ್ರದೇಶಗಳಲ್ಲಿ ನಾವು ಅವರಿಗೆ ಜಾಗವನ್ನು ತೋರಿಸಿದ್ದೇವೆ. ಮಂಗಳದೇವಿ ದೇವಸ್ಥಾನದ ಹತ್ತಿರ ಮತ್ತು ಬೇರೆ ಸರ್ಕಾರಿ ಜಾಗವಿದೆ ಎಂದು ಹೇಳಿದ್ದೇವೆ. ಅದೆಲ್ಲವೂ ಕೇಳಲಿಲ್ಲ, ಆದ್ದರಿಂದ ಈ ತರಹ ಇದ್ದರೆ ಇದರಲ್ಲಿ ಜನರಿಗೆ ತೊಂದರೆಯಾಗುತ್ತದೆ. ತಾವು ಈ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳುತ್ತಿದ್ದೇನೆ. ಇದು ಜನರಿಗೋಸ್ಕರ ಬಸ್ ನಿಲ್ದಾಣ. ಇದು ಸರ್ಕಾರಕ್ಕೋಸ್ಕರ ಖಂಡಿತಾ ಅಲ್ಲ. ಜನರ ಸಮಸ್ಯೆಗಳನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ನಮ್ಮ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಲಿ ತಾವು ಆಗಲಿ ವಿಚಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಜಯರಾಮ ಶೆಟ್ಟರೆ, ಈಗ ನಾವು ಭೇಟಿಯಾಗಿ ಬಹಳ ದಿವಸವಾಗಿದೆ. ಆದ್ದರಿಂದ ನೀವೆಲ್ಲ ಅಭ್ಯಾಸಗಳನ್ನು ಮರೆತು ಬಿಟ್ಟಿದ್ದೀರಿ. ನಾನು ಏನು ಹೇಳುತ್ತೇನೆಂದರೆ ನೀವು ಎಲ್ಲ ಹೊಸಬರು, ನಿಮಗೆಲ್ಲ ಸಹಕಾರ ಕೊಡಬೇಕೆಂದು ನನ್ನ ಉದ್ದೇಶ. ಅವರು ಏನು ಉತ್ತರ ಕೊಟ್ಟಿದ್ದಾರೆ, ಅದರಲ್ಲಿ ಏನು ನ್ಯೂನತೆಗಳಿವೆ, ಈ ಪೋರ್ಶನ್‌ನಲ್ಲಿ ನೀವು ಕೊಟ್ಟಿರತಕ್ಕಂಥ ಉತ್ತರ ಸಮಂಜಸವಾಗಿಲ್ಲ, ಅಸಂಬಂಧವಾಗಿದೆ, ಇದು ಸಮಸ್ಯೆ ಎಂದು, ಅಷ್ಟು ಸಂಕ್ಷಿಪ್ತವಾಗಿ ಹೇಳಿದರೆ ಅದಕ್ಕೆ ಅವರು ಉತ್ತರ ಕೊಡುತ್ತಾರೆ. ನೀವು ಭಾಷಣ ಮಾಡಿದರೆ ಅವರಿಗೆ ಮೊದಲೇ ಭಾಷೆ ಅರ್ಥವಾಗುವುದಿಲ್ಲ. ಸಮಸ್ಯೆ ಆಗುತ್ತದೆ. ಇದರಿಂದ ನನಗೆ ಕಷ್ಟವಾಗುತ್ತದೆ.

ಶ್ರೀ ಕೆ. ಜಯರಾಮ ಶೆಟ್ಟಿ : ಅಧ್ಯಕ್ಷರೆ, 2 ವಿಚಾರ, ಈಗ ಏನು ಉತ್ತರ ಕೊಟ್ಟಿದ್ದಾರೆ 2 ಕಿ.ಮೀ. ಎನ್ನುವುದು ಅದು ಸತ್ಯಕ್ಕೆ ದೂರವಾದುದು. ಇವರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ 2 ಕಿ.ಮೀ. ಎಂದರೆ ಅದು ಮಂಗಳೂರಿನಿಂದ 6 ಕಿ.ಮೀ. ದೂರವಾಗುತ್ತದೆ. ಎರಡನೆಯದು ನಮಗೆ ಪರ್ಯಾಯ ವ್ಯವಸ್ಥೆಯಾಗಿ ಬಸ್ ನಿಲ್ದಾಣವನ್ನು ರಚಿಸಿ ಅಭಿವೃದ್ಧಿ ಪಡಿಸಲಾಗದೆ ಎಂದು ತಿಳಿದುಕೊಂಡಿದ್ದಾರೆ. ಕಂಕನಾಡಿ, ಕದ್ರಿ, ಮಲ್ಲಿಕಟ್ಟೆ ಮತ್ತು ಕೊಟ್ಟಾರ ಎಂದು. ನಾವು ಕೇಳುವುದು ನಮ್ಮ ಇಡೀ ಜಿಲ್ಲೆಗೆ ಒಂದು ಸರ್ವೀಸ್ ನಿಲ್ದಾಣ ಬೇಕು. 2-3 ಸರ್ವೀಸ್ ನಿಲ್ದಾಣವಲ್ಲ. ಆದ್ದರಿಂದ ದಯವಿಟ್ಟು ಒಂದು ಕಡೆ ವಿಶಾಲವಾದಂಥ ಜಾಗದಲ್ಲಿ 2 ಕಿ.ಮೀ. ಒಳಗಡೆಯೇ ವಿಶಾಲವಾದಂಥ ಬಸ್ ನಿಲ್ದಾಣವನ್ನು ರಚನೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಸಭಾಪತಿಗಳೇ, ಅದು 6 ಕಿ.ಮೀ.ಗಿಂತ ಕಡಿಮೆ ಇದೆ ಎನ್ನುವ ರಿಪೋರ್ಟ್ ಇದೆ. ಆದರೂ ಸಹ ನಾವು ಪರಿಶೀಲಿಸಿ ಅಲ್ಲಿ ಸರ್ಕಾರಿ ಜಾಗ ಸಿಕ್ಕುತ್ತದೆ ಎಂದರೆ ಅವರ ಸಲಹೆ ಪ್ರಕಾರ ಅಂತಹ ಕಡೆ ನಾವು ಬೇರೆ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಕೂಡ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಜಯರಾಮ ಶೆಟ್ಟಿ : ಅಧ್ಯಕ್ಷರೆ, ಬಹಳ ಪ್ರಾಮುಖ್ಯವಾದ ಪ್ರಶ್ನೆ. ಈಗ ಹಳೆಯ ಬಸ್ ನಿಲ್ದಾಣವನ್ನು ಪೂರ್ತಿಯಾಗಿ ಬಂದ್ ಮಾಡಲಾಗಿದೆ. ಹೊಸದಾಗಿ ಮಾರ್ಕೆಟ್ ಪರಿಸರದಲ್ಲಿ ಸರ್ವೀಸ್ ಬಸ್ ನಿಲ್ದಾಣಕ್ಕೆ ವ್ಯವಸ್ಥೆ ಮಾಡಿದೆ. ಅಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲ, ಅಥವಾ ಇನ್ನಾವುದೇ ಬೇರೆ ವ್ಯವಸ್ಥೆ ಇಲ್ಲ. ಹೊಸ ಬಸ್ ನಿಲ್ದಾಣ ಆಗುವವರೆಗೆ ಹಳೆಯ ಬಸ್ ನಿಲ್ದಾಣದಲ್ಲಿಯೇ ವ್ಯವಸ್ಥೆ ಮಾಡಿಕೊಳ್ಳಬಹುದಲ್ಲವೇ?

ಶ್ರೀ ವೈಜನಾಥ ಪಾಟೀಲ್ : ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್ : ಸಭಾಧ್ಯಕ್ಷರೆ, ಮಂಗಳೂರಿನಲ್ಲಿ ಬಸ್ ನಿಲ್ದಾಣದ ಸಮಸ್ಯೆ ಇವತ್ತು ನಿನ್ನೆಯದಲ್ಲ. ಸಾಧಾರಣ ವರ್ಷವಾಗುತ್ತಾ ಬಂತು. ಯಾವುದೇ ನಿಲುಗಡೆಗೆ ಈ ವಿಷಯದಲ್ಲಿ ಬರುವುದಕ್ಕೆ ಆಗಲಿಲ್ಲ. ಈಗ ಮಾನ್ಯ ಮಂತ್ರಿಗಳು ಕೇಳುತ್ತಿರುವ ಉತ್ತರದಿಂದ ಯಾವ ಬಸ್ ನಿಲ್ದಾಣದಲ್ಲಿ ಈಗ ಬದಲಾವಣೆ ಆಗಿದೆಯೋ ಅಲ್ಲಿಂದ ಬದಲಾಗಿ ಹೋಗುತ್ತದೆ ಎನ್ನುವ ಭರವಸೆಯೂ ಬರುವುದಿಲ್ಲ. ಉಸ್ತುವಾರಿ ಸಚಿವರು, ನಾವು ಶಾಸಕರೆಲ್ಲ ಸೇರಿ ಒಂದು ಸಭೆ ನಡೆದಾಗ ಮಂಗಳೂರು ಕದ್ರಿ ಪಾರ್ಕಿನ ಹತ್ತಿರ ತೋಟಗಾರಿಕೆ ಇಲಾಖೆಗೆ ಸೇರಿದ ಎರಡು ಮುಕ್ಕಾಲು ಎಕರೆ ಜಾಗ ಇದೆ, ಅಲ್ಲಿಗೆ ಬಸ್ ನಿಲ್ದಾಣವನ್ನು ಶಿಫ್ಟ್ ಮಾಡಿದರೆ ಎಲ್ಲಾ ಹೆದ್ದಾರಿಗಳ ಕನೆಕ್ಷನ್ ಅಲ್ಲಿಗೆ ಬರುತ್ತದೆ, ಮತ್ತು ನಗರಕ್ಕೆ ದೂರ ಆಗುವುದಿಲ್ಲ. ಊರಿನ ಹೊರಗೆ ಬಸ್ ನಿಲ್ದಾಣ ಇದ್ದ ಹಾಗೆ ಆಗುತ್ತದೆ. ಈ 5 ಕಿ.ಮೀ. 3 ಕಿ.ಮೀ. ಎಂಬ ಸಮಸ್ಯೆ ಬರುವುದಿಲ್ಲ ಎಂಬ ಮಾತುಕತೆ ಆಗಿತ್ತು. ಆದರೆ ಅದು ಇಲ್ಲಿಯವರೆಗೆ ಬಂತು? ಮೊನ್ನೆ ಉಸ್ತುವಾರಿ ಸಚಿವರನ್ನು ಕೇಳಿದಾಗ ಆ ವಿಷಯದಲ್ಲಿ ಯೋಚನೆ ಮಾಡಿದೆ, ತೋಟಗಾರಿಕೆ ಸಚಿವರನ್ನು ಕೇಳಿದ್ದೇನೆಂದು ಹೇಳಿದರು. ಉತ್ತರ ಬಂದಿಲ್ಲ.

ಶ್ರೀ ಎನ್. ಯೋಗೇಶ್ ಭಟ್ : ಮಾನ್ಯ ಅಧ್ಯಕ್ಷರೆ, ಮಂಗಳೂರು ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ನನ್ನ ಒಂದು ಸಲಹೆ. ನಾನು ಇಷ್ಟೆ ಸನ್ಮಾನ್ಯ ಸಚಿವರಲ್ಲಿ ವಿನಂತಿಸುವುದು.

ಅಧ್ಯಕ್ಷರು : ಅವರು ಪರಿಶೀಲನೆ ಮಾಡುತ್ತಿದ್ದಾರೆ. ಮತ್ತೆ ಏನು ಕೇಳುತ್ತೀರಿ? ಈ ಪರಿಶೀಲನೆ ಎನ್ನುವ ಪದ ಇದೆಯಲ್ಲ ಇದು ಅನಂತ. ಅನಂತಕ್ಕೆ ಉತ್ತರ ಗೊತ್ತಿದೆಯಲ್ಲಾ ನಿಮಗೆ. ನಿಮಗೆ ಗೊತ್ತಿಲ್ಲದೆ ಹೋದರೆ ಇನ್ನಾರಿಗೆ ಗೊತ್ತಾಗಬೇಕು.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಪರಿಶೀಲನೆ ಚೌಕಟ್ಟಿನೊಳಗೆ ಇದನ್ನು ತಿಳಿಸಬೇಕೆಂದು ನನ್ನ ಉದ್ದೇಶ. ಜಿಲ್ಲಾ ಕೇಂದ್ರಕ್ಕೆ ಸಂಬಂಧಪಟ್ಟ ಬಸ್ ನಿಲ್ದಾಣವಾದ್ದರಿಂದ ಜಿಲ್ಲೆಯ ಎಲ್ಲಾ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕೈಗೊಳ್ಳಬೇಕು.

ಶ್ರೀ ಎಂ. ಶ್ರೀನಿವಾಸ : ಉತ್ತರಕ್ಕೆ ಏಕೆ ಕಾಯಬೇಕು. ನೇರವಾಗಿ ಹೇಳಬಹುದಲ್ಲ ನಿಮ್ಮ ಅಧಿಕಾರಿಗಳ ಕೈಯಲ್ಲಿ ಫೈಲ್ ತರಿಸುತ್ತೀರಿ, ನೀವು ನೋಡುತ್ತೀರಿ. ಆಗುತ್ತದೆ ಅಥವಾ ಇಲ್ಲಾ ಎಂದು ನೇರವಾಗಿ ಹೇಳಬಹುದಲ್ಲವೇ?

10.30 ಎ.ಎಂ.

ಶ್ರೀ ವೈಜನಾಥ ಪಾಟೀಲ್ : ಅಲ್ಲಿ ಯೋಗ್ಯವಾದಂಥ ಸ್ಥಳ ಸಿಕ್ಕರೆ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ವಿದ್ಯಾರ್ಥಿನಿಲಯಗಳಿಗೆ ಕಟ್ಟಡಗಳು

173 - ಶ್ರೀ ಕೆ. ಪ್ರತಾಪ್ ಶೆಟ್ಟಿ (ಕುಂದಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಂತ ಕಟ್ಟಡ ಇಲ್ಲದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿ, ವಿದ್ಯಾರ್ಥಿನಿಲಯಗಳು ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಆ) ಇದನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 15 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿದ್ದು, ಅವುಗಳಲ್ಲಿ ಈ ಕೆಳಕಂಡ 4 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡ ಹೊಂದಿರುವುದಿಲ್ಲ.

1)	ಬಾಲಕಿಯರ ವಿದ್ಯಾರ್ಥಿನಿಲಯ ಕುರಾಡಿ, ಉಡುಪಿ ತಾಲ್ಲೂಕು	1
2)	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಸೂಳ್ಯ	1
3)	ಪರಿಶಿಷ್ಟ ವರ್ಗದ ಬಾಲಕರ ವಿದ್ಯಾರ್ಥಿನಿಲಯ, ಬೆಳ್ತಂಗಡಿ	1
4)	ಬಾಲಕಿಯರ ವಿದ್ಯಾರ್ಥಿನಿಲಯ ಮೂಡಬಿದರೆ, ಕಾರ್ಕಳ ತಾ:	1

ಆ) ಕುರಾಡಿ, ಮೂಡಬಿದಿರೆ, ಬೆಳ್ತಂಗಡಿಗಳಲ್ಲಿರುವ ವಿದ್ಯಾರ್ಥಿನಿಲಯಗಳ ಕಾಮಗಾರಿಗೆ ಸೂಕ್ತ ನಿವೇಶನ ಇಲ್ಲದ ಪ್ರಯುಕ್ತ ಕಟ್ಟಡದ ಕಾಮಗಾರಿಯನ್ನು ಇಲ್ಲದ ಪ್ರಯುಕ್ತ ಕಟ್ಟಡದ ಕಾಮಗಾರಿಯನ್ನು ತೆಗೆದುಕೊಂಡಿರುವುದಿಲ್ಲ. ಸೂಕ್ತ ನಿವೇಶನ ದೊರೆತ ತಕ್ಷಣ ಕಟ್ಟಡದ ಕಾರ್ಯವನ್ನು ಪ್ರಾರಂಭಿಸಲಾಗುವುದು. ಸೂಳ್ಯದ ವಿದ್ಯಾರ್ಥಿನಿಲಯದ ಕಟ್ಟಡದ ಕಾಮಗಾರಿಗೆ ಸಾಕಷ್ಟು ಹಣ ಲಭ್ಯವಿದ್ದು, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನವರು ಅಂದಾಜು ವೆಚ್ಚ ಮತ್ತು ನಕ್ಷೆಯನ್ನು ತಯಾರಿಸಿದ ತಕ್ಷಣ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟ ಉತ್ತರದಲ್ಲಿ ನಿವೇಶನ ಸಿಗಲಿಲ್ಲವಾದ ಕಾರಣ ಹಾಸ್ಟೆಲ್ ಕಟ್ಟಡವನ್ನು ಕಟ್ಟಲು ಆಗಲಿಲ್ಲ ಎಂದು ಹೇಳಿದ್ದಾರೆ. ಬಹುಶಃ ತಾಲ್ಲೂಕು ಕೇಂದ್ರಗಳಲ್ಲಿ ಒಂದು ಹಾಸ್ಟೆಲ್‌ಗೆ ನಿವೇಶನ ಸಿಗುವುದಿಲ್ಲವೆಂದಾದರೆ ಆ ಬಗ್ಗೆ ತಾವು ಒಂದು ವಿಚಾರ ಮಾಡಬೇಕಾಗುತ್ತದೆ. ಇವೊತ್ತು 300 ದಿವಸಗಳೂ ತೆರೆದಿರತಕ್ಕಂಥ ಹಾಸ್ಟೆಲ್‌ಗಳಿಗೆ ನಿವೇಶನ ಇಲ್ಲ, ಹಣ ಇಲ್ಲ, ಆದರೆ 30 ದಿವಸಗಳು ಮಾತ್ರ ತೆರೆದಿರತಕ್ಕಂಥ ಸಮಾಜ ಮಂದಿರಗಳನ್ನು ನಾವು ಬೇಕಾಬಿಟ್ಟಿ ಕಟ್ಟುತ್ತಾ ಇದ್ದೇವೆ. ಅದಕ್ಕೆ ಬೇಕಾಗುವ ನಿವೇಶನಗಳು ಸಿಗುತ್ತವೆ ಅದಕ್ಕೆ ದಾಖಲಾತಿಗಳು ಕೂಡ ಬೇಕಾಗಿಲ್ಲ. ಆದ್ದರಿಂದ ಈ ಬಗ್ಗೆ ಯಾಕೆ ತಾವುಗಳು ಮೀನಮೇಷ ಮಾಡುತ್ತಿದ್ದೀರಿ? ಇವೊತ್ತು ಆಶ್ರಮ ಶಾಲೆಗಳು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಇಲಾಖೆಗೆ ಬರುತ್ತದೆ. ಆ ಶಾಲೆಗಳನ್ನು ಮೂರು ವರ್ಷಗಳಿಂದ ಅಲ್ಲಿಯ ಒಂದು ಕ್ವಾಟರ್ಸ್‌ನಲ್ಲಿ ನಡೆಸುತ್ತಾ ಇದ್ದೇವೆ. ಇದರ ಬಗ್ಗೆ ತಾವುಗಳು ಸರಿಯಾದ

ರಿಪೋರ್ಟ್‌ನ್ನು ತರಿಸಿಲ್ಲವೆ? ಹೀಗಾಗಲು ಕಾರಣವಾದರೂ ಏನು? ಈಗ ಪುನಃ ಆ ಬಗ್ಗೆ ಚರ್ಚೆ ಮಾಡುವ ಸಮಸ್ಯೆಯಾದರೂ ಏನಿದೆ?

ಶ್ರೀ ರಮೇಶ್ ಸಿ. ಜಗಜೀವಣಗಿ : ಮಾನ್ಯ ಅಧ್ಯಕ್ಷರೇ, ಹಾಸ್ಟೆಲ್‌ಗಳಿಗೆ ಎಲ್ಲೆಲ್ಲಿ ನಿವೇಶನಗಳು ಸಿಗುತ್ತವೋ ಅಲ್ಲೆಲ್ಲಾ ಕಟ್ಟಡಗಳನ್ನು ಕಟ್ಟಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಎಲ್ಲಾ ಹಾಸ್ಟೆಲ್‌ಗಳನ್ನು ಕಟ್ಟಿಸಿ ನಾಲ್ಕು ಮಾತ್ರ ಬಾಕಿ ಇವೆ. ಈ ಬಗ್ಗೆ ನಿವೇಶನಗಳು ಸಿಕ್ಕಿಲ್ಲವೆಂದು ನಾನು ಹೇಳಿದ್ದೇನೆ. ಅಲ್ಲಿರತಕ್ಕಂಥ ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ಗಳಿಗೆ ಸಂಪರ್ಕ ಮಾಡಿದ್ದೇವೆ. ಮಾನ್ಯ ಸದಸ್ಯರು ನಮ್ಮೊಂದಿಗೆ ಸಹಕಾರ ಮಾಡಬೇಕು. ಅವರು ಅಲ್ಲಿ ಒಂದು ನಿವೇಶನವನ್ನು ಎಲ್ಲಿ ಕೊಡಿಸುತ್ತಾರೋ ಅಲ್ಲಿ ನಾಳೆಯೇ ತತ್‌ಕ್ಷಣವೇ ಕಟ್ಟಡವನ್ನು ಕಟ್ಟಿಸಲು ನಾನು ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, 1991ರಲ್ಲಿ ಒಂದು ಕಟ್ಟಡವನ್ನು ಇನಾಗ್ಯುರೇಶನ್ ಕೂಡ ಮಾಡಿ ಆಗಿದೆ. ಅದನ್ನು ಪರಿಶಿಷ್ಟ ವರ್ಗ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೋಸ್ಕರ ಕಟ್ಟಿರತಕ್ಕಂಥ ಕಟ್ಟಡ ಅದು. ಆದರೆ ಅದು ಯಾರೂ ಕೂಡ ವಾಸಿಸಲು ಅಯೋಗ್ಯವಾದಂಥ ಕಟ್ಟಡವಾಗಿದೆ. ಮಾನ್ಯ ಸಚಿವರು ಮಂಗಳೂರಿಗೆ ಬಂದಾಗ ಅವರ ಗಮನಕ್ಕೆ ಕೂಡ ತಂದಿದ್ದೇನೆ. ಒಂದು ವರ್ಷವಾದರೂ ಕೂಡ ಆ ಕಟ್ಟಡದ ಅವ್ಯವಸ್ಥೆಯು ಸುಧಾರಿಸದೆ ಅತಂತ್ರ ಸ್ಥಿತಿಯಲ್ಲಿದೆ. ಮಂಗಳೂರಿನ ಉರ್ವ ಮಾರ್ಕೆಟ್ಟಿನ ಹತ್ತಿರ ಇರುವ ಈ ವಿದ್ಯಾರ್ಥಿನಿಲಯವನ್ನು ಸುವ್ಯವಸ್ಥೆಗೊಳಿಸಿ ವಾಸಯೋಗ್ಯವನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವುದರಲ್ಲಿ ಸತ್ಯಾಂಶ ಇದೆ. ನಾನೂ ಕೂಡ ಆ ಹಾಸ್ಟೆಲ್‌ಗೆ ಭೇಟಿ ಕೊಟ್ಟಿದ್ದೇನೆ. ಅದು ಹೊಸ ಹಾಸ್ಟೆಲ್ ಆಗಿದ್ದರೂ ಕೂಡ ಅಲ್ಲಿ ಮಕ್ಕಳು ವಾಸಿಸಲಾರದಂಥ ಸ್ಥಿತಿಯಲ್ಲಿದೆ. ಅದು ಬಹಳ ಹಿಂದೆ ಕಟ್ಟಿರತಕ್ಕಂಥ ಕಟ್ಟಡ. ಅದರ ಬಗ್ಗೆ ಸಂಪೂರ್ಣವಾದ ವಿಚಾರಣೆ ಮಾಡಿ ಒಂದು ವರದಿಯನ್ನು ಸಲ್ಲಿಸಲು ಹೇಳಿದ್ದೇನೆ. ಅದನ್ನು ಸುವ್ಯವಸ್ಥೆಗೊಳಿಸಲು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಹಾಸ್ಟೆಲ್ ಕಟ್ಟಡಕ್ಕೆ ನಿವೇಶನ ಇಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ನಿವೇಶನವನ್ನು ಹುಡುಕುವುದು ಯಾರು? ನೀವು ಯಾರಿಗೆ ಬರೆಯುತ್ತೀರಿ? ನೀವು ಕಂದಾಯ ಇಲಾಖೆಗೆ ಬರೆಯುತ್ತೀರಿ. ಅವರು 2-3 ವರ್ಷ ಬಿಟ್ಟು ನಿವೇಶನ ಕೊಡಬಹುದು. ನೀವು ವಿಶೇಷವಾಗಿ ಹಾಸ್ಟೆಲ್‌ಗಳಿಗೆ ನಿವೇಶನವನ್ನು ಹುಡುಕತಕ್ಕಂಥ ಪ್ರಯತ್ನಗಳನ್ನೇನಾದರೂ ಮಾಡುತ್ತಾ ಇದ್ದೀರಾ? ಆ ಕುರಿತು ತಮ್ಮ ವ್ಯವಸ್ಥೆಗಳು ಹೇಗೆ? ಈಗ ಸಿಂಗಲ್ ವಿಂಡೊ ಏಜನ್ಸಿ ವ್ಯವಸ್ಥೆ ಇದೆ. ಅದರ ಮುಖಾಂತರ ಎಲ್ಲಾ ಅಧಿಕಾರಿಗಳು ಸೇರಿ ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಲು ಇಂತಿಷ್ಟು ಸಮಯದಲ್ಲಿ ನೀವು ಹುಡುಕಿಕೊಡಬೇಕು, ಜನಪ್ರತಿನಿಧಿಗಳನ್ನು ಆ ಕುರಿತು ಇನ್‌ವಾಲ್ವ್ ಮಾಡಿಕೊಂಡು ಮಾಡಿ ಎಂಬ ವ್ಯವಸ್ಥೆಯನ್ನೇನಾದರೂ ಮಾಡಿದ್ದೀರೋ?

ಅಧ್ಯಕ್ಷರು : ಮಾನ್ಯ ಸದಸ್ಯರು ಒಂದು ವರ್ಷದಲ್ಲಿ ದ.ಕ. ಜಿಲ್ಲೆಗೆ ಎಷ್ಟು ಸಾರಿ ಹೋಗಿದ್ದೀರಿ? ನೀವುಗಳೆಲ್ಲರೂ ನಿಮ್ಮ ಕ್ಷೇತ್ರದ ಕಡೆಗೆ ಇರುತ್ತೀರಿ. ರಾಜ್ಯದ ಕಡೆಗಳಿಗೆಲ್ಲಾ ನೋಡುವುದಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ದ.ಕ. ಜಿಲ್ಲೆಗೆ ನಾನು ಒಂದು ವರ್ಷದಲ್ಲಿ ಎರಡು ಸಲ ಹೋಗಿದ್ದೇನೆ. ಅಲ್ಲಿನ ವ್ಯವಸ್ಥೆಗಳನ್ನು ನೋಡಿದ್ದೇನೆ.

ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಏನು ಹೇಳುತ್ತಿದ್ದಾರೆ ಆ ಬಗ್ಗೆ ಅವರೂ ಕೂಡ ಸಹಕಾರ ಮಾಡಬೇಕೆಂದು ಮನವಿ ಮಾಡಿಕೊಂಡಿದ್ದೇನೆ. ಬೇಗ ನಿವೇಶನ ದೊರಕಿಸಿಕೊಡಲು ಯತ್ನಿಸಲಿ. ನಾಳೆಯೇ ನಾನು ಅಲ್ಲಿನ ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ಗೆ ಸಂಪರ್ಕ ಮಾಡಿ ಕೂಡಲೇ ನಿವೇಶನ ಒದಗಿಸಿಕೊಳ್ಳುವ ಕೆಲಸವನ್ನು ಮಾಡುತ್ತೇನೆ.

ಅಧ್ಯಕ್ಷರು : ಸ್ಥಳೀಯವಾಗಿ ಶಾಸಕರುಗಳಿಗೆ ವರ್ಚಸ್ಸು ಇರುತ್ತದೆ. ಹಾಗಾಗಿ ಅಲ್ಲಿ ಅವರು ತಮ್ಮ ಪ್ರಭಾವವನ್ನು ಬೀರಿದರೆ ಬೇಗನೆ ಅಥವಾ ಒಳ್ಳೆಯ ನಿವೇಶನ ಸಿಗುತ್ತದೆಯಾದ ಕಾರಣ ಸಚಿವರು ತಮ್ಮ ಅಭಿಪ್ರಾಯವನ್ನು ಹೇಳಿ ಮನವಿ ಮಾಡಿಕೊಂಡಿದ್ದಾರೆ. ಸರಕಾರವೇ ತನ್ನ ಅಧಿಕಾರಿಗಳ ಮುಖಾಂತರ ಆ ಕೆಲಸವನ್ನು ಹೇಳಿ ಮನವಿ ಮಾಡಿಕೊಂಡು ಮಾಡತಕ್ಕಂಥಾದ್ದು ಕೂಡ ಮುಖ್ಯ ಎಂಬ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ಒಂದು ವಿಚಾರ ತರಬಯಸುವುದೇನೆಂದರೆ, ಆ ಹಾಸ್ಟೆಲ್‌ಗಳನ್ನು ಕಟ್ಟುತ್ತಾ ಇರುವುದಕ್ಕೆ ಸಮಯವನ್ನು ಕೂಡ ನಿಗದಿಪಡಿಸಬೇಕು. ಈಗ ಹಂತ ಹಂತವಾಗಿ ಹಾಸ್ಟೆಲ್‌ಗಳು ಪ್ರಾರಂಭವಾಗುತ್ತಾ ಇವೆ. ಅವುಗಳನ್ನು ಮುಗಿಸುವಾಗ ಕನಿಷ್ಟ ಪಕ್ಷ 5-6 ವರ್ಷಗಳು ಆಗುತ್ತವೆ. ಹಾಗಾಗಿ ಮೊದಲು ಮಾಡಿರತಕ್ಕಂಥ ಎಸ್ಟಿಮೇಟ್ ವಗೈರೆ ಜಾಸ್ತಿಯಾಗುತ್ತದೆ. ಆಗ ಮತ್ತು ಮರುಪರಿಶೀಲನೆ ಇತ್ಯಾದಿಗಳಿಗೆಂದು ಮೂರು ವರ್ಷಗಳನ್ನು ಕಳೆಯುತ್ತಾರೆ. ಆದರಿಂದ ಈ ಬಗ್ಗೆ ಒಂದು ನಿರ್ಧಿಷ್ಟ ಕ್ರಮವನ್ನು ತೆಗೆದುಕೊಳ್ಳಬೇಕು. ಇದು ದಲಿತರಿಗಾಗಿ ಮಾಡುವ ಕೆಲಸವಾಗಿದೆ.

ಅಧ್ಯಕ್ಷರು : ಬೇರೆ ಕಡೆಗೆ ಏಕೆ? ನಮ್ಮ ಶಾಸಕರ ಭವನದ ಸ್ಥಿತಿಗತಿಗಳನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ಹೀಗೆ ವಿಳಂಬವನ್ನು ಮಾಡುವುದರಿಂದ ಯಾವುದೇ ಉಪಯೋಗ ಆಗುತ್ತಾ ಇಲ್ಲ, ಯಾವ ಉದ್ದೇಶಕ್ಕಾಗಿ ಈ ಕೆಲಸಗಳನ್ನು ಕೈಗೊಂಡಿದ್ದೀರಿ ಅಂಥವರಿಗೆ ವಸತಿ ಸಿಗುತ್ತಾ ಇಲ್ಲ. ಕಟ್ಟಡಗಳ ಕೆಲಸವು ಪೂರ್ತಿಯಾಗುತ್ತಾ ಇಲ್ಲ. ಒಂದು ವರ್ಷದಲ್ಲಿ ಮಾಡತಕ್ಕಂಥ ಕೆಲಸಗಳಿಗೆ 8-10 ವರ್ಷಗಳಷ್ಟು ತೆಗೆದುಕೊಂಡರೆ ಅದಕ್ಕೆ ಹೆಚ್ಚುವರಿ ಖರ್ಚು ಎಷ್ಟು ಬರುತ್ತದೆ ಎಂಬುದನ್ನು ನೋಡಬೇಕು. ಆದ್ದರಿಂದ ಹಾಸ್ಟೆಲ್ ಕಟ್ಟಡಗಳನ್ನು ಕಟ್ಟುವ ವಿಚಾರದಲ್ಲಿ ಸಮಯ ನಿಗದಿಪಡಿಸಬೇಕು.

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಪ್ರದೇಶದಲ್ಲಿ ಶೌಚಾಲಯ

121 - ಶ್ರೀ ಅಶೋಕ್ ಎಸ್. ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಪ್ರದೇಶದಲ್ಲಿ ಸಾರ್ವಜನಿಕ ಶೌಚಾಲಯ ಹಾಗೂ ಮೂತ್ರಾಲಯಗಳೆಷ್ಟು?

ಆ) 1995-96ರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಸಾರ್ವಜನಿಕ ಶೌಚಾಲಯ 223 ಬ್ಲಾಕ್, 1,494 ಸೀಟುಗಳು. ಸಾರ್ವಜನಿಕ ಮೂತ್ರಾಲಯ 98 ಬ್ಲಾಕ್ 358 ಸೀಟುಗಳು.

ಆ) ಜನವರಿ 96ರ ವರೆಗೆ ರೂ. 1,93,052.

ಶ್ರೀ ಅಶೋಕ ಎಸ್. ಕಾಟವೆ : ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಪೂರಕವಾಗಿ ಬೆಂಗಳೂರು ಮತ್ತು ಮೈಸೂರು ನಗರಗಳಿದ್ದ ಹಾಗೆ ಹುಬ್ಬಳ್ಳಿ-ಧಾರವಾಡ ಮಹಾನಗರಗಳಲ್ಲಿ ಸುಲಭ ಶೌಚಾಲಯಗಳನ್ನು ಕಟ್ಟುವ ವಿಚಾರ ಸರಕಾರಕ್ಕೆ ಇದೆಯೇ?

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಸಭಾಪತಿಯವರೇ, ಅಲ್ಲಿ ಶೌಚಾಲಯಗಳ ಅವಶ್ಯಕತೆ ಇದ್ದು ಈಗಾಗಲೇ ಸೂಕ್ತ ಪ್ರಮಾಣದಲ್ಲಿ ಶೌಚಾಲಯಗಳನ್ನು ಕಟ್ಟಿದ್ದೇವೆ. ಇನ್ನೂ ಅವಶ್ಯಕತೆ ಇದ್ದಲ್ಲಿ ಅದರ ಬಗ್ಗೆ ಸೂಕ್ತ ಕ್ರಮ ಜರುಗಿಸುವ ಬಗ್ಗೆ ವಿಚಾರ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳಾದ ಡಾ|| ಚಿತ್ರರಂಜನ್ ಮತ್ತು ಮಾನ್ಯ ವಸಂತ ವಿ. ಸಾಲ್ಯಾನ್‌ರವರುಗಳ ಪ್ರಶ್ನೆಗೆ ಉತ್ತರಿಸಲು ಸರಕಾರದವರು ಸಮಯವನ್ನು ಕೇಳಿದ್ದಾರೆ.

ಡಾ|| ಯು. ಚಿತ್ತರಂಜನ್ : ಕೈಗಾರಿಕೆಗಳ ಬಗ್ಗೆ ನಾನು ಬಹಳ ಸಿಂಪಲ್ ಕ್ವಶ್ಚನ್‌ನ್ನು ಕೇಳಿದ್ದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇಷ್ಟು ದಿವಸಗಳ ನಂತರ ನಾವು ಸದನದಲ್ಲಿ ಸೇರಿದ್ದೇವೆ. ಕಲಾಪಗಳನ್ನು 29ನೇ ತಾರೀಖಿಗೆ ಮುಗಿಸಿ ವಾಪಸ್ ಹೋಗುತ್ತಾ ಇದ್ದೇವೆ. ಇಂಥ ಸಂದರ್ಭದಲ್ಲಿ ಪ್ರಮುಖವಾದಂಥ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಗದಿದ್ದರೆ ಹೇಗೆ? ಅದಕ್ಕೆ ಇನ್ನು ಒಂದು ತಿಂಗಳಾದರೂ ಉತ್ತರ ಸಿಗಲಾರದು ಅಂದರೆ ನಾವು ಜನರ ಸಮಸ್ಯೆಗಳನ್ನು ಬಗೆಹರಿಸುವುದು ಹೇಗೆ? ನಾನು ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ತಮ್ಮೊಂದಿಗೆ ದೂರವಾಣಿ ಮೂಲಕವೂ ಸಂಪರ್ಕ ಮಾಡಿದ್ದೆ. ಈ ಸಾರಿ ಅಧಿವೇಶನ ಪ್ರಾರಂಭವಾದ ರೀತಿಯನ್ನು ಹಿಂದೆಂದೂ ನಾವು ಕಂಡಿರಲಿಲ್ಲ. ಪ್ರಶ್ನೆಗಳನ್ನು ಕಳುಹಿಸಲು ಸಮಯಾವಕಾಶವನ್ನು ಕೊಡಲಿಲ್ಲ. ಆದರೂ ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ನಾವು ಸದನದ ಕಾರ್ಯಕಲಾಪಗಳನ್ನು ಕಾಟಾಚಾರಕ್ಕಾಗಿ ಮಾಡುತ್ತೇವೆಯೇ? ಸದನವನ್ನು ಕರೆಯುವ ಸೂಚನೆಯನ್ನು ಒಂದು ತಿಂಗಳು ಮುಂದೆ ಕೊಡುತ್ತಾ ಇದ್ದುದು, 15 ದಿವಸಗಳು ಎಂದಾಯಿತು. ಈಗ ನಾಲ್ಕೈದು ದಿನಗಳ ಮುಂಚೆ ಸದನ ಪ್ರಾರಂಭವಾಗುತ್ತದೆ ಎಂದು ನೋಟೀಸ್ ಕಳುಹಿಸಿಕೊಟ್ಟರು. ಆ ಹೊತ್ತಿಗೆ 3-4 ಜನ ಸಚಿವರ ಖಾತೆಗೆ ಪ್ರಶ್ನೆಗಳನ್ನು ಕಳುಹಿಸಿಕೊಡುವ ಅವಧಿಯೂ ಮುಗಿದಿತ್ತು. ನಾನು ತಮ್ಮಲ್ಲಿ ದೂರವಾಣಿ ಮೂಲಕ ಸಂಪರ್ಕ ಮಾಡಿದೆ, ಹಾಗೂ ಸರಕಾರದವರಲ್ಲಿ ವಿನಂತಿ ಮಾಡಿದೆ. ಈ ಎಲ್ಲಾ ಅವಾಂತರಗಳ ಕಾರಣ ಸಮಯ ಕೊಡಲಿಲ್ಲ, ಪೂರ್ವಭಾವಿಯಾಗಿ ಯೋಚನೆ ಮಾಡಲಿಲ್ಲ, ಲಾ ಮಿನಿಸ್ಟರ್ ಜೊತೆಗೆ ಚಿಂತನೆ ಮಾಡಲಿಲ್ಲ. ಹೀಗೆ ಕಾಟಾಚಾರಕ್ಕೆ ಸದನ ನಡೆಸುವುದು ಬೇಡ ಎಂದು ತಮ್ಮಲ್ಲಿ ಕೈ ಮುಗಿದು ಕೇಳಿಕೊಳ್ಳುತ್ತೇನೆ. ನಾವು ಬೇಕಾದರೆ ಹೊರಗಡೆ ಹೋಗುತ್ತೇವೆ. ಈ ರೀತಿಯಲ್ಲಿ ಸದನ ನಡೆಸುವಂಥ ಅಗತ್ಯವೇ ಇಲ್ಲ, ಜನರು ನಮ್ಮನ್ನು ನಿರೀಕ್ಷೆಯಿಂದ ಕಳುಹಿಸಿಕೊಟ್ಟಿದ್ದಾರೆ. ಅವರ ನಿರೀಕ್ಷೆಗೆ ಸರಿಯಾಗಿ ಕೆಲಸ ಮಾಡದಿದ್ದರೆ ನಮ್ಮನ್ನು ಅವರು ಶಪಿಸುತ್ತಾರೆ. ಈ ಸಂದರ್ಭದಲ್ಲಿ ತಾವು ನಮ್ಮ ನೆರವಿಗೆ ಬರಬೇಕಾಗುತ್ತದೆ. ಸರಕಾರಕ್ಕೆ ನೀವು ಸ್ವಲ್ಪ ಕಿವಿ ಹಿಂಡಿ ತರಾಟೆಗೆ ತೆಗೆದುಕೊಂಡು ಸದನ ನಡೆಸುವ ಮಹಾನ್ ಉದ್ದೇಶವು ಸಫಲವಾಗುವಂತೆ ತಾವುಗಳು ನೆರವಾಗಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಸದನವನ್ನು ಕರೆದುದು ನಮಗೆ ಒಂದು ದೊಡ್ಡ ಆಶ್ಚರ್ಯವಾಗಿದೆ. ಸದನವನ್ನು ಯಾವಾಗ ಕರೆಯುತ್ತಾರೆ ಎಂಬ ಬಗ್ಗೆ ನಾವುಗಳು ಅತ್ಯಂತ ಗಂಭೀರವಾಗಿ ಚಿಂತನೆ ಮಾಡುತ್ತಾ ಇರುತ್ತೇವೆ.

ಈ ಸದನದ ಮಹತ್ವದ ಬಗ್ಗೆ ತಮ್ಮಲ್ಲಿ ನಾನು ಅನೇಕ ಸಾರಿ ಮನವಿ ಮಾಡಿಕೊಂಡಿದ್ದೇನೆ. ಸದನವನ್ನು ಯಾವಾಗ ಕರೆದರು ಮತ್ತು ನಮಗೆ ಪ್ರಶ್ನೆಗಳನ್ನು ಸಲ್ಲಿಸಲು ಕಾಲಾವಕಾಶ ಎಷ್ಟು ಕೊಟ್ಟರು? ನಾವು ಇದ್ದ ನಾಲ್ಕು ದಿನಗಳಲ್ಲಿ ಪ್ರಶ್ನೆಗಳನ್ನು ತರಾತುರಿಯಲ್ಲಿ ಕಳುಹಿಸಿದ್ದೇವೆ. 15 ದಿನಗಳ ಕಾಲಾವಕಾಶವನ್ನಾದರೂ ನಮಗೆ ಕೊಡಬೇಕಾಗಿತ್ತು. ಶಾಸನ ಸಭೆಯನ್ನು ಕರೆಯುವ ಬಗ್ಗೆ ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಶಾಸನ ಸಭೆಯನ್ನು ಕರೆಯಬೇಕಾದರೆ ಸರಕಾರದವರು ಅಧ್ಯಕ್ಷರನ್ನು ಕೇಳಿ ಒಂದು ದಿನಾಂಕವನ್ನು ನಿಗದಿಪಡಿಸತಕ್ಕಂಥ ಸಂಪ್ರದಾಯವು ಮೊದಲಿನಿಂದಲೂ ಬಂದಿದೆ. ಈ ಬಗ್ಗೆ ತಮಗೂ ಅವರಿಗೂ ಏನು ಮಾತುಕತೆಯಾಗಿದೆ ಎಂಬುದು ನನಗೆ ಗೊತ್ತಿಲ್ಲ, ಸರಕಾರದವರು ಅವರ ಇಚ್ಛೆ ಬಂದ ಹಾಗೆ ಶಾಸನ ಸಭೆಯನ್ನು ಕರೆಯುವುದು, ಯಾವಾಗ ಬೇಕಾದರೂ ಸಭೆಯನ್ನು ಮುಂದಕ್ಕೆ ಹಾಕುವುದು ಪ್ರಶ್ನೆಗಳಿಗೆ ಉತ್ತರವನ್ನು ಕೊಡದೇ ಕಾಲಾವಕಾಶವನ್ನು ಕೇಳುವುದು, ಮುಂತಾಗಿ ಮಾಡುತ್ತಾರೆ. ನಿನ್ನೆ ತಾನೆ ಪ್ರಾರಂಭವಾದ ಸಭೆಗೆ ಬಂದ ಪ್ರಶ್ನೆಗಳಿಗೆ ಸರಕಾರದವರು ಕಾಲಾವಕಾಶ ಕೇಳುವುದು ನಿಜವಾಗಿಯೂ ಸರಿಯಲ್ಲ. ಈ ಸರಕಾರಕ್ಕೆ ಸರಿಯಾದ ಆಡಳಿತವನ್ನು ನಡೆಸುವ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಇದೆಯೇ? ಸರಕಾರಕ್ಕೆ ಆಡಳಿತ ನಡೆಸತಕ್ಕಂಥ ಯೋಗ್ಯತೆ ಇದೆಯೇ? ಸರಕಾರಕ್ಕೆ ಆಡಳಿತ ನಡೆಸತಕ್ಕಂಥ ಯೋಗ್ಯತೆ ಇದೆಯೇ ಎನ್ನುವ ಪ್ರಶ್ನೆ ಬರುತ್ತದೆ.

ಏಕೆಂದರೆ ಪ್ರಶ್ನೆಗೆ ಉತ್ತರ ಕೊಡಲು ನಮಗೆ ಕಾಲಾವಕಾಶ ಬೇಕು ಎಂದು ಕೇಳಿದರೆ ಅಲ್ಲಿಗೆ ಸರ್ಕಾರ ಇಲ್ಲ, ನಮ್ಮ ದೃಷ್ಟಿಯಲ್ಲಿ ಸರ್ಕಾರ ಬದುಕಿಲ್ಲ ಎಂದು.

ಅಧ್ಯಕ್ಷರು : ನನ್ನ ಜೊತೆಯಲ್ಲಿ ಸರ್ಕಾರದವರು ಚರ್ಚೆ ಮಾಡಿದಯೇ ಇಲ್ಲವೋ ಎನ್ನುವ ಮಾತು ತಾವು ಎತ್ತಿದ್ದೀರಿ, ನನಗೊಂದು ಜವಾಬ್ದಾರಿ ಇರುವುದರಿಂದ ನಾನು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ರಾಜ್ಯಾಂಗದ ರೀತ್ಯ ಸಚಿವಸಂಪುಟದಲ್ಲಿ ಈ ಸಭೆ ಯಾವಾಗ ನಡೆಯಬೇಕು ಅಂತ ತೀರ್ಮಾನ ಮಾಡಿ ರಾಜ್ಯಪಾಲರಿಗೆ ಶಿಫಾರಸ್ ಮಾಡುತ್ತಾರೆ. ರಾಜ್ಯಪಾಲರು ನನಗೆ ತಿಳಿಸುತ್ತಾರೆ. ಅದರಲ್ಲಿ ಯಾವ ಹೆಚ್ಚುಕಡಿಮೆಯೂ ಆಗಿಲ್ಲ. ಯಾವ ಪದ್ಧತಿ ಅವರು ಅನುಸರಿಸಬೇಕೋ ಅದನ್ನು ಅನುಸರಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ ತಮಗೆ ಈ ಸಲ ಕಾರ್ಯಕಲಾಪ ನಡೆಸಲು ಕೊಟ್ಟಿರುವ ಸಮಯದಲ್ಲಿ ತಾವು ಈ ಜಾಗದಲ್ಲಿ ಕುಳಿತಿದ್ದರೆ ತಮ್ಮ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತಿತ್ತು ಎಂದು ತಮಗನ್ನಿಸುತ್ತದೆಯೇ?

ಅಧ್ಯಕ್ಷರು : ನನಗೊಂದು ಸಲ ಅಲ್ಲಿ ಕೂರಬೇಕೆಂಬ ಆಸೆ ಇದೆ, ಅವಕಾಶ ಸಿಕ್ಕಿದರೆ.

ಶ್ರೀ ವಾಟಾಲ್ ನಾಗರಾಜ್ : ಒಂದು ನಿಮಿಷ ಸಾರ್, ತಾವು ಈ ಸದನದಲ್ಲಿ ಎರಡು ಬಾರಿ ಇದ್ದಿರಿ, ತಾವು ಸದಸ್ಯರಿದ್ದಾಗ ನಾನು ಒಳಗಡೆ ಇರಲಿಲ್ಲ, ತಾವು ಅಧ್ಯಕ್ಷರಾದಾಗ ಇಲ್ಲಿ ಒಳಬಂದಿದ್ದೇನೆ. ತಾವು ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದ ವಿಚಾರಗಳನ್ನು ನಾನು ಕೇಳಿದ್ದೇನೆ. ನೀವು ಆಡಳಿತ ಪಕ್ಷದಲ್ಲಿದ್ದಾಗಲೂ ಎಷ್ಟು ಪ್ರಮಾಣಿಕವಾಗಿ ಭಾಗವಹಿಸಿದ್ದೀರಿ, ಎಷ್ಟು ಪ್ರಶ್ನೆ ಕೇಳಿ ಎಷ್ಟು ಉತ್ತರ ತೆಗೆದುಕೊಂಡಿದ್ದೀರಿ, ತಮ್ಮ ಪಕ್ಷದವರನ್ನೂ ತರಾಟೆಗೆ ತೆಗೆದುಕೊಂಡಿರುವುದು ನಿದರ್ಶನ ಉಂಟು. ತಾವು ಹೇಳಿಬಿಡಿ. ಪಟೇಲರು ಈ ಸದನದಲ್ಲಿ ಅನೇಕ ಬಾರಿ ಇದ್ದವರು ಅಪಾರ ತಿಳಿವಳಿಕೆ ಇರುವವರು, ಲೋಕಸಭೆಯಲ್ಲಿದ್ದವರು, ಈಗ ಮಾನ್ಯ ಉಪಮುಖ್ಯಮಂತ್ರಿಗಳಾಗಿದ್ದಾರೆ, ನಾನು ಅವರನ್ನು ಕೇಳುತ್ತೇನೆ. ಸ್ವಾಮಿ 1967ರ ಸದನ ತಾವು ನೋಡಿದ್ದೀರಿ, 1972ರ ಸದನ ನೋಡಿದ್ದೀರಿ, ಈಗ ತಾವಿಬ್ಬರೂ ಆತ್ಮಮುಟ್ಟಿ ವಿಮರ್ಶೆ ಮಾಡಿ ಇದು ಸರಿ ಎಂದು ಹೇಳಿದರೆ ಆ ಬಗ್ಗೆ ನಾವು ಚಕಾರ ಎತ್ತುವುದಿಲ್ಲ.

ಶ್ರೀ ಜೆ.ಎಚ್. ಪಟೇಲ್ : ಇವತ್ತಿನ ಘಟನೆಯಿಂದ ಮಾನ್ಯ ಸದಸ್ಯರ ಮನಸ್ಸಿಗೆ ನೋವಾಗಿದ್ದರೆ ನಾವು ಸದನವನ್ನು ಯಾವುದೇ ರೀತಿಯಿಂದ ಅಗೌರವಸದ್ದೇವೆಂದು ಭಾವಿಸಿದ್ದರೆ ನಾವು ಕ್ಷಮಾಪಣೆ ಕೇಳುತ್ತೇವೆ.

ಅಧ್ಯಕ್ಷರು : ಉಪಮುಖ್ಯಮಂತ್ರಿಗಳು ನಾವೆಲ್ಲರೂ ಮೆಚ್ಚುವಂತಹ ರೀತಿಯಲ್ಲಿ ಮಾತು ಆಡಿದ್ದಾರೆ. ನನಗೆ ಕೇಳಿದರು, ನಿಮ್ಮ ಆತ್ಮ ಒಪ್ಪುತ್ತದೆಯೇ ಎಂದು, ಪ್ರಶ್ನೋತ್ತರ ನಿಮ್ಮ ಅವರ ಮಧ್ಯೆ, ನಮ್ಮ ನಿಮ್ಮ ಮಧ್ಯೆ ಬರುವುದಿಲ್ಲ, ಆದರೆ ಒಂದು ನನ್ನ ಮನಸ್ಸಿಗೂ ವ್ಯಥೆ ಇದೆ, ಹೋದ ಸಲ ಸುಮಾರು 200 ಪ್ರಶ್ನೆಗಳಿಗೆ ಇನ್ನೂ ಉತ್ತರ ಬಂದಿಲ್ಲ. ಈ ಸಂದರ್ಭದಲ್ಲೂ ಅವಧಿ ಕಡಿಮೆ ಮಾಡಿದ್ದೀರಿ ಎಂದು, ನಮ್ಮ ರೂಲ್ಸ್‌ನಲ್ಲಿ ಅವಕಾಶ ಇದೆ ನಾನು ಟೈಂ ಕಡಿಮೆ ಮಾಡಬಹುದು ಕೊಡಬಹುದು, ಡೈರೆಕ್ಷನೂ ಕೊಟ್ಟಿದ್ದೇನೆ ಕೊಡಿ ಅಂತ. ಸದಸ್ಯರ ಅಗ್ರಹ ಇಷ್ಟೆ. ಈ ಸದನದ ಕಾರ್ಯಕಲಾಪಕ್ಕೆ ಹೆಚ್ಚು ಗೌರವ ಬರಬೇಕಾಗಿದ್ದರೆ, ಇದು ಒಳ್ಳೆಯದಲ್ಲ. ತಾವು ಕ್ಷಮೆ ಕೇಳಿದಿರಿ, ಅದು ದೊಡ್ಡತನ. ಇದರ ನಂತರ ತಾವೂ ನಾಯಕರು ಸ್ವಲ್ಪ ಅಧಿಕಾರಿ ವರ್ಗದವರಿಗೆ ಎಚ್ಚರಿಕೆ ಕೊಡಬೇಕೆಂದು ಕೋರುತ್ತೇನೆ. ವಸಂತ ಸಾಲಿಯಾನವರೇ ನಿಮ್ಮ ಭಾವನೆ ನನಗೆ ಅರ್ಥವಾಗುತ್ತದೆ, ಸರಳ ಪ್ರಶ್ನೆ ಅದು, ಸಮಯ ಕೇಳಿದ್ದಾರೆ, ಒಂದು ಸಲ ಸಹಕರಿಸೋಣ.

Karnataka Handloom Development Corporation

476 -Shri D.R. Patil (Gadag) : Will the Minister for Sugar, Textiles, Science & Technology, Environment & Ecology be pleased to state?

A) How many weavers KRDC has brought under its fold?

B) In the last 9 months, what is the quantity of yarn supplied by KRDC to weavers?

C) What are the problems faced by KRDC in providing a minimum of 25 days work to weavers in a month?

D) What steps Government has taken to overcome the above problems?

Sri P.C. Siddanagoudar (Minister of State for Sugar, Textiles, Science & Technology, Environment & Ecology) :

A) Eversince its inception, KRDC has covered 45,340 weavers under its folds, out of which 20,826 are working presently.

B) KRDC has distributed following quantites of yarn in the last 9 months:

Month	Quantity (in Kgs)	Value (Rs. in lakhs)
May 1995	1,32,716	223.00
June 1995	1,22,504	200.16
July 1995	2,00,586	308.34
August 1995	1,88,204	262.02
September 95	3,04,690	406.62

October 95	75,494 1	51.80
November 95	1,51,459	217.53
December 95	2,17,393	281.53
January 1996	1,33,309	189.83
Total	15,26,355	2240.77

C)1)Progressive reduction in Janatha cloth production due to Government of India policy of phasing out Janatha cloth Scheme.

2) Not adequate diversificatiun taken place at production level.

3) Discontinuation of Vidya Vikasa Scheme.

D) Education Department has been requested to continue the Vidya Vikas scheme. The quantity of production of Janatha cloth is decided in accordance with the policy of Govt. of India. The policy of Govt. of India is to reduce the Janatha Cloth production, K.R.D.C. has been requested to upgfade the skill and working them in production of other varieties of cloth.

ಶ್ರೀ ಪಿ.ಸಿ. ಸಿದ್ದನಗೌಡ : ಅಧ್ಯಕ್ಷರೇ, ಈಗಾಗಲೇ ಶಿಕ್ಷಣ ಇಲಾಖೆಗೆ ನಾವು ವಿನಂತಿ ಮಾಡಿದ್ದೇವೆ, ವಿದ್ಯಾವಿಕಾಸ ಯೋಜನೆಯನ್ನು ಈ ವರ್ಷ ಜಾರಿಗೊಳಿಸಿ ನಮ್ಮ KRDC ಯಿಂದಲೇ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಅದರ ಜೊತೆಗೆ ಸರ್ಕಾರ ಕೂಡ ನಿರ್ಣಯ ಮಾಡಿದೆ, ಕೆಎಸ್‌ಆರ್‌ಟಿಸಿ ಇರಬಹುದು, ಕೆಇಬಿ ಇರಬಹುದು ಅನೇಕ ಸರ್ಕಾರಿ ಸಂಸ್ಥೆಗಳೂ ಕೂಡ ನಮ್ಮ KRDC ಯಿಂದಲೇ ಒಟ್ಟೆಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೇವೆ. ಜೊತೆಗೆ ನನ್ನ ಸಕ್ಕರೆ ಇಲಾಖೆ ಮತ್ತು ಬಿನ್ನಿಮಿಲ್ ನೌಕರರಿಗೂ ಆ ನಿಗಮದ ಬಟ್ಟೆ ಕೊಡಬೇಕೆಂದು ನಾನು ಸ್ವತಃ ಕೆಲವು ಕಡೆ ಹೋಗಿ ಕ್ರಮ ತೆಗೆದುಕೊಂಡಿದ್ದೇನೆ. ಶಿಕ್ಷಣ ಇಲಾಖೆಯಿಂದ ಪರವಾನಗಿ ಬಂದ ತಕ್ಷಣ ವಿದ್ಯಾವಿಕಾಸ ಯೋಜನೆ ಜಾರಿ ಮಾಡಿ ಹೆಚ್ಚಿನ ಕೆಲಸ ಕೊಡಲು ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಜಗದೀಶ ಶೆಟ್ಟರ್ : ಈ ವಿದ್ಯಾ ವಿಕಾಸ ಯೋಜನೆ ಬಗ್ಗೆ ಸರ್ಕಾರ ಯಾವಾಗ ಸ್ಪಷ್ಟವಾಗಿ ಆದೇಶ ಹೊರಡಿಸುತ್ತೀರೆಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಅಶೋಕ ಕಾಟವೆ : ನೇಕಾರರಿಗೆ ತಿಂಗಳಿಗೆ 25 ದಿವಸ ಕೆಲಸ ಕೊಡುತ್ತೀರಾ ಅಥವಾ ಇಲ್ಲವೇ ಎಂದು ಸ್ಪಷ್ಟವಾಗಿ ಹೇಳಿ.

ಶ್ರೀ ಪಿ.ಸಿ. ಸಿದ್ದನಗೌಡರ್ : ಅಧ್ಯಕ್ಷರೇ 25 ದಿವಸ ಕೊಡಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಇದರ ಮಧ್ಯದಲ್ಲಿ ನೇಕರಾ ತಯಾರು ಮಾಡುವ ಬಟ್ಟೆಯನ್ನು ಜನತಾ ಧೋತಿ ಸೀರೆಯೆಂದು ಕೊಡುತ್ತೇವೆ. ಕೇಂದ್ರ ರಾಜ್ಯಸರ್ಕಾರಗಳ ನೆರವಿನಿಂದ ಹಸಿರು ಕಾರ್ಡಿನವರಿಗೆ ಕೊಡಬೇಕೆಂಬ ಯೋಜನೆ ಹಾಕಿಕೊಂಡಿದ್ದೇವೆ. ಕೇಂದ್ರ ಸರ್ಕಾರದ ನೀತಿ ನಿಯಮ ಏನಿದೆ ಆ ಪ್ರಕಾರ ನಾವು ನಡೆಯುತ್ತೇವೆ. ಇನ್ನೂ ನೀತಿ ಅಲ್ಲಿಂದ ಸರಿಯಾಗಿ ಬಂದಿಲ್ಲ. ಅದರಿಂದ ನೇಕರಾರಿಗೆ ಕೆಲಸ ಕೊಡಲಿಕ್ಕೆ ಆಗಿಲ್ಲ. ಎರಡನೆಯದಾಗಿ ಮಾನ್ಯ ಶಿಕ್ಷಣ ಸಚಿವರಿಗೆ ಈಗಾಗಲೇ ನಾನು ವಿನಂತಿ ಮಾಡಿದ್ದೇನೆ. ಸ್ವಲ್ಪ ದಿವಸದಲ್ಲೇ ಅವರು ನಿರ್ಣಯ ಮಾಡಿದ ತಕ್ಷಣ ವಿದ್ಯಾ ವಿಕಾಸ ಯೋಜನೆಯನ್ನು ಅಳವಡಿಸಿದರೆ ನೇಕಾರರಿಗೆ 25 ದಿವಸ ಕೆಲಸ ಕೊಡಬಹುದು.

ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯ

249 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಎಷ್ಟು ಪದವಿ : ಪದವಿಪೂರ್ವ ಕಾಲೇಜು ಬಾಲಕರ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಯಾವುವು ?

ಆ) ಪರಿಶಿಷ್ಟ ಜಾತಿಯ ಮತ್ತು ಮೆಟ್ರಿಕ್ ಪೂರ್ವ ಬಾಲಕರ : ಬಾಲಕಿಯರ ವಿದ್ಯಾರ್ಥಿಗಳನ್ನು 95-96ನೇ ಸಾಲಿನಲ್ಲಿ ತೆರೆಯಲಾಗಿದೆ ಹಾಗೂ ಅವು ಯಾವುವು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಂಬಂಧಿಸಿದಂತೆ 1995-96ನೇ ಸಾಲಿನಲ್ಲಿ 40 ಪದವಿ : ಪದವಿಪೂರ್ವ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡಿದವು. ಈ ಪೈಕಿ 13 ವಿದ್ಯಾರ್ಥಿನಿಲಯಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ.

ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರರಿಗೆ ಸಂಬಂಧಿಸಿದಂತೆ 25 ಮೆಟ್ರಿಕ ನಂತರ ವಿದ್ಯಾರ್ಥಿ ನಿಲಯಗಳನ್ನು 95-96ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದ್ದು, ಈ ಪೈಕಿ 3 ವಿದ್ಯಾರ್ಥಿನಿಲಯಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ (ವಿವರಗಳನ್ನು ಲಗತ್ತಿಸಿರುವ ಅನುಬಂಧ-1 ರಲ್ಲಿ ನೀಡಲಾಗಿದೆ)

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ 95-96ನೇ ಸಾಲಿನಲ್ಲಿ ಒಟ್ಟು 119 ವಿದ್ಯಾರ್ಥಿ ನಿಲಯಗಳನ್ನು ಸರ್ಕಾರಿ ಆದೇಶ ಸಂ. ಸಕಇ 27 ಪಕವಿ 94 ದಿನಾಂಕ 13-11-95ರಲ್ಲಿ ಮಂಜೂರಾತಿಯನ್ನು ನೀಡಲಾಗಿದ್ದು, ಈ ಪೈಕಿ 56 ವಿದ್ಯಾರ್ಥಿನಿಲಯಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ (ವಿವರಗಳನ್ನು ಲಗತ್ತಿಸಿರುವ ಅನುಬಂಧ-2ರಲ್ಲಿ ನೀಡಲಾಗಿದೆ)

ಅನುಬಂಧ -1

1995-96ನೇ ಸಾಲಿನಲ್ಲಿ ಪ್ರಾರಂಭಿಸಲಾದ ಪದವಿ ಮತ್ತು ಪದವಿಪೂರ್ವ ವಿದ್ಯಾರ್ಥಿ ನಿಯಮಗಳ ವಿವರ :

ಪರಿಶಿಷ್ಟ ಜಾ ತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ :

1) ಕಾಲೇಜು ವಿದ್ಯಾರ್ಥಿ ನಿಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ
2) ಪದವಿ ಕಾಲೇಜು ವಿದ್ಯಾರ್ಥಿ ನಿಲಯ, ಚಾಮರಾಜ ನಗರ.
3) ಪದವಿ ಪೂರ್ವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ, ಶ್ರೀನಿವಾಸಪುರ.
4) ಪದವಿಪೂರ್ವ ಕಾಲೇಜು ವಿದ್ಯಾರ್ಥಿ ನಿಲಯ, ಗುಳೇದಗುಡ್ಡ, ಬಾದಾಮಿ ತಾಲೂಕು
5) ಕಾಲೇಜು ವಿದ್ಯಾರ್ಥಿ ನಿಲಯ, ಸಿರಗುಪ್ಪ
6) ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ನಿಲಯ, ಅರಸೀಕೆರೆ, ಹರಪ್ಪನಹಳ್ಳಿ.
7) ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ನಿಲಯ, ನವಬಾದ್, ಬೀದರ್ ನಗರ.
8) ಕಾಲೇಜು ವಿದ್ಯಾರ್ಥಿ ನಿಲಯ, ಮೈಲೂರು-1,ಬೀದರ್ ನಗರ

9) ಕಾಲೇಜು ವಿದ್ಯಾರ್ಥಿ ನಿಲಯ, ಮೈಲೂರು-2, ಬೀದರ್ ನಗರ
10) ಕಾಲೇಜು ವಿದ್ಯಾರ್ಥಿ ನಿಲಯ, ಭಾಲ್ಕಿ
11) ಕಾಲೇಜು ವಿದ್ಯಾರ್ಥಿ ನಿಲಯ, ಔರಾದ್
12) ಕಾಲೇಜು ವಿದ್ಯಾರ್ಥಿ ನಿಲಯ, ಬಸವ ಕಲ್ಯಾಣ
13) ಕಾಲೇಜು ವಿದ್ಯಾರ್ಥಿ ನಿಲಯ, ಹುಮ್ನಾಬಾದ್

ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರಿಗಾಗಿ :

1) ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಬಸವೇಶ್ವರ ನಗರ, ಬೆಂಗಳೂರು.
2) ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಕಡೂರು, ಚಿಕ್ಕಮಗಳೂರು ಜಿಲ್ಲೆ
3) ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಗುಳೇದಗುಡ್ಡ, ಬಿಜಾಪುರ ಜಿಲ್ಲೆ

ಅನುಬಂಧ-2

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಲಾದ ಮೆಟ್ರಿಕ್ ಪೂರ್ವ ಬಾಲಕ ಬಾಲಕಿಯರ ವಿದ್ಯಾರ್ಥಿ ನಿಲಯಗಳ ವಿವರ :

		ಬಾಲಕರು	ಬಾಲಕಿಯರು
1)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಶಿವನಹಳ್ಳಿ, ಕನಕಪುರ ತಾ.	1	-
2)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ದೊಡ್ಡಗಂಗವಾಡ, ಬೆಂಗಳೂರು(ಗ್ರಾಮಾಂತರ)	1	-
3)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಬೂದಿಗೆರೆ, ದೇವನಹಳ್ಳಿ ತಾ.	-	1
4)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಚಳ್ಳಕೆರೆ	1	-
5)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಶ್ಯಾಮನೂರು ರಸ್ತೆ, ದಾವಣಗೆರೆ	1	-
6)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ದೇವರಕೋಟ ಗ್ರಾಮ, ಹಿರಿಯೂರು ತಾ.	-	1
7)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ದಳಸನೂರು, ಶ್ರೀನಿವಾಸಪುರ ತಾ.	1	-
8)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯೆ ಹೊಂಗನೂರು, ಚಾಮರಾಜ ನಗರ ತಾಲ್ಲೂಕು	1	

9)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಕೊಳ್ಳೇಗಾಲ	-	1
10)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಶಿವಪುರ, ಮಂಡ್ಯ	1	-
11)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಹಿಟ್ಟಿನಹಳ್ಳಿ, ಕೊಪ್ಪಲು	1	-
12)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಅಣ್ಣೂರು, ಮದ್ದೂರು ತಾ.	1	-
13)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ದೊಡ್ಡಮೇಟಿ, ಕುರ್ಕ, ಅರಸಿಕೆರೆ	1	-
14)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಹರಿಹರ ಪುರ, ಕೊಪ್ಪ ತಾ.	1	-
15)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಮೂಡಬಿದಿರೆ, ಕಾರ್ಕಳ ತಾ.	-	1
16)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ನರಸಿಂಗಪುರ, ಹುಕ್ಕೇರಿ ತಾ.	1	-
17)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಕಜ್ಜಿದೋಣಿ, ಬಾಗಲಕೋಟೆ	1	-
18)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಚಡಚಣ, ಇಂಡಿ ತಾ.	1	-
19)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಮಂಟೂರು, ಮುಧೋಳ ತಾ.	1	-
20)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಚಿಕ್ಕಲಗುಂದಿ, ಬೀಳಗಿ ತಾ.	1	-
21)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಬಿಳಗಾನೂರು, ಸಿಂಧಗಿ ತಾ.	1	-
22)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಬಾಬಾ ನಗರ, ಬಿಜಾಪುರ ತಾ.	1	-
23)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಕೊಡಗನೂರು, ಮುದ್ದೇಬಿಹಾಳ್	1	-
24)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಡವಾಡಗಿ, ಬಾಗೇವಾಡಿ ತಾ.	1	-
25)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಮುಳಸಾವಳಗಿ, ಸಿಂಧಗಿ ತಾ.	1	-

26)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ತೆಲಗಿ, ಬಸವನಬಾಗೇವಾಡಿ	1	-
27)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ನೀಲಗುಂದ, ಬಾದಾಮಿ	1	-
28)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಕಕ್ಕಂಡಕಿ, ಬಿಜಾಪುರ ತಾ.	1	-
29)	-ಅದೇ- ಜಗದಾಳ, ಜಮಖಂಡಿ ತಾ.	1	-
30)	-ಅದೇ- ಹೊನ್ನಟಗಿ, ಬಿಜಾಪುರ ತಾ.	-	1
31)	-ಅದೇ- ಹತ್ತಿಗೂಡೂರು, ಷಹಾಪುರ	1	-
32)	-ಅದೇ- ಕೂಡ್ಲಿ, ಗುಲ್ಬರ್ಗ ತಾ.	1	-
33)	-ಅದೇ- ಹೊನಗೆರೆ, ಯಾದಗಿರಿ ತಾ.	1	-
34)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಬಲಿಚಕ್ರ, ಯಾದಗಿರಿ	1	-
35)	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಮಂಡ್ಯಾಳ್, ಆಲಂದ ತಾ.	1	-
36)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಹಿಪ್ಪರಗಿ, ಜೇವರ್ಗಿ ತಾ.	1	-
37)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ದೇವರತೆಗ್ದನೂರು, ಗುಲ್ಬರ್ಗ	1	-
38)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ದೇವನಹಳ್ಳಿ, ರಾಯಚೂರು	1	-
39)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಬಯ್ಯಾಪುರ, ಲಿಂಗಸುಗೂರು	1	-
40)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಹಿರೇಹರಳ್ಳಹಳ್ಳಿ, ಯಲ್‌ಬುರ್ಗ	1	-
41)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಮಾಳಗಟ್ಟಿ, ಕುಷ್ಠಗಿ ತಾ.	1	-
42)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ನಾಗರಾಳು, ಲಿಂಗಸುಗೂರು	1	-
43)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಗಾಣದಾಳ, ಯಲ್‌ಬರ್ಗ ತಾ.	1	-
44)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಜೀಗರ್‌ಕಲ್, ರಾಯಚೂರು	-	1

45)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಬೂದಿಗುಂಪು, ಕೊಪ್ಪಳ	1	-
46)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಮನ್ನೀರ್‌ಮಣಲವಾಡ, ಹಡಗಲಿ	1	-
47)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಸೋಮೋನಹಳ್ಳಿ, ಸಂಡೂರು	1	-
48)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಕೆಂಚಗೇರಿ, ಹರಪನಹಳ್ಳಿ ತಾ.	1	-
49)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಗುಂಡಗಟ್ಟಿ, ಹರಪನಹಳ್ಳಿ ತಾ.	1	-
50)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಮಾಳವಿ, ಹಗರಿಬೊಮ್ಮನ ಹಳ್ಳಿ ತಾ.	1	-
51)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಪಿರಿಯಾಪಟ್ಟಣ	1	-
52)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಶಿಂಗಟಗೆರೆ, ಕಡೂರು ತಾ.	1	-
53)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಬೆಳ್ತಂಗಡಿ ಚಳ್ಳಕೆರೆ	1	-
54)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ದೇವನಪುಟಗುಂಟೆ	1	-
55)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಉಚ್ಚಂಗಿಪುರ, ಜಗಳೂರು ತಾ.	1	-
56)	ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯ ಮೊಳಕಾಲ್ಮೂರು ತಾ.	1	-

ಶ್ರೀ ಯು.ಬಿ. ಬಣಕಾರ್ : ಅಧ್ಯಕ್ಷರೆ, ಈ ವರ್ಷ ಪರಿಶಿಷ್ಟ ವರ್ಗದವರಿಗಾಗಿ 40 ಪದವಿ ಪೂರ್ವ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲೂ ನಿರ್ಧಾರ ತೆಗೆದುಕೊಂಡಿದೆ, ಹಾಗೂ ಹಿಂದುಳಿದವರ್ಗ ಹಾಗೂ ಅಲ್ಪಸಂಖ್ಯಾತರಿಗಾಗಿ 25, ಪರಿಶಿಷ್ಟ ಜಾತಿ ವರ್ಗದವರಿಗಾಗಿ 119 ವಿದ್ಯಾರ್ಥಿನಿಲಯಗಳನ್ನು ತೆರೆಯಲು ನಿರ್ಧಾರ ಕೈಗೊಂಡಿದೆ. ಈಗಿರುವ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ಸೂಪರಿಂಟೆಂಡರ ಭ್ರಷ್ಟಾಚಾರದಿಂದ ಸರ್ಕಾರ ಯಾವ ಉದ್ದೇಶದಿಂದ ಬಡಮಕ್ಕಳಿಗಾಗಿ ವಿದ್ಯಾರ್ಥಿನಿಲಯ ಸ್ಥಾಪಿಸಲಾಗಿದೆ ಆ ಉದ್ದೇಶ ಈಡೇರುತ್ತಿಲ್ಲ. ಬಡ ಮಕ್ಕಳಿಗೆ ಆಹಾರ ಸಿಗುತ್ತಿಲ್ಲ. ಆದ್ದರಿಂದ ಅನೇಕ ಗ್ರಾಮಗಳಲ್ಲಿ ಪಂಚಾಯಿತಿ ಅಧ್ಯಕ್ಷರು ಸದಸ್ಯರು ಈ ಬಗ್ಗೆ ವಿಚಾರ ಮಾಡಿದರೂ ಅವರಿಗೆ ಸಮರ್ಪಕವಾದ ಉತ್ತರವಿಲ್ಲ ಕಾರಣ ಈ ಅಧೀಕ್ಷಕರ ವಿರುದ್ಧ ಬಿಗಿ ಕ್ರಮ ತೆಗೆದುಕೊಳ್ಳಲು ಸರ್ಕಾರ ಒಂದು ಸಲಹಾ ಸಂದರ್ಶಕರ ಸಮಿತಿ ನೇಮಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಅಧ್ಯಕ್ಷರೇ ಇಲಾಖೆ ವತಿಯಿಂದ ಇರುವ ಹಾಸ್ಟೆಲ್‌ಗಳಲ್ಲಿ ಏನೇನು ಕ್ರಮ ಆಗಬೇಕೋ ಅದನ್ನು ಈಗಾಗಲೇ ಜರುಗಿಸಿದ್ದೇವೆ

ಆದರೆ ಒಂದು ಸಲಹಾಸಮಿತಿಯನ್ನು ನೇಮಕ ಮಾಡಬೇಕೆಂದು ಸದಸ್ಯರು ಹೇಳಿದ್ದಾರೆ ಅವರ ಸೂಚನೆಯನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಡಾ|| ಯು. ಚಿತ್ತರಂಜನ್ : ಮಾನ್ಯ ಮಂತ್ರಿಗಳಲ್ಲಿ ಸ್ಪಷ್ಟೀಕರಣ ಕೇಳಬೇಕಾಗುತ್ತದೆ. ಪರಿಶಿಷ್ಟ ಜಾತಿಯ ಹಾಸ್ಟೆಲ್‌ಗಳಲ್ಲಿ ಪರಿಶಿಷ್ಟ ಪಂಗಡವರನ್ನು ಸೇರಿಸಿಕೊಳ್ಳುತ್ತಿಲ್ಲ ಇದರ ಬಗ್ಗೆ ಒಂದು ಸರ್ಕ್ಯುಲರ್ ಇಷ್ಯೂ ಮಾಡಿದೆ. ಎಸ್‌ಸಿಎಸ್‌ಟಿ ಎಂದು ಹೆಸರು ಇದೆ. ಪರಿಶಿಷ್ಟ ಪಂಗಡವರಿಗೆ ವಿಶೇಷವಾಗಿ ಹಾಸ್ಟೆಲ್ ಇಲ್ಲದ ಕಡೆಯಲ್ಲಿಯೂ ಸಹ ಅವರಿಗೆ ಅವಕಾಶ ಮಾಡಿಕೊಡುತ್ತಿಲ್ಲ ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ನೀಡಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಈಗಾಗಲೇ ಆದೇಶ ನೀಡಿದ್ದೇವೆ. ಎಸ್‌ಸಿಎಸ್‌ಟಿ ಹಾಸ್ಟೆಲ್‌ಗಳಲ್ಲಿ ಎಸ್‌ಟಿ ಹುಡುಗರನ್ನು ಸೇರಿಸಿಕೊಳ್ಳಬೇಕೆಂದು ಆದೇಶ ನೀಡಿದ್ದೇವೆ. ಎಲ್ಲೆಲ್ಲಿ ತೊಂದರೆಯಾಗಿದೆ ಅದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ನಾನು ಸರಿಪಡಿಸುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ ಮಾನ್ಯ ಕೈಗಾರಿಕಾ ಸಚಿವರು ಇಲ್ಲಿ ಇಲ್ಲ ನಾನು 437ನೇ ಪ್ರಶ್ನೆಯನ್ನು ಯಾರಿಗೆ ಕೇಳಬೇಕು?

ಅಧ್ಯಕ್ಷರು : ಒಂದು ಕೆಲಸ ಮಾಡೋಣ. ಅವರು ಬರಲಿ ಸ್ವಲ್ಪ ಸಮಾಯಾವಕಾಶ ಕೇಳಿದ್ದರು ಅವರು ಬಂದ ಮೇಲೆ ಮತ್ತೆ ಕರೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾವು ತಮ್ಮನ್ನು ಮುಜುಗರಕ್ಕೆ ಸಿಕ್ಕಿಸುತ್ತಿದ್ದೇವೆಂದು ಕಾಣುತ್ತದೆ ನಿಮಗೆ ಒತ್ತಾಯ ಮಾಡಿ ಮಾಡಿ ನಿಮ್ಮನ್ನು ಮುಜುಗರಕ್ಕೆ ಸಿಕ್ಕಿಸುತ್ತಿದ್ದೇವೆ. ತಾವು ಬೇಜಾರು ಮಾಡಿಕೊಳ್ಳಬಾರದು. ಸಭೆಯನ್ನು ಮುಂದಕ್ಕೆ ಹಾಕೋಣ. ಇನ್ನೊಂದು ವಾರವಾದ ಮೇಲೆ ಪ್ರಶ್ನೆಯ ಉತ್ತರವನ್ನು ತಯಾರು ಮಾಡಿಕೊಂಡು ತಮ್ಮ ಹತ್ತಿರ ಬಂದು ನಾವು ಉತ್ತರ ನೀಡಲು ತಯಾರಾಗಿದ್ದೇವೆಂದು ಅಪ್ಪಣೆ ಕೊಟ್ಟಮೇಲೆ ಸಭೆ ಸೇರೋಣ. ಇವತ್ತು 4 ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಅಸಹಾಯಕರಾಗಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಶಾಸನ ಸಭೆ ಒಂದು ತಿಂಗಳು ನಡೆದಿದೆಯೇ? ಸಭೆ ನಡೆಯುವುದು ಒಂದು ವಾರ. ಮಾನ್ಯ ಕೈಗಾರಿಕಾ ಸಚಿವರು ರಾಜೀನಾಮೆ ಕೊಟ್ಟಿದ್ದಾರೆಯೇ ಎಂಬ ಗೊಂದಲ ಶುರುವಾಗಿದೆ.

ಮೈಸೂರು ನಗರಕ್ಕೆ ಬಲಮುರಿಯಿಂದ ನೀರು

183 - ಶ್ರೀ ಇ. ಮಾರುತಿರಾವ್ ಪವಾರ್, (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿನ ನೀರಿನ ಭವಣೆಯನ್ನು ನಿವಾರಿಸಲು ಕಾವೇರಿ ನದಿಯಿಂದ ಹೆಚ್ಚಿನ ನೀರನ್ನು ನಗರಕ್ಕೆ ತರುವ ಹಿನ್ನೆಲೆಯಲ್ಲಿ 8 ಎಂ.ಜಿ. ನೀರು ಬಲಮುರಿಯಲ್ಲಿ ತರಲುದ್ದೇಶಿಸಿರುವುದಕ್ಕೆ ತೊಂದರೆಯಾಗಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ಈ ವಿಷಯದಲ್ಲಿ ನೀರಾವರಿ ಇಲಾಖೆಯ ಅನುಮತಿ ಅಗತ್ಯವಾಗಿದ್ದು ಸದರಿ ಇಲಾಖೆಯ ಅನುಮತಿ ಕೋರಿದ್ದು ಅನುಮತಿ ದೊರೆತ ಕೂಡಲೇ

ಶೀಘ್ರದಲ್ಲಿಯೇ ಮೈಸೂರು ನಗರದಲ್ಲಿನ ನೀರು ಪೂರೈಕೆ ವ್ಯತ್ಯಯ ಉಂಟಾಗದಂತೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಇ. ಮಾರುತಿ ರಾವ್ ಪವಾರ್ : ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತಿದ್ದೇನೆ. ಮುಖ್ಯ ಅಧೀಕ್ಷಕರು ಪರವಾನಗಿ ಕೊಟ್ಟ ನಂತರ ನಾವು ಬಲಮುರಿಯಲ್ಲಿರತಕ್ಕಂತಹ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆಂದು ಕೊಟ್ಟಿರತಕ್ಕಂತಹ ಉತ್ತರದಲ್ಲಿ ಇದೆ. ಕಳೆದ 2ವರ್ಷಗಳಿಂದ ಇಲ್ಲಿಯವರೆಗೆ ಏತಕ್ಕೆ ಮುಖ್ಯ ಅಧೀಕ್ಷಕರಿಂದ ಪರವಾನಗಿ ತಂದು ಮೈಸೂರು ನಗರದಲ್ಲಿರತಕ್ಕಂತಹ ನೀರಿನ ಹಾಹಾಕಾರವನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತಿಲ್ಲ? ಕಳೆದ ಅಧಿವೇಶನದಲ್ಲೂ ಇದೇ ರೀತಿಯ ಉತ್ತರವನ್ನು ಕೊಟ್ಟಿದ್ದರು. ಇದೇ ರೀತಿ ನಾವು ಉತ್ತರಗಳನ್ನು ತೆಗೆದುಕೊಂಡು ಹೋದರೆ ನಗರದಲ್ಲಿರತಕ್ಕಂತಹ ಜನರಿಗೆ ನಾವು ಏನು ಉತ್ತರ ಕೊಡಬೇಕು ಎಂದು ತಾವು ಹೇಳಬೇಕು. ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಎಷ್ಟು ದಿನಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ ಮುಖ್ಯ ಅಧೀಕ್ಷಕರಿಂದ ತಕ್ಷಣದಲ್ಲಿ ಪರವಾನಗಿ ಪಡೆದು ಮೈಸೂರು ನಗರಕ್ಕೆ 8 ಟಿ.ಎಂ.ಸಿ. ನೀರು ಬರುವಂತಹ ವ್ಯವಸ್ಥೆ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಎಷ್ಟು ದಿವಸದಲ್ಲಿ ಈ ಸಮಸ್ಯೆಯನ್ನು ಬಗೆಹರಿಸುತ್ತಾರೆ ಎಂಬ ಬಗ್ಗೆ ಉತ್ತರ ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಇಲ್ಲಿ ಒಂದು ಆಶ್ಚರ್ಯ ಕಾದಿದೆ. ಕಳೆದ ಅಧಿವೇಶನದಲ್ಲಿ ಪ್ರಿಂಟ್ ಆದ ಉತ್ತರವನ್ನೇ ದಿನಾಂಕ ಬದಲಾಯಿಸಿ ಇಲ್ಲಿ ಇಂದು ಉತ್ತರ ಕೊಟ್ಟಿದ್ದಾರೆ. ಕಳೆದ ಸಲ ಇದೇ ಪ್ರಶ್ನೆಯನ್ನು ನಾನು ಕೇಳಿದ್ದೆ. ಇದೇ ಉತ್ತರ ಕೊಟ್ಟಿದ್ದರು ಆದರೆ ಆಗ 8-9 ಇತ್ತು ಈಗ 22-2-96 ಇದೆ. ಆಗಲೂ ಶೀಘ್ರ ಎಂದು ಕೊಟ್ಟಿದ್ದಾರೆ ಈಗಲೂ ಅದೇ ಇದೆ. ಶೀಘ್ರ ಅಂದರೆ ಏನು ಅರ್ಥ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನೀತಿ ಸರಳೀಕರಣ. ಹೋದ ಸಾರಿ ಈ ರೀತಿ ಉತ್ತರ ಕೊಟ್ಟಿದ್ದಾರೆ ಈ ಸಾರಿಯೂ ಅದೇ ಉತ್ತರ ಕೊಟ್ಟಿದ್ದಾರೆ. ಸುಲಭವಾಗಿ ಶಾಸನಸಭೆ ನಡೆಯಲಿ ಎಂದು ಅವರು ತೀರ್ಮಾನ ಮಾಡಿದ್ದಾರೆಂದು ಕಾಣುತ್ತದೆ.

ಶ್ರೀ ಇ. ಮಾರುತಿ ರಾವ್ ಪವಾರ್ : ಇವತ್ತು ವಿದ್ಯುಚ್ಛಕ್ತಿಯ ಸಮಸ್ಯೆ ಇರುವಂತಹ ಹಿನ್ನೆಲೆಯಲ್ಲಿ ಬೋರ್‌ವೆಲ್‌ನಲ್ಲಿ ಬರತಕ್ಕಂತಹ ನೀರಿನ ಪ್ರಮಾಣದ ಹಿನ್ನೆಲೆಯಲ್ಲಿ ಕಾವೇರಿ ನದಿ ನೀರಿನ ಸಮಸ್ಯೆಯನ್ನು ಸಹ ಎದುರು ಹಾಕಿಕೊಂಡರೆ ನಾವು ಹೇಗೆ ಜನರ ಮಧ್ಯದಲ್ಲಿ ಕೆಲಸ ಮಾಡಬೇಕೆನ್ನುವುದರ ಬಗ್ಗೆ ತಾವು ವಿಚಾರ ಮಾಡಬೇಕು. ಮಾನ್ಯ ಮಂತ್ರಿಗಳು ಎಷ್ಟು ದಿನದೊಳಗಾಗಿ ಅಧೀಕ್ಷಕರಿಂದ ಪರವಾನಗಿ ಕೊಟ್ಟು ಆ ಕೆಲಸವನ್ನು ಪೂರ್ಣಗೊಳಿಸಿ ಮೈಸೂರು ನಗರದ ಜನರ ನೀರಿನ ಸಮಸ್ಯೆಯನ್ನು ಬಗೆಹರಿಸುತ್ತೀರಿ ಎಂಬ ಬಗ್ಗೆ ಖಚಿತವಾದ ಉತ್ತರ ಕೊಡಬೇಕು.

ಶ್ರೀ ವೈಜನಾಥ ಪಾಟೀಲ್ : ಕಳೆದ ಅಧಿವೇಶನದಲ್ಲಿ ಕೊಟ್ಟಂತಹ ಉತ್ತರವನ್ನೇ ಇದೇ ಅಧಿವೇಶನದಲ್ಲಿ ಮತ್ತೆ ಕೊಟ್ಟಿದೆ ಎಂದು ಹೇಳಿದರು. ಇದು ನನ್ನ ಒಬ್ಬನ ಖಾತೆಗೆ ಸಂಬಂಧಪಟ್ಟಿದ್ದಲ್ಲ. ಇರಿಗೇಷನ್ ಇಲಾಖೆಯ ಜೊತೆ ಮಾತುಕತೆ ನಡೆದಿದೆ. ಇರಿಗೇಷನ್‌ಗೆ ನೀರು ಕಡಿಮೆ ಬೀಳುತ್ತದೆ ಎಂಬ ಒತ್ತಾಯ ಇದೆ. ಆ ದೃಷ್ಟಿಯಿಂದ ಜಿಲ್ಲಾ ಮಂತ್ರಿಗಳು ಸಂಬಂಧಪಟ್ಟ ಮಂತ್ರಿಗಳ ಅಧಿಕಾರಿಗಳ ಜೊತೆ ಮತ್ತೊಂದು ಸಲ ಚರ್ಚೆ ಮಾಡಿ ಆದಷ್ಟು ಬೇಗ ಸಮಸ್ಯಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಇ. ಮಾರುತಿ ರಾವ್ ಪವಾರ್ : ನಾನು ಕೇಳಿದಂತಹ ಪ್ರಶ್ನೆ ಬೇರೆ. ಅವರು ಕೊಡತಕ್ಕಂತಹ ಉತ್ತರವೇ ಬೇರೆ. ಬಲಮುರಿಯಲ್ಲಿ ಬರತಕ್ಕಂತಹ ದೇವರಾಜ ಕೆನಾಲ್‌ನಿಂದ ಮೈಸೂರು ನಗರಕ್ಕೆ ನೀರನ್ನು ತೆಗೆದುಕೊಳ್ಳುವುದಕ್ಕೆ ಟೆಂಡರ್ ಆಗಿ, ಅಲ್ಲಿ ರೈತರಿಂದ ಕೆಲವು ಸಮಸ್ಯೆಗಳು ಬಂದು ಅಲ್ಲಿಂದ ನೀರು ತೆಗೆದುಕೊಳ್ಳುವುದಕ್ಕೆ ವಿರೋಧ ಮಾಡುತ್ತಿದ್ದಾರೆ. ಅದಕ್ಕೋಸ್ಕರ ನೇರವಾಗಿ ದೇವರಾಜ ಕೆನಾಲ್‌ನಿಂದ ನೀರನ್ನು ತೆಗೆದುಕೊಳ್ಳುವುದಕ್ಕೆ ಮುಖ್ಯ ಅಧೀಕ್ಷಕರಿಂದ ಪರವಾನಗಿ ಬೇಕು ಎಂಬ ಸಮಸ್ಯೆ ಮಾತ್ರ ಉದ್ಭವವಾಗಿದೆ. ಟೆಂಡರ್ ಎಲ್ಲಾ ಆಗಿದೆ. ಇದನ್ನು ತಕ್ಷಣ ಅವರು ಮಾಡಿಸಿಕೊಟ್ಟರೆ ಕೆಲಸ ಪ್ರಾರಂಭವಾಗುತ್ತದೆ. ಮೈಸೂರು ನಗರದಲ್ಲಿನ ಬಡಾವಣೆಗಳಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಅಧೀಕ್ಷಕರಿಂದ ಪರವಾನಗಿ ಕೊಟ್ಟು ಕೆಲಸವನ್ನು ತಕ್ಷಣದಲ್ಲಿ ಪ್ರಾರಂಭ ಮಾಡಿಸಬೇಕು.

ಅಧ್ಯಕ್ಷರು : ನೀವು ಅಷ್ಟು ಫಾಸ್ಟ್ ಆಗಿ ಹೇಳಿದರೆ ಅವರಿಗೆ ಅರ್ಥವಾಗುತ್ತಿಲ್ಲ.

ಶ್ರೀ ವೈಜನಾಥ ಪಾಟೀಲ್ : ಕಾವೇರಿ ನದಿಯಿಂದ ನೀರನ್ನು ತರಬೇಕಾದರೆ ಇರಿಗೇಷನ್ ಇಲಾಖೆಯ ಪರವಾನಗಿ ಬೇಕಾಗುತ್ತದೆ ಇದರ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ನಂತರ ಇದನ್ನು ಬಗೆಹರಿಸಲಿಕ್ಕೆ ಆದಷ್ಟು ಬೇಗ ಪ್ರಯತ್ನ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು : ಕಳೆದ ಅಧಿವೇಶನದಲ್ಲೂ ಇದೇ ರೀತಿಯ ಉತ್ತರ ಕೊಟ್ಟಿದ್ದೀರಿ. ನೀರಾವರಿ ಇಲಾಖೆಗೆ ಪತ್ರವನ್ನು ಬರೆಯಬೇಕಾಗಿತ್ತು ಇಲ್ಲಿಯವರೆಗೆ ಬರೆದಿಲ್ಲ. ಯಾವಾಗ ನೀವು ಅವರಿಗೆ ಪತ್ರ ಬರೆದಿರಿ? ಅವರಿಂದ ಉತ್ತರವೇನು ಬಂತು? ಎಂಬ ಬಗ್ಗೆ ನಮಗೆ ಮಾಹಿತಿ ಇಲ್ಲ, ಅದನ್ನು ಕೊಡಿ.

ಶ್ರೀ ಇ. ಮಾರುತಿ ರಾವ್ ಪವಾರ್ : ನಾವು ಬರೀ ಇಲ್ಲಿ ಪ್ರಶ್ನೆ ಕೇಳಿ ಉತ್ತರವನ್ನು ಪಡೆಯುವುದು ಸಮುಜಾಯಿಷ ಪಡೆದು ಹೋಗುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ನೇರವಾಗಿ ಸ್ಪಷ್ಟವಾಗಿ ಯಾವಾಗ ಇದನ್ನು ಸಂಪೂರ್ಣ ಮಾಡುತ್ತಾರೆಂದು ಹೇಳಬೇಕು.

ಶ್ರೀ ವೈಜನಾಥ ಪಾಟೀಲ್ : ನಾವು ಆದೇಶ ಕೊಟ್ಟಿದ್ದೇವೆ.ಆ ಸಭೆಯಲ್ಲಿ ಇರಿಗೇಷನ್ ಇಲಾಖೆಯ ಅಧಿಕಾರಿಗಳೂ ಕೂಡ ಇದ್ದರು.

ಅಧ್ಯಕ್ಷರು : ಹೋದ ಸಲ ಇದೇ ಪ್ರಶ್ನೆಗೆ ಇಂಥಾದ್ದೆ ಉತ್ತರ ಕೊಟ್ಟಿದ್ದೀರಿ ಇಷ್ಟು ದಿವಸವಾದ ಮೇಲೆ ಮತ್ತೆ ಇದೇ ಉತ್ತರ ಬರುತ್ತಿದೆ. ಈ ಮಧ್ಯಂತರ ಅವಧಿಯೊಳಗೆ ಹೋದ ಸಲ ಪ್ರಶ್ನೆ ಕೇಳಿದ್ದಕ್ಕೂ ಈಗಲೂ ಯಾವುದೇ ಪ್ರಗತಿಯಾಗಿಲ್ಲ ಸರಕಾರ ನಿಷ್ಕ್ರೀಯವಾಗಿದೆಯೇ? ಏಕೆ ಹೀಗಾಗಿದೆ ನೀವು ಮಂತ್ರಿಗಳು ಸರಿಯಾಗಿ ಜವಾಬು ಕೊಡಬೇಕು. 6 ತಿಂಗಳು ಕಳೆದು ಮತ್ತೆ ಇದೇ ಪ್ರಶ್ನೆ ಕೇಳಿದಾಗ ಇದೇ ರೀತಿಯ ಉತ್ತರ ಕೊಟ್ಟರೆ ನಾವು ಏಕೆ ಪ್ರಶ್ನೆ ಕೇಳಬೇಕು ಎಂಬ ಅಭಿಪ್ರಾಯ ನಿಮ್ಮದು ಅಲ್ಲವೇ? ನಿಧಾನಕ್ಕೆ ನಾನು ಹೇಳಿದ ಹಾಗೆ ತಾವು ಹೇಳಿ. ತಾವು ಆಶ್ವಾಸನೆ ಕೊಡಬೇಕು. ಇನ್ನು ಮತ್ತೆ ಈ ಸಮಸ್ಯೆ ಉದ್ಭವವಾಗದ ಹಾಗೆ ಅಧಿಕಾರಿಗಳ ಸಭೆ ಕರೆದು ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಕ್ಷಣ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತೇನೆಂದು ಹೇಳಿ.

ಶ್ರೀ ವೈಜನಾಥ ಪಾಟೀಲ್ : ಈಗಾಗಲೇ ಸಭೆ ಕರೆದಿದ್ದೇನೆ. ಆ ಸಭೆಯಲ್ಲಿ ಶಾಸಕರು ಇರಲಿಲ್ಲವೆಂದು ಕಾಣುತ್ತದೆ. ಮತ್ತೊಂದು ಸಲ ಸಭೆ ಕರೆದು ಆದಷ್ಟು ಬೇಗ ಅದರ ಬಗ್ಗೆ ಕ್ರಮ....

ಡಾ|| ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೆ 15 ಪ್ರಶ್ನೆಯಲ್ಲಿ ಬರೀ 8 ಪ್ರಶ್ನೆಗಳಿಗೆ ಮಾತ್ರ ಉತ್ತರ ಒದಗಿಸಲಾಗಿದೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಕಾಲ ಮುಕ್ತಾಯವಾಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ 22-2-96ರ 15ನೇ ಪಟ್ಟಿಯಲ್ಲಿರುವ 41 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಆಶ್ರಯ ಯೋಜನೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಮನೆಗಳು

ಆಶ್ರಯ ಯೋಜನೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಮನೆಗಳು

177 - ಡಾ|| ಯು. ಚಿತ್ತರಂಜನ್ (ಭಟ್ಕಳ್) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಮನೆಗಳನ್ನು ಕಟ್ಟುವ ಗುರಿ ಎಷ್ಟು?

ಆ) ಈಗ ಎಷ್ಟು ಹಣ ಮಂಜೂರು ಮಾಡಲಾಗಿದೆ?

ಇ) ಈ ಬಗ್ಗೆ ಈಗಾಗಲೇ ಬಿಡುಗಡೆ ಆದ ಹಣವೆಷ್ಟು?

ಈ) ಉಳಿದ ಹಣವನ್ನು ಬಿಡುಗಡೆ ಮಾಡುವ ಯೋಜನೆ ಇದೆಯೇ?

ಶ್ರೀ ಬಸವರಾಜ ರಾಯ್‌ರೆಡ್ಡಿ (ವಸತಿ ರಾಜ್ಯಸಚಿವರು) :

	ಗ್ರಾಮಾಂತರ	ನಗರ	ಒಟ್ಟು
ಅ)	2200	885	3085
ಆ)	44.00	216.82	656.82
ಇ)	186.36	15.99	206.50
	(ರೂ. ಲಕ್ಷಗಳು)	(ರೂ. ಲಕ್ಷಗಳು)	(ಲಕ್ಷಗಳು)

93-94ರಲ್ಲಿ ಬಿಡುಗಡೆಯಾದ
ಹೆಚ್ಚುವರಿ ಹಣ 6.15

ಈ) ಅವಶ್ಯಕತೆಗನುಸಾರವಾಗಿ ಪ್ರಗತಿಯ ವರದಿಯನ್ನಾದರಿಸಿ ಹಣವನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಭಟ್ಕಳದಲ್ಲಿ ಗಿರಿಜನರಿಗೆ ವಸತಿ ನಿಲಯ ಮಂಜೂರು ಮಾಡುವ ಕುರಿತು

170 Ë ಡಾ|| ಯು. ಚಿತ್ತರಂಜನ್ (ಭಟ್ಕಳ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವಸತಿ ನಿಲಯವಿಲ್ಲದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಭಟ್ಕಳದಲ್ಲಿ ಹೊಸದಾಗಿ ಪರಿಶಿಷ್ಟ ಪಂಗಡವರಿಗೆ ವಿದ್ಯಾರ್ಥಿ ವಸತಿ ನಿಲಯ ಸ್ಥಾಪಿಸಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಆ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನಸಂಖ್ಯೆಗೆ ಅನುಗುಣವಾಗಿ ಭಟ್ಕಳ ತಾಲ್ಲೂಕಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿ ನಡೆಸಲಾಗುತ್ತಿದೆ.

ಆ) ಮೇಲೆ ವಿವರಿಸಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಶ್ರಾಂತಿ ತಾಣವಾದ ಇಂದಿರಾ ಗಾಜಿನ ಮನೆಯ ಅವ್ಯವಸ್ಥೆ

186 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರ ಜನತೆಯ ಪ್ರಮುಖ ವಿಶ್ರಾಂತಿ ತಾಣವಾದ ಇಂದಿರಾ ಗಾಜಿನ ಮನೆ ಸರಿಯಾದ ಉಸ್ತುವಾರಿ ಇಲ್ಲದೆ ಅವ್ಯವಸ್ಥೆಯಾಗಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅದನ್ನು ಸುಧಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ

ಆ) ಇಂದಿರಾ ಗಾಜಿನ ಮನೆಯನ್ನು ತಗ್ಗು ಪ್ರದೇಶದಲ್ಲಿ ಕಟ್ಟಲಾಗಿದ್ದು, ಆ ತಗ್ಗು ಪ್ರದೇಶದಲ್ಲಿ ಇದೇ ವರ್ಷ 2,00 ಟ್ರಕ್ಕೂಗಳಿಗೂ ಮಿಕ್ಕಿ ಮಣ್ಣನ್ನು ಹಾಕಿ ಸಮ ಮಾಡುವ ಕಾರ್ಯಭರದಿಂದ ಸಾಗಿದೆ. ಅಲ್ಲದೆ 1994-95ರಲ್ಲಿ ಸದರಿ ಉದ್ಯಾನದ ನಕ್ಷೆಯಂತೆ ರಸ್ತೆಗಳಿಗೆ ಡಾಂಬರೀಕರಣ ಮಾಡುವುದಲ್ಲದೇ, ಕಲ್ಲಿನ ಜೋಡಣೆಯನ್ನು ಮಾಡಲಾಗಿದೆ. ಮತ್ತು 2-12-95ರಂದು ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಬೃಹತ್ ಕಾರಂಜಿಯ ಉದ್ಘಾಟನೆಯಾಗಿ ಪ್ರತಿ ದಿವಸ ಸಾವಿರಾರು ಜನರು ವೀಕ್ಷಿಸಿ ಸಂತೋಷಿಸುತ್ತಿದ್ದಾರೆ. ಮತ್ಸ್ಯಾಲಯದ ನವೀಕರಣವನ್ನು ಕೈಗೆತ್ತಿಕೊಳ್ಳಲಾಗಿದೆ. ಇದಲ್ಲದೇ ಈಜುಕೊಳದಿಂದ ಬರುವ ನೀರು ಹಾಗೂ ಉದ್ಯಾನದಲ್ಲಿ ಬರುವ ನೀರನ್ನು ಹೊರ ಹಾಕಲು ಪೆಟ್ಟಿಗೆ ಆಕಾರದ ಗಟಾರವನ್ನು ಕಟ್ಟುತ್ತಿದ್ದು ಅದು ಮುಗಿಯುವ ಹಂತದಲ್ಲಿದೆ. ಈ ಉದ್ಯಾನವನ್ನು ಬರುವ ಸೆಪ್ಟೆಂಬರ್‌ನಲ್ಲಿ ಜರುಗುವ ಉದ್ಯಾನವನಗಳ ಸ್ಪರ್ಧೆಗೆ ಕೊಡುವ ಮಟ್ಟಕ್ಕೆ ತರಲಾಗುವುದು.

ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಸಾರ್ವಜನಿಕ ದೀಪದ ವ್ಯವಸ್ಥೆ

179 - ಶ್ರೀ ಜಗದೀಶ್ ಶೆಟ್ಟರ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಸಾರ್ವಜನಿಕ ದೀಪದ ವ್ಯವಸ್ಥೆಯನ್ನು ಸುಧಾರಿಸಲು ಮಹಾನಗರ ಸಭೆಯ ಆಡಳಿತ ವ್ಯಾಪ್ತಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಬ್‌ಡಿವಿಜನ್ ಒಂದು ಪ್ರಾರಂಭಿಸುವ ವಿಷಯ ಅತೀ ಅವಶ್ಯ ಇರುವುದು ಸರ್ಕಾರದವರು ಯೋಜಿಸಿರುವರೆ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) ಹೌದು

ಆ) ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯ ಆಡಳಿತ ವ್ಯಾಪ್ತಿಯಲ್ಲಿ ಕೆ.ಇ.ಬಿ. ಉಪ ವಿಭಾಗವನ್ನು ತೆರೆಯುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದ್ದು ಈ ವಿಭಾಗಕ್ಕಾಗಿಯೇ ಒಂದು ಸಹಾಯಕ ಇಂಜನಿಯರ್ ಹುದ್ದೆ, 9 ಲೈನ್‌ಮೆನ್ ಹುದ್ದೆ ಹಾಗೂ 17 ಸಹಾಯಕ ಲೈನ್‌ಮೆನ್ ಹುದ್ದೆಗಳನ್ನು ಹೊಸದಾಗಿ ಸೃಜಿಸಬೇಕಾಗುತ್ತದೆ. ಈ ಹೊಸ

ಹುದ್ದೆಗಳನ್ನು ಸೃಜಿಸಿದಲ್ಲಿ ಮಹಾನಗರಪಾಲಿಕೆಗೆ ಹೆಚ್ಚಿನ ಆರ್ಥಿಕ ಹೊರೆ ಬೀಳುವುದರಿಂದ, ನಗರಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೆ.ಇ.ಬಿ. ಸಬ್ ಡಿವಿಜನ್‌ನನ್ನು ತೆಗೆಯುವ ಬಗ್ಗೆ ಪರಿಶೀಲಿಸಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಚುನಾವಣಾ ಸ್ಥಾನ ಮೀಸಲಾತಿ ಬಗ್ಗೆ

111 - ಶ್ರೀ ಜಗದೀಶ ಶೆಟ್ಟರ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಚುನಾವಣಾ ಡಿವಿಜನ್‌ಗಳ ಪುನರ್ ವಿಂಗಡಣೆ ಮತ್ತು ಸದರಿ ಡಿವಿಜನ್‌ಗಳ ಕುರಿತು ಸ್ಥಾನಮೀಸಲಾತಿ ನಿರ್ಧರಿಸಿದ ಕ್ರಮಗಳು ಸರಿಯಾಗಿ ನಡೆದಿರುವುದಿಲ್ಲ ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯಲ್ಲಿ ಮಾಡಿರುವ ಕ್ಷೇತ್ರವಿಂಗಡಣೆ ಹಾಗೂ ಮೀಸಲಾತಿ ನಿಯಮಾನುಸಾರ ಇವೆ.

ಆ) ಉದ್ಭವಿಸುವುದಿಲ್ಲ

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ರಸ್ತೆಗಳ ಒಟ್ಟು ಉದ್ದಳತೆಯ ಕುರಿತು

187 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ರಸ್ತೆಗಳ ಒಟ್ಟು ಉದ್ದಳತೆ ಎಷ್ಟು, ಈ ರಸ್ತೆಗಳಲ್ಲಿ ಎಷ್ಟು ರಸ್ತೆಗಳು ಸುಸ್ಥಿತಿಯಲ್ಲಿವೆ? ರಸ್ತೆಗಳ ದುಸ್ಥಿತಿಗೆ ಕಾರಣಗಳೇನು, ದುಸ್ಥಿತಿಯಲ್ಲಿರುವ ರಸ್ತೆಗಳ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ರಸ್ತೆಗಳ ಒಟ್ಟು ಉದ್ದಳತೆ 550 ಕಿ.ಮೀ. ಈ ರಸ್ತೆಗಳಲ್ಲಿ ಸುಮಾರು 220 ಕಿ.ಮೀ. ರಸ್ತೆಗಳು ಸುಸ್ಥಿತಿಯಲ್ಲಿವೆ. ಇನ್ನುಳಿದ ರಸ್ತೆಗಳ ದುಸ್ಥಿತಿಗೆ ಕಾರಣಗಳು ಈ ಕೆಳಗಿನಂತಿವೆ.

1) ಒಳಚರಂಡಿ ಜೋಡಣೆ
2) ಒಳಚರಂಡಿ ರಿಪೇರಿ
3) ಹೊಸ ನಳಗಳ ಜೋಡಣೆ
4) ನಳಗಳ ರಿಪೇರಿ
5) ನಳಗಳ ಸ್ಥಳಾಂತರ
6) ನೀರು ಪೂರೈಕೆ ಕೊಳವೆ ರಿಪೇರಿ
7) ನೀರು ಪೂರೈಕೆ ಕೊಳವೆ ಜೋಡಣೆ
8) ವಿದ್ಯುತ್ ಕೇಬಲ್ ಜೋಡಣೆ

9) ಪಿ.ಅಂಡ್.ಟಿ. ಕೇಬಲ್ ಜೋಡಣೆ
10) ಕಟ್ಟಡ ನಿರ್ಮಾಣಕ್ಕಾಗಿ ರಸ್ತೆಗಳ ಮೇಲೆ ಸಾಮಗ್ರಿ ಶೇಖರಣೆ
11) ಕಟ್ಟಡ, ನಿರ್ಮಾಣಕ್ಕಾಗಿ ರಸ್ತೆಗಳ ಮೇಲೆ ಸಾಮಗ್ರಿ ಶೇಖರಣೆ
12) ಅಧಿಕವಾದ ವಾಹನ ಸಾಂದ್ರತೆ.

ದುಸ್ಥಿತಿಯಲ್ಲಿರುವ ರಸ್ತೆಗಳ ಸಂರಕ್ಷಣೆ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ :

1) ಸಧ್ಯಕ್ಕೆ ಪ್ರಮುಖ ರಸ್ತೆಗಳಲ್ಲಿರುವ ತಗ್ಗುಗಳನ್ನು ಖಡಿ ಹಾಗೂ ಮುರ್‍ರಂ ಹಾಕಿ ಮುಚ್ಚಲಾಗುತ್ತಿದೆ.
2) ರಸ್ತೆಯ ಮೇಲೆ ಮಳೆ ನೀರು ಶೇಖರಣೆಯಾಗದಂತೆ ಬದಿಯ ಮಣ್ಣನ್ನು ತೆಗೆದು ನೀರು ಗಟಾರಗೆ ಸೇರುವಂತೆ ಮಾಡಲಾಗುತ್ತಿದೆ.
3) ಮಳೆಗಾಲ ಮುಗಿದ ಮೇಲೆ ರಸ್ತೆ ಮೇಲಿನ ತಗ್ಗು ಹಾಗೂ ಕಡಿಗಳನ್ನು ಡಾಂಬರ್ ಹಾಗೂ ಜಲ್ಲಿಗಳಿಂದ ಮುಚ್ಚಲಾಗುತ್ತದೆ.
4) ಆರ್ಥಿಕ ಪರಿಸ್ಥಿತಿಗೆ ಅನುಸರಿಸಿ ಅತ್ಯಂತ ಅವಶ್ಯಕ ರಸ್ತೆಗಳಿಗೆ ಮಾತ್ರ ಡಾಂಬರ ಪುನರ್‌ಲೇಪನ ಮಾಡಲಾಗುತ್ತದೆ.

ರಾಜ್ಯದಲ್ಲಿ ವಿಶ್ವಯೋಜನೆ ಅಡಿಯಲ್ಲಿ ಕೈಗೊಂಡ ಕ್ರಮಗಳು

180 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 'ವಿಶ್ವ' ಯೋಜನೆಯಡಿ ಯಾವ ಯಾವ ಕಾರ್ಯಕ್ರಮಗಳನ್ನು ಅಳವಡಿಸಲಾಗಿದೆ?

ಆ) 'ವಿಶ್ವ' ಯೋಜನೆಯಡಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಹೊಂದಾಣಿಕೆ ಮತ್ತು ಕಾರ್ಯಕ್ರಮಗಳೇನು?

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ವಿಶ್ವ' ಯೋಜನೆಯಡಿ ಎಷ್ಟು ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ?

ಈ) ಈ ಯೋಜನೆ ಕಾರ್ಯಗತಗೊಳ್ಳದಿರಲು ಕಾರಣಗಳೇನು? ಹಾಗೂ ಈ ಯೋಜನೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಎನ್.ಎಂ. ನಬಿ (ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು) :

ಅ) 'ವಿಶ್ವ' ಯೋಜನೆಯಡಿ ರಾಜ್ಯದಲ್ಲಿ ಗ್ರಾಮೀಣ ನಿರುದ್ಯೋಗಿಗಳಿಗೆ ತರಬೇತಿ, ಕುಶಲಕರ್ಮಿಗಳಿಗೆ ವಾಸದ ಕಾರ್ಯಾಗಾರಗಳು, ಸಾಮಾನ್ಯ ಕಾರ್ಯಾಗಾರಗಳು, ತರಬೇತಿ ಹೊಂದಿದ ಹಾಗೂ ಅನುವಂಶಿಕ ಕುಶಲಕರ್ಮಿಗಳನ್ನು ಉತ್ಪಾದನೆಯಲ್ಲಿ ತೊಡಗಿಸಲು ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಕೊಡಿಸುವುದು ಹಾಗೂ ಉತ್ಪಾದನೆಯಲ್ಲಿ ತೊಡಗಿಸಿದ ಫಲಾನುಭವಿಗಳಿಗೆ ನಿರಂತರವಾಗಿ ಕಚ್ಚಾ ಮಾಲು ಹಾಗೂ ಮಾರುಕಟ್ಟೆ ಸೌಲಭ್ಯ ಒದಗಿಸುವಿಕೆ, ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಧನಸಹಾಯ ಹಾಗೂ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಧನ ಸಹಾಯ ಇವೇ ಮುಂತಾದ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.

ಆ) 'ವಿಶ್ವ' ಯೋಜನೆಗೆ ಬೇಕಾದ ಪೂರ್ಣ ಆಯವ್ಯಯವನ್ನು ರಾಜ್ಯದಿಂದಲೇ ಭರಿಸುತ್ತಿದ್ದು, ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಪಡೆದಿಲ್ಲ.

ಇ) 1991-92ರ ಸಾಲಿನಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ವಿಶ್ವ' ಯೋಜನೆಯು ಅನುಷ್ಠಾನಗೊಳಿಸಲಾಗುತ್ತಿದ್ದು, 1991-92ರ ಸಾಲಿನಿಂದ 1994-95ರ ಸಾಲಿನವರೆಗೆ 1704 ಫಲಾನುಭವಿಗಳಿಗೆ ತರಬೇತಿಯನ್ನು ನೀಡಲಾಗಿದೆ ಹಾಗೂ 6594 ಫಲಾನುಭವಿಗಳನ್ನು

ಉತ್ಪಾದನೆಯಲ್ಲಿ ತೊಡಗಿಸಲಾಗಿದೆ. 1991-92ರ ಸಾಲಿನಿಂದ 1994-95ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ರೂ. 27.165 ಲಕ್ಷಗಳನ್ನು ತರಬೇತಿಗಾಗಿ ವೆಚ್ಚ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1994-95ರ ಸಾಲಿನಲ್ಲಿ ತರಬೇತಿ, ಉತ್ಪಾದನೆ, ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಸಹ ನೆರವು ನೀಡಲಾಗಿದ್ದು ವಿವರಗಳು ಕೆಳಕಂಡಂತಿದೆ.

1)	ವಿಶ್ವಕರ್ಮ ಗುರುಕುಲ ಕುಂಬಾಶಿ ಕುಂದಾಪುರ ತಾಲ್ಲೂಕು	ರೂ. 1.50 ಲಕ್ಷ	ಭೂಮಿ, ಕಟ್ಟಡ ಹಾಗೂ ಯಂತ್ರೋಪಕರಣಗಳಿಗಾಗಿ
2)	ಪಾಟರಿ ಸೊಸೈಟಿ ಕೈರತಡಕ	ರೂ. 5.60 ಲಕ್ಷ	ವಾಸದ ಕಾರ್ಯಾಗಾರಗಳಿಗೆ
3)	ಆಚಾರ್ಯ ಡೈಮಂಡ್ಸ್, ಕುಕ್ಕುಂದೂರು, ಉಡುಪಿ.	ರೂ. 8.56 ಲಕ್ಷ	ಯಂತ್ರೋಪಕರಣಗಳಿಗೆ

1995-96ರ ಸಾಲಿನಲ್ಲಿ ತರಬೇತಿಗಾಗಿ 725 ಫಲಾನುಭವಿಗಳನ್ನು ಮತ್ತು ಉತ್ಪಾದನೆಯಲ್ಲಿ 1485 ಫಲಾನುಭವಿಗಳನ್ನು ಆಳವಡಿಸಿಕೊಳ್ಳಲಾಗುತ್ತದೆ. ಈ ತರಬೇತಿಗಾಗಿ ಜನವರಿ 96ರ ಅಂತ್ಯದವರೆಗೆ ರೂ. 19.65 ಲಕ್ಷ ಬಿಡುಗಡೆ ಮಾಡಲಾಗಿದೆ. ಇದಲ್ಲದೆ, ಮಣಿಪಾಲದಲ್ಲಿ ಹಸ್ತಶಿಲ್ಪ ಟ್ರಸ್ಟ್ ಮೂಲಕ ಸ್ಥಾಪಿಸಲಿರುವ ಉತ್ಪಾದನಾ ಮತ್ತು ತರಬೇತಿ ಕೇಂದ್ರಕ್ಕಾಗಿ ರೂ. 14.08 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಇದುವರೆವಿಗೂ 1995-96ರ ಸಾಲಿನಲ್ಲಿ ಒಟ್ಟು ರೂ. 33.74 ಲಕ್ಷಗಳನ್ನು ವಿಶ್ವ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಾಮಂಜೂರಿನಲ್ಲಿ ಅಂಗವಿಕಲರ ಕಲ್ಯಾಣಾಭಿವೃದ್ಧಿಗಾಗಿ ಒಂದು ನೋಟ್ ಪುಸ್ತಕ ತಯಾರಿಕಾ ಘಟಕ ಸ್ಥಾಪಿಸಲು ಉದ್ದೇಶಿಸಿದ್ದು, ಇದಕ್ಕಾಗಿ ರೂ. 4.281 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಅನುಮೋದಿಸಲಾಗುತ್ತದೆ. ಹಾಗೂ 130 ಫಲಾನುಭವಿಗಳಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ 'ವಿಶ್ವ' ಯೋಜನೆಯಡಿ ತರಬೇತಿ ನೀಡಲು ಅನುಮೋದಿಸಿದ್ದು, ಈ ಕಾರ್ಯಕ್ರಮಕ್ಕಾಗಿ ರೂ. 2.145 ಲಕ್ಷ ಬಿಡುಗಡೆ ಮಾಡಲಾಗುತ್ತದೆ. ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಈ) 1994-95ರ ವರೆಗೆ ಒಟ್ಟು ರೂ. 42.825 ಲಕ್ಷಗಳನ್ನು ತರಬೇತಿ ಹಾಗೂ ಇತರ ಸಂಘ ಸಂಸ್ಥೆಗಳ ಮುಖಾಂತರ ವಿಶ್ವ ಯೋಜನೆಯನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಲಾಗಿದೆ. 1995-96ನೇ ಸಾಲಿನಲ್ಲಿ ಜನವರಿ 96ರ ಅಂತ್ಯದವರೆಗೆ ತರಬೇತಿಗಾಗಿ 19.66 ಲಕ್ಷ ರೂ.ಗಳನ್ನು ಹಾಗೂ ಸಂಘ ಸಂಸ್ಥೆಗಳಿಗೆ 14.08 ಲಕ್ಷ ರೂ.ಗಳನ್ನು ಒಟ್ಟು 33.74 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಸರ ವಿಶ್ಲೇಷಣಾ ಯೋಜನೆ

115 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಪರಿಸರ ಇಲಾಖೆ ಹಾಗೂ ಡೆನಿಡಾ ಸಹಯೋಗದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಸರ ವಿಶ್ಲೇಷಣಾ ಯೋಜನೆಯನ್ನು 1993ರಿಂದ ಕೈಗೊಂಡಿದೆಯೇ?

ಆ) ಈ ಅಧ್ಯಯನ ಸಮಿತಿಯ ತಜ್ಞರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ?

ಇ) ಈ ಅಧ್ಯಯನ ಸಮಿತಿಯ ವರದಿಯ ಆಧಾರದಲ್ಲಿ ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಹೌದು

ಆ) ಹೌದು

ಇ) ವರದಿಯ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಮೈಸೂರು ನಗರದಲ್ಲಿರುವ ಕುಡಿಯುವ ನೀರಿನ ಸಮಸ್ಯೆ

184 - ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ನರಸಿಂಹರಾಜ ಕ್ಷೇತ್ರದಲ್ಲಿರುವ ಸಿದ್ಧಾರ್ಥನಗರ, ಉದಯಗಿರಿ, ನಜರ್‌ಬಾದ್ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದ್ದು ಇದರ ಪರಿಹಾರಕ್ಕೆ ನಗರದ ಕೆ.ಆರ್. ವೃತ್ತದಿಂದ ಸಯ್ಯಾಜಿರಾವ್ ರಸ್ತೆಯ ಮೂಲಕ ನೀರಿನ ಪೈಪುಗಳನ್ನು ಅಳವಡಿಸಲು 1991ರಲ್ಲಿ ಕೆಲಸ ಪ್ರಾರಂಭಿಸಲು ಗುತ್ತಿಗೆ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ತಕ್ಷಣ ಪ್ರಾರಂಭಿಸಲು ತಾವು ತೆಗೆದುಕೊಂಡಿರುವ ಕ್ರಮವೇನು? ಈ ವಿಷಯ ಯಾವ ಹಂತದಲ್ಲಿದೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು, ನಿಜ

ಆ) ಸದರಿ ಕೆಲಸದಲ್ಲಿ ಒಟ್ಟು 800 ಮಿ.ಮೀ. ವ್ಯಾಸದ 4810 ಮೀ. ಪಿ.ಎಸ್.ಸಿ. ಕೊಳವೆ ಅಳವಡಿಸಬೇಕಿದ್ದು ಇದುವರೆಗೆ ಒಟ್ಟು 4520 ಮಿ. ಕೊಳವೆಗಳನ್ನು ಟೌನ್‌ಹಾಲಿನಿಂದ ಜರ್ಮನ್ ಪ್ರೆಸ್‌ವರೆಗೆ ಹಾಕಲಾಗಿದೆ, ಉಳಿದ 290 ಮಿ. ಉದ್ದದ ಕೊಳವೆಗಳನ್ನು ಹೆಚ್ಚು ವಾಹನ ಸಂಚಾರವಿರುವ ಕೆ.ಆರ್. ವೃತ್ತದ ಬಳಿ ಹಾಕಬೇಕಾಗಿದ್ದ ಪಿ.ಎಸ್.ಸಿ. ಬದಲು ಉಕ್ಕಿನ ಕೊಳವೆ ಅಳವಡಿಸಲು ತೆಗೆದುಕೊಳ್ಳಲಾಗುತ್ತಿದೆ.

ಉಡುಪಿ ತಾಲ್ಲೂಕು ನೆಂಜಾರು ಗ್ರಾಮದಲ್ಲಿ ಅಕ್ರಮ ಗಣಿಗಾರಿಕೆ

172 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ನೆಂಜಾರು ಗ್ರಾಮದಲ್ಲಿ ಅಕ್ರಮವಾಗಿ ಗ್ರಾನೈಟ್‌ನ್ನು ಲೂಟಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಅಕ್ರಮಕ್ಕೆ ಕಾರಣರಾದವರ ಮೇಲೆ ನಿರ್ಲಿಪ್ತ ಧೋರಣೆ ತಳೆದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರದವರು ಶಿಸ್ತಿನ ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಡಿ. ಜಯರಾಂ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಮೈಸೂರು ನಗರದ ಕುಡಿಯುವ ನೀರಿನ ಸಮಸ್ಯೆ

57 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿನ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿರುವುದು ನಿಜವೇ? ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಮೈಸೂರು ನಗರಕ್ಕೆ ಕಳೆದ 5 ವರ್ಷಗಳಲ್ಲಿ ಯಾವುದಾದರೂ ಶಾಶ್ವತ ಕುಡಿಯುವ ನೀರಿನ ಯೋಜನೆ ಕಾರ್ಯರೂಪಕ್ಕೆ ಬಂದಿದೆಯೇ?

ಇ) ಕಾವೇರಿ 3ನೇ ಯೋಜನೆ 6 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಕಾರಣವೇನು? ಯೋಜನೆ ಎಂದು ಪ್ರಾರಂಭವಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಮೈಸೂರು ನಗರದಲ್ಲಿನ ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ತೊಂದರೆಯುಂಟಾಗಿದೆ. ಕೆಲವು ಪ್ರದೇಶಗಳಿಗೆ ಕೊಳವೆ ಬಾವಿಗಳಿಂದ ನೀರನ್ನು ಒದಗಿಸುತ್ತಿದ್ದು ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿ ಕಡಿಮೆಯಾಗಿರುದರಿಂದ ಮತ್ತು ವಿದ್ಯುತ್ ತೊಂದರೆಯಿಂದಾಗಿ ನೀರು ಸರಬರಾಜಿನ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿರುತ್ತದೆ. ಇಂತಹ ಪ್ರದೇಶಗಳನ್ನು ಗುರುತಿಸಿ ಅಲ್ಲಲ್ಲಿ ಹೆಚ್ಚು ಕೊಳವೆ ಬಾವಿಗಳನ್ನು ಕೊರೆದು ಹೆಚ್ಚು ಇಳುವರಿ ಇರುವ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್ ಅಳವಡಿಸಿ ನೀರಿನ ಪ್ರಮಾಣವನ್ನು ಸರಿದೂಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಹಾಲಿ ಇರುವ ನಗರ ಪ್ರದೇಶಕ್ಕೆ ಶಾಶ್ವತ ನೀರು ಸರಬರಾಜು ಸಮಸ್ಯೆ ಪರಿಹಾರಕ್ಕೆ ಈಗಾಗಲೇ ಪ್ರಗತಿಯಲ್ಲಿರುವ 650.00 ಲಕ್ಷ ರೂ.ಗಳ ಅಂದಾಜು ಹಾಗೂ 170 ಲಕ್ಷ ರೂ.ಗಳ ಅಂದಾಜು ವೆಚ್ಚದ ಕಾಮಗಾರಿಗಳನ್ನು ತ್ವರಿತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಮೈಸೂರು ನಗರಕ್ಕೆ ಕುಡಿಯುವ ನೀರಿನ ಸಮಗ್ರ ಅಭಿವೃದ್ಧಿಗಾಗಿ 1990ರಲ್ಲಿ ರೂ. 6.50 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಗರದ ವಿತರಣಾ ಸವ್ಯವಸ್ಥೆಯನ್ನು ನವೀಕರಣಗೊಳಿಸುವುದು ಮತ್ತು ಹೆಚ್ಚುವರಿ ಜಲ ಸಂಗ್ರಹಣಾಗಾರಗಳನ್ನು ನಿರ್ಮಿಸುವುದು ಹಾಗೂ 8 ಎಂಜಿಡಿ ನೀರನ್ನು ಹೆಚ್ಚುವರಿಯಾಗಿ ಬೆಳಗೊಳದಿಂದ ಒದಗಿಸುವುದು, ಇದರ ಜೊತೆ ಹಾಲಿಕಾವೇರಿ ಮೂರನೇ ಹಂತದ ಯೋಜನೆಯಡಿಯಲ್ಲಿ ಬೂಸ್ಟರ್ ಯಂತ್ರಾಗಾರವನ್ನು ಅಳವಡಿಸುವ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈಗಾಗಲೇ ಬೂಸ್ಟರ್ ಯಂತ್ರಾಗಾರರ ಕೆಲಸ ಮುಗಿದಿದ್ದು ಯಂತ್ರಾಗಾರ ಚಾಲನೆಯಲ್ಲಿದೆ. ಇದರಿಂದ ನಗರಕ್ಕೆ ಪ್ರತಿದಿನ 3 ಎಂಜಿಡಿ ಹೆಚ್ಚುವರಿ ನೀರು ಸರಬರಾಜಾಗುತ್ತಿದೆ ಹಾಗೂ ಉಳಿದ ಎಲ್ಲಾ ಇತರೆ ಕಾಮಗಾರಿಗಳು ಪ್ರಗತಿಯಲ್ಲಿದ್ದು ಯೋಜನೆಯನ್ನು ಜೂನ್ 1997ರೊಳಗೆ ಮುಗಿಸಲು ಉದ್ದೇಶಿಸಿದೆ.

ಇ) ಕಾವೇರಿ 4ನೇ ಹಂತದ ಯೋಜನೆಗೆ 19.81 ಕೋಟಿಗಳಿಗೆ ಸರ್ಕಾರದ ಮಂಜೂರಾತಿ ದೊರೆತಿದ್ದು, ಇದನ್ನು ವಿಶ್ವ ಅಭಿವೃದ್ಧಿ ಬ್ಯಾಂಕ್‌ನ ನೀತಿ ನಿಯಮಗಳಂತೆ ಹಾಲಿ ದರಪಟ್ಟಿಗೆ ರೂ. 31.53 ಕೋಟಿಗಳಿಗೆ ಪರಿಷ್ಕರಿಸಿ ಧನ ಸಹಾಯ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಹಣಕಾಸು ವ್ಯವಸ್ಥೆ ಒದಗಿ ಬಂದ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉದ್ಯೋಗವಕಾಶಕ್ಕಾಗಿ ಬರುವ ಅರ್ಜಿದಾರರ ಸಂಖ್ಯೆಗಳು

43 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರಿಗೆ ಉದ್ಯೋಗವಕಾಶಕ್ಕಾಗಿ ಬರುವ ಅರ್ಜಿದಾರರ ಸಂಖ್ಯೆ ಯಾವ ಅನುಪಾತದಲ್ಲಿದೆ?

ಆ) ಹಾಗಿದ್ದರೆ ಅರ್ಜಿದಾರರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿಯೇ ಮುಂದುವರಿದವರ ಸಂಖ್ಯೆ ಹಾಗೂ ಬಡವರ ಸಂಖ್ಯೆ ಯಾವ ಪ್ರಮಾಣದಲ್ಲಿದೆ, (ಮುಂದುವರಿದವರೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿನ ಅಧಿಕಾರಿಗಳು, ಶಾಸಕರು, ಸಂಸತ್ ಸದಸ್ಯರು, ಸಚಿವರು, ಮಾಜಿ ಸಚಿವರು ಹಾಗೂ ಶ್ರೀಮಂತರ ಮಕ್ಕಳು)

ಇ) ಹಾಗಿದ್ದರೆ ಇದುವರೆಗೂ ಗೆಜೆಟೆಡ್ ಅಧಿಕಾರಿಗಳು, ಶಾಸಕರು, ಸಂಸತ್ ಸದಸ್ಯರು ಸಚಿವರು, ಮಾಜಿ ಸಚಿವರು, ಹಾಗೂ ಆರ್ಥಿಕವಾಗಿ ಮುಂದುವರಿದವರ ಮಕ್ಕಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೋಟದಲ್ಲಿ ಯಾವ ಪ್ರಮಾಣದಲ್ಲಿ ಉದ್ಯೋಗಗಳಿಗೆ ಆಯ್ಕೆಯಾಗಿದ್ದರೆ? ಹಾಗಾದರೆ ಗ್ರಾಮಾಂತರ ಪ್ರದೇಶದಲ್ಲಿರುವ ಕೂಲಿಕಾರರ ಮಕ್ಕಳು ಆರ್ಥಿಕವಾಗಿ ಹಿಂದುಳಿದವರ ಮಕ್ಕಳು ಮುಂದುವರಿದವರ ಮಕ್ಕಳೊಂದಿಗೆ ಪೈಪೋಟಿ ಮಾಡಲು ಆಗುವುದೇ? ಹಾಗಾದರೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಲಿಯೇ ಆದಾಯದ ಮಿತಿಯನ್ನು ನಿಗಧಿ ಮಾಡುವುದು ಸೂಕ್ತವಲ್ಲವೇ? ಈ ನಿಟ್ಟಿನಲ್ಲಿ ಸರ್ಕಾರ ಏನಾದರೂ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಈ ಮಾಹಿತಿಯು ಲಭ್ಯವಿರುವುದಿಲ್ಲ. ಆದರೆ ಡಾ|| ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯಿಂದ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಯನ್ನು ನಡೆಸಲಾಗುತ್ತಿದೆ. ಈ ಸಮೀಕ್ಷೆಯಲ್ಲಿ ಪ್ರಸ್ತಾವಿತ ಎಲ್ಲಾ ಅಂಶಗಳು ಅಡಕವಾಗಿರುವುದರಿಂದ ಸಮೀಕ್ಷೆಯ ಫಲಿತಾಂಶವು ಹೊರಬಂದ ನಂತರ ಪರಿಶಿಷ್ಟ ವರ್ಗದವರಲ್ಲಿ ಆರ್ಥಿಕವಾಗಿ ಮುಂದುವರೆದಿರುವ ಮತ್ತು ಹಿಂದುಳಿದವರ ಬಗ್ಗೆ ಮಾಹಿತಿಯ ವರದಿ ಲಭ್ಯವಾಗುವುದು. ಈ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ನಂತರ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಮಹಾನಗರ ಪಾಲಿಕೆ ಮೇಯರುಗಳು ಮತ್ತು ಉಪಮೇಯರುಗಳ ಪುರಸಭೆಯ ಅಧ್ಯಕ್ಷರ ಉಪಾಧ್ಯಾಕ್ಷರ ಕಾರ್ಯಾವಧಿ

139 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾನಗರ ಪಾಲಿಕೆಗಳ ಮೇಯರುಗಳು ಉಪ ಮೇಯರುಗಳು, ನಗರಸಭೆ ಹಾಗೂ ಪುರಸಭೆಗಳ ಅಧ್ಯಕ್ಷರು, ಉಪಾಧ್ಯಕ್ಷರುಗಳ ಕಾರ್ಯಾವಧಿಯನ್ನು 30 ತಿಂಗಳಿನಿಂದ 15 ತಿಂಗಳಿಗೆ ಕಡಿತಗೊಳಿಸುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಯಾವಾಗ ಮಾಡಲಾಗುತ್ತದೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಆ) ಮಹಾನಗರ ಪಾಲಿಕೆಗಳ ಮೇಯರ್ ಮತ್ತು ಉಪ ಮೇಯರ್‌ಗಳ ಕಾರ್ಯಾವಧಿಯನ್ನು ಒಂದು ವರ್ಷ ಎಂದು ಈಗಾಗಲೇ ನಿಗಧಿಗೊಳಿಸಲಾಗಿದೆ. ಅಂತೆಯೇ ಪುರಸಭೆ, ನಗರಸಭೆ ಹಾಗೂ ಟೌನ್ ಪಂಚಾಯತ್‌ಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಅವಧಿಯನ್ನು 30 ತಿಂಗಳಿಗೆ ನಿಗಧಿಗೊಳಿಸಲಾಗಿದೆ. ಈ ಅವಧಿಯನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರದ ಮುಂದೆ ಯಾವ ಪ್ರಸ್ತಾವನೆಯು ಇರುವುದಿಲ್ಲ.

1995-96ರಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಕೇಂದ್ರದ ಅನುಮತಿ

126 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ರಾಜ್ಯದಲ್ಲಿ ಎಷ್ಟು ಹೊಸ ಸಕ್ಕರೆ ಕಾರ್ಖಾನೆಗಳನ್ನು ತೆರೆಯಲು ಕೇಂದ್ರದ ಅನುಮತಿಯನ್ನು ಕೋರಲಾಗಿದೆ?

ಆ) ಎಷ್ಟು ಕಾರ್ಖಾನೆಗಳಿಗೆ ಅನುಮತಿ ದೊರಕಿದೆ. ಅನುಮತಿ ದೊರಕಿದ್ದರೆ ಯಾವ ಯಾವ ಕಾರ್ಖಾನೆಗಳಿಗೆ ಅನುಮತಿ ದೊರಕಿದೆ (ವಿವರಗಳನ್ನೊದಗಿಸುವುದು)

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿ ಶಾಸ್ತ್ರ ರಾಜ್ಯ ಸಚಿವರು) :

ಅ) 39

ಆ) ಭಾರತ ಸರ್ಕಾರದಿಂದ ಇನ್ನೂ ಅನುಮತಿ ಪತ್ರ ದೊರಕಿರುವುದಿಲ್ಲ.

ರಾಜ್ಯದ ಕೈಗಾರಿಕೆ ನೀತಿ ಬಗ್ಗೆ

46 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದ ಕೈಗಾರಿಕಾ ನೀತಿ ಏನು?

ಆ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯಾವ ಸ್ಥಳದಲ್ಲಿ ನಿರ್ಮಾಣವಾಗಲಿದೆ ಇದಕ್ಕಾಗಿ ಎಷ್ಟು ವಿಸ್ತೀರ್ಣದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ?

ಇ) ಬೆಂಗಳೂರು ನಗರದ ಸುತ್ತ ಅಪಾರ ಕೈಗಾರಿಕೆಗಳು ಬರುವುದರಿಂದ ಪರಿಸರ ಹದಗೆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಕಾರ್ಖಾನೆಗಳಲ್ಲಿ ನೂರಕ್ಕೆ ನೂರು ಮಣ್ಣಿನ ಮಕ್ಕಳ ಉದ್ಯೋಗಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ರಾಜ್ಯ ಸರ್ಕಾರದ ಹೊಸ ಕೈಗಾರಿಕಾ ನೀತಿಯು ಸರ್ಕಾರಿ ಆದೇಶ ಸಂಖ್ಯೆ : ಸಿಐ 140 ಎಸ್‌ಪಿಸಿ 93 ದಿ: 12.7.98ರ ಪ್ರಕಾರ ಇದೆ. ಸರ್ಕಾರವು ಕೈಗಾರಿಕಾ ನೀತಿಯನ್ನು ಪರಿಷ್ಕರಿಸುವ ಬಗ್ಗೆ ಪರಿಶೀಲಿಸುತ್ತಿದೆ.

ಆ) ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣವು ಬೆಂಗಳೂರು ಬಳಿಯ ದೇವನಹಳ್ಳಿಯ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ನಿರ್ಮಾಣವಾಗಲಿದೆ ಮತ್ತು ಇದಕ್ಕಾಗಿ ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದೇವನಹಳ್ಳಿ ತಾಲ್ಲೂಕಿನಲ್ಲಿ ಒಟ್ಟು 5324.28 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಇ) ಕೈಗಾರಿಕೆಗಳು ಹೊರಹೊಮ್ಮಿಸುವ ಕಲ್ಮಷಗಳನ್ನು ನಿಯಂತ್ರಣದಲ್ಲಿಡಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವಿಧಿಸಿರುವ ಪರಿಸರದ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅನುಸರಿಸಬೇಕೆಂದು ಕಟ್ಟುನಿಟ್ಟಾಗಿ ವಿಧಿಸಲಾಗಿದೆ.

ಈ) ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಉದ್ಯೋಗವನ್ನು ನೀಡುವ ವಿಷಯದ ಬಗ್ಗೆ ಸರ್ಕಾರ ಡಾ|| ಸರೋಜಿನಿ ಮಹಿಷಿ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ಸಂಖ್ಯೆ : ಸಿಐ 228 ಆರ್‌ಐಎಸ್ 90 ದಿ: 21.4.95ರಲ್ಲಿ ಒಂದು ಆದೇಶವನ್ನು ಹೊರಡಿಸಿದೆ. ಇದರ ಅನುಸಾರ ಎಲ್ಲಾ ಕೈಗಾರಿಕಾ ಘಟಕಗಳು ಕನಿಷ್ಟ 80ರಷ್ಟು ಉದ್ಯೋಗವನ್ನು ಕನ್ನಡಿಗರಿಗೆ ಮೀಸಲಾಗಿಡಬೇಕು ಮತ್ತು ಇದರಲ್ಲಿ ಗ್ರೂಪ್-ಸಿ ಮತ್ತು ಡಿ-ಹುದ್ದೆಗೆ ಶೇಕಡ 100ರಷ್ಟು ಉದ್ಯೋಗವನ್ನು ಕನ್ನಡಿಗರಿಗೆ ನೀಡಬೇಕೆಂಬುದಾಗಿ ಸರ್ಕಾರ ಒತ್ತಾಯ ಪಡಿಸುತ್ತಿದೆ. ಈ ಆದೇಶಗಳನ್ನು ಪಾಲಿಸುವುದನ್ನು ಖಚಿತಪಡಿಸಿಕೊಳ್ಳಲು ದೊಡ್ಡ ಕೈಗಾರಿಕೆಗಳ ಸಿಬ್ಬಂದಿ ಅಧಿಕಾರಿಯು ಕನ್ನಡಿಗನೇ ಆಗಿರಬೇಕೆಂದು ಸಹ ಸರ್ಕಾರವು ಒತ್ತಾಯಿಸುತ್ತಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ದಿಮೆದಾರನಿಗೆ ವಿತರಣೆ ಮಾಡುವ ಕೈಗಾರಿಕಾ ಭೂಮಿಗೆ ಸಂಬಂಧಿಸಿದಂತೆ ಮಾಡಿಕೊಳ್ಳುವ ಗುತ್ತಿಗೆ ಮತ್ತು ಕರಾರು ಪತ್ರದಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುವ ಸಲುವಾಗಿ ಈ ಕೆಳಕಾಣಿಸಿದ ಕರಾರನ್ನು ಒಳಪಡಿಸಿದೆ.

1) ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನದಿಂದ ಜಮೀನು ಕಳೆದುಕೊಂಡ ಭೂಮಾಲೀಕರ ಕುಟುಂಬದವರಿಗೆ ಅವರ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗಗಳನ್ನು ಕೊಡಬೇಕು;
2) ಉದ್ದಿಮೆದಾರರು ಅವರ ಉದ್ದಿಮೆಗಳಲ್ಲಿ ಕನ್ನಡದವರಿಗೆ ಮಾತ್ರ ಕೆಲಸಕ್ಕೆ ಸೇರಿಸಿಕೊಳ್ಳಬೇಕು;
3) ಪರ್ಸನಲ್ ಆಫೀಸರ್ ಹುದ್ದೆಗೆ ಕನ್ನಡಿಗರಿಗೆ ಮಾತ್ರ ನೇಮಿಸಬೇಕು.

ಇದಲ್ಲದೆ ಸ್ಥಾಪಿಸುವ ಕೈಗಾರಿಕೆಗಳಿಗೆ ಸರ್ಕಾರ ಒದಗಿಸುವ ಮೂಲಭೂತ ಸೌಕರ್ಯ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಿ ಹೊರಡಿಸುವ ಆದೇಶದಲ್ಲಿ ಸ್ಥಳೀಯರಿಗೆ ಉದ್ಯೋಗ ಕಲ್ಪಿಸುವ ಬಗ್ಗೆ ಷರತ್ತುಗಳನ್ನು ಸಹ ವಿಧಿಸಲಾಗುತ್ತಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ರಸ್ತೆಗಳಿಗೆ ಖರ್ಚಾದ ಹಣ

119 - ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1995-96ನೇ ಸಾಲಿಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಬಿಡುಗಡೆಯಾದ ಒಂದೂವರೆ ಕೋಟಿ ರೂ.ಗಳಲ್ಲಿ ಕಾರ್ಯಗತವಾದದೆಷ್ಟು?

ಆ) ಯಾವ ಯಾವ ರಸ್ತೆಗಳಿಗೆ ಎಷ್ಟೆಷ್ಟು ಖರ್ಚು ಆಗಿದೆ? (ವಿವರ ಕೊಡುವುದು)

ಇ) ಹೊಸದಾಗಿ ಹುಟ್ಟಿಕೊಂಡ ಬಡಾವಣೆಗಳ ಬಗ್ಗೆ ಸರಕಾರದ ಕ್ರಮ ಏನು, ಹಾಗೂ ಈಗಾಗಲೇ ವಿದ್ಯುತ್ ಹಾಗೂ ಮೂಲ ಸೌಲಭ್ಯ ವಿದ್ಯುತ್ ಹಾಗೂ ಮೂಲ ಸೌಲಭ್ಯ ಸಿಗದೇ ಜನ ತೊಂದರೆ ಅನುಭವಿಸುತ್ತಿದ್ದಾರೆ, ಈ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ರೂ. 1.5 ಕೋಟಿಗಳಲ್ಲಿ ಈಗಾಗಲೇ ರೂ. 88,17,302 ಖರ್ಚಾಗಿರುತ್ತದೆ.

ಆ) ಡಾಂಬರ್ ರಸ್ತೆಗಳು 47, ಖರ್ಚಾದ ಹಣ ರೂ. 87,57,842-00

ಖಡಿ ರಸ್ತೆಗಳು - 3, ಖರ್ಚಾದ ಹಣ ರೂ. 53,160-00

ಕಲ್ಲಿನ ಹೊದಿಕೆ ರಸ್ತೆ-1, ಖರ್ಚಾದ ಹಣ ರೂ. 6,300-00

ಇ) ಹೊಸದಾಗಿ ಹುಟ್ಟಿಕೊಂಡಿರುವ ಅನಧಿಕೃತ ಬಡಾವಣೆಗಳಲ್ಲಿಯ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡಿದ್ದರೆ ಅವುಗಳನ್ನು ಪರಿಶೀಲಿಸಿ ಮಹಾನಗರಸಭೆಗೆ ಹಸ್ತಾಂತರ ಮಾಡಿಕೊಂಡು ವಿದ್ಯುತ್ ಹಾಗೂ ಮೂಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಅನಧಿಕೃತ ಬಡಾವಣೆಗಳಿಗೆ ಮೂಲಕ ಸೌಲಭ್ಯ ಒದಗಿಸಲಾಗುವುದಿಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಆರೋಗ್ಯ ಪರಿವೀಕ್ಷಕರು

116 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯಲ್ಲಿ ಎಷ್ಟು ಜನ ಆರೋಗ್ಯ ಪರಿವೀಕ್ಷಕರು ಹಾಗೂ ಎಲ್ಲೆಲ್ಲಿದ್ದಾರೆ?

ಆ) ಯಾವ ಪರಿವೀಕ್ಷಕರ ಮೇಲಾದರೂ ಪ್ರಜೆಗಳು ದೂರು ನೀಡಿರುವ ಪ್ರಯುಕ್ತ ದೂರು ಕ್ರಮ ಕೈಗೊಳ್ಳಲಾಗಿದೆಯೇ? (ವಿವರ ನೀಡುವುದು)

ಇ) ಕಸ ಗೂಡಿಸುವ ಕಾರ್ಮಿಕರ ಸಂಖ್ಯೆ ಎಷ್ಟು?

ಈ) ಪರಿವೀಕ್ಷಕರಿಗೆ ಹಾಗೂ ಕಸ ಗುಡಿಸುವವರಿಗೆ ಪ್ರತಿ ವರುಷ ಎಷ್ಟು ಹಣ ಸಂಬಳ ಕೊಡುತ್ತಿದೆ?

ಉ) ಸದ್ಯ ಇವರಿಂದ ಅವಳಿನಗರಗಳನ್ನು ಸ್ವಚ್ಛತೆ ಇಡಲು ಸಾಧ್ಯವೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಒಟ್ಟು - 3. ಹುಬ್ಬಳ್ಳಿಯಲ್ಲಿ - 2. ಧಾರವಾಡದಲ್ಲಿ - 1

ಆ) ಇವರ ಮೇಲೆ ಅಂಥ ಯಾವುದೇ ದೂರುಗಳು ಸಾರ್ವಜನಿಕರಿಂದ ಬಂದಿರುವುದಿಲ್ಲ.

ಇ) ಒಟ್ಟು 1190 ಪೌರ ಕಾರ್ಮಿಕರಿದ್ದು ಇದಲ್ಲದೇ 46 ಜನರು ದಿನಗೂಲಿ ತಳಹದಿಯ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ.

ಈ) ರೂ. 3,80,40,000-00

ಉ) ಈಗಿನ ಸಿಬ್ಬಂದಿಯಿಂದ ಪೂರ್ತಿ ನಗರವನ್ನು ಸ್ವಚ್ಛ ಇಡಲು ಕಷ್ಟಕರವಾಗುತ್ತದೆ. ಹೆಚ್ಚಿನ ಸಿಬ್ಬಂದಿಯು ಅವಶ್ಯಕತೆ ಇದೆ. ಆದರೆ ಈ ಹೆಚ್ಚಿನ ಪೌರ ಕಾರ್ಮಿಕರ ನೇಮಕಾತಿಯಿಂದ ಮಹಾನಗರಸಭೆ ಅಧಿಕ ಆರ್ಥಿಕ ಹೊರೆ ಆಗುವುದರಿಂದ. ಮಹಾನಗರಪಾಲಿಕೆಯು ಕೆಲವು ಪ್ರದೇಶಗಳಲ್ಲಿನ ಕಸವನ್ನು ತೆಗೆಯುವ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯಲ್ಲಿ ನೀರಿನ ಪೂರೈಕೆಗಾಗಿ ಇರುವ ಓವರ್ ಹೆಚ್ ಟ್ಯಾಂಕುಗಳ ಸಂಖ್ಯೆ

117 - ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯಲ್ಲಿ ನೀರಿನ ಪೂರೈಕೆಗಾಗಿ ಇರುವ ಓವರ್‌ಹೆಡ್ ಟ್ಯಾಂಕುಗಳ ಸಂಖ್ಯೆ ಎಷ್ಟು? 1993 ರಿಂದ ಎಷ್ಟು ಪೈಪುಗಳ ಜೋಡಣೆ ಆಗಿದೆ; ಹಾಗೂ ಈ ಬಗ್ಗೆ ಆದ ಖರ್ಚು ಎಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 15 ಓವರ್ ಹೆಬ್ ಟ್ಯಾಂಕುಗಳು.

1993 ರಿಂದ ಈಚೆಗೆ 1,11,850 ಮೀಟರ್ ಕೊಳವೆ ಜೋಡಣೆ ಮಾಡಿದೆ.

ಕಬ್ಬನ್ನು ಅರೆಯಲು ಸಕ್ಕರೆ ಕಾರ್ಖಾನೆಗಳ ಸಾಮರ್ಥ್ಯ ಮತ್ತು ಉಳಿಯುವ ಬೆಳೆಯ ಪರಿಸ್ಥಿತಿ

182 -ಶ್ರೀ ಬಿ. ಶಿವರಾಮು (ಗಂಡಸೀ) : ಮಾನ್ಯ ಸಕ್ಕರೆ, ಜವಳಿ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ರಾಜ್ಯದಲ್ಲಿ ಹಾಲಿ ಇರುವ ಕಬ್ಬಿನ ಬೆಳೆಯ ಪ್ರದೇಶವೆಷ್ಟು?

ಆ) ರಾಜ್ಯದಲ್ಲಿ ಹಾಲಿ 10 ತಿಂಗಳು ಮೀರಿರುವ ಕಬ್ಬಿನ ಬೆಳೆಯ ಪ್ರದೇಶವೆಷ್ಟು?

ಇ) ಸಕ್ಕರೆಯನ್ನು ಉತ್ಪಾದನೆ ಮಾಡಲು ಸಾಮರ್ಥ್ಯ ಹೊಂದಿರುವ ಸಕ್ಕರೆ ಕಾರ್ಖಾನೆಗಳು ರಾಜ್ಯದಲ್ಲಿ ಎಷ್ಟಿದೆ ಮತ್ತು ಅವುಗಳ ಸಾಮರ್ಥ್ಯವೆಷ್ಟು ದಿನಕ್ಕೆ ಎಷ್ಟು ಎಕರೆ ಪ್ರದೇಶದ ಕಬ್ಬನ್ನು ಪ್ರತಿನಿತ್ಯ ಅರೆಯಲು ಸಾಮರ್ಥ್ಯವಿದೆ.

ಈ) ಬೆಳೆದಿರುವ ಕಬ್ಬನ್ನು ಅರೆಯಲು ರಾಜ್ಯದ ಕಾರ್ಖಾನೆಗಳಲ್ಲಿ ಸಾಮರ್ಥ್ಯವಿಲ್ಲದೆ ಉಳಿಯುವ ಪ್ರದೇಶವೆಷ್ಟು (ಮೆಟ್ರಿಕ್ ಟನ್‌ನಲ್ಲಿ ಮಾಹಿತಿ ಒದಗಿಸುವುದು)

ಉ) ಉಳಿದ ಪ್ರದೇಶದ ಕಬ್ಬನ್ನು ಅರೆಯಲು ಸರ್ಕಾರ ಏನಾದರೂ ಯೋಜನೆಯನ್ನು ರೂಪಿಸಿದೆಯೇ? ರೂಪಿಸಿದ್ದರೆ ವಿವರಗಳನ್ನು ಒದಗಿಸುವುದು.

ಶ್ರೀ ಪಿ.ಸಿ. ಸಿದ್ದನಗೌಡರ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಹಾಲಿ ಸುಮಾರು 2.61 ಲಕ್ಷ ಹೆಕ್ಟೇರ್ ಪ್ರದೇಶವಿರುವ ಅಂದಾಜಿರುತ್ತದೆ.

ಇ) ಸಕ್ಕರೆಯನ್ನು ಉತ್ಪಾದನೆ ಮಾಡಲು ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳಿವೆ ಮತ್ತು ಇವುಗಳ ಒಟ್ಟು ದಿನವಹಿ ಕಬ್ಬು ಅರೆಯುವ ಸಾಮರ್ಥ್ಯ 71950 ಟನ್‌ಗಳಾಗಿರುತ್ತದೆ. ಈ ಕಾರ್ಖಾನೆಗಳು ದಿನಕ್ಕೆ ಸುಮಾರು 2250 ಎಕರೆ ಪ್ರದೇಶದಿಂದ ಕಬ್ಬನ್ನು ಪ್ರತಿನಿತ್ಯ ಅರೆಯಲು ಸಾಮರ್ಥ್ಯವಿದೆ.

ಈ) ಬೆಳೆದಿರುವ ಕಬ್ಬನ್ನು ಅರೆಯಲು ರಾಜ್ಯದ ಕಾರ್ಖಾನೆಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅರೆದ ಮೇಲೆ ಉತ್ಪಾದನೆ ಅಂದಾಜು ಮಾಡಿರುವ ಕಬ್ಬಿನಲ್ಲಿ ಸುಮಾರು 94 ಲಕ್ಷ ಟನ್ ಕಬ್ಬು ಉಳಿಯಬಹುದೆಂದು ಅಂದಾಜು ಮಾಡಲಾಗಿದೆ.

ಉ) ನಮ್ಮ ರಾಜ್ಯದಲ್ಲಿ ಬೆಳೆದ ಹೆಚ್ಚುವರಿ ಕಬ್ಬನ್ನು ಮಹಾರಾಷ್ಟ್ರ ಸರ್ಕಾರದ ಕಾರ್ಖಾನೆಗಳು ಖರೀದಿಸುವಂತೆ ಕೋರಲು ಪ್ರಯತ್ನಿಸಲಾಗಿದೆ.

ಕಬ್ಬಿನ ಗಾಣಗಳು ಹಾಗೂ ಖಂಡಸಾರಿ ಘಟಕಗಳ ಕಬ್ಬು ಅರೆಯುವ ಪರವಾನಿಗೆ ನವೀಕರಣದ ಮೇಲೆ ಇದ್ದ ನಿರ್ಬಂಧಗಳನ್ನು ಪ್ರಸಕ್ತ ಸಾಲಿಗೆ ಸಡಿಲಿಸಲಾಗಿದೆ. ಕಬ್ಬು ಹೆಚ್ಚುವರಿ ಇರುವ ಪ್ರದೇಶದಿಂದ ಕೊರತೆ ಇರುವ ಕಾರ್ಖಾನೆಗಳಿಗೆ ಸಾಗಾಣಿಕೆ ಆಗುವುದಕ್ಕೆ ಅನುಮತಿಸಲಾಗಿದೆ. ಹಾಗೂ ಹೊರ ರಾಜ್ಯಕ್ಕೆ ಸಾಗಾಣಿಕೆ ಆಗಲು ಸಹ ಅನುಮತಿಸಲಾಗಿದೆ. ರಾಜ್ಯದೊಳಗಿನ ಕಬ್ಬು ಕೊರತೆಯಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ಪ್ರದೇಶದಿಂದ ಎತ್ತುವಳಿ ಮಾಡುವ ಪ್ರತಿ ಟನ್ ಕಬ್ಬಿಗೆ ಪ್ರತಿ ಕಿ.ಮೀ.ಗೆ 0.50 ಪೈಸೆಯಂತೆ (250 ಕಿ.ಮೀ.ಗೆ ಮೀರದಂತೆ) ಸರ್ಕಾರವು ಸಹಾಯಧನ ನೀಡುತ್ತದೆ. ಅಲ್ಲದೆ, ಕಾರ್ಖಾನೆಗಳು ಕಬ್ಬು ಅರೆಯುವ ಅವಧಿಯನ್ನು ರೈತರ ಹಿತದೃಷ್ಟಿಯಿಂದ

ವಿಸ್ತರಿಸುವಂತೆ ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಲಾಗಿದೆ. ಸರ್ಕಾರವು ಹೆಚ್ಚುವರಿ ಕಬ್ಬಿನ ಸಮಸ್ಯೆಯನ್ನು ತೀವ್ರವಾಗಿ ಪರಿಗಣಿಸಿ ಕ್ರಮವಿಟ್ಟಿದೆ.

ಮೈಸೂರು ನಗರದ ಮಂಡಿಮೊಹಲ್ಲಾ ಲಷ್ಕರ್ ಮೊಹಲ್ಲಾಗಳಲ್ಲಿ ಸಮರ್ಪಕ ನೀರಿನ ವ್ಯವಸ್ಥೆ

252 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಮತ್ತು ಕಾಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ಮಂಡಿಮೊಹಲ್ಲಾ ಮತ್ತು ಲಷ್ಕರ್ ಮೊಹಲ್ಲಾಗಳಿಗೆ ಕುಡಿಯುವ ನೀರಿನ ಸಮರ್ಪಕ ವಿತರಣಾ ವ್ಯವಸ್ಥೆಗಾಗಿ ಹಾಲಿ ಈಗ ಇರುವ ಸಣ್ಣ ವಿನ್ಯಾಸದ ಪೈಪ್‌ಲೈನನ್ನು ತೆಗೆದು ದೊಡ್ಡ ವಿನ್ಯಾಸವಿರುವ ಪೈಪ್ ಲೈನನ್ನು ಜೋಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಅಂದಾಜು ವೆಚ್ಚ ಎಷ್ಟು?

ಇ) ಈ ಕಾಮಗಾರಿಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಮತ್ತು ಕಾಡಾ ಸಚಿವರು) :

ಅ) ಮೈಸೂರಿನ ಮಂಡಿಮೊಹಲ್ಲಾ ಮತ್ತು ಲಷ್ಕರ್ ಮೊಹಲ್ಲಾದಲ್ಲಿರುವ ವಿತರಣಾ ವ್ಯವಸ್ಥೆಯ ನವೀಕರಣ ಕಾಮಗಾರಿಗೆ 89.70 ಲಕ್ಷ ರೂ.ಗಳ ಅಂದಾಜಿಗೆ ಅನುಮೋದನೆ ನೀಡಿದ್ದು ಈ ಕೆಲಸವನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು ಈ ಕೆಲಸವು ಪ್ರಗತಿಯಲ್ಲಿರುತ್ತದೆ.

ಆ) ಈ ಕಾಮಗಾರಿಯ ಅಂದಾಜು ವೆಚ್ಚ 89.70 ಲಕ್ಷ ರೂ.ಗಳು

ಇ) ಈ ಕಾಮಗಾರಿಯನ್ನು ಅಕ್ಟೋಬರ್ 96ರ ವೇಳೆಗೆ ಮುಗಿಸಲು ಉದ್ದೇಶಿಸಲಾಗಿದೆ.

ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳ ಬಗ್ಗೆ

253 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಹಿಂದುಳಿದ ವರ್ಗದವರಿಗಾಗಿ ಹಾಗೂ ಅಲ್ಪಸಂಖ್ಯಾತರಿಗೆ ಇರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು?

ಆ) ಮೈಸೂರಿನಲ್ಲಿ ಈ ವರ್ಗಗಳಿಗೆ ಇರುವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಇ) ಈ ವರ್ಗಗಳಿಗಾಗಿ ಏರುತ್ತಿರುವ ಜನಸಂಖ್ಯೆಗನುಗುಣವಾಗಿ ಮೈಸೂರಿಗೆ ಇನ್ನೊಂದು ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಬಗ್ಗೆ ತೀರ್ಮಾನವಾಗಿದೆಯೇ?

ಈ) ಇಲ್ಲದಿದ್ದಲ್ಲಿ ಬರುವ ಶೈಕ್ಷಣಿಕ ವರ್ಷದಲ್ಲಾದರೂ ಮಂಜೂರು ಮಾಡಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) 943 ಮೆಟ್ರಿಕ್ ಪೂರ್ವ ಹಾಗೂ 133 ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿನಿಲಯವು ಇರುತ್ತವೆ.

ಆ) ಮೈಸೂರು ನಗರದಲ್ಲಿ 6 ವಿದ್ಯಾರ್ಥಿನಿಲಯಗಳು ಇರುತ್ತವೆ. ಇವುಗಳಲ್ಲಿ 2 ಮೆಟ್ರಿಕ್ ಪೂರ್ವ, ಹಾಗೂ 2 ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಗಳು ಮತ್ತು 2 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು.

ಇ) ಹೌದು. (2)ರ ಉತ್ತರದಲ್ಲಿ ತಿಳಿಸಿರುವ 6 ವಿದ್ಯಾರ್ಥಿನಿಲಯಗಳಲ್ಲಿ 2 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳನ್ನು 1995-96ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಇವುಗಳಲ್ಲಿ 1 ಬಾಲಕರು ಹಾಗೂ 1 ಬಾಲಕಿಯರು.

ಈ) 3ರ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಮೈಸೂರು ನಗರದ ನೀರಿನ ರಿಸರ್ವಾಯರ್‌ಗಳ ಕಾಮಗಾರಿ

254-ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ಕುವೆಂಪು ನಗರ ಹಾಗೂ ಸಿದ್ಧಾರ್ಥ ನಗರದ ನೀರಿನ ರಿಸರ್ವಾಯರ್‌ಗಳ ಕಾಮಗಾರಿ ಕೆಲಸ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅರ್ಧಕ್ಕೆ ನಿಲ್ಲಲು ಕಾರಣಗಳೇನು?

ಇ) ಇದನ್ನು ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಈ) ಈ ಕಾಮಗಾರಿ ಕೆಲಸ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ)1)ಕುವೆಂಪು ನಗರದ ಜಲಸಂಗ್ರಹಾಗಾರದ ಕೆಲಸವನ್ನು ಮೆಸರ್ಸ್ : ಮೈಸೂರು ಸ್ಟ್ರಕ್ಚರ್ಸ್‌ರವರಿಗೆ ವಹಿಸಿದ್ದು, ಅವರು ಕೆಲಸವನ್ನು ಭಾಗಶಃ ಮಾಡಿದ ಮೇಲೆ ಉಳಿಕೆ ಕೆಲಸಕ್ಕೆ ಯಾವುದೇ ಕಾರಣವಿಲ್ಲದೆ ಹೆಚ್ಚುವರಿ ಹಣವನ್ನು ಕೇಳುತ್ತಿದ್ದುದರಿಂದ ಕೆಲಸ ಕುಂಠಿತಗೊಳ್ಳಲು ಕಾರಣವಾಯಿತು.

2) ಸಿದ್ಧಾರ್ಥ ನಗರದ ಜಲಸಂಗ್ರಹಾಗಾರದ ಕೆಲಸವನ್ನು ಶ್ರೀ ಮಸಣಶೆಟ್ಟಿ, ಗುತ್ತಿಗೆದಾರರಿಗೆ ವಹಿಸಿದ್ದು ಅವರು ಸಕಾರಣವಿಲ್ಲದೆ ಕೆಲಸವನ್ನು ನಿಲ್ಲಿಸಿದರು.

ಇ)1)ಕುವೆಂಪು ನಗರದ ಜಲಸಂಗ್ರಹಾಗಾರದ ಉಳಿಕೆ ಕೆಲಸದ ಅಂದಾಜು ಪಟ್ಟಿಯನ್ನು ಅನುಮೋದಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದು, ಈ ಕೆಲಸಕ್ಕೆ ಟೆಂಡರುಗಳನ್ನು ಕರೆದು ಕೆಲಸವನ್ನು ತೆಗೆದುಕೊಳ್ಳಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

2) ಸಿದ್ಧಾರ್ಥ ನಗರದ ಜಲಸಂಗ್ರಹಾಗಾರದ ಉಳಿಕೆ ಕೆಲಸವನ್ನು ಮೆಸರ್ಸ್ : ರಾಮಯ್ಯ ಮತ್ತು ಕಂಪನಿ ಇವರಿಗೆ ವಹಿಸಲಾಗಿದೆ. ಈ ಕೆಲಸ ಪ್ರಗತಿಯಲ್ಲಿದೆ.

ಈ)1) ಕುವೆಂಪು ನಗರದ ಜಲಸಂಗ್ರಹಾಗಾರದ ಉಳಿಕೆ ಕೆಲಸವನ್ನು ಜೂನ್ 97 ರಷ್ಟರಲ್ಲಿ ಮುಗಿಸಲಾಗುವುದು.

2) ಸಿದ್ಧಾರ್ಥ ನಗರದ ಜಲಸಂಗ್ರಹಾಗಾರದ ಉಳಿಕೆ ಕೆಲಸವನ್ನು ಡಿಸೆಂಬರ್ 96ರಷ್ಟರಲ್ಲಿ ಮುಗಿಸಲಾಗುವುದು.

ರಾಜ್ಯದ ಕಬ್ಬು ಬೆಳೆಗಾರರಿಗೆ ಆದ ತೊಂದರೆಯ ನಿವಾರಣೆ

261 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಸಕ್ಕರೆ, ಜವಳಿ ವಿಜ್ಞಾನ ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳೆಷ್ಟು ಈ ಕಾರ್ಖಾನೆಗಳಿಂದ ಎಷ್ಟು ಪ್ರಮಾಣದ ಕಬ್ಬನ್ನು ಅರೆಯಲಾಗುತ್ತಿದೆ?

ಆ) ಕರ್ನಾಟಕ ರಾಜ್ಯದಿಂದ ನೂತನವಾಗಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿರುವ ಅರ್ಜಿಗಳು ಯಾವುವು; (ಅವುಗಳ ವಿವರ ನೀಡುವುದು);

ಇ) ರಾಜ್ಯದಲ್ಲಿ ಎಷ್ಟು ಕಬ್ಬು ಉತ್ಪತ್ತಿಯಾಗುತ್ತಿದೆ;

ಈ) ಈ ವರ್ಷ ಮಹಾರಾಷ್ಟ್ರ, ಗೋವಾ ರಾಜ್ಯದವರು ಕರ್ನಾಟಕದಿಂದ ಸಾಮ ಮಾಡುವ ಕಬ್ಬನ್ನು ಅರೆಯಲು ತಮ್ಮ ಕಾರ್ಖಾನೆಗಳಿಗೆ ನಿರ್ಬಂಧಿಸಿರುವ ಕಾರಣಗಳೇನು ?

ಉ) ಇದರಿಂದ ರಾಜ್ಯದ ಕಬ್ಬು ಬೆಳೆಗಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಊ) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) 30. ಈ ಕಾರ್ಖಾನೆಗಳು 1994-95ನೇ ಹಂಗಾಮಿನಲ್ಲಿ 119 ಲಕ್ಷ ಟನ್ ಕಬ್ಬನ್ನು ಅರೆಯುತ್ತದೆ.

ಆ) ವಿವರಗಳನ್ನು ಅಡಕದಲ್ಲಿ ಒದಗಿಸಲಾಗಿದೆ.

ಇ) ರಾಜ್ಯದಲ್ಲಿ 1994-95ನೇ ಸಾಲಿನಲ್ಲಿ ಸುಮಾರು 196 ಲಕ್ಷ ಟನ್ ಕಬ್ಬಿನ ಉತ್ಪಾದನೆಯಾಗಿರುತ್ತದೆ. ಪ್ರಸಕ್ತ ಹಂಗಾಮಿಗೆ 214.40 ಲಕ್ಷ ಟನ್ ಉತ್ಪಾದನೆ ಅಂದಾಜು ಮಾಡಲಾಗಿದೆ.

ಈ) ಗೋವಾ ಸರ್ಕಾರವು ನಮ್ಮ ರಾಜ್ಯದಿಂದ ಕಬ್ಬನ್ನು ಖರೀದಿಸುವುದಕ್ಕೆ ಯಾವ ನಿರ್ಬಂಧವನ್ನು ವಿಧಿಸಿರುವುದಿಲ್ಲ. ಮಹಾರಾಷ್ಟ್ರ ಸರ್ಕಾರವು ತನ್ನ ರಾಜ್ಯದಲ್ಲಿ ಹೆಚ್ಚುವರಿ ಕಬ್ಬಿನ ಸಮಸ್ಯೆಯಿದೆಯೆಂದು, ಎನ್ನಲಾಗಿ, ನಮ್ಮ ರಾಜ್ಯದಿಂದ ಕಬ್ಬನ್ನು ಖರೀದಿಸದಂತೆ ತಮ್ಮ ಕಾರ್ಖಾನೆಗಳಿಗೆ ನಿರ್ಬಂಧ ವಿಧಿಸಿದೆ.

ಉ) ಹೌದು

ಊ) ಬಿಜಾಪುರ, ಬೆಳಗಾಂ, ಬೀದರ್ ಹಾಗೂ ಧಾರವಾಡ ಗಡಿ ವಿಭಾಗದಲ್ಲಿ ಬೆಳೆದ ಹೆಚ್ಚುವರಿ ಕಬ್ಬನ್ನು ಖರೀದಿಸುವಂತೆ ಮಹಾರಾಷ್ಟ್ರ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ವಿನಂತಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

ಗೋವಾ ರಾಜ್ಯದ ಸಕ್ಕರೆ ಕಾರ್ಖಾನೆ ಹಾಗೂ ನಿಜಾಂ ಶುಗರ್ಸ್, ಹಿಂದೂಪುರ, ಆಂಧ್ರಪ್ರದೇಶ ಈ ಎರಡೂ ಕಾರ್ಖಾನೆಗಳು ನಮ್ಮ ರಾಜ್ಯದಿಂದ ಖರೀದಿಸುತ್ತಿವೆ.

Annexure-I

Applications pending before Govt. of India for grant of Letter of Intent (each 2500 TCD) New Applications :

Sl. No.	Name of the applicant	No. & Date
1.	Karnataka Breweries Ltd. Channagiri, Shimoga Dist.	CI.92.SGF.91. dt:1.7.91

2.	Malanad Sugars Ltd. Arasanaghatta, Bhadravathi Tk.	
3.	Anjaneya Sugars Ltd. Kundur, Honnali Tk.	CI.83.SFG.95. dt: 6.7.95
4.	Zuari Agro Chemicals Ltd. Hollikhod (K) Humnabad Tk.	CI.116.SGF.91. dt: 12.4.93
5.	Mudhol Sugars Ltd. Mudhol, Bijapur Dist.	CI.86.SGF.92. dt: 21.10.93
6.	Prabhu Lingeshwara Sugars Ltd. Navalgi, Jamkhandi Tk.	CI.78.SGF. dt: 6.7.95
7.	Krishna Ghataprabha SSK Ltd. Hirehalli, Jamkhandi Tk.	CI.36.SGF.86. dt: 12.9.94
8.	West Coast Paper Mills Ltd. Haliyal.	CI.65.SGF.95 dt: 24.4.95
9.	Koppa Sugars Ltd. Koppa, Maddur Tk.	
10.	Siddalingeshwara Sugars Ltd. Kallur Cross, Gubbi Tk.	CI.82.SGF.95. dt: 20.5.95
11.	Murudeshwara Ceramics Ltd. Bommanahalli, Hangal Tk.	CI.76.SGF.95.dt: 20.5.95
12.	Shivashakti Sugars Ltd. Ankali, Chikodi Tk.	CI.79.SGF.95.dt: 19.5.95
13.	Sri Someshwara SSK Ltd. Bailahongal, Belgaum.	CI.34.SGF.95.dt: 21.7.95
14.	Chamundeshwari Sugars Ltd. Doddabyegathahalli, Holenarasipur Tk.	CI.80.SGF.95.dt: 14.6.95
15.	Gem Sugars, Kandaragi, Bilagi Tk.	CI.76.SGF(P).93.dt: 14.6.95
16.	Prem Sugars, Thimmalapura, Nagamangala Tk. Bellary Dist.	CI.81.SGF.95.dt: 26.6.95
17.	Shamanur Sugars, Duggavathi Villages, Harapanahalli Tk.	CI.69.SGF.95.dt: 8.9.95
18.	M/s M&C Exports Ltd. Gaddige Village, Hunsur Tk.	CI.167.SGF.95.dt: 14.9.95
19.	M/s. Viswanath Sugara Ltd. Bellada Bagewadi, Hukkeri Tk. Belgaum Dist.	CI.168.SGF.95.dt: 30.9.95

20.	M/s. Koujalgi Sugars Ltd., Bilakundi, Gokak Tq. Belgaum Dt.	CI.242.SGF.95.dt: 31.10.95
21.	M/s. Siraguppi Sugar Works Ltd., Kagwad, Athani Tq.	CI.251.SGF.95.dt: 31.10.95
22.	India Cements Ltd., Mallenahalli, K.R. Pet Tq.	CI.233.SGF.95.dt: 31.10.95
23.	M/s. Chincholi Sugars Ltd., Chincholi, Chincholi Tq. Gulbarga Dist.	CI.246.SGF.95.dt: 30.10.95
24.	M/s. Virat Sugars Ltd., Honkan, Hangal Tq. Dharwad Dist.	CI.245.SGF.95.dt: 30.10.95
25.	M/s. Mandya National Paper Mills Ltd., Belgaula, Srirangapatna Tq. Mandya Dist.	CI.243.SGF.95 dt: 31.10.95
26.	M/s. Sangeeth Sugars Ltd., Madapura, Chamrajnagar Tq. Mysore Dist.	CI.244.SGF.95 dt: 8.11.95
27.	M/s. Indian Cane-Power Ltd. Uttur, Mudhol Tk. Bijapur Dt.	CI.263.SGF.95dt. 21.11.95.
28.	M/s. Basaveswara SSK Ltd., Kirigere, Hirekerur Taluk, Dharwad Dist.	CI.286.SGF.95.dt: 9.11.95
29.	M/s. Mrudagiri SSK Ltd., Gangapura, Mundargi Tk., Dharwad Dist.	CI.288.SGF.95.dt: 14.12.95
30.	M/s. Nargund SSK Ltd., Konnur, Nargund Tk, Dharwad Dist.	CI.322.SGF.95.dt: 19.12.95
31.	M/s. Dhanalakshmi SSK Ltd., Khanpet, Ramdurg Tk Belgaum Dist.	CI.287.SGF.95.dt: 9.12.95
32.	M/s. Athani Farmers Sugars Ltd., Madhabhavi, Athani Tk., Belgaum Dist.	CI.247.SGF.95.dt: 17.11.95
33.	M/s. Manali Sugars Ltd., Nalikawada, Muddebihal Taluk, Bijapur Dist.	CI.343.SGF.95.dt: 26.12.95
34.	M/s. Usha Martin Industries Ltd., Nalikawada, Muddebihal Taluk, Bijapur Dist.	CI.358.SGF.95.dt: 26.12.95

35.	M/s. Shiva Sugars Ltd., T. Narasipura Taluk, Mysore Dist.	CI.77.SGF.95.dt: 26.12.95
36.	M/s. Farmers Co.op Sugar Factory Ltd., Gangibhavi, Shiggaoan Tk., Dharwad Dist.	CI.349.SGF.95.dt: 26.12.95
37.	M/s. Biligiri Sugars Ltd., Kollegal Taluk, Mysore Dist. (Hulasu Boregudda-Hanur)	CI.347.SGF.95.dt: 26.12.95
38.	M/s. Chandraprakash Sugars Ltd., Rangasamudra T. Narasipura Taluk, Mysore Dist.	CI.77.SGF.95.dt: 26.12.95
39.	M/s. Flex Engineering Ltd., Ramanagar Taluk, Bangalore Dist.	CI.344.SGF.95.dt: 26.12.95
40.	M/s. Usha Beltron Industries Ltd., Naravanpur, Surapur Taluk, Gulbarga Dist.	CI.359.SGF.95.dt: 26.12.95
41.	Sri Renuka Sugars Ltd., Manali, Savadatti Taluk, Belgaum Dist.	CI.363.SGF.95.dt: 26.12.95
42.	M/s. Patil Cements, Raibag Taluk, Belgaum Dist.	CI. .SGF.95.dt: 26.12.95
43.	M/s. Bhoruka Power Corporation Ltd., Terakanambi, Gundlupet Taluk, Mysore Dist.	CI.9.SGF.96.dt: 22.1.96
44.	M/s. Ashoka Sugars & Chemicals Ltd., Herur, Gubbi Taluk,	CI.22.SGF.96.dt: 3.2.96
45.	M/s. Sri Veerbhadreshwara Sugars, Bairampad, Hirekerur Taluk, Dharwad Dist.	CI.351.SGF.96.dt: 3.2.96

ರಾಜ್ಯದ ವಿವಿಧ ವಸತಿ ಯೋಜನೆ ಕುರಿತು

263 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವಿವಿಧ ವಸತಿ ಯೋಜನೆಗಳಾವುವು?

ಆ) ಈ ವಿವಿಧ ಯೋಜನೆಗಳಲ್ಲಿ ನಿಗಧಿ ಪಡಿಸಿದ ಪ್ರಕಾರ 31-3-95ಕ್ಕೆ ಕಟ್ಟಿಸಬೇಕಾಗಿದ್ದ ಮನೆಗಳ ಸಂಖ್ಯೆ ಹಾಗೂ ಅವುಗಳಿಗೆ ನಿಗಧಿಪಡಿಸಿರುವ ಮೊತ್ತವೆಷ್ಟು?

ಇ) 31-3-95ರ ವರೆಗೆ ನಿಗದಿಪಡಿಸಲಾಗಿದ್ದ ಮನೆಗಳ ಪೈಕಿ ಎಷ್ಟು ಮನೆಗಳನ್ನು ಕಟ್ಟಿಸಲಾಗಿದೆ ಹಾಗೂ ಅವುಗಳಿಗೆ ವೆಚ್ಚವಾದ ಮೊತ್ತವೆಷ್ಟು?

ಈ) 1995Ë96ರಲ್ಲಿ ಈ ವಿವಿಧ ಯೋಜನೆಗಳಿಂದ ನಿಗದಿ ಮಾಡಲಾಗಿರುವ ಮನೆಗಳ ಸಂಖ್ಯೆ ಎಷ್ಟು? ಹಾಗೂ ನಿಗದಿ ಮಾಡಿದ ಈ ಮನೆಗಳ ಪೈಕಿ ಎಷ್ಟು ಮನೆಗಳನ್ನು 31-12-95ಕ್ಕೆ ಕಟ್ಟಿಸಲಾಗಿದೆ?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತಲೂ ಕಡಿಮೆ ಆದಾಯವಿರುವ ಬಡವರು : ಕಡು ಬಡವರಿಗೆ ಹಾಲಿ ಜಾರಿಯಲ್ಲಿರುವ ಯೋಜನೆಗಳೆಂದರೆ ಆಶ್ರಯ, ಡಾ॥ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಗಳು.

ಆ)	*ವಸತಿ ಯೋಜನೆಯ ಹೆಸರುಗಳು*	*ಕಟ್ಟಿಸಬೇಕಾದ ಮನೆಗಳ ಸಂಖ್ಯೆ*	*ನಿಗದಿಪಡಿಸಿದ ಮೊತ್ತ (ಲಕ್ಷಗಳಲ್ಲಿ)*
1)	ಆಶ್ರಯ 1992-93	1,06,000	14228.00
	1994-95	1,50,000*	1254.00
	ಒಟ್ಟು	2,56,000	15482.00
2)	ಡಾ: ಅಂಬೇಡ್ಕರ್	44,634	5695.00
3)	ಇಂದಿರಾ ಆವಾಸ್	14,652	1819.00

ಇ)	*ಯೋಜನೆಯ ಹೆಸರು*	*ಕಟ್ಟಿಸಲಾದ ಮನೆಗಳ ಸಂಖ್ಯೆ*	*ವೆಚ್ಚವಾದ ಮೊತ್ತ (ಲಕ್ಷಗಳಲ್ಲಿ)*
1)	ಆಶ್ರಯ 1992-93 ರಿಂದ 1994-95	76,450	11224.00
2)	ಡಾ: ಅಂಬೇಡ್ಕರ್	30,008	5183.00
3)	ಇಂದಿರಾ ಆವಾಸ್	8,383	2060.00

ಈ)	*ಯೋಜನೆಯ ಹೆಸರು*	*1995-96ನೇ ಸಾಲಿಗೆ ನಿಗದಿಪಡಿಸಿದ ಮನೆಗಳು*	*ಕಟ್ಟಿದ ಮನೆಗಳು*
1)	ಆಶ್ರಯ	60,000	16,495
2)	ಡಾ: ಅಂಬೇಡ್ಕರ್	25,000	110
3)	ಇಂದಿರಾ ಆವಾಸ್	44,129	14,789

* 94-95 ಸಾಲಿನ ಆಶ್ರಯ ಮನೆಗಳ ಆಜ್ಞೆಯನ್ನು ಮಾರ್ಪಾಡು ಮಾಡಿ 1995-96ನೇ ಸಾಲಿಗೆ ವಿಸ್ತರಿಸಿ ವಾರ್ಷಿಕ ಗುರಿಯನ್ನು 6000ಕ್ಕೆ ಮಿತಗೊಳಿಸಿದೆ.

ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆಯ ಪ್ರಗತಿ

432 - ಶ್ರೀ ಎನ್. ರಾಜಣ್ಣ (ಭಾರತಿ ನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆ ಯಾವಾಗ ಪ್ರಾರಂಭವಾಗಲು ಉದ್ದೇಶಿಸಲಾಗಿತ್ತು?

ಆ) ಈ ಕಾರ್ಖಾನೆಗೆ ಬೇಕಾದ ಕಬ್ಬಿಣ ಅದಿರು ಪೂರೈಕೆಯ ವಿಷಯದಲ್ಲಿ ಕೇಂದ್ರ ಸರ್ಕಾರ ಅಂತಿಮ ತೀರ್ಮಾನ ಕೈಗೊಂಡಿದೆಯೇ?

ಇ) ಇಲ್ಲದಿದ್ದರೆ ಈ ಕಾರ್ಖಾನೆಯ ಪ್ರಗತಿ ಕುಂಠಿತವಾಗುವುದನ್ನು ತಪ್ಪಿಸಲು ಸರ್ಕಾರ ಕೇಂದ್ರ ಉಕ್ಕು ಖಾತೆಯೊಂದಿಗೆ ವ್ಯವಹರಿಸಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ವಿವಿಧ ಹಂತದ ಉದ್ದೇಶಿತ ಉತ್ಪಾದನಾ ದಿನಾಂಕ ಈ ಕೆಳಕಂಡಂತಿದೆ:

1.	ಹಾಟ್ ಸ್ಟ್ರಿಪ್ ಮಿಲ್	ಡಿಸೆಂಬರ್ 1996
2.	ಮೊದಲನೇ ಕೋರೆಕ್ಸ್ ಘಟಕ, ಬೇಸಿಕ್ ಆಕ್ಸಿಜನ್ ಘಟಕ ಹಾಗೂ ಕಂಟಿನ್ಯೂಯಸ್ ಕ್ಯಾಸ್ಟಿಂಗ್ ಘಟಕ	ಅಕ್ಟೋಬರ್ 1997
3.	ಪಲ್ಲೆಟೈಸೇಷನ್ ಘಟಕ	ಡಿಸೆಂಬರ್ 1997
4.	ಕೋರೆಕ್ಸ್ ಪ್ಲಾಂಟ್‌ನ 2ನೇ ಘಟಕ	ಮಾರ್ಚ್ 1998

ಆ) ಇಲ್ಲ

ಇ) ಹೌದು

ಈ) ಈ ವಿಷಯವು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

ಎಂ.ಆರ್.ಪಿ.ಎಲ್. ಸಂಸ್ಥೆ ಮೂಡಾಕ್ಕೆ ಕೊಡಬೇಕಾದ ಹಣ

436 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಮಂಗಳೂರು ನಗರ ಪಾಲಿಕೆ ಹಾಗೂ "ಮೂಡಾ"ಕ್ಕೆ ಬರಬೇಕಾಗಿರುವ ಹಣ ಎಷ್ಟು?

ಆ) ಈ ಹಣವನ್ನು ವಸೂಲಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ರೂ. 18.16 ಕೋಟಿಗಳು ಬರಬೇಕಾಗಿದೆ. ಅದರಲ್ಲಿ ರೂ. 3.00 ಕೋಟಿಗಳನ್ನು ಈಗಾಗಲೇ ಸಂಸ್ಥೆಯು ಪಾವತಿ ಮಾಡಿದೆ. ಈ ಸಂಸ್ಥೆಯಿಂದ ಮಂಗಳೂರು ನಗರ ಪಾಲಿಕೆಗೆ ಯಾವುದೇ ಹಣವು ಬರಬೇಕಾಗಿಲ್ಲ.

ಆ) ಎಂ.ಆರ್.ಪಿ.ಎಲ್. ಸಂಸ್ಥೆಯು ಅಭಿವೃದ್ಧಿ ಶುಲ್ಕ ಮತ್ತು ಜಲಸಂಪನ್ಮೂಲ ಕ್ರೋಢೀಕರಣ ಶುಲ್ಕವನ್ನು ಮನ್ನಾ ಮಾಡಲು ಸರ್ಕಾರಕ್ಕೆ ಮನವಿ ಮಾಡಿದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಸಣ್ಣ ಕೈಗಾರಿಕೆಗಳಿಗೆ ಕೊಡುವ ಸಹಾಯ ಧನ

440 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಕೊಡುವ ಸಹಾಯ ಧನ ಬಾಕಿ ಇದೆ. ವಿವರ ನೀಡುವುದು.

ಇ) ಬಾಕಿಯಿದ್ದಲ್ಲಿ ಯಾವಾಗ ಈ ಹಣವನ್ನು ನೀಡಲಾಗುವುದು.

ಈ) ಸರ್ಕಾರದಿಂದ ಸಹಾಯ ಧನ ಸಿಗದೆ ನಷ್ಟ ಹೊಂದಿರುವ ಸಣ್ಣ ಕೈಗಾರಿಕೆಗಳಿಗೆ ಪರಿಹಾರ ನೀಡಲಾಗುವುದೆ?

ಶ್ರೀ ಎನ್.ಎಂ. ನಬಿ (ಸಣ್ಣ ಕೈಗಾರಿಕಾ ಸಚಿವರು) :

ಅ) 31.3.1995ರಲ್ಲಿದ್ದಂತೆ 1,63,524 ಕೈಗಾರಿಕೆಗಳು ಇವೆ.

ಆ) 1379 ಸಣ್ಣ ಕೈಗಾರಿಕೆಗಳಿಗೆ ರೂ. 17.54 ಕೋಟಿ ಸಹಾಯ ಧನ ನೀಡಬೇಕಾಗಿದೆ.

ಇ) ಸದ್ಯದಲ್ಲಿಯೇ ಇದನ್ನು ವಿತರಿಸಲಾಗುವುದು.

ಈ) ಇಲ್ಲ.

ಬೃಹತ್ ಕೈಗಾರಿಕೆಗಳಿಂದ ಆಗುವ ಮಾಲಿನ್ಯ ಕುರಿತು

439 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪ್ರಸ್ತುತ ಇರುವ ನೆಲ, ಜಲ ಹಾಗೂ ವಾಯುವಿನ ಮಾಲಿನ್ಯ ಹೊರುವ ಸಾಮರ್ಥ್ಯವನ್ನು ನಿರ್ಧರಿಸುವವರೆಗೆ ಯಾವುದೇ ಹೊಸ ಬೃಹತ್ ಕೈಗಾರಿಕೆಗಳಿಗೆ ಅನುಮತಿ ನೀಡಲಾಗುವುದಿಲ್ಲ ಎನ್ನುವ ಸರ್ಕಾರದ ಆದೇಶವಿದ್ದರೂ ನಾಗಾರ್ಜುನ ಮತ್ತು ಉಷಾ ಇಸ್ಪಾಟ್‌ಗಳ ಯೋಜನೆಗಳಿಗೆ ಅಂಗೀಕಾರ ನೀಡಿದ್ದು ಸರಿಯೇ?

ಆ) ಅಂಗೀಕಾರ ನೀಡಿದ್ದಾದರೆ ಇದು ಕಾನೂನು ಬಾಹಿರವಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಜಿಲ್ಲೆಯಲ್ಲಿ ಹೊಸ ಯೋಜನೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಮುನ್ನ ಈ ಪ್ರದೇಶದ ಪರಿಸರದ ಧಾರಣ ಶಕ್ತಿಯನ್ನು ಅಭ್ಯಸಿಸಬೇಕೆಂದು ಸರ್ಕಾರ ಇತ್ತೀಚೆಗೆ ಒಂದು ನಿರ್ಧಾರವನ್ನು ತೆಗೆದುಕೊಂಡಿದೆ. ನಾಗಾರ್ಜುನ ಮತ್ತು ಉಷಾ ಐರನ್ ಮತ್ತು ಫೆರೊಮೆಟಲ್ಸ್ ಯೋಜನೆಗಳ ಪ್ರಸ್ತಾವನೆಯನ್ನು ಉನ್ನತ ಮಟ್ಟದ ಸಮಿತಿಯು ಈ ರೀತಿ ನಿರ್ಧಾರ ತೆಗೆದುಕೊಂಡಿರುವ ಮುಂಚೆಯೇ ಅನುಮೋದನೆ ನೀಡಿದ್ದಿತು. ಆದರೂ ಸಹ ಈ ಯೋಜನೆಗಳನ್ನು ಸ್ಥಾಪಿಸುವುದಕ್ಕೆ ಮುಂಚೆ ಪರಿಸರದ ದೃಷ್ಟಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರಾಧಿಕಾರಿಗಳ ಅನುಮತಿಯನ್ನು ಪಡೆಯುವಂತೆ ನಿಬಂಧನೆ ವಿಧಿಸಿ ಅವುಗಳಿಗೆ ಸರ್ಕಾರ ಅನುಮತಿಯನ್ನು ನೀಡಿದೆ.

ಆ) ಉದ್ಭವಿಸುವುದಿಲ್ಲ.

ಬೃಹತ್ ಕೈಗಾರಿಕೆಗಳಿಗೆ ಉಚಿತವಾಗಿ ನೀಡಿರುವ ಭೂಮಿಯ ಬಗ್ಗೆ

438 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತಾಲ್ಲೂಕಿನ ತೋಕೂರು ಕೆಂಜಾರು, ಪಣಂಬೂರು ಮತ್ತು ಬೈಂಪಾಡಿ ಗ್ರಾಮಗಳಲ್ಲಿ ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಸ್ವಾಧೀನದ 400 ಎಕರೆ ಭೂಮಿಯನ್ನು ಬೃಹತ್ ಕೈಗಾರಿಕೆಯೊಂದಕ್ಕೆ ಉಚಿತವಾಗಿ ನೀಡಲಾಗಿದೆಯೇ?

ಆ) ಯಾವ ಯಾವ ಬೃಹತ್ ಕೈಗಾರಿಕೆಗಳಿಗೆ ಮಂಗಳೂರು ತಾಲ್ಲೂಕಿನಲ್ಲಿ ಭೂಮಿಯನ್ನು ನೀಡಲಾಗಿದೆ. ವಿವರ ತಿಳಿಸುವುದು.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಮತ್ತು ಆ) ಪ್ರಸ್ತುತ ಮಂಗಳೂರು ತಾಲ್ಲೂಕಿನಲ್ಲಿ 155 ಎಕರೆ ಜಮೀನನ್ನು ಎಲ್.ಆರ್. ಪಿ.ಎಲ್.ಡಿ. ಸಂಸ್ಥೆಗೆ ತೈಲ ಶುದ್ಧೀಕರಣ ಕಾರ್ಖಾನೆಯ ಸ್ಥಾಪನೆಗಾಗಿ ಉಚಿತವಾಗಿ ನೀಡಲಾಗಿದೆ. ಸರ್ಕಾರ ತನ್ನ ಆದೇಶ ಸಂಖ್ಯೆ : ಆರ್‌ಡಿ 72 ಎಲ್‌ಜಿಎ 92 ದಿ: 21.12.93ರಲ್ಲಿ ಮಂಗಳೂರಿನಲ್ಲಿ ಸ್ಥಾಪಿಸಲು ಪ್ರಸ್ತಾವಿಸಿದ ಸಮಗ್ರ ಉಕ್ಕು ಸ್ಥಾವರ ಸ್ಥಾಪನೆಗಾಗಿ 217.83 ಎಕರೆ ಜಮೀನನ್ನು ಮೆ: ಜಯಪ್ರಕಾಶ್ ಇಂಜಿನಿಯರಿಂಗ್ ಮತ್ತು ಸ್ಟೀಲ್ ಕಂಪನಿಗಾಗಿ ಮಂಜೂರು ಮಾಡಿದೆ.

ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ಕೈಗಾರಿಕೆಗಳ ಸಂಖ್ಯೆ

441 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಈ ಕೈಗಾರಿಕೆಗಳಲ್ಲಿ ಯಾವ ಯಾವ ಕೈಗಾರಿಕೆಗಳು ಲಾಭದಲ್ಲಿ ನಡೆಯುತ್ತಿವೆ, ಹಾಗೂ ನಷ್ಟದಲ್ಲಿ ನಡೆಯುತ್ತಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು; ಈ ಕೈಗಾರಿಕೆಗಳು ನಷ್ಟದಲ್ಲಿರಲು ಕಾರಣಗಳೇನು;

ಇ) ನಷ್ಟ ಅನುಭವಿಸುತ್ತಿರುವ ಕೈಗಾರಿಕೆಗಳು ಆರ್ಥಿಕ ಮಟ್ಟ ಸುಧಾರಿಸಿ ಲಾಭಗಳಿಸುವಂತೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) 30 (ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಇಲಾಖೆಯ ವ್ಯಾಪ್ತಿಯಲ್ಲಿ 19)

ಆ) ಲಾಭ ಗಳಿಸುತ್ತಿದ್ದ ಸಾರ್ವಜನಿಕ ಉದ್ದಿಮೆಗಳು ಹಾಗೂ ನಷ್ಟದಲ್ಲಿ ನಡೆಯುತ್ತಿರುವ ಸಾರ್ವಜನಿಕ ಉದ್ದಿಮೆಗಳ ಪಟ್ಟಿಯನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ನಷ್ಟಕ್ಕೆ ಕಾರಣಗಳು : ಕೆಲವು ಉದ್ದಿಮೆಗಳು ನಷ್ಟದಲ್ಲಿ ನಡೆಯುತ್ತಿರುವ ಕಾರಣಗಳು, ಅಧಿಕ ಸಿಬ್ಬಂದಿ, ಹಳೇ ಯಂತ್ರೋಪಕರಣಗಳು ಕೆಳದರ್ಜೆಯ ಉತ್ಪಾದಕತೆ ಮತ್ತು ಮಾರ್ಕೆಟಿಂಗ್.

ಇ) ನಷ್ಟ ಅನುಭವಿಸುತ್ತಿರುವ ಕೈಗಾರಿಕೆಗಳ ಆರ್ಥಿಕ ಮಟ್ಟ ಸುಧಾರಣೆ ಲಾಭ ಗಳಿಸುವಂತೆ ಮಾಡಲು ತೆಗೆದುಕೊಂಡಿರುವ ಕ್ರಮಗಳಲ್ಲಿ ತಂತ್ರ ಕುಶಲತೆಯ ಪಾಲುದಾರರನ್ನು ತೆಗೆದುಕೊಳ್ಳುವುದರ ಮೂಲಕ ಖಾಸಗೀಕರಣ ಮೂಲಕ ಒಂದಾದ ಪುನರ್ ಸಜ್ಜೀಕರಣ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಗಣನೆಯಲ್ಲಿದೆ.

Annexure-I

List of Public Sector undertakings

1.	Hutti Gold Mines Ltd.	-	Profit
2.	Karnataka Telecom Ltd.	-	Profit
3.	Karnataka State Handicrafts Development Corporation Ltd.	-	Profit

4.	The Mysore Paper Mills Ltd.	-	Profit
5.	Karnataka Handloom Development Corpn.	-	Profit
6.	Karnataka Small Industries Marketing Corporation.	-	Profit
7.	Mysore Sales International Ltd.	-	Profit
8.	Lidkar	-	Loss
9.	NGEF Ltd.	-	Loss
10.	Marketing consultants & Agencies	-	Profit
11.	Mysore Electrical Industries Ltd.	-	Profit
12.	Mysore Cosmetics Ltd.	-	Loss
13.	Mysore Accetate & Chemicals Co. Ltd.	-	Loss
14.	Karnataka State Textiles Ltd.	-	Loss
15.	Mysore Minerals Ltd	-	Profit
16.	Karnataka Soaps & Detergents Ltd.	-	Loss
17.	Mysore Lamp Works Ltd.	-	Loss
18.	Mysore Chrome Tanning Co. Ltd.	-	Loss
19.	Karnataka Silk Marketing Board	-	Loss
20.	Kavika	-	Profit
21.	KIMCO	-	Loss
22.	Karnataka State Industries Investment & Development Corporation.	-	Profit
23.	Mysore Paints & Varnish Ltd.	-	Profit
24.	My Sugar	-	Profit
25.	Chamundi Machine Tools Ltd.	-	Loss
26.	KEONICS	-	Profit
27.	Karnataka State Small Industries Development Corporation	-	Profit
28.	Karnataka State Coir Dev. Corporation	-	Profit
29.	Karnataka Silk Industries Corpn. Ltd.	-	Profit
30.	Karnataka Silk Industries Corpn. Ltd.	-	Profit
31.	Karnataka Tungsten Moly Ltd.	-	Winding-up Stage.

ಶ್ರವಣ ಬೆಳಗೊಳದ ಬಾಹುಬಲಿ ಬೆಟ್ಟದ ಸುತ್ತ ಗಣಿಗಾರಿಕೆಯನ್ನು ನಿಷೇಧ

430 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರವಣ ಬೆಳಗೊಳದ ಬಾಹುಬಲಿ ಬೆಟ್ಟದ ಸುತ್ತಮುತ್ತಲಿನ ಪ್ರದೇಶದಲ್ಲಿ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಾಹುಬಲಿ ಬೆಟ್ಟದಿಂದ 5 ಕಿ.ಮೀ.ವರೆಗೆ ಗಣಿಗಾರಿಕೆಯನ್ನು ನಿಷೇಧಿಸಬೇಕೆಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಶಿಫಾರಸು ಮಾಡಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಎಸ್.ಡಿ. ಜಯರಾಂ (ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವರು):

ಅ) ಹೌದು

ಆ) ಹೌದು

ಇ) ಬಾಹುಬಲಿ ಪ್ರತಿಮೆಯಿಂದ 2 ಕಿ.ಮೀ. ತ್ರಿಜ್ಯದೊಳಗೆ ಗಣಿಗಾರಿಕೆಯನ್ನು ನಿಷೇಧಿಸಿರುವ ಸೂಚನಾ ಫಲಕಗಳನ್ನು ತೋರಿಸುವಂತೆ ಹಾಗೂ ಪ್ರತಿಮೆಯಿಂದ 5 ಕಿ.ಮೀ. ತ್ರಿಜ್ಯದೊಳಗೆ ಬರುವ ಗಣಿ ಗುತ್ತಿಗೆಯನ್ನು ರದ್ದು ಪಡಿಸಲು ಹಾಗೂ ಆ ಪ್ರದೇಶದಲ್ಲಿ ಗಣಿಗಾರಿಕೆಯನ್ನು ಮತ್ತು ಕಲ್ಲು ಸಿಡಿಸುವುದನ್ನು ನಿಷೇಧಿಸಲು ಗಣಿ ಮತ್ತು ಭೂವಿಜ್ಞಾನ ನಿರ್ದೇಶಕರಿಗೆ ಸೂಚಿಸಲಾಗಿದೆ.

ಸ್ವಾವಲಂಬನ ಯೋಜನೆಯಡಿಯಲ್ಲಿ ನೀಡಿರುವ ನೆರವು

431 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ 1995-96ರಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಸ್ವಾವಲಂಬನಾ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ನೀಡಿರುವ ನೆರವಿನ ಹಣವೆಷ್ಟು?

ಆ) ಈ ಹಣವನ್ನು ಎಷ್ಟು ಫಲಾನುಭವಿಗಳಿಗೆ ನೀಡಲಾಗಿದೆ?

ಇ) ಇವರ ಪೈಕಿ ಎಷ್ಟು ಫಲಾನುಭವಿಗಳು ಜಯಮಹಲ್ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದವರು.

ಈ) ಫಲಾನುಭವಿಗಳ ಆಯ್ಕೆಗಾಗಿ ಈ ನಿಗಮವು ಜಯಮಹಲ್ ವಿಧಾನ ಸಭಾ ಕ್ಷೇತ್ರಕ್ಕೆ ಭೇಟಿ ನೀಡಿ ಸ್ವತಃ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಳ್ಳಲು ಕ್ರಮ ಕೈಗೊಂಡಿದೆಯೇ;

ಉ) ಜಯಮಹಲ್ ವಿಧಾನ ಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿರುವುದರಿಂದ ಈ ಕ್ಷೇತ್ರದಿಂದ ಹೆಚ್ಚಿನ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸ್ವಾವಲಂಬನಾ ಸಾಲದ ಯೋಜನೆಯಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 1995-96ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಗೆ ಈ ಕೆಳಗಿನಂತೆ ಸಾಲ ಸೌಲಭ್ಯಗಳನ್ನು ಒದಗಿಸಲಾಗಿದೆ.

ಮಾರ್ಜಿನ್ ಹಣ ರೂ. 44,52,705-00

ಬ್ಯಾಂಕಿನ ಹಣ ರೂ. 1,58,97,203-00

ಆ) 485 ಫಲಾನುಭವಿಗಳಿಗೆ ಸಾಲ ಸೌಲಭ್ಯದ ನೆರವನ್ನು ನೀಡಲಾಗಿದೆ.

ಇ) ಇದರಲ್ಲಿ 155 ಫಲಾನುಭವಿಗಳು ಜಯಮಹಲ್ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದವರಾಗಿರುತ್ತಾರೆ.

ಈ) ಇಲ್ಲ, ನಿಗಮದ ಸ್ವಾವಲಂಬನಾ ಸಾಲದ ನೀತಿ ಮತ್ತು ನಿಯಮಾವಳಿ ಪ್ರಕಾರ ಫಲಾನುಭವಿಗಳು ಯಾರು ಅರ್ಜಿ ಸಲ್ಲಿಸಿರುವರೊ ಅಂತಹ ಫಲಾನುಭವಿಗಳಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯು ಪರಿಶೀಲಿಸಿ ಶಿಫಾರಸ್ಸಿನೊಂದಿಗೆ ಫಲಾನುಭವಿಗಳು ನಮೂದಿಸಿರುವ ಬ್ಯಾಂಕುಗಳಿಗೆ ಕಳುಹಿಸಲಾಗುತ್ತದೆ. ಈ ವಿಧಾನವು ಬೆಂಗಳೂರು ಜಿಲ್ಲೆಗೂ ಅನ್ವಯಿಸುತ್ತದೆ.

ಉ) ಸ್ವಾವಲಂಬನ ಸಾಲ ನೀತಿ ಮತ್ತು ನಿಯಮಾವಳಿ ಪ್ರಕಾರ ಮತೀಯ ಅಲ್ಪಸಂಖ್ಯಾತರ ಯಾರು ಸಾಲಕ್ಕಾಗಿ ಅರ್ಜಿ ಸಲ್ಲಿಸುವರೋ ಅಂತಹ ಎಲ್ಲಾ ಅರ್ಜಿಗಳನ್ನು ಮೇಲ್ಕಂಡ ಜಿಲ್ಲಾ ಸಮಿತಿಯು ಪರಿಗಣಿಸಿ ಯಾವುದೇ ಕ್ಷೇತ್ರದ ಭೇದವಿಲ್ಲದೆ ಸಾಲ ಸೌಲಭ್ಯದ ನೆರವನ್ನು ಕಲ್ಪಿಸಲು ತನ್ನ ಶಿಫಾರಸ್ಸಿನೊಂದಿಗೆ ಬ್ಯಾಂಕಿಗೆ ಕಳುಹಿಸಲಾಗುತ್ತದೆ.

ಹೊಸ ಉದ್ಯಮಿಗಳು ಬಂಡವಾಳ ತೊಡಗಿಸಿರುವ ಬಗ್ಗೆ

445. - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಮುಖ್ಯ ಖನಿಜಗಳಾದ ಕಬ್ಬಿಣ ಮತ್ತು ಚಿನ್ನದ ಕ್ಷೇತ್ರಗಳಲ್ಲಿ ಹೊಸದಾಗಿ ಎಷ್ಟು ಉದ್ಯಮಿಗಳ ಬಂಡವಾಳ ತೊಡಗಿಸಿದ್ದಾರೆ?

ಆ) ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ವಸ್ತುಗಳೊಂದಿಗೆ ಇವರು ಕಾರ್ಯೋನ್ಮುಖರಾಗಿದ್ದಾರೆ? ವಿವರ ನೀಡುವುದು.

ಎಸ್.ಡಿ. ಜಯರಾಂ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) 17 ವ್ಯಕ್ತಿಗಳು : ಕಂಪನಿಗಳು ಹೊಸದಾಗಿ ಚಿನ್ನದ ಗಣಿ ಅನ್ವೇಷಣಾ ಲೈಸೆನ್ಸ್‌ಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ಕಬ್ಬಿಣ ಅದಿರಿಗೆ ಸಂಬಂಧಿಸಿದಂತೆ 3 ಅರ್ಜಿಗಳು ಸ್ವೀಕೃತವಾಗಿವೆ.

ಆ) ಚಿನ್ನ ಹಾಗೂ ಕಬ್ಬಿಣದ ಅದಿರು ಹೆಚ್ಚಿರುವ ರಾಜ್ಯದ ಬಹುಪಾಲು ಪ್ರದೇಶಗಳು ಈ ಅರ್ಜಿಗಳಲ್ಲಿ ಒಳಗೊಂಡಿವೆ. ಈ ಎರಡೂ ಖನಿಜಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನೀತಿಯನ್ನು ರೂಪಿಸುತ್ತಿದೆಯಲ್ಲದೆ ಸಂಬಂಧಿತ ನಿಯಮವಾದ ಖನಿಜ ರಿಯಾಯಿತಿ ನಿಯಮಗಳು 1960ರ ಕೆಲವು ಪ್ರಸ್ತುತ ನಿಯಮಗಳನ್ನು ಸಡಿಲಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ತೀರ್ಮಾನಕ್ಕಾಗಿ ಕಾಯಲಾಗುತ್ತಿದೆ. ಆದ್ದರಿಂದ ಅರ್ಜಿದಾರರು ಗಣಿಗಾರಿಕೆ ಕೆಲಸವನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ.

ಅಧ್ಯಕ್ಷರು : ದಿನಾಂಕ 20-2-96ರಂದು ಪ್ರಶ್ನೋತ್ತರ ನಡೆಯದ ಕಾರಣ 1ನೇ ಪಟ್ಟಿಯಲ್ಲಿದ್ದ 15 ಚುಕ್ಕೆ ಗುರುತಿನ ಪ್ರಶ್ನೆಗಳ ಪೈಕಿ 8 ಪ್ರಶ್ನೆಗಳಿಗೆ ಉತ್ತರಗಳನ್ನು 24 ಚುಕ್ಕೆ ರಹಿತ ಪ್ರಶ್ನೆಗಳ 11 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯಲ್ಲಿ ಮಂಡಿಸುತ್ತೇನೆ.

ರಾಜ್ಯದಲ್ಲಿ ಕೈಗೊಂಡ ಏತ ನೀರಾವರಿ ಕಾಮಗಾರಿಗಳು

83 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) :ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ಏತ ನೀರಾವರಿ ಕಾಮಗಾರಿಗಳನ್ನು ಸರ್ಕಾರದವರು ಪ್ರಾರಂಭಿಸಿದ್ದಾರೆ ಹಾಗೂ ಅವು ಈಗ ಯಾವ ಹಂತದಲ್ಲಿ ಇರುವುವು (ಜಿಲ್ಲಾವಾರು ವಿವರ ನೀಡುವುದು)*

ಆ) *ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳದಿದ್ದಲ್ಲಿ 1993-97ನೇ ಸಾಲಿನಲ್ಲಿ ಯಾದಾದರೂ ಹೊಸ ಏತ ನೀರಾವರಿ ಯೋಜನೆ ಪ್ರಾರಂಭಿಸುವ ವಿಚಾರ ಸರ್ಕಾರದವರಲ್ಲಿದೆಯೇ?*

ಇ) *ನೀರಾವರಿಯಿಂದ ವಂಚಿತರಾದ ವಿಜಾಪುರ ಜಿಲ್ಲೆಗೆ ಹೆಚ್ಚಿನ ಆದ್ಯತೆ ಕೊಡುವುದಕ್ಕೆ ಸರ್ಕಾರದವರು ಪರಿಶೀಲಿಸುವರೆ?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿ):

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 13 ಏತ ನೀರಾವರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಅವುಗಳ ಹಂತದ ಬಗ್ಗೆ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಹೌದು.

ವಿಧಾನ ಸಭಾ ಸದಸ್ಯರಾದ ಶ್ರೀ ಜೆ.ಟಿ. ಪಾಟೀಲ್‌ರವರ ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 83ಕ್ಕೆ ಅನುದಾನ

95-96ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾರಂಭಿಸಿರುವ ಹೊಸ ಏತ ನೀರಾವರಿ ಯೋಜನೆಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆ		ಏತ ನೀರಾವರಿ ಕಾಮಗಾರಿಗಳ ಹೆಸರು	ಹಂತ
(ಅ)	ಸಣ್ಣ ನೀರಾವರಿ ದಕ್ಷಿಣ ವಲಯ			
	ಶಿವಮೊಗ್ಗ ಜಿಲ್ಲೆ :			
		1.	ಮೂಗೂರು ಬಳಿ ವರದಾನದಿಯಿಂದ ಏತ ನೀರಾವರಿ ಯೋಜನೆ	ಅಂದಾಜು ಮಂಜೂರಾಗಿದ್ದು ವಿನ್ಯಾಸಗಳನ್ನು ಅಂತಿಮಗೊಳಿಸಲಾಗುತ್ತಿದೆ.
		2.	ಮೂಡಿ ಬಳಿ ವರದಾ ನದಿಗೆ ಏತ ನೀರಾವರಿ ಯೋಜನೆ.	-ಯಥಾ-
		3.	ಕಾಗೋಡು ಬಳಿ ಬಾಂದಾರ ಮತ್ತು ಏತನೀರಾವರಿ ಯೋಜನೆ	ಜಾಕ್‌ವೆಲ್‌ಗೆ ಮಣ್ಣು ಅಗತದ ಕೆಲಸ ಮುಗಿದಿದೆ. ನೀರೆತ್ತುವ ಯಂತ್ರಗಳ ಗುತ್ತಿಗೆಗಳನ್ನು ಅಂತಿಮಗೊಳಿಸಲಾಗುತ್ತಿದೆ.
		4.	ತಲಗಡಲೆ ಬಳಿ ಬಾಂದಾರ ಮತ್ತು ಏತ ನೀರಾವರಿ ಯೋಜನೆ	ಜಾಕ್‌ವೆಲ್‌ಗೆ ಮಣ್ಣು ಅಗೆತದ ಕೆಲಸ ಮುಗಿದಿದೆ. ನೀರೆತ್ತುವ ಯಂತ್ರಗಳಿಗಾಗಿ ಗುತ್ತಿಗೆಗಳನ್ನು ಕರೆಯಬೇಕಾಗಿದೆ.
	ಮಂಡ್ಯ ಜಿಲ್ಲೆ	5.	ಹೆಮ್ಮಿಗೆ ಬಳಿ ಏತನೀರಾವರಿ ಯೋಜನೆ.	ಜಾಕ್‌ವೆಲ್‌ಗೆ ಮಣ್ಣು ಅಗೆತದ ಕೆಲಸ ಮುಗಿದಿದೆ. ಉಳಿದ ಕೆಲಸಗಳನ್ನು ಗುತ್ತಿಗೆ ಮೂಲಕ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

(ಅ) **ಸಣ್ಣ ನೀರಾವರಿ ಉತ್ತರ ವಲಯ**

ರಾಯಚೂರು ಜಿಲ್ಲೆ

6.	ದೇವದುರ್ಗ ತಾಲ್ಲೂಕು ನಿಲುವಂಜಿ ಬಳಿ ಏತನೀರಾವರಿ ಯೋಜನೆ.	ಜಾಕ್‌ವೆಲ್ ಅಗೆತ ಭಾಗಶಃ ರೈಸಿಂಗ್ ಮ್ಯೆನ್‌ನ ಕೊಳವೆಗಳು ಸರಬರಾಜಾಗಿದದು, ಇದಕ್ಕಾಗಿ ಅಗೆತ ಪ್ರಾರಂಭಿಸಲಾಗಿದೆ.
7.	ಮಾನ್ವಿ ತಾ:ಗೋರ್ಕಲ್ ಏತ ನೀರಾವರಿ ಯೋಜನೆ.	ಇನ್‌ಟೇಕ್‌ವೆಲ್ ನಿರ್ಮಾಣ ಇನಟೇಕ್ ಕೊಳವೆ ಜೋಡಣೆ, ಚೇಂಬರಿನ ಮಣ್ಣಿನ ಅಗೆತಹಾಗೂ ಪೂರಕ ಕಾಲುವೆ ಕೆಲಸ ಮುಗಿದಿದೆ. ಜಾಕ್‌ವೆಲ್ ಕೆಲಸ ಭೂಮಟ್ಟದವರೆಗೆ ಮುಗಿದಿದೆ. ರೈಸಿಂಗ್ ಮ್ಯೆನ್‌ನ ಕೊಳವೆಗಳ ಸರಬರಾಜಿಗೆ.
8.	ಮಾನ್ವಿ ತಾ:ಮೋತ್ನಾಳ ಬಳಿ ಏತ ನೀರಾವರಿ ಯೋಜನೆ.	ಜಾಕ್‌ವೆಲ್, ಇನ್‌ಟೇಕ್ ಕೊಳವೆ, ಜಾಕ್‌ವೆಲ್‌ಗಾಗಿ ಮಣ್ಣಿನ ಅಗೆತದ ಕೆಲಸ ಪ್ರಾರಂಭಿಸಲಾಗಿದ್ದು, 8 ಅಡಿ ಆಳದ ವರೆಗೆ ಇಳಿಸಲಾಗಿದೆ. ನೀರೆತ್ತುವ ಯಂತ್ರದ ಮನೆಯ ಪಾಯದ ಕೆಲಸ ಮುಗಿದಿದೆ.
9.	ಸಿಂಧನೂರು ತಾ: ಹೂಡಾ ಏತ ನೀರಾವರಿ ಯೋಜನೆ	ಗುತ್ತಿಗೆ ಕರೆಯಲಾಗಿದೆ. ಅನುಮೋದನೆಯಾಗಿದ್ದು, ಕೆಲಸ ಪ್ರಾರಂಭಿಸಲಾಗಿದೆ.

(ಇ) **ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗ**

ಬಳ್ಳಾರಿ ಜಿಲ್ಲೆ

11.	ಸಿರಗುಪ್ಪ ತಾಲ್ಲೂಕು ಟಿ. ರಾಂಪುರ ಏತ ನೀರಾವರಿ ಯೋಜನೆ.	ಜಾಕ್‌ವೆಲ್ ಕೆಲಸಕ್ಕಾಗಿ ಪಾಯದ ಅಗೆತದ ಕಾಮಗಾರಿ ಪ್ರಗತಿಯಲ್ಲಿದೆ.
12.	ಹೊಸಪೇಟೆ ತಾ:ಚೌಕು ಏತ ನೀರಾವರಿ ಯೋಜನೆ.	ಇಲ್ಲಿಯವರೆಗೆ 1..2 ಲಕ್ಷರೂ.ಗಳು ಖರ್ಚಾಗಿದ್ದು, ಕೆಲಸ ಪ್ರಗತಿಯಲ್ಲಿದೆ.
13.	ಹೊಸಪೇಟೆ ತಾ:ಉಪ್ಪಾರಹಳ್ಳಿ ಏತ ನೀರಾವರಿ ಯೋಜನೆ.	ಇಲ್ಲಿಯವರೆಗೆ 8.12ಲಕ್ಷ ರೂ.ಗಳು ಖರ್ಚಾಗಿದ್ದು, ಕೆಲಸ ಪ್ರಗತಿಯಲ್ಲಿದೆ.

ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ನೇಮಕಾತಿ

146 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶ್ವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ನೇಮಕಕ್ಕೆ ಸರ್ಕಾರ ಉಪಯೋಗಿಸುವ ಮಾನ ದಂಡವೇನು?

ಆ) ಗರಿಷ್ಠ ಅಂಕಗಳ ಆಧಾರದ ಮೇಲೆ ನೇರ ನೇಮಕಾತಿ ಮಾಡಿದರೆ 8-10 ವರ್ಷಗಳ ಹಿಂದಿನ ನಿರುದ್ಯೋಗಿ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೆ?

ಇ) ಈ ಗೊಂದಲ ನಿವಾರಣೆಗೆ ನೇರ ಆಯ್ಕೆಯ ಬದಲಿಗೆ ಅರ್ಹತಾ ಪರೀಕ್ಷೆ ಅಥವಾ ಸಂದರ್ಶನ ಏನಾದರು ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ?

ಈ) ಈ ಕ್ರಮದಿಂದ ನಿಜವಾದ ವೃತ್ತಿ ಪರಿಣತಿ ಹೊಂದಿದವರಿಗೆ ಅವಕಾಶವನ್ನು ಕಲ್ಪಿಸಿ ಕೊಟ್ಟಂತಾಗುವುದಿಲ್ಲವೆ, ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ನಾಗರೀಕ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಾವಳಿಗಳು, 1983ರಲ್ಲಿ ನಿಗದಿ ಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳು.

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ದ.ಕನ್ನಡ ಜಿಲ್ಲೆಯಲ್ಲಿ ಪೋಲೀಸರ ಮೇಲೆ ಹಲ್ಲೆ ಕುರಿತು ದಾಖಲಾದ ದೂರು

74 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ, ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಿಂದೀಚೆಗೆ ಎಷ್ಟು ಕಡೆಗಳಲ್ಲಿ ಪೋಲೀಸರ ಮೇಲೆ ಮತ್ತು ಪೋಲೀಸ್ ವಾಹನಗಳ ಮೇಲೆ ಹಲ್ಲೆ ನಡೆದ ದೂರುಗಳು ದಾಖಲಾಗಿವೆ, (ಪ್ರಕರಣವಾರು ಮತ್ತು ತಾಲ್ಲೂಕುವಾರು ವಿವರ ಹಾಗೂ ಆಪಾದಿತರ ವಿಳಾಸ ತಿಳಿಸುವುದು)?

ಆ) ಈ ಬಗ್ಗೆ ಎಷ್ಟು ಜನರನ್ನು ಬಂಧಿಸಲಾಗಿದೆ (ಪೋಲೀಸ್ ಠಾಣೆವಾರು ವಿವರ ನೀಡುವುದು)?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಪೋಲೀಸರ ಮೇಲೆ ಹಲ್ಲೆ 16

ಪೋಲೀಸ ವಾಹನಗಳ ಮೇಲೆ 6

ವಿವರಗಳನ್ನು ಅನುಬಂಧ-ಅ ನಲ್ಲಿ ಲಗತ್ತಿಸಲಾಗಿದೆ.

ಆ) ಒಟ್ಟು 244 ಜನರನ್ನು ಬಂಧಿಸಲಾಗಿದೆ. ವಿವರಗಳನ್ನು ಅನುಬಂಧ-ಅ ಮತ್ತುಆರಲ್ಲಿ ಲಗತ್ತಿಸಲಾಗಿದೆ.

ಅನುಬಂಧ ಅ

ಪೋಲೀಸರ ಮೇಲೆ ಹಲ್ಲೆ ನಡೆದ ಬಗ್ಗೆ ದಾಖಲಾದ ಪ್ರಕರಣಗಳ ವಿವರಗಳು

ಕ್ರಮ ಸಂಖ್ಯೆ	ಠಾಣೆಯ ಹೆಸರು	ಮೊ.ನಂ. ಮತ್ತು ಕಲಂ	ಸ್ಥಳ ಮತ್ತು ದಿನಾಂಕ	ತಾಲ್ಲೂಕು	ದಸ್ತಗಿರಿಯಾದ ಅಪರಾಧಗಳ ಹೆಸರು ಮತ್ತು ವಿಳಾಸ
1.	ಮಲ್ಪೆ	1:95, ಕಲಂ 143-147-	1-1-95	ಉಡುಪಿ	1) ರಾಮರಾಜ ಆಲಿಯಾಸ್ ರೊಟ್ಟಿ ರಾಜ (24) ತಂದೆ:ಸೂರಪ್ಪ ಪೂಜಾರಿ, ಶ್ರೀ ಗುರುನಿವಾಸ, ಕಿದಿಯೂರು 2) ಮಹದೇಶ್ ಸುವರ್ಣ (18) ತಂದೆ:ಜಯ ಸುವರ್ಣ, ಕಿದಿಯೂರು
2.	ಉರ್ವ	11:95, ಕಲಂ 333 ಐಪಿಸಿ	14-1-95 ಬರೋಡ ಬ್ಯಾಂಕ್ ಬಳಿ, ಚಿಲಿಂಬಿ	ಮಂಗಳೂರು	1) ಸುಂದರ (19) ತಂದೆ:ದಿ:ತನಿಯ, ಚಿಲಿಂಬಿಗುಡ್ಡೆ, .ಉರ್ವ
3.	ಮಣಿಪಾಲ	39:95, ಕಲಂ 224-225-332- ಜತೆಗೆ 34 ಐಪಿಸಿ	8-3-95 ಕಟಪಾಡಿ, ಹೊರಠಾಣೆ	ಉಡುಪಿ	1) ಉದಯ ಕುಮಾರ್ (24) ತಂದೆ:ಅನಿಲ್ ಸೋನ್ಸ್, ಸುಭಾಷ್ನಗರ, ಕುರ್ಕಾಲ್, ಉಡುಪಿ 2) ಜಯಂತ (22) ತಂದೆ : ಶೀನ ಪೂಜಾರಿ ಮಿತ್ತಟ್ಟು, ಮೂಡಬಿದ್ರಿ, ಉಡುಪಿ) 3) ಸಂತೋಷ್ ಕುಮಾರ್ (23) ತಂದೆ : ಐತಪ್ಪ ಕರ್ಕೇರ, ಏಣಗುಡ್ಡೆ, ಕಟಪಾಡಿ 4) ಮಹಮ್ಮದ್ ಅಲಿ (25) ತಂದೆ:ಅಬೂಬಕ್ಕರ್, ಏಣಗುಡ್ಡೆ, ಕಟಪಾಡಿ
4.	ಮಂಗಳೂರು ಉತ್ತರ	76:95, ಕಲಂ 353-332 ಐಪಿಸಿ	24-3-95 ನ್ಯಾಯಾಲಯದ ಆವರಣ, ಮಂಗಳೂರು	ಮಂಗಳೂರು ಕಾವೂರು, ಮಂಗಳೂರು	1) ಆಕಾಶಭವನ ಇಬ್ರಾಹಿಂ, ತಂದೆ:ಮಹಮ್ಮದ್
5.	ಹಿರಿಯಡ್ಕ	24:95 ಕಲಂ 353-504 ಜತೆಗೆ 34 ಐಪಿಸಿ	7-5-95, ಪೆರ್ಡೂರು ಗ್ರಾಮದ ಮುತ್ತರ್ಣೆ ಉಡುಪಿ	ಉಡುಪಿ	1) ನಾರಾಯಣ ಶೆಟ್ಟಿ (48) ತಂದೆ:ಜಗನ್ನಾಥ ಶೆಟ್ಟಿ, ಮುತ್ತರ್ಣೆ, ಪೆರ್ಡೂರು 2) ಶ್ರೀಮತಿ ಕಾಂತ, (48) ಗಂಡ:ನಾರಾಯಣ ಶೆಟ್ಟಿ, ಮುತ್ತಾರ್ಣೆ, ಪೆರ್ಡೂರು 3) ವಿಜಯ (19) ತಂದೆ:ನಾರಾಯಣ ಶೆಟ್ಟಿ, ಮುತ್ತರ್ಣೆ, ಪೆರ್ಡೂರು
6.	ಮಂಗಳೂರು ದಕ್ಷಿಣ	221:95, ಕಲಂ 341-332 ಜತೆಗೆ 34 ಐಪಿಸಿ	1-7-95 ಪಾಂಡೇಶ್ವರ, ಎನ್ನಿಸಿ ಕಚೇರಿ, ಮಂಗಳೂರು	ಮಂಗಳೂರು	1) ಬ್ರಹ್ಮಪ್ರಕಾಶ್ ಯಾದವ್, ತಂದ ಅಮರಸಿಂಗ್ ಹರಿಯಾಣ 2) ರಾಮು, ತಂದೆ:ಚಿನ್ನಪ್ಪ, ತಮಿಳುನಾಡು 3) ಮರಿಯಪ್ಪನ್, ತಂದೆ:ಅಯ್ಯಸ್ವಾಮಿ, ತಮಿಳುನಾಡು
7.	ಪುತ್ತೂರು ಗ್ರಾಮಾಂತರ	131:95 ಕಲಂ 332 ಐಪಿಸಿ	25-8-95 ಪಾಣಾಜೆ ಗ್ರಾಮದ ಜಾಲಗದ್ದೆ ಮಸೀದಿ ಬಳಿ	ಪುತ್ತೂರು ತಾಲ್ಲೂಕು	1) ಖಾಲಿದ್ (20) ತಂದೆ:ಹಸೈನಾರ್, ಪರ್ಕಳ ಮನೆ, ಪಾಣಾಜೆ ಗ್ರಾಮ

8.	ಮಂಗಳೂರು ಉತ್ತರ	230:95 ಕಲಂ 323-504 353 ಐಪಿಸಿ	3-11-95 ಮೋಹಿನಿ ವಿಲಾಸ ಬಳಿ	ಮಂಗಳೂರು	1) ಸಿರಿಲ್ ಡಿಸೋಜ (30) ತಂದೆ:ಬಾಪ್ಟಿಸ್ಟ್ ಡಿಸೋಜ, ಅತ್ತಾವರ
9.	ಮೂಡಬಿದ್ರಿ	138:95 ಕಲಂ 332 ಐಪಿಸಿ	14-11-95 ಮೂಡಬಿದ್ರಿ ಪೇಟೆ	ಕಾರ್ಕಳ ತಾಲ್ಲೂಕು	1) ಪ್ರಕಾಶ್ ಶೆಟ್ಟಿ, ತಂದ:ನಾರಾಯಣ ಶೆಟ್ಟಿ, ಬೆಳುವಾಯಿ
10.	ಪಣಂಬೂರು	118:95, ಕಲಂ 143-147 148-341-427-342-188 ಜತೆಗೆ 149 ಐಪಿಸಿ	21-2-95 ಬೈಕಂಪಾಡಿ	ಮಂಗಳೂರು	1) ನಾಗೇಶ್ (18) ತಂದೆ:ರಾಮ, ಶೇಡಿಗುರಿ, ತೋಕೂರು 2) ರವಿ (21) ತಂದೆ:ಸಂಜೀವ ಪೂಜಾರಿ ಜೋಕಟ್ಟೆ, ಶೇಡಿಗುರಿ ಮನೆ, ತೋಕೂರು 3. ಶ್ರೀನಿವಾಸ (21) ತಂದೆ:ಕೊರಗ ಪೂಜಾರಿ ಶೇಡಿಗುರಿ ಮನೆ, ಜೋಕಟ್ಟೆ, ತೋಕೂರು 4) ಮಾದವ ಸುವರ್ಣ (2) ತಂದೆ:ಕಾಂತು ಸುವರ್ಣ, ತೋಕೂರು 5) ಆಲ್ವಿನ್ ಆಲಿಯಾಸ್, ಮೋಲ್ವಿನ್ ಸಲ್ದಾನ (18) ತಂದೆ:ಜೀವನ್ ಸಾಲಿಯಾನ್, ತೋಕೂರು 6) ಕೃಷ್ಣ ಪೂಜಾರಿ (19) ತಂದೆ:ಬೋಜ ಪೂಜಾರಿ, ಕೊಡಂಬೂರು, ಬೈಕಂಪಾಡಿ 7) ಗಣೇಶ ಸನಿಲ್ (19) ತಂದೆ:ಗೋಪಾಲ, ಜೋಕಟ್ಟೆ, ತೋಕೂರು
11.	ಶಿರ್ವ	150:95, ಕಲಂ 143-147-148 355-332-427-ಜತೆಗೆ 149 ಐಪಿಸಿ	22-12-95 ಕಾಪೂಪೇಟೆ	ಉಡುಪಿ	ಅಪರಾಧಿಗಳ ಹೆಸರು ಮತ್ತು ವಿಳಾಸ ತಿಳಿದಿರುವುದಿಲ್ಲ
12.	ಶಿರ್ವ	163:95, ಕಲಂ 143-147-148-341·352-336-506-353-324 ಜತೆಗೆ 149 ಐಪಿಸಿ	22–12-95 ಕಾಪುಪೇಟೆ	ಉಡುಪಿ	ಅಪರಾಧಿಗಳ ಹೆಸರು ಮತ್ತು ವಿಳಾಸ ತಿಳಿಸುವುದಿಲ್ಲ
13.	ಉಡುಪಿ ನಗರ	184:95 ಕಲಂ 143-147-353-323-ಜತೆಗೆ 149 ಐಪಿಸಿ	22-12-95	ಉಡುಪಿ	1) ಸದಾನಂದ ಕೋಟ್ಯಾನ್, ತಂದೆ:ಮುತ್ತಪ್ಪ ಕೋಟ್ಯಾನ್, ಕುದ್ರುಬೆಟ್ಟು, ಉಪ್ಪೂರು, ಉಡುಪಿ 2) ಜಯಕರ ಸುವರ್ಣ, ತಂದೆ:ಶ್ರೀನ ಅಮೀನ್ ಮೂಡ ತೋನ್ಸೆ ಗ್ರಾಮ
14.	ಕುಂದಾಪುರ	1:96 ಕಲಂ 143-147-435 341-353-506 ಜತೆಗೆ 149 ಐಪಿಸಿ	31-12-95 ವಡೇರ ಹೋಬಳಿ ಗ್ರಾಮದ ಬಸ್ರೂರು	ಕುಂದಾಪುರ	1) ದಿನೇಶ್ ಗಾಣಿಗ, ತಂದೆ:ನಾರಾಯಣ ಗಾಣಿಗ, ಬಸ್ರೂರು ರಸ್ತೆ, ವಡೇರ ಹೋಬಳಿ
15.	ಸುರತ್ಕಲ್	147:95, ಕಲಂ 143-147-148 341:186-353 ಜತೆಗೆ 149 ಐಪಿಸಿ	19-12-95 ಹೊಸಬೆಟ್ಟು	ಮಂಗಳೂರು	1 ರುಕ್ಮಾಂಗದ ಸಾಲಿಯಾನ್, ತಂದೆ:ಭೋಜ ಅಮೀನ್, ಬೈಕಂಪಾಡಿ, ಮೀನಕಳಿಯ ಮತ್ತು ಇತರ 216 ಮಂದಿ
16.	ಸುರತ್ಕಲ್	149:95, ಕಲಂ 143-147-148-188-427 ಜತೆಗೆ 149 ಐಪಿಸಿ	21-12-95	ಮಂಗಳೂರು ತಿಳಿದಿರುವುದಿಲ್ಲ	ಅಪರಾಧಿಗಳ ಹೆಸರು ಮತ್ತು ವಿಳಾಸ

ಅನುಬಂಧ-ಆ

ಪೋಲೀಸ್ ವಾಹನಗಳ ಮೇಲೆ ಹಲ್ಲೆ ನಡೆದ ಬಗ್ಗೆ ಪ್ರಕರಣಗಳ ವಿವರಗಳು

ಕ್ರಮ ಸಂಖ್ಯೆ	ಠಾಣೆಯ ಹೆಸರು	ಮೊ.ನಂ. ಮತ್ತು ಕಲಂ	ಸ್ಥಳ ಮತ್ತು ದಿನಾಂಕ	ತಾಲ್ಲೂಕು	ದಸ್ತಗಿರಿಯಾದ ಅಪರಾಧಗಳ ಹೆಸರು ಮತ್ತು ವಿಳಾಸ
1	2	3	4	5	6
1.	ಬೆಳ್ತಂಗಡಿ	59:95 ಕಲಂ 143-144-147 148-341-353-336-427 ಜತೆಗೆ 149 ಐಪಿಸಿ	13-3-95 ಬೆಳ್ತಂಗಡಿ ತಾಲ್ಲೂಕು ಕಾಜೂರು ದರ್ಗಾ	ಬೆಳ್ತಂಗಡಿ	ಅಪರಾಧಿಗಳ ಹೆಸರು ಮತ್ತು ವಿಳಾಸ ತಿಳಿದಿರುವುದಿಲ್ಲ
2.	ಸುರತ್ಕಲ್	147:95, ಕಲಂ 143-147-148-341-186-353 ಜತೆಗೆ 149 ಐಪಿಸಿ	19-12-95 ಹೊಸಬೆಟ್ಟು	ಮಂಗಳೂರು	ದಸ್ತಗಿರಿಯಾದವರು 1) ರುಕ್ಮಾಂಗದ ಸ್ಯಾಲಿಯಾನ್ ತಂದೆ : ಭೋಜ ಅಮೀನ್, ಬೈಕಂಪಾಡಿ, ಮೀನಕಳಿಯ ಮತ್ತು ಇತರ 216 ಮಂದಿ
3.	ಸುರತ್ಕಲ್	149:95, ಕಲಂ 143-147-148 341-506-307-332-333-353-188-427-ಜತೆಗೆ 149 ಐಪಿಸಿ	21-12-95 ಚಿತ್ರಾಪುರ	ಮಂಗಳೂರು	ಅಪರಾಧಿಗಳ ಹೆಸರು ಮತ್ತು ವಿಳಾಸ ತಿಳಿದಿರುವುದಿಲ್ಲ,
4.	ಪಣಂಬೂರು	121:95, ಕಲಂ 143-147-148-341-427 ಜತೆಗೆ	21-12-95 149 ಐಪಿಸಿ ಬೈಕಂಪಾಡಿ	ಮಂಗಳೂರು	ಅಪರಾಧಿಗಳ ಹೆಸರು ಮತ್ತು ವಿಳಾಸ ತಿಳಿದಿರುವುದಿಲ್ಲ,
5.	ಉಡುಪಿ ನಗರ	187:95, ಕಲಂ 143-147-341-353-323 ಜತೆಗೆ ಕಲಂ 149	23-12-95 ಐಪಿಸಿ	ಉಡುಪಿ ಸಂತೆಕಟ್ಟೆ	ಅಪರಾಧಿಗಳ ಹೆಸರು ಮತ್ತು ವಿಳಾಸ ತಿಳಿದಿರುವುದಿಲ್ಲ,
6.	ಬ್ರಹ್ಮಾವರ	161:95, ಕಲಂ 143-147-148-341-332-427 ಜತೆಗೆ 149 ಐಪಿಸಿ.	24-12-95 ಸೈಬರಕಟ್ಟೆ	ಉಡುಪಿ ತಿಳಿದಿರುವುದಿಲ್ಲ,	ಅಪರಾಧಿಗಳ ಹೆಸರು ಮತ್ತು ವಿಳಾಸ

ಅನುಬಂಧ-ಅ

ಸುರತ್ಕಲ್ ಠಾಣಾ ಮೊಕದ್ದಮೆ ಸಂಖ್ಯೆ:147:95ರಲ್ಲಿ ದಸ್ತಗಿರಿ ಮಾಡಲ್ಪಟ್ಟಿರುವ ಆರೋಪಿಗಳ ಹೆಸರು, ವಿಳಾಸ:(ಕಲಂ 143, 147, 148, 341, 186, 353, ಜೊತೆಗೆ 149 ಭಾದಂಸಂ ಮತ್ತು 35 ಮತ್ತು 72 ಕೆಪಿಎ)

1. ಯು.ಆರ್. ಸಭಾಪತಿ, ಶಾಸಕರು, ಉಡುಪಿ ವಿಧಾನ ಸಭಾ ಕ್ಷೇತ್ರ.
2. ಕುಂಬ್ಳೆ ಸುಂದರ ರಾವ್, ಶಾಸಕರು, ಸುರತ್ಕಲ್ ವಿಧಾನ ಕ್ಷೇತ್.
3. ರುಕ್ಮಾಂಗದ, ಸಾಲ್ಯಾಸ್, (29) ತಂದೆ : ಭೋಜ ಅಮೀನ್, ವಾಸ : ಬೈಕಂಪಾಡಿ ಮೀನ ಕಳಿಯ, ಬೈಕಂಪಾಡಿ.
4. ದೇವದಾಸ (26) ತಂದೆ : ನಾರಾಯಣ ವಾಸ : ಮೀನಕಳಿಯ, ಬೈಕಂಪಾಡಿ
5. ನಾಗೇಶ (30) ತಂದೆ : ಆನಂದ, ವಾಸ : ಮೀನಕಳಿಯ, ಬೈಕಂಪಾಡಿ.
6. ರಾಜೇಶ್.ಎ (25) ತಂದೆ : ಶ್ರೀಧರ ಸಾಲ್ಯಾನ್ ವಾಸ : ಬೈಕಂಪಾಡಿ ಮೀನಕಳಿಯ
7. ಜನಾರ್ಧನ (20) ತಂದೆ : ದೇವಪ್ಪ, ವಾಸ : ಬೈಕಂಪಾಡಿ, ಮಂಗಳೂರು ತಾಲ್ಲೂಕು
8. ಯೋಗೀಶ್ (20) ತಂದೆ : ಲಕ್ಷ್ಮಣ ಬಂಗೇರ, ವಾಸ : ಬೈಕಂಪಾಡಿ
9. ರಮೇಶ್ (25) ತಂದೆ : ಆನಂದ ವಾಸ : ಬೈಕಂಪಾಡಿ, ಮಂಗಳೂರು ತಾಲ್ಲೂಕು
10. ರಾಜಕುಮಾರ್ (27) ತಂದೆ : ಬೊಂಬಾಯಿ ವಾಸ : ಮೀನಕಳಿಯ, ಬೈಕಂಪಾಡಿ
11. ಶಿವರಾಜಕುಮಾರ್ (26) ತಂದೆ : ಸಂಕಪ್ಪ ವಾಸ : ಮೀನಕಳಿಯ, ಬೈಕಂಪಾಡಿ
12. ಗುರೇಂದ್ರ (25) ತಂದೆ : ಲಕ್ಷ್ಮಣ ವಾಸ : ಮೀನಕಳಿಯ, ಬೈಕಂಪಾಡಿ
13. ಜಯಪಾಲ್ (28) ತಂದೆ : ಜಾರಪ್ಪ, ವಾಸ : ಕುಳ್ಯಾ ಹೊಸಬೆಟ್ಟು, ಕುಳೈಗ್ರಾಮ
14. ಸುರೇಶ್ ಆರ್.ಕೆ. (27) ತಂದೆ : ರಾಮಪ್ಪ, ವಾಸ : ಬೈಲು ಮನೆ ಹೊಸಬೆಟ್ಟು.
15. ಸಂತೋಷ್ಪ (25) ತಂದೆ : ವೆಂಕಪ್ಪ ಸಾಲ್ಯಾನ್ ವಾಸ : ಚಿತ್ರಾಪುರ ದೇವಸ್ಥಾನದ ಬಳಿ ಕುಳೈ
16. ಗಿರೀಶ್ (21) ತಂದೆ : ನತೀಶ ದಾಮೋಧರ ವಾಸ : ಕುಳೈ, ಕುಳೈಗ್ರಾಮ.
17. ಶಂಕರ್ (19) ತಂದೆ : ನತೀಶ್ ಮಂಡನೆ ವಾಸ : ಕುಳೈ, ಕುಳೈಗ್ರಾಮ
18. ನರಹರಿ ಎಸ್. ಕಾಂಚನ್ (37) ತಂದೆ : ಸುಂದರ್ ಅಮೀನ್ ವಾಸ : ಕುಳೈ
19. ಕೇಶವ ಶ್ರೀಯಾನ್ (32) ತಂದೆ : ನವೀನ್ ಕಾಂಚನ್, ವಾಸ : ಹೆಜಮಾಡಿಕೊಂಡಿ ಹೆಜಮಾಡಿ
20. ಚಂದ್ರಪ್ಪ (40) ತಂದೆ : ಕುರುಪ್ಪ, ವಾಸ : ಗುರುದೇವ , ಮಂಗಳಳೂರು
21. ಉದಯ ಎಸ್. ಕುಂದರ (37) ತಂದೆ : ಸುದಾಮ ಸಾಲ್ಯಾನ್ ವಾಸ : ಹೊಸಬೆಟ್ಟು

:2. ಗಂಗಾಧರ (40) ತಂದೆ : ತಿಮ್ಮಪ್ಪ, ವಾಸ : ಚಿತ್ರಾಪುರ, ಕುಳ್ಳೆ ಗ್ರಾಮ

:3. ರಾಗೂ ಸಕರ್ಕೇರ (45) ತಂದೆ : ಐಶು ಪುತ್ರನ್ ವಾಸ : ತುಳಸಿ ನಿವಾಸ ಹೊಸಬೆಟ್ಟು

'4. ನಾರಾಯಣ ಮೆಂಡನ್ (35) ತಂದೆ : ಪರಮೇಶ್ ಸುವರ್ಣ, ವಾಸ ಶಣ್ಣೀರುಬಾವಿ ಕುಳ್ಳೆ ಜೋಗಿ ಹೌಸ್ ಕುಳ್ಳೆ ಗ್ರಾಮ.

!5. ಗೋಪಾಲ ಪುತ್ರನ್ (28) ತಂದೆ : ಶಿವಪ್ಪ ಕರ್ಕೇರ ವಾಸ : ಬೊಗ್ಗ ಹೌಸ್ ಮೀನಕಳಿಯ ಬೈಕಂಪಾಡಿ

!6. ಸತೀಶ ಬಂಗೇರ (21) ತಂದೆ : ಲೋಕಯ್ಯ ಕರ್ಕೇರ ವಾಸ : ಸೂರ ಹೌಸ್, ಮೀನಕಳಿಯ ಬೈಕಂಪಾಡಿ, ಮಂಗಳೂರು ತಾಲ್ಲೂಕು.

'7. ಉಪೇಂದ್ರ ಹೊಸಬೆಟ್ಟು, (48) ತಂದೆ : ಐತಪ್ಪ ಮೆಂಡನ್ ವಾಸ : ವಿನಮೃತ ತಡಂಬೈಲು ಸುರತ್ಕಲ್

8. ಅಚ್ಚುತ ಪುತ್ರನ್ (45) ತಂದೆ : ಬಾಬು ಕರಚನ್ ವಾಸ : ಲಕ್ಷ್ಮಿ ನಿವಾಸ ಇದ್ಯಾ ಸುರತ್ಕಲ್

'9. ಪುರಂದರ ಸಾಲ್ಯಾನ್ (28), ತಂದೆ : ಲಕ್ಷ್ಮಣ ಪುತ್ರನ್ ವಾಸ : ಹೊಸಬೆಟ್ಟು, ಕುಳ್ಳೆ

0. ಶಾಂತಾರಮ ಹೆಚ್ (25), ತಂದೆ : ತಕರ ಶ್ರೀಯಾನ್ ವಾಸ : ಹೊಸಬೆಟ್ಟು ಜಾಕಾ ಹೌಸ್ ಹೊಸಬೆಟ್ಟು ಗ್ರಾಮ.

1. ಭಾಸ್ಕಲ್ ಪುತ್ರನ್ (29) ತಂದೆ : ಡಿ.ಎನ್.ಜಿ. ಕರ್ಕೇರ್ ವಾಸ : ಮೀನಕಳಿಯ ಬೈಕಂಪಾಡಿ

2. ರಮೇಶ್ ಹೆಜಮಾಡಿ (28) ತಂದೆ : ಸೋರುಪ್ಪ ಸುವಣ್ಣ, ವಾಸ : ಸುವರ್ಣ ಹೆಜ ಮಾಡಿ ಉಡುಪಿ ತಾಲ್ಲೂಕು.

3. ರಮೇಶ್ ಶೆಟ್ಟಿ 30 ತಂದೆ : ತಿಮ್ಮಪ್ಪ ಶೆಟ್ಟಿ ವಾಸ : ಕೊಡವ ಹೌಸ್ ಹೊಸಬೆಟ್ಟು, ಹೊಸಬಟ್ಟು ಗ್ರಾಮ

4. ದಯನಾಥ್ ಕೊಟ್ಯಾನ್ (53), ತಂದೆ : ಕೆ.ಬಿ. ಕೋಟ್ಯಾನ್ ವಾಸ : ಕೆಹೆಚ್‌ಬಿ ಕಾಲನಿ ಕುಂಜತ್ತಬೈಲು, ಮಂಗಳೂರು.

5. ಕೇಶವ ಕೋಟ್ಯಾನ್ (35) ತಂದೆ : ವೆಂಕಟಪ್ಪ ಕರ್ಕೇತರ, ವಾಸ : ವೇಂದಾಂ ಜಲಿ ಮನೆ ಹೊಸಬೆಟ್ಟು ಗ್ರಾಮ.

6. ಭರತ್ ಕುಮಾರ್ (36) ತಂದೆ : ಪದ್ಮನಾಭ ತಿಂಗಳಾಯ, ಹರಿಣಾ ನಿಲಯ, ಕುಳ್ಳೆ ಹೊಸಬೆಟ್ಟು

7. ಶಿವರಾಮ ಶೆಟ್ಟಿ (30), ತಂದೆ : ಸಂಜೀವಶೆಟ್ಟಿ ವಾಸ : ಅರುಣೋದಯ ನಿಲಯ, ಹೊಸಬೆಟ್ಟು

3. ಶುಕಾರಾಮ ಕಾಂಚನ್ (25), ತಂದೆ : ಬಾಬು ಶ್ರೀಯಾನ್ ವಾಸ : ಮಾಡಸ್ಟಲ್ ಐಸ್ ಪ್ಲಾಂಟ್ ಬಳಿ, ಕುಳ್ಳೆ

). ಪ್ರಮೋದ್ ಪುತ್ರನ್ (20), ತಂದೆ : ಶ್ರೀನಿವಾಸ ಕುಂದರ ವಾಸ : ಮೀನಾಕ್ಷಿ ನಿವಾಸ ಸ್ಟೆಟ್ ನಂಬರ್ 120 ಕುಳ್ಳೆ

). ತೇಜಸ್ವಿ ಪುತ್ರನ್ (20), ತಂದೆ : ನಾರಾಯಣ ಪುತ್ರನ್ ವಾಸ : ಚಿತ್ರಾಪುರ, ಕುಳ್ಳೆ

41. ಸುಧೀರ್ ಪುತ್ರನ್ (22), ತಂದೆ : ಓಂಡಾನ್ ವಾಸ : ಓಂಡಾಸ್ ನಿವಾಸ : ಮೀನಕಳಿಯ ಬೈಕಂಪಾಡಿ
42. ಧಾನಪಾಲ್ (22), ತಂದೆ : ಚಂದ್ರಹಾಸ ಕರ್ಕೇರ ವಾಸ : ಮಂಡಲ ಪಂಚೈತು ಬಳಿ ಮೀನಕಳಿಯ ಬೈಕಂಪಾಡಿ
43. ಪ್ರಶಾಂತ್ ಸಾಲ್ಯಾನ್ (20), ತಂದೆ : ಕೇಶವ ಸಾಲ್ಯಾನ್ ವಾಸ : ಮಾಸ್ಟರ್ ಐಸ್ ಪ್ಲಾಂಟ್ ಬಳಿ ಕುಳ್ಳೈ
44. ಮನೋಜ್ ಕುಮಾರ್ (20), ತಂದೆ : ಸುರೇಂದ್ರ ಕರ್ಕೇರ ಸೈಟ್ ನಂಬರ್ 62, ಕುಳ್ಳೈ ಕುಳ್ಳೈ ಗ್ರಾಮ
45. ವಿಜಯ (45), ತಂದೆ : ತ್ಯಾಂಪ ಕೋರ್ಯಾನ್ ವೇಳಾರು ಹೌಸ್, ಹೊಸಬೆಟ್ಟು ಗ್ರಾಮ
46. ಪ್ರದೀಣ ಸಾಲ್ಯಾನ್ (21), ತಂದೆ : ಅಚ್ಚುತ ಬಂಗೇರ ವಾಸ : ಐತನಿವಾಸ ಬೈಕಂಪಾಡಿ
47. ಸದಾಶಿವ ಪುತ್ರನ್ (50), ತಂದೆ : ವೆಂಕಟೇಶ್ ವಾಸ : ಹೊಸಬೆಟ್ಟು
48. ಅಶೋಕ್ ಬಿ. ಸಲ್ಯಾನ್ (28), ತಂದೆ : ಬೋಜ ಅಮೀನು ವಾಸ : ಮೀನಕಳಿಯ ಬೈಕಂಪಾಡಿ
49. ವಸಂತ ಸಾಲ್ಯಾನ್ (28), ತಂದೆ : ತಿಮ್ಮಪ್ಪ ಕರ್ಕೇರ ವಾಸ : ಮೀನಕಳಿಯ ಬೈಕಂಪಾಡಿ
50. ಶಶಿಕಾಂತ 30 ತಂದೆ, ಬೋಜ ಪುತ್ರನ್ ವಾಸ : ಪಂಚಮಹಲ್ ಪಡುಬಿದ್ರಿ ಕಾಡಿಪಟ್ನ
51. ಬೋಜ ಎಸ್. ಅಮೀನ್ 65, ತಂದೆ : ಸೋಮಯ್ಯ ಕೋಟ್ಯಾನ್ ವಾಸ : ಪೂವೆ ನಿವಾಸ ಹೆಜಮಾಡಿ ಕೋಡಿ, ಹಜಮಾಡಿ.
52. ಶೋಬೇಂದ್ರ ಪಸಿಯಐ (29), ತಂದೆ : ಸೋಮಯ್ಯ ಮೆಂಡನ್ ಪಾರ್ವತಿ ನಿವಾಸ ಸಸಿಹಿತ್ಲು ಮಂಗಳೂರು ತಾಲ್ಲೂಕು
53. ಸುಧಾಕರ ಕೋಟ್ಯಾನ್ (25), ತಂದೆ : ಲಕ್ಷ್ಮಣ ಸಾಲ್ಯಾನ್ ಮಿನಕಳಿಯ ಬೈಕಂಪಾಡಿ
54. ನಾಗೇಶ್ ಸಾಲ್ಯಾನ್ (20), ತಂದೆ : ರಾಮ ಸಾಲ್ಯಾನ್ ವಾಸ : ಇಡ್ಯಾ ದೇವಸ್ಥಾನದ ಬಳಿ ಸುರತ್ಕಲ್
55. ಚಂದ್ರಕಾಂತ 30, ತಂದೆ : ಕೆ.ಡಿ. ಶ್ರೀಯನ್ ವಾಸ : ಲೀಲಾಕೃಪಾ ಹೆಜ್ ಮಾಡಿ
56. ಸತೀಶ ಶ್ರೀಯಾನ್ (28), ತಂದೆ : ರಾಮಸಾಲ್ಯಾನ್ ವಾಸ : ಮಿನಕಳಿಯ ಬೈಕಂಪಾಡಿ
57. ಯಾದವ ಕಾಂಚನ್ (58), ತಂದೆ : ವಾಸಪ್ಪ ಅಮೀನ್ ವಾಸ : ಮೀನಕಳಿಯ ಪಣಂಬೂರು
58. ಸದಾನಂದ ಸುವರ್ಣ (42), ತಂದೆ : ದಿ : ಶೀನ ತಿಂಗಳಾಯ ವಾಸ : ಸುಂದರಿ ವಿಲ್ಲಾ ಹೆಜಮಾಡಿ ಕೋಡಿ, ಉಡುಪಿ ತಾಲ್ಲೂಕು
59. ಡಿ.ಎನ್. ಮೂಳೂರು, (40), ತಂದೆ : ದಿ : ಸೂರಪ್ಪ ಕರ್ಕೇರ ವಾಸ: ಸಮೃದ್ಧಿ ಅಂಚೆ ಮೂಳೂರು ಅಚ್ಚಿಲ ಉಡುಪಿ ತಾಲ್ಲೂಕು

60. ಸುಂದರ ಕರ್ಕೇರ (50), ತಂದೆ : ನಾರಾಯಣ ಮೆರಾಡನ್ ವಾಸ : ಭಜನಾ ಮಂಡಳಿ ಬಳಿ ಬೈಕಂಪಾಡಿ ಮಂಗಳೂರು.
61. ಚಂದ್ರಹಾಸ ಬಂಗೇರ (32), ತಂದೆ : ಕೃಷ್ಣಪ್ಪ ಸಾಲ್ಯಾನ್ ವಾಸ : ಕೇರಾಫ್ ಟಿ.ಎಂ. ಕರ್ಕೇರ ಹೌಸ್ ದೊಡ್ಡಕೊಪ್ಪಲ ಸುರತ್ಕಲ್
62. ಮಧು ಕುಂದರ್ (32), ತಂದೆ : ಸದಾಶಿವ ಸಾಲ್ಯಾನ್ ವಾಸ : ಲೈಟ್ ಹೈಸ್ ಬಳಿ ದೊಡ್ಡ ಕೊಪ್ಪಲ ಸುರತ್ಕಲ್
63. ಲಕ್ಷ್ಮೀಧರ ಗಿರಿ (40), ತಂದೆ : ಹೆಚ್.ಎನ್. ಶ್ರೀಯಾನ್ ವಾಸ : ಶ್ರೀಯಾನ್ ಬಿಲ್ಡಿಂಗ್, ಸುರತ್ಕಲ್
64. ಚಂದ್ರಹಾಸ ಬಾಲ್ಯಾನ್ (30), ತಂದೆ : ದೇವುಕಾಂಚನ್, ವಾಸ : ಸಾಲ್ಯಾನ್ ನಿವಾಸ ಗುಡ್ಡೆ ಕೊಪ್ಪಲ ಸುರತ್ಕಲ್
65. ಪುರುಷೋತ್ತಮ ಮೆರಾಡನ್ (29), ತಂದೆ : ರಾಮ ಕಾಂಚನ್ ವಾಸ : ಮೆಂಡನ್ ಹೌಸ್ ಗುಡ್ಡೇಕೊಪ್ಪಲ, ಸುರತ್ಕಲ್
66. ವಿಶ್ವನಾಥ, ಶ್ರೀಯಾನ್ (28), ತಂದೆ : ದೂಮಪ್ಪ ಕರ್ಕೇರ ವಾಸ : ಶ್ರೀಯಾನ್ ನಿವಾಸ, ಕುಳೈ ಮಂಗಳೂರು.
67. ಈಶ್ವರ ಸಾಲ್ಯಾನ್ (40), ತಂದೆ : ದೀರು ರುರಿಕಾರ ವಾಸ : ನಾನದ ಮನೆ ಹೊಸಬೆಟ್ಟು
68. ಸುಕುಮಾರ್ ಸಾಲ್ಯಾನ್ (35), ತಂದೆ : ಚೆನ್ನಪ್ಪ ಕರ್ಕೇರ ವಾಸ : ಅಣ್ಣುಂಗುರಿಕಾರ ಮನೆ ಪಡುಬಿದ್ರಿ ನಡಿಪಟ್ಟ, ಉಡುಪಿ ತಾಲ್ಲೂಕು
69. ಭಾಸ್ಕರ ಸಾಲ್ಯಾನ್ 32, ತಂದೆ : ರಾಮಕೃಷ್ಣ ಕಾಂಚನ್ ವಾಸ : ಅಬುಜಿ ಹೌಸ್ ಮೀನಕಳಿಯ ಬೈಕಂಪಾಡಿ
70. ಜಗನ್ನಾಥ ಸಾಲ್ಯಾನ್ (33), ತಂದೆ : ನಾರಾಯಣ ಕರ್ಕೇಟ ವಾಸ : ಜಾಕಿ ಹೌಸ್ ಮೀನಕಳಿಯ ಬೈಕಂಪಾಡಿ
71. ವಿಶ್ವನಾಥ ಬಂಗೇರ (33), ತಂದೆ : ನಾರಾಯಣ ಕರ್ಕೇರ ವಾಸ : ಜಾಕಿ ಹೌಸ್ ಕುಳೈ ಹೊಸಬೆಟ್ಟು
72. ರಮೇಶ ಎನ್. ಅಮೀನ್ (25), ತಂದೆ : ಶಿವರಾಮ ಎಂ. ಕರ್ಕೇರ ವಾಸ : ಶಿವರಾಮ ನಿವಾಸ ಮುಕ್ಕಾ, ಮಂಗಳೂರು.
73. ಮಾಧವ ಬಿ. ಪುತ್ರನ್ (61), ತಂದೆ : ರಾಮಪ್ಪ ವಾಸ : ಬೊಕ್ಕಪಟ್ಟ, ಮಂಗಳೂರು
74. ಸಂಜಯ ಕೋಟ್ಯಾನ್ (23), ತಂದೆ : ಸೀತಾರಾಮ ಕರ್ಕೇರ ವಾಸ : ಭಾರತೀ ನಿವಾಸ ಮೀನಕಳಿಯ, ಬೈಕಂಪಾಡಿ
75. ವಾಸುದೇವ ಸಾಲ್ಯಾನ್ (32), ತಂದೆ : ರಾಮ ಶ್ರೀಯಾನ್ ಕೂಳೂರು ಕುಳೈ.
76. ಮೋಹನ್ ಸಾಲ್ಯಾನ್ (30), ತಂದೆ : ರಾಮಕೃಷ್ಣ ಕಾಂಚನ್ ವಾಸ : ಅಬುಟಿ ಹೌಸ್ ಮೀನಕಳಿಯ ಬೈಕಂಪಾಡಿ
77. ರಾಮ ಕಾಂಚನ್ (40), ತಂದೆ : ಬಾಬು ಶ್ರೀಯಾನ್ ವಾಸ : ಕುಳೈ ಶಾಲೆಯ ಬಳಿ ಕುಳೈ
78. ಶರತ್ ಕುಮಾರ್ (37), ತಂದೆ : ರಾಮಕೋಟ್ಯಾನ್ ವಾಸ : ಗುಡ್ಡೆಕೊಪ್ಪಲ ಸುರತ್ಕಲ್

79. ಚಂದ್ರಹಾಸ ಸುವರ್ಣ (38), ತಂದೆ : ಸಂಜೀವ ಪುತ್ರನ್ ವಾಸ : ಸಾಮೆದ ಹೌಸ್ ಹೊಸಬೆಟ್ಟು
80. ಸೀತಾರಾಮ (32), ತಂದೆ : ಜನಾರ್ಧನ ಪುತ್ರನ್ ವಾಸ : ಕುಳೈ ಕೋಡಿಕಲ್ ರಾಮಭಜನಾ ಮಠಾದಿರದ ಬಳಿ, ಮೀನಕಳಿಯ.
81. ಪ್ರವೀಣ ಕುಮಾರ್ (30), ತಂದೆ : ದಿ : ಕೆ.ಟಿ. ಕೋಟ್ಯಾನ್ ವಾಸ : ತಿಮ್ಮ ಗುರಿಕಾರ ಮನೆ ಹೊಸಬೆಟ್ಟು ಗ್ರಾಮ.
82. ರಂಜೀತ್ ಸುವರ್ಣ (35), ತಂದೆ : ಸುಮಿತ್ರ ಸುವರ್ಣ ವಾಸ : ಹೊಸಬಕ್ಕಲು ಮನೆ ಹೊಸಬೆಟ್ಟು ಗ್ರಾಮ.
83. ತಿಮ್ಮಪ್ಪ ಶ್ರೀಯಾನ್ (42), ತಂದೆ : ನಾರಾಯಣ ಅಮೀನ್ ವಾಸ : ಚಿತ್ರಾಪುರ ದೇವಾಸ್ಥಾನದ ಬಳಿ ಕುಳೈ
84. ಜಯರಾಮ ಹುರಿಕಾರ (47), ತಂದೆ : ಗಿರಿಯಳಿ ಬಂಗೇರ, ಬೈಕಂಪಾಡಿ ಮೀನಕಳಿಯ
85. ಮೋಹನ ಬಂಗೇರ (23), ತಂದೆ : ಲಕ್ಷ್ಮಣ ಸುವರ್ಣ ವಾಸ : ಮುಕ್ತಾಯ ಮನೆ ಹೊಸಬೆಟ್ಟು
86. ದೇವ ಕರ್ಕೇರ (58), ತಂದೆ :ದಿ: ಅಪ್ಪಯ್ಯ ಶ್ರೀಯಾನ್ ವಾಸ : ಹೊಸಬೆಟ್ಟು ಶಾಲೆಯ ಬಳಿ ಹೊಸಬೆಟ್ಟು
87. ಸುರೇಶ ಶ್ರೀಯಾನ್ (21), ತಂದೆ : ಸುಂದರ ಶ್ರೀಯಾನ್ ವಾಸ : ಶ್ರೀಯಾನ್ ಸದನ ಸುರತ್ಕಲ್ ವಿದ್ಯಾದಾಯಿನಿ ಬಳಿ, ಸುರತ್ಕಲ್
88. ವಿಜಯ ಕೋಟ್ಯಾನ್ (49) ತಂದೆ : ದಾಮೋದರ ಕರ್ಕೇರ ವಾಸ : ಮೀನಕಳಿಯ ಬೈಕಂಬಾಡಿ
89. ಹರೀಶ್ ಕೋಟ್ಯಾನ್ (26), ತಂದೆ : ಲಕ್ಷ್ಮಣ ಕೋಟ್ಯಾನ್, ಹೊಸಬೆಟ್ಟು ಸ್ಥಾನ ಹೌಸ್ ಅಂಚೆ ಹೊಸಬೆಟ್ಟು
90. ಚೇತನ ಕುಮಾರ್ (18), ತಂದೆ : ದೇವದಾಸ್ ಸಾಲ್ಯಾನ್ ವಾಸ : ಹೊಸಬೆಟ್ಟು
91. ಕಿಶೋರ್ ಎನ್ (24), ತಂದೆ : ನಾಗೇಶ್ ಕರ್ಕೇರ ವಾಸ : ಮೀನಕಳಿಯ ಬೈಕಂಪಾಡಿ
92. ಪ್ರವೀಣ್ ಪುತ್ರನ್ (28), ತಂದೆ : ವಾಮನ್‌ಮಂತನ್, ವಾಸ : ಬಾಬು ಪೂಜಾರಿ ಮನೆ ಹೊಸಬೆಟ್ಟು
93. ಲಕ್ಷ್ಮಣ ಕುಂದರ್, (32), ತಂದೆ : ರಾಮ ಸಾಲ್ಯಾನ್ ವಾಸ : ಕುಂದರ್ ನಿವಾಸ್, ಹೊಸಬೆಟ್ಟು, ವ್ಯಾಯಾಮ ಶಾಲೆಯ ಬಳಿ
94. ಜಯಸಾಲ್ಯಾನ್ (58), ತಂದೆ : ಚಂದೂಬಂಗೇರ, ವಾಸ : ವ್ಯಾಯಾಮಶಾಲೆಯ ಬಳಿ ಮೀನಕಳಿಯ ಬೈಕಂಪಾಡಿ
95. ಭಾಸ್ಕರ್ ಸುವರ್ಣ (28), ತಂದೆ : ವಿಠಲ ಸಾಲ್ಯಾನ್ ವಾಸ : ರಾಮ ವ್ಯಾಯಾಮ ಶಾಲೆಯ ಬಳಿ, ಕುರಿಕಟೆ ಮೀನಕಳಿಯ
96. ಭಾಸ್ಕರ ಸಾಲ್ಯಾನ್ (28), ತಂದೆ : ನಾರಾಯಣ ಸಾಲ್ಯಾನ್, ವಾಸ : ನಾರಾಮ ಮನೆ ಭಾರತ್ ಐಸ್ ಪ್ಲಾಂಟ್ ಬಳಿ ಹೊಸಬೆಟ್ಟು

97. ಕುಮಾರ್ ಸಾಲ್ಯಾನ್ (29), ತಂದೆ : ನಾರಾಯಣ ಅಮೀನ್ ರಾಮ ವ್ಯಾಯಾಮ ಶಾಲೆ ಬಳಿ ಕುರಿಕಟ್ಟೆ ಮೀನಕಳಿಯ
98. ಮಧುಪಾಲ್ (26) ತಂದೆ : ಶ್ರೀನಿವಾಸ್ ಕೋಟ್ಯಾನ್ ವಿರಾನಕಳಿಯ ಬೈಕಂಪಾಡಿ
99. ಯಶೋಧ ಕರ್ಕೇರ (19), ತಂದೆ : ಸಂಜೀವ ಬರಗೇರ ವಾಸ : ಮೌಂಟ್ ಹೌಸ್ ಹೊಸಬೆಟ್ಟು
100. ಗೋಪಾಲ ಕರ್ಕೇರ (28), ತಂದೆ : ರಾಮಪ್ಪ ಕಾಂಚನ್ ವಾಸ : ವ್ಯಾಯಾಮ ಶಾಲೆ ಬಳಿ ಹೊಸಬೆಟ್ಟು
101. ಅಶೋಕ (30), ತಂದೆ : ವೆಂಕಪ್ಪ ಬಂಗೇರ ವಾಸ : ಕೆ.ಕೆ. ಮನೆ ಬಜನಾ ಮಂದಿರ ಹೊಸಬೆಟ್ಟು
102. ಯತೀಶ್ (24), ತಂದೆ : ವಾಮನ ಕಾಂಚನ್ ವಾಸ : ದೇವನಿವಾಸ ಮೀನಕಳಿಯ ಬೈಕಂಪಾಡಿ
103. ರೋಹಿತ್ (26), ತಂದೆ : ವೀರಪ್ಪ ಕುಂದರ್ ವಾಸ : ರಾಯ ನಿವಾಸ ಪಂಚಾಯತ್ ಕಛೇರಿ ಬಳಿ ಹೊಸಬೆಟ್ಟು
104. ಕೇಶವ ಸಾಲ್ಯಾನ್ (25), ತಂದೆ : ಬೋಜ ಅಮೀನ್ ವಾಸ : ನ್ಯೂ ಭಜನಾ ಮಂದಿರ ಮೀನಕಳಿಯ ಬೈಕಂಪಾಡಿ
105. ಸಂದೀಪ್ ಕುಮಾರ್ (15), ತಂದೆ : ನಾರಾಯಣ ಬಂಗೇರ ವಾಸ : ಶಾಲೆಯ ಬಳಿ ಸೀತಾ ನಿವಾಸ ಹೊಸಬೆಟ್ಟು
106. ಗಂಗಾಧರ ಸಾಲ್ಯಾನ್ 55, ತಂದೆ : ಐತುಪುತ್ರನ್ ವಾಸ : ಮೀನಕಳಿಯ ಬೈಕಂಪಾಡಿ
107. ಸುಖಪಾಲ (36), ತಂದೆ : ಶಿವಪುತ್ರನ್ ವಾಸ : ಹೊಸಬೆಟ್ಟು
108. ಶೇಖರ್ ಕರ್ಕೇರ್ (31), ತಂದೆ : ರಾಘು ಕುಂದರ್, ವಾಸ : ಮೂಡಬಿದರೆ
109. ಲೋಕನಾಥ್ ಕೋರ‍್ಯಾನ್ (35), ತಂದೆ : ನಾರಾಯಣಪುತ್ರನ್, ಹೊಸಬೆಟ್ಟು
110. ಕಿಶೋರ್ ಸಾಲ್ಯಾನ್, (32), ತಂದೆ : ಆನಂದ ಕಾಂಚನ್ ಕಲ್ಯಾಣ ನಿವಾಸ ಹೊಸಬೆಟ್ಟು
111. ಉಮೇಶ್ ಸಾಲ್ಯಾನ್ (45), ತಂದೆ : ರಾಜು ಶ್ರೀಯಾನ್ ಹೊಸಬೆಟ್ಟು
112. ಮಾಧವ (32), ತಂದೆ : ಕೂಸಪುತ್ರನ್ ವಾಸ : ಚಿತಾಪುರ ದೇವಸ್ಥಾನ ಕುಳೈಗ್ರಾಮ
113. ಸೋಮನಾಥ ಸುವರ್ಣ (28), ತಂದೆ : ಪೂವಪ್ಪ ಕಾಂಚನ್, ಮೀನಕಳಿಯ ಬೈಕಂಪಾಡಿ
114. ರಾಕೇಶ್ (20), ತಂದೆ : ರಾಮಸುವರ್ಣ ವಾಸ : ಮೀನಕಳಿಯ ಬೈಕಂಪಾಡಿ
115. ರಮೇಶ್ ಅಮೀನ್ (38), ತಂದೆ : ಸುಂದರ್ ಸಾಲ್ಯಾನ್ ಹೊಸಬೆಟ್ಟು
116. ರಮೇಶ್ ಕೆ.ಪಿ. (38) ತಂದೆ : ಕೃಷ್ಣಪ್ಪ ಕರ್ಕೇರ, ಗುರಿಕಾರಮನೆ ಹೊಸಬೆಟ್ಟು
117. ಕೇಶವಕುಂದರ್ (39), ತಂದೆ : ಸಂಜೀವ ಸಾಲ್ಯಾನ್, ಕುಂದರ್‌ನಿವಾಸ, ಗುಡ್ಡೆಕೊಪ್ಪಲ ಸೂರತ್ಕಲ್
118. ಕುಮಾರ್ ಸಾಲ್ಯಾನ್ (40) ತಂದೆ : ದೇವು ಕಾಂಚನ್, ಸಾಲ್ಯಾನ್ ನಿವಾಸ, ಗುಡ್ಡೆಕೊಪ್ಪಲ ಸೂರತ್ಕಲ್.

119.ಎಂ. ಶಂಕರಪುತ್ರನ್ (29), ತಂದೆ : ರಾಮಪುತ್ರನ್ ಕಜಾರಿ ಬೆಟ್ಟು ಹೌಸ
ಮೂಡಪಿಳ್ಳೆ, ಉಡುಪಿ

120.ಕೇಶವ ಸುವರ್ಣ (28), ತಂದೆ : ಎನ್.ವಿ. ಕಾಂಚನ್ ಕೊರಳಗುಡ್ಡ, ಹಜ
ಮಾಡಿ

121.ಕೃಷ್ಣ ಕಾಂಚನ್ (28), ತಂದೆ : ಚುಂಜ ಗುರಿಕಾರ್ ದಿವ್ಯದೀಪ ನಿವಾ
ವಡ್ಡಾಯಿ ಕೂಳ್ಳೆ

122.ಅಚ್ಯುತ ಬಂಗೇರ (52), ತಂದೆ : ಐತಾ ಸಾಲ್ಯಾನ್ ವಾಸ : ಮೀನಕಳಿಯ
ಬೈಕಂಪಾಡಿ

123. ಗಣೇಶ್ ಹೊಸಬೆಟ್ಟು (39), ತಂದೆ : ಶಿವಪುತ್ರನ್ ಶಿವಕಲ್ಯಾಣಿ ಹೊಸಬೆಟ್ಟು

124.ನಾರಾಯಣ ಸಿ. ಕರ್ಕರ (37), ತಂದೆ : ಚಂದೂ ಬಂಗೇರ ಕಾಳಿಪಟ್ಣಾ,
ಮೂಡಬಿದರೆ

125.ಕುಲಶೇಖರ ಪುತ್ರನ್ (42), ತಂದೆ : ಡೂಮ ಅಮೀನ್ ದೂಮಾವ
ದೇವಸ್ಥಾನ ವಗೆ ಬಜೇರ, ಮಂಗಳೂರು.

126.ಕೇಶ ಗುರಿಕಾರ (42), ತಂದೆ : ಕೂಡ ಕರ್ಕೇರ ತಂಣೇರ ಬಾವಿ ಮಂಗಳೂರು

127.ಹೆಚ್.ಪಿ. ಪುತ್ರನ್ (62), ತಂದೆ : ಪುದ್ದು ವಾಸ : ಮಹಾಲಕ್ಷ್ಮೀ ಉಚ್ಚಿಲ

128.ವಾಸದೇವ ಬೋಳೂರು (60), ತಂದೆ :ಅಚ್ಚಪ್ಪ ಅಂಚನ್‌ಬೋಳೂರು ಮಂಗಳೂರು

129.ಶೇಖರ್ ಅಮೀನ್ (42), ತಂದೆ : ಶುಕ್ರ ಪೂಜಾರಿ ಜೋಕಟ್ಟೆ ಮಂಗಳೂರು

130.ಸದಾನಂದ ಸಾಲ್ಯಾನ್ (55), ತಂದೆ : ಮನಸ್ಸು ಪೂಜಾರ್ ಹೊಸಬೆಟ್ಟು

131.ಪ್ರದೀಪ್ ಪುತ್ರನ್ (22), ತಂದೆ : ದೇವೇಂದ್ರ ಸುವರ್ಣ ಬೈಕಂಪಾಡಿ
ಮಂಗಳೂರು

132.ಆರ್.ಕೆ. ಪುರುಷೋತ್ತಮ, (29), ತಂದೆ : ಆರ್.ಕೆ. ಕರ್ಕೇರ ಮೀನನಕಳಿಯ
ಬೈಕಂಪಾಡಿ

133.ಬಿ.ಆರ್. ಕರ್ಕೇರ (40), ತಂದೆ : ರುಕಿಯಾ ಸಾಲ್ಯಾನ್ ಮೀನಕಳಿಯ
ಬೈಕಂಪಾಡಿ

134.ಬಾಲಕೃಷ್ಣ ಸಾಲ್ಯಾನ್ (32), ತಂದೆ : ತುಂಬೂರ್ ಪುತ್ರನ್, ಹೊಸಬೆಟ್ಟು

135.ಅಶೋಕ್ ಅಮೀನ್ (24), ತಂದೆ : ಕೊರಗ ಕರಗೇರ ಬೈಕಂಪಾಡಿ

136.ಕೇಶವ ಪುತ್ರನ್ (30), ತಂದೆ : ಬಾಬು ಮೋಹನ್ ವ್ಯಾಯಾಮ ಶಾಲೆ
ಬೈಕಂಪಾಡಿ

137.ದೇವದಾಸಿ ಶ್ರೀಯಾನ್ (36), ತಂದೆ : ರಾಮಕಾಂಚನ ಹೊಸಬೆಟ್ಟು

138.ಪಿ.ವಿ. ಸಾಲ್ಯಾನ್ (28), ತಂದೆ : ವೆಂಕಟೇಶ್ ಮಂಡನ್ ಬೈಕಂಪಾಡಿ

139.ಯಾದವ ಕಾಂಚನ್ (25), ತಂದೆ : ವಿಠಲ ಸಾಲ್ಯಾನ್ ಬೈಕಂಪಾಡಿ

140.ನಾಗಪ್ಪ ಶ್ರೀಯಾನ್ (40), ತಂದೆ : ದೂವಮಪ್ಪ ಕರ್ಕೇರ, ಮಂಗಳೂರು

141.ಲತೀಶ್ ಪುತ್ರನ್ (26), ತಂದೆ : ಲಕ್ಷ್ಮಣಪುತ್ರನ್ ಮೀನಕಳಿಯ, ಬೈಕಂಪಾಡಿ

142.ಆನಂದ ಮೆಂಡಾನ್ (50) ತಂದೆ : ಬಾಬು ಕರ್ಕೇರ, ವಾಸ : ಕುಳ್ಳೈ,
ಕುಳ್ಳೈ ಅಂಚೆ

143. ಗೋಪಾಲ ಪುತ್ರನ್ (27), ತಂದೆ : ರಾಮಪ್ಪ ಕಾಂಚನ್, ವಾಸ : ಹೊಸಬೆಟ್ಟು ಕುಳ್ಳೈ

144. ನಾಗೇಶ (35), ತಂದೆ : ನಾರಾಯಣ ಪುತ್ರನ್, ವಾಸ : ಗಿರಿಜಾ ನಿವಾಸ, ಹೊರಬೆಟ್ಟು

145. ಮೋಹನಚಂದ್ರ (25), ತಂದೆ : ಗಂಗಯ್ಯ ಕುಂದರ್, ವಾಸ : ಸೇಶಪ್ಪ ಶ್ರೀಯಾನ್‌ರವರ ಮನೆ ಹೊಸಬೆಟ್ಟು, ಮಂಗಳೂರು

146. ಅಶೋಕ (30) ತಂದೆ : ಮುಜಿಕ್ರ ಸುವರ್ಣ, ವಾಸ : ಕಾಡಿಪಟ್ಟ, ಪಡುಬಿದ್ರಿ

147. ದಾಮೋಧರ ಪಾಂಗಳ, (50) ತಂದೆ : ಬಾಬು ಮೆಂಡನ್, ಮೀನಕಳಿಯ, ಬೈಕಂಪಾಡಿ, ಪಣಂಬೂರು

148. ಯೋಗೀಶ, (33), ತಂದೆ : ವಾಮನ ವಾಸ : ರೇವತಿ ನಿವಾಸ, ತಡಂಬೈಲು, ಸುರತ್ಕಲ್

149. ಹರೀಶ (26), ತಂದೆ : ಎಸ್.ಜಿ. ಕರ್ಕೇರ, ವಾಸ : ಮೀನಕಳಿಯ, ಬೈಕಂಪಾಡಿ

150. ಪ್ರವೀಣ ಕುಮಾರ್ (31), ತಂದೆ : ಪಿ.ಟಿ. ಸುವರ್ಣ, ವಾಸ ಕುಳ: ತೋಟ, ಕುಳ್ಳೈ ಗ್ರಾಮ

151. ಗಂಗಾಧರ (33), ತಂದೆ : ಮಾಧವ ಪುತ್ರನ್ ವಾಸ : ಹೊಸಬೆಟ್ಟು, ಮಂಗಳೂರು

152. ಹರೀಶ್ (27), ತಂದೆ : ನಾರಾಯಣ ಸಾಲ್ಯಾನ್, ವಾಸ : ಕುಳ್ಳೈ, ಕುಳ್ಳೈ ಅಂಚೆ

153. ಸುನೀಲ್ (18), ತಂದೆ : ಶ್ರೀಧರ, ಕುಳ್ಳೈ ಅಂಚೆ, ಕುಳ್ಳೈ ಗ್ರಾಮ, ಮಂಗಳೂರು

154. ವಿಠಲ (26), ತಂದೆ : ನಾರಾಯಣ ವಾಸ : ಕುಳ್ಳೈ ಹೊಸಬೆಟ್ಟು

155. ಮಾಧವ ಅಮೀನ್ (50), ತಂದೆ : ಚನ್ನಯ್ಯ ಪುತ್ರನ್, ವಾಸ : ಗುರುಕೃಪಾ, ಹೊಸಬೆಟ್ಟು

156. ಸುರೇಶ ಪುತ್ರನ್ (20), ತಂದೆ : ಲಕ್ಷ್ಮಣ ಅಮೀನ್, ವಾಸ : ಪುತ್ರನ್ ನಿವಾಸ, ಕುಳ್ಳೈ

157. ವಸಂತ ಕೋಡಿಕಲ್ (40), ತಂದೆ : ನಾರಾಯಣ ಸಾಲ್ಯಾನ್, ವಾಸ : ಮೀನಕಳಿಯ, ಪಣಂಬೂರು

158. ಸದಾಶಿವ ಪುತ್ರನ್ (50), ತಂದೆ : ವೆಂಕಟ ತಂಡೇಲ, ವಾಸ : ಹೊಸಬೆಟ್ಟು ಕುಳ್ಳೈ

159. ರವಿ ಕುಮಾರ್ (28), ತಂದೆ : ಪೂವಪ್ಪ ಸುವರ್ಣ,ಹೆಜಮಾಡಿ ಅಂಚೆ, ಉಡುಪಿ ತಾಲ್ಲೂಕು

160. ಹೇಮಾನಂದ, (29), ತಂದೆ : ಕೆ.ಕೆ. ಪುತ್ರನ್, ಹೆಜಮಾಡಿ, ಉಡುಪಿ ತಾಲ್ಲೂಕು

161. ಶ್ರೀನಿವಾಸ ಸಾಲ್ಯಾನ್ (45) ತಂದೆ : ತನಿಯಪ್ಪ ಪುತ್ರನ್, ವಾಸ : ಹೊಸಬೆಟ್ಟು

162. ಸುಂದರ ಬಂಗೇರ, (40) ತಂದೆ : ವಾಸು ಶ್ರೀಯಾನ್, ವಾಸ : ಸೈಟ್ ನಂಬ್ರ 80 ಬಂಗೇರ ನಿವಾಸ, ಕುಳ್ಳೈ

163.ರಮೇಶ (30) ತಂದೆ : ನಾರಾಯಣ ವಾಸ : ಚಿತ್ರಾಪುರ ದೇವಸ್ಥಾನ ಬಳಿ, ಕುಳೈ

164.ಕುಮಾರ ಸಾಲ್ಯಾನ್ (28) ತಂದೆ : ಪುರುಷೋತ್ತಮ ಸಾಲ್ಯಾನ್, ವಾಸ : ಮೀನಕಳಿಯ ಬೈಕಂಪಾಡಿ

165.ಚಿತ್ರೇಶ್ ಬಿ. ಕುಂದರ್ (19) ತಂದೆ : ಪುರುಷೋತ್ತಮ ಕೆ. ಕುಂದರ್, ವಾಸ : ಇಡ್ಯಾ ಹತ್ತಿರ, ಸುರತ್ಕಲ್

166.ಯಶೋಧರ ಸುವರ್ಣ (25) ತಂದೆ : ಕೃಷ್ಣಪ್ಪ ಕಾಂಚನ್, ಬೈಕಂಪಾಡಿ ಮೀನಕಳಿಯ

167.ರಘುವೀರ (35) ತಂದೆ : ಲಿಂಗಪ್ಪ ಕರ್ಕೇರ, ವಾಸ : ಮೀನಕಳಿಯ, ಸೀಮ ನಿವಾಸ ಬೈಕಂಪಾಡಿ

168.ನಾಗೇಶ ಕೋಟ್ಯಾನ್ (30) ತಂದೆ : ವೆಂಕಟಪ್ಪ, ಕರ್ಕೇರ, ವಾಸ : ಗೀತಾಂಜಲಿ, ಹೊಸಬೆಟ್ಟು ಶಾಲೆಯ ಬಳಿ, ಹೊಸಬೆಟ್ಟು

169.ಅಚ್ಚುತ ಕುಂದರ್ (45), ತಂದೆ : ಗೋವಿಂದ ಪುತ್ರನ್, ವಾಸ : ಪಡುಬಿದ್ರೆ ಅಂಚೆ, ಪಡುಬಿದ್ರೆ

170.ಶಿವಾಜಿ ಪುತ್ರನ್ (32), ತಂದೆ :ರುಕ್ಮಯ್ಯ ಕಾಂಚನ್, ವಾಸ : ಕಾಂಚನ ನಿವಾಸ ಹೊಸಬೆಟ್ಟು, ಮಂಗಳೂರು ತಾಲ್ಲೂಕು

171.ಸಂತೋಷ ಕುಮಾರ್ (18), ತಂದೆ : ಲಕ್ಷ್ಮ ಕೋಟ್ಯಾನ್, ವಾಸ : ಸಾನದ ಮನೆ, ಹೊಸಬೆಟ್ಟು, ಮಂಗಳೂರು

172.ದಿವಾಕರ ಪುತ್ರನ್ (54) ತಂದೆ : ಕಾಡ್ಯ ಅಮೀನ್, ವಾಸ : ಪೋಲಿಪ್ಪು, ಕಾಪು ಉಡುಪಿ ತಾಲ್ಲೂಕು.

173.ಯೋಗೇಶ ಕರ್ಕೇರ (42) ತಂದೆ : ಅಣ್ಣಪ್ಪ ಶ್ರೀಯಾನ್, ವಾಸ : ಪಾದೆ ಹೌಸ್, ಹೊಸಬೆಟ್ಟು, ಮಂಗಳೂರು

174.ವಾಮನ್ ಸಾಲ್ಯಾನ್ (52), ತಂದೆ : ಕೊರಗ ಕುಂದರ್, ವಾಸ : ಮೀನಕಳಿಯ, ಬೈಕಂಪಾಡಿ

175.ಸತೀಶ ಕುಮಾರ್ (36) ತಂದೆ : ಹರಿಯಪ್ಪ ಪುತ್ರನ್, ವಾಸ : ಲಕ್ಷ್ಮಿ ನಿವಾಸ, ಕುಳೈ

176.ಕೇಶವ ಮೆಂಡನ್ (34) ತಂದೆ : ಪರದೇಶಿ ಸುವರ್ಣ, ಮೀನಕಳಿಯ, ಬೈಕಂಪಾಡಿ

177.ಸೀತಾರಾಮ ಎಸ್ (25) ತಂದೆ : ನಾರಾಯಣ ಸಾಲ್ಯಾನ್, ಮೀನಕಳಿಯ ಬೈಕಂಪಾಡಿ

178.ರಾಮಚಂದ್ರ ವಾಂಗ (27) ತಂದೆ : ದಾಮೋದರ ವಾಂಗ, ಮೀನಕಳಿಯ ಬೈಕಂಪಾಡಿ

179.ಸಂಜಯ ಕೋಟ್ಯಾನ್ (25) ತಂದೆ : ಸಂಜೀವ ಅಮೀನ್, ವಾಸ : ಇಡಯಾ, ಸುರತ್ಕಲ್

180.ಕೇಶವ ಶ್ರೀಯಾನ್ (37), ತಂದೆ : ಬೋಜ ಸಾಲ್ಯಾನ್ ವಾಸ : ಇಡ್ಯಾ ಸುರತ್ಕಲ್

181.ಮುರಳೀಧರ ಜಿ. ಕೋಟ್ಯಾನ್ (35) ತಂದೆ : ಗುರುವಪ್ಪ ಕೋಟ್ಯಾನ್, ಗುಡ್ಡೆಕೊಪ್ಪಲ

182.ಸುಧೀರ ಕೋಟ್ಯಾನ್ (25) ತಂದೆ : ಶಂಕರ ಬಂಗೇರ, ವಾಸ : ಗುಡ್ಡೆಗೊಪ್ಪಲ ಸುರತ್ಕಲ್

183.ವಾಸು ಎನ್. ಕರ್ಕೇರ (49), ತಂದೆ : ಲಕ್ಷ್ಮಣ ಸಾಲ್ಯಾನ್ ಬೈಕಂಪಾಡಿ, ಮಂಗಳೂರು

184.ಭರತ್ (40) ತಂದೆ : ಕೆ. ಗುರಿಕಾರ, ವಾಸ : ಕುಳೈ ಮಂಗಳೂರು ತಾಲ್ಲೂಕು

185.ವಾಮದಾಸ ಅಂಚನ್ (30), ಸೀತಾರಾಮ ಸುವರ್ಣ , ಬೈಕಂಪಾಡಿ, ಮಂಗಳೂರು

186.ಜಯಕರ ಅಮೀನ್ (30), ತಂದೆ : ಗೋಪಾಲ ಸಸಿಹಿತ್ಲು, ಮಂಗಳೂರು

187.ನಾಗೇಶ (36) ತಂದೆ : ರಾಮಕುಂದರ್, ವಾಸ : ಹೊಸಬೆಟ್ಟು, ಮಂಗಳೂರು

188.ಸುರೇಶ ಕುಮಾರ್ (31), ತಂದೆ : ಶ್ರೀನ ಅಮೀನ್ ವಾಸ : ಹೊಸಬೆಟ್ಟು ಮಂಗಳೂರು

189.ಶ್ರೀಮತಿ ಬಿ. ಸೀತಮ್ಮ (61) ಗಂಡ : ಗೋಪಾಲಕೃಷ್ಣ ಬೋಳೂರು, ಮಂಗಳೂರು

190.ಶ್ರೀಮತಿ ಜೋಗಮ್ಮ (50), ಗಂಡ : ಡಿ. ಸೋಮಶೇಖರ, ಬೋಳೂರು, ಮಂಗಳೂರು

191.ಶ್ರೀಮತಿ ಧನವತಿ (45), ಗಂಡ : ಶಂಕರ, ವಾಸ : ಹೊಸಬೆಟ್ಟು, ಮಂಗಳೂರು ತಾಲ್ಲೂಕು

192.ಶ್ರೀಮತಿ ಶಕುಂತಲಾ, (35) ಗಂಡ : ಪುಂಡಳೀಕ ಹೊಸಬೆಟ್ಟು

193.ಕು: ವೇದಾವತಿ (24), ತಂದೆ : ವೆಂಕಟಪ್ಪ ಕರ್ಕೇರ, ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

194.ಶ್ರೀಮತಿ ಮೋಹಿನಿ, (45), ಗಂಡ : ರಾಮ ವಿ. ಕೋಟ್ಯಾನ್, ಹೊಸಬೆಟ್ಟು

195.ಶ್ರೀಮತಿ ತುಳಸಿ, (45), ಗಂಡ : ಲಾಗು ಕರ್ಕೇರ, ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

196.ಶ್ರೀಮತಿ ಸೀತಮ್ಮ (45), ಗಂಡ : ನಾರಾಯಣ ಕುಳೈ, ವಾಸ : ಕುಳೈ

197.ಶ್ರೀಮತಿ ಗಂಗಾ (60), ಗಂಡ : ರಾಮಪ್ಪ ವಾಸ : ಸಸಿಹಿತ್ಲು, ಗ್ರಾಮ ಸಸಿಹಿತ್ಲು

198.ಶ್ರೀಮತಿ ಆನಂದಿ (35), ಗಂಡ : ಶೇಖರ ಕರ್ಕೇರ, ಹೊಸಬೆಟ್ಟು, ಗ್ರಾಮ ಹೊಸಬೆಟ್ಟು

199.ಶ್ರೀಮತಿ ಮೋಹಿನಿ (35) ಗಂಡ : ಗೋಪಾಲ ಕರ್ಕೇರ, ವಾಸ : ಹೊಸಬೆಟ್ಟು

200.ಶ್ರೀಮತಿ ರುಕ್ಮಿಣಿ (35), ಗಂಡ : ಗಂಗಯ್ಯ ವಾಸ : ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

201.ಶ್ರೀಮತಿ ಕಮಲ, (40), ಗಂಡ ಸೇಸಪ್ಪ, ವಾಸ : ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

202 ಶ್ರೀಮತಿ ಶಾಂಬರಿ (38), ಗಂಡ : ಆನಂದ, ವಾಸ್ತ : ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

203 ಶ್ರೀಮತಿ ಕೃಷ್ಣಮ್ಮ (50), ಗಂಡ : ವೆಂಕಪ್ಪ ಕುಂದರ್, ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

204 ಶ್ರೀಮತಿ ಕಲ್ಯಾಣಿ (40) ಗಂಡ : ವೆಂಕಟೇಶ್ ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

205 ಶ್ರೀಮತಿ ಸುಮತಿ (45) ಗಂಡ : ನಾರಾಯಣ ಪುತ್ರನ್, ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

206 ಶ್ರೀಮತಿ ಮೀನಾಕ್ಷಿ (25), ಗಂಡ : ನಾರಾಯಣ ಪುತ್ರನ್, ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

207 ಶ್ರೀಮತಿ ಲಕ್ಷ್ಮಿ (50), ಗಂಡ : ನಾರಾಯಣ, ವಾಸ : ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

208 ಶ್ರೀಮತಿ ಲೀಲಾ (35), ಗಂಡ : ಗೋಪಾಲ ಸಿ. ಕುಳ್ಳೈ, ಕುಳ್ಳೈ ಗ್ರಾಮ

209 ಶ್ರೀಮತಿ ದಯಾವತಿ (55) ಗಂಡ : ಸಂಜೀವ ಸಾಲ್ಯಾನ್, ವಾಸ : ಹೊಸಬೆಟ್ಟು

210 ಶ್ರೀಮತಿ ಧನವಂತಿ (24), ಗಂಡ : ಪ್ರವೀಣ, ಹೊಸಬೆಟ್ಟು, ಹೊಸಬೆಟ್ಟುಗ್ರಾಮ

211. ಶ್ರೀಮತಿ ಸಾವಿತ್ರಿ, (45), ಗಂಡ : ಜೆ.ವಿ. ಪುತ್ರನ್, ಹೊಸಬೆಟ್ಟು

212 ಶ್ರೀಮತಿ ಯಮುನ (35) ಗಂಡ ದತ್ತಾಮಿ ವಾಸ : ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

213 ಶ್ರೀಮತಿ ಲಕ್ಷ್ಮಿ (50), ಗಂಡ : ಚೆನ್ನಪ್ಪ ಪುತ್ರನ್, ವಾಸ : ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

214 ಶ್ರೀಮತಿ ರತಿ (40), ಗಂಡ ತ್ಯಾಂಪ ಕೋಟ್ಯಾನ್, ವಾಸ : ಹೊಸಬೆಟ್ಟು

215 ಶ್ರೀಮತಿ ವೇದಾವತಿ (42) ಗಂಡ:ಲೀಲಾಧರ ಪುತ್ರನ್ ಬೈಕಂಪಾಡಿ, ಪಣಂಬೂರು

216 ಶ್ರೀಮತಿ ಜಲಜಾ (45) ಗಂಡ:ನಾಗಪ್ಪ ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

217 ಶ್ರೀಮತಿ ರೋಹಿಣಿ (45) ಗಂಡ:ಶೇಖರ, ಹೊಸಬೆಟ್ಟು, ಹೊಸಬೆಟ್ಟು ಗ್ರಾಮ

ಅಬಕಾರಿ ಗುತ್ತಿಗೆದಾರರಿಂದ ಸಂದಾಯವಾಗಿರುವ ಹಣ

95 - ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿ ಶಹರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ? .

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಜನ ಗುತ್ತಿಗೆದಾರರು ಇದ್ದಾರೆ?

ಆ) 1994-95ನೇ ಸಾಲಿಗೆ ಸರ್ಕಾರಕ್ಕೆ ಗುತ್ತಿಗೆದಾರರಿಂದ ಸಂದಾಯವಾದ ಹಣ ಎಷ್ಟು ಹಾಗೂ ಬಾಕಿ ಇರುವ ಗುತ್ತಿಗೆದಾರರ ವಿವರ ನೀಡಲಾಗುವುದೇ?

ಇ) ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯ ಸುತ್ತಮುತ್ತ ಯಾವುದಾದರೂ ಡಿಸ್ಟಿಲರಿ ಹೊಸದಾಗಿ ಪ್ರಾರಂಭಿಸಲು ಅರ್ಜಿ ಬಂದಿರುವುದೇ?

ಈ) ಇಲ್ಲವೇ ಸರ್ಕಾರವೇ ಸ್ಥಾಪಿಸುವ ವಿಚಾರ ಹೊಂದಿದೆಯೇ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಹದಿಮೂರು (13) ಅಬಕಾರಿ ಗುತ್ತಿಗೆದಾರರು

ಆ) ರಾಜ್ಯದಲ್ಲಿ 1994-95ನೇ ಸಾಲಿನಲ್ಲಿ ರೂ. 472 ಕೋಟಿ ರೂಪಾಯಿಗಳು ಬಾಡಿಗೆ ಬಾಬ್ತು ಸರ್ಕಾರಕ್ಕೆ ಸಂದಾಯವಾಗಿರುತ್ತದೆ. ಸದರಿ ಸಾಲಿನಲ್ಲಿ ಗುತ್ತಿಗೆದಾರರಿಂದ ಬಾಕಿ ಇರುವುದಿಲ್ಲ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 1994-95ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಹಣ

96 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 1992ರಿಂದ ಎಷ್ಟು ಹಣ ಸಂದಾಯವಾಗಿದೆ. ಹೆಚ್ಚಿಗೆ ಮೊತ್ತ ನೀಡಿದ ಸಂಸ್ಥೆ ಅಥವಾ ವ್ಯಕ್ತಿಯ ಹೆಸರುಗಳನ್ನು ಸರ್ಕಾರದವರು ಒದಗಿಸುವರೇ?

ಆ) 1994-95ನೇ ಸಾಲಿನಲ್ಲಿ ಪರಿಹಾರ ನಿಧಿಯಿಂದ ರಾಜ್ಯದಲ್ಲಿನ ಎಷ್ಟು ಜನರಿಗೆ ಹಣ ಬಿಡುಗಡೆಯಾಗಿದೆ ಅದರಲ್ಲೂ ಧಾರವಾಡ ಜಿಲ್ಲೆಯ ಎಷ್ಟು ನಾಗರೀಕರಿಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಜನವರಿ 1992ರಿಂದ 31-12-95 ರವರೆಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಂದಾಯವಾದ ಹಣ ರೂ. 5,34,03,806.94 ಒಂದು ಲಕ್ಷಕ್ಕಿಂತ ಹೆಚ್ಚು ಹಣ ನೀಡಿದವರ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) 1994-95ನೇ ಸಾಲ್ಲಿನಲ್ಲಿ (1-4-94 ರಿಂದ 31-3-95ರವರೆಗೆ) ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 3,241 ಜನರಿಗೆ ಒಟ್ಟು ರೂ. 1,76,70,550-00 ಗಳನ್ನು ಬಿಡುಗಡೆ ಮಾಡಲಾಗಿದೆ.

ಧಾರವಾಡ ಜಿಲ್ಲೆಗೆ 1994-95ನೇ ಸಾಲಿನಲ್ಲಿ 96 ಜನರಿಗೆ ಒಟ್ಟು ರೂ. 6,70,500-00 ಗಳನ್ನು ಬಿಡುಗಡೆ ಮಾಡಲಾಗಿದೆ.

Details of Donations Received from public towards CM relief fund from 01/01/1992

Date : 19/02/1996 Page : 1

Name and Address	Amount	Date
MD., Kar. Telecom Ltd., Bangalore	500000.00	22/01/1992
MD., Vikrant Tyres Ltd., Mysore	500000.00	22/01/1992
M.D., K.S.F.C., Bangalore Bangalore	2500000.00	07/04/1992

MP Gandigud, MD, KSIMC Ltd., Bangalore	100000.00	07/04/1992
Sr vijay, C & MD., KSII & DC. Ltd Bangalore	1300000.00	24/04/1992
Chairman, MSIL., Bangalore Bangalore	400000.00	24/04/1992
Chairman, MSIL., Bangalore Bangalore	500000.00	24/04/1992
T. Ramesh Pai CMD, Industrial Credit & Dev Syndicate Ltd. Manipal D.Kannada	100000.00	02/12/1992
SPM Parbhata Managing Partner, Vajreshwari Movies, Combines, Bangalore	100000.00	02/12/1992
Kar. Telecom., Bangalore Bangalore	200000.00	04/12/1992
JV Shetty CMD., Canara Bank, Head Office Bangalore	500000.00	07/12/1992
Dr. B.G. Javali, MP President, HKE Socy., Gulbarga	500000.00	17/12/1992
Hiranyakeshi Sahakari Sakkare Karkhane Niyamit, Sankeshwar Belgaum	200001.00	17/12/1992
Jindal Sr, CMD Jindal Aluminium Ltd., Tumkur Rd., Bangalore	200000.00	22/12/1992
MD., Mysore Breweries Ltd. Jalahalli, Bangalore	100000.00	23/12/1992
General Manager, S.B.I. No. 48, Local Head Office Church Street, Bangalore	1000000.00	30/12/1992
M. Gopalakrishnan CMD., Indian Bank, Madras, Tamilnadu	200000.00	8/01/1993

Trusteee, J. Veerasimhasan Mutt Mysore	100000.00	13/01/1993
Methodist church In India H.No. 27, I Main, Cambridge Layout, Ulsoor, Bangalore	100000.00	13/01/1993
Gurupadappa Nagamara Palli Chairman, Apex Bank Ltd. Bangalore, Bangalore	500000.00	09/03/1993
Mysore Minerals Ltd. JC Road, Bangalore	200000.00	13/04/1993
Chairman B'lore Turf Club Bangalore	700000.00	08/06/1993
G.K. Sangameshwar, MD MSIL Bangalore, Bangalore	500000.00	30/06/1993
CMD, Vikrant Tyres Mysore Mysore	200000.00	09/07/1993
Md Mysore Lamp works Bangalore Bangalore	200000.00	09/07/1993
MD KPC Ltd Bangalore Bangalore	500000.00	13/07/1993
Dir, Siemen's Ltd. Medical Divn 130, Panduranga Budhkar Marg Worli, Bombay, Maharashtra	500000.00	16/08/1993
Venkatesh, Pres. K.S. Constn. Corp Ltd., I Block, Rajajinagar Bangalore	250000.00	27/08/1993
Managing Director, Mysore Sales International Ltd., Bangalore	500000.00	22/09/1993
Services Assn. of Seventh Day Adventists (P) Ltd. Bangalore	100000.00	27/10/1993
CMD, KSIIDC Ltd., 36, Cunningham Raod Bangalore	2500000.00	08/11/1993
Gajanana Grainage, Kollegal Kollegal TQ.Mysore	100000.00	01/12/1993

President, Vokkaligara Sangha Bangalore	200000.00	13/12/1993
Adjusted from DM drought & 4Natural Calamity Relief Fund Bangalore	500000.00	17/01/199
Adjusted from Draught & Nat. Cal Fund, (From CM's draught & Nat. Fund) Bangalore	5000000.00	11/02/1994
President, Hutti Gold Mines Co. Ltd., 1/5, Ulsoor Road, Bangalore	500000.00	21/04/1994
Adjusted From Draught & Nat Cal. Fund (Adjustment from D & N C.R.F) Bangalore	500000.00	03/05/1994
Adjusted From Draught & Nat. Cal. Fund, (Adjustment from D & N C.R.F) Bangalore	5000000.00	18/05/1994
R. Dayananda Rao, MLA & Chairman Mysore Minerals Ltd. Bangalore		
S. Murali, Sr. Manager, ABB	228470.00	08/06/1994
Adjusted from Draught & Nat. Cal. Fund, Vidhana Soudha, Bangalore Bangalore	5000000.00	09/08/1994
N.V. Ramachandra Chetty, IFS Vice-Chairman & MD, Kar. Forest Dev, Corpn. Bangalore	500000.00	26/08/1994
Mallikarjuna, MLA Raichur	389000.00	03/09/1994
D. Halage Gowda, Chairman Kar. Co-op. Apex Bank Ltd. Bangalore	500000.00	05/10/1994
S.K. Birla, Chairman Mysore Cements Ltd., 45 Race Cource Road, Bangalore	500000.00	10/10/1994

MD., KSF Bangalore	500000.00	09/12/1994
CMD., Mysore Paper Mills Ltd. Bangalore	200101.00	02/01/1995
MD., Mysore Sugar Co. Ltd JC Road, Bangalore	500000.00	02/01/1995
MD., Karnataka Handloom Dev. Corpn. Ltd., 5th Main Jayamahal, Bangalore	500000.00	02/01/1995
MD., Sri Chamundeshwari Sugars No. 76, Ulsoor Road, Bangalore.	500000.00	02/01/1995
Chairman, Sri Lakshmeshwara Raithara Sahakari Noolinga Girani Niyamita, Dharwad	100008.00	23/01/1995
Md., Kar. Food & Civil Supplies Corpn. Bangalore.	207800.00	22/02/1995
MD., Hutti Gold Mines No. 1/5, Ulsoor Road, Bangalore.	1000000.00	27/03/1995
Hiranyakeshi Sahakara Sakkare Karkahane, Sankeshwar, Belgaum	500000.00	12/05/1995
Raibagh Sahakara Sakkare Karkahane Ltd. Raibagh Belgaum	100000.00	12/05/1995
Malaprabha Sakari Sakkare Karkahne, MK Hubli, Dharwad	200000.00	12/05/1995
Bangalore Turf Club Race Cource Road Bangalore	460000.00	12/05/1995
Ghataprabha Sahakari Sakkare Karkhane, Gokak Dharwad	100000.00	12/05/1995

Dhoodganga Sahakari Sakkare Karkhane, Chikkodi Belgaum	100000.00	16/05/1995
Hemavathi Co-op. Sugar Mills Srinivasapura, Hassan	100000.00	06/06/1995
Commissioner, KHB, Bangalore Bangalore	1500000.00	29/06/1995
Chairman, Kar. Co-op. Sugar Fac. Haveri, Dharwad	100000.00	29/06/1995
Kar. State Co-op. Apex Bank Ltd Bangalore	1000000.00	18/08/1995
Chief Manager (Admn.), S.B.M. Head Office, Bangalore.	200000.00	04/09/1995
Member Secretary K.S. Pollution Control Board Bangalore	500000.00	08/11/1995
MD, Mysore Sales International Ltd., Bangalore.	1000000.00	23/11/1995
Md., Mysore Sugar Co. Ltd. Mandya	500000.00	27/11/1995
Bombay Burman Trading Corpn., Ltd., Kodagu	200000.00	06/12/1995
MAC Industries Ltd. Bangalore	100000.00	06/12/1995
Nilgiris Plantation Ltd. Honnametti Estate Atticon, Mysore	100000.00	06/12/1995
Cochin Malbar Estate & Inds. Ltd., Mysore	100000.00	06/12/1995
Director, Annaparai Estate Ltd. Mysore	100000.00	06/12/1995
Chief Exe.,Kothari Indl. Corpn Ltd., Coffee Divn. Hassan	200000.00	06/12/1995
Md., Coffee Lands Ltd. Bangalore	200000.00	06/12/1995

r. Manager, Consolidated Coffee angalore	1000000.00	06/12/1995
he Mysore Plantations Ltd. Koppa, Chickmagalur	100000.00	06/12/1995
he Alageshwara Estate Ltd. Chickmagalur	100000.00	06/12/1995
Md., K.S. Industrial Investment Dev. Corpn., Bangalore	1000000.00	18/12/1995
MD, Mysore Paper Mills Ltd. angalore	1000000.00	18/12/1995
MD, Kudhuremukh Iron Ore Ltd. oramangala, Bangalore	1000000.00	18/12/1995
MD, Kar. Forest Dev. Corpn. angalore	1000000.00	27/12/1995

ೂಸದುರ್ಗ ತಾಲ್ಲೂಕಿನಲ್ಲಿರುವ ಸೇಂದಿ ವನ ಖರಾಬ್ ಜಮೀನಿನ ವಿಸ್ತೀರ್ಣ

256 - ಶ್ರೀ ಟಿ.ಹೆಚ್. ಬಸವರಾಜು (ಹೊಸದುರ್ಗ) : ಮಾನ್ಯ ಅಬಕಾರಿ ಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಶೇಂದಿ ಖರಾಬ್ ಜಮೀನಿನ ವಿಸ್ತೀರ್ಣ ಎಷ್ಟು ಮತ್ತು ಈ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿರುವ ಬಗ್ಗೆ ಮಾಹಿತಿ ಸರ್ಕಾರದವರಲ್ಲಿಯೇ? ಇದ್ದಲ್ಲಿ ಅದರ ವಿಸ್ತೀರ್ಣ ಎಷ್ಟು?

ಆ) ಶೇಂದಿ ಬಾಬ್ತು ರದ್ದು ಮಾಡಿರುವುದರಿಂದ ಸದರಿ ಖರಾಬ್ ಜಮೀನನ್ನು ಕಾನೂನು ಪ್ರಕಾರ ವಿತರಣೆ ಮಾಡಲು ಮತ್ತು ಈ ಸಂಬಂಧ ಕಂದಾಯ ಇಲಾಖೆಗೆ ಹಸ್ತಾಂತರಿಸಲು ಕ್ರಮ ತೆಗೆದುಕೊಂಡಿದೆಯೇ?

ಇ) ಇದರಿಂದ ಇಲಾಖೆಗೆ ಯಾವುದೇ ಆದಾಯ ಇದೆಯೇ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಹೊಸದುರ್ಗ ತಾಲ್ಲೂಕಿನಲ್ಲಿ 4362 ಎಕರೆ ಶೇಂದಿ ವನಕ್ಕೆ ಸೇರಿದ ಖರಾಬು ಮೀನು ಇರುತ್ತದೆ. ಇದರ ಪೈಕಿ 1718.17 ಎಕರೆ ಜಮೀನಿನಲ್ಲಿ ಬಗರ್ ಹುಕುಂ ಾಗುವಳಿ ನಡೆಯುತ್ತಿದೆ.

ಆ) ಇಲ್ಲ

ಇ) ಇಲ್ಲ

ೂಬ್ಬರಿ ಮತ್ತು ತೆಂಗು ಬೆಳೆಗೆ ತೆರಿಗೆಯಲ್ಲಿ ತಾರತಮ್ಯ

257 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಹಣಕಾಸು ಮತ್ತು ೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೆಂಗು ಬೆಳೆಯುವ ನಾಡಿನ ರೈತರಿಗೆ ಕೊಬ್ಬರಿ ಮತ್ತು ತೆಂಗುಗಳಿಗೆ ತೆರಿಗೆಯಲ್ಲಿ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ವ್ಯತ್ಯಾಸಕ್ಕೆ ಕಾರಣವೇನು?

ಆ) ಕೊಬ್ಬರಿಯನ್ನು ಸಾಕಷ್ಟು ಉತ್ತಮ ಸ್ಥಿತಿವಂತರು ತಡೆಹಿಡಿದು ಕಾಪಾಡಿ ಜಾಸ್ತಿ ಬೆಲೆಗೆ ಮಾರಿ ಉತ್ತಮ ಲಾಭಗಳಿಸುತ್ತಾರೆ. ಅದೇ ರೀತಿ ಮಧ್ಯಮ ವರ್ಗದ ರೈತರು ತಮ್ಮ ಆಗುಹೋಗುಗಳಿಗೆ ನಿಭಾಯಿಸುವ ಸಲುವಾಗಿ ತಮ್ಮಲ್ಲಿರುವ ತೆಂಗುಗಳನ್ನು ಮಾರುತ್ತಿರುವಾಗ ಇಂತಹ ರೈತರಿಗೆ ಶೇಕಡಾ 4 ತೆರಿಗೆಯನ್ನು ವಿಧಿಸಿರುವುದು ಹಾಗೂ ಕೊಬ್ಬರಿಗೆ ಕೇವಲ ಶೇಕಡ 2 ತೆರಿಗೆಯನ್ನು ವಿಧಿಸುತ್ತಿರುವುದು ಈ ವ್ಯತ್ಯಾಸವನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

(ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಕೊಬ್ಬರಿಯನ್ನು ಎಣ್ಣೆ ಬೀಜವನ್ನಾಗಿ ಪರಿಗಣಿಸಿ ಎಣ್ಣೆಯನ್ನು ತೆಗೆಯಲು ಉಪಯೋಗಿಸುವುದರಿಂದ ಇತರೆ ಎಣ್ಣೆ ಬೀಜಗಳಿಗೆ ಅನ್ವಯಿಸುವ ಶೇಕಡಾ 2ರ ತೆರಿಗೆ ಕೊಬ್ಬರಿಗೆ ಇರುತ್ತದೆ.

ಆ) ಮೇಲೆ ಹೇಳಿರುವ ಕಾರಣದಿಂದಾಗಿ ತೆಂಗಿನ ಕಾಯಿ ಮತ್ತು ಕೊಬ್ಬರಿ ಇವುಗಳ ಮೇಲೆ ಕ್ರಮವಾಗಿ ಶೇಕಡಾ 4 ಮತ್ತು ಶೇಕಡಾ 2ರ ತೆರಿಗೆಯನ್ನು ಮುಂದುವರೆಸಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಮಾಡುವ ಬಗ್ಗೆ

75 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಮಾಡುವ ಯೋಜನೆ ಸರಕಾರದವರಲ್ಲಿಯೇ?

ಆ) ಹಾಗಿಲ್ಲದಿದ್ದಲ್ಲಿ ಅವರಿಗೆ ಗೌರವಧನ ಹೆಚ್ಚಿಸಿರುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು)

ಅ) ಇಲ್ಲ

ಆ) ಈ ವಿಷಯವನ್ನು ಸರ್ಕಾರವು ಈಗಾಗಲೇ ಪರಿಶೀಲಿಸಿ ಆದೇಶ ಸಂಖ್ಯೆ ಮಮಇ 283 ಐಸಿಡಿ 95 ದಿನಾಂಕ 21-10-95ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ 100 : ರೂ.ಗಳು ಹೆಚ್ಚುವರಿ ಗೌರವಧನವನ್ನು ದಿನಾಂಕ 1-11-95ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರದ ವತಿಯಿಂದ ಮಂಜೂರು ಮಾಡಿದೆ.

ಮದ್ಯ ಮುಕ್ತ ಗ್ರಾಮ ಮಾಡುವ ನಿರ್ಣಯ

77 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯಿತುಗಳು ಮದ್ಯ ಮುಕ್ತ ಗ್ರಾಮ ಮಾಡಬೇಕೆಂದು ನಿರ್ಣಯ ಮಾಡಿದ್ದರು ಅಬಕಾರಿ ಇಲಾಖೆ ಶರಾಬು ಅಂಗಡಿ, ಸಿಎಲ್-2, ಸಿಎಲ್-9, ಪರವಾನಿಗೆ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದು ಅಬಕಾರಿ ಇಲಾಖೆಯ ಜನವಿರೋಧಿ ನೀತಿಯಾಗುವುದಿಲ್ಲವೇ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಹೌದು, ಮದ್ಯ ಮುಕ್ತ ಗ್ರಾಮ ಮಾಡಬೇಕೆಂಬ ಗ್ರಾಮ ಪಂಚಾಯಿತಿ ನಿರ್ಣಯಗಳು, ಕರ್ನಾಟಕ ಅಬಕಾರಿ ಅಧಿಸೂಚನೆ 1965ರ ಅಡಿಯಲ್ಲಿ ರಚಿತವಾದ

ನಿಯಮಗಳ ಪ್ರಕಾರ ಶರಾಬು ಅಂಗಡಿ, ಸಿಎಲ್-2, ಸಿಎಲ್-9 ಪರವಾನಿಗೆಗಳನ್ನು ಕೊಡಲು ಅಡ್ಡಿ ಬರುವುದಿಲ್ಲ.

ಇ) ಮೇಲ್ಕಂಡ ಉತ್ತರದಿಂದಾಗಿ ಸದರಿ ಪ್ರಶ್ನೆ ಉದ್ಭವಿಸುವುದಿಲ್ಲ.

ಅನಗವಾಡಿ ಸೇತುವೆ ಮುಳುಗಡೆ

84 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1996ರ ಜೂನ್ ತಿಂಗಳಿನಲ್ಲಿ ಆಲ್‌ಮಟ್ಟಿ ಅಣೆಕಟ್ಟಿನ ಹಿನ್ನೀರಿನಲ್ಲಿ ಬೀಳಗಿ ತಾಲೂಕಿನ ಅನಗವಾಡಿ ಸೇತುವೆ ಸಂಪೂರ್ಣವಾಗಿ ಮುಳುಗಡೆಯಾಗುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅನಗವಾಡಿ ಸೇತುವೆ ಜಿಲ್ಲೆಯ ಪ್ರಮುಖ ಸೇತುವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಈ ಸೇತುವೆ ಕಾಮಗಾರಿಯ ಬಗ್ಗೆ ಹೊಸದಾಗಿ ಕರೆದ ಟೆಂಡರ್ ಬಗ್ಗೆ ಅಂತಿಮ ತೀರ್ಮಾನವಾಗಿದೆಯೇ?

ಇ) ಹಾಗಿದ್ದಲ್ಲಿ ಅನಗವಾಡಿ ಸೇತುವೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು? ಹಾಗೂ ಈ ಸೇತುವೆಯ ಮೊದಲಿನ ವೆಚ್ಚವೆಷ್ಟು ಮತ್ತು ಈಗಿನ ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) ಸರ್ಕಾರದ ಗಮನಕ್ಕೆ ಬಂದಿದೆ ಟೆಂಡರ್ ತೀರ್ಮಾನದ ಹಂತದಲ್ಲಿದೆ.

ಇ) ಅಗನವಾಡಿ ಸೇತುವೆ ಕೆಲಸವನ್ನು ಸುಮಾರು ಒಂದೂವರೆ : ಎರಡು ತಿಂಗಳಲ್ಲಿ ಪ್ರಾರಂಭಿಸಲಾಗುವುದು. ಸೇತುವೆ ಅಂದಾಜು ವೆಚ್ಚ 1993-94ನೇ ಷೆಡ್ಯೂಲ್ಡ್ ರೇಟ್‌ನಂತೆ ರೂ. 10.75 ಕೋಟಿ ಅಂದಾಜಿನಲ್ಲಿ ಕೆಲವು ತಾಂತ್ರಿಕ ಮಾರ್ಪಾಡುಗಳನ್ನು ಮಾಡಲಾಗಿದ್ದು 1995-96ನೇ ಸಾಲಿನ ದರ ಪಟ್ಟಿಯಂತೆ ಇತ್ತೀಚಿನ ಅಂದಾಜು ವೆಚ್ಚ ರೂ. 22.23 ಕೋಟಿಗಳಾಗಿದೆ.

ಉಡುಪಿ ರಥ ಬೀದಿಗೆ ಹೆಚ್ಚುವರಿ ಪೋಲಿಸ್ ಠಾಣೆ

80 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಸ್ತು ಹಾಗೂ ಕಾನೂನು ಪಾಲನೆಯ ದೃಷ್ಟಿಯಲ್ಲಿ ಶ್ರೀ ಕೃಷ್ಣಮಠದ ನಿವೇಶನವಿರುವ ಉಡುಪಿ ರಥ ಬೀದಿಗೆ ಒಂದು ಹೆಚ್ಚುವರಿ ಪೋಲೀಸ್ ಠಾಣೆಯನ್ನು ಸ್ಥಾಪಿಸುವ ಆಲೋಚನೆ ಸರ್ಕಾರದವರಲ್ಲಿದೆಯೇ?

ಆ) ಹಾಗಿದ್ದಲ್ಲಿ ಪೋಲೀಸ್ ಠಾಣೆಯನ್ನು ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕೃಷ್ಣಾ ಭಾಗ್ಯ ಜಲ ನಿಗಮದ ಬಗ್ಗೆ

72 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಭಾಗ್ಯ ಜಲ ನಿಗಮದ ಮೊದಲನೇ ಕಂತಿನಲ್ಲಿ ಎಷ್ಟು ಹಣವನ್ನು ಸಂಗ್ರಹಿಸಲಾಗಿದೆ ಹಾಗೂ ಎರಡನೇ ಕಂತಿನಲ್ಲಿ ಎಷ್ಟು ಕ್ರೋಢೀಕರಿಸಲು ಉದ್ದೇಶಿಸಲಾಗಿದೆ?

ಆ) ಇದುವರೆವಿಗೂ ಸಂಗ್ರಹಿಸಿದ ಹಣದಲ್ಲಿ ಎಷ್ಟು ಹಣವನ್ನು ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ? (ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದರ ಬಗ್ಗೆ ವಿವರ ನೀಡುವುದು)

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಕೃಷ್ಣಾ ಭಾಗ್ಯ ಜಲ ನಿಗಮದ ಮೊದಲನೇ ಕಂತಿನಲ್ಲಿ ರೂ. 180 ಕೋಟಿ ರೂ.ಗಳನ್ನು ಸಂಗ್ರಹಿಸಿಡಲಾಗಿದೆ. ಎರಡನೇ ಕಂತಿನಲ್ಲಿ 250 ಕೋಟಿ ರೂ.ಗಳನ್ನು 1996ರ ಮಾರ್ಚ್ ತಿಂಗಳ ಒಳಗಾಗಿ ಸಂಗ್ರಹಿಸಲು ಉದ್ದೇಶಿಸಲಾಗಿದೆ.

ಆ) ಇದುವರೆವಿಗೂ ಸಂಗ್ರಹಿಸಿದ ಹಣದಲ್ಲಿ 53.40 ಕೋಟಿ ರೂ.ಗಳನ್ನು ವಿವಿಧ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳ ವಿವರ ಈ ಕೆಳಕಂಡಂತೆ ಇದೆ:

1)	ಸಿಬ್ಬಂದಿ ವೆಚ್ಚ	5.90 ಕೋಟಿ
2)	ಆಲಮಟ್ಟಿ ಎಡದಂತೆ ಕಾಲುವೆ ಹೆಡ್‌ವರ್ಕ್ಸ್, ಏತ ನೀರಾವರಿ ಮತ್ತು ಕಾಲುವೆಗಳು	3.90 ಕೋಟಿ
3)	ಜೇವರ್ಗಿ ಶಾಖಾ ಕಾಲುವೆ ಮತ್ತು ನಾರಾಯಣಪುರ ಬಲದಂಡೆ ಶಾಖಾ ಕಾಲುವೆ	8.80 ಕೋಟಿ
4)	ಇಂಡಿ ಶಾಖಾ ಕಾಲುವೆ	1.30 ಕೋಟಿ
5)	ರೋಣ್ ಅಕ್ವಿಡಕ್ಟ್ ಮತ್ತು ಇತರೆ ಕೆಲಸಗಳು	3.00 ಕೋಟಿ
6)	ಭೂ ಸ್ವಾಧೀನ ಮತ್ತು ಭೂ ವಸತಿ ಕಾಮಗಾರಿಗಳು ಮತ್ತು ಇತರೆ ಕೆಲಸಗಳು	20.00 ಕೋಟಿ
7)	ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ಪುನರ್ ವಸತಿ ಕಾಮಗಾರಿಗಳು	10.00 ಕೋಟಿ
	ಒಟ್ಟು ರೂ.	53.40 ಕೋಟಿ

ರಾಜ್ಯ ಮಾನವ ಹಕ್ಕುಗಳ ಆಯೋಗದ ರಚನೆ

141 - ಶ್ರೀ ಎಸ್. ಸುರೇಶಕುಮಾರ್ (ರಾಜಾಜಿನಗರ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಮಾನವ ಹಕ್ಕುಗಳ ಆಯೋಗ ರಚನೆ ಆಗಿದೆಯೇ?

ಆ) ಹಾಗಿದ್ದಲ್ಲಿ ಈಗಾಗಲೇ ಅವುಗಳ ಕಾರ್ಯರಚನೆ ಹಾಗೂ ಕಾರ್ಯಪ್ರ[illegible] ಏನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಭದ್ರಾ ಜಲಾಶಯದ ಬಲದಂಡೆ ಕಾಲುವೆಯ ದುರಸ್ತಿ

31 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಜಲಾಶಯದ ಬಲದಂಡೆ ಕಾಲುವೆಯು ದುರಸ್ತಿ ಪ್ರಗತಿ

ಆ) ಹಾಗಾದರೆ ಅದು ಯಾವಾಗ ಸಂಪೂರ್ಣಗೊಳ್ಳುತ್ತದೆ ಮತ್ತು ಉಪಯೋಗಕ್ಕೆ ಬಳಸಲಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಭದ್ರಾ ಜಲಾಶಯದ ಬಲದಂಡೆ ಕಾಲುವೆಯ ಗ್ಲೈಡ್[illegible] ಶಾಶ್ವತ ದುರಸ್ತಿ ಕಾಮಗಾರಿಯ ಪ್ರಸ್ತುತ ಪ್ರಗತಿ ಈ ಕೆಳಕಂಡಂತಿದೆ.

ಒಟ್ಟು ಕಾಂಕ್ರೀಟ್ ಪರಿಮಾಣ		33,451 ಘನ.ಮೀ.
ಸಾಧಿಸಲಾದ ಪ್ರಗತಿ		28,757 ಘನ.ಮೀ.
ಆರ್ಥಿಕ ಅಂದಾಜು ಮೊತ್ತ	ರೂ.	950 ಲಕ್ಷ
ಸಾಧಿಸಲಾದ ಪ್ರಗತಿ (ದಿನಾಂಕ 31-1-96ಕ್ಕೆ)	ರೂ.	715.7 ಲಕ್ಷ

ಆ) ಭದ್ರಾ ಬಲದಂಡೆ ಕಾಲುವೆಯ ದುರಸ್ತಿಯನ್ನು ದಿನಾಂಕ 25-3-96ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಅದರಂತೆ 1996ರ ಏಪ್ರಿಲ್ 96 ಮೊದಲ ವಾರದಲ್ಲಿ ಬಲದಂಡೆ ನಾಲೆಯನ್ನು ನೀರು ಹರಿಸಲು ಉಪಯೋಗಿಸಿಕೊಳ್ಳಲು ಯೋಜಿಸಲಾಗಿದೆ.

ಸಚಿವ ಸಂಪುಟ ಸದಸ್ಯರ ವಿದೇಶಿ ಪ್ರವಾಸ ಕುರಿತು

29 - ಶ್ರೀ ಎಚ್. ಶಿವಪ್ಪ (ಹರಿಹರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 1-1-1995ರಿಂದ ಜನವರಿ 1996ರ ಅಂತ್ಯದವರೆಗೆ, ವಿದೇಶ ಪ್ರವಾಸ ಮಾಡಿದ ಪ್ರತಿ ಸಚಿವ ಸಂಪುಟದ ಸದಸ್ಯರಿಗಾಗಿ ರಾಜ್ಯದ ಬೊಕ್ಕಸದಿಂದ ಮಾಡಿರುವ ಒಟ್ಟು ವೆಚ್ಚ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ)

1)	ಮುಖ್ಯಮಂತ್ರಿಗಳು	-	1,42,245
2)	ಉಪ ಮುಖ್ಯಮಂತ್ರಿ	-	59,125
3)	ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು	-	1,45,442
4)	ಗಣಿ ಮತ್ತು ಭೂ ವಿಜ್ಞಾನ ಸಚಿವರು	-	89,000
5)	ಕೃಷಿ ಸಚಿವರು	-	44,700
6)	ತೋಟಗಾರಿಕೆ ರಾಜ್ಯ ಸಚಿವರು	-	55,000
7)	ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ಸ್ ರಾಜ್ಯ ಸಚಿವರು	-	30,365

8)	ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು	-	1,28,208
9)	ಹಣಕಾಸು ಸಚಿವರು	-	1,03,371
10)	ಸಣ್ಣ ಕೈಗಾರಿಕಾ ಸಚಿವರು	-	44,177
11)	ಸಣ್ಣ ನೀರಾವರಿ ರಾಜ್ಯ ಸಚಿವರು	-	90,000
12)	ಪಶುಸಂಗೋಪನಾ ರಾಜ್ಯ ಸಚಿವರು	-	2,59,645
13)	ಆರೋಗ್ಯ ಸಚಿವರು	-	43,030
	ಒಟ್ಟು		2,34,328

ಬೆಂಗಳೂರು ಮಹಾನಗರದ ವರ್ತುಲ ರಸ್ತೆಗಳ ಬಗ್ಗೆ

86 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮಹಾನಗರದ ಸುತ್ತ ನಿರ್ಮಾಣದ ಹಂತದಲ್ಲಿರುವ ವರ್ತುಲ ರಸ್ತೆಯ ಕಾಮಗಾರಿಯನ್ನು ಖಾಸಗಿಯವರಿಗೆ ವಹಿಸಿ ಕೊಡಲು ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆಯೇ, ಹಾಗಿದ್ದಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಖಾಸಗಿಯವರಿಗೆ ವಹಿಸಲಾಗಿದೆ ?

ಆ) ಈ ವರ್ತುಲ ರಸ್ತೆಯ ಇಕ್ಕೆಲಗಳಲ್ಲಿ ಲಭ್ಯವಿರುವ ಜಾಗವನ್ನು ಲಾಭದಾಯಕವಾಗಿ, ವ್ಯಾಪಾರ, ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಲು ಸರ್ಕಾರ ಮುಕ್ತ ಅವಕಾಶವನ್ನು ಕಲ್ಪಿಸಿ ಕೊಟ್ಟಿದೆಯೇ ?

ಇ) ನಿಯೋಜಿತ ವರ್ತುಲ ರಸ್ತೆ ಎಷ್ಟು ಕಿ.ಮೀ. ಇದರಲ್ಲಿ ಬಿ.ಡಿ.ಎ. ಎಷ್ಟು ಅಭಿವೃದ್ಧಿ ಕಾರ್ಯಗಳನ್ನು ಪೂರೈಸಿದೆ ?

ಈ) ಕರ್ನಾಟಕ ನಿರ್ಮಾಣ ನಿಗಮ ಅಥವಾ ಭೂ ಸೇನೆ ನಿಗಮಕ್ಕೆ ವರ್ತುಲ ರಸ್ತೆ ನಿರ್ಮಿಸುವ ಅವಕಾಶ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಶ್ರೀ ಆರ್. ರೋಷನ್‌ಬೇಗ್ (ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ರಾಜ್ಯ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಯುಡಿ 20 ಎಂಎನ್‌ಜೆ 95 ದಿನಾಂಕ 4-5-95ರಲ್ಲಿ ಹೊರ ವರ್ತುಲ ರಸ್ತೆಯ ಕಾಮಗಾರಿಯನ್ನು ಖಾಸಗಿಯವರಿಗೆ ವಹಿಸಿಕೊಡಲು ಪರವಾನಗಿ ನೀಡಲಾಗಿದೆ. ಇಲ್ಲಿಯವರೆಗೆ ಈ ಕೆಲಸವನ್ನು ಖಾಸಗಿಯವರಿಗೆ ವಹಿಸಿಕೊಟ್ಟಿರುವುದಿಲ್ಲ, ಪ್ರಾಧಿಕಾರದಿಂದ ಖಾಸಗಿಯವರ ಪೂರ್ವಾರ್ಹತೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

ಆ) ಮೇಲೆ ತಿಳಿಸಿರುವ ಸರ್ಕಾರಿ ಆದೇಶಾನ್ವಯ ಹಳೇ ಮದರಾಸು ರಸ್ತೆ ಮತ್ತು ಸರ್ಜಾಪುರ ರಸ್ತೆ ನಡುವಿನ 12.20 ಕಿ.ಮೀ. ಉದ್ದದ ವರ್ತುಲ ರಸ್ತೆಯ ಇಕ್ಕೆಲಗಳ ಜಾಗವನ್ನು ಖಾಸಗಿಯವರು ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ ಮಾಡಲು ಕೆಲವು ಷರತ್ತುಗಳಿಗೊಳಪಟ್ಟು ಅನುಮೋದಿಸಲಾಗಿದೆ.

ಇ) 62.09 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆಯನ್ನು ನಿರ್ಮಾಣ ಮಾಡಲು ಯೋಜಿಸಲಾಗಿದ್ದು, ಅದರಲ್ಲಿ 36.41 ಕಿ.ಮೀ. ಉದ್ದದ ರಸ್ತೆಯ ಕೆಲಸವನ್ನು

ಪ್ರಾಧಿಕಾರದಿಂದ ಕೈಗೊಳ್ಳಲಾಗಿದೆ. 19.76ಕಿ.ಮೀ. ಉದ್ದದ ರಸ್ತೆಯನ್ನು ಪೂರ್ಣಗೊಳಿಸಲಾಗಿದೆ. ಈ ಭಾಗದ ರಸ್ತೆಯನ್ನು ಕೂಡ ಬಲಪಡಿಸಿ ಅಭಿವೃದ್ಧಿ ಮಾಡಬೇಕಾಗಿದೆ.

ಈ) ಸರ್ಕಾರಿ ಆದೇಶ ಸಂ: ಪಿಡಬ್ಲ್ಯೂಡಿ:174:ಸಿಎನ್ಆರ್:95 ದಿನಾಂಕ 14-11-95ರ ಪ್ರಕಾರ ಮೈಸೂರು ರಸ್ತೆಯ ಜಂಕ್ಷನ್‌ನಿಂದ ಹೊಸೂರು ರಸ್ತೆಯ ಜಂಕ್ಷನ್‌ವರೆವಿಗೆ ಹೊಸ ವರ್ತುಲ ರಸ್ತೆಯ ಅಭಿವೃದ್ಧಿ ಪಡಿಸಲು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಅವರಿಗೆ ವಹಿಸಲಾಗಿದೆ.

ರಾಜ್ಯದ ಆರ್ಥಿಕ ಸ್ಥಿತಿಗಳ ವಿವರ

89 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಹಣಕಾಸು ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *15ನೇ ಜನವರಿ 1996 ರಂದು ಕರ್ನಾಟಕ ಸರ್ಕಾರದ ಆರ್ಥಿಕ ಸ್ಥಿತಿಗತಿಗಳ ವಿವರಗಳೇನು ?*

(ಬ್ಯಾಂಕ್ ಬ್ಯಾಲೆನ್ಸ್, ಟ್ರೆಜರಿ ಬ್ಯಾಲೆನ್ಸ್ ಇತ್ಯಾದಿ ವಿವರ ನೀಡಿ).

ಆ) *15-1-1996ರ ವರೆಗೆ ಎಷ್ಟು ಓವರ್ ಡ್ರಾಫ್ಟ್ ಪಡೆಯಲಾಗಿದೆ. 1994-95 ಹಾಗೂ 1995-96ರಲ್ಲಿ ಎಷ್ಟು ಓವರ್ ಡ್ರಾಫ್ಟ್ ಪಡೆಯಲಾಗಿದೆ.*

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿಗಳು) :

ಅ) ದಿನಾಂಕ: 15-1-1996 ರಂದು ಕರ್ನಾಟಕ ಸರ್ಕಾರವು 6.46 ಕೋಟಿ ರೂಪಾಯಿಗಳ ಅರ್ಥೋಪಾಯ ಮುಂಗಡವನ್ನು ಪಡೆದಿದೆ.

ಆ) 1995-96ನೇ ಸಾಲಿನಲ್ಲಿ ದಿನಾಂಕ: 15-1-96ರ ವರೆಗೂ ಯಾವುದೇ ಓವರ್ ಡ್ರಾಫ್ಟ್‌ನ್ನು ರಾಜ್ಯ ಸರ್ಕಾರವು ಪಡೆದಿಲ್ಲ.

ಪ್ರಕಟಣೆಗಳು

20.2.96ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು.

1994-95ನೇ ಸಾಲಿನಲ್ಲಿ ರೂ. 4,46,69,71000 (ರೂ. ನಾಲ್ಕೂನೂರ ನಲವತ್ತಾರು ಕೋಟಿ ಅರವತ್ತೊಂಬತ್ತು ಲಕ್ಷ ಎಪ್ಪತ್ತೊಂದು ಸಾವಿರಗಳು ಮಾತ್ರ)ಗಳ ಸಂಚಿತ (Cumulative) ಓವರ್ ಡ್ರಾಫ್ಟ್ ಪಡೆಯಲಾಗಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ಬೆಂಗಳೂರು ನಗರ ಚಿಕ್ಕಪೇಟೆ ಕ್ಷೇತ್ರದಿಂದ 10ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಡಾ|| ಜೀವರಾಜ್ ಆಳ್ವರವರ ರಾಜೀನಾಮೆ

ಬೆಂಗಳೂರು ನಗರ ಚಿಕ್ಕಪೇಟೆ ಕ್ಷೇತ್ರದಿಂದ 10ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಡಾ|| ಜೀವರಾಜ್ ಆಳ್ವರವರು ವಿಧಾನ ಸಭೆಯ ಸದಸ್ಯತ್ವಕ್ಕೆ ನೀಡಿದ ರಾಜೀನಾಮೆಯನ್ನು ದಿನಾಂಕ 17-2-96ರಂದು ಅಂಗೀಕರಿಸಲಾಗಿದೆ.

ಸಭೆಯ ಮುಂದಿಡಲಾದ [illegible]ಗಳು

ದಿನಾಂಕ 20-2-1996 ರಂದು ನಡೆದ ಸಭೆಯ [illegible] ಸಮಿತಿಯ ಸಭೆಯು ಪ್ರಸ್ತುತ ಅಧಿವೇಶನದಲ್ಲಿ ಈ ಕೆ[illegible]ನ್ನು ನಡೆಸಲು ತೀರ್ಮಾನಿಸಲಾಯಿತು.

22-2-1996	ಬೆಳಗ್ಗೆ 10 ಗಂಟೆಯಿಂದ 6 ಗಂಟೆವರೆಗೆ
ಗುರುವಾರ	1. ಪ್ರಶ್ನೋತ್ತರ
	2. ಗಮನ ಸೆಳೆಯುವ ಸೂಚನೆ
	3. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ
	4. ಶಾಸನ ರಚನೆ
23-2-1996	ಬೆಳಗ್ಗೆ 9-30 ಗಂಟೆಗೆ
ಶುಕ್ರವಾರ	1. ಪ್ರಶ್ನೋತ್ತರ
	2. ಗಮನ ಸೆಳೆಯುವ ಸೂಚನೆ
	3. ಖಾಸಗಿ ಕಾರ್ಯಕಲಾಪ
24-2-1996	ಅಧಿವೇಶನವಿರುವುದಿಲ್ಲ.
ಶನಿವಾರ	
25-2-1996	ರಜಾ ದಿನ
ಭಾನುವಾರ	
26-2-1996	ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಗೆ
ಸೋಮವಾರ	1. ಪ್ರಶ್ನೋತ್ತರ
28-2-1996	2. ಗಮನ ಸೆಳೆಯುವ ಸೂಚನೆ
ಬುದವಾರದವರೆಗೆ	3. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರಿದ ಚರ್ಚೆ.
29-2-1996	ಬೆಳಗ್ಗೆ 10 ಗಂಟೆಯಿಂದ 6 ಗಂಟೆವರೆಗೆ
ಗುರುವಾರ	1. ಪ್ರಶ್ನೋತ್ತರ
	2. ಗಮನ ಸೆಳೆಯುವ ಸೂಚನೆ
	3. ಶಾಸನ ರಚನೆ
1-3-1996	ಬೆಳಗ್ಗೆ 9-30 ಗಂಟೆಗೆ
ಶುಕ್ರವಾರ	1. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಉತ್ತರ ಹಾಗೂ ಮತಕ್ಕೆ ಹಾಕುವುದು.
	2. ಖಾಸಗಿ ಕಾರ್ಯಕಲಾಪ

ಕೆಲವರು ಸದಸ್ಯರುಗಳು ಶೂನ್ಯ ವೇಳೆಯಲ್ಲಿ ಎರಡು ಮೂರು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿದ್ದಾರೆ. ನಾನು ತಮಗೆ ಅವಕಾಶವನ್ನು ಕೊಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ರಾಜ್ಯದಲ್ಲಿ ವಿದ್ಯುತ್ ಪೂರೈಕೆ ಹದಗೆಟ್ಟಿರುವ ಬಗ್ಗೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ನಿಯಮ 60ರ ಪ್ರಕಾರ ರಾಜ್ಯದ ಜನತೆ ಎದುರಿಸುವಂಥ ವಿದ್ಯುತ್ ಬರದ ಬಗ್ಗೆ ನಾನು ನಿಲುವಳಿ ಸೂಚನೆಯನ್ನು ತಮಗೆ ನಾನು ಕಳುಹಿಸಿ ಕೊಟ್ಟಿದ್ದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವೆಲ್ಲ ಸೇರಿದಂಥ ಸಮಯದಲ್ಲಿ ಸಭಾನಾಯಕರು ಮತ್ತು ನಾವೆಲ್ಲರೂ ಒಟ್ಟಿಗೆ ಚರ್ಚೆ ಮಾಡುವಂಥ ಕಾಲದಲ್ಲಿ ಇದನ್ನು ತೆಗೆದುಕೊಳ್ಳಬಹುದು ಎನ್ನುವ ಬಗ್ಗೆಯೇ ಸಹಾ ನಾವು ಚರ್ಚೆ ಮಾಡಿದೆವು. ಪ್ರತಿಪಕ್ಷದಲ್ಲಿ ಕುಳಿತು ರಾಜ್ಯದ ಜನತೆ ಎದುರಿಸುತ್ತಿರುವಂಥ ವಿದ್ಯುತ್ ಬರವ ಬಗ್ಗೆ ನಾನೊಂದು ನಿಯಮಾವಳಿ ಪ್ರಕಾರ ತಮಗೆ ನಿಯಮ 60ರ ಅಡಿಯಲ್ಲಿ ಕಳುಹಿಸಿಕೊಟ್ಟಾಗ ತಾವು ಇದನ್ನು ರಾಜ್ಯಪಾಲರ ಭಾಷಣದ ಜೊತೆಗೇ ಪ್ರಸ್ತಾಪ ಮಾಡಬಹುದು ಎನ್ನುವ ಕಾರಣ ಹೇಳಿ ನಿಮ್ಮ ಕಛೇರಿಯಿಂದ ನನಗೊಂದು ಉತ್ತರ ಬಂದಿದೆ. ಇದನ್ನು ತಳ್ಳಿಹಾಕದೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಆಗಿದೆ. ನಾನು ತಮ್ಮಲ್ಲಿ ವಿನಂತಿ ಮಾಡುವುದು ಏನೆಂದರೆ ರಾಜ್ಯಪಾಲರ ಭಾಷಣದಲ್ಲಿ ಜಗತ್ತಿನಲ್ಲಿರುವಂಥ ಎಲ್ಲಾ ಸಂಗತಿಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ, ಆದರೆ ರಾಜ್ಯದ ಜನರು ಈ ವಿದ್ಯುತ್ ಬರ ಎದುರಿಸುವಂಥ ಕಾಲದಲ್ಲಿ ಜನರು ಕಂಗಾಲಾಗಿರುವ ಕಾಲದಲ್ಲಿ ಬರುವಂಥ ಮೂರ್‍ನಾಲ್ಕು ತಿಂಗಳಲ್ಲಿ ಇದರ ದುಷ್ಪರಿಣಾಮ ಬೀರುತ್ತದೆ. ಈ ಕಾಲದಲ್ಲಿ ಇದರ ಬಗ್ಗೆ ದೀರ್ಘವಾದಂಥ ಚರ್ಚೆ ನಿಯಮ 60ರ ಪ್ರಕಾರ ಆದಾಗ ಎಲ್ಲರೂ ಅದಕ್ಕೊಂದು ಪರಿಹಾರವನ್ನು ಹುಡುಕಬಹುದು.

ಅಧ್ಯಕ್ಷರು : ಕಾಂಗ್ರೆಸ್ ಪಕ್ಷದ ನಾಯಕರಾದ ಸನ್ಮಾನ್ಯ ಖರ್ಗೆಯವರು ಈ ವಿಷಯದಲ್ಲಿ ಸೂಚನೆ ಕೊಟ್ಟಿದ್ದಾರೆ. ನಾನು ತಮಗೆ ಏನು ಹೇಳುತ್ತೇನೆ. ಎಂದರೆ ಅರ್ಧ ಗಂಟೆ ಬಿಟ್ಟನಂತರ ತಾವು ಮತ್ತು ಖರ್ಗೆಯವರು ನನ್ನ ಛೇಂಬರ್‌ನಲ್ಲಿ ಬಂದರೆ ನಾವು ಕುಳಿತುಕೊಂಡು ಚರ್ಚೆ ಮಾಡಬಹುದು. ಯಾವ ರೀತಿ ಅದನ್ನು ತೆಗೆದುಕೊಳ್ಳಬೇಕು ಎಂದು ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು. ನನಗೇನು ದುಃಖವಾದಂಥ ಸಂಗತಿ ಎಂದರೆ ತಾವು ಆ ಸ್ಥಾನದಲ್ಲಿ ಕುಳಿತು ನಿಯಮಾವಳಿ ಪ್ರಕಾರ ಯಾವುದನ್ನು ಬೇಕಾದರೂ ತಳ್ಳಿಹಾಕಬಹುದು, ಯಾವುದನ್ನು ಬೇಕಾದರೂ ತೆಗೆದುಕೊಳ್ಳಬಹುದು. ಆ ಸ್ವಾತಂತ್ರ್ಯ ತಮಗೆ ಇದೆ. ಅದಕ್ಕೆ ನಾವು ತಲೆಬಾಗುತ್ತೇವೆ. ಆದರೆ ಇದುವರೆಗೆ ನನ್ನ ಅನುಭವದಲ್ಲಿ ಒಂದು ಪ್ರತಿಪಕ್ಷದಲ್ಲಿ ನಿಂತು ಈ ರೀತಿ ಗಂಭೀರವಾದ ಒಂದು ವಿಚಾರವನ್ನು ನಿಯಮಾವಳಿ ಪ್ರಕಾರ ನಿಲುವಳಿ ಸೂಚನೆಗಳನ್ನು ಪ್ರಸ್ತಾಪ ಮಾಡಿದಾಗ ಇಲ್ಲಿ ನಮಗೆ ಅದಕ್ಕೆ ಸಹಕಾರ ಇದೆಯೋ,ಬೆಂಬಲ ಇದೆಯೋ ಎಂದು ತಮ್ಮನ್ನು ಕೇಳುವುದಕ್ಕೆ ಅಧಿಕಾರ ಇದೆ. ಮತ್ತೆ ಅಕಸ್ಮಾತ್ ಅದು ಆಗದಿದ್ದರೆ ಬೇರೆ ರೂಪದಲ್ಲಿ ತಾವು ನಮಗೆ ಸಲಹೆ ಕೊಡಬಹುದಾಗಿತ್ತು. ತಮ್ಮ ಕೊಠಡಿಯಲ್ಲಿ ಕರೆದು ಇದನ್ನು ಚರ್ಚೆ ಮಾಡಬಹುದಾಗಿತ್ತು. ಮೊನ್ನೆ ನಾವು ಕೊಟ್ಟಿದ್ದೆವು. ಇವತ್ತು ನಾವು ಕೊಟ್ಟಿದ್ದೇವೆ. ಇಷ್ಟು ದಿವಸದ ನಂತರ ನಾವು ಸದನದಲ್ಲಿ ಸೇರಿದ್ದೇವೆ.

ಒಂದು ಪ್ರತಿಪಕ್ಷದಲ್ಲಿ ಕುಳಿತು ಕೊಂಡು ಈ ಒಂದು ವಿದ್ಯುತ್ ಬರದಿಂದ ಈ ರಾಜ್ಯದ ಜನರು ಕತ್ತಲೆಯಲ್ಲಿರಬೇಕಾದರೆ ಬರುವಂಥ ಮೂರ್‍ನಾಲ್ಕು ತಿಂಗಳು ವಿದ್ಯುತ್ ಬರ ಇನ್ನು ತುಂಬಾ ದೊಡ್ಡದಾಗುವಂಥ ಕಾಲ ಇರುವಂಥ ಸಂದರ್ಭದಲ್ಲಿ ಒಂದು ಸದನದ ಸಮಿತಿ ಮಾಡಿ ಪ್ರತಿನಿತ್ಯ ವಿದ್ಯುತ್ ಬರ ಏನಿದೆ, ಅದಕ್ಕೆ

ಪರಿಹಾರಗಳೇನು? ಅದರ ಸ್ಥಿತಿಗತಿಗಳೇನು? ಬೋರ್‌ವೆಲ್‌ಗಳು ವರ್ಕ್ಸ್ ಮಾಡುತ್ತಿಲ್ಲ. ಕುಡಿಯುವ ನೀರಿನ ಹಾಹಾಕಾರ ಎಲ್ಲಾ ಕಡೆ ಇದೆ. ಸ್ಮಾಲ್ ಇಂಡ್ರಸ್ಟ್ರೀಸ್‌ಗಳು ಬಾಗಿಲು ಹಾಕಿವೆ. ಇದಕ್ಕಿಂತ ಪ್ರಮುಖವಾದುದು ಚರ್ಚೆ ಮಾಡುವುದಕ್ಕೆ ಇನ್ನೇನು ಇದೆ? ತಮ್ಮಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ, ಈಗಲೂ ಕೂಡ ತಾವು ಪರಿಶೀಲನೆ ಮಾಡಿ ನಿಯಮ 60ರ ಪ್ರಕಾರವೇ ಚರ್ಚೆಗೆ ಅವಕಾಶವನ್ನು ಕೊಟ್ಟರೆ ದೀರ್ಘವಾದ ಚರ್ಚೆಯಾಗುತ್ತದೆ. ನಾನು ನಿಲುವಳಿ ಸೂಚನೆ ತಂದಾಕ್ಷಣಕ್ಕೆ ಅದು ಪಾಸಾಗುತ್ತದೆ ಎಂದಲ್ಲ. ತಮ್ಮ ಮನಸ್ಸನ್ನು ಒಲಿಸುವಂಥ ಪ್ರಯತ್ನ ಮಾಡುತ್ತೇವೆ. ತಾವು ಎಷ್ಟು ಅವಕಾಶ ಕೊಡುತ್ತೀರಿ? ನಾವು ಎಷ್ಟರಮಟ್ಟಿಗೆ ವಿಚಾರವನ್ನು ಮಂಡನೆ ಮಾಡುತ್ತೇವೆ, ಅದರ ಮಹತ್ವದ [illegible]ಗೆ ತೀರ್ಮಾನ ತೆಗೆದುಕೊಳ್ಳುವ ಹಕ್ಕು ತಮಗೆ ಇದೆ. ನಾನು ತಮ್ಮಲ್ಲಿ ವಿನಂತಿ ಮಾಡುವಂಥದ್ದು ಇವತ್ತು ಜೆ.ಹೆಚ್. ಪಟೇಲರು ಉಪಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ. ಅಂಥ ಒಂದ ಪ್ರಮುಖವಾದ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದಾರೆ.

ಇವತ್ತು ಸರ್ಕಾರ ಕುಂಭಕರ್ಣ ನಿದ್ದೆಯ ಸ್ಥಿತಿಯಲ್ಲಿದೆ. ಸನ್ಮಾನ್ಯ ಜೆ.ಹೆಚ್. ಪಟೇಲರು ಈ ಇಲಾಖೆಯನ್ನು ನಿಭಾಯಿಸುವುದಕ್ಕೆ ಆಗುತ್ತಿತ್ತೋ ಅಥವ ಇಲ್ಲವೋ, ಪರಿಸ್ಥಿತಿಯೇನು? ಅವರ ಕಷ್ಟ ವೇನು? ಈ ಸಮಸ್ಯೆ ಬಂದಿದೆ. ಈ ಪರಿಸ್ಥಿತಿಯಲ್ಲಿ ನಾವು ಪ್ರತಿವರ್ಷದಲ್ಲಿ ಕುಳಿತುಕೊಂಡು ಇಂಥ ಗಂಭೀರವಾದ ವಿಷಯಗಳನ್ನು ಚರ್ಚೆ ಮಾಡಲಿಲ್ಲ ಎಂದರೆ ನಾನು ನನ್ನ ಒಂದು ಕರ್ತವ್ಯವನ್ನು ನಿರ್ವಹಿಸಲಿಲ್ಲವೇನೋ ಎನ್ನುವ ಭಯ ನನ್ನನ್ನು ಕಾಡುತ್ತಿದೆ. ಅದಕ್ಕೆ ನಾನು ಉಪಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ಈ ಒಂದು ವಿದ್ಯುತ್ ಬರದ ಬಗ್ಗೆ ಚರ್ಚೆ ಮಾಡುವುದಕ್ಕೆ ದಯಮಾಡಿ ನಿಯಮ 60ರ ಪ್ರಕಾರ ಅವಕಾಶ ಮಾಡಿಕೊಡಬೇಕು.

ಇಲ್ಲದಿದ್ದರೆ ತಾವೊಂದು ತೀರ್ಮಾನಕ್ಕೆ ಬನ್ನಿ ರಾಜ್ಯಪಾಲರ ಭಾಷಣದಲ್ಲೇ ಅನೇಕ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಿದೆ ಯಡಿಯೂರಪ್ಪನವರೇ ಎನ್ನುವುದಾದರೆ ಬಹುಶಃ ಇದರ ಪ್ರಕಾರ ಯಾವುದೇ ರೂಲಿನಡಿ ಬೇರೆ ಏನು ಚರ್ಚೆ ಯಾಗುವುದೇ ಬೇಡ, ಎಲ್ಲವನ್ನೂ ರಾಜ್ಯಪಾಲರ ಭಾಷಣದಲ್ಲೇ ಮಾತನಾಡೋಣ. ಅವರೇನು ಉತ್ತರ ಕೊಡುತ್ತಾರೋ, ಅದನ್ನು ಕೇಳುವುದಕ್ಕೆ ನಾವು ಸಿದ್ಧರಿದ್ದೇವೆ, ತಾವು ಆ ಅಭಿಪ್ರಾಯಕ್ಕೆ ಬಂದಿದ್ದರೆ.

ಅಧ್ಯಕ್ಷರು : ಇಲ್ಲ, ನಾನು ಹೇಳುತ್ತೇನೆ. ಒಂದು ನಿಮಿಷ. ದಯಮಾಡಿ ಕುಳಿತುಕೊಳ್ಳಿ. ನಿಮ್ಮ ಅಭಿಪ್ರಾಯವನ್ನೂಕೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾನೂ ಕೂಡ ನಮ್ಮ ಪಕ್ಷದ ವತಿಯಿಂದ ನಿಯಮ 60ರ ಕೆಳಗೆ ರಾಜ್ಯದಲ್ಲಿ ವಿದ್ಯುತ್ ಪೂರೈಕೆ ಹದಗೆಟ್ಟಿರುವ ಬಗ್ಗೆ ಮತ್ತು ಈಗ ರೈತರು ಈಗ ಏನು ತೊಂದರೆಯನ್ನು ಅನುಭವಿಸುತ್ತಿದ್ದಾರೆ, ಅದರ ಬಗ್ಗೆ ನಾವೊಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ತಾವು ಈಗಾಗಲೇ ಅದನ್ನು ತಿರಸ್ಕೃತ ಏನೂ ಮಾಡಿಲ್ಲ. ಆದರೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಈ ಒಂದು ವಿಷಯದ ಮೇಲೆ ಸಾಕಷ್ಟು ಮಾತನಾಡುವುದಕ್ಕೆ ಅವಕಾಶ ಇದೆ ಎನ್ನುವಂಥ ಸೂಚನೆಯನ್ನು ತಾವು ಅದರಲ್ಲಿ ಕೊಟ್ಟಿದ್ದೀರಿ. ಆದರೆ ಇದು ಒಂದು ಏನೆಂದರೆ ಬಹಳ ಪ್ರಾಮುಖ್ಯವಾದಂಥ ವಿಷಯ ಆಗಿದೆ. ತಮಗೂ ಕೂಡ ಗೊತ್ತಿದೆ. ಪಂಪ್‌ಸೆಂಟ್‌ಗೆ ವಿದ್ಯುತ್ ಪೂರೈಕೆ ಬಗ್ಗೆ ವಿಶೇಷವಾಗಿ ರೈತರಿಗೆ ಏನು ತೊಂದರೆಯಾಗುತ್ತಿದೆ ಅದು ಕೋಲಾರ ಇರಬಹುದು, ಬೀದರ್ ಇರಬಹುದು, ಬೆಳಗಾಂ ಇರಬಹುದು, ಇಂಥ ಕೆಲವು ಪ್ರಾಮುಖ್ಯವಾದಂಥ ಜಿಲ್ಲೆಗಳು ಏನಿವೆ, ಅಲ್ಲಿ ಮುಖ್ಯವಾಗಿ ಅಲ್ಲಿನ ರೈತರು ಎಲೆಕ್ಟ್ರಿಸಿಟಿ ನಂಬಿಕೊಂಡಿದ್ದು

ಈ ಪಂಪ್‌ಸೆಟ್ಟಿಗೆ ಮಾತ್ರ. ಅವರ ಮೇಲೆ ನಂಬಿಕೆ ಇಟ್ಟುಕೊಂಡೇ ಅವರು ವ್ಯವಸಾಯವನ್ನು ಮಾಡುತ್ತಾ ಇದ್ದಾರೆ. ಅದಕ್ಕಾಗಿ ಇವತ್ತು ಅವರಿಗೂ ಕೂಡ ತೊಂದರೆಯಾಗುತ್ತಿದೆ. ಅದಲ್ಲದೇ ಇವತ್ತು ನಮ್ಮಲ್ಲಿ ಪ್ರತಿಯೊಂದು ಹಳ್ಳಿಗಳಲ್ಲಿ ನಮ್ಮ ಹಳೆಯ ಬಾವಿಗಳನ್ನು ನಾವು ಮುಚ್ಚಿ ಹಾಕಿಬಿಟ್ಟಿದ್ದೇವೆ.

ಈ ಮಿನಿ ವಾಟರ್ ಸಪ್ಲೈ, ಪೈಪ್ ವಾಟರ್ ಸಪ್ಲೈ ಇಂಥ ವಾಟರ್ ಸಪ್ಲೈಯಿಂದಲೇ ಇವತ್ತು ಅವರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಅದಕ್ಕಾಗಿ ಒಂದು ಕಡೆ ಕುಡಿಯುವ ನೀರಿನ ತೊಂದರೆ ಇದೆ, ಇನ್ನೊಂದು ಕಡೆ ರೈತರಿಗೆ ಆಗಿರತಕ್ಕಂಥ ಅನ್ಯಾಯ ಮತ್ತು ಅವರೇನು ಕಷ್ಟಪಟ್ಟು ಇವತ್ತಿನ ದಿವಸ ಪಂಪ್‌ಸೆಂಟ್ ಇಟ್ಟುಕೊಂಡು ಏನಾದರೂ ಸ್ವಲ್ಪ ಉತ್ಪಾದನೆ ಮಾಡಿಕೊಂಡು ಬದುಕಬೇಕು, ಎನ್ನುವವರಿಗೆ ಅನ್ನ ಕೂಡ ಸಿಗುತ್ತಿಲ್ಲ. ಅಂಥ ಒಂದು ಪರಿಸ್ಥಿತಿ ಇದ್ದಾಗ ಇದಕ್ಕೆ ಸ್ವಲ್ಪ ನಾವು ಮೊದಲನೇ ಸ್ಥಾನ ಕೊಟ್ಟು ಇದನ್ನು ಮೊದಲು ಚರ್ಚೆಗೆ ತೆಗೆದುಕೊಂಡು ಆಮೇಲೆ ರಾಜ್ಯ ಪಾಲರ ಭಾಷಣವನ್ನು ಯಥಾಪ್ರಕಾರ ನಾವು ಚರ್ಚೆ ಮಾಡೋಣ. ಅದಕ್ಕಾಗಿ ತಾವು ಇದಕ್ಕೆ ದಯವಿಟ್ಟು ಅವಕಾಶ ಮಾಡಿಕೊಟ್ಟರೆ ಕುಡಿಯುವ ನೀರಿನ ಸಮಸ್ಯೆ ಅದರ ಬಗ್ಗೆ ಯಾವು, ರೀತಿ ಪರಿಹಾರ ಮಾಡುತ್ತಾರೆ, ರೈತರ ಬಗ್ಗೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಇವೆ, ದೊಡ್ಡ ದೊಡ್ಡ ಇಂಡ್ರಸ್ಟ್ರೀ ಬಗ್ಗೆ ಮಾನ್ಯ ದೇಶಪಾಂಡೆಯವರು ಅನೇಕ ಕಂಪನಿಗಳ ಜೊತೆಯಲ್ಲಿ ಸೈನ್ ಮಾಡಿದ್ದಾರೆ. ಯಾವ ಆಧಾರದ ಮೇಲೆ ಮಾಡಿದ್ದಾರೋ? ಈ ಕಡೆ ಒಂದು ಕಡೆ ಕುಡಿಯುವುದಕ್ಕೆ ನೀರಿಲ್ಲ, ರೈತರಿಗೆ ನೀರಿಲ್ಲ, ಪಂಪ್‌ಸೆಟ್ಟಿಗೆ ಎಲೆಕ್ಟ್ರಿಸಿಟಿ ಇಲ್ಲ. ಇನ್ನೊಂದು ಕಡೆ ನಾವು ಸಾಕಷ್ಟು ಕಂಪನಿಗಳಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಹೇಳಿ ಕೊಂಡಿದ್ದೇವೆ. ಅದಕ್ಕಾಗಿ ಇದರ ಬಗ್ಗೆ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಂದು ಒಳ್ಳೆಯದು ಆಗುತ್ತದೆ. ಇದರಿಂದ ಅವರು ಪರಿಹಾರ ಕಂಡುಹಿಡಿದ ತಕ್ಷಣ ಏನಾದರೂ ಹೇಳಿದರೆ ದೇಶದ ಜನತೆಗೆ, ಕರ್ನಾಟಕ ರಾಜ್ಯದ ರೈತರಿಗೆ ಅದರಲ್ಲೂ ವಿಶೇಷವಾಗಿ ಹಳ್ಳಿಯಲ್ಲಿರುವ ಬಡವರಿಗೂ ಇದರ ಬಗ್ಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ತಮಗೆ ಕೇಳಿಕೊಳ್ಳುತ್ತೇನೆ. ದಯವಿಟ್ಟು ಇದಕ್ಕೆ ತಾವು ಪರ್ಮಿಷನನ್ನು ಕೊಡಬೇಕು ಎಂದು ಹೇಳಿ ಪುನಃ ಕೇಳಿ ಕೊಳ್ಳುತ್ತೇನೆ.

•

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಪ್ರಶ್ನೆ. ಇದನ್ನು ಮಾನ್ಯ ಉಪಮುಖ್ಯಮಂತ್ರಿಗಳು ಕಡೆಗಾಣಿಸಿದ್ದಾರೆ. ಎಂದು ನಾವ್ಯಾರೂ ಅದನ್ನು ನೇರವಾಗಿ ಆರೋಪಣೆ ಮಾಡುತ್ತಿಲ್ಲ, ವಸ್ತುಸ್ಥಿತಿ ಏನು ಕರ್ನಾಟಕದಲ್ಲಿ, ಅದನ್ನು ಪರಿಹಾರ ಮಾಡುವುದಕ್ಕೆ ಏನು ಇದೆ? ತಮಗೆ ನಾನೊಂದು ಉದಾಹರಣೆಯನ್ನು ಕೊಡುವುದಾದರೆ ನನ್ನ ತಾಲ್ಲೂಕು ಒಂದರಲ್ಲಿಯೇ ಐದು ಕೋಟಿ ರೂಪಾಯಿ ಬೆಳೆ ನಷ್ಟವಾಗುತ್ತಿದೆ. ಕಬ್ಬಿನ ಬೆಳೆ, ಬೇರೆ ಬೇರೆ ಬೆಳೆಯತಕ್ಕಂಥದ್ದು. ಚಾಮರಾಜನಗರ ನನ್ನ ಕ್ಷೇತ್ರ ಒಂದರಲ್ಲಿ ಈ ರೀತಿ ಇದೆ. ಅಂದರೆ ಕರ್ನಾಟಕ ರಾಜ್ಯಾದ್ಯಂತ ಏನು ಪರಿಸ್ಥಿತಿ ಇದೆ? ಆಮೇಲೆ ಯಾವಾಗ ಎಂದರೆ ಆಗ ವಿದ್ಯುಚ್ಛಕ್ತಿಯನ್ನು ನಿಲ್ಲಿಸತಕ್ಕಂಥದ್ದು ಯಾವ ಗಳಿಗೆ ಎಂದರೆ ಆ ಗಳಿಗೆ. ಒಂದು ಸಾರಿ ಬೆಳಿಗ್ಗೆ 7 ಗಂಟೆ, ಬೆಳಿಗ್ಗೆ 6 ಗಂಟೆ. ಒಂದು ನಿರ್ದಿಷ್ಟವಾದ ನಿಲುವು ಇಲ್ಲ. ಅದರ ಬಗ್ಗೆ ಸ್ಪಷ್ಟತೆ ಕೊಟ್ಟಿಲ್ಲ, ವಿದ್ಯುಚ್ಛಕ್ತಿ ಇಲಾಖೆಯವರು ಇಂಥಿಂಥ ಸಂದರ್ಭದಲ್ಲಿ ಇಂಥಿಂಥ ಪ್ರದೇಶಗಳಲ್ಲಿ ನಾವು ನಿಲುಗಡೆ ಮಾಡುತ್ತಿದ್ದೇವೆ. ಕಾರಣ ಈ ರೀತಿ ಇದೆ ಎಂದು ಜನರಿಗೆ ತಿಳಿಸುವುದಕ್ಕೆ ಏನು ತೊಂದರೆ ಇದೆಯೋ ಗೊತ್ತಿಲ್ಲ. ಅರ್ಧಂಬರ್ಧ ಸ್ನಾನ ಮಾಡಿರುತ್ತೇವೆ, ತಕ್ಷಣ ವಿದ್ಯುತ್ ನಿಲುಗಡೆಯಾಗುತ್ತದೆ. ಅಲ್ಲಿಗೆ ಸೋಪ್ ಹಾಕುವ ಹಾಗೆ ಇಲ್ಲ, ಬಿಡುವೆ ಹಾಗೆ ಇಲ್ಲ. ಹೆಣ್ ಅರ್ಧ ಸುಟ್ಟಿರುತ್ತದೆ. ಇನ್ನರ್ಧಕ್ಕೆ ವಿದ್ಯುಚ್ಛಕ್ತಿ ಹೋಗಿರುತ್ತದೆ. ಪರಿಸ್ಥಿತಿ ಈ ರೀತಿ ಇದೆ. ನಾನು ಇದನ್ನು ಹಾಸ್ಯವಾಗಿ

ಹೇಳುತ್ತಿಲ್ಲ. ಬಹಳ ಅತ್ಯಂತ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ ತಾವು ಪ್ರಮುಖವಾಗಿ ಈ ವಿಷಯದ ಬಗ್ಗೆ ಸಮಗ್ರವಾದಂಥ ಚರ್ಚೆಗೆ ಅವಕಾಶ ಕೊಡಬೇಕು. ಏಕೆಂದರೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಬಹುದು ಎಂದಲ್ಲ ಪರಿಸ್ಥಿತಿಯು ಗಂಭೀರತೆಯ ದೃಷ್ಟಿಯಿಂದ ಸಮಗ್ರವಾದ ಚರ್ಚೆಗೆ ಇದಕ್ಕೆ ವಿಶೇಷವಾಗಿ ಅವಕಾಶವನ್ನು ಕೊಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಮುಖಂಡರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಕಳುಹಿಸಿರುವ ಸೂಚನೆ ಬಗ್ಗೆ ಚರ್ಚೆಯಾಗಬೇಕು ಎಂದು ನನ್ನದೂ ಕೂಡ ಅಭಿಪ್ರಾಯ ಇದೆ. ಏಕೆಂದರೆ ಪರಿಸ್ಥಿತಿ ತೀರ ಗಂಬೀರವಾಗಿದೆ. ಸರ್ಕಾರಕ್ಕೆ ವಿದ್ಯುಚ್ಛಕ್ತಿ ಪರಿಸ್ಥಿತಿ ಬಗ್ಗೆ ಕಷ್ಟ ಇದೆ ಎಂದು ಹೇಳುವುದು ನಮಗೂ ಅರ್ಥವಾಗುತ್ತದೆ ಪವರ್‌ಕಟ್ ಮಾಡಿದ್ದನ್ನು ನಾವೇನು ವಿರೋಧ ಮಾಡಲಿಲ್ಲ. ಆದರೆ ಪವರ್‌ಕಟ್ ಮಾಡತಕ್ಕಂಥ ಸಂದರ್ಭದಲ್ಲಿ ಕರ್ನಾಟಕದ ಜನತೆಗೆ ಸರ್ಕಾರ ಏನು ಆಶ್ವಾಸನೆ ಕೊಟ್ಟಿತ್ತು. ಇಷ್ಟು ಆಗ ನಾವು ಖಚಿತವಾಗಿ ಕೊಡುತ್ತೇವೆ ಎಂದು ಹೇಳಿದ್ದರು, ಅದನ್ನೂ ಕೂಡ ಕೊಡುತ್ತಿಲ್ಲ, ಆದರಿಂದ ಭಾರೀ ತೊಂದರೆಯಾಗಿದೆ.

ಮಾನ್ಯ ಖರ್ಗೆಯವರು ಹೇಳಿದಹಾಗೆ ಕುಡಿಯುವ ನೀರಿನ ಸಮಸ್ಯೆಗೆ ಮತ್ತೆ ಎರಡಕ್ಕೂ ಕೂಡ ತೊಂದರೆಯಾಗಿದೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ತರಕಾರಿ ಬೆಳೆ ಬೆಳೆಯತಕ್ಕಂಥದ್ದು ಕಮರ್ಷಿಯಲ್ ಕ್ರಾಪ್ಸ್‌ಸಿಕ್ಕಾಪಟ್ಟೆ ನಷ್ಟವಾಗುತ್ತಿದೆ. ನಾವು ಸರ್ಕಾರದವರನ್ನು ಕೇಳಿದೆವು, ನೀವು 24 ಗಂಟೆ ಅಲ್ಟರ್‌ನೇಟೀವ್‌ದೇ ಕೊಡುವ ಬದಲು ಒಂದು ದಿವಸಕ್ಕೆ ಅಲ್ಟರ್‌ನೇಟೀವ್‌ದೇ ಹತ್ತು ಗಂಟೆ, ಎಂಟು ಗಂಟೆ ನಿರ್ದಿಷ್ಟವಾಗಿ ಕೊಡಿ ಎಂದು ಕೂಡ ನಾವು ಹೇಳಿದ್ದೇವೆ. ಅದ್ದರಿಂದ ಇದರ ಬಗ್ಗೆ ಕೂಡ ಚರ್ಚೆ ತಕ್ಷಣ ಆಗಬೇಕು. ರಾಜ್ಯಪಾಲರ ಭಾಷಣದಲ್ಲಿ ಏನೇನೋ ಚರ್ಚೆಗೆ ಬರುತ್ತದೆ, ಹೋಗುತ್ತದೆ. ದಯವಿಟ್ಟು ವಿದ್ಯುಚ್ಛಕ್ತಿ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಕೂಡ ಹೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ ವಿಚಾರದ ಬಗ್ಗೆ ಮಾನ್ಯ ಖರ್ಗೆಯವರೂ ನೋಟೀಸ್ ಕಳಿಸಿ ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ನಾನು ಪ್ರತಿಪಕ್ಷದ ನಾಯಕನಾಗಿ ನೋಟೀಸ್ ಕಳಿಸಿದ್ದೇನೆ. ಅಧಿಕಾರ ತಮ್ಮಲ್ಲಿ ಇರುತ್ತದೆ. ತಾವು ಈ ರೀತಿ ನಿರ್ಣಯ ತೆಗೆದುಕೊಂಡಿದ್ದರೆ, ಅದೇ ನಿರ್ಣಯವನ್ನು ನಾವು ಒಪ್ಪುತ್ತೇವೆಂದು ಹೇಳತಕ್ಕ ಮಾತು. ಪ್ರತಿಪಕ್ಷದ ನಾಯಕರನ್ನು ನಾಯಕರನ್ನು, ಸದನದ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾನು ಒಂದು ನಿರ್ಣಯವನ್ನು ಕೊಡುತ್ತೇನೆ. ಆಗ ಮಾತ್ರ ಅದಕ್ಕೆ ಗಾಂಭೀರ್ಯ ಮತ್ತು ಘನತೆ ಇರತಕ್ಕದ್ದು. ನಾನು ಸರ್ವಾಧಿಕಾರಿಯಂತೆ ಬರೀ ನಿಯಮಾವಳಿಗಳನ್ನು ಅನುಸರಿಸಿ ಯಾವುದೇ ಆದೇಶವನ್ನು ಕೊಡಲಿಕ್ಕೆ ಇಷ್ಟಪಡುವಂತಹವಲ್ಲ. ಈ ಒಂದು ವಿಚಾರದಲ್ಲಿ ಸ್ವಲ್ಪ ನಮ್ಮ ಕಾರ್ಯಾಲಯದಲ್ಲಿ ಎಡವಿದ್ದಾರೆ. ನಾನು ತಮ್ಮ ಕ್ಷಮೆ ಯೂಚನೆ ಮಾಡುತ್ತಿದ್ದೇನೆ. ಅನಂತರ ನಾನು ತಮ್ಮನ್ನು ಸನ್ಮಾನ್ಯ ಖರ್ಗೆಯವರನ್ನು ಇತರ ಮುಖಂಡರನ್ನು ಸಂಸದೀಯ ವ್ಯವಹಾರಗಳ ಸಚಿವರನ್ನು ಮತ್ತು ಉಪ ಮುಖ್ಯಮಂತ್ರಿಗಳನ್ನು ಕಲೆಯಿಸಿ ನಾವು ಯಾವ ರೀತಿ ಈ ವಿಚಾರವನ್ನು ಸದನದಲ್ಲಿ ತೆಗೆದುಕೊಳ್ಳಬೇಕು ಎಂದು ಒಂದು ನಿರ್ಣಯಕ್ಕೆ ಬರೋಣ. ನಿಯಮ 60ರಲ್ಲಿ ತೆಗೆದುಕೊಳ್ಳಬೇಕೇ ಅಥವಾ ಬೇರೆ ರೀತಿ ತೆಗೆದುಕೊಳ್ಳಬೇಕೋ ಎಂದು ನಿರ್ಣಯ ಮಾಡೋಣ. ಇದು ಬಹಳ ಪ್ರಾಮುಖ್ಯವಾದಂತಹ ವಿಷಯ ಇದರ ಪ್ರಾಮುಖ್ಯತೆಯನ್ನು ನಾನು ಅಲ್ಲಗಳೆಯುತ್ತಿಲ್ಲ. ನಮ್ಮ ಕಾರ್ಯಲಯದಲ್ಲಿ ಎಡವಿದ್ದಾರೆ.

ಆದ್ದರಿಂದ ದಯಮಾಡಿ ಬೇಸರ ಮಾಡಿಕೊಳ್ಳಬೇಡಿ. ನಾನು ನಿಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮತ್ತೆ ಈ ವಿಚಾರವನ್ನು ಯಾವ ರೂಪದಲ್ಲಿ ಚರ್ಚೆಗೆ ತರಬೇಕೆಂದು ನಿರ್ಣಯ ಮಾಡುತ್ತೇನೆ.

ಶ್ರೀ ಜೆ.ಎಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತಮ್ಮ ಕಾರ್ಯಾಲಯದಿಂದ ಕೊಟ್ಟಿರುವಂತಹ ಉತ್ತರವನ್ನು ನೋಡಿದ್ದೇನೆ. ಅದೇನು ತಪ್ಪಲ್ಲ, ಆದರೆ ಈ ವಿಷಯದ ಬಗ್ಗೆ ಬರೀ ಸದನಕ್ಕೆ ಅಲ್ಲ ಇಡೀ ರಾಜ್ಯದ ಜನತೆಗೂ ನಾನು ತಿಳಿಸಬೇಕಾಗುತ್ತದೆ. ಸಮಯವನ್ನು ಎಷ್ಟು ಬೇಗ ತಾವು ನಿರ್ಧಾರ ಮಾಡಿದರೆ ಅಷ್ಟು ಬೇಗ ನಾನು ತಯಾರಿದ್ದೇನೆ. ಈ ವಿಷಯವನ್ನು ಸಮಗ್ರವಾಗಿ ಚರ್ಚೆ ಮಾಡಿ ಮಾನ್ಯ ವಾಟಾಳ್ ಅವರು ಹೇಳಿದ ಹಾಗೆ ವಸ್ತುಸ್ಥಿತಿ ಏನು ಇದೆ ಎಂದು ನೋಡಬೇಕು. ನಾವು ಬೇಕೆಂದು ಮಾಡುತ್ತಿದ್ದೇವೆಯೇ? ಈ ಸ್ಥಿತಿ ಅನಿವಾರ್ಯವಾಗಿ ಸರ್ಕಾರ ಕಷ್ಟವನ್ನು ಅನುಭವಿಸುತ್ತಿದೆ. ಆದ್ದರಿಂದ ತಾವು ಯಾವಾಗ ಸಮಯ ಗೊತ್ತು ಮಾಡಿದರೂ ಸಹ ಈ ವಿಷಯದ ಬಗ್ಗೆ ಸಮಗ್ರವಾಗಿ ಅದರ ಕಾರಣಗಳೇನು, ಪರಿಹಾರಗಳು ಏನು? ಅದಕ್ಕೆ ಸಮಯ ಎಷ್ಟು ಬೇಕು? ಇದಕ್ಕೆ ಎಷ್ಟು ಸಮಯ ಬೇಕು? ಅದನ್ನೆಲ್ಲಾ ಹೇಳುವುದಕ್ಕೆ ನಾನು ತಯಾರಿದ್ದೇನೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಂಡಾಗ ಇಲ್ಲಿ ಮಾನ್ಯ ಉಪಾಧ್ಯಕ್ಷರು ಕುಳಿತುಕೊಳ್ಳುತ್ತಾರೆ. ಆಗ ನಾವು ಐದು ನಿಮಿಷ ನನ್ನ ಛೇಂಬರಿನಲ್ಲಿ ಸಂಸದೀಯ ಸಚಿವರು, ತಾವು ಎಲ್ಲ ಕುಳಿತುಕೊಂಡರೆ ಐದು ನಿಮಿಶದಲ್ಲಿ ಚರ್ಚೆ ಮಾಡಿ ಮುಗಿಸಬಹುದು. ಒಂದು ಹಂತ ನಾವು ಇಲ್ಲಿ ತಪ್ಪಿದ್ದೇವೆ. ಅದು ಏನೆಂದರೆ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡತಕ್ಕ ಹಂತ. ಅಷ್ಟರಲ್ಲಿ ಪ್ರತಿಪಕ್ಷದ ನಾಯಕರು ಎದ್ದು ನಿಂತರು. ನಾನು ಅವರ ಧ್ವನಿಯನ್ನು ನಿಲ್ಲಿಸಲು ಇಷ್ಟಪಡಲಿಲ್ಲ. ಇದು ಒಂದು ಪ್ರೊಸೀಜರ್ ಅನ್ನು ಮುಗಿಸಿ ಬಿಡೋಣ.

ಶ್ರೀ ವಾಟಾಳ್ ನಾಗರಾಜ್ : ಶೂನ್ಯ ವೇಳೆ ಮುಗಿದು ಹೋಗುತ್ತದೇನೋ ಎಂಬ ಶಂಕೆ.

ಅಧ್ಯಕ್ಷರು : ಇಲ್ಲ ಶೂನ್ಯ ವೇಳೆಯನ್ನು ಮುಗಿಸುವುದಿಲ್ಲ, ಅದನ್ನು ಹಾಗೆಯೇ ಇಟ್ಟಿದ್ದೇನೆ. ನನ್ನ ಸ್ನೇಹಿತರು ಬಹಳ ಜನ ಇದ್ದಾರೆ. ಅವರಿಗೆಲ್ಲ ನಾನು ಮಾತು ಕೊಟ್ಟಿದ್ದೇನೆ. ಸ್ವಲ್ಪ ಶೂನ್ಯವನ್ನು ಶೂನ್ಯ ಇಲ್ಲದಂತೆ ಮಾಡುವುದು. ಮತ್ತೆ ಬೇಕಾದಾಗ ಶೂನ್ಯ ಮಾಡುವುದರ ಎಲ್ಲ ಮಾಡಿಕೊಳ್ಳುತ್ತಿದ್ದೇನೆ. ಇನ್ನೇನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ಆ ಚಾತುರ್ಯತೆ ತಮ್ಮಲ್ಲಿ ಇದೆ ಎಂದು ನಮಗೆ ಗೊತ್ತಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಸಿ. ನಾಣಯ್ಯ (ಸಂಸದೀಯ ವ್ಯವಹಾರ ಕಾನೂನು ಸಚಿವರು)

I. (ಶ್ರೀ ಹೆಚ್.ಡಿ. ದೇವೆಗೌಡ (ಮುಖ್ಯ ಮಂತ್ರಿ) ಅವರ) ಪರವಾಗಿ ಮಾನ್ಯ ಅಧ್ಯಕ್ಷರೇ 1978ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ 8(3)ನೇ ಕಲಮಿನ ಮೇರೆಗೆ.

1) ಕರ್ನಾಟಕ ಆಡಳಿತ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 1995ರ ಬಗ್ಗೆ ದಿನಾಂಕ 8.9.1995 ರಂದು ಹೊರಡಿಸಲಾದ ಸಿಆಸುಇ 54 ಸೇನೆಇ 94ಪ ಅಧಿಸೂಚನೆ.

2) ಕರ್ನಾಟಕ ಅಗ್ನಿ ಶಾಮಕ (ವೃಂದ ಮತ್ತು ನೇಮಕಾತಿ) ನಿಯಮಗಳು 1971ಕ್ಕೆ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 18.10.1995ರಂದು ಹೊರಡಿಸಲಾದ ಸಿಆಸುಇ 36 ಸೇನಿಇ 94ರ ಅಧಿಸೂಚನೆ.

3) ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಸೇವೆಗಳ (ನೇಮಕಾತಿ) ನಿಯಮ 1995ರ ಸಂಬಂಧದಲ್ಲಿ ದಿನಾಂಕ 4.11.1995 ರಂದು ಹೊರಡಿಸಲಾದ ಸಿಆಸುಇ 03 ಸೇನಿಇ 95ರ ಅಧಿಸೂಚನೆ.

4) ಕರ್ನಾಟಕ ಸಾಮಾನ್ಯ ಸೇವೆಗಳು (ಖಜಾನೆ ವಿಭಾಗ) (ನೇಮಕಾತಿ) ನಿಯಮಗಳು 1994ಕ್ಕೆ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 21.11.1995 ರಂದು ಹೊರಡಿಸಲಾದ ಸಿಆಸುಇ 82 ಸೇನಿಇ 95ರ ಅಧಿಸೂಚನೆ.

5) ಕರ್ನಾಟಕ ಸಾಮಾನ್ಯ ಸೇವೆ (ನೋಂದಣಿ ಮತ್ತು ಮುದ್ರಾಂಕ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು 1995ರ ಸಂಬಂಧದಲ್ಲಿ ದಿನಾಂಕ 13.12.1995ರಂದು ಹೊರಡಿಸಲಾದ ಸಿಆಸುಇ 36ಸೇನಿಇ 93ರ ಅಧಿಸೂಚನೆ.

6) ಕರ್ನಾಟಕ ಲೋಕೋಪಯೋಗಿ ಇಂಜಿನಿಯರಿಂಗ್ (ಇಂಜಿನಿಯರಿಂಗ್ ಸೇವೆಗಳು) (ನೇಮಕಾತಿ) (ತಿದ್ದುಪಡಿ) ನಿಯಮ, 1995ರ ಬಗ್ಗೆ ದಿನಾಂಕ 12.12.1995 ರಂದು ಹೊರಡಿಸಲಾದ ಸಿಆಸುಇ 98 ಸೇನಿಇ 94ರ ಅಧಿಸೂಚನೆ.

1956ನೇ ಇಸವಿಯ ಕರ್ನಾಟಕ ಸಚಿವರ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ 12(2ಎ) (ಬಿ) ಮೇರೆಗೆ.

7) ಶ್ರೀ ಎನ್.ಎಂ.ನಬಿ ಸಣ್ಣ ಕೈಗಾರಿಕೆಗಳ ಸಚಿವರ ಜಪಾನ್ ಪ್ರವಾಸದ ಸಂಬಂಧದಲ್ಲಿ ದಿನಾಂಕ 4.11.1995 ರಂದು ಹೊರಡಿಸಲಾದ ಡಿಪಿಎಆರ್ 110 ಜಿಎಎಂ 95ರ ಆದೇಶ.

8) ಶ್ರೀ ಬಿ.ಎನ್. ಬಚ್ಚೇಗೌಡ, ಪಶು ಸಂಗೋಪನಾ ರಾಜ್ಯ ಸಚಿವರ ಆಸ್ಟ್ರೇಲಿಯಾ ಪ್ರವಾಸದ ಸಂಬಂಧದಲ್ಲಿ ದಿನಾಂಕ 8.11.1995 ರಂದು ಹೊರಡಿಸಲಾದ ಡಿಪಿಎಆರ್ 70 ಜಿಎಎಂನ ಆದೇಶ.

9) ಸಣ್ಣ ಕೈಗಾರಿಕೆ ಮಂತ್ರಿ ಶ್ರೀ ಎನ್.ಎಂ. ನಬಿಯವರ ಸೌದಿ ಅರೇಬಿಯಾ ಮತ್ತು ದುಬೈ ಪ್ರವಾಸದ ಬಗ್ಗೆ ದಿನಾಂಕ 31.1.1996ರಂದು ಹೊರಡಿಸಲಾದ ಡಿಪಿಎಆರ್ 117 ಸಿಎಎಂ 95ರ ಆದೇಶ.

ಭಾರತ ಸಂವಿಧಾನದ 323 (2)ನೇ ಅನುಚ್ಛೇದದ ಮೇರೆಗೆ.

10) 1992-93ನೇ ಸಾಲಿನ ಕರ್ನಾಟಕ ಲೋಕಸೇವಾ ಆಯೋಗವು ವಾರ್ಷಿಕ ವರದಿ. 1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ 47(5)ನೇ ಕಲಮಿನ ಮೇರೆಗೆ.

11) 1991-92ಹಾಗೂ 1992-93ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಮಾಣೀಕೃತ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನಾ ವರದಿಗಳು.

1964ರ ಬೆಂಗಳೂರು ಜಲ ಮಂಡಳಿ ಕಾಯ್ದೆಯ 86(2)ನೇ ಕಲಮಿನ ಮೇರೆಗೆ.

12) 1994-95ನೇ ಸಾಲನ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಸಾಧನೆಯ ವರದಿ.

1964ರ ಬೆಂಗಳೂರು ಜಲ ಮಂಡಳಿ ಕಾಯ್ದೆಯ 17ನೇ ಕಲಮಿನ ಮೇರೆಗೆ.

13) 1995-96ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಆಯವ್ಯಯ ಪಟ್ಟಿಗಳನ್ನು ಮಂಡಿಸುತ್ತಿದ್ದೇನೆ

II. ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, 1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

1) 1993-95ನೇ ಸಾಲಿನ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 24ನೇ ವಾರ್ಷಿಕ ವರದಿ.

2) 1990-91ನೇ ಸಾಲಿನ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 21ನೇ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಡನೆ)

3) 1993-94ನೇ ಸಾಲಿನ ಜಂಗಲ ಲಾಡ್ಜಸ್ ಮತ್ತು ರೆಸಾರ್ಟ್ಸ್ ನಿಯಮಿತದ 14ನೇ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಡನೆ)ಗಳನ್ನು ಮಂಡಿಸುತ್ತೇನೆ.

III. ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿ) ಮಾನ್ಯ ಅಧ್ಯಕ್ಷರೇ.
ಭಾರತ ಸಂವಿಧಾನ 213 (2) (ಎ) ಅನುಚ್ಛೇದದ ಮೇರೆಗೆ.

1) 1996ನೇ ಇಸವಿಯ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಸಂಖ್ಯೆ 1ರ ಅಧ್ಯಾದೇಶಕ್ಕೆ ಸಂಬಂಧಪಟ್ಟಂತೆ ದಿನಾಂಕ 5.2.96ರಂದು ಹೊರಡಿಸಲಾದ ಎಲ್‌ಎಡಬ್ಲ್ಯು 7 ಎಲ್‌ಜಿಎನ್ 96ರ ಅಧಿಸೂಚನೆ.

   1964ನೇ ಸಾಲಿನ ಕರ್ನಾಟಕ ಭೂ ಕಂದಾಯ ಅಧಿನಿಯಮದ ಪ್ರಕರಣದ 194(2)ನೇ ಕಲಮಿನ ಮೇರೆಗೆ.

2) ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನ 117 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 1,14,115-81 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.7.1995 ರಂದು ಹೊರಡಿಸಲಾದ ಆರ್‌ಡಿ 117 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

3) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ 103 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 1,10,086-26 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 7.7.1995 ರಂದು ಹೊರಡಿಸಲಾದ ಆರ್‌ಡಿ 115 ಟಿಆರ್ ಎಂ 95ನೇ ಕ್ರಮಾಂಕದ ಅಧಿಸೂಚನೆ.

4) ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನ 55 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 1,75,083-84 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21.8.1995 ರಂದು ಹೊರಡಿಸಲಾದ ಆರ್‌ಡಿ 130 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನ.

5) ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನ 74 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 1,02,432-75 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 22.8.1995 ರಂದು ಹೊರಡಿಸಲಾದ ಆರ್‌ಡಿ 131 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

6) ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ 177 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 1,75,799-01 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 14.8.95 ರಂದು ಹೊರಡಿಸಲಾದ ಆರ್‌ಡಿ 128 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

7) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ 85 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 2,35,928-35 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 25.9.1995 ರಂದು ಹೊರಡಿಸಲಾದ ಆರ್‌ಡಿ 159 ಟಿಆರ್‌ಎಂ 95 ನೇ ಕ್ರಮಾಂಕದ ಅಧಿಸೂಚನೆ.

8) ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 26 ಗ್ರಾಮಗಳ 1993-94ನೇ ಸಾಲಿನ ಭೂ ಕಂದಾಯ 42,965-39 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 27.9.1995 ರಂದು ಹೊರಡಿಸಲಾದ ಆರ್‌ಡಿ 5 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

9) ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ 62 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 1,07, 448-59 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 29.9.1995 ರಂದು ಹೊರಡಿಸಲಾದ ಆರ್‌ಡಿ 160 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

10) ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ 133 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 1,44,339-04 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 7.10.1995 ರಂದು ಹೊರಡಿಸಲಾದ ಆರ್‌ಡಿ 116 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

11) ರಾಯಚೂರು ಜಿಲ್ಲೆಯ ರಾಯಚೂರು ತಾಲ್ಲೂಕಿನ 65 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 76,874-84ರೂ.ಗಳನ್ನು ಮನ್ನಾ . ಮಾಡುವ ಸಂಬಂಧದಲ್ಲಿ ದಿನಾಂಕ 7.10.1995 ರಂದು ಹೊರಡಿಸಲಾದ ಆರ್‌ಡಿ 189 ಟಿಆರ್‌ಎಂ 95 ನೇ ಕ್ರಮಾಂಕದ ಅಧಿಸೂಚನೆ.

12) ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ 28 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 18,041-94 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 30.10.1995 ರಂದು ಹೊರಡಿಸಲಾದ ಆರಿಡಿ 190 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

13) ವಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ 10 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 25,621-20 ರೂ.ಗಳನ್ನು ಮನ್ನಾ ಮಾಡು ಸಂಬಂಧದಲ್ಲಿ ದಿನಾಂಕ 15.11.1995 ರಂದು ಹೊರಡಿಸಲಾದ ಆರ್‌ಡಿ 204 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

14) ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ 50 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 52,522-50 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 22.11.1995 ರಂದು ಹೊರಡಿಸಲಾದ ಆರ್‌ಡಿ 228 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

15) ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ 6 ಗ್ರಾಮಗಳ 1989-90ನೇ ಸಾಲಿನ ಭೂ ಕಂದಾಯ 6,463-39 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 28.11.1995 ರಂದು ಹೊರಡಿಸಲಾದ ಆರ್‌ಡಿ 241 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

16) ವಿಜಾಪುರ ಜಿಲ್ಲೆಯ ವಿಜಾಪುರ ತಾಲ್ಲೂಕಿನ 53 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 59,357-02 ರೂ.ಗಳನ್ನು ಮನ್ನಾ ಮಾಡುವ

ಸಂಬಂಧದಲ್ಲಿ ದಿನಾಂಕ 30.11.1995 ರಂದು ಹೊರಡಿಸಲಾದ ಆರ್‌ಡಿ 212 ಟಿಆರ್‌ಎಂ 95 ನೇ ಕ್ರಮಾಂಕದ ಅಧಿಸೂಚನೆ.

17) ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ 68 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 37,266-29 ರೂ.ಗಳನ್ನು ಮನ್ನಾ ಮಡುವ ಸಂಬಂಧದಲ್ಲಿ ದಿನಾಂಕ 10.11.1996 ರಂದು ಹೊರಡಿಸಲಾದ ಆರ್‌ಡಿ 257 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

18) ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲುಕಿನ 28 ಗ್ರಾಮಗಳ 1994-95 ನೇ ಸಾಲಿನ ಭೂ ಕಂದಾಯ 43,236-30 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 23.11.1996 ರಂದು ಹೊರಡಿಸಲಾದ ಆರ್‌ಡಿ 259 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

19) ವಿಜಾಪುರ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ 36 ಗ್ರಾಮಗಳ 1994-95 ನೇ ಸಾಲಿನ ಭೂ ಕಂದಾಯ 28,394-21 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 24.1.1996 ರಂದು ಹೊರಡಿಸಲಾದ ಆರ್‌ಡಿ 261 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

20) ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ 15 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 15,296-98 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 27.1.1996 ರಂದು ಹೊರಡಿಸಲಾದ ಆರ್‌ಡಿ 273 ಟಿಆರ್‌ಎಂ 95 ನೇ ಕ್ರಮಾಂಕದ ಅಧಿಸೂಚನೆ.

21) ವಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ 51 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 40,790-07 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 29.1.1996 ರಂದು ಹೊರಡಿಸಲಾದ ಆರ್‌ಡಿ 254 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

22) ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ 28 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 7.911-32 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 29.1.1996 ರಂದು ಹೊರಡಿಸಲಾದ ಆರ್‌ಡಿ 275 ಟಿಆರಿಎಂ 95 ನೇ ಕ್ರಮಾಂಕದ ಅಧಿಸೂಚನೆ.

23) ವಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ 62 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 65,734-52 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಲಿ ದಿನಾಂಕ 30.1.1996 ರಂದು ಹೊರಡಿಸಲಾದ ಆರ್‌ಡಿ 260 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

24) ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 96 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 1,43,758-77 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 1.2.1996 ರಂದು ಹೊರಡಿಸಲಾದ ಆರ್‌ಡಿ 274 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

1957ನೇ ಇಸವಿಯ ಕರ್ನಾಟಕ ಮುದ್ರಾಂಕ ಅಧಿನಿಯಮದ 9(2) ನೇ ಕಲುಮಿನ ಮೇರೆಗೆ.

25) ಶ್ರೀ ಸಂಗಮೇಶ್ವರ ಕೃಷಿ ಅಭಿವೃದ್ಧಿ ಸಂಘ, ನೀವರಗಿ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ ಇದರ ಸದಸ್ಯರುಗಳು ಏತ ನೀರಾವರಿಗಾಗಿ ಕೆನರಾ ಬ್ಯಾಂಕಿನಿಂದ ಪಡೆಯುವ ಸಾಲಕ್ಕೆ ಬರೆದುಕೊಡುವ ಆಧಾರ ಪತ್ರಗಳಿಗೆ

ಮುದ್ರಾಂಕ ಶುಲ್ಕವನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 28.7.1995 ರಂದು ಹೊರಡಿಸಲಾದ ಆರ್‌ಡಿ 255 ಮುನೋಮು 95ರ ಆದೇಶ.

26) ಭಾರತ ಸರ್ಕಾರದ ರಾಷ್ಟ್ರೀಯ ಆರೋಗ್ಯ ಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಮಾನಸಿಕ ಆರೋಗ್ಯ ಸಂಸ್ಥೆಯ ಅಧೀನದಲ್ಲಿದ್ದು, ನಿಮ್ಹಾನ್ಸ್ ಒಡೆತನಕ್ಕೆ ಸೇರಿದ 21.02 ಎಕರೆ ಆಸ್ತಿ ವರ್ಗಾವಣೆಯ ದಸ್ತಾವೇಜುಗಳ ಸಂಬಂಧದಲ್ಲಿ ತಗಲುವ ಮುದ್ರಾಂಕ ಶುಲ್ಕ ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 14.8.1995 ರಲ್ಲಿ ಹೊರಡಿಸಲಾದ ಆರ್‌ಡಿ 240 ಮುನೋಮು 95ರ ಆದೇಶ.

27) 44.35 ಕೋಟಿ ರೂ.ಗಳ ಯೋಜನಾ ಸಾಲವನ್ನು ತೆಗೆಯಲು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಭಾರತೀಯ ಜೀವವಿಮಾ ನಿಗಮಕ್ಕೆ ಬರೆದುಕೊಡುವ ಆಧಾರ ಪತ್ರಕ್ಕೆ ತಗಲುವ ಮುದ್ರಾಂಕ ಶುಲ್ಕ ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 13.3.1995ರಂದು ಹೊರಡಿಸಲಾದ ಆರ್‌ಡಿ 511 ಮುನೋಮು 95ರ ಆದೇಶಗಳನ್ನು ಮಂಡಿಸುತ್ತಿದ್ದೇನೆ

IV ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂ.ರಾ. ಸಚಿವರು) (ಶ್ರೀ ಡಿ. ಮಂಜುನಾಥ್ (ಪ್ರೌಢ ಶಿಕ್ಷಣ ಮಂತ್ರಿ) ಅವರ : ಪರವಾಗಿ, ಮಾನ್ಯ ಅಧ್ಯಕ್ಷರೇ, 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 45(2) ನೇ ಕಲಮಿನ ಮೇರೆಗೆ.

1) 1993-94ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯಗಳ ವಾರ್ಷಿಕ ವರದಿ

2) 1993-94ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ.

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 42(3) ನೇ ಕಲಮಿನ ಮೇರೆಗೆ.

3) 1993-94ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ ಲೆಕ್ಕಪತ್ರಗಳನ್ನು ಮಂಡಿಸುತ್ತಿದ್ದೇನೆ.

V. ಶ್ರೀ ಎಂ.ಪಿ. ಪ್ರಕಾಶ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ): ಮಾನ್ಯ ಅಧ್ಯಕ್ಷರೇ ಭಾರತ ಸಂವಿಧಾನದ 213(2) (ಎ) ಅನುಚ್ಛೇದದ ಮೇರೆಗೆ.

1) 1996ನೇ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ಸಂಖ್ಯೆ 2ರ ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 5.2.1996ರಂದು ಹೊರಡಿಸಲಾದ ಎಲ್‌ಡಬ್ಲ್ಯೂ 39 ಎಲ್‌ಜಿಎನ್ 95ರ ಅಧಿಸೂಚನೆ.

1993ನೇ ಇಸವಿ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 320ನೇ ಕಲಮಿನ ಮೇರೆಗೆ.

2) ಕರ್ನಾಟಕ ಪಂಚಾಯತ್‌ರಾಜ್ (ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆ) ನಿಯಮಗಳು 1935ರ ಬಗ್ಗೆ ದಿನಾಂಕ 22.6.1995 ರಂದು ಹೊರಡಿಸಲಾದ ಗ್ರಾ ಅಪ 1206 ಜಿಪಸ 94ರ ಅಧಿಸೂಚನೆ.

3) ಕರ್ನಾಟಕ ಪಂಚಾಯತ್‌ರಾಜ್ (ಗ್ರಾಮ ಪಂಚಾಯಿತಿ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು 1994ರ ಬಗ್ಗೆ ದಿನಾಂಕ 7.9.1995 ರಂದು ಹೊರಡಿಸಲಾದ ಗ್ರಾಅಪ 950 ಜಿಪಸ 94ರ ಅಧಿಸೂಚನೆ.

4) ಕರ್ನಾಟಕ ಪಂಚಾಚ್‌ರಾಜ್ (ಜಿಲ್ಲಾ ಪಂಚಾಯತ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸಂಬಳ ಮತ್ತು ಇತರೆ ಭತ್ಯೆಗಳು) ನಿಯಮಗಳು 1995ರ

ಬಗ್ಗೆ ದಿನಾಂಕ 18.11.1995 ರಂದು ಹೊರಡಿಸಲಾದ ಗ್ರಾಅಪ 907 ಜಿಪಸ 94ರ ಅಧಿಸೂಚನೆ.

5) ಕರ್ನಾಟಕ ಪಂಚಾಯತ್‌ರಾಜ್ (ತಾಲ್ಲೂಕು ಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸಂಬಳ ಹಾಗೂ ಭತ್ಯೆಗಳು) ನಿಯಮಗಳು 1995ರ ಬಗ್ಗೆ ದಿನಾಂಕ 13.12.1995 ರಂದು ಹೊರಡಿಸಲಾದ ಗ್ರಾಅಪ 905 ಜಿಪಸ 94ರ ಅಧಿಸೂಚನೆ.

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 390(5)ನೇ ಕಲಮಿನ ಮೇರೆಗೆ.

6) 1993-94ನೇ ಸಾಲಿನ ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ ಆಡಳಿತ ವರದಿ (ಜ್ಞಾಪನಾ ಪತ್ರದೊಂದಿಗೆ).

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262(3)ನೇ ಕಲಮಿನ ಮೇರೆಗೆ.

7) 1993-94ನೇ ಸಾಲಿನ ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ.

8) 1993-94ನೇ ಸಾಲಿನ ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ.

9) 1992-93ನೇ ಸಾಲಿನ ಬಳ್ಳಾರಿ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕಪರಿಶೋಧನಾ ವರದಿಗಳು ಮಂಡಿಸುತ್ತಿದ್ದೇನೆ

VI ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರ ಸಚಿವರು) (ಶ್ರೀ ಸಿದ್ದರಾಮಯ್ಯ (ಹಣಕಾಸು ಹಾಗೂ ಯೋಜನಾ ಮಂತ್ರಿ) ಅವರ ಪರವಾಗಿ ಮಾನ್ಯ ಅಧ್ಯಕ್ಷರೇ 1957ನೇ ಇಸವಿ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ 39ನೇ ಕಲಮಿನ ಮೇರೆಗೆ.

1) 'ಮರ ಬೆಳೆಯುವ ಸಹಕಾರ ಸಂಘ' ಎಂಬ ಪದದ ಬದಲಿಗೆ ರಾಷ್ಟ್ರೀಯ ಮರ ಬೆಳೆಯುವ ಸಹಕಾರ ಒಕ್ಕೂಟ ಎಂದು ಸೇರಿಸತಕ್ಕದ್ದು ಎಂಬುದರ ಸಂಬಂಧವಾಗಿ ದಿನಾಂಕ 11.10.1995 ರಂದು ಹೊರಡಿಸಲಾದ ಎಫ್‌ಡಿ 88 ಸಿಎಸ್‌ಎಲ್ 94ರ ಅಧಿಸೂಚನೆ.

2) ಕಾರ್ಖಾನೆ ಘಟಕಗಳನ್ನು ವಿಸ್ತರಿಸಲು ಅಭಿವೃದ್ಧಿಪಡಿಸಲು ಹೂಡುವ ಬಂಡವಾಳಕ್ಕೆ ಮಾರಾಟ ತೆರಿಗೆ ರಿಯಾಯಿತಿ ಸಂಬಂಧದಲ್ಲಿ ದಿನಾಂಕ 11.10.1995 ರಂದು ಹೊರಡಿಸಲಾದ ಎಫ್‌ಡಿ 1 ಸಿಎಸ್‌ಎಲ್ 95(1)ರ ಅಧಿಸೂಚನೆ.

3) ಕಾರ್ಖಾನೆ ಘಟಕಗಳನ್ನು ವಿಸ್ತರಿಸಲು ಅಭಿವೃದ್ಧಿಪಡಿಸಲು ಹೂಡುವ ಬಂಡವಾಳಕ್ಕೆ ಮಾರಾಟ ತೆರಿಗೆಯನ್ನು ಮುಂದೂಡಿರುವ ಸಂಬಂಧ, ದಿನಾಂಕ 11.10.1995 ರಂದು ಹೊರಡಿಸಲಾದ ಎಫ್‌ಡಿ 1 ಸಿಎಸ್‌ಎಲ್ 95(2)ರ ಅಧಿಸೂಚನೆ.

4) ತ್ರಿಚಕ್ರ ವಾಹನಗಳನ್ನು ಮಾರಾಟ ಮಾಡುವ ವ್ಯಾಪಾರಿಯು ತೆರಬೇಕಾದ ಮಾರಾಟ ತೆರಿಗೆಯನ್ನು ಶೇ.6ರಷ್ಟು ಇಳಿಸಿರುವ ಸಂಬಂಧ, ದಿನಾಂಕ 31.10.1995 ರಂದು ಹೊರಡಿಸಲಾದ ಎಫ್‌ಡಿ 139 ಸಿಎಸ್‌ಎಲ್ 95(1)ರ ಅಧಿಸೂಚನೆ.

5) ಡೀಸಲ್, ಫರ್‌ನೆಸ್ ಆಯಿಲು ಮತ್ತು ಲೋ ಸಲ್ಫರ್ ಹೆವಿಸ್ಟಾಕ್‌ಗಳನ್ನು ರಾಜ್ಯದ ಕಾರ್ಖಾನೆಗಳಿಗೆ ಮಾರಾಟ ಮಾಡುವ ವ್ಯಾಪಾರಿಯು ತೆರಬೇಕಾದ ಮಾರಾಟ ತೆರಿಗೆ ವಿನಾಯಿತಿ ಬಗ್ಗೆ ದಿನಾಂಕ 3.2.1996ರಂದು ಹೊರಡಿಸಲಾದ

ಎಫ್‌ಡಿ 196 ಸಿಎಸ್‌ಎಲ್ 95ರ ಅಧಿಸೂಚನೆ. 1979ನೇ ಇಸವಿ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಅಧಿನಿಯಮ 30(5)ನೇ ಕಲಮಿನ ಮೇರೆಗೆ.

6) ಯಂತ್ರಗಳು ಮತ್ತು ಅದರ ಭಾಗಗಳು ಸ್ಥಳೀಯ ಪ್ರದೇಶಕ್ಕೆ ತಲುಪಿದಾಗ ತೆರಿಗೆ ವಿನಾಯಿತಿಯನ್ನು ನೀಡುವ ಬಗ್ಗೆ ದಿನಾಂಕ 21.9.1995 ರಂದು ಹೊರಡಿಸಲಾದ ಎಫ್‌ಡಿ 11 ಸಿಇಟಿ 93ರ ಅಧಿಸೂಚನೆ.

1951ರ ರಾಜ್ಯ ಹಣಕಾಸು ಸಂಸ್ಥೆಗಳ ಅಧಿನಿಯಮದ 38(3)ನೇ ಕಲಮಿನ ಮೇರೆಗೆ.

7) 1994-95ನೇ ಸಾಲಿನ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 36ನೇ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

VII. ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿ) : ಮಾನ್ಯ ಅಧ್ಯಕ್ಷರೇ.

1) 1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರಗೆ.

1) 1994-95ನೇ ಸಾಲಿನ ಮೈಸೂರು ಪೇಪರ್ ಮಿಲ್ಸ್ ನಿಯಮಿತದ 60ನೇ ವಾರ್ಷಿಕ ವರದಿ.

2) 1994-95ನೇ ಸಾಲಿನ ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ನಿಯಮಿತದ 31ನೇ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳು.

3) 1994-95ನೇ ಸಾಲಿನ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 49 ನೇ ವಾರ್ಷಿಕ ವರದಿ.

4) 1994-95ನೇ ಸಾಲಿನ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ 29ನೇ ವಾರ್ಷಿಕ ವರದಿ.

5) 1994-95ನೇ ಸಾಲಿನ ಮಾರ್ಕೆಟಿಂಗ ಕನ್ಸಲ್ಟೆಂಟ್ಸ್ ಮತ್ತು ಏಜೆನ್ಸೀಸ್ ನಿಯಮಿತದ 23ನೇ ವಾರ್ಷಿಕ ವರದಿ.

6) 1994-95ನೇ ಸಾಲಿನ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ನಿಯಮಿತದ 34ನೇ ವಾರ್ಷಿಕ ವರದಿ.

7) 1994-95ನೇ ಸಾಲಿನ ಚಾಮುಂಡಿ ಮೆಶಿನ ಟೂಲ್ಸ್ ನಿಯಮಿತದ 19ನೇ ವಾರ್ಷಿಕ ವರದಿ.

8) 1994-95ನೇ ಸಾಗಿನ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಹಾಗೂ ಅಭಿವೃದ್ಧಿ ನಿಗಮ ನಿಯಮಿತದ 31ನೇ ವಾರ್ಷಿಕ ವರದಿ.

9) 1994-95ನೇ ಸಾಲಿನ ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತದ 59ನೇ ವಾರ್ಷಿಕ ವರದಿ.

10) 1994-95ನೇ ಸಾಲಿನ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ 15ನೇ ವಾರ್ಷಿಕ ವರಧಿ.

11) 1994-95ನೇ ಸಾಲಿನ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ ನಿಯಮಿತದ 50ನೇ ವಾರ್ಷಿಕ ವರದಿ.

12) 1994-95ನೇ ಸಾಲಿನ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 10ನೇ ವಾರ್ಷಿಕ ವರದಿ.

13) 1994-95ನೇ ಸಾಲಿನ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 19ನೇ ವಾರ್ಷಿಕ ವರದಿ.

14) 1994-95ನೇ ಸಾಲಿನ ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ಸ್ ನಿಯಮಿತದ 35ನೇ ವಾರ್ಷಿಕ ವರದಿ..

15) 1994-95ನೇ ಸಾಲಿನ ಕರ್ನಾಟಕ ಇಂಪ್ಲಿಮೆಂಟ್ಸ್ ಮತ್ತು ಮೆಶಿನರೀಸ್ ಕಂಪನಿ ನಿಯಮಿತದ 20ನೇ ವಾರ್ಷಿಕ ವರದಿ.

16) 1992-93ನೇ ಸಾಲಿನ ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 17ನೇ ವಾರ್ಷಿಕ ವರದಿ.

17) 1994-95ನೇ ಸಾಲಿನ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 15ನೇ ವಾರ್ಷಿಕ ವರದಿ (ವಿಮರ್ಶಾತ್ಮಕ ಟಿಪ್ಪಣಿಯೊಡನೆ)

18) 1994-95ನೇ ಸಾಲಿನ ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತದ 18ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

VIII ಶ್ರೀ ಪಿ.ಜಿ.ಆರ್. ಸಿಂಧ್ಯ (ಒಳಾಡಳಿತ ಮಂತ್ರಿ) : ಮಾನ್ಯ ಅಧ್ಯಕ್ಷರೇ. 1964ನೇ ಇಸವಿ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 20ನೇ ಕಲಮಿನ ಮೇರೆಗೆ.

1) ಲಮ್ರಾ ಸಾಂಸ್ಕೃತಿಕ ಮತ್ತು ಕಲ್ಯಾಣ ಸಂಸ್ಥೆ (ರಿ), ದಾವಣಗೆರೆ ಇವರು ಮಕ್ಕಳ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಬಗ್ಗೆ ದಿನಾಂಕ 16 ನೇ ನವೆಂಬರ್ 1995 ರಂದು ಹೊರಡಿಸಲಾದ ಹೆಚ್‌ಡಿ 88 ಸಿಎನ್‌ಎ 95ನೇ ಕ್ರಮಾಂಕದ ಅಧಿಸೂಚನೆ.

2) ಶ್ರೀ ಶಂಕರಪ್ಪ ಮುದಿಯಪ್ಪ ನಾಗನೂರು ರವರು ನಿರ್ಮಿಸಲಿರುವ ಚಿತ್ರಮಂದಿರಕ್ಕೆ ನೀಡಿದ್ದ ನಿರಾಕ್ಷೇಪಣಾ ಪತ್ರದ ಅವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸಿರುವ ಬಗ್ಗೆ ದಿನಾಂಕ 2.1.1996 ರಂದು ಹೊರಡಿಸಲಾದ ಹೆಚ್‌ಡಿ 44 ಸಿಎನ್‌ಎ 95ನೇ ಕ್ರಮಾಂಕದ ಅಧಿಸೂಚನೆ.

3) ನ್ಯಾಷನಲ್ ಸೆಂಟರ್ ಆಫ್ ಫಿಲಂಸ್ ಫಾರ್ ಚಿಲ್ಡ್ರನ್ಸ್ ಅಂಡ್ ಯಂಗ್ ಪೀಪಲ್ ರವರು ಕೋಲಾರ ಮೈಸೂರು ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಮಕ್ಕಳ ಚಿತ್ರವನ್ನು ಪ್ರದರ್ಶಿಸಲು ವಿನಾಯಿತಿ ನೀಡಿರುವ ಬಗ್ಗೆ ದಿನಾಂಕ 27.7.1995 ರಂದು ಹೊರಡಿಸಲಾದ ಹೆಚ್‌ಡಿ 52 ಸಿಎನ್‌ಎ 95ನೇ ಕ್ರಮಾನೌಂಕದ ಆದೇಶ.

4) ನ್ಯಾಷನಲ್ ಸೆಂಟರ್ ಆಫ್‌ಫಿಲಂಸ್ ಚಿಲ್ಡ್ರನ್ಸ್ ಅಂಡ್ ಯಂಗ್ ಪೀಪಲ್‌ರವರು ತುಮಕೂರು ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಕ್ಕಳ ಚಿತ್ರವನ್ನು ಪ್ರದರ್ಶಿಸಲು ವಿನಾಯಿತಿ ನೀಡಿರುವ ಬಗ್ಗೆ ದಿನಾಂಕ 3.11.1995 ರಂದು ಹೊರಡಿಸಲಾದ ಹೆಚ್‌ಡಿ 52 ಸಿಎನ್‌ಎ 95ನೇ ಕ್ರಮಾಂಕದ ಆದೇಶ.

5) ಜಾಲಹಳ್ಳಿಯಲ್ಲಿರುವ ಭಾರತ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘದವರು ತಮ್ಮ ಸಭಾಂಗಣದಲ್ಲಿ 35 ಎಂಎಂ ಚಲನಚಿತ್ರವನ್ನು ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ 8.11.1995 ರಂದು ಹೊರಡಿಸಲಾದ ಹೆಚ್‌ಡಿ 92 ಸಿಎನ್‌ಎ 95ನೇ ಕ್ರಮಾಂಕದ ಆದೇಶ

6) ರಾಯಚೂರಿನ ಪೋಲೀಸ್ ಕೇಂದ್ರ ಸ್ಥಾನದ ಬಯಲು ಸಭಾಂಗಣದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ 16.1.1996 ರಂದು ಹೊರಡಿಸಲಾದ ಹೆಚ್‌ಡಿ 119 ಸಿಎನ್‌ಎ 95ನೇ ಕ್ರಮಾಂಕದ ಆದೇಶಗಳನ್ನು ಮಂಡಿಸುತ್ತಿದ್ದೇನೆ

IX. ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮಂತ್ರಿ) : ಮಾನ್ಯ ಅಧ್ಯಕ್ಷರೆ 1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮದ 48(5)ನೇ (ವಾರ್ಷಿಕ ವರದಿಗಳು) ಹಾಗೂ 49ನೇ (ಲೆಕ್ಕಪರಿಶೋಧನಾ ವರದಿಗಳು ಕಲಮುಗಳ ಮೇರೆಗೆ.

1) 1988-89, 1989-90, 1990-91, 1991-92,1992-93 ಹಾಗೂ 1993-94ನೆ ಸಾಲುಗಳ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು.
2) 1986-87, 1987-88, 1990-91, 1991-92, 1992-93, 1993-94 . ಹಾಗು 1994Ë95ನೇ ಸಾಲುಗಳ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು.
3) 1988-89, 1989-90, 1990-91 ಹಾಗೂ 1994-95ನೇ ಸಾಲಿನ ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಳಿತ ವರದಿಗಳು.
4) 1994-95ನೇ ಸಾಲಿನ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ.
5) 1994-95ನೇ ಸಾಲಿನ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ.
6) 1994-95ನೇ ಸಾಲಿನ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ.
7) 1993-94 ಹಾಗೂ 1994-95ನೇ ಸಾಲುಗಳ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣಾ ವರದಿಗಳು.
8) 1986-87, 1987-88 ಹಾಗೂ 1994-95ನೇ ಸಾಲುಗಳ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಗಳು.
9) 1994-95ನೇ ಸಾಲಿನ ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.
10) 1994-95ನೇ ಸಾಲಿನ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.
11) 1992-93ನೇ ಸಾಲಿನ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.,
12) 1993-94ನೇ ಸಾಲಿನ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಹಾಗೂ ಲೆಕ್ಕ ಪರಿಶೋಧನಾ ವರದಿಗಳು.
13) 1991-92, 1992-93ಹಾಗೂ 1993-94ನೇ ಸಾಲುಗಳು ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು.
14) 1987-88, 1988-89, 1989-90 ಹಾಗೂ 1990-91ನೇ ಸಾಲುಗಳ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು ಹಾಗೂ 199394ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
15) 1994-95ನೇ ಕೆಜಿಎಫ್,. ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ.
16) 1986-87, 1987-88, 1988-89 ಹಾಗೂ 1989-90 ಹಾಗೂ 1994-95ನೇ ಸಾಲುಗಳ ತುಮಾಕೂರು ನಗರಾಭಿವೃದ್ಧಿ ಪ್ರಾಧಿಕಾರದ ವರದಿಗಳು ಹಾಗೂ

1985-86, 1986-87, 1987–88 ಹಾಗೂ 1994-95ನೇ ಸಾಲುಗಳ ಲೆಕ್ಕಪರಿಶೋಧನಾ ವರದಿಗಳು.

17) 1989-90, 1990-91 ಹಾಗೂ 1993-94ನೇ ಸಾಲುಗಳ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಗಳು.

18) 1988-89, 1989-90, 1990-91, 1991-92, 1992-93, 1993-94 ಹಾಗೂ 1994-95ನೇ ಸಾಲುಗಳ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಗಳು.

19) 1994-95ನೇ ಸಾಲಿನ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ ಹಾಗೂ ಲೆಕ್ಕ ಪರಶೋಧನಾ ವರದಿಗಳು.,

20) 1994-95ನೇ ಸಾಲಿನ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ ಹಾಗೂ ಲೆಕ್ಕ ಪರಿಶೋಧನಾ ವರದಿಗಳು.

21) 1988-89, 1989-90 ಹಾಗೂ 1990-91ನೇ ಸಾಲುಗಳ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು ಹಾಗೂ 1988-89, 1989-90 ಹಾಗೂ 1990-91ನೇ ಸಾಲುಗಳ ಲೆಕ್ಕಪರಿಶೋಧನಾ ವರದಿಗಳು.

22) 1994-95ನೇ ಸಾಲಿನ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿಗಳು,.

23) 1988-89, 1989-90, 1990-91, 1991-92, 1992-93, 1993-94 ಹಾಗೂ 1994-95ನೇ ಸಾಲುಗಳ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು.

24) 1994-95ನೇ ಸಾಲಿನ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪಿರಶೋಧನಾ ವರದಿ.

25) 1995-96ನೇ ಸಾಲಿನ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ.

26) 1994-95ನೇ ಸಾಲಿನ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಹಾಗೂ ಲೆಕ್ಕ ಪಿರಶೋಧನಾ ವರದಿಗಳು.

27) 1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮದ 25ನೇ ಕಲಮಿನ ಮೇರೆಗೆ

27) 1994-95ನೇ ಸಾಲಿನ ಅಚ್ಚುಕಟ್ಟು ಪ್ರಾದೇಶಾಭಿವೃದ್ಧಿ ಪ್ರಾಧಿಕಾರ, ತುಂಗಭದ್ರಾ ಯೋಜನೆಯ ವಾರ್ಷಿಕ ವರದಿ.

28) 1994-95ನೇ ಸಾಲಿನ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳ ವಾರ್ಷಿಕ ವರದಿ.

29) 1994-95ನೇ ಸಾಲನ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ವಾರ್ಷಿಕ ಆಡಳಿತ ವರದಿಗಳನ್ನು ಮಂಡಿಸುತ್ತಿದ್ದೇನೆ.

X. ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿ) : ಮಾನ್ಯ ಅಧ್ಯಕ್ಷರೇ,. 1956ರ ಕಂಪನಿಗಳ ಕಾಯ್ದೆಯ 619 ಎ ಕಲಮಿನ ಮೇರೆಗೆ.

1) 1993-94ನೇ ಸಾಲಿನ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 21ನೇ ವಾರ್ಷಿಕ ವರದಿ.

2) 1993-94ನೇ ಸಾಲಿನ ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರಾಡಕಟ್ಸ್ ನಿಯಮಿತದ 21ನ ವಾರ್ಷಿಕ ವರದಿ.

3) 1994-95ನೇ ಸಾಲಿನ ಮೈಸೂರು ಟೊಬ್ಯಾಕೋ ಕಂಪನಿ ನಿಯಮಿತದ 58ನೇ ವಾರ್ಷಿಕ ವರದಿ ಹಾಗೂ ಆಡಿಟೆಡ್ ಲೆಕ್ಕಪತ್ರಗಳು

1963ರ ಕೃಷಿ ವಿಶ್ವವಿದ್ಯಾಲಯಗಳ ಕಾಯ್ದೆಯ 38(3)ನ ಕಲಮಿನ ಮೇರೆಗೆ.

4) 1992-93ನೇ ಹಾಗೂ 1993-94ನೇ ಸಲುಗಳ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಲೆಕ್ಕ ಪರಿಶೋಧನಾ ವರದಿಗೆ ಅನುಸರಣಾ ವರದಿಗಳು.

5) 1994-95ನೇ ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

XI. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ) ಅವರು : 1956 ರ ಕಂಪನಿಗಳ ಕಾಯ್ದೆಯ 619 ಕಲಮಿನ ಮೇರೆಗೆ.

1) 1993-94ನೇ ಸಾಲಿನ ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತದ 28ನೇ ವಾರ್ಷಿಕ ವರದಿ.

2) 1994-95ನೇ ಸಾಲಿನ ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 27ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತಿದ್ದೇನೆ.

XII.ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) (ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿ) ಅವರ ಪರವಾಗಿ ಮಾನ್ಯ ಅಧ್ಯಕ್ಷರೇ. 1956ರ ಕಂಪನಿಗಳ ಕಾಯ್ದೆಯ 619 ಎ ಕಲಮಿನ ಮೇರೆಗೆ.

1993-94ನೇ ಸಾಲಿನ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

XIIIಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) (ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಮಂತ್ರಿ) ಅವರ ಪರವಾಗಿ , ಮಾನ್ಯ ಅಧ್ಯಕ್ಷರೇ 1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

1992-93ನೇ ಸಾಲಿನ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 18ನೇ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಒಂದು ನಿಮಿಷ ನಾಣಯ್ಯನವರೇ, what hurts me also is, both the hon. ministers were here.ಅಂಜೆಂಡ ಸರ್ಕ್ಯುಲೇಟ್ ಆಗಿರುತ್ತದೆ.

Sri M.C. NANAIAH : I entirely agree with you sir. This is a lapse on the part of the ministters. They should have waited on the flooor of the House., I do agree with you.

Mr. SPEAKER : It is not for you to say.

ಶ್ರೀ ಎಂ. ರಾಮದಾಸ್ : ಇವರಿಗೆ ಎಷ್ಟು ಖಾತೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ವಹಿಸಿಕೊಟ್ಟಿದ್ದಾರೆ? ಎಷ್ಟು ಖಾತೆಗಳಿಗೆ ಮಾನ್ಯ ಸಚಿವರು ಮಂತ್ರಿಗಳಾಗಿದ್ದಾರೆ ಎಂದು ನನಗೆ ಬಹಳ ಆಶ್ಚರ್ಯ ಆಗಿದೆ.

ಅಧ್ಯಕ್ಷರು : ಅವರು ಸಂಸದೀಯ ವ್ಯವಹಾರಗಳ ಸಚಿವರು. ಇಡೀ ಸದನದಲ್ಲಿ ಶ್ರೀಮತಿ ಪ್ರಮೀಳಾ ಅವರನ್ನು ಬಿಟ್ಟರೆ ಬೇರೆ ಯಾರಿಗೂ ಅವರ ಬಗ್ಗೆ ಕನಿಕರ ಇಲ್ಲ. ಕ್ಲಾಸ್ ಮೇಟ್ ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವಂತೂ ಈ ಪರಿಸ್ಥಿತಿಗೆ ಅಜಸ್ಟ್ ಆಗುತ್ತೇವೆ ನೀವು ಎಲ್ಲಿ ಇದೇ ವಾತಾವರಣಕ್ಕೆ ಅಜಸ್ಟ್ ಆಗಿ ಬಿಡುತ್ತೀರೋ ಎಂಬ ಭಯ ನಮ್ಮನ್ನು ಕಾಡುತ್ತಿದೆ.

ಅಧ್ಯಕ್ಷರು : ನಾನು ಹೇಳುವ ಒಂದೊಂದು ಮಾತೂ ನೋಡುತ್ತಿದ್ದೀರಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ಅನಿಸತಕ್ಕದ್ದು ಪರಿಸ್ಥಿತಿ ಇರುತ್ತದೆ. ಅವರು ಮುಂದಿಟ್ಟರತಕ್ಕ ಪತ್ರಗಳು, ಪತ್ರಗಳು ಎಂದು ಹೇಳತಕ್ಕದ್ದು. ಅದು ಒಂದು ರೀತಿ ನಾಟಕೀಯವಾಗುತ್ತದೆ. ವಸ್ತುಸ್ಥಿತಿ ಸರಿಯಿಲ್ಲ, ನಿಜವಾಗಿಯೂ ಈ ಸದನಕ್ಕೆ ಒಂದು ಗೌರವ ತರಬೇಕು ಎನ್ನುವುದಾದರೆ, ಇದಕ್ಕೆ ಒಂದು ಮಂತ್ರಿ ಮಂಡಲ ಎಂದು ಇದೆ. ಮಂತ್ರಿಗಳು ಇದ್ದಾರೆ. ಏನಾಗಿದ್ದಾರೆ ಮಂತ್ರಿಗಳು? ಈ ಸದನಕ್ಕೆ ತಿಳಿಸಬೇಕು. ಸುಮ್ಮನೆ ಎಲ್ಲರ ಪರವಾಗಿ ನಾನು ಕಾಗದ ಪತ್ರಗಳನ್ನು ನನ್ನ ಮುಂದಿರುವ, ನನ್ನ ಮುಂದಿರುವ ಎಂದರೆ ಇವರೊಬ್ಬರೇ 12ಪಾತ್ರಗಳನ್ನು ಮಡುವುದುಕ್ಕೆ ಸಾಧ್ಯವೇ? ನಾಣಯ್ಯನವರು ಒಬ್ಬರೇ, 12 ಪಾತ್ರ ಮಾಡುವುದಕ್ಕೆ ಸಾಧ್ಯವೇ? ಇದನ್ನು ಸ್ವಲ್ಪ ತಾವು ನೋಡಬೇಕು. ಇದು ನಾಚಿಕೆಗೇಡು ಆಗುತ್ತದೆ. ಇದು ಒಳ್ಳೆಯ ಸಂಪ್ರದಾಯ ಅಲ್ಲ.

ಅಧ್ಯಕ್ಷರು : ಶ್ರೀ ಎನ್ಎಂ ನಬಿ ಅವರು

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸದಸ್ಯರ ಅನಿಸಿಕೆಗಳನ್ನು ಗಂಭೀರವಾಗಿ ಪರಿಶೀಲನೆ ಮಾಡಿದ್ದೇನೆ. ಮಾನ್ಯ ಸಭಾಧ್ಯಕ್ಷರು ಹೇಳಿರುವುದನ್ನು ನಾವು ಗಮನಿಸಿದ್ದೇವೆ. ಬಹುಶಃ ಕೆಲವು ಸಂದರ್ಭದಲ್ಲಿ ಅನಿವಾರ್ಯವಾಗಿ ಬಂದಿರತಕ್ಕದ್ದರಲ್ಲಿ ಇದು ನಡೆದಿದೆ. ಆದರೆ ಇದು ನಡೆಯದ ಹಾಗೆ ಅವರಿಗೂ ಕೂಡ ನಾವು ತಿಳಿಸಿ, ಈ ಸದನದಲ್ಲಿ ಇರಲಿಕ್ಕೆ ಇರತಕ್ಕ ಕಾರ್ಯಕ್ರಮವನ್ನು ಕೂಡ ನಾವು ಕೈಗೊಳ್ಳುತ್ತೇವೆ.

XIV ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು), (ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಮಂತ್ರಿ) ಅವರ) ಪರವಾಗಿ ಮಾನ್ಯ ಅಧ್ಯಕ್ಷರೇ 1965ನೇ ಇಸವಿ ಕರ್ನಾಟಕ ಅಬಕಾರಿ ಅಧಿನಿಯಮ 71(4) ನೇ ಕಲಮಿನ ಮೇರೆಗೆ.

1) ಕರ್ನಾಟಕ ಅಬಕಾರಿ (ಮರಗಳಿಂದ ಭಟ್ಟಿ ಇಳಿಸುವುದು) ನಿಯಮ 1991ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ 18.12.1995 ರಂದು ಹೊರಡಿಸಲಾದ ಎಫ್‌ಡಿ 2 ಪಿಇಎಸ್ 95ರ ಅಧಿಸೂಚನೆ.

2) ದಿನಾಂಕ 18.12.1995 ರಂದು ಹೊರಡಿಸಲಾದ ಎಫ್‌ಡಿ 2 ಪಿಇಎಸ್ 95ರ ಅಧಿಸೂಚನೆಗೆ ಅಡೆಂಡಮನ್ ಅನ್ನು ದಿನಾಂಕ 9.1.1996ರಂದು ಹೊರಡಿಸಲಾದ ಎಫ್‌ಡಿ 2 ಪಿಇಎಸ್ 95ರ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

XV. ಶ್ರೀ ಎಂ.ಸಿ. ನಾಣಯ್ಯ (ಕಾನೂಮ ಸಚಿವರು) (ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿ) ಅವರ ಪರವಾಗಿ ಮಾನ್ಯ ಅಧ್ಯಕ್ಷರೇ 1957ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ 16(2)ನೇ ಕಲಮಿನ ಮೇರೆಗೆ.

1) ಅಣ್ಣಾ ಟ್ರಾನ್ಸ್ ಪೋರ್ಟ್ ಕಾರ್ಪೋರೇಶನ್, ತಮಿಳುನಾಡು, ಇವರು ಕರ್ನಾಟಕದಲ್ಲಿ ಓಡಾಡುವ ಬಸ್ಸುಗಳಿಗೆ ವಾಹನ ತೆರಿಗೆ ವಿನಾಯಿತಿ ನೀಡುವ ಬಗ್ಗೆ ದಿನಾಂಕ 26.12.1994 ರಂದು ಹೊರಡಿಸಲಾದ ಹೆಚ್‌ಟಿಡಿ 139 ಟಿಎಂಟಿ 94ನೇ ಕ್ರಮಾಂಕದ ಅಧಿಸೂಚನೆ.

2) ಅಣ್ಣಾ ಟ್ರಾನ್ಸ್‌ಪೋರ್ಟ್ ಕಾರ್ಪೋರೇಶನ್, ತಮಿಳುನಾಡು ಇವರು ಕರ್ನಾಟಕದ ಮಹದೇಶ್ವರ ಬೆಟ್ಟಕ್ಕೆ ಓಡಿಸುವ ಬಸ್ಸುಗಳಿಗೆ ವಾಹನ ತೆರಿಗೆ ವಿನಾಯಿತಿ ನೀಡುವ ಬಗ್ಗೆ ದಿನಾಂಕ 7:9 ನೇ ಜನವರಿ 1995 ರಂದು ಹೊರಡಿಸಲಾದ ಹೆಚ್‌ಟಿಡಿ 13ಟಿಎಂಟಿ 94ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

XVI. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) (ಶ್ರೀ ಎನ್.ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿ) ಅವರ) ಪರವಾಗಿ, ಮಾನ್ಯ ಅಧ್ಯಕ್ಷರೇ, 1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

1994-95ನೇ ಸಾಲಿನ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 35ನೇ ವಾರ್ಷಿಕ ವರದಿಯನ್ನು (ವಿಮರ್ಶಾತ್ಮಕ ಟಿಪ್ಪಣಿಯೊಂದಿಗೆ) ಮಂಡಿಸುತ್ತಿದ್ದೇನೆ.

XVII. ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಮಂತ್ರಿ) : ಮಾನ್ಯ ಅಧ್ಯಕ್ಷರೇ 1956ನೇ ಇಸವಿ ಕರ್ನಾಟಕ ಸಹಕಾರ ಸಂಘ ಅಧಿನಿಯಮ 130 ನೇ ಕಲಮಿನ ಮೇರೆಗೆ.

1) 1959ನೇ ಕರ್ನಾಟಕ ಸಹಕಾರ ಸಂಘ ಅಧಿನಿಯಮ 58(ಡಿ) ಕಲಮಿನಲ್ಲಿ ಮಾರ್ಪಾಡು ಮಾಡುವ ಬಗ್ಗೆ ದಿನಾಂಕ 5.8.1995 ರಂದು ಹೊರಡಿಸಲಾದ ಸಿಎಂಡಬ್ಲ್ಯೂ 80 ಸಿಸಿಬಿ 95ರ ಆದೇಶ.

1962ರ ಉಗ್ರಾಣ ನಿಗಮದ ಕಾಯ್ದೆಯ 31(11)ನೇ ಕಲಮಿನ ಮೇರೆಗೆ.

2) 1993-94ನೇ ಸಾಲಿನ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 36ನೇ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರವನ್ನು ಮಂಡಿಸುತ್ತಿದ್ದೇನೆ.

XVIII. ಶ್ರೀ ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ) : ಮಾನ್ಯ ಅಧ್ಯಕ್ಷರೇ 1995ನೇ ಇಸವಿ ಕರ್ನಾಟಕ ಗ್ರಾಹಕ ಹಿತರಕ್ಷಣಾ (ಎರಡನೇ ತಿದ್ದುಪಡಿ) ಅಧಿನಿಯಮ 31(2) ನೇ ಕಲಮಿನ ಮೇರೆಗೆ.

1) ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಪಡೆಯುವ ಸಂಬಳ ಮತ್ತು ಇತರೇ ಭತ್ಯೆಗಳಷ್ಟೇ ರಾಜ್ಯ ಆಯೋಗದ ಅಧ್ಯಕ್ಷರು ಪೂರ್ಣಾವಧಿಯಾಗಿ ನೇಮಕಗೊಂಡಾಗ ಪಡೆಯಬಹುದು ಎಂಬ ಪದದ ಬದಲಾವಣೆಯನ್ನು ಸೇರಿಸುರ ಬಗ್ಗೆ ದಿನಾಂಕ 4.11.1995 ರಂದು ಹೊರಡಿಸಲಾದ ಎಫ್‌ಸಿಎಸ್ 101 ಎಸ್‌ಎಲ್‌ಎಸ್ 95ರ ಅಧಿಸೂಚನೆ.

1956ರ ಕಂಪನಿ ಕಾಯ್ದೆಯ 619ಎ ಕಲಮಿನ ಮೇರೆಗೆ.

1993-94 ಹಾಗೂ 1994-95ನೇ ಸಾಲುಗಳ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 21ನೇ ಹಾಗೂ 22ನೇ ವಾರ್ಷಿಕ ವರದಿ ಹಾಗೂ ವಾರ್ಷಿಕ ಪರಿಶೀಲನಾ ವರದಿಗಳನ್ನು ಮಂಡಿಸುತ್ತಿದ್ದೇನೆ.

XIX. ಶ್ರೀ ಹೆಚ್.ವೈ. ಮೇಟಿ (ಅರಣ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೇ, 1956ರ ಕಂಪನಿ ಕಾಯ್ದೆಯ 619ಎ ಕಲಮಿನ ಮೇರೆಗೆ.

1) 1993-94ನೇ ಸಾಲಿನ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 16ನೇ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಡನೆ)

2) 1994-95ನೇ ಸಾಲಿನ ಕರ್ನಾಟಕರ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 22ನೇ ವಾರ್ಷಿಕ ವರದಿ (ಮೈಸೂರು ಮ್ಯಾಚ್ ಕಂಪನಿ ನಯಮಿತದ ವರದಿಯನ್ನೊಳಗೊಂಡದ)ಗಳನ್ನು ಮಂಡಿಸುತ್ತಿದ್ದೇನೆ.

XX. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೇ 1956ರ ಕಂಪನಿ ಕಾಯ್ದೆಯ 619ಎ ಕಲಮಿನ ಮೇರೆಗೆ.

1) 1988-89 ಹಾಗೂ 1992-93ನೇ ಸಾಲುಗಳ ಕಾವೇರಿ ಜಲಾನಯನ ಏತ ನೀರಾವರಿ ನಿಗಮದ 2 ಹಾಗೂ 6ನೇ ವಾರ್ಷಿಕ ವರದಿಗಳು.

2) 1990-91ನೇ ಸಾಲಿನ ಕೃಷ್ಣ ಜಲಾನಯನ ಏತ ನೀರಾವರಿ ನಿಗಮ ನಿಯಮಿತದ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

XXI. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) (ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಮಂತ್ರಿ) ಅವರ) ಪರವಾಗಿ ಮಾನ್ಯ ಅಧ್ಯಕ್ಷರೇ 1973ರ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಅಧಿನಿಯಮದ 24ನೇ ಕಲಮಿನ ಮೇರೆಗೆ.

1) 1994-95ನೇ ಸಾಲಿನ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ ವಾರ್ಷಿಕ ವರದಿ.

1956ರ ಕಂಪನಿ ಕಾಯ್ದೆಯ 619ಎ ಕಲಮಿನ ಮೇರೆಗೆ.

2) ಕರ್ನಾಟಕ ಮಾಂಸ ಮತ್ತ ಕೋಳಿ ಮಾರಾಟ ನಿಗಮ ನಿಯಮಿತದ 21ನೇ ವಾರ್ಷಿಕ ವರದಿ ಮತ್ತು 31.3.1995ರ ಲೆಕ್ಕಪತ್ರಗಳನ್ನು ಮಂಡಿಸುತ್ತಿದ್ದೇನೆ.

XXII. ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೇ 1962ರ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ 69ನೇ ಕಲಮಿನ ಮೇರೆಗೆ. ಕರ್ನಾಟಕ ಗೃಹ ಮಂಡಳಿಯ 1984-85 ರಿಂದ 1994-95ನೇ ಸಾಲುಗಳವರೆಗಿನ ವಾರ್ಷಿಕ ವರದಿಗಳನ್ನು ಮಂಡಿಸುವುದು.

XXIII. ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕೆ ರಾಜ್ಯ ಮಂತ್ರಿ) ಅವರು : 1956ರ ಕಂಪನಿ ಕಾಯ್ದೆಯ 619ಎ ಕಲಮಿನ ಮೇರೆಗೆ.

31.3.1993 ರಂದು ಅಂತ್ಯಗೊಳ್ಳುವ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 23ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು (ವಿಳಂಬಕ್ಕೆ ಕಾರಣ ಟಿಪ್ಪಣಿಯೊಡನೆ) ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ಸುರೇಶ್ ಕುಮಾರ್ ಅವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ನನ್ನ ಅನುಮತಿ ಕೋರಿದ್ದಾರೆ. ಅದು ಮಾನ್ಯ ಮೆಡಿಕಲ್ ಎಜುಕೇಶನ್ ಮಿನಿಸ್ಟರ್‌ಗೆ ಸಂಬಂಧಪಡುತ್ತದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(2). ಡಾ|| ಶಾಮಲಾ ದೇವಿ ಡೆಂಟಲ್ ಕಾಲೇಜುನಲ್ಲಿ ನಡೆಯುತ್ತಿರುವ ಅವ್ಯವಹಾರ.

ಶ್ರೀ ಎಸ್. ಸುರೇಶ್ ಕುಮಾರ್ : ನವೆಂಬರ್ 3ನೇ ತಾರೀಖು ತಮ್ಮ ಹತ್ತಿರ ಆ ಕಾಲೇಜಿನಲ್ಲಿ ಅನ್ಯಾಯಕ್ಕೆ ಒಳಗಾದ ವಿದ್ಯಾರ್ಥಿಗಳನ್ನು ಮತ್ತು ಪೋಷಕರನ್ನು ಕರೆದುಕೊಂಡು ಬಂದೆ. ಮೂರನೆಯ ದಿವಸ ಈ ಸಂಬಂಧದಲ್ಲಿ ಮಾನ್ಯ ಸಚಿವರನ್ನು ಸಂಪರ್ಕಿಸಿದೆ. 14ನೆಯ ತಾರೀಖು ನವೆಂಬರ್.

ಅಧ್ಯಕ್ಷರು : ಈಗ ಏನಾಗಿದೆ?

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಇದರ ಬಗ್ಗೆ ಅನಿರ್ದಿಷ್ಟ ಕಾಲ ಉಪವಾಸ ಮುಷ್ಕರ ಮಾಡದೆ. ತಾವು ಬಂದಿರಿ ನನಗೆ ಸಮಾಧಾನ ಮಾಡಿದಿರಿ.

ಅಧ್ಯಕ್ಷರು : ಅದೆಲ್ಲಾ ನನಗೆ ಗೊತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಹೇಳಿದಿರಿ. ಇದು ನನ್ನ ಇಶ್ಯೂ. ಇದಕ್ಕೇ ನಾನು ಪರಿಹಾರ ಮಾಡಿಕೊಡುತ್ತೇನೆಂದು ಹೇಳಿದಿರಿ. ಅದರ ನಂತರ ತಮ್ಮ ಕಛೇರಿಯಲ್ಲಿ ಸಚಿವರನ್ನು ಕೂಡ ಕರೆದು ಇದರ ಬಗ್ಗೆ ಸೂಕ್ತವಾಗಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು. ಅವರಿಗೆ ಏನು ಅನ್ಯಾಯ ಮಾಡಿದ್ದಾರೆ, ಅದನ್ನು ಪರಿಹರಿಸಬೇಕು ಎಂದು ಆದೇಶವನ್ನು ಕೊಟ್ಟು ಮ್ಯಾನೇಜ್‌ಮೆಂಟಿಗೆ ಕೂಡ ಎರಡು ವಿಚಾರಗಳನ್ನು ಹೇಳಿದಿರಿ.

ಇದುವರೆವಿಗೂ ಕೂಡ ಏನೂ ಆಗಿದೆ, ವಿದ್ಯಾರ್ಥಿಗಳಿಗೆ ಅಡ್ಮಿಷನ್ ಟಿಕೇಟ್ ಕೊಡದಿದ್ದರಿಂದ ಅವರು ಹೈಕೋರ್ಟಿಗೆ ಹೋಗಿ ಮಧ್ಯಂತರ ಆದೇಶ ತೆಗೆದುಕೊಂಡು ಬಂದು ಇವೊತ್ತು ಪರೀಕ್ಷೆಗೆ ಕುಳಿತುಕೊಳ್ಳುವಂಥ ಪರಿಸ್ಥಿತಿ ಇದೆ. ವಿದ್ಯಾರ್ಥಿಗಳ ಒಳಿತಗೋಸ್ಕರ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಉತ್ತರ ನೀಡಬೇಕು.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಮಗೂ ಕೂಡ ಈ ವಿಷಯವಾಗಿ ಸಾಕಷ್ಟು ಗೊತ್ತಿದೆ. ತಮ್ಮ ಅಧ್ಯಕ್ಷತೆಯಲ್ಲೇ ಇವೊತ್ತು ಕುರಿತು ಸಭೆ ನಡೆಸಿ, ಸಭೆಯಲ್ಲಿ ಸಂಬಂಧಪಟ್ಟ ಕಾರ್ಯದರ್ಶಿ, ನಿರ್ದೇಶಕರು ಮತ್ತು ನಾವು-ನೀವು ಕುಳಿತು ವಿಚಾರಣೆ ಮಾಡಿ ಆದಷ್ಟು ಬೇಗ ಸೂಕ್ತ ಕ್ರಮ ತೆಗೆದುಕೊಂಡು ಕಂಡುಕೊಂಡ ಪರಿಹಾರವನ್ನು ತಿಳಿಸುತ್ತೇನೆ. ಮಾನ್ಯ ಸದಸ್ಯರಿಗೆ ಹೇಳುವುದಾದರೆ, ವೈದ್ಯಕೀಯ ಶಿಕ್ಷಣ ಮಂಡಳಿಯಲ್ಲಿ ನಾನೂ ಕೂಡ ಒಬ್ಬ ನಿರ್ದೇಶಕನಾಗಿದ್ದು, ವೈದ್ಯಕೀಯ ಶಿಕ್ಷಣ ನಿರ್ದೇಶಕರ ಬಗ್ಗೆ ವಿಚಾರಣೆಗೆ ಕಳುಹಿಸಿಕೊಡಬೇಕೆಂದು ಕಾರ್ಯದರ್ಶಿಯವರು ಕೇಳಿದಾಗ ನಾನೂ ಕೂಡ ಇದರಲ್ಲಿ ಬದಲಾವಣೆ ಮಾಡಿ ಜಂಟಿ ನಿರ್ದೇಶಕರು, ದಂತ ವೈದ್ಯಕೀಯ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರು ಹಾಗೂ ಮತ್ತೊಬ್ಬರನ್ನೊಳಗೊಂಡಂತೆ ರಚಿಸಿರುವ ಸಮಿತಿಯನ್ನು ಈಗಾಗಲೇ ಇನ್ಸ್‌ಪೆಕ್ಷನ್ ರಿಪೋರ್ಟ್ ಬಂದಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಆದರೂ ಈ ಕುರಿತು ತಿಳಿದುಕೊಂಡು ತಕ್ಷಣ ಆಜ್ಞೆ ಕಳುಹಿಸುತ್ತೇನೆ.

ಅಧ್ಯಕ್ಷರು : ಇಲ್ಲಿ ಏನಾಗಿದೆಯೆಂದರೆ, ನಿಮ್ಮ ಸಮಿತಿಯನ್ನು ಹೋಗಿದ್ದರಲ್ಲ, ಅವರೂ ಕೂಡ ಇವರ ಜೊತೆ ಶಾಮೀಲಾಗಿದ್ದಾರೆ. ಆ ಕಾಲೇಜಿನ ವಿದ್ಯಾರ್ಥಿಗಳು ಮಾರನೆಯ ದಿವಸ ಬಂದು ಹೇಳಿದಂತೆ ಅವರಿಗೆ ತಿಳಿಸಲಾರದಂತೆ ಸಮಯ ನಿಗದಿಪಡಿಸಲಾಗಿದೆಯೊಂದರು ಅವರು ಎಂತಹುದೋ ಅಸೋಸಿಯೇಷನ್ ಮಾಡಿಕೊಂಡಿದ್ದು, ಆ ಅಸೋಸಿಯೇಷನ್ ಒಂದಾಗಬೇಕು,. ಮುಂತಾದ ವಿಚಾರಗಳಿವೆ. ಆ ವಿದ್ಯಾರ್ಥಿಗಳ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ. ನಮಗೂ ಮಕ್ಕಳಿರುವುದರಿಂದ ತಾವು ದಯಮಾಡಿ ಇದರ ಬಗ್ಗೆ ಚರ್ಚಿಸದೆ ಅನಂತರ ಹತ್ತು ನಿಮಿಷ ಕೊಠಡಿಗೆ ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರನ್ನು ಕರೆದು ಸಭೆಯಲ್ಲಿ ಕುಳಿತು ಮಾತನಾಡಿ. ನಾನು ಸುರೇಶ್‌ಕುಮಾರ್‌ರವರನ್ನು ಕರೆಯುತ್ತೇನೆ. ವಿದ್ಯಾರ್ಥಿಗಳ ಭವಿಷ್ಯದ ಕುರಿತು ಯಾವುದಾದರೊಂದು ರೀತಿಯಲ್ಲಿ ನಿರ್ಧಾರ ತೆಗೆದುಕೊಂಡು ಇತ್ಯರ್ಥಗೊಳಿಸೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದೇ ವಿಷಯ ಕಳೆದ ಸದನದಲ್ಲಿ ಚರ್ಚೆಯಾಗಿ ಮಾನ್ಯ ಸದಸ್ಯರಾದ ಎಸ್. ಸುರೇಶ್‌ಕುಮಾರ್‌ರವರು ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ಆಗ ಸಚಿವರು ಸ್ಪಷ್ಟವಾದ ಆಶ್ವಾಸನೆ ಕೊಟ್ಟಿದ್ದರು. ಆದರೆ ಇವೊತ್ತು ಕೂಡ ಅಲ್ಲಿ.....

ಅಧ್ಯಕ್ಷರು : ಇದನ್ನು ಸುರೇಶ್‌ಕುಮಾರ್‌ರವರು ಪ್ರಸ್ತಾಪ ಮಾಡಿದ್ದರಲ್ಲ, ಅವರು ಅವೊತ್ತು ಸತ್ಯಾಗ್ರಹ ಮಾಡುತ್ತಿದ್ದುದ್ದನ್ನು ಕಂಡು ಸತ್ಯಾಗ್ರಹ ಕೈಬಿಡುವಂತೆ ಹೇಳಿ ಎಬ್ಬಿಸದೆ ಹೋಗಿದ್ದರೆ ಅವರು ಇವೊತ್ತು ನಮ್ಮ ಮಧ್ಯೆ ಇರುತ್ತಿರಲಿಲ್ಲ ! ಮತ್ತು ಅಸ್ವಸ್ಥರಾಗಿದ್ದ ಅವರನ್ನು ಜಯದೇವ ಹೃದ್ರೋಗ ಸಂಸ್ಥೆಗೆ ಸೇರಿಸಿ ಚಿಕಿತ್ಸೆ ಕೊಡಿಸದೆ ಹೋಗಿದ್ದರೆ ಅವರು ಸರಿಹೋಗುಲ ಮೂರುವಾರಗಳು ಬೇಕಾಗುತ್ತಿತ್ತು. ಇದರ ಬಗ್ಗೆ ಅನಂತರ ಚರ್ಚಿಸೋಣ. Honble minister has agreed. ಸಭೆಗೆ ಬರುವಾಗ ಸುರೇಶ್‌ಕುಮಾರ್‌ರವರೇ ತಾವೂ ಬನ್ನಿ, ಹಾಗೆಯೇ ತಮ್ಮ ಪಕ್ಷದ ನಾಯಕರುಗಳಿದ್ದರೆ ಅವರನ್ನೂ ಕರೆ ತನ್ನಿ. We will find the Solution for it.

ಡಾ|| ಯು. ಚಿತ್ತರಂಜನ್ : ಇದೇ ರೀತಿ ಮೆಡಿಕಲ್, ಹೋಮಿಯೋಪಥಿ ಕಾಲೇಜುಗಳ ಬಗ್ಗೆ ಅಶ್ವಾಸನೆ ಕೊಟ್ಟಿದ್ದರು, ಆದರೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ.

(3) ಅರಕಲ ಗೂಡಿನಲ್ಲಿ ನಡೆದ ವಿವಿಧ ಸಭೆ ಸಮಾರಂಭಗಳಿಗೆ ಸ್ಥಳೀಯ ಶಾಸಕರನ್ನು ಆಹ್ವಾನಿಸದೇ ಇರುವುದು.

+ ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಸನ್ಮಾನ್ಯ ಅಧ್ಯಕ್ಷರೆ, 13ನೇ ತಾರೀಖು ಅರಕಲಗೂಡಿನ ಸುಮಾರು ನಾಲ್ಕು ಸ್ಥಳಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳ ಶಂಕುಸ್ಥಾಪನೆ ಮತ್ತು ಕೆಲವು ಯೋಜನೆಗಳು ಉದ್ಘಾಟನೆಯನ್ನು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು ನೆರವೇರಿಸಿದ್ದಾರೆ. ನಿನ್ನೆ ಕೂಡ ಅರಕಲಗೂಡಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಜನ ಸಂಪರ್ಕ ಸಭೆ ಕೂಡ ನಡೆಸಿದ್ದಾರೆ. ಈ ಎಲ್ಲಾ ಸಭೆ-ಸಮಾರಂಭಗಳಿಲ್ಲೆ ಆ ಕ್ಷೇತ್ರದ ಶಾಸಕನಾಗಿರುವ ನನ್ನನ್ನು ಅಹ್ವಾನಿಸಲಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನ ಸಭೆಯ ಸದಸ್ಯರದು ಅತಿ ಮಹತ್ವದ ಸ್ಥಾನವೆಂದು ಎಲ್ಲರಿಗೂ ಕೂಡ ಗೊತ್ತು. ಶಾಸಕರುಗಳನ್ನು ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ ಸರ್ಕಾರದ ಸೂಚನೆ ಹಾಗೂ ಶಿಷ್ಟಾಚಾರ ಏನಿದೆ? ಶಾಸಕ ರಾಮಸ್ವಾಮಿಯಾದ ನನ್ನನ್ನು ಸಭೆ-ಸಮಾರಂಭಗಳಿಗೆ ಕರೆಯದೆ ನನ್ನ ಗೌರವ ಕಡಿಮೆಯಾಯಿತೆಂದು ನಾನು ತಿಳಿದುಕೊಂಡಿಲ್ಲ, ಆದರೆ, ಇದು ಈ ಸದನದ ಸದಸ್ಯರ ಹಕ್ಕಿನ ಪ್ರಶ್ನೆಯಾಗಿದ್ದು, ಶಾಸಕರಾದ ನಮ್ಮನ್ನು ಅಭಿವೃದ್ಧಿ ಕಾರ್ಯಗಳಿಗೆ ತೊಡಗಿಸಿಕೊಳ್ಳಬೇಕೋ ಅಥವಾ ಬೇಡವೋ?

ಶ್ರೀ ಎಸ್. ನಂಜಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇವು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಕಾರ್ಯಕ್ರಮಗಳಾಗಿದ್ದು, ಆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ನನ್ನನ್ನು ಆಹ್ವಾನಿಸಿದ್ದರು. ಮತ್ತು ನಿನ್ನೆಯೂ ಮುಖ್ಯಮಂತ್ರಿಗಳು ಭಾಗವಹಿಸಿದ್ದ ಕಾರ್ಯಕ್ರಮಗಳಿಗೆ ಸನ್ಮಾನ್ಯ ಸದಸ್ಯರನ್ನು ಕೂಡ ಅಹ್ವಾನಿಸಿದ್ದರು. ಅವರ ಹೆಸರು ಆಹ್ವಾನ ಪತ್ರಿಕೆಯಲ್ಲಿ ಮುದ್ರಿತವಾಗಿದೆ. ಈ ಬಗ್ಗೆ ತಾರತಮ್ಯ ತೋರಿಸಿ, ಅವರನ್ನು ಸಭೆ-ಸಮಾರಂಭಗಳಿಗೆ ಕರೆಯಬಾರದೆಂಬ ಯಾವುದೇ ನಿರ್ದಿಷ್ಟ ಉದ್ದೇಶವಿಲ್ಲ. ಅದು ಜಿಲ್ಲಾ ಪಂಚಾಯತ್ ಕಾರ್ಯಕ್ರಮವಾದುದರಿಂದ ನಾನು ಅದರಲ್ಲಿ ಭಾಗವಹಿಸಿದ್ದೇನೇ ವಿನಹ ಇದು ಸರ್ಕಾರಿ ಕಾರ್ಯಕ್ರಮದ ಅಂಗವಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾವುದೇ ಸಭೆ-ಸಮಾರಂಭಗಳು ನಡೆದರೂ ಆಯಾ ಕ್ಷೇತ್ರದ ಶಾಸಕರು ಅಧ್ಯಕ್ಷತೆ ವಹಿಸಬೇಕೆಂಬುದು ಶಿಷ್ಟಾಚಾರ. ಆದರೆ, ಸಬೆ-ಸಮಾರಂಭಗಳಿಗೆ ಶಾಸಕರನ್ನು ಅಹ್ವಾನಿಸದಿರುವುದು ಅಕ್ರಮ ಅಪರಾಧ. ಏನಿದು ಹುಡುಗಾಟ! ಇದು ಶಾಸಕರುಗಳಿಗೆ ತೋರಿಸತಕ್ಕಂಥ ಅಗೌರವವಾಗಿದೆ. ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಮಾಡಿದ್ದೇ ಕಾನೂನು. ನಾವು ಹೇಳಿದ್ದೇ ಕಾನೂನು, ನೀವು ಏನು ಮಾಡುತ್ತೀರೋ ಮಾಡಿ ಎಂದು ಅವರು ಭಾವನೆ ತಾಳಿರುವಂತಿದೆ. ನನಗನ್ನಿಸುತ್ತಿದೆ. ಅವರ ನಡವಳಿಕೆಗಳೇನಿವೆ ಅಥವಾ ಸರ್ಕಾರಿ ಆಜ್ಞೆಗಳೇನಿವೆ, ಅವೆಲ್ಲವನ್ನೂ ಅವರು ಉಲ್ಲಂಘಿಸುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನನಗನ್ನಿಸುತ್ತದೆ. ಈ ಕುರಿತು ಸಮಗ್ರವಾಗಿ ಸದನದಲ್ಲಿ ಅನೇಕ ಸಲ ಚರ್ಚೆಯಾಗಿದೆ. ಶಾಸನಸಭೆಯ ಸದಸ್ಯರುಗಳಿಗೆ ಎಷ್ಟು ಅಗೌರವವುಂಟಾಗುತ್ತಿದೆಯೆಂದು ತಮ್ಮ ಮುಂದೆ ಒಂದಲ್ಲ ಹತ್ತಾರು ಬಾರಿ ಈ ಸದನದಲ್ಲಿ ಚರ್ಚಿಸಿದ್ದೇವೆ. ಅಲ್ಲದೆ, ಮುಖ್ಯಮಂತ್ರಿಗಳೂ ಕೂಡ ಅನೇಕ ಬಾರಿ ಪರಿಣಾಮಕಾರಿಯಾಗಿ ಉತ್ತರ ಕೊಟ್ಟಿದ್ದಾರೆ. ಇದೊಂದು ಶಿಷ್ಟಾಚಾರ ಅಷ್ಟೇ ಅಲ್ಲ, ಪ್ರಾಮುಖ್ಯತೆ ಎಂದು 'ಉತ್ತರಿಸಿದ್ದರು. ಯಾವುದೇ ಸಬೆ-ಸಮಾರಂಭಗಳಿರಬಹುದು, ಅದು ಜಿಲ್ಲಾ ಪಂಚಾಯತ್‌ಗೆ ಸಂಬಂಧಿಸಿದ ಸಮಾರಂಭವಾಗಿರಬಹುದು, ಸರ್ಕಾರಿ ಸಮಾರಂಭವಾಗಿರಬಹುದು. ಯಾವುದೇ ಸಮಾರಂಭವಾದರೂ ಕೂಡ ಅಧ್ಯಕ್ಷತೆಯನ್ನು ಆಯಾ ಕ್ಷೇತ್ರದ ಶಾಸಕರುಗಳೇ ವಹಿಸತಕ್ಕಂಥಾದ್ದು ಅವರುಗಳಿಗೆ ಇರುವ ಹಕ್ಕು. ಇದರ ಜೊತೆಗೆ ಇದೇ ಸದನದಲ್ಲಿ ಉತ್ತರಿಸುತ್ತಾ ಶಾಸಕರುಗಳಿಗೆ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯಲ್ಲಿ ಒಂದೊಂದು ಕಾರ್ಯಾಲಯ ಒದಗಿಸಿಕೊಡುವುದಾಗಿ ಹೇಳಿದ್ದರು. ಸರ್ಕಾರಿ ಈ ರೀತಿ ಹೇಳಿ ಒಂದು ವರ್ಷವಾಯಿತು. ಶಾಸಕರುಗಳಿಗೆ ಒಂದು ಕಾರ್ಯಾಲಯದ ಸೌಲಭ್ಯ ಒದಗಿಸತಕ್ಕಂಥ ಸೌಜನ್ಯ.......ಅದು ನಿಮ್ಮ ಕೃಪೆ ಅಲ್ಲ, ಆ ಸೌಲಭ್ಯ ಒದಗಿಸಿಕೊಡಿರೆಂದು ಕೈಮುಗಿದು ಕೇಳತಕ್ಕಂಥಾದ್ದಲ್ಲ. ಈ ಸರ್ಕಾರ ನಿಜವಾಗಿಯೂ ಸರ್ವಾಧಿಕಾರಿತನದಿಂದ ವರ್ತಿಸುತ್ತಿದೆ.

ಶ್ರೀ ಎಸ್. ನಂಜಪ್ಪ : ಗೌರವಾನ್ವಿತ ಸದಸ್ಯರಿಗೆ ಯಾವ ಅಗೌರವ ತೋರಿಸಬೇಕೆನ್ನುವ ಉದ್ದೇಶದಿಂದ ಈ ಕೆಲಸ ಮಾಡಿಲ್ಲ. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನವರು ಎಸಗಿರುವ ಈ ಲೋಪಕ್ಕೆ ವಿಷಾದ ವ್ಯಕ್ತಪಡಿಸುತ್ತಾನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಇವರೊಬ್ಬರೇ ಅಲ್ಲ, ಮಾನ್ಯ ಮುಖ್ಯಮಂತ್ರಿಗಳು ಶ್ರೀಮಾನ್ ಎ.ಟಿ. ರಾಮಸ್ವಾಮಿಯವರ ಕ್ಷೇತ್ರಕ್ಕೆ ಸಮಾರಂಭದಲ್ಲಿ ಬಾಗವಹಿಸಲು ಹೋದಾಗ ಅವರನ್ನು ಕರೆಯಿಸತಕ್ಕಂಥ ಒಂದು ಸೌಜನ್ಯವನ್ನೂ ತೋರಿಸಿಲ್ಲ, ಅಹ್ವಾನ ಪತ್ರಿಕೆಯನ್ನು ವಿಸ್ತರಿಸುವ ಪ್ರಯತ್ನ ಮಾಡಿಲ್ಲ. ಪ್ರತಿಯೊಂದು ಸಭೆ-ಸಮಾರಂಭಗಳಲ್ಲಿ ಆಯಾ ಕ್ಷೇತ್ರದ ಸಂಬಂಧಪಟ್ಟ ಶಾಸಕರುಗಳೇ ಸಭೆಯ ಅಧ್ಯಕ್ಷತೆ ವಹಿಸಬೇಕೆನ್ನುವ ಸುತ್ತೋಲೆಯನ್ನು ಒಂದು ಕಡೆ ಹೊರಡಿಸಿದರೆ, ಮತ್ತೊಂದು ಕಡೆ ಶಾಸಕರುಗಳನ್ನು ಹೊರತುಪಡಿಸಿ ಅವರನ್ನು ತುಳಿಯಬೇಕೆನ್ನುವ ಉದ್ದೇಶದಿಂದ ಮುಖ್ಯಮಂತ್ರಿಗಳೇ ಹೊರಟರೆ ನಾವು ಇನ್ನು ಯಾರಿಗೆ ಹೇಳಬೇಕು? ಸನ್ಮಾನ್ಯ ಸದಸ್ಯರುಗಳಾದ ಶ್ರೀ ಬಿ. ಶಿವರಾಮು ಹಾಗೂ ಎ.ಟಿ. ರಾಮಸ್ವಾಮಿಯವರ ಕ್ಷೇತ್ರಗಳಲ್ಲಿ ಹಾಗಾಗಿದ್ದರೆ ನನ್ನ ಕ್ಷೇತ್ರದಲ್ಲಿ ಹೋದ ಸಲ ನಾನು ಯಾವುದೋ ಒಂದು ಲಕ್ಷದೀಪ ಸಮಾರಂಭಕ್ಕೆ ಹೋದರೆ ನನಗೂ ಕೂಡ ಗೊತ್ತಾಗಲಿಲ್ಲ. ಇದೊಂದೇ ಅಲ್ಲ ಹತ್ತಾರು ಕಡೆ ಇವರು ಇದೇ ರೀತಿ ಮಾಡುತ್ತಿದ್ದಾರೆ. ನಮಗೆ ಹೇಳುವವರು, ಕೇಳುವವರು ಯಾರೂ ಇಲ್ಲ, ನಾವು ಮಾಡಿದ್ದೇ ಸರಿ ಎನ್ನುವ ಭಾವನೆ ಇವರಿಗೆ ಬಂದಿದೆಯೆಂದು ನಾನು ಖಂಡಿತವಾಗಿ ಹೇಳಬೇಕಾಗುತ್ತದೆ.

ಅಧ್ಯಕ್ಷರು : ನಿಮ್ಮ ಮಾತಿನ ಒಟ್ಟಾರೆ ಅರ್ಥ ನನಗಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಇದೊಂದು ಶಿಷ್ಟಾಚಾರದ ಪ್ರಶ್ನೆ. ಎಲ್ಲಿಯೇ ಒಂದು ಸರ್ಕಾರಿ ಕಾರ್ಯಕ್ರಮ ಮಾಡಿದರೆ ಅದು ನಮ್ಮ ಪಕ್ಷದ

ಕಾರ್ಯಕ್ರಮವಂತೂ ಅಲ್ಲ, ಆದರೆ, ಸರ್ಕಾರದ ಹಣದಲ್ಲಿ ಸಭೆ-ಸಮಾರಂಭಗಳನ್ನು ಏರ್ಪಡಿಸುವಾಗ ಸಂಬಂಧಪಟ್ಟ ಶಾಸಕರುಗಳನ್ನು ಕರೆಯಲೇಬೇಕು, ಇದು ಧರ್ಮ ಕೂಡ. ಜಿಲ್ಲಾ ಪಂಚಾಯತ್ ಕೂಡ ಅರೆ ಸರ್ಕಾರಿ ಸಂಸ್ಥೆಯಾಗಿದ್ದು ಅದರಿಂದ ಏನಾದರೂ ಲೋಪಗಳುಂಟಾಗಿದ್ದರೆ ಸರಿಪಡಿಸುವ ಪ್ರಯತ್ನ ಮಾಡುತ್ತೇವೆ. ಎರಡನೆಯದಾಗಿ ಆ ಕುರಿತು ಬಿ.ಜೆ.ಪಿ.ಯವರು ಕೇಳುವುದರಲ್ಲಿ ಅರ್ಥವಿದೆ. ಆದರೆ, ಕಾಂಗ್ರೆಸ್ ಪಕ್ಷದವರು ಇದನ್ನು ಕೇಳುವಾಗ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಸರಿಯಾಗಿ ಹೇಳಿದರು. ನಾವು ಕಾಂಗ್ರೆಸ್ ಪಕ್ಷದ ಶಾಸಕರುಗಳು ಇಲ್ಲಿ ಕುಳಿತುಕೊಂಡು ಪೂರ್ತಿ ಸಹಕಾರ ಕೊಡಿ ಎಂದು ಹೇಳಿದ್ದೇನೆ. ಆದರೆ ಇಲ್ಲಿ ಏತಕ್ಕೆ ತಪ್ಪಾಯಿತು? ಆದರೆ, ಬಿ.ಜೆ.ಪಿ.ಗೆ ಮಾತ್ರ ಸಹಕಾರ ಕೊಡಬಾರದೆಂದು ಹೇಳಿದ್ದ, ಅದೇಕೆ ಹೀಗೆ ಗೊಂದಲವಾಗಿದೆ. ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರೇನೋ ದೊಡ್ಡತನದಿಂದ ಅದನ್ನು ಹೇಳಿಕೊಳ್ಳಲಿ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ದಯವಿಟ್ಟು ನೀವು ಕುಳಿತುಕೊಳ್ಳಿ. ನಿಮಗೆ ಆ ರೀತಿ ಹೇಳುವುದಕ್ಕೆ ನೈತಿಕ ಹಕ್ಕು ಇಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೈತಿಕ ಹಕ್ಕು ಇಲ್ಲವೆಂದರೇನು ನಿಮ್ಮಿಂದ ನಾವೇನೂ ನೈತಿಕ ಹಕ್ಕು ಕಲಿಯಬೇಕಾಗಿಲ್ಲ, ಆ ರೀತಿ ಮಾತನಾಡಬೇಡಿ. don't tell that.

Sri. R.L. JALAPPA : I am on my legs. He cannot dicatate to me.

(INTERRUPTIONS)

Sri R.L. JALAPPA : I say please listen.

ಶ್ರೀ ಆರ್.ಎಲ್. ಜಾಲಪ್ಪ : ದಯವಿಟ್ಟು ತಾವು ಆ ರೀತಿ ಮಾತನಾಡಬಾರದು. ನಾನು ಬಿ.ಜೆ.ಪಿ.ಯವರು ಇದರ ಬಗ್ಗೆ ಕೇಳುವುದಕ್ಕೆ ಹಕ್ಕಿದೆ ಆದರೆ ಕಾಂಗ್ರೆಸ್‌ನವರು ಇದರ ಬಗ್ಗೆ ಕೇಳುವುದರಲ್ಲಿ ನೈತಿಕ ಹಕ್ಕೇನಿದೆ ಎಂದು ಕೇಳಿದೆ. ನೀವೆಲ್ಲರೂ ಹಿರಿಯ ಸದಸ್ಯರುಗಳು, ನನ್ನದೇ ಕ್ಷೇತ್ರದಲ್ಲಿನ ತಾಲ್ಲೂಕಿನಲ್ಲಿ ಚುನಾವಣೆಯಾಗುವುದಕ್ಕೂ ಮೂರು ತಿಂಗಳು ಮೊದಲು ವೆಟರ್ನರಿ ಆಸ್ಪತ್ರೆಯನ್ನು ಇನಾಗರೇಟ್ ಮಾಡಲು ಅಂದಿನ ಕೆ.ಪಿ.ಸಿ.ಸಿ. ಅಧ್ಯಕ್ಷ ಶ್ರೀ ಕೃಷ್ಣರಾಯರು, ಅಂದಿನ ತೋಟಗಾರಿಕೆ ಸಚಿವರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಬಂದಿದ್ದರು. ಆ ಇನಾಗರೇಷನ್ ಪತ್ರಿಕೆಯಲ್ಲಿ ನನ್ನ ಹೆಸರಿಲ್ಲ, ಆ ಆಸ್ಪತ್ರೆಯನ್ನು ಸ್ಯಾಂಕ್ಷನ್ ಮಾಡಿಸಿ ಅದಕ್ಕೆ ಜಿಲ್ಲಾಪರಿಷತ್‌ನಿಂದ ಹಣವನ್ನು ಸ್ಯಾಂಕ್ಷನ್ ಮಾಡಿಸಿದವನು ನಾನೇ. ಆಗ ಅಲ್ಲಿನ ಗ್ರಾಮಸ್ಥರು. ಇದಕ್ಕೆ ಶಾಸಕರು ಇಲ್ಲ, ಯಾರೋ ಒಬ್ಬರು ಮಹಿಳಾ ಗುತ್ತಿಗೆದಾರರು ಕರೆದುಬಿಟ್ಟರೆ ನೀವುಗಳೆಲ್ಲ ಆಗ ಗಲಾಟೆಯಾದಾಗ ಅವತ್ತು ಅರವತ್ತು ಜನರ ಮೇಲೆ ಕೇಸ್ ಹಾಕಿದ್ದಾರೆ. ಆ ರೀತಿ ಇರುವಾಗ ಇದರ ಬಗ್ಗೆ ಕೇಳುವುದಕ್ಕೆ ನಿಮಗೇನು ಹಕ್ಕಿದೆ?

(ಗೊಂದಲ)

ನಿಮ್ಮ ಸರ್ಕಾರದಲ್ಲಿ ಆ ರೀತಿ ಮಾಡಿದ್ದಾರೆ, ಇಂಥವುಗಳು ಒಂದಲ್ಲ ನಾಲ್ಕೈದು ಉದಾಹರಣೆಗಳನ್ನು ಕೊಡಬಲ್ಲೆ. Not only this. I can give you four or five examples. But I do agree it is the bounden duty to invite the local MLA to preside over the function. I do agree. You cannot direct.

(ಗೊಂದಲ)

ಶ್ರೀ ರಾಮನಾಥರೈ : ನಾನು ಹೇಳುವುದೇನೆಂದರೆ.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. please be seated.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಅತಿವೃಷ್ಟಿಯಾಗಿ ಅನೇಕ ಮನೆಗಳು ಅವರ ಕ್ಷೇತ್ರದಲ್ಲಿ ಬಿದ್ದುಹೋದವು, ಆಗ ನಾನು ಅವರನ್ನು ನನ್ನ ಕಾರಿನಲ್ಲೇ ಕೂರಿಸಿಕೊಂಡು ಹೋಗಿ ಅವರ ಕೈಯಿಂದಲೇ ಚೆಕ್‌ನ್ನು ಸಂತ್ರಸ್ತರಿಗೆ ಕೊಡಿಸಿಕೊಂಡು ಬಂದಿದ್ದೇನೆ. ಅವರು ನನ್ನ ಜೊತೆಯಲ್ಲೇ ಬಂದಿದ್ದರು.

Sri R.L. JALAPPA : I am not denying . (Interruptions)

ಶ್ರೀ ಆರ್.ಎಲ್. ಜಾಲಪ್ಪ : ಅವರು ನನ್ನ ಕ್ಷೇತ್ರಕ್ಕೆ ಬಂದಿದ್ದರು,. ನಾನೂ ಅವರ ಜೊತೆಯಲ್ಲಿ ಹೋಗಿದ್ದೆ, ಅದನ್ನು ನಾನು ಒಪ್ಪುವುದಿಲ್ಲವೆಂದು ಹೇಳುತ್ತಿಲ್ಲ. ಆದರೆ ಅದರ ಫಲವೇನಾಯಿತೆಂದರೆ, 13,400 ಮನೆಗಳು ಬಿದ್ದುಹೋಗಿದ್ದವು, ಅದರಲ್ಲಿ ಒಬ್ಬರಿಗೂ ಮನೆಗಳನ್ನು ಕಟ್ಟಿಸಿಕೊಡಲಿಲ್ಲ, ನಾನು ತಮ್ಮಬಳಿ ಹತ್ತಾರುಸಾರಿ ಬಂದು ಸುತ್ತಾಡಿದ ಒಂದು ಮನೆಯನ್ನು ತಾವು ಕಟ್ಟಿಸಿಕೊಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಣವನ್ನು ಕೊಟ್ಟೂ ಸಹ ಮನೆಯನ್ನು ಕಟ್ಟಿ ಕೊಡಬೇಕೆಂದಿಲ್ಲ.

Mr. SPEAKER : We will conclude this.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳು ಕಾಂಗ್ರೆಸ್‌ನವರ ಕಾಲದಲ್ಲಿ ಈ ರೀತಿಯಾಯಿತೆಂದು ನೇರವಾಗಿ ಹೇಳಿದ್ದಾರೆ, ನನಗೆ ಗೊತ್ತಿರುವಂತೆ ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಇಲ್ಲಿ ಬಹಳ ಸಮಗ್ರವಾಗಿ ಚರ್ಚೆಯಾಯಿತು. ಅವರು ನನ್ನ ಕಾಲದಲ್ಲಿ ಮಾತ್ರವಲ್ಲ ಹಿಂದಿನಿಂದಲೂ ಯಾರು ಶಾಸಕರಿದ್ದಾರೆ ಅವರಿಗೆ ಅವರ ಕ್ಷೇತ್ರದಲ್ಲಿ ಯಾವುದೇ ಸಮಾರಂಭವಾದಾಗ ಅಧ್ಯಕ್ಷರನ್ನಾಗಿ ಮಾಡಬೇಕಾಗಿರತಕ್ಕದ್ದು ನೀತಿ ಮತ್ತು ಕಾನೂನು ಎಂದು ಹೇಳಿದರು. ಎರಡನೆಯದಾಗಿ, ಯಾವುದೇ ಶಾಸಕರು ಕಾರ್ಯಾಲಯಕ್ಕೆ ಹೋದಾಗ ಅವರು ಎಷ್ಟೇ ಪ್ರತಿಷ್ಠಿತ ಅಧಿಕಾರಿಯಾಗಿದ್ದರೂ, ಶಾಸಕರು ಬಂದರೆ ಎದುನಿಂತು, ಕರೆದು ಸ್ವಾಗತ ಮಾಡಿ ತಮ್ಮ ಕೈಲ್ಲಿ ಇದ್ದರೆ ಆಗುತ್ತದೆ ಇಲ್ಲದಿದ್ದರೆ- ಇಲ್ಲವೆಂದು ಹೇಳತಕ್ಕ ಸೌಜನ್ಯವಾದ ಉತ್ತರವನ್ನು ಕೊಡಬೇಕು ಎಂಬ ಬಗ್ಗೆ ಅವರು ಹೇಳಿದ್ದರು. ಆದ್ದರಿಂದ ಈ ಶಿಷ್ಟಾಚಾರದ ಬಗ್ಗೆ ನಿಜವಾಗಿಯೂ ಹದಗೆಟ್ಟಿರತಕ್ಕದ್ದು ಎಂದರೆ ಜನತಾದಳದ ಸರ್ಕಾರ ಬಂದಮೇಲೆ. ಎಲ್ಲಾ ಕ್ಷೇತ್ರದಲ್ಲೂ ಒಂದು ರೀತಿಯಾದ ಸರ್ವಾಧಿಕಾರದ ಮನೋಭಾವನೆ ನಡೆಯುತ್ತಿದೆ, ಅದನ್ನು ಅವರು ಪ್ರಮಾಣಿಕವಾಗಿ ಒಪ್ಪಿಕೊಳ್ಳಬೇಕು, ನಿಮ್ಮ ಕಾಲದಲ್ಲಿ ಈ ರೀತಿಯಾಯಿತು, ನಮ್ಮ ಕಾಲದಲ್ಲಿ ಹೀಗೆ ಎಂದು ಸುಮ್ಮನೆ ವಾದಮಾಡುವುದು ಬೇಡಿ. ನೀವು ಒಂದು ರೀತಿಯಲ್ಲಿ ಸರ್ವಾಧಿಕಾರಯಂತೆ ಆಡಳಿತ ನಡೆಸುತ್ತಿದ್ದೀರಿ.

+ ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಅಹ್ವಾನ ಪತ್ರಿಕೆಯಲ್ಲಿ ಎಲ್ಲಾ ಶಾಸಕರುಗಳ ಹೆಸರು ಮುದ್ರಿತ ವಾಗಿರುತ್ತದೆ ಎಂದು ಹೇಳಿದರು. ಎಲ್ಲಾ ಅಹ್ವಾನ ಪತ್ರಿಕೆಗಳಲ್ಲೂ ಎಂಟೂ ಜನ ಶಾಸಕರುಗಳ ಹೆಸರು ಮುದ್ರಿತವಾಗಿರುತ್ತದೆ. ಅದು ವಿಶೇಷ ಅಹ್ವಾನಿತರು ಎನ್ನತಕ್ಕ ಭಾಗದಲ್ಲಿ ಮುದ್ರಿತವಾಗಿರುತ್ತದೆ. ಶಾಸಕರನ್ನು ಯಾವುದೇ ಕಾರ್ಯಕ್ರಮಕ್ಕೆ ಕರೆಯುವುದಿಲ್ಲ, ನಮ್ಮ ಜಿಲ್ಲೆಯಲ್ಲಿ ಒಂದು ವಿಶೇಷವಾದ ವಾತಾವರಣ ನಿರ್ಮಾಣವಾಗಿದೆ. ನಮ್ಮ ಜಿಲ್ಲೆಯ ಉಸ್ತೂವಾರಿ ಸಚಿವರು ನಮ್ಮ ಜಿಲ್ಲೆಯಲ್ಲಿನ ಬೇರೊಂದು ಕಾರ್ಯಕ್ರಮದ ಬಗ್ಗೆ ಗಮನ ಹರಿಸದೆ ಅವರ ಸಲುವಾಗಿ ಏರ್ಪಾಡಾಗಿದ್ದ ಕಾರ್ಯಕ್ರಮಕ್ಕೆ ಬರುವುದಿದ್ದರು, ಈ ರೀತಿ ಹಲವಾರು ಕಡೆಯಾಗಿದೆ, ಮಂತ್ರಿಗಳು ಬರುವ ಬಗ್ಗೆ ಶಾಸಕರ ಗಮನಕ್ಕೆ ಬರುವುದಿಲ್ಲ, ಯಾವುದೋ ಒಂದು ಕಾರ್ಯಕ್ರಮಕ್ಕೆ ಮಂತ್ರಿಗಳು ಬರುವುದಿದ್ದಾಗ ಮತ್ತೊಂದು ಕಾರ್ಯಕ್ರಮ ನಿಗದಿಯಾದಾಗ ಸಂಬಂಧಪಟ್ಟ ಮಂತ್ರಿಗಳಿಗೆ ನಾನು ದೂರವಾಣಿ ಮಾಡಿ ವಿಚಾರ ಈ ರೀತಿ ಇದೆ, ತಾವು ಪ್ರವೇಶ ಮಾಡಬಾರದು ಎಂದು ತಿಳಿಸದೆ ಈ ರೀತಿಯಾದ ಪ್ರಸಂಗಗಳು ಉದ್ಭವಕ್ಕೂ ಬರುತ್ತಿರುವುದರಿಂದ, ಗೊಂದಲಮಯವಾಗುತ್ತದೆ. ತಾವು ಮೊದಲಬಾರಿಗೆ ನನ್ನ ಕ್ಷೇತ್ರಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಶಾಸಕನಾದ ನಾನು ಇಲ್ಲದಿದ್ದಮೇಲೆ ತಾವು ತಪ್ಪು ತಿಳಿದುಕೊಳ್ಳಬಹುದು, ತಾವು ಇದರ ಯೋಚನೆ ಮಾಡಬೇಕೆಂದು ದೂರವಾಣಿಯಲ್ಲಿ ತಿಳಿಸಿದೆ ವಿಷಯ ಈ ರೀತಿ ಇದೆಯೊಂದಾಗ ತತ್ಕ್ಷಣ ಅವರು ತಮ್ಮ ಕಾರ್ಯಕ್ರಮವನ್ನು ರದ್ದು ಮಾಡಿದರು. ಜವಾಬ್ದಾರಿ ಇರತಕ್ಕಂಥ ಮಂತ್ರಿಗಳು ಆ ರೀತಿಯಾದ ಸಂದರ್ಭ ಬಂದಾಗ ಮೊದಲು ಸಂಬಂಧಪಟ್ಟ ಶಾಸಕರಿಗೆ ಹೇಳಿದ್ದೀರೋ ಇಲ್ಲವೋ ಎಂಬ ಬಗ್ಗೆ ಪ್ರಶ್ನೆ ಮಾಡಿ ಹೇಳಿರದಿದ್ದರೆ ತಿಳಿಸಿ ನಂತರ ಕಾರ್ಯಕ್ರಮ ವಿರುವ ಬಗ್ಗೆ ಗಮನಹರಿಸಿದರೆ ಮುಂದೆ ಈ ರೀತಿಯಾದ ಗೊಂದಲಗಳಿಗೆ ಅವಕಾಶವಾಗುವುದಿಲ್ಲ ನನ್ನ ಭಾವನೆ.

Mr. SPEAKER : You have not heard me.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ಪ್ರತಿಯೊಬ್ಬ ಶಾಸಕರನ್ನೂ ಇದೇ ರೀತಿಯಾಗಿ ಇವರು ನೋಡಿಕೊಳ್ಳುತ್ತಿದ್ದಾರೆ. ಇದು ಅವರೊಬ್ಬರಿಗೇ ಮಾಡುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಪಶುಸಂಗೋಪನಾ ಸಚಿವರು ಕಾರ್ಯಕ್ರಮವನ್ನು ಹಾಕಿದ್ದರು, ಅದರ ಬಗ್ಗೆ ನನ್ನ ಗಮನಕ್ಕೆ ತರಲಿಲ್ಲ, ಅನಂತರ ಅಲ್ಲಿನ ಕಾರ್ಯಕರ್ತರು ಅದರ ಬಗ್ಗೆ ಪ್ರತಿಭಟನೆ ಮಾಡಿ ಆ ಕಾರ್ಯ ಕ್ರಮವನ್ನು ರದ್ದುಮಾಡಬೇಕಾಯಿತು. ನನ್ನ ಕ್ಷೇತ್ರಕ್ಕೆ ಪುರಾತತ್ವ ಇಲಾಖೆಯವರು ರಾಜ್ಯಪಾಲರ ರದ್ದು ಕಾರ್ಯಕ್ರಮವನ್ನು ಹಾಕಿದ್ದರು, ಆ ರೀತಿ ಮಾಡುವಾಗ ನನ್ನನ್ನು ಕೇಳಲಿಲ್ಲ, ನನ್ನನ್ನು ಕೇಳದೇ ಮಾಡಿಕೊಂಡಿದ್ದರೂ ಪರವಾಗಿರಲಿಲ್ಲ, ಆದರೆ ನನ್ನ ಅನುಮತಿ ಇಲ್ಲದೆಯೇ ಅಹ್ವಾನ ಪತ್ರಿಕೆಯನ್ನು ವಿಶೇಷ ಅಹ್ವಾನಿತರು ಎಂಬ ಭಾಗದಲ್ಲಿ ನನ್ನ ಹೆಸರನ್ನು ಮುದ್ರಿಸಿದ್ದರು, ನಾನು ಸದನದ ಸಮಿತಿಯವತಿಯಿಂದ ಹೈದರಾಬಾದ್‌ಗೆ ಹೋಗಿದ್ದೆ. ಅವತ್ತು ಕಾರ್ಯಕ್ರಮವನ್ನು ಮಾಡಿದ್ದಾರೆ. ನಾನು ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರವನ್ನು ಬರೆದೆ. ಇದರ ಬಗ್ಗೆ ಸೂಕ್ತವಾದ ಕ್ರಮತೆಗೆದುಕೊಳ್ಳಬೇಕೆಂದು ಕೇಳಿದ್ದೆ, ಆದರೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ.

ಅಧ್ಯಕ್ಷರು : Stop. it. I got the message. ಈ ರೀತಿ ಮಾತನಾಡಿಕೊಂಡು ಹೋದರೆ ಬಹಳ ಜಾಸ್ತಿಯಾಗುತ್ತದೆ ತಾವುಗಳು ಏನು ಹೇಳುತ್ತಿದ್ದೀರಿ ಅದನ್ನು ನಾನು ಕೇಳಿದ್ದೇನೆ, ಆದರೆ ನಾನು ಏನನ್ನು ಹೇಳುತ್ತೇನೆಂಬುದನ್ನು ತಾವು ಕೇಳಲೇ ಇಲ್ಲ,you have not heard me.

ಶ್ರೀ ಎ.ಟಿ. ರಾಮಸ್ವಾಮಿ : ಸಭಾಧ್ಯಕ್ಷರೆ, 13ನೇ ತಾರೀಖು ನಡೆದ ಕಾರ್ಯಕ್ರಮಕ್ಕೆ ಕರೆಯಲೂ ಇಲ್ಲ, ಆಹ್ವಾನ ಪತ್ರಿಕೆಯಲ್ಲೂ ಸಹ ಗೊತ್ತಾಗಲಿಲ್ಲ. ಆದರೆ ನಿನ್ನೆ ನಡೆದಂಥ ಜನಸಂಪರ್ಕ ಸಭೆಯಲ್ಲಿ, ಅದನ್ನು ಜನತಾದಳದ ವತಿಯಿಂದ ಪಾಂಪ್ಲೆಟ್ಸ್ ಮಾಡಿಸಿ ಎಲ್ಲಾ ಶಾಸಕರು ಭಾಗವಹಿಸಬೇಕೆಂದು ಹೇಳಿದ್ದಾರೆ, ಅದರಲ್ಲಿ ಜನತಾದಳದ ಪಕ್ಷದ ವತಿಯಿಂದ ಎಂದು ಹಾಕಿದ್ದಾರೆ, ಶಾಸಕರ ಹೆಸರನ್ನೂ ಹಾಕಿಲ್ಲ, ನಾನು ಇದರಲ್ಲಿ ಭಾಗವಹಿಸಬಹುದೇ? ಅಥವಾ ಬೇಡವೇ? ಅದು ಜನಸಂಪರ್ಕ ಸಭೆ, ಎಲ್ಲಾ ಅಧಿಕಾರಿಗಳೂ ಭಾಗವಹಿಸಿದ್ದಾರೆ, ಈ ಪಕ್ಷ, ಆ ಪಕ್ಷ ಎನ್ನತಕ್ಕ ವೈಯಕ್ತಿಕ ಪ್ರಶ್ನೆಯು ಇಲ್ಲಿ ಬರುವುದಿಲ್ಲ, ಈ ಪಕ್ಷದವರು ಆ ರೀತಿ ಮಾಡಿದರು ನಾವೂ ಆ ರೀತಿ ಮಾಡುತ್ತೇವೆಂದೂ ಹೇಳುವುದಿಲ್ಲ, ಬೇಕಾದರೆ ಅದನ್ನೇ ಅವರು ಶಹಬಾಸ್‌ಗಿರಿಯಾಗಿ ತೆಗೆದುಕೊಳ್ಳಲಿ, ಇದರ ಬಗ್ಗೆ ತಾವು ದಯಮಾಡಿ ಕಟ್ಟುನಿಟ್ಟು ಆದೇಶವನ್ನು ಕೊಡಬೇಕು, ಇಲ್ಲದಿದ್ದರೆ ನಾವುಗಳ ಸಹ ಸಣ್ಣ ಕಿಡಿಯನ್ನು ಹತ್ತಿಸಬಹುದು.

ಶ್ರೀ ಬಿ. ಶಿವರಾಮ್ (ಗಂಡಸಿ) : ಸನ್ಮಾನ್ಯ ಅಧ್ಯಕ್ಷೆ,ತಾವು ಹೇಳಿದ್ದೇ ಹೇಳಬಾರದೆಂದು ಹೇಳಿದ್ದೀರಿ. ಆದರೆ ನನ್ನದೊಂದು ವಿಶೇಷವಾದಂಥ ವಿಚಾರ. ನನಗೆ ತಾಲ್ಲೂಕು ಕೇಂದ್ರವಿಲ್ಲ,

ಅಧ್ಯಕ್ಷರು : ಹಾಸನ ಜಿಲ್ಲೆಯಲ್ಲಿ ಒಬ್ಬೊಬ್ಬರದ್ದೂ ಒಂದೊಂದು ವಿಶೇಷ ಅಲ್ಲವೆ.

ಶ್ರೀ ಬಿ. ಶಿವರಾಮ್ : ಅದರ ಬಗ್ಗೆ ಎರಡು ಮಾತಿಲ್ಲ, ಮಾನ್ಯ ಎ.ಟಿ. ರಾಮಸ್ವಾಮಿಯವರು ಹೇಳಿದಂತೆ ಮುಖ್ಯಮಂತ್ರಿಯವರು ಪಕ್ಷದ ಹೆಸರಿನಲ್ಲಿ ಅಲ್ಲಿಗೆ ಹೋಗಿ ಜನಸಂಪರ್ಕ ಸಭೆಯನ್ನು ಉದ್ಘಾಟನೆ ಮಾಡಿಕೊಂಡು ಬರುತ್ತಾರೆ, ಇಂಥ ಪರಿಸ್ಥಿತಿ ಹಾಸನದಲ್ಲಿದೆ. ವಿರೋಧ ಪಕ್ಷದಲ್ಲಿರುವವರಿಗೆ ಇದರ ಬಗ್ಗೆ ಅನುಭವವಾಗುತ್ತದೆ. ನನ್ನ ಪರಿಸ್ಥಿತಿ ಯಾವ ರೀತಿ ಇದೆಯೆಂದರೆ, ನನಗೆ ಹಾಸನ ತಾಲ್ಲೂಕಿನದ್ದು ಎರಡು ಹೋಬಳಿ. ಅರಸೀಕೆರೆ ತಾಲ್ಲೂಕಿನದ್ದು ಎರಡು ಹೋಬಳಿ ಬರುತ್ತದೆ. ಹಾಸನ ತಾಲ್ಲೂಕಿನಲ್ಲಿ ಕಾರ್ಯಕ್ರಮವಾದರೆ ಅದರ ವ್ಯಾಪ್ತಿಗೆ ಬರತಕ್ಕ ಶಾಸಕನ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವಾಗುತ್ತದೆ, ಅರಸೀಕೆರೆ ತಾಲ್ಲೂಕಿನಲ್ಲಿ ಬರತಕ್ಕ ಕಾರ್ಯಕ್ರಮಕ್ಕೆ ಆ ಭಾಗದ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವಾಗುತ್ತದೆ. ಈ ರೀತಿಯಾದರೆ ನನ್ನ ಪರಿಸ್ಥಿತಿ ಏನು? ನಾನು ಎಲ್ಲಿಗೆ ಹೋಗಬೇಕು? ಯಾರನ್ನು ಕೇಳಬೇಕು? ನಮ್ಮ ಉಸ್ತುವಾರಿ ಸಚಿವರು, ಮಂತ್ರಿಗಳು ಬರುತ್ತಾರೆ ಕಾರ್ಯಕ್ರಮ ಮಾಡುತ್ತಾರೆ ಹೋಗುತ್ತಾರೆ.

ಅಧ್ಯಕ್ಷರು : ಇನ್ನು ಮೇಲೆ ನನ್ನ ಕ್ಷೇತ್ರದಲ್ಲೇನಾದರು ಕಾರ್ಯಕ್ರಮಗಳಾದರೆ ಕರೆಯುತ್ತೇನೆ, ಅಲ್ಲಿಗೆ ಬಂದು ಅಧ್ಯಕ್ಷತೆಯನ್ನು ವಹಿಸಿ.

ಶ್ರೀ ಬಿ. ಶಿವರಾಮ್ : ಹಾಸನದಲ್ಲಿ ಮಿನಿ ವಿಧಾನಸೌಧವನ್ನು ಮಾಡುತ್ತಾರೆ, ಅದರ ಕಾರ್ಯಕ್ರಮಕ್ಕೆ ನನ್ನ ಹೆಸರನ್ನು ಹಾಕಿಸುವುದಿಲ್ಲ, ಅರಸೀಕೆರೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮ ಮಾಡುತ್ತಾರೆ, ನಮ್ಮ ಉಸ್ತುವಾರಿ ಸಚಿವರೂ ಬರುತ್ತಾರೆ, ನನ್ನ ಕ್ಷೇತ್ರದ ಫಲಾನುಭವಿಗಳನ್ನೂ ಕರೆಯುತ್ತಾರೆ ಆದರೆ ನನ್ನ ಹೆಸರು ಇರುವುದಿಲ್ಲ. ಇಂಥ ಸಂದರ್ಭಕ್ಕೂ ಸಹ ಸೂಕ್ತವಾದ ಆದೇಶವನ್ನು ಕೊಡತಕ್ಕ ಬಗ್ಗೆ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ಸನ್ಮಾನ್ಯ ಉಪಮುಖ್ಯಮಂತ್ರಿಯವರು ಮತ್ತು ಸಂಸದೀಯ ವ್ಯವಹಾರಗಳ ಸಚಿವರುಗಳ ಗಮನಕ್ಕೆ ಮತ್ತು ತಮ್ಮಗಳ ಮೂಲಕ ಸರ್ಕಾರದ ಗಮನಕ್ಕೆ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಶ್ರೀಮಾನ್ ಈಶ್ವರಪ್ಪನವರ ಕ್ಷೇತ್ರದಲ್ಲಿ ಇದೇ ರೀತಿ ಸಮಸ್ಯೆಯಾಗಿದೆ ಎಂದು ಮಾಹಿತಿ ಇದೆ, ಶ್ರೀಮಾನ್ ಆಯನೂರು ಮಂಜುನಾಥ್‌ರವರನ್ನೂ ಇದೇ ರೀತಿ ಕ್ಷೇತ್ರದ ಕಾರ್ಯಕ್ರಮಗಳಲ್ಲಿ ಅಲಕ್ಷ್ಯ ಮಾಡಿದರು

ಎನ್ನತಕ್ಕ ವಿಚಾರ ಇದೆ, ಮತ್ತೆ ಬೀದರ್ ಕ್ಷೇತ್ರದಲ್ಲಿ ಶ್ರೀಮಾನ್ ಹರ್ಷಿ ಯವರಿಗೆ ಇದೇ ರೀತಿಯಾಯಿತು ಎಂಬ ವಿಚಾರದ ಬಗ್ಗೆ ಇಲ್ಲಿ ವ್ಯಾಪಕವಾಗಿ ಚರ್ಚೆಯಾಗಿ ಒಂದು ಒಟ್ಟಾರೆ ತೀರ್ಮಾನಕ್ಕೆ ನಾವೆಲ್ಲರೂ ಬಂದಿದ್ದೇವೆ. ಎಲ್ಲೇ ಆಗಲಿ ಶಾಸಕರನ್ನು, ವಿಶೇಷವಾಗಿ ಶಿವರಾಮ್‌ರವರ ಕ್ಷೇತ್ರದಂತೆ ಪರಿಸ್ಥಿತಿ ಇದ್ದರೆ ಅಂಥ ಶಾಸಕರನ್ನು ಎರಡೂ ಕಡೆಗಳ ಸಮಾರಂಭಗಳಿಗೆ ಆಹ್ವಾನಿಸಬೇಕು ಎನ್ನತಕ್ಕದ್ದು ಸೌಜನ್ಯದ ಪ್ರಶ್ನೆ. ಮಾನ್ಯ ಹಿರಿಯ ಸಚಿವರಾದ ಜಾಲಪ್ಪನವರು ಯಾರ್‍ಯಾರು ಏನೇನನ್ನು ಮಾಡಿಕೊಂಡಿದ್ದಾರೆ ಅದನ್ನು ಅವರುಗಳು ಅನುಭವಿಸಿದ್ದಾರೆ, ಹಿಂದಿನ ಆಡಳಿತದಲ್ಲಿ ಒಳ್ಳೆಯದೇನಾದರೂ ಇದ್ದರೆ ಅದನ್ನು ಅನುಸರಿಸಿಕೊಂಡು ಕೆಟ್ಟದನ್ನು ಮಾಡಬೇಕೆನ್ನುವ ಉದ್ದೇಶ ನಮಗಿಲ್ಲವೆಂದು ಹೇಳಿದ್ದಾರೆ. ಮಾನ್ಯ ನಂಜಪ್ಪನವರು ಜಿಲ್ಲಾ ಪಂಚಾಯಿತಿಗಳಿಂದ ಆ ರೀತಿಯಾಗಿರಬಹುದೆಂದು ಹೇಳಿದ್ದಾರೆ. ಇವುಗಳೆಲ್ಲವೂ ಪ್ರಶ್ನೆಗೆ ಉತ್ತರವಾಗುವುದಿಲ್ಲ, ಇದು ಪ್ರಶ್ನೆಗೆ ಸಬೂಬಾಗುತ್ತದೆ. ಯಾವಾಗಲೂ ಎಡವತಕ್ಕದ್ದು ಸಹಜ, ಆ ರೀತಿ ಎಡವಿದಾಗ ಅದನ್ನು ನಾವು ಒಪ್ಪಿಕೊಂಡು ಪುನಃ ಈ ರೀತಿಯಾದ ಘಟನೆಯಾಗಲು ಅವಕಾಶ ಕೊಡುವುದಿಲ್ಲವೆಂದು ಹೇಳತಕ್ಕದ್ದು ಸಮಂಜಸವಾಗುತ್ತದೆ. ತಾವು ದಯಮಾಡಿ ಈ ವಿಚಾರದಲ್ಲಿ ಎಲ್ಲಾ ಸಚಿವ ಸಹೋದ್ಯೋಗಿಗಳಿಗೆ ಸೂಕ್ತವಾದ ತಿಳುವಳಿಕೆಯನ್ನು ಕೊಟ್ಟು ಈ ರೀತಿಯಾದ ಮುಜುಗರ ಮತ್ತೆ ಮತ್ತೆ ಉಂಟಾಗಲಾರದಂತೆ ಮಾಡಬೇಕೆಂದು ತಮ್ಮಲ್ಲಿ ಸೂಚಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟಂತೆ ನಾನು ಸಂಬಂಧಪಟ್ಟಂಥ ಅಧಿಕಾರಿಗಳ ಮೇಲೆ ಸೂಕ್ತವಾದ ಕ್ರಮ ತಗೆದುಕೊಳ್ಳ ಭೇಕೆಂದು ಪತ್ರವನ್ನು ಬರೆದಿದ್ದೆ.

Mr. SPEAKER : The Matter under rule 300 is closed. We have heard enough. I have heard you.

ಶ್ರೀ, ಜಿ.ವಿ. ಶ್ರೀರಾಮರೆಡ್ಡಿ : ನಾನು ಆ ವಿಚಾರದ ಬಗ್ಗೆ ಹೇಳುತ್ತಿಲ್ಲ, ನಾನು ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೆ, ಇದುವರೆಗೂ ಏನೂ ಕ್ರಮ ತೆಗುದಕೊಂಡಿಲ್ಲ. ಅದರ ಬಗ್ಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಬೇಕಾದಷ್ಟು ಸಮಯ ಇರುತ್ತದೆ ಆಗ ಮಾತನಾಡಿ. ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೇಳಿದ್ದರು.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಯವರು) : ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇದರ ಬಗ್ಗೆ ಸರ್ಕಾರ ಆಜ್ಞೆಯನ್ನೂ ಹೊರಡಿಸಿದ್ದೇವೆ. ಅದರಲ್ಲಿ ಕೋಡ್ ಆಫ್ ಕಾಂಡ್ಯಕ್ಟ್ ಯಾವ ರೀತಿ ಇರಬೇಕು ಎಂದು ಇದೆ, ಅಧಿಕಾರಿಗಳು ಮತ್ತು ಶಾಸಕರುಗಳ ಬಗ್ಗೆ ಇದೆ. ಇಲ್ಲಿ ತಾವು ಪ್ರಸ್ತಾಪ ಮಾಡುತ್ತಿರತಕ್ಕದ್ದು ಸರ್ಕಾರದಿಂದ ಮಂತ್ರಿಗಳು ಜಿಲ್ಲೆಗಳಿಗೆ ಹೋದಾಗ, ಆಯಾಯ ಕ್ಷೇತ್ರಕ್ಕೆ ಹೋದಾಗ ಅಲ್ಲಿನ ಶಾಸಕರನ್ನು ಕರೆದು ಅವರ ಅಧ್ಯಕ್ಷತೆಯಲ್ಲಿ ಸಭೆ ಮಾಡಬೇಕು ಎನ್ನತಕ್ಕದ್ದು ಇದೆ ಅದರ ಬಗ್ಗೆ ನಮಗ್ಯಾರಿಗೂ ತಕರಾರಿಲ್ಲ. ಕೆಲವುಸಾರಿ ಯಾವುದೋ ಖಾಸಗಿ ಆಹ್ವಾನದ ಮೇರೆಗೆ ಮಂತ್ರಿಗಳು ಹೋದಂಥ ಸಂದರ್ಭಗಳಲ್ಲಿ ಶಾಸಕರನ್ನು ಕರೆಯದೇ ಇರಬಹುದು, ಆದರೆ ಸರ್ಕಾರಿ ಕಾರ್ಯಕ್ರಮಕ್ಕೆ ಹೋದಾಗ.

ಶ್ರೀ ಬಿ. ಶಿವರಾಮ್ : ಮಂತ್ರಿಗಳೇ ಬರುವುದು, ಸರ್ಕಾರಿ ಮಂತ್ರಿಗಳು ಬರಬೇಕಾದರೆ ಅದು ಮನೆಯ ವ್ಯವಹಾರವಲ್ಲ, ಜನಸಂಪರ್ಕ ಸಭೆಯೆಂದು ಬಂದಿದ್ದಾರೆ, ಸರ್ಕಾರದ ಕಾರು, ಸರ್ಕಾರದ ಸವಲತ್ತಿನಿಂದಲೇ ಬಂದಿರುವುದು.

ಶ್ರೀ ಜೆ.ಹೆಚ್. ಪಟೇಲ್ : ಇದರ ಬಗ್ಗೆ ನನಗೆ ಅರ್ಥವಾಗಿದೆ. ಹಿಂದೆಯೂ ಸಹ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಕೆಲವು ಸಲ ಆಚಾತುರ್ಯದಿಂದ ಆ ರೀತಿಯಾಗಿರಬಹುದು. ಆದರೆ ನಿಯಮದ ಪ್ರಕಾರ ಸರ್ಕಾರಿ ಕಾರ್ಯಕ್ರಮವಾಗಿದ್ದರೆ ಉಸ್ತುವಾರಿ ಸಚಿವರು ಆ ಕ್ಷೇತ್ರದ ಶಾಸಕರನ್ನು ಮುಂದಿಟ್ಟುಕೊಂಡೇ ಆ ಕಾರ್ಯಕ್ರಮವನ್ನು ಮಾಡಬೇಕು. ಈ ತತ್ವವನ್ನು ಹಿಂದೆಯೂ ಒಪ್ಪಿಕೊಂಡಿದ್ದೇವೆ. ಎಲ್ಲೋ ಒಂದೊಂದು ಕಡೆ ಆ ರೀತಿ ಸ್ಥಳೀಯ ಶಾಸಕರನ್ನು ಕರೆಯುವಲ್ಲಿ ತಪ್ಪಾಗಿರಬಹುದು.

ಈಗ ಮಾನ್ಯ ದೇವೇಗೌಡರ ಸುದ್ದಿ ಹೇಳಿದಿರಿ. ಮಾನ್ಯ ದೇವೇಗೌಡರು ಮತ್ತು ನಾನು ಹಾಸನಕ್ಕೆ ಹೋದಾಗ ಯಾವ ಶಾಸಕರನ್ನೂ ಬಿಟ್ಟು.... ನಾನು ಅಲ್ಲಿದ್ದ ದಿವಸ ಮಾನ್ಯ ಸದಸ್ಯರಾದ ರಾಮಸ್ವಾಮಿಯವರೂ ಈ ಸಮಾರಂಭದಲ್ಲಿದ್ದರು. ಮಾನ್ಯ ರಾಮಸ್ವಾಮಿಯವರೇ ತಾವು ಆ ದಿವಸ ಸಮಾರಂಭದಲ್ಲಿ ಉಪಸ್ಥಿತರಿರಲಿಲ್ಲವೇ? ಯಾವುದೋ ಒಂದು ಗಳಿಗೆಯಲ್ಲಿ ಅಕಸ್ಮಾತ್ತಾಗಿ ಸಮಾರಂಭಕ್ಕೆ ಕರೆಯಲಿಲ್ಲ ಎಂದಾಕ್ಷಣ ಮಾನ್ಯ ದೇವೇಗೌಡರು ನಮ್ಮನ್ನು ಮಾತನಾಡಿಸಲಿಲ್ಲ ಎಂದು ಹೇಳಿದರೆ ಹೇಗೆ? ಒಮ್ಮೆ ನಾನು ಮಾನ್ಯ ಯಡಿಯೂರಪ್ಪನವರನ್ನು ಬಿಟ್ಟು ಒಂದೆಡೆ ಹೋಗಿದ್ದೆ

ಶ್ರೀ ಬಿ.ಬಿ. ಶಿವಪ್ಪ : ತಾವು ಬೇರೆ ಕಡೆ ಹೋಗುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಶ್ರೀನಿವಾಸ್‌ರವರೇ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ತಾವು ಸರ್ಕಾರದ ಯಾವ ರೀತಿ ವರ್ತಿಸಬೇಕು ಎಂದು ಹೇಳಿದಂತೆ, ಮಾನ್ಯ ಸದಸ್ಯರಿಗೂ ಅವರುಗಳು ಯಾವ ರೀತಿ ವರ್ತಿಸಬೇಕು ಎಂಬುದನ್ನು ಹೇಳಿ. ನಾನು ಒಂದು ದಿವಸ ಬೈ ಮಿಸ್ಟೇಕ್ ಮಾನ್ಯ ಯಡಿಯೂರಪ್ಪನವರನ್ನು ಸಮಾರಂಭವೊಂದಕ್ಕೆ ಬಿಟ್ಟು ಹೋಗಿದ್ದೆ. ಬೇಕಾದರೆ ಆ ಬಗ್ಗೆ ಮಾನ್ಯ ಯಡಿಯೂರಪ್ಪನವರನ್ನೇ ಕೇಳಿ. ಅಮೇಲೆ ನಾನು ಮತ್ತೆ ಈ ರೀತಿ ಆಗಬಾರದೆಂದು ಅಧಿಕಾರಿಗಳಿಗೆ ಹೇಳಿದೆ. ಯಾವುದೇ ಸರ್ಕಾರಿ ಕರ್ಯಾಕ್ರಮವಿರಲಿ, ಅದು ಜಿಲ್ಲಾ ಪಂಚಾಯಿತಿಯಿಂದಾಗಲೀ ಅಥವಾ ತಾಲ್ಲೂಕು ಪಂಚಾಯಿತಿಯಿಂದಾಗಲೀ, ನಾನು ಯಾವತ್ತಾದರೂ ನಿಮ್ಮನ್ನು ಹೇಗೆ ಬಿಟ್ಟು ಹೋಗುತ್ತೇನೆ? ತಾವು ಏಕೆ ಆ ರೀತಿ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಬಿ. ಶಿವಪ್ಪ : ಸರ್ಕಾರ ಈ ಬಗ್ಗೆ ಮತ್ತೊಂದು ಸುತ್ತೋಲೆಯನ್ನು ಹೊರಡಿಸಬೇಕಾಗುತ್ತದೆ. ಕಾರಣ ಏನೆಂದರೆ..... ಯಾವುದೋ ಒಂದು ಸಂದರ್ಭದಲ್ಲಿ, ನಾನು ಇಲ್ಲಿ ಅವರ ಹೆಸರನ್ನು ಪ್ರಸ್ತಾಪ ಮಾಡುವುದಿಲ್ಲ...

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಈ ಬಗ್ಗೆ ಮಾತನಾಡಿರುವಂತಹ ಹಲವಾರು ಶಾಸಕರುಗಳು ತಮ್ಮ ಕ್ಷೇತ್ರಗಳಲ್ಲಿ ಅನಾವಶ್ಯಕವಾಗಿ ಗಲಭೆ ಆಗುವಂತಹ ಸಂದರ್ಭಗಳನ್ನು ತಡೆಗಟ್ಟುವುದೂ ಕೂಡ ತಮ್ಮ ಹೊಣೆಗಾರಿಕೆಯಾಗಿದೆ ಎಂಬುದನ್ನು ಬಹಳಷ್ಟು ಶಾಸಕರು ಅರ್ಥಮಾಡಿಕೊಂಡಿಲ್ಲ, ಯಾರೋ ಒಬ್ಬರು ಪುಂಡ, ಪೋಕರಿಗಳಿಗೆ ಸ್ಫೂರ್ತಿ ಕೊಟ್ಟು, ಬಸ್ಸು ಸುಡುವಂಥದ್ದು, ಬೆಂಕಿ ಹಚ್ಚುವಂಥಾದ್ದು ಆದಾಗ.....

(ಗೊಂದಲ)

ಅಧ್ಯಕ್ಷರು : ತಾವು ಬೇರೆ ವಿಷಯವನ್ನು ಪ್ರಸ್ತಾಪಿಸುತ್ತಿದ್ದೀರಿ.

(ಗೊಂದಲ)

ಶ್ರೀ ಬಿ.ಬಿ. ಶಿವಪ್ಪ : ಈ ಬಗ್ಗೆ ಮತ್ತೊಂದು ಸಾರಿ ಸುತ್ತೋಲೆಯನ್ನು ಸರ್ಕಾರದವರು ಕಳುಹಿಸಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ನಮ್ಮ ಜಿಲ್ಲೆಯ ಉನ್ನತಾಧಿಕಾರಿಯೊಬ್ಬರ ಬಳಿ ಮಾತನಾಡಿದೆ. ಆ ಅಧಿಕಾರಿಯವರು ನನಗೆ ಈ ವಿಚಾರದಲ್ಲಿ ಹೀಗೆ ಮಾಡಬೇಕು ಎಂದು ಸರ್ಕಾರದಿಂದ ಒಂದು ಆರ್ಡಿನೆನ್ಸ್ ಹೊರಡಿಸಿ ಎಂದು ಹೇಳಿದರು. ನಾನು ಮಾನ್ಯ ಅಧ್ಯಕ್ಷರ ಗಮನಕ್ಕೆ ಆ ಅಧಿಕಾರಿಗಳು ಹೇಳಿರತಕ್ಕ ಸಂಪೂರ್ಣ ವಿಚಾರವನ್ನು ತರುತ್ತೇನೆ. ಇದು ಅವರು ಇತ್ತೀಚೆಗೆ ಹೇಳಿರತಕ್ಕ ವಿಚಾರ. ಅಧಿಕಾರಿಗಳು ಈ ವಿಚಾರ ಮರೆತಿರಬಹುದು ಅಥವಾ ಹೊಸ ಅಧಿಕಾರಿಗಳು ಬಂದಿರಬಹುದು. ಆದುದರಿಂದ ಈ ದಿಸೆಯಲ್ಲಿ ಮತ್ತೊಮ್ಮೆ ಸುತ್ತೋಲೆ ಹೊರಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಎಚ್ಚರಿಕೆ ಕೊಡಿ. ಆ ರೀತಿ ಆಗದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿ ಪ್ರಾರಂಭವಾಗುತ್ತದೆ.

ಅಧ್ಯಕ್ಷರು : ಮಾನ್ಯ ಶಿವಪ್ಪನವರೇ, ತಾವು ಆ ಅಧಿಕಾರಿಗೆ ಈ ಬಗ್ಗೆ ಏನು ಹೇಳಿದಿರಿ?

ಶ್ರೀ ಬಿ.ಬಿ. ಶಿವಪ್ಪ : ನಾನು ಅವರಿಗೆ ಈ ಬಗ್ಗೆ ಸರಿಯಾಗಿ ಹೇಳಿದೆ.

Mr. SPEAKER : we know that such officers are there We Should have the capacity to deal with them. We know that such arrogant fellows are there. Let us also hve the capacity to deal with them.

(4) **ತಮಿಳು ನಾಡಿಗೆ ಕಾವೇರಿ ನೀರು.**

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ತಮಿಳುನಾಡಿಗೆ ಕಾವೇರಿಯ 6 ಟಿ.ಎಂ.ಸಿ. ನೀರನ್ನು ಬಿಡುಗಡೆ ಮಾಡಲು ಸರ್ಕಾರವು ಮುಂದಾಗಿ ಆ ಬಗ್ಗೆ ಎಲ್ಲಾ ವಿರೋಧ ಪಕ್ಷಗಳ....

ಅಧ್ಯಕ್ಷರು : ತಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವಂತಹ ವಿಚಾರದ ಬಗ್ಗೆ ಮಾತನಾಡುತ್ತಿದ್ದೀರಿ ತಾನೇ?

ಶ್ರೀ ವಾಟಾಳ್ ನಾಗರಾಜ್ : ನಾನು ಮೊದಲು ವಿಚಾರವನ್ನು ಪ್ರಸ್ತಾಪಿಸುತ್ತೇನೆ. ತಾವು ಅದನ್ನು ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಆಯಿತು. ತಾವು ಮೊದಲು ವಿಷಯ ಪ್ರಸ್ತಾಪಿಸಿ.

ಶ್ರೀ ವಾಟಾಳ್ ನಾಗರಾಜ್ : ನನ್ನೊಬ್ಬನನ್ನು ಬಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಯಡಿಯೂರಪ್ಪನವರೂ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳು ತಮಿಳುನಾಡಿಗೆ ಕಾವೇರಿ ನದಿಯಿಂದ 6 ಟಿ.ಎಂ.ಸಿ. ನೀರನ್ನು ಬಿಡುವ ಸರ್ಕಾರದ ನಿಲುವಿಗೆ ಸಹಮತಿ ವ್ಯಕ್ತಪಡಿಸಿದವು. ಹಿಂದೆ ಮಾನ್ಯ ಮುಖ್ಯಮಂತ್ರಿಯವರು ತಮಿಳುನಾಡಿಗೆ ಹೇಳದೇ ಕೇಳದೇ 5 ಟಿ.ಎಂ.ಸಿ. ನೀರನ್ನು ಬಿಟ್ಟರು ಎಂಬ ವಿಚಾರದ ಬಗ್ಗೆ ವಿರೋಧ ಪಕ್ಷಗಳು ಸದನದ ಒಳಗೆ ಮತ್ತು ಹೊರಗೆ ಸರ್ಕಾರದ ವಿರುದ್ಧ ದೊಡ್ಡ ಸಮರವನ್ನೇ ನಡೆಸಿದವು. ಇದಾದ ನಂತರ ಯಾವ ಕಾರಣಕ್ಕೂ ತಮಿಳುನಾಡಿಗೆ ಒಂದು ಹನಿ ನೀರನ್ನೂ ಬಿಡಬಾರದೆಂದು ಈ ಸದನದಲ್ಲಿ ಒಂದು ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಲಾಯಿತು ಎಂದು ಹೇಳಲಾಯಿತು. ಆದರೆ ನಾನು ಆ ನಿರ್ಣಯಕ್ಕೆ ಒಪ್ಪಲಿಲ್ಲ, ನನ್ನ ನಿರ್ಣಯ ಏನೆಂದರೆ ನೂರಕ್ಕೆ ನೂರರಷ್ಟು ನ್ಯಾಯ ಮಂಡಳಿಯನ್ನು ಬಹಿಷ್ಕಾರ ಮಾಡಬೇಕು ಎಂಬುದು. ನ್ಯಾಯ ಮಂಡಳಿಯನ್ನು ನಾವು

ಬಹಿಷ್ಕಾರ ಮಾಡದಿದ್ದರೆ ನ್ಯಾಯ ಮಂಡಳಿಯು ಅಂತಿಮವಾಗಿ ಕೊಡತಕ್ಕ ತೀರ್ಪು ಕರ್ನಾಟಕದ ರೈತರಿಗೆ "ಮರಣ ಶಾಸನ"ವಾಗುತ್ತದೆ ಎಂದು ನಾನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇನೆ. ನಾನು ಆ ನಿರ್ಣಯಕ್ಕೆ ಈಗಲೂ ಬದ್ಧನಾಗಿದ್ದೇನೆ ಆದರೆ ಈಗ ಸರ್ಕಾರದವರು ಕಾವೇರಿ ಬಗ್ಗೆ ಚರ್ಚೆ ಮಾಡಲಿಕ್ಕೆ ನಾಳೆ ಬೆಳಿಗ್ಗೆ 8 ಗಂಟೆಗೆ ಸರ್ವ ಪಕ್ಷಗಳ ಒಂದು ಸಭೆಯನ್ನು ಕರೆದಿದ್ದಾರೆ. ಈ ಸದನ ನಡೆಯುವಾಗ, ಸದನದ ನಿರ್ಣಯವನ್ನು ಧಿಕ್ಕರಿಸಿ 6 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಟ್ಟಿರತಕ್ಕದ್ದರ ಬಗ್ಗೆ ಮತ್ತು ರಾಜ್ಯ ಸರ್ಕಾರಕ್ಕೂ ಹಾಗೂ ಕೇಂದ್ರ ಸರ್ಕಾರಕ್ಕೂ ಈ ವಿಚಾರದಲ್ಲಿ ಆಗಿರತಕ್ಕ ಒಪ್ಪಂದ ಏನು? ಮಾನ್ಯ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ರಾಜ್ಯ ಸರ್ಕಾರವು ಮಾತನಾಡಿರತಕ್ಕದ್ದು ಏನು? ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪು ಏನು? ಎಂಬ ವಿಚಾರಗಳೆಲ್ಲಾ ಸಮಗ್ರವಾಗಿ ಈ ಸದನದ ಮುಂದೆ ಚರ್ಚೆಯಾಗಬೇಕೇ ಹೊರತು.....

ಅಧ್ಯಕ್ಷರು : ತಾವು ಈ ವಿಚಾರದ ಬಗ್ಗೆ ಚರ್ಚೆ ಮಾಡಿ, ನಾನು ಬೇಡ ಎನ್ನುವುದಿಲ್ಲ, ಆದರೆ ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವುದು ಬೇಡ. ತಾವು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯ ವೇಳೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಬಹುದು. ಅಥವಾ ಈ ಬಗ್ಗೆ ಚರ್ಚಿಸಲು ಯಾವ ನಿಯಮದ ಅಡಿಯಲ್ಲಾದರೂ ನೋಟೀಸ್ ಕೊಡಿ. ನಿಮ್ಮ ಚರ್ಚೆಯನ್ನು, ನಿಮ್ಮ ಅಭಿಪ್ರಾಯವನ್ನು ಮೊಟಕುಗೊಳಿಸುವ ಇಚ್ಛೆ ನನಗಿಲ್ಲ, ಅದಕ್ಕೆ ನಾನು ಪೂರ್ಣ ಅವಕಾಶ ಕೊಡುತ್ತೇನೆ. ಶೂನ್ಯ ವೇಳೆಯಲ್ಲಿ ಗಂಭೀರವಾದಂತಹ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇದೆ. ಇದು ಗಂಭೀರವಾದ ವಿಷಯವಲ್ಲ ಎಂದು ನಾನು ಹೇಳುತ್ತಿಲ್ಲ, ಜರೂರಾಗಿ ಆಗಬೇಕಾದಂತಹ ಯಾವುದಾದರೂ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಹುದು. ಸದನ ಇನ್ನೂ 5-6 ದಿವಸಗಳ ಕಾಲ ನಡೆಯಲಿರುವುದರಿಂದ ಈ ಬಗ್ಗೆ ಚರ್ಚಿಸಲು ನಿಮಗೆ ಸಾಕಷ್ಟು ಅವಕಾಶ ಇರುತ್ತದೆ. ತಾವು ವಿಷಯವನ್ನು ಬೇರೆ ರೀತಿಯಲ್ಲಿ ಪ್ರಸ್ತಾಪಿಸಬಹುದು. ಅದಕ್ಕೆ ನಾನು ನಿಮಗೆ ಅಡ್ಡಿ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ತುರ್ತಾಗಿ ವಿಷಯವನ್ನು ಪ್ರಸ್ತಾಪ ಮಾಡಲು ತಾವು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ನನಗಂತೂ ಈ ವಿಚಾರದಲ್ಲಿ ಬಹಳ ನೋವಾಗಿದೆ. ಇಲ್ಲಿ ಕುಳಿತಿರತಕ್ಕ ನನ್ನ ಸ್ನೇಹಿತರು ಈ ವಿಚಾರದ ಬಗ್ಗೆ ಚಕಾರ ಎತ್ತುತ್ತಿಲ್ಲ, ಬಹಳ ಆರಾಮಾಗಿ ಕುಳಿತುಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಏನು ಹೇಳಬೇಕೋ ಹೇಳಿ, ಆದರೆ ಬೇರೆಯವರು ಚಕಾರ ಎತ್ತುತ್ತಿಲ್ಲ ಎಂದು ಹೇಳುವುದು ಬೇಡ. ವಿಷಯವನ್ನು ಯಾವಾಗ ಎತ್ತಬೇಕೋ ನೋಡೋಣ. ಆಮೇಲೆ ಅದನ್ನು ಎತ್ತಬೇಕೋ ಇಳಿಸಬೇಕೋ ಎಂಬುದನ್ನು ಮಾತನಾಡೋಣ.

ಶ್ರೀ ವಾಟಾಳ್ ನಾಗರಾಜ್ : ಅದು ಸರಿ ಬಿಡಿ. ಇವರಿಗೆ ಎತ್ತುವುದು ಮತ್ತು ಇಳಿಸುವುದು ಎರಡೂ ಗೊತ್ತಿದೆ. ಹಾಗಾದರೆ ನಾನು ಅದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ, ಮಾನ್ಯ ಅಧ್ಯಕ್ಷರು ಈ ವಿಷಯವನ್ನು ಪ್ರಸ್ತಾಪಿಸಲು ನಂತರ ಅವಕಾಶ ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಖಂಡಿತವಾಗಿ ತಮಗೆ ವಿಚಾರ ಪ್ರಸ್ತಾಪಿಸಲು ನಂತರ ನಾನು ಅನುಮತಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಮತ್ತೊಂದು ವಿಚಾರವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ರಾಜ್ಯ ಸರ್ಕಾರದ 2-3 ಮಂತ್ರಿಗಳು

ರಾಜೀನಾಮೆ ಕೊಟ್ಟಿದ್ದಾರೆ. ಯಾವ ಯಾವ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ ಎಂಬ ಬಗ್ಗೆ ಸರ್ಕಾರ ಈ ಸದನದಲ್ಲಿ ಪ್ರಕಟಿಸಿಲ್ಲ. ಇದೊಂದು ಬಹಳ ಪ್ರಾಮುಖ್ಯವಾದ ವಿಚಾರ. ಇಬ್ಬರು ಮಂತ್ರಿಗಳು ಈಗಾಗಲೇ ರಾಜೀನಾಮೆ ಕೊಟ್ಟಿದ್ದಾರೆ. ಮೂರನೆಯ ಮಂತ್ರಿ ರಾಜೀನಾಮೆ ಕೊಡುವುದರಲ್ಲಿದ್ದಾರೆ. ಯಾವ ಯಾವ ಮಂತ್ರಿಗಳು ಯಾವ ಯಾವ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಿದ್ದಾರೆ ಎಂಬುದನ್ನು ಸರ್ಕಾರವು ಸದನದ ಗಮನಕ್ಕೆ ತರಬೇಕು ಎಂದು ಕೋರುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ರಾಜೀನಾಮೆ ಕೊಟ್ಟಂತಹ ಮಂತ್ರಿಗಳಿಗೆ ತಾವು ಏಕೆ ರಾಜೀನಾಮೆ ಕೊಡುತ್ತಿದ್ದೇವೆ ಎಂದು ಗೊತ್ತಾಗಿದೆ. ಅದನ್ನು ಇಲ್ಲ ಹೇಳುವುದರ ಅವಶ್ಯಕತೆ ಏನಿದೆ?

ಅಧ್ಯಕ್ಷರು : ತಾವು 1967ರಿಂದಲೂ ಈ ಸದನದಲ್ಲಿದ್ದೀರಿ. ಯಾವುದೇ ಸಚಿವರು ರಾಜೀನಾಮೆ ಕೊಟ್ಟಂತಹ ಸಂದರ್ಭದಲ್ಲಿ ಸ್ವಯಂಪ್ರೇರಿತರಾಗಿ ಸದನದ ಮುಂದೆ ಹೇಳಿಕೆ ಕೊಡಬೇಕಾಗಿದ್ದರೆ ಅಧ್ಯಕ್ಷರ ಅನುಮತಿ ಪಡೆದು ಅವರು ಆ ರೀತಿ ಮಾಢಬಹುದು. ಆದರೆ ಅಧ್ಯಕ್ಷರೇ ಖುದ್ದಾಗಿ ರಾಜೀನಾಮೆ ಕೊಟ್ಟ ಮಂತ್ರಿಗಳನ್ನು ಹೇಳಿಕೆ ಕೊಡಿ ಎಂದು ನಿರ್ಬಂಧಿಸುವುದಕ್ಕಾಗುವುದಿಲ್ಲ. ರಾಜೀನಾಮೆ ಕೊಟ್ಟ ಮೇಲೆ ಅವರು ಸಚಿವರಲ್ಲ. ಅವರಿಗೆ ಯಾವುದೇ ಜವಾಬ್ದಾರಿ ಇರುವುದಿಲ್ಲ. ಮತ್ತೊಬ್ಬರು ಅದನ್ನು ವಹಿಸಿಕೊಂಡಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಒಂದು ವಿಚಾರ ಹೇಳುತೇನೆ. ತಾವು ದಯಮಾಡಿ ಮನಸ್ಸಿಗೆ ಬೇಜಾರು ಮಾಡಿಕೊಳ್ಳಬೇಡಿ.

ಅದ್ಯಕ್ಷರು : ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿರುವ ಪ್ರಶ್ನೆ ಹೇಳಿಕೆ ನೀಡುವುದರ ಬಗ್ಗೆ ಅಲ್ಲ. ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟಾಗ ಮಾನ್ಯ ಮುಖ್ಯಮಂತ್ರಿಗಳು ನನ್ನ ಸರ್ಕಾರದ ಇಂತಹ ಮಂತ್ರಿಯವರು ಇಂತಹ ಕಾರಣಗಳಿಗಾಗಿ ರಾಜೀನಾಮೆ ಕೊಟ್ಟಿದ್ದಾರೆ ಎಂಬುದನ್ನು ಈ ಸದನದಲ್ಲಿ ಪ್ರಕಟಿಸಬೇಕು. ಈ ಸದನ ಬಹಳ ಪ್ರಾಮುಖ್ಯವಾದುದು. ಈ ಸದನ ಸುಮ್ಮನೇ ರಸ್ತೆಯಲ್ಲಿರುವ ಯಾವುದೋ ಅರಳೀನರದ ಕೆಳಗೆ ಕುಳಿತುಕೊಂಡು ಮಾತನಾಡತಕ್ಕ ಸದನವಲ್ಲ. ಏನೇನಾಗಿದೆ ಎಂಬ ಪ್ರಾಮುಖ್ಯವಾದ ವಿಚಾರಗಳನ್ನು ಈ ಸದನಕ್ಕೆ ತಿಳಿಸಬೇಕಾಗುತ್ತದೆ. ಈಗಾಗಲೇ ಸರ್ಕಾರದ ಇಬ್ಬರು ಮಂತ್ರಿಗಳು ರಾಜೀನಾಮೆ ಇನ್ನೊಬ್ಬರು ಒಲ್ಲದ ಮನಸ್ಸಿನಿಂದ ರಾಜ್ಯ ಸಭೆಗೆ ಹೋಗಲು ಈಗ ರಾಜೀನಾಮೆಯನ್ನು ಕೊಡಬೇಕಾಗಿದೆ. ಆ ಪ್ರಶ್ನೆ ಬೇರೆ. ಆದರೆ ಯಾವ ಉದ್ದೇಶಕ್ಕೆ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ ಎಂಬುದು ಗೊತ್ತಾಗಬೇಕು.

ಅಧ್ಯಕ್ಷರು : ನೀವೇ ಒಂದು ಡೆಲಿಗೇಷನ್ ಹೋಗಿ ಆ ಮಂತ್ರಿಗಳು ರಾಜ್ಯ ಸಭೆಗೆ ಹೋಗಲಾರದಂತೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಅವರು ಅಲ್ಲಿಗೆ ಖಂಡಿತವಾಗಿ ಹೋಗುತ್ತಾರೆ. ಹೋಗದೇ ವಿಧಿಯಿಲ್ಲ. ಅವರು ರಾಜ್ಯ ಸಭೆಗೆ ಹೋಗಲೇಬೇಕು. ಮಾನ್ಯ ಅಧ್ಯಕ್ಷರು ರಾಜೀನಾಮೆ ವಿಚಾರದ ಬಗ್ಗೆ ಸರ್ಕಾರದಿಂದ ಉತ್ತರ ಕೊಡಿಸಬೇಕು.

ಅಧ್ಯಕ್ಷರು : ನಾನು ಉತ್ತರ ಕೊಡಿಸುತ್ತೇನೆ. ಇನ್ನೂ ಯಾರುಯಾರು ರಾಜೀನಾಮೆ ಕೊಡುತ್ತಾರೋ ನೋಡೋಣ. ಎಲ್ಲವನ್ನೂ ಸೇರಿಸಿ ಒಟ್ಟಿಗೆ ಉತ್ತರ ಕೊಡಿಸೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದುದು ತಪ್ಪು. ಶ್ರೀಮತಿ ಲೀಲಾವತಿ ಆರ್. ಪ್ರಸಾದ್ ರವರು ಮಂತ್ರಿ ಪದವಿಗೆ ರಾಜೀನಾಮೆ ಕೊಡುವುದಿಲ್ಲ. ಅವರು ತಾವು ರಾಜ್ಯ ಸಭೆಗೆ

ರಾಜೀನಾಮೆ ಕೊಟ್ಟು ಆ ಜಾಗವನ್ನು ಖಾಲಿ ಮಾಡಿ ಅಲ್ಲಿಗೆ ಮಾನ್ಯ ಜಾಲಪ್ಪನವರನ್ನು ಆರಿಸಿ ಕಳುಹಿಸಿ ಅವರು ಸುಖವಾಗಿ 6 ವರ್ಷಗಳ ಕಾಲ ರಾಜ್ಯ ಸಭೆಯಲ್ಲಿರಬೇಕು ಎಂಬ ಇಚ್ಛೆ ಅವರಿಗಿದೆ. ಅವರು ರಾಜ್ಯ ಸಭಾ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆಯೇ ಹೊರತು ಮಂತ್ರಿ ಪದವಿಗೆ ರಾಜೀನಾಮೆ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರ ಇವರಿಗೆ ಹೇಗೆ ಗೊತ್ತಾಯಿತು? ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್‌ನವರು ಮತ್ತು ಜನತಾದಳದವರು ಇಷ್ಟು ಗೋಪ್ಯವಾಗಿ ಒಂದಾಗಿರತಕ್ಕದ್ದು ನಮಗೆ ಗೊತ್ತಿರಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಖರ್ಗೆಯವರು ನೇರವಾಗಿ ಹೇಳಿದ್ದರೆ ನಾನು ರಾಜ್ಯಸಭೆಗೆ ಹೋಗಿ ಬಿಡುತ್ತಿದ್ದೆ. ಖರ್ಗೆಯವರಿಗೆ ನಾನು ಇಲ್ಲಿರುವುದು ಬೇಡವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನೀವೇ ಹೇಳಿದಿರಲ್ಲ, ಮಾನ್ಯ ಅಧ್ಯಕ್ಷರೇ, ಇವರಿಗೆ ತಾವು ಮಂತ್ರಿಗಿರಿ ಬಿಟ್ಟು ರಾಜ್ಯಸಭೆಗೆ ಹೋಗಬೇಕು ಎಂಬುದು ಅವರ ಮನಸ್ಸಿನಲ್ಲಿ ಇದೆಯೋ ಇಲ್ಲವೋ ಎಂಬುದನ್ನು ನೀವೇ ಹೇಳಿ. ಈ ಬಗ್ಗೆ ಬೇಕಾದರೆ ಅವರನ್ನೇ ಕೇಳಿ. ಇದು ಸುಳ್ಳು ಎನ್ನುವುದಾದರೆ ನಾನು ನೀವು ಹೇಳಿದ ಶಿಕ್ಷೆಯನ್ನು ಅನುಭವಿಸಲು ಸಿದ್ಧ.

ಶ್ರೀ ಜೆ.ಹೆಚ್. ಪಟೇಲ್ : ನಿಮ್ಮ ಸಲಹೆಯನ್ನು ಪರಿಶೀಲಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಜಾಲಪ್ಪನವರೇ, ಸನ್ಮಾನ್ಯ ಪಟೇಲ್‌ರವರೂ ಈಗ ನಿಮ್ಮನ್ನು ಇಲ್ಲಿಂದ ಕಳುಹಿಸುವುದಕ್ಕೆ ತಯಾರಾಗಿದ್ದಾರೆ ನೋಡಿ.

ಶ್ರೀ ಕೆ. ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರ ಪ್ರಸ್ತಾಪ ಮಾಡಲು ತಮಗೆ ಸೂಚನೆಯನ್ನು ಕಳುಹಿಸಿದ್ದೆ.

ಅಧ್ಯಕ್ಷರು : ರಸ್ತೆಗಳ ವಿಚಾರದ ಬಗ್ಗೆ ಪ್ರಸ್ತಾಪಿಸಲು ತಾವು ಅನುಮತಿ ಕೋರಿದ್ದಿರಿ ಅಲ್ಲವೇ? ಕ್ಷಮಿಸಿ ನಾನು ಅದನ್ನು ಮರೆತೇ ಬಿಟ್ಟಿದ್ದೆ. ಈಗ ಆ ವಿಚಾರ ಪ್ರಸ್ತಾಪಿಸಿ.

ಶ್ರೀ ಕೆ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ನಮ್ಮ ಜಿಲ್ಲೆಯ ಉಳ್ಳಾಲ ಲೋಕೋಪಯೋಗಿ ಇಲಾಖೆಯ ರಸ್ತೆಗಳು, ಜಿಲ್ಲಾ ಪಂಚಾಯತ್ ಮತ್ತು ನ್ಯಾಷನಲ್ ಹೈವೇ ರಸ್ತೆಗಳ ಬಗ್ಗೆ ಪ್ರಸ್ತಾಪ ಮಾಡಿದಾಗ, ಸರ್ಕಾರವು ಮಳೆಗಾಲ ಮುಗಿದ ತಕ್ಷಣ ನವೆಂಬರ್ ತಿಂಗಳಲ್ಲಿ ಎಲ್ಲಾ ರಸ್ತೆಗಳ್ ಡಾಂಬರೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳುವುದಾಗಿ ಸದನದಲ್ಲಿ ಭರವಸೆ ನೀಡಿತ್ತು. ಆದರೆ ಲೋಕೋಪಯೋಗಿ ಇಲಾಖೆಯ ವತಿಯಿಂದ 1994-95ನೇ ಸಾಲಿನಲ್ಲಿ ರಸ್ತೆಗಳ ಡಾಂಬರೀಕರಣದ್ ಕೆಲಸ ಇನ್ನೂ ಕೂಡ ಪೂರ್ತಿಯಾಗಿಲ್ಲ.

ಅಧ್ಯಕ್ಷರು : ಮಾನ್ಯ ಜಯರಾಮ ಶೆಟ್ಟಿಯವರೇ ಒಂದು ಕೆಲಸ ಮಾಡೋಣ. ಈಗ ಮಾನ್ಯ ಲೋಕೋಪಯೋಗಿ ಸಚಿವರ ಸದನದಲ್ಲಿ ಇಲ್ಲ, ನೀವು ಈ ವಿಚಾರವನ್ನು ಈಗ ಪ್ರಸ್ತಾಪ ಮಾಡಿದರೂ ಕೂಡ ಅದಕ್ಕೆ ಸಮರ್ಪಕವಾಗಿ ಉತ್ತರ ನಿಮಗೆ ಸಿಗುವುದಿಲ್ಲ, ನಾನು ಮತ್ತೆ ಇದೇ ವಿಚಾರವನ್ನ ನಾಳೆ ಪ್ರಸ್ತಾಪ ಮಾಡಲು ನಿಮಗೆ ಅವಕಾಶ ಮಾಡಿಕೊಡುತ್ತೇನೆ. ನಾನು ಮೊದಲೇ ಮಾನ್ಯ ಲೋಕೋಪಯೋಗಿ ಸಚಿವರಿಗೆ ಸದನದಲ್ಲಿರಲು ಸೂಚಿಸುತ್ತೇನೆ. ಏಕೆಂದರೆ ತಾವು ಅಷ್ಟು ಆಸಕ್ತಿಯಿಂದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ತಮಗೆ ಸರಿಯಾದ ಉತ್ತರ ಸಿಗಬೇಕೆಂಬುದು ನನ್ನ ಅಭಿಲಾಷೆ. ನಾಳೆ ನಾನು ಮೊದಲೇ ಅವರಿಗೆ ಈ ಬಗ್ಗೆ ಸೂಚನೆ ಕೊಟ್ಟು

ಅವರು ಸದನದಲ್ಲಿರಲು ಹೇಳುತ್ತೇನೆ. ನಾಳೆ ತಮಗೆ ಈ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ.

(6) ತಮಿಳು ನಾಡಿನಿಂದ ಡಾಂಬರ್ ಸರಬರಾಜಿನಲ್ಲಿ ವಿಳಂಬ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಬಹುಶಃ ಎಲ್ಲಾ ಶಾಸಕರಿಗೂ ಸಹ ತುಂಬ ನೋವಾಗಿದೆ. ಮಳೆಗಾಲ ಪ್ರಾರಂಭವಾಗಲು ಇನ್ನು ಎರಡು ಮೂರು ತಿಂಗಳುಗಳು ಮಾತ್ರ ಇದೆ. ಮದ್ರಾಸ್‌ನಿಂದ ಡಾಂಬರ್ ಬರಲಿಲ್ಲವೆಂದು ಒಂದು ತಾಲ್ಲೂಕಿನಲ್ಲೂ ಒಂದು ಕಿಲೋ ಮಿಟರ್ ರಸ್ತೆಯನ್ನು ಮಾಡಿಲ್ಲ. ಯಾವುದೇ ತಾಲ್ಲೂಕಿನಲ್ಲಿ ಇರಬಹುದು, ಶಾಸಕರು ಮೂವತ್ತು ಲಕ್ಷ ರೂಪಾಯಿಗಳ ಯೋಜನೆಯಲ್ಲಿ ರಸ್ತೆ ಕೆಲಸ ಮಾಡುವುದಿರಬಹುದು, ಬೇರೆ ಯಾವುದೇ ಯೋಜನೆಗಳಿರಬಹುದು, ಆಸ್‌ಫಾಲ್ಟ್ ಇಲ್ಲದೆ ತಾಲ್ಲೂಕುಗಳಲ್ಲಿ ರಸ್ತೆ ಮಾಡುವ ಕೆಲಸ ನಿಂತಿದೆ. ಸಿಮೆಂಟ್, ಕಬ್ಬಿಣದ ಸರಬರಾಜು ಇಲ್ಲದೆಯೇ ಕಟ್ಟಡ ಕೆಲಸ ನಿಂತಿದೆ. ತಮಿಳುನಾಡಿನವರು ಕಾಂಬಿರನ್ನು ಕೊಡದಿದ್ದರೆ ಪರ್ಯಾಯವಾದ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ನಾಳೆ ಇದರ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ. ಇಲ್ಲಿಗೆ ಶೂನ್ಯ ವೇಳೆ ಮುಕ್ತಾಯವಾಯಿತು, ಇನ್ನು ಗಮನಸೆಳೆಯುವ ಸೂಚನೆಗಳು.

ಗಮನ ಸೆಳೆಯುವ ಸೂಚನೆಗಳು

ರಾಜ್ಯದ ಬರಗಾಲ ಪೀಡಿತ ಹಾಗೂ ಗುಡ್ಡಗಾಡು ಪ್ರದೇಶದ ಜನರಿಗೆ ಗೋಧಿಯ ಮೇಲೆ ಕೇಂದ್ರ ಸರಕಾರ ಕೊಡುವ ವಿಶೇಷ ಸಹಾಯಧನವನ್ನು ನೀಡದಿರುವುದು.

ಶ್ರೀ ಜಗದೀಶ. ಟಿ. ಪಾಟೀಲ್ (ಶ್ರೀ ಡಿ.ಆರ್. ಪಾಟೀಲ್ ರವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಬರಗಾಲ ಪೀಡಿತ (ಡಿಪಿಎಪಿ) ಹಾಗೂ ಗುಡ್ಡಗಾಡು ಪ್ರದೇಶದ ಜನರಿಗೆ ಗೋಧಿಯ ಮೇಲೆ ಕೇಂದ್ರ ಸರ್ಕಾರ ಕೊಡುವ ವಿಶೇಷ ಸಹಾಯಧನವನ್ನು ನೀಡದಿರುವುದರಿಂದ ಕಡುಬಡವ ಗ್ರಾಹಕರಿಗೆ ಅನ್ಯಾಯವಾಗಿರುವ ಬಗ್ಗೆ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎನ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಅಧ್ಯಕ್ಷರೇ ರಾಜ್ಯ ಸರ್ಕಾರವು ಸಹಾಯ ಧನಯುಕ್ತ ಆಹಾರ ಧಾನ್ಯಗಳನ್ನು ಬಡತನ ರೇಖೆಗಿಂತ ಕಡಿಮೆ ಆದಾಯ ಇರುವ ಬಡಕುಟುಂಬಗಳಿಗೆ ಅಕ್ಕಿ ಹಾಗೂ ಗೋಧಿಯನ್ನು ವಿತರಿಸುತ್ತಿದೆ. ಸಹಾಯಧನಯುಕ್ತ ಆಹಾರಧಾನ್ಯ ವಿತರಣಾ ಯೋಜನೆಯಲ್ಲಿ ದಿನಾಂಕ: 1-4-1995 ರಿಂದ ಜಾರಿಗೆ ಬರುವಂತೆ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ. 3.20 ರಂತೆ ಹಾಗೂ ದಿನಾಂಕ 1-11-1995 ರಿಂದ ಜಾರಿಗೆ ಬರುವಂತೆ ಗೋಧಿಯನ್ನು ಪ್ರತಿ ಕೆ.ಜಿ.ಗೆ. ರೂ. 2.00 ರಂತೆ ವಿತರಿಸುತ್ತಿದೆ.

ಈ ಯೋಜನೆಯ ಫಲವನ್ನು ಡಿ.ಪಿ.ಎ.ಪಿ. ಪ್ರದೇಶದಲ್ಲಿರುವ ಬಡಜನರನ್ನು ಒಳಗೊಂಡಂತೆ ಬಡತನ ರೇಖೆಗಿಂತ ಕಡಮೆ ಆದಾಯ ಇರುವ ಬಡಕುಟುಂಬಗಳಿಗೆ ವಿಸ್ತರಿಸಲಾಗಿದೆ. ಆದುದರಿಂದ, ಸರ್ಕಾರವು ಡಿ.ಪಿ.ಎ.ಪಿ. ಪ್ರದೇಶದಲ್ಲಿ ವಾಸಿಸುತ್ತಿರುವ ಬಡಕುಟುಂಬಗಳಿಗೂ ಹಾಗೂ ಇತರೇ ಪ್ರದೇಶಗಳಲ್ಲಿ ವಾಸಿಸುವ ಬಡಕುಟುಂಬಗಳಿಗೂ ಆಹಾರಧಾನ್ಯ ವಿತರಣಾ ಬೆಲೆಯಲ್ಲಿ ವಿವಿಧ ನೀತಿ ಅನುಸರಿಸುವುದು ಸೂಕ್ತವಲ್ಲ.

ಕೇಂದ್ರ ಸರ್ಕಾರವು ಡಿ.ಪಿ.ಎ.ಪಿ. ಹಾಗೂ ಇತರೇ ಪ್ರದೇಶಗಳಿಗೆ ಈ ಕೆಳಕಂಡ ದರದಲ್ಲಿನ ಅಕ್ಕಿ ಹಾಗೂ ಗೋಧಿಯನ್ನು ಬಿಡುಗಡೆ ಮಾಡುತ್ತಿದೆ.

ಡಿ.ಪಿ.ಎ.ಪಿ (ಪ್ರತಿ ಕ್ವಿಂ.ಗೆ)			ಇತರೆ ಪ್ರದೇಶ
ಅಕ್ಕಿ ...	ರೂ.	598.00	643.00
ಗೋಧಿ ...	ರೂ.	352.00	92.00

ಕರ್ನಾಟಕದಲ್ಲಿ ಸಹಾಯಧನಯುಕ್ತ ಅಕ್ಕಿ ಹಾಗೂ ಗೋಧಿಯನ್ನು ಡಿ.ಪಿ.ಎ.ಪಿ. ಪ್ರದೇಶಗಳನ್ನೊಳಗೊಂಡಂತೆ ಈ ಕೆಳಕಂಡ ದರದಲ್ಲಿ ವಿತರಿಸಲಾಗುತ್ತಿದೆ :

ಡಿ.ಪಿ.ಎ.ಪಿ. ಪ್ರದೇಶ (ಪ್ರತಿ ಕ್ವಿಂ.ಗೆ)			ಇತರೆ ಪ್ರದೇಶ
ಅಕ್ಕಿ ...	ರೂ.	320.00	705.00
ಗೋಧಿ ...	ರೂ.	200.00	445.00

ಡಿ.ಪಿ.ಎ.ಪಿ. ಹಾಗೂ ನಾನ್ ಡಿ.ಪಿ.ಎ.ಪಿ. ಪ್ರದೇಶಗಳ ಪಡಿತರ ಚೀಟಿದಾರರಿಗೆ ಸಹಾಯ ಧನಯುಕ್ತ ಆಹಾರಧಾನ್ಯ ವಿತರಣಾ ಯೋಜನೆಯಡಿಯಲ್ಲಿನ ಸಹಾಯಧನ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ. ವಿವರ ಈ ಕೆಳಕಂಡಂತೆ ಇರುತ್ತದೆ.

ಡಿ.ಪಿ.ಎ.ಪಿ. (ಪ್ರತಿ ಕ್ವಿಂ.ಗೆ)			ಇತರೆ ಪ್ರದೇಶಗಳು (ಪ್ರತಿ ಕ್ವಿಂಗೆ)
ಅಕ್ಕಿ ...	ರೂ.	317 .65	367.65
ಗೋಧಿ ...	ರೂ.	482.00	232.00

ಡಿ.ಪಿ.ಎ.ಪಿ. ಪ್ರದೇಶಗಳಿಗೆ ಕೇಂದ್ರ ಸರ್ಕಾರ ಒದಗಿಸುತ್ತಿರುವ ಪ್ರತಿ ಕೆ.ಜಿ. ಗೋಧಿಗೆ 0.05 ಪೈಸೆಯೊಂದಿಗೆ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ರೂ. 1.82 ಪೈಸೆ ಸಹಾಯಧನ ನೀಡುತ್ತಿದೆ. ಈ ರೀತಿಯಾಗಿ ಡಿ.ಪಿ.ಎ.ಪಿ. ಪ್ರದೇಶದ ಪಡಿತರ ಚೀಟಿ ದಾರರಿಗೆ ಯಾವುದ ತಾರತಮ್ಯ ನೀತಿಯನ್ನು ಅನುಸರಿಸುತ್ತಿಲ್ಲ.

ರಾಜ್ಯ ಸರ್ಕಾರದ ಯೋಜನೆಯನ್ವಯ ಸರ್ಕಾರವು ಅಕ್ಕಿ ಹಾಗೂ ಗೋಧಿಯನ್ನು ಸಹಾಯಧನದೊಂದಿಗ ಬಡತನ ರೇಖೆಗಿಂತ ಕಡಿಮೆ ಆದಾಯ ಇರುವ ಕುಟುಂಬಗಳಿಗೆ ಒಂದೇ ತರನಾದ ಬೆಲೆಯಲ್ಲಿ ವಿತರಿಸುವ ಕಾರ್ಯಕ್ರಮವಿದ್ದು, ಇದರಲ್ಲಿ ಡಿ.ಪಿ.ಎ.ಪಿ. ಪ್ರದೇಶ ಸಹ ಸೇರಿರುತ್ತದೆ. ಅಲ್ಲದೇ, ಕೇಂದ್ರ ಸರ್ಕಾರವು ನೀಡುತ್ತಿರುವ ಸಬ್ಸಿಡಿ ದರವು ರಾಜ್ಯ ಸರ್ಕಾರದ ಸಬ್ಸಿಡಿ ದರಕ್ಕಿಂತ ಕಡಿಮೆ ಇರುವುದರಿಂದ ರಾಜ್ಯ ಸರ್ಕಾರದ ಸಹಾಯದನದಲ್ಲಿ ಕೇಂದ್ರ ಸರ್ಕಾರದ ಸಹಾಯಧನವು ವಿಲೀನಗೊಂಡಿರುತ್ತದೆ.

ಪ್ರತಿ ಕೆ.ಜಿ.ಗ. 50 ಪೈಸೆ ಸಹಾಯಧನವನ್ನು ಈಗಾಗಲೇ ಕೊಡಲಾಗಿದೆ. ಅಲ್ಲದೆ ಒಂದು ಕೆ.ಜಿ.ಗೆ. 1.82 ಪೈಸೆಯಂತೆ ಮತ್ತಷ್ಟು ರಿಯಾಯ್ತಿಯನ್ನು ಕೊಡಲಾಗಿದೆ. ಈಗ ಪುನಃ 50 ಪೈಸೆ ರಿಯಾಯ್ತಿ ಸೇರಿಸಿದಲ್ಲಿ ಡಿ.ಪಿ.ಎ.ಪಿ. ಮತ್ತು ಇತರ ಪ್ರೇದಶಗಳಲ್ಲಿ ಮಾರಾಟದ ಬೆಲೆಯಲ್ಲಿ ವ್ಯತ್ಯಾಸವಾಗುತ್ತದೆ. ಇದರಿಂದ ಡಿ.ಪಿ.ಎ.ಪಿ. ಮತ್ತು ಇತರೆ ಪ್ರದೇಶಗಳಲ್ಲಿ ತಾರತಮ್ಯವಾಗುತ್ತದೆ. ರಾಜ್ಯದ ಬಡಜನತೆಯ ಮಧ್ಯ ಈ ರೀತಿ ತಾರತಮ್ಯವು ಮಾಡುವುದು ಸಮಂಜಸವೆನುಸುವುದಿಲ್ಲ.

ಶ್ರೀ ಜಗದೀಶ ಟಿ. ಪಾಟೀಲ್ (ಬೀಳಗಿ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳೇನು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಕೇಂದ್ರ ಸರ್ಕಾರವು ಡಿಪಿಎಪಿ ಮತ್ತು ಗುಡ್ಡಗಾಡು ಜನರಿಗೆ ಕೆ.ಜಿ. ಒಂದಕ್ಕೆ 50 ಪೈಸೆ ಹೆಚ್ಚಿನ ಸಹಾಯಧನವನ್ನು ಕೊಡುತ್ತಿದ್ದಾರೆ, ಈಗಾಗಲೇ ರಾಜ್ಯದಲ್ಲಿ ಎರಡು ರೂಪಾಯಿಗಳಂತೆ ಗೋಧಿಯನ್ನು

ವಿತರಿಸುತ್ತಿದ್ದೀರಿ, ಇದರಲ್ಲಿ 50 ಪೈಸೆ ಕಡಿಮೆ ಮಾಡಿ 1-50ಕ್ಕೆ ಡಿಪಿಎಪಿ ಮತ್ತು ಗುಡ್ಡಗಾಡಿನ ಜನರಿಗೆ ಗೋಧಿಯನ್ನು ವಿತರಣೆ ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎನ್. ನಂಜಪ್ಪ : ಅಧ್ಯಕ್ಷರೆ, ಬಹುಶಃ ನಾನು ಲಿಖಿತ ಮೂಲಕ ಕೊಟ್ಟಿರುವ ಉತ್ತರವನ್ನು ಅವರು ಓದಲಿಲ್ಲವೆಂದು ಕಾಣುತ್ತದೆ. ಕೇಂದ್ರ ಸರ್ಕಾರವು ಡಿಪಿಎಪಿ ಮತ್ತು ಗುಡ್ಡ ಗಾಡು ಪ್ರದೇಶಕ್ಕೆ ಕೊಡುವಂಥ ಗೋಧಿಯ ರಿಯಾಯಿತಿ ದರ 598 ರೂಪಾಯಿಗಳು ಇತರೆ ಪ್ರದೇಶಕ್ಕೆ ಕೊಡುತ್ತಿರತಕ್ಕದ್ದು 684 ರೂಪಾಯಿ. ಕೇಂದ್ರ ಸರ್ಕಾರ ಕೊಡುವಂಥ ರಿಯಾಯಿತಿಯನ್ನು ಅವರು ಇಶ್ಯ ಬೆಲೆಯಲ್ಲಿಯೇ ಅಡಕಮಾಡಿರುತ್ತಾರೆ. ಇದಕ್ಕೆ ರಾಜ್ಯ ಸರ್ಕಾರವು ಹೆಚ್ಚಾಗಿ 182 ರೂಪಾಯಿಗಳ ರಿಯಾಯಿತಿಯನ್ನು ಕೊಡುತ್ತಿರುವುದರಿಂದ, ಕೇಂದ್ರ ಸರ್ಕಾರಕ್ಕಿಂತ ಹೆಚ್ಚಾಗಿ ಒಂದು ರೂಪಾಯಿ ಎಂಬತ್ತೆರಡು ರೂಪಾಯಿಗಳ ರಿಯಾಯಿತಿಯನ್ನು ರಾಜ್ಯ ಸರ್ಕಾರ ಕೊಡುತ್ತಿರುವುದರಿಂದ ಯಾವ ತಾರತಮ್ಯವೂ, ಅನ್ಯಾಯವೂ ಇಲ್ಲಿ ಇಲ್ಲವೆಂಬುದನ್ನು ಸ್ಪಷ್ಟವಾಗಿ ಮಾನ್ಯ ಅಧ್ಯಕ್ಷರ ಮೂಲಕ ತಮಗೆ ತಿಳಿಯಬಯಸುತ್ತೇನೆ.

(ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ಏನು ರಿಯಾಯಿತಿ ಹಣ ಬರುತ್ತದೆ ಅದು ಗೋಧಿಗೆ ಜಾಸ್ತಿ ಇದ್ದು ಅಕ್ಕಿಗೆ ಕಡಿಮೆ ಇದ್ದಕಾರಣ, ಇಲ್ಲಿ ತಾವು ಗೋಧಿ ಮತ್ತು ಅಕ್ಕಿ ಎರಡಕ್ಕೂ ಸರಿಸಮಾನವಾಗಿಯೇ ರಿಯಾಯಿತಿ ಕೊಡುತ್ತಿದ್ದೀರಿ, ಆದರೆ ಕೇಂದ್ರದವರು ಒಂದಕ್ಕೆ ಹೆಚ್ಚು ಇನ್ನೊಂದಕ್ಕೆ ಕಡಿಮೆ ದರ ಕೊಡುತ್ತಿರುವುದರಿಂದ ಇಲ್ಲಿ ದರವನ್ನು ನಿಗದಿ ಮಾಡುವಾಗ ತಾರತಮ್ಯವಾಗಿಯೇ ಆಗುತ್ತದೆ. ಆದ್ದರಿಂದ ರಾಜ್ಯಸರ್ಕಾರ ಇನ್ನೂ ಸ್ವಲ್ಪ ಹೆಚ್ಚು ಸಹಾಯಧನವನ್ನು ಕೊಟ್ಟು ಅಕ್ಕಿ ಮತ್ತು ಗೋಧಿ ಎರಡಕ್ಕೂ ಒಂದೇ ಸಮನಾದ ದರದಲ್ಲಿ ಕೊಡಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಎನ್. ನಂಜಪ್ಪ : ಉಪಾಧ್ಯಕ್ಷರೆ, ಬಡತನ ರೇಖೆಗಿಂತ ಕೆಳಗಿರುವ ಬಡವರಿಗೆ, ಒಂದು ಮತ್ತೊಬ್ಬರಿಗೆ ಇನ್ನೊಂದು ಈ ರೀತಿಯಾಗಿ ವ್ಯತ್ಯಾಸ ಮಾಡುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದ್ದರಿಂದ ಇನ್ನೂ ಸ್ವಲ್ಪ ಹೆಚ್ಚು ಸಹಾಯಧನವನ್ನು ಕೊಟ್ಟರೆ ಸರಿಯಾಗುತ್ತದೆ.

ಶ್ರೀ ಎಸ್. ನಂಜಪ್ಪ : ಕೊನೆಯ ಹಂತದ ವಿತರಣಾ ಬೆಲೆ ಎಂದು ಏನು ಹೇಳುತ್ತೇವೆ ಅಧು ಸರಿಸಮಾನವಾಗಿರಬೇಕು ಎನ್ನತಕ್ಕ ದೃಷ್ಟಿಯಿಂದ ಈ ಬೆಲೆಯನ್ನು ನಿರ್ಧಾರ ಮಾಡಿದ್ದೇವೆ, ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಜಗದೀಶ ಟಿ. ಪಾಟೀಲ್ : ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ನೇರವಾಗಿ ಡಿಪಿಎಪಿ ಗುಡ್ಡಗಾಡಿನ ಜನರಿಗೆ ವಿಶೇಷವಾದಂಥ ಸಹಾಯಧನವನ್ನು ಕೊಟ್ಟಿದ್ದಾರೆ. ಅದನ್ನು ರಾಜ್ಯದ ಎಲ್ಲಾ ಜನರಿಗೆ ಹಂಚುವುದರಿಂದ ಡಿಪಿಎಪಿ ಮತ್ತು ಗುಡ್ಡಗಾಡು ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ಸದರಿ ಜನರಿಗೆ ಏನು ಸಹಾಯಧನ ಸಿಗುತ್ತದೆ ಅದನ್ನು ನೇರವಾಗಿ ಅವರಿಗೆ ತಲುಪಿಸಲು ತಾವು ಕ್ರಮ ತೆಗೆದುಕೊಳ್ಳುತ್ತೀರೋ?

ಶ್ರೀ ಎಸ್. ನಂಜಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ತಪ್ಪುಗ್ರಹಿಕೆಯಿಂದ ಈ ಪ್ರಶ್ನೆಯನ್ನು ಕೇಳಿರಬಹುದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ಕೊಟ್ಟಿರುವ 50 ಪೈಸೆ ಸಹಾಯಧನದ ಜೊತೆಗೆ ರಾಜ್ಯಸರ್ಕಾರವೂ

ಒಂದು ರೂ. 72 ಪೈಸೆ ಹೆಚ್ಚಿನ ಸಹಾಯಧನವನ್ನು ಡಿಪಿಎಪಿ ಮತ್ತು ಗುಡ್ಡಗಾಡಿನ ಜನರಿಗೆ ಕೊಟ್ಟಿರುವುದರಿಂದ ಯಾವುದೇ ರೀತಿಯಾದ ಅನ್ಯಾಯವಾಗಿಲ್ಲವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಉಪಾಧ್ಯಕ್ಷರು : ಇಲ್ಲಿಗೆ ಗಮನಸೆಳೆಯುವ ಸೂಚನೆಗಳು ಮುಕ್ತಾಯವಾಯಿತು. ಇನ್ನು ನಿಯಮ 351ರ ಅಡಿಯಲ್ಲಿ ಬರತಕ್ಕ ಸೂಚನೆಗಳು.

ನಿಯಮ 351ರ ಅಡಿಯಲ್ಲಿ ಚರ್ಚೆ

ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳಿಗೆ ನಡೆಯಬೇಕಾಗಿದ್ದ ಸಂದರ್ಶನದ ಮುಂದೂಡಿಕೆ

ಶ್ರೀ ಅಲ್ಲಂ ವೀರಭದ್ರಪ್ಪ (ಬಳ್ಳಾರಿ) : ಮಾನ್ಯ ಉಪಾಧ್ಯಕ್ಷರೆ, ದಿನಾಂಕ 19, 20, 21 ಮತ್ತು 25ರವರೆಗೆ ಕಿರಿಯ ಆರೋಗ್ಯ (ಪುರುಷ) ಸಹಾಯಕರ ಹುದ್ದೆಗೆ ಕರೆದ ಸಂದರ್ಶನವನ್ನು ತಾತ್ಕಾಲಿಕವಾಗಿ ಮುಂದೂಡಿರುವ ಬಗ್ಗೆ ಕಾರಣವನ್ನು ತಿಳಿಸಬೇಕಾಗಿದೆ. ಅಲ್ಲದೆ ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭವಾದ ಕಿರಿಯ ಆರೋಗ್ಯ ಸಹಾಯಕ ಕಾಲೇಜುಗಳಿಂದ ಪಾಸಾದ ವಿದ್ಯಾರ್ಥಿಗಳಿಗೆ ಸುಮಾರು ಹತ್ತು ವರ್ಷಗಳಿಂದ ಸರ್ಕಾರದವರು ಯಾವುದೇ ರೀತಿಯಾದ ನೌಕರಿಯನ್ನು ಕೊಟ್ಟಿಲ್ಲ, ಆದ್ದರಿಂದ ಈ ವಿದ್ಯಾರ್ಥಿಗಳಿಗೆ ಕೂಡಲೆ ಸದರಿ ಹುದ್ದೆಗೆ ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ,

ಕಿರಿಯ ಆರೋಗ್ಯ (ಪುರುಷ) ಸಹಾಯಕರ ಹುದ್ದೆಗಳ ಭರ್ತಿಗೆ ನಿಗದಿಪಡಿಸಲಾಗಿದ್ದ ಸಂದರ್ಶನವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಸೇವಾ ನಿಯಮಗಳು) ಸುತ್ತೋಲೆ ಸಂಖ್ಯೆ :ಸಿಆಸುಇ: ಸೇವಾನೆ 96 ದಿನಾಂಕ: 27.1.1996ರ ಸೂಚನೆಗಳಂತೆ ಮುಂದೂಡಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇದ್ದ ಕಿರಿಯ ಆರೋಗ್ಯ (ಪುರುಷ) ಸಹಾಯಕರ ಹುದ್ದೆಗಳ ಭರ್ತಿಯು ಹುದ್ದೆಗಳ ಮೀಸಲಾತಿಗೆ ನ್ಯಾಯಾಲಯಗಳಿಂದ ಆಗಿಂದಾಗ್ಗೆ ಹೊರಡಿಸಲ್ಪಟ್ಟ ಸೂಚನೆಗಳಂತೆ ಸರ್ಕಾರದಿಂದ ಹೊರಡಿಸಲ್ಪಟ್ಟ ಮೀಸಲಾತಿ ಆದೇಶಗಳು ಬದಲಾವಣೆಗೊಂಡುದರ ಪರಿಣಾಮವಾಗಿ ಬೇಗನೆ ತುಂಬಲಾಗಲಿಲ್ಲ, ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸಲ್ಪಟ್ಟ ನಂತರ ಈ ಹುದ್ದೆಗಳ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಅಭ್ಯರ್ಥಿಗಳಿಗೆ ಸಂದರ್ಶನ ದಿನಾಂಕ ನಿಗದಿಪಡಿಸಲಾಗಿತ್ತು. ಅಷ್ಟರಲ್ಲಿಯೇ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಮೇಲೆ ಉಲ್ಲೇಖಿಸಲಾದ ಸುತ್ತೋಲೆಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಆಯ್ಕೆ ಮೂಲಕ ನೇರ ನೇಮಕಾತಿ) ನಿಯಮಗಳು 1973ಕ್ಕೆ ಕೆಲವು ಅವಶ್ಯ ತಿದ್ದುಪಡಿ ತರುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದ್ದು ಇದನ್ನು ಅಂತಿಮಗೊಳಿಸಲು ಸ್ವಲ್ಪ ಕಾಲಾವಕಾಶವಾಗಬಹುದೆಂದು ತಿಳಿಸಿ, ಮುಂದಿನ ಸೂಚನೆಗಳನ್ನು ನೀಡುವವರೆಗೆ ಎಲ್ಲಾ ಆಯ್ಕೆ ಪ್ರಾಧಿಕಾರಿಗಳು ಸದರಿ ನಿಯಮಗಳ ಅಡಿಯಲ್ಲಿ ಮಾಡಲಾಗಿರುವ ಯಾವ ಹುದ್ದೆಗಳಿಗೂ ಆಯ್ಕೆಯನ್ನು ಅಂತಿಮಗೊಳಿಸಬಾರದೆಂದು ಸೂಚನೆ ನೀಡಿದುದರಿಂದ ಸಂದರ್ಶನಗಳು ಮುಂದೂಡಲ್ಪಟ್ಟಿವೆ. ಈ ವಿಷಯವನ್ನು ದೂರದರ್ಶನ ಕೇಂದ್ರ, ಆಕಾಶವಾಣಿ ಹಾಗೂ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ನೇಮಕಾತಿ ಪ್ರಕ್ರಿಯೆ

ಮುಂದುವರಿಸಲು ಸೂಚನೆ ಬಂದ ತಕ್ಷಣ ಈ ಖಾಲಿ ಹುದ್ದೆಗಳ ಭರ್ತಿಗೆ ಕೂಡಲೇ ಕ್ರಮ ಜರುಗಿಸಲಾಗುವುದು.

12.00 ಪಿ.ಎಂ.

ಉಪಾಧ್ಯಕ್ಷರು : ಮಾನ್ಯ ಯೋಗಿಶ್ ಭಟ್‌ರವರು.

ಶ್ರೀ ಎನ್. ಯೋಗಿಶ್ ಭಟ್ : ಮಾನ್ಯ ಉಪಾಧ್ಯಕ್ಷರೆ, ನಗರಾಭಿವೃದ್ಧಿ ಇಲಾಖೆಯ ಸಚಿವರೇ ಇಲ್ಲಿ ಕಾಣುತ್ತಿಲ್ಲ, ಉತ್ತರ ಕೊಡಬೇಕಾಗಿರುವವರು ಅವರು. ಆದ್ದರಿಂದ ದಯವಿಟ್ಟು ಅವರನ್ನು ಇಲ್ಲಿಗೆ ಕರೆಯಿಸಿ.

ಉಪಾಧ್ಯಕ್ಷರು : ಆಮೇಲೆ ಅವರನ್ನು ಕರೆಯಿಸುತ್ತೇನೆ.

ರಾಜ್ಯದಲ್ಲಿ ಭೂನ್ಯಾಯ ಮಂಡಳಿಗಳ ಪುನರ್ರಚನೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಭೂಸುಧಾರಣೆ ಶಾಸನ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬಂದಾಗಿನಿಂದ ರಾಜ್ಯದ ವಿವಿಧ ಭೂ ನ್ಯಾಯ ಮಂಡಳಿಗಳಲ್ಲಿ ದಾಖಲಾದ ಪ್ರಕರಣಗಳು ಇತ್ಯರ್ಥವಾಗದಿರುವುದರಿಂದ ಅನೇಕರು ರಾಜ್ಯ ಹೈಕೋರ್ಟಿಗೆ ಹೋಗುವುದು ಮತ್ತು ಅಲ್ಲಿ ಪುನರ್ ಪರಿಶೀಲನೆಗಾಗಿ ಆದೇಶ ಹೊಂದಿ ಅದೇ ಭೂ ನ್ಯಾಯ ಮಂಡಳಿಗಳಿಗೆ ಬಂದಿರುವುದು. ಪುನಃ ಇತ್ಯರ್ಥಕ್ಕಾಗಿ ಮತ್ತೆ ಹೈಕೋರ್ಟಿಗೆ ಹೋಗುವುದು, ಈ ರೀತಿಯ ಗ್ರಾಮೀಣ ಪ್ರದೇಶದ ರೈತರ ಅಲೆದಾಟವನ್ನು ತಪ್ಪಿಸುವ ಸಲುವಾಗಿ ಮತ್ತು ಶ್ರಮ, ಹಣ ಮತ್ತು ಸಮಯ ವ್ಯರ್ಥವಾಗದಂತೆ ಅವರಿಗೆ ಶೀಘ್ರ ನ್ಯಾಯವನ್ನು ದೊರಕಿಸುವ ಸಲುವಾಗಿ ಅಪಲೇಟ್ ಟ್ರಿಬ್ಯುನಲ್‌ಗಳನ್ನು ರಚಿಸಬೇಕಾಗಿರುತ್ತದೆ. ಇದಕ್ಕಾಗಿ ಸರ್ಕಾರವು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ಒತ್ತಾಯ ಪಡಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂ ಸುಧಾರಣೆ ಕಾಯಿದೆ, 1961 ಮತ್ತು ವಿವಿಧ ಇನಾಂ ರದ್ದಿಯಾತಿ ಕಾಯಿದೆಗಳಡಿಯಲ್ಲಿ ನಿರ್ಣಯವಾದ ಗೇಣಿ ಪ್ರಕರಣಗಳು ಮೇಲ್ಮನವಿ ಮೇರೆಗೆ ಅದರಲ್ಲೂ ಉಚ್ಚ ನ್ಯಾಯಾಲಯದಲ್ಲಿ ಬಹಳ ಸಂಖ್ಯೆಯಲ್ಲಿ ಅಧಿಕ ಅವಧಿಗೆ ವಿಲೇವಾರಿಯಾಗದೇ ಉಳಿದಿರುವ ಅಂಶವನ್ನು ಗಣನೆಗೆ ತೆಗೆದುಕೊಂಡು ಸಮಾಜದಲ್ಲಿನ ದುರ್ಬಲ ವರ್ಗದವರ ಸಂಕಷ್ಟ ಬಗೆಹರಿಸುವ ಸಲುವಾಗಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ನಿರ್ಧರಿಸಿತು.

ಅದರಂತೆ ಭಾರತ ಸಂವಿಧಾನ ಅನುಚ್ಛೇದ 323(ಬಿ) ಅನುಸರಿಸಿ ಕರ್ನಾಟಕ ಭೂ ಸುಧಾರಣೆ ಕಾಯಿದೆಯಡಿ ಇತ್ಯರ್ಥದಲ್ಲಿರುವ ಯಾವುದೇ ಗೇಣಿದಾರಿಕೆ ವಿವಾದಗಳ ಮತ್ತು ರಾಜ್ಯದಲ್ಲಿ ಜಾರಿಯಲ್ಲಿರುವ ವಿವಿಧ ಇನಾಂಗಳ ರದ್ದಿಯಾತಿ ಅಧಿನಿಯಮಗಳಡಿಯ ಗೇಣಿದಾರಿಕೆ ಬಗ್ಗೆ ಅಥವಾ ಅದರಲ್ಲಿನ ಯಾವುದೇ ಹಕ್ಕುಗಳಿಗೆ ಸಂಬಂಧಿಸಿದಂತೆ ಹಾಗೂ ಇತರ ರೀತಿಯಲ್ಲಿ ಹೂಡಲಾದ ಮೊಕದ್ದಮೆಗಳ ನ್ಯಾಯ ನಿರ್ಣಯ ಮಾಡಲು ಅಥವಾ ವಿಚಾರಣೆ ನಡೆಸಲು ಕರ್ನಾಟಕ ವಿಶೇಷ ನ್ಯಾಯಾಧೀಕರಣ ಅಧಿನಿಯಮ, 1994ಕ್ಕೆ ದಿನಾಂಕ ಅಕ್ಟೋಬರ್ 11,.1994ರಂದು ಸನ್ಮಾನ್ಯ ರಾಜ್ಯಪಾಲರ ಅನುಮೋದನೆ ಪಡೆದು ಕಾಯಿದೆ ರಚಿಸಲಾಗಿದೆ. ಸದರಿ ಕಾಯಿದೆಯಲ್ಲಿ ರಚಿತವಾಗುವ ವಿಶೇಷ ನ್ಯಾಯಾಧೀಕರಣಗಳು ಸರ್ವೋಚ್ಚ ನ್ಯಾಯಾಲಯ ಹೊರತುಪಡಿಸಿ ಮತ್ತಾವುದೇ ನ್ಯಾಯಾಲಯ ಪ್ರವೇಶಿಸದಂತೆ ಪ್ರಸ್ತಾಪಿತ ಪ್ರಕರಣಗಳ ಇತ್ಯರ್ಥ ಮಾಡುವ ಅಧಿಕಾರ ಹೊಂದಿರುತ್ತದೆ.

ಮೇಲಿನ ಕಾಯಿದೆಗೆ ನಿಯಮಗಳನ್ನು ರಚಿಸುವ ಕೆಲಸ ಅಂತಿಮ ಹಂತದಲ್ಲಿದೆ. ಅಲ್ಲದೆ, ಬೆಂಗಳೂರಿನಲ್ಲಿ ವಿಶೇಷ ನ್ಯಾಯಾಧೀಕರಣದ ಮೂಲ ಪೀಠವನ್ನು ಮತ್ತು

ಉಪಪೀಠಗಳನ್ನು ಮೂರು ವಿಭಾಗೀಯ ಕೇಂದ್ರಗಳಲ್ಲಿ ಸ್ಥಾಪಿಸಬೇಕೆ ಎಂಬ ಬಗ್ಗೆ ತ್ವರಿತವಾಗಿ ತೆಗೆದುಕೊಳ್ಳಲಾಗುವುದು.

ಮಾನ್ಯ ಅಧ್ಯಕ್ಷರೇ, ಸುಮಾರು 13 ಸಾವಿರ ಇಂಥ ಪ್ರಕರಣಗಳು ಇತ್ಯರ್ಥಕ್ಕಾಗಿ ಹೈಕೋರ್ಟ್‌ನವರ ಮುಂದೆ ಇವೆ. ಈಗ ಈ ವಿಷಯದಲ್ಲಿ 2 ಪ್ರಶ್ನೆಗಳು ನಮ್ಮ ಮುಂದೆ ಉದ್ಭವವಾಗುತ್ತವೆ. ಒಂದನೆಯದಾಗಿ ವಿಶೇಷ ನ್ಯಾಯ ಪೀಠವನ್ನು ರಚಿಸಿ ಹೈಕೋರ್ಟ್‌ನಲ್ಲಿ ಇಧನ್ನು ಬಗೆಹರಿಸಲು ಸಾಧ್ಯವೇ ಎಂಬುದನ್ನು ನಮ್ಮ ಮಾನ್ಯ ಕಾನೂನು ಸಚಿವರು ಮುಖ್ಯ ನ್ಯಾಯಾಧೀಶರೊಡನೆ ಮಾತನಾಡುವವರಿದ್ದಾರೆ. ಒಂದು ಸಮಯ ಈ ರೀತಿ ಮಾಡಲು ಆಗದೇ ಇದ್ದ ಪಕ್ಷದಲ್ಲಿ ಒಂದು ಅಥವಾ ಎರಡು ನ್ಯಾಯ ಪೀಠಗಳನ್ನು ಹೊಂದಿದಂಥ ಅಪಿಲೇಟ್ ಟ್ರಿಬ್ಯುನಲ್‌ಗಳನ್ನು ರಚಿಸಿ ಇದನ್ನು ಸಾಧ್ಯವಾದಷ್ಟು ಬೇಗ ಮುಗಿಸಲು ತೀರ್ಮಾನ ಮಾಡಿದ್ದೇನೆ.

ಉಪಾಧ್ಯಕ್ಷರು : ಶ್ರೀ ಯು.ಬಿ. ಬಣಕಾರ್....

ಶ್ರೀ ಯು.ಬಿ. ಬಣಕಾರ್ : ಸನ್ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ಅದರಲ್ಲೂ ಹಿರೇಕೆರೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಕೊರತೆಯಿಂದ ಸಾರ್ವಜನಿಕರಿಗೆ, ದನಕರುಗಳಿಗೆ ಬಹಳ ತೊಂದರೆಯುಂಟಾಗಿದ್ದು ಅದನ್ನು ಬಗೆಹರಿಸಲು ಧಾರವಾಡ ಜಿಲ್ಲಾ ಪಂಚಾಯತ್ ....

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ನಾಳೆ ಒದಗಿಸಿಕೊಡುತ್ತೇನೆ.

ಉಪಾಧ್ಯಕ್ಷರು : ಶ್ರೀ ಯೋಗೀಶ್ ಭಟ್‌ರವರದ್ದನ್ನು ಮತ್ತು ಶ್ರೀ ಯು.ಬಿ. ಬಣಕಾರ್‌ರವರ ವಿಚಾರಕ್ಕೆ ಉತ್ತರವನ್ನು ನಾಳೆ ಒದಗಿಸಿ.

(3) ಮೆಗನಾನ್ ಆಸ್ಪತ್ರೆಯ ಡಾ. ಆನಂದ್ ಅವರ ನಡವಳಿಕೆಗೆ ಸೂಕ್ತ ಕ್ರಮ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಮೆಗನಾನ್ ಆಸ್ಪತ್ರೆಯ ಅರವಳಿಕೆ ವೈದ್ಯರಾದ ಡಾ|| ಆನಂದ್‌ರವರ ಈ ಕೆಳಕಂಡ ವಿಚಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಅಧರಲ್ಲಿ ಹಾಜರಿ ಪುಸ್ತಕದಲ್ಲಿ ತಿದ್ದಿರುವ ಬಗ್ಗೆ ಜಿಲ್ಲಾ ಸರ್ಜನ್ ನೋಟಿಸ್ ಕೊಟ್ಟಿರುವ ಬಗ್ಗೆ, ರಜೆ ಹಾಕದೇ ಆಸ್ಪತ್ರೆಗೆ ಬರದಿರುವ ಬಗ್ಗೆ, ಆಪರೇಶನ್‌ಗೆ ಆಗಾಗ್ಗೆ ಅವಶ್ಯಕವಾಗಿ ಇರಲೇಬೇಕಾದ ವೈದ್ಯರು ಹಾಜರಾಗದೇ ಇರುವ ಬಗ್ಗೆ, ಜಿಲ್ಲಾ ಸರ್ಜನ್‌ಗಳು ಕೊಟ್ಟಿರುವ ನೋಟಿಸ್‌ಗಳ ಬಗ್ಗೆ ಅಲಕ್ಷ್ಯವನ್ನು ತೋರಿಸಿ ಮೇಲ್ಕಾಣಿಸಿರುವ ತಪ್ಪುಗಳನ್ನು ಮಾಡಿರುವ ಡಾ|| ಆನಂದ್‌ರವರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಿರಾ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು) : ಉಪಾಧ್ಯಕ್ಷರೇ,

ಡಾ. ಆನಂದರವರು, ದಿನಾಂಕ 26-4-1970ರಿಂದ ಈ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ. ಸದರಿಯವರು ಎಂ.ಡಿ. (ಅರವಳಿಕೆ) ವಿದ್ಯಾರ್ಹತೆ ಹೊಂದಿದ್ದು ಎಲ್ಲಾ ಶಸ್ತ್ರ ಚಿಕಿತ್ಸಾ ಸಂದರ್ಭಗಳಲ್ಲಿ ಇವರ ಸೇವೆಯು ಅವಶ್ಯವಿರುತ್ತದೆ. ಸದರಿಯವರು ದಿನಾಂಕ 30-1-1986ರಿಂದ ಶಿವಮೊಗ್ಗದ ಮೆಗ್ಗಾನ್ ಜಿಲ್ಲಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.

ಡಾ. ಆನಂದರವರು, 1987ರಲ್ಲಿ ಒಮ್ಮೆ ಹಾಜರಿ ಪುಸ್ತಕವನ್ನು ತಿದ್ದಿದ್ದ ಪ್ರಕರಣ ಗಮನಕ್ಕೆ ಬಂದಿದ್ದು ಅದರ ಬಗ್ಗೆ ಸೂಚನೆ ಹಾಗು ಸೂಕ್ತ ತಿಳುವಳಿಕೆ ನೀಡಲಾಗಿದೆ. ಇವರು ದಿನಾಂಕ 31-1-91 ರಿಂದ 30-5-91ರವರೆಗೆ ನಾಲ್ಕು ತಿಂಗಳ ಕಾಲ ಸೇವೆಗೆ ಗೈರು ಹಾಜರಾಗಿದ್ದರು. ಈ ಸಂಬಂಧದಲ್ಲಿ ವಿಷಯದ ಪೂರ್ಣ ಪರಿಶೀಲನೆ ನಂತರ

ಸದರಿ ಅವಧಿಯನ್ನು ರಜೆ ಎಂದು ಸಕ್ರಮಗೊಳಿಸಲಾಗಿರುತ್ತದೆ. ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗಳು ನಡೆಯುವ ಸಂದರ್ಭದಲ್ಲಿ ಹಾಗೂ ಸದರಿ ಆಸ್ಪತ್ರೆಯ ಕೆಲಸ ವೇಳೆಯಲ್ಲಿ ಇವರು ಹಾಜರಿರುತ್ತಾರೆ ಹಾಗು ಇವರ ಸೇವೆ ಸಹ ಅವಶ್ಯವೆನಿಸಿದಾಗ ಲಭ್ಯವಿರುತ್ತದೆ. ಕೆಲಸದ ವೇಳೆಯಲ್ಲಿ ಕಾರ್ಯಸ್ಥಾನದಲ್ಲಿ ಇಲ್ಲದಿರುವ ಮುಂತಾದ ಸಣ್ಣಪುಟ್ಟ ಆಕ್ಷಪಣೆಗಳಿಗೆ ಸಂಬಂಧಪಟ್ಟಂತೆ ಈ ವೈದ್ಯರಿಗೆ ಜಿಲ್ಲಾ ಶಸತ್ರ್ರ ಚಿಕಿತ್ಸಕರು ಸಕಾಲಿಕ ತಿಳುವಳಿಕೆ ಮತ್ತು ಎಚ್ಚರಿಕೆಗಳನ್ನು ಕೊಟ್ಟಿರುತ್ತಾರೆ. ಇಂತಹ ನಡವಳಿಕೆಯನ್ನು ಮುಂದುವರಿಸಿದಲ್ಲಿ ತೀವ್ರ ಶಿಸ್ತುಕ್ರಮ ಕೈಗೊಳ್ಳಲಾಗುವುದು.

ಚುನಾವಣಾ ಪ್ರಸ್ತಾವ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯ ಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಐದು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶಾಸನ ರಚನೆ

1. ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ)ವಿಧೇಯಕ, 1996 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"1996ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

2. ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 1996 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಸಿ. ನಾಣಯ್ಯ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"1996ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಸಿ. ನಾಣಯ್ಯ (ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣೆ ಪ್ರಸ್ತಾವ

ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"ದಿನಾಂಕ 19-02-96ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ."

ಶ್ರೀ ಕೆ. ಶರಣಪ್ಪ (ಕುಷ್ಟಗಿ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣ ಪ್ರಸ್ತಾವದ ಚರ್ಚೆ

+ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಉಪಾಧ್ಯಕ್ಷರೇ, ಫೆಬ್ರವರಿ 19ನೇ ತಾರೀಖಿನ ದಿವಸ ನಮ್ಮ ವಿಧಾನ ಮಂಡಲದಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಆ ಭಾಷಣಕ್ಕೆ ವಿಧಾನಸಭೆಯ ಸದಸ್ಯರುಗಳಾದ ನಾವುಗಳೆಲ್ಲಾ ಮಾನ್ಯ ರಾಜ್ಯಪಾಲರಿಗೆ ಕೃತಜ್ಞತೆಯನ್ನು ಸಲ್ಲಿಸತಕ್ಕಂಥ ಒಂದು ಕರ್ತವ್ಯವನ್ನು ಮಾಡಬೇಕಾದ ಸಂದರ್ಭ ನಮಗೆ ಒದಗಿ ಬಂದಿದ್ದು ಬಹಳ ಸಂತೋಷ ಎಂದು ನಾನಾದರೂ ಭಾವಿಸಿಕೊಳ್ಳುತ್ತೇನೆ. ಮಾನ್ಯ ರಾಜ್ಯಪಾಲರ ಹುದ್ದೆ ಒಂದು ಗೌರವಯುತವಾದ ಹುದ್ದೆ. ಈ ರಾಜ್ಯದಲ್ಲಿ ರಾಜ್ಯಾಂಗದ ರಕ್ಷಣೆ, ಸಂಸದೀಯ ವ್ಯವಹಾರಗಳ ರಕ್ಷಣೆ ಹಾಗೂ ಸದಸ್ಯರುಗಳ ಹಕ್ಕುಗಳನ್ನು ಕಾಪಾಡತಕ್ಕಂಥ ಒಂದು ಉನ್ನತ ಸ್ಥಾನದಿಂದ ಅವರ ಭಾಷಣ ಈ ವಿಧಾನಸಭೆಗೆ ಬಹಳ ಪ್ರಯೋಜನಕಾರಿಯಾಗುತ್ತದೆಂದು ನಾನಾದರೂ ಭಾವಿಸಿಕೊಳ್ಳುತ್ತೇನೆ. ನಮ್ಮ ಸಂಸದೀಯ ವ್ಯವಸ್ಥೆಯೊಳಗೆ ಅದು ಸಂಸತ್ತು ಆಗಲಿ ಅಥವಾ ರಾಜ್ಯ ವಿಧಾನ ಸಭೆಯಾಗಲಿ, ಸಂಸತ್ತಿನಲ್ಲಿ ರಾಷ್ಟ್ರಾಧ್ಯಕ್ಷರು ಹಾಗೂ ಇಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡತಕ್ಕಂಥ ಒಂದು ಪರಿಪಾಠ ಏನಿದೆ, ಅದು ನಮಗೆ ಪ್ರತಿವರ್ಷದ ಪ್ರಾರಂಭದಲ್ಲಿ ಒಂದು ದಿಕ್ಸೂಚಿಯಾಗುತ್ತದೆ, ಮುನ್ನೋಟವಾಗುತ್ತದೆ ಹಾಗೂ ಇದರಿಂದ ನಮಗೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶಗಳು ದೊರೆಯುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ.

ಇಂತಹ ಒಂದು ಹೊಸ ವರ್ಷದಲ್ಲಿ ಅಧಿವೇಶನವ ಸೇರುವಂತಹ ಪ್ರಾರಂಭದಲ್ಲಿ ನು ಕಾರ್ಯಕಲಾಪಗಳು ನಡೆಯುತ್ತದೆ, ಇದರಲ್ಲಿ ಎಲ್ಲರೂ ಭಾಗವಹಿಸುವುದಕ್ಕೆ ೇಕಾದಷ್ಟು ಅವಕಾಶ ಇರುತ್ತದೆ. ಅದರಲ್ಲಿ ಆಡಳಿತ ಪಕ್ಷದವರಿಂದ ಸಾಂಕೇತಿಕವಾಗಿ ಮಾನ್ಯ ರಾಜ್ಯಪಾಲರಿಗೆ ವಂದನೆ ಸಲ್ಲಿಸತಕ್ಕಂಥ ಕರ್ತವ್ಯವೂ ಸಹ ನಡೆಯುತ್ತಾ ಬಂದಿದೆ. ಆದರೆ ಇದರಲ್ಲಿ ಒಂದು ವಿಶೇಷವೇನೆಂದರೆ ಈ ವರ್ಷ ಮಾನ್ಯ ೇವೇಗೌಡರ ನೇತೃತ್ವದ ಸರ್ಕಾರಕ್ಕೆ ಒಂದು ವರ್ಷ ತುಂಬಿದ ಮೇಲೆ ಮಾನ್ಯ ಾಜ್ಯಪಾಲರ ಭಾಷಣಕ್ಕೆ ಬಹಳ ಹೆಚ್ಚು ಮಹತ್ವ ಬಂದಿದೆ. ಒಂದು ವರ್ಷ ುಂಬಿದ ಈ ಸರ್ಕಾರಕ್ಕೆ ನಾವು ಸ್ವಲ್ಪ ಅವಕಾಶ ಕೊಟ್ಟು ಈ ಸರ್ಕಾರ ಏನೇನು ೆಲಸ ಮಾಡಿದೆ, ಒಂದು ವರ್ಷದ ಸಾಧನೆಯೇನು? ಆ ಸಾಧನೆಯ ಸಮಗ್ರ ಭಿವೃದ್ಧಿಯ ಬಗ್ಗೆ ನಾವು ಯೋಚನೆ ಮಾಡುವುದಕ್ಕೆ ಬಹಳ ಪ್ರಯೋಜನವಾಗುತ್ತದೆಂದು ೇಳಿ ನಾನಾದರೂ ಭಾವಿಸಿಕೊಳ್ಳುತ್ತೇನೆ. ಒಂದು ರಚನಾತ್ಮಕವಾದಂತಹ ಬದಲಾವಣೆ ಾಗಬೇಕಾದರೆ ಒಂದು ಸರ್ಕಾರಕ್ಕೆ 5 ವರ್ಷಗಳ ಕಾಲ ಸಮಯ ಬೇಕಾಗುತ್ತದೆ. ದನ್ನೇ ಸಂವಿಧಾನ ಶಿಲ್ಪಿ ಡಾ|| ಅಂಬೇಡ್ಕರ್‌ರವರು ಯಾವುದೇ ಒಂದು ರಾಜ್ಯ ರ್ಕಾರವಿರಲಿ, ಕೇಂದ್ರ ಸರ್ಕಾರವಿರಲಿ, ಆ ಸರ್ಕಾರಕ್ಕೆ 5 ವರ್ಷಗಳ ಕಾಲ ಅವಕಾಶ ೊಟ್ಟಾಗ ಮಾತ್ರ ಒಂದು ರಚನಾತ್ಮಕವಾದಂತಹ ಬದಲಾವಣೆಯನ್ನು, ಅದು ಆಡಳಿತದಲ್ಲಿ ರಬಹುದು, ಅಭಿವೃದ್ಧಿಯಲ್ಲಿ ಇರಬಹುದು, ಆರ್ಥಿಕವಾಗಿ ಇರಬಹುದು, ಯಾವುದೇ ಂಗದಲ್ಲಿ ಸಾಧನೆಯಾಗುತ್ತದೆನ್ನುವ ದೃಷ್ಟಿಯಿಂದಲೇ 5 ವರ್ಷಗಳ ಕಾಲ ಎಂದು ಗದಿ ಮಾಡಿರುವುದು. ಆದರೂ ಸಹ ಒಂದು ವರ್ಷದಲ್ಲಿ ನಾವು ಅಳತೆ ಾಡಿಕೊಂಡರೆ ಒಂದು ವರ್ಷದಲ್ಲಿ ನಮ್ಮ ಸಾಧನೆಯನ್ನು ಆಲೋಚಿಸಿದರೆ ಅದನ್ನು ಿ ಎಂದು ಹೇಳಿ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಕಾರಣವೇನೆಂದರೆ ಕೆಲವನ್ನು ಾವು ಸರಿಯೆಂದು, ಕೆಲವನ್ನು ಸರಿಯಿಲ್ಲವೆಂದು ಹೇಳಬೇಕಾಗುತ್ತದೆ. ಯಾವುದು ರಿಯಿದೆ, ಯಾವುದು ಸರಿಯಿಲ್ಲ ಎನ್ನುವಂತಹ ಕಾರ್ಯ ಈ ರಾಜ್ಯಪಾಲರ ಾಷಣದಲ್ಲಿ ಆಗಬೇಕು. ಮಾನ್ಯ ರಾಜ್ಯಪಾಲರ ಭಾಷಣ ಎಂದು ಹೇಳಿದರೆ ಅದು ಂದು ಸರ್ಕಾರದ ಅಭಿಪ್ರಾಯ ಎನ್ನುವ ಭಾವನೆಯನ್ನು ನಾವು ಹೊಂದಿಕೊಂಡಿರತಕ್ಕಂಥ ೀ ಸಂದರ್ಭದಲ್ಲಿ ಈ ಒಂದು ವರ್ಷದ ಸಾಧನೆಯನ್ನು ನಾವು ನೆನೆಸಿಕೊಂಡಾಗ ಹಳಷ್ಟು ಆಲೋಚನೆ ನಮಗೆ ಬರುತ್ತದೆ.

ಇವತ್ತಿನ ದಿವಸ ನಮ್ಮ ಸರ್ಕಾರ ಈ ವರ್ಷದಲ್ಲಿ ಬೇಕಾದಷ್ಟು ಸಂಕಷ್ಟಗಳನ್ನು ದುರಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ನಾನು 26ವರ್ಷಗಳಿಂದ ರಾಜಕೀಯದಲ್ಲಿ ೆಸ ಮಾಡಿಕೊಂಡು ಬಂದಿದ್ದೇನೆ. ಆದರೆ ಈ ಒಂದು ವರ್ಷದಲ್ಲಿ ಬಂದಂತಹ ಮಸ್ಯೆಗಳನ್ನು ನಾವು ನೆನೆಸಿದಾಗ ಬಹಳಷ್ಟು ಸಮಸ್ಯೆಗಳನ್ನು ಈ ಸರ್ಕಾರ ಎದುರಿಸಿದೆ ಂದು ಹೇಳಿದರೆ ನನ್ನ ಎಲ್ಲಾ ಸ್ನೇಹಿತರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಾವಿಸಿಕೊಂಡಿದ್ದೇನೆ. ಅದರಲ್ಲೂ ಬಹಳ ಅಘಾತವಾದಂತಹ ದೊಡ್ಡ ಸಮಸ್ಯೆಗಳು ಂದಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಅದರಲ್ಲೂ ಸಹ ಬಹಳ ಹೆಚ್ಚಿನ ಮಸ್ಯೆ ಬಂದಿದ್ದೆಂದರೆ ಕಾವೇರಿ ನೀರಿನ ಜಲ ವಿವಾದ ಸಮಸ್ಯೆ. ಈ ಸಮಸ್ಯೆಯ ಚಾರದಲ್ಲಿ ಬಹಳ ಸಂಕಷ್ಟದ ಕಾಲವನ್ನು ನಾವು ನೋಡಿದ್ದೇವೆ. ಇಂತಹ ಒಂದು ಮಸ್ಯೆಯನ್ನು ಎಲ್ಲಾ ರಾಜಕೀಯ ಪಕ್ಷಗಳ ಸಹಕಾರದಿಂದ, ರಾಜ್ಯದ ಹಿತದೃಷ್ಟಿಯಿಂದ, ನತೆಯ ದೃಷ್ಟಿಯಿಂದ ರೈತರ ದೃಷ್ಟಿಯಿಂದ ಒಂದು ವರ್ಷಗಳಿಂದ ಈ ಸಮಸ್ಯೆಯನ್ನು ಗೆಹರಿಸುವುದಕ್ಕೆ ನಮ್ಮ ಸರ್ಕಾರ ಪ್ರಯತ್ನ ಮಾಡಿದೆ ಎಂದು ಹೇಳಿದರೆ ನಮ್ಮ ತರ ಸ್ನೇಹಿತರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಬಹುಶಃ ಾವು ಸರ್ಕಾರ ಮಾಡಿದ್ದೆಲ್ಲಾ ಸರಿ ಎಂದು ಹೇಳುವುದಕ್ಕಿಂತ ಎಲ್ಲಿ ತಪ್ಪಾಗಿದೆ ಆ ಪ್ಪನ್ನು ತಿದ್ದಿಕೊಳ್ಳಬೇಕು. ನಮ್ಮ ಸರ್ಕಾರ ಎಂದು ಹೇಳಿದರೆ ಮಾಡಿದ್ದೆಲ್ಲಾ ಸರಿ

ಎಂದು ಹೇಳತಕ್ಕಂಥಾದ್ದು ಪ್ರಜಾಪ್ರಭುತ್ವದಲ್ಲಿ ಸರಿಯಾದುದಲ್ಲ, ಆದುದರಿಂದ ತಪ್ಪನ್ನು ತಪ್ಪಾಗಿದೆ, ಸರಿಯನ್ನು ಸರಿಯಾಗಿದೆ ಎಂದು ಹೇಳಬೇಕಾಗುತ್ತದೆ. ಮುಂದಕ್ಕೆ ಈ ರೀತಿ ನಡೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಸೂಚನೆ ಕೊಡತಕ್ಕಂಥಾದ್ದು, ಜನತಾ ಪ್ರತಿನಿಧಿಯಾದ ನಮ್ಮಗಳ ಕರ್ತವ್ಯ ಎಂದು ನಾನು ಭಾವಿಸಿಕೊಳ್ಳುತ್ತೇನೆ.

ಆ ದೃಷ್ಟಿಯಲ್ಲಿ ಯೋಚನೆ ಮಾಡಿ ನೋಡಿದಾಗ ಒಂದು ವರ್ಷದಲ್ಲಿ ನಾವು ಮೊಟ್ಟಮೊದಲನೆಯದಾಗಿ ಆಡಳಿತ ಚುರುಕುಗೊಳಿಸುವುದರಲ್ಲಿ ನಮ್ಮ ಸರ್ಕಾರ ಪ್ರಯತ್ನ ಮಾಡಿದೆ. ಅದನ್ನೇ ರಾಜ್ಯಪಾಲರು, ಭಾಷಣದಲ್ಲಿ ಹೇಳಿದ್ದಾರೆ. ಇನ್ನು ಜಿಲ್ಲಾ ಮಟ್ಟದಲ್ಲಿ ಜನತಾ ದರ್ಶನ ಏನು ನಡೆಯಿತು, ಈ ದರ್ಶನದ ಬಗ್ಗೆ ಬಹಳಷ್ಟು ರೀತಿಯಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಜನರಿಂದ ಪ್ರತಿಕ್ರಿಯೆ ಚೆನ್ನಾಗಿ ಬಂದಿದೆ ಎನ್ನುವಂತಹ ಮಾತನ್ನು ರಾಜ್ಯಪಾಲರು ಹೇಳಿದ್ದಾರೆ. ನನ್ನ ನಂಬಿಕೆ ಏನೆಂದರೆ ಇದರಿಂದ ಆಡಳಿತ ಸುಧಾರಣೆಯಾಗುವುದಕ್ಕೆ ಪ್ರಾರಂಭವಾಗಿದೆ. ಜನತಾ ದರ್ಶನದಿಂದ ಎಲ್ಲಾ ಸರ್ವಸ್ವವೂ ಸಾಧನೆಯಾಗಿದೆ, ಜನರು ಯಾರು ಅರ್ಜಿ ಕೊಟ್ಟಿದ್ದರು, ಆ ಜನರ ಸಮಸ್ಯೆ ಬಗೆಹರಿದುಹೋಗಿದೆ, ಸಮಸ್ಯೆ ಏನೂ ಉಳಿದಿಲ್ಲ ಎನ್ನುವ ಮಾತಿಗೆ ಹೋಗದೇ ಹೋದರೂ ಸಹ ಎಷ್ಟೋ ಜನರನ್ನು ನೋಡಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ಅವರ ಅವಧಿಯಲ್ಲಿ ಅವರ ಜಿಲ್ಲೆಗಳಿಗೆ ಹೋಗದೆ ಇವುವಂಥ ವಿಚಾರಗಳಿವೆ. ಅಂತಹ ಮುಖ್ಯಮಂತ್ರಿಗಳ ಕಾಲವನ್ನು ನೋಡಿದ್ದೇವೆ.

ಆದರೆ ಈ ಜನತಾ ದರ್ಶನದಿಂದ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲೆಗಳಿಗೆ ಹೋಗತಕ್ಕಂಥ ಅವಕಾಶ, ಎಲ್ಲಾ ಜಿಲ್ಲೆಯಲ್ಲಿ ಆಡಳಿತವನ್ನು ನೋಡತಕ್ಕಂಥ ಅವಕಾಶ, ಜನರನ್ನು ಭೇಟಿ ಮಾಡತಕ್ಕಂಥ ಅವಕಾಶ, ಜನರ ಸಮಸ್ಯೆ ಏನಿದೆ, ಅವರೇ ನೇರವಾಗಿ ಜನರನ್ನು ಭೇಟಿ ಮಾಡತಕ್ಕಂಥ ಒಂದು ಒಳ್ಳೆಯ ಕೆಲಸವಾಗಿದೆ. ಅದೇ ದೊಡ್ಡ ಪ್ರಜಾಪ್ರಭುತ್ವದ ಸಾಧನೆ. ಜನರ ಎಲ್ಲಾ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲ, ಆದರೆ ಜನರ ಭೇಟಿ ಮಾಡತಕ್ಕಂಥಾದ್ದು ಪ್ರಜಾಪ್ರಭುತ್ವದಲ್ಲಿ ಒಂದು ದೊಡ್ಡ ಸಾಧನೆ ಎನ್ನುವಂತಹ ವಿಚಾರವನ್ನು ನಾವು ಮನಗಾಣಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಏನು ಜನತಾ ದರ್ಶನದಿಂದ ಅನೇಕ ಜಿಲ್ಲೆಗಳಿಗೆ ಭೇಟಿ ಮಾಡಿದ್ದಾರೆ ಇದಕ್ಕೆ ಜನರಿಂದ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಜನರು ಸರ್ಕಾರ ನಮಗೆ ಸ್ಪಂದಿಸಿದೆ, ಸರ್ಕಾರ ನಮ್ಮ ಜೊತೆಗಿದೆ ಎಂದು ಭಾವಿಸಿಕೊಂಡಿದ್ದಾರೆ. ಜೊತೆಗೆ ಇದು ತಾಲ್ಲೂಕು ಮಟ್ಟದಲ್ಲಿ ಆಗಬೇಕು. ತಾಲ್ಲೂಕು ಮಟ್ಟದಲ್ಲಿ ಮಾಡಿದರೆ ಆಡಳಿತ ಸುಧಾರಣೆಯಾಗುತ್ತದೆನ್ನುವ ಭರವಸೆ ಇದೆ. ಅದನ್ನೂ ಸಹ ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ತಾಲ್ಲೂಕುಗಳಿಗೆ ಹೋದರೆ ಬಹಳಷ್ಟು ಒಳ್ಳೆಯ ಕೆಲಸವಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ಜನತಾದರ್ಶನ ನಡೆದಾಗ ಜನರಿಗೆ ಸರ್ಕಾರ ನಮ್ಮ ಹತ್ತಿರ ಇದೆ, ಆಡಳಿತ ನಮ್ಮದು ಸರ್ಕಾರ ನಮ್ಮದು, ಜನರಿಂದ ರಚಿತವಾಗಿರತಕ್ಕಂಥ ಸರ್ಕಾರ, ಜನರಿಗೋಸ್ಕರ ಇರತಕ್ಕಂಥ ಸರ್ಕಾರ ಜನರಿಂದ ನಡೆಯತಕ್ಕಂಥ ಸರ್ಕಾರ ಎಂಬ ಭಾವನೆಯನ್ನು ಮೂಡಿಸತಕ್ಕಂಥಾದ್ದು ಪ್ರಜಾಪ್ರಭುತ್ವದಲ್ಲಿ, ಪ್ರಜಾತಂತ್ರದಲ್ಲಿ ಬಹಳ ಪ್ರಾಮುಖ್ಯವಾದುದು ಎಂದು ಹೇಳುತ್ತೇವೆ. ಅಂತಹ ಒಂದು ಸೂಚನೆಯನ್ನು ನಮ್ಮ ಸರ್ಕಾರಕ್ಕೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಜಿಲ್ಲಾ ಮಟ್ಟದಲ್ಲಿ ಜನತಾ ದರ್ಶನವಾಗಿದೆ ಅದೇ ಪ್ರಮಾಣದಲ್ಲಿ, ಅದೇ ವೇಗದಲ್ಲಿ ಇನ್ನು ಉತ್ತಮವಾಗಿ ತಾಲ್ಲೂಕು ಮಟ್ಟದ ಆಡಳಿತವನ್ನು ಸುಧಾರಣೆ ಮಾಡುವುದಕ್ಕೋಸ್ಕರ ಚುರುಕುಗೊಳಿಸುವುದಕ್ಕೋಸ್ಕರ, ತಾಲ್ಲೂಕು ಮಟ್ಟದಲ್ಲಿ, ಸರ್ಕಾರ ಇದೆ ಎನ್ನುವ ಭಾವನೆಯನ್ನು, ಸರ್ಕಾರ ನಮ್ಮದು ಎನ್ನುವ ಭಾವನೆಯನ್ನು ಮಾಡಿಸತಕ್ಕಂಥ ದೃಷ್ಟಿಯಿಂದ ಜನರು ಏನು ಜನತಾ ದರ್ಶನವನ್ನು ಸ್ವಾಗತ

ಮಾಡಿದ್ದಾರೆ ಅದೇ ರೀತಿ ತಾಲ್ಲೂಕು ಮಟ್ಟದಲ್ಲಿ ಸಹ ಜನತಾ ದರ್ಶನ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳಿಂದಲೇ ಆಗಬೇಕು, ಮಾನ್ಯ ಮಂತ್ರಿಗಳಿಂದಲೇ ಆಗಬೇಕು, ಶಾಸಕರಿಂದ ಆಗಬೇಕು ಎನ್ನುವಂತಾದ್ದು ನಮ್ಮ ಅನಿಸಿಕೆ. ಈ ಕಾರ್ಯಕ್ರಮವನ್ನು ನಮ್ಮ ರಾಜ್ಯಸರ್ಕಾರ ಮಾಡಬೇಕು ಎನ್ನುವ ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತಾ, ಬರುವ ದಿನಗಳಲ್ಲಿ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂದು ಹೇಳಿ ನಾನು ಸೂಚನೆ ಮಾಡುತ್ತೇನೆ. ಹಾಗೂ ಒಂದು ವರ್ಷದ ಸಾಧನೆಯಾಗಿದೆಯೆಂದು ದೊಡ್ಡದಾದಂತಹ ಸಮಾರಂಭ ಬೇಕಾಗಿಲ್ಲ, ಆಡಂಬರವಾದಂತಹ ಸಮಾರಂಭ ಮಾಡದೇ ಇರುವುದು ನಮಗೆ ಬಹಳ ಸಂತೋಷವಾಯಿತು. ಏಕೆಂದರೆ ಒಂದು ವರ್ಷದ ಸಾಧನೆ ಎಂದು ಹಣ ಖರ್ಚು ಮಾಡುವುದಕ್ಕಿಂತ ಬದಲಾಗಿ ಆ ಕಾರ್ಯಕ್ರಮಗಳನ್ನು ಮಾಡದಂತೆ ಅತ್ಯಂತ ಸರಳ ರೀತಿಯಲ್ಲಿ ಒಂದು ವರ್ಷವನ್ನು ನಾವು ಕಳೆದಿದ್ದೇವೆ ಎಂದು ಜನರಿಗೆ ತಿಳಿಸಿದ್ದು ಬಹಳ ಒಳ್ಳೆಯ ಕೆಲಸ ಎಂದು ನಾನು ಭಾವಿಸಿಕೊಂಡಿದ್ದೇನೆ. ಬಹಳ ಮಹತ್ವವಾದಂತಹ ಕೆಲಸವನ್ನು ನಮ್ಮ ಸರ್ಕಾರ ಕಳೆದ ಒಂದು ವರ್ಷದಲ್ಲಿ ಮಾಡಿರುವುದನ್ನು ಸಹ ಮಾನ್ಯ ರಾಜ್ಯಪಾಲರು ಒಂದು ಮಾತಿನಲ್ಲಿ ಹೇಳಿದ್ದಾರೆ. ಇನ್ನೂ ಚುನಾವಣೆಗಳನ್ನು ಮಾಡತಕ್ಕಂಥ ವಿಚಾರದಲ್ಲಿ ನಾನು ಆಗಲೇ ಹೇಳಿದೆ.

ಒಂದು ವರ್ಷದ ಮಾನ್ಯ ದೇವೇಗೌಡರ ನೇತೃತ್ವದ ಸರ್ಕಾರದಲ್ಲಿ ಅನೇಕ ಸಂಕಷ್ಟಗಳನ್ನು, ಅತ್ಯಂತ ಬೃಹದಾಕಾರವಾದ ಸಮಸ್ಯೆಗಳನ್ನು ಎದುರಿಸಿ ಪರಿಹರಿಸಿ, ಸರ್ಕಾರಕ್ಕೆ ಒಂದು ವರ್ಷಗಳ ಕಾಲ ತುಂಬಿರತಕ್ಕಂಥಾದ್ದು ನೆನಸಿಕೊಂಡರೆ ಯಾವುದೇ ರಾಜಕೀಯ ಪಕ್ಷಗಳಾಗಲಿ, ಅವರು ತಮ್ಮ ಆತ್ಮಾವಲೋಕನವನ್ನು ಮಾಡಿಕೊಳ್ಳತಕ್ಕಂಥಾದ್ದು ಸೂಕ್ತವೆಂದು ಹೇಳುತ್ತೇನೆ. ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ, ಆ ಚುನಾವಣೆಯಲ್ಲಿ ಯಾರೇ ಗೆದ್ದಿರಲಿ, ಇವರು ಗೆದ್ದಿದ್ದಾರೆ, ಅವರು ಗೆದ್ದಿದ್ದಾರೆ ಎನ್ನುವ ವಿಚಾರ ಬೇಡ. ಆದರೆ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಂಬಿಕೆ ಇರತಕ್ಕಂಥ ಸರ್ಕಾರಗಳಿಗೆ, ಚುನಾವಣೆಗಳಲ್ಲಿ ನಂಬಿಕೆ ಇರತಕ್ಕಂಥ ಸರ್ಕಾರಗಳು ಚುನಾವಣೆಯನ್ನು ಮಾಡಿರತಕ್ಕಂಥಾದ್ದು ಒಂದು ದೊಡ್ಡ ಸಾಧನೆ. ಅದರಲ್ಲಿ ಯಾರು ಗೆಲ್ಲುತ್ತಾರೆ, ಯಾರು ಸೋಲುತ್ತಾರೆ ಎನ್ನುವಂತಹ ವಿಚಾರ ಬರುವುದಿಲ್ಲ, ಆದುದರಿಂದ ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ಹಾಗೂ ಪುರಸಭೆಗಳು ಈ ಮೂರು ಚುನಾವಣೆಗಳನ್ನು ಒಂದು ವರ್ಷದಲ್ಲಿ ಮಾಡಿರತಕ್ಕಂಥ ಸರ್ಕಾರ ಎಂದರೆ ಈ ಸರ್ಕಾರ ಎಂದು ಹೇಳಿದರೆ ಯಾರೂ ಕೂಡ ತಪ್ಪಾಗಿ ಭಾವಿಸಿಕೊಳ್ಳಲಾರರು ಎಂದು ತಿಳಿದುಕೊಳ್ಳುತ್ತೇನೆ.

ಉದಾಹರಣೆಗೆ ತಾವು ಸಹಕಾರ ಕ್ಷೇತ್ರದಲ್ಲಿ ಬಹಳಷ್ಟು ಪಳಗಿದವರು, 9-10 ವರ್ಷಗಳಿಂದ ಚುನಾವಣೆ ನಡೆಯದೆ ಇರತಕ್ಕಂಥ ಸಹಕಾರ ಸಂಘಗಳಲ್ಲಿ ಆಡಳಿತಾಧಿಕಾರಿಗಳನ್ನು ನೇಮಿಸಿಕೊಂಡು ಕೆಲಸ ಮಾಡಿದಂಥ ದಿನಗಳನ್ನು ನಾವು ನೋಡಿದ್ದೇವೆ. ಆದರೆ ಇವತ್ತಿನ ದಿವಸ ರಾಜ್ಯದಲ್ಲಿ ಇರತಕ್ಕಂಥ ಇಪ್ಪತ್ತೆರಡು ಸಾವಿರ ಸೇವಾ ಸಹಕಾರ ಸಂಘಗಳಿಗೆ, ಟಿ.ಎ.ಪಿ.ಸಿ.ಎಂ.ಎಸ್. ಗಳಿಗೆ ಬಹುತೇಕ ಪಿ.ಎಲ್.ಡಿ. ಬ್ಯಾಂಕುಗಳಿಗೆ, ಬಹುತೇಕ ಡಿ.ಸಿ.ಸಿ. ಬ್ಯಾಂಕುಗಳಿಗೆ ಬಹುಶ 90ರಷ್ಟು ಭಾಗ ಸಹಕಾರ ಕ್ಷೇತ್ರದ ಎಲ್ಲಾ ಚುನಾವಣೆಗಳನ್ನು ಮಾಡಿದ್ದಾರೆ. ಇದು ಒಂದು ದೊಡ್ಡ ಸಾಧನೆ ಎಂಬತಕ್ಕಂಥದ್ದನ್ನು ನಾವು ಪ್ರಜಾತಂತ್ರದಲ್ಲಿ ನಂಬಿಕೊಳ್ಳಬೇಕು. ಸಹಕಾರ ಕ್ಷೇತ್ರವನ್ನು ಜನರು ಯಾರು ನಂಬಿಕೊಂಡಿದ್ದಾರೆ, ಅದರಲ್ಲಿ ಯಾರು ವಿಶ್ವಾಸ ಇಟ್ಟುಕೊಂಡಿದ್ದಾರೆ ಅವರ ಕೈಗೆ ಕೊಡತಕ್ಕಂಥ ಕೆಲಸವನ್ನು ಈ ಜನತಾದಳದ ಸರ್ಕಾರ ಒಂದು ವರ್ಷದಲ್ಲಿ ಮಾಡಿದೆ ಎಂಬತಕ್ಕದ್ದಕ್ಕೆ ನಮ್ಮೆಲ್ಲ ಸ್ನೇಹಿತರು ಒಪ್ಪಿಕೊಳ್ಳುತ್ತಾರೆ. ಸಹಕಾರ ಸಂಸ್ಥೆಗಳ ಚುನಾವಣೆಯೂ ಸಹ ಬಹಳ ಮಹತ್ತರವಾದ ಚುನಾವಣೆ, ಇನ್ನು ಉಳಿದುಕೊಂಡಿರುವಂಥದ್ದನ್ನು ನಾನು ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುವುದು ಎಂದು ಹೇಳಿದರೆ ಎ.ಪಿ.ಎಂ.ಸಿ. ಈ ಎ.ಪಿ.ಎಂ.ಸಿ.ಗಳ ಚುನಾವಣೆಗಳನ್ನು ಕೂಡಲೇ ಮಾಡಬೇಕು.

ಯಾವ ರೀತಿ ತಾವು ಇಲ್ಲಿಯವರೆಗೆ ಎಲ್ಲಾ ಚುನಾವಣೆಗಳನ್ನು ಮಾಡಿದ್ದೀರಿ, ಈ ಒಂದು ಎ.ಪಿ.ಎಂ.ಸಿ.ಗಳ ಚುನಾವಣೆಯನ್ನೂ ಮಾಡಿದರೆ ನಮ್ಮ ರಾಜ್ಯದಲ್ಲಿ ಎಲ್ಲಾ ಚುನಾವಣೆಗಳನ್ನು ಮಾಡಿದಂತಾಗುತ್ತದೆ. ಬರತಕ್ಕಂಥ ಪಾರ್ಲಿಮೆಂಟ್ ಚುನಾವಣೆಯ ಒಳಗಡೆ ರಾಜ್ಯದಲ್ಲಿ ಇರತಕ್ಕಂಥ ಎಲ್ಲಾ ಪ್ರಜಾತಂತ್ರದ ಸಂಸ್ಥೆಗಳಿಗೆ ಜನರಿಂದ ಆಯ್ಕೆ ಮಾಡಿ, ಜನರಿಗೋಸ್ಕರವಾಗಿ ಆ ಸ್ಥಾನದಲ್ಲಿ ಜನರ ಪ್ರತಿನಿಧಿಗಳನ್ನು ಕೂರಿಸತಕ್ಕಂಥ ಮಹತ್ತರವಾದಂಥ ಕೆಲಸವನ್ನು ಒಂದು ವರ್ಷದಲ್ಲಿ ಈ ಸರ್ಕಾರ ಮಾಡಿದೆ ಎಂದು ಹೇಳಿದರೆ ಬಹುಶಃ ಎಲ್ಲರೂ ಒಪ್ಪುತ್ತಾರೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಆದ್ದರಿಂದ ಎ.ಪಿ.ಎಂ.ಸಿ.ಯ ಚುನಾವಣೆಯನ್ನೂ ಸಹ ಮಾಡಬೇಕು ಜೊತೆಗೆ ನಮ್ಮ ಲೋಕಲ್ ಅಥಾರಿಟಿ ಎಂ.ಎಲ್.ಸಿ. ಏನು ಇದೆ, ಇವತ್ತು ಏನು ಲೋಕಲ್ ಅಥಾರಿಟಿ ಮುನಿಸಿಪಾಲಿಟಿ ಮಾಡಿದ್ದೇವೆ, ತಾಲ್ಲೂಕು ಪಂಚಾಯಿತಿ ಮಾಡಿದ್ದೇವೆ, ಗ್ರಾಮ ಪಂಚಾಯಿತಿಗಳಾಗಿದೆ, ಮತ್ತೆ ಜಿಲ್ಲಾ ಪಂಚಾಯಿತಿಗಳಾಗಿದೆ. ಈ ದೃಷ್ಟಿಯಲ್ಲಿ ಈ ಲೋಕಲ್ ಅಥಾರಿಟಿ ಎಂ.ಎಲ್.ಸಿ. ಚುನಾವಣೆಯನ್ನು ಸಹ ಮಾಡಬೇಕು. ಈ ಎರಡೂ ಚುನಾವಣೆಗಳನ್ನು ನಡೆಸಿದರೆ ಅಲ್ಲಿಗೆ ಸಂಪೂರ್ಣವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ಸಂಸ್ಥೆಗಳಿಗೆ ಪ್ರಜಾಪ್ರಭುತ್ವದ ಪ್ರಕಾರ ಪ್ರಜಾಪ್ರತಿನಿಧಿಗಳನ್ನು ನಾವು ಚುನಾಯಿಸಿದ ರೀತಿಯಲ್ಲಿ ಆಗುತ್ತದೆ. ಇದು ಒಂದು ದೊಡ್ಡ ಸಾಧನೆಯನ್ನು ನಮ್ಮ ರಾಜ್ಯಪಾಲರು ಮುಕ್ತ ಕಂಠದಿಂದ ಹೊಗಳಿದ್ದಾರೆ. ಬಹುಶಃ ಜನರೂ ಸಹ ಇದನ್ನು ಸ್ವೀಕಾರ ಮಾಡಿದ್ದಾರೆ. ಸೋಲು ಗೆಲುವಿಗಿಂತ ಪ್ರಜಾಪ್ರತಿನಿಧಿಗಳನ್ನು ಅಲ್ಲಿ ಕೂರಿಸಿದ್ದುದು ಜನತಾದಳ ಸರ್ಕಾರದ ದೊಡ್ಡ ಸಾಧನೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದರಲ್ಲಿ ನಮ್ಮ ಮಹಿಳೆಯರಿಗೆ, ದುರ್ಬಲ ವರ್ಗದವರಿಗೆ, ಪರಿಶಿಷ್ಟ ವರ್ಗದವರಾಗಲಿ, ಹಿಂದುಳಿದ ವರ್ಗದವರಿಗಾಗಲೀ ಅವರಿಗೂ ಸಹ ಮೀಸಲಾತಿಯನ್ನು ಕೊಟ್ಟುಕೊಂಡು ಚುನಾವಣೆ ಮಾಡಿರತಕ್ಕಂಥದ್ದನ್ನು ನಮ್ಮ ಕರ್ನಾಟಕ ಇಡೀ ರಾಷ್ಟ್ರದಲ್ಲಿಯೇ ಮಾದರಿಯಾಗುತ್ತದೆ ಎಂಬತಕ್ಕಂಥದ್ದನ್ನು ನಾವು ಮೆಚ್ಚಬೇಕಾದ ವಿಚಾರ. ಇದು ನಮ್ಮ ಪ್ರಜಾತಂತ್ರದ ಸಿದ್ಧಾಂತಕ್ಕೆ ಹೆಚ್ಚು ಬುನಾದಿಯನ್ನು, ಹೆಚ್ಚು ಶಕ್ತಿಯನ್ನು, ಹೆಚ್ಚು ನಂಬಿಕೆಯನ್ನು ನಾವು ತಂದುಕೊಟ್ಟಂತಾಗುತ್ತದೆ ಎಂಬತಕ್ಕಂಥದ್ದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಬೇರೆ ಬೇರೆ ವಿಚಾರಗಳಿಗೆ ಹೆಚ್ಚು ಗಮನವನ್ನು ಕೊಡುವುದಕ್ಕಿಂತ ನಮ್ಮ ರಾಜಕೀಯ ಬದಲಾವಣೆಗಳನ್ನು ಸಹ ನಮ್ಮ ರಾಜ್ಯಪಾಲರ ಭಾಷಣದಲ್ಲಿ ನೋಡಬೇಕಾಗುತ್ತದೆ. ರಾಜಕೀಯ ಬದಲಾವಣೆಗಳನ್ನು ನೋಡಿದಾಗ ನನಗೆ ಬಹಳ ಖುಷಿಯಾದದ್ದು ಯಾವುದು ಎಂದು ಹೇಳಿದರೆ ನಮ್ಮ ಜೈಲು ಮಂತ್ರಿಗಳು ರಾಜೀನಾಮೆ ಕೊಟ್ಟದ್ದುದು. ನನಗೆ ಮೀರಾಜುದ್ದೀನ್ ಪಾಟೀಲ್‌ರವರು ಸಿಕ್ಕಿದಾಗ ನಾನು ಅವರಿಗೆ ಹೇಳಿದೆ. ಅವರು ರಾಜೀನಾಮೆಯನ್ನು ಕೊಟ್ಟು ಹೊರಗಡೆ ಬಂದಾಗ ನಾನು ಬಹಳ ಮೆಚ್ಚುಗೆಯನ್ನು ವ್ಯಕ್ತಮಾಡದೆ ನೀವು ತುಂಬಾ ಒಳ್ಳೆಯ ಕೆಲಸವನ್ನು ಮಾಡಿದಿರಿ ಎಂದು. ಈ ಪ್ರಜಾತಂತ್ರದಲ್ಲಿ ಚುನಾವಣೆಯ ವ್ಯವಸ್ಥೆಯೊಳಗಡೆ ಯಾವ ರೀತಿಯಾದಂಥ ಚುನಾವಣಾ ಭ್ರಷ್ಟಾಚಾರ ನಡೆಯುತ್ತದೆ, ಯಾವ ರೀತಿಯಾಗಿ ಚುನಾವಣೆಗಳಲ್ಲಿ ಅವ್ಯವಹಾರ ನಡೆಯುತ್ತದೆ, ಯಾವ ರೀತಿಯಾಗಿ ಚುನಾವಣೆಯಲ್ಲಿ ನಡೆದುಕೊಂಡು ಬಂದಿದೆ ಎನ್ನತಕ್ಕಂಥದ್ದು ಇಡೀ ದೇಶದಲ್ಲಿ ಇರತಕ್ಕಂಥ ಎಲ್ಲಾ ರಾಜಕೀಯ ಪಕ್ಷಗಳಿಗೆ, ರಾಜಕೀಯ ಪಕ್ಷಗಳ ಮುಖಂಡರುಗಳಿಗೆ, ಅಥವಾ ಚುನಾವಣೆಗಳಲ್ಲಿ ಭಾಗವಹಿಸುತ್ತಾ ಇರತಕ್ಕಂಥ ಅಭ್ಯರ್ಥಿಗಳಿಗೆ ಗೊತ್ತಿರತಕ್ಕಂಥ ವಿಚಾರ.

ಆದರೂ ಸಹ ಒಂದು ಮೌಲ್ಯದ ಬಗ್ಗೆ ಅಥವಾ ಒಂದು ತಪ್ಪನ್ನು ಮಾಡಲಿ ಮಾಡದೆ ಇರಲಿ ಅವರೇ ಸ್ವಯಂಪ್ರೇರಿತವಾಗಿ ರಾಜೀನಾಮೆಯನ್ನು ಕೊಟ್ಟದ್ದಕ್ಕೆ ನಾನು ಅತ್ಯಂತ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಇದು ಇಡೀ ಒಂದು ಪ್ರಜಾತಂತ್ರದಲ್ಲಿ ಯಾರು ಪ್ರಜಾಪ್ರತಿನಿಧಿಗಳಿದ್ದಾರೆ ಅವರಿಗೆ ಗೌರವ ಬರತಕ್ಕಂಥ ವಿಚಾರ. ಇದು ಬೇರೆಯವರ ಹತ್ತಿರ ಹೇಳಿಸಿಕೊಳ್ಳುವಂಥ ವಿಚಾರವಲ್ಲ, ಹೇಳಿಸಿಕೊಳ್ಳಲೂ ಬಾರದು.

ಆ ರೀತಿ ಹೇಳಿಸಿಕೊಂಡಿದ್ದರೆ ಅವರಿಗೆ ಅಷ್ಟೊಂದು ಗೌರವ ಸಿಗುತ್ತಾ ಇರಲಿಲ್ಲ. ಆದ್ದರಿಂದ ನಮ್ಮ ಜೈಲುಮಂತ್ರಿ ಮೀರಾಜುದ್ದೀನ್ ಪಾಟೀಲ್‌ರವರು ನಮ್ಮ ಸರ್ಕಾರಕ್ಕೆ, ನಮ್ಮ ಪ್ರಜಾತಂತ್ರಕ್ಕೆ ಗೌರವವನ್ನು ತಂದಿದ್ದಾರೆ. ಯಾರ ಕೈಯಲ್ಲೂ ಹೇಳಿಸಿಕೊಳ್ಳದಂಥ ಒಂದು ರೀತಿಯಲ್ಲಿ, ಯಾವ ಒಂದು ರಾಜಕೀಯ ಮೌಲ್ಯ ಎಂದು ನಾವು ಕರೆಯುತ್ತೇವೆ ಅದಕ್ಕೆ ಅವರು ಹೆಚ್ಚಿನ ರೀತಿಯಲ್ಲಿ ಗೌರವವನ್ನು ಕೊಟ್ಟು ರಾಜೀನಾಮೆಯನ್ನು ಕೊಟ್ಟಿರುವುದು. ಆ ರಾಜೀನಾಮೆಯನ್ನು ಅಂಗೀಕಾರ ಮಾಡಿಕೊಂಡಿರುವಂತದ್ದು, ಎರಡೂ ಸಹ ಬಹಳ ಸೂಕ್ತವಾದುದು. ಅದನ್ನೆ ವಾಟಾಳ್ ನಾಗರಾಜ್‌ರವರು ಪ್ರಾರಂಭದಲ್ಲಿ ಪ್ರಸ್ತಾಪ ಮಾಡಿದರು. ಯಾವುದೇ ಸಭೆ ಪ್ರಾರಂಭವಾಗುವಂಥ ಕಾಲದಲ್ಲಿ ಯಾವ ಯಾವ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆ? ಏನು ಮಾಡಿದ್ದಾರೆ? ಅದರ ಪ್ರಸಂಗ ಏನು ಅದರ ವ್ಯವಹಾರ ಏನು? ಅದನ್ನು ಸದನಕ್ಕೆ ತಿಳಿಸತಕ್ಕಂತದ್ದು ಸೂಕ್ತ ಎನ್ನತಕ್ಕಂಥ ಮಾತನ್ನು ಅವರು ಪ್ರಸ್ತಾಪ ಮಾಡಿದರು. ನನಗನ್ನಿಸುತ್ತದೆ ಈ ಒಂದು ವರ್ಷ ಘಟನೆಯೊಳಗಡೆ ಅತ್ಯಂತ ಮೆಚ್ಚುಗೆಯನ್ನು ಕೊಟ್ಟಂಥ ರಾಜಕೀಯ ತೀರ್ಮಾನ, ಅತ್ಯಂತ ಮೆಚ್ಚುಗೆಯನ್ನು ತೋರಿಸಿದಂಥ ರಾಜಕೀಯ ಮೌಲ್ಯ ತೀರ್ಮಾನ ನಮ್ಮ ಮೀರಾಜುದ್ದೀನ್ ಪಾಟೀಲ್‌ರು, ಅದರ ಹಿನ್ನೆಲೆಗೆ ನಾನು ಹೋಗುವುದಿಲ್ಲ. ಇವತ್ತಿನ ರಾಜಕೀಯ ವ್ಯವಸ್ಥೆಯೊಳಗಡೆ, ಇವತ್ತಿನ ಎಲ್ಲಾ ರೀತಿಯಾದ ಚುನಾವಣಾ ವ್ಯವಸ್ಥೆಯೊಳಗಡೆ ಮೀರಾಜುದ್ದೀನ್ ಪಾಟೀಲ್‌ರವರು ರಾಜೀನಾಮೆ ಕೊಡಬೇಕು ಎಂದು ಯಾವ ಯಾವ ರೀತಿಯಾಗಿ ಮಾತನಾಡುತ್ತಾರೆ ಆದರೆ ಆ ರಾಜೀನಾಮೆ ಕೊಡಬೇಕು ಎಂದು ಕೇಳುವವರು ಅವರ ಸಿದ್ಧಾಂತಗಳನ್ನು, ಅವರು ನಡೆದುಕೊಂಡು ಬಂದ ರೀತಿಯನ್ನು ಅವರು ನೋಡಬೇಕು. ಯಾವ ರೀತಿ ಇವತ್ತು ಚುನಾವಣೆಗಳು ಆಗುತ್ತಿವೆ, ಯಾವ ವರ್ಚಸ್ಸಿನಲ್ಲಿ ಚುನಾವಣೆ ಆಗುತ್ತಿದೆಯೇ? ಅಥವಾ ವರ್ಚಸ್ಸಿಲ್ಲದೆ ಇನ್ನಾವುದರ ಮೇಲೆ ಚುನಾವಣೆಗಳು ನಡೆಯುತ್ತಿವೆ ಪ್ರಜಾತಂತ್ರದಲ್ಲಿ ಯಾವ ಯಾವ ಶಕ್ತಿಗಳು ಇವತ್ತು ಚುನಾವಣೆಯಲ್ಲಿ ಕೆಲಸ ಮಾಡುತ್ತಿವೆ? ಹಣದ ಶಕ್ತಿ ಇದೆಯೇ? ಇಲ್ಲ ಜಾತಿ ಶಕ್ತಿ ಇದೆಯೇ? ಯಾವ ಶಕ್ತಿಯ ಮೇಲೆ ಚುನಾವಣೆಯ ಫಲಿತಾಂಶಗಳು ನಿಂತಿದ್ದಾವೆ ಎನ್ನತಕ್ಕಂಥದ್ದನ್ನು ನಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇದರ ಜೊತೆಗೆ ಮೀರಾಜುದ್ದೀನ್ ಪಾಟೀಲ್‌ರವರ ಒಂದು ನಡವಳಿಕೆ ಅತ್ಯಂತ ಗಂಭೀರವಾದ ನಡವಳಿಕೆ, ಅತ್ಯಂತ ಮೆಚ್ಚತಕ್ಕಂಥ ನಡವಳಿಕೆ. ವಿಧಾನಸಭೆಯಲ್ಲಿ ಅದು ಚರ್ಚೆಗೆ ಬರುತ್ತದೆ ಅಥವಾ ಬರುವುದಿಲ್ಲವೋ, ಅದು ಬೇರೆ ವಿಚಾರ. ಆದರೆ ಎಲ್ಲರೂ ಪ್ರಜಾತಂತ್ರದಲ್ಲಿ ನಡೆದುಕೊಳ್ಳಬೇಕಾದ ರೀತಿ ಇದು ಎಂಬತಕ್ಕಂಥದ್ದನ್ನು ತೋರಿಸಿ ಅವರು ರಾಜೀನಾಮೆ ಕೊಟ್ಟಿರತಕ್ಕಂಥದ್ದು `ಅತ್ಯಂತ ಶ್ಲಾಘನೀಯವಾದ ಕೆಲಸ.

ಇದು ಅವರ ಗೌರವವನ್ನು ಹೆಚ್ಚಿಸಿದೆ, ಈ ಸರ್ಕಾರದ ಗೌರವವನ್ನು ಹೆಚ್ಚಿಸಿದೆ. ಹಾಗೂ ರಾಜಕಾರಣಿಗಳ ಗೌರವವನ್ನು ಅವರು ಹೆಚ್ಚಿಸಿದ್ದಾರೆ. ಅವರ ಬಗ್ಗೆ ನಾವು ಈ ಸಂದರ್ಭದಲ್ಲಿ ಮಾತನಾಡದೇ ಹೋದರೆ, ಅದು ರಾಜ್ಯಪಾಲರ ಭಾಷಣದ ಮೇಲೆ ವಂದಿಸತಕ್ಕಂಥ ಕಾಲದಲ್ಲಿ ಮಾತನಾಡದೆ ಹೋದರೆ ಬಹಳ ತಪ್ಪಾಗುತ್ತದೆ ಎಂಬ ದೃಷ್ಟಿಯಿಂದ ನಾನು ಅವರ ಬಗ್ಗೆ ಅತ್ಯಂತ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಮುಂದೆ ಮಾತನಾಡತಕ್ಕಂಥವರು ಸಹ ನಮ್ಮ ಜೈಲು ಮಂತ್ರಿಯವರು ನಡೆದುಕೊಂಡಿರತಕ್ಕಂಥ ಆ ರಾಜೀನಾಮೆಯ ಹಿನ್ನೆಲೆಯ ಬಗ್ಗೆ, ನಡೆದಂಥ ಘಟನೆಗಿಂತ ಅವರು ನಡೆದುಕೊಂಡಂಥ ರಹಸ್ಯ ತೀರ್ಮಾನದ ಬಗ್ಗೆ ಎಲ್ಲರೂ ಮೆಚ್ಚುಗೆಯನ್ನು ವ್ಯಕ್ತ ಮಾಡುತ್ತಾರೆ ಎನ್ನತಕ್ಕಂಥದ್ದನ್ನು ನಾನು ಹೇಳುತ್ತೇನೆ. ಇವತ್ತಿನ ದಿವಸ ಈ ಒಂದು ರಾಜಕೀಯ ಮೌಲ್ಯಗಳ ಬಗ್ಗೆ ಮಾತನಾಡತಕ್ಕಂಥ ಕಾಲದಲ್ಲಿ ಈ ದೇಶದಲ್ಲಿ ನಡೆಯುತ್ತಾ ಇರತಕ್ಕಂಥ ರೀತಿಯನ್ನು ನೋಡಿದಾಗ, ಅದು ಯಾವುದೇ ಹಗರಣವಾಗಿರಲಿ, ಇಂತಹದೇ ಹಗರಣ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಯಾವುದೇ ಹಗರಣಗಳಿರಲಿ. ಆದರೆ ಈ ಒಂದು ವರ್ಷದಲ್ಲಿ ಈ ಸರ್ಕಾರ ಯಾವುದೇ ಹಗರಣಗಳಿಗೆ ಸಿಕ್ಕಿಕೊಳ್ಳದೆ

ಪ್ರಾಮಾಣಿಕತೆ ಹಾಗೂ ಒಳ್ಳೆಯರೀತಿಯಲ್ಲಿ ಹೆಚ್ಚು ಗೊಂದಲಕ್ಕೆ ಅವಕಾಶ ನೀಡದೆಯೆ ಒಂದು ವರ್ಷ ಕಾಲ ಕಳೆದಿರತಕ್ಕಂಥದ್ದು ನಮ್ಮ ಸರ್ಕಾರ ಎಂದು ಹೇಳುತ್ತೇನೆ ಏತಕ್ಕೆ ಈ ಮಾತನ್ನು ನಾನು ಹೇಳುತ್ತೇನೆ ಎಂದು ಹೇಳಿದರೆ ಇವತ್ತು ನಾಡ ದೇಶದಲ್ಲಿ ಹಲವಾರು ಹಗರಣಗಳು ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ನನ ಈ 'ಹವಾಲ ಹಗರಣ' ನೋಡಿದಾಗಲಂತೂ ಇದು ಒಂದು ಅತ್ಯಂತ ಗಂಭೀರವಾ ಹಗರಣ ಎಂದು ನನಗೆ ಅನ್ನಿಸಿದೆ. ಯಾವುದೇ ರಾಜಕಾರಣಿಗಳಿಗೆ ಆಗಲೀ, ಯಾವುದೇ ಸರ್ಕಾರಕ್ಕೆ ಆಗಲೀ ಅಂತಹ ಹಗರಣಗಳನ್ನು ನೋಡಿದಾಗ ನಮಗೆ ನಿಜವಾಗಲೂ ಏನು ಅನ್ನಿಸುತ್ತದೆ ಎಂದರೆ, ಇವತ್ತಿನ ನಮ್ಮ ರಾಷ್ಟ್ರದ ರಾಜಕಾರಣಕ್ಕೆ ಹೋಲಿಸಿದಾ ಇವತ್ತಿನ ದಿವಸ ಯಾವ ರೀತಿಯಾಗಿ ನಾವು ನಡೆದುಕೊಳ್ಳುತ್ತಿದ್ದೇವೆ ಎಂಬುದ ಬಗ್ಗೆ ನಾವು ಯೋಚನೆ ಮಾಡಲೇಬೇಕಾಗಿದೆ. ಈ ಒಂದು ಸಂದರ್ಭದಲ್ಲಿ ಈ ವಿಷಯ ನಮ್ಮ ವ್ಯಾಪ್ತಿಯೊಳಗೆ ಚರ್ಚೆ ಮಾಡುವುದಕ್ಕೆ ಬರದೇ ಇರಬಹುದು ಆದರ ಆ ಒಂದು ಹಗರಣವನ್ನು ನೋಡಿದಾಗ, ಇವತ್ತು ನಾನು ಒಂದೇ ಒಂದು ಪ್ರಶ್ನೆ ಕೇಳುವುದೆಂದರೆ ಅದೂ ಶ್ರೀ ಬೊಮ್ಮಾಯಿಯವರ ರಾಜೀನಾಮೆ. ಅದೂ ನನಗೆ ಮೆಚ್ಚುಗೆಯಾಯಿತು. ಜೊತೆಗೆ ಅಡ್ವಾನಿಯವರು ಲೋಕಸಭೆಗೆ ರಾಜೀನಾಮೆ ಕೊಟ್ಟಿದ್ದು ಮೆಚ್ಚುಗೆಯಾಯಿತು. ಜೊತೆಗೆ ಅಡ್ವಾನಿಯವರು ಲೋಕಸಭೆಗೆ ರಾಜೀನಾಮೆ ಕೊಟ್ಟಿದ್ದು ಸಹ ನನಗೆ ಅತ್ಯಂತ ಮೆಚ್ಚುಗೆಯಾಯಿತು. ಅವರು ಪ್ರಪ್ರಥಮವಾಗಿ ರಾಜೀನಾಮೆ ಕೊಟ್ಟಾಗ ಬರೀ ಲೋಕಸಭೆ ಒಂದಕ್ಕೆ ಅಲ್ಲ ಅವರ ಪಕ್ಷಕ್ಕೂ ಸಹ ರಾಜೀನಾಮೆಯನ್ನು ಕೊಟ್ಟು ಹೊರಗಡೆ ಬರುತ್ತಾರೆ ಎಂಬ ನಿಟ್ಟಿನಲ್ಲಿ ನಾನು ಅವರಿಂದ ನೆನೆಸಿದ್ದೆ. ರಾಜೀನಾಮೆಯನ್ನು ಕೊಟ್ಟು ಅತ್ಯಂತ ಗೌರವವನ್ನು ಬಿ.ಜೆ.ಪಿ.ಗೆ ಶ್ರೀ ಅಡ್ವಾನಿಯವರು ತಂದುಕೊಟ್ಟರು. ಅದಿರಲಿ, ಯಾವುದೇ ಒಂದು ಆರೋಪಗಳು ಬರುತ್ತದೆ, ಆರೋಪ ಸಾಬೀತಾದಾಗ ಆರೋಪಕ್ಕೆ ಒಂದು ಪುರಸ್ಕಾರ ಸಿಗುತ್ತೆ. ಆರೋಪ ಸಾಬೀತಾಗದೆ ಹೋದರೆ ಆ ಆರೋಪಕ್ಕೆ ಪುರಸ್ಕಾರ ಸಿಗುವುದಿಲ್ಲ ಗೌರವ ಜಾಸ್ತಿಯಾಗುತ್ತದೆ. ಇವತ್ತು ಪ್ರತಿನಿತ್ಯ ದಿನಪತ್ರಿಕೆಯಲ್ಲಿ ನಾವು ನೋಡುತ್ತಿದ್ದೇವೆ. ನಮ್ಮ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಹೆಚ್ಚು ಸಂಸದೀಯ ವ್ಯವಹಾರ ಹೊಂದಿರತಕ್ಕ ನಮ್ಮ ರಾಷ್ಟ್ರದಲ್ಲಿ ದಿನಬೆಳಿಗ್ಗೆ ಎದ್ದರೆ ಒಬ್ಬ ಮಂತ್ರಿಗಳ ರಾಜೀನಾಮೆಯನ್ನು ನೋಡಿದಾಗ ಇಂತಹ ಒಂದು ಹಗರಣಗಳಿಗೆ ಸಿಕ್ಕಿಕೊಳ್ಳದೆ, ಇಂತಹ ಒಂದು ಪರಿಸ್ಥಿತಿಗಳಿಗೆ ಸಿಕ್ಕಿಕೊಳ್ಳದೆ ಹೆಚ್ಚು ಭೀತಿಯಾದಂಥ ಕೆಟ್ಟ ವಾತಾವರಣಕ್ಕೆ ಅವಕಾಶ ಕೊಡದೆ ನಮ್ಮ ಸರ್ಕಾರ ಒಂದು ವರ್ಷ ತುಂಬಿಸಿರತಕ್ಕದ್ದು ಸಹ ಈ ಪ್ರಜಾಪ್ರಭುತ್ವದಲ್ಲಿ ದೊಡ್ಡ ಸಾಧನೆ ಎಂದು ಹೇಳಿ ನಾನು ಭಾವಿಸಿಕೊಳ್ಳುತ್ತೇನೆ. ಹಾಗೂ ಬಹಳ ಮಹತ್ವವಾದ ಕೆಲಸ ಏನೆಂದು ಹೇಳಿದರೆ ಒಂದು ವರ್ಷದಲ್ಲಿ ನಾವು ಮಾಡಿರತಕ್ಕಂಥ ಒಂದು ದೊಡ್ಡ ಸಾಧನೆ ಈ ನೇಮಕಾತಿ ಮಾಡಿರತಕ್ಕಂಥದ್ದು ಅದೂ ಸಹ ಬಹಳ ಒಳ್ಳೆಯ ಕೆಲಸವನ್ನು ನಮ್ಮ ಇಲಾಖೆಯವರು ಮಾಡಿದ್ದಾರೆ. ನಾನು ಹೇಳುವುದಾದರೆ ಶಿಕ್ಷಣ ಇಲಾಖೆಯಲ್ಲಿ, ವಿಶೇಷವಾಗಿ ನಮ್ಮ ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ನಾವು ಬಹಳಷ್ಟು ಕೂಗನ್ನೂ ಕೇಳಿದ್ದೇವು. ಮೇಷ್ಟ್ರುಗಳಿಲ್ಲ, ಇಷ್ಟೇ ಶಾಲೆಗಳಿದ್ದಾವೆ, ಅಧ್ಯಾಪಕರಿಲ್ಲ ಎಂಬ ಮಾತನ್ನು ನಾನು ಮತ್ತು ಇಲ್ಲಿರತಕ್ಕ ಶಾಸಕರುಗಳು ಪ್ರತಿ ಹಳ್ಳಿಗಳಿಗೆ ಹೋದಾಗ ಮತ್ತೆ ಹಳ್ಳಿಗಳಲ್ಲಿ ಪ್ರಸ್ತಾಪ ಮಾಡಿದಾಗ, ನಾವು ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದಂಥ ಘಟನೆ ಏನು ಎಂದು ಹೇಳಿದರೆ ಇವತ್ತು ಅಧ್ಯಾಪಕರಿಲ್ಲ ಎಂದು ಹೇಳಿ. ಒಂದು ವರ್ಷದಲ್ಲಿ ಉಪಾಧ್ಯಕ್ಷರೆ, 9,350ರಿಂದ ಹತ್ತು ಸಾವಿರ ಅಧ್ಯಾಪಕರುಗಳ ಹುದ್ದೆಗಳನ್ನು ತುಂಬಿದ್ದಾರೆ. ಇದು ಒಂದು ದೊಡ್ಡ ಸಣ್ಣ ಕೆಲಸ ಎಂದು ನಾವು ಭಾವಿಸಿಕೊಳ್ಳುವುದಕ್ಕಾಗುವುದಿಲ್ಲ, ಇವತ್ತು ನಮಗೆ ಇನ್ನೂ ಬೇಕಾಗಿರಬಹುದು, ಇನ್ನೂ ಸುಮಾರು 10-15 ಸಾವಿರ ಅಧ್ಯಾಪಕರು ನಮಗೆ ಬೇಕಾಗಿದ್ದಾರೆ. ಆದರೂ ಸಹ ಒಂದು ವರ್ಷದಲ್ಲಿ ಸುಮಾರು 9-10 ಸಾವಿರ ಅಧ್ಯಾಪಕರುಗಳನ್ನು ತುಂಬಿರತಕ್ಕಂಥ

ಒಂದು ದೊಡ್ಡ ಕೆಲಸವನ್ನು ನಮ್ಮ ಇತರ ಸ್ನೇಹಿತರು ಸಹ ಮೆಚ್ಚುತ್ತಾರೆ ಎಂದು ಹೇಳಿ ನಾನು ಭಾವಿಸಿಕೊಳ್ಳುತ್ತೇನೆ. ಕಾರಣ ಏನು ಎಂದು ಹೇಳಿದರೆ ಬಹಳ ವರ್ಷಗಳಿಂದ ಅಧ್ಯಾಪಕರುಗಳನ್ನು ತುಂಬಿರಲಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಉನ್ನತ ಶಿಕ್ಷಣ ಇಲಾಖೆಯಲ್ಲಿ ನನಗೂ ಸಹ ಬೇಕಾದಷ್ಟು ವ್ಯವಹಾರ ಗೊತ್ತಿರತಕ್ಕಂಥದ್ದರಿಂದ ಎಷ್ಟೋ ಸರ್ಕಾರಿ ಕಾಲೇಜುಗಳಿಗೆ ಮೇಷ್ಟ್ರುಗಳೇ ಇರಲಿಲ್ಲ. ಈಗ ನಮ್ಮ ಪಬ್ಲಿಕ್ ಸರ್ವಿಸ್ ಕಮಿಷನ್ ಹತ್ತಿರ ಇಂಟರ್‌ವ್ಯೂ ಕೊಡಿಸಿ ಅದಕ್ಕೆ ಫೋನ್ ಮಾಡಿ, ಅದಕ್ಕೆ ಇದಕ್ಕೆ ಎಂದು ನಮ್ಮ ಹುಡುಗರು ಬರುತ್ತಾರೆ.

12.30 ಪಿ.ಎಂ

ಅವರಿಗೆ, ಇವರಿಗೆ ಫೋನ್ ಮಾಡಿ ಎಂದು ಕೇಳಿಕೊಂಡು ಬರುತ್ತಾರೆ. ಇವತ್ತು ಸುಮಾರು 760-800 ಲೆಕ್ಚರರ್ಸ್‌ಗಳ ಹುದ್ದೆಗೆ ಪಿ.ಎಸ್. ಸಿಯವರು ಇಂಟರ್‌ವ್ಯೂ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಈಗ ಅಪಾಯಿಂಟ್‌ಮೆಂಟ್ ಸ್ಟೇಜಿನಲ್ಲಿದೆ ಎಂದು ಭಾವಿಸುತ್ತೇನೆ. ಅದೇ ರೀತಿ ಪೋಲೀಸ್ ನೇಮಕಾತಿ ವಿಷಯದಲ್ಲೂ ವೆರಿಫಿಕೇಷನ್ ಸರ್ಟಿಫಿಕೇಟ್ ಆಗಿ ಅವರು ಸಹಿತ ಅಪಾಯಿಂಟ್‌ಮೆಂಟ್ ಆಗುವಂತಹ ಹಂತದಲ್ಲಿದ್ದಾರೆ. ಈಗ ಇಲ್ಲಿ ಉನ್ನತ ಶಿಕ್ಷಣ ಸಚಿವರು ಇಲ್ಲಿದ್ದಾರೆ. ಅರೆ ಕಾಲಿಕ ಲೆಕ್ಚರರ್‌ಗಳನ್ನು 1,670 ಲೆಕ್ಚರರ್ಸ್‌ಗಳು ಯಾರಿದ್ದಾರೆ ಅವರನ್ನು ನಾವು ಕನ್‌ಫರ್ಮ್ ಮಾಡುತ್ತೇವೆಂದು ಹೇಳಿದ್ದರು. ಈಗಾಗಲೇ ಅದರ ಬಗ್ಗೆ in principle you have taken a stand. ಇದರ ಜೊತೆಗೆ ರೂಲ್ಸ್ ಎಲ್ಲಾ ಮಾಡಿ ಆದಷ್ಟು ಬೇಗ ನೇಮಕ ಮಾಡಬೇಕು. ಈ 1,670 ಅರೆ ಕಾಲಿಕ ಶಿಕ್ಷಕರು ಬಹಳಷ್ಟು ವರ್ಷಗಳಿಂದ ಮುಷ್ಕರವನ್ನು ಮಾಡಿ, ಸಾಕಷ್ಟು ನೋವನ್ನು ಅನುಭವಿಸಿಕೊಂಡು ಬಂದಿದ್ದಾರೆ. 2-3 ಸರ್ಕಾರಗಳ ಕಾಲದಿಂದಲೂ, ಕಳೆದ ಸರ್ಕಾರವಿದ್ದಾಗಲೂ ಸಹಿತ ನಮ್ಮ ಹತ್ತಿರ ಬಂದು ಹೋಗಿದ್ದಾರೆ. ಅವರು ಬಹಳಷ್ಟು ಚಳುವಳಿಗಳನ್ನು ಮತ್ತು ಉಪವಾಸವನ್ನು ಮಾಡಿದರು. ಈಗ ಅವರಿಗೆ ಏನು ಸಹಾಯ ಮಾಡಬೇಕೆಂದು ನಿಯಮವನ್ನು ಮಾಡಿದ್ದೀರಿ. ಅದಕ್ಕೆ ರೂಲ್ಸ್ ಮಾಡಿ ಕೂಡಲೇ ಅರೆ ಕಾಲಿಕ ಲೆಕ್ಚರರ್‌ಗಳಿಗೆ ಹುದ್ದೆಗಳನ್ನು ತುಂಬಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಿವಿಧ ಇಲಾಖೆಗಳಲ್ಲಿ ಅಂದರೆ ಪೋಲೀಸ್ ಇಲಾಖೆಯ ಬಗ್ಗೆ ನಾನು ತರಿಸಿಕೊಂಡು ನೋಡಿದೆ. ಅದರಲ್ಲಿ ಇನ್ನು 10-15 ದಿವಸಗಳಲ್ಲಿ 8,000 ಜನರಿಗೆ ಅಪಾಯಿಂಟ್‌ಮೆಂಟ್ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿ ಇಂಟರ್‌ವ್ಯೂ ನಡೆಯುತ್ತಾ ಇದೆ.ಇನ್ನು ಒಂದೆರಡು ವಾರಗಳಲ್ಲಿ 8,000 ಜನರಿಗೆ ಅದು ಕಾನ್‌ಸ್ಟೆಬಲ್ ಇರಬಹುದು ಮತ್ತೊಂದು ಇರಬಹುದು. ಇನ್ನು ಎರಡು ವಾರಗಳಲ್ಲಿ ಅಥವಾ ಒಂದು ತಿಂಗಳೂ ಒಳಗೆ ಈ 8,000 ಜನರಿಗೆ ಪೋಲೀಸ್ ಇಲಾಖೆಯಲ್ಲಿ ಹುದ್ದೆಯನ್ನು ಕೊಡುವಂತಹ ಕೆಲಸವೇನಿದೆ ಅದು ಸಣ್ಣ ಸಾಧನೆ ಎಂದು ನಾನು ಅಂದುಕೊಳ್ಳುವುದಿಲ್ಲ.

ಅಂದರೆ ಈಗ ವಿದ್ಯಾ ಇಲಾಖೆಯಲ್ಲಿ ತುಂಬಿದ್ದೇವೆ, ಉನ್ನತ ಶಿಕ್ಷಣ ಇಲಾಖೆಯಲ್ಲಿ ತುಂಬಿದ್ದೇವೆ, ಪೋಲೀಸ್ ಇಲಾಖೆಯಲ್ಲಿ ತುಂಬಿದ್ದೇವೆ. ಇನ್ನು ಆರೋಗ್ಯ ಇಲಾಖೆಯಲ್ಲಿ ನನಗೆ ಗೊತ್ತಿರುವ ಹಾಗೆ ಸುಮಾರು 831 ಕಂಟ್ರಾಕ್ಟ್ ಡಾಕ್ಟರ್ಸ್‌ಗಳನ್ನು ನಾವು ನೇಮಕ ಮಾಡಿದ್ದೇವೆ. ಇವರಲ್ಲೂ ಹಳ್ಳಿಗಾಡುಗಳಿಗೆ ಮತ್ತು ತಾಲ್ಲೂಕುಗಳಿಗೆ ಹೋಗುತ್ತಾ ಇರಲಿಲ್ಲ, ಅವರೆಲ್ಲಾ ಟೌನ್, ಸಿಟಿ ಬೇಕೆಂದು ಕೇಳುತ್ತಾರೆ, ದೊಡ್ಡ ದೊಡ್ಡ ಸ್ಥಳಗಳನ್ನು ಕೇಳುತ್ತಾರೆ. ಅವರು ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ದಿ : 1-1-95ರಿಂದ ಇವತ್ತಿನವರೆಗೂ 831ಜನ ಕಾಂಟ್ರಾಕ್ಟ್ ವೈದ್ಯರುಗಳನ್ನು ತುಂಬಿದ್ದೇವೆ. ನಾನು ಈ ಬಗ್ಗೆ ಹೇಳುವುದಾದರೆ, ನಾವು ಚುನಾವಣೆ ಕಾಲದಲ್ಲಿ ಒಂದು ಮಾತನ್ನು ಹೇಳಿದ್ದೇವೆ. ಸುಮಾರು 60-70 ಸಾವಿರ ಹುದ್ದೆಗಳು ಖಾಲಿ

ಇವೆ. ಇವುಗಳನ್ನು ಹಂತಹಂತವಾಗಿ ನಾವು ತುಂಬುತ್ತೇವೆಂಬ ಮಾತನ್ನು ನಾವೆಲ್ಲರೂ ಚುನಾವಣೆಯ ಕಾಲದಲ್ಲಿ ಭಾಷಣ ಮಾಡುವಾಗ ಹೇಳಿದ್ದೇವೆ. ಇವತ್ತಿನ ದಿವಸ 10,000 ಸಾವಿರ ಹುದ್ದೆಗಳನ್ನು ಪ್ರಾಥಮಿಕ ಶಿಕ್ಷಣದಲ್ಲಿ 2,000 ಹುದ್ದೆಗಳನ್ನು ಉನ್ನತ ಶಿಕ್ಷಣದಲ್ಲೂ ತುಂಬಿದ್ದೇವೆ. ಪೋಲೀಸ್ ಇಲಾಖೆಯಲ್ಲಿ 8,000 ಹುದ್ದೆಗಳನ್ನು ತುಂಬಿದ್ದೇವೆ. 830 ಡಾಕ್ಟರ್‌ಗಳನ್ನು ಆರೋಗ್ಯ ಇಲಾಖೆಯಲ್ಲಿ ತುಂಬಿದ್ದೇವೆ. ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ 831 ಎಂದು ಬಂದಿದೆ. ಅದು 800 ಇರಬಹುದು, 900 ಇರಬಹುದು.ಇನ್ನು ಮಾನ್ಯ ಜಾಲಪ್ಪನವರ ಖಾತೆಯಲ್ಲಿ 1050 ಸರ್ವೆಯರ್‌ಗಳ ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. ಒಬ್ಬೊಬ್ಬ ಸರ್ವೇಯರ್‌ಗಳೇ ಇಡೀ ತಾಲ್ಲೂಕನ್ನು ಸುತ್ತುತ್ತಾರೆ. ತಹಶೀಲ್ದಾರರು ಅಲ್ಲಿಗೆ ಇಲ್ಲಿಗೆ ಎಂದು ಕಳುಹಿಸುತ್ತಾರೆ. ಅವರು ಒಂದು ದಿವಸಕ್ಕೆ ಎರಡು ಜಮೀನುಗಳನ್ನು ಸರ್ವೆ ಮಾಡಬಹುದು. ಇಂತಹ ನೂರಾರು ಕೇಸ್‌ಗಳು ತಾಲ್ಲೂಕು ಮಟ್ಟದಲ್ಲಿ, ಡಿವಿಜನ್ ಕಡೆಗಳಲ್ಲಿ ಸರ್ವೆಯಾಗದೆ ರೆವಿನ್ಯೂ ಡಿಸ್‌ಪ್ಯೂಟ್ಸ್ ಹಾಗೆ ಪೆಂಡಿಂಗ್ ಬಿದ್ದಿರುವುದನ್ನು ನಾವು ಹತ್ತಾರು ವರ್ಷಗಳಿಂದಲೂ ನೋಡಿದ್ದೇವು. ಆದ್ದರಿಂದ ಇವತ್ತಿನ ದಿವಸ 1,200 ಜನ ಸರ್ವೇಯರ್‌ಗಳನ್ನು ತುಂಬುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಅಂದರೆ ಕಳೆದ ಒಂದು ವರ್ಷದಲ್ಲಿ ಕನಿಷ್ಠ ಪಕ್ಷ 30,000 ಜನರಿಗೆ ಉದ್ಯೋಗ ಕೊಡುವಂಥ ಕೆಲಸವನ್ನು ಈ ಸರ್ಕಾರ ಮಾಡಿರುವಂಥಾದ್ದು, ಇದು ಒಂದು ದೊಡ್ಡ ಸಾಧನೆ ಎಂದು ನಾನು ಭಾವಿಸುತ್ತೇನೆ. ಇದು ಏನು ಮುಚ್ಚುಮರೆಯ ಭಾಷಣವಲ್ಲ, ಅಥವಾ ಇದು ಏನು ರಾಜಕೀಯ ಭಾಷಣವಾಗುವುದಿಲ್ಲ, ಕಾರಣವೇನೆಂದರೆ ಎಲ್ಲವೂ ಅಪಾಯಿಂಟ್‌ಮೆಂಟ್ ಆರ್ಡರ್‌ಗಳಾಗಿದೆ. ಪ್ರತಿಯೊಂದು ಇಲಾಖೆಯಲ್ಲೂ ಸಹ ಕ್ರಮವನ್ನು ತೆಗೆದುಕೊಂಡಿದೆ. ಈಗಾಗಲೇ ವೈದ್ಯರುಗಳನ್ನು ಹಾಕಿದ್ದೇವೆ, ಕಾನ್‌ಸ್ಟೇಬಲ್‌ಗಳ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಮುಗಿಯುತ್ತಾ ಬಂದಿದೆ.

ಸರ್ವೇಯರ್ಸ್‌ದು ಮುಗಿಯುತ್ತಾ ಬಂದಿದೆ. ಉನ್ನತ ಶಿಕ್ಷಣದ ವೆರಿಫಿಕೇಷನ್ ಮುಗಿಯುತ್ತಿದೆ. ಪ್ರತಿಯೊಂದು ಹಂತದಲ್ಲೂ ಸಹ ಕ್ರಮ ತೆಗೆದುಕೊಂಡಿದೆ. ಅದರಲ್ಲೂ ವಿಶೇಷವಾಗಿ ಹಣಕಾಸಿನ ಇಲಾಖೆಯನ್ನು ವಹಿಸಿಕೊಂಡಿರುವಂಥ ಮಾನ್ಯ ಸಿದ್ಧರಾಮಯ್ಯನವರು ಎಲ್ಲಾ ಇಲಾಖೆಗೂ ಅನುಮತಿಯನ್ನು ಕೊಟ್ಟಿದ್ದು, ಹಿಂದೆ ನಾನು ಪಶುಸಂಗೋಪನಾ ಮಂತ್ರಿಯಾಗಿದ್ದಾಗ ಮಾನ್ಯ ವೀರಪ್ಪ ಮೊಯಿಲಿಯವರು ಅನುಮತಿಯನ್ನು ಕೊಟ್ಟಿದ್ದರಿಂದ 1,200 ಜನರ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಸಾಧ್ಯವಾಯಿತು. ನಾನು ಅವರನ್ನು ಶ್ಲಾಘನೆ ಮಾಡುತ್ತೇನೆ. ಹಣಕಾಸಿನ ಇಲಾಖೆಯವರು ಅನುಮತಿಯನ್ನು ಕೊಡದೇ ಹೋದರೆ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಪ್ರತಿಯೊಂದು ಇಲಾಖೆಗಳವರು ಮೊದಲು ಡಿ.ಪಿ.ಎ.ಆರ್.ಗೆ ಹೋಗಬೇಕು ನಂತರ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕು. ಅಂದರೆ ಎರಡು ಇಲಾಖೆಯವರು ಅನುಮತಿಯನ್ನು ಕೊಡಬೇಕು. ಅಂದರೆ ಹಣಕಾಸನ್ನು ಮತ್ತು ರಿಸರ್ವೇಷನ್ ಎರಡನ್ನು ನೋಡಬೇಕು. ಎಷ್ಟು ಹುದ್ದೆಗಳು ಬೇಕಾಗುತ್ತದೆ ಎನ್ನುವಂಥಾದ್ದನ್ನು ನೋಡಬೇಕು. ಆದುದರಿಂದ ಈ ಒಂದು ವರ್ಷದಲ್ಲಿ ಸಾಧನೆಯಾಗಿರುವಂಥಾದ್ದು ಅತ್ಯಂತ ಮಹತ್ತವಾದ ಸಾಧನೆಯಾಗಿದೆ. ಗ್ರಾಮೀಣ ಜನರಿಗೆ ಅಥವಾ ಮಕ್ಕಳಿಗೆ ಉದ್ಯೋಗ ಕೊಡುವಂಥಾದ್ದರಲ್ಲಿ ಬಹಳ ಯಶಸ್ವಿಯಾಗಿದೆ. ಈ 15 ವರ್ಷಗಳ ಅಂಕಿಅಂಶಗಳ ತೆಗೆದುಕೊಂಡಲ್ಲಿ ನಾನ್ನು ಎಲ್ಲಾ ವರ್ಷದ ಅಂಕಿಅಂಶಗಳನ್ನು ಮೆಲ್ನೋಟಕ್ಕೆ ನೋಡಿದ್ದೇವೆ. ಇಷ್ಟು ವರ್ಷಗಳಲ್ಲಿ 30,000 ಹುದ್ದೆಗಳನ್ನು ಯಾವುದೇ ಸರ್ಕಾರಗಳು ತುಂಬಿದ್ದಲ್ಲಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದ ಇನ್ನು ಉಳಿದಿರುವಂತಹ 40,000 ಹುದ್ದೆಗಳನ್ನು 1996997ಕ್ಕೆ ಭರ್ತಿ ಮಾಡಲು ಮಾನ್ಯ ಹಣಕಾಸಿನ ಮಂತ್ರಿಗಳು ಇದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರು ಈಗ ಫೈನಾನ್ಸ್ ಮಾಡಲೇಬೇಕು. ನಾವು ಚುನಾವಣೆಯ ಕಾಲದಲ್ಲಿ ಎಲ್ಲರೂ

ಒಂದು ಮಾತು ಕೊಟ್ಟೆವು. ಗ್ರಾಮೀಣ ಮಕ್ಕಳಿಗೆ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ 15 ಮಾರ್ಕ್ಸ್ ಕೊಡುವಂತಹ ವ್ಯವಸ್ಥೆ ಇತ್ತು. ತದನಂತರ ಅದು ಸ್ವಲ್ಪ ಬದಲಾವಣೆಯಾಗಿದೆ. ಈಗ ಇಲ್ಲಿ 394ಜನ ಸೀನಿಯರ್ ಮಿನಿಸ್ಟರ್ಸ್ ಕುಳಿತುಕೊಂಡಿದ್ದೀರಿ. ಅವರಲ್ಲಿ ನಾನು ಮನವಿ ಮಾಡುವುದೇನೆಂದರೆ ರಾಜ್ಯಪಾಲರ ಭಾಷಣದಲ್ಲಿ ಆ ಒಂದು ಮಾತನ್ನು ಹೇಳಿಸಿದ್ದೀರಿ. ಗ್ರಾಮೀಣ ಮಕ್ಕಳಿಗೆ ಹುದ್ದೆಗಳನ್ನು ಕೊಡುವಂತಹ ಕಾಲದಲ್ಲಿ ಅವರು ವೈಟೇಜ್ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದುದರಿಂದ ಗ್ರಾಮೀಣ ಮಕ್ಕಳಿಗೆ ಹುದ್ದೆಗಳನ್ನು ಕೊಡುವಂತಹ ವಿಚಾರದಲ್ಲಿ ಅವರಿಂದ ಕೂಡಲೇ ಹೊಸ ನೇಮಕಾತಿ ನೀತಿಯಾಗಬೇಕು.

ಈ ಒಂದು ನೇಮಕಾತಿ ನೀತಿಯನ್ನು ಮಾಡಿ ಹಳ್ಳಿಗಾಡಿನ ಮಕ್ಕಳಿಗೆ ಅವರು ಬಂದಿರುವಂತಹ ವ್ಯವಸ್ಥೆಯೊಳಗೆ ಮತ್ತು ಪರಿಸರದಲ್ಲಿ ಸಿಟಿ ಮಕ್ಕಳು 70 ಮಾರ್ಕ್ಸ್ ತೆಗೆಯುವುದು ಒಂದೇ ಹಳ್ಳಿಗಾಡಿನಲ್ಲಿರುವಂತಹ ಮಕ್ಕಳು 40-50ಮಾರ್ಕ್ಸ್ ತೆಗೆಯುವುದು ಒಂದೇ, ಕಾರಣವೇನೆಂದರೆ ಆ ಒಂದು ಸಾಮಾಜಿಕ ಹಿನ್ನೆಲೆಯಲ್ಲಿ, ಅವರು ಬೆಳೆದು ಬಂದಿರುವಂತಹ ರೀತಿನೀತಿಯಲ್ಲಿ ಎಲ್ಲರನ್ನು ಒಟ್ಟಿಗೆ ಕೂಡಿ ಹಾಕಿ ಈ ಸರ್ಕಾರದ ರಥ ಎಳೆಯುವುದಕ್ಕೆ ಸರ್ಕಾರದ ಈ ಕೆಲಸವನ್ನು ಮಾಡುವುದಕ್ಕೆ ಎಲ್ಲರನ್ನು ಒಟ್ಟಿಗೆ ಮಾಡುವಂಥಾದ್ದು ಸರಿಯಲ್ಲ. ಆದುದರಿಂದ ನಮ್ಮ ಸರ್ಕಾರಕ್ಕೆ ಸೂಚನೆ ಕೊಡುವಂಥಾದ್ದು ಹಳ್ಳಿಗಾಡಿನ ಮಕ್ಕಳಿಗೆ, ಗ್ರಾಮೀಣ ಮಕ್ಕಳಿಗೆ ಒಂದು ಹೊಸ ನೀತಿಯನ್ನು ಮಾಡಿ ಹುದ್ದೆಗಳಲ್ಲಿಯಾದರೂ ರಿಜರ್ವೇಷನ್ ಕೊಡಿ ಅಥವಾ ಮಾರ್ಕ್ಸ್‌ನಲ್ಲಿಯಾದರೂ ವೈಟೇಜ್ ಕೊಡಿ, ಅದಕ್ಕೆ ಉನ್ನತ ಸಮಿತಿಯನ್ನು ನೇಮಕ ಮಾಡಿ ಮುಂದೆ ಆಗುವಂತಹ ಎಲ್ಲಾ ನೇಮಕಾತಿಗಳಿಗೆ ಹಳ್ಳಿಗಾಡಿನ ಮಕ್ಕಳಿಗೆ, ಗ್ರಾಮೀಣ ಮಕ್ಕಳಿಗೆ ವೈಟೇಜ್ ಕೊಡುವಂತಹ ಹೊಸ ನೀತಿಯನ್ನು ನಮ್ಮ ಸರ್ಕಾರ ರೂಪಿಸಬೇಕು. ಇದು ಅತ್ಯಂತ ಅವಶ್ಯಕವಾಗಿ ಆಗಬೇಕಾಗಿದೆ. ಇದರಲ್ಲಿ ಶೇ. 30ರಷ್ಟು ಸ್ಥಾನವನ್ನು ಮಹಿಳೆಯರಿಗೆ ಕೊಡುವಂಥಾದ್ದು ಏನಿದೆ ಅದನ್ನು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಒಪ್ಪುತ್ತಾರೆಂದು ಅನಿಸುತ್ತದೆ. ಏಕೆಂದರೆ ಮಹಿಳೆಯರು ಆಡಳಿತದಲ್ಲಿ ಬಂದರೆ ಹೆಚ್ಚು ಶಿಸ್ತು ಬರುತ್ತದೆ. ಹೆಚ್ಚು ಪ್ರಾಮಾಣಿಕತೆ ಬರುತ್ತದೆಂದು ಮತ್ತು ಹೆಚ್ಚಿನ ರೀತಿಯಲ್ಲಿ ಕೆಲಸವಾಗುತ್ತದೆ ಎಂದು ನನಗೆ ಅನಿಸುತ್ತದೆ. ಮಹಿಳೆಯರು ಸರ್ಕಾರದಲ್ಲಿ ಕೆಲಸ ಮಾಡಿದರೆ, ಮತ್ತು ಅವರು ಶಿಕ್ಷಣ ಕ್ಷೇತ್ರದಲ್ಲಿಯೇ ಇರಲಿ, ಆರೋಗ್ಯ ಕ್ಷೇತ್ರದಲ್ಲೇ ಇರಲಿ ಎರಡು ರಂಗಗಳಲ್ಲಿ ನೋಡಿದರೆ ಹೆಚ್ಚು ಪ್ರಾಮಾಣಿಕತೆ ಮತ್ತು ಬಹಳ ಧಕ್ಷತೆಯಿಂದ ಕೆಲಸವಾಗುವುದನ್ನು ನಾವು ನೋಡಿದ್ದೇವೆ.ಆದುದರಿಂದ ನಮ್ಮ ಸರ್ಕಾರ ಶೇ.30ರಷ್ಟು ಭಾಗವನ್ನು ಇನ್ನು ಮುಂದೆ ಬರುವಂತಹ ನೇಮಕಾತಿಯಲ್ಲಿ ಮಹಿಳೆಯರಿಗೆ ಕೊಡಬೇಕೆಂದು ಏನು ಮಾಡಿದ್ದಾರೆ, ಇದು ಕೂಡಲೇ ಜಾರಿಗೆ ತರಬೇಕು. ಬರುವ ಮಾರ್ಚಿ 1996ರಲ್ಲಿ ಈ ಎರಡು ಸೇರಿಸಿ ಜಾರಿಗೆ ತರಬೇಕು. ಇದರಿಂದ ಆಡಳಿತ ಚುರುಕು ಆಗುತ್ತದೆ. ಸಾಮಾಜಿಕ ನ್ಯಾಯ ಸಿಕ್ಕುತ್ತದೆ ಮತ್ತು ಸರ್ಕಾರದ ಕೆಲಸವು ಚೆನ್ನಾಗಿ ಆಗುತ್ತದೆ. ತಮಗೆ ಗೊತ್ತಿರುವ ಹಾಗೆ ಮಾನ್ಯ ಸಿದ್ಧರಾಮಯ್ಯನವರು ಸುಮಾರು ಶೇ. 47ರಷ್ಟು ಸಂಬಳವನ್ನು ಅಂದರೆ ಬರತಕ್ಕಂಥ 8, 9 ಸಾವಿರ ಕೋಟಿ ರೂ.ಗಳಲ್ಲಿ ಸುಮಾರು ನಾಲ್ಕುವರೆ ಕೋಟಿ ರೂ.ಗಳನ್ನು ಐದು ಲಕ್ಷ ಜನರಿಗೆ ಕೊಡುತ್ತಿದ್ದಾರೆ. ಇಷ್ಟು ಜನ ಸರ್ಕಾರಿ ನೌಕರರು ಇದ್ದರೂ ಸಹ ನಮ್ಮ ವ್ಯವಸ್ಥೆಯಲ್ಲಿ ಬೇಕಾದಷ್ಟು ಲೋಪದೋಷಗಳು ಇವೆ. ಈಗ ನಾನು ಆ ಲೋಪದೋಷಗಳನ್ನು ಬಿಡಿಸಿ ಹೇಳುವುದಕ್ಕೆ ನನಗೆ ಕಾಲವಾಕಾಶವಿಲ್ಲ. ಅದನ್ನು ಬಿಡಿಸಿ ಹೇಳುವಂಥಾದ್ದಕ್ಕೆ ಇಲ್ಲಿರತಕ್ಕಂಥ ಸದಸ್ಯರಿಗೆ ಮತ್ತು ಇದು ಜನರಿಗೆ ಗೊತ್ತಿರುವಂತಹ ವಿಚಾರವೇ ಆಗಿದೆ. ಆದುದರಿಂದ ಮಹಿಳೆಯರು ಆಡಳಿತದಲ್ಲಿ ಬಂದರೆ ಉದಾಹರಣೆಗೆ ಯಾವುದೇ ದೇಶವನ್ನೇ ತೆಗೆದುಕೊಳ್ಳಿ ಅದು. ಚೈನಾದೇಶವನ್ನೆ ತೆಗೆದುಕೊಳ್ಳಿ. ಈಗ ಅದೆಲ್ಲವನ್ನು ವಿಸ್ತಾರವಾಗಿ

ಹೇಳುವುದಕ್ಕೆ ಹೋಗುವುದಿಲ್ಲ. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಹೆಚ್ಚು ಮಹಿಳೆಯರು ಎಲ್ಲಿ ಇರುತ್ತಾರೆ ಅಲ್ಲಿ ಶಿಸ್ತು ಇರುತ್ತದೆ. ಪ್ರಾಮಾಣಿಕತೆ ಇರುತ್ತದೆ ಮತ್ತು ಕೆಲಸ ಮಾಡಬೇಕೆಂಬ ಯೋಚನೆ ಮಾನಸಿಕವಾಗಿ ಇರುತ್ತದೆ. ಆದುದರಿಂದ ಇನ್ನು ಮುಂದಕ್ಕೆ ಮಾಡುವಂತಹ ಯಾವುದೇ ಅಪಾಯಿಂಟ್‌ಮೆಂಟ್‌ನಲ್ಲಿ ಶೇ. 30ರಷ್ಟು ಹೆಣ್ಣುಮಕ್ಕಳಿಗೆ ಕೊಡುವಂಥಾದ್ದನ್ನು ಮಾಡಬೇಕೆಂದು ಹೇಳುತ್ತಾ ಗ್ರಾಮೀಣ ಮಕ್ಕಳಿಗೆ ನೇಮಕಾತಿಯನ್ನು ಸಹಿತ ಮಾಡಬೇಕು. ಇನ್ನು ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಈಗಾಗಲೇ 3-4 ಕೆಲಸವನ್ನು ಮಾಡಿದ್ದೇವೆ. ಒಂದು ಸೂಚನೆಯನ್ನು ಮಾನ್ಯ ಮಂಜುನಾಥ್‌ರವರಿಗೆ ಕೊಡುವುದಕ್ಕೆ ಯೋಚನೆ ಮಾಡಿದ್ದೇವೆ. ಅದೇನೆಂದರೆ ಕಾಲೇಜುಗಳಲ್ಲಿ ಪ್ರಿನ್ಸಿಪಾಲರುಗಳನ್ನು ನೇಮಿಸುತ್ತಿದ್ದೀರಿ. ಅಲ್ಲಿ ಯಾರು ಸೀನಿಯರ್ ಯಾರು ಇರುತ್ತಾರೋ ಅವರಿಗೆ ಸಂಬಳ 100 ರೂಪಾಯಿಗಳನ್ನು ಹೆಚ್ಚು ಮಾಡಿ ಅವರನ್ನು ಪ್ರಿನ್ಸಿಪಾಲರನ್ನಾಗಿ ಮಾಡುತ್ತೀರಿ. ಈ ಪದ್ಧತಿ ಸರಿಯಾದುದ್ದಲ್ಲ. ಇದೇ ರೀತಿಯಾಗಿ ಮಾಡಿಯೇ ನಮ್ಮ ಸಕ್ಕರೆ ಕಂಪೆನಿಗಳು ಮತ್ತು ಪಬ್ಲಿಕ್ ಸೆಕ್ಟಾರ್‌ಗಳು ಹಾಳು ಆಗುತ್ತಾ ಹೋಗಿದೆ. ಪಬ್ಲಿಕ್ ಸೆಕ್ಟಾರ್‌ಗಳು ಮತ್ತು ಶುಗರ್ ಫಾಕ್ಟರಿಗಳು ಹಾಳಾಗಬೇಕಾದರೆ ಮುಖ್ಯವಾದಂಥ ಕಾರಣವೇನೆಂದರೆ ಯಾರಿಗೆ ಸೀನಿಯಾರಿಟಿ ಇದೆ ಅವರನ್ನು ಎಂ.ಡಿ. ಮಾಡಬೇಕು ಎಕ್ಸಿಕ್ಯೂಟಿವ್ ಡೈರಕ್ಟರ್ ಮಾಡಬೇಕು ಎಂದು ಈ ರೀತಿ ಮಾಡಿ ಹಾಳಾಗಿ ಹೋಗಿದ್ದುದು. ಅದಕ್ಕೆ ನೀವು ಒಂದು ಕೇಡರ್ ಅನ್ನು ಪ್ರಿಪೇರ್ ಮಾಡಿ ಇದರ ಬಗ್ಗೆ ತೀರ್ಮಾನವಾಗಿದೆಯಂತೆ, ಅದರಂತೆ ಪ್ರಿನ್ಸಿಪಾಲ್ ಕೇಡರ್ ಅನ್ನು ಪ್ರಿಪೇರ್ ಮಾಡಿ, ಆಪಿಪ್ರನ್ಸಿಪಾಲ್ ಅನ್ನು ರಾಜ್ಯದಲ್ಲಿರುವಂತಹ ಎಲ್ಲಾ ಕಾಲೇಜುಗಳಿಗೆ ಇಲ್ಲಿಂದ ಪೋಸ್ಟ್ ಮಾಡಿದರೆ ಅವರಿಗೆ ಒಂದು ರೆಸ್ಪಾನ್ಸಿಬಿಲಿಟಿ ಇರುತ್ತದೆ. ಅಡ್ಮಿನಿಸ್ಟ್ರೇಟಿವ್ ನಾಲೇಡ್ಜ್ ಇರುತ್ತದೆ, ಮತ್ತು ಅವರಿಗೆ ಇರತಕ್ಕಂಥ ಸ್ಟಾಫ್‌ಗಳ ಮೇಲೂ ಕಂಟ್ರೋಲ್ ಬರುತ್ತದೆ. ಆದುದರಿಂದ ಆ ಪ್ರಿನ್ಸಿಪಾಲ್ ಕೇಡರ್ ಅನ್ನು ಮಾಡಬೇಕು. ಮೊನ್ನೆ ಎರಡು ಮೂರು ಪಿ.ಜಿ. ಕೋರ್ಸ್ ಅನ್ನು ಮಾಡಿದ್ದೀರಿ. ಓಪನ್ ಯೂನಿವರ್ಸಿಟಿ ಮಾಡಿದ್ದೀರಿ. ಹೀಗೆ ನಮ್ಮ ಶಿಕ್ಷಣ ಇಲಾಖೆಯಲ್ಲಿ ಎರಡು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದಲ್ಲಿ ಹೆಚ್ಚು ಸಾಧನೆ ಈ ಸರ್ಕಾರದಲ್ಲಿ ಆಗಿದೆ. ಡಿಪಿಇಪಿ ಪ್ರೋಗ್ರಾಂನಲ್ಲಿ ಐದು ಜಿಲ್ಲೆಗಳಿಗೆ ತಾವು ಏನು ವಿಸ್ತಾರ ಮಾಡಿದ್ದೀರಿ. ಆ ದುಡ್ಡನ್ನು ತಾವು ಉಪಯೋಗಿಸಿಕೊಳ್ಳಬೇಕು. ಆ 200 ಕೋಟಿ ರೂಪಾಯಿಗಳನ್ನು ಈಗ ನಮ್ಮಲ್ಲಿ ಇರತಕ್ಕಂಥ ಜಿಲ್ಲೆಗಳ ಜೊತೆಗೆ ಇನ್ನು ಹೆಚ್ಚು ಜಿಲ್ಲೆಗಳು ಬಂದಿವೆ. ನಮ್ಮ ಮಂಡ್ಯ ಜಿಲ್ಲೆಯೂ ಸೇರಿದೆ. ಅದೇ ರೀತಿ ಇನ್ನು ಐದು ಜಿಲ್ಲೆಗಳು ಬಂದಿವೆ. ಅವರು ಬಿಲ್ಡಿಂಗ್ ಕಟ್ಟುವುದಕ್ಕೆ ಹಣವನ್ನು ಕೊಡುತ್ತಾರೆ, ಸ್ಕೂಲ್ ಸ್ಯಾಂಕ್ಷನ್ ಮಾಡುವುದಕ್ಕೆ ಹಣ ಕೊಡುತ್ತಾರೆ, ಶೌಚಾಲಯ, ಕುಡಿಯುವ ನೀರಿಗೆ ಹೀಗೆ ಎಲ್ಲದಕ್ಕೂ ಸ್ಕೀಮ್‌ಗಳು ಇವೆ.

ಇನ್ನು ಶಾಲೆಗಳು ಇಲ್ಲದೆ ಇರತಕ್ಕಂತಹ ಹಳ್ಳಿಗಳು ನಮ್ಮ ರಾಜ್ಯದಲ್ಲಿ ಇವೆ. ಅವು ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದರೂ ಅದನ್ನು ನೆನೆಸಿಕೊಂಡು ನಾವು ಒಂದೇ ಸಾರಿ ಶಾಲೆ ಮಂಜೂರು ಮಾಡುವುದು ಒಂದೇ ಸಾರಿ ಕಟ್ಟಡ ಮಂಜೂರು ಮಾಡತಕ್ಕಂಥದ್ದು, ಒಂದೇ ಸಾರಿ ಸ್ಟಾಫ್ ಕೊಡತಕ್ಕಂಥದ್ದು ಈ ಮೂರು ಒಂದೇ ಸಾರಿ ಆಗತಕ್ಕಂಥ ಒಂದು ಕೆಲಸವನ್ನು ಮಾಡುವುದು ಬಹಳ ಸೂಕ್ತವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಲ್ಲಿ ಹೆಚ್ಚು ಕೆಲಸ ಮಾಡುವುದರ ಬಗ್ಗೆ ನಾವು ಆಲೋಚನೆ ಮಾಡಬೇಕು. ಈ ಒಂದು ಶಿಕ್ಷಣ ಇಲಾಖೆಯಲ್ಲಿ ನನಗೆ ಬಹಳಷ್ಟು ಖುಷಿ ಕೊಡತಕ್ಕಂಥ ವಿಷಯವೇನೆಂದರೆ, ನಿಮ್ಮ ನೇಮಕಾತಿ. ಇನ್ನೂ ಉಳಿದಿರತಕ್ಕಂಥ ನೇಮಕಾತಿಯನ್ನು ತಾವು ತುಂಬಿಕೊಡಬೇಕು. ನೀವು ಈ ನೇಮಕಾತಿಗಳನ್ನು ಆದಷ್ಟು ಬೇಗ ಮಾಡಿದರೆ, ಆಗ ಹಳ್ಳಿಗಾಡಿನಲ್ಲಿ ಮಕ್ಕಳಿಗೆ ಕನಿಷ್ಟ ವಿದ್ಯಾಭ್ಯಾಸ

ದೊರೆಯುತ್ತದೆ. ನಾವು ಏನು ರಾಜ್ಯಾಂಗಬದ್ಧವಾಗಿ ಎಲ್ಲರಿಗೂ ಕೂಡ ಶಿಕ್ಷಣವನ್ನು ಕೊಡುತ್ತೇವೆಂದು ಹೇಳಿದ್ದೇವೆ, ಅದು ಜಾರಿಗೆ ಬರುತ್ತದೆಂದು ನನಗನಿಸುತ್ತದೆ. ಈ ನಿಟ್ಟಿನಲ್ಲಿ ಆಲೋಚನೆ ಮಾಡತಕ್ಕಂಥದ್ದು ಬಹಳ ಸೂಕ್ತವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಈ ಸರ್ಕಾರ ರೈತರಿಂದ ಆಯ್ಕೆಯಾಗಿ ಬಂದಿರುವ ಸರ್ಕಾರ. ಇದೊಂದು ಪ್ರಮುಖ ಪ್ರಸಂಗ. ಈ ರೈತರ ಬಗ್ಗೆ ಇವತ್ತು ನಾವು ಯೋಜನೆ ಮಾಡದೇ ಹೋದರೆ ಕರ್ತವ್ಯ ಚ್ಯುತಿ ಮಾಡಿದಂತಾಗುತ್ತದೆ. ನಾನು ಕಾವೇರಿ ವಿಚಾರದಲ್ಲಿ ಬಹಳಷ್ಟು ಸಾರಿ ಹೇಳಿದೆ, ಅದನ್ನು ಮಾನ್ಯ ಯಡಿಯೂರಪ್ಪನವರು ಒಪ್ಪುತ್ತಾರೆಂದು ಕಾಣುತ್ತದೆ. ಕಾವೇರಿ ವಿಚಾರದಲ್ಲಿ ಕರ್ನಾಟಕ ರಾಜ್ಯದ ರಾಜಕಾರಣಿಗಳು ನಡೆದುಕೊಡಿರತಕ್ಕಂಥ ರೀತಿನೀತಿಯನ್ನು ಇಡೀ ರಾಷ್ಟ್ರದಲ್ಲಿ ಮೆಚ್ಚಿದ್ದಾರೆ, ಇಡೀ ರಾಷ್ಟ್ರದಲ್ಲಿ ಇವತ್ತು ಮೆಚ್ಚಿದ್ದಾರೆ. ನಾನು ಆ ಬಗ್ಗೆ ಸವಿಸ್ತಾರವಾದ ಬಾಷಣ ಮಾಡುವುದಕ್ಕೆ ಹೋಗುವುದಿಲ್ಲ, ಕಾರಣವೇನೆಂದರೆ, ಎಲ್ಲವೂ ಕೂಡ ಒಂದು ಹದ್ದುಬಸ್ತಿಗೆ ಬಂದಿರತಕ್ಕಂಥ ಕಾಲದಲ್ಲಿ, ಎಲ್ಲವೂ ಸಹ ಒಂದು ರೀತಿಯಾದ ಶಿಸ್ತುಬದ್ಧತೆಯಲ್ಲಿ ಬಂದಿರತಕ್ಕಂಥ ಕಾಲದಲ್ಲಿ ಕರ್ನಾಟಕದ ಎಲ್ಲಾ ರಾಜಕೀಯ ಪಕ್ಷಗಳವರಿಗೆ, ಮಾನ್ಯ ವಾಟಾಳ್‌ನಾಗರಾಜ್‌ರವರಿಗೆ ಅದರ ಬಗ್ಗೆ ಸ್ವಲ್ಪ ಬಿನ್ನಾಭಿಪ್ರಾಯವಿರಬಹುದು, ಅವರ ಭಿನ್ನಾಭಿಪ್ರಾಯವೇನೂ ಇಲ್ಲ, ಅವರು ಕಾವೇರಿ ಟ್ರಿಬ್ಯುನಲ್‌ನಿಂದ ಹೊರಗೆ ಬರಬೇಕೆಂದು ಹೇಳುತ್ತಿದ್ದರು, ನಾವು ಟ್ರಿಬ್ಯುನಲ್‌ನಿಂದ ಹೊರಗೆ ಬಂದುಬಿಟ್ಟಿದ್ದೇವೆ.

ಅದೊಂದು ದೊಡ್ಡ ಸಾಧನೆಯೇ ನಾವು ಮತ್ತೆ ಸಾವಿರದ ಒಂಭೈನೂರ ಎಪ್ಪತ್ತಾಲ್ಕನೆ ಇಸವಿಗೆ ವಾಪಸ್ ಹೋಗಿದ್ದೇವೆ. ಟ್ರಿಬ್ಯುನಲ್‌ನಿಂದ ಹೊರಗೆ ಬಂದದ್ದು ದೊಡ್ಡ ಸಾಧನೆಯಾಗಿದೆ. ಜೊತೆಗೆ ರಾಷ್ಟ್ರೀಯ ಜಲನೀತಿಯನ್ನು ನಿರೂಪಣೆ ಮಾಡುವುದರಲ್ಲಿ ಕರ್ನಾಟಕ ತೆಗೆದುಕೊಂಡಂಥ ನೀತಿ ಬಹಳ ಶ್ಲಾಘನೀಯವಾಗಿದೆ. ಕೊನೆಗೆ ಇಡೀ ರಾಷ್ಟ್ರಕ್ಕೆ ಕರ್ನಾಟಕದವರು ಅಡ್‌ಮೆಂಟ್ ಅಲ್ಲ, ಕರ್ನಾಟಕದವರು ಇವತ್ತು ನೀರು ಬಿಡದ ಹಠಮಾರಿಗಳಲ್ಲ, ಕರ್ನಾಟಕದವರು ಏನು ಕಾವೇರಿ ನೀರನ್ನು ಹಿಡಿದುಕೊಂಡು ತಮಿಳು ನಾಡಿಗೆ ಅನ್ಯಾಯ ಮಾಡುತ್ತಿದ್ದಾರೆ, ಕರ್ನಾಟಕದವರು ಈ ಕಾವೇರಿ ನೀರನ್ನು ಅವರ ಸ್ವತ್ತು ಮಾಡಿಕೊಂಡಿದ್ದಾರೆ ಎಂದು ದೆಹಲಿಯಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲೆಲ್ಲಾ ಹೇಳಿ ಹೇಳಿ ಇವತ್ತು ಏನು ಮಾತನಾಡುತ್ತಿದ್ದಾರೋ ಆ ಮಾತಿಗೆ ಇವತ್ತು ತಿಲಾಂಜಲಿಯನ್ನು ಎಳೆದಿದ್ದಾರೆ. ಇದಕ್ಕೆ ಕಾರಣವೇನೆಂದರೆ ಎಲ್ಲಾ ರಾಜಕೀಯ ಪಕ್ಷಗಳವರು ನಡೆದುಕೊಂಡಂಥ ರೀತಿನೀತಿಯೇ. ಕಾರಣ. ಅದನ್ನೇ ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಬಗ್ಗೆ ಅವರು ಬಹಳ [illegible] ರೀತಿಯಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಒಂದು ಕಾವೇರಿ ಜಲನೀತಿಯಲ್ಲಿ ರಾಷ್ಟ್ರದ ಜನ ಮೆಚ್ಚಿದ ರೀತಿಯಲ್ಲಿ ನಾವು ನಡೆದುಕೊಂಡಂಥ ರೀತಿ ಏನಿದೆ ಅದು ನಮ್ಮ ಕರ್ನಾಟಕ ಕೀರ್ತಿಯನ್ನೇ ಹೆಚ್ಚಿಸಿದೆ ಎಂದು ನನಗೆ ಅನ್ನಿಸಿದೆ. [illegible]ದು ಆಗುವುದಕ್ಕಿಂತ ಮುಂಚಿತವಾಗಿ ಸುಮಾರು ಒಂದು ತಿಂಗಳ ಹಿಂದೆ ಯಾರೋ ಒ[illegible] ಕೇಂದ್ರ ಮಂತ್ರಿಯವರ ಹತ್ತಿರ ಕುಳಿತಿದ್ದಾಗ ಕಾವೇರಿ ನೀರನ್ನು ತಮಿಳು ನಾಡಿಗೆ ಬಿಡುವ ವಿಚಾರದಲ್ಲಿ ಕರ್ನಾಟಕದವರು ಬಹಳಷ್ಟು ತೊಂದರೆಯನ್ನು ಕೊಡುತ್ತಿದ್ದೀರಿ, ಏತಕ್ಕೆ ಹಾಗೆ ತಮಿಳುನಾಡಿಗೆ ತೊಂದರೆಯನ್ನು ಕೊಡುತ್ತೀರಿ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಇದ್ದರು. ಆದರೆ ಇವತ್ತು ರಾಷ್ಟ್ರದ, ರಾಜ್ಯದ ಯಾವುದೇ ಮೂಲೆ, ಭಾಗದಲ್ಲೂ ಕೂಡ ಕಾವೇರಿ ಬಗ್ಗೆ ಮಾತನಾಡುವುದಿಲ್ಲ, ಈಗ ತಮಿಳುನಾಡಿನವರು ನಡೆದುಕೊಂಡಂಥ ರೀತಿಯ ನೀತಿಯ ಬಗ್ಗೆ ಆಕ್ಷೇಪಣೆಯನ್ನು ಎತ್ತುತ್ತಿದ್ದಾರೆ. ವಾಸ್ತವಾಂಶದ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳು ಒಟ್ಟಿಗೆ ಸೇರಿದ ಪ್ರಸ್ತಾಪ ಮಾಡಿದ ಪ್ರಯುಕ್ತ, ಎಲ್ಲಾ ರಾಜಕೀಯ ಪಕ್ಷಗಳು ಒಟ್ಟಾಗಿ ಕುಳಿತು ಮಾತನಾಡಿದ ಪ್ರಯುಕ್ತ, ಎಲ್ಲಾ ರಾಜಕೀಯ ಪಕ್ಷಗಳ ಪ್ರಯತ್ನದಿಂದ ಕರ್ನಾಟಕ ತ[illegible] ಗೌರವವನ್ನು ಹೆಚ್ಚಿಸಿಕೊಂಡು ಮತ್ತು ನಮ್ಮ ಹಕ್ಕನ್ನು ಕಾಪಾಡಿಕೊಂಡು ರಾಷ್ಟ್ರಕ್ಕೇ ಒಂದು ಜಲನೀತಿಯನ್ನು

ಕೊಡತಕ್ಕಂಥ ದೃಷ್ಟಿಯಲ್ಲಿ, ಒಂದು ನೀತಿಯನ್ನು ಹೇಳತಕ್ಕಂಥ ದೃಷ್ಟಿಯಲ್ಲಿ, ಸಂಪ್ರದಾಯಕವಾಗಿ ನಾವು ಇವತ್ತು ಮಾಡಿರುವುದನ್ನು ರಾಜ್ಯದ ಜನ ಮೆಚ್ಚಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

ಆದ್ದರಿಂದ, ಯಾವುದೇ ರಾಜಕೀಯ ಪಕ್ಷಗಳು ಒಟ್ಟಿಗೆ ಸೇರಿದರೆ ಒಂದು ರಾಜ್ಯವನ್ನು ಯಾವ ರೀತಿಯಾಗಿ ನಡೆಸಿಕೊಂಡು ಹೋಗಬಹುದು ಎನ್ನುವುದಕ್ಕೆ ಕಾವೇರಿ ಜಲವಿವಾದ ಒಂದೇ ನಿದರ್ಶನ ಎಂದು ನಾನು ಭಾವಿಸಿಕೊಂಡಿದ್ದೇನೆ. ಪ್ರಾರಂಭದಲ್ಲಿ ಸ್ವಲ್ಪ ತೊಂದರೆ ಇರಬಹುದು. ತಮಿಳುನಾಡಿಗೆ ನೀರು ಬಿಟ್ಟಾಗ ವಿರೋಧ ಮಾಡಿರಬಹುದು, ಅದು ಸಹಜ. ವಿರೋಧ ಮಾಡುತ್ತಾರೆ. ವಿರೋಧ ಮಾಡುವುದರಲ್ಲಿ ತಪ್ಪೇನೂ ಇಲ್ಲ, ಆದರೆ, ಅಂತಿಮವಾಗಿ ಈ ಬಗ್ಗೆ ಒಂದು ಪರಿಹಾರವನ್ನು ಕಂಡಿದ್ದು, ನಮ್ಮ ರಾಜ್ಯದ 20-25 ವರ್ಷಗಳ ಇತಿಹಾಸದಲ್ಲಿ, ತಾವು ಕಂಡಂತೆ ಈ ಗಡಿ ವಿವಾದಕ್ಕಿಂತ, ಈ ಕಾವೇರಿ ಜಲವಿವಾದದಲ್ಲಿ ನಮ್ಮ ರಾಜಕೀಯ ಪಕ್ಷಗಳು, ಸರ್ಕಾರ ಹಾಗೂ ವಿರೋಧಪಕ್ಷಗಳು ನಡೆದುಕೊಂಡು ರೀತಿ ಬಗ್ಗೆ ಅತ್ಯಂತ ಮೆಚ್ಚುಗೆಯನ್ನು ಎಲ್ಲರೂ ವ್ಯಕ್ತ ಮಾಡಿದ್ದಾರೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಈ ಹಸಿರು ಕಾರ್ಡುಗಳವಿಚಾರದಲ್ಲಿ ಈಗ ನಮ್ಮ ಆಹಾರ ಸಚಿವರು ಸದನದಲ್ಲಿ ಇಲ್ಲ.ಅದು ಬಹಳ ಪ್ರಾಮುಖ್ಯವಾದ ಸಮಸ್ಯೆ, ಸ್ವಲ್ಪ ಸರಿಯಾಗಿ ನೆಡೆದಿಲ್ಲ ಎನ್ನತಕ್ಕಂಥದ್ದು ನನ್ನ ಅನಿಸಿಕೆ. ಕಾರಣವೇನೆಂದರೆ, ನಾವು ಒಂದು ವರ್ಷದಿಂದ ಸಮೀಕ್ಷೆ ಮಾಡಿದ್ದೇವೆ. ಆ ಸಮೀಕ್ಷೆಯಲ್ಲಿ ಸುಮಾರು ಐದು ಲಕ್ಷ ಕಾರ್ಡುಗಳು ಬೇಕಾಗುತ್ತದೆನ್ನುವುದನ್ನು ನಾನು ನೋಡಿದ್ದೇನೆ. ನಾವೆಲ್ಲಾ ಈ ಸ್ಕೈಟಿಗೆ, ಮನೆಗಳಿಗೆ ಹಾಗೂ ಹಸಿರುಕಾರ್ಡುಗಳಿಗೆ ನಾವು ಈ ಮೂರುಕ್ಕು ಸಹ ಸಮೀಕ್ಷೆ ಮಾಡಿ, ಅದೆಲ್ಲದರ ಬಗ್ಗೆ ಸ್ವಲ್ಪ ಪಟ್ಟಿಯನ್ನು ತರಿಸಿಕೊಂಡು ಇಟ್ಟುಕೊಳ್ಳಬೇಕು, ಯಾವ ಯಾವ ವರ್ಷದಲ್ಲಿ, ಎಷ್ಟು ವರ್ಷದಲ್ಲಿ ನಾವು ಏನೇನು ಮಾಡಬಹುದು ಎನ್ನುವುದನ್ನು ಮಾಡಬೇಕೆಂದು ಆಲೋಚನೆ ಮಾಡಿದ್ದೇವೆ. ಆದರೆ ಈ ನಮ್ಮ ಹಸಿರು ಕಾರ್ಡನಲ್ಲಿ ನಾವು ಹತ್ತು ಕೆ.ಜಿ. ಅಕ್ಕಿಯನ್ನು ಕೊಡುವ ಭರವಸೆಯನ್ನು ಈಡೇರಿಸಿದರೂ ಸಹ, ಅದೊಂದು ದೊಡ್ಡ ಸಾಧನೆಯೇ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೂ ಸಹ ಈ ಹಸಿರು ಕಾರ್ಡುಗಳ ಹಂಚಿಕೆಯ ವಿಚಾರದಲ್ಲಿ ಸರಿಯಾಗಿ ಹಂಚಿಕೆಯಾಗಿಲ್ಲ, ಇನ್ನೂ ವಿಳಂಬವಾಗಿದೆ. ಸರಿಯಾದ ಫಲಾನುಭವಿಗಳನ್ನು ಗುರುತಿಸುವುದಕ್ಕಾಗಿಲ್ಲ. ಈ ಬಗ್ಗೆ ಯಾವುದಾದರೂ ಬೇರೆ ರೀತಿಯಲ್ಲಿ ನಮ್ಮ ಆಹಾರ ಮಂತ್ರಿಗಳು ಯೋಚನೆ ಮಾಡಬೇಕು. ಅದನ್ನು ಯಾವ ರೀತಿ ಯೋಚನೆ ಮಾಡಿದರೆ ಸರಿಯಾಗುತ್ತದೆನ್ನುವುದನ್ನು ನಾವು ಅನೇಕ ಕಡೆ ಹೋದಾಗೆಲ್ಲಾ ಮಾತನಾಡುತ್ತೇವೆ. ಹಸಿರುಕಾರ್ಡುಗಳು ಬಡವರಿಗೆ ತಲುಪಿಲ್ಲ, ಅನುಕೂಲಸ್ಥರಿಗೆ ತಲುಪಿರುವಂಥ ನಿದರ್ಶನಗಳು ಇದ್ದಾವೆ. ಅದು ಶೇಕಡ ಹತ್ತು-ಹದಿನೈದರಷ್ಟು ಇರುತ್ತದೆ. ಆದರೆ ಸಾಮಾನ್ಯವಾಗಿ ಯಾರು ಬಡವರಿದ್ದಾರೆ, ಯಾರು ಕೂಲಿಗಾರರು ಇದ್ದಾರೆ, ಯಾರು ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ ಅವರಿಗೆ ನಾವು ಇವತ್ತು ಹತ್ತು ಕೆ.ಜಿ. ಅಕ್ಕಿ ಕೊಡತಕ್ಕಂಥ ಯೋಜನೆಯನ್ನು ಹಾಕಿಕೊಂಡಿದ್ದೇವೆ, ಅದಕ್ಕೆ ಬಹಳ ಭದ್ರವಾದ ಅಸ್ತ್ರ ಯಾವುದೆಂದರೆ ಈ ಕಾರ್ಡುಗಳು.

ಈ ಹಸಿರು ಕಾರ್ಡುಗಳನ್ನು ನೀವು ಸರಿಯಾಗಿ ಹಂಚದೆ ಹೋದರೆ, ಸರಿಯಾಗಿ ಅವುಗಳನ್ನು ವಿಲೇವಾರಿ ಮಾಡದೆ ಹೋದರೆ, ಸರಿಯಾಗಿ ಕೊಡದೆ ಹೋದರೆ, ಇಂತಹ ಬೃಹತ್ ಯೋಜನೆಯನ್ನು ಏನು ಮಾಡಿದ್ದೇವೆ, ಕೋಟ್ಯಾಂತರ ರೂಪಾಯಿಗಳ ಹಣ ಕೊಟ್ಟು ಬಡವರಿಗೆ ಅನುಕೂಲವಾಗಲೆಂದು ಏನು ಯೋಚನೆ ಮಾಡಿದ್ದೇವೆ ಅದು ವಿಫಲವಾಗುತ್ತದೆ. ಆದುದರಿಂದ ನಾನು ಒಂದು ಮಾತನ್ನು ಕಿವಿಯಲ್ಲಿ ಮಾನ್ಯ ಆಹಾರ ಸಚಿವರಾದ ನಂಜಪ್ಪನವರಿಗೆ ಹೇಳುವುದೇನೆಂದರೆ, ಅವರು ಕೂಡಲೇ ಇದರ ಬಗ್ಗೆ ಒಂದು ಉನ್ನತ ಮಟ್ಟದಲ್ಲಿ ಸಭೆ ಮಾಡಬೇಕು, ಜಿಲ್ಲಾಮಟ್ಟದ ಸಭೆ

ಮಾಡಬೇಕು, ತಾಲ್ಲೂಕು ಮಟ್ಟದಲ್ಲಿ ಸಭೆ ಮಾಡಬೇಕು. ಸಂಬಂಧಪಟ್ಟಂಥ ಶಾಸಕರನ್ನು ಕೂರಿಸಿಕೊಂಡು ಪ್ರತಿ ಕ್ಷೇತ್ರದಲ್ಲಿ ಹಸಿರು ಕಾರ್ಡುಗಳ ಹಂಚಿಕೆ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕು, ಈಗ ಹಸಿರು ಕಾರ್ಡು ಹಂಚಿರತಕ್ಕಂಥದ್ದು ಸರಿಯಾದುದ್ದಲ್ಲ, ಇದರಿಂದ ಬಹಳ ಲೋಪದೋಷಗಳಿವೆ. ಈ ಲೋಪದೋಷಗಳನ್ನು ಈ ಆಹಾರ ಇಲಾಖೆಯವರು ತಿದ್ದಬೇಕೆನ್ನುವುದನ್ನು ಅವರ ಗಮನಕ್ಕೆ ತರುತ್ತೇನೆ. ಇದು ಒಂದು ಬಹಳ ಉತ್ತಮವಾದ ಕಾರ್ಯಕ್ರಮವಾಗಿರುವುದರಿಂದ ಈ ಉತ್ತಮವರಿವಾದ ಕಾರ್ಯಕ್ರಮದಲ್ಲಿ ಅವರು ಹೆಚ್ಚಿನ ರೀತಿಯಲ್ಲಿ ಸ್ಪಂಧಿಸಬೇಕೆನ್ನುವ ಸಲಹೆಯನ್ನು ಅವರಿಗೆ ಕೊಡುತ್ತೇನೆ. ಇನ್ನು ಬಹಳ ಮೆಚ್ಚಿಗೆಯಾಗಿರತಕ್ಕಂಥ ಕೆಲಸ ಯಾವುದೆಂದರೆ, ನಮ್ಮ ಕಂದಾಯ ಇಲಾಖೆಯ ಕೆಲಸ. ನಮ್ಮ ಕಂದಾಯ ಮಂತ್ರಿಗಳಾದ ಶ್ರೀಮಾನ್ ಜಾಲಪ್ಪನವರು ಈ ಸ್ಟ್ಯಾಂಪ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ಬಹಳ ಸಮಗ್ರವಾದ ಸುಧಾರಣೆಯನ್ನು ಮಾಡುವುದಕ್ಕೆ ಹೊರಟಿದ್ದಾರೆ, ಮಾಡಿಯೂ ಇದ್ದಾರೆ. ಸಾವಿರದೊಂಬೈನೂರ ಎಪ್ಪತ್ಮೂರರಲ್ಲಿ ನಮ್ಮ ಹುಚ್ಚಮಾಸ್ತಿಗೌಡರು ಈ ರೀತಿ ಸಬ್ ರಿಜಿಸ್ಟಾರ್ ಕಛೇರಿಗಳಿಗೆ ಹೋಗಿ ಅಲ್ಲಿರತಕ್ಕಂಥ ಸಬ್ ರಿಜಿಸ್ಟಾರ್ ಹತ್ತಿರವೆಲ್ಲಾ ಹೋಗಿ ಶೋಧನೆ ಮಾಡುತ್ತಿದ್ದಂಥ ನಿದರ್ಶನಗಳನ್ನು ನಾನು ನೋಡಿದ್ದೇನೆ. ಅದು ಆದ ಮೇಲೆ, ತದನಂತರ ಬಹಳ ವರ್ಷಗಳ ಕಾಲ ಈ ಕೆಲಸ ನಿಂತು ಹೋಯಿತು. ನಮಗೆ ನಾನೂರು ಐವತ್ತು, ಐನೂರು ಕೋಟಿ ರೂಪಾಯಿಗಳ ಆದಾಯ ಬರತಕ್ಕಂತಹ ಒಂದು ದೊಡ್ಡ ಇಲಾಖೆ. ಅದರಲ್ಲೂ ಸಹ ಇವತ್ತು ಬಹಳ ಪ್ರಾಮಾಣಿಕವಾಗಿ, ಅದರಲ್ಲಿ ನಾನೂರು - ಐನೂರು ಕೋಟಿ ರೂಪಾಯಿಗಳ ಆದಾಯವಿದೆ ಎಂದು ಹೇಳಿದರೆ, ಅದನ್ನು ಮಾನ್ಯ ಜಾಲಪ್ಪನವರು ಹೇಳುತ್ತಿರುವಂತೆ ಸುಮಾರು ಇನ್ನೂರು ಕೋಟಿ ರೂಪಯಿಗಳಷ್ಟು ಜಾಸ್ತಿ ಮಾಡಿರಬಹುದು.

ಇನ್ನೂ ಮಾಡುವುದಕ್ಕೆ ಅವಕಾಶವಿರತಕ್ಕಂಥ ಇಲಾಖೆ ಈ ಸ್ಟ್ಯಾಂಪ್ ಅಂಡ್ ರಿಜಿಸ್ಟ್ರೇಷನ್ ಇಲಾಖೆ. ಇದಕ್ಕೆ ಒಂದು ಸಮಗ್ರವಾದಂಥ ಒಂದು ಮಾರ್ಪಾಡನ್ನು ಮಾಡುವ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆಂದರೆ ಬೆಂಗಳೂರಿನ ಸುತ್ತಮುತ್ತಲಿರುವ ಸಬ್-ರಿಜಿಸ್ಟಾರ್‌ರವರ ಕಛೇರಿಗಳಿಗೆ ಶ್ರೀ ಜಾಲಪ್ಪನವರೇ ಹೋಗಿ ದುಡ್ಡನ್ನು ಎಲ್ಲೆಲ್ಲಿ ಇಟ್ಟಿದ್ದಾರೆ ಅವರು ಏನೇನು ಮಾಡಿದ್ದಾರೆ ಎನ್ನುವುದನ್ನೆಲ್ಲಾ ಹಿಡಿದು ಹಾಕಿದ್ದಾರೆ. ಜೊತೆಗೆ ಈ ಎರಡು ಮೂರು ಆ ಪದ್ಧತಿಯನ್ನೇ ಬದಲಾವಣೆ ಮಾಡಬೇಕಾಗಿದೆ. ಈ ವಿಕ್ರಯದಾರ, ಈ ಪತ್ರ ಬರೆಯುವವನು, ಈ ಆ ಪತ್ರವನ್ನು ಯಾವ ರೀತಿಯಾಗಿ ಬರೆಯಬೇಕೆನ್ನುವುದಕ್ಕೆ ಒಂದು ಜನರಲ್ ಫಾರ್ಮಟ್‌ನ್ನೂ ತಯಾರಿಸಿ ತಾವೇ ಸಬ್ ರಿಜಿಸ್ಟಾರ್ ಕಛೇರಿಗಳಿಗೆ ಕಳುಹಿಸಿ ಕೊಡಿ. ಸಬ್ ರಿಜಿಸ್ಟಾರ್ ಮತ್ತು ಕ್ರಯ ಮಾಡಿಸಿಕೊಳ್ಳುವ ವ್ಯಕ್ತಿಗಳ ಮಧ್ಯೆ ಈ ಮಧ್ಯವರ್ತಿಗಳು ಯಾರಿದ್ದಾರೆ, ಈ ದಳ್ಳಾಳಿಗಳು ಯಾರಿದ್ದಾರೆ ಇವರನ್ನು ತಪ್ಪಿಸಬೇಕು. ಈ ದಳ್ಳಾಳಿಗಳನ್ನು ತಪ್ಪಿಸಿದರೆ ಬಹುಶಃ ನಿಮಗೆ ಬಹಳ ರೆವಿನ್ಯೂ ಬರುತ್ತದೆ, ಯಾರು ಕ್ರಯದಾರ ಇದ್ದಾನೆ ಅವನಿಗೆ ಲಾಭವೂ ಆಗುತ್ತದೆ. ಇವತ್ತಿನದಿವಸ ಒಂದು ಪತ್ರ ಬರೆಯಬೇಕಾದರೆ ಶೇಕಡ ಎಡರಷ್ಟು ಮೊಬಲಗನ್ನು ತೆಗೆದುಕೊಳ್ಳುತ್ತಾನೆ. ಸಬ್-ರಿಜಿಸ್ಟಾರ್ ಹತ್ತಿರ ಅವನೇ ಡೀಲ್ ಮಾಡುತ್ತಾನೆ ಎಲ್ಲವನ್ನು ಇವನೇ ಡೀಲ್ ಮಾಡುತ್ತಾನೆ. ಎಲ್ಲವನ್ನು ಇವನೇ ಸೇರಿಕೊಂಡು ಮಾಡತಕ್ಕಂಥದ್ದು ಅದೊಂದು. ಆಮೇಲೆ ಆ ಪತ್ರ ಬರೆದ ಮೇಲೆ ಆ ಪತ್ರವನ್ನು ಪಡೆದುಕೊಳ್ಳಬೇಕಾದರೆ ಐದು ತಿಂಗಳು ಆರು ತಿಂಗಳು ಬೇಕು ಸ್ವಾಮಿ. ಕನಿಷ್ಠ ಮೂರು ತಿಂಗಳು, ನಾಲ್ಕು ತಿಂಗಳಂತೂ ಬೇಕೇ ಬೇಕು. ಮೂರು ತಿಂಗಳಿಗಿಂತ ಮುಂಚೆ ಪತ್ರ ಕೊಡುವುದಿಲ್ಲ, ಆದುದರಿಂದ ಈಗ ಅವರು ಯೋಜನೆ ಮಾಡಿದ್ದಾರೆಂದು ನಾನು ಕೇಳಿದ್ದೇನೆ, ನಾನು ಅಲ್ಲಲ್ಲಿ ಪತ್ರಿಕೆಗಳಲ್ಲೂ ಓದಿದೆ.

ಅವರು ಹತ್ತಿರ ಮಾತನಾಡಿದಾಗಲೂ ಹೇಳಿದರು. ಅದರಿಂದ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಏನೆಂದು ಹೇಳಿದ್ದಾರೆಂದರೆ, ಎಂಟು ದಿವಸದಲ್ಲಿ ಆ ಪತ್ರ ಕ್ರಯದಾರನಿಗೆ ತಲುಪುವಂತೆ ಮಾಡುತ್ತೇನೆ ಎನ್ನುವ ಮಾತನ್ನು ಇಲ್ಲಿ ಹೇಳಿದ್ದಾರೆ. ಅದು ಅತ್ಯಂತ ಸ್ವಾಗತಾರ್ಹವಾದಂಥ ವಿಚಾರ. ಅದಕ್ಕೆ ನೀವು ಇರುವ ಪದ್ಧತಿಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. ಅದಕ್ಕೆ ಒಂದು ಯೂನಿಫಾರಂ ಆಗಿ ಇರತಕ್ಕಂಥ ಒಂದು ನೋಟ್ಸ್ ಅನ್ನು ಸಿದ್ಧಮಾಡಿ, ಆ ಫಾರಂಗಳನ್ನು ನೇರವಾಗಿ ಸಬ್‌ರಿಜಿಸ್ಟ್ರಾರ್‌ರವರ ಕೈಗೆ ಕೊಟ್ಟು ನೇರವಾಗಿ ಕ್ರಮದಾರ ಸಬ್‌ರಿಜಿಸ್ಟ್ರಾರ್ ಹತ್ತಿರ ಹೋಗಿ ಸಬ್‌ರಿಜಿಸ್ಟ್ರಾರ್ ಹತ್ತಿರ ಆ ಫಾರಂ ಅನ್ನು ಪಡೆದುಕೊಂಡು ಅವನೇ ಅದನ್ನು ತುಂಬಿ ಅಥವಾ ಕ್ರಯ ಮಾಡುವವನೋ ಅಥವಾ ಬರೆದುಕೊಡುವವನೋ ಅಥವಾ ಕೊಡುವವನು ಕೊಳ್ಳುವವನು ಸಹಿ ಹಾಕಿ, ಸುಲಭ ರೀತಿಯಲ್ಲಿ ಅಲ್ಲಿ ಹೋಗಿ ಅವನು ತೆಗೆದುಕೊಳ್ಳುವಂತೆ ತಾವು ಮಾಡಿದರೆ ಪ್ರಯೋಜನವಾಗುತ್ತದೆ. ಅದರಲ್ಲೂ ತಾವೇನೂ ಎಂಟು ದಿವಸಗಳಲ್ಲಿ ಕ್ರಯಪತ್ರಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ, ಇದು ನಮ್ಮ ರೈತರಿಗೆ ಬಹಳ ಪ್ರಯೋಜನವಾಗುವಂಥ ಕೆಲಸ. ಆದುದರಿಂದ ಇದನ್ನು ಬಹುಶಃ ಕಂದಾಯ ಮಂತ್ರಿಗಳೇ ಮಾಡಬೇಕು. ಏಕೆಂದರೆ, ಸ್ವಲ್ಪ ನಿಷ್ಠೂರವಾಗಿ ಮಾತನಾಡುವವರು ಮಾತ್ರ ಇದನ್ನು ಮಾಡಲು ಸಾಧ್ಯ. ಇಲ್ಲದೆ ಹೋದರೆ ಇವತ್ತು ಸಬ್ ರಿಜಿಸ್ಟ್ರಾರ್ ಎಂದು ಹೇಳಿದರೆ ಅಷ್ಟು ಸುಲಭವಾಗಿ ಇವತ್ತು ಸಬ್‌ರಿಜಿಸ್ಟ್ರಾರ್ ಇಲ್ಲ, ತಾವು ಸಬ್ ರಿಜಿಸ್ಟ್ರಾರ್ ಎಂದು ಮಾಡಿದ್ದೀರಿ, ಡಿಸ್ಟ್ರಿಕ್ ರಿಜಿಸ್ಟ್ರಾರ್ ಮಾಡಿದ್ದೀರಿ, ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆದಾದ ಮೇಲೆ ಸ್ಟೇಟ್‌ನಲ್ಲಿ ರಿಜಿಸ್ಟ್ರಾರ್ ಎಂದು ಮಾಡಿದ್ದೀರಿ, ಹೀಗೆ ಎಲ್ಲಾ ರೀತಿಯಲ್ಲಿ ಇವೆ. ಅತ್ಯಂತ ತೊಂದರೆಯಾಗುವುದನ್ನು ನಿವಾರಣೆ ಮಾಡುವುದಕ್ಕೆ ಈ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೀರಿ.

ಹಾಗೆ ಪ್ರಸ್ತಾಪ ಮಾಡಿರುವುದನ್ನು ನೆನೆಸಿಕೊಂಡು ಒಂದು ಸಲಹೆ ಕೊಡುವುದು ಏನೆಂದರೆ, ಈ ಎರಡು ಮೂರು ಸುಧಾರಣೆಗಳನ್ನು ತಾವು ಮಾಡಬೇಕು. ಆಗ ಬಹಳ ಪ್ರಯೋಜನ ಆಗುತ್ತದೆ ಎನ್ನತಕ್ಕಂಥಾದ್ದನ್ನು ಅವರಿಗೆ ಹೇಳುತ್ತಾ, ಆಮೇಲೆ ಈ ಮುಜರಾಯಿಯಲ್ಲೂ ಅಷ್ಟೇನೇ, ಅದಕ್ಕೂ ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈ ಮುಜರಾಯಿಯಲ್ಲೂ ಸಹ ನಮ್ಮ ರಾಜ್ಯದಲ್ಲಿ ಇರತಕ್ಕಂಥ ದೇವಸ್ಥಾನಗಳಲ್ಲಿ ನಾವು ಸರಿಯಾಗಿ ಆದಾಯ ಪಡೆದುಕೊಂಡರೆ ಸರ್ಕಾರವನ್ನೂ ಕೇಳುವ ಪರಿಸ್ಥಿತಿ ಇರುವುದಿಲ್ಲ, ಕೆ.ಹೆಚ್. ಪಾಟೀಲರು ಇಲ್ಲಿ ಭಾಷಣ ಮಾಡಿದ್ದುದು ನನಗೆ ಜ್ಞಾಪಕ ಇದೆ. ಕನಿಷ್ಠ ಪಕ್ಷ 250 ಕೋಟಿ ರೂಪಾಯಿಗಳ ಆದಾಯವನ್ನು ತೆಗೆದುಕೊಳ್ಳಬಹುದು ಎಂದು ಅವರು ಹೇಳಿದ್ದರು. ಆದ್ದರಿಂದ ಇದು ಛಾಲೆಂಜ್ ಆಗಿರತಕ್ಕಂಥಾದ್ದು ಜಾಲಪ್ಪನವರಿಗೆ, ಇನ್ನು ಬೇರೆ ಯಾರು ಇದನ್ನು ಮಾಡುತ್ತಾರೆ? ಬೇರೆಯವರು ಮಾಡುವುದಿಲ್ಲ ಎಂದು ನಾನು ಹೇಳುವುದಿಲ್ಲ.ಸ್ವಲ್ಪ ಕಠಿಣವಾಗಿರುವವರು, ನಿಷ್ಠೂರವಾಗಿ ಮಾತನಾಡುವವರು, ಪ್ರಾಮಾಣಿಕವಾಗಿ ಮಾತನಾಡುವವರ ಕೈಯಲ್ಲಿ ಇದು ಆಗುತ್ತದೆ. ಈ ಮುಜರಾಯಿ ಇಲಾಖೆ, ಸ್ಟ್ಯಾಂಪ್ ಇಲಾಖೆ stamp vendor in the Sub-Registrar Office ಇವೆರಡನ್ನೂ ತಾವು ಸುಧಾರಣೆ ಮಾಡಿದರೆ ನಮ್ಮ ರಾಜ್ಯಕ್ಕೆ ಕನಿಷ್ಠ ಪಕ್ಷ 700ರಿಂದ 800 ಕೋಟಿ ರೂಪಾಯಿಗಳ ಆದಾಯವನ್ನು ಒಂದು ವರ್ಷದಲ್ಲಿ ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ತಾವು ಮಾಡುತ್ತೀರಿ ಎಂದು ನಂಬಿಕೆ ನನಗೆ ಇದೆ. ಆದ್ದರಿಂದ ಮುಜರಾಯಿ ಬಗ್ಗೆ ಒಂದು ಸಮಗ್ರ ಕಾಯ್ದೆಯನ್ನು ತಾವು ತರಬೇಕು. ನಮ್ಮ ಸಣ್ಣಸಣ್ಣ ದೇವಸ್ಥಾನಗಳಿಂದ 10 ಪರ್ಸೆಂಟೂ ಸರ್ಕಾರಕ್ಕೆ ಆದಾಯ ಬರುವುದಿಲ್ಲ. ಅಲ್ಲಿಯ ಪೂಜಾರಿಗಳು, ಮತ್ತೊಬ್ಬರು, ಅಲ್ಲಿರತಕ್ಕಂಥ ಟ್ರಸ್ಟಿಗಳು ಅವರು

ಇವರು ತಿಂದು ಲೂಟಿ ಮಾಡಿ ಹಾಕಿಬಿಡುತ್ತಾರೆ. ಅದಕ್ಕೆ ಲೆಕ್ಕ ಇರುವುದಿಲ್ಲ, ಏನೂ ಇರುವುದಿಲ್ಲ.

ಅದಕ್ಕೆ ನಾನು ಯೋಜನೆ ಮಾಡುತ್ತಿದ್ದೆ, ಕೆ.ಹೆಚ್. ಪಾಟೀಲರ ಕಾಲದಿಂದ, ಇದನ್ನು ಏನಾದರೂ ಮಾಡಿ ತರಬೇಕು, ಕಾಯಿದೆ ತರಬೇಕು ಎಂದು ಹೇಳಿ. ನಮ್ಮ ಜಾಲಪ್ಪನವರು ಈ ಮುಜರಾಯಿ ಬಗ್ಗೆ ಒಂದು ಕಾಯಿದೆಯನ್ನು, ಒಂದು ಸಮಗ್ರ ಮಸೂದೆಯನ್ನು ತರತಕ್ಕಂಥಾದ್ದು ಮತ್ತು ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಸುಧಾರಣೆ ಮಾಡತಕ್ಕಂಥಾದ್ದು, 8 ದಿವಸಗಳಲ್ಲಿ ಪತ್ರವನ್ನು ವಾಪಸ್ಸು ಕ್ರಯದಾರನಿಗೆ ಕೊಡಿಸತಕ್ಕಂಥ ಕೆಲಸ ಈ ಮೂರನ್ನೂ ಮಾಡುತ್ತಾರೆ ಎಂದು ನನಗೆ ಅಪಾರ ನಂಬಿಕೆ ಮತ್ತು ಅಪಾರ ವಿಶ್ವಾಸ ಇದೆ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರತಕ್ಕಂಥ ಮಂದಿಯಾದ್ದರಿಂದ ಇದನ್ನು ಅತ್ಯಂತ ಜಾಗ್ರತೆಯಾಗಿ ಮಾಡಲಿ ಎಂದು ಹೇಳಿ, ಇದಕ್ಕೆ ನಮ್ಮ ಬೆಂಬಲ, ನಮ್ಮ ಎಲ್ಲಾ ಸದಸ್ಯರ ಬೆಂಬಲ, ಎಲ್ಲಾ ರಾಜಕೀಯ ಪಕ್ಷಗಳ ಬೆಂಬಲ ಸಹ ಇದೆ. ಇದಕ್ಕೆ ಯಾರೂ ಸಹ ಹಿಂದೆ ಮುಂದೆ ಯೋಚನೆ ಮಾಡುವುದಿಲ್ಲ. ಭಾಷಣ ಮಾಡುವಾಗ ನಮ್ಮ ಇತರ ಸ್ನೇಹಿತರುಗಳು ಪ್ರಸ್ತಾಪ ಮಾಡಬಹುದು. ಬಹಳ ಪ್ರಾಮುಖ್ಯವಾದಂಥ ಈ ಎರಡು ವಿಚಾರಗಳನ್ನು ಸುದೀರ್ಘವಾಗಿ ಪ್ರಸ್ತಾಪ ಮಾಡುತ್ತಾರೆ ಎಂದು ನಾನಾದರೂ ಭಾವಿಸಿ ಕೊಂಡಿದ್ದೇನೆ. ಈ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ, ಮತ್ತೊಂದು ಬಹಳ ಪ್ರಾಮುಖ್ಯವಾದಂಥ ವಿಚಾರ ಯಾವುದೆಂದರೆ, ನಮ್ಮ ಈ ಗ್ರಾಮೀಣ ರಸ್ತೆಗಳು, ಮಾನ್ಯ ಉಪಾಧ್ಯಕ್ಷರೆ, ನಿಮಗೆ ಹೇಳುವುದಾದರೆ, ಈ ಗ್ರಾಮೀಣ ರಸ್ತೆಗಳ ಪರಿಸ್ಥಿತಿಯನ್ನು ನಾವು ನೋಡುವುದಕ್ಕೆ ಸಾಧ್ಯವೇ ಆಗುವುದಿಲ್ಲ, ನಮ್ಮದು ಇವತ್ತು ಯಾವ ಮಟ್ಟಕ್ಕೆ ಹೋಗಿದೆ ಎಂದು ಹೇಳಿದರೆ, ಯಾವ ಊರಿಗೆ ಹೋದರೂ, ನೀವು ಈ ರಸ್ತೆ ಮುಖಾಂತರ ಬಂದಿರಾ ಎಂದು ಪ್ರಶ್ನೆ ಕೇಳುವಂಥ ಪರಿಸ್ಥಿತಿ ಒದಗಿ ಬಂದಿದೆ. ನಾನು ಆರಾಮಾಗಿ ಎಂ.ಎಲ್.ಸಿ. ಆಗಿದದೆ, ನನಗೆ ಅಷ್ಟೊಂದು ಕಷ್ಟ ಗೊತ್ತಾಗುತ್ತಾ ಇರಲಿಲ್ಲ. ಈಗ ನಾನು ಎಂ.ಎಲ್.ಎ ಆಗಿ ನಮ್ಮ ಹಳ್ಳಿಗಳಿಗೆ ಹೋದರೆ ಪ್ರಾರಂಭದಲ್ಲಿ ಅವರು ಬಯಸತಕ್ಕಂಥಾದ್ದು ಎಂದರೆ ಕುಡಿಯುವ ನೀರಿನ ಯೋಜನೆ, ಅಥವಾ ರಸ್ತೆಗಳ ಸುಧಾರಣೆ.

ಈ ರಸ್ತೆಗಳ ವ್ಯವಸ್ಥೆಯನ್ನು ನಾವು ಸರಿಯಾಗಿ ಮಾಡದೇ ಹೋದರೆ ನಮ್ಮ ಸರ್ಕಾರಕ್ಕೆ ಖಂಡಿತವಾಗಿಯೂ 5 ವರ್ಷಗಳಲ್ಲಿ ಒಳ್ಳೆಯ ಹೆಸರು ಬರುವುದಿಲ್ಲ. ನಮಗೆ ಇರತಕ್ಕಂಥಾದ್ದು ಮೂರೇ ಮೂರು ಕಷ್ಟ. ಒಂದು ಬೆಳೆದಿರತಕ್ಕಂಥ ಎರಡೂವರೆ ಕೋಟಿ ಕಬ್ಬನ್ನು ಏನಾದರೂ ಮಾಡಿ ಅರೆಯತಕ್ಕಂಥಾದ್ದು ಒಂದು ಸಂಕಷ್ಟ. ಇನ್ನೊಂದು ವಿದ್ಯುತ್. ಇವತ್ತು ಬೆಳಿಗ್ಗೆ ಪ್ರಸ್ತಾಪ ಮಾಡಿದ ರೀತಿ ವಿದ್ಯುತ್ತಿನದು ಇನ್ನೊಂದು ಸಂಕಷ್ಟ. ಮೂರನೆಯ ಸಂಕಷ್ಟ ಈ ಗ್ರಾಮೀಣ ರಸ್ತೆಗಳ ವ್ಯವಸ್ಥೆ. ಕುಡಿಯುವ ನೀರಿನ ವ್ಯವಸ್ಥೆ, ಈ ನಾಲ್ಕು ಕಾರ್ಯಕ್ರಮಗಳಿಂದ ನಾವು ಬಚಾವು ಆದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎನ್ನತಕ್ಕಂಥಾದ್ದು ನನ್ನ ಅನಿಸಿಕೆ. ಆದ್ದರಿಂದ ಒಂದೊಂದಾಗಿ ಹೇಳುವುದಾದರೆ, ಗ್ರಾಮೀಣ ರಸ್ತೆಗಳಿಗೆ ನೀವು ಕೈಹಾಕಿದ್ದೀರಿ. ಇವತ್ತು ಕೈ ಹಾಕಿ 50, ಸುಮಾರು ಒಂದು ಸಾವಿರ ಕಿಲೋಮೀಟರ್‌ನಷ್ಟು ಅದು ಹತ್ತು ಸಾವಿರ ಕಿಲೋ ಮೀಟರ್ ಇರಬೇಕು, ಹತ್ತು ಸಾವಿರ ಕಿಲೋಮೀಟರ್ ತಾವು ಈಗಾಗಲೇ ಒಂದನೇ ತಾರೀಖಿನಿಂದ ಎರಡು ಪರ್ಸೆಂಟ್ ತೆರಿಗೆ ಜಾಸ್ತಿ ಮಾಡುತ್ತೇವೆ ಎನ್ನತಕ್ಕಂಥಾದ್ದನ್ನು ಗವರ್ನರ್ ಭಾಷಣದಲ್ಲಿ ಹೇಳಿದ್ದೀರಿ. ಒಂದರಿಂದ ಎರಡು ಪರ್ಸೆಂಟ್ ತೆರಿಗೆಯನ್ನು ಜಾಸ್ತಿ ಮಾಡಿ ಸುಮಾರು ಹತ್ತು ಸಾವಿರ ಕಿಲೋ ಮೀಟರ್ ಎ.ಪಿ.ಎಂ.ಸಿ. ರಸ್ತೆಗಳನ್ನು ಮಾಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳಿದ್ದೀರಿ.

ಇದಕ್ಕೆ ಬಹಳ ಮಹತ್ವವಾದಂಥ ಒಂದು ಪ್ರೆಯಾರಿಟಿಯನ್ನು ನಮ್ಮ ಸರ್ಕಾರ ಕೊಡಬೇಕು ಎನ್ನತಕ್ಕಂಥಾದ್ದು ನನ್ನ ಸಲಹೆ.

ಹಳ್ಳಿಗಳ ಕಡೆ ರಸ್ತೆ ಕೆಟ್ಟು ಹೋಗಿರತಕ್ಕಂಥ ಕಾಲದಲ್ಲಿ ಈ ಒಂದನ್ನು ಹೆಚ್ಚು ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಇವತ್ತು 30 ಕೋಟಿ ರೂಪಯಿ ಬಿಡುಗಡೆ ಮಾಡಿದ್ದೀರಿ. ಸುಮಾರು ಹತ್ತು ಸಾವಿರ ಕಿಲೋಮೀಟರ್ ಎಂದು ಹೇಳಿದರೆ ನಿಮಗೆ ಹತ್ತು ಸಾವಿರ ಲಕ್ಷ ಬೇಕಾಗುತ್ತದೆ. ಅಪ್ರಾಕ್ಸಿಮೇಟ್ ಆಗಿ ಹೇಳುವುದಾದರೆ ಹತ್ತು ಸಾವಿರ ಲಕ್ಷ ಬೇಕಾಗುತ್ತದೆ. ಅಷ್ಟಕ್ಕೆ ನೀವು ಇನ್ನೂ ಒಂದರಿಂದ ಎರಡು ಪರ್ಸೆಂಟ್ ಮಾಡಿದರೆ ತಪ್ಪೇನೂ ಆಗುವುದಿಲ್ಲ. ಎ.ಪಿ.ಎಂ.ಸಿ.ಯಲ್ಲಿ ಇವತ್ತು ಮಾರಾಟ ಮಾಡುವವರು ಅಥವಾ ಸಂಪಾದನೆ ಮಾಡುವವರು ತೆರಿಗೆ ಕೊಡತಕ್ಕಂಥಾದ್ದು. ಆದ್ದರಿಂದ ಅದನ್ನು ಕಂಪ್ಲೀಟಾಗಿ ಮಾಡಿ ಕೊಡಬೇಕು, ಅದರಿಂದ ಬಹಳಷ್ಟು ಪ್ರಯೋಜನವಾಗುತ್ತದೆ. ಈ ಗ್ರಾಮೀಣಾಭಿವೃದ್ಧಿಯ ರಸ್ತೆಗಳಕಾಲ ಏನಿದೆ, ಇದನ್ನು ಕೂಡಲೇ ರಚನೆ ಮಾಡಿ ಹಳ್ಳಿಗಾಡಿನ ರಸ್ತೆಗಳಿಗೆ ಹೆಚ್ಚು ಅವಕಾಶ ಕೊಡತಕ್ಕಂಥಾದ್ದನ್ನು ಹೆಚ್ಚು ಗಮನ ಹರಿಸತಕ್ಕಂಥಾದ್ದನ್ನು ಮಾಡಬೇಕು. ಮತ್ತು ಇನ್ನೊಂದು ಏನು ಎಂದರೆ ಮಾನ್ಯ ಸಿದ್ಧರಾಮಣ್ಣನವರು ಇಲ್ಲಿಯೇ ಇದ್ದಾರೆ. ಅವರಲ್ಲಿ ನನ್ನದು ಒಂದೇ ಒಂದು ಸಲಹೆಎಂದರೆ ಎಂ.ಎಲ್.ಎ.ಗಳಿಗೆ 30 ಲಕ್ಷ ಗ್ರಾಂಟನ್ನು ಈಗಾಗಲೇ ಬಿಡುಗಡೆ ಮಾಡಿದ್ದಾರೆ. ಬಹುಶಃ 30 ಲಕ್ಷ ಗ್ರಾಂಟೂ ಬಿಡುಗಡೆಯಾಗಿದೆ, ಇವರ ಹಣವೂ ಬಿಡುಗಡೆಯಾಗಿದೆ, ಅಲ್ಲಿ ಎಸ್ಟಿಮೇಟ್ ಅಪ್ರೂವಲ್ ಆಗಿವೆ. ಈಗ ಇಲ್ಲಿ ನಮ್ಮ ಪಿ.ಡಬ್ಲ್ಯೂ.ಡಿ. ಮಂತ್ರಿಗಳಿಲ್ಲ. ಟಾರ್ ಇಲ್ಲ, ಬೆಳಿಗ್ಗೆ ನಮ್ಮ ಶ್ರೀ ಯಡಿಯೂರಪ್ಪನವರು, ಶ್ರೀ ಜಗನ್ನಾಥ ಶೆಟ್ಟರು ಹೇಳಿದರು. ಇದು ಟಾರ್‌ನ ಸಮಸ್ಯೆಯಾಗಿದೆ. ಮಾರ್ಚ್ 31ರೊಳಗಡೆ ನೀವು ಟಾರ್ ಕೊಡದೇ ಹೋದರೆ ನಮ್ಮ ಎ.ಪಿ.ಎಂ.ಸಿ ರೋಡ್ ಆಗುವುದಿಲ್ಲ, ನಮ್ಮ ಎಂ.ಎಲ್.ಎ.ಗಳ ಗ್ರಾಂಟ್‌ನಲ್ಲಿ ಕೊಟ್ಟಿರತಕ್ಕಂಥ ರೋಡುಗಳು ಆಗುವುದಿಲ್ಲ, ಆಮೇಲೆ ಮತ್ತೊಂದು ಹೊಸ ಕಾಯಿದೆಯನ್ನು ತಾವು ಮಾಡಿದಿರಿ. ಬಹಳ ಹಿಂದೆ ನಾನು ಸಕ್ಕರೆ ಕಂಪನಿಯ ಛೇರ್‌ಮೆನ್ ಆಗಿದ್ದಾಗ ಅದು ಇತ್ತು. ಏನೆಂದರೆ ಸೆಸ್ ಕಲೆಕ್ಟ್ ಮಾಡಿ ಆ ರಸ್ತೆಗಳನ್ನು ರೆಡಿ ಮಾಡುವುದು. ಈಗ ಹೊಸದಾಗಿ 20 ವರ್ಷಗಳು ಆದಮೇಲೆ ಜಾರಿಗೆ ತಂದಿದ್ದೀರಿ.

ಒಂದು ಸಕ್ಕರೆ ಕಂಪನಿ ಹೇಳಿದೆ, ಇದು ನಮ್ಮ ಕೌಜಲಗಿಯವರಿಗೂ ಗೊತ್ತಿದೆ, ಒಂದು ಸಕ್ಕರೆ ಕಂಪನಿ ಏರಿಯಾಕ್ಕೆ ಸುಮಾರು 60 ಲಕ್ಷ ರೂಪಾಯಿಗಳನ್ನು ಇವತ್ತು ರಸ್ತೆಗಳಿಗೆ ನಾವು ಖರ್ಚು ಮಾಡುತ್ತಿದ್ದೇವೆ. ಅಂದರೆ ಒಂದು ಎಂ.ಎಲ್.ಎ. ಕಾನ್‌ಸ್ಟಿಟ್ಯೂಯೆನ್ಸಿಗೆ 30 ಲಕ್ಷ ರೂಪಯಿನಷ್ಟು ಪಿ.ಡಬ್ಲ್ಯು.ಡಿ ರೋಡ್ ಬರುತ್ತದೆ, ಸುಮಾರು 50 ಕಿಲೋಮೀಟರ್‌ಷ್ಟು ಎ.ಪಿ.ಎಂ.ಸಿ. ರೋಡ್ ಬರುತ್ತದೆ, 60 ಲಕ್ಷ ರೂಪಾಯಿಗಳಷ್ಟು ನಮ್ಮ ಶುಗರ್ ಫ್ಯಾಕ್ಟರಿ ಏರಿಯಾಗೆ ಬರತಕ್ಕಂಥ ಹಣ ಬರುತ್ತದೆ. ಇದು apart from the regular cess. ಇವೆಲ್ಲಾ ನಾವು ನೋಡಿದಾಗ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ನಮ್ಮ ರಸ್ತೆಗಳ ವ್ಯವಹಾರ ಪಿ.ಡಬ್ಲ್ಯೂ.ಡಿ.ನಲ್ಲಿ, ಎ.ಪಿ.ಎಂ.ಸಿ.ಯಲ್ಲಿ, ಜಿಲ್ಲಾಪರಿಷತ್ತಿನಲ್ಲಿ, ಮತ್ತೊಂದರಲ್ಲಿ ಒಂದು ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಯನ್ನು ನಾವು ಮಾರ್ಚ್ 31 ರೊಳಗೆ ಖರ್ಚು ಮಾಡಬೇಕು. ಈ ಮಾರ್ಚ್ 31ಕ್ಕೆ ನಮಗೆ ಕೊಟ್ಟಿರತಕ್ಕಂಥ ಹಣದ ವ್ಯವಸ್ಥೆಯನ್ನು ನೋಡಿದರೆ ಮಾರ್ಚ್‌ಗೆ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಏನು 340 ಕೋಟಿ ರೂಪಾಯಿ ಹಣವನ್ನು ತಾವು ಕೊಟ್ಟಿದ್ದೀರಿ, ಆ 340 ಕೋಟಿ ಜೊತೆಗೆ ಈ ಹಣವನ್ನು ತಾವು ಏನು ಕೊಟ್ಟಿದ್ದೀರಿ, ಇದರ ಜೊತೆಗೆ ಏನು ನೀವು ಮಂಜೂರು ಮಾಡಿದ್ದೀರಿ ಇವೆಲ್ಲಾ, ಇದರ ಬಗ್ಗೆ ಒಂದೇ ಒಂದು ತೊಂದರೆ ಇರತಕ್ಕಂಥಾದ್ದು, ಮಾನ್ಯ ಯಡಿಯೂರಪ್ಪನವರು ಹೇಳಿದ ರೀತಿಯಲ್ಲಿ ಟಾರ್ ಇಲ್ಲ. ಈ ಟಾರ್‌ನ್ನು ಒದಗಿಸಿ ಕೊಟ್ಟರೆ ಇವತ್ತು

6-7 ತಿಂಗಳಿನಿಂದ, ಪ್ರಾರಂಭದಲ್ಲಿ 2 ತಿಂಗಳು ಕೆಲಸ ಆಗಲಿಲ್ಲ. 2-3 ತಿಂಗಳ ಕಾಲ ಯಾವುದೇ ಸರ್ಕಾರ ಇದ್ದುಕೊಂಡು ಹೋಗಲಿ, ವಾಸ್ತವಾಂಶವನ್ನು ಪ್ರಸ್ತಾಪ ಮಾಡುವುದಾದರೆ 2-3 ತಿಂಗಳ ಕಾಲ ಕುಳಿತುಕೊಳ್ಳುವುದಕ್ಕೇ ಕಷ್ಟವಾಯಿತು. ಈಗ ಕಳೆದ 6-7 ತಿಂಗಳಿಂದ ಕೆಲಸಗಳು ಪ್ರಾರಂಭವಾಗಿವೆ. ಅದು ಕುಡಿಯುವ ನೀರಿನದು ಇರಲಿ, ಅಥವಾ ಶಾಲೆಗಳದ್ದು ಇರಲಿ, ಅದು ನೇಮಕಾತಿಗಳು ಇರಲಿ, ರಸ್ತೆಗಳ ರಿಪೇರಿಗಳು ಇರಲಿ ಅಥವಾ ಮತ್ತೊಂದು ಕೆಲಸ ಕಾರ್ಯಗಳಾಗಲೀ, ಸೈಟ್ ಎತ್ತಕ್ಕಂಥ ಕೆಲಸ ಆಗಲೀ, ಇವತ್ತು ಪ್ರಾರಂಭವಾಗಿವೆ. ಆದರೆ ಹೀಗೆ ಪ್ರಾರಂಭ ಆಗಿರುವಂಥ ಕಾಲದಲ್ಲಿ ಸ್ವಲ್ಪ ಟಾರನ್ನು ಇವರು ಕೊಡಿಸಿದರೆ ಸಮಸ್ಯೆ ಪರಿಹಾರವಾಗಿ, ಹೆಚ್ಚು ರೀತಿಯಲ್ಲಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅದನ್ನು ಪ್ರಸ್ತಾಪ ಮಾಡಿದ್ದಾರೆ ರಾಜ್ಯಪಾಲರು, ಅದು ಏನೆಂದು ಹೇಳಿದರೆ ಒಂದರಿಂದ ಎರಡು ಪರ್ಸೆಂಟ್ ನಾವು ಎ.ಪಿ.ಎಂ.ಸಿ. ಟ್ಯಾಕ್ಸ್ ಇನ್‌ಕ್ರೀಸ್ ಮಾಡುತ್ತೇವೆ, ಜೊತೆಗೆ ಹತ್ತು ಸಾವಿರ ಕಿಲೋಮೀಟರ್‌ನಷ್ಟು ರಸ್ತೆಗಳನ್ನು, ಗ್ರಾಮೀಣ ರಸ್ತೆಗಳನ್ನು ರಿಪೇರಿ ಮಾಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದರಿಂದ ಹೆಚ್ಚು ಗಮನವನ್ನು ಆ ಕಡೆ ಹರಿಸಬೇಕು ಎನ್ನತಕ್ಕಂಥಾದ್ದನ್ನು ನಾನು ನಮ್ಮ ಮಾನ್ಯ ಸರ್ಕಾರಕ್ಕೆ ಸೂಚನೆ ಕೊಡುತ್ತಾ, ಇನ್ನೊಂದು ಕಾರ್ಯ ಅಷ್ಟೊಂದು ಸಮರ್ಪಕವಾಗಿ ನಡೆಯುತ್ತಿಲ್ಲ.

ಅದು ಮನೆ ಹಂಚತಕ್ಕ ಕಾರ್ಯಕ್ರಮ. ನಮ್ಮ ಬಸವರಾಜರಾಯ ರೆಡ್ಡಿ ಇದ್ದರು ಈಗ ಎದ್ದು ಹೊರಟು ಹೋದರು. ಇದು ಬಹಳಷ್ಟು ನಮ್ಮ ಸರ್ಕಾರಕ್ಕೆ ದೊಡ್ಡ ಆಲೋಚನೆ ಇರತಕ್ಕಂಥಾದ್ದು ನಾವು ಈ ಮನೆಗಳನ್ನು, ಸೈಟ್‌ಗಳನ್ನು ಕೊಡತಕ್ಕಂಥ ವಿಚಾರ ಬಹಳಷ್ಟು ಇರತಕ್ಕಂಥಾದ್ದು. ಇದರ ಬಗ್ಗೆ ಹೆಚ್ಚು ಗಮನವನ್ನು ಸರ್ಕಾರ ಈಗ ಹರಿಸುತ್ತಿರತಕ್ಕಂಥಾದ್ದು ಸಾಕಾಗುವುದಿಲ್ಲ, ಏಕೆಂದರೆ ನಾವು ಸರ್ವೆ ಮಾಡಿದೆವು, ಸಮೀಕ್ಷೆ ಮಾಡಿ ಸುಮಾರು 20 ಲಕ್ಷ ಮನೆಗಳು ಬೇಕಾಗುತ್ತದೆ ಅಥವಾ ಸುಮಾರು ಒಂದು ಅಂದಾಜಿನ ಪ್ರಕಾರ 20 ಲಕ್ಷ ಸೈಟು ಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಸುಮಾರು ಒಂದು - ಒಂದೂವರೆ ಲಕ್ಷ ನಾವು ಪ್ರತಿವರ್ಷ ಕೊಡಬೇಕಾಗುತ್ತದೆ ಎನ್ನತಕ್ಕಂಥ ಅಂದಾಜುನ್ನು ಮಾಡಿದ್ದೇವೆ. ಆದರೂ ಸಹ ಇನ್ನೂ ಅಷ್ಟೊಂದು ಸಮರ್ಪಕವಾಗಿ ಕೆಲಸ ಆಗುತ್ತಿಲ್ಲ. ಆದ್ದರಿಂದ ನಾನು ನಮ್ಮ ಸರ್ಕಾರಕ್ಕೆ ಸೂಚನೆ ಮಾಡುವುದು ಏನೆಂದರೆ ಇವತ್ತು ಏನು 'ಸೂರು' ಎನ್ನತಕ್ಕಂಥ ಯೋಜನೆಯನ್ನು ನಾವು ಮಾಡಿಕೊಂಡಿದ್ದೇವೆ, 20 ಲಕ್ಷ ಸೈಟುಗಳನ್ನು, ಮನೆಗಳನ್ನು ಕೊಡಬೇಕು ಎನ್ನತಕ್ಕಂಥಾದ್ದನ್ನು ಏನು ಯೋಜನೆ ಮಾಡಿಕೊಂಡಿದ್ದೇವೆ, ಈ ಎರಡೂ ಕಡೆ, ಹಣ ಬಿಡುಗಡೆ ಮಾಡತಕ್ಕಂಥಾದ್ದಕ್ಕೆ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು, ಎಲ್ಲದಕ್ಕೂ ಅವರೇ ಹೋಗಬೇಕು, ಕಾರಣ ಏನೆಂದರೆ ಈ ಸಲ ಅವರು 400-500 ಕೋಟಿ ರೂಪಾಯಿ ಹೆಚ್ಚು ಹಣ ಅವರಿಗೆ ಆದಾಯ ಬಂದಿದೆ. ಈ 500 ಕೋಟಿಗಳಲ್ಲಿ ಅವರು ಗಮನ ಹರಿಸಬೇಕಾದುದು ರಸ್ತೆಗಳಿಗೆ, ಗಮನ ಹರಿಸಬೇಕಾದುದು ಮನೆಗಳಿಗೆ, ಈ ಸೈಟ್ ಕಾರ್ಯಕ್ರಮಕ್ಕೆ, ಈ 3-4 ಕಾರ್ಯಕ್ರಮಗಳಿಗೆ ಹೆಚ್ಚು ಗಮನವನ್ನು ಅವರು ಕೊಡಬೇಕು. ಈ ಮನೆ ಕಾರ್ಯಕ್ರಮ ಅಷ್ಟೊಂದು ಚೆನ್ನಾಗಿ ನಡೆಯುತ್ತಿಲ್ಲ, ಇನ್ನು ತಿಂಗಳಲ್ಲಿ, ಈಗಾಗಲೇ ಆಗಿವೆ. ಈಗಾಗಲೇ ಆಗಿವೆ. ಈಗಾಗಲೇ ತಾಲ್ಲೂಕು ಪಂಚಾಯಿತಿಯವರು, ಜಿಲ್ಲಾ ಪಂಚಾಯಿತಿಯವರು, ನಾವು ಎಲ್ಲಾ ಮಾಡಿದೆವು. ಮುಗಿದಿದೆ. ಆದರೆ ಇನ್ನೂ ಫಾಸ್ಟಾಗಿ ಮಾಡಿದ್ದರೆ, ಬೇರೆ ಇಲಾಖೆಗಳು ಕೆಲಸ ಮಾಡಿದ ರೀತಿಯಲ್ಲಿ ಈ ಇಲಾಖೆ ಕೆಲಸ ಮಾಡಿದ್ದರೆ ಇಷ್ಟು ಹೊತ್ತಿಗೆ ಮುಗಿದು ಹೋಗುತ್ತಿತ್ತು. ತಾಲ್ಲೂಕು ಪಂಚಾಯಿತಿಯವರು ಮುಗಿಸಿದ್ದಾರೆ. ಇಂದಿರಾ ಆವಾಸ್ ಆಗಲೀ, ಆಶ್ರಯ ಮನೆಯಾಗಲೀ, ಮತ್ತೊಂದಾಗಲೀ ಪಟ್ಟಿ ಮಾಡಿದ್ದಾರೆ. ಅವರಿಗೆ

ಹಣ ಕೊಡತಕ್ಕಂಥಾದ್ದಕ್ಕೆ, ಶೀಘ್ರವಾಗಿ ಹಣ ಬಿಡುಗಡೆ ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ ಇನ್ನು ಇದರಲ್ಲಿ ಖಾಸಗೀ ಬಂಡವಾಳದವರನ್ನು ನೀವು ಸೇರಿಸತಕ್ಕಂಥಾದ್ದು ಬಿಡತಕ್ಕಂಥಾದ್ದು ತಮಗೆ ಬಿಟ್ಟಿದ್ದುದು. ಬಹಳ ಮಹತ್ತರವಾದ ಒಂದು ವಿಚಾರವನ್ನು ನಾನು ಪ್ರಸ್ತಾಪ ಮಾಡಬೇಕು ಎನ್ನತಕ್ಕಂಥಾದ್ದು ಎಂದರೆ ವಿದ್ಯುತ್. ವಿದ್ಯುತ್ತಿನ ಬಗ್ಗೆ ಈಗಾಗಲೇ ಬೆಳಿಗ್ಗೆ ಪ್ರಸ್ತಾಪ ಮಾಡುವಾಗ ಒಂದು ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ನಾವು ಸಮಗ್ರವಾಗಿ ಚರ್ಚೆ ಮಾಡಬೇಕು ಎನ್ನತಕ್ಕಂತಾದ್ದನ್ನು ಅವರು ಹೇಳಿದ್ದರಿಂದ ಹೆಚ್ಚು ಹೊತ್ತು ವಿದ್ಯುತ್ ಬಗ್ಗೆ ಪ್ರಸ್ತಾಪ ಮಾಡದೇ, ಈ ಕಬ್ಬಿನ ಬಗ್ಗೆ ಮಾನ್ಯ ಸಿದ್ಧರಾಮಯ್ಯನವರು ಸ್ವಲ್ಪ ಗಮನಹರಿಸಿ ಕೇಳಬೇಕಾಗುತ್ತದೆ. ಏನೆಂದು ಹೇಳಿದರೆ ಎಕ್ಸ್‌ಟ್ರಾ, ಎಕ್ಸಸ್ ಬೆಳೆದಿರತಕ್ಕಂಥ ಕಬ್ಬಿನ ಸಾಗಾಣಿಕೆ ಮಾಡುವುದಕ್ಕೆ ಬದಲಾಗಿ, ನಾವು 3-4 ಸಲಹೆಗಳನ್ನು ಕೊಟ್ಟಿದ್ದೇವೆ. ಆ ಸಲಹೆಗಳನ್ನು ಪರಿಶೀಲಿಸಿ, ಇನ್ನು ಮುಂದಕ್ಕೆ ರೈತರಿಗೆ ಅನುಕೂಲವಾಗುವಂತೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ಹೊಸ ಕೃಷಿ ನೀತಿ ಮಾಡಬೇಕು. ಅತ್ಯಂತ ಒಳ್ಳೆಯ ರೀತಿಯ ಕೃಷಿ ನೀತಿ ಇರತಕ್ಕಂಥ ಈ ಕಾಲದಲ್ಲಿ ಕ್ರಾಪ್ ಪ್ಯಾಟ್ರನ್‌ನನ್ನು ಇವರು ತರದೇ ಹೋದರೆ ಇವರು, ಎಲ್ಲಿ ಕಬ್ಬು ಬೆಳೆಯಬೇಕು, ಎಲ್ಲಿ ಭತ್ತ ಬೆಳೆಯಬೇಕು, ಏನು ಬೆಳೆಯಬೇಕು, ಎಷ್ಟು ಬೆಳೆಯಬೇಕು ಎನ್ನತಕ್ಕಂಥಾದ್ದನ್ನು ನಾವು ನಿಗದಿ ಮಾಡದೇ ಹೋದರೆ ಎಷ್ಟು ಸಾಲ ತೆಗೆದುಕೊಂಡು ಬರಲಿ, ಎಷ್ಟು ಬಂಡವಾಳ ತೆಗೆದುಕೊಂಡು ಬರಲಿ, ಎಷ್ಟೇ ಬೇರೆ ಬಂಡವಾಳವಾಗಲೀ ಅದು ಪ್ರಯೋಜನವಾಗುವುದಿಲ್ಲ.

ಇವತ್ತು ತಮಗೆ ಒಂದು ಸಂತೋಷದ ಸಂಗತಿ ಎಂದರೆ ಕೇಂದ್ರ ಸರ್ಕಾರದವರು 9 ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ಕೊಟ್ಟಿದ್ದಾರೆ. 9 ಸಕ್ಕರೆ ಕಾರ್ಖಾನೆಗೆ ಅನುಮತಿ ಕೊಟ್ಟಿರುವುದರಿಂದ ನಮ್ಮ ಗ್ರಾಮೀಣ ಜನರ ಸಮಸ್ಯೆ ಅಷ್ಟೊಂದು ಭಾಗ ಅಲ್ಲದಿದ್ದರೂ ಸಾಕಷ್ಟು ಸಮಸ್ಯೆ ಬಗೆಹರಿಯುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ಒಂದು ರೀತಿಯಲ್ಲಿ ಯೋಚನೆ ಮಾಡುವುದಾದರೆ ಈ ಕಬ್ಬಿನ ಬಗ್ಗೆ ಸುದೀರ್ಘವಾದಂಥ ಆಲೋಚನೆ ಸರ್ಕಾರಕ್ಕೆ ಇರಬೇಕು. ರೈತರು ಬಹಳಷ್ಟು ಸಂಕಷ್ಟಕ್ಕೆ ಸಿಕ್ಕಿಕೊಂಡು ಬಿಟ್ಟಿದ್ದಾರೆ. ಮಾನ್ಯ ಉಪಾಧ್ಯಕ್ಷರೆ ತಮಗೆ ಗೊತ್ತಿದೆ, ತಮ್ಮ ರಾಯಚೂರು ಜಿಲ್ಲೆಯಲ್ಲಿ ಬೇಕಾದಷ್ಟು ಕಬ್ಬು ಇದೆ. 400-300 ರೂಪಾಯಿಗೆ ಕಬ್ಬು ತೆಗೆದುಕೊಳ್ಳದೇ ಇರತಕ್ಕಂಥ ಪ್ರಸಂಗ ಒದಗಿ ಬಂದಿದೆ.

1.00 ಪಿ.ಎಂ

ಅದಕ್ಕೆ ಸರ್ಕಾರ ಹೊಣೆ ಎಂದು ನಾನು ಹೇಳದೆ ಇದ್ದರೂ ಸಹ, ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಎನ್ನತಕ್ಕಂಥದ್ದು ನನ್ನ ಸೂಚನೆ. ಇನ್ನೂ ಪಾನ ನಿರೋಧವನ್ನು ಪುನಃ ಜಾರಿಗೊಳಿಸತಕ್ಕಂತಹ ಕೆಲಸವನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಶ್ರೀ ಸಿದ್ಧರಾಮಯ್ಯನವರಿಗೆ ಸಂಬಂಧಪಟ್ಟಂತಹ ಬಹಳ ಪ್ರಮುಖವಾದಂತಹ ಇಲಾಖೆ ಇದು ಈ ಪಾನನಿರೋಧವನ್ನು ಮತ್ತೆ ಜಾರಿಗೆ ತರುತ್ತೇವೆ ಎನ್ನುವ ಒಂದು ಮಾತನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ಬಹಳ ಆಲೋಚನೆಯನ್ನು ಮಾಡಬೇಕು. ಏಕೆ ಎಂದು ಹೇಳಿದರೆ, ನಾನು ಪಾನನಿರೋಧವನ್ನು ಜಾರಿಗೆ ತರತಕ್ಕಂಥದ್ದಕ್ಕೆ ವಿರೋಧ ಮಾಡುತ್ತೇನೆಂದು ತಾವು ಭಾವಿಸಿಕೊಳ್ಳಬಾರದು. ವಾಸ್ತವಾಂಶವನ್ನು ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಶ್ರೀ ಎನ್.ಟಿ.ಆರ್. ರವರು ಅಧಿಕಾರಕ್ಕೆ ಬಂದಿದ್ದಾಗ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ನಾನೂ ಕೂಡ ಶ್ರೀ ಚಂದ್ರ ಬಾಬು ನಾಯ್ಡುರವರ ಹತ್ತಿರ ಎರಡು ಮೂರು ಸಾರಿ ಮಾತನಾಡಿದ್ದೇನೆ. ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಒಂದ ಕಡೆ

ಇಟ್ಟುಕೊಳ್ಳಿ. ಈ ಮದ್ಯಪಾನದಿಂದ 600 ಕೋಟಿ ರೂಪಾಯಿಗಳು ನಮ್ಮ ರಾಜ್ಯಕ್ಕೆ ಬರುತ್ತಿದೆ. ಅರ್ರಾಕ್ ಒಂದರಿಂದಲೇ 600 ಕೋಟಿ ರೂಪಾಯಿಗಳು ಬರುತ್ತಿದೆ ಎಂದು ಹೇಳಿದ್ದಾರೆ. ಮಾನ್ಯ ಶ್ರೀನಿವಾಸುಲುರವರು ಸಹ ವೆಂಕಯ್ಯ ನಾಯ್ಡುರವರ ಮಕ್ಕಳ ಮದುವೆಗೆ ಬಂದಿದ್ದರು. ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಾ, ಶ್ರೀ ಚಂದ್ರ ಬಾಬು ನಾಯ್ಡುರವರನ್ನು ಕೇಳಿದೆ ಶ್ರೀ ಎನ್.ಟಿ.ಆರ್. ರವರಿಗೂ ನಿಮಗೂ ವ್ಯತ್ಯಾಸ ಬಂದಿದೆ.

ಈಗ ಏನಾದರೂ ಮಾಡಿ ಮತ್ತೆ ಮದ್ಯಪಾನವನ್ನು ವಾಪಸ್ಸು ಜಾರಿಗೆ ತರುತ್ತೀರಾ ಎಂದು. ಆಗ ಶ್ರೀ ಚಂದ್ರ ಬಾಬು ನಾಯ್ಡುರವರು ಎಲ್ಲ ಇದನ್ನು ಜಾರಿಗೆ ತರುವುದಕ್ಕಾಗುವುದಿಲ್ಲ ಎನ್ನುವಂತಹ ಮಾತನ್ನು ಅವರು ಹೇಳಿದರು. ಕಾರಣ ಏಕೆ ಎಂದರೆ, ಅವರು ಒಂದೇ ಕಾರಣವನ್ನು ಹೇಳಿದರು ಏನೆಂದರೆ ಜನರ ಆರೋಗ್ಯ ಮಟ್ಟ ಹೆಚ್ಚಾಗಿದೆ, ಆ ಗ್ರಾಫ್ ಏನಿದೆ ಅದು ಇನ್‌ಕ್ರೀಸ್ ಆಗಿದೆ. ಅವರ ಈ ಪಾನನಿರೋಧವನ್ನು ಜಾರಿಗೆ ತಂದಿರುವುದರಿಂದ ಜನರ ಆರೋಗ್ಯ ಸುಧಾರಣೆಯಾಗಿದೆ. ಆದುದರಿಂದ ನಾವು ಏನು ಪಾನನಿರೋಧವನ್ನು ಜಾರಿಗೆ ತಂದಿದ್ದೇವೆ ಅದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗುತ್ತೇವೆ ಎನ್ನುವ ಮಾತನ್ನು ಅವರು ಹೇಳಿದರು. ನಮ್ಮ ಸಂವಿಧಾನದಲ್ಲಿಯು 47ನೇ ಅನುಚ್ಛೇದದಲ್ಲಿಯೂ ಹೇಳಿದ್ದಾರೆ ಅದು ನಿಜ. ಹಾಗೆಯೇ ನಮ್ಮ ರಾಜ್ಯಾಂಗದಲ್ಲಿಯು ಶಿಕ್ಷೆಯ ಕೊಡುವ ಬಗ್ಗೆ ಹೇಳಿದ್ದೇವೆ. ಆದರೆ ನಮ್ಮ ರಾಜ್ಯ ಸರ್ಕಾರ ಕರ್ನಾಟಕ ರಾಜ್ಯದ ವ್ಯವಸ್ಥೆಯೊಳಗೆಡ, ಕರ್ನಾಟಕ ಜನಜೀವನದ ರೀತಿಯಲ್ಲಿ ಕರ್ನಾಟಕ ಗುಡ್ ಹ್ಯಾಬಿಟ್ ಪ್ರಕಾರ, ಕರ್ನಾಟಕದ ಜನ ನಡೆದುಕೊಂಡು ಬಂದಿರತಕ್ಕಂತಹ ರೀತಿ ನೀತಿಯಗಳ ಪ್ರಕಾರ ಬಹಳ ಆಲೋಚನೆಯನ್ನು ಮಾಡಿ ಈ ವಿಚಾರಕ್ಕೆ ಕೈ ಹಾಕಬೇಕು. ಏಕೆಂದರೆ ಲಕ್ಷಾಂತರ ಜನರು ಇದರಲ್ಲಿ.... ಸರಿ ಈ ಪಾನನಿರೋಧವನ್ನು ಮಾಡಬಾರದು ಎನ್ನತಕ್ಕೂಥದ್ದಕ್ಕೆ ನನ್ನ ಅನಿಸಿಕೆ ಏನೂ ಇಲ್ಲ, ನಾವು ಮಾಡುತ್ತಾ ಇರತಕ್ಕಂಥವು ಎರಡು. ಇಂಡಿಯನ್ ಮೇಕ್ ಲಿಕ್ಕರ್ಸ್ ಏನಿದೆ ಅದನ್ನು ನಾವು ಇಲ್ಲಿ ರದ್ದು ಮಾಡುತ್ತಿಲ್ಲ, ನಾವು ಏನ್ನನ್ನು ಕುಡಿಯುತ್ತೇವೆ ಅದನ್ನು ರದ್ದು ಮಾಡುತ್ತಿಲ್ಲ.ಈಗ ನಾವು ಯಾವುದನ್ನು ರದ್ದು ಮಾಡಲಿಕ್ಕೆ ಹೊರಟಿದ್ದೇವೆ ಎಂದರೆ ನಮ್ಮ ಹಳ್ಳಿಗಾಡಿನಲ್ಲಿಯೇ ತಯಾರು ಮಾಡಿ ಕುಡಿದು ಬಹಳಷ್ಟು ತೊಂದರೆಗೆ ಸಿಕ್ಕಿಕೊಂಡಿದ್ದಾರೆ ಆ ಜನರು ಕುಡಿಯುವುದನ್ನು ರದ್ದು ಮಾಡಬೇಕು ಎಂದು ಇದೆ. ಇದರ ಬಗ್ಗೆ ತಾತ್ವಿಕವಾಗಿ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಆದರೆ ವಾಸ್ತವಾಂಶವನ್ನು ನಾವು ಸ್ಟಡಿ ಮಾಡಬೇಕು. ಇದರಲ್ಲಿ ವಾಸ್ತವಾಂಶ ಆರ್ಥಿಕ ವಿಚಾರ ಒಂದೇ ಅಲ್ಲ, ಎಲ್ಲಾ ಇಂಡಿಸ್ಟ್ರೀಯಲ್ ಆಕ್ಟಿವಿಟೀಸ್ ಆಂಧ್ರ ಪ್ರದೇಶದಲ್ಲಿ ನೀವು ನೋಡಬೇಕು. ಅಲ್ಲಿ ಒಂದು ದಿವಸಕ್ಕೆ ಎಷ್ಟು ವರಮಾನ ಬರುತ್ತಿತ್ತು, ಈಗ ಎಷ್ಟು ವರಮಾನ ಬರುತ್ತಿದೆ ಎಂಬುದನ್ನು ಕೋಲಾರದಲ್ಲಿ ಅಥವಾ ಕೋಲಾರದ ಗಡಿಪ್ರದೇಶದಲ್ಲಿ ಆಂಧ್ರದವರು ಬಂದು ಅಲ್ಲಿಂದ ಕಳ್ಳಭಟ್ಟಿ ಮತ್ತೊಂದು ವಗ್ಗೆರೆ ಎಲ್ಲಾವು ಪ್ರಾರಂಭವಾಗಿರುವುದನ್ನು ಗಣನೆಗೆ ತೆಗೆದುಕೊಳ್ಳಬೇಕು. ಪೂರ್ವಭಾವಿಯಾಗಿ ಯಾವ ಜಿಲ್ಲೆಯನ್ನು ಚೂಜ್ ಮಾಡಿಕೊಳ್ಳಬೇಕು ಅದನ್ನು ಗಣನೆಗೆ ತೆಗೆದುಕೊಳ್ಳಬೇಕು. ಅಷ್ಟು ದಿಢೀರನೆ ಈ ವಿಷಯಕ್ಕೆ ಕೈ ಹಾಕಿ, ಇಡೀ ಆಯವ್ಯಯದ ಮೇಲೆ ಇಡೀ ಆರ್ಥಿಕ ವ್ಯವಸ್ಥೆಯನ್ನು ಎಲ್ಲವನ್ನೂ ಹಾಳುಮಾಡಿಕೊಳ್ಳತಕ್ಕಂತಹ ಕೆಲಸಕ್ಕೆ ಕೈಯನ್ನು ಹಾಕುವುದಕ್ಕೆ ಬದಲಾಗಿ, ಬಹಳ ಎಚ್ಚರಿಕೆಯಿಂದ ಇದನ್ನು ವಿಚಾರ ಮಾಡಬೇಕಾಗಿರುತ್ತದೆ.

ಅದಕ್ಕೆ ನಾನು ಸಲಹೆ ಮಾಡುವುದೇನೆಂದರೆ ಒಂದು ಕಮಿಟಿಯನ್ನು ಮಾಡಿ ನಮ್ಮ ಯಾರೋ ಒಬ್ಬರು ಸ್ವಾಮೀಜಿಯವರು ಭಾಷಣವನ್ನು ಮಾಡಿದರು. ಪಾನನಿರೋಧವನ್ನು ಜಾರಿಗೆ ತರಲೇಬೇಕು, ಮತ್ತು ಇದನ್ನು ಜಾರಿಗೆ ಮಾಡಲೇಬೇಕು

ಎಂದು ಹೇಳುತ್ತಾರೆ ಹೇಳುವುದು ಸುಲಭ. ಆದರೆ ನಾನು ಜಾರಿ ಮಾಡಬಾರದು ಎಂದು ಹೇಳತಕ್ಕಂಥದ್ದು ಅಲ್ಲ, ತಲತಲಾಂತರದಿಂದ ಬಂದಿರತಕ್ಕಂತಹ ಈ ವ್ಯವಸ್ಥೆಯನ್ನು ದಿಢೀರ್ ಮುಚ್ಚಬೇಕಾದರೆ, ನಾವು ದಿಢೀರ್ ತೀರ್ಮಾನವನ್ನು ತೆಗೆದುಕೊಳ್ಳಬೇಕೆ? ಎನ್ನುವುದನ್ನು ನಾವು ಆಲೋಚನೆಯನ್ನು ಮಾಡಿ, ಇದು ನಮ್ಮ ಆಡಳಿತದ ಮೇಲೆ ಎಷ್ಟು ಕೆಟ್ಟ ಪರಿಣಾಮವನ್ನು ಬೀರುತ್ತದೆ, ನಮ್ಮ ಸಾಮಾಜಿಕ ವ್ಯವಸ್ಥೆಯ ಮೇಲೆ ಎಷ್ಟು ಕೆಟ್ಟ ಪರಿಣಾಮ ಬೀರುತ್ತದೆ, ನಮ್ಮ ಇಂಡಸ್ಟ್ರೀಯಲ್ ಆಕ್ಟಿವಿಟಿ ಎಷ್ಟು ಹಾಳಾಗುತ್ತದೆ, ನಮ್ಮ ಇತರೇ ಆಕ್ಟಿವಿಟಿ ಎಷ್ಟು ಹಾಳಾಗುತ್ತದೆ, ಹೆಲ್ತ್ ಎಷ್ಟು ಹಾಳಾಗುತ್ತದೆ, ಫೈನಾನ್ಷಿಯಲ್ ಆಸ್ಪೆಕ್ಟ್ ಏನು? ಸೋಷಿಯಲ್ ಆಸ್ಪೆಕ್ಟ್ ಏನು? ಇವೆಲ್ಲವನ್ನು ಸಮಗ್ರವಾಗಿ, ಪ್ರತಿ ಜಿಲ್ಲೆಗೆ ಒಂದೊಂದು ತರಹ ಇದೆ. ಒಂದೊಂದು ರೀತಿಯಲ್ಲಿ ಇದೆ ಮಲೆನಾಡು ಪ್ರದೇಶಕ್ಕೆ ಒಂದು ರೀತಿಯಲ್ಲಿ ಇದೆ, ಬಯಲು ಸೀಮೆಗೆ ಒಂದು ರೀತಿಯಲ್ಲಿ ಇದೆ, ಡ್ರಿಕಿಂಗ್ ಹ್ಯಾಬಿಟ್ಸ್ ಇದೆ. ಒಂದೊಂದು ಜನರು ಒಂದೊಂದು ಹ್ಯಾಬಿಟ್ಸ್‌ನ್ನು ಇಟ್ಟುಕೊಂಡಿದದಾರೆ. ಆದ್ದರಿಂದ ಈ ಎಲ್ಲವನ್ನು ಆಲೋಚನೆಯನ್ನು ಮಾಡಿ, ಒಂದು ತಜ್ಞರ ಸಮಿತಿಯನ್ನು ನೇಮಿಸಿ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿ ಈ ಪಾನನಿರೋಧವನ್ನು ಮಾಡುವುದರಿಂದ ಅನುಕೂಲಗಳು ಎಷ್ಟು? ಅನಾನುಕೂಲಗಳು ಎಷ್ಟು? ಎನ್ನತಕ್ಕಂಥಾದ್ದನ್ನು ನೀವು ಸಮಗ್ರವಾಗಿ ಯೋಚನೆಯನ್ನು ಮಾಡಿ ನೀವು ಕೈ ಹಾಕಬೇಕು. ಅಷ್ಟು ಸುಲಭವಾಗಿ ಈ ವಿಷಯಕ್ಕೆ ಕೈ ಹಾಕಬಾರದು ಎಂದು ನಾನು ಸಲಹೆಯನ್ನು ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಈಗ ಬಹುಶಃ ಇದರ ಬಗ್ಗೆ ಚಿಂತನೆ ನಡೆದಿರಬೇಕು. ಪಾನನಿರೋಧರನ್ನು ಜಾರಿಗೆ ತರಬೇಕೋ ಅಥವಾ ಬೇಡವೋ ಎನ್ನುವುದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿ ಅದಕ್ಕೆ ತಮ್ಮನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಏಕೆಂದರೆ ಈ ಗ್ರಾನೈಟ್ ಕಳ್ಳ ಸಾಗಾಣಿಕೆ ಈ ಒಂದು ಅವ್ಯವಹಾರವನ್ನು ಸನ್ಮಾನ್ಯ ಶ್ರೀ ಕೆ.ಎನ್. ನಾಗೇಗೌಡರು ನೋಡಿಕೊಳ್ಳಬೇಕೆಂದು ನಮ್ಮ ಆಸೆ ಇತ್ತು. ತಾವು ಅಲ್ಲಿ ಕುಳಿತಿರುವಾಗ ಸತ್ಯಸಂಗತಿ ಹೊರ ಬರುತ್ತದೆಂದು ಇನ್ನು ನಿರೀಕ್ಷೆ ಮಾಡುತ್ತಿದ್ದೇವೆ, ಆದರೆ ಅದರ ಬಗ್ಗೆ ಯಾರಿಗೂ ನಂಬಿಕೆ ಇಲ್ಲ ಎನ್ನುವಂತಹ ಪರಿಸ್ಥಿತಿಯು ಕಾಣುತ್ತಿದೆ. ಆದುದರಿಂದ ಪಾನನಿಷೇಧವನ್ನು ಮಾಡತಕ್ಕಂತಹ ಒಂದು ಸಮಿತಿಯನ್ನೂ ಸಹ ಮುಂದಿನ ವಿಧಾನ ಸಭಾ ಚುನಾವಣೆಯವರೆಗೆ ತಳ್ಳುವಂತಹ ಒಂದು ಪ್ರಯತ್ನವೇ? ಅಥವಾ ರಾಜ್ಯಪಾಲರ ಭಾಷಣದಲ್ಲಿ ಗೊತ್ತಿಲ್ಲದೆ ಆ ಪದ ಬಂತೆ? ಅದನ್ನು ಸ್ಪಷ್ಟ ಮಾಡಿದರೆ ಆಡಳಿತ ಪಕ್ಷದವರು ಮಾತನಾಡಿದಾಗ ನಾವು ಕೂಡ ಮಾತನಾಡುವುದಕ್ಕೆ ತುಂಬಾ ಅನುಕೂಲವಾಗುತ್ತದೆ. ಏಕೆಂದರೆ ಈಗ ವಿರೋಧಪಕ್ಷ ನಾವು ಕುಳಿತುಕೊಂಡು ಏನು ಮಾತನಾಡಬೇಕೋ ಅಂಥ ಅನೇಕ ಸತ್ಯಸಂಗತಿಗಳನ್ನು ತಾವು ಹೇಳುತ್ತಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಾವು ಈ ಬಗ್ಗೆ ಮಾತನಾಡುವ ಅಗತ್ಯವೇ ಬರುವುದಿಲ್ಲ, ನೀವು ಮಾತನಾಡಿದ್ದಕ್ಕೆ ಸರ್ಕಾರ ಉತ್ತರವನ್ನು ಕೊಟ್ಟರೆ ಸಾಕು. ಅದಕ್ಕೆ ಪಾನನಿಷೇಧದ ಬಗ್ಗೆ ನಿಮ್ಮ ಪಕ್ಷದ ನಿಲುವು ಏನು? ರಾಜ್ಯಪಾಲರ ಭಾಷಣದಲ್ಲಿ ತಾವು ಹೇಳಿಸಿರುವಂಥದ್ದು ಸತ್ಯಕ್ಕೆ ದೂರವಾಗಿರತಕ್ಕಂತಹ ಸಂಗತಿಯೇ? ಅದನ್ನು ಸ್ಪಷ್ಟ ಮಾಡಿದರೆ ಒಳ್ಳೆಯದು ಆಗುತ್ತದೆ.

ಶ್ರೀ ಕುಂಬ್ಳೆ ಸುಂದರರಾವ್ : ನಾವು ಕುಡಿಯುವುದು ಎಂದು ಹೇಳಿದ್ದಾರೆ. ನಾವು ಯಾರು ಕುಡಿಯುತ್ತಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಈ ಬಗ್ಗೆ ಇನ್ನೂ ಯಾವ ನಿಲುವುವನ್ನು ತೆಗೆದುಕೊಂಡಿಲ್ಲ, ರಾಜ್ಯಪಾಲರ 42ನೇ ಪ್ಯಾರವನ್ನು ಓದಿದರೆ ತಮಗೆ ಗೊತ್ತಾಗುತ್ತದೆ. "ನಮ್ಮ ಸಂವಿಧಾನವನ್ನು ಅಡಕವಾಗಿರುವ ರಾಜ್ಯ ಕಾರ್ಯ ನೀತಿಯ ನಿರ್ದೇಶಕ ತತ್ವಗಳ 47ನೇ ಅನುಚ್ಛೇದದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು,

ರಾಜ್ಯದಲ್ಲಿ ಪಾನನಿರೋಧವನ್ನು ಪುನಃ ಜಾರಿಗೊಳಿಸಲು ನನ್ನ ಸರ್ಕಾರ ಗಂಭೀರವಾಗಿ ಆಲೋಚಿಸುತ್ತಿದೆ" ಇದು ತೀರ್ಮಾನವಲ್ಲ. ಹಾಗೆ ಆಲೋಚಿಸುವಾಗ ನಾನು ಹೇಳುತ್ತಿದ್ದೇನೆ ನಮ್ಮ ಸರ್ಕಾರಕ್ಕೆ ಗಂಭೀರವಾಗಿ ಆಲೋಚನೆಯನ್ನು ಮಾಡಲಿ ಎಂದು ಇನ್ನೂ ಸ್ವಲ್ಪ ಒತ್ತಿ ಹೇಳಿದ್ದೇನೆ. ಅಷ್ಟೇ ಗಂಭೀರವಾಗಿ ಆಲೋಚನೆಯನ್ನು ಮಾಡಬೇಕೆಂದು ಹೇಳಿದ್ದೇನೆ ಇನ್ನೂ ಏನು ಇಲ್ಲ.

ಶ್ರೀ ಕುಂಬ್ಳೆ ಸುಂದರ ರಾವ್ : ಆಲೋಚನೆಯನ್ನು ಮಾಡುವುದು ಬೆಳಿಗ್ಗೆ ಅಥವಾ ಸಂಜೆಯೋ? ಗೊತ್ತಿಲ್ಲ.

ಶ್ರೀ ಎಂ. ಶ್ರೀನಿವಾಸ್ : ಬಹಳ ಚೆನ್ನಾಗಿದೆ, ಎಲ್ಲವನ್ನೂ ಆಲೋಚನೆ ಮಾಡುವುದು. 20 ಲಕ್ಷ ಸೈಟ್‌ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಅದು ಇದುವರೆಗೂ ಆಲೋಚನೆಯಲ್ಲಿಯೇ ಇದೆಯೇ ಹೊರತು ಇನ್ನು ಜಮೀನನ್ನು ತೆಗೆದುಕೊಂಡಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಸ್ವಾಮಿ 20 ಲಕ್ಷ ಸೈಟ್‌ಗಳನ್ನು ಹಂಚುವ ಕೆಲಸ ನಿಮ್ಮ ಕ್ಷೇತ್ರದಲ್ಲಿಆಗದೇ ಇರಬಹುದು, ನನ್ನ ಕ್ಷೇತ್ರದ ಬಗ್ಗೆಯೇ ಹೇಳುತ್ತೇನೆ. ನಾನು ಆಗಲೇ ಭಾಷಣವನ್ನು ಮಾಡುತ್ತಾ ಹೇಳಿದೆ, 17 ಲಕ್ಷ ಜನರಿಗೆ ಸೈಟ್ ಕೊಡಬೇಕೆಂದು ಹೇಳಿ ಸರ್ವೆನಲ್ಲಿ ಆಗಿದೆ. ಒಂದೇ ವರ್ಷದಲ್ಲಿ 17 ಲಕ್ಷ ಸೈಟುಗಳನ್ನು ಕೊಟ್ಟು ಬಿಡುತ್ತೀರೋ? ಆದರೆ ಒಂದೇ ವರ್ಷದಲ್ಲಿ 17 ಲಕ್ಷ ಜನರಿಗೆ ಸೈಟುಗಳನ್ನು ಕೊಡಿ ಎಂದರೆ ಬಹಳ ಸಂತೋಷ ಸ್ವಾಮಿ. ಅದರಲ್ಲಿ ನನ್ನದು ಏನೂ ಅಭ್ಯಂತರವಿಲ್ಲ ಸ್ವಾಮಿ. ಯಾವುದೇ ಸರ್ಕಾರಕ್ಕೆ ಒಂದು ಇತಿಮಿತಿಗಳು ಇರುತ್ತವೆ. ಆ ಇತಿಮಿತಿಯ ಒಳಗಡೆ ಆ ಹಣಕಾಸಿನ ವ್ಯವಸ್ಥೆಯ ಒಳಗಡೆ ಎಷ್ಟು ಮಾಡಬಹುದೋ ಅಷ್ಟು ಮಾಡಬಹುದು. ನನ್ನ ಅನಿಸಿಕೆಯನ್ನು ಹೇಳುವುದಾದರೆ ಶ್ರೀ ದೇವರಾಜ ಅರಸುರವರು ಇದ್ದಾಗ ನಮ್ಮ ಒಂದು ಜಿಲ್ಲೆಗೆ ಒಂದು ವರ್ಷಕ್ಕೆ 10 ಸಾವಿರ ಸೈಟುಗಳನ್ನು ಕೊಡುವುದಕ್ಕೆ ಆಗಲಿಲ್ಲ. ಶ್ರೀನಿವಾಸ್‌ರವರೇ 10 ಸಾವಿರ ಸೈಟುಗಳನ್ನು ಕೊಡುವುದಕ್ಕೆ ಆಗಲಿಲ್ಲ.

ಶ್ರೀ ಎಂ ಶ್ರೀನಿವಾಸ್ : ಮಾನ್ಯ ಉಪಾಧ್ಯಕ್ಷರೆ, 80 ಲಕ್ಷ ಸೈಟುಗಳ ಹಂಚಿಕೆಯಲ್ಲಿ ಆಗಿರತಕ್ಕಂಥ ಅವ್ಯವಹಾರದ್ದನ್ನೇ ಇನ್ನು ವಜಾ ಮಾಡುವುದಕ್ಕೆ ಒಂದು ವರ್ಷ ಮೂರು ತಿಂಗಳುಗಳು ಆಗಿದೆ ಇನ್ನೂ ಆಗಿಲ್ಲ. ಶ್ರೀ ನಾಗೇಗೌಡರೆ 80 ಲಕ್ಷ ಸೈಟುಗಳ ಅವ್ಯವಹಾರವನ್ನು ವಜಾ ಮಾಡುವುದಕ್ಕೆ ಆಗಿಲ್ಲ. ಹೊಸದು ಕೊಡುವುದು ಅಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಎರಡು ರೀತಿಯಾದಂತಹ ವ್ಯವಹಾರವಿದೆ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಉಪಾಧ್ಯಕ್ಷರೆ, ಪ್ರಮಾಣಿಕತೆ ಎಷ್ಟು ಇದೆ ಎಂದರೆ, ನಗರದ ಪ್ರದೇಶದಲ್ಲಿ ಒಂದು ಎಕ್ಕರೆ ಭೂಮಿಯನ್ನು ಅಕ್ವೈರ್ ಮಾಡಲಿಕ್ಕೆ, ಸರ್ಕಾರದ ಸುತ್ತೋಲೆಯ ಪ್ರಕಾರ ಒಂದು ಲಕ್ಷ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದಾರೆ. ಸ್ವಾಮಿ ಒಂದು ಲಕ್ಷ ರೂಪಾಯಿಗಳಲ್ಲಿ ನಗರ ಪ್ರದೇಶದಲ್ಲಿ ಒಂದು ಎಕ್ಕರೆ ಭೂಮಿಯನ್ನು ತೆಗೆದುಕೊಟ್ಟರೆ ನಾನು ಬಹಳ ಧನ್ಯ. ಇದು ಕ್ರಮವೇ?

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಎರಡು ಮೂರು ರೀತಿಯ ಅವ್ಯವಹಾರ ಇದೆ. ಈಗ ಗ್ರಾಮೀಣ ಪ್ರದೇಶಗಳಲ್ಲಿ ಸೈಟುಗಳು ಸಿಗುವಂಥದ್ದು ಬಹಳ ಸುಲಭವಾಗಿರತಕ್ಕಂತಹ ವಿಚಾರ. ಶ್ರೀ ಶ್ರೀನಿವಾಸ್‌ರವರು ಹೇಳಿದರಲ್ಲ ಆ

ಕ್ಷೇತ್ರಗಳು ಬಹಳ ಕಠಿಣವಾಗಿರುವುದು. ಕಾರಣ ಏನು ಎಂದು ಹೇಳಿದರೆ, ಈ ಜಮೀನಿನ ಬೆಲೆಯೂ ಹಾಗೆಯೇ ಇದೆ. ಆ ಜಮೀನು ವ್ಯವಹಾರವನ್ನು ಮಾಡುವವರ ಹಾಗೆಯೇ ಇದ್ದಾರೆ. ಆ ರೀತಿಯಾದಂತಹ ವ್ಯವಹಾರಗಳು ಆ ಕ್ಷೇತ್ರದಲ್ಲಿದ್ದಾವೆ. ಈ ಕ್ಷೇತ್ರಗಳಲ್ಲಿ ದುಡ್ಡಿಗೆ ಬೆಲೆ ಇಲ್ಲ, ಸೈಟುಗಳಿಗೆ ಬೆಲೆ ಇದೆ. ಆದುದರಿಂದ ನಾನ ಒಂದು ಸಲಹೆಯನ್ನು ಸರ್ಕಾರಕ್ಕೆ ಮಾಡುತ್ತೇನೆ, ಖಂಡಿತವಾಗಿ ಬಿ.ಡಿ.ಎ. ಯನು ಸಕ್ರ್ಯಾಪ್ ಮಾಡಬೇಕು ಎನ್ನುವುದೇ ನಮ್ಮ ಅನಿಸಿಕೆ. ಮಾನ್ಯ ಉಪಾಧ್ಯಕ್ಷರೇ, ಬಿ.ಡಿ.ಎ ಯಿಂದ ಕಳೆದ 10 ವರ್ಷಗಳಿಂದ ಯಾವುದೇ ಪ್ರಯೋಜನಗಳೂ ಸಹ ಆಗಿಲ್ಲ. ಸುಮಾರು 70-80 ಸಾವಿರ ಜನ ಬೆಂಗಳೂರಿನಲ್ಲಿ ಸೈಟಿಗೋಸ್ಕರವಾಗಿ ಅರ್ಜಿಯನ್ನು ಹಾಕಿ ಇವತ್ತು ಸೈಟಿಗೋಸ್ಕರವಾಗಿ ಕುಳಿತಿದ್ದಾರೆ. ಹತ್ತಾರು ವರ್ಷಗಳಿಂದ ಒಂದು ಸೈಟ್ ಅಲಾಟ್ ಮಾಡಲಿಕ್ಕೆ ಆಗಲಿಲ್ಲ ನನ್ನ ಕೈಯಲ್ಲಿ. ಆದುದರಿಂದ ಇದಕೆ ಬದಲಾಗಿ ಹೌಸ್ ಬಿಲ್ಡಿಂಗ್ ಕೋ-ಅಪರೇಟಿವ್ ಸೊಸೈಟಿಗಳಿದ್ದಾವೆ, ಅವರಿಗೆ ನೀವು ಬಲ್ಕ್ ಜಾಗವನ್ನು ತೆಗೆದುಕೊಂಡು ಸೈಟ್‌ಗಳನ್ನು ಮಾಡಿ ಎಂದು ಬಿಟ್ಟಿದ್ದರೆ ಇಷ್ಟರೊಳಗಡೆ ಬೆಂಗಳೂರಿನಲ್ಲಿ ಲಕ್ಷಾಂತರ ಜನರಿಗೆ ಸೈಟುಗಳು ಸಿಗುತ್ತಿತ್ತು. ಇಷ್ಟು ಒತ್ತಡ ಇರುತ್ತಲೇ ಇರಲಿಲ್ಲ. ಈ ಬೆಂಗಳೂರು ನಗರದಲ್ಲಿ ಆಗಲಿ, ಅಥವಾ ನಿಮ್ಮ ಉತ್ತರ ಹಳ್ಳಿಯಲ್ಲಿ ಆಗಲಿ, ಅಥವಾ ಈ ಕಡೆ ಜನರಿಗೆ ಸೈಟುಗಳು ಸಿಗುತ್ತಿದ್ದವು. ಈ ಬಿ.ಡಿ.ಎ.ನಿಂದ ಏನೂ ಪ್ರಯೋಜನವಾಗುವುದಿಲ್ಲ. ಅದಕ್ಕೆ ನಾನು ಒಂದು ಸಲಹೆ ಮಾಡುವುದೇನೆಂದರೆ ಬಿ.ಡಿ.ಎ. ಯನ್ನು ಸಕ್ರ್ಯಾಪ್ ಮಾಡಬೇಕು. ಇದನ್ನು ನಾವು ಸುಮಾರು 5-6 ವರ್ಷದಿಂದ ಹೇಳುತ್ತಾ ಬಂದಿದ್ದೇವೆ. ಈ ಬಿ.ಡಿ.ಎ. ಎನ್ನುವುದು ಒಂದು ಬಿಳಿ ಆನೆ ಇದ್ದಂತಿದೆ, ಇದರಿಂದ ಯಾವುದೇ ಪ್ರಯೋಜನವೂ ಇಲ್ಲ, ಇದನ್ನು ತೆಗೆದುಹಾಕಿ ಜನರಿಗೆ ಬೇರೆ ರೀತಿಯಲ್ಲಿ ಸೈಟುಗಳನ್ನು ಹಂಚುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿದ್ದೇವೆ. ಬಡಜನರಿಗೆ ಸೈಟುಗಳನ್ನು ಕೊಡಲು 17 ಲಕ್ಷ ಜನರನ್ನು ಏನು ಗುರ್ತಿಸಿದಿದ್ದಾರೆ ಅವರಿಗೆ ಸೈಟನ್ನು ಕೊಡಬೇಕಾದರೆ ಅದಕ್ಕೆ ತಕ್ಕಂತೆ ಹಂತ ಹಂತವಾಗಿ ಜಮೀನೂ ಕೂಡ ಸಿಕ್ಕಬೇಕು. ಉದಾಹರಣೆಗೆ ಹೇಳುವುದಾದರೆ ಇವತ್ತು ನಮ್ಮ ಮಂಡ್ಯ ಜಿಲ್ಲೆಯಲ್ಲಿ ಅರ್ಧ ಎಕರೆ ಜಮೀನು ಸಿಕ್ಕಬೇಕೆಂದರೆ ಅತ್ಯಂತ ಕಠಿಣವಾಗಿದೆ. ಕನಿಷ್ಠ 20 ಗಂಟೆ ಜಮೀನೂ ಕೂಡ ಸಿಕ್ಕುವುದಿಲ್ಲ, ಅಷ್ಟೊಂದು ಒತ್ತಡ ಇರುವುದನ್ನು ನಾವು ನೋಡಿದ್ದೇವೆ. ತಾವು ಹೇಳುವಂತೆ ಈ ಎಲ್ಲಾ ಕೆಲಸವನ್ನೂ ಒಂದೇ ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ ಹಿಂದಿನ ಸರ್ಕಾರಕ್ಕೆ ಇದನ್ನು ಹೋಲಿಕೆ ಮಾಡಿನೋಡಿದರೆ ಒಂದು ವರ್ಷದಲ್ಲಿ ಅದರಲ್ಲೂ ಕಳೆದ 7-8 ತಿಂಗಳಲ್ಲಿ ಅತ್ಯಂತ ದೊಡ್ಡ ಸಾಧನೆಯನ್ನು ಈ ಸರ್ಕಾರ ಮಾಡಿದೆ. ಈ ಜನತಾ ಸರ್ಕಾರ ಎಲ್ಲಾ ರಂಗದಲ್ಲೂ ಅತ್ಯಂತ ಉತ್ತಮ ಕೆಲಸವನ್ನು ಮಾಡಿಗೆ ಎಂದು ಹೇಳಬಯಸುತ್ತೇನೆ. ಇದರ ಜೊತೆಗೆ ಇನ್ನು ಮುಂದೆಯೂ ಕೂಡ ಹೆಚ್ಚಿನ ಕೆಲಸವನ್ನು ಈ ಸರ್ಕಾರ ಮಾಡುವುದಕ್ಕೆ ಮುಂದಾಗಬೇಕೆಂದು ಹೇಳಿ ಇವತ್ತು ಮಾನ್ಯ ರಾಜ್ಯಪಾಲರಿಗೆ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸುವ ಕೆಲಸವನ್ನು ನಮ್ಮ ಆಡಳಿತ ಪಕ್ಷದವರು ನನಗೆ ವಹಿಸಿದ್ದಕ್ಕೆ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತಾ ಅದೇ ರೀತಿ ಇಲ್ಲಿ ನಾಲ್ಕಾರು ವಿಚಾರಗಳನ್ನು ಪ್ರಸ್ತಾಪಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೂ ಕೂಡ ನನ್ನ ವಂದನೆಗಳನ್ನು ಸಲ್ಲಿಸುತ್ತಾ ತಮ್ಮ ಮೂಲಕ ಮಾನ್ಯ ರಾಜ್ಯಪಾಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಕೆ. ಶರಣಪ್ಪ (ಕುಷ್ಟಗಿ) : ಸನ್ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ನಾಗೇಗೌಡರು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಮರ್ಪಿಸುವ

ಬಗ್ಗೆ ಬಹಳ ದೀರ್ಘವಾಗಿ ಇಲಾಖಾವಾರು ಚರ್ಚೆ ಮಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಮಾಡಿದ್ದಾರೆ. ನಿಜವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವಾಸ್ತವಿಕತೆ ಹೆಚ್ಚು ಇದ್ದು ಈ ಸಭೆ ಅದಕ್ಕೆ ತನ್ನ ವಂದನಾರ್ಪಣೆ ಮಾಡುವುದಕ್ಕೆ ಯೋಗ್ಯವಾಗಿದೆ ಎಂದು ನನ್ನ ಇಚ್ಛೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಈ ಸರ್ಕಾರಿ ತನ್ನ ಒಂದು ವರ್ಷದ ಅವಧಿಯಲ್ಲಿ ಯಾವುದೇ ಹಗರಣವೂ ಇಲ್ಲದೆ ಇದ್ದುದೇ ಒಂದು ಸಾಧನೆ ಎಂದು ಹೇಳಬಹುದು. ಇದರ ಜೊತೆಗೆ ಎಲ್ಲಾ ರಂಗದಲ್ಲೂ ತನ್ನ ಸಾಧನೆಯನ್ನು ಮಾಡಿದೆ ಎಂದರೆ ಅದು ತಪ್ಪಾಗಲಿಕ್ಕಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಶ್ರೀಮತಿ ಲಲಿತಾ ನಾಯಕ್‌ರವರನ್ನು ಮನೆಗೆ ಕಳುಹಿಸಿಬಿಟ್ಟಿರಲ್ಲಾ ಅದು ಹಗರಣವಲ್ಲವೆ?

ಶ್ರೀ ಕೆ. ಶರಣಪ್ಪ : ಈಗಾಗಲೇ ನಮ್ಮ ಮಾನ್ಯ ಹಿರಿಯ ಸದಸ್ಯರು ಮಾತನಾಡುತ್ತಾ ಹೇಳಿದ್ದಾರೆ. ಜನತಾ ದರ್ಶನದ ಬಗ್ಗೆ ಪತ್ರಿಕೆಗಳಲ್ಲಿ ಸಾಕಷ್ಟು ಟೀಕೆ ಟಿಪ್ಪಣಿಗಳು ಬಂದಿದ್ದನ್ನು ನಾವು ನೋಡಿದ್ದೇವೆ. ಆದರೆ ವಾಸ್ತವಾಂಶ ಆ ರೀತಿ ಅದು ಇಲ್ಲ. ಜನತಾ ದರ್ಶನದ ಪರಿಣಾಮ ಏನೆಂದರೆ ಹಿಂದೆ ಸರ್ಕಾರ ಮತ್ತು ಜನರ ನಡುವೆ ಏನು ಅಂತರ ಹೆಚ್ಚಾಗಿತ್ತು ಅದು ಕಡಿಮೆ ಆಗಿರುವುದು. ಜನತಾ ದರ್ಶನದ ಫಲವಾಗಿ ಕೆಲವು ಕೆಲಸ ಆಗಿರಬಹುದು, ಇನ್ನು ಕೆಲವು ಕಡೆ ಕೆಲಸಗಳು ಆಗಿರದಿರಬಹುದು. ಆದರೆ ಇದರ ಪರಿಣಾಮದಿಂದ ಸರ್ಕಾರ ಮತ್ತು ಜನತೆಯ ನಡುವೆ ಇದ್ದಂಥ ಅಂತರ ಮಾತ್ರ ಕಡಿಮೆಯಾಗಿದೆ. ನನ್ನ ಕ್ಷೇತ್ರದಲ್ಲಿ ಬಹಳ ಕಾಲದಿಂದ ಪರಿಹಾರವನ್ನೇ ಕಾಣದಿರಂಥ ಸಮಸ್ಯೆಗಳು ಪರಿಹಾರವನ್ನು ಕಂಡಿರುವಂಥ ಉದಾಹರಣೆಯಾಗಿವೆ. ಜನತಾ ದರ್ಶನ ಫಲದಿಂದಾಗಿ ಸರ್ಕಾರ ಜನರ ಹತ್ತಿರ ಹೋಗುವುದಕ್ಕೆ ಅನುವು ಮಾಡಿಕೊಟ್ಟಂತಾಗಿದೆ ಎಂಬುದು ನನ್ನ ವೈಯುಕ್ತಿಕ ಅನಿಸಿಕೆ. ಮಾನ್ಯ ನಾಗೇಗೌಡರು ಹೇಳಿದಂತೆ ಕಾವೇರಿ ವಿಚಾರದಲ್ಲಿ ಮಣ್ಣಿನ ಮಗನೆಂದು ಮಾನ್ಯ ಮುಖ್ಯಮಂತ್ರಿಗಳು ನಾಮಾಂಕಿತ ಪಡೆದದ್ದು ಸಾರ್ಥಕವಾಯಿತ ಎಂದು ನಮ್ಮೆಲ್ಲರ ಅನಿಸಿಕೆ. ಇಡೀ ದೇಶದಲ್ಲೇ ಕಾವೇರಿ ವಿಚಾರದಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸಿರತಕ್ಕದ್ದು ನಮ್ಮ ನಿಮ್ಮೆಲ್ಲರಿಗೂ ಮನವರಿಕೆಯಾಗಿದೆ. ಇದೇ ರೀತಿ ನಮ್ಮ ಉತ್ತರ ಕರ್ನಾಟಕದಲ್ಲಿ ಜ್ವಲಂತ ಸಮಸ್ಯೆಯಾದ ಕೃಷ್ಣಾ ನದಿ ನೀರಿನ ಪಾಲಿನ ಬಗ್ಗೆ ನಮ್ಮ ಸರ್ಕಾರ ಸಂಕಲ್ಪ ಮಾಡಿದ್ದು ತಮಗೆಲ್ಲರಿಗೂ ಗೊತ್ತಿದೆ. ಬಚಾವತ್ ವರದಿಯ ಪ್ರಕಾರ 2000ದ ಇಸವಿಯ ಹೊತ್ತಿಗೆ ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಲು ಎಲ್ಲಾ ವ್ಯವಸ್ಥೆಯನ್ನೂ ಸಂಪೂರ್ಣವಾಗಿ ಮಾಡುತ್ತೇವೆಂದು ಮಾಡಿದಂಥ ಸಂಕಲ್ಪ ಕೇವಲ ಸಂಕಲ್ಪ ಮಾತ್ರವಲ್ಲ ಆದರಲ್ಲಿ ಪ್ರಾಮಾಣಿಕತೆ ಮತ್ತು ಪ್ರಯತ್ನ ಎರಡೂ ಇದೆ. ಹಿಂದಿನ ಸರ್ಕಾರದವರು ಅಪ್ಪರ್ ಕೃಷ್ಣಾಕ್ಕೆ ಸಂಬಂಧಪಟ್ಟಂತೆ ಬಲದಂಡೆ ಕಾಲುವೆಯನ್ನು 9 ಕೋಟಿ ರೂ. ನಲ್ಲಿ ಮಾಡುತ್ತೇವೆಂದು ಒಂದು ಶಂಕುಸ್ಥಾಪನೆಯನ್ನು ಮಾಡಿದರು. ಆದರೆ ಅದು ಕಾರ್ಯರೂಪಕ್ಕೆ ಬರಲಿಲ್ಲ. ಇದೇ ಬಲಂದಡೆ, ಕಾಲುವೆಗೆ ಸಂಬಂಧಪಟ್ಟಂತೆ ಇದ್ದಂಥ 2ನೇ ಹಂತದ ಯೋಜನೆಯನ್ನು ಇದೇ ವರ್ಷದಲ್ಲಿ ನಮ್ಮ ಸರ್ಕಾರ ಕಾರ್ಯಾರಂಭ ಮಾಡಿದ್ದು ನಿಜಕ್ಕೂ ಒಂದು ದೊಡ್ಡ ಸಾಧನೆ. ಇದು ನಮ್ಮ ಉತ್ತರ ಕರ್ನಾಟಕಕ್ಕೆ ಒಂದು ಕೊಡುಗೆ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಇದು ಏನನ್ನು ತೋರಿಸುತ್ತದೆಂದರೆ ಸಂಕಲ್ಪದ ಜೊತೆಗೆ ಪ್ರಾಮಾಣಿಕತೆಯ ಪ್ರಯತ್ನವೂ ನಡೆದಿದೆ ಎಂಬುದು ನಮ್ಮೆಲ್ಲರಿಗೂ ಗೊತ್ತಾಗುತ್ತದೆ. ಇದೇ ರೀತಿ ಪುನರ್ವಸತಿಯ ಬಗ್ಗೆ ಕೂಡ ಅಲ್ಲಿಗೆ ಒಬ್ಬ ಉನ್ನತ ಅಧಿಕಾರಿಯನ್ನು ನೇಮಿಸಿ ಸರ್ಕಾರದ ಮಟ್ಟದಲ್ಲಿ ಆಗುವಂಥ ನಿರ್ಣಯಗಳು ಸ್ಥಳೀಯವಾಗಿ ನಿರ್ಣಯವಾಗಿ ಕೆಲಸ ಕಾರ್ಯಗಳು ಚುರುಕಾಗಿ ಆಗುವಂಥ ಪ್ರಯತ್ನ ನಡೆದಿದೆ ಎಂಬುದು ಅಲ್ಲಿ ಕಂಡು ಬರುತ್ತದೆ.

ಇನ್ನು ಹೌಸಿಂಗ್ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ನಾಗೇಗೌಡರು ಮಾತನಾಡುತ್ತಾ ಹೇಳಿದಂತೆ ನಮ್ಮ ಸರ್ಕಾರ ನಿಜವಾಗಿಯೂ ಬಹಳ ದೊಡ್ಡ ಸಾಧನೆಯನ್ನೇ ಮಾಡುತ್ತಾ ಬಂದಿದೆ. ಕಾರ್ಯರೂಪಕ್ಕೆ ಬರುವುದರಲ್ಲಿ ಸ್ವಲ್ಪಮಟ್ಟಿಗೆ ವಿಳಂಬವಾಗಿರಬಹುದು. ತಮಗೆ ಗೊತ್ತಿರುವಂತೆ ಫಲಾನುಭವಿಗಳನ್ನು ಗುರ್ತಿಸುವುದರಲ್ಲಿ ಕೆಲವು ತಾಲ್ಲೂಕು ಪಂಚಾಯಿತಿಗಳು ವಿಫಲವಾಗಿವೆ. ಆದರೂ ಇಲಾಖೆಯು ಮಾಡಿರುವಂಥ ಸಾಧನೆಗಳನ್ನು ಅಲ್ಲಗಳೆಯುವಂತಿಲ್ಲ. ತಮಗೆ ಗೊತ್ತಿರುವಂತೆ ಹೌಸಿಂಗ್ ವಿಚಾರ ಬಹಳ ಅವಶ್ಯಕವಾದುದು. ಇದಕ್ಕಾಗಿಯೇ ಒಂದು ಇಲಾಖೆಯನ್ನು ಪ್ರಾರಂಭಿಸಿ ಅಲ್ಲಿಗೆ ಒಬ್ಬ ಪ್ರಾಮಾಣಿಕ ಮತ್ತು ಹಿರಿಯ ಅಧಿಕಾರಿಯೊಬ್ಬರನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದ್ದು ನಿಜಕ್ಕೂ ದೊಡ್ಡ ಸಾಧನೆ. ಇದರ ಜೊತೆಗೆ ನಮ್ಮ ಉತ್ಸಾಹಿ ತರುಣರಾದ ಮಾನ್ಯ ಸಚಿವರಾದ ಬಸವರಾಜ ರಾಯರೆಡ್ಡಿಯವರೂ ಕೂಡ ಅತ್ಯಂತ ಉತ್ಸಾಹದಿಂದ ಕೆಲಸವನ್ನು ಮಾಡುತ್ತಿದ್ದಾರೆ. ಈ ದಿಸೆಯಲ್ಲಿ ಕಳೆದ ವರ್ಷ ಸರ್ವೆ ಮಾಡಿದಂಥ 19 ಲಕ್ಷ ನಿವೇಶನ ರಹಿತರಿಗೆ ಹಂತಹಂತವಾಗಿ ನಿವೇಶನ ಹಂಚುವ ಸಂಕಲ್ಪವನ್ನು ಮಾಡಿರುವಂಥಾದ್ದು ಕೂಡ ನಮಗೆಲ್ಲಾ ಗೊತ್ತಿದೆ. ಇದೇ ವರ್ಷ ಅಂಬೇಡ್ಕರ್ ಯೋಜನೆ, ಆಶ್ರಯ ಯೋಜನೆ, ಇಂದಿರಾ ಅವಾಸ್ ಯೋಜನೆಯ ಅಡಿಯಲ್ಲಿ 1.20 ಲಕ್ಷ ಮನೆಗಳನ್ನು ಕಟ್ಟಿಸಿಕೊಡುವ ಸಂಕಲ್ಪವನ್ನು ಮಾಡಿದೆ. ಇದನ್ನು ಕೇವಲ ಬಾಯಿ ಮಾತಿನಲ್ಲಿ ಹೇಳದೆ ಬಜೆಟ್‌ನಲ್ಲಿ ತೋರಿಸ್ಸಿದ್ದಂಥ 45 ಕೋಟಿಗೆ ಬದಲು 90 ಕೋಟಿ ರೂ.ಗಳನ್ನು ವಾಸ್ತವವಾಗಿ ಬಿಡುಗಡೆ ಮಾಡಿ ಕಾರ್ಯವನ್ನು ಪ್ರಾರಂಭಿಸಿದೆ. ಇದೇ ರೀತಿ ಬೇರೆ ಬೇರೆ ಇಲಾಖೆಗಳಲ್ಲೂ ಕೆಲಸ ಪ್ರಗತಿಯಲ್ಲಿ ನಡೆಯುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಿಂದೆಂದೂ ಮಾಡದೇ ಇದ್ದಂಥ ಸಾಧನೆ ಇದರಲ್ಲಿ ಮಾಡಿರತಕ್ಕದ್ದು ಕಂಡು ಬರುತ್ತಿದೆ. ಇದುವರೆಗೆ ರಿಸರ್ವೇಷನ್ ಪದ್ಧತಿಯಲ್ಲಿ ಫಲಾನುಬವಿಗಳಿಗೆ ಸೌಲಭ್ಯ ಎಷ್ಟರಮಟ್ಟಿಗೆ ಸಿಕ್ಕಿದೆ, ಅದರ ಪ್ರಯೋಜನವನ್ನು ಆ ವರ್ಗದ ಜನರಿಗೆ ತಲುಪಿಸಲಾಗಿದೆ ಎಂಬ ಬಗ್ಗೆ ಸರ್ವೆ ಕಾರ್ಯ ಕಳೆದ ಅಕ್ಟೋಬರ್ ತಿಂಗಳಲ್ಲಿ ನಡೆದಿರತಕ್ಕದ್ದು ನಿಜವಾಗಿಯೂ ಶ್ಲಾಘನೀಯವಾದುದು.

ಇದೇ ರೀತಿ ಇನ್ನೂ ಅನೇಕ ಇಲಾಖೆಗಳಲ್ಲಿ ಅಂದರೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೃಷಿ ಇಲಾಖೆ ಅನೇಕ ಕೆಲಸಗಳನ್ನು ಮಾಡಿದೆ. ಪಂಚಾಯತ್ ರಾಜ್ ಚುನಾವಣೆ ಸಂದರ್ಭದಲ್ಲಿ ನಾವು ಜನರಿಗೆ ಮಾತು ಕೊಟ್ಟಂತೆ ನಡೆದುಕೊಂಡಿದ್ದೇವೆ. ಹಿಂದಿನ ಸರ್ಕಾರದವರು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಸಾಕಷ್ಟು ಮಾತನಾಡುತ್ತಿದ್ದರು. ಆದರೆ ಅದು ನಿಜವಾಗಿಯೂ ಅಧಿಕಾರ ವಿಕೇಂದ್ರೀಕರಣವಾದುದು ಈ ಚುನಾವಣೆ ಆದನಂತರ ಎಂಬುದು ಎಲ್ಲರಿಗೂ ಅನುಭವಕ್ಕೆ ಬಂತು. ತದನಂತರ ನಮ್ಮ ಸರ್ಕಾರ ಮಾತು ಕೊಟ್ಟಂತೆ Executive Power to the elected bodies ಎಂದು ನಮ್ಮ ಸರ್ಕಾರ ಈಗಾಗಲೇ ಸುಗ್ರೀವಾಜ್ಞೆಯನ್ನೂ ಹೊರಡಿಸಿದೆ. ಅವರಿಗೆ ಅಧಿಕಾರವನ್ನು ಕೊಟ್ಟಿದೆ. ಇದೇ ರೀತಿ ನಿರ್ಮಲ ಗ್ರಾಮ ಯೋಜನೆ, ಇತ್ಯಾದಿ. ಗ್ರಾಮೀಣ ಜನರ ಬಗ್ಗೆ ಅತ್ಯಂತ ಕಳಕಳಿ ಇರುವಂಥ ಸರ್ಕಾರ ಇದು ಎಂದರೂ ತಪ್ಪಾಗಲಿಕ್ಕಿಲ್ಲ. ಎಲ್ಲಾ ರೀತಿಯಿಂದಲೂ ಈ ಸರ್ಕಾರ ತಾನು ನುಡಿದಂತೆ ನಡೆದಿದೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕದ್ದರಲ್ಲಿ ಯಾವುದೂ ಸುಳ್ಳು ಇಲ್ಲ, ಮತ್ತು ವಾಸ್ತವಿಕತೆಗೆ ಅತ್ಯಂತ ಸಮೀಪವಾಗಿದೆ ಎಂಬ ದೃಷ್ಟಿಯಿಂದ ಈ ಸಭೆ ತನ್ನ ವಂದನೆಗಳನ್ನು ಸಲ್ಲಿಸುವುದಕ್ಕೆ ಯೋಗ್ಯವಾಗಿದೆ ಎಂದು ಹೇಳಬಯಸುತ್ತೇನೆ. ಮಾನ್ಯ ಹಿರಿಯ ಸದಸ್ಯರು ಹೇಳಿದಂತೆ ಅರಣ್ಯ ಇಲಾಖೆಯ ಅಭಿವೃದ್ಧಿಯಲ್ಲಿ ಬಹಳಷ್ಟು ಕುಂಠಿತವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ಉತ್ತರ ಕರ್ನಾಟಕ ಬಯಲು ಪ್ರದೇಶವಾಗಿರುವುದರಿಂದ ಅಲ್ಲಿ ಅರಣ್ಯವನ್ನು ಬೆಳೆಸತಕ್ಕದ್ದು ಬಹಳ ಅವಶ್ಯಕತೆ ಇದೆ. ಆ ಭಾಗದಲ್ಲಿ ಮಳೆ ಬೆಳೆ ಇಲ್ಲದೆ ಬಹಳಷ್ಟು

ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಿದ್ದೇವೆಂಬುದನ್ನು ನಾವು, ನಿವೆಲ್ಲರೂ ತಿಳಿದಿದ್ದೇವೆ. ಅಲ್ಲಿ ಅರಣ್ಯವನ್ನು ಬೆಳೆಸಿದರೆ ನಮ್ಮ ಸರ್ಕಾರಕ್ಕೆ ಅದರಿಂದ ಆದಾಯ ಕೂಡ ಬರುತ್ತದೆಂದು ನನ್ನ ಅನಿಸಿಕೆ. ಈ ಇಲಾಖೆಯ ಬಗ್ಗೆ ಇನ್ನೂ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ಚುರುಕಾಗಿ ಕೆಲಸ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯವನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಹಿಂದ್, ಜೈ. ಕರ್ನಾಟಕ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಉಪಾಧ್ಯಕ್ಷರೆ, ರಾಜ್ಯ ವಿಧಾನ ಮಂಡಲದಲ್ಲಿ ಮಾನ್ಯ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ಮಾನ್ಯ ನಾಗೇಗೌಡರು ಸ್ವಲ್ಪ ಸ್ಪಷ್ಟೀಕರಣ ನೀಡಬಹುದು. ಅಲ್ಲಿರುವಂಥ ಕೊರತೆಗಳನ್ನು ತುಂಬುವಂಥ ಕೆಲಸವನ್ನು ಹಿರಿಯ ಸದಸ್ಯರಾದ ಆಡಳಿತ ಪಕ್ಷದ ಮಾನ್ಯ ನಾಗೇಗೌಡರು ಅಥವಾ ಮಾನ್ಯ ಶರಣಪ್ಪನವರು ಮಾಡಬಹುದೆಂದು ನಾನೂ ಸಹ ಕಾದು ಕುಳಿತಿದ್ದೆ. ಬಹುಶಃ ಮಾನ್ಯ ನಾಗೇಗೌಡರು ಬಹಳ ಸೂಕ್ಷ್ಮದಲ್ಲಿ, ಕಡಿಮೆ ಅವಧಿಯಲ್ಲಿ ಸರ್ಕಾರದ ಸಾಧನೆ ಏನೂ ಆಗಿಲ್ಲ ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇನ್ನೊಬ್ಬ ಮಾನ್ಯ ಸದಸ್ಯರಾದ ಶರಣಪ್ಪನವರು ಮಾತನಾಡುತ್ತಾ ಒಂದು ಸತ್ಯ ಸಂಗತಿಯನ್ನು ಹೇಳಿದ್ದಾರೆ. ನಾವು ಏನೂ ಸಾಧನೆ ಮಾಡುವುದಕ್ಕಾಗದೆ ಇದ್ದರೂ ಸಹ ಜನತಾ ದಳದ ಸರ್ಕಾರದ ಸಾಧನೆ ಎಂದರೆ ಏನೂ ಹಗರಣ ಇಲ್ಲದಂತೆ ಆಡಳಿತ ನಡೆಸಿರುವುದು ಒಂದು ದೊಡ್ಡ ಸಾಧನೆ ಎನ್ನುವ ಮಾತನ್ನು ಹೇಳಿದ್ದಾರೆ. ಇವರು ಅಧಿಕಾರಕ್ಕೆ ಬರುವಂಥ ಸಂದರ್ಭದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಸಂವೃದ್ಧಿ, ಸ್ವಾಭಿಮಾನಿ ಕರ್ನಾಟಕವನ್ನು ನಿರ್ಮಾಣ ಮಾಡುತ್ತೇವೆನ್ನುವ ಮಾತನ್ನು ಹೇಳಿಕೊಂಡು ಅಧಿಕಾರಕ್ಕೆ ಬಂದರು. ನಾನು ಇವತ್ತು ಈ ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಜನ ಇವತ್ತು ಮಾತನಾಡುತ್ತಾ ಇಲ್ಲವೆ? ಸ್ವಾಭಿಮಾನಿ ಶೂನ್ಯ ವಚನಭ್ರಷ್ಟ ಆಡಳಿತದಿಂದ ಕೂಡಿರುವಂಥ ಸರ್ಕಾರ ಎಂದು ಜನರು ಮಾತನಾಡುತ್ತಿರುವುದನ್ನು ತಾವು ಕೇಳುತ್ತಿಲ್ಲವೆ? ಜನತಾ ದಳದ ಸರ್ಕಾರದ 14 ತಿಂಗಳ ಸಾಧನೆ ಎಂದರೆ ದೌರ್ಜನ್ಯದಲ್ಲಿ ದೊಡ್ಡ ವಿಕ್ರಮವನ್ನು ಸಾಧಿಸಿರುವಂಥದ್ದು. ಭ್ರಷ್ಟಾಚಾರದಲ್ಲಿ ಹಿಂದೆ ಇದ್ದಂಥ ಎಲ್ಲಾ ಸರ್ಕಾರಗಳನ್ನು ಮೀರಿ, 5 ವರ್ಷ ಒಂದೂ ಸರ್ಕಾರ ಮಾಡದೆ ಇರುವಂಥ ಅವ್ಯವಹಾರಗಳ ಒಂದು ಸರಮಾಲೆಯನ್ನೇ ಮಾಡಿದಂಥ ಒಂದು ಕೀರ್ತಿ, ಸುಳ್ಳು ಘೋಷಣೆಗಳಿಗೆ ಈ ಸರ್ಕಾರದಲ್ಲಿ ಯಾವುದೇ ಬರ ಇಲ್ಲ. ಚಾಕು, ಚೂರಿ ಚೈನು ಸಂಸ್ಕೃತಿ ಮತ್ತೆ ಇವತ್ತು ರಾಜ್ಯದಲ್ಲಿ ಮರುಕಳಿಕೆಯಾಗಿದೆ.

ವಿದ್ಯುತ್, ನೀರು ಅಭಿವೃದ್ಧಿ ಕಾರ್ಯಕ್ಕೆ ಬರ ಬಂದಿದೆ. ರೈತನ ಮಗನಾಗಿ ನಾನು ಇವತ್ತು ಮುಖ್ಯಮಂತ್ರಿಯಾಗಿದ್ದೇನೆ. ನಾನು ನೀರಾವರಿ ಸಚಿವನಾಗಿದ್ದಾಗ ನೀರಾವರಿಗೆ ಹಣ ಬಿಡುಗಡೆ ಮಾಡದೆ ಇದ್ದ ಕಾರಣಕ್ಕೆ ರಾಜೀನಾಮೆ ಕೊಟ್ಟಿದ್ದೇನೆ. ಆದರೆ ಈಗ ನಾನು ಹಣವನ್ನು ಎಲ್ಲಿಂದ ತರುತ್ತೇನೆ, ಹೇಗೆ ತರುತ್ತೇನೆಂದು ಕೇಳಬೇಡಿ. ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೃಷ್ಣ . ಜಲಾನಾರುವ ಪ್ರದೇಶದಲ್ಲಿ ಖರ್ಚು ಮಾಡುತ್ತೇನೆಂದು ಹೇಳಿ ಅದರ ನಾಲ್ಕನೇ ಒಂದು ಭಾಗವನ್ನು ಖರ್ಚು ಮಾಡದೆ ಇರುವಂಥ ರೈತ ಸಮುದಾಯಕ್ಕೆ ದ್ರೋಹ ಮಾಡಿದ ಸರ್ಕಾರ ಇದು. ಸತ್ಯ ಸಂಗತಿಯನ್ನು ಬರೆದಂತೆ, ನಿರ್ಭೀತಿಯಿಂದ ಕೆಲಸ ಮಾಡಿದಂಥ ಪತ್ರಿಕಾ ರಂಗದ ಸ್ನೇಹಿತರ ಮೇಲೆ ಮುಖ್ಯಮಂತ್ರಿಗಳೇ ಒಂದು ಆಕ್ರೋಶ ವ್ಯಕ್ತಪಡಿಸುವಂಥ ಒಂದು ಸರ್ವಾಧಿಕಾರಿ ಮುಖ್ಯಮಂತ್ರಿಗಳ ನಡವಳಿಕೆ. ನಿಮಗೆ ಆದ್ಯತೆ ಯಾರು? ರೈತ ಅಲ್ಲ, ಕೃಷಿಕಾರ್ಮಿಕ ಅಲ್ಲ, ಹರಿಜನಗಿರಿಜನ ಬಂಧುಗಳ ಅಲ್ಲ, ಬಹುಶಃ

ಉಸಿರು ಕಟ್ಟುವಂಥ ಪರಿಸ್ಥಿತಿಯಲ್ಲಿ ಎಲ್ಲವನ್ನು ಸಹಿಸಿಕೊಂಡು ಆ ಕಡೆ ಆಡಳಿತ ಪಕ್ಷದ ಸ್ನೇಹಿತರು ಕುಳಿತಿದ್ದಾರೆ. ನಾನು ಕೇಳುತ್ತೇನೆ, ತಾವು ಪ್ರಶ್ನೆ ಮಾಡಿಕೊಳ್ಳಿ. ಈ ರಾಜ್ಯಕ್ಕೆ ದೊಡ್ಡ ಒಂದು ಸಾಧನೆ ನೀವು ಮಾಡಿದಂಥದ್ದು ಎಂದರೆ ನೀರಾವರಿ ಪ್ರದೇಶಗಳಿಗೆ ಹಣ ಖರ್ಚು ಮಾಡದೆ ಇದ್ದರೂ ಸಹ ವಿದ್ಯುತ್ ಉತ್ಪಾದನೆಗೆ ತಾವು ಹಣ ಖರ್ಚು ಮಾಡದೆ ಇದ್ದರೂ ಸಹ ಸುಮಾರು 225 ಕೋಟಿ ರೂಪಾಯಿಗೆ ಹತ್ತಿರ ಹಣವನ್ನು ಕೋರಮಂಗಲ ಕ್ರೀಡಾ ನಗರವನ್ನು ಕಟ್ಟುವುದಕ್ಕೆ ತಾವು ಹಣ ಖರ್ಚು ಮಾಡಿದ್ದೀರಿ. ಎಸ್ಟಿಮೇಟಿಗಿಂತ 45 ಪರ್ಸೆಂಟ್ ಜಾಸ್ತಿ ಕೊಟ್ಟಿರಿ. ಆ ಬಗ್ಗೆ ಸಾಕಷ್ಟು ಚರ್ಚೆ ಆಯಿತು. ಶ್ರೀ ಬಸವಣ್ಣೆಪ್ಪನವರ ಅಧ್ಯಕ್ಷತೆಯಲ್ಲಿ ಸದನದ ಸಮಿತಿಯಲ್ಲಿ ಚರ್ಚೆ ಆಯಿತು. ನಾನು ಈಗ ಆ ವಿವರಕ್ಕೆ ಹೋಗುವುದಿಲ್ಲ. ನನ್ನ ಸ್ನೇಹಿತರು ಈ ಕಡೆ ಇರುವ ಶಾಸಕರು ಮಾತನಾಡಬೇಕು. ಆದ್ದರಿಂದ ನಾನು 15-20 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಏಕೆಂದರೆ ಹೋದ ಸಾರಿ ನಮ್ಮದೇ ಆದ ಗೊಂದಲದಿಂದ ಸತ್ಯಾಗ್ರಹ ಹೋರಾಟ ಸಭಾತ್ಯಾಗ ಮಾಡುವಂಥದ್ದು ಇದೆಲ್ಲದರ ಪರಿಣಾಮ ನಿಮ್ಮ ಮೇಲೆ ಬಹಳ ಪರಿಣಾಮ ಆಗಬಹುದೆಂದು ನಾನು ತಿಳಿದುಕೊಂಡಿದ್ದೆವು. ಹೀಗಾಗಿ ನಾವು ಸಮಯವನ್ನು ಸದುಪಯೋಗ ಮಾಡಿಕೊಳ್ಳಲಿಲ್ಲ.

ನಿಮಗೆ ಹೇಗೆ ಬೇಕು ಹಾಗೆ ಅಧಿಕಾರ ನಡೆಸುವುದಕ್ಕೆ ಸಾಧ್ಯವಾಯಿತು. ಈ ಸಾರಿ ನಾವು ನಿಶ್ಚಯ ಮಾಡಿದ್ದೇವೆ, ಸದನದ ಒಳಗೆ ಕುಳಿತು ಪ್ರತಿಯೊಂದು ನಿಮಿಷವನ್ನು ಉಪಯೋಗ ಮಾಡಿಕೊಳ್ಳೋಣ. ಅನೇಕ ಜನ ನಮ್ಮ ಪಕ್ಷದಿಂದ ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕ ಶಾಸಕ ಮಿತ್ರರು ಅವರದೇ ಆದ ವಿಚಾರವನ್ನು ಬೆಳಕಿಗೆ ತರುವುದಕ್ಕೆ ಅವಕಾಶ ಮಾಡಿಕೊಡೋಣ ಎಂದು ನಾನು ಸಾಂಪ್ರದಾಯಕವಾಗಿ ನಾಲ್ಕು ಮಾತುಗಳನ್ನಾಡುತ್ತೇನೆ. ಯಾವತ್ತು ರಾಜ್ಯಪಾಲರ ಭಾಷಣವನ್ನು ತಾವು ಮಾಡಿಸಿದಿರೋ ಅದರ ಮೇಲೆ ವಿರೋಧ ಪಕ್ಷದ ನಾಯಕನಾಗಿ ನಾನು ಇಲ್ಲಿ ನಿಂತುಕೊಂಡು ಸಾಂಪ್ರದಾಯಕವಾಗಿ ಕೆಲವು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಾನು ಇಲ್ಲಿ ಮಾತನಾಡುವುದರಿಂದ, ಯಾವುದಾದರೂ ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತರುವುದರಿಂದ, ಒಂದು ವಿರೋಧ ಪಕ್ಷದ ನಾಯಕನಾಗಿ ಸದಸ್ಯರಾಗಿ ಕುಳಿತು ನಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದರಿಂದ ಅದನ್ನು ತಿದ್ದಿಕೊಂಡು ಸರಿಪಡಿಸಿಕೊಂಡು ರಾಜ್ಯದ ಜನತೆ ನೆಮ್ಮದಿಯಿಂದ ಗೌರವದಿಂದ ಸ್ವಾಭಿಮಾನದಿಂದ ಬದುಕುವಂಥ ವ್ಯವಸ್ಥೆಯನ್ನು ತಾವು ಮಾಡಬಹುದೆಂಬ ವಿಶ್ವಾಸವನ್ನು ನಾವು ಕಳೆದುಕೊಂಡಿರುವಂಥ ವಿಚಿತ್ರ ಪರಿಸ್ಥಿತಿಯಲ್ಲಿ ಇವತ್ತು ನಾವು ಇಲ್ಲಿ ಕುಳಿತಿದ್ದೇವೆ. ಸ್ವಾಮಿ, ಇದು ಎಂತಹ ಅನ್ಯಾಯ? ಡಾ|| ಅಂಬೇಡ್ಕರ್ ರವರಿಗೆ, ಸಾಮಾಜಿಕ ನ್ಯಾಯಕ್ಕೆ ಘೋರ ಅಪಮಾನ ಮಾಡುವ ಘಟನೆ ನಿಮ್ಮ ಕಾಲದಲ್ಲಿ ಆಯಿತು. ಉಳುವವನೇ ಭೂಮಿಯ ಒಡೆಯ ಎಂಬ ಒಡೆತನದ ಹಕ್ಕಿಗೆ ತಿಲಾಂಜಲಿ ನೀಡುವಂಥ ಒಂದು ದೊಡ್ಡ ಕ್ರಾಂತಿಕಾರಿ ಕೆಲಸವನ್ನು ತಾವು ಮಾಡಿ ತೋರಿಸಿದಿರಿ. ತಮ್ಮ ತಪ್ಪಿನಿಂದ ಸರ್ಕಾರದ ಒಬ್ಬ ಉನ್ನತ ಅಧಿಕಾರಿ ಜೈಲಿನಲ್ಲಿ ಕೊಳೆಯುವಂಥ ಪ್ರಯತ್ನ ಮಾಡಿದಿರಿ. ಶಾಸಕರ ಒಂದು ಕಾರ್ಯವ್ಯಾಪ್ತಿಗೆ ಕಡಿವಾಣ ಹಾಕುವುದರಲ್ಲಿ ತಾವು ಯಶಸ್ವಿಯಾದಿರಿ. ಜನತಾ ದರ್ಶನ ಜಾತ್ರೆ ಮಾಡಿ ಸುಳ್ಳು ಭರವಸೆಗಳನ್ನು ಕೊಟ್ಟು ಲಕ್ಷಾಂತರ ರೂಪಾಯಿ ಬಡವ ಕೊಟ್ಟ ತೆರಿಗೆ ಹಣವನ್ನು ನಿಮ್ಮ ಪಕ್ಷ ಕಟ್ಟುವುದಕ್ಕೆ ಸಂಘಟನೆ ಮಾಡುವುದಕ್ಕೋಸ್ಕರ ದುರುಪಯೋಗ ಮಾಡಿಕೊಂಡಿರಿ. ಅಂದರೆ ಒಂದು ರೀತಿ ಹಿಂದಿನ ಕಾಂಗ್ರೆಸ್ ಸರ್ಕಾರದ ಒಂದು ಬಾಂಡಲೆಯಿಂದ ದಳದ ಬೆಂಕಿಗೆ ಬಿದ್ದ ಸಂಕಟವನ್ನು ರಾಜ್ಯದ ಜನ ಅನುಭವಿಸುತ್ತಿರುವುದನ್ನು ಇವತ್ತು ರಾಜ್ಯದಲ್ಲಿ ನಾವು ಕಾಣುತ್ತಿದ್ದೇವೆ. ಇವತ್ತು ನಾನು ಒಂದು ನೇರವಾದ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಎಷ್ಟು ಹಗರಣಗಳು ನಿಮ್ಮ ಕಾಲದಲ್ಲಿ ಆದವು? ಕೋರಮಂಗಲ

ಹಗರಣ ಆಯಿತು. ಒಬ್ಬ ನಿರ್ಭೀತಿಯಿಂದ ಕೆಲಸ ಮಾಡಿದಂಥ ಮದನಗೋಪಾಲ, 50 ಲಕ್ಷ ರೂಪಾಯಿ ಷರಾಬು ಹಿಡಿದಂಥ ಜಿಲ್ಲಾಧಿಕಾರಿಗೆ ರಾಷ್ಟ್ರ ಪ್ರಶಸ್ತಿ ನೀಡಬೇಕಾಗಿತ್ತು. ಅದರ ಬದಲಿಗೆ ಅವರನ್ನು ಬೆಂಗಳೂರಿಗೆ ತಂದಿರಿ. ಗ್ರಾನೈಟ್ ಹಗರಣ ಹಿಡಿಯುವುದಕ್ಕೆ ಬಿಟ್ಟಿದ್ದೇವೆಂದು ಹೇಳಿದಿರಿ.

ಸರ್ಕಾರದ ಖಜಾನೆಗೆ ಹೆಚ್ಚು ಹಣ ಬರುತ್ತಿದೆ ಎಂದು ಹೇಳಿದಿರಿ. ಗ್ರಾನೈಟ್ ಹಗರಣದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಅವ್ಯವಹಾರ ನಡೆಯುತ್ತಿದೆ ಎಂದು ದೇವೇಗೌಡರು ಹೇಳಿದರು. 25 ಕೋಟಿ ರೂಪಾಯಿಗಳನ್ನು ಗ್ರಾನೈಟ್ ಲಾಬಿಯಿಂದ ಖರ್ಚು ಮಾಡುವುದಕ್ಕೆ ಮುಂದಾಗಿದ್ದಾರೆ ಈಗಿನ ಮುಖ್ಯ ಮಂತ್ರಿಗಳನ್ನು ಇಳಿಸುವುದಕ್ಕೋಸ್ಕರ ಎಂದು ಹೇಳಿದರು. ಅದಕ್ಕೆ ಸದನದ ಸಮಿತಿ ಆಯಿತು. ಅದು ಇನ್ನೂ ಪೂರ್ಣ ವರದಿಯನ್ನು ಕೊಟ್ಟಿಲ್ಲ. ಈ ಮಧ್ಯೆ ಕೆಲವು ಶಾಸಕರು ಕೆಲವು ಮಂತ್ರಿಗಳ ಹೆಸರು ಬಯಲಾಗಬಹುದೇನೋ ಎಂಬ ಭಯದಿಂದ ಅಥವಾ ನಿಮಗೆ ಯಾರು ಕೋಟ್ಯಾಂತರ ರೂಪಾಯಿ ಹಣವನ್ನು ಬೇರೆ ಬೇರೆ ರೀತಿಯಲ್ಲಿ ಚುನಾವಣೆ ಸಮಯದಲ್ಲಿ ಬೇರೆ ಬೇರೆ ರೂಪದಲ್ಲಿ ಪಾವತಿ ಮಾಡಿದ್ದರು, ಅದು ಸಿಗುತ್ತದೆಯೋ ಇಲ್ಲವೋ ಎಂಬ ಭಯದಿಂದ ಮದನಗೋಪಾಲ್ ಅವರನ್ನು ವರ್ಗಾವಣೆ ಮಾಡಿಸಿದರು ಎಂದು ಜನ ಮಾತನಾಡುವ ಪರಿಸ್ಥಿತಿಗೆ ನೀವು ತಂದಿರಿ. ಯಾವ ಹಗರಣ ಬಯಲಾಯಿತು? ಯಾವುದನ್ನು ಹಿಡಿದಿರಿ? ಮುಖ್ಯಮಂತ್ರಿಗಳು ಏನು ಹೇಳಿದರು? ಅವರು ಅಧಿಕಾರಕ್ಕೆ ಬಂದಾಗ ರಾಜ್ಯದ ಉದ್ದಗಲಕ್ಕೆ ಒಂದು ಕರೆ ಕೊಟ್ಟರು. ನನ್ನ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆಯುವುದಕ್ಕೆ ಬಿಡುವುದಿಲ್ಲ. ಕೃಷ್ಣ ಜಲಾನಯನ ಪ್ರದೇಶದಲ್ಲಿ ಇರಬಹುದು.ಕಾವೇರಿ ಜಲಾನಯನ ಪ್ರದೇಶದಲ್ಲಿ ಇರಬಹುದು, ಎಲ್ಲಾ ಕಡೆ ಅವ್ಯವಹಾರ ನಡೆಯುತ್ತಿದೆ. ಪೀಸ್ ವರ್ಕ್‌ನಲ್ಲಿ ಕೆಲಸ ಕೊಡುತ್ತಿದ್ದಾರೆ, ಲೂಟಿ ನಡೆಯುತ್ತದೆ. ಅದನ್ನು ಹಿಡಿಯುವ ಪ್ರಯತ್ನ ಮಾಡಬೇಕಾಗಿತ್ತು. ಅದಕ್ಕಾಗಿ 4-5 ತಿಂಗಳುಗಳಿಂದ ಎಲ್ಲಾ ಕೆಲಸ ಕಾರ್ಯಗಳು ಸ್ಥಗಿತವಾದವು, ತನಿಖೆ ಮಾಡಿಸುತ್ತೇವೆಂದು ಹೇಳಿದರು.

ವಿಮಾನ ನಿಲ್ದಾಣದಿಂದ ಓಡಿ ಬಂದು ಲೋಕೋಪಯೋಗಿ ಇಲಾಖೆಯಲ್ಲಿ ವರ್ಗಾವಣೆ ರದ್ದು ಮಾಡುವ ಪ್ರಯತ್ನ ಮಾಡಿದರು. ನಾನು ಹೇಳುತ್ತೇನೆ, ಇದರಿಂದ ಅಭಿವೃದ್ಧಿ ಕಾರ್ಯ ಸ್ಥಗಿತವಾಯಿತೇ ಹೊರತು ಬೇರೇನು ಕಾರ್ಯಸಾಧನೆ ಆಗಲಿಲ್ಲ. ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿ 400 ಕೋಟಿರೂಪಾಯಿಗೂ ಹೆಚ್ಚು ಅವ್ಯವಹಾರ ನಡೆದಿದೆ ಎಂದು ಮುಖ್ಯ ಮಂತ್ರಿಗಳು ಹೇಳಿದ ಮೇಲೆ ಎಷ್ಟು ಅಧಿಕಾರಿಗಳು ಜೈಲಿಗೆ ಹೋದರು? ಯಾರ ಮೇಲೆ ಕ್ರಮ ತೆಗೆದುಕೊಂಡಿದಿರಿ? ಭ್ರಷ್ಟ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಾನಕ್ಕೆ ತರುವಂಥದ್ದು, ಯಾರು ಪ್ರಾಮಾಣಿಕವಾಗಿ, ರಾಜ್ಯದ ಜನರ ಹಿತದೃಷ್ಟಿಯಿಂದ ಕೆಲಸ ಮಾಡಿದಂಥ ಅಧಿಕಾರಿಗಳನ್ನು ವರ್ಗಾವಣೆ ಮಾಡಿದಿರಿ, ಕೇಂದ್ರದ ಸೇವೆಗೆ ಕಳುಹಿಸಿರಿ. ನಿಮ್ಮ ಬಣ್ಣ ಎಲ್ಲಿ ಬಯಲಾಗುತ್ತದೆಂಬ ಭಯದಿಂದ ತತ್ತರಿಸಿ ಹೋದಿರಿ. ವರ್ಗಾವಣೆ ಇವತ್ತೂ ನಡೆಯುತ್ತಿದೆ. ಲೋಕಸಭಾ ಚುನಾವಣೆ ಹತ್ತಿರ ಬರುತ್ತಿರುವ ಕಾಲದಲ್ಲಿ ಯಾವುದೇ ಅಧಿಕಾರಿಗಳನ್ನು ಆ ಕಡೆ ಈ ಕಡೆ ಕಳುಹಿಸಿಬಾರದೆಂದು ಹೇಳಿ ನೀವು ಕೇಳಿದಂಥ ವ್ಯಕ್ತಿಗಳಿಸಿ ವರ್ಗಾವಣೆ ಮಾಡಿದಿರಿ. ವರ್ಷದಲ್ಲಿ 365 ದಿನವೂ ವರ್ಗಾವಣೆ ಲಾಭದಾಯಕ ದಂಧೆಯಾಗಿದೆ ಎಂದು ಜನ ಮಾತನಾಡುವಂಥ ತಲೆ ತಗ್ಗಿಸುವಂಥ ಕೆಲಸ ಮಾಡಿದಿರಿ. ಬೆಂಗಳೂರು ಮಹಾನಗರ, ಮಂಗಳೂರು ಕಾರ್ಪೊರೇಷನ್ ಎರಡು ಮಹಾನಗರ ಸಭೆಗಳ ಚುನಾವಣೆ ಮಾಡಲಿಲ್ಲವೆಂದು ಕುಂಟು ನೆಪ ಹೇಳಿಕೊಂಡು ಪುರಸಭೆ, ನಗರಸಭೆ ಮತ್ತು ಮಹಾನಗರಸಭೆಗಳಲ್ಲಿ ನಿಮ್ಮ ಮನಬಂದಂತೆ ಕ್ಷೇತ್ರಗಳನ್ನು ವಿಂಗಡಣೆ ಮಾಡಿದಿರಿ. ಒಬ್ಬ ಶಾಸಕರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಅಧಿಕಾರಿಗಳನ್ನು ವಿಶ್ವಾಸಕ್ಕೆ

ತೆಗೆದುಕೊಳ್ಳಲಿಲ್ಲ. ಯಾವ ಒಂದು ವ್ಯವಸ್ಥೆಯನ್ನು ನಾವು ಮಾಡಿಕೊಂಡು ಬಂದಿದ್ದೆವೂ ಪುರಸಭೆ, ನಗರಸಭೆ ಮತ್ತು ಮಹಾನಗರ ಸಭೆ ಅಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ ಗೌಪ್ಯ ಮತದಾನ ಪದ್ಧತಿ ಏನು ಇತ್ತು ಅದನ್ನು ಗಾಳಿಗೆ ತೂರಿ ಕೈಯೆತ್ತುವಂಥ ಒಂದು ಕಾರ್ಯಕ್ಕೆ ಕೈ ಹಾಕಿದಿರಿ. ಏಕೆ?

1.30 ಪಿ.ಎಂ

ಏಕೆ? ಸರ್ಕಾರದ ಒಂದು ಪ್ರಭಾವದಿಂದ, ಅಧಿಕಾರಿಗಳ ಒಂದು ಬೆಂಬಲದಿಂದ, ಹಣದ ಬಲದಿಂದ ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷ, ಮಹಾನಗರಸಭೆಯ ಅಧ್ಯಕ್ಷ ಉಪಾಧ್ಯಕ್ಷರು ಕಾರ್ಪೊರೇಷನ್ ಅಧ್ಯಕ್ಷ ಉಪಾಧ್ಯಕ್ಷರಾಗುವುದು ನಿಮಗೆ ಮುಖ್ಯವಾಯಿತೇ ಹೊರತು ಒಂದು ಬದಲಾವಣೆಯನ್ನು ತರುವಂಥ ಒಂದು ಪ್ರಾಮಾಣಿಕ ಪ್ರಯತ್ನ ನಿಮ್ಮಿಂದ ಆಗಲಿಲ್ಲ. ರಾಜ್ಯಸಭೆ ಚುನಾವಣೆ ಪುರಸಭೆ, ನಗರಸಭೆ, ಮಹಾನಗರ ಸಭೆ ಚುನಾವಣೆ ಒಂದಂತೂ ನಾವು ಅಭಿನಂದನೆಗಳನ್ನು ಸಲ್ಲಿಸಬೇಕು ಈ ಸರ್ಕಾರಕ್ಕೆ ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಒಂದು ರೀತಿ ಸನ್ಮಾನ್ಯ ಎಸ್.ಎಂ. ಕೃಷ್ಣರವರ ಬಗ್ಗೆ ಜನ ಮಾತನಾಡುತ್ತಿದ್ದಾರೆ ನನಗೂ ಹಾಗೆಯೇ ಅನ್ನಿಸಿದೆ, ನಮಗೂ ಸುದ್ದಿ ಬರುತ್ತಾ ಇತ್ತು. ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಿ ಬರುತ್ತಾ ಇದ್ದಾರೆ, ಜನತಾದಳದ ಮೂರನೇ ಅಭ್ಯರ್ಥಿ ಕಾಂಗ್ರೆಸ್ಸಿನ ಅಭ್ಯರ್ಥಿ ಎಂದು ನೇರವಾಗಿ ಘೋಷಣೆ ಮಾಡಬಹುದಾಗಿತ್ತು. ಅದು ಮಾಡಲಿಲ್ಲ. ವಿಪ್ ಕೊಟ್ಟಿದ್ದು ಬೇರೆ, ಆದದ್ದು ಬೇರೆ. ಆದರೆ ನೀವು ನಿಮ್ಮ ನಾಲ್ಕೂ ಜನರನ್ನು ಗೆಲ್ಲಿಸುವುದರಲ್ಲಿ ಯಶಸ್ವಿಯಾದಿರಿ. ಅದಕ್ಕಾಗಿ ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಎಲ್ಲರೂ ಒಟ್ಟಾಗಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಯಾವ ದಿಕ್ಕಿನಲ್ಲಿ ಹೋಗಬಹುದು ಎನ್ನುವಂಥ ಮುನ್ಸೂಚನೆ ಇದು. ಇವತ್ತು ಎಸ್.ಎಂ. ಕೃಷ್ಣ ಅವರನ್ನು ಅಷ್ಟೊಂದು ದೊಡ್ಡ ಅಂತರದಲ್ಲಿ ಗೆಲ್ಲಿಸಿದ್ದಕ್ಕಾಗಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಸನ್ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಂತರ. ಭಾರಿ ಪ್ರಮಾಣದಲ್ಲಿ ಮಾತನಾಡುತ್ತಾರೆ, ಈಗ ನಾನು ಖರ್ಗೆಯವರಿಗೆ ಬರೆದುಕೊಂಡುತ್ತೇನೆ ನಾನು ಏನು ಮಾತನಾಡಿದ್ದೇನೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಸ್ವಾಮಿ., ನಾನು ಹೇಳಲಿಲ್ಲ. ಏನು ಹೇಳಿದರು ಸ್ವಾಮಿ? ಇವತ್ತು ಭ್ರಷ್ಟಾಚಾರದ ಬಗ್ಗೆ ಯಾವುದೇ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಸ್.ಎಂ. ಕೃಷ್ಣ ಅವರನ್ನು ಬಹಳ ಎತ್ತರದ ಸ್ಥಾನದಲ್ಲಿ ಗೆಲ್ಲಿಸಿದಿರಿ ಎಂದು ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಶಸ್ವಿಯಾದರು, ಗೆಲ್ಲಿಸಿದರು ಎಂದು ಹೇಳಿದೆ. ನಾನು ಸರ್ಕಾರಕ್ಕೆ ಅಭಿನಂದನೆಯನ್ನೂ ಸಲ್ಲಿಸಿದೆ. ಅದು ಬೇಡ ಅಂಥರೆ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಭಿನಂದನೆ ನಿಮಗೂ ಸಲ್ಲಬೇಕು. ಏಕೆಂದರೆ ಈ ಸದನದಲ್ಲಿರತಕ್ಕ ಮಾನ್ಯ ಸದಸ್ಯರೆಲ್ಲರೂ ಸೇರಿ ಅವರನ್ನು ಆಯ್ಕೆ ಮಾಡಿದ್ದುದು, ಸರ್ಕಾರದ ಪರವಾಗಿ ಅವರೇನೂ ನಿಂತಿರಲಿಲ್ಲ, ಅಥವಾ ಯಾವುದೇ ಒಂದು.... ಕಾಂಗ್ರೆಸ್ ಪಕ್ಷದ ಪರವಾನಗಿ ನಿಂತರೂ ಕೂಡ ಮತದಾರರು ಯಾರೆಂದರೆ ಇಡೀ ಸದನ ಇದೆ. ಸದನದ ಪರವಾಗಿ ಸದನದ ಸದಸ್ಯರು ಎಲ್ಲರೂ ಅವರಿಗೆ ಮತ ಕೊಟ್ಟು ಭಾರಿ ಬಹುಮತದಿಂದ ಗೆಲ್ಲಿಸಿದ್ದಾರೆ. ತಮ್ಮ ಸ್ಥಾನದಲ್ಲಿ ಅವರು ಕುಳಿತಿದ್ದರು. ಅದಕ್ಕೆ ಬಹುಶಃ ನೆನಪಿಟ್ಟುಕೊಂಡು ಅನೇಕ ಜನ ಯಡಿಯೂರಪ್ಪನವರೂ ಸೇರಿ ಅವರಿಗೆ ಸಹಕಾರ ಕೊಟ್ಟಿದ್ದಕ್ಕಾಗಿ ಅವರಿಗೂ ಕೂಡ ಅಭಿನಂದಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇರಬಹುದು. ಏಕೆಂದರೆ ನಮ್ಮ ಜನತಾದಳದ ಅಧಿಕಾರ ನಡೆಸುತ್ತಾ ಇರುವಂಥ ಈ ಜನ ತಾವು ಏನು ಬೇಕಾದರೂ ಮಾಡುವುದರಲ್ಲಿ

ಯಶಸ್ವಿಯಾಗುತ್ತೀರಿ. ಆ ವಿಶ್ವಾಸ ನನಗಿದೆ. 14 ತಿಂಗಳ ನಿಮ್ಮ ಆಡಳಿತ ನೋಡಿದಾಗ ನನಗೆ ಮನದಟ್ಟಾಗಿದೆ. ನಾನು ಇಷ್ಟೇ ಹೇಳುತ್ತೇನೆ, ಪ್ರಜಾತಂತ್ರದ ಒಂದು ವ್ಯವಸ್ಥೆಯಲ್ಲಿ ಅನೇಕ ಸಂದರ್ಭದಲ್ಲಿ ನಾವು ಜನಹಿತದೃಷ್ಟಿಯಿಂದ ಒಂದಾಗಿ ಹೋರಾಟ ಮಾಡಬೇಕಾಗುತ್ತದೆ. ಕಾವೇರಿ ಸಮಸ್ಯೆ ಬಂದಾಗ, ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಫ್ರೇಮ್ ಮಾಡದೆ ಸುಪ್ರೀಂ ಕೋರ್ಟ್ ಇರಬಹುದು, ಟ್ರಿಬ್ಯುನಲ್ ಇರಬಹುದು ನ್ಯಾಯಸಮ್ಮತವಾದ ತೀರ್ಮಾನ ಕೊಡುವುದಕ್ಕೆ ಸಾಧ್ಯವಿಲ್ಲ. ಈಗ ಹತ್ತು ಟಿ.ಎಂ.ಸಿ. ಹೆಚ್ಚು ಕಡಿಮೆಯಾಗುತ್ತದೆ. ತೀರ್ಮಾನ ಕೊಡಲಿ. ಆದರೆ ಯಾವುದೇ ಗೈಡ್‌ಲೈನ್ಸ್ ಇಲ್ಲದೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಟ್ರಿಬ್ಯುನಲ್ ಮುಂದೆ ಹೋಗಬೇಡಿ ಎಂದು ಹೇಳಿಕೊಂಡು ಬಂದೆವು. ಸ್ವತಃ ಸುಪ್ರೀಂ ಕೋರ್ಟ್ 11 ಟಿ.ಎಂ.ಸಿ. ನೀರು ಬಿಡಬೇಕೆಂದು ಹೇಳಿದ ಮೇಲೂ ಅದು ಸರಿಯಾಗಲಿಕ್ಕಿಲ್ಲ ಎಂದು ಪ್ರಧಾನಿಗೆ ಸೂಚನೆ ಕೊಟ್ಟು ಮತ್ತೆ ತಜ್ಞರನ್ನು ಕಳುಹಿಸಿ 6 ಟಿ.ಎಂ.ಸಿ. ನೀರು ಬಿಡಬೇಕು ಎನ್ನುವ ಪ್ರಶ್ನೆ ಬಂದಾಗ ಅದು ಅನ್ಯಾಯ ಎಂದು ಗೊತ್ತಿದ್ದರೂ ಸಹ ಒಂದು ಬಾರಿ ಈ ಸಮಸ್ಯೆಗೆ ಮಂಗಳವನ್ನು ಹಾಡಬೇಕು, ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸನ್ನು ಫ್ರೇಮ್ ಮಾಡುವುದಕ್ಕೆ ಮುಂಚೆ ಟ್ರಿಬ್ಯುನಲ್ ಮುಂದೆ ಹೋಗುವುದಿಲ್ಲ ಎಂದು ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟ ಮೇರೆಗೆ ಶಾಶ್ವತ ಪರಿಹಾರ ಸಿಗಬೇಕು ಎನ್ನುವ ಕಾರಣಕ್ಕೋಸ್ಕರ ಭಾರತೀಯ ಜನತಾ ಪಾರ್ಟಿ ನಾವು ಪಕ್ಷಬೇಧ ಮರೆತು ನಾವೆಲ್ಲಾ ಒಂದಾಗಿ ನಿಮಗೆ ಸಹಕಾರ ಕೊಟ್ಟೆವು. ರಾಜಕಾರಣ ಮಾಡಲಿಲ್ಲ ನಾವು. ನಾವು ರಾಜಕೀಯ ಮಾಡಬಹುದಾಗಿತ್ತು. ಕರ್ನಾಟಕ ಬಂದ್ ಮಾಡಬಹುದಾಗಿತ್ತು. ನೂರಾರು ಜನ ಮುಗ್ಧರು ಪ್ರಾಣವನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ನಿರ್ಮಾಣ ಮಾಡಬಹುದಾಗಿತ್ತು. ರಾಜ್ಯದ ಜನರ ಹಿತದ ಪ್ರಶ್ನೆ ಬಂದಾಗ ಅದಕ್ಕೆ ನಾವು ಕೈಹಾಕಲಿಲ್ಲ ಏಕೆ? ಆದರೆ ಪವಿತ್ರವಾದಂಥ ಒಂದು ಚುನಾವಣೆ ಬರುವಂಥ ಕಾಲದಲ್ಲಿ ಒಬ್ಬ ಸ್ವತಂತ್ರ ಅಭ್ಯರ್ಥಿ ಬೆಂಬಲ ಕೊಟ್ಟರೂ ಪರವಾಗಿಲ್ಲ. ಆದರೆ ಆಡಳಿತಪಕ್ಷವೇ ಸತ್ಯಸಂಗತಿಯನ್ನು ಹೇಳಬಹುದಾಗಿತ್ತು. ನಾವು ಈ ರೀತಿ ಒಪ್ಪಂದವನ್ನು ಮಾಡಿಕೊಂಡಿದ್ದೇವೆ ಎಂದು ಬಹಿರಂಗವಾಗಿ ಹೇಳಬಹುದಾಗಿತ್ತು. ವಿಪ್‌ಕೊಟ್ಟು, ನಂತರ ಹಿಂಬಾಗಿಲಿನಿಂದ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟು, ಅದು ಆಗಲಿಲ್ಲ, ನಮ್ಮವರು ಕೈ ಕೊಟ್ಟರು, ಇದು ನಿಮ್ಮ ಶಾಸಕರನ್ನು ಅನುಮಾನ ಪಡುವಂಥ ರೀತಿಯಲ್ಲಿ, ಕಿವಿಯಲ್ಲಿ ಇಂಥವರಿಗೆ ಓಟ ಕೊಡು ಅಂತ ಹೇಳುವುದು, ವಿಪ್ ಬೇರೆ ಕೊಡುವುದು. ನಾವು ಕಾಂಗ್ರೆಸ್ಸಿಗರು ಒಂದಾಗಿದ್ದೇವೆ ಮುಂದೆ ಬರುವ ಲೋಕಸಭಾ ಚುನಾವಣೆಯಲ್ಲಿ ಬಿ.ಜೆ.ಪಿ. ಯವರನ್ನು ಎದುರಿಸುವುದಕ್ಕೆ ಇದು ಅಗತ್ಯ ಇದೆ ಎನ್ನುವಂಥ ಮಾತನ್ನು ಹೇಳಿದ್ದರೆ ನಾವು ಯಾರೂ ಅಭ್ಯಂತರ ಮಾಡುತ್ತಿರಲಿಲ್ಲ. ಸೌಜನ್ಯಕ್ಕೆ, 1983ರಲ್ಲಿ ಜನತಾದಳ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ನಾವು ಕಾರಣಕರ್ತರಾದಾಗ ಸೌಜನ್ಯಕ್ಕಾಗಿಯಾದರೂ ಸಹ 39 ಜನ ಇದ್ದಂಥ ಭಾರತೀಯ ಜನತಾ ಪಾರ್ಟಿ ಒಬ್ಬ ಅಭ್ಯರ್ಥಿ ನಿಲ್ಲುತ್ತಾನೆ ಅಂತ ಹೇಳಿದಾಗ, ಅವತ್ತು ಅಧಿಕಾರ ಬೇಕಾದಾಗ ಭಾರತೀಯ ಜನತಾ ಪಾರ್ಟಿ ಬೇಕಾಗಿತ್ತು. ಆದರೆ ಲೋಕಸಭಾ ಚುನಾವಣೆ ದೃಷ್ಟಿಯಿಂದ ಮತ್ತೆ....

ಶ್ರೀ ಎಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರು...

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ನೀವು ಯಾವ ರೀತಿಯ ಆಡಳಿತವನ್ನು ನಡೆಸುತ್ತಾ ಇದ್ದೀರಿ ಎಂಬುದಕ್ಕೆ ಒಂದು ಉದಾಹರಣೆ.

ಶ್ರೀ ಎಚ್. ಶಿವಪ್ಪ : ಮಾನ್ಯ ವಿರೋಧಪಕ್ಷದ ನಾಯಕರಿಗೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈಲ್ಡ್ ಆಗಿಲ್ಲ, ಆಮೇಲೆ ಮಾತನಾಡಿ.

ಉಪಾಧ್ಯಕ್ಷರು : ಇವರು ಈಲ್ಡ್ ಆದರೆ ನೀವು ಮಾತನಾಡಿ.

ಶ್ರೀ ಎಚ್. ಶಿವಪ್ಪ : ವಿರೋಧಪಕ್ಷದ ನಾಯಕರಿಗೆ ಯಾರು ಯಾರು ಆಡಳಿತಪಕ್ಷದಿಂದ ಮತ ಕೊಟ್ಟಿದ್ದಾರೆ ಎಂದು ಹೇಳಿ ಏನಾದರೂ ಗೊತ್ತಾಗಿದೆಯೇ? ಯಾವ ಆಧಾರದ ಮೇಲೆ ಈ ವಿಷಯವನ್ನು ಪ್ರತಿಪಾದನೆ ಮಾಡುತ್ತಾರೆ? ಇದು ನ್ಯಾಯಬದ್ಧವಾಗಿರುವುದೇ? Whether it can be discussed here during the Governor's address. Is it not irrelevant? Who have told you that we have voted for Mr. Krishna and others? ಅವರ ಪಕ್ಷದ ಅಭ್ಯರ್ಥಿಗಳೂ ಕೆಲವು ಹಾಕಿದ್ದಾರೆ ಎಂದು ಈ ಕಡೆಯಿಂದಲೂ ನಾವು ಹೇಳಬಹುದು. ಅವರು ಕಾಂಗ್ರಾಚ್ಯುಲೇಷನ್ ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಜನತಾದಳದವರು ಕೈ ಎತ್ತಿದರು, ಓಟು ಹಾಕಿದರು ಎಂದು ಹೇಳಲಿಲ್ಲ.

Sri H. Shivappa : Congress party leader has congratulated you. Your party people might have voted for Mr. Krishna, who knows? It is a secret ballot.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೆಲವು ಸತ್ಯಸಂಗತಿಗಳನ್ನು ಹೇಳಿದಾಗ ನಮ್ಮ ಸ್ನೇಹಿತರಾದ ಹಿರಿಯ ಸದಸ್ಯರಾದ ಶಿವಪ್ಪನವರಿಗೆ ಏತಕ್ಕೆ ಸಿಟ್ಟು ಬಂತೋ ಗೊತ್ತಾಗಲಿಲ್ಲ.

ಶ್ರೀ ಎಚ್. ಶಿವಪ್ಪ : ಮಾನ್ಯ ಯಡಿಯೂರಪ್ಪನವರ ಬಗ್ಗೆ ಅಪಾರ ಗೌರವ ಇಟ್ಟುಕೊಂಡು ನಾನು ಮಾತನಾಡಿದ್ದೇನೆ. ಅವರೇನಾದರೂ ಹೇಳಬೇಕಾದರೆ ಒಂದು ಆಧಾರ ಇಟ್ಟುಕೊಂಡು ಹೇಳುತ್ತಾರೆ ಅಂತ ಗೌರವದಿಂದ ನಾನು ಹೇಳುತ್ತಿದ್ದೇನೆಯೇ ಹೊರತು ಬೇರೆ ದೃಷ್ಟಿಯಿಂದ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜ್ಯದ ನಾಲ್ಕೂವರೆ ಕೋಟಿ ಜನರಲ್ಲಿ ಮನೆ ಮಾತಾಗಿರುವಂಥ ಸತ್ಯಸಂಗತಿಯನ್ನು ಇಲ್ಲಿ ನಾನು ಬೇರೆ ಹೇಳಿ ನೀವು ಬೇರೆ ಹೇಳಿ ಸತ್ಯವನ್ನು ಮರೆಮಾಚುವುದಕ್ಕಾಗುತ್ತದೆಯೇ? ಏನು ಸತ್ಯಸಂಗತಿ ಇದೆಯೋ ಜನ ಏನು ಮಾತನಾಡುತ್ತಾರೋ ಅದನ್ನು ನಾನು ಹೇಳುತ್ತಿದ್ದೇನೆ. ಬಹುಶಃ ಆಡಳಿತಪಕ್ಷದ ಸದಸ್ಯರು ಯಡಿಯೂರಪ್ಪನವರೇ, ನಾವು ಬಿ.ಜೆ.ಪಿ. ಯನ್ನು ಸೋಲಿಸಬೇಕಾಗಿತ್ತು ಎಂದು ಒಂದಾಗಿದ್ದೆವು ಎಂದು ಹೇಳಬಹುದು ಮಾತನಾಡುತ್ತಾ ಅಭಿನಂದನೆಯನ್ನು ಸಲ್ಲಿಸಿದ್ದು ಆ ಕಾರಣಕ್ಕೋಸ್ಕರ. ಈ ರಾಜ್ಯದಲ್ಲಿ ಎರಡನೇ ರಾಜಕೀಯ ಪಕ್ಷಗಳು ಇರುವುದು ಅಂತ ಸ್ಪಷ್ಟವಾಯಿತು. ಅವರೆಲ್ಲಾ, ಬಂದು, ಭಾರತೀಯ ಜನತಾ ಪಾರ್ಟಿ ಮತ್ತೊಂದು ಎನ್ನುವಂಥ ಭಾವನೆ ಈ ಒಂದು ರಾಜ್ಯಸಭಾ ಚುನಾವಣೆಯಲ್ಲಿ ಜನರಲ್ಲಿ ಮೂಡುವಂತೆ ಮಾಡಿದ್ದೀರಿ. ಅದಕ್ಕಾಗಿ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಬೇರೇನೂ ಮಾತನಾಡುತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಮಾನ್ಯ ಯಡಿಯೂರಪ್ಪನವರು ಈಗ ಹೇಳಿದರು, ನಾವು ಮತ್ತು ಕಾಂಗ್ರೆಸ್ ಒಂದಾಗಿ ಇದೆಲ್ಲಾ ಮಾಡಿದೆವು ಎಂದು. ಅವರ ಕಡೆ ಇದಕ್ಕೇನಾದರೂ ಪುರಾವೆ ಇದ್ದರೆ ಅದನ್ನು ಒದಗಿಸಬೇಕು. ಬೇಜವಾಬ್ದಾರಿಯಿಂದ ಹೇಳಬಾರದು. ಅವರು ಬಹಳ ಜವಾಬ್ದಾರಿ ಸ್ಥಾನದಲ್ಲಿದ್ದಾರೆ. ನಾನೂ ಹೇಳುತ್ತೇನೆ ನನ್ನದೇ ಜಿಲ್ಲೆಯಲ್ಲಿ ಕುಮಟಾದಲ್ಲಿ ಮತ್ತು ಅಂಕೋಲಾದಲ್ಲಿ ಬಿ.ಜೆ.ಪಿ. ಯಿಂದ ಎಂಟು ಜನ ಆರಿಸಿಬಂದಿದ್ದಾರೆ. ನನ್ನ ಪಾರ್ಟಿಯಿಂದ 10 ಜನ ಬಂದಿದ್ದಾರೆ. ಕಾಂಗ್ರೆಸ್ಸಿನಿಂದ ಎರಡು ಬಂದಿದ್ದಾರೆ. ಇವರು ಕಾಂಗ್ರೆಸ್‌ನೊಡನೆ ಶಾಮೀಲಾಗಿ ಅಡ್ಜಸ್ಟ್ ಮಾಡಿದ್ದಾರೆ. ಅಂಕೋಲಾದಿಂದ ಇವರು ಏದು ಜನ ಗೆದ್ದು ಬಂದಿದ್ದಾರೆ. ಕಾಂಗ್ರೆಸ್‌ನಿಂದ ಒಬ್ಬ ಬಂದಿದ್ದಾರೆ. ಇವರೇ

ಮಾಡಿದ್ದಾರೆ. ಅಂತ ನಾನು ಹೇಳಿದರೆ ಇದಕ್ಕೆ ಉತ್ತರ ಕೊಡುತ್ತಾರೇನು? ಉತ್ತರ ಕೊಡಲಿ.

ಶ್ರೀ ಹೆಚ್. ಶಿವಪ್ಪ : 10 ಜನ ಕಾಂಗ್ರೆಸ್‌ನಿಂದ ಆರಿಸಿಬಂದಿದ್ದಾರೆ. ಆದರೆ ಕಾಂಗ್ರೆಸ್ಸಿನವರ ಜೊತೆ ಶಾಮಾಲಾಗಿ ಮುನಿಸಿಪಾಲಿಟಿಯಲ್ಲಿ ಅಧಿಕಾರ ವಹಿಸಿಕೊಳ್ಳುವುದಕ್ಕೆ ಸಹಕಾರ ಮಾಡಿದ್ದಾರೆ. ಯಾರು ಇದರಲ್ಲಿ ಪ್ರಾಮಾಣಿಕರು? ಅವರಿಗೆ ಇಲ್ಲಿ ನೈತಿಕ ಹಕ್ಕಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ : ನಾನು ನೇರವಾದ ಪ್ರಶ್ನೆ ಕೇಳಿದ್ದೇನೆ. ನೇರವಾದ ಉತ್ತರ ಕೊಡಲಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಾನು ಹೇಳುವಂಥದ್ದು....

ಡಾ|| ಎಂ.ಪಿ. ಕರ್ಕಿ : ಕುಮಟಾ ಪುರಸಭೆಯಲ್ಲಿ 8 ಜನ ನಾವು ಚುನಾವಣೆಯಲ್ಲಿ ಆರಿಸಿಬಂದಿದ್ದೇವೆ. ಅವರಿಗೆ ಯಾವಾಗ ಅಧ್ಯಕ್ಷರಾಗಲಿಕ್ಕೆ ಸಾಧ್ಯವಿಲ್ಲ ಅಂತ ಅನ್ನಿಸಿತು ಆಗ ಅವರೇ ನಮ್ಮ ಹತ್ತಿರ ಬಂದು ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿ, ನಾವು ನೀವು ಒಪ್ಪಂದ ಮಾಡಿಕೊಂಡು ಕಾಂಗ್ರೆಸ್ಸಿನವರನ್ನು ಹೊರಗಿಡೋಣ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು : ಇದೆಲ್ಲಾ ಪ್ರಶ್ನೆಗೆ ಉತ್ತರ ಬೇಡಿ.

ಶ್ರೀ ಆರ್.ವಿ. ದೇಶಪಾಂಡೆ : ಕಾಂಗ್ರೆಸ್ ಎರಡು ಜನ ಆರಿಸಿಬಂದಿದ್ದಾರೆ. ಎರಡು ಜನ ಆರಿಸಿಬಂದಾಗ ತಾವು ಪರ್ಚೇಸ್ ಮಾಡಿದ್ದೀರಿ. ನಿಜ ಹೇಳಿ. ಫ್ಯಾಕ್ಟ್ ಏನಿದೆ ಅದನ್ನು ಹೇಳಿ.

ಡಾ|| ಎಂ.ಪಿ. ಕರ್ಕಿ : ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ.

ಉಪಾಧ್ಯಕ್ಷರು : ಯಡಿಯೂರಪ್ಪನವರೇ, ನೀವು ಮಾತು ಮುಂದುವರೆಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ....

ಡಾ|| ಎಂ.ಪಿ. ಕರ್ಕಿ : ಅಧ್ಯಕ್ಷರೇ...

ಉಪಾಧ್ಯಕ್ಷರು : ನಿಮ್ಮ ನಾಯಕರು ನಿಂತಿದ್ದಾರೆ ಕೂಡ್ರಿ.

ಶ್ರೀ ಆರ್.ವಿ. ದೇಶಪಾಂಡೆ : ಬಿ.ಜೆ.ಪಿ. ಯವರಿಗೆ ಹೆಚ್ಚು ಸೀಟಿದ್ದರೂ ಸಹ ಕಾಂಗ್ರೆಸ್‌ನವರ ಸಪೋರ್ಟ್ ತೆಗೆದುಕೊಂಡಿದ್ದಿರಿ. ಸರ್ಕ್ಯುಲರ್ ಪಾರ್ಟಿಗೆ ಸಪೋರ್ಟ್ ಮಾಡಿದ್ದೀರಿ. ಅದಕ್ಕೇನೂ ನನಗೆ ಗ್ರೀಜ್ ಇಲ್ಲ, ಹೇಳಿದ ನೀವೇನು ಮಾಡುತ್ತಿದ್ದೀರಿ ಎಂದು ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಕಾಂಗ್ರೆಸ್ ಪಾರ್ಟಿ ಸೆಕ್ಯುಲರ್ ಪಾರ್ಟಿಗೆ ಸಪೋರ್ಟ್ ಮಾಡಿದ್ದಾರೆಂದು ಹೇಳಿದ್ದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಈಗ ರಾಜ್ಯಪಾಲರ ಭಾಷಣದ ಮೇಲೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇವೆಯೋ ಅಥವಾ ಬೇರೆ ವಿಷಯ ನಡೆಯುತ್ತಿದೆಯೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆ ಯಾವುದೂ ಇಲ್ಲ, ಒಂದು ಸಂದರ್ಭದಲ್ಲಿ ವಾಜಪೇಯಿಯವರು ಹೇಳಿದ್ದಾರೆ. ಗುಜರಾತಿನಲ್ಲಿ ವಾಘೇಲ ಮತ್ತು ಚಿಮನಬಾಯಿ ಪಟೇಲರಿಗೆ ಜಗಳ ನಡೆಯಿತಲ್ಲ ಆಗ ಅವರು ಏನು ಹೇಳಿದರು ಅಂದರೆ, ಅದು ಟೈಮ್ಸ್ ಆಫ್ ಇಂಡಿಯಾದಲ್ಲಿ ಬಂದಿದೆ. ತಾವು ಆ ಆರ್ಟಿಕಲ್

ನೋಡಿರಬೇಕು. ಅವರು ವಾಜಪೇಟಿಯವರನ್ನು ಸಂದರ್ಶನ ಮಾಡಿದಾಗ, ಅವರಿಗೆ ಕೇಳಿದರು, ನಿಮ್ಮ ಪಾರ್ಟಿಯಲ್ಲಿ ಶಿಸ್ತು ಎಲ್ಲ ಇದ್ದರೂ ಕೂಡ ಇವತ್ತು ಇಂತಹ ಅಶಿಸ್ತಿಗೆ ಕಾರಣವಾಗಿದೆಯಲ್ಲ ಇದಕ್ಕೆ ಕಾರಣವೇನು? ಏಕೆ ನೀವು ಸರಿಯಾಗಿ ಸರ್ಕಾರ ನಡೆಸುತ್ತಿಲ್ಲ ತುಂಬಾ ಮೆಜಾರಿಟಿ ಇದ್ದರೂ ಕೂಡ ಎಂದು ಪತ್ರಿಕೆಯವರು ಕೇಳಿದ್ದರು. ಆಗ ವಾಜಪೇಯಿಯವರು ಏನು ಹೇಳಿದರು ಅಂದರೆ, ನಮಗೆ ಆಡಳಿತ ಮಾಡಿ ರೂಢಿಯಿಲ್ಲ ಇದುವರೆಗೆ ನಾವೆಲ್ಲಾ ವಿರೋಧಪಕ್ಷದಲ್ಲಿ ಬರೀ ಕೂಗಿ ಕೂಗಿ ರೂಢಿ ಅದಕ್ಕಾಗಿ ನಾವು ಸರ್ಕಾರ ನಡೆಸುವುದಕ್ಕಾಗುವುದಿಲ್ಲ ಅದಕ್ಕಾಗಿ ಈ ವ್ಯತ್ಯಾಸ ಆಗಿದೆ ಎಂದು ಹೇಳಿದರು. ಹಾಗೆ ಆಡಳಿತದ ಅನುಭವ ಇಲ್ಲದ್ದಕ್ಕೆ ಕಾಂಗ್ರೆಸ್‌ನವರು ಇಬ್ಬರೇ ಇದ್ದರೂ ಅವರಿಗೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಮಾತನ್ನು ನಾನು ಒಪ್ಪುತ್ತೇನೆ. ಮಾನ್ಯ ಖರ್ಗೆಯವರೆ, ಕಳೆದ 48 ವರ್ಷಗಳಲ್ಲಿ 10 ಲೋಕಸಭಾ ಚುನಾವಣೆಗಳು ನಡೆದಿವೆ. 45 ವರ್ಷಗಳ ಕಾಲ ತಾವೇ ಅಧಿಕಾರದಲ್ಲಿದ್ದೀರಿ. ತಮಗೆ ಅನುಭವ ಬಂದಿದೆ. ಎಲ್ಲಿ ಹೇಗೆ ಮಾಡಬೇಕು, ಯಾವ ಸಮಯದಲ್ಲಿ ಎಲ್ಲಿರಬೇಕು, ಎಲ್ಲಿ ಏನೇನು ಮಾಡಬೇಕು, ಹೇಗೆ ಹಾರಬೇಕು, ಎಲ್ಲಿ ಕುಳಿತುಕೊಳ್ಳಬೇಕು, ಆಡಳಿತವನ್ನು ಹೇಗೆ ನಡೆಸಬೇಕು ಇದರ ಪರಿಣಾಮ ತಾನೇ ಇವತ್ತಿನ ದುಸ್ಥಿತಿ. ಕುಡಿಯುವುದಕ್ಕೆ ನೀರಿಲ್ಲ, ತಿನ್ನುವುದಕ್ಕೆ ಅನ್ನವಿಲ್ಲ, ದುಡಿಯುವಂತಹ ಕೈಗಳಿಗೆ ಕೆಲಸವಿಲ್ಲ, ಪ್ರತಿಯೊಂದಕ್ಕೂ ಹೊರ ದೇಶದಲ್ಲಿ ಭಿಕ್ಷೆ ಬೇಡುವಂತಹ ಒಂದು ಪರಿಸ್ಥಿತಿ. ಇಂತಹ ಒಂದು ದುಸ್ಥಿತಿ ಬಂದಿರುವಂತಹ ಒಂದು ಕಾಲದಲ್ಲಿ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನೀವು ಬದುಕಿರುವವರೆಗೆ ನೀವು ಅವರೆಲ್ಲ ಒಂದಾಗಿರಿಯಪ್ಪ. ನಾನು ನಿಮ್ಮನ್ನು ಒಡೆಯುವುದಕ್ಕೆ ಹೊರಟಿಲ್ಲ, ಮೊನ್ನೆ ನಡೆದಂತಹ ರಾಜ್ಯಸಭಾ ಚುನಾವಣೆಯಲ್ಲಿ ಫಲಿತಾಂಶ ಪ್ರಕಟವಾಯಿತು. ನಾಡಿನ ಜನರಿಗೆ ಮನದಟ್ಟು ಮಾಡಿಕೊಟ್ಟರಿ. ಮುಂದೆ ಯಾರು ಜಾತಿವಾದಿಗಳು, ಯಾರಲ್ಲ, ಜನ ಯಾರ ಕಡೆ ಬರುತ್ತಾರೆಂಬುದನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ನಾನು ಹೇಳುವಂತಹ ಅಗತ್ಯವಿಲ್ಲ, ನಿಮ್ಮ ಕಾಂಗ್ರೆಸ್ ಪಾರ್ಟಿ ಡೈ ಬೈ ಡೇ ರೀಜನಲ್ ಪಾರ್ಟಿಯಾಗಿ ಪರಿವರ್ತನೆಯಾಗುತ್ತಿದೆ. ನಾಯಕರು ಇಲ್ಲದೆ ಪರದಾಡುವಂತಹ ಒಂದು ಪರಿಸ್ಥಿತಿ ಬರುತ್ತಿದೆ. ದೇಶದ ಜನ ನಾಳೆ ಭಾರತೀಯ ಜನತಾ ಪಾರ್ಟಿಯನ್ನು ಅಧಿಕಾರದಲ್ಲಿ ತರಬೇಕೆಂದು ನೋಡುತ್ತಿರುವಂತಹ ಪರಿಸ್ಥಿತಿ ಇದೆ. ಏಕೆ? ಭಾರತೀಯ ಜನತಾ ಪಾರ್ಟಿಯವರು ಅಧಿಕಾರಕ್ಕೆ ಬಂದರೆ ಒಂದು ಪ್ರಾಮಾಣಿಕ ಆಡಳಿತವನ್ನು ಕೊಡುತ್ತಾರೆಂದು. ಮಾನ್ಯ ನಾಗೇಗೌಡರು ಹವಾಲ ಹಗರಣದ ಬಗ್ಗೆ ಪ್ರಸ್ತಾಪ ಮಾಡಿದರು.

ಸ್ವಾಮಿ ಪ್ರಾಮಾಣಿಕವಾಗಿ ಹೇಳಿ, ತಾವೇ ಪ್ರಸ್ತಾಪ ಮಾಡಿರುವುದಕ್ಕೆ ಹೇಳುತ್ತೇನೆ. ಈ ದೇಶದ ಇತಿಹಾಸದಲ್ಲಿ ಯಾರು ತಪ್ಪು ಮಾಡಿದ್ದಾರೆ, ಯಾರಿಲ್ಲ, ಅದು ಬಹಿರಂಗವಾಗಲಿ. ಅಧಿಕೃತ ವಿರೋಧಪಕ್ಷದ ಭಾರತೀಯ ಜನತಾ ಪಕ್ಷದ ಅಧ್ಯಕ್ಷರು. ಹೇಗೆ ನಡೆದುಕೊಂಡರು? ಈ ವಿಷಯ ಗೊತ್ತಾದ ಕೆಲವು ಗಂಟೆಗಳೊಳಗಾಗಿ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟರು. ಜನ ಏನು ಎನ್ನಬಹುದು, ಎರಡು ಮೂರು ತಿಂಗಳು ಲೋಕಸಭಾ ಚುನಾವಣೆಯಿದೆ ಅದಕ್ಕೆ ರಾಜೀನಾಮೆ ಕೊಟ್ಟರು ಏನು ಮಹಾ ಎಂದು ಹೇಳಬಹುದು. ಅವರು ಏನು ಹೇಳಿದರು, ಡೇ ಟು ಡೇ ಹಾಯರಿಂಗ್ ಆಗಬೇಕು, ಸಿಬಿಐ ವರದಿಯನ್ನು ಮಂಡಿಸಬೇಕು. ನಾನು ಆರೋಪದಿಂದ ಮುಕ್ತನಾಗುವವರೆಗೆ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲವೆಂದು ಹೇಳಿದರು. ಮತ್ತೆ ಒಂದು ಸಣ್ಣ ಪುರಾವೆ, ನಾನು ಹಣ ಪಡೆದ ಬಗ್ಗೆ ಸಾಬೀತಾದರೆ, ಅದು ಕಾರ್ಯರೂಪಕ್ಕೆ ಬಂದರೆ ಆ ತರಹ ತೀರ್ಪು ಬಂದರೆ ನಾನು ರಾಜಕೀಯದಿಂದ ಸನ್ಯಾಸತ್ವ ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ

ನಾಗೇಗೌರು ಆ ಸ್ಟ್ಯಾಂಡನ್ನು ಅಪ್ರಿಷಿಯೇಟ್ ಮಾಡಿದರು. ತಾವು ಒಳ್ಳೆಯ ಮಾತನ್ನು ಆಡಿದ್ದೀರಿ. ಆದರೆ ಸಂಕಟವಾಗುವಂತಹದ್ದು 1991ರಲ್ಲಿ ಎಸ್.ಕೆ. ಜೈನ್‌ರವರ ಡೈರಿ ಸಿಕ್ಕಮೇಲೆ, 1995ರ ವರೆಗೆ ಲೋಕಸಭಾ ಚುನಾವಣೆ ಮುಂದೆ 2Ë3 ತಿಂಗಳಲ್ಲಿ ಬರುವವರೆಗೆ ಕಾದು ಕುಳಿತಂಥದ್ದು, ತಾನು ಪ್ರಧಾನಮಂತ್ರಿಯಾಗಿ ತನ್ನ ಒಂದು ಕ್ಯಾಬಿನೇಟ್‌ನಲ್ಲಿ ಏಳೆಂಟು ಜನ ರಾಜೀನಾಮೆಯನ್ನು ಕೊಡುವಂತಹ ಒಂದು ಪರಿಸ್ಥಿತಿಗೆ ಬಂದಿರುವಂತಹದ್ದು. ಬಹುಶಃ ದೇಶದ ಜನ ನೋಡುತ್ತಿರುವಂಥಹದ್ದು ಒಬ್ಬರೇ ಒಬ್ಬರ ಬಗ್ಗೆ, ರಾಜೀನಾಮೆಯನ್ನು ನೋಡುತ್ತರುವಂತಹದ್ದು ಒಬ್ಬರೇ ಒಬ್ಬರ ಬಗ್ಗೆ. ಈ ಹವಾಲ ಹಗರಣದಲ್ಲಿ ಯಾರು ಒಳ್ಳೆಯವರು ಯಾರು ಕೊಟ್ಟವರು ಆ ಸತ್ಯಸಂಗತಿ ಹೊರಗೆ ಬರಬೇಕೆನ್ನುವ ದೃಷ್ಟಿಯಿಂದ ಜನ ನಿರೀಕ್ಷೆ ಮಾಡುತ್ತಿರುವಂತಹದ್ದು ಈ ದೇಶದ ಪ್ರಧಾನಿ ರಾಜೀನಾಮೆ ಕೊಡಬೇಕೆಂದು. ಅದು ಆಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಯಡಿಯೂರಪ್ಪನವರೇ, ನಿಮ್ಮ ವಾಯಪೇಯಿಯವರು ಅದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಮಾತನಾಡುತ್ತಾರೆ. ಅವರು ಹೇಳುತ್ತಾರೆ. ತಮ್ಮ ಪರವಾಗಿ ತಮ್ಮ ಪಕ್ಷದ ನಾಯಕರೇ ವಿರೋಧಪಕ್ಷದಲ್ಲಿದ್ದಾರೆ. ಬಹುಶಃ ಅವರು ಅಲ್ಲಿ ಮಾತನಾಡುತ್ತಾರೆ ಅದು ಆಗ ಗೊತ್ತಾಗುತ್ತದೆ. ಖುರಾನ ಏಕೆ ರಾಜೀನಾಮೆಯನ್ನು ಕೊಡಲಿಲ್ಲ, ಇನ್ನೊಬ್ಬರು ಏಕೆ ಕೊಡಲಿಲ್ಲ ಅವೆಲ್ಲ ಬರುತ್ತವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನೇರವಾಗಿ ಈ ರಾಜ್ಯದ ವಿಚಾರಕ್ಕೆ ಬಂದರೆ ನಾನು ಇನ್ನೊಂದು 10 ನಿಮಿಷಗಳಲ್ಲಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಯಡಿಯೂರಪ್ಪನವರೆ, ಒಂದು ನಿಮಿಷ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನು ನನ್ನ ಸ್ನೇಹಿತರು ಮಾತನಾಡಬೇಕಾಗಿದೆ. ಅವರ ಲೆಕ್ಕದಲ್ಲಿ ನನ್ನ ಸಮಯ ಬರೆದು ಇಟ್ಟುಕೊಳ್ಳುತ್ತಾರೆ.

ಶ್ರೀ ಕೆ.ಎನ್. ನಾಗೇಗೌಡ : ಒಂದು ಒಂದು ನಿಮಿಷ ಈಲ್ಡ್ ಆಗಿ. ಈಗ ಹವಾಲ ಹಗರಣದಲ್ಲಿ ಅಡ್ವಾನಿಯವರು ಲೋಕಸಭಾ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಂತಹ ಪ್ರಸಂಗ ಮೆಚ್ಚುವಂತಹದ್ದೆ. ಆದರೆ ಇನ್ನೊಂದು ಮೆಚ್ಚಲೇ ಇಲ್ಲ, ನಿಮ್ಮ ಬಗ್ಗೆ ಮೆಚ್ಚುಗೆಯ ಮಾತನ್ನು ಆಡಿದಾಗ ಮಾತ್ರ ನಮ್ಮನ್ನು ಹೊಗಳಿದಿರಿ. ಇಲ್ಲಿ ಜನತಾದಳದಲ್ಲಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಮಾನ್ಯ ಬೊಮ್ಮಾಯಿಯವರು, ರಾಷ್ಟ್ರೀಯ ಪಕ್ಷದ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟರಲ್ಲ, ಹಾಗೆಯೇ ವಾಜಪೇಯಿಯವರು ಮತ್ತು ಪಿ.ವಿ. ನರಸಿಂಹರಾವ್‌ರವರು ರಾಜೀನಾಮೆಯನ್ನು ಕೊಟ್ಟಿದ್ದರೆ ನಾವು ಒಪ್ಪುತ್ತಿದ್ದೆವು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅತ್ತು ಕರೆದು ಹಿಡಿದು ಬಡಿದು ಬೊಮ್ಮಾಯಿಯವರಿಂದ ರಾಜೀನಾಮೆಯನ್ನು ಪಡೆಯಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಹವಾಲ ಪ್ರಕರಣದಲ್ಲಿ ಕೈಹಾಕಿಕೊಂಡವರೆಲ್ಲ ರಾಜೀನಾಮೆಯನ್ನು ಕೊಡುತ್ತಿದ್ದಾರೆ. ಅವರು ಲೋಕಸಭಾಸ್ಥಾನವೆಂದು ಹೇಳುತ್ತಾರೆ ಇವರು ಪಕ್ಷದ ಅಧ್ಯಕ್ಷಸ್ಥಾನವೆಂದು ಹೇಳುತ್ತಾರೆ. ಅವಧಿ ಇರುವುದು ಇನ್ನು ಎರಡೇ ತಿಂಗಳು. ಎರಡು ತಿಂಗಳು ಇರುವಾಗ ರಾಜೀನಾಮೆಯನ್ನು ಕೊಡತಕ್ಕದ್ದು ದೊಡ್ಡ ಸಮಸ್ಯೆಯಲ್ಲ, ಬಹುಶಃ ಇಲ್ಲಿ ಹವಾಲ ಪ್ರಕರಣದ ಬಗ್ಗೆ ಚರ್ಚೆಯಾಗಬೇಕಾದರೆ ಬೇರೆ ರೀತಿಯಲ್ಲಿ ತೆಗೆದುಕೊಂಡು ಬಂದರೆ ಒಳ್ಳೆಯದು. ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ಏಕೆಂದರೆ ಹವಾಲ ಪ್ರಕರಣದಲ್ಲಿ

ಹೆಸರು ಪ್ರಸ್ತಾಪ ಮಾಡಿದರೆ ಅವರು ಡಿಫೆಂಡ್ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಸಿಕ್ಕಿಹಾಕಿಕೊಳ್ಳದಿರುವವರು ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ನಾಗೇಗೌಡರು ಹೇಳುತ್ತಿದ್ದರು, ನೀವು ಆತ್ಮಸಾಕ್ಷಿಯಿಂದ ಹೇಳಿ ಪ್ರಾಮಾಣಿಕವಾಗಿ, ಕಾಯುತ್ತಾ ಇದ್ದರು, ಬೊಮ್ಮಾಯಿಯವರು ರಾಜೀನಾಮೆಯನ್ನು ಕೊಟ್ಟರೇ? ರಾಜೀನಾಮೆಯನ್ನು ಬಲವಂತದಿಂದ ತೆಗೆದುಕೊಂಡಿರಿ. ಅದಕ್ಕೂ ಹವಾಲಕ್ಕೂ ಸಂಬಂಧ ಏಕೆ ತರುತ್ತೀರಿ? ಇದು ರಾಜ್ಯದ ಜನರಿಗೆ ಗೊತ್ತಿರುವಂಥದ್ದು. ರಾಜ್ಯದ ಜನತೆ ಇಂದೆಂದೂ ಕಾಣದಂತಹ ವಿದ್ಯುತ್ ತೀವ್ರ ಬರವನ್ನು ಎದುರಿಸುತ್ತಿದೆ. ಬೇರೆ ರೂಪದಲ್ಲಿ ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ವಿವರಕ್ಕೆ ನಾನು ಹೋಗುವುದಿಲ್ಲ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ವಿದ್ಯುತ್ ಕೊರತೆ, ಲೋವೋಲ್ಟೇಜ್, ಲೋಡ್‌ಶೆಡ್ಡಿಂಗ್ ಇದೆಲ್ಲವೂ ಸಹ ರಾಜ್ಯದ ಜನರಿಗೆ ನಿತ್ಯದ ತಲೆ ನೋವಾಗಿದೆ. ಕೃಷಿ ಕ್ಷೇತ್ರವಂತೂ ಒಂದು ರೀತಿಯ ತೀವ್ರ ಶಾಖಕ್ಕೆ ಒಳಗಾಗಿ ರೈತರು ತಮ್ಮ ಹೊಲಗಳಲ್ಲಿ ಜಾತಕಪಕ್ಷಿಗಳಂತೆ ಪಂಪ್‌ಸೆಟ್‌ಗೆ ವಿದ್ಯುತ್ ಬರಬಹುದೆಂದು ಕಾಯುತ್ತಿರುವುಂತಹದ್ದು ನಿಮ್ಮದೇ ಲೆಕ್ಕದ ಪ್ರಕಾರ 10 ಲಕ್ಷ ಪಂಪ್‌ಸೆಟ್‌ಗಳಲ್ಲಿ ಸರಿಯಾದ ಲೆಕ್ಕವನ್ನು ತೆಗೆದುಕೊಂಡಾಗ ಐದಾರು ಲಕ್ಷ ಪಂಪ್‌ಸೆಟ್‌ಗಳು ಕೆಲಸ ಮಾಡುತ್ತಿಲ್ಲ. ಅದರಲ್ಲೂ ಸಹ ದಿವಸಕ್ಕೆ ಎರಡು ಮೂರು ಗಂಟೆ ನೀರು ಬಿಡುವುದಕ್ಕೆ ಆಗುವುದಿಲ್ಲ. ಹೊಲಗಳಲ್ಲಿ ಈ ತುದಿಯಿಂದಆ ತುದಿಗೆ ನೀರು ಬಿಡುವುದಕ್ಕೆ ಪ್ರಾರಂಭ ಮಾಡಿದರೆ ಎರಡು ದಿನ ಕರೆಂಟ್ ಹೋದರೆ ಮತ್ತೆ ನೀರು ಬಿಡುವುದಕ್ಕೆ ಆಗದೆ ಎಲ್ಲಾ ಕಡೆ ಅಹಾಕಾರ ಇರುವಂತಹ ಒಂದು ವಿಚಿತ್ರ ಪರಿಸ್ಥಿತಿಯನ್ನು ನಮ್ಮ ಕರ್ನಾಟಕದಲ್ಲಿ ನಾರು ಕಾಣುತ್ತಿದ್ದೇವೆ. ಆದರೆ ಈ ವಿದ್ಯುತ್ ಬರವನ್ನು ಸರಿಪಡಿಸುವುದಕ್ಕೆ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ನಿಮ್ಮ ಸರ್ಕಾರದಿಂದ ಆಗಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಹಿಂದೆಂದೂ ಇಲ್ಲದಂತಹ ವಿದ್ಯುತ್ ಬರವನ್ನು ರಾಜ್ಯದ ಜನ ಎದುರಿಸುತ್ತಿದ್ದಾರೆ. ಮಾನ್ಯ ಜೆ.ಹೆಚ್. ಪಟೇಲರು ಆಗಸ್ಟ್ 25ನೇ ತಾರೀಖು 1995-96ನೇ ಸಾಲಿಗೆ ಸುಮಾರು 45-46 ಸಾವಿರ ನೀರಾವರಿ ಪಂಪಸೆಟ್ ಬಾವಿಗಳಿಗೆ ವಿದ್ಯುತ್‌ನ್ನು ಬೆಂಗಳೂರಿನಲ್ಲಿ ಹೇಳಿದರು ಕೊಡುತ್ತೇವೆಂದು. ನೀವು 10 ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುತ್ತನ್ನು ಅಳವಡಿಸಲಿಲ್ಲ. ಇರುವಂತಹ ಪಂಪ್‌ಸೆಟ್‌ಗಳಿಗೆ ವಿದ್ಯುತ್‌ನ್ನು ಕೊಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ. ಮಾನ್ಯ ದೇವೇಗೌಡರು ಡಿಸೆಂಬರ್ 19ನೇ ತಾರೀಖು ಹೇಳುತ್ತಾರೆ. ರೈತರಿಗೆ ದಿನದ 24 ಗಂಟೆಯೂ ವಿದ್ಯುತ್ ಪೂರೈಸುವ ವ್ಯವಸ್ಥೆಯನ್ನು ಮುಂದಿನ ಒಂದು ವರ್ಷದಲ್ಲಿ ಮಾಡುತ್ತೇವೆ ಎನ್ನುವ ಮಾತನ್ನು ಹೇಳಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ದಿನಕ್ಕೆ 8 ಗಂಟೆಯಾದರೂ ವಿದ್ಯುತ್‌ನ್ನು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿ ಎರಡು ದಿವಸಕ್ಕೆ ಮುರ್‍ನಾಲ್ಕು ಗಂಟೆ ವಿದ್ಯುತ್‌ನ್ನು ಕೊಡದೆ ರೈತನನ್ನು ಬೀದಿ ಪಾಲು ಮಾಡುವಂತಹ ಪ್ರಯತ್ನವನ್ನು ಈ ಸರ್ಕಾರ ಮಾಡಿದೆ. ಸಣ್ಣ ಕೈಗಾರಿಕೆಗಳ ಒಂದು ಪರಿಸ್ಥಿತಿಯನ್ನು ದೇವರೇ ಕಾಪಾಡಬೇಕು.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ವಿರೋಧಪಕ್ಷದ ನಾಯಕರೇ ಒಂದು ನಿಮಿಷ. ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ನಡೆಯುತ್ತಿದೆ. ಅದನ್ನು ಸಮರ್ಥಿಸಿ ಮಾನ್ಯ ನಾಗೇಗೌಡರು ಮಾತನಾಡಿದ್ದಾರೆ. ಅದನ್ನು ಬೆಂಬಲಿಸಿ ಮತ್ತೊಬ್ಬ ಸದಸ್ಯರು ಮಾತನಾಡಿದ್ದಾರೆ. ಸರ್ಕಾರದ ಲೋಪದೋಷಗಳನ್ನು ಎತ್ತಿ ತೋರಿಸತಕ್ಕ ಒಂದು ಸಮಯ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡತಕ್ಕ ಈ ಸಂದರ್ಭದಲ್ಲಿ ಆಡಳಿತ ಪಕ್ಷದ ಯಾವುದೇ ಸದಸ್ಯರಾಗಲೀ ಒಂದೆರಡು ಮಂತ್ರಿಗಳನ್ನು ಬಿಟ್ಟರೆ ಕಾಣುತ್ತಿಲ್ಲವೆಂದ ಮೇಲೆ ಎಷ್ಟೊಂದು ನಿರಾಸಕ್ತಿ ಈ ಸದನದ

ಕಾರ್ಯಕಲಾಪಗಳ ಬಗ್ಗೆ ಹಿರಿಯ ಸದಸ್ಯರುಗಳಿಗೆ ಎಷ್ಟೊಂದು ನಿರಾಸಕ್ತಿ. ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ ವಿದ್ಯುತ್ ಬರಗಾಲದ ಬಗ್ಗೆ. ಅಂದರೆ ಆಡಳಿತ ಪಕ್ಷದ ಸದಸ್ಯರುಗಳಿಗೆ ಬರಗಾಲವೇ? ಶಾಸನಸಭೆಯಲ್ಲಿ ಭಾಗವಹಿಸತಕ್ಕ ಸಮಯ ಕೇವಲ ನಾಲ್ಕಾರು ದಿವಸಗಳಲ್ಲಿ ಈ ಶಾಸನಸಭೆಯ ಕಾರ್ಯಕಲಾಪಗಳನ್ನು ತೀರಿಸಿ ಹೋಗತಕ್ಕ ಒಂದು ಅವಕಾಶ ಸಿಕ್ಕಿರುವ ಒಂದು ಅವಕಾಶದಲ್ಲಿ ಈ ರೀತಿಯ ಉದಾಸೀನ. ಅಂದರೆ ನಾಳೆ ಮುಖ್ಯಮಂತ್ರಿಗಳು ಈ ವಿಚಾರವನ್ನು ಕುರಿತು ಪ್ರಸ್ತಾಪ ಮಾಡುವಾಗ, ವಿರೋಧಪಕ್ಷದ ಎಲ್ಲಾ ಸದಸ್ಯರು ಸಭೆಯಿಂದ ಹೊರಗೆ ಹೋದರೆ ಎಷ್ಟರಮಟ್ಟಿಗೆ ಎನ್ನಿಸಬಹುದು ಅವರ ಮನಸ್ಸಿನಲ್ಲಿ? ಈ ಸರ್ಕಾರದ ವಿಚಾರಗಳನ್ನು ನಾನು ಸಮರ್ಥನೆ ಮಾಡಿಕೊಳ್ಳತಕ್ಕ ಸಂದರ್ಭದಲ್ಲಿ ಕೇಳಲಿಕ್ಕೆ ವಿರೋಧಪಕ್ಷದವರು ಇಲ್ಲವೆಂದು ಯಾವ ರೀತಿ ಅವರ ಮನಸ್ಸಿಗೆ ನೋವಾಗುತ್ತಿದೆ ಹಾಗೆ ವಿರೋಧಪಕ್ಷದಲ್ಲಿ ಕೂಡ ಸರ್ಕಾರದ ಲೋಪದೋಷಗಳನ್ನು ಎತ್ತಿ ಹೇಳತಕ್ಕ ಸಂದರ್ಭದಲ್ಲಿ, ತಪ್ಪಾಗಿ ವಿರೋಧಪಕ್ಷಗಳು ಪ್ರಸ್ತಾಪ ಮಾಡಿದ್ದನ್ನು ಅದು ತಪ್ಪೆಂದು ಹೇಳತಕ್ಕದ್ದು, ತಪ್ಪಿರುವುದು ಸರಿಪಡಿಸುವುದು ಈ ವ್ಯವಸ್ಥೆಯನ್ನು ಮಾಡಬೇಕಿತ್ತು. ಮೊನ್ನೆ ದಿವಸ ನೀವು ಲಂಚ್ ಅವರ್‌ಗೆ ಅವಕಾಶವಿಲ್ಲ, ಹಾಗೆಯೇ ಸಭೆ ಮುಂದುವರಿಯುತ್ತದೆ ಎಂದು ಹೇಳಿದ ನಂತರ ಹಾಗೆ ವ್ಯವಸ್ಥೆಯಾಗಬೇಕಿತ್ತು. ಇಲ್ಲದಿದ್ದರೆ ನೀವು ಲಂಚ್ ಅವರನ್ನು ನೀವು ನಿಗದಿಪಡಿಸಬೇಕಿತ್ತು. ಅರ್ಧಗಂಟೆ ಮುಕ್ಕಾಲು ಗಂಟೆ ಲಂಚ್ ಅವರ್ ಎಂದು ನಿಗದಿಪಡಿಸಿ ಸದನವನ್ನು ಮುಂದೂಡಿ ನಂತರ ಸಭೆ ಸೇರಬೇಕಾಗಿತ್ತು. ಇದು ಕೇವಲ ಶಾಸಕರಿಗಲ್ಲ, ಶಾಸಕರು ತಮ್ಮ ಕರ್ತವ್ಯವನ್ನು ಮರೆತು ಈ ರೀತಿ ನಮ್ಮ ಹಿರಿಯ ಮಂತ್ರಿಗಳು ಉಪಯೋಗಿಸಿದ ಶಬ್ದವನ್ನು ನಾನು ವಿಧಿಯಿಲ್ಲದೆ ಉಪಯೋಗಿಸಬೇಕಾಗುತ್ತದೆ. ಬೇಜವಾಬ್ದಾರಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಬಾರದೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

2.00 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ : ಇದನ್ನು ನಾನು ಮೊದಲೇ ಪ್ರಸ್ತಾಪ ಮಾಡಬೇಕೆಂದಿದ್ದೆ. ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪ್ರಾರಂಭವಾಗಿರುವುದು ಮೊದಲೇ ದಿನ. ಮಾನ್ಯ ನಾಗೇಗೌಡರು ವಿಚಾರಪೂರ್ಣವಾಗಿ, ಶಕ್ತಿಪೂರ್ಣವಾಗಿ ಮಾತನಾಡುತ್ತಾರೆಂದು ಅಂದುಕೊಂಡಿದ್ದೆ. ಅವರು ಏಕೋ ಮುಂದೆ ಹೋಗಲಿಲ್ಲ, ಬಹಳ ಬೇಗ ಪುಟಗಳನ್ನು ತಿರುಗಿಸಿ ಮುಗಿಸಿದರು. ಅದಾದಮೇಲೆ ಮಾನ್ಯ ಶರಣಪ್ಪನವರೂ ಅಷ್ಟೇ, ಇಡೀ ದಿನವೆಲ್ಲಾ ತಮ್ಮ ಸರ್ಕಾರದ ಸಾಧನೆಗಳ ಬಗ್ಗೆ ಹೇಳಬೇಕಾಗಿತ್ತು. ಮಾನ್ಯ ರಾಜ್ಯಪಾಲರು ಎಷ್ಟು ಕಷ್ಟಪಟ್ಟು, ಒಂದು ಗಂಟೆ, ಪ್ರತಿ ಪದ ಪದವನ್ನೂ ಒತ್ತಿ ಜಂಟಿ ಅಧಿವೇಶನದಲ್ಲಿ ಭಾಷಣ ಮಾಡಿದರು. ಮತ್ತು ಇದನ್ನು ನೋಡಿದಾಗ ನನಗನಿಸಿತ್ತು ಇವರೆಲ್ಲರೂ ತಮ್ಮ ಸರ್ಕಾರದ ಸಾಧನೆಗಳೆಲ್ಲವನ್ನೂ ಬಹಳ ಸುಧೀರ್ಘವಾಗಿ ಮಾತನಾಡುತ್ತಾರೆಂದು ಅಂದುಕೊಂಡಿದ್ದೆ. ಜೊತೆಗೆ, ವಿರೋಧಪಕ್ಷದ ನಾಯಕರು ತಮ್ಮ ಭಾಷಣವನ್ನು ಆರಂಭ ಮಾಡಿದರು. ನಾನು ನೋಡುತ್ತಾ ಇದ್ದೇನೆ. ಸರ್ಕಾರದ ಪರವಾಗಿ 8-10 ಜನರು, ಕೆಲಸಕ್ಕೆ ಬಾರದವರು ಅಂದರೆ, ಸಂಬಂಧ ಇಲ್ಲದಿರತಕ್ಕಂಥವರು, ಸ್ವಲ್ಪ ನೋಡೋಣವೆಂದು ಇಲ್ಲಿ ಕುಳಿತಿದ್ದಾರೆ. ಮುಂದಿನ ಕುರ್ಚಿಯಲ್ಲಿ ಯಾವ ಒಬ್ಬ ಅಧಿಕಾರಿಯೂ ಇಲ್ಲ, ಮತ್ತು ಮುಖ್ಯಮಂತ್ರಿಗಳು ಎಲ್ಲಿ ಹೋದರೆಂದು ಈ ಸದನದಲ್ಲಿ ಯಾರಿಗೂ ಗೊತ್ತಿಲ್ಲ, ಅವರು ಎಲ್ಲಿದ್ದಾರೆ, ಎಲ್ಲಿ ಹೋಗಿದ್ದಾರೆ, ಇವತ್ತು ಅವರ ಕಾರ್ಯಕ್ರಮ ಏನು? ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿದಾಗ ಮುಖ್ಯಮಂತ್ರಿಯಾದವರು ಈ ಸದನದಲ್ಲಿ ಇರಬೇಕಾದುದು ಅವರ ಕರ್ತವ್ಯ. ಎಲ್ಲಕ್ಕಿಂತ ಹೆಚ್ಚಾಗಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ಆಳುವ ಪಕ್ಷದವರು ಬಹಳ ಎಚ್ಚರ ರೀತಿಯಲ್ಲಿ ಕುಳಿತು ಅವರು

ಏನೇನು ಮಾತನಾಡುತ್ತಾರೆ ಎಂಬುದನ್ನು ಕೇಳತಕ್ಕಂಥಾದ್ದು ಒಂದು ಸಂಪ್ರದಾಯ ಮತ್ತು ಶಿಷ್ಟಾಚಾರ. ಆದರೆ, ಇವತ್ತು ಯಾರೂ ಇಲ್ಲ. ಈ ಸಭೆಗೆ ಒಂದು ರೀತಿಯ ಗ್ರಹಣ ಹಿಡಿದಹಾಗೆ ಆಗಿದೆ. ನಾವು ಇದನ್ನು ಅನೇಕಸಾರಿ, ತಾವು ಅಧ್ಯಕ್ಷತೆ ವಹಿಸಿದಾಗಲೇ ಮಾತನಾಡಿದ್ದೇವೆ. ನನಗನಿಸುತ್ತದೆ, ಏಕೆ ಈ ಗೊಂದಲ, ಕಾರಣ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಆಸಕ್ತಿ ಇಲ್ಲ, ಹೇಗಾದರೂ ನಡೆದುಕೊಂಡು ಹೋಗಲಿ. ಇದು ಪ್ರತಿಷ್ಠೆಯ ಪ್ರಶ್ನೆ ಅಲ್ಲ, ನಾವು ಇದ್ದಾಗ ಅವರು ಇರಬೇಕು ಎಂಬುದಲ್ಲ. ಆದರೆ ಈ ಹೌಸ್‌ನಲ್ಲಿ ಇಲ್ಲಿಯವರೆಗೆ ನಡೆದುಕೊಂಡು ಬಂದಂಥ ಒಂದು ಕನ್‌ವೆನ್‌ಷನ್ ಯಾವಾಗಲೂ ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ಹಿಂದೆ ಇದೇ ರೀತಿ ಆಗುತ್ತಿತ್ತೆ? ಮಾನ್ಯ ದೇವೇಗೌಡರೂ ಕೂಡ ಇದೇ ಸ್ಥಾನದಲ್ಲಿ ಕುಳಿತು, 5-6 ವರ್ಷಗಳ ಕಾಲ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಆಗ ಮುಖ್ಯಮಂತ್ರಿಯವರು ಇಲ್ಲದಾಗ ಭಾಷಣ ಮಾಡಿದ್ದಾರೆಯೇ? ಒಮ್ಮೆ ಕಡತವನ್ನು ತೆಗೆದುನೋಡಿ. ಅಥವಾ ಮಂತ್ರಿಗಳು ಇಲ್ಲದೇ ಇದ್ದಾಗ ಭಾಷಣ ಮಾಡಿದ್ದಾರೆಯೇ? ಇವತ್ತು ಮುಖ್ಯ ಕಾರ್ಯದರ್ಶಿ ಇಲ್ಲ, ಹಣಕಾಸಿನ ಕಾರ್ಯದರ್ಶಿ ಇಲ್ಲ, ಸಂಬಂಧಪಟ್ಟ ಯಾವ ಕಾರ್ಯದರ್ಶಿಯೂ ಇಲ್ಲ, ಬರೀ ಒಂದು ಕಡೆ ಅಧೀನ ಕಾರ್ಯದರ್ಶಿ, ಶಾಖಾಧಿಕಾರಿಗಳನ್ನು ಇಟ್ಟುಕೊಂಡು ನೀವು ಈ ಸದನವನ್ನು ನಡೆಸುತ್ತೀರಿ ಇನ್ನೊಂದು ಕಡೆ ಸಂಬಂಧಪಟ್ಟ ಮಂತ್ರಿಗಳೂ ಕೂಡ ಇಲ್ಲವೆಂದು ಹೇಳಿದರೆ, ಏಕೆ ಸದನ ನಡೆಸಬೇಕು? ಯಾವುದೋ ಎಂದು ಚರ್ಚೆ ನಡೆಯುತ್ತಿದೆ, ಸಂಬಂಧಪಟ್ಟವರಿಗೆ ಮಾತ್ರ ಇದು ಸಂಬಂಧವಿದೆ, ವಿದ್ಯುಚ್ಛಕ್ತಿ ಬಗ್ಗೆ ಚರ್ಚೆ ನಾಳೆ ಇದೆ, ಅದಕ್ಕೆ ಮಾತ್ರ ಜೆ.ಹೆಚ್. ಪಟೇಲರು ಒಬ್ಬರು ಕುಳಿತಿದ್ದಾರೆಂದು ಹೇಳಿದರೆ ನಾವು ಒಪ್ಪಿಕೊಳ್ಳೋಣ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ, ಚರ್ಚೆಯಲ್ಲಿ ಭಾಗವಹಿಸಿದಾಗ ಏನು ಹೇಳುತ್ತಾರೆ, ಏನಿಲ್ಲ ಎಂಬುದನ್ನು ಕೇಳುವುದು ಬೇಡವೇ? ಬಹುಶಃ ನಮ್ಮ ಪ್ರಭಾವ ಕಡಿಮೆ ಇದೆಯೆಂದು ಅವರು ತಿಳಿದುಕೊಂಡಿದ್ದಾರೋ ಅಥವಾ ಏನಾದರೂ ಹೇಳಿಕೊಂಡು ಹೋಗಲಿ ನಾವು ಮಾಡುವುದನ್ನು ಮಾಡೋಣವೆಂದು ತಿಳಿದುಕೊಂಡಿದ್ದಾರೋ? ಈ ರೀತಿಯಾಗಿ ಸದನ ಯಾವಾಗಲೂ ನಡೆದಿಲ್ಲ. ತಾವು ಕೂಡ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದೀರಿ. ಯಾವಾಗಲಾದರೂ ಇಷ್ಟು ಖಾಲಿ ಕುರ್ಚಿಗಳು ಇರುತ್ತಿದ್ದವೇ? ಇವತ್ತು ತಮ್ಮ ಮನಸ್ಸಿಗೆ ಬಂದಿದೆ ಎಂದು ಹೇಳಿ ಒಪ್ಪಿಕೊಳ್ಳುತ್ತೇವೆ. ಇಲ್ಲವೇ, ಸುಮ್ಮನೆ ಮಾತಿನ ಬಗ್ಗೆ ಡಿಪೆಂಡ್ ಮಾಡುವುದಾದರೆ ಮಾಡಿ, ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಅವರು ಇರಬೇಕೆಂದು ನನ್ನ ಬಾಯಿಂದ ಬರಲಿಲ್ಲ, ನಾನು ಏನು ಕೇಳುತ್ತಾ ಇಲ್ಲ, ನಾನು ಮಾತನಾಡುತ್ತಿದ್ದೇನೆ. ಹಿರಿಯ ಸದಸ್ಯರಾದ ಖರ್ಗೆಯವರು ಹೇಳಿದರು, ಮಾನ್ಯ ವಾಟಾಳ್ ನಾಗರಾಜ್‌ರು ಹಿರಿಯ ಸದಸ್ಯರಾಗಿ, ಏನು ನಡೆದುಕೊಂಡು ಬಂದಿದೆ ಎಂಬುದನ್ನು ಹೇಳಿದರು. ಹೇಗೆ ನಡೆದುಕೊಳ್ಳಬೇಕೋ ಅದು ನಿಮಗೆ ಬಿಟ್ಟಿದ್ದು. ನಾನು ಅದರ ಬಗ್ಗೆ ಒತ್ತಾಯ ಮಾಡುವುದಿಲ್ಲ. ಅದರ ಅಗತ್ಯವೂ ಇಲ್ಲ. ನೀವು ಕುಳಿತಿದ್ದರೆ ಒಳ್ಳೆಯದಾಗುತ್ತದೆ, ಉಪಯೋಗವಾಗುತ್ತದೆ, ಅದಕ್ಕೆ ಪರಿಹಾರ ಮಾರ್ಗ ಹುಡುಕಬಹುದು. ಇದಕ್ಕೆ ತಮಗೆ ಸಮಯ ಇದೆ, ಅದು ನನಗೆ ಗೊತ್ತಿದೆ, ಇಲ್ಲವೆಂದಲ್ಲ. ಅದಕ್ಕೋಸ್ಕರ ನಾನು ಒತ್ತಾಯ ಮಾಡುವುದಕ್ಕೆ ಸಿದ್ಧನಿಲ್ಲ.

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಅಧಿಕಾರಿಗಳು ಇಲ್ಲದೇ ಸದನ ಯಾವ ರೀತಿ ನಡೆಯುತ್ತದೆ....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಯಾರಿಗೂ ಜವಾಬ್ದಾರಿ ಇಲ್ಲವೇ?

(ಗೊಂದಲ)

ಶ್ರೀ ಮಂಜುನಾಥ ಸಿ. ಕುನ್ನೂರ್ : ಸಭೆಯನ್ನು ಮುಂದೂಡಿ, ಅವರು ಅನಂತರ ಮಾತನಾಡಲಿ.

(ಗೊಂದಲ)

ಉಪಾಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ಈ ತರಹ ಎಲ್ಲರೂ ಎದ್ದುನಿಂತು ಮಾತನಾಡಿದರೆ, ಯಾರ ಮಾತು ಕೇಳುವುದಕ್ಕಾಗುತ್ತದೆ? ಅವಕಾಶ ಮಾಡಿಕೊಟ್ಟರೆ, ಸದುಪಯೋಗ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಿದ್ದಾರೆ. ವಾಟಾಳ್ ನಾಗರಾಜ್‌ರು, ಯಾರೂ ಇಲ್ಲವೆನ್ನತಕ್ಕಂಥ ಮಾತು ಎತ್ತಿದ್ದಾರೆ. ಅದು ಕೇಳತಕ್ಕಂಥಾದ್ದು ಸಹಜ ಕೇಳಲಿ.

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಇದು ಸದನಕ್ಕೆ ಶೋಭೆ ತರುವಂತಾದ್ದು ಅಲ್ಲ. ಆಡಳಿತವನ್ನು ನಡೆಸುವವರು ದಯಮಾಡಿ, ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು, ಮಂತ್ರಿಗಳನ್ನೂ, ಅಧಿಕಾರಿಗಳನ್ನೂ ಕರೆಸಬೇಕು ಎಂದು ನನ್ನ ಅಗ್ರಹವೇ ಹೊರತು ಬೇರೆ ಅಲ್ಲ. ಇದು ಪ್ರಜಾ ತಂತ್ರದಲ್ಲಿ ನಮ್ಮ ಹಕ್ಕು. ಇದರಿಂದ ಸದನದ ಹೊರಗಡೆಯೂ ಶಾಸಕರಿಗೆ ಗೌರವ ಇಲ್ಲ....

ಶ್ರೀ ಆರ್.ಎಲ್. ಜಾಲಪ್ಪ : ನೀವೊಬ್ಬರೇ ನಮಗೆಲ್ಲರಿಗೂ ಪಾಠ ಹೇಳಿಕೊಡುವ ಹಾಗೆ ಕಾಣುತ್ತದೆ.

ಒಬ್ಬ ಮಾನ್ಯ ಸದಸ್ಯರು : ಒಂದು ಪದಪ್ರಯೋಗದ ಬಗ್ಗೆ ಸದಸ್ಯರಿಗೆ ಎಷ್ಟು ಕಾಳಜಿ ಇದೆ. ನಮ್ಮ ಮೂಲ ಉದ್ದೇಶದ ಬಗ್ಗೆ ಅವರಿಗೆ ಕಾಳಜಿ ಇಲ್ಲ. ಅವರ ಪರವಾಗಿ ತಮಟೆ ಹೊಡೆಯಬೇಕೆಂದು ಅವರು ನಿರ್ಧಾರ ಮಾಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ನಾಗೇಗೌಡರು ಇಲ್ಲಿ ಭಾಷಣವನ್ನು ಪ್ರಾರಂಭ ಮಾಡಿದಾಗ, ಮಿತ್ರರಾದ ದೇಶಪಾಂಡೆಯವರೂ ಇಲ್ಲಿದ್ದರು. ನಮ್ಮ ಕಡೆ ಎಷ್ಟು ಜನರಿದ್ದಾರೆ. ಅವರ ಕಡೆ ಎಷ್ಟು ಜನರಿದ್ದಾರೆಂದು ಎಣಿಸಿದೆವು. ಆ ಕಡೆ 17 ಜನರು, ನಮ್ಮ ಕಡೆ 48 ಜನರೂ ಇದ್ದರು. ಆ ಕಡೆಯವರು ಈಗ ಊಟ ಮಾಡಿಕೊಂಡು ಬಂದು ಕುಳಿತಿದ್ದಾರೆ. ಇವತ್ತು ನಮಗೆ ಪಾಠ ಹೇಳುವುದಕ್ಕೆ ಹೊರಟಿದ್ದಾರೆ.

(ಗೊಂದಲ)

ಶ್ರೀ ಬಿ.ಬಿ. ಶಿವಪ್ಪ : ತಾವು ಅನುಭವಿ ಮಂತ್ರಿಗಳು ಇದ್ದೀರಿ. ಅಲ್ಲಿ, ಇಲ್ಲಿ ಎಂದು ಹೇಳಬೇಡಿ. ತಮ್ಮದು ಏನಾದರೂ ತಪ್ಪಾಗಿದ್ದರೆ ಆ ತಪ್ಪನ್ನು ಸರಿಪಡಿಸುತ್ತೇವೆಂದ ಹೇಳಿ. ತಾವು ಹಿರಿಯ ಮಂತ್ರಿಗಳು, ತಮ್ಮ ಬಗ್ಗೆ ಗೌರವ ಇದೆ. ತಾವು ಈ ರೀತಿ ಮಾತನಾಡಬಾರದು.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಒಪ್ಪುತ್ತೇನೆ ಆದರೆ, ಮುಖ್ಯಮಂತ್ರಿಗಳು ಇವತ್ತು ಚಿತ್ರದುರ್ಗದಲ್ಲಿ ಯಾದವರ ಸಮ್ಮೇಳನ ಇದೆ. ಅದಕ್ಕೆ ಹೋಗಿದ್ದಾರೆ. ತಮಗೆ ಆ ವಿಷಯವನ್ನು ತಿಳಿಸಿದ್ದಾರೆ ಮತ್ತು ಇತರೆ ಮಂತ್ರಿಗಳು ಕೆಲವರು ಊಟಕ್ಕೆ ಹೋಗಿದ್ದಾರೆ. ಮತ್ತೆ ಕೆಲವರು ಆ ಸದನದಲ್ಲಿದ್ದಾರೆ. ಇನ್ನು ಅಧಿಕಾರಿಗಳು ಇಲ್ಲಿ ಕುಳಿತುಕೊಳ್ಳುವುದಕ್ಕೆ ಹೇಳಿ ಕಳುಹಿಸುತ್ತೇನೆ. ಸ್ವಲ್ಪ ವ್ಯತ್ಯಾಸವಾಗಿರುತ್ತದೆ. ದಯಮಾಡಿ, ಇದನ್ನೇ ದೊಡ್ಡದು ಮಾಡುವುದಕ್ಕೆ ಹೋಗಬೇಡಿ. ನೀವು ಇದನ್ನೇ ಮಾಡಿದ್ದೀರಿ, ನಾವು ಅದನ್ನೇ ಮಾಡಿದ್ದೇವೆ.

(ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನನಗನಿಸುತ್ತಾ ಇದೆ, ಇಂತಹ ಅನೇಕ ಸಂದರ್ಭಗಳಲ್ಲಿ ತಾವು ಪೀಠದ ಮೇಲೆ ಕುಳಿತಿರುವಾಗ ನಾವು ಒತ್ತಾಯ ಮಾಡಿದ್ದೇವೆ. ತಮ್ಮ ಬಲಗಡೆ ಒಬ್ಬ ಅಧಿಕಾರಿಯೂ ಇಲ್ಲ, ಇವತ್ತು ನಿಜವಾಗಿಯೂ ನನಗನಿಸುತ್ತದೆ. ಸರ್ಕಾರದ ಮೇಲೆ ಹಿಡಿತ ಇಲ್ಲ, ಮುಖ್ಯಮಂತ್ರಿ ದೇವೇಗೌಡರಿಗೆ ಅಧಿಕಾರಿಗಳ ಮೇಲೆ ಹಿಡಿತ ಇಲ್ಲ. ನಾವು ಹಿಂದೆ ನೋಡಿದ್ದೇವೆ, ಬಂಗಾರಪ್ಪನವರ ಸರ್ಕಾರ ನೋಡಿದ್ದೇವೆ, ವೀರೇಂದ್ರ ಪಾಟೀಲರ ಸರ್ಕಾರ ನೋಡಿದ್ದೇವೆ. ಇವತ್ತು ಅವರು ಇಲ್ಲಿದ್ದಾರೆಂದು ಹೇಳತಕ್ಕಂತಾದ್ದಲ್ಲ. ಇವತ್ತು ಅಲ್ಲಿ ಒಬ್ಬ ಅಧಿಕಾರಿಯೂ ಇಲ್ಲ, ಇದು ನಾಚಿಕೆಗೇಡು. ಇವತ್ತು ನಿಮ್ಮ ಸರ್ಕಾರದ ಕೊನೆಯ ಅಂಕದ ಪರದೆ ಬೀಳುತ್ತಿದೆ. ನಿಮ್ಮ ಸರ್ಕಾರದ ಆಡಳಿತ ಕುಸಿದು ಬಿದ್ದಿದೆ ನಿಮ್ಮ ಅಧಿಕಾರಿಗಳೊಬ್ಬರೂ ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನೀವಂತೂ ಇಲ್ಲಿಗೆ ಬರುವುದಕ್ಕಾಗುವುದಿಲ್ಲ, ನಿಮ್ಮ ಪಕ್ಷ ಇಲ್ಲಿಗೆ ಬರುವುದಕ್ಕೆ ಸಾಧ್ಯವಿಲ್ಲ. ನಾವೋ, ಅವರೋ ಯಾರೋ ಒಬ್ಬರು ಇಲ್ಲಿರಬೇಕು. ನಿಮಗೆ ಏಕೆ ಕನಸು?

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಜನ್ಮದಲ್ಲಿ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ' ದೇವೇಗೌಡರು ನಿಮ್ಮ ಪಕ್ಷವನ್ನು ಸೇರುವುದಕ್ಕೆ ಮುಂಚೆ ಇಬ್ಬರೇ ಗೆದ್ದಿದ್ದರು. ಶ್ರೀಮಾನ್ ಭೈರೇಗೌಡರು ಮತ್ತು ಶ್ರೀ ವೆಂಕಟೇಶ್‌ರವರು. ಆದರೆ, ಅವರು ಮುಖ್ಯ ಮಂತ್ರಿಯಾದರು. ಆದ್ದರಿಂದ, ನೀವು ಅನುಮಾನ ಪಡುವುದಕ್ಕೆ ಹೋಗಬೇಡಿ. ಇವತ್ತಲ್ಲ ನಾಳೆ ನಾನು ಮುಖ್ಯಮಂತ್ರಿಯಾಗತಕ್ಕಂತಾದ್ದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಏಕೆ ಆಗಬಾರದು ಸ್ವಾಮಿ. 1989ರಲ್ಲಿ ಮಾನ್ಯ ದೇವೇಗೌಡರ ಹಿಂದೆ ಎಷ್ಟು ಜನ ಇದ್ದರು, ಇಬ್ಬರು ಮಾತ್ರ ಇದ್ದರು. ನಾನು ತಮಗೆ ಹೇಳುತ್ತಿದ್ದೇನೆ. ನೇರವಾಗಿ ಈ ಸದನದ ಗೌರವವನ್ನು ಉಳಿಸಬೇಕೆನ್ನುವುದಾದರೆ, ರಾಜ್ಯಪಾಲರ ಭಾಷಣಕ್ಕೆ ವಿರೋಧಪಕ್ಷದ ನಾಯಕರು ಪ್ರಾಮಾಣಿಕವಾಗಿ ಚಿಂತನೆ ಮಾಡಿ ಮಾತನಾಡುತ್ತಿದ್ದಾರೆ. ಆದರೆ, ಸರ್ಕಾರದ ಪರವಾಗಿ ಒಬ್ಬ ಅಧಿಕಾರಿ ಇಲ್ಲ, ಮುಖ್ಯಮಂತ್ರಿಗಳೂ ಇಲ್ಲವೆಂದು ಹೇಳುತ್ತಿದ್ದೀರಿ. ಅವರು ಯಾವುದೋ ಒಂದು ಸಮಾರಂಭಕ್ಕೆ ಹೋಗಿದ್ದಾರೆ, ಎಲ್ಲೋ ಕುಳಿತಿದ್ದಾರೆ. ನಮಗೆ ಹಿರಿಯ ಸಚಿವರ ಬಗ್ಗೆ ಬಹಳ ಗೌರವ ಇದೆ. ಮಿಕ್ಕ ಸಚಿವರು ಎಲ್ಲಿ ಹೋಗಿದ್ದಾರೆ? ನಿಜವಾಗಿಯೂ ನನಗನಿಸುತ್ತದೆ. ಇಂತಹ, ಕರಾಳ

ಭಾಯಿ, ಈ ಸರ್ಕಾರದ ಒಂದು ಧೋರಣೆ. ಈ ಸಭೆಯನ್ನು ಅವರು ಕಾಣುತ್ತಾ ಇರತಕ್ಕಂಥಾದ್ದು, ಅತ್ಯಂತ ನಾಚಿಕೆಯ ಪ್ರಶ್ನೆಯಾಗುತ್ತದೆ. ದಯಮಾಡಿ, ನಾನು ತಮಗೆ ಕೈಮುಗಿದು ಒತ್ತಾಯ ಮಾಡುತ್ತಿದ್ದೇನೆ. ಅಧಿಕಾರಿಗಳನ್ನು ಕರೆಯಿಸಿ ಮತ್ತು ಮುಖ್ಯಮಂತ್ರಿಗಳನ್ನು ಕರೆಯಿಸಿ. ಈ ಸಭೆಯನ್ನು ಮುಂದಕ್ಕೆ ಹಾಕಿ ಎಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ತಮಗೆ ಈ ಒಂದು ಅಧಿಕಾರ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುತ್ತೇನೆ, ಸಭೆಯನ್ನು ಮುಂದಕ್ಕೆ ಹಾಕ ಬೇಡಿ, ಮುಖ್ಯಮಂತ್ರಿಗಳು, ಮಂತ್ರಿಗಳು ಬರುವುದಕ್ಕೆ ಹೇಳಬೇಡಿ, ಅಧಿಕಾರಿಗಳನ್ನು ಕರೆಸಬೇಡಿ. ಏಕೆಂದರೆ ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಇಲ್ಲಿ ನಿಂತಿದ್ದೇವೆ. ನಾವು ಎಲ್ಲರೂ ಇದ್ದಾಗಲೂ ಭಾಷಣ ಮಾಡಿದ್ದೇವೆ. ಆಡಳಿತದಲ್ಲಿ ಯಾವ ಬದಲಾವಣೆಯಾಗಲಿಲ್ಲ. ನಾನು ಆರೋಪ ಮಾಡುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಂತಹ ಸನ್ನಿವೇಶದಲ್ಲಿ ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇದು ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರ ಪ್ರಶ್ನೆಯಲ್ಲ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ಅಧಿಕಾರಿಗಳು, ಮುಖ್ಯಮಂತ್ರಿಗಳು ಇಲ್ಲವೆಂದು ಹೇಳಿದರೆ, ಸಮಂಜಸವಾಗುತ್ತದೆಯೇ? ಈ ಸದನದಲ್ಲಿ ನಮ್ಮಂಥವರು 11 ಗಂಟೆಗೆ ಬಂದು ಕುಳಿತಿದ್ದೇವೆ. ಮಾನ್ಯ ಖರ್ಗೆಯವರು, ಮಾನ್ಯ ಬಂಗಾರಪ್ಪನವರು ಕುಳಿತು ಕೇಳುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರು, ಯಾರೂ ಬೇಡ, ಯಾರೂ ಬೇಕಾಗಿಲ್ಲ, ನಾನು ಮಾತನಾಡುತ್ತೇನೆಂದು ಹೇಳುವುದಾದರೆ, ಮಾತನಾಡಲಿ.

(ಈ ಸಂದರ್ಭದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಲು ಸಿದ್ಧವಾದರು)

ಅಧ್ಯಕ್ಷರು : ನೀವು ಇರುತ್ತೀರಿ ಎನ್ನುವ ಕಾರಣಕ್ಕೆ ನಾನು ಬಂದರೆ, ನಾನು ಬಂದ ತಕ್ಷಣ ಹೊರಟು ಹೋಗುತ್ತಿದ್ದೀರಿ. ಹೋಗಿ, ಹಾಗಾದರೆ ನಾನೇನು ಮಾಡುವುದಕ್ಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಯವರಿಗೆ ಈ ಸಭೆಯ ಬಗ್ಗೆ ಗೌರವ ಇಲ್ಲ ಅಥವಾ ವಿರೋಧಪಕ್ಷದ ನಾಯಕರು ಮಾತನಾಡುವಾಗ ಇರಬಾರದು ಎಂದಲ್ಲ, ತಮ್ಮಲ್ಲಿ ಕೇಳಿ ಹೋಗಿದ್ದಾರೆ. ಬಿಹಾರದ ಮುಖ್ಯಮಂತ್ರಿಗಳು ಬಂದಿದ್ದಾರೆ. ಹಾಗಾಗಿ ತಮ್ಮ ಅನುಮತಿ ಪಡೆದುಕೊಂಡು ಹೋಗಿದ್ದಾರೆ. ದಯಮಾಡಿ, ಅನಾವಶ್ಯಕವಾಗಿ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನೀವೂ ಕೂಡ ವಿರೋಧಪಕ್ಷದ ನಾಯಕರಾಗಿ ಕುಳಿತು, ಅನೇಕ ಬಾರಿ ಅಧಿಕಾರಿಗಳು ಇಲ್ಲ, ಅಧಿಕಾರಿಗಳು ಇಲ್ಲವೆಂದು ಹೇಳಿರುವುದು ಉಂಟು. ಆದ್ದರಿಂದ, ನಾನು ಅವಶ್ಯಕತೆಯಿಂದ ಹೇಳುತ್ತಿದ್ದೇನೆ. ಇದು ಅಧ್ಯಕ್ಷರಿಗೆ ಸೇರಿದ ಮಾತು. ನಾವು ಮುಖ್ಯಮಂತ್ರಿಗಳನ್ನೂ ಕೇಳುವುದಿಲ್ಲ, ಮಂತ್ರಿಗಳನ್ನೂ ಕೇಳುವುದಿಲ್ಲ. ಸಂಸದೀಯ ಸಚಿವರನ್ನೂ ಕೇಳುವುದಿಲ್ಲ. ತಮ್ಮಲ್ಲಿ ನೇರವಾಗಿ ಪ್ರಾರ್ಥನೆ ಮಾಡುತ್ತೇವೆ. ಈ ಸದನದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವಾಗ ಅಧಿಕಾರಿಗಳು ಇರಬೇಕೇ ಬೇಡವೇ ಎಂಬುದು ತಮಗೆ ಸೇರಿದ್ದುದು, ತಮಗೆ ಬಿಟ್ಟಿದ್ದುದು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಇದನ್ನು ಒಪ್ಪಿಕೊಳ್ಳುತ್ತೇನೆ. ಆಸಕ್ತಿ ಇಲ್ಲ ಎಂದಲ್ಲ, ವಿರೋಧಪಕ್ಷದ ನಾಯಕರು ಮಾತನಾಡುವಾಗ, ಮಂತ್ರಿಗಳಾಗಲೀ,

ಮುಖ್ಯಮಂತ್ರಿಗಳಾಗಲೀ, ಅಧಿಕಾರಿಗಳಾಗಲೀ ಇರಬೇಕೆಂಬುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಮಾನ್ಯ ಜಾಲಪ್ಪನವರು ಹೇಳಿದ ಹಾಗೆ, ಅಧಿಕಾರಿಗಳಿಗೆ ಆದೇಶ ಕೊಡುತ್ತೇವೆ. ಆದರೆ, ಒಂದು ವಿಷಯ. ಸದನದಲ್ಲಿ ನೂರಕ್ಕೆ ನೂರು ಹಾಜರಿ ಇರುವುದು ಮಾನ್ಯ ವಾಟಾಳ್ ನಾಗರಾಜ್ ಒಬ್ಬರೇ. ಜೊತೆಗೆ ಸದನದಲ್ಲಿ ನೂರಕ್ಕೆ ನೂರು ಹಾಜರಿ ಇರತಕ್ಕ ಪಕ್ಷ ಕೂಡ ಅದೇ. ನಿಮ್ಮದು ಒಂದೇ ಪಕ್ಷ. ಇದಕ್ಕಾಗಿ ನಿಮಗೆ ಅಭಿನಂದಿಸುತ್ತೇನೆ. ಆದರೆ, ಈ ಹೋರಾಟ ನೋಡಿದಾಗ, ನಾನು ಯಾರ ಬಗ್ಗೆಯೂ ಆಪಾದನೆ ಮಾಡುತ್ತಾ ಇಲ್ಲ, ಮಾನ್ಯ ಜಾಲಪ್ಪನವರೊಂದಿಗೆ ಮಾತನಾಡುತ್ತಾ ಇದ್ದೆ. ಇಲ್ಲ ಸದಸ್ಯರು ಕಡಿಮೆ ಇದ್ದಾರೆ ಎನ್ನುವ ಪ್ರಶ್ನೆಯಲ್ಲ. ನಾವು ಎಣಿಸುತ್ತಿದ್ದವು, ಮಾನ್ಯ ನಾಗೇಗೌಡರು ಮಾತನಾಡುವಾಗ, 16 ಜನರು ವಿರೋಧಪಕ್ಷದಲ್ಲಿದ್ದರು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ವಿರೋಧಪಕ್ಷದ ನಾಯಕರಾಗಿದ್ದವರು, ತಾವೇನು ಮಾತನಾಡುತ್ತಿದ್ದೀರಿ, ಲೆಕ್ಕಹಾಕಿ ಮಾತನಾಡುತ್ತಿದ್ದೀರೋ, ನಿಮ್ಮ ಸರ್ಕಾರಕ್ಕೆ ಜವಾಬ್ದಾರಿ ಏನು ಹೇಳಿ. ಮುಖ್ಯಮಂತ್ರಿಗಳ ಜವಾಬ್ದಾರಿ ಏನು, ನಿಮ್ಮ ಸರ್ಕಾರದ ನೀತಿ ಏನು....

ಶ್ರೀ ಆರ್.ವಿ. ದೇಶಪಾಂಡೆ : ವಿರೋಧಪಕ್ಷದ ನಾಯಕರು ಮಾತನಾಡುವಾಗ ಸದನದಲ್ಲಿ ಮಂತ್ರಿಗಳು ಉಪಸ್ಥಿತರಿರಬೇಕು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ನಾವು ಇರಬೇಕಾಗುತ್ತದೆ, ನಮ್ಮ ಕರ್ತವ್ಯ ಇದೆ. ಅದರೊಳಗೆ ಯಾವ ಸಂದೇಹ, .ಸಂಶಯ ಇಲ್ಲ, ಆದರೆ, ನಾನು ಏನು ಹೇಳುತ್ತಿದ್ದೇನೆ. ದಯಮಾಡಿ ತಿಳಿದುಕೊಳ್ಳಿ. ಯಾವ ಪ್ರಕಾರ ಇಲ್ಲಿ ಕೆಲಸ ಕಾರ್ಯ ನಡೆಯಬೇಕು ಎಂದು ಎಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ಮತ್ತು ಎಲ್ಲರೂ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ. ಕೇವಲ ಪಕ್ಷದೊಳಗೆ ಇದಾಗುತ್ತದೆ ಎಂದಲ್ಲ, ಇದಕ್ಕೆ ಎಲ್ಲರೂ ಜವಾಬ್ದಾರಿ ಇದ್ದಾರೆಂದು ನಾನು ಭಾವಿಸಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳಿಗೆ ಯಾವುದೋ ಒಂದು ಕೆಲಸ ಇರುತ್ತದೆ, ಮುಂಚಿತವಾಗಿಯೇ ಕಾರ್ಯಕ್ರಮ ನಿಗದಿಯಾಗಿರುತ್ತದೆ. ಅವರು ತಮ್ಮನ್ನು ಕೇಳಿಕೊಂಡು ಅಥವಾ ಸದನಕ್ಕೆ ಪತ್ರ ಬರೆದು ಹೋಗಿದ್ದಾರೆಂದು ಹೇಳಿದರೆ ಅಡ್ಡಿಯಿಲ್ಲ. ಏಕೆಂದರೆ, ಅನೇಕ ಕಾರ್ಯಕ್ರಮಗಳು ಇರುತ್ತವೆ. ಆದರೆ, ಬೇರೆ ಮಂತ್ರಿಗಳೂ ಇಲ್ಲಿ ಇರುವುದಿಲ್ಲ ಹೊರಗೆ ಹೋಗುತ್ತಾರೆ, ಅವರು ಇಲ್ಲಿ ಕೂಡುವುದಕ್ಕೆ ಏನು ಕಷ್ಟವಿದೆ? ಎರಡನೆಯದು, ಕಾರ್ಯದರ್ಶಿಗಳಿಗೆ ಏನು ಕೆಲಸ ಇದೆ? ಕೊನೆಯಪಕ್ಷ 4 ಜನ ಕಾರ್ಯದರ್ಶಿಗಳಾದರೂ ಇರಬೇಕು. ಇವತ್ತು ಮುಖ್ಯಕಾರ್ಯದರ್ಶಿ ಇಲ್ಲ, ಅಪರ ಮುಖ್ಯಕಾರ್ಯದರ್ಶಿ ಇಲ್ಲ, ಅಭಿವೃದ್ಧಿ ಕಾರ್ಯದರ್ಶಿ ಇಲ್ಲ, ಹಣಕಾಸಿನ ಕಾರ್ಯದರ್ಶಿ ಇಲ್ಲ, ನೂರೆಂಟು ಕಾರ್ಯದರ್ಶಿಗಳಲ್ಲಿ ಒಬ್ಬರೂ ಇಲ್ಲ. ಬರೀ ಶಾಖಾಧಿಕಾರಿಗಳು, ಅಧೀನ ಕಾರ್ಯದರ್ಶಿಗಳ ಮೇಲೆ ಈ ಅಧಿವೇಶನವನ್ನು ನಡೆಸುತ್ತೀರಾ? ನಿಮಗೆ ಏನೋ ಕೆಲಸ ಇದೆ ಅಥವಾ ವಿಧಾನ ಪರಿಷತ್ತಿನಲ್ಲಿರುತ್ತೀರಿ. ಇದನ್ನು ಒಪ್ಪೋಣ. ಈ ರೀತಿ ಸದನವನ್ನು ನಡೆಸಿದರೆ, ಮತ್ತೆ ಯಾವ ರೀತಿಯಿಂದ ಇದಕ್ಕೆ ಗೌರವ ತಂದು ಕೊಟ್ಟ ಹಾಗೆ ಆಗುತ್ತದೆ? ಬರೆದುಕೊಳ್ಳುವವರು ಯಾರೂ ಇಲ್ಲವೆಂದರೆ, ತಾವೇ ಹೇಳಿ. ಸಂಬಂಧಪಟ್ಟ ಅಧಿಕಾರಿಗಳಾದರೂ ಬರೆದುಕೊಂಡು, ತಮಗೆ ಪುನಃ ಫೀಡ್ ಮಾಡುತ್ತಾರೆಂದು ಹೇಳಿದರೆ ಒಪ್ಪಿಕೊಳ್ಳುತ್ತೇವೆ. ಆದರೆ, ಅವರೂ ಇಲ್ಲ, ನೀವೂ ಇಲ್ಲವೆಂದು ಹೇಳಿದರೆ, ನಾವು ಇನ್ನು ಯಾರಿಗೆ ಹೇಳೋಣ? ಎಷ್ಟು ಸಲ ಇದನ್ನು ನುಂಗಿಕೊಂಡು, ನುಂಗಿಕೊಂಡು ಇದೇ ರೀತಿ ಕುಳಿತುಕೊಳ್ಳುವುದು? ಇದಕ್ಕೆ ಏನಾದರೂ ಇತಿಮಿತಿ ಬೇಕು. ನಾವು ಹೇಳುವುದು, ಅಪರೂಪಕ್ಕೆ ಹೊರಗೆ ಹೇಳುವುದಕ್ಕಾಗುವುದಿಲ್ಲ, ಹೊರಗೆ ಯಾರೂ ಕೇಳುವುದಿಲ್ಲ, ಕೊನೆಯ ಪಕ್ಷ ಈ

ಸದನದಲ್ಲಾದರೂ ಹೇಳಿದರೆ, ಅದು ಜನರಿಗೆ ಹೋಗಿ ಮುಟ್ಟುತ್ತದೆ. ಅವರ ಬಗ್ಗೆ ನಾವು ಮಾತನಾಡಿದ್ದಾಗಲೀ ಅಥವಾ ಸರ್ಕಾರ ಏನಾದರೂ ತಪ್ಪು ಮಾಡಿದ್ದನ್ನು ಎತ್ತಿಹಿಡಿದು, ಸರಿಪಡಿಸುವುದಾದರೂ ಮಾಡುತ್ತೇವೆ ಎನ್ನತಕ್ಕ ದೃಷ್ಟಿಯಿಂದ ನಾವು ಬಂದು, ಇಲ್ಲಿ ಮಾತನಾಡುತ್ತೇವೆಯೇ ಹೊರತು, ಇದನ್ನು ಕೇಳುವುದಕ್ಕೂ ತಯಾರಿಲ್ಲವೆಂದು ಹೇಳಿದರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ನಾವು ಇಲ್ಲಿ ಮಾತನಾಡಿದರೆ ಪ್ರಯೋಜನವಿಲ್ಲ ಮತ್ತು ಈ ಸದನವನ್ನು ಕರೆಯತಕ್ಕ ಅವಶ್ಯಕತೆ ಕೂಡ ಇಲ್ಲ.

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೇ, ನಿಮ್ಮ ಮಾತನ್ನು ಕೇಳಿದರೆ ನಾನು ಬಹಳ ನೋವಿನಿಂದ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಖರ್ಗೆಯವರು ಹೇಳಿದಂತೆ ಅನೇಕ ಜವಾಬ್ದಾರಿ ಇರುತ್ತದೆ. ಸದನ ನಡೆಯುವಾಗ ಇಲ್ಲಿರತಕ್ಕಂತಾದ್ದು ಸಂಪ್ರದಾಯವೇ ಆದರೂ, ಇನ್ನೊಂದು ರಾಜ್ಯದ ಮುಖ್ಯಮಂತ್ರಿಗಳು ಅವರು ನನ್ನ ಅನುಮತಿ ಕೇಳಿ ಹೋಗಿದ್ದಾರೆ. ಆದರೆ, ಉಳಿದ ಮಂತ್ರಿಮಂಡಲದ ಸದಸ್ಯರು ಇಲ್ಲಿರಬೇಕು, ಇಲ್ಲವೇ ವಿಧಾನ ಪರಿಷತ್ತಿನಲ್ಲಿ ಇರಬೇಕು. ಸದನ ನಡೆಯುವ ವೇಳೆಗೆ ಅವರಿಗೆ, ಅವರ ಇಲಾಖೆಯ ನಿಮಿತ್ತ ಡೆಲ್ಲಿಯಲ್ಲಿ ಅಥವಾ ಬೇರೆ ಕಡೆಯಲ್ಲಿ ಸಭೆ, ಸಮಾವೇಶಗಳೇನಾದರೂ ಇದ್ದರೆ, ನಮ್ಮ ಅನುಮತಿ ಪಡೆದು ಹೋಗಬೇಕು. ಈ ರೀತಿ ಮಾಡತಕ್ಕಂಥಾದ್ದು ಮತ್ತು ಸದನವನ್ನು ಇಷ್ಟು ಲಘುವಾಗಿ ಕಾಣತಕ್ಕಂಥ ಪ್ರವೃತ್ತಿ ಸರಿಯಲ್ಲ. ಯಾರೂ ಇಲ್ಲ ಶಾಶ್ವತವಾಗಿ ಕುಳಿತುಕೊಳ್ಳುವುದಿಲ್ಲ. ಸಮಯದಿಂದ ಸಮಯಕ್ಕೆ ನಾವೆಲ್ಲರೂ ಹೇಗೆ ವರ್ತಿಸುತ್ತೇವೆ ಎನ್ನತಕ್ಕಂಥದ್ದು ದಾಖಲೆಗಳಲ್ಲಿ ನಿಂತುಹೋಗುತ್ತದೆ. ನಾವು ಬರತಕ್ಕಂಥ ಜನಾಂಗದ ಮುಂದೆ ಅಪರಾಧಿಗಳಾಗಿ ಕಾಣಬಾರದು. ಇದು ಬಹಳ ಇತಿಹಾಸ ಹೊಂದಿರತಕ್ಕಂಥ ಸದನ. ಈ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಅನೇಕ ಜನರು ಜೀವದಾನ ಮಾಡಿ ಈ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತಂದಿದ್ದಾರೆ. ಸದನದಲ್ಲಿ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಮಂತ್ರಿಗಳು ಯಾರೂ ಹಾಜರಿರುವುದಿಲ್ಲ, ಅಧಿಕಾರಿಗಳು ಹಾಜರಿರುವುದಿಲ್ಲವೆಂದು ಹೇಳಿದರೆ, ಇದು ಕೇವಲ ವಿರೋಧಪಕ್ಷದವರು ಕೇಳಿದ್ದಕ್ಕೆ ಸಾಂಪ್ರದಾಯಿಕವಾಗಿ ಉತ್ತರ ಹೇಳತಕ್ಕಂಥ ಮಾತಲ್ಲ. Basically we are all democrats, committed to democracy and democratic institutions. If we mean to respect these institutions there should be a distinct difference in our conduct and attitude. Please note this.

ಡಿಫೆಂಡ್ಸ್ ಮಾಡಿಕೊಳ್ಳತಕ್ಕಂಥದ್ದು ಬೇರೆ. You can always defend. But when it comes to the question of admission of guilt, there should be a candid admission on our side when we err. That is going to improve our functioning. Hon'ble Revenue Minister, who is the senior most member of the Council of Ministers, let him convey the views of the House to the Chief Minister and to his colleagues. There are so many youngsters in the Council of Ministers. What happened to them. If they have personally become Ministers is that be-all-end-all? After all Executive is the creation of the Legislature. Now let us go ahead.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ಸರ್ಕಾರಕ್ಕೆ ಗ್ರಾಮೀಣ ಜನರ ಅಭಿವೃದ್ಧಿ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲ. ರಾಜ್ಯಪಾಲರ ಭಾಷಣದಲ್ಲಿ ಅವರು ಹೇಳುತ್ತಾ ಹೇಳುತ್ತಾರೆ. "ಬಡಜನತೆಗೆ ವಸತಿ ಸೌಕರ್ಯವನ್ನು ಒದಗಿಸುವ ಬಗ್ಗೆ ನನ್ನ ಸರ್ಕಾರಕ್ಕೆ ತುಂಬಾ ಕಳಕಳಿ ಇದೆ. ರಾಜ್ಯದಲ್ಲಿನ ಸುಮಾರು

19 ಲಕ್ಷ ಕುಟುಂಬಗಳಿಗೆ ವಸತಿ ನಿವೇಶನಗಳನ್ನು ನೀಡುವ ಮೂಲಕ ಸೂರು ಒದಗಿಸುವ ತುರ್ತು ಅಗತ್ಯ ಇದೆ ಎನ್ನುವ ಅಂಶ ಕಳೆದ ಬೇಸಿಗೆಯಲ್ಲಿ ನಡೆಸಿದ ಆಧುನಿಕ ಸಮೀಕ್ಷೆಯಿಂದ ತಿಳಿದು ಬಂದಿದೆ." ನಾವು ರಾಜ್ಯಪಾಲರ ಭಾಷಣದಲ್ಲಿ ನಿರೀಕ್ಷೆ ಮಾಡುತ್ತಿದ್ದುದು ನೀವು ಅಧಿಕಾರಕ್ಕೆ ಬಂದ 3-4 ತಿಂಗಳಲ್ಲೇ ಜಿಲ್ಲಾಧಿಕಾರಿಗಳು ರೆವಿನ್ಯೂ ಅಧಿಕಾರಿಗಳು ಹಗಲು ರಾತ್ರಿ ಕರ್ನಾಟಕ ರಾಜ್ಯದ ಉದ್ದಗಲಕ್ಕೆ ಯಾವ ಬಡವರಿಗೆ ಮನೆ ಇಲ್ಲ, ಯಾವ ಬಡವರಿಗೆ ಸೈಟ್ ಇಲ್ಲ ಎನ್ನುವಂತದಾದ್ದು ಗುರುತು ಮಾಡುವಂತಹ ಕಾರ್ಯವನ್ನು ಮಾಡಿದಿರಿ. ನಮ್ಮ ಕೈಯಿಂದ ಅವರು ಭಿಕ್ಷುಕರಂತೆ ಸಾಲಲ್ಲಿ ನಿಂತಾಗ ನೀವು ಕೊಟ್ಟಂತಹ ಸರ್ಕಾರಿ ಅರ್ಜಿಗಳನ್ನು ನಾವೆಲ್ಲ ಶಾಸಕರು ವಿತರಣೆ ಮಾಡಿದೆವು. ಒಂದು ಲಕ್ಷದ ಇಪ್ಪತ್ತು ಸಾವಿರ ಮನೆಗಳನ್ನು ಕಟ್ಟುತ್ತೇವೆ ಬೇರೆ ಬೇರೆ ಯೋಜನೆಗಳಲ್ಲಿ ಅಂತ ಹೇಳಿದಿರಿ. ಇವತ್ತು 14 ತಿಂಗಳು ಆದ ಮೇಲೆ ರಾಜ್ಯಪಾಲರ ಭಾಷಣ ಮಾಡುವಂತಹ ಕಾಲದಲ್ಲಿ ಅಧಿಕೃತವಾಗಿ ನಾವು ಇಷ್ಟು ಜನರನ್ನು ಗುರುತು ಮಾಡಿದೆವು. ಇಷ್ಟು ಜನರಿಗೆ ಮನೆಗಳನ್ನು ಕಟ್ಟಿಕೊಟ್ಟಿದ್ದೇವೆ, ಇಷ್ಟು ಜನರಿಗೆ ಸೈಟುಗಳನ್ನು ಕೊಟ್ಟಿದ್ದೇವೆ ಅಂತ ಹೇಳಿದ್ದರೆ ನಾವು ಸಂತೋಷ ಪಡುತ್ತಿದ್ದೆವು. ತಾವು ಅಧಿಕಾರಕ್ಕೆ ಬಂದಿದ್ದಕ್ಕೆ ನಾವೆಲ್ಲ ಇಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಬಂದಿದ್ದಕ್ಕೆ ಸಾರ್ಥಕವಾಯಿತು ಎಂದುಕೊಳ್ಳುತ್ತಿದ್ದವು. ಸ್ವಾಮಿ ಬಹಳ ನೊಂದು ಒಂದು ಮಾತನ್ನು ಹೇಳುತ್ತೇನೆ. ಈ ರೀತಿಯ ಆಡಳಿತವನ್ನು ತಾವು ಮುಂದುವರಿಸಿದರೆ ದೇವರು ನಿಮ್ಮನ್ನು ಕ್ಷಮಿಸುವುದಿಲ್ಲ. ತಾವು ಯಾವ ನರಕಕ್ಕೆ ಹೋಗುತ್ತೀರೋ ಏನೋ ಗೊತ್ತಿಲ್ಲ. ನಾನು ಕೇಳುತ್ತೇನೆ ಬಡಜನರಿಗೆ ಸೈಟುಗಳನ್ನು ಹಂಚುವುದಕ್ಕೋಸ್ಕರ ಅಧಿಕೃತವಾಗಿ 19 ಲಕ್ಷ ಜನರಿಗೆ ಸೈಟು ಇಲ್ಲ ಅಂತ ಗುರುತು ಮಾಡಿದ ಮೇಲೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದೀರೋ? ಇಷ್ಟು ಜನರಿಗೆ ಸೈಟ್ ಕೊಡುವುದಕ್ಕೆ ಜಮೀನು ರೆಡಿ ಇದೆ ಯಡಿಯೂರಪ್ಪನವರೇ, ಇನ್ನು 15-20 ದಿವಸದಲ್ಲಿ ಸೈಟ್ ಕೊಡುತ್ತೇವೆಂದು ಹೇಳುತ್ತೀರೋ? ನಾನು ಬಹಳ ನೊಂದು ಹೇಳುತ್ತೇನೆ ಕರ್ನಾಟಕ ರಾಜ್ಯದ ಯಾವುದೇ ತಾಲ್ಲೂಕಿನಲ್ಲಿ ಇಡೀ ರಾಜ್ಯದಲ್ಲಿ ಬಹುಶಃ 5-6 ಸಾವಿರ ಜನರಿಗೂ ಸಹ ನೀವು ಅಧಿಕಾರಕ್ಕೆ ಬಂದ ಮೇಲೆ ಸೈಟ್ ಕೊಡಲಿಲ್ಲ.

ಒಂದು ತಾಲ್ಲೂಕಿನಲ್ಲಿ ನೀವು ಮಂಜೂರಾತಿ ಮಾಡಿದ ಮೇಲೆ ಆಶ್ರಯ ಯೋಜನೆಯಲ್ಲಿ ಒಂದು ಮನೆ ಕಟ್ಟುವುದಕ್ಕೆ ಪ್ರಾರಂಭವಾಗಿಲ್ಲ. ಬೆನಫಿಷರೀಸ್‌ನ್ನು ಇನ್ನು ಲಿಸ್ಟ್ ಮಾಡುತ್ತಿದ್ದೀರಿ. ಇವತ್ತು 29 ಲಕ್ಷ ಕುಟುಂಬಗಳಿಗೆ ಮನೆ ಸೈಟ್ ಕೊಡುತ್ತೇವೆಂದು ಹೇಳುತ್ತಿರಲ್ಲ 5 ವರ್ಷದಲ್ಲಿ ಅಂದರೆ, ಒಂದು ವರ್ಷಕ್ಕೆ 5 ಲಕ್ಷ ಜನರಿಗೆ ಮನೆ ಸೈಟುಗಳನ್ನು ಕೊಡಬೇಕು.14 ತಿಂಗಳಲ್ಲಿ 10 ಜನರಿಗೆ ಒಂದು ಸೈಟು ಕೊಡದೇ ಇರುವಂತಹ ಜನ 10 ಜನಕ್ಕೆ ಮನೆ ಕಟ್ಟಿಕೊಡದೇ ಇದ್ದವರು ಮತ್ತೇ ಇವರಿಂದ ಬಡವರ ಉದ್ಧಾರವಾಗುತ್ತದೆಂದು ಹೇಳುವ ಮಾತನ್ನು ನಾವು ನಿರೀಕ್ಷೆ ಮಾಡಲು ಸಾಧ್ಯವೇ? ಇದೇ ರಾಜ್ಯಪಾಲರ ಭಾಷಣ ಮಾಡುವಂತಹ ಸಂದರ್ಭದಲ್ಲಿ ನಾನು ನೂರು, ಬಾರಿ ಕೇಳಿದೆ. ಲಕ್ಷಾಂತರ ಜನ ಯಾರಿಗೆ ಎಲಿಜಿಬಿಲಿಟಿ ಇದೆ ಅಂತಹ ಕಡುಬಡವರಿಗೆ ಹಸಿರು ಕಾರ್ಡ್ ಸಿಕ್ಕಿಲ್ಲ. ವಿತರಣೆ ಮಾಡಿ ಎಂದು ಹೇಳಿದರೆ ಕಾರ್ಡ್ ಪ್ರಿಂಟ್ ಮಾಡುತ್ತಿದ್ದೇವೆಂದು ಹೇಳಿ 14 ತಿಂಗಳು ಆಯಿತು. ಕಾರ್ಡ್ ಸಿಗದೇ ಇರುವಂತಹ ಬಡವರಿಗೆ ಕಾರ್ಡು ಕೊಡಲಿಲ್ಲ. ಇಂದಿರಾಗಾಂಧಿ ಇದ್ದ ಫೋಟೋ ತೆಗೆದು ಮಹಾತ್ಮಗಾಂಧಿ ಫೋಟೋ ಹಾಕಿದ ತಕ್ಷಣ ಬಡವರ ಉದ್ಧಾರವಾಯಿತೇನು? ಯಾರ ಫೋಟೋ ಹಾಕಿದ್ದರೋ ಅವರು ಪ್ರಧಾನ ಮಂತ್ರಿ ಆಗಿರಲಿಲ್ಲವೇ? ಅಂದರೆ ರಾಜಕೀಯ ತೀಟೆ ತೀರಿಸಿಕೊಂಡು ಪ್ರಚಾರದಲ್ಲಿ ನೀವು

ನಿಸ್ಸೀಮರಾಗಿದ್ದೀರಿಯೇ ಹೊರತು, ಸುಳ್ಳು ಭರವಸೆಗಳನ್ನು ಕೊಡುವುದರಲ್ಲಿ ನಿಸ್ಸೀಮರಾಗಿದ್ದೀರೆಯೇ ಹೊರತು ಜನರ ಹಿತದ ಬಗ್ಗೆ ಯಾವುದೇ ಕಳಕಳಿ ಇಲ್ಲ ನಿಮಗೆ. ತಾವು ಹೇಳಿದ್ದೀರಿ ಏಕೋ ಗೊತ್ತಿಲ್ಲ. "ಮುರಾರ್ಜಿದೇಸಾಯಿ ವಸತಿ ಶಾಲೆಗಳ ಮಾದರಿಯಲ್ಲಿ ರಾಜ್ಯದಲ್ಲಿ ಅಲ್ಪಸಂಖ್ಯಾತರ ಮುಸ್ಲಿಂ ಸಮುದಾಯದಲ್ಲಿ ಅವರ ಸೌಲಭ್ಯಕ್ಕಾಗಿ 5 ವಸತಿ ಶಾಲೆಗಳನ್ನು ನಮ್ಮ ಸರ್ಕಾರ ಮಂಜೂರು ಮಾಡಿದೆ. ಈ ಊರ್ದು ಮಾಧ್ಯಮದ ವಸತಿ ಶಾಲೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಇರುವ ಖ್ಯಾತ ಮುಸ್ಲಿಂ ಅಲ್ಪಸಂಖ್ಯಾತ ಸಂಸ್ಥೆಗಳು ನಡೆಸಲಿವೆ" ಅಂತ ಹೇಳಿಸಿದ್ದೀರಿ ನಾನು ಕೇಳುತ್ತೇನೆ ಸ್ವಾಮಿ, ಹೋದ ಆಗಸ್ಟ್ 15ನೇ ತಾರೀಖು ಉದ್ಘಾಟನೆಯನ್ನು ಮಾಡಿಸಿದಿರಿ, ಎಜುಕೇಶನ್ ಸೆಕ್ರೆಟರಿ ಮೂಲಕ ಒಂದು ಸಮಿತಿಯನ್ನು ಮಾಡಿಸಿದಿರಿ. ಆ ಕಡುಬಡವ ಅಲ್ಪಸಂಖ್ಯಾತರ ಯುವಕರು ಯುವತಿಯರನ್ನು ಆಯ್ಕೆ ಮಾಡಿ ನೀವು ರೆಸಿಡೆನ್ಶಿಯಲ್ ಸ್ಕೂಲ್‌ಗಳನ್ನು ಮಾಡಿದಿದ್ದರೆ ಸಾರ್ಥಕವಾಗುತ್ತಿತ್ತು. ನಾವು ಅದಕ್ಕೆ ಬೆಂಬಲವನ್ನು ಕೊಟ್ಟೆವು. ಆದರೆ ತರಾತುರಿಯಲ್ಲಿ ಯಾವುದೋ ಕೆಲವು ಮುಸ್ಲಿಂ ಸಂಸ್ಥೆಗಳನ್ನು ನಡೆಸುತ್ತಿರುವಂತಹ ಕೆಲವು ಸಂಸ್ಥೆಗಳಿಗೆ ಇದನ್ನು ನಡೆಸಲು ಕೊಟ್ಟು ಆದ ಮೇಲೆ ನಿಮ್ಮ ಜನತಾ ದಳದ ಅಧ್ಯಕ್ಷ ಶ್ರೀ ಸಿ.ಎಂ. ಇಬ್ರಾಹಿಂ ಅವರಿಗೆ ಈ ಮುಸ್ಲಿಂರ ಪರವಾಗಿ ಪ್ರಾರಂಭ ಆಗಿ ಕೆಲವು ಎಜುಕೇಶನ್ ಇನ್‌ಸ್ಟಿಟ್ಯೂಶನ್‌ಗೆ ವರ್ಗಾವಣೆ ಮಾಡಿ ಅವರು ಕೆಲಸ ಪ್ರಾರಂಭ ಮಾಡಿ ಎಂದು ಹೇಳಿದ್ದನ್ನು ವಾಪಸ್ಸು ಪಡೆದು ಆ ಒಬ್ಬ ಇಬ್ರಾಹಿಂ ಸಾಹೇಬರಿಗೆ ಈ ಒಂದು ವಸತಿ ಶಾಲೆಯನ್ನು ಕೊಟ್ಟರು ಆ ಸಂಸ್ಥೆ ರಿಜಿಸ್ಟರ್ಡ್ ಆಗುವ ಮೊದಲೇ ಈ ಶಾಲೆಗಳನ್ನು ಮಂಜೂರು ಮಾಡಿದ್ದೀರಿ? ಇಲ್ಲೇ ಇದೆ? ನಿಮ್ಮ ಭಾಷಣದಲ್ಲಿ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ಈ ಮನೆಯ ಸದಸ್ಯರಲ್ಲದವರ ಹೆಸರು ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲೇ ಇದೆ. ನಿಮ್ಮ ಭಾಷಣದಲ್ಲಿ ಇದೆ. ನಾನು ಹೇಳುತ್ತಿರುವುದು ಇಬ್ರಾಹಿಂ ನಡೆಸುತ್ತಿರುವಂತಹ ಸಂಸ್ಥೆಗೆ ಕೊಟ್ಟಿದ್ದೀರಿ ಎಂದು. ಅವರ ಹೆಸರು ಬೇಡ ಅಂದರೆ ನಾನು ಬಿಡುವುದಕ್ಕೆ ಸಿದ್ಧವಾಗಿದ್ದೇನೆ. ಆದರೆ ನಾನು ಕೇಳುತ್ತೇನೆ ಸ್ವತಃ ಅವರೇ ಪತ್ರಿಕಾ ಹೇಳಿಕೆಯನ್ನು ಕೊಟ್ಟರು ಯಾರ್ಯಾರಿಗೋ ಕೊಡಬಹುದು. ನಾನು ಒಂದು ತೆಗೆದುಕೊಂಡರೇ ತಪ್ಪೇನು ಎಂದು. ಪತ್ರಿಕಾ ಹೇಳಿಕೆ ಇದೆ. ನಾನು ಸದನದಲ್ಲಿ ಅವರ ಹೆಸರನ್ನು ಹೇಳಬೇಡಿ ಅಂತ ಹೇಳಿದರೆ ನಿಪ್ರ ಯಾವ ಮುಸ್ಲಿಂ ಸಮುದಾಯಕ್ಕೆ ಒಂದು ಅನ್ಯಾಯವನ್ನು ಮಾಡಿದ್ದೀರಿ ಆ ಒಂದು ಸಂಸ್ಥೆ ರಿಜಿಸ್ಟರ್ಡ್ ಆಗುವ ಮೊದಲೇ ಆ ಒಬ್ಬ ವ್ಯಕ್ತಿಗೆ ಈ ವಸತಿ ಶಾಲೆಗಳನ್ನು ಏತಕ್ಕಾಗಿ ಮಂಜೂರು ಮಾಡಿದ್ದೀರಿ ಅಂತ ಕೇಳುತ್ತಿದ್ದೇನೆ. ಒಂದು ಶಾಲೆಗೆ ಒಂದು ಕೋಟಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡುವಂಥದ್ದು ಅಲ್ಪಸಂಖ್ಯಾತ ಮಕ್ಕಳ ಹಿತದೃಷ್ಟಿಯಿಂದ ಮಾಡಿದ್ದರೆ ಅದನ್ನು ನಾನು ಸ್ವಾಗತ ಮಾಡುತ್ತಿದ್ದೆನು. ಯಾವುದೋ ಒಬ್ಬ ರಾಜಕೀಯ ಪಕ್ಷದ ಮುಖಂಡನ ತೀಟೆ ತೀರಿಸಿಕೊಳ್ಳುವುದಕ್ಕೋಸ್ಕರ ನೀವು ಈ ರೀತಿಯ ಕೆಲಸ ಏನು ಮಾಡಿದ್ದೀರಿ ಇದು ಅಲ್ಪಸಂಖ್ಯಾತರ ಉದ್ಧಾರದ ಮಾತು ಅಲ್ಲ. ಉದ್ದೇಶ ನಿಮ್ಮಲ್ಲಿ ಇರಲಿಲ್ಲ. ಗ್ರಾಮಂಟಿನೆ ಏಡ ಆದೇಶವನ್ನು ತಿದ್ದುಪಡಿ ಮಾಡದೇ ಮಂಜೂರಾದ ದಿನಾಂಕದಿಂದಲೇ ಗ್ರ್ಯಾಂಟ್‌ನ್ನು ಕೊಡುವುದಕ್ಕೆ ಎಲ್ಲಿ ಅವಕಾಶ ಇದೆ? ಕಾನೂನು ಇಲ್ಲವೇ ನಿಮಗೆ. ಮನೆ ಬಂದಂತೆ ನೀವು ನಡೆದುಕೊಂಡಿರಿ. ನಿಮ್ಮವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಜನರ ಹೆಸರಿನಲ್ಲಿ ಮಾಡಬಾರದ್ದನ್ನು ಮಾಡು ಒಂದು ತೀರ್ಮಾನಕ್ಕೆ ನೀವು ಬಂದಿರಿ. ಸ್ವಾಮಿ ನಾನು ಹೇಳುತ್ತೇನೆ ರೈತರ ಉದ್ಧಾರ ಆಯಿತು. ಏನು ಆಯಿತು ಸ್ವಾಮಿ? ನಾನು ಹೇಳುತ್ತೇನೆ ನಿಮ್ಮ ಆದ್ಯತೆ ಏತಕ್ಕೋಸ್ಕರ ಯಾವ ಒಬ್ಬ ರೈತ ಇವತ್ತು 70-80

ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಬೋರ್‌ವೆಲ್‌ಗಳನ್ನು ಹಾಕಿಸಿಕೊಂಡಿದ್ದಾನೆ ಅವನು ಬ್ಯಾಂಕು ಕಂತು ಕಟ್ಟಬೇಕು. ಅವನು ಒಂದು ಎಕರೆಯಲ್ಲಿ ರಾಗಿಜೋಳ ಬೆಳೆದು ಬದುಕುತ್ತಿದ್ದ. ಮೂರು ದಿನಕ್ಕೆ ಒಮ್ಮೆ 3-4 ಗಂಟೆ ಆದರೂ ವಿದ್ಯುತ್ ಸಿಗುತ್ತಿಲ್ಲ. ರೈತ ಕಣ್ಣೀರು ಹಾಕುತ್ತಿದ್ದಾನೆ. ಅವನ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ತಮ್ಮ ಪ್ರಾಮಾಣಿಕ ಪ್ರಯತ್ನ ಏನು ಇದೆ? ನಿಮಗೆ ಆದ್ಯತೆ ಇದ್ದಿದ್ದರೆ ಅವರಿಗೆ....

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ,

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ನಾನು 15 ನಿಮಿಷದಲ್ಲಿ ಮುಗಿಸಬೇಕು ನಮ್ಮವರು ಯಾರೂ ಮಾತನಾಡಿಲ್ಲ. ಏಕೆಂದರೆ ಜಾಲಪ್ಪನವರಿಗೆ ಕಳಕಳಿ ಇದೆ. ಆದರೆ ನಿಮ್ಮ ಮಾತು ನಡೆಯುವುದಿಲ್ಲ ಅಂತ ನಿಮಗೆ ಗೊತ್ತಿದೆ. ನಿಮಗೆ ಬೇಸರ ಆಗಿದೆ ಎನ್ನುವುದು ನಮಗೆ ಗೊತ್ತಿದೆ ಇದು ಸತ್ಯ ಸಂಗತಿ ಅವರು ಇದನ್ನು ಹೇಳದೇ ಇರಬಹುದು. ಅವರು ಅಲ್ಲಿ ಇದ್ದಾಗ ಮಂತ್ರಿಗಳಾಗಿ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ನನಗೆ ಆಶ್ಚರ್ಯ. ಅವರ ಬಗ್ಗೆ ನಿಮಗೆ ಎಷ್ಟು ಸಿಂಪತಿ ಇದೆ ಅಂತ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಜವಾಗಿ.

ಶ್ರೀ ಆರ್.ಎಲ್. ಜಾಲಪ್ಪ : ವಿದ್ಯುತ್ ಅಭಾವ ಇದೆ ಎನ್ನುವುದು ರಾಜ್ಯಕ್ಕೆ ಅಷ್ಟೇ ಅಲ್ಲ ರಾಷ್ಟ್ರಕ್ಕೆ ತಮಗೆ ಗೊತ್ತು. ಇದನ್ನು ಸರಿ ಮಾಡುವುದು ಹೇಗೆ ಎಂದು ತಾವು ಸಲಹೆ ಕೊಟ್ಟರೆ ನಾವು ಫಾಲೋ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ಕೊಡುತ್ತೇನೆ. ಅದರ ಬಗ್ಗೆ ವಿಶೇಷವಾದ ಚರ್ಚೆ ಆಗುವುದು ಇದೆ ಆಗ ನಾನು ವಿಶೇಷವಾದ ಸಂಗತಿಗಳನ್ನು ಕೊಡುತ್ತೇನೆ. ಈ ವಿದ್ಯುತ್ ಅಭಾವದಿಂದ ಶೇಕಡಾ 65ರಷ್ಟು ಸಣ್ಣ ಕೈಗಾರಿಕೆಗಳು ಬೀದಿಪಾಲಾಗಿದೆ. ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೊಡುವುದು ಇರಲಿ ನನ್ನ ಒಂದು ಅಂದಾಜಿನ ಪ್ರಕಾರ ಬೆಂಗಳೂರಿನಲ್ಲಿ ಸುಮಾರು 10 ರಿಂದ 15 ಸಾವಿರ ಸಣ್ಣ ಕೈಗಾರಿಕೆಗಳು ಬೀಗ ಹಾಕಿದ್ದಾರೆ. ಸುಮಾರು 40-50 ಸಾವಿರ ಕಾರ್ಮಿಕರು ಅಲ್ಲಿ ಸರಿಯಾಗಿ ಉತ್ಪಾದನೆ ಆಗದೇ ಇರುವ ಪರಿಣಾಮ ಕೆಲಸವನ್ನು ಕಳೆದುಕೊಂಡು ಬೀದಿಪಾಲಾಗಿರುವಂತಹ ಪರಿಸ್ಥಿತಿ ಬಂದಿದೆ. ಇದು ಯಾವುದರ ಬಗ್ಗೆಯೂ ಕೂಡ ತಾವು ಗಮನ ಕೊಡಲಿಲ್ಲ. ವಿದ್ಯುತ್ ಉತ್ಪಾದನೆ ಆಗಲಿಲ್ಲ, ಇರುವ ವಿದ್ಯುತ್‌ನ್ನು ಸರಿಯಾಗಿ ಹಂಚಿಲ್ಲ, ಇದಕ್ಕೆ ನಾವು ಏನು ಮಾಡೋಣ? ನೀವು ಏನು ಮಾಡುವುದಕ್ಕೆ ಆಗಲಿಲ್ಲವೇ? ನಿಮಗೆ ಕಳಕಳಿ ಇದ್ದಿದ್ದರೆ ಪ್ರಾಮಾಣಿಕತೆ ಇದ್ದಿದ್ದರೆ ಕೋರಮಂಗಲದಲ್ಲಿ 225 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕ್ರೀಡಾ ನಗರವನ್ನು ಕಟ್ಟುವ ಬದಲಾಗಿ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವಿದ್ಯುತ್ ಉತ್ಪಾದನೆಗೆ ಖರ್ಚು ಮಾಡಬಹುದಾಗಿತ್ತು. ಕಳೆದ 4-5 ವರ್ಷಗಳಲ್ಲಿ ಹಿಂದೆ ಇದ್ದ ಸರ್ಕಾರಗಳು ಯಾವುದಕ್ಕೂ ಮಂಜೂರಾತಿಯನ್ನು ಕೊಟ್ಟಿದ್ದರೋ ಆ ಸಂಸ್ಥೆಗಳು ವಿದ್ಯುತ್ ಉತ್ಪಾದನೆ ಮಾಡುವಂತಹ ಕೆಲಸ ಪ್ರಾರಂಭ ಮಾಡಿದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಆನ್ ಗೋಯಿಂಗ್ ವರ್ಕ್ಸ್ ಯಾವುದು ಇತ್ತು ಅದನ್ನು ಪೂರ್ಣ ಮಾಡಿದ್ದರೆ ಆಗುತ್ತಿರಲಿಲ್ಲವೇ? ಸನ್ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡಿದ್ದಾರೆ ಏನಂತ "ಕೆ.ಇ.ಬಿ. ಖಾಸಗೀಕರಣ ದೇವೇಗೌಡರ ಎಚ್ಚರಿಕೆ" "ರಾಜ್ಯದಲ್ಲಿ ವಾರ್ಷಿಕ 500 ಮೆಗಾವಾಟ್ಸ್‌ಗೆ ಕಡಿಮೆ ಇಲ್ಲದೆ ವಿದ್ಯುತ್ ಕಳುವು ಆಗುತ್ತಿದೆ ಎನ್ನುವ ಆತಂಕಕಾರಿಯಾದ ಅಂಶವನ್ನು ಇಂದು ಇಲ್ಲಿ ಬಹಿರಂಗಗೊಳಿಸಿದ

ಮುಖ್ಯಮಂತ್ರಿಗಳು ಇದಕ್ಕೆ ಕಾರಣವಾಗಿರುವ ವಿದ್ಯುತ್ ಮಂಡಲಿಯ ಕಾರ್ಯಶೈಲಿ ಸುಧಾರಣೆ ಸುಧಾರಿಸದೇ ಹೋದರೆ ಅದನ್ನು ಖಾಸಗೀಕರಣಗೊಳಿಸುವುದು ಅನಿವಾರ್ಯವಾದೀತು", ಅಂತ ಹೇಳಿದ್ದಾರೆ. ಈ ಎರಡು ಸಂಗತಿಗಳನ್ನು ನಾನು ಹೇಳುತ್ತೇನೆ.

ದಯಮಾಡಿ ಇದಕ್ಕೆ ಉತ್ತರ ಕೊಡುವಂತಹ ಕಾಲದಲ್ಲಿ ಕೆ.ಇ.ಬಿ. ಯನ್ನು ಮುಚ್ಚಿ ಖಾಸಗಿಯವರಿಗೆ ವಹಿಸಿ ಇದು ಬಿಳಿ ಆನೆ ಆಗಿದೆ. ಲೂಟಿ ಮಾಡುವಂತಹ ಕೆಲಸ ಆಗುತ್ತಿದೆ. ಪ್ರಾಮಾಣಿಕ ಪ್ರಯತ್ನ ಅಲ್ಲಿ ಆಗುತ್ತಿಲ್ಲ. ನಾನು ಒಂದು ಮಾತನ್ನು ಕೇಳುತ್ತೇನೆ ಈ ರಾಜ್ಯದ ಮುಖ್ಯಮಂತ್ರಿಗಳನ್ನು ಮೇ 9ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸುಮಾರು 5000 ಮೆಗಾವಾಟ್ಸ್ ವಿದ್ಯುತ್ ಕೆ.ಇ.ಬಿ. ಮತ್ತು ಕೆಲವು ಕೈಗಾರಿಕೋದ್ಯಮಿಗಳು ಇನ್ನು ಹಲವಾರು ಪ್ರಭಾವಿಶಾಲಿ ಅಧಿಕಾರಿಗಳು ಮತ್ತು ಇತರೆ ನೌಕರರ ಶಾಮೀಲಿನೊಂದಿಗೆ ಅಪಾರ ಪ್ರಮಾಣದ ವಿದ್ಯುತ್ ಕಳುವು ಮಾಡುತ್ತಿದ್ದಾರೆ ಎನ್ನುವುದು ನನ್ನ ಗಮನಕ್ಕೆ ಬಂದಿದ್ದು ಇದು ದಿಗ್ಭ್ರಮೆಯನ್ನು ಮೂಡಿಸಿದೆ. ಅವರು ಮೇ ತಿಂಗಳಲ್ಲಿ ಹೇಳಿದ್ದಾರೆ ನಾವು ಫೆಬ್ರವರಿಯಲ್ಲಿ ಇದ್ದೇವೆ. ನಿಮ್ಮ ಸರ್ಕಾರಕ್ಕೆ ಇದು ಮನದಟ್ಟು ಆದ ಮೇಲೆ 500 ಮೆಗಾವಾಟ್ಸ್ ವಿದ್ಯುತ್ ಅಂದರೆ ಇವತ್ತು ನೀವು ಕೋಜೆಂಟ್ರಿಕ್ಸ್‌ಗೆ ಕೊಟ್ಟಂತಹ ರೇಟ್ ಪ್ರಕಾರ ಎರಡೂವರೆ ಸಾವಿರ ಕೋಟಿ ಆಗುತ್ತದೆ 500 ಮೆಗಾವಾಟ್ಸ್ ವಿದ್ಯುತ್ ಕಳ್ಳತನವಾಗುತ್ತಿದೆ ಅಂತ ಒಪ್ಪಿಕೊಂಡ ಮೇಲೆ ಎಷ್ಟು ಜನ ಕೆ.ಇ.ಬಿ. ಅಧಿಕಾರಿಗಳನ್ನು ಜೈಲಿಗೆ ಕಳುಹಿಸಿದಿರಿ? ಎಷ್ಟು ಜನ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಿದಿರಿ? ಎಷ್ಟು ಕೈಗಾರಿಕೆಗಳಿಗೆ ಬೀಗ ಹಾಕಿದಿರಿ? ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಇದರ ಉದ್ದೇಶ ಏನು? ಇದನ್ನು ಸರಿ ಮಾಡುವಂತಹ ಶಕ್ತಿ ನಿಮಗೆ ಇಲ್ಲದಿದ್ದರೆ ಅಧಿಕಾರದಲ್ಲಿ ಇರುವಂತಹ ನೈತಿಕ ಹಕ್ಕು ನಿಮಗೆ ಏನು ಇದೆ? 500 ಮೆಗಾವಾಟ್ಸ್ ವಿದ್ಯುತ್ ಸರಿ ಮಾಡಿದ್ದಿರೆ ಕೆ.ಇ.ಬಿ.ಗೆ ಬರುವಂತಹ ಹಣ ಜಾಸ್ತಿ ಬರಬೇಕಾಗಿತ್ತು. ಅದು ನಷ್ಟದಲ್ಲಿ ನಡೆಯದಂತೆ ನೋಡಿಕೊಳ್ಳಬೇಕಾಗಿತ್ತು.

2.30 ಪಿ.ಎಂ

ನಿಮ್ಮನ್ನು ಜನರು ಅಧಿಕಾರಕ್ಕೆ ತಂದದ್ದು ಇದೆಲ್ಲವನ್ನೂ ಸರಿಪಡಿಸಲೆಂದೋ ಅಥವಾ ಮುಂದುವರಿಸಲೆಂದೋ? ಅಧ್ಯಕ್ಷರೇ, ಇದಾವುದಕ್ಕೂ ಉತ್ತರ ಕೊಡುವ ಸ್ಥಿತಿಯಲ್ಲಿ ಅವರಿಲ್ಲ, ಮನಬಂದಂತೆ ಅಧಿಕಾರ ನಡೆಸುವಂತಹ ಪ್ರಯತ್ನ. ಇವತ್ತು ರೈತನ ಮಕ್ಕಳು ಅಧಿಕಾರಕ್ಕೆ ಬಂದಿದ್ದರಿಂದ ರೈತನಿಗೆ ಉದಾರವಾಗಿ ಒಂದು ಡೀಸೆಲ್ ಜನರೆಟರ್ ಕೊಂಡರೆ 10 ಪರ್ಸೆಂಟ್ ಸಬ್ಸಿಡಿ ಕೊಡುತ್ತಾರಂತೆ. 10 ಎಚ್‌ಪಿ ಜನರೇಟರ್‌ಗೆ ಇವತ್ತು 20 ಸಾವಿರ ಆಗುತ್ತದೆ, 2 ಸಾವಿರ ಸಬ್ಸಿಡಿ ಕೊಟ್ಟರೆ ಅದನ್ನು ತೆಗೆದುಕೊಳ್ಳಲು ಓಡಾಡುವುದಕ್ಕೆ ಅಷ್ಟು ಖರ್ಚಾಗುತ್ತದೆ. ರೈತ ಉಳಿಯಬೇಕು, ಅವನು ಬೆಳೆದ ಬೆಳೆ ಉಳಿಸಬೇಕೆಂದು ನಿಮಗಿದ್ದಿದ್ದರೆ 50 ಪರ್ಸೆಂಟ್ ಸಬ್ಸಿಡಿ ಕೊಟ್ಟಿದ್ದಿದ್ದರೆ ರೈತನ ಮಗನಾಗಿ ಅಧಿಕಾರ ಬಂದಿದ್ದಕ್ಕೆ ಸಾರ್ಥಕವಾಗುತ್ತಿತ್ತು. ರೈತನ ಬಗ್ಗೆ ನಿಮಗೆ ಕಳಕಳಿ ಇದೆಯೆಂದು ಅನಿಸುತ್ತಿತ್ತು. ಹೋಗಲಿ, 10 ಪರ್ಸೆಂಟ್ ಕೊಟ್ಟಿರಲ್ಲ ಎಷ್ಟು ಜನರೇಟರ್‌ಗಳನ್ನು ರೈತ ಕೊಂಡಿದ್ದಾನೆ ಎಂಬುದರ ಬಗ್ಗೆ ಅಂಕಿಅಂಶ ಕೊಡಿ. ಸುಮ್ಮನೆ ಘೋಷಣೆ ಮಾಡಿದ್ದೀರಿ, ಯಾವುದನ್ನು ಕೊಳ್ಳಲಿಕ್ಕೆ ಸಾಧ್ಯವಿಲ್ಲ, ಯಾವುದು ರೈತನನ್ನು ತಲುಪುವುದಿಲ್ಲ. ಅವನ ಮೂಗಿಗೆ ತುಪ್ಪ ಹಚ್ಚುವಂತಹ ಕಾರ್ಯಕ್ರಮ ಘೋಷಿಸುವುದರಿಂದ ನೀವೇನು ಸಾಧನೆ ಮಾಡಿದಂತಾಗುತ್ತದೆ? ಆದರೆ ವಿದ್ಯುತ್ ಉತ್ಪಾದನೆಗೆ ಕೈಗಾರಿಕೆಗಳು ಡೀಸೆಲ್ ಜನರೇಟರ್ ಖರೀದಿಸಿದರೆ 100ರಷ್ಟು ಮಾರಾಟ ತೆರಿಗೆ ರದ್ದು ಮಾಡಲಾಗಿದೆ. ರೈತನಿಗೆ 10 ಪರ್ಸೆಂಟ್ ಸಬ್ಸಿಡಿ. ಅವನಿಗೂ ಕೊಡಿ, ಬೇಡ ಎಂದು ನಾನು ಹೇಳುವುದಿಲ್ಲ.ಇನ್ನು ಕೋಜೆಂಟ್ರಿಕ್ಸ್ ಬಗ್ಗೆ ಹೇಳುತ್ತೇನೆ ನೀವು ಇನ್ನು 4 ವರ್ಷ

ಇರುತ್ತೀರಿ, ಯಾವುದೋ ಆಸೆಯಿಟ್ಟುಕೊಂಡು ಕೊಜೆಂಟ್ರಿಕ್ಸ್‌ನವರು ಇಲ್ಲಿ ಬಂದು ವಿದ್ಯುದುತ್ಪಾದನೆ ಮಾಡುತ್ತಾರೆಂಬ ಭಾವನೆ ನಿಮಗಿರಬಹುದು. 1 ಸಾವಿರ ಮೆಗಾವಾಟ್ ವಿದ್ಯುತ್‌ಗೆ 4387 ಕೋಟಿ ಅಂದಾಜು ಮಾಡಿದ್ದಿರಿ, ನಾವು ಸದನದಲ್ಲಿ ಸಾಕಷ್ಟು ಗಲಾಟೆ ಮಾಡಿದೆವು. ಆ ಪಿಪಿಎ ಸಂದರ್ಭದಲ್ಲಿ 3650 ಕೋಟಿ ಇಳಿಸಿದ್ದೆವೆಂದು ಸುಮಾರು 737 ಕೋಟಿ ಉಳಿಯಬಹುದೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಈಗ ರಿವೈಸ್ಡ್ ಪಿಪಿಎ ಅನ್ನು ಯಾರನ್ನೂ ಕೇಳದೆ 4290 ಕೋಟಿಗೆ ಪರಿಷ್ಕರಿಸಲಾಗಿದೆ ಎಂದು ಜನ ಹೇಳುತ್ತಿದ್ದಾರೆ. ಅಂದರೆ ಈ ಸದನದಲ್ಲಿ ನೀವು ಕೊಟ್ಟಂತಹ ಉತ್ತರ 737ಕೋಟಿ ಉಳಿಸಿದ್ದೇವೆಂದು ಒಳಗಿಂದೊಳಗೇ ಪರಿಷ್ಕೃತ ಪಿಪಿಎಗೆ ಸಹಿ ಮಾಡಿದ್ದೀರೆಂಬ ಸುದ್ದಿಯಿದೆಯಲ್ಲ, ಅದು ನಿಜವೇ? ಇದರ ಉದ್ದೇಶ ಏನು? ಇವತ್ತು ಕೆಇಬಿ ಕೆಪಿಸಿಗೆ 600 ಕೋಟಿ ಬಾಕಿ ಕೊಡಬೇಕಾಗಿದೆ.

ಕೆಪಿಸಿಯಿಂದ ಸುಮಾರು 60-70 ಪೈಸೆಗೆ ವಿದ್ಯುತ್ ಸರಬರಾಜಾಗುತ್ತಿರುವಾಗ ಅವರ ಬಾಕಿ 600 ಕೋಟಿ ತೀರಿಸುವುದಕ್ಕೆ ಆಗದೇ ಇರುವಂತಹ ನೀವು, ಒಂದು ಮೆಗಾವಾಟ್‌ಗೆ 3.65 ಕೋಟಿ ಖರ್ಚಾಗಿ ಅದರ ಸಾಗಾಣಿಕೆಗಾಗಿ ಕೆಇಬಿ ಒಂದು ಸಾವಿರ ಕೋಟಿ ಖರ್ಚು ಮಾಡಿದ ಮೇಲೆ ಒಂದು ಮೆಗಾವ್ಯಾಟ್ ವಿದ್ಯುತ್‌ಗೆ ನಾಲ್ಕೂಕಾಲು ಕೋಟಿ ಬೀಳುತ್ತದೆ? ಉದ್ಧಾರ ಮಾಡುತ್ತೀರ ನೀವು? ಪಿಪಿಎಗೆ ಸೈನ್ ಮಾಡುತ್ತೇವೆಂದು ಹೇಳುತ್ತೀರಿ, ಒಂದೂ ಕಾರ್ಯರೂಪಕ್ಕೆ ಬರಲಿಲ್ಲ. ಈ ರೀತಿ ಮನಬಂದಂತೆ ಅಧಿಕಾರ ನಡೆಸುವ ಪ್ರಯತ್ನ ಕರ್ನಾಟಕದಲ್ಲಿ ನೀವು ಮಾಡುತ್ತಿದ್ದೀರಿ. ಇದರಿಂದ ನಿಮಗೆ ಗೌರವ ಬರುವುದಿಲ್ಲ. ನಿಜವಾಗಿಯೂ ನೀವು ರೈತರ ಮಕ್ಕಳಾಗಿದ್ದರೆ ಉಳುವವನೇ ಭೂಮಿಯೊಡನೆಯ ನೀತಿಗೆ ವಿರುದ್ಧವಾಗಿರುವ ನಿಯಮ 109ಎ ತಿದ್ದುಪಡಿ ತಂದಿರುವುದು ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶೋಭೆ ತರುವಂಥದ್ದಲ್ಲ. ಯಾರೋ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಲಾಭ ಮಾಡುವುದಕ್ಕಾಗಿ ರೈತರನ್ನು ಉಳಿಸುತ್ತೇವೆಂಬ ಭಾವನೆ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೀರಿ. ಯಾವುದೋ ಮುಂಬೈ ಸಂಸ್ಥೆಯೊಂದಕ್ಕೆ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿಯನ್ನೂ ಲೆಕ್ಕಿಸದೆ ಜಮೀನು ಮಂಜೂರು ಮಾಡಿದ್ದೀರಿ. ಬೆಂಗಳೂರಿನ ಸುತ್ತಮುತ್ತ ನಾಯಿಕೊಡೆಗಳಂತೆ ತಲೆ ಎತ್ತಿರುವ ಹೋಟೆಲ್‌ಗಳನ್ನು ನೋಡಿದರೆ ನೀವು ಯಾವ ರೀತಿ ಆಡಳಿತ ನಡೆಸುತ್ತಿದ್ದೀರೆಂಬುದಕ್ಕೆ ಉದಾಹರಣೆಯಾಗಿದೆ. ನನಗೆ ದುಃಖ ತಂದಿರುವುದು ಮಿರಾಜುದೀನ್ ಪಾಟೀಲರ ರಾಜೀನಾಮೆ ಏಕೆ ನೀವು ತೆಗೆದುಕೊಂಡಿರಿ ಎಂದು. ಅಧ್ಯಕ್ಷರೇ, ಇದರಲ್ಲಿ ವಿಶೇಷ ಏನಿಲ್ಲ, ಎಲ್ಲೋ ಒಂದು ಕಡೆ ಸರಿಯಾಗಿ ವಿತರಣೆ ಆಗಲಿಲ್ಲ, ಅವನು ಯಾರೋ ತಪ್ಪು ಮಾಡಿಬಿಟ್ಟ ಇವರು ಸಿಕ್ಕಿಬಿದ್ದರು ಆದರೆ ಆತ್ಮಸಾಕ್ಷಿಯಾಗಿ ನೋಡೋಣ, ಬಹುತೇಕ ಜನ ನೀವು ಇದೇ ಮಾಡಿದ್ದೀರಿ, ಒಬ್ಬ ಸಚಿವರನ್ನು ಏಕೆ ಕಳಿಸುತ್ತೀರಿ ಬಹುಶಃ ಇದು ಯಾರಿಗೂ ಗೌರವ ತರುವಂಥ ಸಂಗತಿಯಲ್ಲ. ಇವತ್ತು ಯಾವ ಹೆಂಡ ಸರಬರಾಜಾಗುತ್ತಿದೆ ಅದರಿಂದ ಮಿರಾಜುದ್ದೀನ್‌ರು ಸಿಕ್ಕಿ ಬಿದ್ದಿದ್ದಾದರೆ ಅದು ಕೇವಲ ಅವರ ಕೈತಪ್ಪಿನಿಂದ ಸಿಕ್ಕಿಬಿದ್ದಿರುವುದು. ಯಡಿಯೂರಪ್ಪನವರೇ ಇದು ಎಲ್ಲಾ ನಡೆಯುತ್ತಿದೆ, ನಾವು ಇದನ್ನೇ ಮಾಡುತ್ತಿರುವುದು ಇದಕ್ಕಾಕೆ ರಾಜೀನಾಮೆ ಕೇಳುತ್ತೀರಿ ಎಂದು ಅವರನ್ನು ಇಟ್ಟುಕೊಳ್ಳಬಹುದಾಗಿತ್ತು. ಅಂದರೆ ನೀವು ನಗರಸಭೆ ಪುರಸಭೆ ಚುನಾವಣೆಗಳನ್ನು ಹಣ ಹೆಂಡದ ಬಲದ ಮೇಲೆ ನಡೆಸಿದಿರಿ ಎಂಬುದಕ್ಕೆ ಇದು ಒಂದು ತಾಜಾ ಉದಾಹರಣೆ ಎಂದು ಹೇಳಲು ನಾನು ಇಚ್ಛೆಪಡುತ್ತೇನೆ.

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್ : ನಾನು ಸಿಕ್ಕಿ ಬಿದ್ದಿಲ್ಲ ಅಥವಾ ನಾನು ಅಂತಹ ತಪ್ಪು ಮಾಡಿಲ್ಲ ಅದರಲ್ಲಿ ನಾನು ಇನೋಸೆಂಟಿದ್ದೆ ನನ್ನದೇನೂ ರೋಲ್ ಇಲ್ಲ, ನನ್ನ ಮೇಲೆ ಯಾರ ಒತ್ತಡ ಇರಲಿಲ್ಲ. ಈ ತರಹ ನನ್ನ ಮೇಲೆ ಒಂದು ಚಾರ್ಜ್ ಇದೆಯೆಂದು ವಾಲಂಟರಿಯಾಗಿ ರಾಜೀನಾಮೆ ಕೊಟ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಳ್ಳೆಯದು, ಧನ್ಯವಾದಗಳು.

ಅಧ್ಯಕ್ಷರು : ನಿಮ್ಮಲ್ಲಿ ದೊಡ್ಡ ಸಮಸ್ಯೆ ಉದ್ಭವವಾಗಿದೆ. ಮಾಮೂಲಾಗಿ ಮಧ್ಯಾಹ್ನ ಊಟಕ್ಕೆ ಎದ್ದು ಹೋಗುತ್ತಿದ್ದೆವು. ಬಿಎಸಿಯಲ್ಲಿ ನಾವು ಏನು ತೀರ್ಮಾನ ಮಾಡಿದೆವು ಅಂದರೆ ಲಂಚ್‌ಬ್ರೇಕ್ ಬೇಡ ಅಂತ. ಈಗ ನನಗೆ ಚೀಟಿಗಳು ಬರುತ್ತಿವೆ ಮಾಮೂಲಾಗಿ ನಮಗೆ ನೀವು ಊಟ ಕೊಡುತ್ತಿದ್ದೀರಿ ಇವತ್ತು ಊಟ ಕೊಟ್ಟಿಲ್ಲ ನಾವೇನು ತಪ್ಪು ಮಾಡಿದ್ದೇವೆಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಊಟ ಕೊಡಿಸಲು ಸಿದ್ಧರಿದ್ದೀರಿ, ಆದರೆ ರಾಜ್ಯದ ಜನ ಹಸಿದುಕೊಂಡಿದ್ದಾರೆ ಆದ್ದರಿಂದ ನಾವೂ ಒಂದೆರಡು ದಿನ ಹಸಿದು ಕೆಲಸ ಮಾಡುವುದು ಅಭ್ಯಾಸ ಮಾಡಿಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಅವರೇನು ಹೊಟ್ಟೆ ಹಸಿದುಕೊಂಡು ಬಂದಿಲ್ಲ ಊಟ ಮಾಡಿಯೇ ಬಂದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಯಾವ ಆದ್ಯತೆ ಮೇಲೆ ಪ್ಲಾನ್ ಹಣವನ್ನು ಖರ್ಚು ಮಾಡಬೇಕಾಗಿತ್ತೋ, ವಿದ್ಯುದುತ್ಪಾದಿಸಲು, ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅದಕ್ಕೆ ಹಣ ಸದ್ವಿನಿಯೋಗವಾಗುತ್ತಿಲ್ಲ, ನಮ್ಮ ಹಣಕಾಸಿನ ಸಚಿವರು ಹಣದ ಬರವಿಲ್ಲವೆಂದು ಹೇಳುತ್ತಾರೆ. ತಮಗೆ ಗೊತ್ತಿದೆ ಅಧ್ಯಕ್ಷರೇ, ಕಳೆದ 3 ತಿಂಗಳಿಂದ ಯಾವ ಪಿಡಬ್ಲ್ಯುಡಿ ಇಲಾಖೆ ಕೆಲಸವೂ ಮಾಡಿಲ್ಲ, ಮಾಡಿರುವ ಅಲ್ಪಸ್ವಲ್ಪಕ್ಕೆ ಎಲ್‌ಒಸಿಯೂ ಬಿಡುಗಡೆಯಾಗಿಲ್ಲ. ರಸ್ತೆ ಮಾಡಿಸೋಣ ಅಂದರೆ ಟಾರಿಲ್ಲ. ನಾನು ಸಂಬಂಧಪಟ್ಟ ಪಿಡಬ್ಲ್ಯುಡಿ ಸೆಕ್ರೆಟರಿ, ಮುಖ್ಯ ಇಂಜಿನಿಯರ್ ಹತ್ತಿರ ಮಾತನಾಡಿದರೆ ಹೇಳುತ್ತಾರೆ ತಮಿಳುನಾಡನ್ನು ನಾವು ನಂಬಿ ಕುಳಿತಿದ್ದೇವೆ, ಅಲ್ಲಿಂದ ಬಂದಿಲ್ಲ, ಈ ಒಂದು ಸರ್ಕಾರಕ್ಕೆ ನಿಜವಾಗಿಯೂ ಮುಂದಾಲೋಚನೆ ಮಾಡುವ ಶಕ್ತಿ ಇದ್ದರೆ ತಾವು ಕೊಟ್ಟ ಭರವಸೆಯನ್ನು ಈಡೇರಿಸುವ ಕಳಕಳಿ ನಿಮಗಿದ್ದರೆ, ನಾವು ಶಾಸಕರು ಏನು ಮಾಡುವುದು ಸ್ವಾಮಿ? ಅವರಿಗೆ ಹೇಳೋಣವೇ ದೇವೇಗೌಡರು ಟಾರ್ ಕೊಡಲಿಲ್ಲ ಎಂದು ನೋಡಿ ಸ್ವಾಮಿ ಮಂಡ್ಯ ಜಿಲ್ಲೆಗೆ ಮಾಡಿದ್ದಾರಂತೆ, ಮಂತ್ರಿಗಳು ಟಾರ್ ಇಟ್ಟುಕೊಂಡಿದ್ದೀರಿ, ನಿಮ್ಮ ಕ್ಷೇತ್ರದಲ್ಲಿ ಸರಿಯಾದ ವಿವರಣೆ ಆಗಲಿಲ್ಲ, ಜಯರಾಂರವರು ನಮ್ಮ ಜಿಲ್ಲೆಯವರು ಅವರು ಸತ್ಯವನ್ನೇ ಹೇಳುವುದು.

ಶ್ರೀ ಎಸ್.ಡಿ. ಜಯರಾಂ : ಮಂಡ್ಯದಲ್ಲೂ ಇದೆ, ಬೆಂಗಳೂರಿನಲ್ಲೂ ಇದೆ, ಎಲ್ಲೆಲ್ಲಿ ಅಡ್ವಾನ್ಸಾಗಿ ಬುಕ್ ಮಾಡಿದ್ದರೋ ಅಲ್ಲಿಗೆ ಬರುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ನಾನು ಒಂದೇ ಡಿಮಾಂಡ್ ಮಾಡುತ್ತೇನೆ, ಪ್ರತಿ ಕ್ಷೇತ್ರದಲ್ಲಿ 30 ಲಕ್ಷ ರೂ.ಗಳನ್ನು ಖರ್ಚು ಮಾಡಿ ರಸ್ತೆಗಳನ್ನು ಮಾಡುತ್ತೇವೆಂದು ಭರವಸೆ ಕೊಟ್ಟಿರಿ, ಹೋದ ರಾಜ್ಯಪಾಲರ ಬಜೆಟ್‌ನಲ್ಲಿ ಹೇಳಿಸಿದಿರಿ. ಇನ್ನೊಂದು ಬಜೆಟನ್ನು 19ನೇ ತಾರೀಖು ಇಡುತ್ತಿದ್ದೀರಿ. ಒಬ್ಬ ಶಾಸಕನಿಂದ ಪಟ್ಟಿ ತರಿಸಿಕೊಂಡು ಇಂಥಿಂಥ ರಸ್ತೆ ಮಾಡಿಸಿ ಎಂದು. ನಾವು ನಿಮಗೆ ಪಟ್ಟಿ ಕೊಟ್ಟ ಮೇಲೆ ನಾನು ಸರ್ಕಾರವನ್ನು ಇಷ್ಟೇ ಒತ್ತಾಯ ಮಾಡುವುದು, ಆಡಳಿತ ಪಕ್ಷದ ಶಾಸಕರು ಎದ್ದು ಹೇಳುತ್ತಿದ್ದಾರೆ, ನಮ್ಮ ಕಡೆ ಟಾರಿದೆ, ನಮ್ಮ ಕಡೆ ಕೆಲಸವಾಗಿದೆ, ಎಂಎಲ್‌ಎ ಕೊಟ್ಟ 30 ಲಕ್ಷ ಕೆಲಸವಾಗುತ್ತಿದೆ, ಎಂದು ತುಂಬ ಸಂತೋಷ ಆಗುತ್ತಿದ್ದರೆ ವಿರೋಧವಿಲ್ಲ.

(ಗೊಂದಲ)

ಅದು ಆಡಳಿತ ಪಕ್ಷದ ಕಡೆಯಾಗಲಿ, ಈ ಕಡೆಯಾಗಲಿ. ಅಭ್ಯಂತರವಿಲ್ಲ. ಇವತ್ತು ತಾವು ಉತ್ತರ ಕೊಡುವ ಕಾಲದಲ್ಲಿ ಕೇವಲ ಆಡಳಿತ ಪಕ್ಷಕ್ಕೆ ಸೀಮಿತವಾಗಿರುವ ಜನರಿಗೇ ಟಾರ್ ಕೊಟ್ಟಿದ್ದೇವೆ, ರಸ್ತೆ ಮಾಡುತ್ತಿದ್ದೇವೆ, ಲೋಕಸಭಾ ಚುನಾವಣೆ

ಹತ್ತಿರ ಬರುತ್ತಿದೆ ವಿರೋಧ ಪಕ್ಷದ ಶಾಸಕರು ಅಪಮಾನದಿಂದ ತಲೆತಗ್ಗಿಸಿ ಅವರವರ ಕ್ಷೇತ್ರದಲ್ಲಿ ಓಡಾಡಬೇಕು ಅಂತ ನಿಶ್ಚಯ ಮಾಡಿದ್ದೇವೆ ಅಂತ ನೀವು ಹೇಳುವುದಾದರೆ ಅಥವಾ ನೀವು ಕೊಡುವಾಗ ಒಂದೊಂದು ಲೋಕಸಭಾ ಕ್ಷೇತ್ರದಲ್ಲಿ 30 ಲಕ್ಷ ರೂ. ಕೆಲಸ ಮಾಡುತ್ತೇವೆಂದು ಹೇಳಿದ್ದೆವು, ಆ ರೀತಿ ಕೆಲಸದ ಪಟ್ಟಿ ತಂದಿದ್ದೇವೆ, ಇಂಥಿಂಥ ಕ್ಷೇತ್ರದಲ್ಲಿ ಇಷ್ಟು ಪ್ರಗತಿಯಾಗಿದೆ ಇಂತಹ ಕಡೆ ಮಾಡುತ್ತೇವೆ ಇಂತಹ ಕಡೆ ಮಾಡುವುದಿಲ್ಲ ಎಂದು ಹೇಳಿ. ಕಂಟ್ರಾಕ್ಟರ್‌ಗೆ ಹೇಳಿದಿರಿ, ಸಿಮೆಂಟ್ ಕಬ್ಬಿಣ ನೀನೇ ಕೊಂಡುಕೊಳ್ಳಬೇಕು ಎಂದು. ಎಲ್‌ಒಸಿ ಕೊಡದೇ ಹಣ ಕೊಡದೇ ಸಿಮೆಂಟ್ ಕಬ್ಬಿಣ ಎಲ್ಲಿಂದ ತರ್ತಾನೆ ಅವನು. ಕಟ್ಟಡದ ಕೆಲಸ ಬ್ರಿಜ್ಡ್ ಕೆಲಸ ಮಣ್ಣು ಮುಕ್ಕೋಯಿತು. ಕೆಲಸಗಳು ನಿಂತುಹೋಯಿತು. ರಾಜ್ಯದ ನೀರಾವರಿ ಯೋಜನೆಗೆ 1995-96ರ ಆಯವ್ಯಯದಲ್ಲಿ ಮೀಸಲಿಟ್ಟ ಹಣ 848.90 ಕೋಟಿ, ಇದುವರೆಗೆ ರಾಜ್ಯದ ನೀರಾವರಿ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಹಣ 463ಕೋಟಿ, ಖರ್ಚಾಗಿರುವುದಿಲ್ಲ.

ಇವತ್ತು ಉತ್ತರ ಕೊಡುವುದಕ್ಕೆ ಇರಲಿ ಅಂತ 463 ಕೋಟಿ ಬಿಡುಗಡೆ ಮಾಡಿದ್ದೀವೆ ಎಂದು ಹೇಳಿದ್ದೀರಿ. ಹಾಗಾದರೆ ಉಳಿದ ಹಣ ಯಾವಾಗ ಖರ್ಚು ಮಾಡುತ್ತೀರಿ? ಯಾರದೋ ಕಥೆ ಹೇಳುವುದಕ್ಕೆ ರಾಜ್ಯಪಾಲರ ಭಾಷಣ ಎಂದು ಹೇಳುತ್ತೀರೋ? ನಿಮ್ಮ ಅವಧಿಯಲ್ಲಿ ಏನು ಹೇಳಿದ್ದೀರೋ ಕೆಲಸ ಮಾಡಿ ಮುಗಿಸಬೇಕು ತಾನೇ? ಅದಾಗಲಿಲ್ಲ, ಕೃಷ್ಣಾ ಯೋಜನೆಗೆ ಆಯವ್ಯಯದಲ್ಲಿ ಮೀಸಲಿಟ್ಟಿರೋ ಹಣವೆಷ್ಟು? 220 ಕೋಟಿ, ಅದರಲ್ಲಿ ಈವರೆಗೆ ಬಿಡುಗಡೆ ಮಾಡಿರುವುದು 180 ಕೋಟಿ, ಖರ್ಚಿಲ್ಲ, ನೀವು ಏನು ಹೇಳಿದ್ದಿರಿ, ಈ ವರ್ಷ ಕೃಷ್ಣಾ ಕಣಿವೆಗೆ ಒಂದು ಸಾವಿರ ಕೋಟಿ ಖರ್ಚು ಮಾಡುತ್ತೇವೆಂದು. ಅದರಲ್ಲಿ ಇದುವರೆಗೆ ಕಾಮಗಾರಿಗಳಿಗಾಗಿ ಖರ್ಚು ಮಾಡಿರುವುದು ಕೇವಲ 155ಕೋಟಿ, ಕೃಷ್ಣ ಜಲ ನಿಗಮದ ಕಾಮಗಾರಿಗಳಿಗಾಗಿ ಕೇವಲ 40 ಕೋಟಿ ಖರ್ಚು ಮಾಡಿರುವುದು ಅಂದರೆ ಒಟ್ಟು 195 ಕೋಟಿ ಖರ್ಚು ಮಾಡಿರುವುದರಲ್ಲಿ ಉಳಿದ 800 ಕೋಟಿಗಳನ್ನು ಮಾರ್ಚಿ ಒಳಗೆ ಖರ್ಚು ಮಾಡುತ್ತೀರಿ. ಕೃಷ್ಣಾ ಭಾಗ್ಯಜಲ ನಿಗಮದಿಂದ 400 ಕೋಟಿಯಂತೆ 2 ಬಾರಿ ಸಂಗ್ರಹ ಮಾಡುತ್ತೇವೆಂದು ಹೇಳಿದಿರಿ. ಇದುವರೆಗೂ 182 ಕೋಟಿ ಮಾತ್ರ ಸಂಗ್ರಹ ಮಾಡಿದ್ದೀರಿ. ಅದನ್ನೂ ಖರ್ಚು ಮಾಡಲಿಲ್ಲ. ಇನ್ನುಳಿದ ಬಾಂಡನ್ನು ಬಿಡುಗಡೆ ಮಾಡುವುದು ಮಾರ್ಚಿಯಲ್ಲಿ ಅಂದರೆ ಮುಂದಿನ ವರ್ಷಕ್ಕೆ ಹೋಯಿತು ಅಂದರೆ ಈ ಕುರ್ಚಿಯಲ್ಲಿ ಕುಳಿತು ಈ ರಾಜ್ಯದ ಮುಖ್ಯಮಂತ್ರಿ ನಾನು ಎಲ್ಲಿಂದಾದರೂ 1000 ಕೋಟಿ ತಂದು ಕೃಷ್ಣ ಜಲಾನಯನ ಪ್ರದೇಶಕ್ಕೆ ಖರ್ಚು ಮಾಡುತ್ತೇನೆಂದು ಭರವಸೆ ಕೊಟ್ಟಿರಲ್ಲ, ಇದು ಒಬ್ಬ ಮುಖ್ಯಮಂತ್ರಿಗಳಿಗೆ ಶೋಭೆ ತರುವಂಥಾದ್ದೆ? ರೈತ ಸಮೂಹಕ್ಕೆ ಮಾಡಿದ ದ್ರೋಹ ಇದಾಗುವುದಿಲ್ಲವೇ? ಮನ ಬಂದಂತೆ ಸುಳ್ಳು ಭರವಸೆ ಕೊಡುವುದರಲ್ಲಿ ತಾವು ಯಶಸ್ವಿಯಾಗಿದ್ದೀರೇ ಹೊರತು ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಯಾವ ಕಳಕಳಿಯೂ ನಿಮ್ಮಲ್ಲಿ ಕಾಣುತ್ತಿಲ್ಲ. ಹೇಮಾವತಿ ಕಾಮಗಾರಿಗಳಿಗೆ ಈ ವರ್ಷ ತೆಗೆದಿಟ್ಟಿರುವ ಹಣ 160 ಕೋಟಿ, ಇದುವರೆಗೂ ನೀವು ಖರ್ಚು ಮಾಡಿರುವುದು ಕೇವಲ 70 ಕೋಟಿ ಮಾತ್ರ, ಸಣ್ಣ ನೀರಾವರಿ ಯೋಜನೆಗೆ 67.55 ಕೋಟಿ ತೆಗೆದಿಟ್ಟಿರಿ, ಇದುವರೆಗೂ ಖರ್ಚು ಮಾಡಿರುವುದು 37.55 ಕೋಟಿ ಮಾತ್ರ. ಅಂದರೆ ಹಣ ಎಲ್ಲಿ ಹೋಯಿತು? ಸಿದ್ಧರಾಮಯ್ಯನವರು ಮನೇಲಿ ಇಟ್ಟುಕೊಂಡಿದ್ದೀರಿ? ಅಥವಾ ಮುಂದೇನಾದರೂ ದುರಂತ ಆದಾಗ ಇರಲಿ ಅಂತ ಫಿಕ್ಸೆಡ್ ಠೇವಣಿ ಇಟ್ಟಿದ್ದೀರೋ? 90 ಕೋಟಿ ರೂ. ವಾಹನಗಳ ಲೈಫ್ ಟ್ಯಾಕ್ಸ್ ವಸೂಲು ಮಾಡಿದಿರಿ? ಈ ಜನರಿಂದ ಸುಲಿಗೆ ಮಾಡಿ ಅವನು ಬದುಕಿರುವವರೆಗೂ ಪ್ರತಿವರ್ಷ ಕೊಡಬೇಕಾದ ತೆರಿಗೆಯನ್ನು ಒಟ್ಟಿಗೆ ಅವನಿಂದ ವಸೂಲು ಮಾಡಿದಿರಿ, ಅವನಿಗೆ ಕೊಡುವ ಶಕ್ತಿ ಇತ್ತೋ ಇಲ್ಲವೋ ಎಂದು ಚಿಂತನೆ ಮಾಡಲಿಲ್ಲ 90 ಕೋಟಿಗೆ ಇನ್ನೂ 45 ಕೋಟಿ

ಮ್ಯಾಚಿಂಗ್‌ಗ್ರಾಂಟ್ ಕೊಟ್ಟು ಅವನು ದೊಡ್ಡು ಕೊಟ್ಟಿದ್ದಕ್ಕಾದರೂ ಎರಡು ವರ್ಷವಾದರೂ ಳ್ಳೆಯ ರಸ್ತೆಯಲ್ಲಿ ಓಡಾಡಲು ವ್ಯವಸ್ಥೆ ಮಾಡಲು ಶಕ್ತಿ ಇರದಿರುವಂತಹ, ಕಳಕಳಿ ಇರದಂತಹ ನಿಮ್ಮ ಸರ್ಕಾರ ಬದುಕಿದೆ ಅಂಶ ಕರೆಯಬೇಕೇ?

ಸತ್ತಿದೆ ಅಂತ ಕರೆಯಬೇಕೇ? ಯಾವ ರಂಗದಲ್ಲಿ ನೀವು ಯಶಸ್ವಿಯಾಗಿದ್ದೀರಿ? ಾರಿಗೆ ಹಣ ಕೊಟ್ಟಿದ್ದನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ಉತ್ತರ ಕೊಡುವಾಗ ಹೇಳಿ. ಎಲ್ಲಾ ರಂಗದಲ್ಲಿ ವೈಫಲ್ಯತೆ ಹೊಂದಿರುವ ಜನರ ಕಣ್ಣೀರು ಒರೆಸಬೇಕು ಎನ್ನುವ ಕಳಕಳಿ ಇರದಂತಹ ಬೇಜವಾಬ್ದಾರಿ ಸರ್ಕಾರ ಇವತ್ತು ರಾಜ್ಯದಲ್ಲಿದೆ. ಕೊನೇ ಒಂದು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ. ಅಧ್ಯಕ್ಷರಿಗೆ ನಾವು ವಿನಂತಿ ಮಾಡಿದ್ದೇವೆ, ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ವಿಶೇಷವಾದ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಅಂತ. ನಿನ್ನೆ ಹಳಿಯಾಳಕ್ಕೆ ಹೋಗಿದ್ದೆ, ಅದು ಒಬ್ಬ ಜಿಲ್ಲಾ ಪ್ರಭಾವಿ ಮಂತ್ರಿ ಇರುವ ಕಡೆ ಒಂದೂಕಾಲು ಲಕ್ಷ ಟನ್ ಕಬ್ಬು ಈಗಾಗಲೇ ಪೂರ್ಣವಾಗಿ ಅರೆದು ಮುಗಿಯಬೇಕಾಗಿತ್ತು. ಮಹಾರಾಷ್ಟ್ರ ಗೋವಾದ ಕರ್ನಾಟಕದ ಹಲವು ಸಕ್ಕರೆ ಕಾರ್ಖಾನೆಗಳಿಗೆ ಕೊಟ್ಟು ಅವನು ಬದುಕುತ್ತಿದ್ದ. ಈ ಸಾರಿ ಆಗಲಿಲ್ಲ, ಪೂರ್ತಿ ಒಣಗುತ್ತಿದೆ ಅವನು ಬೀದಿ ಪಾಲಾಗುತ್ತಿದ್ದಾನೆ, ನಿಮ್ಮ ಸರ್ಕಾರ ಕೊಟ್ಟಿರುವ ವರದಿಯಂತೆ ಸುಮಾರು 35 ರಿಂದ 40 ಲಕ್ಷ ಟನ್ ಬೇರೆ ಎಲ್ಲಾ ವ್ಯವಸ್ಥೆ ಮಾಡಿದ ಮೇಲೂ ಸಹ ಒಣಗಿಹೋಗುತ್ತದೆ. ನಮ್ಮಲ್ಲಿ ಹೆಚ್ಚು ಕಬ್ಬಿದೆ ಅರೆಯುವ ಪರಿಸ್ಥಿತಿಯಲ್ಲಿ ಇಲ್ಲ ಎಂದಾದ ಮೇಲೆ ಈವೇಳೆಗೆ ಮಹಾರಾಷ್ಟ್ರ ಗೋವಾ ತಮಿಳುನಾಡುಗಳಲ್ಲಿ ಮೊದಲಿ ವ್ಯವಸ್ಥೆ ಮಾಡಬೇಕಾದ ಕರ್ತವ್ಯ ನಿಮಗಿತ್ತು. ಮುಂದಾಲೋಚನೆ ಮಾಡಿ ಸಂಬಂಧಪಟ್ಟ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಸಮಸ್ಯೆ ಬಗೆಹರಿಸಲು ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ನಾನು ಒಮ್ಮೆ ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಬಂದು ಗೊತ್ತಾದ ಮೇಲೆ ನಿಮ್ಮ ಸಕ್ಕರೆ ಸಚಿವರು ಒಂದು ಸಾರಿ ಹೋಗಿ ಬರಿಗೈಲಿ ವಾಪಸ್ ಬಂದರು. ನಾನಿಷ್ಟೇ ಕೇಳುವುದು, ದಯಮಾಡಿ ರೈತನ ಯಾವ ತಪ್ಪಿಲ್ಲದೆ 40 ಲಕ್ಷ ಟನ್ ಕಬ್ಬಿಗೆ ಬೆಂಕಿ ಹಚ್ಚುವ ಸಂದರ್ಭ ಬರುತ್ತಿದೆ, ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ಇನ್ನು ನಾಲ್ಕಾರು ದಿವಸದಲ್ಲಿ ಮಾಡಬೇಕು. ಅದನ್ನು ಮಾಡದಿದ್ದರೆ ಬಜೆಟ್ ಅಧಿವೇಶನದ ಪ್ರಾರಂಭದ ದಿವಸ ಲಕ್ಷಾಂತರ ರೈತರು ಒಣಗಿರುವ ಕಬ್ಬು ತಲೆಮೇಲೆ ಹೊತ್ತು ತಂದು ನಿಮ್ಮ ವಿಧಾನಸೌಧದ ಸುತ್ತ ಹಾಕಿ ಏನು ಪೂಜೆ ಮಾಡಬೇಕೋ ಅದನ್ನು ಮಾಡಿ ಅಂತ ಅನಿವಾರ್ಯವಾಗಿ ರಾಜ್ಯದ ಜನತೆಗೆ ಕರೆಕೊಡುವಂತಹ ಅನಿವಾರ್ಯ ಪರಿಸ್ಥಿತಿ ತರಬೇಡಿ.

ಇಲ್ಲಿ ಸದನದಲ್ಲಿ ಪ್ರಸ್ತಾಪ ಮಾಡಿದಾಗ, ಕಳೆದ ಒಂದು ವರ್ಷದಿಂದ ಚುನಾಯಿತ ಪ್ರತಿನಿಧಿಗಳು ಇಲ್ಲ ಹೋರಾಟ ಮಾಡಿದರೂ ರೈತನ ಕಬ್ಬನ್ನು ಅರೆಯದಿರುವಂತಹ ಬೇಜವಾಬ್ದಾರಿ ಸರ್ಕಾರ ಇಲ್ಲಿದ್ದಾಗ ನಾವು ಸದನದೊಳಗೆ ಕುಳಿತು ಕಾರ್ಯಕಲಾಪ ನಡೆಸುವುದಕ್ಕೆ ಆಗುವುದಿಲ್ಲ. ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ, ರೈತನ ಸಂಯಮಕ್ಕೆ ಒಂದು ಇತಿಮಿತಿ ಇದೆ. ರೈತ ಬೀದಿಪಾಲಾಗುತ್ತಿದ್ದಾನೆ. ಇಂತ ಸಂದರ್ಭದಲ್ಲಿ ರೈತನ ಕಬ್ಬನ್ನು ಅರೆದು ಅವನಿಗೆ ಸರಿಯಾಗಿ ಹಣ ಕೊಡಿ ಇಲ್ಲದಿದ್ದರೆ ಬೆಳೆದು ನಿಂತಿರುವ ಕಬ್ಬಿಗೆ ನಿಮಗೆ ಸರಿಯೆಂದು ಕಂಡರೆ ಮನಸಾಕ್ಷಿಯಾಗಿ ಯೋಚನೆ ಮಾಡಿ ಅವರಿಗೆ ಪರಿಹಾರ ಕೊಡುವ ವ್ಯವಸ್ಥೆ ಮಾಡಿ. ಮಹಾರಾಷ್ಟ್ರದಲ್ಲಿ ಇದಾಯಿತು, ನೀರಿಲ್ಲದೆ ಕಬ್ಬು ಒಣಗಿದಾಗ 450 ಟನ್‌ನಂತೆ ಮೇವಾಗಿ ಅದನ್ನು ಖರೀದಿ ಮಾಡಿತ್ತು ಅಲ್ಲಿನ ಸರ್ಕಾರ. ಈಗ ನೀವು ಮಾಡದೇ ಇದರೆ ಬಹುಶಃ ಶಾಸನಸಭೆಯಿಂದ ನಾವು ಹೊರಗಡೆ ಹೋದ ಮೇಲೆ ಆ ಕಡೆ ಈ ಕಡೆ ಇರುವ ಯಾವುದೇ ಶಾಸಕನನ್ನೂ

ಜನರು ರಸ್ತೆಯಲ್ಲಿ ಓಡಾಡಲು ಬಿಡುವುದಿಲ್ಲ. ಪ್ರೊ. ನಂಜುಂಡಸ್ವಾಮಿಯವರು ಏನು ತಪ್ಪು ಮಾಡಿದರು ಸ್ವಾಮಿ? ಯಾವುದೇ ಒಂದು ಬಹುರಾಷ್ಟ್ರೀಯ ಸಂಸ್ಥೆ ಕೋಳಿಮಾಂಸ ಮಾಡುವುದಕ್ಕೆ ಅಲೂಚಿಪ್ಸ್ ಮಾಡುವುದಕ್ಕೆ ಅಮೆರಿಕಾದಿಂದ ಬಂದಂಥ ಬಹುರಾಷ್ಟ್ರ ಕಂಪೆನಿಗಳು ಕೆಲಸ ಮಾಡುವುದು ಹೇಗೆ ಎಂದು ದೇವೇಗೌಡರು ತಳಮಳ ಆದರು. ಅವರಿಗೆ ಮುಖ್ಯ ಮಂತ್ರಿಗಳು ಹೇಳಬೇಕಾಗಿತ್ತು. ನಿಮ್ಮ ಅಗತ್ಯವಿಲ್ಲ ಕೋಳಿಮಾಂಸ ಮಾಡಲು ನಿನಗೆ ಆದ್ಯತೆ ಕೊಟ್ಟಿಲ್ಲ. ಬೆಂಕಿ ಹಾಕಿ ಸುಡುತ್ತೇವೆ ವಾಪಸ್ ಹೋಗು ಎಂದು ಹೇಳಬೇಕಾಗಿತ್ತು. ಆ ನೆಪದಲ್ಲಿ ನಂಜುಂಡಸ್ವಾಮಿಯನ್ನು ಬಂಧಿಸುತ್ತೀರಿ ಸುಳ್ಳ ಕೇಸ್‌ಗಳನ್ನು ಹಾಕುತ್ತೀರಿ, ಹತ್ತಿಕ್ಕುತ್ತೇವೆ ಹೋರಾಟ ನಡೆಸಲು ಬಿಡುವುದಿಲ್ಲ ಅಂತ ಹೇಳಿದ್ದಾರೆ, ಯಾರನ್ನು ಹತ್ತಿಕ್ಕುತ್ತೀರಿ? ಪೋಲೀಸ್ ಕಾಕಿ ಬಟ್ಟೆಗೆ ಸ್ವಲ್ಪ ಗೌರವ ಇತ್ತು ಅವರನ್ನು ದುರುಪಯೋಗ ಮಾಡಿಕೊಂಡು ಮನಂಬಂದಂತೆ ಸುಳ್ಳುಕೇಸ್‌ಗಳನ್ನು ನಮ್ಮ ಪಕ್ಷದ ಶಾಸಕರ ಮೇಲೆ ಹಾಕಿಸಿದ್ದೀರಿ. ಬಿಜೆಪಿ ಶಾಸಕರು ಅಂದರೆ ಒಬ್ಬೊಬ್ಬರ ಮೇಲೆ 8-10 ಕೇಸ್ ಹಾಕಿದ್ದೀರಿ. ನಂಜುಂಡಸ್ವಾಮಿಯವರನ್ನು ಬಿಡಲಿಲ್ಲ, ಅವರು ಏನು ಅಪರಾಧ ಮಾಡಿದ್ದರು? ಬಹುರಾಷ್ಟ್ರೀಯ ಕಂಪೆನಿಗಳು ಇಲ್ಲಿಗೆ ಬರಬಾರದು ಎಂದು ಬಿಜೆಪಿಯ ಸ್ಪಷ್ಟ ನಿಲುವಿದೆ. ಅಗತ್ಯವಿರುವ ಆದ್ಯತೆ ಕ್ಷೇತ್ರಕ್ಕೆ ಮಾತ್ರ ಅವರು ಪ್ರವೇಶ ಮಾಡಬೇಕು. ಬೆಂಕಿ ಹಚ್ಚುವುದಲ್ಲ. ದೇಶ ಬಿಟ್ಟುಹೋಗುವವರೆಗೂ ಓಡಿಸಬೇಕಾಗುತ್ತದೆ. ಒಂದು ಈಸ್ಟ್ ಇಂಡಿಯಾ ಕಂಪೆನಿ ಬಂದು ದೇಶ ಸರ್ವನಾಶವಾಯಿತು. ಅವರಿಗೆ ಸ್ವಾರ್ಥಲಾಭಕ್ಕಾಗಿ ಆಮಂತ್ರಣ ಕೊಟ್ಟರು ನಿಮ್ಮ ಈ ಬಹುರಾಷ್ಟ್ರ ಕಂಪೆನಿಗಳ ಪ್ರವೇಶ ನೀವು ನಿಷೇಧ ಮಾಡಬೇಕು. ನಂಜುಂಡಸ್ವಾಮಿಯವರ ಮೇಲೆ ಹಾಕಿರುವ ಕೇಸನ್ನು ಬೇಷರತ್ತಾಗಿ ವಾಪಸ್ ಪಡೆದು ಅವರಿಂದ ಕ್ಷಮಾಪಣೆ ಕೇಳಬೇಕು ಎಂದು ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಾ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತಿದ್ದೇನೆ. ಧನ್ಯವಾದಗಳು.

+ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಕರ್ನಾಟಕದ ರಾಜ್ಯಪಾಲರು ವಿಧಾನಮಂಡಲದಲ್ಲಿ ಮಾಡಿದ ಭಾಷಣವನ್ನು ನೋಡಿದ ಸಂದರ್ಭದಲ್ಲಿ ಬಹಳಷ್ಟು ವಿಶ್ವಾಸವನ್ನು ಮೂಡಿಸತಕ್ಕಂತಹ ಧಾಟಿಯಲ್ಲಿ ಭಾಷಣ ಹೇಳಿದ್ದರೂ ವಸ್ತುಸ್ಥಿತಿ ಅದಕ್ಕೆ ತದ್ವಿರುದ್ಧವಾಗಿರುವುದನ್ನು ಕಾಣುತ್ತಿದ್ದೇವೆ. ಪ್ರಥಮ ನೀವು ಒಂದು ವಿಚಾರವನ್ನು ಹೇಳಿದಿರಿ, ಜನರ ಕುಂದುಕೊರತೆಗಳನ್ನು ನಿವಾರಣೆ ಮಾಡುವ ದಿಸೆಯಲ್ಲಿ ಜನತಾದರ್ಶನಗಳು ಯಶಸ್ವಿಯಾಗುತ್ತಿವೆ ಎಂದು ಈ ಜನತಾ ದರ್ಶನಗಳು ಎಷ್ಟು ಯಶಸ್ವಿಯಾಗಿವೆ, ಅದಕ್ಕೆ ಎಷ್ಟು ದೂರು ಬರುತ್ತಿವೆ ಆ ದೂರುಗಳನ್ನು ಪರಿಹಾರ ಮಾಡಲು ಸರ್ಕಾರ ಯಾವ ಕಾರ್ಯಕ್ರಮ ಹಾಕಿಕೊಂಡಿದೆ ಎಂದು ಪ್ರಶ್ನೆ ಬಂದಾಗ ಅದು ಬಹುಶಃ ಶೂನ್ಯ! ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮಸಭೆ ಎಂದಿದೆ ತಮಗೆ ಗೊತ್ತಿದೆ ಮೊದಲು ಗ್ರಾಮಸಭೆ ಕರೆದಾಗ ಬಹಳಷ್ಟು ಜನರು ಏನೋ ಅಗಾಧ ಮಗೇನೋ ಸಿಗುತ್ತದೆ ನಮ್ಮ ಸಮಸ್ಯೆಗಳ ಪರಿಹಾರವಾಗುತ್ತದೆ ಎಂಬ ಭಾವನೆಯಿಂದ ಬಹಳ ಜನರು ಭಾಗವಹಿಸುತ್ತಿದ್ದರು. ಆದರೆ ಬರಬರುತ್ತ ಈಗ ಗ್ರಾಮಸಭೆಗಳಲ್ಲಿ ಜನಪ್ರತಿನಿಧಿಗಳನ್ನು ಬಿಟ್ಟರೆ ಐದಾರು ಜನವೂ ಬರುತ್ತಿಲ್ಲ. ಅದೇ ರೀತಿ ಇವತ್ತು ಜನತಾದರ್ಶನಗಳಲ್ಲೂ ಅಧಿಕಾರಿಗಳು ಮತ್ತು ಸಚಿವರನ್ನು ಮತ್ತು ಅವರ ಹಿಂಬಾಲಕರಿಗೆ ಹೊರತುಪಡಿಸಿ ಜನರ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಯಾವ ಪ್ರಾಮಾಣಿಕ ಪ್ರಯತ್ನವನ್ನೂ ಜನತಾದರ್ಶನಗಳಲ್ಲಿ ಮಾಡಿಲ್ಲ. ಜನತಾದರ್ಶನದ ಸಮಯದಲ್ಲಿ ಗ್ರಾಮೀಣ ಪ್ರದೇಶಗಳ ಜನಪ್ರತಿನಿಧಿಗಳನ್ನು ಕರೆಯಿಸಿ ಅವರ ಸಮಸ್ಯೆಗಳೇನು? ಅವರ ಸೋಪೇನು ಅವನ್ನು ಪರಿಹರಿಸಲು ಚಿಂತನೆ ಮಾಡಬೇಕಾದ ಜನತಾದರ್ಶನ ರಾಜ್ಯದ ವೇದಿಕೆಯಾಗಿ ತಮ್ಮ ಪಕ್ಷದ ಸಾಧನೆಗಳನ್ನು ಕಾರ್ಯಕ್ರಮಗಳನ್ನು ಪ್ರಚಾರ ಮಾಡುವ ವೇದಿಕೆಯಾಗಿರುವುದನ್ನು ನಾವು ಕಾಣುತ್ತಿದ್ದೇವೆ.

ಈ ಸಚಿವರು ಏನು ಮಾಡಿದರು, ಇವರ ಸಾಧನೆ ಏನು ಎನ್ನುವುದನ್ನು ನಾವು ಕೇಳಿದಾಗ ಇನ್ನೊಂದು ಆರು ತಿಂಗಳು ಬಿಟ್ಟು ಕೇಳಿ ನಮ್ಮ ಸಾಧನೆಯನ್ನು ಹೇಳುತ್ತೇನೆ ಎನ್ನತಕ್ಕಂತಹ ಅಭಿಪ್ರಾಯ ವ್ಯಕ್ತವಾಯಿತು. 6 ತಿಂಗಳಾಗಿ ಒಂದು ವರ್ಷವಾದರೂ ಸಹ ಈ ಜನತಾ ದರ್ಶನದಿಂದ ಯಾರಿಗೂ ಏನೂ ಅನುಕೂಲವಾದಂತೆ ಕಾಣುತ್ತಿಲ್ಲ. ಇನ್ನೊಂದು ಕಡೆಯಲ್ಲಿ ಈ ರಾಜ್ಯದಲ್ಲಿ ಗಣನೀಯ ಪ್ರಮಾಣದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುತ್ತೇವೆಂದು ಹೇಳಿದರು. ನಮ್ಮ ರಾಜ್ಯದ ಜಿಲ್ಲೆಯ ಸ್ಥಳಗಳನ್ನು ಉದ್ದಿಮೆದಾರರಿಗೆ ಕೊಡುತ್ತೇವೆ. ಉದ್ದಿಮೆಗಳಿಗೆ ಬೇಕಾದ್ದಕ್ಕಿಂತ ಹೆಚ್ಚು ಸ್ಥಳವನ್ನು ಮಾರಾಟದ ರೀತಿಯಲ್ಲಿ ಕೊಡುತ್ತಿದ್ದೇವೆ. ಆದರೆ ಅವರು ಎಷ್ಟು ಜನರಿಗೆ ಉದ್ಯೋಗ ಕೊಡುತ್ತಾರೆನ್ನುವ ವಿಚಾರ ಬಂದಾಗ ನಮಗೆ ತಿಳಿಯುತ್ತದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಜನರು ಕರಾವಳಿಯಲ್ಲಿರತಕ್ಕಂತಹ ಜನರು ಇದಕ್ಕೆ ಪ್ರತಿಭಟನೆ ಮಾಡತಕ್ಕಂಥಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಹುಶಃ ಇದರಲ್ಲಿ ಯಾವುದೇ ಉದ್ಯಮವನ್ನು ಕೊಡತಕ್ಕಂತಹ ಸಂದರ್ಭದಲ್ಲಿ, ಮಂಜೂರು ಮಾಡತಕ್ಕಂತಹ ಸಂದರ್ಭದಲ್ಲಿ ಜನ ಪ್ರತಿನಿಧಿಗಳನ್ನು ಕತ್ತಲಲ್ಲಿ ಇಡುತ್ತೀರಿ. ನಮ್ಮ ಗ್ರಾಮದಲ್ಲಿ ನಮ್ಮ ಕ್ಷೇತ್ರದಲ್ಲಿ ನಮ್ಮ ಜಿಲ್ಲೆಯಲ್ಲಿ ಏನಾಗುತ್ತದೆ ಎನ್ನತಕ್ಕಂತಹ ವಿಚಾರಗಳನ್ನು ಯಾವುದೇ ಜನ ಪ್ರತಿನಿಧಿಯ ಗಮನಕ್ಕೆ ತರುವುದಿಲ್ಲ, ನಮ್ಮ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಉದ್ದಿಮೆಗಳು ಬರುತ್ತದೆ, ನಮ್ಮ ಜಿಲ್ಲೆಯಲ್ಲಿ ಏನೋ ಕೆಲಸವಾಗುತ್ತದೆ, ನಮ್ಮ ಕ್ಷೇತ್ರದ ಜನರಿಗೆ ಕೆಲಸ ಸಿಗುತ್ತದೆನ್ನುವ ಭಾವನೆಯಿಂದ ನಾವು ಸುಮ್ಮನೆ ಇದ್ದರೆ ಅವರು ಮಾಡಿರತಕ್ಕಂತಹ ಸಾಧನೆಗಳನ್ನು, ಅವರ ಕೃತಿಗಳನ್ನು ಹಾಳು ಮಾಡಿ ಅವರ ಭೂಮಿಯನ್ನು ಹಾಳು ಮಾಡಿ ಅವರ ಭೂಮಿಯನ್ನು ನಾಶ ಮಾಡತಕ್ಕಂತಹ ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆ. ತಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡಿರಬಹುದು ಎಂ.ಆರ್.ಪಿ.ಎಲ್ ಬಗ್ಗೆ ಕರಾವಳಿ ಜನರ ಸಂಪೂರ್ಣ ವಿಶ್ವಾಸವನ್ನು ಕಳೆದುಕೊಂಡಿರುವುದರಿಂದ ಈ ಜಿಲ್ಲೆಯ ಎಲ್ಲಾ ಜನ ಪ್ರತಿನಿಧಿಗಳು ಅದನ್ನು ವಿರೋಧಿಸತಕ್ಕಂತಹ ಒಂದು ಸಂದರ್ಭವನ್ನು ನಾವು ಇಂದು ಕಾಣುತ್ತಿದ್ದೇವೆ.

ಜನರನ್ನು ಇದರ ಬಗ್ಗೆ ಏಕೆ ವಿಶ್ವಾಸಕ್ಕೆ ತೆಗೆದುಕೊಳ್ಳಬಾರದೆನ್ನತಕ್ಕಂತಹ ವಿಚಾರ ಬಂದಾಗ ಅದಕ್ಕೆ ಉತ್ತರ ಹೇಳತಕ್ಕಂತಹ ಯಾವುದೇ ಸಚಿವರು ಇಲ್ಲ. ಯಾವುದೇ ಮುಖ್ಯ ಮಂತ್ರಿಗಳು ಈ ಬಗ್ಗೆ ಗಮನಹರಿಸಲಿಲ್ಲ. ಕೇಳಿದರೆ ನಿಮ್ಮ ಸರಕಾರ ಇದ್ದಾಗ ಮಂಜೂರಾತಿಯಾಯಿತು ಎಂದು ಹೇಳುತ್ತಾರೆ ಮತ್ತೊಬ್ಬರನ್ನು ಕೇಳಿದರೆ ಇನ್ನೊಂದು ಸರಕಾರವಿದ್ದಾಗ ಮಂಜೂರಾತಿಯಾಯಿತು ಎಂದು ಹೇಳುತ್ತಾರೆ. ಒಂದು ರೀತಿಯ ಹಾರಿಕೆಯ ಉತ್ತರವನ್ನು ಕೊಡುತ್ತಾರೆಯೇ ಹೊರತು ಯಾವುದೇ ಸಾಧನೆಯನ್ನು ವ್ಯವಸ್ಥೆ ಮಾಡಿಲ್ಲ. ಇದರಲ್ಲಿ ಯಾರಿಗೆ ಉದ್ಯೋಗ ಸಿಗುತ್ತದೆ ಎನ್ನುವುದು ಖಾತರಿ ಇಲ್ಲ. ಉದ್ಯೋಗ ಕೊಡಿ ಎನ್ನುವ ಪ್ರತಿಭಟನೆ ಮಾಡಿ ಯಾವ ಉದ್ದಿಮೆದಾರರಿದ್ದಾರೆ ಅವರ ಕಚೇರಿ ಎದುರುಗಡೆ ಸತ್ಯಾಗ್ರಹ ಮಾಡುವುದನ್ನು ನಾವು ಕಾಣುತ್ತಿದ್ದೇವೆ. ಇನ್ನೊಂದು ವಿಚಾರವನ್ನು ಇಲ್ಲಿ ಹೇಳಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಏನೂ ಸಮಸ್ಯೆಗಳಿಲ್ಲ ಎನ್ನತಕ್ಕಂತಹ ಭಾವನೆಯನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಬಹುಶಃ ಚುನಾವಣೆ ನಡೆಸಲಿಕ್ಕೆ ಬೆಂಗಳೂರು ನಗರದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧ್ಯವಾಗದೇ ಇರತಕ್ಕಂತಹ ಕಾನೂನಿನ ವ್ಯವಸ್ಥೆ ಇರುವಾಗ ಕಾನೂನು ಸುವ್ಯವಸ್ಥೆಯಾಗಿದೆ ಎನ್ನತಕ್ಕಂತಹ ಒಂದು ಮಾತನ್ನು ಆಡಳಿತಕ್ಕಂಥಾದ್ದನ್ನು ನೋಡಿದರೆ ಅಲ್ಲಿ ಏನು ಹೇಳಿದೆ ಅದೆಲ್ಲಕ್ಕೂ ವ್ಯತಿರಿಕ್ತವಾದ ಪರಿಸ್ಥಿತಿ ಉಂಟಾಗಿದೆ. ನಮ್ಮ ರಾಜ್ಯದಲ್ಲಿ ಎಲ್ಲ ಈ ಜಿಲ್ಲೆಗಳಲ್ಲಿ ಕೊಲೆಗಳು ನಡೆಯುತ್ತಿದೆ. ಎಲ್ಲರಿಗೂ ಅನ್ನಿಸುತ್ತಿದೆ ಬಹುಶಃ ಬಹಳಷ್ಟು ಪತ್ರಿಕೆಗಳನ್ನು ನಾವು ಓದಿದ್ದೇವೆ. ಹೊರಗೆ ಹೋದವರು ಮತ್ತೆ ವಾಪಸ್‌ಬರುತ್ತಾರೋ ಇಲ್ಲವೋ ಎಂದು

ಹೇಳತಕ್ಕಂತಹ ಪರಿಸ್ಥಿತಿ ಉಂಟಾಗಿದೆ. ಹಗಲಿನಲ್ಲಿ ದರೋಡೆಯಾಗತಕ್ಕಂತಹ ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆ. ಕೊಲೆ ಲೂಟಿ ಅಥವಾ ಹಲ್ಲೆಯಾಗಿದೆ ಎನ್ನುವ ವಿಚಾರಗಳನ್ನು ಕೆಲವು ಪತ್ರಿಕೆಗಳಲ್ಲಿ ನಾವು ನೋಡುತ್ತಿದ್ದೇವೆ. ಅಲ್ಲಿ ಹಲ್ಲೆಯಾಗಿದೆ, ಇಲ್ಲಿ ಮಾನಾಪಹರಣವಾಗಿದೆ ಎಂದು ಹೇಳಿ ಬರೆಯತಕ್ಕಂತಹ ಪತ್ರಿಕೆಗಳು ಇಂದು ರದ್ದಾಗಿವೆ. ಈ ಸಾಧನೆಗಳನ್ನು ವ್ಯವಸ್ಥೆಗಳನ್ನು ಸರಿಪಡಿಸಲಿಕ್ಕಾಗದೇ ಇರತಕ್ಕಂತಹ ಹಂತಕ್ಕೆ ನಾವು ಮುಟ್ಟಿದ್ದೇವೆ. ಇನ್ನೊಂದು ವಿಚಾರ ಇದೆ ಅದು ಈ ಸಂದರ್ಭದಲ್ಲಿ ಇದು ಅಪ್ರಸ್ತುತ ಸಂಬಂಧಪಟ್ಟ ಸಚಿವರು ಇಲ್ಲ ಆದ್ದರಿಂದ ನಾನು ಅದನ್ನು ಹೇಳಲು ಇಷ್ಟಪಡುವುದಿಲ್ಲ. ಅದನ್ನು ನಾಳೆ ಮಾತನಾಡಬಹುದು ಎಂಬ ಭಾವನೆಯಿಂದ ನಾನು ಪ್ರಸ್ತಾವನೆ ಮಾಡುವುದಿಲ್ಲ. ಇವತ್ತು ಇಲ್ಲಿ ಕಾಣತಕ್ಕಂತಹ ಚಿತ್ರವೇನು ಇದೆ, ಅದನ್ನು ನಾವು ಇಂದು ಎಲ್ಲಾ ಜಿಲ್ಲೆಗಳಲ್ಲಿ ನೋಡಿದ್ದೇವೆ.

ರೌಡಿಗಳ ನಿಗ್ರಹದಳ ಮತ್ತು ಅಪರಾಧಿ ಪತ್ತೆದಳ ಎನ್ನುವುದನ್ನು ನಾವು ನೋಡಿದ್ದೇವೆ. ಒಳ್ಳೆಯ ಉದ್ದೇಶದಿಂದ ಈ ಎರಡು ಘಟಕಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಇವತ್ತು ಇರತಕ್ಕಂತಹ ಸನ್ನಿವೇಶ ಏನು ಅಂದರೆ, ಈ ರೌಡಿ ನಿಗ್ರಹ ದಳದೊಂದಿಗೆ ಏಗತಕ್ಕಂತಹವರು ರೌಡಿಗಳು, ಅಪರಾಧಿ ಪತ್ತೆ ದಳದೊಂದಿಗೆ ಏಗತಕ್ಕಂತಹವರು ಅಪರಾಧಿಗಳು ಬೆಂಕಿ ಇಟ್ಟವರು ಕೊಳ್ಳಿ ಇಟ್ಟವರು ವಾರೆಂಟ್ ಇದ್ದವರು ಅವರನ್ನು ಹಿಡಿಯತಕ್ಕಂಥಾದ್ದಕ್ಕೆ ಸಾಕ್ಷಿ ಕೇಳಿದರೆ ಸಾಕ್ಷ್ಯಾಧಾರಗಳನ್ನು ಕೊಡಲಿಕ್ಕೆ ನಾನು ಬದ್ಧನಿದ್ದೇನೆ. ಇಂತಹ ವ್ಯವಸ್ಥೆಗಳ ಅಡಿಯಲ್ಲಿ ನಾವು ಇವತ್ತು ಇದ್ದೇವೆ. ಯಾರು ಹೇಳುವವರು, ಕೇಳುವವರು ಇವರ ಆಡಳಿತ ಯಾರ ರೀತಿ ನಡೆಯುತ್ತಿದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಇಂಥ ಒಂದು ವ್ಯವಸ್ಥೆಯ ಅಡಿಯಲ್ಲಿ ನಾವು ಇದ್ದೇವೆ. ಆ ವ್ಯವಸ್ಥೆ ಸಮರ್ಪಕವಾಗಿ ಇರಬೇಕು ಇಲ್ಲವೇ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟನ್ನು ಮಾಡೋಣ ಆದರೆ ಅದಕ್ಕಿಂತ ವ್ಯತಿರಿಕ್ತವಾಗಿ ಜನರ ಮಾನ ಪ್ರಾಣವನ್ನು ರಕ್ಷಣೆ ಮಾಡತಕ್ಕಂತಹ ಪೋಲೀಸ್ ವ್ಯವಸ್ಥೆ ಏನು ಇದೆ ಇದು ರೌಡಿಗಳನ್ನು ಅಪರಾಧಿಗಳನ್ನು ಕಟ್ಟಿಕೊಂಡು ಶೋಷಣೆ ಮಾಡುವುದನ್ನು ಕಂಡಿದ್ದೇವೆ. ಈ ವ್ಯವಸ್ಥೆ ಬದಲಾವಣೆಯಾಗಬೇಕು. ಅವರದ್ದೇ ಆದ ವ್ಯವಸ್ಥೆಗಳ ಮೂಲಕ ಅದನ್ನು ತಡೆಹಿಡಿಯಬೇಕೇ ಹೊರತು ಈ ವ್ಯವಸ್ಥೆಯ ಮೂಲಕ ಸಂಪೂರ್ಣ ಅಧಿಕಾರವನ್ನು ಕೊಟ್ಟಲ್ಲಿ ಅದರಿಂದ ಖಂಡಿತವಾಗಿ ಅನಾಹುತವಾಗುತ್ತದೆ. ಇನ್ನೂ ಮಟ್ಕಾ, ಆ ಪರಿಸರದಲ್ಲಿರತಕ್ಕಂತಹ ಪೋಲೀಸ್ ಅಧಿಕಾರಿಗಳಿಗೆ ತಿಂಗಳಿಗೆ ಇಷ್ಟು ಮಾಮೂಲು ಎಂದು ಬರುತ್ತದೆ ಅವರಿಗೆ ಎಕ್ಸ್‌ಟ್ರಾ ಆದಾಯ. ಯಾವುದೇ ರೀತಿಯಲ್ಲಿ ಇದನ್ನು ತಡೆಹಿಡಿಯುವುದಕ್ಕಾಗುವುದಿಲ್ಲ ಅದನ್ನು ತಡೆಹಿಡಿಯುವುದಕ್ಕೆ ಈ ಕ್ಷೇತ್ರದ ಈ ರಾಜ್ಯದ ಯಾವುದೇ ಕ್ಷೇತ್ರದಲ್ಲಿ ಬಹುಶಃ ನನ್ನ ಕ್ಷೇತ್ರದಲ್ಲಿ ಮಟ್ಕ ಇಲ್ಲ ಎಂದು ಯಾವುದೇ ಒಬ್ಬ ಶಾಸಕ ನಿಂತು ಹೇಳಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ. ಅಂತಹ ಪರಿಸ್ಥಿತಿಯ ಅಡಿಯಲ್ಲಿ ನಾವು ಇದ್ದೇವೆ. ಮೇಲಿನಿಂದ ಕೆಳಗಿನ ತನಕ ಇದನ್ನು ನಿಲ್ಲಿಸಬೇಕೆನ್ನುವ ಕಾಳಜಿ ಪ್ರಾಮಾಣಿಕ ಪ್ರಯತ್ನ ನಾವು ಕಾಣುತ್ತಿಲ್ಲ. ಪತ್ರ ಬರೆದರೆ ಅದರಿಂದ ಏನೂ ಪ್ರಯೋಜನ ಬರುವುದಿಲ್ಲ, ವಿಧಾನ ಸಭೆಯಲ್ಲಿ ಮಾತನಾಡಿದರು ಅದರಿಂದ ಪ್ರಯೋಜನ ಬರುವುದಿಲ್ಲ, ಬೇರೆ ಬೇರೆ ಸಂದರ್ಭದಲ್ಲಿ ಸಚಿವರ ಮುಖ್ಯಮಂತ್ರಿಗಳ ಸಭೆಯಲ್ಲಿ ಮಾತನಾಡಿದರೆ ಅದರಿಂದ ಪ್ರಯೋಜನ ಬರುವುದಲ್ಲಿ ಹಾಗಾದರೆ ಇದರ ಬಗ್ಗೆ ಎಲ್ಲಿ ಮಾತನಾಡಬೇಕು? ಇದನ್ನು ಹೇಗೆ ಸರಿಪಡಿಸುತ್ತೀರಿ? ಎಂದು ಕೇಳಬಯಸುತ್ತೇನೆ. ಪ್ರಾಮಾಣಿಕವಾದ ನೈತಿಕತೆಯನ್ನು ಹೊಂದಿರತಕ್ಕಂತಹ ಅಧಿಕಾರಿಗಳು ಈ ಬಡವನ ಹಣವನ್ನು ಗಳಿಸಿ ನಮಗೆ ನೀತಿ ಹೇಳುವುದಾದರೆ ಜನ ಸಾಮಾನ್ಯನಿಗೆ ನೀತಿ ಹೇಳುವುದಾದರೆ ಅವರ ನೈತಿಕ ಮತ್ತು ಎಷ್ಟು ಇರುತ್ತದೆ ಎನ್ನುವ ಪ್ರಶ್ನೆ ಬರುತ್ತದೆ. ಎಲ್ಲಾ ತೀರ್ಮಾನಗಳು ಪಕ್ಷಗಳ ಆದೇಶದ ಪ್ರಕಾರ ಅವರ ಹೇಳಿಕೆಯ ಪ್ರಕಾರ ನಡೆಯತಕ್ಕಂತಹ ಅಪಾಯದ ಸಂದಿಗ್ಧ

ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇದು ಬದಲಾವಣೆಯಾಗಬೇಕು, ಇದು ಬದಲಾವಣೆಯಾಗಬೇಕಾದರೆ, ಹೇಗೆ ಬದಲಾವಣೆಯಾಗಬೇಕು, ಏನು ಎನ್ನತಕ್ಕಂಥಾದ್ದರ ಬಗ್ಗೆ ಚಿಂತನೆ ಅತೀ ಅವಶ್ಯಕತೆ ಇದೆ.

ಆದರೆ ಇದನ್ನು ನಾವು ಹೇಳುತ್ತಿರುತ್ತೇವೆ, ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಯಡಿಯೂರಪ್ಪನವರು ಹೇಳಿದರು ನಾವು ಇಲ್ಲಿ ಏನು ಭಾಷಣ ಮಾಡಿದರೂ ಬದಲಾವಣೆಯಾಗುವುದಿಲ್ಲ ಎಂದು. ಅದು ಸರಿ. ಮುಂಚೆ ಹೇಳಿದೆವು ಇವತ್ತು ನಾವು ಇಲ್ಲಿ ಭಾಷಣ ಮಾಡುತ್ತಿದ್ದೇವೆ ಬದಲಾವಣೆ ಏನೂ ಆಗುತ್ತಿಲ್ಲ ನಾವು ಹೇಳುವುದನ್ನು ಹೇಳುತ್ತಲೇ ಇದ್ದೇವೆ. ಇನ್ನು ಕೃಷಿ ಕ್ಷೇತ್ರದಲ್ಲಿ ಬಹಳಷ್ಟು ಆಧುನಿಕ ತಂತ್ರಜ್ಞಾನ ಅಳವಡಿಸುತ್ತೇವೆಂದು ಇಲ್ಲಿ ಇದೆ. ಆಧುನಿಕ ತಂತ್ರಜ್ಞಾನವೆಂದು ನಾನು ಭಾವಿಸುತ್ತೇನೆ. ಇದನ್ನು ನನ್ನ ಕ್ಷೇತ್ರದಲ್ಲಿ ನಮ್ಮ ತಾಲ್ಲೂಕಿನಲ್ಲಿ ನಮ್ಮ ಜಿಲ್ಲೆಯಲ್ಲಿ ತೋರಿಸುತ್ತೇನೆ. ಕಿಂಡಿ ಅಣೆಕಟ್ಟುಗಳನ್ನು ವರ್ಷಂಪ್ರತಿ ಕಟ್ಟುತ್ತಿದ್ದೀರಿ ಅದಕ್ಕೆ ಅವಶ್ಯಕತೆ ಇರತಕ್ಕಂತಹ ಹಲಗೆಗಳನ್ನು ಹಾಕುತ್ತಿಲ್ಲ. ಏಕೆ ಹಾಕುತ್ತಿಲ್ಲವೆಂದು ಕೇಳಿದಾಗ ನಮಗೆ ಕೊಟ್ಟಿರತಕ್ಕಂತಹ ಕೋಟಾ ಅಷ್ಟೇ 50 ಸಾವಿರ ರೂಪಾಯಿಗಳಲ್ಲಿ ಈ ಕಿಂಡಿ ಅಣೆಕಟ್ಟನ್ನು ಕಟ್ಟಬೇಕು ಎಂದು ಆದೇಶ ಇದೆ ಎಂದು ತಿಳಿಸಿದರು. ಸನ್ಮಾನ್ಯ ಉಸ್ತುವಾರಿ ಮಂತ್ರಿಗಳ ಹತ್ತಿರ ಜಿಲ್ಲಾ ಪಂಚಾಯತಿ ಸಭೆಯಲ್ಲಿ ನಾನು ಈ ಬಗ್ಗೆ ಬಹಳಷ್ಟು ಚರ್ಚೆ ಮಾಡಿದೆ ಇದರ ಬಗ್ಗೆ ಪ್ರಭಲವಾಗಿ ವಿರೋಧವನ್ನೂ ಮಾಡಿದೆ. ಭೂ ಸಾರ ಸಂರಕ್ಷಣಾ ಇಲಾಖೆ ಇದೆ ಅವರು ಕಿಂಡಿ ಅಣೆಕಟ್ಟನ್ನು ಕಟ್ಟುತ್ತಿದ್ದಾರೆ. ನಾನು ಟೀಕೆ ಮಾಡಿದೆ ಅದಕ್ಕೆ ಅವರು ನಮ್ಮನ್ನು ಆ ಸಮಿತಿಯ ವತಿಯಿಂದಲೇ ತೆಗೆದರು. ಏಕೆಂದರೆ ಜಿಲ್ಲಾ ಪರಿಷತ್ತಿನಲ್ಲಿ ನಾವು ಇರುತ್ತೇನೆ ಅವರು ಮಾಡಿದಂತಹ ತಪ್ಪುಗಳನ್ನು ಎಲ್ಲಾ ಸಭೆಗಳಲ್ಲಿ ಹೇಳುತ್ತೇವೆ ಎಂದು ನನ್ನನ್ನು ತೆಗೆದರು. ಆದ್ದರಿಂದ ನಮ್ಮನ್ನೂ ಆ ಸಭೆಗಳಿಂದ ಹೊರಗೆ ಇಟ್ಟು ಈ ತೀರ್ಮಾನ ತೆಗೆದುಕೊಂಡಿದ್ದಾರೆ. ಇದು ಅವರ ಆಧುನಿಕ ತಂತ್ರಜ್ಞಾನ ಈ ವ್ಯವಸ್ಥೆಗಳು ಬದಲಾವಣೆಯಾಗದಿದ್ದರೆ ಕಿಂಡಿ ಅಣೆಕಟ್ಟನ್ನು ಕಟ್ಟತಕ್ಕಂತಹ ಮೂಲ ಉದ್ದೇಶ ಏನು ಎನ್ನತಕ್ಕಂತಹದ್ದರ ಬಗ್ಗೆ ವಿಚಾರ ಮಾಡಬೇಕು. ಮತ್ತು ಇದರಲ್ಲಿ ಹಣ ಖರ್ಚು ಮಾಡುವುದು ಹೇಗೆ, ನೀರು ಬರುತ್ತದೆಯೋ ಬರುವುದಿಲ್ಲವೋ ಗೊತ್ತಿಲ್ಲ. ಅಂತರ್ಜಲ ನೀರಿನ ಮಟ್ಟ ಕಾಯ್ದುಕೊಳ್ಳುವ ಬಗ್ಗೆ ಏನು ಮಾಡುತ್ತಾರೋ ಕಾಯ್ದುಕೊಳ್ಳುವ ಬಗ್ಗೆ ಮಾಡಬೇಕೆಂದಾದರೆ ಹಲಗೆ ಹಾಕಬೇಕೋ ಬೇಡವೋ ಅಲ್ಲಿ ಫೀಸಿಬಲಿಟಿ ಇದೆಯೇ ಎನ್ನುವಂತಹ ಯಾವುದೇ ವಿಚಾರ ಮಾಡದೇ ಕತ್ತಲಲ್ಲಿ ಈ ವ್ಯವಹಾರ ನಿರಂತರವಾಗಿ ವರ್ಷಂಪ್ರತಿಯಾಗುತ್ತಿದೆ. ಇದನ್ನು ತಡೆಹಿಡಿಯುವ ಕೆಲಸ ಮಾಡಬೇಕು, ಯಾರು ಮಾಡುತ್ತಾರೆ, ಹೇಗೆ ಮಾಡುತ್ತಾರೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. 3-4 ವರ್ಷಗಳ ಹಿಂದೆ ಜಿಲ್ಲಾ ಪಂಚಾಯತಿಯಲ್ಲಿ ನಾವು ರೆಸಲ್ಯೂಷನ್ ಮಾಡಿದೆವು ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳಿ ನಾನು ಈ ಸರ್ಕಾರವನ್ನು ಟೀಕೆ ಮಾಡುತ್ತಿಲ್ಲ. ಹಿಂದಿನ ಸರಕಾರವಿದ್ದಾಗ ಕೂಡ ಇದೇ ವ್ಯವಸ್ಥೆ ಇತ್ತು.

ಇಂದಿನ ಸರ್ಕಾರದಲ್ಲೂ ಇದೇ ವ್ಯವಸ್ಥೆ ಇದೆ. ಬಹುಶಃ ಭಾಷಣದ ಧಾಟಿ ಮಾತ್ರ ವ್ಯತ್ಯಾಸ ಇದೆ. ಇವತ್ತಿನತನಕ ಆ ಒಂದು ತನಿಖೆಯನ್ನು ಮಾಡಲಿಕ್ಕೆ ಆಗದೇ ಇರುವ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಹಾಗಾದರೆ ನಾವು ಹೇಗೆ ಇದ್ದೇವೆ? ಬಹುಶಃ ಯಾವುದೇ ಒಂದು ಅವ್ಯವಹಾರವನ್ನು ತನಿಖೆ ಮಾಡಿಸಿ ಅದರಿಂದ ಸಮರ್ಪಕವಾದ ಉತ್ತರವನ್ನು ಪಡೆಯಲಿಕ್ಕೆ ಆಗದೇ ಇರುವ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎನ್ನುವ ಮಾತನ್ನು ಹೇಳಲೇಬೇಕಾಗುತ್ತದೆ. ಇದಕ್ಕೆ ಮಾನ್ಯ ಸಚಿವರಿದ್ದು ಏನು ಮಾಡುತ್ತಾರೆ ಎನ್ನುವುದನ್ನು ಕಾದು ನೋಡೋಣ. ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ಇನ್ನು ಬಹಳಷ್ಟು ಜನರು ಮಾತನಾಡುವವರಿದ್ದಾರೆ. ವಿದ್ಯುಚ್ಛಕ್ತಿಯ

ಪೂರೈಕೆಯಲ್ಲಿ ಎಷ್ಟು ಅನಿಶ್ಚಿತತೆ ಇದೆ ಎಂದರೆ ಬಹುಶಃ ಈ ರಾಜ್ಯದ ಆಡಳಿ ವ್ಯವಸ್ಥೆಯಷ್ಟೇ ಅನಿಶ್ಚಿತತೆ ಇದೆ. ಏನಾಗುತ್ತದೆ. ಏನಾಗುವುದಿಲ್ಲ. ಎನ್ನುವುದು ನಿಮಗೂ ಗೊತ್ತಿಲ್ಲ. ನಮಗೂ ಗೊತ್ತಿಲ್ಲ. ಬಹುಶಃ ಏನಾದರೂ ವಿದ್ಯುಚ್ಛಕ್ತಿಯನ್ನು ಕೊಡು ಸಂದರ್ಭದಲ್ಲಿ ಬಹುಶಃ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆ. ಅಧಿಕಾರಿಗಳ ಇನ್ನೊಂದು ಹೇಳಿಕೆಯನ್ನು ಕೊಡುತ್ತಾರೆ. ಬಹುಶಃ ಎಷ್ಟು ಗಂಟೆ ವಿದ್ಯುತ್ ಕಡಿ ಇದೆ ಎನ್ನುವುದು ಅನಿಶ್ಚಿತತೆ. ವಿದ್ಯಾರ್ಥಿಗಳ ಗಲಾಟೆ ಪ್ರಾರಂಭವಾಗಿದೆ. ರೈತ ಗಲಾಟೆ ಪ್ರಾರಂಭವಾಗಿದೆ.

ಯಾರಿಗೂ ಸಮರ್ಪಕವಾದ ಉತ್ತರವನ್ನು ಕೊಡಲಿಕ್ಕೆ ಆಗದೇ ಇರತಕ್ಕಂತ ವ್ಯವಸ್ಥೆಯ ಅಡಿಯಲ್ಲಿ ವಿದ್ಯುಚ್ಛಕ್ತಿ ಇಲಾಖೆ ಇದೆ ಮತ್ತು ಸಂಬಂಧಪಟ್ಟ ಸಚಿವರ ಒಂದು ಉತ್ತರವನ್ನು ಕೊಟ್ಟರು. ಈ ರೀತಿ ಇಷ್ಟು ಗಂಟೆಗಳ ಕಾಲ ಮಾತ್ರ ವಿದ್ಯುತ್ ಕಡಿತವನ್ನು ಮಾಡಬೇಕಾಗುತ್ತದೆ. ಕಾಲೇಜಿಗೆ ಹೋಗುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತದೆ. ಎನ್ನುವ ಪತ್ರಿಕಾ ಹೇಳಿಕೆಯನ್ನು ಕೊಟ್ಟರು ಆದರೆ ಅದಕ್ಕೆ ತದ್ವಿರುದ್ಧವಾಗಿ ಇಲಾಖೆಯವರು ವರ್ತನೆ ಮಾಡುತ್ತಿದ್ದಾರೆ. ಅವರನ ಕೇಳಿದರೆ ನಮ್ಮ ಇಲಾಖೆಯಿಂದ ಇದೇ ರೀತಿ ನಿರ್ದೇಶನ ಬಂದಿದೆ ಎನ್ನುವುದು ಮತ್ತು ತಾವು ಕೊಡುವ ಸೌಲಭ್ಯಗಳು ಏನು ಇವೆ, ವಿದ್ಯುಚ್ಛಕ್ತಿಯ ಪ್ರಮಾಣ ಏನು ಇದೆ, ಅದರಲ್ಲಿ ಬೇಕಾದರೆ ತಾರತಮ್ಯ. ಕೆಲವು ತಾಲ್ಲೂಕುಗಳಿಗೆ ರೆಸ್ಟ್ರಿಕ್ಷನ್ಸ್ ಇದೆ. ಕೆಲವು ತಾಲ್ಲೂಕುಗಳಿಗೆ ಇಲ್ಲ, ದಾವಣಗೆರೆ, ಶಿರಸಿ ಬಹುಶಃ ಕೆಲವು ತಾಲ್ಲೂಕುಗಳು ಉಡುಪಿ ಹೀಗೆ ಕೆಲವು ತಾಲ್ಲೂಕುಗಳಿಗೆ ಜಿಲ್ಲಾಮಟ್ಟದ ಯಾವ ರೀತಿ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದಾರೆ ಅದೇ ರೀತಿ ಕೊಡುತ್ತಿದ್ದಾರೆ.

ಕೆಲವು ತಾಲ್ಲೂಕುಗಳಿಗೆ ಸಂಪೂರ್ಣವಾಗಿ ಕಡೆಗಾಣಿಸಲಾಗಿದೆ. ಇದಕ್ಕೆ ನಾವು ಜನರಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ನಾವು ಜನರನ್ನು ಕನ್‌ವಿನ್ಸ್ ಮಾಡಬೇಕು ಮಾನ್ಯ ಸಚಿವರು ಹೇಳಬೇಕು ಕಾರಣದಿಂದ ನಾವು ಇಂಥ ತಾಲ್ಲೂಕುಗಳಿಗೆ ಮಾತ್ರ ಲಿಮಿಟೇಷನ್ಸ್ ಹಾಕಿಲ್ಲ, ಉಳಿದದ್ದಕ್ಕೆ ಮಾತ್ರ ಹಾಕಿದ್ದೇವೆ ಎನ್ನುವುದನ್ನು ತಾವು ನಮಗೆ ಕನ್‌ವಿನ್ಸ್ ಮಾಡಿದರೆ ನಾವು ಜನರಿಗೆ ಕನ್‌ವಿನ್ಸ್ ಮಾಡಬಹುದು. ಇವತ್ತ ನಿಮ್ಮ ಅಧಿಕಾರಿಗಳಿಗೆ ಕನ್‌ವಿನ್ಸ್ ಮಾಡಲಿಕ್ಕೆ ಗೊತ್ತಿಲ್ಲ. ಸಚಿವರೂ ಸಹ ಆ ಬಗ ಹೇಳಿಕೆಯನ್ನು ಕೊಡುವುದಿಲ್ಲ. ಈ ಅನಿಶ್ಚತತೆಯನ್ನು ಕತ್ತಲೆಯಲ್ಲಿ ಇಟ್ಟು ಈ ವ್ಯವಹಾರವನ್ನು ಮಾಡುವುದು ಸೂಕ್ತವಲ್ಲ. ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಾವು ಹೇಳಿಕೆಯನ್ನು ಕೊಟ್ಟು ಅದೇ ರೀತಿ ನಡೆಯತಕ್ಕಂಥ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದರೆ ಮಾತ್ರ ತಮ್ಮ ವಿದ್ಯುಚ್ಛಕ್ತಿ ಇಲಾಖೆಗೆ ಒಂದು ಗೌರವ ಬರುತ್ತದೆ. ನಾವು ಈ ವಿದ್ಯುಚ್ಛಕ್ತಿಯನ್ನು ಅವಲಂಬಿಸಿಕೊಂಡು ಬಹಳಷ್ಟು ಯೋಜನೆಯನ್ನು ಹಾಕಬೇಕಾಗುತ್ತದೆ. ಮಿಲಿಯನ್ ಬಾವಿ ಯೋಜನೆಗಳು ಇವೆ. ಐಆರ್‌ಡಿಪಿಯಲ್ಲಿ ಬಾವಿ ಮತ್ತು ವಿದ್ಯುಚ್ಛಕ್ತಿ ಕೊಡುವ ಕಾರ್ಯಕ್ರಮಗಳು ಇವೆ. ಅವುಗಳನ್ನೆಲ್ಲಾ ಸಂಪೂರ್ಣವಾಗಿ ನಿಲ್ಲಿಸುವುದನ್ನು ನಾವು ಕಾಣುತ್ತಿದ್ದೇವೆ. ಒಂದು ಬಾವಿಯನ್ನು ತೋಡಬೇಕಾದರೆ ವಿದ್ಯುಚ್ಛಕ್ತಿ ಇಲಾಖೆಯಿಂದ ಫೀಸಿಬಿಲಿಟಿ ಸರ್ಟಿಫಿಕೇಟ್ ಬೇಕಾಗುತ್ತದೆ

ಅದನ್ನೂ ಸಹಾ ಇಲಾಖೆಯವರು ಕೊಡುತ್ತಿಲ್ಲ. ಮತ್ತೊಂದು ಇದಕ್ಕೆ ಪೂರಕವಾಗಿ ಸೌಲಭ್ಯವನ್ನು ಕೊಡದೇ ಇರುವುದನ್ನು ನಾವು ಕಾಣುತ್ತಿದ್ದೇವೆ. ಇವುಗಳನ್ನೆಲ್ಲಾ ಯಾವ ರೀತಿಯಲ್ಲಿ ಪರಿಪಡಿಸಬೇಕು ಎನ್ನುವ ಚಿಂತನೆಯನ್ನು ಮಾಡಿ ಸನ್ಮಾನ್ಯ ಸಚಿವರು ಉತ್ತರ ಕೊಟ್ಟರೆ ಒಳ್ಳೆಯದು. ಇನ್ನು ರಸ್ತೆಗಳ ಬಗ್ಗೆ ಸನ್ಮಾನ್ಯ ಶಾಸಕರಾಗಿರುವ ನಾಗೇಗೌಡರು ಒಂದು ಕೋಟಿ ರೂಪಾಯಿ ಬೇಕಾಗುತ್ತವೆ ಎಂದು ಹೇಳಿದರು ಬಹುಶಃ 1999ಕ್ಕೆ ಈ ಭಾವನೆಗಳು ಏನು ಇವೆ. ಆ ಭಾವನೆಗೆ ತಕ್ಕಂತೆ ಎಲ್ಲಾ ರಸ್ತೆಗಳು ಆಗುತ್ತವೆ. ರಾಷ್ಟ್ರೀಯ ಹೆದ್ದಾರಿ ಬಗ್ಗೆ ಕೋರ್ಟಿಗೆ ಹೋಗಿ ರಸ್ತೆ ಸರಿಮಾಡಿ ಎನ್ನುವ ಆದೇಶವನ್ನು ಪಡೆಯಬೇಕಾಯಿತು. ಉಡುಪಿ ಪುರಸಭೆಯಲ್ಲಿ ಕೋರ್ಟಿನಿಂದ

ಆದೇಶವನ್ನು ಪಡೆದು ರಸ್ತೆಯನ್ನು ಸರಿಪಡಿಸಬೇಕಾಯಿತು. ಅದೇ ರೀತಿ ಪುರಸಭೆಗಳಲ್ಲಾಗಲಿ ಅಥವಾ ರಾಷ್ಟ್ರೀಯ ಹೆದ್ದಾರಿಗಳಲ್ಲಾಗಲೀ ಅಥವಾ ರಾಜ್ಯ ಹೆದ್ದಾರಿಯಲ್ಲಾಗಲೀ ಅಥವಾ ಜಿಲ್ಲಾ ಪರಿಷತ್ ರಸ್ತೆಗಳಾಗಲಿ ಯಾವುದೂ ಸಮರ್ಪಕವಾಗಿ ಆಗಿಲ್ಲ. ಕಾರಣ ಕೇಳಿದರೆ ಒಂದೇ ಉತ್ತರ ಬರುತ್ತದೆ. ಟಾರ್ ಇಲ್ಲ ಎಂದು. ಸಚಿವರು ನಾನು ಅದನ್ನು ಪ್ರಯತ್ನ ಮಾಡುತ್ತೇನೆ ಎಂದು ಹೇಳಿ, ಹೇಳುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಾರೆ ಟಾರ್ ಸಿಗುತ್ತಲೇ ಇಲ್ಲ ಎಂದು ಹಾಗಾದರೆ ಇದೇನು ಸಮಸ್ಯೆ.? ಇದಕ್ಕೆ ಪರಿಹಾರ ಹೇಗೆ ಮಾಡುತ್ತೀರಿ? ವರ್ಷವಿಡೀ ಟಾರ್ ಇಲ್ಲ ಎಂದು ಹೇಳುವುದಾದರೆ ಈ ಕೆಲಸಗಳನ್ನು ಹೇಗೆ ಪೂರ್ಣಗೊಳಿಸವುದಕ್ಕಾಗುತ್ತದೆ? ತಾವು ಏನು ಗುರಿ ಇಟ್ಟುಕೊಂಡಿದ್ದೀರಿ, ತಮ್ಮ ಸಾಧನೆ ಇದೆ, ಆ ಸಾಧನೆಯನ್ನು ಹೇಗೆ ಕಂಪ್ಲೀಟ್ ಮಾಡುವುದಕ್ಕಾಗುತ್ತದೆ. ಎನ್ನುವ ವಿಚಾರ ಇದೆ. ಮತ್ತೆ ಕೆಲವು ಗ್ರಾಮಗಳಿಗೆ ವಾಹನ ಸಂಚಾರವೇ ಆಗುತ್ತಿಲ್ಲ. ಕಾರಣ ಹೇಳಿದರೆ ರಸ್ತೆ ಸರಿ ಇಲ್ಲ. ರಸ್ತೆ ಸರಿ ಇಲ್ಲದಿದ್ದರೆ ವಾಹನ ಸಂಚಾರಕ್ಕೆ ಯೋಗ್ಯವಲ್ಲದ ರಸ್ತೆಗಳನ್ನು ಸಹಾ ವಾಹನ ಸಂಚಾರ ಆಗದೇ ಇದ್ದಾಗ ನಾವೇನು ಅವರಿಗೆ ಒತ್ತಾಯ ತರತಕ್ಕಂಥದ್ದು, ಅಥವಾ ಏನೇ ಒತ್ತಡವನ್ನು ತಂದರೂ ಸಹಾ ಅವರಿಗೆ ತರುವುದಕ್ಕೆ ಆಗದೇ ಇರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅಂಥ ಒಂದು ರೀತಿಯಲ್ಲಿ ಲೋಕೋಪಯೋಗಿ ಇಲಾಖೆಯ ಸಚಿವರಿಂದ. ಒಂದು ಪತ್ರ ಬಂತು ಹೊಂಡಗಳನ್ನು ಮುಚ್ಚಲಿಕ್ಕೆ ಯಾವುದಾದರೂ ಒಂದು ರಸ್ತೆಯ ಹೆಸರನ್ನು ಕೂಡಿ ಎಂದು ಹೇಳಿ ಪತ್ರ ಬಂತು. ಆದರೆ ನಮ್ಮ ಕ್ಷೇತ್ರದಲ್ಲಿರುವ ಎಲ್ಲಾ ರಸ್ತೆಗಳಲ್ಲಿ ಹೊಂಡ ಇರುವಾಗ ಅದರಲ್ಲಿ ನಾವು ಒಂದನ್ನು ಹುಡುಕಬೇಕು. ಈ ಸಮಸ್ಯೆಗಳು ಏಕೆ? ಬಹುಶಃ ಇದು ಎಲ್ಲಾ ರಸ್ತೆಗಳನ್ನು, ಹೊಂಡಗಳನ್ನು ತುಂಬಬೇಕು, ಸರಿಪಡಿಸಬೇಕು ಎನ್ನುವ ಆದೇಶವನ್ನು ಕೊಟ್ಟು.....

ಅಧ್ಯಕ್ಷರು : ಮಾನ್ಯ ಪ್ರತಾಪ ಚಂದ್ರಶೆಟ್ಟಿಯವರೇ, ನಾನು ಆಗಿನಿಂದಲೂ ನೋಡುತ್ತಿದ್ದೇನೆ, ಕೋರಂನ ಅಗತ್ಯವಿದೆ. ಆದ್ದರಿಂದ ಹೊತ್ತು ಸಭೆಯನ್ನು ಮುಂದಕ್ಕೆ ಹಾಕಿಬಿಡೋಣ. ನನಗೇಕೊ ಮನಸ್ಸಿಗೆ ಸಮಾಧಾನವಾಗುತ್ತಿಲ್ಲ. ಸುಮ್ಮನೆ ಲೆಕ್ಕಹಾಕಿಕೊಂಡು ನಾನು ಆಗಿನಿಂದ ಉಸಿರೆಲ್ಲಾ ಹಿಡಿದುಕೊಂಡು ನೋಡುತ್ತಿದ್ದೇನೆ, ಒಬ್ಬರು ಬರುತ್ತಾರೆ, ಇಬ್ಬರು ಹೋಗುತ್ತಾರೆ, ಇಬ್ಬರು ಹೋಗುತ್ತಾರೆ, ಮೂರು ಜನರು ಬರುತ್ತಾರೆ. ಕರೆಕ್ಟ್ ಆಗಿ 25 ಕ್ಕೆ ಬಂದು ನಿಲ್ಲುತ್ತಾ ಇದೆ. ಎಷ್ಟು ಹೊತ್ತು ನಾವು ಈ ರೀತಿ ನಡೆಸಬೇಕು ಅಪಮಾನವಾಗುತ್ತದೆ.

ಶ್ರೀ ಬಿ. ಶಿವರಾಂ : ಲಂಚ್ ಬ್ರೇಕ್ ಇಟ್ಟುಕೊಂಡು ಮಾಡುವುದು ಬಹಳ ಸೂಕ್ತ.

ಅಧ್ಯಕ್ಷರು : ಅರ್ಧ ಗಂಟೆ ಮುಂದೆ ಹಾಕೋಣ.

ಶ್ರೀ ಬಿ. ಶಿವರಾಂ : ನಾವು ಹೋಗಲೇಬೇಕಾಯಿತು. ಒಳಗಡೆ ಬರಲೇಬೇಕಾಯಿತು. ಈ ಪರಿಸ್ಥಿತಿ ಉದ್ಭವಿಸುತ್ತಿರುವುದರಿಂದ ತಾವು ಮುಂದೆ ಹಾಕಿ.

ಅಧ್ಯಕ್ಷರು : ಈಗ 3-00 ಗಂಟೆ ಆಗುತ್ತಿದೆ. ಮೂರವರೆ ಗಂಟೆಗೆ ಪುನಃ ಸೇರೋಣ.

4.00 ಪಿ.ಎಂ.

(ಸಭೆ ಮಧ್ಯಾಹ್ನ 4 ಗಂಟೆ 1 ನಿಮಿಷಕ್ಕೆ ಪ್ರಾರಂಭವಾಯಿತು. ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ ಮುಂದುವರಿದ ಭಾಷಣ : ಮಾನ್ಯ ಉಪಾಧ್ಯಕ್ಷರೆ, ರಾಜ್ಯ ವಿಧಾನಮಂಡಲದಲ್ಲಿ ಮಾನ್ಯ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣದಲ್ಲಿ ಬಡ ಜನರಿಗೆ ಸರ್ಕಾರದ ವತಿಯಿಂದ 19 ಲಕ್ಷ ಕುಟುಂಬಗಳಿಗೆ ಮನೆ ಮತ್ತು ವಸತಿ ನಿವೇಶನಗಳನ್ನು ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. 19 ಲಕ್ಷ ಮನೆ ಮತ್ತು ನಿವೇಶನಗಳನ್ನು ವಿತರಣೆ ಮಾಡತಕ್ಕಂಥ ಸಂದರ್ಭದಲ್ಲಿ ಸರ್ಕಾರ ಯಾವ ಒಂದು ಗುರಿಯನ್ನು ಇಟ್ಟುಕೊಂಡು ಮಾಡಿದ್ದಾರೆನ್ನುವ ವಿಚಾರ ಬರುತ್ತದೆ. ಬಹುಶಃ ಈ ವಸತಿ ಹಾಗೂ ನಿವೇಶನಗಳನ್ನು ಕೊಡುವುದಕ್ಕೆ ಅರ್ಹ ಫಲಾನುಭವಿಗಳನ್ನು ಆಯ್ಕೆಮಾಡತಕ್ಕಂಥ ಸಂದರ್ಭದಲ್ಲಿ ಗ್ರಾಮಪಂಚಾಯಿತಿ ಮುಖಾಂತರ ತಮ್ಮದೇ ಆದಂತಹ ವ್ಯವಸ್ಥೆ ಮುಖಾಂತರ ಆಯ್ಕೆ ಮಾಡಿ ಪಟ್ಟಿಯನ್ನು ತಯಾರು ಮಾಡಿದ್ದಾರೆ. ಬಹುಶಃ ಇದರಲ್ಲಿ ಬಹಳಷ್ಟು ಅರ್ಹ ಫಲಾನುಭವಿಗಳು ಬಿಟ್ಟುಹೋಗಿರತಕ್ಕಂಥ ಸಾಧ್ಯತೆಗಳು ಇವೆ. ಅಧನ್ನು ಸರಿಪಡಿಸಲಿಕ್ಕೆ ಏನು ವ್ಯವಸ್ಥೆ ಇದೆ ಎನ್ನುವಂತಹ ವಿಚಾರ ಬಂದಾಗ ತಾಲ್ಲೂಕಿನಲ್ಲಾಗಲಿ, ಜಿಲ್ಲೆಯಲ್ಲಾಗಲಿ ಅರ್ಹ ಫಲಾನುಭವಿಗಳು ತಪ್ಪಿಹೋದರೆ ಅದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಇಲ್ಲವನ್ನುವಂತಹ ಮಾತನ್ನು ನಾವು ಕೇಳಿದ್ದೇನೆ. ಆದರೆ ಈ ಒಂದು ಸಂದರ್ಭದಲ್ಲಿ ತಾವು 19 ಲಕ್ಷ ಅರ್ಹ ಫಲಾನುಭವಿಗಳು ಇದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದೀರಿ. ಕಳೆದ ವರ್ಷ ಎಂದರೆ 1993-94ರಲ್ಲಿ ಯಾರಿಗೆ ಮನೆ ಮಂಜೂರಾಗಿದೆ 1994-95ರಲ್ಲಿ ಯಾರಿಗೆ ಮನೆ ಮಂಜೂರಾಗಿದೆ ಅವರಿಗೆ ಕೊಟ್ಟಿರತಕ್ಕಂಥ ಅರ್ಧ ಮನೆಗಳಿಗೆ ಇನ್ನು ಹಣ ಪಾವತಿಯಾಗಿಲ್ಲ. ಆ ಹಣ ಏಕೆ ಪಾವತಿಯಾಗಿಲ್ಲವೆನ್ನುವ ವಿಚಾರವನ್ನು ತಾವು ಹೇಳಬೇಕಾಗಿದೆ. ತಾವು 19 ಲಕ್ಷ ಜನರಿಗೆ ವಸತಿ ಮತ್ತು ನಿವೇಶನವನ್ನು ಕೊಡುತ್ತೇವೆನ್ನುವ ಮಾತನ್ನು ಆಡುತ್ತೀರಿ.

ಆದರೆ ಕಳೆದ ಸರ್ಕಾರ ಕೊಟ್ಟಂಥ ಮನೆಗಳಿಗೆ ಸಂಪೂರ್ಣವಾಗಿ ಹಣವನ್ನು ಏಕೆ ಕೊಡಲಿಲ್ಲ ಎನ್ನುವಂತಹ ಪ್ರಶ್ನೆ ಬಂದಾಗ ಅದಕ್ಕೆ ತಾವು ಉತ್ತರಿಸಬೇಕಾಗುತ್ತದೆ. ಆದರೆ 1995-96ರಲ್ಲಿ ಮನೆ ಮಂಜೂರಾತಿ ಆದವರಿಗೆ ಹಣ ಕೊಡುತ್ತೀರಿ ಎಂದರೆ ಇದಕ್ಕೆ ಏನು ಕಾರಣ? ಯಾರು ಆರ್ಥಿಕವಾಗಿ ಹಿಂದುಳಿದಂತಹ ಜನರಿದ್ದಾರೆ ಅವರಿಗೆ ತಾವು ಏನು ರಾಜಕೀಯ ಪ್ರಭಾವ ಬೀರತಕ್ಕಂಥಾದ್ದು. ಹಿಂದಿನ ಸರ್ಕಾರ ಕೊಟ್ಟಂತಹ ಮನೆಗಳಿಗೆ ಸಂಬಂಧವಿಲ್ಲ ಆದರೆ ಈ ಸರ್ಕಾರ ಕೊಟ್ಟಿರತಕ್ಕಂಥ ಮನೆಗಳಿಗೆ ಮಾತ್ರ ನಮಗೆ ಸಂಬಂಧ ಎನ್ನುವಂತಹ ಭಾವನೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮೂಡಿಸತಕ್ಕಂಥ ಒಂದು ಪ್ರಯತ್ನ ಈ ಸರ್ಕಾರದಿಂದಾಗಿದೆ. ಬಹುಶಃ ನಾವೇನಾದರೂ ರಾಜಕೀಯ ಮಾಡುವುದಿದ್ದರೆ ಅದು ಬೇಗ ಅರ್ಥವಾಗುತ್ತದೆ. ಬಸ್ಸಿಗೆ ಟಿಕೇಟ್ ತೆಗೆದುಕೊಳ್ಳಲು ಕಷ್ಟವಾಗಿರತಕ್ಕಂಥ ಜನರಿರುವಾಗ, ಆ ಜನರು ಗ್ರಾಮಾಂತರ ಪ್ರದೇಶದಿಂದ ತಾಲ್ಲೂಕು ಕಛೇರಿಗೆ ಅಥವಾ ಬಿ.ಡಿ.ಓ. ಆಫೀಸಿಗೆ ಅಲೆಯತಕ್ಕಂಥ ಸಂದರ್ಭದಲ್ಲಿ ತಾವು ರಾಜಕೀಯವನ್ನು ಮಾಡುವುದು ಸೂಕ್ತವಲ್ಲ, ಸಮಂಜಸವಲ್ಲ ಹಾಗೂ ಅದು ನಮ್ಮ ನೀತಿಯೂ ಅಲ್ಲ, ಧೋರಣೆಯೂ ಅಲ್ಲ ಎನ್ನುವಂತಹ ಮಾತನ್ನು ಹೇಳುತ್ತೇನೆ. ಈ ಒಂದು ವ್ಯವಸ್ಥೆಗೆ ತಾವು ಸ್ಪಷ್ಟವಾಗಿ ಉತ್ತರ ಹೇಳಬೇಕಾಗಿದೆ. ಹಿಂದೆ ಇದ್ದಂತಹ ಸರ್ಕಾರ ಕೊಟ್ಟಂತಹ ಎಲ್ಲಾ ಆಶ್ರಯ ಮನೆಗಳಿರಲಿ, ಅಂಬೇಡ್ಕರ್ ಮನೆಗಳಿರಲಿ ಅಥವಾ ತಾವು ಕೊಟ್ಟಂತಹ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಿಗೆ ಸಕಾಲದಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನುವಂತಹ ಆಶ್ವಾಸನೆಯನ್ನು ತಾವು ಈ ರಾಜ್ಯದ ಜನತೆಗೆ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ತಾವು ಇದರಲ್ಲಿ ಉದ್ದೇಶಪೂರ್ವಕವಾಗಿ ರಾಜಕೀಯವನ್ನು ಮಾಡುತ್ತಿದ್ದೀರಿ ಎನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಈಗ ನಾನು ಮತ್ತೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಜಿಲ್ಲಾ

ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಯಲ್ಲಿ ಮಿತಿಗಿಂತ ಹೆಚ್ಚು ಕೊಟ್ಟಿದ್ದೇವೆ. ಎನ್ನುವಂತಹ ಮಾತು ಅಲ್ಲಲ್ಲಿ, ಕೇಳಿ ಬಂತು. ಮಿತಿಗಿಂತ ಹೆಚ್ಚಾಗಿ ಕೊಟ್ಟಿದ್ದರೆ. ಆದೇಶವನ್ನು ಕೊಟ್ಟಂತಹ ಅಧಿಕಾರಿ, ಅವರು ಬಿ.ಡಿ.ಓ. ಅಥವಾ ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಯಾರಿದ್ದಾರೆ ಅವರನ್ನು ಏಕೆ ಅಮಾನತ್ತಿನಲ್ಲಿಟ್ಟಿಲ್ಲ ಎನ್ನುವಂತಹ ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಒಂದು ವೇಳೆ ಶಾಸಕರು ಆ ಆದೇಶವನ್ನ ರದ್ದು ಮಾಡಿ. ಆದರೆ ನಮ್ಮ ವ್ಯವಸ್ಥೆ ಏನು? ಬಿ.ಡಿ.ಓ. ಅಥವಾ ಯಾರು ಕ್ಷೇತ್ರಾವಧಿ ಅಧಿಕಾರಿಗಳು ಆದೇಶವನ್ನು ಕೊಟ್ಟು ಅದೇ,. ಅಧಿಕಾರಿಗಳು ಇದಕ್ಕೂ ನನಗೂ ಸಂಬಂಧವಿಲ್ಲ. ಇದು ಮಿತಿಗಿಂತ ಜಾಸ್ತಿ ಎನ್ನುವಂತಹ ವಾದವನ್ನು ಏನು ಆರ್ಥಿಕವಾಗಿ ಹಿಂದುಳಿದಂತಹ ಜನರಿಗೆ ಮಾಡುವುದಾದರೆ ಇದಕ್ಕೆ ತಾವು ಏನು ಉತ್ತರಿಸುತ್ತೀರಿ? ಬಹುಶಃ ನಾವು ಮಾಡಿದಂತಹ ಪಾಪವನ್ನು ಯಾರದೋ ಬಾಯಿಗೆ ಒರೆಸುವಂತಹ ಪ್ರಯತ್ನವನ್ನು ಮಾಡಬಾರದು. ಅವರು ಸರ್ಕಾರದ ನೌಕರರಿಬಹುದು.

ತಮ್ಮ ಆಜ್ಞೆ ವಿರುದ್ಧ ನಿಲುವನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಇರಬಹುದು. ಆದರೆ ಒಂದು ಸಾರಿ ತಾವು ಕೊಟ್ಟಂತಹ ಆದೇಶವನ್ನು ಯಾವುದೇ ಸಂದರ್ಭದಲ್ಲಿ ರದ್ದು ಮಾಡುತಕ್ಕಂಥ ಅಧಿಕಾರ ಯಾರಿಗೂ ಇಲ್ಲ. ಒಂದು ವೇಳೆ ಸಕಾರಣಗಳನ್ನು ಕೊಟ್ಟು ರದ್ದು ಮಾಡಬೇಕೇಹೊರತು ತಮ್ಮ ರಾಜಕೀಯ ಸ್ಥಾನಪಲ್ಲಟದಿಂದ ಅಧಿಕಾರ ಹಸ್ತಾಂತರದಿಂದ ರದ್ದು ಮಾಡುತ್ತೇವೆ ಎನ್ನುವಂತಹ ಘೋಷಣೆಯನ್ನು ತಾವು ಮಾಡುವುದಾದರೆ ಅದರ ಜವಾಬ್ದಾರಿಯನ್ನು ಅದರ ಪಾಪವನ್ನು ನಾವೇ ಹೋರಬೇಕಾಗುತ್ತದೆ. ಅದಕ್ಕೆ ನಾವ್ಯಾರು ಭಾದ್ಯರಲ್ಲ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಹಿಂದೆ ಭಾವನೆಗಳು ವ್ಯಕ್ತವಾಗುತ್ತವೆ. ತಾವು ಏನು ಹೇಳಿದ್ದೀರಿ. ಹಿಂದೆ ಕೊಟ್ಟಂತಹ ಮನೆಗಳನ್ನು ಪೂರ್ಣ ಮಾಡುವುದಕ್ಕೆ ಆಗದೇ ಇರುವಂತಹ ಸಂದರ್ಭದಲ್ಲಿ ತಾವು ಕೊಡುವಂತಹ 19 ಲಕ್ಷ ಮನೆಗಳು ಅಥವಾ ನಿವೇಶನಗಳ ಬಗ್ಗೆ ನಾವು ಚಿಂತಿಸಬೇಕಾಗುತ್ತದೆ.

ಇದರ ಜೊತೆಗೆ ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ತಾವು ಎಷ್ಟು ಜನರಿಗೆ ನಿವೇಶನಗಳನ್ನು ಕೊಟ್ಟಿದ್ದೀರಿ? ಎಲ್ಲಿಂದ ಕೊಟ್ಟಿದ್ದೀರಿ? ಯಾವ್ಯಾವ ಗ್ರಾಮಗಳಲ್ಲಿ ಕೊಟ್ಟಿದ್ದೀರಿ? ಎನ್ನುವಂತಹ ಅಂಕಿ ಸಂಖ್ಯೆಗಳನ್ನು ತರಿಸಿ. ಮಾನ್ಯ ಹಿರಿಯ ಸದಸ್ಯರಾದ ನಾಗೇಗೌಡರು ಮಾತನಾಡುವಂತಹ ಸಂದರ್ಭದಲ್ಲಿ ತಮ್ಮ ತಾಲ್ಲೂಕಿನಲ್ಲಿ ಕೊಟ್ಟಿದ್ದೇವೆ ಎಂದ ಹೇಳಿದರು. ಆದರೆ ನಾನು ಹೇಳತಕ್ಕಂಥ ವಿಚಾರವೇನೆಂದರೆ ತಾವು ಪ್ರತಿ ಗ್ರಾಮಗಳಲ್ಲಿ ಯಾವ್ಯಾವ ಪಂಚಾಯಿತಿಗಳಲ್ಲಿ, ಎಷ್ಟೆಷ್ಟು ಜನರಿಗೆ ನಿವೇಶನಗಳನ್ನು ಕೊಟ್ಟಿದೆ ಎನ್ನುವ ವಿಚಾರ ಬಂದಾಗ ಬಹುತೇಕ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಯಾರಿಗೂ ಒಂದು ವರ್ಷದಿಂದ ನಿವೇಶನವನ್ನು ಕೊಡುವುದಕ್ಕಾಗಲಿಲ್ಲ ಹಿಂದಿನ ಆಶ್ರಯ ಸಮಿತಿಯವರು ಮಂಜೂರು ಮಾಡಿದಂತಹ ಮನೆ ಹಾಗೂ ನಿವೇಶನಗಳನ್ನು ಈ ವರ್ಷದ ಅಂಕಿ ಸಂಖ್ಯೆಗಳಲ್ಲಿ ಸೇರಿಸಿದ್ದೀರೇ ಹೊರತು ನೀವೇನು ಈ ವರ್ಷ ಹೆಚ್ಚಿನ ನಿವೇಶನಗಳನ್ನು ಕೊಟ್ಟಿಲ್ಲ. ಮತ್ತು ಈ ನಿವೇಶನಗಳನ್ನು ಅರ್ಹ ಫಲಾನುಭವಿಗಳನ್ನು ಆಯ್ಕೆಮಾಡತಕ್ಕಂಥ ಸಂದರ್ಭದಲ್ಲಿ ಬಹಳಷ್ಟು ಲೋಪದೋಷಗಳು ಇವೆ. ಅವನ್ನು ಸರಿಪಡಿಸತಕ್ಕಂಥ ವ್ಯವಸ್ಥೆ ತಹಶೀಲ್ದಾರ್‌ರಿಂದ ಅಥವಾ ಅಸಿಸ್ಟೆಂಟ್ ಕಮಿಷನರ್‌ರಿಂದ ಅಥವಾ ಜಿಲ್ಲಾಧಿಕಾರಿಗಳಿಂದಾಗಲಿ. ಇವನ್ನು ಪುರುಪರಿಶೀಲನೆಗೆ ಗುರಿ ಮಾಡತಕ್ಕಂಥ ಒಂದು ಪ್ರಯತ್ನವನ್ನು ಮಾಡಬೇಕಾಗುತ್ತದೆ.

ಇಲ್ಲದೆ ಇದ್ದರೆ, ತಾವು ಮಾಡಿದಂತಹ ತಪ್ಪಿಗೆ ಬೇರೆಯವರು ಗುರಿಯಾಗಬೇಕಾಗುತ್ತದೆ. ಯಾರು ಆರ್ಥಿಕವಾಗಿ ಹಿಂದುಳಿದಂತಹ ಜನರಿದ್ದಾರೆ, ಯಾರು ಹೊಟ್ಟೆಗಾಗಿ ಕಷ್ಟ

ಪಡತಕ್ಕಂಥ ಜನರಿದ್ದಾರೆ ಅವರು ತಪ್ಪಿಗೆ ಗುರಿಯಾಗಬೇಕಾಗುತ್ತದೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತು ಈ ವರ್ಷ ತಾವು ಕೆಲವು ಗ್ರಾಮಗಳಲ್ಲಿ ಒಂದು ಮನೆಯನ್ನೂ ಕೊಟ್ಟಿಲ್ಲ, ತಾವು ಆಯಾ ಲೆಕ್ಕವನ್ನು ತರಿಸಿ. ಬೇಕಾದರೆ ಈ ರಾಜ್ಯದ ಆಶ್ರಯ ಮನೆಗಳನ್ನು ಅಂಬೇಡ್ಕರ್ ಮನೆಗಳನ್ನ ಮಂಜೂರು ಮಾಡತಕ್ಕಂಥ ಸಂದರ್ಭದಲ್ಲಿ ಕೆಲವು ಗ್ರಾಮಗಳಿಗೆ ಒಂದು ಮನೆ ಮುಟ್ಟಿಲ್ಲ, ಏಕೆ ಮುಟ್ಟಿಲ್ಲ? ಬಹುಶಃ ನೀವು ಆ ಗುರಿಯನ್ನು ಯಾವ ರೀತಿ ನಿಗಧಿ ಮಾಡಿದ್ದೀರಿ ಎಂದು ಹೇಳಿದರೆ ಕಳೆದವರ್ಷ ಅರ್ಧ ಆಗಿರತಕ್ಕ ಮನೆಗಳನ್ನು ಈ ವರ್ಷದ ಗುರಿಗೆ ಸರಿಸಮಾನವಾಗಿ ಮಾಡಿರುವುದರಿಂದ ಕೆಲವು ಗ್ರಾಮಗಳಿಗೆ ಇವತ್ತು ಒಂದು ಮನೆಯನ್ನು ಕೊಡಲಿಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ನೀವು ಅಧಿಕಾರಕ್ಕೆ ಬಂದಮೇಲೆ ಏನು ಸಾಧನೆ ಮಾಡಿದ್ದೀರಿ ಎಂದು ಹೇಳಿದರೆ ತಮ್ಮ ಗ್ರಾಮಕ್ಕೆ ತಮ್ಮ ಪಂಚಾಯಿತಿಗೆ ತಮ್ಮ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಒಂದು ಮನೆಯನ್ನು ಕೊಡಲಿಕ್ಕೆ ಆಗದೇ ಇರತಕ್ಕಂಥ ಕಷ್ಟ ಪರಿಸ್ಥಿತಿಯಲ್ಲಿ ತಾಲ್ಲೂಕು ಪಂಚಾಯಿತಿ ಸಮಿತಿಯ ಸದಸ್ಯರಿದ್ದಾರೆ. ಪಂಚಾಯಿತಿಯವರಿದ್ದಾರೆ. ಬೇಕಾದರೆ ಇದರ ಬಗ್ಗೆ ತಮಗೇನಾದರೂ ಅನುಮಾನ ಬಂದಲ್ಲಿ ಇದರ ಅಂಕಿಸಂಖ್ಯೆಯನ್ನು ತಾವು ತರಿಸಬಹುದು, ಇದರ ಬಗ್ಗೆ ದಾಖಲಾತಿಗಳು ನಮ್ಮ ಹತ್ತಿರ ಇವೆ.

ಇನ್ನೊಂದು ವಿಚಾರ ರಾಜ್ಯ ಪಾಲರು ಮಾತನಾಡತಕ್ಕಂಥ ಸಂದರ್ಭದಲ್ಲಿ ಭಾಷಣದಲ್ಲಿ ಒಂದು ಕಡೆ "ಪ್ರವಾಸಿಗಳಿಗೆ ನಂದನವನವನ್ನು ನಿರ್ಮಾಣ ಮಾಡುತ್ತೇವೆ" ಎಂದು ಹೇಳಿದ್ದಾರೆ ಬಹುಶಃ ಒಳ್ಳೊಳ್ಳೆಯ ಭಾಷೆಗಳನ್ನು ಉಪಯೋಗ ಮಾಡಿ ತಾವು ಸಾಧನೆಯನ್ನು ತೋರಿಸಲಿಕ್ಕೆ ಪ್ರಯತ್ನ ಮಾಡಿದ್ದೀರಿ. ಈಗಲೂ ಈ ರಾಜ್ಯದಲ್ಲಿ ತಮ್ಮ ಈ ಒಂದು ವರ್ಷದಲ್ಲಿ ಅಥವಾ ಯಾವುದೇ ಸಂದರ್ಭದಲ್ಲಿ ಈ ಪ್ರವಾಸಿತಾಣಗಳನ್ನು ನಂದನವನನ್ನಾಗಿ ಮಾಡಲಿಕ್ಕೆ ತಾವೇನು ಪ್ರಯತ್ನ ಮಾಡಿದ್ದೀರಿ? ತಾವು ಪ್ರವಾಸಿಧಾಮದ ಹೆಸರಿನಲ್ಲಿ ಏನು ಸಿಎಲ್.9 ಬಾರ್ ಅಥವಾ ಸಿಎಲ್.2 ಷರಾಬು ಅಂಗಡಿಗಳನ್ನು ಹೆಚ್ಚಿಸತಕ್ಕಂಥ ಒಂದು ಹಿಂಬಾಗಿಲಿನ ಪ್ರಯತ್ನವನ್ನು ತಾವು ಮಾಡುತ್ತೀರೆಂದು ಹೊರತು ಈ ಪ್ರವಾಸಿಧಾಮಗಳನ್ನು ನಂದನವನವನ್ನಾಗಿ ಮಾಡತಕ್ಕಂಥ ಯಾವ ಒಂದು ಕಾಳಜಿಯೂ ಇದರಲ್ಲಿ ನನಗೆ ಕಾಣುತ್ತಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ವಿಷಯವನ್ನೂ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಪಾನನಿಷೇಧದ ಬಗ್ಗೆ ಮಾತನಾಡುತ್ತಿದ್ದರು ಇದರಲ್ಲಿ ಪಾನನಿರೋಧವನ್ನು ಪುನಃ ಜಾರಿಗೊಳಿಸಲು ನನ್ನ ಸರ್ಕಾರ ಗಂಭೀರವಾಗಿ ಆಲೋಚಿಸುತ್ತಿದೆ ಎನ್ನತಕ್ಕಂಥ ಮಾತನ್ನು ಒಂದು ಕಡೆಯಲ್ಲಿ ಹೇಳಿದರು ನಾನು ವಿಧಾನಸಭೆಯಲ್ಲಿ ಈ ಪ್ರಶ್ನೆಯನ್ನು ಕೇಳದೆ ಗ್ರಾಮಪಂಚಾಯಿತಿಗಳು ಮಧ್ಯ ಮುಕ್ತ ಗ್ರಾಮ ಮಾಡಬೇಕೆಂದು ನಿರ್ಣಯ ಮಾಡಿದ್ದರೂ ಸಹ ಅಬಕಾರಿ ಇಲಾಖೆ ಮತ್ತು ಶರಾಬು ಅಂಗಡಿಗಳು ಸಿಎಲ್. 9 ಮತ್ತು ಸಿಎಲ್. 2ಗಳನ್ನು ಪರವಾನಿಗೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದೆ. ಅದಕ್ಕೆ ತಾವು ಉತ್ತರವನ್ನು ಕೊಡುತ್ತೀರಿ, ಹೌದು. ಮಧ್ಯ ಮುಕ್ತ ಗ್ರಾಮ ಮಾಡಬೇಕೆಂಬ ಗ್ರಾಮಪಂಚಾಯಿತಿಯ ನಿರ್ಣಯವು ಕರ್ನಾಟಕ ಅಬಕಾರಿ ಅಧಿಸೂಚನೆ 1965ರ ಅಡಿಯಲ್ಲಿ ರಚಿತವಾದ ನಿಯಮಗಳ ಪ್ರಕಾರ ಶರಾಬು ಅಂಗಡಿ ಮತ್ತು ಸಿಎಲ್.9 ಪರವಾನಿಗೆ ಕೊಡಲು ಅಡ್ಡಿಬರುವುದಿಲ್ಲ ಎನ್ನತಕ್ಕಂಥದ್ದನ್ನು ತಾವು ಇದೇ ವರ್ಷ ಈ ವಿಧಾನಸಭೆಯ ಅಧಿವೇಶನದಲ್ಲಿ ಉತ್ತರವನ್ನು ಕೊಟ್ಟಿರಿ. ನೀವು ಒಂದು

ಕಡೆ ಈ ಬಗ್ಗೆ ಗಂಭೀರವಾದ ಆಲೋಚನೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾನತ್ನು ಹೇಳುತ್ತೀರಿ ಒಂದು ಕಡೆ ಗ್ರಾಮ ಪಂಚಾಯಿತಿಯವರು ಮದ್ಯಮುಕ್ತ ಗ್ರಾಮ ಮಾಡಿ ಎನ್ನತಕ್ಕಂಥ ಹೇಳಿಕೆಯನ್ನು ಕೇಳಿದರ ಅದು ನಮಗೆ ಅನ್ವಯವಾಗುವುದಿಲ್ಲ ಎಂಬ ಸ್ಪಷ್ಟವಾದ ಉತ್ತರವನ್ನು ಕೊಡುತ್ತೀರಿ. ಇದರ ಹಿಂದೆ ಇರತಕ್ಕಂಥ ಅಂತರವನ್ನು ನಾವು ಗಮನಿಸಿದರೆ ಬಹುಶಃ ತಮಗೆ ಪ್ರಾಮಾಣಿಕವಾದ ಕಾಳಜಿಯೇನಿಲ್ಲ. ಏನೋ ಎಂ.ಪಿ.ಎಲೆಕ್ಷನ್‌ಗೆ ಅಥವಾ ಲೋಕಸಭಾ ಚುನಾವಣೆಗೆ ಪೂರಕವಾಗಿ ಈ ಒಂದು ಹೇಳಿಕೆಯನ್ನು ತಾವು ಕೊಟ್ಟಿದ್ದೀರಿ ಎಂಬತಕ್ಕಂಥ ರಾಜ್ಯವನ್ನಾಗಿ ಮಾಡಿದರೆ ಖಂಡಿತವಾಗಿ ನಾವು ಸ್ವಾಗತಿಸುತ್ತೇವೆ. ಆದರೆ ಇದರಲ್ಲಿ ತಮ್ಮ ಪ್ರಾಮಾಣಿಕವಾದ ಅನಿಸಿಕೆಯನ್ನು ನಾವು ಕಾಣುತ್ತಿಲ್ಲ ಎಂಬ ಮಾತನ್ನು ಹೇಳುತ್ತಾ ಬಹುಶಃ ಅಬಕಾರಿ ಇಲಾಖೆ ಎನ್ನತಕ್ಕಂಥದ್ದು ಹತೋಟಿಯಲ್ಲಿರುವಂತಾಗಿಲ್ಲ. ಬಹುಶಃ ಮಾನ್ಯ ಸಚಿವರಿಗೂ ಯಾರಿಗೂ ಈ ಇಲಾಖೆಯ ಮೇಲೆ ಹತೋಟಿ ಇಲ್ಲ. ಈ ಇಲಾಖೆ ಬೇಕಾಬಿಟ್ಟಿ ಎಲ್ಲೆಂದರಲ್ಲಿ ಇವತ್ತು ಮನೆ ಮನೆಗಳಲ್ಲಿ ಶರಾಬನ್ನು ಮಾಡತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ದೂರು ಕೊಟ್ಟರೂ ಕೇಳಲಿಕ್ಕೆ ಯಾವ ಸಚಿವರು ತಯಾರಿಲ್ಲ ಇಲ್ಲಿ, ಆದ್ದರಿಂದ ದೂರನ್ನು ಯಾರ ಹತ್ತಿರ ಕೊಡಬೇಕು? ದಿವಸ ಮಾಮೂಲಿನ ಆಧಾರದಲ್ಲಿ ಎಲ್ಲಿ ಬೇಕೆಂದರೆ ಅಲ್ಲಿ ಅನಧಿಕೃತ ಶರಾಬು ಅಂಗಡಿಗಳಲ್ಲಿ ಮಾರಾಟ ಮಾಡತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ಶಾಲೆಗಳ ಹತ್ತಿರ ಶರಾಬು ಅಂಗಡಿಗಳು ಇರುತ್ತವೆ. ಆಸ್ಪತ್ರೆಗಳ ಎದುರುಗಡೆ ಇರುತ್ತವೆ, ಹರಿಜನ ವಾರ್ಡ್‌ಗಳಲ್ಲಿ ಇರುತ್ತವೆ ಹೀಗೆ ಬೇಕಾಬಿಟ್ಟಿ ಶರಾಬು ಅಂಗಡಿಗಳನ್ನು ಅನಧಿಕೃತವಾಗಿ ತೆಗೆಯುತ್ತಿದ್ದಾರೆ ನಡೆಸುತ್ತಿದ್ದಾರೆ ಇದನ್ನು ಕೇಳತಕ್ಕವರು ಯಾರೂ ಇಲ್ಲ.

ಬಹುಶಃ ಕೆಲವು ಕಡೆಗಳಲ್ಲಿ ಜನಾಂದೋಲನ ನಡೆಯುತ್ತಾ ಇದೆ. ಆದರೆ ಆದಕ್ಕೂ ಸಹ ಯಾವುದೇ ಬೆಲೆ ಕೊಟ್ಟಿಲ್ಲ. ಈ ವ್ಯವಸ್ಥೆಯಡಿಯಲ್ಲಿ ನಾವಿದ್ದೇವೆ. ಇವತ್ತು ಗಂಭೀರವಾಗಿ ಆ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದೇವೆ. ಬಹುಶಃ ಅನಧಿಕೃತ ಅಂಗಡಿಯನ್ನು ನಿಲ್ಲಿಸಲಿಕ್ಕೆ ಆಗದೇ ಇರತಕ್ಕಂಥ ವ್ಯವಸ್ಥೆ ನಮ್ಮದು. ಇವತ್ತು ನಾವು ಗಂಬೀರವಾಗಿ ಚಿಂತನೆ ಮಾಡತಕ್ಕಂಥ, ಯಾವ ನೈತಿಕತೆ ನಮ್ಮಲ್ಲಿ ಇಲ್ಲ ಎಂಬುದನ್ನು ಮಾನ್ಯ ಅಧ್ಯಕ್ಷರೆ ತಾವು ಗಮನಿಸಬೇಕಾಗುತ್ತದೆ. ಮತ್ತೊಂದು ಏನೆಂದರೆ, ಇವತ್ತು ಅಬಕಾರಿ ಇಲಾಖೆಯವರು ಕೆಲವು ಕಡೆಗಳಲ್ಲಿ ತನ್ನದೇ ಆದ ಅಬಕಾರಿ ಇಲಾಖೆಯ ಶರಾಬುಗಳನ್ನು ಅನಧಿಕೃತವಾಗಿ ತಂದು ಅದನ್ನು ಪ್ಯಾಕೆಟ್ ಮಾಡಿ ಮಾರತಕ್ಕಂಥದ್ದ ನಾವು ಕಂಡಿದ್ದೇವೆ. ಹೀಗೆ ಮಾರಾಟ ಮಾಡಿರತಕ್ಕಂಥದ್ದನ್ನು ಅಲ್ಲಿ ಅಪ್ಪಿತಪ್ಪಿ ಯಾರಾದರು ಹಿಡಿದರೆ ಅವರಿಗೆ ಐದು ಸಾವಿರ ರೂಪಾಯಿ ದಂಡವನ್ನು ಹಾಕಿ ಬಿಟ್ಟಿರತಕ್ಕಂಥ ದಾಖಲಾತಿಗಳು ಇವೆ. ಅದರ ಅರ್ಥ ತಮಗೆ ಯಾವ ಭಾವನೆಗಳು ಹಿಂದಿದೆ. ಅಬಕಾರಿ ಇಲಾಖೆಯಲ್ಲಿ ತಮ್ಮ ಹಿಡಿತ ಎಷ್ಟಿದೆ ಎಂಬತಕ್ಕಂಥದ್ದು ಈ ಎಲ್ಲಾ ಅಧಾರಗಳಿಂದ ಸ್ಪಷ್ಟವಾಗುತ್ತದೆ. ಇದರ ಅರ್ಥ ಅಬಕಾರಿ ಇಲಾಖೆ ಅದಕ್ಕೆ ಸಮಾನಾಂತರವಾಗಿ ಮತ್ತೊಂದು ಈ ಕಳ್ಳ ತನದಲ್ಲಿ ಮಾರಾಟ ಮಾಡತಕ್ಕಂಥವರು ಅಬಕಾರಿ ಇಲಾಖೆ ಮೇಲೆ ಹತೋಟಿಯನ್ನು ಇಡತಕ್ಕಂಥ ಸನ್ನಿವೇಶವನ್ನು ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಈ ಅಬಕಾರಿ ಇಲಾಖೆ ಬಗ್ಗೆ ಯಾರೂ ಹೆಚ್ಚು ಮಾತನಾಡತಕ್ಕಂಥ ಅವಶ್ಯಕತೆ ಇಲ್ಲ. ಇದು ನಮ್ಮೆಲ್ಲರ ಬಹುಶಃ ಈ ರಾಜ್ಯದ ಮುಖ್ಯಮಂತ್ರಿಗಳು ಮೀರಿ ಈ ಒಂದು ಇಲಾಖೆ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮಾನ್ಯ ಅಧ್ಯಕ್ಷರೆ, ಮತ್ತೊಂದು ಏನೆಂದು ಹೇಳಿದರೆ, ಕಾರ್ಡಿನಲ್ಲಿ 10 ಕೆ.ಜಿ. ಅಕ್ಕಿಯನ್ನೇನು ಕೊಡುತ್ತಿದ್ದೀರಿ, ಹಸಿರು ಕಾರ್ಡಿನ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಒಂದು ಕಡೆಯಲ್ಲಿ ಹೇಳಿದ್ದೀರಿ ಬಹುಶಃ ಬಡವರಿಗಾಗಿ ತಾವು

ಕಾರ್ಡು ಮಾಡುತ್ತಿದ್ದೀರಾ? ಕಾರ್ಡಿನಲ್ಲಿದಷ್ಟು ಬಡವರನ್ನು ಉತ್ಪತ್ತಿ ಮಾಡುತ್ತಿದ್ದೀರಾ? ಅಥವಾ ಕಾರ್ಡಿದ್ದಷ್ಟು ಬಡವರನ್ನು ಗುರುತಿಸುತ್ತಿದ್ದೀರಾ ಎನ್ನತಕ್ಕಂಥ ಪ್ರಶ್ನೆ. ಕಳೆದ ವರ್ಷ ಜನರಿಗೆ ಕಾರ್ಡು ಕೊಟ್ಟಿದ್ದೀರಿ ಆ ಕಾರ್ಡನ್ನು ಕಡಿತಗೊಳಿಸಿ ಇವತ್ತು ಪಟ್ಟಣದ 10 ಲಕ್ಷ 5 ಲಕ್ಷ ಬಡ ಕುಟುಂಬದವರಿಗೆ ವಿಸ್ತರಿಸಲಾಗಿದೆ ಎಂಬ ಮಾತನ್ನು ಕೇಳಿದ್ದೇವೆ. ಬಹುಶಃ ಇವತ್ತಿಗೂ ಸಹ ಹಸಿರು ಕಾರ್ಡನ್ನು ಗುರುತಿಸುವಂಥ ಕೆಲಸ ಆಗಿಲ್ಲ, ಎಷ್ಟೋ ಜನ ಕಾರ್ಡುದಾರರು ತಮ್ಮ ಹಸಿರು ಕಾರ್ಡುಗಳನ್ನು ಕಳೆದುಕೊಂಡು ಅವರು ಅಕ್ಕಿಯನ್ನು ಪಡೆಯಲಿಕ್ಕೆ ಆಗದೇ ಇರುವಂಥ ಪರಿಸ್ಥಿತಿ ಇದೆ. ಇದಕ್ಕೆ ಉತ್ತರವನ್ನು ಕೇಳಲಿಕ್ಕೆ ಹೋದರೆ ಸಮರ್ಪಕವಾದ ಉತ್ತರ ಯಾವ ವ್ಯವಸ್ಥೆಯಲ್ಲೂ ಸಹ ಸಿಗುತ್ತಾ ಇಲ್ಲ. ಸಂಬಂಧಪಟ್ಟ ತಹಸೀಲ್ದಾರರು ಉತ್ತರ ಕೊಡುತ್ತಾ ಇಲ್ಲ.

ಸಂಬಂಧಪಟ್ಟಂಥ ಜಿಲ್ಲಾಧಿಕಾರಿಗಳೂ ಸಹ ಸರಿಯಾಗಿ ಉತ್ತರವನ್ನು ಕೊಡುತ್ತಾ ಇಲ್ಲ. ಅದನ್ನು ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಪರಿಶೀಲನೆ ಎನ್ನತಕ್ಕಂಥದ್ದಕ್ಕೆ ಬಹುಶಃ ಸನ್ಮಾನ್ಯ ಅಧ್ಯಕ್ಷರ ಅದು ಅನಂತ. ಪರಿಶೀಲನೆಯನ್ನು ಎಷ್ಟು ವರ್ಷದಿಂದ ಮಾಡಬಹುದು ಇದಕ್ಕೆ ಇತಿಮಿತಿ ಇಲ್ಲ. ಈಗ ನಮಗೆ ಬರತಕ್ಕಂಥ ಉತ್ತರ ಹಸಿರು ಕಾರ್ಡುಗಳ ಅರ್ಹ ಫಲಾನುಭಾವಗಳಲ್ಲಿ ಯಾರಾದರೂ ಬಿಟ್ಟು ಹೋಗಿದ್ದರೆ ಅವರಿಗೆ ಪರಿಶೀಲನೆ ಮಾಡಿ ಮತ್ತೆ ಒದಗಿಸುತ್ತೇವೆ ಎನ್ನತಕ್ಕಂಥ ಉತ್ತರ ಬರುತ್ತಾ ಇದೆ. ಅದು ಎಷ್ಟು , ಎಷ್ಟು ತಿಂಗಳು ಎಂಬ ಇತಿಮಿತಿಯನ್ನು ಕೊಟ್ಟಿಲ್ಲ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಮತ್ತೊಂದು ಕಡೆಯಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳುತ್ತಾ, ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸಾರ್ವತ್ರಿಕ ಪ್ರವೇಶಾವಕಾಶವನ್ನು ಮತ್ತು ಮಕ್ಕಳು ಮಧ್ಯದಲ್ಲಿ ಶಾಲೆಯನ್ನು ಬಿಟ್ಟು ಹೋಗದಂತೆ ನೋಡಿಕೊಳ್ಳಲಿಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸಿದ್ದೀರಿ. ಈ ಕಾರ್ಯಕ್ರಮದಲ್ಲಿ ವಿಶೇಷವಾದ ಕಾರ್ಯಕ್ರಮವನ್ನೇನು ರೂಪಿಸಿದ್ದೀರಿ ಎಂದು ಹೇಳಿದರೆ ಹೆಚ್ಚಿಗೆ ಅಂದರೆ ಅವಶ್ಯಕತೆ ಇದ್ದಷ್ಟು 9,350 ಅಧ್ಯಾಪಕರ ನೇಮಕಾತಿಯನ್ನು ಕೇಂದ್ರ ಸರ್ಕಾರದ ಸಹಕಾರದಿಂದ ಮಾಡಿದ್ದೀರಿ. ಬಹುಶಃ ಇವತ್ತು ಮಕ್ಕಳ ಶಿಕ್ಷಣಕ್ಕೆ ಬೇಕಾದಂಥ ಮೂಲಭೂತವಾದ ಸೌಲಭ್ಯಗಳನ್ನು ಒದಗಿಸುವುದಕ್ಕೆ ಇಷ್ಟು ವರ್ಷವಾದರೂ ನಾವು ವಿಫಲರಾಗಿದ್ದೇವೆ. ಅವರಿಗೆ ಬೇಕಾದಂಥ ಕೊಠಡಿಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. 50 ಸಾವಿರ ರೂಪಾಯಿಗಳನ್ನು ಕೊಠಡಿಯನ್ನು ಕಟ್ಟುವುದಕ್ಕಾಗಿ ಕೊಡುತ್ತಿದ್ದೇವೆ. ಆ ಐವತ್ತು ಸಾವಿರ ರೂಪಾಯಿಗಳಲ್ಲಿ ಶಾಲಾ ಕೊಠಡಿಯನ್ನು ಕಟ್ಟುವುದಕ್ಕಾಗುತ್ತದೆಯೋ ಎಂಬುದನ್ನು ನಾವು ಚಿಂತನೆ ಮಾಡಬೇಕಾಗಿದೆ. ಇವತ್ತು ಮಕ್ಕಳಿಗೆ ಕುಡಿಯಲಿಕ್ಕೆ ನೀರು ಕೊಡುತ್ತಾ ಇಲ್ಲ. ನಿಮ್ಮ ಶಿಕ್ಷಣ ಇಲಾಖೆಯವರು ತಮ್ಮಲ್ಲಿ ಯಾವುದೇ ಆದ ಮೂಲದಿಂದ ಮಕ್ಕಳಿಗೆ ಕುಡಿಯಲಿಕ್ಕೆ ನೀರನ್ನು ಕೊಡತಕ್ಕಂಥ ಯೋಜನೆ ಇದೆಯೋ ಎಂಬ ಪ್ರಶ್ನೆ ಬಂದಾಗ ಉತ್ತರವನ್ನು ಕೊಡಬೇಕಾಗುತ್ತದೆ. ಬಹುಶಃ ನಾವು ಇವತ್ತು ಅಲ್ಲಿ ಪರಿಶಿಷ್ಟಜಾತಿ : ಪರಶಿಷ್ಟ ವರ್ಗದವರ ಮನೆ ಜಾಸ್ತಿ ಇದೆ ಅಲ್ಲೊಂದು ಬಾವಿ ತೋಡಿ ಇಲ್ಲೊಂದು ಬಾವಿ ತೋಡಿ ಎನ್ನತಕ್ಕಂಥ ಮಾತನ್ನು ಹೇಳಿ ಶಾಲೆಯ ಹತ್ತಿರ ಬಾವಿಯನ್ನು ತೋಡುತ್ತಿದ್ದೇವೆಯೆ ಹೊರತು ನಿಮ್ಮ ಈ ಶಿಕ್ಷಣ ಇಲಾಖೆಯಿಂದ ಅಥವಾ ತಮ್ಮ ಯಾವುದೇ ಒಂದು ಮೂಲದಿಂದ ಶಾಲೆಯಲ್ಲಿ ಕುಡಿಯುವ ನೀರನ್ನು ಕೊಡಲಿಕ್ಕೆ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇವತ್ತು ಅವರ ಬಗ್ಗೆ ನಾವು ಮಾತನಾಡತಕ್ಕ ಸಂದರ್ಭದಲ್ಲಿ ಏನು ಹೈಸ್ಕೂಲಿನಲ್ಲಿ ಫೈಲಾದಂಥ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಸೇರಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಬಹುಶಃ ಎಲ್ಲಾ ಜಿಲ್ಲೆಯಲ್ಲಿ ಎಂದು ನಾನು ಹೇಳುತ್ತಿಲ್ಲ ಬಹುಶಃ ಸರ್ಕಾರಿ ಪ್ರೌಢಶಾಲೆಗಳು ಏನಿವೆ ಅವುಗಳಲ್ಲಿ ಫೈಲಾದ ಮಕ್ಕಳನ್ನು ಶಾಲೆಗೆ

ಸೇರಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಏಕೆಂದು ಹೇಳಿದರೆ ಅಲ್ಲಿ ಕೊಠಡಿಗಳ ಕೊರತೆ ಇರುತ್ತದೆ. ಪೀಠೋಪಕರಣಗಳ ಕೊರತೆ ಇರುತ್ತದೆ. ಆದ್ದರಿಂದ ಆ ಮಕ್ಕಳಿಗೆ ಹೇಳುತ್ತಾರೆ ನೀವು ಎಸ್.ಎಸ್.ಎಲ್.ಸಿ.ಗೆ ಪರೀಕ್ಷೆಯನ್ನು ಕಟ್ಟಿ ಅಮೇಲೆ ನೋಡೋಣ ಎನ್ನತಕ್ಕಂಥ ಮಾತನ್ನು ಹೇಳುತ್ತೀರಿ. ಇಲ್ಲಿ ಭಾಷಣದಲ್ಲಿ ಒಂದು ಕಡೆ ಹೇಳುತ್ತೀರಿ ಈ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗಬಾರದು ಆದ್ದರಿಂದ ಈ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ ಆದರೆ ನಿಮ್ಮ ವಿಚಾರಧಾರೆಗಳೆಲ್ಲ ದ್ವಂದ್ವವಾಗಿವೆ. ಒಂದುಕಡೆ ಮಕ್ಕಳಿಗೆ ಶಾಲೆಯಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ, ಪೀಠೋಪಕರಣಗಳಿಲ್ಲ, ಅವರಿಗೆ ವಿದ್ಯಾಬ್ಯಾಸ ಕಲಿಸಲಿಕ್ಕೆ ಅಧ್ಯಾಪಕರುಗಳಿಲ್ಲ ಹೈಸ್ಕೂಲಿನಲ್ಲಿ ಓದಿದಂಥ ಮಕ್ಕಳೂ ಸಹ ಮನೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಶಾಲೆಯಲ್ಲಿ ಹೋಗಿ ಪಾಸಾಗದಂಥ ವಿದ್ಯಾರ್ಥಿಗಳು ಮನೆಯಲ್ಲಿ ಕುಳಿತುಕೊಂಡು ಪಾಸಾಗಿ ಎನ್ನತಕ್ಕಂಥ ವಾದವನ್ನು, ನೀವು ಮಾಡುವುದಾದರೆ ಬಹುಶಃ ಇದು ಎಷ್ಟು ಅರ್ಥ ಬರುತ್ತದೆ ಎನ್ನತಕ್ಕಂಥ ವಿಚಾರ.

ನಮ್ಮ ಜಿಲ್ಲೆಯಲ್ಲಿಯೂ ಸಹಿತ ಈ ಸಮಸ್ಯೆಗಳು ಇದೆ. ಬಹುಶಃ ಈ ಸಮಸ್ಯೆಗೆ ಯಾವ ಶಾಸಕರು, ಯಾವ ಅಧಿಕಾರಿಗಳು ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ. ಇವತ್ತು ನಾವು ಸಾಕ್ಷರತಾ ಅಂಧೋಳನದ ಬಗ್ಗೆ ಮಾತನಾಡುತ್ತಿದ್ದೇವೆ, ಮತ್ತು ನಿರಂತರ ಕಲಿಕೆಯ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ತಮ್ಮ ಮಕ್ಕಳಿಗೆ ಕಲಿಯುವುದಕ್ಕೆ ಅಧ್ಯಾಪಕರನ್ನು ನೇಮಕ ಮಾಡುವುದಕ್ಕೆ ಆಗುತ್ತಾ ಇಲ್ಲ. ಗೌರವ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಸರ್ಕಾರದ ಆದೇಶಗಳು ತೊಂದರೆ ಕೊಡುತ್ತಿದೆ. ಈ ಪರಿಸ್ಥಿತಿಯಲ್ಲಿ ನಾವು ಈ ಅಂಧೋಳನಗಳನ್ನು ಮತ್ತು ಕಲಿಕೆಯನ್ನು ಮಾಡಿ ನಮ್ಮ ಮಕ್ಕಳು ಫೈಲ್ ಆದರೆ ಪುನಃ ಶಾಲೆಗೆ ಸೇರಿಸಿಕೊಳ್ಳುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇಂತ ಶಿಕ್ಷಣದ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಇದನ್ನೆಲ್ಲಾ ಚಿಂತನೆ ಮಾಡಿ ಸರಿಪಡಿಸಬೇಕಾದಂಥ ಪರಿಸ್ಥಿತಿ ಇದೆ. ರಾಜ್ಯಪಾಲರ ಭಾಷಣದಲ್ಲಿ ತಮ್ಮ ಸಾಧನೆಗಳನ್ನು ಕೇಂದ್ರಸರ್ಕಾರ ಕೊಟ್ಟಂಥ ಹಣದಲ್ಲಿ ಎಂಟು ಸಾವಿರ, ಒಂಭತ್ತು ಸಾವಿರ, 350 ಅಧ್ಯಾಪಕರನ್ನು ನೇಮಕ ಮಾಡುತ್ತೇವೆ ಎನ್ನುವುದಾದರೆ ಈ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಇಚ್ಛಿಪಡುವುದಿಲ್ಲ. ಇದರಲ್ಲಿ ಅಧ್ಯಾಪಕರ ಕೊರತೆ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಕೊಟ್ಟಡಿಯ ಬಗ್ಗೆ, ಈ ಕೊಠಡಿಗೆ ಕೊಡುವಂಥ ಐವತ್ತು ಸಾವಿರ ರೂಪಾಯಿಗಳು ಸಾಕಾಗುವುದಿಲ್ಲ. ಈ ಕೊಠಡಿಗೆ 50 ಸಾವಿರ ರೂಪಾಯಿಗಳು ಸಾಕಾಗುವುದಾದರೆ ಕಳಪೆ ಕೆಲಸವಾಗುತ್ತದೆ. ಈ ವರ್ಷ ಕಟ್ಟಿದ್ದು ಮುಂದಿನ ವರ್ಷ ಬಿದ್ದು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಇನ್ನು ಆರೋಗ್ಯದ ಬಗ್ಗೆ ನಾನು ಸಂಕ್ಷಿಪ್ತವಾಗಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಬಗ್ಗೆ ತಾವು ಮಾತನಾಡುವಂತಹ ಸಂದರ್ಭದಲ್ಲಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಮಾಡುತ್ತೇವೆ, ಹೆಚ್ಚಿನ ಆಸ್ಪತ್ರೆಗಳನ್ನು ತೆರೆಯುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೀರಿ.

ಗ್ರಾಮಾಂತರ ಪ್ರದೇಶದಲ್ಲಿ ಇರುವಂತಹ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಮಾಡುತ್ತೀರಾ ಅಥವಾ ಹೆಚ್ಚು ಆಸ್ಪತ್ರೆಗಳು ಮಾಡುತ್ತೀರಾ ಎನ್ನುವಂಥಾದ್ದು ಅಲ್ಲ. ನಮಗೆ ಮೂಲಭೂತ ಸೌಲಭ್ಯವಾದ ಡಾಕ್ಟರ್‌ಗಳು, ನರ್ಸ್‌ಗಳು ಬೇಕು. ಆಸ್ಪತ್ರೆಗಳಿಗೆ ಬರುವಂತಹ ರೋಗಿಗಳಿಗೆ ಔಷಧಿಗಳು ಬೇಕು. ಅದನ್ನು ನಾವು ಕೇಳುತ್ತಿದ್ದೇವೆ. ಅದು ಬಿಟ್ಟು ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಿದ್ದೀರಾ ಅಥವಾ ಹೆಚ್ಚು ಆಸ್ಪತ್ರೆಗಳನ್ನು ಮಾಡಿದ್ದಿರಾ ಎಂಬುದು ಪ್ರಶ್ನೆಯಲ್ಲ. ಇವತ್ತು ಮೂಲಭೂತವಾಗಿ ಬೇಕಾದಂತಹ ವ್ಯವಸ್ಥೆಯನ್ನು ಮಾಡುವುದಕ್ಕಾಗದೆ ಮೇಲ್ದರ್ಜೆಗೆ ಏರಿಸುವುದು ಸಂಬಂಧಪಟ್ಟದ್ದಲ್ಲ.

ಗ್ರಾಮಾಂತರ ಪ್ರದೇಶದಲ್ಲಿರುವಂತಹ ಜನರ ಮೂಲಭೂತ ಸೌಲಭ್ಯಗಳು ಆರೋಗ್ಯದ ಬಗ್ಗೆ ಚಿಂತನೆ ಮಾಡತಕ್ಕಂಥ ಸಂದರ್ಭದಲ್ಲಿ ತಮ್ಮ ಸಾಧನೆಗಳು ಬಹುಶಃ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಬೋಧಕ ಆಸ್ಪತ್ರೆಗಳು ಮತ್ತು ದೊಡ್ಡ ದೊಡ್ಡ ಖಾಸಗೀ ಶಾಲೆಗಳಿಗೆ ಪೂರಕವಾಗಿ ಬೋಧಕ ಆಸ್ಪತ್ರೆಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡುವಂತಹ ಭಾವನೆಗಳು ಇದರ ಹಿಂದೆ ವ್ಯಕ್ತವಾಗುತ್ತದೆ. ಅಂಬುಲೆನ್ಸ್‌ಗಳು ಇವೆ ಆದರೆ ಡ್ರೈವರ್‌ಗಳು ಇಲ್ಲ. ಇದು ಇಂದಿನ ಸಮಸ್ಯೆಯಲ್ಲ ಪ್ರತಿ ಹಿಂದಿನ ಸರ್ಕಾರದಲ್ಲೂ ಇತ್ತು. ಇದನ್ನು ಏನು ರಾಜಕೀಯವಾಗಿ ಮಾತನಾಡುತ್ತಿಲ್ಲ. ಈ ಸಮಸ್ಯೆಯನ್ನು ನಾವು ಬಗೆಹರಿಸಲು ಏನಾದರೂ ಮಾತನಾಡಬೇಕೇ ಹೊರತು ಇದೆಲ್ಲ ತಮ್ಮ ಸಾಧನೆಗಳು ಎತ್ತುವ ಮಾತನ್ನು ಹೇಳಿದರೆ ಅಷ್ಟು ಸಮಂಜಸವಲ್ಲ ಮತ್ತು ಅದಕ್ಕೆ ಅರ್ಥವೂ ಬರುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಜಿಲ್ಲಾ ಪರಿಷತ್ತು ಮತ್ತು ಜಿಲ್ಲಾ ಪಂಚಾಯತ್ ಆಡಳಿತದಲ್ಲೂ ಸಹ ಅನಿಶ್ಚಿತತೆ ಇದೆ. ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡುವಂತಹ ಕೇಂದ್ರ ಕೆಳಗಡೆ ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್ಡ್ ಇದೆ. ಜಿಲ್ಲಾ ಪಂಚಾಯತ್ ಕಿರಿಯ ಪ್ರಾಥಮಿಕ ಶಾಲೆ ಎಂದು ಇದೆ. ಇದರ ಬಗ್ಗೆ ನನಗೆ ಇನ್ನು ದ್ವಂದ್ವ ಉಂಟಾಗಿದೆ. ಇದು ಸರ್ಕಾರಿ ಶಾಲೆಯೋ ಅಥವಾ ಜಿಲ್ಲಾ ಪರಿಷತ್ತಿನ ಶಾಲೆಯೋ ಎಂಬ ಗೊಂದಲವಾಗಿದೆ. ಸರ್ಕಾರ ಆದೇಶವನ್ನು ಮತ್ತುಮಂಜೂರಾತಿಯನ್ನು ಅಧ್ಯಾಪಕರ ನೇಮಕ ಮಾಡಿಕೊಳ್ಳುವಂಥಾದ್ದು ಆದರೆ ಮೇಂಟಿನೆನ್ಸ್ ಮಾತ್ರ ಜಿಲ್ಲಾ ಪಂಚಾಯತ್ ಮಾಡುವುದು. ಆದುದರಿಂದ ಶಿಕ್ಷಣ ಸಂಸ್ಥೆಯಲ್ಲಿ ಈ ಒಂದು ಗೊಂದಲ ಜಿಲ್ಲಾ ಪಂಚಾಯತ್‌ನಲ್ಲಿ ಏನಿದೆ ಅದು ನಿವಾರಣೆಯಾಗಬೇಕಾಗಿದೆ. ಒಂದು ಕಡೆ ಜಿಲ್ಲಾ ಪಂಚಾಯತ್ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದು ಮತ್ತೊಂದು ಕಡೆ ಸರ್ಕಾರ ವರ್ಗಾವಣೆ ಮಾಡುವುದು. ಸರ್ಕಾರ ಮಾಡುವಂತಹ ವರ್ಗಾವಣೆಯನ್ನು ಜಿಲ್ಲಾಪಂಚಾಯತ್ ಅನುಮೋದಿಸದೆ ಇರುವುದು ಅಥವಾ ಜಿಲ್ಲಾ ಪಂಚಾಯತ್ ಮಾಡಿರುವಂತಹ ವರ್ಗಾವಣೆಯನ್ನು ಸರ್ಕಾರ ರದ್ದು ಮಾಡುವಂಥಾದ್ದು ಇದು ಹೀಗೆ ನಿರಂತರವಾಗಿ ನಡೆಯುತ್ತಿದೆ. ಇದನ್ನು ಸರಿಪಡಿಸುವುದಕ್ಕೆ ಏನು ಮಾಡಿದ್ದೀರಿ ಎನ್ನುವಂಥಾದ್ದು ಸ್ಪಷ್ಟ ನಿದರ್ಶನ ಅಥವಾ ಸ್ಪಷ್ಟ ಆದೇಶ ನಮ್ಮಲ್ಲಿ ಇಲ್ಲ. ಇನ್ನು ಜಿಲ್ಲಾ ಪಂಚಾಯತ್ ಕಾಮಗಾರಿಗಳ ಬಗ್ಗೆ ಬಹುಶಃ ಇದರಲ್ಲಿ ಎಷ್ಟು ಆಗಿದೆ ಎಷ್ಟು ಆಗಿಲ್ಲವೆಂಬುದು ಅಸ್ಪಷ್ಟ, ತಾವು ಅಧಿಕಾರವನ್ನು ಕೊಡುತ್ತೀರಿ.

ಆ ಅಧಿಕಾರ ಸಮರ್ಪಕವಾಗಿ ನಿರ್ವಹಿಸುವುದಕ್ಕೆ ಬೇರೆ ತಾಂತ್ರಿಕ ತೊಂದರೆಗಳು ಇವೆ. ಇವತ್ತು ಕುಡಿಯುವ ನೀರಿನ ಯೋಜನೆ ಮಂಜೂರಾತಿಯಾಗಿ ಅದು ರಾಜ್ಯಮಟ್ಟಕ್ಕೆ ಬರಬೇಕಾಗುತ್ತದೆ. ಅದಕ್ಕೆ ಆದೇಶ ಬರಬೇಕಾದರೆ 2-3-4-5 ವರ್ಷಗಳ ಕಾಲ ಕಾಯಬೇಕಾಗುತ್ತದೆ. ಇದೆಲ್ಲಾ ಸರಿಪಡಿಸುವುದಕ್ಕೆ ಏನು ಮಾಡಬೇಕಾಗುತ್ತದೆ? ಕುಡಿಯುವ ನೀರಿನ ವ್ಯವಸ್ಥೆಯಾಗಲಿ ಅಥವಾ ಮೂಲಭೂತ ಸೌಲಭ್ಯಗಳನ್ನು ಜಿಲ್ಲಾ ಪರಿಷತ್ತು ಅಥವಾ ಜಿಲ್ಲಾ ಪಂಚಾಯತ್ ಮೂಲಕ ಮಾಡುವುದಕ್ಕೆ ಏನೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಬೇಕೆಂಬ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಿ ಅದನ್ನು ಸರಿಪಡಿಸುವಂತಹ ಪ್ರಯತ್ನ ಆಗಬೇಕು. ಇನ್ನು ಭೂಸುಧಾರಣಾ ಮಸೂದೆಯ ಬಗ್ಗೆ ಸರ್ಕಾರದ ಪೂರ್ವಾನುಮೋದನೆಗೆ ಒಳಪಟ್ಟು ಕೆಲವು ಗರಿಷ್ಠ ಕೃಷಿ ಭೂಮಿಯನ್ನು ಖಾಸಗಿ ಖರೀದಿಗೆ ಅನುಕೂಲ ಮಾಡಿಕೊಡಲು ಭೂ ಸುಧಾರಣೆ ತಿದ್ದುಪಡಿ ತರಲಾಗಿದೆ ಎಂಬ ವಿಚಾರವನ್ನು ಹೇಳಿದ್ದೀರಿ. ಇದರ ಮೂಲ ಉದ್ದೇಶ ಈ ಮಸೂದೆಯಿಂದ ಭೂಮಿಯನ್ನು ನೇರವಾಗಿ ಬೇಕಾದವರಿಗೆ ಮಾರಾಟ ಮಾಡಲಿಕ್ಕೆ ಸುಸೂತ್ರವಾಗಿ ಸುಲಭ ದಾರಿಯನ್ನು ರೂಪಿಸುವುದಕ್ಕೋಸ್ಕರ ಈ ಯೋಜನೆಯನ್ನು ಜಾರಿಗೆ ತಂದಿದ್ದೀರಿ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳಬಹುದು. ನಿಮಗೆ ಪುಷ್ಪ ಕೃಷಿ ಬಗ್ಗೆ ಹೆಚ್ಚಿನ ಕಾಳಜಿ ಬಂತು ಎಂದರೆ ಬಹಳಷ್ಟು ಸಮಸ್ಯೆಗಳು

ಇವೆ. ಈ ಸಮಸ್ಯೆಗಳ ಬಗ್ಗೆ ಚಿಂತನೆ ಇಲ್ಲ, ಕಾಳಜಿ ಇಲ್ಲ. ಪುಷ್ಪ ಕೃಷಿ ಮಾಡಬೇಕು ಅಥವಾ ಬೇರೆಯವರ ಕೃಷಿ ಭೂಮಿಯನ್ನು ಖರೀದಿಸಿ ಅದರ ಬಗ್ಗೆ ಖಾಸಗೀಯವರಿಗೆ ಭೂಮಿಯನ್ನು ಕ್ರಮಬದ್ಧಗೊಳಿಸುವುದಕ್ಕೆ.....

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾಳೆ ಅಮೆಂಡ್‌ಮೆಂಟ್ ಬಿಲ್ ಬರುತ್ತದೆ, ಮಾನ್ಯ ಸದಸ್ಯರು ನಾಳೆ ಆಗ ಅದರ ಬಗ್ಗೆ ಮಾತನಾಡಬಹುದು. ತಾವು ಈ ವಿಷಯವಾಗಿ ಮಾತನಾಡುತ್ತೀರೆಂದು ನಾನು ತಯಾರಾಗಿ ಬಂದ್ದಿದ್ದೇನೆ. ಆದುದರಿಂದ ತಾವು ನಾಳೆ ಅದರ ಬಗ್ಗೆ ಮಾತನಾಡಿ, ಈಗ ಏಕೆ ಸಮಯವನ್ನು ವ್ಯರ್ಥ ಮಾಡುತ್ತೀರಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನೀರಾವರಿ ಯೋಜನೆಯ ಬಗ್ಗೆ ನಮ್ಮ ಜಿಲ್ಲೆಯಲ್ಲಿರುವಂತಹ ದೊಡ್ಡ ಯೋಜನೆ ಎಂದರೆ ವರಾಹಿ ಯೋಜನೆ, ಬಹುಶಃ ಇದರ ಬಗ್ಗೆ ಮಾತನಾಡಿದರೆ ಇದಕ್ಕೆ ಯಾವ ರೀತಿಯ ಉತ್ತರ ಬರುತ್ತದೆಂಬುದು ನನಗೆ ಗೊತ್ತಿಲ್ಲ. ಆದರೆ ಇದರ ಬಗ್ಗೆ ನಾನು ನನ್ನ ಅನಿಸಿಕೆಯನ್ನು ವ್ಯಕ್ತಪಡಿಸುತ್ತೇನೆ. ವರಾಹಿ ಯೋಜನೆಯನ್ನು ಮಾಡುವಂತಹ ಸಂದರ್ಭದಲ್ಲಿ ಮೂಲ ಯೋಜನೆ ಮತ್ತು ವರಾಹಿ ಏತ ನೀರಾವರಿಯನ್ನು ಅನುಮೋದನೆಯಾಯಿತು. ಹಾಗೆ ಕೆಲಸ ಪ್ರಾರಂಭವಾಯಿತು. ಕೆಲಸ ಪ್ರಾರಂಭವಾದ ಮೇಲೆ ಬಹಳಷ್ಟು ಟೀಕೆಗಳು ಬಂತು, ಈ ಟೀಕೆಗಳು ಬಂದಾಗ ಈ ಕೆಲಸ ಸ್ಥಗಿತವಾಯಿತು. ಬಹುಶಃ ಇದನ್ನು ಬೇರೆ ಬೇರೆ ರಾಜಕೀಯ ಪಕ್ಷಗಳು ಮತ್ತು ಸನ್ಮಾನ್ಯ ಯಡಿಯೂರಪ್ಪ ಅವರು ಆ ಸ್ಥಳಕ್ಕೆ ಭೇಟಿಯನ್ನು ಕೊಟ್ಟಿರಬಹುದು. ಅದೇ ರೀತಿ ಬಹಳಷ್ಟು ರಾಜಕೀಯ ಪಕ್ಷದವರು ಭೇಟಿ ಇತ್ತು ಟೀಕೆಯನ್ನು ಮಾಡಿದರು. ಈ ರೀತಿಯಾಗಿ ಆ ಕೆಲಸ ಸ್ಥಗಿತವಾಯಿತು. ಪುನಃ ಆ ಕೆಲಸವನ್ನು ಪ್ರಾರಂಭ ಮಾಡಬೇಕೆನ್ನುವ ಇಚ್ಛೆ ಸರ್ಕಾರಕ್ಕೆ ಇದೆ. ಆದರೆ ಒಂದು ವಿಚಾರವನ್ನು ನಾನು ಸ್ಪಷ್ಟ ಪಡಿಸುವುದಕ್ಕೆ ಇಚ್ಛಿಸುತ್ತೇನೆ. ಮೂಲ ಯೋಜನೆಯನ್ನು ಮಾಡದೆ ತಾವು ಏತ ನೀರಾವರಿ ಪ್ರಕಾರ ಈ ವರಾಹಿ ಯೋಜನೆಯನ್ನು ಪೂರ್ಣ ಮಾಡಬೇಕಾದರೆ ಸುಮಾರು ಇಪ್ಪತ್ತು - ಇಪ್ಪತ್ತೈದು ಕೋಟಿ ರೂಪಾಯಿಗಳಲ್ಲಿ ಕೇವಲ 3-4 ಗ್ರಾಮಗಳಿಗೆ ನೀರು ಕೊಡಬಹುದೇ ಹೊರತು ಇದರಿಂದ ಪ್ರಯೋಜನವಾಗುವುದಿಲ್ಲ. ಇದರಿಂದ ಏನೇ ಮಾಡಿದರೂ ಕೇವಲ ಗುತ್ತಿಗೆದಾರರು ಅಥವಾ ಬೇರೆ ಯಾವುದೋ ಒಂದು ಹಿನ್ನಲೆಯಲ್ಲಿ ತಾವು ಈ ಯೋಜನೆಯನ್ನು ಕಾರ್ಯಗತ ಮಾಡುತ್ತೀರಿ ಎನ್ನುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಆದರೆ ಮೂಲ ಯೋಜನೆ ಏನಿದೆ ಸಿದ್ಧಾರ್ಥದಲ್ಲಿ ಡ್ಯಾಮ್‌ನ್ನು ಕಟ್ಟಿ ಅದೇ ನೀರನ್ನು ಈ ನೀರಾವರಿಗೆ ಬರುವಂತಹ ವ್ಯವಸ್ಥೆಯನ್ನು ಮಾಡಿದರೆ ಖಂಡಿತವಾಗಿ ಈ ಯೋಜನೆ ಪ್ರಯೋಜನಕ್ಕೆ ಬರುತ್ತದೆ. ಅದರಿಂದ ರೈತರಿಗೂ ಅನುಕೂಲವಾಗುತ್ತದೆ. ಇದರಲ್ಲಿ ಏನು ವ್ಯವಸ್ಥೆ ಇದೆ ಎಂದರೆ ಸುರಕ್ಷಿತವಾದಂತಹ ಅರಣ್ಯವನ್ನು ಕಡಿದು ಕಾಲುವೆಗಳನ್ನು ಮಾಡುತ್ತಿದ್ದಾರೆ.

ಸುರಕ್ಷಿತವಾದ ಅರಣ್ಯವನ್ನು ಕಡಿದು ಕಾಲುವೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಅವರು ಅಕ್ವಾಯರ್ ಮಾಡುವುದು 45 ಮೀಟರ್‌ಗಳು, ಅದೇ ಕಾಲುವೆ ಸುರಕ್ಷಿತ ಅರಣ್ಯವನ್ನು ಬಿಟ್ಟು ಒಂದು ಫೀಟ್ ಮುಂದೆ ಹೋದಂತಹ ಸಂದರ್ಭದಲ್ಲಿ 75 ಮೀಟರ್‌ಗಳು ಅಕ್ವಾಯರ್ ಮಾಡುವುದು. ಅದು ಕಾಡೆ ಇರಲಿ. ಖಾಸಗೀ ಸ್ಥಳವೇ ಇರಲಿ, ಈ ರೀತಿಯ ವ್ಯತ್ಯಾಸವೇಕೆ? ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ಬಹುಶಃ ಕೇಂದ್ರ ಸರ್ಕಾರದವರು ಅದಕ್ಕೆ ಒಪ್ಪಿಗೆಯನ್ನು ಕೊಡುವುದಿಲ್ಲವೆಂದು ಹೇಳಿ ಅವರಿಗೆ 45 ಮೀ. ಇಲ್ಲಿ ರೈತರ ಜಮೀನು ಎಂದು ಇದಕ್ಕೆ ಹೇಳುವವರು, ಕೇಳುವವರು ಯಾರು ಇಲ್ಲವೆಂದು ಹೇಳಿ, ಅವರಿಗೆ ನೀವು ದಿಕ್ಕು, ದೇಶ ಇಲ್ಲವೆಂಬ ಭಾವನೆಯನ್ನು ಇಟ್ಟುಕೊಂಡು ಅವರ ಭೂಮಿಯನ್ನು 75 ಮೀಟರ್ಸ್ ಅಕ್ವಾಯರ್

ಮಾಡುವಂತಹ ಹಿನ್ನೆಲೆ ಇದೆ ಎನ್ನುವಂತಹ ಪ್ರಶ್ನೆ ಇದೆ. ಇದರ ಸುರಕ್ಷಿತ ಅರಣ್ಯವನ್ನು ಬಿಟ್ಟು ಅದಕ್ಕಿಂತ ಹೆಚ್ಚು ಸಮೃದ್ಧಿಯಾಗಿರುವಂತಹ ಮರಗಳನ್ನು ಕಡಿಯುವಂಥಾದ್ದನ್ನು ಸಹ ಗಂಭೀರವಾಗಿ ಆಲೋಚನೆ ಮಾಡಬೇಕು. ಈ ವರಾಹಿ ಯೋಜನೆಯನ್ನು ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಈ ಯೋಜನೆಯನ್ನು ಮಾಡಬೇಕೇ ಹೊರತು ಇದು ರಾಜಕೀಯವಾಗಿ ಟೀಕೆಯ ಕೇಂದ್ರವಾಗಬಾರದು. ಯಾವ ಉದ್ದೇಶಕ್ಕಾಗಿ ಈ ಯೋಜನೆ ಆಗಿದೆ ಅದು ಸಂಪೂರ್ಣವಾಗುವುದಕ್ಕೆ ಪೂರಕವಾಗಿ ಮಾಡಬೇಕಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.ಈ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರು ವಿಧಾನಮಂಡಲದಲ್ಲಿ ಮಾಡಿರುವಂತಹ ಭಾಷಣದಲ್ಲಿ ಹೇಳಿರುವಂತಹ ಮಾತುಗಳು ಸಂಪೂರ್ಣವಾಗಿ ತದ್ವಿರುದ್ಧವಾಗಿದೆ ಎಂದು ಹೇಳಿ, ನಮ್ಮ ಹಳ್ಳಿಗಳಲ್ಲಿ ಹೇಳುವಂತಹ ಮಾತು ಏನೆಂದರೆ "ಹೇಳುವುದು ವೇದ, ಹಾಕೊವುದು ಗಾಳ" ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

4.30 ಪಿ.ಎಂ

ಉಪಾಧ್ಯಕ್ಷರು : ಜಿ. ಬಸವಣ್ಣಪ್ಪನವರೇ ತಾವು ಈಗ ಮಾತನಾಡಿ.

+ಶ್ರೀ ಜಿ. ಬಸವಣ್ಣಪ್ಪ (ಹೊಳೆ ಹೊನ್ನೂರು ಕ್ಷೇತ್ರ) : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಕರ್ನಾಟಕ ವಿಧಾನಮಂಡಲವನ್ನು ಉದ್ದೇಶಿಸಿ ದಿನಾಂಕ ಹತ್ತೊಂಬತ್ತರಂದು ಏನು ಭಾಷಣ ಮಾಡಿದ್ದಾರೆ, ಅದಕ್ಕೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಿತ್ರರಾದ ಸನ್ಮಾನ್ಯ ಶ್ರೀ ನಾಗೇಗೌಡರವರು ಅನುಮೋದಿಸಿ ಶರಣಪ್ಪನವರು ಬಹಳ ಬೆಳಕನ್ನು ಚೆಲ್ಲಿದ್ದಾರೆ. ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ನಾನಾದರೂ ಸಹ ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲು ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣವು ಚಿಕ್ಕದಾದರೂ ಅತಿ ಪ್ರಗತಿಪರವಾಗಿದೆ. ಆರ್ಥಿಕ, ಸಾಮಾಜಿಕ ಆಡಳಿತ ಮತ್ತು ರಾಜಕೀಯ ವಿಷಯಗಳ ಬಗ್ಗೆ ಸಂಕ್ಷಿಪ್ತವಾದ ಪ್ರಸ್ತಾಪ ಮಾಡಿದ್ದಾರೆ. ಈಗ ತಾನೆ ಕರ್ನಾಟಕ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ಮುಗಿದಿದೆ. ಈ ಒಂದು ವರ್ಷದ ಅವಧಿಯಲ್ಲಿ ಸಾಧನೆ ಮಾಡಿದ ಕಾರ್ಯಕ್ರಮಗಳ ಬಗ್ಗೆ ನಾವು ತುಲನೆ ಮಾಡಿ ನೋಡಿದರೆ ಸರ್ಕಾರ ಎಷ್ಟರಮಟ್ಟಿಗೆ ಸಾಧನೆಯನ್ನು ಫಲಪ್ರದವಾಗಿ ಮಾಡಿದೆ ಎನ್ನುವುದು ನಮಗೆಲ್ಲಾ ಅರ್ಥವಾಗುತ್ತದೆ. ಮಾನ್ಯ ದೇವೇಗೌಡರ ನೇತೃತ್ವದ ಜನತಾದಳ ಸರ್ಕಾರ ಒಂದು ವರ್ಷದ ಅವಧಿಯಲ್ಲಿ "ರಾಷ್ಟ್ರದಲ್ಲೇ ಒಂದು ಉತ್ತಮವಾದ ಸರ್ಕಾರ" ಎಂದು ನಾವು ಹೇಳಬಹುದು ಅಧಿಕಾರವನ್ನು ವಹಿಸಿಕೊಂಡಾಗ ಬಹಳ ಸಂದಿಗ್ಧ ಪರಿಸ್ಥಿತಿ ಇತ್ತು, ಹಣಕಾಸು ಪರಿಸ್ಥಿತಿ, ಪೆಂಡಿಂಗ್ ಬಿಲ್ಸ್ ಇತ್ಯಾದಿ ಬಹಳ ಗಂಭೀರ ಆರ್ಥಿಕ ಪರಿಸ್ಥಿತಿ ಇದ್ದುದ್ದನ್ನು ನಾವೆಲ್ಲಾ ಮನಗಂಡಿದ್ದೇವೆ. ಇದರ ಜೊತೆಗೆ ಗಂಭೀರವಾದ ರಾಜಕೀಯ ಪರಿಸ್ಥಿತಿಯನ್ನು ಎದುರಿಸಿ, ಹಣಕಾಸು ಪರಿಸ್ಥಿತಿಯನ್ನು ಎದುರಿಸಿ ಸರ್ಕಾರವನ್ನು ಒಂದು ಸರಿಯಾದ ದಾರಿಯಲ್ಲಿ ತೆಗೆದುಕೊಂಡು ಪ್ರಾಮಾಣಿಕವಾದ ಆಡಳಿತವನ್ನು ಸನ್ಮಾನ್ಯ ದೇವೇಗೌಡರು ಮತ್ತು ಅವರ ಮಂತ್ರಿಮಂಡಲದ ಸದಸ್ಯರು ಕೊಟ್ಟಿದ್ದಾರೆಂದು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಅಧಿಕಾರಕ್ಕೆ ಬಂದು ಒಂದು ವರ್ಷವಾಗಿದೆ. ಈ ಒಂದು ವರ್ಷದ ಅವಧಿಯಲ್ಲಿ ಪ್ರಜಾಪ್ರಭುತ್ವಾತ್ಮಕವಾಗಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಈಗಾಗಲೇ ಮುಗಿದಿದೆ. ತಾಲ್ಲೂಕು ಪಂಚಾಯಿತಿ ಇರಬಹುದು, ಜಿಲ್ಲಾ ಪಂಚಾಯಿತಿ ಇರಬಹುದು ಅಥವಾ ಪುರಸಭೆಗಳಿರಬಹುದು, ಅವುಗಳಿಗೆ ಚುನಾವಣೆ ಮುಗಿಸಿ ಅಧ್ಯಕ್ಷರು, ಉಪಾಧ್ಯಕ್ಷರು, ಪುರಸಭಾಧ್ಯಕ್ಷರು, ಮೇಯರ್ ಮತ್ತು ಉಪ ಮೇಯರ್ ಇವರುಗಳಿಗೆ, ಎಲ್ಲಾ

ವರ್ಗಕ್ಕೂ ಸರಿಯಾದ ರೀತಿಯ ಪ್ರಾತಿನಿಧ್ಯವನ್ನು ಒದಗಿಸಿಕೊಟ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ, ಮಹಿಳೆಯರಿಗೆ, ಹಿಂದುಳಿದ ವರ್ಗದವರಿಗೆ ಎಲ್ಲಾ ಪ್ರಾತಿನಿಧ್ಯ ಕೊಟ್ಟು ಸಾಮಾಜಿಕ ನ್ಯಾಯ ಒದಗಿಸಿದ ಕೀರ್ತಿ ಜನತಾದಳದ ಸರ್ಕಾರಕ್ಕೆ ಸಲ್ಲುತ್ತದೆ ಮತ್ತು ಸಹಕಾರ ಸಂಸ್ಥೆಗಳು ಏನಿದೆ, ಅವು ಸೇವಾ ಸಹಕಾರ ಸಂಘಗಳಿರಬಹುದು ಮತ್ತಿತರ ಸಹಕಾರ ಸಂಘಗಳಿರಬಹುದು, ಅವುಗಳೆಲ್ಲವುಗಳಿಗೂ ಸಹ ಈಗಾಗಲೇ ಚುನಾವಣೆಯನ್ನು ಮುಗಿಸಲಾಗಿದೆ. ಚುನಾವಣೆ ಮುಗಿಸಿ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಕೇವಲ ಒಂದು ವರ್ಷದಲ್ಲಿ ನೆಲೆಗೊಳಿಸಬೇಕಾದರೆ ಇದು ನಿಜವಾಗಿಯೂ ನಾವೆಲ್ಲಾ ಹೆಮ್ಮೆಪಡಬೇಕಾದ ವಿಷಯ, ಅದಕ್ಕೆ ನಾನು ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಸನ್ಮಾನ್ಯ ಶ್ರೀ ದೇವೇಗೌಡರು ಮುಖ್ಯಮಂತ್ರಿಗಳಾದ ತಕ್ಷಣ ನಿರುದ್ಯೋಗ ಸಮಸ್ಯೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರು. ಸುಮಾರು ಐದಾರು ವರ್ಷಗಳಿಂದ ಯಾವ ವಿಧವಾದ ನೇಮಕಾತಿ ನಮ್ಮ ರಾಜ್ಯದಲ್ಲಿ ಆಗಿರಲಿಲ್ಲ, ಸುಮಾರು ಐದಾರು ವರ್ಷಗಳಿಂದ ನಿರುದ್ಯೋಗಿ ಅಭ್ಯರ್ಥಿಗಳಿಗೆ ನಾವು ಉದ್ಯೋಗವನ್ನು ಕೊಡುವ ಕಾರ್ಯಕ್ರಮವನ್ನು ರೂಪಿಸುತ್ತೇವೆಂದು ಹೇಳಿದ್ದರು. ಈಗಾಗಲೇ ತಮಗೆ ತಿಳಿದ ಹಾಗೆ ಮೂವತ್ತು ಸಾವಿರಕ್ಕೂ ಮೇಲ್ಪಟ್ಟ ಉದ್ಯೋಗವನ್ನು ಕೇವಲ ಒಂದು ವರ್ಷದಲ್ಲಿ ಒದಗಿಸಿಕೊಟ್ಟಿದ್ದಾರೆ. ಅದು ಪ್ರಾಥಮಿಕ ಶಾಲೆಯ ಶಿಕ್ಷಕರಿರಬಹುದು, ಉನ್ನತ ಶಿಕ್ಷಣ ಲೆಕ್ಚರರ್ಸ್ ಇತ್ಯಾದಿ ಇರಬಹುದು. ಪಾರ್ಟ್ ಟೈಮ್ ಲೆಕ್ಚರರ್ಸ್ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಕ್ರಮ ತೆಗೆದುಕೊಂಡಿದ್ದಾರೆ. ಸಾವಿರದ ಆರು ನೂರು ಲೆಕ್ಚರರ್ಸ್‌ರನ್ನು (ಪಾರ್ಟ್‌ಟೈಮ್) ಉದ್ಯೋಗವನ್ನು ಕಾಯಂ ಮಾಡುವುದಕ್ಕೆ ಈಗಾಗಲೇ ರೂಲ್ಸ್ ಫ್ರೇಮ್ ಮಾಡುತ್ತಿದ್ದಾರೆ. ಅದು ಪೋಲೀಸ್ ಇಲಾಖೆ ಇರಬಹುದು ಅಥವಾ ಆರೋಗ್ಯ ಇಲಾಖೆ ಇರಬಹುದು. ಇನ್ನು ಕಂದಾಯ ಇಲಾಖೆಯಲ್ಲಿ ಸಾವಿರದ ಇನ್ನೂರು ಜನ ಸರ್ವೇಯರ್‌ಗಳನ್ನು ಈಗಾಲೇ ನೇಮಕಾತಿ ಮಾಡಿದ್ದಾರೆ. ಈ ನೇಮಕಾತಿಯಲ್ಲಿ, ಸಾಮಾನ್ಯವಾಗಿ ನೇಮಕಾತಿ ಆಗುವಾಗ ಅನೇಕ ಹಗರಣಗಳನ್ನು ನಾವು ಮೊದಲಿನಿಂದ ಕೇಳಿದ್ದೇವು. ಯಾವ ಹಗರವಿಲ್ಲದೆ, ಯಾವ ಭ್ರಷ್ಟಾಚಾರವಿಲ್ಲದೆ, It is a silent revolution ಅಂತಹ ಒಂದು ರೀತಿಯ ಕ್ರಾಂತಿಕಾರಿ ಬದಲಾವಣೆಯಾಗಿದೆ. ಅರ್ಹರಿಗೆ ಉದ್ಯೋಗ ಒದಗಿಸುವಂಥ ಒಂದು ವ್ಯವಸ್ಥೆ ಮಾಡಲಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಲು ನಾನು ಇಚ್ಛಿಪಡುತ್ತೇನೆ.

ಇನ್ನು ಸಾಮಾಜಿಕ ಕ್ಷೇತ್ರದಲ್ಲಿ ಅದು ಮಹಿಳೆಯರ ಬಗ್ಗೆ ಇರಬಹುದು, ಮಕ್ಕಳ ಬಗ್ಗೆ ಇರಬಹುದು ಅಂಗವಿಕಲರ ಬಗ್ಗೆ ಇರಬಹುದು, ಪರಿಶಿಷ್ಟ ಜಾತಿ - ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಇವರುಗಳ ಬಗ್ಗೆ ಇರಬಹುದು, ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಜಾರಿಗೆ ತರಲಾಗಿದೆ. ಈಗ ಬಡವರಿಗೆ ಹಸಿರುಕಾರ್ಡು ಯೋಜನೆ. ನಗರ ಪ್ರದೇಶದಲ್ಲೂ ಸಹ ಐದು ಲಕ್ಷ ಜನರಿಗೆ ಹಸಿರು ಕಾರ್ಡು ಕೊಡತಕ್ಕಂಥ ಕಾರ್ಯಕ್ರಮ, ಗ್ರಾಮಾಂತರ ಪ್ರದೇಶದಲ್ಲಿ ಐವತ್ನಾಲ್ಕು ಲಕ್ಷ ಬಡ ಕುಟುಂಬಗಳಿಗೆ ಹಸಿರು ಕಾರ್ಡು ಕೊಡತಕ್ಕಂಥ ಕಾರ್ಯಕ್ರಮ. ಹಸಿರು ಕಾರ್ಡು ಹಂಚಿಕೆಯಲ್ಲಿ ಅನೇಕ ಲೋಪದೋಷಗಳಿವೆ ಎಂದು ಈಗಾಗಲೇ ಮಾನ್ಯ ಸದಸ್ಯರು ಹೇಳಿದರು. ಅರ್ಹ ಫಲಾನುಭವಿಗಳಿಗೆ ದೊರೆತಿಲ್ಲ ಎನ್ನುವ ಬಗ್ಗೆ ದೂರುಗಳಿವೆ. ಅದರಲ್ಲಿ ಕೆಲವು ಸತ್ಯಾಂಶಗಳಿವೆ. ಆದರೆ ಹೇಳುವುದರಲ್ಲಿ ಉತ್ಪ್ರೇಕ್ಷೆ ಇದೆ. ನಾನು ಮಾನ್ಯ ಆಹಾರ ಸಚಿವರನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಅವರಿಗೆ ಕರೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಅದೇನೆಂದರೆ, ಅವರು ಹೋಗಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಎಲ್ಲಾ ಅಧಿಕಾರಿಗಳನ್ನು ಕರೆದು ರಿವ್ಯೂ ಮಾಡಿ ಈ ಬಡವರನ್ನು ಗುರುತಿಸಿ ಹಸಿರು ಕಾರ್ಡು ಕೊಡುವಾಗ ಸರಿಯಾದ ಕ್ರಮ ತೆಗೆದುಕೊಳ್ಳತಕ್ಕಂಥ ಒಂದು ವ್ಯವಸ್ಥೆ ಮಾಡಬೇಕು. He should fix the responsibility on the Deputy Commissioners ಅವರು ಜವಾಬ್ದಾರರಾಗಬೇಕು ಮತ್ತು ಗ್ರಾಮಪಂಚಾಯಿತಿ

ಮಟ್ಟದಲ್ಲಿ ಹಸಿರುಕಾರ್ಡು ಹೊಂದಿರುವವರು ಯಾರಿದ್ದಾರೆ ಅವರ ಪಟ್ಟಿಯನ್ನು ಪ್ರಕಟಿಸಬೇಕು. Totally the Deputy Commissioner should be made responsible. ಈ ರೀತಿ ಮಾಡಿದರೆ ಈ ಒಂದು ಕಾರ್ಡಿನಲ್ಲಿ ಅವ್ಯವಹಾರ ಏನಿದೆ ಅದನ್ನು ತಪ್ಪಿಸುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಹ ಕಟ್ಟುನಿಟ್ಟಾಗಿ ಒಂದು ಸುತ್ತೋಲೆಯನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕೊಟ್ಟು, ಈ ಹಸಿರು ಕಾರ್ಡು ಕೊಡುವುದರಲ್ಲಿ ಏನು ದೂರು ಇದೆ, ಲೋಪದೋಷಗಳೇನಿದೆ ಅದನ್ನು ಬೇಗ್ಗ ಸರಿಪಡಿಸಬೇಕೆಂದು ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಇನ್ನು ಹೆಣ್ಣುಮಕ್ಕಳಿಗೆ ಸರ್ಕಾರಿ ನೌಕರಿಯಲ್ಲಿ ಶೇಕಡಾ 30ರಷ್ಟು ಹುದ್ದೆಗಳ ಮೀಸಲಾತಿ ಮಾಡಿರತಕ್ಕಂಥದ್ದು ಮತ್ತು ಮಹಿಳೆಯರಿಗಾಗಿ ಹಮ್ಮಿಕೊಂಡಿರುವ ಮಹಿಳಾ ಅಭಿವೃದ್ಧಿ ಯೋಜನೆ ಇವನ್ನು ನಾವು ಖಂಡಿತಾ ಸ್ವಾಗತ ಮಾಡತಕ್ಕಂಥದ್ದು.

ಭಾರತದಲ್ಲೇ ಕರ್ನಾಟಕ ಈ ದಿಶೆಯಲ್ಲಿ ಪ್ರಥಮ ಹೆಜ್ಜೆ ಇಟ್ಟಿದೆ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮನುಷ್ಯನಿಗೆ ಮುಖ್ಯವಾಗಿ ಆಹಾರ ಹಾಗೂ ವಾಸಕ್ಕೆ ಮನೆ ಮುಖ್ಯವಾದದ್ದು. ನಿವೇಶನ ಒದಗಿಸುವುದರ ಬಗ್ಗೆ, ಮನೆ ಒದಗಿಸುವುದರ ಬಗ್ಗೆ ಸರ್ಕಾರ ಒಳ್ಳೆಯ ದಿಟ್ಟತನದ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಏಪ್ರಿಲ್ ಮೇನಲ್ಲಿ ರಾಜ್ಯದಾದ್ಯಂತ ವೈಜ್ಞಾನಿಕ ಸಮೀಕ್ಷೆಯನ್ನು ಮಾಡಲಾಯಿತು. ಸಮೀಕ್ಷೆ ಮಾಡಿದಾಗ ಸುಮಾರು ಇಪ್ಪತ್ತು ಲಕ್ಷ ನಿವೇಶನರಹಿತರನ್ನು ಮನೆರಹಿತರನ್ನು ಪತ್ತೆ ಹಚ್ಚಲಾಗಿದೆ. ಈಗ ಒಂದು ಲಕ್ಷ ಇಪ್ಪತ್ತಾರು ಸಾವಿರ ಮನೆಗಳನ್ನು ಡಿಸೆಂಬರ್ 1996ರ ಒಳಗಡೆ ಕಟ್ಟಬೇಕೆಂಬ ನಿಲುವನ್ನು ತೆಗೆದುಕೊಂಡಿದ್ದಾರೆ. ಆದರೆ The speed, the way in which the Department is moving is not up to the mark. That has to speeded up.

ಇನ್ನು ಅತಿಮುಖ್ಯವಾದ ಒಂದು ವಿಷಯವನ್ನು ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಪಾನನಿರೋಧ ಜಾರಿ. ಸಂವಿಧಾನ ಪಿತೃಗಳ ಕನಸೇನಿದೆ ಅದು ನನಸಾಗುವ ಕಾಲ ಕೂಡಿ ಬಂದಿದೆ.. ಸಂವಿಧಾನದ ಅನುಚ್ಛೇದ 47ರ ಪ್ರಕಾರ ನಾವು ಪಾನನಿರೋಧವನ್ನು ಜಾರಿ ತರಬೇಕಾಗಿದೆ. ಇದರಿಂದ ಸರ್ಕಾರಕ್ಕೆ ಸುಮಾರು ಎಂಟುನೂರು ಕೋಟಿ ರೂಪಾಯಿಗಳು ನಷ್ಟವಾಗುತ್ತದೆ. ಇದನ್ನು ಜಾರಿಗೆ ತರುವುದರಿಂದ ಇದರ ವ್ಯಾಪಾರ, ಇದರ ಕೈಗಾರಿಕೆಯಲ್ಲಿರತಕ್ಕಂಥ ಲಕ್ಷಾಂತರ ಜನರಿಗೆ ನಿರುದ್ಯೋಗ ಉಂಟಾಗುತ್ತದೆ, ತೊಂದರೆಯಾಗುತ್ತದೆ, ಅದರ ಭಾಗವನ್ನು ಸಹ ನಾವು ಸ್ವಲ್ಪ ಗಮನಿಸಬೇಕಾಗುತ್ತದೆ. ಆದರೆ ಸಾಮಾಜಿಕ ಭದ್ರತೆಯ ದೃಷ್ಟಿಯಿಂದ, ಹಿಂದುಳಿದವರು, ಪರಿಶಿಷ್ಟ ಜಾತಿ - ಪರಿಶಿಷ್ಟ ವರ್ಗ ಇವರ ದೃಷ್ಟಿಯಿಂದ ಎಲ್ಲಕ್ಕಿಂತ ಹೆಚ್ಚಾಗಿ ಲಕ್ಷಾಂತರ ಮಹಿಳೆಯರು ಮದ್ಯಪಾನದಿಂದ ಏನು ಕಣ್ಣೀರು ಹಾಕುತ್ತಿದ್ದಾರೆ. ಅದರ ಹಿತಕ್ಕೋಸ್ಕರ ಈ ಪಾನನಿರೋಧವನ್ನು ಜಾರಿಗೆ ತರುವುದು ಅವಶ್ಯಕವಿದೆ. ಅದಕ್ಕಾಗಿ ನಾನು ನಮ್ಮ ಸರ್ಕಾರವನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತಿದ್ದೇನೆ. ಈ ಪಾನನಿರೋಧವನ್ನು ಜಾರಿಗೆ ತರುವುದು ಅವಶ್ಯಕವಿದೆ. ರಾಜ್ಯಪಾಲರ ಭಾಷಣ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿದೆ. ಮುಖ್ಯವಾಗಿ ಆರ್ಥಿಕ ಅಭಿವೃದ್ಧಿ, ಕೃಷಿ, ಕೈಗಾರಿಕೆ ವಿದ್ಯುತ್ ಮತ್ತು ನೀರಾವರಿ ಇವುಗಳನ್ನು ಅವಲಂಬಿಸಿದೆ. ರಾಜ್ಯದಲ್ಲಿ ಕೃಷಿ ಅಭಿವೃದ್ಧಿಯನ್ನು ಸಾಧಿಸಲು ರಾಜ್ಯಸರ್ಕಾರ ಹೊಸ ಕೃಷಿ ನೀತಿಯನ್ನು ಈಗಾಗಲೇ ರೂಪಿಸಿದೆ. ರಾಷ್ಟ್ರದಲ್ಲಿಯೇ ಪ್ರಥಮ ಭಾರಿ ಅತ್ಯಂತ ಹಿಂದುಳಿದ ಈ ಕೃಷಿ ಏನಿದೆ, ಕೃಷಿ ಇಲಾಖೆ ಏನಿದೆ, ರಾಜ್ಯದಲ್ಲಿ ಶೇಕಡಾ ಎಪ್ಪತ್ತೈದರಷ್ಟು ಕೃಷಿಕ ಜನರು ಏನಿದ್ದಾರೆ ಅವರದು ಅತ್ಯಂತ ಹಿಂದುಳಿದಂಥ ಒಂದು ಪರಿಸ್ಥಿತಿ. ಈ ಒಂದು ಕೃಷಿ ನೀತಿಯನ್ನು ರೂಪಿಸಿ ಅವರ ಆರ್ಥಿಕ, ಸಾಮಾಜಿಕ ಪ್ರಗತಿಗೆ ಒಂದು ಬುನಾದಿಯನ್ನು ಹಾಕಿದಂಥ ಕೀರ್ತಿ ಈ ರಾಷ್ಟ್ರದಲ್ಲೇ ಪ್ರಪ್ರಥಮಬಾರಿಗೆ ನಮ್ಮ ರಾಜ್ಯ ಸರ್ಕಾರಕ್ಕೆ ಸಲ್ಲತಕ್ಕದ್ದು.

ಈ ಒಂದು ಕೃಷಿ ನೀತಿ ಜಾರಿಗೆ ಬಂದರೆ ಒಂದು ಸಾವಿರ ಕೋಟಿ ಹಣವನ್ನು ಕೃಷಿ ಇಲಾಖೆಗೆ ಪ್ರತಿವರ್ಷ ಒದಗಿಸತಕ್ಕಂಥ ಕಾರ್ಯಕ್ರಮವನ್ನು ಕೃಷಿ ನೀತಿಯಲ್ಲಿ ಅಳವಡಿಸಲಾಗಿದೆ. ಸುಮಾರು ಎರಡು ಸಾವಿರ ಕೋಟಿ ಬಂಡವಾಳವನ್ನು ಕೃಷಿ ಹಣಕಾಸು ನಿಗಮ, ಅದಕ್ಕೆ ಒದಗಿಸುವ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಒಣ ಭೂಮಿ ಅಭಿವೃದ್ಧಿ, ಕೃಷಿ ಉತ್ಪಾದನೆಗಳಿಗೆ ಮಾರುಕಟ್ಟೆ, ತೋಟಗಾರಿಕೆ, ಹೈನುಗಾರಿಕೆ, ಬೀಜೋತ್ಪನ್ನ, ಪಶುಪಾಲನೆ ಇವುಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ದೊರೆತು, ಗ್ರಾಮೀಣ ಪ್ರದೇಶಗಳಲ್ಲಿ ಏನು ನಿರುದ್ಯೋಗ ತಾಂಡವವಾಗುತ್ತಿದೆ, ಅರೆಹೊಟ್ಟೆ, ಅರೆಬಟ್ಟೆಯಿಂದ ಜನ ನರಳುತ್ತಿದ್ದಾರೆ, ಕೃಷಿಕರು ಅನೇಕ ಸಮಸ್ಯೆಗಳಿಂದ ಏನು ನರಳುತ್ತಿದ್ದಾರೆ, ಅವರಿಗೆ ಈ ಹೊಸ ಕೃಷಿ ನೀತಿಯಿಂದ ಒಂದು ವರಪ್ರಸಾದವಾಗುತ್ತದೆ. ಸನ್ಮಾನ್ಯ ಉಪಾಧ್ಯಕ್ಷರೆ, ಕೇವಲ ಒಂದು ವರ್ಷದಲ್ಲಿ ಅತ್ಯಂತ ಹಿಂದುಳಿದಿರತಕ್ಕಂಥ ಈ ಕ್ಷೇತ್ರಕ್ಕೆ ಇಷ್ಟು ಒತ್ತು ಕೊಟ್ಟಿದ್ದನ್ನು ನಾವು ಯಾರೂ ಕಂಡಿಲ್ಲ, ನಾವು ಯಾರೂ ನೋಡಿಲ್ಲ. ಆದ್ದರಿಂದ ಅರ್ಥವಾಗುತ್ತದೆ, ಸನ್ಮಾನ್ಯ ಶ್ರೀ ದೇವೇಗೌಡರ ಸರ್ಕಾರ ಯಾವ ರೀತಿ ತನ್ನ ಮೂಲ ಉದ್ದೇಶ ಏನಿದೆ, ತನ್ನ ಗುರಿ ಏನಿದೆ, ಅದಕ್ಕೆ ತಲೆಬಾಗಿ ನಡೆಯುತ್ತದೆ ಎಂದು ಹೇಳಿ ಹೆಮ್ಮೆಯಿಂದ ಹೇಳಲು ಇಚ್ಛಿಪಡುತ್ತಿದ್ದೇನೆ. ಅದೇ ರೀತಿ ಕೈಗಾರಿಕಾ ಕ್ಷೇತ್ರಕ್ಕೆ ಜನತಾ ಸರ್ಕಾರ ಬಹಳ ಆದ್ಯತೆ ಕೊಟ್ಟಿದೆ. ಕೈಗಾರಿಕಾಭಿವೃದ್ಧಿ ಕೃಷಿ ಅಭಿವೃದ್ಧಿಯಿಂದ ಅದು ಸಾಧ್ಯ. ಕೃಷಿ ಅಭಿವೃದ್ಧಿ ಮತ್ತು ಕೈಗಾರಿಕಾಭಿವೃದ್ಧಿ they should go together. ಆದ್ದರಿಂದ ಕೈಗಾರಿಕೆಗೂ ಸಹ ಅಷ್ಟೇ ಆದ್ಯತೆಯನ್ನು ಕೊಟ್ಟು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಲಾಗಿದೆ.

"ಇಷ್ಟರದಲ್ಲಿಯೇ ಹೊಸ ಕೈಗಾರಿಕಾ ನೀತಿಯನ್ನು ಹೊರತರಲು ಸರ್ಕಾರ ಮುಂದಾಗಿದೆ" ಎಂದು ಹೇಳಿದ್ದರೆ ಇನ್ನು ವಿದ್ಯುಚ್ಛಕ್ತಿ, ತಮಗೆ ತಿಳಿದ ಹಾಗೆ ನಮ್ಮ ರಾಜ್ಯದಲ್ಲಿ ಮುಂಗಾರು ಮಳೆ ವಿಫಲವಾದ್ದರಿಂದ ಮತ್ತು ಕಲ್ಲಿದ್ದಲು ಕೊರತೆಯಿಂದ ಮಾನ್ಯ ದೇವೇಗೌಡರ ಸರ್ಕಾರ ಒಂದು ಮಹತ್ತರವಾದ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಈ ಒಂದು ಕೃಷಿ ಮತ್ತು ಕೈಗಾರಿಕಾಭಿವೃದ್ಧಿಯನ್ನು ಸಾಧಿಸಬೇಕಾದರೆ ಬೇಕಾಗಿರುವುದು ವಿದ್ಯುಚ್ಛಕ್ತಿ. ರಾಷ್ಟ್ರದಲ್ಲಿ ಈಗ 12 ರಾಜ್ಯಗಳು ತೀವ್ರತರವಾದ ವಿದ್ಯುತ್ ಅಭಾವವನ್ನು ಎದುರಿಸುತ್ತಿವೆ. ಅದರಲ್ಲಿ ಕರ್ನಾಟಕ ರಾಜ್ಯವೂ ಒಂದು. ನಮಗೆ ಈ ರಾಜ್ಯದಲ್ಲಿ 62 ದಶಲಕ್ಷ ಯೂನಿಟ್ ಬೇಡಿಕೆ ಇದೆ. ಆದರೆ ಪೂರೈಕೆ ಆಗುತ್ತಿರುವುದು ಕೇವಲ 42 ದಶಲಕ್ಷ ಯೂನಿಟ್. ಇಷ್ಟು ಲಭ್ಯವಿರತಕ್ಕಂಥ ವಿದ್ಯುಚ್ಛಕ್ತಿಯನ್ನು ಸಮರ್ಪಕವಾಗಿ ವಿದ್ಯುತ್ ನಿಗಮದಿಂದ, ಮಂಡಳಿಯಿಂದ, ಸನ್ಮಾನ್ಯ ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇದ್ದುದರಲ್ಲಿ ಸಮರ್ಪಕವಾಗಿ ವಿತರಣೆ ಮಾಡತಕ್ಕಂಥ ಕೆಲಸವನ್ನು ಜಾಣ್ಮೆಯಿಂದ ಮಾಡಿದ್ದಾರೆ. ಆದರೆ ರಾಜ್ಯದಲ್ಲಿ ತಮಗೆ ತಿಳಿದ ಹಾಗೆ ಅನೇಕ ವಿದ್ಯುತ್ ಯೋಜನೆಗಳು ಸಕಾಲದಲ್ಲಿ ಆಗಲಿಲ್ಲ. ಅದು ತಮಗೂ ಗೊತ್ತಿದೆ. ಅದು ಬೇಡ್ತಿ ಯೋಜನೆ ಇರಬಹುದು, ಅಘಿನಾಶಿನಿ ಇರಬಹುದು, ಕೈಗಾರಿಕಾ ಇರಬಹುದು ಮುಂತಾದ ಯೋಜನೆಗಳು ಸ್ಥಳೀಯ ವಿರೋಧದಿಂದ ಅವು ಸಕಾಲದಲ್ಲಿ ಜಾರಿಗೆ ಬರಲಿಲ್ಲ, ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ಜಿಲ್ಲೆಯಲ್ಲಿರತಕ್ಕಂಥ ಶರಾವತಿ ಕೊನೆಯ ಹಂತದ ಟೇಲ್ ರೇಸ್ (tail race) ಯೋಜನೆ 1989ರಲ್ಲಿ ಮಂಜೂರಾತಿಗೆ ದೊರೆತಿತ್ತು. ಆದರೆ ಪರಿಸರವಾದಿಗಳ ಪ್ರತಿಭಟನೆಯಿಂದ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರಿಂದ ಈ ಕೆಲಸ ಸ್ಥಗಿತಗೊಂಡಿತು.ಈಗ ಪರಿಸರ ಇಲಾಖೆ 1995ರಲ್ಲಿ ಅನುಮತಿ ನೀಡಿದೆ. ಕೆಲಸ ಭರದಿಂದ ನಡೆದಿದೆ. ಈ ಕೆಲಸ ಮುಗಿದರೆ 240 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ನಮಗೆ ದೊರಕುವುದು. ರಾಜ್ಯ ಸರ್ಕಾರ ಖಾಸಗಿಯವರಿಗೆ, ಖಾಸಗಿ ಸಂಸ್ಥೆಗಳಿಗೆ ಸುಮಾರು 30 ಸಾವಿರ ಕೋಟಿ ಬಂಡವಾಳದ 5500 ಮೆಗಾವ್ಯಾಟ್

ವಿದ್ಯುತ್ ಉತ್ಪಾದನೆ ಮಾಡತಕ್ಕ ಕೊಜೆಂಟ್ರಿಕ್ಸ್ ಇರಬಹುದು, ನಾಗಾರ್ಜುನ ಇರಬಹುದು, ಈ ಖಾಸಗಿ ಸಂಸ್ಥೆಗಳಿಗೆ ಅನುಮತಿ ನೀಡಿದೆ. ಇನ್ನು ಕೆಲವಾರು ವರ್ಷಗಳಲ್ಲಿ ರಾಜ್ಯ ವಿದ್ಯುಚ್ಛಕ್ತಿಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವುದರಲ್ಲಿ ಅನುಮಾನವಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ಅಷ್ಟೇ ಪ್ರಮುಖವಾದ ವಿಷಯ ನೀರಾವರಿ. ನೀರಾವರಿ ಯೋಜನೆಗಳ ಬಗ್ಗೆ ರಾಜ್ಯಪಾಲರು ಸಂಕ್ಷಿಪ್ತವಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು "ಕೃಷ್ಣಾ ಭಾಗ್ಯ ಜಲ ನಿಗಮದ" ಮುಖಾಂತರ ಈಗಾಗಲೇ 180 ಕೋಟಿ ರೂಪಾಯಿಗಳನ್ನು ಕ್ರೂಢೀಕರಿಸಲಾಗಿದೆ.

ಇಷ್ಟರಲ್ಲಿಯೇ 250 ಕೋಟಿ ರೂಪಾಯಿಗಳನ್ನು ಕ್ರೂಢೀಕರಿಸುವ ಕಾರ್ಯಕ್ರಮ ಜಾರಿಗೆ ಬರಲಿದೆ. ಪುನರ್ ವಸತಿಯಲ್ಲಿ ಮುಳುಗಡೆಯಾದ ಪ್ರದೇಶದ ಜನಗಳಿಗೆ ಪುನರ್‌ವಸತಿ ಒದಗಿಸುವುದಕ್ಕೋಸ್ಕರ ನಮ್ಮ ಜಿಲ್ಲೆಯವರೇ ಆದಂಥ ದಕ್ಷ ಜಿಲ್ಲಾಧಿಕಾರಿಗಳಾದಂಥ ಜಾಮ್‌ದಾರ್ ಅವರ ನೇತೃತ್ವದಲ್ಲಿ ಪುನರ್ ವಸತಿ ಕಾರ್ಯಕ್ರಮಗಳನ್ನು ಈಗ ತೆಗೆದುಕೊಂಡಿದ್ದಾರೆ. ಈಗ ಬಹಳ ಭರದಿಂದ ಕೆಲಸ ನಡೆದಿದೆ. ಈ ಒಂದು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ, ಯೋಜನೆಯ ಕೆಲಸ ಏನು ಈಗ ನಡೆಯುತ್ತಿದೆ, ಇದೇ ಮಟ್ಟದಲ್ಲಿ ಹಿಂದೆಯೂ ನಡೆದಿದ್ದರೆ ಈ ಒಂದು ಹಿಂದುಳಿದಿರುವಿಕೆ ನಮ್ಮಲ್ಲಿ ಇರುತ್ತಿರಲಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಅತ್ಯಂತ ಮುಖ್ಯವಾದ ವಿಷಯ, ಕಾವೇರಿ ಜಲ ವಿವಾದ ಸಮಸ್ಯೆಯನ್ನು ಶಾಂತಿ ಮತ್ತು ಸಂಧಾನಗಳ ಮುಖಾಂತರ ಪ್ರಜಾಸತ್ತಾತ್ಮಕ ರೀತಿಯಲ್ಲಿ, ವಿರೋಧ ಪಕ್ಷಗಳ ಸಹಕಾರದಿಂದ ಅದನ್ನು ಬಗೆಹರಿಸಿದ್ದು ನಿಜವಾಗಿಯೂ ಬಹಳ ಹೆಮ್ಮೆ ಪಡತಕ್ಕಂಥ ವಿಷಯ. 1974ನೇ ಇಸವಿಯಿಂದ ಇದು ಒಂದು ಜ್ವಲಂತ ಸಮಸ್ಯೆಯಾಗಿತ್ತು. ಅದನ್ನು ಬಗೆಹರಿಸಿ ರಾಷ್ಟ್ರೀಯ ಜಲ ನೀತಿಯನ್ನು ರೂಪಿಸಿ, ಆ ಒಂದು ಕಾವೇರಿ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಮ್ಮ ಈ ಮನೆ ಕಾರಣವಾಗಿದೆ, ಅದಕ್ಕಾಗಿ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಯಾವ ಕಾರಣಕ್ಕೇ ಆಗಲಿ ಬೇರೆಯವರಿಗೆ ನೀರನ್ನು ಬಿಟ್ಟು ಕೊಡುವುದಿಲ್ಲ ಎಂಬುವುದನ್ನು ಇಲ್ಲಿ ರಾಜ್ಯಪಾಲರು ಪರೋಕ್ಷವಾಗಿ ಪ್ರಸ್ತಾಪಿಸಿದ್ದಾರೆ. ಅದಕ್ಕಾಗಿ ನಾನು ಅಭಿನಂದಿಸುತ್ತೇನೆ. ರಾಜ್ಯಪಾಲರ ಭಾಷಣದ ಮೊದಲನೇ ಪುಟದಲ್ಲಿ ಆಡಳಿತ ಚುರುಕುಗೊಳಿಸುವ ಬಗ್ಗೆ ಕುಂದುಕೊರತೆಗಳನ್ನು ಬಗೆಹರಿಸುವ ಅವಶ್ಯಕತೆಯನ್ನು ಸನ್ಮಾನ್ಯ ಶ್ರೀ ರಾಜ್ಯಪಾಲರು ಮಾತನಾಡಿದ್ದಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಜನತಾ ದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರ ಬಗ್ಗೆ ಪರ ವಿರೋಧ ಟೀಕೆಗಳು ಬಂದವು. ಸನ್ಮಾನ್ಯ ಉಪಾಧ್ಯಕ್ಷರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು, ಸಾರ್ವಭೌಮರು. ಸರ್ಕಾರ ಪ್ರಜೆಗಳ ಹತ್ತಿರ ಹೋಗಬೇಕೇ ಹೊರತು ಸರ್ಕಾರದ ಹತ್ತಿರ ಪ್ರಜೆಗಳು ಬರುವುದಿಲ್ಲ. ಅಂಥ ಒಂದು ಮಹತ್ತರವಾದ ಕೆಲಸವನ್ನು ಪ್ರಜಾಸತ್ತಾತ್ಮಕ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಸಾರ್ವಭೌಮರು ಎನ್ನುವುದನ್ನು ಅವರು ಎತ್ತಿ ಹಿಡಿದಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಸಾರ್ವಭೌಮರು ಎನ್ನುವುದನ್ನು ಅವರು ಎತ್ತಿ ತೋರಿಸಿದ್ದಾರೆ. ಇದು ನಿಜವಾಗಿಯೂ ಸಹ ಪ್ರತಿಯೊಬ್ಬ ಪ್ರತಿನಿಧಿಯೂ ಇದಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕು. ಅವರು ಪ್ರತಿ ಜಿಲ್ಲೆಗೆ ಹೋದಾಗ, ಸುಮಾರು ಹಲವಾರು ವರ್ಷಗಳಿಂದ ಜೀವಂತವಾಗಿ ಉಳಿದಿದ್ದ ಅನೇಕ ಸಮಸ್ಯೆಗಳು ಪರಿಹಾರವಾಗಿವೆ. ಆದ್ದರಿಂದ ಜನತಾ ದರ್ಶನ ಕಾರ್ಯಕ್ರಮ ಬಹಳ ಪರಿಣಾಮಕಾರಿಯಾಗಿದೆ. ಅದೇ ರೀತಿಯಲ್ಲಿ ಇತರೇ ಮಂತ್ರಿಗಳು ಪ್ರತಿ ತಾಲ್ಲೂಕಿನಲ್ಲಿಯೂ ಸಹಾ ಜನತಾ ದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಶಾಸಕರು ಏನೇ ಕಾಗದ ಬರೆಯಲಿ ಅದ್ಕಕೆ ಉತ್ತರವನ್ನು ಬರೆಯುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಿಂದ ಅಧಿಕಾರಿಗಳಿಗೆ ಏನು ಕಾಗದ ಹೋಗುತ್ತದೆ ಅದನ್ನು ತ್ರಿಕರಣಪೂರ್ವಕವಾಗಿ ಅಧಿಕಾರಿಗಳು ಜಾರಿಗೆ ತರಬೇಕು. ಅದನ್ನು ಇಲ್ಲಿ ಒತ್ತಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗ ತಮ್ಮ ಇಲಾಖೆಯ ಮೇಲೆ they should have control over their departments. ತಮ್ಮ ಇಲಾಖೆಯ ಮೇಲೆ ಕಂಟ್ರೋಲ್ ಇರಬೇಕಾದರೆ ಪ್ರತಿನಿತ್ಯ ಬೆಂಗಳೂರಿನಲ್ಲಿ ಇರುವಾಗ ಅವರು ಕಛೇರಿಗೆ ಅಟೆಂಡ್ ಆಗಬೇಕು. That is very important. ಎರಡನೆಯದಾಗಿ, ಕೆಲವು ಮಂತ್ರಿಗಳು ಬರೀ ತಮ್ಮ ಜಿಲ್ಲೆ, ತಮ್ಮ ಭಾಗ ಇಷ್ಟನ್ನೇ ಪ್ರವಾಸ ಮಾಡುತ್ತಿದ್ದಾರೆ. ಇತರ ಜಿಲ್ಲೆಗಳಲ್ಲಿಯೂ ಪ್ರವಾಸ ಮಾಡಿ ಜನ ಸಂಪರ್ಕ, ಜನಗಳ ಸೇವೆಗೆ ಪಾತ್ರರಾಗುವಂತಹ ಕೆಲಸ ಮಾಡಬೇಕು ಎಂದು ಹೇಳಿ ಇಷ್ಟನ್ನು ಮಾತ್ರ ನನ್ನ ಅನುಭವದಿಂದ ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೇ, ಒಳ್ಳೆಯ ಹಾಗೂ ಪರಿಣಾಮಕಾರಿಯಾದ ಆಡಳಿತ ನಮಗೆ ದೊರಕಬೇಕಾದರೆ public accountability bill, ಸಾರ್ವಜನಿಕ ಹೊಣೆಗಾರಿಕೆಯ ಬಿಲ್ಲನ್ನು ಈ ಮನೆಯಲ್ಲಿ ಮಂಡಿಸಬೇಕಾಗುತ್ತದೆ. ಇದನ್ನು ಆದಷ್ಟು ಬೇಗ ಮಂಡಿಸಬೇಕು. ಮುಖ್ಯ ಮಂತ್ರಿಗಳಿಂದ ಹಿಡಿದು ತಹಶೀಲ್ದಾರ್‌ರವರೆಗೆ ತಮ್ಮ ಜವಾಬ್ದಾರಿಯನ್ನು ಈ ರಾಜ್ಯದ ಜನತೆಗೆ ನಿರ್ವಹಿಸಬೇಕಾದರೆ this is a must, ಪಬ್ಲಿಕ್ ಅಕೌಂಟಬಿಲಿಟಿ ಬಿಲ್ಲನ್ನು ಈ ಮನೆಯಲ್ಲಿ ಮಂಡಿಸುವುದು ಅತ್ಯಶ್ಯಕವಾಗುತ್ತದೆ. ಇಷ್ಟನ್ನು ಈ ಸಂದರ್ಭದಲ್ಲಿ ಸಂಕ್ಷಿಪ್ತವಾಗಿ ಸಭೆಯ ಗಮನಕ್ಕೆ ತಂದು, ರಾಜ್ಯಪಾಲರ ಭಾಷಣವು ಆರ್ಥಿಕ, ಸಾಮಾಜಿಕ, ಆಡಳಿತ ಹಾಗೂ ರಾಜಕೀಯ ಕ್ಷೇತ್ರಗಳನ್ನು ಕುರಿತು ಅಗತ್ಯವಾದ ಪ್ರಸ್ತಾವನೆ ಮಾಡಿ ರಾಜ್ಯದ ಒಟ್ಟಾರೆ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅವರಿಗೆ ನಾವು ಅಭಿನಂದಿಸಬೇಕಾಗಿದೆ. ನಾನು ಸದನದ ಪರವಾಗಿ, ನನ್ನ ಪರವಾಗಿ ಮತ್ತು ತಮ್ಮ ಪರವಾಗಿ ಅಭಿನಂದನೆಯನ್ನು ಸಲ್ಲಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸುರೇಶ್ ಕುಮಾರ್‌ರವರು

(ಮಾನ್ಯ ಸದಸ್ಯರು ಆ ಸಮಯದಲ್ಲಿ ಸದನದಲ್ಲಿ ಇರಲಿಲ್ಲವಾದ ಕಾರಣ ಸದಾನಂದ ಗೌಡರು ಮಾತನಾಡಬೇಕೆಂದು ಉಪಾಧ್ಯಕ್ಷರು ಸೂಚಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾಂಗ್ರೆಸ್ ಆಯಿತು, ದಳ ಆಯಿತು. ನಮ್ಮನ್ನು ಕರೆಯುತ್ತೀರಿ ಎಂದು ತಿಳಿದುಕೊಂಡಿದ್ದೇವೆ. ಅವರನ್ನು ಕರೆಯುತ್ತೀರಿ ಎಂದು ಹೇಳಿದ್ದರು. ಅವರು ರೆಡಿ ಇದ್ದರು. ಈಗ ಹೊರಗಡೆ ಹೋಗಿದ್ದಾರೆ.

ಉಪಾಧ್ಯಕ್ಷರು : ಸಭಾಪತಿಯವರೇ ನೀವು ಮಾತನಾಡುತ್ತೀರೋ? ಬಸವರಾಜುರವರೇ ತಾವು ಮಾತನಾಡಿ

+ ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ ಕ್ಷೇತ್ರ) : ಆದರಣೀಯ ಉಪಾಧ್ಯಕ್ಷರೇ, ತಾವು ನನಗೆ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ನೀಡುತ್ತಿರುವುದಕ್ಕೆ ನನ್ನ ಕೃತಜ್ಞತೆಗಳನ್ನು ಮುಂಗಡವಾಗಿ ತಿಳಿಸುತ್ತಾ ಕೆಲವು ವಿಷಯಗಳನ್ನು ಈ ಸದನಕ್ಕೆ ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ನಾನು ಇಚ್ಛಿಪಡುತ್ತಿದ್ದೇನೆ. 1994ರಲ್ಲಿ ನಡೆದ ಚುನಾವಣೆಯಲ್ಲಿ ಗೆದ್ದು ಬಂದಾಗ ನನ್ನ ಕ್ಷೇತ್ರದ ಜನತೆ ಈ ಸರ್ಕಾರದಿಂದ ಬಹಳಷ್ಟು ಅಪೇಕ್ಷಿಸಿದ್ದರು. ಕನಿಷ್ಠ ಮೂಲಭೂತ ಸೌಕರ್ಯಗಳಿಂದ ನಾವು ಬಹಳಷ್ಟು ವರ್ಷಗಳಿಂದ ವಂಚಿತರಾಗಿದ್ದೇವೆ, ಆ ಮೂಲಭೂತ ಸೌಕರ್ಯಗಳನ್ನಾದರೂ ಈ ಹೊಸ ಸರ್ಕಾರ ಮಾಡಿ ಕೊಡುತ್ತದೆ ಎನ್ನುವ ಎಂದು ಭಾವನೆ ಅವರ ಮನಸ್ಸಿನಲ್ಲಿ ಇತ್ತು. ಮೂಲಭೂತ ಸೌಕರ್ಯಗಳಲ್ಲಿ

ಕನಿಷ್ಠವಾಗಿ ಹೇಳಬೇಕು ಎಂದರೆ, ಮೂರರ ಬಗ್ಗೆ ಮಾತ್ರ ನಾನು ಚಿಂತನೆ ಮಾಡಲಿಕ್ಕೆ ಈ ಸದನದಲ್ಲಿ ಇಚ್ಛಿಪಡುತ್ತಿದ್ದೇನೆ. ಮೊದಲನೆಯದಾಗಿ ಸಂಪರ್ಕಕ್ಕೆ ಬಹಳ ಆದ್ಯತೆಯನ್ನು ನಮ್ಮ ಕೊಡಗು ಜನತೆ ನೀಡಿದರು. 1947ರಿಂದ ಇತ್ತೀಚಿನ ದಿನಗಳವರೆಗೆ ಎಷ್ಟೋ ಸರ್ಕಾರಗಳು ಬಂದು ಹೋದವೋ, ಅಷ್ಟು ಸರ್ಕಾರಗಳು ಸಮರ್ಪಕ ರೀತಿಯಲ್ಲಿ ಕೆಲಸ ಮಾಡಿದ್ದರೆ ಇವತ್ತು ಕೊಡಗು ಜಿಲ್ಲೆಯಲ್ಲಿ ಒಂದೇ ಒಂದು ಕಿಲೋಮೀಟರ್ ರಸ್ತೆಯನ್ನು ದುರಸ್ತಿಪಡಿಸುವುದಾಗಲಿ, ನವೀಕರಣಗೊಳಿಸುವುದಾಗಲೀ ಮಾಡಬೇಕಾದಂಥ ಅವಶ್ಯಕತೆ ಇರಲಿಲ್ಲ.

ಸರ್ಕಾರಗಳು ಬಂದವು, ಹೋದವು. ಆದರೆ ಯಾವುದೇ ಒಂದು ಸರ್ಕಾರ ಆ ರಸ್ತೆಗಳನ್ನು ಸರಿಮಾಡಿಸಬೇಕು, ಈ ಜನತೆಗೆ ರಸ್ತೆ ಸಂಪರ್ಕ ಸರಿಮಾಡಿಸಿಕೊಡಬೇಕು ಎನ್ನುವಂಥ ಆಲೋಚನೆಯನ್ನೇ ಅವರು ಮಾಡಿಲ್ಲ. ಹೀಗಾಗಿ 1947ರಿಂದ 1995ರ ವರೆಗೆ ಈಗಿನ ಸರ್ಕಾರ ಬರುವ ವರೆಗೂ ಕೂಡ ಆ ರಸ್ತೆಗಳ ಅವ್ಯವಸ್ಥೆ ಯಾವ ರೀತಿ ಇದೆ ಎಂದು ಹೇಳಬೇಕೆಂದರೆ ಅದನ್ನು ವರ್ಣಿಸುವುದಕ್ಕೆ ಪದಗಳೇ ಆಗುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅಲ್ಲಿಯ ಜನತೆ ಜೀವವನ್ನು ಕೈಯಲ್ಲಿಟ್ಟುಕೊಂಡು ಓಡಾಡುವಂಥ ಪರಿಸ್ಥಿತಿ ಇದೆ. ಅಷ್ಟು ದುಸ್ತರವಾಗಿದೆ. ಮುಖ್ಯವಾಗಿ ಆ ರಸ್ತೆಗಳಲ್ಲಿ 3 ವಿಧಗಳಿವೆ ಎನ್ನುವುದನ್ನು ಈ ಸದನದ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಮೊದಲನೆಯದಾಗಿ ಜಿಲ್ಲಾ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಅಂತರರಾಜ್ಯ ಹೆದ್ದಾರಿಗಳು. ಈ ಮೂರು ರೀತಿಯ ಹೆದ್ದಾರಿಗಳು ಇದ್ದರೂ ಕೂಡ ಅವುಗಳನ್ನು ಒಂದು ವ್ಯವಸ್ಥಿತ ರೀತಿಗೆ ತರಬೇಕು ಎನ್ನುವುದರ ಬಗ್ಗೆ ಯಾರೂ ಚಿಂತನೆ ಮಾಡಿಲ್ಲ. 1994ರಿಂದ ಈಚೆಗೆ ಈ ಸದನದಲ್ಲಿ ಮತ್ತು ಅಧಿಕಾರಿಗಳಲ್ಲಿ, ಸಚಿವರಲ್ಲಿ ಎಲ್ಲರಲ್ಲೂ ನಾನು ಮೊರೆ ಹೋಗಿದ್ದಾಯಿತು. ಆದರಿಂದ ಯಾವುದೇ ರೀತಿಯ ಫಲ ಸಿಗಲಿಲ್ಲ ಎಂದು ನಾನು ನೊಂದುಕೊಂಡು ತಿಳಿಸಬೇಕಾಗಿದೆ. ಕಾರಣ ಇಷ್ಟೆ, 1994ರಲ್ಲಿ ಹೊಸ ಸರ್ಕಾರ ಬಂತು, ಹಿಂದಿನ ಸರ್ಕಾರ ಹೋಯಿತು, ಈ ಸರ್ಕಾರದವರು ಹೊಸದಾಗಿ ಚಿಂತನೆ ಮಾಡುತ್ತಾರೆ, ಈ ಸರ್ಕಾರದಿಂದಲಾದರೂ ಒಂದಷ್ಟು ಕೆಲಸವನ್ನು ನಾವು ಮಾಡಿಸಬಹುದು, ಈ ಸರ್ಕಾರದಲ್ಲಿ ಪ್ರಗತಿಶೀಲರಾದಂಥ ಮಂತ್ರಿಗಳು ಇದ್ದಾರೆ, ಎನ್ನುವ ಭಾವನೆಯಿಂದ ನಾನು ಅಧಿಕಾರಿಗಳನ್ನು, ಮಂತ್ರಿಗಳನ್ನು ಮತ್ತು ಈ ಸದನದಲ್ಲಿ ಇದ್ದವರನ್ನು ನಾನು ಕೇಳಿಕೊಂಡಿದ್ದಾಯಿತು. 1994ರಲ್ಲಿ ಯಾವ ರೀತಿಯಾಗಿ ರಸ್ತೆಗಳು ಇದ್ದವೋ ಅದೇ ರೀತಿಯಲ್ಲಿ ಇವತ್ತೂ ಸಹ ಇವೆ.

ಇದರ ಬಗ್ಗೆ ತಮ್ಮ ಮೂಲಕ ಸರ್ಕಾರವನ್ನು ನಾನು ಮತ್ತೊಮ್ಮೆ ಪ್ರಾರ್ಥಿಸಿಕೊಳ್ಳುತ್ತಿರುವುದೇನೆಂದರೆ ಆ ಒಂದು ಇಲಾಖೆ ಇದೆಯೋ, ಇಲ್ಲವೋ ಎನ್ನುವುದನ್ನು ಸರ್ಕಾರದವರು ನನಗೆ ತಿಳಿಸುವಂಥ ಒಂದು ಕೆಲಸವನ್ನು ಮಾಡಬೇಕಾಗಿದೆ. ಏಕೆಂದರೆ ಆ ಇಲಾಖೆಯಲ್ಲಿ ಇರುವಂಥ ಅಧಿಕಾರಿಗಳು ಕೇವಲ ಸಂಬಳ ಪಡೆದುಕೊಳ್ಳುವುದಕ್ಕೆ ಮಾತ್ರ ಕೊಡಗು ಜಿಲ್ಲೆಯಲ್ಲಿ, ಅಂದರೆ ನನ್ನ ವಿರಾಜಪೇಟೆ ತಾಲ್ಲೂಕಿನಲ್ಲಿ ಇರುವುದು ಬೇಡ. ಆ ತರಹ ಕೆಲಸ ಮಾಡಲಿಕ್ಕೆ ಇಚ್ಛೆ ಇಲ್ಲ ಎಂದರೆ ಬೇರೆ ಇನ್ನು ಯಾವುದಾದರೂ ಜಿಲ್ಲೆಗೆ ಹೋಗಲಿ. ಆ ಜಿಲ್ಲೆಯ ಉಸ್ತುವಾರಿಯನ್ನು ಬೇರೆ ಇನ್ನಾವುದಾದರೂ ತಾಲ್ಲೂಕಿಗೆ ವಹಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಕುಡಿಯುವ ನೀರಿನ ಬೇಡಿಕೆ. ಕುಡಿಯುವ ನೀರಿನ ಬೇಡಿಕೆ ಬಗ್ಗೆ ಕೂಡ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಇಷ್ಟಪಡುವುದು ಏನೆಂದರೆ ಕುಡಿಯುವ ನೀರಿಗೋಸ್ಕರ ಬೇಕಾದಷ್ಟು ಮನವಿಗಳನ್ನು ಯೋಜನೆಗಳನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೆ ಆದರೆ ಯಾವುದೇ ಒಂದು ಸಂದರ್ಭದಲ್ಲಿ ಕೂಡ ಆ ಮನವಿಗಳಿಗೆ ಪುರಸ್ಕಾರ ಸಿಕ್ಕಿಲ್ಲವೆಂದು ನನ್ನ ಒಂದು ವೇದನೆಯಾಗಿದೆ. ಏಕೆ ಈ ಸರ್ಕಾರ ಜಡಭರಿತವಾಗಿದೆ? ಕುಡಿಯುವ

ನೀರಿಗೆ ಏಕೆ ಆದ್ಯತೆ ಕೊಡುತ್ತಾ ಇಲ್ಲ? ಕೆಲವು ಸಂದರ್ಭದಲ್ಲಿ ನಾನು ಸಲಹೆ ಕೂಡ ಮಾಡಿದ್ದೆ. ನನ್ನ ಪ್ರದೇಶ ಅಂದರೆ ನಾನು ಪ್ರತಿನಿಧಿಸಿರುವಂಥ ಕ್ಷೇತ್ರ ಗುಡ್ಡಗಾಡು ಪ್ರದೇಶದಿಂದ ತುಂಬಿರುವಂಥದ್ದು ಅಲ್ಲಿ ನೀವು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾದರೆ ಕೊಳವೆ ಬಾವಿ ತೋಡಿಸುವುದರ ಬದಲು ನೀವು ತೆರೆದ ಬಾವಿಯನ್ನು ಮಾಡಿ ಅದಕ್ಕೆ ಆದ್ಯತೆ ಕೊಡಿ ಎಂದು ಹೇಳಿದೆ. ಸರ್ಕಾರ ಆ ನಿಟ್ಟಿನಲ್ಲಿ ಯಾರ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳದೆ ಕೇವಲ ಕೊರೆಯುವ ಬಾವಿ ತೋಡಿಸುವುದರಲ್ಲಿ ಮಗ್ನವಾಗಿದೆ. ಇದರಿಂದ ಪ್ರಯೋಜನ ಬಹಳಷ್ಟು ಕಡಿಮೆ ಇದೆಯೆಂದು ಹೇಳಿದರೂ ಕೂಡ ಅದರ ಬಗ್ಗೆ ಸರ್ಕಾರ ಗಮನ ಕೊಡುತ್ತಾ ಇಲ್ಲ. ಆದ್ದರಿಂದ ತಮ್ಮ ಮೂಲಕ ಈ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಕುಡಿಯುವ ನೀರಿಗೆ ಆದ್ಯತೆ ಕೊಟ್ಟು ಅಲ್ಲಿನ ಜನತೆ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಒಂದು ಅವಕಾಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ತಮಗೆ ಗೊತ್ತಿದೆ, ಕೊಡಗು ಜಿಲ್ಲೆಯಿಂದ ಕಾವೇರಿ ಉದ್ಭವವಾಗಿ ಹರಿಯುತ್ತಿದ್ದಾಳೆ. ಇಡೀ ಕರ್ನಾಟಕದ ಒಂದಷ್ಟು ಭಾಗದ ಜನರಿಗೆ ನೀರು ಕೊಡುವುದರ ಜೊತೆಗೆ ಕೂಡ ಬೇರೆ ರಾಜ್ಯದವರಿಗೂ ಕೂಡ ನೀರು ಕೊಡುತ್ತಾ ಇದ್ದಾರೆ. ಈ ತರಹ ಇರುವಂಥ ಜಿಲ್ಲೆಯಲ್ಲಿ ನಾವು ನೀರಿಗಾಗಿ ಪರಿತಪಿಸುತ್ತಾ ಇದ್ದೇವೆ ಎಂದರೆ ನಿಜಕ್ಕೂ ಶೋಚನೀಯ ಸಂಗತಿಯಾಗಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಒಂದು ತಕ್ಷಣ ಕ್ರಮ ಕೈಗೊಂಡು ಈ ವರ್ಷವಾದರೂ ಅಲ್ಲಿಯ ಕುಡಿಯುವ ನೀರಿನ ಬವಣೆಯನ್ನು ತೀರಿಸುವಂಥ ಒಂದು ಕೆಲಸ ಮಾಡಲಿ ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಮೂರನೆಯದಾಗಿ, ಕನಿಷ್ಟ ಬೇಡಿಕೆಗಳಲ್ಲಿ ವಿದ್ಯುತ್ ಕೂಡ ಒಂದು ಇದೆ. ಈ ವಿದ್ಯುತ್‌ನ ಬವಣೆ ಎಂದರೆ ನಮ್ಮ ಕೊಡಗು ಜಿಲ್ಲೆಯಲ್ಲಿ ಇಡೀ 20 ಜಿಲ್ಲೆಗಳಿಗೆ ಹೋಲಿಕೆಯನ್ನು ಮಾಡಿದಾಗ ಕೊಡಗು ಜಿಲ್ಲೆಗೆ ಸರಬರಾಜು ಆಗುವಂಥ ವಿದ್ಯುತ್‌ನ ಪ್ರಮಾಣ ಅತೀ ಕನಿಷ್ಟವಾಗಿದೆ. ಆ ಅತಿ ಕನಿಷ್ಟ ಮಟ್ಟದ ವಿದ್ಯುತ್ ಪ್ರಮಾಣದಲ್ಲಾದರೂ ಸರಬರಾಜು ಸರಿಯಾಗಿ ಆಗುತ್ತಿದೆಯೇ ಎಂದರೆ ಅದು ಕೂಡ ಆಗುತ್ತಿಲ್ಲ. ಇದರ ಬಗ್ಗೆ ನಾವು ಸರ್ಕಾರವನ್ನು ಬಹಳಷ್ಟು ಸಲ ಒತ್ತಾಯ ಮಾಡಿದ್ದೇವೆ. ನೀವು ಸರಬರಾಜು ಮಾಡುವಂಥ ವಿದ್ಯುತ್‌ನಲ್ಲಿ ಲೋ ವೋಲ್ಟೇಜ್ ಇರುವುದರಿಂದ ನಮಗೆ ಯಾವುದೇ ಒಂದು ಪ್ರಯೋಜನ ಆಗುತ್ತಿಲ್ಲ, ದಯವಿಟ್ಟು ಇದರ ಬಗ್ಗೆ ನೀವು ಗಮನಹರಿಸಬೇಕೆಂದು ಕೂಡ ನಾನು ಎಷ್ಟೋ ಸಾರಿ ಕೇಳಿಕೊಂಡಿದ್ದೆ. ಆದರೆ ಸರ್ಕಾರದ ವತಿಯಿಂದ ಯಾವುದೇ ಒಂದು ಸ್ಪಷ್ಟವಾದಂಥ ನಿಖರವಾದಂಥ ಉತ್ತರ ಬರುತ್ತಿಲ್ಲ, ಈ ವೋಲ್ಟೇಜ್ ಡ್ರಾಪ್ ಆಗುತ್ತಿರುವುದು ನಿಮಗೆ ಒಬ್ಬರಿಗೆ ಮಾತ್ರ ಅಲ್ಲ, ಇಡೀ ರಾಜ್ಯಕ್ಕೆ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಯಾವುದೇ ಒಂದು ವಿದ್ಯುತ್ ಕಡಿತ ಇಲ್ಲದೆ ಇದ್ದಾಗಲೂ ಕೂಡ ಇಡೀ ಜಿಲ್ಲೆ ಈ ವಿದ್ಯುತ್ತಿನ ಕಡಿತಕ್ಕೆ ಒಳಪಟ್ಟಿತು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಯಾವುದೇ ಒಂದು ಸಂದರ್ಭದಲ್ಲಿ ಕೂಡ ನಮದೆ ದಿನದ 24 ಗಂಟೆಗಳು ಕೂಡ ವಿದ್ಯುತ್ ನಮ್ಮ ಕೊಡಗು. ಜಿಲ್ಲೆಗೆ ಸಿಗುತ್ತಿರಲಿಲ್ಲ. ಅಂತಹ ಒಂದು ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿತ್ತು. ಈಗ ಈ ಹೊಸ ಸರ್ಕಾರ ಬಂದಮೇಲೆ ಆ ಹಳೆಯ ಪರಿಸ್ಥಿತಿಯನ್ನು ಬದಲಾಯಿಸುವಂಥ ಒಂದು ವ್ಯವಸ್ಥೆಯನ್ನು ಮಾಡುತ್ತಾರೆ ಎಂದರೆ ಅದು ಕೂಡ ಈ ಸರ್ಕಾರ ಮಾಡಲಿಲ್ಲ. ಇದರ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುವುದು ಏನೆಂದರೆ ದಯವಿಟ್ಟು ಕೊಡಗು ಜಿಲ್ಲೆಗೆ ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ವಿದ್ಯುತ್‌ನ್ನು ಕೊಡುವಂಥ ಒಂದು ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಬಹುಶಃ ಈ ಸದನದಲ್ಲಿ ಇರುವವರಿಗೆ ಕೆಲವು ವಿಷಯ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಫೆಬ್ರುವರಿ ಮಾರ್ಚ್ ತಿಂಗಳು ಬಂತು

ಎಂದರೆ ಕಾಫಿ ಬೆಳೆಗಾರರು ವಿದ್ಯುತ್‌ನ್ನು ನಂಬಿಕೊಂಡಿರುತ್ತಾರೆ. ಏಕೆಂದರೆ ಸಿಬ್ಲಿಂಕರ್ ಮೂಲಕ ಅವರು ನೀರನ್ನು ಕಾಫಿ ಬೆಳೆಗೆ ನೀರನ್ನು. ಹಾಯಿಸಲಿಲ್ಲ ಎಂದರೆ ಖಂಡಿತವಾಗಿಯೂ ಕೂಡ ಅಲ್ಲಿ ಕಾಫಿ ಬೆಳೆ ಬರುವುದಿಲ್ಲ. ಬಹಳ ಗಂಭೀರವಾದಂಥ ಪರಿಸ್ಥಿತಿ ಅಲ್ಲಿನ ಜನತೆಗೆ ನಿರ್ಮಾಣವಾಗುತ್ತದೆ. ಕೇವಲ ಈ ನೀರನ್ನು ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಕಾಫಿ ಬೆಳೆಗೆ ಕೊಡಲಿಲ್ಲ ಎಂದರೆ ಅವರ ಪರಿಸ್ಥಿತಿ ಹೇಳಲಿಕ್ಕೆ ಅಸಾಧ್ಯ ಆಗುತ್ತದೆ. ಅವರ ಜೀವನದಲ್ಲಿ ಏರುಪೇರಾಗುತ್ತದೆ. ಆದ್ದರಿಂದ ದಯವಿಟ್ಟು ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ನಂತರ, ವಿದ್ಯುತ್‌ನ ಬಗ್ಗೆ ಇನ್ನೊಂದು ವಿಷಯವನ್ನು ಸರ್ಕಾರಕ್ಕೆ ತಿಳಿಸುವುದೇನೆಂದರೆ ವಿದ್ಯಾರ್ಥಿಗಳು ಮಾರ್ಚ್, ಏಪ್ರಿಲ್ ತಿಂಗಳು ಬಂತು ಎಂದರೆ ಪರೀಕ್ಷೆ ಸಮಯದಲ್ಲಿ ಬಹಳಷ್ಟುತೊಂದರೆ ಅನುಭವಿಸುತ್ತಿದ್ದಾರೆ. ಅವರ ಭವಿಷ್ಯ ಮಸುಕಾಗುವಂಥ ಒಂದು ಪರಿಸ್ಥಿತಿಯ ನಿರ್ಮಾಣವನ್ನು ಈ ಹೊಸ ಸರ್ಕಾರ ಮಾಡುತ್ತಾ ಇದೆ. ಈ ಸರ್ಕಾರ ಹೊಸ ಕೆಲಸ ಮಾಡುವಂಥ ಆದ್ಯತೆಯನ್ನು ಇಟ್ಟುಕೊಂಡಿದ್ದರೂ ಸಹ ವಿದ್ಯುತ್ ಬಗ್ಗೆ ಏಕೆ ಆದ್ಯತೆ ಕೊಡುತ್ತಿಲ್ಲವೆಂದು ನನಗನ್ನಿಸುತ್ತಿದೆ. ಈಗ ನಮ್ಮ ರಾಜ್ಯದಿಂದ ಬೇರೆ ರಾಜ್ಯಕ್ಕೆ ವಿದ್ಯುತ್‌ನ್ನು ಕೊಡುತ್ತಿದ್ದೇವೆ. ಆ ರಾಜ್ಯದಲ್ಲಿ ಈ ತರಹ ಕಡಿತ ಇಲ್ಲ. ಬಹುಶಃ ತಮಗೆ ಗೊತ್ತಿರಬಹುದು, ನನಗೆ ಗೊತ್ತಿರುವಮಟ್ಟಿಗೆ ಗೋವಾಕ್ಕೆ ಕರ್ನಾಟಕದಿಂದ ವಿದ್ಯುತ್ ಕೊಡುತ್ತಿದ್ದರೆ ಎಂದೆನಿಸುತ್ತದೆ. ಅಲ್ಲಿ ಮಾತ್ರ ಆ ವಿದ್ಯುತ್‌ನ ಕೊರತೆ ಇಲ್ಲ. ಆದರೆ ನಾವು ಕೊಡುತ್ತಿರುವಂಥ ನಮ್ಮ ಪ್ರದೇಶದಲ್ಲಿ ಆ ವಿದ್ಯುತ್‌ನ ಕೊರತೆ ಇದೆ. ಏಕೆ ಇಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ನಾವು ಈಗ ಕ್ರಿಕೆಟ್‌ಗೆ ಯಾವ ರೀತಿಯ ಆದ್ಯತೆಯನ್ನು ಕೊಡುತ್ತಿದ್ದೇವೋ, ಕ್ರಿಕೆಟ್ ಬರುವಂಥ ಸಂದರ್ಭದಲ್ಲಿ ವಿದ್ಯುತ್ ಸಂಪೂರ್ಣವಾಗಿ ಇರಬೇಕು ವಿದ್ಯಾರ್ಥಿಗಳ ಮೇಲೂ ಕೂಡ ತಾವು ಗಮನ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಆದ್ದರಿಂದ ವಿದ್ಯುತ್ ಸರಬರಾಜಿನ ಸಮರ್ಪಕ ವಿತರಣೆಯನ್ನು ದಯವಿಟ್ಟು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಅಧ್ಯಕ್ಷರೆ, ಸೆಪ್ಟೆಂಬರ್ 11ನೇ ತಾರೀಖು ಈ ಸದನದಲ್ಲಿ ಕೆಲವು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರು ಶೋಷಿತರಾಗುತ್ತಿರುವುದು, ಅವರಿಗೆ ನೀಡುತ್ತಿರುವಂಥ ಸೌಲಭ್ಯವನ್ನು ಬೇರೆ ಜನಾಂಗದವರು ಕಿತ್ತುಕೊಳ್ಳುತ್ತಿರುವುದನ್ನು ಪುರಾವೆ ಸಹಿತ ಈ ಸದನದಲ್ಲಿ ನಾನು ಮಂಡನೆ ಮಾಡಿದ್ದೆ. ಆದರೆ ಈ ಸದನದಲ್ಲಿ ಮಂಡನೆ ಮಾಡಿದ ನಂತರ ಆ ವ್ಯಕ್ತಿಗಳಿಗೆ ಏನಾದರೂ ಸೂಕ್ತವಾದಂಥ ಶಿಕ್ಷೆಯನ್ನು ಕೊಡಬಹುದು ಎಂಬು ನಾನು ಇದುವರೆವಿಗೆ ಕಾಯ್ದೆ.

ಅಂತಹ ಯಾವುದೇ ಒಂದು ಕೆಲಸ ಕೂಡ ಆಗಿಲ್ಲ. ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ನಾವು ಪುರಾವೆ ಸಹಿತ ಈ ಸದನದಲ್ಲಿ ಹೇಳಿದಂಥ ವ್ಯಕ್ತಿ ಮೇಲೆ ಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲ ಎನ್ನುವುದನ್ನು ಚಿಂತನೆ ಮಾಡಬೇಕಾಗಿದೆ. ಈ ತರಹ ಯಾವುದೇ ಒಂದು ಅಧಿಕಾರಿ ಮೇಲಾಗಲಿ ನಾವು ಒಂದು ಕಂಪ್ಲೇಟನ್ನು ನೀಡಿದಾಗ ಆ ಕಂಪ್ಲೇಟ್‌ಗೆ ಮಾನ್ಯತೆ ಸಿಗಬೇಕು. ಆದರೆ ನಾನು ಸದನದಲ್ಲಿ ಪ್ರಸ್ತಾವನೆಯನ್ನು ಮಾಡಿದ್ದೂ ಕೂಡ ಯಾವುದೇ ಮಾನ್ಯತೆ ಸಿಗದೆ ವ್ಯರ್ಥವಾಗಿದ್ದು ನೋಡಿ ನನಗೆ ಬಹಳಷ್ಟು ದುಃಖವಾಗುತ್ತಾ ಇದೆ ಮತ್ತು ಇದೇ ಸದನದಲ್ಲಿ ಹೇಳಿದ್ದೆ. ಈ 224 ಜನ ಇರುವಂಥ ಒಂದು ಸದನದಲ್ಲಿ ಪರಿಶಿಷ್ಟ ಪಂಗಡವರಿಗೆ ಅವರು ಪ್ರತಿನಿಧಿಸುತ್ತಿರುವಂಥ ಅವರ ಜನಸಂಖ್ಯೆಗನುಗುಣವಾಗಿ ಪ್ರತಿ ಶತಃ 3ಎಂದರೆ ಕನಿಷ್ಟ 7 ಜನ ಇರಬೇಕಾದಂಥ ಈ ಸದನದಲ್ಲಿ ಕೇವಲ ನಾವು ಇಬ್ಬರು ಇದ್ದೇವೆ. ಇದಕ್ಕೆ ನೀವು ಈ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು

ನಾನು ಕೇಳಿಕೊಂಡಿದ್ದೆ. ಆದರೆ ಆ ದಿನಗಳಲ್ಲಿ ಮಾನ್ಯ ಸಭಾಧ್ಯಕ್ಷರು ಹೇಳಿದ್ದರು, ಇದು ಲೋಕಸಭೆ ವಿಷಯ. ನೀವು ಅಲ್ಲಿಗೆ ಹೋದರೆ ಉತ್ತಮ ಎಂದು ಹೇಳಿದರು. ಆದರೆ ಅದೇ ಮಹಿಳೆಯರಿಗೆ ಮೀಸಲಾತಿಯನ್ನು ಶಿಫಾರಸ್ಸು ಮಾಡುವಾಗ ನೀವು ತೆಗೆದುಕೊಂಡಿರತಕ್ಕಂಥ ಕಾಳಜಿಯನ್ನು ಈ ಪರಿಶಿಷ್ಟ ವರ್ಗದವರಿಗೆ ಏಕೆ ತೆಗೆದುಕೊಳ್ಳಲಿಲ್ಲ ಎಂದು ನನಗೆ ಅರ್ಥ ಆಗುತ್ತಿಲ್ಲ. ಕೇವಲ ನಿಮಗೆ ಯಾವುದನ್ನು ಶಿಫಾರಸ್ಸು ಮಾಡಬೇಕೆಂದುತೋರುತ್ತದೆಯೋ ಅಂತಹದನ್ನು ಮಾತ್ರ ನೀವು ತೆಗೆದುಕೊಳ್ಳುತ್ತಿದ್ದೀರಿ, ಆದರೆ ಜನರಿಗೆ ಅಂದರೆ ಮೂಲಭೂತವಾಗಿ ಬಹಳಷ್ಟು ಶೋಷಿತ ವರ್ಗದವರಿಗೆ ಅವರ ಬಗ್ಗೆ ಬರಿ ಅನುಕಂಪವನ್ನು ಬಾಯಲ್ಲಿ ಹೇಳುತ್ತಿದ್ದೀರೇ ವಿನಃ ಖಂಡಿತವಾಗಿಯೂ ನಿಮ್ಮ ಹೃದಯಪೂರ್ವಕವಾಗಿ ಹೇಳುತ್ತಿಲ್ಲ ಎಂದು ನಾನು ನೊಂದುಕೊಂಡು ಈ ದಿನ ಈ ಸದನದ ಮುಂದೆ ತಮ್ಮ ಸರ್ಕಾರದ ನೀತಿಯನ್ನು ತಿಳಿಸಬೇಕಾದಂಥ ಪರಿಸ್ಥಿತಿ ಬಂದಿದೆ. ಪುನಃ ನಾನು ಕೇಳಿಕೊಳ್ಳುವುದೇನೆಂದರೆ ಯಾವುದೇ ಒಂದು ಕಾರಣಕ್ಕೂ ಇದುವರೆಗೆ 49 ವರ್ಷಗಳಿಂದ ವಂಚಿತರಾಗಿರತಕ್ಕಂಥ ಪರಿಶಿಷ್ಟ ಪಂಗಡದವರಿಗೆ ಅವರ ಕನಿಷ್ಟ ಮೀಸಲಾತಿ ಏನಿದೆಯೋ ಅದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂಥ ಒಂದು ವ್ಯವಸ್ಥೆಯನ್ನು ಈ ಸರ್ಕಾರವಾದರೂ ಮಾಡಲಿ, ಪ್ರಾಮಾಣಿಕವಾಗಿ ಅವರ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ ಎನ್ನುವುದನ್ನು ತೋರಿಸಿ ಕೊಡಲಿ ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತಿದ್ದೇನೆ.

5.00 ಪಿ.ಎಂ

ಇನ್ನು ಶೋಷಿತ ಬಗ್ಗೆ, ದಲಿತರ ಬಗ್ಗೆ ಸಪ್ಟೆಂಬರ್ 11ರ ದಿನಾಂಕದಂದು ಸಭೆಯಲ್ಲಿ ಹೇಳಿದ್ದೆ. ಇವತ್ತಿಗೂ ಕೂಡ ಆ ದಲಿತರು ಒಂದು ದೌರ್ಜನ್ಯಕ್ಕೆ ಒಳಗಾಗುವುದಾಗಲಿ, ಅವರ ಕೊಲೆ ನಡೆಯುವುದು ಆಗಲೀ ಇಂದಿಗೂ ಕೂಡ ಅದು ನಿಂತಿಲ್ಲ ಎಂದು ಹೇಳಲಿಕ್ಕೆ ನನಗೆ ಬಹಳ ದುಃಖವಾಗುತ್ತಿದೆ. ಮಾನ್ಯ ಉಪಾಧ್ಯಕ್ಷರೆ, ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಪ್ರತಿಯೊಬ್ಬರು ಚೆನ್ನಾಗಿರಬೇಕೆಂದು ಅಪೇಕ್ಷೆಪಡುತ್ತಾರೆ. ಆದರೆ ಈ ಸರ್ಕಾರ ಇದರ ಬಗ್ಗೆ ಯಾವುದೇ ಒಂದು ದಿಟ್ಟವಾದ ಕ್ರಮವನ್ನು ಕೈಗೊಳ್ಳದೇ ಮೌನವಾಗಿರುವುದನ್ನು ನೋಡಿದ್ದೇನೆ. ಇತ್ತೀಚೆಗೆ ನಡೆದ ಕುಂದಾಪುರದ ರಾಮಕೃಷ್ಣ ಎಂಬ ಹರಿಜನ ವ್ಯಕ್ತಿಯ ಕೊಲೆ ವಿಷಯದ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಕಾರಣ ಇಷ್ಟೆ, ಪ್ರತಿ ಸರ್ಕಾರಗಳು ಅಧಿಕಾರಕ್ಕೆ ಬರುತ್ತಿರುತ್ತವೆ, ಪ್ರತಿ ವರ್ಷಗಳು ಹೋಗುತ್ತಿರುತ್ತವೆ, ಆದರೆ ಆ ಒಂದು ಜನಾಂಗಕ್ಕೆ ರಕ್ಷಣೆಯನ್ನು ಸರ್ಕಾರ ಏಕೆ ಕೊಡುತ್ತಿಲ್ಲ? ಏಕೆ ಆ ಕೊಲೆಯನ್ನು ಮಾಡಿದವರ ಕ್ರಮವನ್ನು ಕೈಗೊಳ್ಳುತ್ತಿಲ್ಲ? ಒಂದು ದಿಟ್ಟವಾದ ಕ್ರಮವನ್ನು ಅವರ ಮೇಲೆ ನೀವು ಕೈಗೊಂಡರೆ ಮುಂದಿನ ದಿನಗಳಲ್ಲಿ ಈ ಜನಾಂಗದವರ ಮೇಲೆ ಯಾವುದೇ ದೌರ್ಜನ್ಯವು ಆಗುವುದಿಲ್ಲ ಎಂದು ನನ್ನಗನಿಸುತ್ತದೆ. ಆದುದರಿಂದ ಈ ಸರ್ಕಾರ ಆ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಮತ್ತೆ ಈ ಸದನದಲ್ಲಿ ನನ್ನ ವೈಯಕ್ತಿಕವಾದಂತಹ ವಿಷಯವನ್ನು ಕೂಡ ತಿಳಿಸಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಏಕೆ ಈ ವಿಷಯವನ್ನು ತಿಳಿಸಬೇಕೆಂದರೆ, ನಾನು ಬಹಳಷ್ಟು ಮನನೊಂದು ಈ ವಿಷಯವನ್ನು ಹೇಳುತ್ತಿದ್ದೇನೆ. ನಾನು ಜಮೀನನ್ನು ಕೋರಿ ಸರ್ಕಾರಕ್ಕೆ ಒಂದು ಅರ್ಜಿಯನ್ನು ಹಾಕಿದ್ದೆ. ಆ ವಿಷಯವನ್ನು ಸಂಬಂಧಪಟ್ಟಂತಹ ಮಂತ್ರಿಗಳಲ್ಲಿಯು ಕೂಡ ನಾನು ಕೇಳಿಕೊಂಡಿದ್ದೆ. ಇದು ವ್ಯಯಕ್ತಿಕವಾಗಿದೆ ಎಂದು ತಮಗೆ ಅನ್ನಿಸಬಹುದು, ಆದರೆ ಇದನ್ನು ಯಾವ ರೀತಿಯಲ್ಲಿ ಪರಿಗಣನೆ ಮಾಡಬೇಕು

ಎಂದರೆ ಒಬ್ಬ ಪರಿಶಿಷ್ಟ ಪಂಗಡದವರಿಗೆ ಆಗಿರುವ ಅನ್ಯಾಯವನ್ನು ತಿಳಿಸಲಿಕೋಸ್ಕರವಾಗಿ ಈ ಸದನದಲ್ಲಿ ಈ ವಿಷಯವನ್ನು ಹೇಳುತ್ತಿದ್ದೇನೆ. ಒಬ್ಬ ಪರಿಶಿಷ್ಟ ಪಂಗಡದ ವ್ಯಕ್ತಿ ಒಂದು ಜಮೀನಿಗೆ ಅರ್ಜಿಯನ್ನು ಹಾಕಿದಾಗ, ಅದು ಮೂರು ನಾಲ್ಕು ತಿಂಗಳು ಅಲ್ಲಿನ ಜಿಲ್ಲಾಧಿಕಾರಿಗಳು ಅದನ್ನು ಹಾಗೆಯೇ ಇಟ್ಟುಕೊಳ್ಳುತ್ತಾರೆ. ಮತ್ತೆ ಮೂರು ನಾಲ್ಕು ತಿಂಗಳು ಆದ ನಂತರ ಆ ದಂಡ ಅಧಿಕಾರಿಗಳು ಆ ಅಹವಾಲಿನ ಅರ್ಜಿಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತಾರೆ. ಹಾಗೆ ಬಿಡುಗಡೆ ಮಾಡುವಾಗಲು ಸಹ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಏನು ಟಿಪ್ಪಣಿಯನ್ನು ಬರೆದಿರುತ್ತಾರೆ ಅದರ ಸಹಿತ ಬಿಡುಗಡೆ ಮಾಡಿ, ಹೇಳಿಕೆಯನ್ನು ಕೊಡುತ್ತಾರೆ. ಅದು ಏನು ಎಂದು ಅಂದರೆ ಶಾಸಕರು ಕೋರಿರುವ ಜಾಗ ಒಂದು ಗೋಮಾಲ ಎಂದು ಅದು ಸಂಪೂರ್ಣವಾಗಿ ಅಸತ್ಯವಾಗಿರತಕ್ಕಂತಹ ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸುತ್ತಿದ್ದಾರೆ. ಯಾವ ಕಾರಣಕ್ಕಾಗಿ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, ಒಬ್ಬ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆಯನ್ನು ಮಾಡುವುದಿಲ್ಲ, ಇಂತಹ ಜಾಗವನ್ನು ಕೊಡಬೇಕೇ, ಅಥವಾ ಬೇಡವೇ ಎಂಬುದನ್ನು ಸರ್ಕಾರ ತೀರ್ಮಾನವನ್ನು ಕೈಗೊಳ್ಳಬೇಕು. ಆದರೆ ಇದನ್ನೆಲ್ಲಾ ಒಂದು ಕಡೆ ಇಟ್ಟು ಒಬ್ಬ ಪರಿಶಿಷ್ಟ ಪಂಗಡ ವ್ಯಕ್ತಿಗೆ ಅನ್ಯಾಯವನ್ನು ಮಾಡಬೇಕು ಎಂಬ ದೃಷ್ಟಿಯಿಂದ ಮತ್ತು ಆ ಕ್ಷೇತ್ರದ ಜನಗಳಲ್ಲಿ ಗೊಂದಲವನ್ನು ಎಬ್ಬಿಸಿ, ಆ ಕ್ಷೇತ್ರದ ಶಾಸಕನಿಗೆ ಅಗೌರವವನ್ನು ತರಬೇಕು ಎನ್ನುವಂತಹ ದೃಷ್ಟಿಯಿಂದ ಅವರು ಪತ್ರಿಕೆಗಳಿಗೆ ಈ ಒಂದು ವಿಷಯವನ್ನು ಬಿಡುಗಡೆ ಮಾಡುತ್ತಿದ್ದಾರೆ. ಇವತ್ತು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಒಂದು ಗೌಪ್ಯವಾಗಿ ಇರಿಸಬೇಕಾದಂತಹ ಒಂದು ಅರ್ಜಿಯನ್ನು ಅಲ್ಲಿನ ಅಧಿಕಾರಿಗಳು ಹೇಗೆ ಆ ಅರ್ಜಿಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದರು? ಅದನ್ನು ದಯವಿಟ್ಟು ಕೂಲಂಕುಷವಾಗಿ ಪರಿಶೀಲಿಸಿ, ಒಬ್ಬ ಪರಿಶಿಷ್ಟ ಜನಾಂಗದವರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಬೇಕೆಂದು ಈ ಸಂದರ್ಭದಲ್ಲಿ ಈ ಸದನದಲ್ಲಿ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಯಾರೇ ವ್ಯಕ್ತಿಯಾಗಲಿ, ಶಾಸಕನಾಗಲಿ ತಮಗೆ ಸ್ವಲ್ಪ ಜಮೀನನ್ನು ಕೊಡಿ ಎಂದು ಕೇಳುವುದರಲ್ಲಿ ತಪ್ಪೇನು ಇಲ್ಲ. ನಾನು ಅವರು ಕೊಟ್ಟ ಅರ್ಜಿಯನ್ನು ಡೆಪ್ಯೂಟಿ ಕಮೀಷನರ್‌ರವರಿಗೆ ಕೊಟ್ಟು ಇವರ ಅರ್ಜಿಯ ಮೇಲೆಯೇ ಪರಿಶೀಲಿಸಿ ಆ ಜಾಗವನ್ನು ಕೊಡಬಹುದೇ ಎಂದು ತಮ್ಮ ಅಭಿಪ್ರಾಯವನ್ನು ಕೊಡಿ ಎಂದು ಬರೆದೆ, ಆದರೆ ನಾನು ಅವರಲ್ಲಿ ಈ ಬಗ್ಗೆ ಕ್ಷಮೆಯನ್ನು ಕೇಳುತ್ತೇನೆ. ಏಕೆಂದರೆ ಈ ಅರ್ಜಿ ಹೇಗೆ ಪತ್ರಿಕೆಗಳಿಗೆ ಹೋಯಿತು, ಯಾರು ಇದನ್ನು ಬಿಡುಗಡೆ ಮಾಡಿದರು ಎಂದು ನನ್ನಗಂತು ಗೊತ್ತಿಲ್ಲ. ನಿನ್ನೆ ಅವರು ನನ್ನ ಹತ್ತಿರ ಮಾತನಾಡಿದ್ದಾರೆ, ಆ ರೀತಿಯಾಗಿದ್ದರೆ ದಯವಿಟ್ಟು ನನಗೆ ಕೊಡಿ ಅದನ್ನು ನಾನು ಡೆಪ್ಯೂಟಿ ಕಮೀಷನರಿಗೆ ಹೇಳುತ್ತೇನೆ. ಆದರೆ ಸಾಮಾನ್ಯವಾಗಿ ಡೆಪ್ಯೂಟಿ ಕಮೀಷನರ್‌ರವರು ಜಾಗ ಪರಿಶೀಲನೆಯನ್ನು ಮಾಡುವುದಿಲ್ಲ. ಅವರು ರೆವಿನ್ಯೂ ಇನ್‌ಸ್ಪೆಕ್ಟರ್‌ರವರಿಗೆ ಅದನ್ನು ಕಳುಹಿಸುತ್ತಾರೆ. ರೆವಿನ್ಯೂ ಇನ್‌ಸ್ಪೆಕ್ಟರ್ ಮಾಹಜರ್ ಮಾಡುವುದು. ಅಂತಹ ಸಂದರ್ಭದಲ್ಲಿ ಏನಾದರೂ ಲೀಕ್ ಔಟ್ ಆಗಿರಬಹುದು. ಈ ರೀತಿಯಾಗಿರುವುದು ತಪ್ಪು, ತಾವು ಅದನ್ನು ಕೊಡಿ, ಅದನ್ನು ವಿಚಾರಣೆಯನ್ನು ಮಾಡುತ್ತೇವೆ. ಅವರ ಮನಸ್ಸಿಗೆ ಏನಾದರೂ ನೋವಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ಇನು ನಮ್ಮ ಮಟ್ಟದಲ್ಲಿ ಇಂತಹ ಸಣ್ಣ ಕೆಲಸವನ್ನು ಮಾಡುವವರು ನಾವಲ್ಲ, ಇದು ಸಣ್ಣ ಮಟ್ಟದಲ್ಲಿ ಆಗಿರಬಹುದು, ಆದರೆ ಈ ವಿಷಯವನ್ನು ಇಲ್ಲಿ ತರಲೇ ಬಾರದಿತ್ತು, ಆದರೆ ಅವರು ಈ ವಿಷಯವನ್ನು ಸಂಕಟದಿಂದ ಹೇಳಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶ್ರೀ ಜಾಲಪ್ಪನವರು ಒಂದು ರೀತಿಯಲ್ಲಿ ಅವರ ಭಾವನೆಯನ್ನು ಈ ಸದನದಲ್ಲಿ ಹೇಳಿದ್ದಕ್ಕೆ ನಾನು ಅಭಾರಿಯಾಗಿದ್ದೇನೆ. ನಾನು ಯಾವ ಕಾರಣಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅವರಲ್ಲಿ ಕೂಡ ಒಂದ ಭಾವನೆ ಇದ್ದು ಆ ಅರ್ಜಿಗೆ ಒಂದು ಮಾನ್ಯತೆಯನ್ನು ನೀಡಿದರು, ಆದರೆ ಯಾವ ಒಂದು ಕೆಟ್ಟ ಭಾವನೆಯಿಂದ ಅಲ್ಲಿನ ದಂಡಾಧಿಕಾರಿಗಳು ಆ ರೀತಿಯಾಗಿ ಮಾಡಿದರು ಎಂದು ನನಗೆ ಅರ್ಥವಾಗುತ್ತಿಲ್ಲ. ಇದಕ್ಕೆ ಪೂರ್ವಕವಾಗಿ ಇನ್ನೊಂದು ವಿಷಯವನ್ನು ಅಲ್ಲಿನ ದಂಡಾಧಿಕಾರಿಗಳು ಮಾಡಿದರು ಎಂಬುದನ್ನು ಪುರಾವೆಯ ಸಹಿತ ಹೇಳಲಿಕ್ಕೆ ಇಚ್ಛೆಯನ್ನು ಪಡುತ್ತಿದ್ದೇನೆ. ಅವರು ಅದು ಒಂದು ಗೋಮಾಳ ಎಂದು ಹೇಳಿದಂತಹ ಒಂದು ಸರ್ವೆ ನಂಬರಿನ ವಿವರವನ್ನು ನಾನು ತಹಸೀಲ್ದಾರರಲ್ಲಿ ಕೇಳಿದೆ. ಎರಡು ತಿಂಗಳುಗಳ ಕಾಲ ಅವರ ಒಂದು ವರದಿಗಾಗಿ ನಾನು ಕಾದೆ. ಎಂದು ತಿಂಗಳ ನಂತರ ಆ ತಹಸೀಲ್ದಾರ್ ಏನೆಂದು ಹೇಳುತ್ತಾರೆ ಎಂದರೆ ಆ ವರದಿಯನ್ನು ನಿಮಗೆ ಕೊಡುವುದಕ್ಕೆ ಅಗುವುದಿಲ. ನೀವು ಬೇಕಾದರೆ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಕೊಡಿ, ಜಿಲ್ಲಾಧಿಕಾರಿಗಳು ಅದನ್ನು ಪರಿಶೀಲಿಸುತ್ತಾರೆ. ಈ ರೀತಿಯಾಗಿ ಹೇಳಿ ನನ್ನದೆ ಒಂದು ರೀತಿಯ ಅವಹೇಳನ ಮಾಡಿ ಅವರ ಒಂದು ಉದ್ಧಟತನವನ್ನು ತೋರಿಸುತ್ತಿದ್ದಾರೆ ಅದರಲ್ಲಿಯು ನನ್ನ ಕ್ಷೇತ್ರದಲ್ಲಿ ಹೀಗೆ ಮಾಡುತ್ತಿದ್ದಾರೆ. ಈ ರೀತಿಯಾಗಿ ಶಾಸಕರು ನನಗೆ ಜಿಲ್ಲಾಧಿಕಾರಿಗಳು, ತಹಸೀಲ್ದಾರ್ ಉದ್ಧಟತನವಾಗಿ ವರ್ತಿಸುವುದು ಆಯಿತು ಎಂದು ಆದರೆ, ಇನ್ನೂ ಸಾಮಾನ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಬಗ್ಗೆ ಅವರು ಯಾವ ರೀತಿಯಾಗಿ ವಿಚಾರಣೆಯನ್ನು ಮಾಡುತ್ತಾರೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ಈ ವಿಷಯವ್ನು ತರುತ್ತಿದ್ದೇನೆ, ದಯವಿಟ್ಟು ಅಂತಹ ಉದ್ಧಟತನದಿಂದ ಕೆಲಸ ಮಾಡತಕ್ಕಂತಹ ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುವಂತಹ ಒಂದು ಆದೇಶವನ್ನು ಕೊಡಿ. ಆದರಿಂದಲಾದರೂ ಮುಂದಿನ ದಿನಗಳಲ್ಲಿ ಜನಸಮಾನ್ಯನಿಗೆ ಅನುಕೂಲವಾಗುತ್ತದೆ. ಇಲ್ಲ ಎಂದರೆ ನನ್ನ ರೀತಿಯಲ್ಲಿಯೇ ದಿನೇ ದಿನೇ ಈ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಶೋಷಣೆ ಒಳಗಾಗುತ್ತಾರೆ. ಈ ಶೋಷಣೆಯನ್ನು ತಪ್ಪಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ಅಲ್ಪಸಂಖ್ಯಾತರು ಎಂದರೆ ಕೇವಲ ಮುಸ್ಲಿಂ ಸಂಪ್ರಾದಾಯವೆಂದು ಮಾತ್ರ ತಿಳಿದುಕೊಂಡಿದ್ದಾರೆ. ಅವರಿಗೆ ಒಂದು ಸೌಭ್ಯ ಸವಲತ್ತುಗಳನ್ನು ಮಾತ್ರ ಕೊಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ವಿನಃ ಆ ಅಲ್ಪಸಂಖ್ಯಾತರ ಜೊತೆಯಲ್ಲಿರತಕ್ಕಂತಹ ಇತರ ಜನಾಂಗದವರ ಬಗ್ಗೆ ಯಾವುದೇ ಕಾಳಜಿಯನ್ನು ತೋರಿ ಅವರಿಗಾಗಿ ಪ್ರಗತಿಪರವಾದಂತಹ ಯೋಜನೆಗಳನ್ನು ಹಾಗೆ ಕಾರ್ಯಕ್ರಮಗಳನ್ನೂ ಹಾಕಿಕೊಂಡಿಲ್ಲ, ಆದುದರಿಂದ ದಯವಿಟ್ಟು ನಾನು ಈ ಸಂದರ್ಭದಲ್ಲಿ ಹೊಸ ಸರ್ಕಾರ ಬಂದ 14 ತಿಂಗಳುಗಳು ಆಯಿತು, ಅವರ ಬಗ್ಗೆ ಕೂಡ ಚಿಂತನೆಯನ್ನು ಮಾಡಿ, ಅಲ್ಪ ಸಂಖ್ಯಾತರು ಎಂದರೆ ಒಂದೇ ಜನಾಂಗವಲ್ಲ, ಅದರ ಒಟ್ಟಿಗೆ ಇನ್ನು ಹಲವಾರು ಇದೆ. ಅವರಿಗೂ ಕೂಡ ಅನುಕೂಲವನ್ನು ಮಾಡಿಕೊಂಡುವಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿ 1994ರ ಹಿಂದೆ ಹೇಗೆ ಲಂಚದ ಹಾವಳಿ, ಭ್ರಷ್ಟಾಚಾರದ ಹಾವಳಿ ಇತ್ತೋ ಅದು ಇವತ್ತಿಗೂ ಹಾಗೆಯೇ ಮುಂದುವರೆಯುತ್ತಿದೆಯೇ ವಿನಃ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಯಾವುದೇ ರೀತಿಯಲ್ಲಿ ಈ ಹಾವಳಿಯು ನಿಂತಿಲ್ಲವೆಂದು ನಾನು ಹೇಳುತ್ತಿದ್ದೇನೆ. ಇವತ್ತು ಜಿಲ್ಲಾ ಪಂಚಾಯಿತಿ ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿ ನಡೆಯುತ್ತಿರುವಂತಹ ಕೊಳವೆ ಕಾಮಗಾರಿಗಳನ್ನು ಯಾರು ಕೂಡ ಇವತ್ತು ಅದನ್ನು ಪರೀಕ್ಷೆ ಮಾಡಿಲಿಕ್ಕೆ ಬರುತ್ತಿಲ್ಲ. ಜಿಲ್ಲಾ ಪಂಚಾಯಿತಿಗಳ ಬಗ್ಗೆ ಎಷ್ಟೋ ಸಾರಿ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದೇವೆ.

ಅವರು ತಪಾಸಣೆಯನ್ನು ಮಾಡುವಂತಹ ಒಂದು ಕೆಲಸವನ್ನು ಮಾಡಲಿಲ್ಲ, ಆದರೆ ಇದೇ ರೀತಿಯಾಗಿ ಮುಂದುವರೆಸದೆರ ಬಹಳ ದುರಂತದ ದಿನಗಳನ್ನು ನಾವು ಮುಂದೆ ನೋಡಬೇಕಾಗುತ್ತದೆ. ಸರ್ಕಾರದಿಂದ ಹಣವೇನೋ ವೆಚ್ಚವಾಗುತ್ತಿದೆ. ಆದರೆ ಸರಿಯಾದಂತಹ ರೀತಿಯಲ್ಲಿ ವೆಚ್ಚವಾಗುತ್ತಿಲ್ಲ. ತಾಲ್ಲೂಕು ಅಫೀಸ್‌ಗಳಲ್ಲಿರುವಂತಹ ಲಂಚದ ಹಾವಳಿಯನ್ನು ನಿಲ್ಲಿಸುವುದಕ್ಕೆ ಆಗುತ್ತಿಲ್ಲ. ಬಿ.ಡಿ.ಓ. ಅಫೀಸ್‌ಗಳಲ್ಲಿ ನಡೆಯುತ್ತಿರುವಂಥ ಲಂಚವನ್ನು ಸಹ ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತಿಲ್ಲ, ಬಡವರಿಗೋಸ್ಕರವಾಗಿ ನಿಮ್ಮ ಸರ್ಕಾರ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳುತ್ತಿದ್ದೀರಿ ಆದರೆ ಹಾಗೆ ಕಟ್ಟಿದ ಮನೆಗಳು ಒಂದೊಂದೇ ವರ್ಷದಲ್ಲಿ ಉದುರಿ ಬೀಳುತ್ತಿವೆ. ಅದನ್ನು ಯಾರು ಅಧಿಕಾರಿಗಳು ಪರೀಕ್ಷೆಯನ್ನು ಮಾಡುತ್ತಿಲ್ಲ. ಆ ಮನೆಗಳನ್ನು ಕಟ್ಟಿದಂತಹ ವ್ಯಕ್ತಿಗಳು ಯಾರು? ಅವರಿಗೆ ಈ ಸಂಬಂಧವಾಗಿ ಹಣ ಹೇಗೆ ಸಂದಾಯವಾಯಿತು? ಆ ವ್ಯಕ್ತಿಗಳಿಗೆ ಇದರ ಸಂಬಂಧ ಏನು? ಅವರಿಗೆ ಶಿಕ್ಷೆಯನ್ನು ಕೊಟ್ಟಿದ್ದೀರಾ ಎಂದು ಸರ್ಕಾರಕ್ಕೆ ಕೇಳಿದರೆ ಸರ್ಕಾರದಿಂದ ಯಾವುದೇ ಸಮರ್ಪಕವಾದಂತಹ ಉತ್ತರವು ಬರುತ್ತಿಲ್ಲ, ಆದುದರಿಂದ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಈ ಮೂರು ಬಡ ಜನರನ್ನು ಶೋಷಣೆ ಮಾಡಿರುತ್ತಿರುವಂಥದ್ದು ಅತ್ಯಧಿಕವಾಗಿದೆ. ಅದರಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಅಫೀಸ್‌ಗಳಲ್ಲಿನ ಈ ಲಂಚದ ಬಗ್ಗೆ ಎಷ್ಟು ಹೇಳಿದರೂ ಸಾಲದು ಎಂದು ನನಗನ್ನಿಸುತ್ತದೆ. ಆದೇ ರೀತಿಯಲ್ಲಿ ತಹಸೀಲ್ದಾರ್ ಅಫೀಸ್‌ನಲ್ಲಿಯು ಕೂಡ ಲಂಚ ನಡೆಯುತ್ತಿದೆ. ಈ ದೃಷ್ಟಿಯಿಂದ ನನ್ನ , ಕ್ಷೇತ್ರದ ಮಟ್ಟಿಗೆ ಸೀಮಿತವಾಗಿ ಹೇಳುವುದಾದರೆ ಸುಮಾರು ಮನೆಗಳು ಕುಸಿದು ಬಿದ್ದಿದೆ. ಹಾಗೆ ಕುಸಿದು ಬಿದ್ದಿರುವಂತಹ ಮನೆಗಳ ನಿರ್ಮಾಣಕ್ಕೆ ಕಾರಣಕರ್ತರಾಗಿರು ಯಾರು? ಆ ಕಂಟ್ರಾಕ್ಟ್‌ನ್ನು ಯಾರಿಗೆ ವಹಿಸಿದ್ದರು? ಮನೆಗಳು ಕುಸಿದು ಬಿದ್ದ ಬಗ್ಗೆ ಏನು ಕ್ರಮಗಳನ್ನು ಕೈಗೊಂಡಿದ್ದೀರಿ? ಏನ್ನುವಂತಥದ್ದರ ಬಗ್ಗೆ ಸರ್ಕಾರ ದಿಟ್ಟವಾದಂತಹ ನಿಲುವನ್ನು ತೆಗೆದುಕೊಂಡರೆ ನಿಜವಾಗಲೂ ಮುಂದಿನ ದಿನಗಳಲ್ಲಿ ಇಂತಹ ಕಳಪೆ ಕಾಮಗಾರಿಗಳನ್ನು ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸುತ್ತಾರೆಂದು ನಾನು ಈ ಸಂದರ್ಭದಲ್ಲಿ ಹೇಳಿ, ಅಧ್ಯಕ್ಷರು ಇದರ ಬಗ್ಗೆ ಸರ್ಕಾರಕ್ಕೆ ಒಂದು ಒತ್ತಡವನ್ನು ತರಬೇಕು ಅಂಥವರ ಮೇಲೆ ಉಗ್ರವಾಗಿ ಕ್ರಮ ಕೈಗೊಳ್ಳುವಂತೆ ಹೇಳಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ, ಪಡಿತರ ಚೀಟಿಯ ಬಗ್ಗೆ ಒಂದು ವ್ಯವಸ್ಥೆಯನ್ನು ಮಾಡಿದ್ದೀರಿ. ಹಸಿರು ತ್ರಿವರ್ಣದ ಪಡಿತರ ಚೀಟಿಯನ್ನು ನಿಲ್ಲಿಸಿ, ಹಸಿರು ಬಣ್ಣದ ಪಟಿತರ ಚೀಟಿಯನ್ನು ಜನರಿಗೆ ಕೊಡುತ್ತೇನೆ ಎಂದು ಹೇಳಿದ್ದೀರಿ, ಈ ಗೊಂದಲದಿಂದ ನನ್ನ ತಾಲ್ಲೂಕಿನ ಬಡ ಜನರಿಗೆ ಸಿಗಬೇಕಾಗಿರುವಂತಹ ಒಂದು ರೀತಿಯ ಪಡಿತರ ಚೀಟಿಯು ಸಿಗದೆ ಬಹಳಷ್ಟು ಜನರು ಶೋಷಿತರಾಗುತ್ತಿದ್ದಾರೆ. ದಯವಿಟ್ಟು ತಾವು ಇರದ ಕಡೆಗೆ ಗಮನವನ್ನು ನೀಡಿ ನನ್ನ ಕ್ಷೇತ್ರದ ಅರ್ಹ ಜನರಿಗೆ ಇದು ಸಿಗುವ ಹಾಗೆ ಮಾಡಬೇಕೆಂದು ಹೇಳಬಯಸುತ್ತೇನೆ ಇನ್ನು ತಾವು ಹೊಸದಾಗಿ ಮಾಡಬೇಕಾಗಿರುವಂತಹ ತ್ರಿವರ್ಣ ಚೀಟಿಗಳು, ಹಸಿರು ವರ್ಣದ ಪಟೀತರ ಚೀಟಿಗಳನ್ನು ಈ ಕೂಡಲೇ ಹಂಚುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ತಾವು ಈ ಸಂದರ್ಭದಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಸನ್ಮಾನ್ಯ ಉಪಾಧ್ಯಕ್ಷರು, ಸನ್ಮಾನ್ಯ ಉಪಾಧ್ಯಕ್ಷರೆ, ಈ ಸಾರಿ ಮಾನ್ಯ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೂ ಕಳೆದ ಮಾರ್ಚಿಯಲ್ಲಿ ಮಾಡಿದಂಥ ಭಾಷಣಕ್ಕೂ ಬಹಳಷ್ಟು ಸಾಮ್ಯ ಇದೆ. ಇವತ್ತು ಬೆಳಿಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ ತಾವು ಈ ಸಾರಿ ಕೇಳಿದಂಥ ಪ್ರಶ್ನೆಗೆ ಹಿಂದಿನ ಸಾರಿ ಏನು ಉತ್ತರ ಕೊಟ್ಟಿದ್ದರೋ ಅದೇ ಉತ್ತರ ಈಗಲೂ ಬಂದಿದೆ

ಎಂದು ಹೇಳಿದ್ದಾರೆ. ಅದೇ ರೀತಿ ಮಾನ್ಯ ರಾಜ್ಯಪಾಲರ ಭಾಷಣದಲ್ಲೂ ಬಹಳಷ್ಟು ಸಂಗತಿಗಳು ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ಏನಿದ್ದವೋ ಅವುಗಳನ್ನೇ ಈಗಲೂ ಯಥಾವತ್ತು ಮುದ್ರಿಸಿದ್ದಾರೆ. ಜನತಾ ದರ್ಶನದ ಬಗ್ಗೆ ಬಹಳ ಹೆಗ್ಗಳಿಕೆಯ ಮಾತನಾಡಿದ್ದಾರೆ. ಅದನ್ನು ಹೊಗಳಿದಂಥ ಆಡಳಿತ ಪಕ್ಷದ ಸದಸ್ಯರೂ ಇದ್ದಾರೆ. ಈ ಜನತಾ ದರ್ಶನ ಎಲ್ಲ ಕಡೆಗಳಲ್ಲೂ ನಡೆದಂತೆ ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲೂ ನಡೆಯಿತು. ಆ ಜನತಾ ದರ್ಶನದಲ್ಲಿ ಅರ್ಜಿಗಳನ್ನು ಹಿಡಿದುಕೊಂಡು ಹೋದವರಲ್ಲಿ ನಾನೂ ಕೂಡ ಒಬ್ಬ ಅರ್ಜಿದಾರ. ಮಾನ್ಯ ಮುಖ್ಯಮಂತ್ರಿಗಳು ವೇದಿಕೆಯಿಂದ ಇಳಿದು ಬಂದು ನನ್ನ ಅರ್ಜಿಯನ್ನೂ ಕೂಡ ಸಾವಿರಾರು ಜನ ರೈತರ ಅರ್ಜಿಯ ಜೊತೆಯಲ್ಲೇ ಸ್ವೀಕರಿಸಿದರು. ತಮ್ಮ ವೇದಿಕೆಯನ್ನು ಬಿಟ್ಟು ಸಾವಿರಾರು ಜನ ಇದ್ದಂಥ ಜಾಗಕ್ಕೆ ಬಂದಂಥ ಮಾನ್ಯ ಮುಖ್ಯಮಂತ್ರಿಗಳು ತುಂಗಾ ಏತನೀರಾವರಿ ಸಲುವಾಗಿ ನಾನು ಬೆಂಗಳೂರಿಗೆ ಹೋದ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳನ್ನು ಶಾಸಕರನ್ನು ಕರೆಸಿಮಾತನಾಡಿ ಇತ್ಯಾರ್ಥ ಮಾಡಿಕೊಡುತ್ತೇನೆ ಎಂಬ ಮಾತನ್ನು ಅಲ್ಲಿ ಕೊಟ್ಟು ಬಂದಿದ್ದರು. ಜನತಾ ದರ್ಶನದಲ್ಲಿ ಒಬ್ಬ ಶಾಸಕ ಕೊಟ್ಟಂಥ ಅರ್ಜಿಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಉತ್ತರ ಇವತ್ತಿನವರೆಗೂ ಜಾರಿ ಆಗಿಲ್ಲ. ಇನ್ನು ಸಾಮಾನ್ಯ ಜನರು ಕೊಟ್ಟಂಥ ಅರ್ಜಿಗಳ ಗತಿ ಏನಾಗಿದೆ ಎಂಬುದನ್ನು ಪದರ ಪದರವಾಗಿ ಬಿಡಿಸಿ ನೋಡಬೇಕಾಗಿದೆ. ಈ ಕ್ಷಣದವರೆಗೂ ಅಧಿಕಾರಿಗಳನ್ನು ಇವರು ಕರೆದಿಲ್ಲ. ಆ ಕ್ಷೇತ್ರದ ಪ್ರತಿನಿಧಿಯಾದ ನನ್ನನ್ನೂ ಕರೆಯಲಿಲ್ಲ. ಆ ಚರ್ಚೆಯನ್ನು ಇವರು ಕೈಗೆ ಎತ್ತಿಕೊಳ್ಳಲೇ ಇಲ್ಲ.

ಶ್ರೀ .ಜಿ. ಬಸವಣ್ಣಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ತುಂಗಾ ಏತನೀರಾವರಿಗೆ 1991ನೇ ಇಸವಿಯಲ್ಲಿ ಆಡಳಿತಾತ್ಮಕ ಅನುಮತಿ ದೊರೆತಿದೆ. ಆದರೆ ತಾಂತ್ರಿಕ ಅನುಮೋದನೆಗಾಗಿ ಸರ್ಕಾರದ ಮುಂದಿದೆ. ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕ ಯೋಜನೆಗಳಿಗೆ ಅಷ್ಟು ಸುಲಭವಾಗಿ ತಾಂತ್ರಿಕ ಅನುಮೋದನೆ ದೊರೆಯುವುದಿಲ್ಲ. ಈಗ 12.5 ಕೋಟಿ ಮಂಜುರಾತಿ ದೊರೆತಿದೆ. ಮುಖ್ಯಮಂತ್ರಿಯದ ಕೂಡಲೇ ತಾಂತ್ರಿಕ ಮಂಜುರಾತಿಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ತಾಂತ್ರಿಕ ಒಪ್ಪಿಗೆ ಬಂದ ಮೇಲೆ ಅದನ್ನು ಮಂಜೂರು ಮಾಡಲಾಗುತ್ತದೆ.

ಶ್ರೀ ಆಯನೂರು ಮಂಜುನಾಥ್ : ನಾನೂ ಅದೇ ವಿಚಾರವನ್ನೇ ಹೇಳುತ್ತಿದ್ದೇನೆ. ನಾನು ಅರ್ಜಿಯನ್ನು ಕೊಡುವ ಹೊತ್ತಿಗೆ ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿತ್ತು. ಟೆಕ್ನಿಕಲ್ ಅಪ್ರೂವಲ್‌ಗೆ ನಿಮ್ಮನ್ನು ಕರೆಯುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಟೆಕ್ನಿಕಲ್ ಅಪ್ರೂವಲ್‌ಗೋಸ್ಕರ ಸಂಬಂಧಪಟ್ಟ ಅಧಿಕಾರಿಗಳನ್ನು, ಆ ಕ್ಷೇತ್ರದ ಶಾಸಕರನ್ನು ಕರೆದು. ಚರ್ಚೆಮಾಡುತ್ತೇನೆಂದು ಹೇಳಿದ್ದರು. ಆದರೆ ಇವರು ಅದನ್ನು ಮಾಡಲಿಲ್ಲವೆಂಬುದನ್ನು ನೆನಪು ಮಾಡುವುದಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಆ ಜನತಾ ದರ್ಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದರೆಂಬುದು ನಮ್ಮ ಜಿಲ್ಲೆಯ ಹಿರಿಯ ಶಾಸಕರಿಗೂ ಮರೆತು ಹೋಗಿದೆ, ಬಹುಶಃ ಮಾನ್ಯ ಮುಖ್ಯಮಂತ್ರಿಗಳಿಗೂ ಮರೆತು ಹೋಗಿರಬಹುದು. ಹಾಗಾಗಿ ಜನತಾ ದರ್ಶನದ ಫಲಶೃತಿ ಇನ್ನೂ ಯಾರಿಗೂ ಸಿಕ್ಕಿಲ್ಲ ಜನತಾದರ್ಶನದ ಬಗ್ಗೆ ಹೆಚ್ಚು ಪ್ರಸ್ತಾಪವನ್ನು ನಾನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಗಳನ್ನು ಯಾವ ರೀತಿ ನಡೆಸಿದೆವೋ ಅದೇ ರೀತಿ ನಗರಸಭಾ ಚುನಾವಣೆಗಳನ್ನೂ ನಡೆಸಿದ್ದೇವೆ ಎನ್ನತಕ್ಕ ಸಾಧನೆಯ ಪಟ್ಟಿಯನ್ನು ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿ ಕಾಯಿದೆ ಜಾರಿಗೆ ಬಂದಾಗ ಕೇವಲ ತ್ರೀ ಟೈರ್ ಸಿಸ್ಟಂ ಇತ್ತು. ಅದು ಎಂದರೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಜಿಲ್ಲಾ ಪಂಚಾಯಿತಿ ವ್ಯವಸ್ಥೆ. ಇದೆಲ್ಲವೂ ಮುಗಿದುಹೋಗಿದೆ. ನನ್ನ ಕ್ಷೇತ್ರದ ಹೆಡ್‌ಕ್ವಾರ್ಟರ್ ಎಂದರೆ ಹೊಸನಗರ.

ಇದು ಯಾವ ವ್ಯವಸ್ಥೆಗೆ ಒಳಪಡುತ್ತದೆ? ಒಂದೂ ಕಾಲು ವರ್ಷವಾದರೂ ಇನ್ನೂ ಅಲ್ಲಿ ಏತಕ್ಕೆ ಚುನಾವಣೆಯನ್ನು ಮಾಡಿಲ್ಲ? ಇದು ನನಗೆ ಇನ್ನೂ ಅರ್ಥವಾಗಿಲ್ಲ. ನನ್ನ ಜಿಲ್ಲೆಯಲ್ಲಿ ಹೊನ್ನಾಳಿ ಎಂಬುದು ತಾಲೂಕು ಹೆಡ್‌ಕ್ವಾರ್ಟರ್. ಅಲ್ಲಿ ಏತಕ್ಕೆ ಚುನಾವಣೆ ಮಾಡಿಲ್ಲ ಎಂಬುದು ಅರ್ಥವಾಗುತ್ತಿಲ್ಲ. ಇದು ಬಹುಶಃ 4ನೇ ಹಂತದ ವ್ಯವಸ್ಥೆ ಇರಬಹುದು ಅನಿಸುತ್ತದೆ. ಇದರ ಕಲ್ಪನೆ ಏನೆಂಬುದು ಬಹುಶಃ ಆಡಳಿತ ಪಕ್ಷಕ್ಕೂ ಕೂಡ ಇಲ್ಲ. ಅಲ್ಲಿ ಆಡಳಿತಾಧಿಕಾರಿಯೇ ಅಧಿಕಾರ ನಡೆಸಿಕೊಂಡುಹೋಗುತ್ತಿದ್ದಾರೆ. ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯ ಒಂದು ಅಪಹಾಸ್ಯದ ಚಿಹ್ನೆಗಳಾಗಿ ಇವು. ಇನ್ನೂ ಉಳಿದುಕೊಂಡಿವೆ ಕೆಲವು ಕ್ಷೇತ್ರದ ಹೆಡ್‌ಕ್ವಾರ್ಟರ್‌ಗಳಲ್ಲಿ ಚುನಾವಣೆ ಆಗಿಲ್ಲ. ಟೌನ್ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಇನ್ನೊಂದು, ಮತ್ತೊಂದು ಹೇಳುತ್ತೇವೆ. ಅದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆ? ಕಾನೂನಿನಲ್ಲಿ . ಅದರ ಸ್ವರೂಪ ಏನು? ಅದರ ವ್ಯಾಪ್ತಿ ಏನೆಂಬುದು ನಮ್ಮಲ್ಲಿ ಯಾರಿಗೂ ಗೊತ್ತಿಲ್ಲ. ಬಹುಶಃ ಆಯಾಯ ಸಂದರ್ಭಕ್ಕೆ, ರಾಜಕೀಯ ಲಾಭಕ್ಕೋಸ್ಕರ ನಡೆದುಕೊಳ್ಳುತ್ತಿರುವ ಆಡಳಿತ ಪಕ್ಷಕ್ಕೂ ಕೂಡ ಗೊತ್ತಿಲ್ಲವೆಂದು ನಾನು ಭಾವಿಸುತ್ತೇನೆ. ಇದನ್ನು ನೀವು ಯಾವುದಾದರೊಂದು ವ್ಯವಸ್ಥೆಗೆ ಒಳಪಡಿಸಿ. ಏಕೆಂದರೆ ಅದು ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಇಲ್ಲ, ತಾಲೂಕು ಪಂಚಾಯಿತಿ ವ್ಯವಸ್ಥೆಯಲ್ಲಿಲ್ಲ. ಅಥವಾ ಜಿಲ್ಲಾಪಂಚಾಯಿತಿಯ ವ್ಯವಸ್ಥೆಯಲ್ಲಿಲ್ಲ, ಅಷ್ಟೇ ಅಲ್ಲ ಮುನಿಸಿಪಾಲಿಟಿ ವ್ಯವಸ್ಥೆಯಲ್ಲೂ ಇಲ್ಲ. ಅಲ್ಲಿರತಕ್ಕದ್ದು 4500 ಜನಸಂಖ್ಯೆ., ಹಾಗಾದರೆ ನನ್ನ ಕ್ಷೇತ್ರವಾದ ಹೊಸನಗರ ಟೌನ್ ಗತಿ ಏನು? ಇದರ ಬಗ್ಗೆ ಸ್ಪಷ್ಟೀಕರಣ ಕೊಡುವುದಾದರೆ ಕೊಡಬಹುದು. ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ನಾವು ಬಹಳ ಸಾಧನೆಯನ್ನು ಮಾಡಿದ್ದೇವೆಂದು ಇವರು ಹೇಳಿಕೊಳ್ಳುತ್ತಿದ್ದಾರೆ. ಈಸಾರಿ ಇದಕ್ಕೆ ಸಂಬಂಧ ಪಟ್ಟಂತೆ ಒಂದು ತಿದ್ದುಪಡಿಯನ್ನೂ ಕೂಡ ಮಂಡನೆ ಮಾಡಿದ್ದಾರೆ. ಈ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ . ಗ್ರಾಮಪಂಚಾಯಿತಿಗೆ ಸ್ಥಾನವೇನಾದರೂ ಇದೆಯೇ ಮೊದಲು ಇದ್ದಂಥ ಕಾಯಿದೆಯ ಪ್ರಕಾರ ತಾಲ್ಲೂಕು ಪಂಚಾಯಿತಿ ಅತ್ಯಂತ ಬಲಿಷ್ಟ ಸಂಸ್ಥೆ. ಈ ಒಂದೂಕಾಲು ವರ್ಷದ ಅವಧಿಯಲ್ಲಿ ಅದಕ್ಕೇನಾದರೂ ಅವಕಾಶ ಸಿಕ್ಕಿದೆಯೇ? ಅಂದರೆ ಸಿಕ್ಕಲಿಲ್ಲ ಎಲ್ಲವನ್ನೂ ಜಿಲ್ಲಾ ಪಂಚಾಯಿತಿಯೇ ಮಾನಿಟರಿಂಗ್ ಮಾಡುತಿತ್ತು ಹಣವನ್ನು ಬಿಡುಗಡೆ ಮಾಡುವುದು ಇರಲಿ. ಕಾರ್ಯಕ್ರಮಗಳನ್ನು ಯೋಜನೆ ಮಾಡುವುದು ಇರಲಿ, ಕ್ರಿಯಾ ಯೋಜನೆಯನ್ನು ತಯಾರಿಸುವುದು ಇರಲಿ, ಎಲ್ಲವನ್ನೂ ಜಿಲ್ಲಾ ಪಂಚಾಯಿತಿಯೇ ಮಾಡುತ್ತಿತ್ತು. ನಾವು ಈ ಪಂಚಾಯಿತ್‌ಆಕ್ಟ್‌ನ್ನು ಏನು ಪಾಸ್ ಮಾಡಿದ್ದೇವೆ ಇದಕ್ಕೆ ಮೂರು ಕಾಸಿನ ಕಿಮ್ಮತ್ತೂ ಕೂಡ ಇಲ್ಲ. ಆ ರೀತಿಯಲ್ಲಿ ಕಳೆದ ಒಂದೂಕಾಲು ವರ್ಷದಿಂದ ಈ ರಾಜ್ಯದಲ್ಲಿ ಆಡಳಿತ ನಡೆದಿದೆ. ವಿಕೇಂದ್ರೀಕರಣ. ಗರಿಯನ್ನು ಸಿಕ್ಕಿಸಿಕೊಳ್ಳುವುದಕ್ಕೆ ನಮ್ಮ ಆಡಳಿತ ಪಕ್ಷದ ಸದಸ್ಯರು, ಇನ್ನೂ ಬೇರೆ ಬೇರೆ ಪ್ರಮುಖರು ಒಪ್ಪಿಕೊಂಡಿದ್ದಾರೆ. ಈ ರೀತಿಯ ವ್ಯವಸ್ಥೆಯಲ್ಲಿ ಬಹಳ ಜಿಲ್ಲೆಗಳಲ್ಲಿ ತಾಲ್ಲೂಕು ಪಂಚಾಯಿತಿಯ ಕ್ರಿಯಾ ಯೋಜನೆಗಳನ್ನು ತಯಾರಿಸಲಿಲ್ಲ. ಗ್ರಾಮ ಪಂಚಾಯಿತಿಯ ಕ್ರಿಯಾ ಯೋಜನೆಗಳನ್ನು ತಯಾರಿಸಲಿಲ್ಲ.ಎಲ್ಲಾ ಆಕ್ಷನ್ ಪ್ಲಾನ್‌ಗಳನ್ನೂ ಜಿಲ್ಲಾ ಪಂಚಾಯಿತಿ ಮಾಡಿ ಅಪೆಂಡಿಕ್ಸ್‌ನ್ನು ಅನುಮೋದನೆಗೆ ಕಳುಹಿಸಿಕೊಟ್ಟರೆ. ನನ್ನ ಜಿಲ್ಲೆಯನ್ನೂ ಇದೇ ರೀತಿ ಆಯಿತು. ನಾನು ಇಲ್ಲಿ ಪ್ರಸ್ತಾಪವನ್ನು ಎತ್ತಿದ ಮೇಲೆ ನಾಮಕಾವಸ್ಥೆಯಾಗಿ ತಾಲ್ಲೂಕು ಪಂಚಾಯಿತಿಗಳಲ್ಲಿ ಅಪೆಂಡಿಕ್ಸ್ 'ಸಿ'ಗೆ ಅನುಮೋದನೆಯನ್ನು ಪಡೆದುಕೊಳ್ಳುವಂಥ ನಾಟಕ ಕಾನೂನು ಬದ್ಧವಾಗಿ ಏನು ನಡೆಯಬೇಕೋ ಅದು ನಡೆಯಿತು.

ಆದರೆ ಇದುವರೆಗೂ ಯಾವುದಾದರೂ ಗ್ರಾಮ ಪಂಚಾಯಿತಿಯವರು ಕ್ರಿಯಾ ಯೋಜನೆಗಳನ್ನು ಮಾಡಿ ಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಟ್ಟಿದ್ದಾರೆಯೇ? ಗ್ರಾಮ ಪಂಚಾಯಿತಿಯು ತಯಾರಿಸಿ ಕೊಟ್ಟಂಥ ಕ್ರಿಯಾ ಯೋಜನೆಯನ್ನು ತಾಲೂಕು ಪಂಚಾಯಿತಿಯು ಅದನ್ನು ಸರಿಪಡಿಸಿ ಫೈನಲ್‌ಗೋಸ್ಕರ ಜಿಲ್ಲಾ ಪಂಚಾಯಿತಿಗೆ ಕಾನೂನು

ಪ್ರಕಾರ ಕಳುಹಿಸಿಕೊಡುವ ಕೆಲಸ ಈ ನಿಮ್ಮ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ನಡೆಯಿತೇ, ನಡೆದಿಲ್ಲ. ಇವತ್ತು ಉದಾಹರಣೆಗೆ ಹೇಳುವುದಾದರೆ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷರು ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಅದನ್ನು ತಾಲ್ಲೂಕು ಪಂಚಾಯಿತಿಯು ಸೂಪರ್ ಸೀಡ್ ಮಾಡುತ್ತದೆ. ತಾಲ್ಲೂಕು ಪಂಚಾಯಿತಿಯವರು ತೆಗೆದುಕೊಂಡ ತೀರ್ಮಾನವನ್ನು ಜಿಲ್ಲಾ ಪಂಚಾಯಿತಿಯವರು ಸೂಪರ್‌ಸೀಡ್ ಮಾಡುತ್ತಾರೆ. ಇಲ್ಲಿ ಒಂದು ಬಾವಿ ಆಗಬೇಕೆಂದು ಹೇಳಿದರೆ ತಾಲ್ಲೂಕು ಪಂಚಾಯಿತಿಯವರು ನಾನು ಹೇಳಿದ ಕಡೆ ಆಗಬೇಕೆಂದು ಹೇಳುತ್ತಾರೆ. ತಾಲ್ಲೂಕು ಪಂಚಾಯಿತಿಯವರು ಒಂದು ತೀರ್ಮಾನವನ್ನು, ತೆಗೆದೆಕೊಂಡರೆ, ನಾನು ಹೇಳಿದ ಕಡೆ ಆಗಬೇಕೆಂದು ಜಿಲ್ಲಾ ಪಂಚಾಯಿತಿಯವರು ಹೇಳುತ್ತಾರೆ. ಈ ನಿಮ್ಮ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಸಣ್ಣ ಮಿನನ್ನು ದೊಡ್ಡ ಮಿನು, ಆ ದೊಡ್ಡ ಮೀನು ಇನ್ನೊಂದು ದೊಡ್ಡ ಮೀನು ನುಂಗುತ್ತದೆ. ಇಂಥ ಒಂದು ಆಡಳಿತ ವ್ಯವಸ್ಥೆ ಇದೆ. ಇದು ಪ್ರಸ್ತುತ ಇರತಕ್ಕ ಕಾಯಿದೆಯ ಪ್ರಕಾರ ಇಲ್ಲ, ಗ್ರಾಮ ಪಂಚಾಯಿತಿಯಲ್ಲಿನ ಅಧ್ಯಕ್ಷನಿಗೆ ಯಾವುದೇ ಅಧಿಕಾರವಿದ್ದರೂ ಅವನು ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಗೆ ಹೋದರೆ ಅಲ್ಲಿ ಅವನಿಗೆ ಸರಿಯಾದ ಸ್ಥಾನಮಾನ, ಗೌರವಗಳು ಸಿಕ್ಕುವುದಿಲ್ಲ. ಇವತ್ತು ಈ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹೇಳಿದ್ದಾರೆಂದರೆ ಡಸ್ಟ್‌ಬಿನ್ಸ್ ಇದ್ದ ಹಾಗೆ.

ಗ್ರಾಮದಲ್ಲಿರುವ ಡಸ್ಟ್‌ಬಿನ್ ಇದ್ದಂತೆ. ಅಲ್ಲಿ ಏನೂ ಕೆಲಸವಾಗಿಲ್ಲ ಎಂದರೆ ಜನರು ಉಗಿಯುವುದಕ್ಕೆ ಒಂದು ವ್ಯವಸ್ಥೆ ಬೇಕಲ್ಲಾ, ಅದಕ್ಕಾಗಿ ಗ್ರಾಮ ಪಂಚಾಯಿತಿಯವರನ್ನು ಉಗಿಯುತ್ತಾರೆ. ಆಶ್ರಯ ಯೋಜನೆಗೆ ಹಣ ಬಿಡುಗಡೆ ಆಗಲಿಲ್ಲ, ಲಕ್ಷ ಮನೆಗಳನ್ನು ಕಟ್ಟಿಸಿ ನಮಗೆ ಕೊಡುತ್ತಾರೆಂದು ಜನರು ಬಂದು ಶಾಸಕರ ಮನೆಯ ಬಾಗಿಲನ್ನು ತಟ್ಟುತ್ತಾರೆ. ಸರ್ಕಾರದವರು ಲಕ್ಷ ಮನೆಗಳನ್ನು ಕಟ್ಟುತ್ತಾರಂತೆ, ಕಳೆದ ಸಾರಿ ನಾವು ಆಶ್ರಯ ಯೋಜನೆಯಡಿಯಲ್ಲಿ ನಾವು ಮನೆಗಳನ್ನು ಕಟ್ಟಿಬಿಟ್ಟಿದ್ದೇವೆ, ನೀವು ಕಟ್ಟಿಕೊಳ್ಳಿ ಹಂತಹಂತವಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹಿಂದಿನ ಸರ್ಕಾರ ಹೇಳಿತ್ತು, ಅದನ್ನು ನಂಬಿಕೊಂಡು ನಾವು ಮನೆಯನ್ನು ಕಟ್ಟಿದ್ದೇವೆ, ಸಾಲಗಾರರಾಗಿದ್ದೇವೆ ನಮಗೆ ಬರಬೇಕಾದ ಹಣ ಬಂದಿಲ್ಲ ಎಂದು ಜನರು ಕೇಳುತ್ತಾರೆ. ಅದನ್ನು ಏನಾದರೂ ಕೊಡುತ್ತಾರೆಯೇ ಎಂದು ಕೇಳಿದರೆ, ಇಲ್ಲ ಎಂದು ಹೇಳುತ್ತಾರೆ.

ಇದು ಹಿಂದಿನ ಸರ್ಕಾರ ಮಾಡಿದ್ದುದು, ಹಿಂದಿನ ಸರ್ಕಾರ ಮಾಡಿದ್ದುದು ಎಂದು ಹೇಳುತ್ತಾರೆ. ಹಳೇ ಬಾಕಿ ಅಲ್ಲೇ ಪೆಂಡಿಂಗ್ ವರ್ಷಕ್ಕೆ ಒಂದು ಲಕ್ಷ ಮನೆಗಳನ್ನು ಇವರು ಕೊಡುತ್ತಾರಂತೆ ಈ ಸರ್ಕಾರದಲ್ಲಿ ನನ್ನ ಒಂದೇ ಒಂದು ವಿನಂತಿ ಎಂದರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರು ನಮ್ಮ ಶಿವಮೊಗ್ಗಾ ಜಿಲ್ಲೆಗೆ ಬಂದಿದ್ದಾಗ ಈ ವಿಚಾರವನ್ನು ಜಿಲ್ಲಾ ಮಿಟಿಂಗ್‌ನಲ್ಲಿ .ನಮ್ಮ ಮಾನ್ಯ ಉಪಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಾವು ಪ್ರಶ್ನೆ ಮಾಡಿದೆವು. ಸ್ವಾಮಿ, ಆ ಬಡವ ಇಟ್ಟಿಗೆಯನ್ನು ಸಾಲ ತೆಗೆದುಕೊಂಡು ಮನೆಯನ್ನು ಕಟ್ಟಿಬಿಟ್ಟಿದ್ದಾನೆ. ಹೆಂಚು ಸಾಲ ತೆಗೆದುಕೊಂಡು ಬಂದು ಮನೆಯನ್ನು ಕಟ್ಟಿಬಿಟ್ಟಿದ್ದಾನೆ.

ಆ ಸಾಲದ ಬಡ್ಡಿ ಹೇಗೆ ನಡೆಯುತ್ತಿದೆ ಎಂದರೆ 8 ರೂಪಾಯಿ 10 ರೂಪಾಯಿ ನಡೆದುಕೊಂಡು ಆ ಬಡವ ಮನೆ ಬಿಟ್ಟು ಓಡಿ ಹೋಗುವ ಪರಿಸ್ಥಿತಿ ಬಂದಿದೆ. ತಮ್ಮ ಕೈಯಲ್ಲಿ ಅಧಿಕಾರ ಜಾಸ್ತಿ ಇದೆ ಶಿವಮೊಗ್ಗ ತಾಲ್ಲೂಕು ಪಂಚಾಯಿತಿ ಎದುರುಗಡೆ ಹೆಂಚು ಸಾಲ ಕೊಟ್ಟಂತವರು, ಇಟ್ಟಿಗೆ ಸಾಲ ಕೊಟ್ಟಂಥವರು ಏನಿದ್ದಾರೆ ಅವರು ಈ ಫಲಾನುಭವಿಗಳಿಗೆ ಬಾಕಿ ಏತಕ್ಕೆ ಕೊಟ್ಟಿಲ್ಲವೆಂದು ಹೊಡೆದರೋ ಇಲ್ಲವೋ ಎಂದಪ ತಿಳಿಸಿ. ತಾಲ್ಲೂಕು ಪಂಚಾಯಿತಿ ಎದುರುಗಡೆ ಓಡಾಡಿಸಿಕೊಂಡು ಫಲಾನುಭವಿಗಳಿಗೆ ಹೊಡೆದರು. ಯಾವ ಸರ್ಕಾರವನ್ನು ನಂಬಿ ಯಾವ ಫಲಾನುಭವಿ

ಕನಸು ಕಟ್ಟಿ ಕೊಂಡು ಮನೆಯನ್ನು ಕಟ್ಟಿಕೊಂಡನೋ ಅವನು ಇವತ್ತು ತವ ಸ್ವಂತ ಮನೆಯಲ್ಲೇ ಬದುಕುವುದಕ್ಕೆ ಸಾಧ್ಯವಾಗುತ್ತಿಲ್ಲ. ಊರಿನಲ್ಲಿ ಬದುಕುವುದ ಸಾಧ್ಯವಾಗುತ್ತಿಲ್ಲ. ಅವನನ್ನು ರಕ್ಷಣೆ ಮಾಡುವಂಥ ಕಾಳಜಿ ಈ ಸರ್ಕಾರಕ್ಕೆ ಇ ಹೊಸ ಮನೆಗಳಿಗೆ ಸಾಲ ಕೊಟ್ಟಿರುತ್ತಾರೆ. ದಯವಿಟ್ಟು ಈ ವ್ಯವಸ್ಥೆಯನ್ನು ಬದಲಾವ ಮಾಡಬೇಕು ಕೂಡಲೇ ಯಾರ್ಯಾರು ಸಾಲಗಾರರಾಗಿ ನರಳುತ್ತಿದ್ದಾರೆ. ಆಶ್ರಯ ಮನೆಗಳನ ಕಟ್ಟಿಕೊಂಡು ನಿರಾಶ್ರಿತರಾಗಿದ್ದಾರೆ ಅಂಥವರು ಎಲ್ಲಾ ಗ್ರಾಮ ಪಂಚಾಯಿತಿ, ತಾಲ್ಲೂಕ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಓಡಾಡುತ್ತಿದ್ದಾರೆ. ನಿರಾಶ್ರಿತರನ ಆಶ್ರಯ ಗೊಳಿಸಿ, ಅವರನ್ನೂ ಊರು ಬಿಡಿಸಬೇಡಿ.

ನೀವು ಸೂರು ಕೊಡಿ ಚಿಂತೆ ಇಲ್ಲ, ಆದರೆ ಅವರನ್ನು ಮಾರಬೇಡಿ. ಇದ ಕಟು ವಾಸ್ತವವಾದ ಸಂಗತಿ. ಇನ್ನು ಒಂದು ಸಂಗತಿ ಎಂದರೆ, ಈ ಜಿಲ ಪಂಚಾಯಿತಿ ಮಸೂದೆ ಏನಿದೆ ಅದಕ್ಕೆ ಒಂದು ಕ್ಲಾರಿಫಿಕೇಷನ್ ಮಾಡಬೇಕು ಇವತ್ತು ಕೊಟ್ಟಿರುವಂಥ ಆಕ್ಟ್‌ನಲ್ಲಿ ಏನಿದೆ ಅದನ್ನು ಓದುತ್ತೇನೆ. ಚುನಾಯಿ ಪ್ರತಿನಿಧಿಗಳಾದ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರಿಗೆ ಆಗಲಿ, ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಿಗೆ ಆಗಲಿ ಕೊಟ್ಟಿರುವಂಥ ಒಂದು ಅಧಿಕಾರ ಏನಿದೆ ಅದು ಈ ರೀ ಇದೆ.

"Supernsion and control over the emplayees including Chief Administrativ Officer".ಇವರ ಸಿ.ಆರ್. ಅನ್ನು ಬರೆಯಬಹುದೇ? ಅವರಿಗೆ ಸಿ.ಆರ್. ಬರೆಯು ಅಧಿಕಾರವನ್ನು ಕೊಟ್ಟಿದ್ದರೆ.ಅದನ್ನು ಪುನರ್ ವಿಮರ್ಶೆ ಮಾಡುವುದು ಒಳ್ಳೆಯದು ಇಲ್ಲದಿದ್ದರೆ ಅಷ್ಟು ಜನ ಅಧಿಕಾರಿಗಳಿಗೂ ತೊಂದರೆಯಾಗುತ್ತದೆ. ಏಕೆಂದರೆ ಒಂದ ಕಡೆ ಕಾಂಗ್ರೆಸ್ ನವರು ಇರಬಹುದು, ಇನ್ನೊಂದು ಕಡೆ ದಳದವರು ಇರಬಹುದು ಮತ್ತೊಂದು ಕಡೆ ಬಿಜೆಪಿ. ಯವರು ಇರಬಹುದು, ಅವರ ಸರ್ವೀಸ್ ರೆಕಾರ್ಡ್ ಬರೆಯುವ ಅಧಿಕಾರವನ್ನು ಏನಾದರೂ ಚುನಾಯಿತ ಅಧ್ಯಕ್ಷರ ಕೈಯಲ್ಲಿ ಕೊಟ್ಟ ಖಂಡಿತ ಕ್ರಾಷ್ ಆಗುತ್ತದೆ. ಈ ಪೊಲಿಟಿಕಲ್ ಡಿಶಿಷನ್‌ನಿಂದ ಆ ಅಧಿಕಾರಿಗಳ ಜೀವನಪರ್ಯಂತ ಪರಿತಪಿಸಿಬೇಕಾಗುತ್ತದೆ. ಇವತ್ತು ದಳದ ಅಧಿಕಾರ ಇರಬಹುದು. ನಾಳೆ ನಾನು ಅಧಿಕಾರಕ್ಕೆ ಬಂದಾಗ ನೀನು ನನ್ನ ಮಾತು ಕೇಳಲಿಲ್ಲವೆಂದು ಅಧಿಕಾರಿಯು ಸಿ.ಆರ್. ಅನ್ನು ನಾನು ಬರೆಯುತ್ತೇನೆ. ನಾನು ಹೇಳಿದ ಹಾ ಕೇಳಲಿಲ್ಲ. ನೀನು, ಅವರು ಹೇಳಿದ ಹಾಗೆ ಕೇಳಿದೆ ಎಂದು ಪೊಲಿಟಿಕಲ್ ಮೋಟಿವೇಟೆಡ್ ಆಕ್ಷನ್ ಆಗುತ್ತದೆ. ಅಧಿಕಾರಿಗಳು ಡೀಮಾರಲೈಸ್ ಆಗುತ್ತಾರೆ. ಮೇಲಟ್ಟದಲ್ಲಿ ಈ ವ್ಯವಸ್ಥೆ ಇಲ್ಲವೆ? ಇದೆ, ಸರ್ಕಾರದಲ್ಲಿ ರಿಟೈರ್ ಆಗುವ ಹಂತಕ ಬಂದಿರುವ ಸರ್ಕಾರದ ಕಾರ್ಯದರ್ಶಿ ಇರುತ್ತಾರೆ. ಅಲ್ಲಿ ಅವರ ಸಿ.ಆರ್.ಅನ್ನು ಮುಖ್ಯಮಂತ್ರಿಗಳು ಬರೆಯುತ್ತಾರೆ. ಆದರೆ ಇಲ್ಲಿ ಬಂದಿರುವವರು ಯಾರು? ಹೊಸದಾ ಐ.ಎ.ಎಸ್. ಮಾಡಿದಂತವರು, ಹೊಸದಾಗಿ ಕೆ.ಎ.ಎಸ್. ಮಾಡಿದಂತವರು, ಇಲ್ಲಿ ಏನಾದರೂ ಕ್ರಾಷ್ ಆದರೆ ಹೋಲ್ ಲೈಫ್ ಕ್ರಾಷ್ ಆಗುತ್ತದೆ. ಅದರಲ್ಲಿ ನೀವ ಸ್ಪಷ್ಟ ಮಾಡಬೇಕು. ಸಿ.ಆರ್.ಅನ್ನು ಬರೆಯುವ ಅಧಿಕಾರ ಬಹಳ ಜವಾಬ್ದಾ ಸ್ಥಾನದಲ್ಲಿರುವವರು ನ್ಯಾಯ ಸಮತ್ವವಾದ ತಕ್ಕಡಿಯಲ್ಲಿ ಇಟ್ಟು ತೂಕ ಮಾಡುವವ ಕೈಯಲ್ಲಿ ಕೊಡಬೇಕೇ ಹೊರತು ಸ್ಥಳೀಯ ರಾಜಕೀಯದಲ್ಲಿ ವೈಮನಸ್ಯ ಬಂದ ಅಧಿಕಾರಿಗಳನ್ನು ಮಟ್ಟ ಹಾಕುವಂತೆ ಮಾಡುವ ಅವಕಾಶ ಮಾಡಿಕೊಟ್ಟಂತಾಗುತ್ತದೆ ಇನ್ನು 800ಕೋಟಿ ರೂಪಾಯಿಗಳನ್ನು ಕೃಷ್ಣ ಬೀಜ ನಿಗಮ ಮೂಲಕ ಸಂಗ್ರಹಿಸುತ್ತೇವೆಂದು ಹಿಂದಿನ ಅಧಿವೇಶನದಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದರು. ಅದರಲ್ಲಿ ವಿವರವಾಗಿ ಹೇಳಿದ್ದಾರೆ. 800 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುತ್ತೇವೆಂದು ಹೇಳಿದವರು, 2000 ಇಸವಿಯೊಳಗೆ ಕೃಷ್ಣ ಯೋಜನೆ ಜಾರಿಗೆ ತರುತ್ತೇವೆ, ಅದು

ಮಾಡುತ್ತೇವೆ, ಇದು ಮಾಡುತ್ತೇವೆಂದು ಹೇಳಿದವರು, ರಾಜ್ಯಪಾಲರು ಮಾಡಿದಂಥ ಭಾಷಣದಲ್ಲಿ ಈ ಸಾಲಿಗೆ 800 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುತ್ತೇವೆಂದು ಹೇಳಿ ಮಾಡಿದ್ದು ಎಷ್ಟು? 180 ಕೋಟಿ ರೂಪಾಯಿಗಳು ಮಾತ್ರ. ಇನ್ನು 620 ಕೋಟಿ ರೂಪಾಯಿ ಸಂಗ್ರಹಿಸುವುದಕ್ಕೆ ಆಗಲಿಲ್ಲ, ಅದನ್ನು ಮಾಡಿ 250 ಕೋಟಿಗೆ ಇಳಿಸಿ ಕೊಂಡಿದೆ. 250 ಕೋಟಿ ರೂಪಾಯಿಗಳನ್ನು ಎರಡನೇ ಹಂತದಲ್ಲಿ ಮಾಡುತ್ತೇವೆ. ಎರಡನೇ ವರ್ಷದಲ್ಲಿ ಮಾಡುತ್ತೇವೆಂದರೆ ಇದು ವಿಪರ್ಯಾಸ. ಸಂವಿಧಾನದ ಒಬ್ಬ ಪ್ರಮುಖನ ಬಾಯಲ್ಲಿ ಈ ಗೌರವಾನ್ವಿತ ಸಭೆಯಲ್ಲಿ ಅಥವಾ ಹಗುರವಾದ ಮಾತುಗಳನ್ನು ಆಡಿಸಿದಂತಾಗಿದೆ ಎಂದು ಅತ್ಯಂತ ವಿಷಾದದಿಂದ ಹೇಳುತ್ತಿದ್ದೇನೆ. ಇನ್ನು ಮೂರನೆಯದಾಗಿ. ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಎ.ಪಿ.ಎಂ.ಸಿ.ಯಿಂದ 50 ಕಿಲೋಮೀಟರ್ ರಸ್ತೆ ಮಾಡುತ್ತೇವೆಂದು ಸರ್ಕಾರ ಪ್ರತಿನಿತ್ಯ ಪ್ರಕಟಣೆ ಕೊಡುತ್ತಿದೆ. ಕಣದಿಂದ ಪ್ರಾಂಗಣಕ್ಕೆ ಎಂಬ ಅನೌನ್ಸ್‌ಮೆಂಟ್‌ನಲ್ಲಿ ಹೀಗಿದೆ. ಈ ವರ್ಷ ನಾವು 15 ಲಕ್ಷದ ಕೆಲಸ ಮಾಡಬಹುದೆಂದು ಹೇಳಿದರೆ ಒಳ್ಳೆಯದು. ಜನರು ಏನು ತಿಳಿದುಕೊಂಡಿದ್ದಾರೆಂದರೆ 50 ಕಿಲೋಮೀಟರ್ ರಸ್ತೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಆಗುತ್ತದೆ. ನಮ್ಮ ಊರಿಗೆ ಏತಕ್ಕೆ ಕೊಟ್ಟಿಲ್ಲ ಎನ್ನುತ್ತಾರೆ. ಎಷ್ಟು ಮಿಸ್‌ಲೀಡಿಂಗ್ ಅಡ್ವರ್ಟೈಸ್‌ಮೆಂಟ್ ಇದು. ಈ ವರ್ಷ 50 ಕಿಲೋಮೀಟರ್ ಮಾಡಿಬಿಡುತ್ತೇವೆ ಎಂದು ಹೇಳುವುದು. ನಮಗೆ ಜಾಹೀರಾತಿನಂತೆ ಬರಬೇಕಾದುದು ಬರುವುದಿಲ್ಲ.

ಶ್ರೀ ಜಿ.ವಿ. ಶಿವಕುಮಾರ್ : 5 ವರ್ಷದೊಳಗೆ ಇಷ್ಟು ಕಿಲೋಮೀಟರ್ ರಸ್ತೆ ಮಾಡುತ್ತೇವೆಂದು ವಿವರ ಕೊಟ್ಟಿದ್ದೇವೆ.

ಶ್ರೀ ಆಯನೂರು ಮಂಜುನಾಥ : ಮಿಸ್‌ಲೀಡಿಂಗ್ ಅಡ್ವರ್ಟೈಸ್‌ಮೆಂಟ್ - ಲಕ್ಷ ಮನೆಗಳು ಸರ್ವತ್ರ ರಸ್ತೆಗಳು, ಅಂತವಿಲ್ಲ ಹೇಳಿ ನಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಬೇಡಿ. ಶಾಸಕರು ತಮಗೆ ಬೇಕಾದ ಜಾಗದಲ್ಲಿ ಮಾತ್ರ ಮಾಡಿಕೊಳ್ಳುತ್ತಾರೇನೋ, ನಮ್ಮ ಗ್ರಾಮಕ್ಕೆ ಮಾಡಿಲ್ಲವೆಂದು ನಮ್ಮ ರಾಜಕೀಯಕ್ಕೆ ಅವರು ಎಳ್ಳು ನೀರು ಬಿಡುವುದು ಬೇಡ. ದಯವಿಟ್ಟು ತಾವು ಏನು ಮಾಡಬೇಕೆಂದಿದ್ದೀರಿ ಅದನ್ನು ಸ್ಪಷ್ಟವಾಗಿ ಹೇಳಿ. 50 ಕಿಲೋಮೀಟರ್ ಮಾಡಬೇಕೆಂದಿದ್ದೇವೆ. ಈ ವರ್ಷ ಮಾರ್ಚ್ ಒಳಗೆ ಇಷ್ಟೇ ಮಾಡುವುದು ಎಂದು ಏತಕ್ಕೆ ಹೇಳುವುದಿಲ್ಲ? ಮಿಸ್‌ಲೀಡಿಂಗ ಏಕೆ? ಸರ್ಕ್ಯುಲರ್ ನಮಗೆ ಬಂದಿರುವುದು ಮತ್ತು ಸಾಮಾನ್ಯ ಜನಕ್ಕೆ ಕೊಡುವಂಥ ಮೆಸೇಜ್ ಬಗ್ಗೆ ನಾನು ಮಾತನಾಡುತ್ತಿದ್ದೇವೆ.

ಶ್ರೀ ಜಿ.ವಿ. ಶಿವಕುಮಾರ್ : 15 ಲಕ್ಷದವರೆಗೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಮೇಜರ್ ವರ್ಕ್ಸ್ ತೆಗೆದುಕೊಳ್ಳತಕ್ಕದ್ದು ಎಂದು ಸ್ಪಷ್ಟವಾಗಿ ಬಂದಿದೆ. ಅದು ಪಕ್ಷಾತೀತವಾಗಿ ಬಂದಿರತಕ್ಕದ್ದು ಕ್ಷೇತ್ರಾವಾರು, ದಯವಿಟ್ಟು ನೋಡಿ, ವಿರೋಧ ಮಾಡುವುದಕ್ಕೆ ಮಾತ್ರ ಹೇಳತಕ್ಕದ್ದು ದಯವಿಟ್ಟು ಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಂಡ್ಯ ಜಿಲ್ಲೆಯ ಶಾಸಕರು 2-3 ಬಾರಿ ನಾನು ಮಾತನಾಡಬೇಕಾದರೆ ನಮ್ಮಲ್ಲಿ ಕೆಲಸ ಆಗುತ್ತಿದೆ ಹಣ ಕೊಟ್ಟಿದ್ದಾರೆಂದು ಹೇಳಿದರು. ನಾನು ಅದನ್ನು ಅಲ್ಲಗಳೆಯುತ್ತಿದ್ದೇನೆ. ನಮ್ಮಲ್ಲಿ ಏನಾಯಿತೆಂದರೆ, ನಮ್ಮ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷಣೆ ಒಬ್ಬರಿದ್ದಾರೆ. ಶಿಕಾರಿಪುರ ತಾಲ್ಲೂಕಿನಲ್ಲಿ ಒಂದು ಕಾರ್ಯಕ್ರಮ ಆಯಿತು. ಅಲ್ಲಿ ಸಾವಿರಾರು ಜನರು ಸೇರಿದ್ದರು. ಆ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳುತ್ತಾರೆ. ಎಡಿಯೂರಪ್ಪನವರಿಗೆ 30 ಲಕ್ಷ ರೂಪಾಯಿ ಹಣ ಲೋಕೋಪಯೋಗಿ ಇಲಾಕೆಯಿಂದ ಬಿಡುಗಡೆಯಾಗಿದೆ ರಸ್ತೆ ಕಲೆಸಕ ಮಾಡುವುದಕ್ಕೆ ಇಲ್ಲ ಎಲ್ಲಿಯೂ ಕೆಲಸ ಮಾಡಿಸಿಲ್ಲ, ಅವರನ್ನು ಹೋಗಿ ಹಿಡಿದು ಕೇಳಿ ಎಂದು ಜಿಲ್ಲಾ ಪರಿಷತ್ತಿನ ಅಧ್ಯಕ್ಷಿಣಿಯವರು ಭಾಷಣ ಮಾಡುತ್ತಾರೆ. ಈ [illegible] ಲೋಕೋಪಯೋಗಿ

ಸಚಿವರು ಇಲ್ಲೇ ಇದ್ದಾರೆ, ಅವರಿಗೆ ಕೇಳಿ. ನಮ್ಮ ಈ ಭಾಗದ ಯಾವುದಾದರೂ ತಾಲ್ಲೂಕಿನಲ್ಲಿ ಒಂದು ಕಿಲೋಮೀಟರ್ ಕೆಲಸ ತಾವು ಶಾಸಕರಿಗೆ ಕೊಟ್ಟಿದ್ದು ಪ್ರಾರಂಭವಾಗಿದೆಯೆಂಬುದು ಯಾವುದಾದರೂ ಇದ್ದರೆ ಉತ್ತರ ಕೊಡುವ ಕಾಲದಲ್ಲಿ ಪಟ್ಟಿ ಪ್ರಕಟ ಮಾಡಿ.

ಶ್ರೀ ಅರಗ ಜ್ಞಾನೇಂದ್ರ : ನನ್ನ ಕ್ಷೇತ್ರದಲ್ಲಿ 15 ಲಕ್ಷ ರೂಪಾಯಿ ಕೂಡಕೊಟ್ಟು ಆಗಿದೆ. ಆದರೆ ಜಿಲ್ಲಾ ಪರಿಷತ್ತು ತಮ್ಮ ರಸ್ತೆಯನ್ನು ಬಿಟ್ಟು ಕೊಡುತ್ತಿಲ್ಲ, ಏಕೆಂದರೆ ನಿಮ್ಮ ಕ್ಷೇತ್ರದ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದಾರೆ ಎಂದು ಜಿಲ್ಲಾ ಪರಿಷತ್ತಿನ ರಸ್ತೆಗಳು ಆಗಿವೆ. ಆದರೆ ಜಿಲ್ಲಾ ಪರಿಷತ್ತು ಎಪಿಎಂಸಿ.ಗೆ. ಹ್ಯಾಂಡ್‌ಓವರ್ ಮಾಡುತ್ತಿಲ್ಲ. ಅವು ಎಪಿಎಂಸಿ.ಗೆ ಹ್ಯಾಂಡ್ ಓವರ್ ಆಗಬೇಕು. ಅಲ್ಲಿಂದ ಲೋಕೋಪಯೋಗಿಗೆ ಹ್ಯಾಂಡ್ ಓವರ್ ಆಗಬೇಕು. ನಾನು ಹೇಳುತ್ತಿರುವುದು ಎಪಿಎಂಸಿ. ರಸ್ತೆ ನಾನು ಪ್ರೋಗ್ರಾಂ ಕೇಳಿದ್ದೇನೆ. ಎಪಿಎಂಸಿ.ಗೆ ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ಹ್ಯಾಂಡ್‌ಓವರ್ ಮಾಡುತ್ತಿಲ್ಲ, ಹೀಗಾಗಿ ಕೆಲಸ ಎಲ್ಲಿಯೂ ಪ್ರಾರಂಭವಾಗಲಿಲ್ಲ. ಟೆಂಡರ್ ಕರೆಯಲಿಲ್ಲ.

ಶ್ರೀ ಡಿ. ನಾರಾಯಣಸ್ವಾಮಿ : ನಾವು ಅದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. 28 ಸಾವಿರ ಕಿಲೋಮೀಟರ್ ರಸ್ತೆ ಮಾಡುತ್ತೇವೆಂದು ಮಾತು ಕೊಟ್ಟಿದ್ದೇವೆ. ಅದೇ ರೀತಿ ಯೋಜನೆಗಳನ್ನು ಜಾರಿ ಮಾಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಏನೂ ಮಾಡಿಲ್ಲವೆಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ, ಅವರ ಮೂಗಿನ ನೇರಕ್ಕೆ ತಕ್ಕ ಹಾಗೆ ನಡೆಯುವುದಕ್ಕೆ ಆಗುವುದಿಲ್ಲ. ಸರ್ಕಾರದ ಒಂದು ವ್ಯವಸ್ಥೆಯಲ್ಲಿ ನಡೆಯಬೇಕಾಗುತ್ತದೆ.

ಶ್ರೀ ಆಯನೂರು ಮಂಜುನಾಥ : ನನ್ನ ಪ್ರಕಾರ ನನ್ನ ಪ್ರಶ್ನೆಗೆ ಉತ್ತರ ಕೊಡುವವರು ಮುಂದೆ ಮಂತ್ರಿಯಾಗುತ್ತಾರೆಂದು ಕಾಣುತ್ತದೆ.

ಉಪಾಧ್ಯಕ್ಷರು : ಇಲ್ಲಿ ಮಾತನಾಡುವುದಕ್ಕೆ ಒಂದು ಪದ್ಧತಿ ಇದೆ. ಅಧ್ಯಕ್ಷರ ಅಪ್ಪಣೆ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಮಾತನಾಡುವ ಸದಸ್ಯರು ಈಲ್ಡ್ ಆದರೆ ಮಾತನಾಡಬೇಕು. ಯಾರು ಯಾರು ಯಾವಾಗ ಬೇಕಾದರೂ ಎದ್ದು ನಿಂತು ಮಾತನಾಡಿದರೆ ಏನೂ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಮಂಜುನಾಥ್ ಅವರೆ ಮಾತನಾಡಿ.

ಶ್ರೀ ಅಯನೂರು ಮಂಜುನಾಥ : ಈಗ ರಸ್ತೆಗಳ ಪ್ರಸ್ತಾಪವಾಗಿದೆ. ಹಿಂದಿನ ಸಾರಿ ಜನತಾ ಸರ್ಕಾರ ಬಂದಾಗ ಕೂಡ ಅಡ್ವಾನ್ಸ್ ಆಗಿ ಮೋಟಾರು ವೆಹಿಕಲ್ ಟ್ಯಾಕ್ಸನ್ನು ಸಂಗ್ರಹ ಮಾಡಿತ್ತು. ಈ ಸಾರಿಯೂ ಮಾಡಿದೆ. ಈ ತರಹ ಹತ್ತು ವರ್ಷಗಳಿಂದ ವೆಹಿಕಲ್ ಟ್ಯಾಕ್ಸ್ ಸಂಗ್ರಹ ಮಾಡಿದ್ದು ಎಷ್ಟು ಕೋಟಿ ಆಗುತ್ತದೆ? ಅದನ್ನು ರಸ್ತೆಗಳಿಗೆ ಖರ್ಚು ಮಾಡುತ್ತೀರಾ? ನಾವು ವೆಹಿಕಲ್ ಟ್ಯಾಕ್ಸ್ ಕೊಡುವಂತದ್ದು ನಮ್ಮ ವೆಹಿಕಲ್ಸ್ ಸುಸ್ಥಿತಿಯಲ್ಲಿ ಓಡಾಡಬೇಕು, ನಾವು ಓಡಾಡುವಂತ ರಸ್ತೆ ಚೆನ್ನಾಗಿರಬೇಕು ಎಂದು ಆ ಹಣವನ್ನು ಎಲ್ಲೋ ಬೇರೆ ಕಡೆ ವಿತರಣೆ ಮಾಡುವುದಕ್ಕೆ ಬರುವುದಿಲ್ಲ, ಆ ರೀತಿ ಅಡ್ವಾನ್ಸ್ ಆಗಿ ಲೈಫ್ ಟ್ಯಾಕ್ಸ್ ಮೂಲಕ ಸಂಗ್ರಹವಾಗಿರತಕ್ಕ ಹಣ ಎಷ್ಟು? ಅದನ್ನು ಯಾವ ರೀತಿ ರಸ್ತೆಗಳ ದುರಸ್ತಿಗೋಸ್ಕರ ಹೊಸ ರಸ್ತೆಗಳ ನಿರ್ಮಾಣಕ್ಕೋಸ್ಕರ, ಮೊಯಿಂಟೆನೆನಸ್ ಗೋಸ್ಕರ ಬಳಕೆ ಮಾಡುತ್ತೀರಿ? ಆ ಹಣವನ್ನು ಅದಕ್ಕೋಸ್ಕರ ಮೀಸಲಿಡಬೇಕು. ಇಲ್ಲಿ ಮಂದಿನ ಹತ್ತು ವರ್ಷದ ಆದಾಯ ಹೊರಟು ಹೋಯಿತು.

5.30 ಪಿ.ಎಂ.

ಇನ್ನು ಬರುವಂಥ ಹಣದಲ್ಲಿ ಹೊಸ ರಸ್ತೆಗಳನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ಆದಕ್ಕೋಸ್ಕರವೇ ಮಿಸಲಿಡುತ್ತಾರೆಯೇ ಅಥವಾ ಇಲ್ಲವೇ ಎನ್ನತಕ್ಕ

ಸ್ಪಷ್ಟೀಕರಣ ಕೊಡಬೇಕು. ಈ ಸಾರಿಯ ರಾಜ್ಯಪಾಲರ ಭಾಷಣದಲ್ಲಿ ಈ ದುಡಿದುಕೊಂಡು ತಿನ್ನುವವರಿಗೇನೂ ಬೆಲೆ ಇರುವ ಹಾಗೆ ಕಾಣುವುದಿಲ್ಲ. ಕಾರ್ಮಿಕರ ಬಗ್ಗೆ ಇನ್ನೊಂದರ ಬಗ್ಗೆ ಏನೂ ಚಕಾರವಿಲ್ಲ. ಅವರಿಗೆ ಏನೇನು ಫೆಸಿಲಿಟೀಸ್ ಕೊಡುತ್ತೀರಿ, ಅವನ ಜೀವನ ಹೇಗೆ ಸುಧಾರಿಸುತ್ತೀರೀ ಎನ್ನತಕ್ಕಂಥ ಒಂದೇ ಒಂದು ಪದ ಕೂಡ ಪ್ರಯೋಗ ಮಾಡಲಿಲ್ಲ. ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡಲಾಗುವುದು ಎಂದು ಹೇಳಿದ್ದಾರೆ. ಕಳೆದ ಬಾರಿ ನಾನು ಪ್ರಸ್ತಾಪವನ್ನು ಮಾಡಿದ್ದೆ ಕಾರ್ಮಿಕ ನ್ಯಾಯಾಲಯದಲ್ಲಿ ಇರತಕ್ಕ ಸಹಸ್ರಾರು ಕೇಸ್‌ಗಳ ಶೀಘ್ರ ವಿಲೇವಾರಿಯಾಗುವುದಕ್ಕೆ ಏನಾದರೂ ವ್ಯವಸ್ಥೆಯಾಯಿತಾ ಒಂದು ವರ್ಷದೊಳಗೆ? ಕಾರ್ಮಿಕ ನ್ಯಾಯಾಲಯಗಳಿಗೆ ನ್ಯಾಯಾಧೀಶರುಗಳನ್ನು ನೇಮಕ ಮಾಡಿದ್ದೀರಾ? ಹಿರಿಯರಿಂಗ್ ಫಾಸ್ಟಾಗಿ ಆಗುತ್ತಿದೆಯಾ? ಯಾರಾದರೂ ದುಡಿಕೊಂಡು ತಿನ್ನತಕ್ಕವರು ತನಗೆ ಅನ್ಯಾಯವಾಗಿದೆ ಎಂದು ನ್ಯಾಯಾಲಯಕ್ಕೆ ಹೋದರೆ 8, 10, 15 ವರ್ಷಗಳಿಂದ ಕೇಸ್‌ಗಳು ಬಾಕಿ ಇದ್ದಾವೆ ಅಂಥ ನ್ಯಾಯಾಲಯಗಳನ್ನು ಸರಿಪಡಿಸುವಂಥ ಈ ಒಂದು ವರ್ಷದೊಳಗೆ ಕಿಂಚಿತ್ ಕೆಲಸ ಕೂಡ ಆಗಿಲ್ಲ.

ಹಾಗಾದರೆ ಯಾವ ಸ್ವರೂಪದಲ್ಲಿ ನಮ್ಮ ಸರ್ಕಾರ ಕಾರ್ಮಿಕ ಹಿತಾಸಕ್ತಿಗಳನ್ನು ಕಾಪಾಡುತ್ತದೆ? ಅಸಂಘಟಿತ ಕಾರ್ಮಿಕರಲ್ಲಿ ಎಷ್ಟು ಜನರಿಗೆ ಕನಿಷ್ಟ ವೇತನವನ್ನು ಪುನರ್ ವಿಮರ್ಶೆ ಮಾಡಿದ್ದೀರಿ? ಎಷ್ಟು ಜನ ಕಾರ್ಮಿಕರನ್ನು ಈ ಷೆಡ್ಯೂಲ್‌ನಲ್ಲಿ ತೆಗೆದುಕೊಂಡು ಬಂದಿರಿ? ಮುಷ್ಕರ ಆದಂಥ ಜಾಗದೊಳಗೆ ಎಷ್ಟು ಜನರನ್ನು ಸೆಟ್ಲ್ ಮಾಡಿದ್ದೀರಿ? ಇದರ ಬಗ್ಗೆ ಒಂದೇ ಅಂಶವನ್ನು ಕೂಡ ಹೇಳಿಲ್ಲ. ಈ ಕೋಟ್ಯಾಂತರ ಜನ ಬಡವರ ಬಗ್ಗೆ ಒಂದೇ ಒಂದು ಮಾತನ್ನು ಕೂಡ ಆಡದೇ ಇರುವಂಥದ್ದು ಸರ್ಕಾರದ ಧೋರಣೆಯನ್ನು ಎತ್ತಿತೋರಿಸುತ್ತಿದೆಯ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುತ್ತೇವೆ. ವಿಶ್ವಬ್ಯಾಂಕಿನಿಂದ 550 ಕೋಟಿ ರೂಪಾಯಿ ಸಿಗುತ್ತದೆ, ಜರ್ಮನ್ ಏಜೆನ್ಸಿಯಿಂದ 80 ಕೋಟಿ ರೂಪಾಯಿ ಅನುದಾನ ಸಿಗುತ್ತದೆ ಇದೆಲ್ಲಾ ಗೊತ್ತಿದೆ. ಸ್ವಾಮಿ ನಾನು ಕಳೆದ ಸಾರಿ ಹೊಸದಾಗಿ ಬಂದಾಗಿನಿಂದ ಬಡಿದುಕೊಳ್ಳುತ್ತಿದ್ದೇನೆ. ಹೊಸನಗರ ತಾಲ್ಲೂಕಿನಲ್ಲಿರತಕ್ಕ ಹೆಡ್‌ಕ್ವಾರ್ಟರ್‌ಗೆ ಪರ್ಮನೆಂಟ್ ಡಾಕ್ಟರು ಕಳೆದ ಎರಡು ವರ್ಷದಿಂದ ಇಲ್ಲ. ವಿಧಾನಸಭಾ ಕ್ಷೇತ್ರದ ಹೆಡ್‌ಕ್ವಾರ್ಟರ್‌ನೊಳಗೆ ಒಬ್ಬ ಡಾಕ್ಟರನ್ನು ಕೊಡುವುದಕ್ಕಾಗಲಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಲ್ಡನ್ ಸ್ಪೆಷಲಿಸ್ಟ್ ಇಲ್ಲದೆ 6 ತಿಂಗಳಾಗಿವೆ.

ಸುತ್ತಮುತ್ತಲ ಹತ್ತಾರು ಹಳ್ಳಿಯಿಂದ ಬರತಕ್ಕ ಸಾವಿರಾರು ಜನ ಬಡಕಂದಮ್ಮಗಳನ್ನು ನೋಡುವುದಕ್ಕೆ ಒಬ್ಬನೇ ಒಬ್ಬ ಚಿಲ್ಡನ್ ಸ್ಪೆಷಲಿಸ್ಟ್ ಈತನಕ ಇಲ್ಲ. ಬಡವರ ಕೂಸುಗಳನ್ನು ಶ್ರೀಮಂತರ ನರ್ಸಿಂಗ್‌ಹೋಮ್‌ಗಳಿಗೆ ಕರೆದುಕೊಂಡು ಹೋಗಬೇಕೇನು ಅವರು? ಆ ಬಡವಿ ತನ್ನ ಕೈಯಲ್ಲಿ ಕಾಸಿಲ್ಲ ಅಂತ ಅಂದರೆ ಸರ್ಕಾರಿ ಆಸ್ಪತ್ರೆಯಲ್ಲಿ ಡಾಕ್ಟರಿಲ್ಲದಾಗ ತನ್ನ ಕೂಸು ಸಾಯುವುದನ್ನು ನೋಡಬೇಕೇನು? ಜಿಲ್ಲಾ ಕೇಂದ್ರಗಳಿಗೆ ಡಾಕ್ಟರುಗಳನ್ನು ಒದಗಿಸುವುದಕ್ಕೆ ಆಗದಿರತಕ್ಕ ಈ ಸರ್ಕಾರ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರುಸುವುದಿಲ್ಲ. ಅಲ್ಲಿ ಬರತಕ್ಕ ಪೇಷೆಂಟ್‌ಗಳನ್ನು ಮೇಲ್ದರ್ಜೆಗೆ ಅಂದರೆ ಮೇಲ್ಲಟ್ಟಕ್ಕೆ ಬಹುಶಃ ಕಳುಹಿಸಿಕೊಡತಕ್ಕಂಥ ಒಂದು ಒಳ್ಳೆಯ ವ್ಯವಸ್ಥೆ ಅಂತ ಹೇಳಿ ಅತ್ಯಂತ ನೋವಿನಿಂದನ ನಾನು ಹೇಳುತ್ತಿದ್ದೇನೆ. ಹಾಸ್ಪಿಟಲ್‌ಗಳಲ್ಲಿ ಸ್ಟಾಫ್‌ಗಳ ಕೊರತೆ ಇದೆ. ಅಲ್ಲಿ ಡಾಕ್ಟರುಗಳ ಕೊರತೆ ಇದೆ. ಜಿಲ್ಲಾ ಕೇಂದ್ರಗಳಲ್ಲಿ ಸಂದರ್ಶಕ ಸಮಿತಿಗಳನ್ನು ಈ ಸರ್ಕಾರ ರಚನೆ ಮಾಡಲಿಲ್ಲ. ಆಸ್ಪತ್ರೆಗಳಲ್ಲಿ ನಾಯಿನರಿಗಳು ಅಡ್ಡಾಡಿದರೆ ಅಲ್ಲಿ ನೋಡತಕ್ಕವರನ್ನು ಇಡಲಿಲ್ಲ. ಒಂದು ಸಂದರ್ಶಕ ಸಮಿತಿಯನ್ನು ಮಾಡಲಿಕ್ಕೆ ಒಂದೂಕಾಲು ವರ್ಷವಾದರೂ ಸಾಧ್ಯವಾಗದೇ ಇರತಕ್ಕಂಥದ್ದು ನಮ್ಮ ಸರ್ಕಾರದ ಸಾಧನೆ ಶಿವಮೊಗ್ಗ ಜಿಲ್ಲಾಕೇಂದ್ರದಲ್ಲಿ. ಬೇರೆ ಬೇರೆ ಸಮಿತಿಗಳನ್ನು ಕೂಡ

ಮಾಡಲಿಲ್ಲ. ಬಡವರ ಕೈಗೆ ಪಟ್ಟಾ ಕೊಡುತ್ತೇವೆಂದು ಕಳೆದಸಾರಿಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದರು. ಕೇಂದ್ರಸರ್ಕಾರದ ಜೊತೆ ವ್ಯವಹಾರ ಮಾಡುತ್ತೇವೆ ನಾವು, ಫಾರೆಸ್ಟ್ ಇಲಾಖೆಯಿಂದ ಬಿಡುಗಡೆ ಮಾಡಿಕೊಡುತ್ತೇವೆ ಎಂದು ಹೇಳಿದ್ದರು.

ಒಂದೂಕಾಲು ವರ್ಷ ಬೇಕಾಯಿತೇ ಬಗರ್‌ಹುಕುಂ ಸಾಗುವಳಿ ಸಮಿತಿ ಮಾಡುವುದಕ್ಕೆ? ಟ್ರಿಬ್ಯುನಲ್‌ಗಳನ್ನು ರಚನೆ ಮಾಡುವುದಕ್ಕೆ ಒಂದೂಕಾಲು ವರ್ಷ ಬೇಕಾಯಿತು. ಕೇವಲ ಸಮಿತಿಗಳನ್ನು ಮಾಡುವುದಕ್ಕೆ ಒಂದೂಕಾಲು ವರ್ಷ ತೆಗೆದುಕೊಂಡಿರತಕ್ಕ ಈ ಸರ್ಕಾರ ಇನ್ನು ಯಾವುದೇ ಸಾಧನೆಯನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಮಾಡಿಲ್ಲ. ಏನಿದ್ದರೂ ಪೇಪರ್‌ಗಳ ಮೂಲಕ ರಾಜಕೀಯ ಆಟವನ್ನು ಆಡುತ್ತಿದ್ದಾರೆ. ಇವತ್ತು ಬಗರ್‌ಹುಕುಂ ಸಮಿತಿಗಳನ್ನು ರಚನೆ ಮಾಡಿದ್ದೀರಿ. ಬಡವರ ಕೈಯಲ್ಲಿ ಪಟ್ಟಾ ಕೊಡುವುದಕ್ಕಾಗುತ್ತದಾ? ಇದನ್ನು ಬರೆಯುವುದಕ್ಕೆ ಶುರು ಮಾಡುತ್ತಿದ್ದಾಗಲೇ ಪಾರ್ಲಿಮೆಂಟ್ ಚುನಾವಣೆ ಬರುತ್ತದೆ. ಆ ಚುನಾವಣೆ ಸಮಯದಲ್ಲಿ ಮತ್ತೆ ಅದು ಸರ್ವೆಯಾಗುವುದಿಲ್ಲ. ಬಗರ್‌ಹುಕುಂ ಸಾಗುವಳಿದಾರರಿಗೆ ಪಟ್ಟಾ ಕೊಡುವುದಕ್ಕಾಗುವುದಿಲ್ಲ ಚುನಾವಣೆ ಮುಗಿಯುವತನಕ, ಏಕೆ? ಚುನಾವಣೆ ಬಂದಾಗ ಬಗರ್‌ಹುಕುಂ ಸಾಗುವಳಿದಾರ ಬಡರೈತ ಹಿಡಿದುಕೊಂಡು ಕೇಳುತ್ತಾನಲ್ಲ ಸಮಿತಿ ಏತಕ್ಕೆ ಮಾಡಲಿಲ್ಲ ಅಂತ ಅವನ ಮೂಗಿಗೆ ತುಪ್ಪ ಹಚ್ಚುವುದಕ್ಕೆ ಈಗ ಬಗರ್‌ಹುಕುಂ ಸಾಗುವಳಿ ಸಮಿತಿ ಮಾಡಿದ್ದೀರಿ. ನಿಜವಾಗಿಯೂ ಜನಪರವಾದಂಥ ನಿಲುವು ನಿಮ್ಮದಾಗಿದ್ದಿದ್ದರೆ ಸಮಿತಿ ಮಾಡುವುದು ಎಷ್ಟುಹೊತ್ತಿನ ಕೆಲಸ? ಎಷ್ಟು ಹೊತ್ತಿನ ಕೆಲಸ ಈ ಸರ್ಕಾರಕ್ಕೆ? ಏನು ಕಷ್ಟ ಇತ್ತು ಸರ್ಕಾರಕ್ಕೆ? ಒಂದು ಪೇಪರ್ ನೋಟಿಫಿಕೇಷನ್, ರೈತರ ಬಗ್ಗೆ ಕಾಳಜಿ ಇರತಕ್ಕ ಮಣ್ಣಿನ ಮಗನ ಸರ್ಕಾರ ಎಂದು ನೀವೇ ಏನು ಹೊಗಳಿಕೊಳ್ಳುತ್ತಿದ್ದೀರಿ ಅಂಥ ಮಣ್ಣಿನ ಮಗನನ್ನು ನಂಬಿಕೊಂಡಂಥ ನೈಜ ಮಣ್ಣಿನ ಮಕ್ಕಳು ಇವತ್ತು ಮಣ್ಣುಪಾಲಾಗಿ ಹೋಗುತ್ತಿದ್ದಾರೆ.

ಹೊಸನಗರ ಮತ್ತು ಸಾಗರ ತಾಲ್ಲೂಕಿನಲ್ಲಿ ಒಂದು ವಿಶೇಷ ಸಮಸ್ಯೆ. ರಾಜ್ಯಪಾಲರು ಕಳೆದ ವರ್ಷದ ಭಾಷಣದಲ್ಲಿ ಹೇಳಿದ್ದರು. ಕೇಂದ್ರಸರ್ಕಾರದ ಜೊತೆ ವ್ಯವಹರಿಸಿ ಬಗರ್‌ಹುಕುಂ ಸಾಗುವಳಿದಾರರಿಗೆ ಪಟ್ಟಾವನ್ನು ಕೊಡುತ್ತೇವೆ ಎಂದು. ಆದರೆ ಏನು ಮಾಡಿದ್ದಾರೆ ಈಗ? 1917ನೇ ಇಸವಿಯಲ್ಲಿ, ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚಿನ ನೋಟಿಫಿಕೇಷನ್ ಪ್ರಕಾರ ಫಾರೆಸ್ಟ್‌ಗೆ ಹ್ಯಾಂಡ್ ಓವರ್ ಆಗಿರುವ ಆ ಜಮಿನನ್ನು ಇವತ್ತು ಫಾರೆಸ್ಟ್ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ಆಫೀಸುಗಳಲ್ಲಿ ಇದನ್ನು ಅರಣ್ಯಭೂಮಿ ಎಂದು ರೆಕಾರ್ಡ್ ಮಾಡುತ್ತಿದ್ದಾರೆ. ಹೊಸನಗರ ತಾಲ್ಲೂಕಿನಲ್ಲಿರತಕ್ಕ ಎಲ್ಲಾ ಸರ್ಕಾರಿ ಕಟ್ಟಡಗಳು ಹಾಸ್ಪಟಲ್, ಸ್ಕೂಲ್, ಪಶುವೈದ್ಯಕೀಯ, ವಾದ್ಯಕೀಯ ಯಾವುದೇ ಸರ್ಕಾರಿ ಕಟ್ಟಡ ಇವತ್ತು ಏನು ದಾಖಲೆ ಮಾಡಿ ಕೊಡುತ್ತಿದ್ದಾರೆ ಆರ್.ಟಿ.ಸಿ.ಗಳಲ್ಲಿ ಫಾರೆಸ್ಟ್ ಲ್ಯಾಂಡ್ ಅಂತ ಹೇಳಿ ಅವಷ್ಟೂ ಅದರ ವ್ಯಾಪ್ತಿಯೊಳಗೆ ಬರುತ್ತದೆ. ಬಗರ್‌ಹುಕುಂ ಸಾಗುವಳಿದಾರರಿಗೆ ಏನು ಪಟ್ಟಾ ಕೊಟ್ಟಿದ್ದಾರೆ ಆ ಭೂಮಿಯೂ ಕೂಡ ಅರಣ್ಯಭೂಮಿ ಎಂದು ಇತ್ತೀಚೆಗೆ ದಾಖಲೆ ಮಾಡಿದ ಕೂಡಲೇ ಅಲ್ಲಿರತಕ್ಕ ಫಾರೆಸ್ಟ್ ಇಲಾಖೆಯವರು ಅವರನ್ನು ಹೊಡೆದು ಹೊರಗಡೆ ಹಾಕುತ್ತಿದ್ದಾರೆ. ಅವರ ಬೇಲಿಗಳನ್ನು ಕಿತ್ತು ಹಾಕುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಂದಂಥ ಯಾವುದೋ ಒಂದು ನೋಟೀಫಿಕೇಷನನ್ನು ಈಗ ನೀವು ಜಾರಿ ಮಾಡುತ್ತೀರಿ ಅಂತ ಆದರೆ ಬ್ರಿಟೀಷರ ಕಾಲದಲ್ಲಿ ಬಹಳಷ್ಟು ಸಂಗತಿಗಳು ಬಂದಿವೆಸ, ಅವೆಲ್ಲವನ್ನೂ ಜಾರಿ ಮಾಡುವುದು ಒಳ್ಳೆಯದು.

ಏನು ಗುಲಾಮಗಿರಿ ಕಡೆಗೆ ತೆಗೆದುಕೊಂಡುಹೋಗುತ್ತಿದ್ದೀರಾ ನಮ್ಮ ದೇಶವನ್ನು, ನಮ್ಮ ರಾಜ್ಯವನ್ನು? ಅಲ್ಲಿರತಕ್ಕ ಅಧಿಕಾರಿಗಳಿಗೆ ಸ್ವಲ್ಪವೂ ವಿವೇಚನೆ ಬೇಡವಾ? ಜನ ಪ್ರತಿನಿಧಿಗಳನ್ನು ಕರೆದು ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್

ಗ್ರಾಮಪಂಚಾಯತ್ ಅಧ್ಯಕ್ಷರನ್ನು, ಕರೆದು, ಶಾಸಕರನ್ನು ಕರೆದು ಈ ತರಹ ಇದೆ, ಇದನ್ನು ಮಾಡೋಣವೇ ಅಥವ ಬೇಡವೇ ಇಲ್ಲಿನ ಪರಿಸ್ಥಿತಿ ಏನು ಎಂದು ಚರ್ಚೆ ಮಾಡತಕ್ಕ ಒಂದು ಸೌಜನ್ಯ ಇಲ್ಲ. ರೆವಿನ್ಯೂ ದಾಖಲಾತಿಗಳನ್ನು ತಿದ್ದಿ ಆಜ್ಞೆಗಳನ್ನು ಹೊರಡಿಸುತ್ತಿದ್ದಾರೆ. ಈ ಹುಚ್ಚಾಟಕ್ಕೆ ದಯವಿಟ್ಟು ಕಡಿವಾಣ ಹಾಕಬೇಕು. ಇಲ್ಲದಿದ್ದರೆ ಸಾವಿರಾರು ಜನ ದಂಗೆ ಎದ್ದಾರು ನಿಮ್ಮ ಸರ್ಕಾರದ ವಿರುದ್ಧ. ಕುಡಿಯುವ ನೀರಿನ ಬಗ್ಗೆ ದೊಡ್ಡ ಹಾಹಾಕಾರ ಇದೆ. ಬಹಳ ದೊಡ್ಡ ಹಾಹಾಕಾರ. ಒಂದೊಂದು ಗ್ರಾಮದಲ್ಲೂ ಕೂಡ ಈ ಸಾರಿ ಬರಗಾಲ ಬಂದಂಥ ಸಂದರ್ಭದೊಳಗೆ ಬಹುಶಃ ಇನ್ನೊಂದು ಎರಡು ತಿಂಗಳಲ್ಲಿ ಯಾವುದೇ ಜನ ಪ್ರತಿನಿಧಿ ಯಾವುದೇ ಗ್ರಾಮಕ್ಕೆ ಭೇಟಿ ಕೊಡುವುದಕ್ಕೆ ಸಾಧ್ಯವಿಲ್ಲ. ಕುಡಿಯುವ ನೀರಿಗಾಗಿ ಜನ ಪರದಾಡುತ್ತಿದ್ದಾರೆ. ಹೇಗೋ ಮನುಷ್ಯನಾದವನು ಬದುಕುತ್ತಾನೆ. ಆದರೆ ಜಾನುವಾರುಗಳ ಪರಿಸ್ಥಿತಿ ಅತ್ಯಂತ ಭೀಕರವಾಗುತ್ತದೆ.

ಜಾನುವಾರುಗಳು ಸಾರಾಸಗಟಾಗಿ ಸತ್ತುಹೋಗುತ್ತವೆ. ಆ ಜಾನುವಾರುಗಳಿಗೆ ಮತ್ತು ಬಡಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಯುದ್ಧದೋಪಾದಿಯಲ್ಲಿ ಆಗಬೇಕು. ಯಾವುದೇ ಸರ್ಕಾರ ಇರಲಿ, ನಾಳೆ ಕುಡಿಯುವ ನೀರಿಲ್ಲದೆ ಸತ್ತರು ಅಂತ ಆದರೆ ಆದಕ್ಕಿಂತ ಒಂದು ಭೀಕರವಾದಂಥ ಅಪಮಾನ ಎಲ್ಲ ಚುನಾಯಿತ ಪ್ರತಿನಿಧಿಗಳಿಗೆ ಬೇರೆ ಇನ್ನೊಂದಿಲ್ಲ. ಇದರ ಬಗ್ಗೆ ಕೂಡಲೇ ತಕ್ಷಣ ಕೆಲಸ ಪ್ರಾರಂಭ ಮಾಡಿ. ಬರಗಾಲದಿಂದಾಗಿ ಹಾಹಾಕಾರ ಎದ್ದು ತಿನ್ನುವುದಕ್ಕೆ ಅನ್ನವಿಲ್ಲದ ಪರಿಸ್ಥಿತಿ ಇದೆ. ಆ ನಿರುದ್ಯೋಗಿಗಳ ಕೈಗಳಿಗೆ ಕೆಲಸ ಕೊಡತಕ್ಕ ಯೋಜನೆ ಎಲ್ಲೂ ಪರಿಣಾಮಕಾರಿಯಾಗಿ ಬರಲಿಲ್ಲ. ಆ ತರಹ ಯೋಜನೆ ಕೂಡ ಇದ್ದಂತೆ ಕಾಣುವುದಿಲ್ಲ. ತಿನ್ನುವುದಕ್ಕೆ ಅನ್ನ ಇಲ್ಲ, ಗ್ರಾಮನಿರ್ಮಲ ಯೋಜನೆ ಅಂತ ಮಾಡಿದ್ದಾರೆ. ಕಕ್ಕಸ್ಸಿಗೆ ಹೋಗುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ತಿನ್ನುವುದಕ್ಕೆ ಅನ್ನ ಇಲ್ರಿ. ಬರಗಾಲ ಬಂದಿದೆ ಈ ರಾಜ್ಯದೊಳಗೆಯ. ಹಸುಗಳಿಗೆ ಹುಲ್ಲಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ನಾವು ಗ್ರಾಮಪಂಚಯಿತಿಯಲ್ಲಿ ನೂರು ಲೆಟ್ರಿನ್ ಕಟ್ಟುತ್ತೇವೆ ಎಂದು ಹೇಳುತ್ತಿದ್ದಾರೆ. ಅರೆ, ತಿಂದರಲ್ಲವೇ ಬರುವುದು? ತಿನ್ನುವುದಕ್ಕೆ ವ್ಯವಸ್ಥೆ ಮೊದಲು ಮಾಡಿ ದಯಮಾಡಿ. ಬಡವರ ಕೈಗೆ ಕೂಲಿಕಾರರ ಕೈಗೆ ಕೆಲಸ ಕೊಡಿ. ಅವರ ಜೀವನದ ಬಗ್ಗೆ ಆಲೋಚನೆ ಮಾಡಿ. ರಾಜ್ಯಪಾಲರ ಬಾಯಿಯೊಳಗೆ ಅದನ್ನೇ ದೊಡ್ಡದಾಗಿ ಹೇಳಿಸಿದ್ದಾರೆ. ತಿನ್ನುವುದಕ್ಕೆ ಅನ್ನ ಇಲ್ಲದಿದ್ದರೂ ಚಿಂತೆಯಿಲ್ಲ, ಉಳಿದಿದ್ದನ್ನು ಕಳುಹಿಸಿಕೊಡುವುದಕ್ಕೆ ನಿರ್ಮಲ ಯೋಜನೆ. ಇದರಂಥ ಚೀಫ್ ಪಾಪ್ಯುಲಾರಿಟಿ ಇರತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರಿಂದ ನಮ್ಮ ರಾಜ್ಯದ ಅಭ್ಯುದಯವಾಗುವುದಿಲ್ಲ. ಕೇವಲ ಪಾಪ್ಯುಲರ್ ಪ್ರೋಗ್ರಾಮ್‌ಗಳಿಂದಾಗಿ ತಾತ್ಕಾಲಿಕವಾಗಿ ಓಟುಗಳನ್ನು ಗಳಿಸುವಂತಹ ಕೆಲಸ ಮಾಡಬಹುದೇ ಹೊರತು ಯಾವ ಬಡವರ ಬಾಳಿಗೆ ಬೆಳಕು ನೀಡುವಂತಹ ಕೆಲಸ ಮಾಡುವುದಿಲ್ಲ. ದಯಮಾಡಿ ನೀವು ಲೆಟ್ರಿನ್‌ಗಳನ್ನು ಆಮೇಲೆ ಕಟ್ಟಿರಿ. ಜನಗಳಿಗೆ ಕುಡಿಯುವ ನೀರು, ದನಗಳಿಗೆ ಕುಡಿಯುವ ನೀರು, ತಿನ್ನಕ್ಕೆ ಅನ್ನದ ವ್ಯವಸ್ಥೆ ದುಡಿಯುವ ಕೈಗಳಿಗೆ ಕೆಲಸದ ವ್ಯವಸ್ಥೆಯನ್ನು ಮಾಡಿರಿ. ಆಮೇಲೆ ತಮಗೆ ತಾವೇ ಎಲ್ಲಿ ಬೇಕಾದರೂ ಕೆಲಸ ಹುಡುಕಿಕೊಂಡು ಹೋಗುತ್ತಾರೆ. ಎಲ್ಲೋ ಹೋಗುತ್ತಾರೆ ಬದುಕು ಇದ್ದರೆ ಅದನ್ನು ಮಾಡಿಕೊಳ್ಳುತ್ತಾರೆ. ಅದರ ಬಗ್ಗೆ ತಮಗೆ ಕಾಳಜಿ ಬೇಡ. ಇನ್ನು ಇದರ ಬಗ್ಗೆ ನಾನು ಮಾತನಾಡುವುದಿಲ್ಲ.

ಇನ್ನೂ ತುಂಗಾ ಮೇಲ್ದಂಡೆ ಯೋಜನೆಗಾಗಿ ಹೊಸದಾಗಿ ಕಲ್ಲುಗಳನ್ನು ನೆಡುವುದಕ್ಕೆ ಶುರು ಮಾಡಿದ್ದಾರೆ ಇದು ತುಂಗಾ ಮೇಲ್ದಂಡೆಗೆ ಹೋಗುವ ಮಾರ್ಗ. ಹಿಂದೊಂದು ಸಾರಿ ಪಾರ್ಲಿಮೆಂಟ್ ಚುನಾವಣೆಯಾಗುವ ಸಂದರ್ಭದಲ್ಲಿ ತುಂಗಾ ಮೇಲ್ದಂಡೆ

ಯೋಜನೆಯನ್ನು ಉತ್ತರ ಕರ್ನಾಟಕ ಭಾಗದವರಿಗೆ ತೋರಿಸುತ್ತಿದ್ದರು ಬರುತ್ತದೆ ನೀರು ಧಾರವಾಡದ ಕಡೆಗೆ ಎಂದು. ಜನ ಅದನ್ನು ನಂಬಿಕೊಂಡು ದುಬು ದುಬು ಎಂದು ಓಟು ಹಾಕಿದರು. ತುಂಗೇ ಮೇಲ್ದಂಡೆ ಯೋಜನೆಗೆ ಮತ್ತೆ ಕಲ್ಲು ಕೂರಿಸುವುದು ಶುರು ಮಾಡಿದ್ದಾರೆ. ನೀರು ಕೊಡಿರಿ ಅವರಿಗೆ ನಾವು ಬೇಡ ಅನ್ನುವುದಿಲ್ಲ. ಆದರೆ ಶಿವಮೊಗ್ಗ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಎಲ್ಲಿ ತೆಗೆದುಕೊಂಡು ಹೋಗುತ್ತೀರಿ? ಈಗಿರತಕ್ಕ ಯೋಜನೆಯ ಪ್ರಕಾರಸ ಗೋಪಾಳ ಲೇಔಟ್ ಕಾಡಿಕೊಪ್ಪ ಮಾನ್ಯ ಕಾಗೋಡುತಿಮ್ಮಪ್ಪನವರು ಅಧ್ಯಕ್ಷರಾಗಿರತಕ್ಕ ಡೆಂಟಲ್ ಕಾಲೇಜು ಅದನ್ನೆಲ್ಲಲ ಒಡೆದುಕೊಂಡು ಹೋಗಬೇಕು. 8 ಲೇಔಟ್‌ಗಳ ಮಧ್ಯೆ ತುಂಗಾ ಮೇಲ್ದಂಡೆ ಯೋಜನೆಯ ಕಾಲುವೆ ಹೋಗುತ್ತದೆ. ಬಡವರಿಗೆ ಸೂರು ಕೊಡುತ್ತೇವೆಂದು ಹೇವ ಸರ್ಕಾರ ನಿಮ್ಮದ್ದೆ. ಅಲ್ಲಿರತಕ್ಕ ಲೇಔಟ್‌ಗಳ ಮಧ್ಯೆ ಕಾಲುವೆ ಹೊಡೆಯುತ್ತಾರೆ. ನಗರಾಭಿವೃದ್ಧಿ ಇಲಾಖೆಯ ಪ್ರಾಜೆಕ್ಟ್ ಸರ್ಕಾರದ ಮುಂದಿದೆ. ಅಂದರೆ ಅಲ್ಲಿ ಲೇಔಟ್ ಫಾರ್ಮೇಶನ್ ಮಾಡಿಲಿಕ್ಕೆ ಖಾಸಗಿಯವರಿಗೆ ನಗರಾಭಿವೃದ್ಧಿ ಮಂಡಳಿಯವರಿಗೆ ಹೇಗೆ ಅನುಮತಿ ಕೊಟ್ಟಿರಿ? ಇವತ್ತು ಅಲ್ಲಿ ಜನಗಳು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಸೈಟುಗಳನ್ನು ಖರೀದಿಮಾಡಿದ್ದಾರೆ. ಆ ಸೈಟುಗಳ ಮಧ್ಯೆ ಇವತ್ತು ತುಂಗಾ ಮೇಲ್ದಂಡೆ ಯೋಜನೆಯ ಕಾಲುವೆ ಹೋಗುತ್ತದೆ. ಶಿವಮೊಗ್ಗ ತಾಲ್ಲೂಕಿಗೆ ಒಂದು ಹನಿ ನೀರು ಕೂಡ ಲಾಭವಾಗುವುದಿಲ್ಲ. ಬಹುಶಃ ಆ ನಗರಾಭಿವೃದ್ಧಿ ಮಂಡಳಿಯವರದು ಏನು ವ್ಯವಹಾರವೋ ಏನೋ ಗೊತ್ತಿಲ್ಲ, ಎಲ್ಲಾ ಲೇಔಟ್‌ಗಳಿಗೂ ಲಟಕ್ ಎಂದು ಸೀಲ್ ಹೊಡೆಯುತ್ತಾರೆ. ಅಲ್ಲಿನ ಗ್ರೀನ್‌ಬೆಲ್ಟ್ ಲಿಫ್ಟ್ ಆಗುತ್ತದೆ. ಗ್ರೀನ್ ಬೆಲ್ಟ್ ಎಲ್ಲಿ ಬೇಕಾದರೂ ಇರಲಿ. ಅದು ಬೆಂಗಳೂರಿನಲ್ಲಿ ಇಲ್ಲಿ ಕೂತುಕೊಂಡು ಲಿಫ್ಟ್ ಆಗುತ್ತದೆ. ಅದು ಹೇಗೆ ಆಗುತ್ತದೋ ಗೊತ್ತಿಲ್ಲ, ಈ ತರಹ ಮಿಸ್ ಮ್ಯಾನೇಜ್‌ಮೆಂಟ್‌ನಿಂದ ಅಲ್ಲಿರತಕ್ಕವರನ್ನು ನಿರಾಶ್ರಿತರನ್ನಾಗಿ ಮಾಡುವಂತಹ ಕೆಲಸವನ್ನು ದಯಮಾಡಿ ಮಾಡಬೇಕು ಹೊಸ ನಗರ ವಿಧಾನಸಭಾ ಕ್ಷೇತ್ರದಲ್ಲಿರತಕ್ಕ ಆ ಗ್ರಾಮಗಳಲ್ಲಿ ಅಲ್ಲಿರತಕ್ಕ ಸೈಟುಗಳನ್ನು ಮನೆಗಳನ್ನು ಹೊಡೆದು ತುಂಗಾ ಮೇಲ್ದಂಡೆ ಯೋಜನೆ ಮಾಡಲಿಕ್ಕೆ ಬಿಡುವುದಿಲ್ಲ. ನೀರನ್ನು ಕೊಡುವುದುಕ್ಕೆ ನಮ್ಮದು ವಿರೋಧವಿಲ್ಲ. ಇಲ್ಲಿದ್ದಂತಹವರಿಗೆ ನಿಮ್ಮದೇನು ಪರಿಹಾರ? ಅವರಿಗೇನು ಪರ್ಯಾಯ ವ್ಯವಸ್ಥೆ? ನಾಳೆ ಕೋರ್ಟ್‌ನಲ್ಲಿ ತೆಗೆದುಕೊಳ್ಳಬೇಕಾ ಪರಿಹಾರವನ್ನು ಅವರು? ಅದು ಸಾಧ್ಯವಿಲ್ಲ ಎನ್ನುವಂತಹ ಎಚ್ಚರಿಕೆಯನ್ನು ಈ ಸದನದೊಳಗೆ ತಮ್ಮ ಮುಖಾಂತರ ಸರ್ಕಾರಕ್ಕೆ ಕೊಡುತ್ತಿದ್ದೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಮಾನ್ಯ ಉಪಾಧ್ಯಕ್ಷರೆ, ತುಂಗಾಮೇಲ್ದಂಡೆ ಯೋಜನೆಯನ್ನು ಮಾಡಲಿಕ್ಕೆ ಬಿಡುವುದಿಲ್ಲವೆನ್ನುವ ಎಚ್ಚರಿಕೆಯನ್ನು ಈ ಸದನದಲ್ಲಿ ಕೊಡುತ್ತಿದ್ದಾರೆಂದರೆ. ಅಷ್ಟೇ ಹಕ್ಕು ನಮ್ಮ ಧಾರವಾಡ ಜಿಲ್ಲೆಯ ದಕ್ಷಿಣಭಾಗದ ಶಾಸಕರಿಗೂ ಕೂಡ ಇರುವುದರಿಂದ ಅದನ್ನು ಮಾಡಬೇಕೆಂದು ನಾವು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತೇವೆ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಿ. ನಾನು ಹೇಳುತ್ತಿರುವುದೇನೆಂದರೆ, ಅಲ್ಲಿ ನಿವೇಶನಗಳ ಮಧ್ಯೆ ಕಾಲುವೆ ಒಡೆದುಕೊಂಡು ಹೋಗುವುದಲ್ಲ. ಸರಿಯಾದ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಹೋಗಿಯೆಂದು ಹೇಳುತ್ತಿದ್ದೇನೆ. ಪರ್ಯಾಯ ವ್ಯವಸ್ಥೆ ಮಾಡಿಯೆಂದು ಹೇಳುತ್ತಿದ್ದೇನೆ. ಬಿಡುವುದಿಲ್ಲವೆನ್ನುವ ಮಾತನ್ನು ಹೇಳುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನೀವು ಹೆದರಿಸುವುದು ಬೇಡ.

ಶ್ರೀ ಅಯನೂರು ಮಂಜುನಾಥ್ : ಪರ್ಯಾಯ ವ್ಯವಸ್ಥೆ ಮಾಡಿ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಬಿಡುವುದಿಲ್ಲವೆನ್ನುವ ಮಾತನ್ನು ಹೇಳುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಬಿಡುವುದಿಲ್ಲವೆಂದರೇನು?

ಶ್ರೀ ಅಯನೂರು ಮಂಜುನಾಥ್ : ಪರಿಹಾರ ಕೊಡಿರಿಯೆಂದು ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡಿದ್ದರೆ ಪರಿಹಾರ ಕೊಡಬೇಕಾ? ಏನು ಮಾಡುವುದು? ನಿಮ್ಮ ಸರ್ಕಾರ ಇದ್ದರೆ ಪರಿಹಾರ ಕೊಡುತ್ತೀರಾ? ಸ್ವಾಮಿ ಮಾತನಾಡುವುದು ಬಹಳ ಸುಲಭ. ಅದೊಂದು ಪುಕ್ಕಟೆಯಾಗಿ ಸಿಗುವುದು ಮಾತು, ಅಲ್ಲಿ ನಡೆಯಬೇಕಲ್ಲ ಸ್ವಾಮಿ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಜಾಲಪ್ಪನವರು ತಪ್ಪು ತಿಳಿದುಕೊಂಡಿದ್ದಾರೆ. ಸಿಐಟಿಬಿನಲ್ಲಿ ಅಪ್ರೂವ್ಡ್ ಲೇಔಟ್‌ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅಪ್ರೂವ್ಡ್ ಲೇಔಟ್‌ನಲ್ಲಿ ಮನೆಗಳನ್ನು ಕಟ್ಟಿಕೊಂಡಿರುವಂತಹ ಜಾಗದಲ್ಲಿ ಕಲ್ಲುಗಳನ್ನು ತಂದು ಹಾಕಿದ್ದಾರೆ, ಇಲ್ಲಿ ತುಂಗಾ ಏತನೀರಾವರಿ ಒರಿಜನಲ್ ಕಾಲುವೆ ವ್ಯವಸ್ಥೆಯಾಗುತ್ತದೆಂದು. ಮಾನ್ಯ ಸದಸ್ಯರು ಹೇಳುತ್ತಿರುವುದು ಅಪ್ರೂವ್ಡ್ ಲೇಔಟ್‌ನಲ್ಲಿ ಮನೆ ಕಟ್ಟಿಕೊಂಡಿರುವಂತಹ ಜಾಗದಲ್ಲಿ ಕಾಲುವೆ ಮಾಡಿದರೆ ನೀವು ಪರಿಹಾರ ಕೊಡದಿದ್ದರೆ ಹೇಗಾಗುತ್ತದೆಂದು ಕೇಳುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಅಪ್ರೂವ್ಡ್ ಲೇಔಟ್‌ನಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರೆ ಅಲ್ಲಿ ಕಾಲುವೆ ಬಂದರೆ ಅಲ್ಲಿ ಪರಿಹಾರ ಕೊಟ್ಟೇ ಕೊಡುತ್ತೇವೆ. ಬೇರೆಯವರಿಗೆಲ್ಲ ಕೊಡುತ್ತಿದ್ದೇವೆಯಲ್ಲ, ಹೆದರಿಸುವುದು ಬೇಡ. ನಾವು ಬಿಡುವುದಿಲ್ಲ, ಅಲಾ ಮಾಡುವುದಿಲ್ಲ ಅಂತ ಇದೆಲ್ಲ ಏಕೆ ಹೇಳುವುದು?

ಶ್ರೀ ಆಯನೂರು ಮಂಜುನಾಥ್ : ಅಪ್ರೂವ್ಡ್ ಲೇಔಟ್‌ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅವರ ಮನೆ ಹೊಡೆದು ತೆಗೆದುಕೊಂಡು ಹೋಗುವುದಕ್ಕೆ ಬಿಡುವುದಿಲ್ಲ, ಅವರಿಗೆ ಪರಿಹಾರ ಕೊಟ್ಟು ಕಾಲುವೆ ತೆಗೆದುಕೊಂಡು ಹೋಗಿ.

ಶ್ರೀ ಆರ್.ಎಲ್. ಜಾಲಪ್ಪ : ಅವರು ಹೊಸದಾಗಿ ಆರಿಸಿ ಬಂದಿದ್ದಾರೆ. ಅವರು ಏಕೆ ಹಾಗೆ ಹೆದರಿಸುತ್ತಾರೆ?

ಶ್ರೀ ಆಯನೂರು ಮಂಜುನಾಥ್ : ಎರಡೂ ಯೋಜನೆಗಳು ಸರ್ಕಾರದ ಅನುಮೋದನೆ ಪಡೆದವುಗಳು. ಲೇಔಟನ್ನು ಸರ್ಕಾರ ಅನುಮೋದನೆ ಮಾಡಿದೆ ಈ ಕಾಲುವೆ ಹೋಗುವುದಕ್ಕೆ ಅನುಮೋದನೆ ಮಾಡಿದೆ. ತಾವು ಏನೋ ಬರೆಯುತ್ತಾ ಇದಿರಿ. ಗಡಿಬಿಡಿಯಾಗಿ ಎದಿರಿ ನನಗೆ ಬೈಯ್ದರಿ ಇದು ಸರಿಯಾಗಲಿಲ್ಲ, ಯಜಮಾನರೆ ತಾವು ಹಾಗೆಲ್ಲ ಮಾತನಾಡಬೇಡ್ರಿ.

ಶ್ರೀ ಮಂಜುನಾಥ್ ಸಿ. ಕುನ್ನೂರು : ತಾವು ಯೋಜನೆ ಮಾಡಲಿಕ್ಕೆ ಬಿಡುವುದಿಲ್ಲವೆಂದರೆ ಮತ್ತೆ ಏನು ಮಾಡಬೇಕು?

ಶ್ರೀ ಅಯನೂರು ಮಂಜುನಾಥ : ಮಾನ್ಯ ಮಂಜುನಾಥ್‌ರವರೆ ತಾವು ಪೂರ್ತಿಯಾಗಿ ನಾನು ಹೇಳಿದ್ದನ್ನು ಕಿವಿಯಾಗೆ ಇಟ್ಟುಕೊಳ್ಳಬೇಕು. ಹಾಗೆಲ್ಲ ಮಾತನಾಡಬೇಡಿ. ನಾನು ಹಾಗೆ ಹೇಳಲಿಲ್ಲ, ದಯಮಾಡಿ ನಾನು ಹಾಗೆ ಹೇಳಲಿಲ್ಲ, ಸುಮ್ಮ ಸುಮ್ಮನೇ ಏಕೆ? ತುಂಗಾ ಮೇಲ್ದಂಡೆ ಯೋಜನೆಯನ್ನು ನಮ್ಮ ತಾಲ್ಲೂಕಿನಲ್ಲಿ ತೆಗೆದುಕೊಂಡು ಹೋಗುತ್ತೀರಿ ಶಿವಮೊಗ್ಗ ತಾಲ್ಲೂಕಿನಲ್ಲಿ ಈ ತುಂಗಾ ಇದೆಲ್ಲ ಇರುವುದು. ಆ ತಾಲ್ಲೂಕಿನಲ್ಲಿ ಅತ್ಯಂತ ಬಂಜರುಭೂಮಿ ಇದೆಯಲ್ಲ ಈ ತುಂಗಾ ಮೇಲ್ದಂಡೆ ಯೋಜನೆಯಿಂದ ಎಷ್ಟು ನೀರನ್ನು ನಮ್ಮ ಶಿವಮೊಗ್ಗ ತಾಲ್ಲೂಕಿನ ರೈತರಿಗೆ ಕೊಡುತ್ತೀರಿ. ಎಷ್ಟು ತಾಲ್ಲೂಕಿಗೆ ಎಷ್ಟು ಎಕರೆಗೆ ಕೊಡುತ್ತೀರಿ? ಇಲ್ಲಿಂದ ಪೂರ್ತಿ ನಮ್ಮ ಜಮೀನಿನ ಮಧ್ಯೆ ನೀರು ಹೋದರೂ ಕೂಡ 125 ಅಡಿ ಆಳದೊಳಗೆ ಅಲ್ಲಿರತಕ್ಕ ರೈತರಿಗೆ ಒಂದು ಹನಿ ನೀರು ಸಿಗುವುದಿಲ್ಲ, ಬೇರೆ ತಾಲ್ಲೂಕಿನ ಶಾಸಕರು ತಮ್ಮ

ಜನರ ಹಿತಾಸಕ್ತಿಯನ್ನು ಹೇಗೆ ನೋಡುತ್ತಿರೋ ಹಾಗೆ ನೋಡುವುದ ಕ್ಕೋಸ್ಕರ ನಾವು ಇದ್ದೇವೆ. ನಮ್ಮ ರೈತರಿಗೂ ನೀರು ಕೊಟ್ಟು ತೆಗೆದುಕೊಂಡು ಹೋಗ್ರಿ. ಅದು ಆಗಲಿಲ್ಲ. ತುಂಗಾ ಏತನೀರಾವರಿ, ಬಗ್ಗೆ 25 ವರ್ಷಗಳಿಂದ ಇಡೀ ತಾಲ್ಲೂಕಿನ ಜನ ಎಲ್ಲರಿಗೂ ಗೋಗರೆದಿದ್ದಾರೆ. ಅದೇ ಜನ ಮೆರವಣಿಗೆಯಲ್ಲಿ ಬಂದು ಜನತಾದರ್ಶನದಲ್ಲಿ ಮುಖ್ಯಮಂತ್ರಿಗಳನ್ನು ಕೂಡ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ತುಂಗಾ ಏತನೀರಾವರಿ ಯೋಜನೆಯನ್ನು ಜಾರಿ ಮಾಡುವುದರಿಂದ ಸುಮಾರು 17 ಸಾವಿರ ಎಕರೆ ನೀರಾವರಿಯಾಗುತ್ತದೆ. ಶಿವಮೊಗ್ಗ ತಾಲ್ಲೂಕಿನಲ್ಲಿರತಕ್ಕ ರೈತರು ಆಕಾಶ ನೋಡಿ ಇವತ್ತೇನು ಭೂಮಿಯಲ್ಲಿ ಬಿತ್ತುತ್ತಿದ್ದಾರೆ ಆ ಬವಣೆ ತಪ್ಪಿಸಿಕೊಂಡು ತಾವು ಮನುಷ್ಯರಾಗಿ ಬದುಕುತ್ತಾರೆ. ತುಂಗಾ ಏತನೀರಾವರಿ ಯೋಜನೆಯ್ನು ಜಾರಿ ಮಾಡಬೇಕು. ತುಂಗಾ ಮೇಲ್ದಂಡೆ ಯೋಜನೆಯಲ್ಲೂ ಕೂಡ ನಮ್ಮ ತಾಲ್ಲೂಕಿನ ರೈತರಿಗೆ ನೀರಿನ ಪಾಲನ್ನು ಕೊಡಬೇಕು. ಇದು ನನ್ನ ಆಗ್ರಹ ಇರುವಂತಹದ್ದು. ಇದರ ಬಗ್ಗೆ ನಾನು ಅತ್ಯಂತ ಅಗ್ರಹಪೂರ್ವವಾಗಿ ವಿನಂತಿಯನ್ನು ಮಾಡುತ್ತಾ ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ನಿಯಮ 351 - ಹೇಳಿಕೆ

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಬಗ್ಗೆ.

ಶ್ರೀ ವೈಜನಾಥ ಪಾಟೀಲ್ (ನಗರಾಡಳಿತ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಂಗಳೂರು ನಗರಕ್ಕೆ ನೇತ್ರಾವತಿ ನದಿಯಿಂದ ದಿನಂಪ್ರತಿ 10 ಲಕ್ಷ ಗ್ಯಾಲನ್ ನೀರನ್ನು ಸರಬರಾಜು ಮಾಡುತ್ತಿದ್ದ, ನೀರಿನ ವಿತರಣಾ ವ್ಯವಸ್ಥೆಯನ್ನು ನಗರಪಾಲಿಕೆ ನಿರ್ವಹಿಸುತ್ತಿದೆ. ಹಾಲಿ ಜನಸಂಖ್ಯೆ 4 ಲಕ್ಷ ವಿದ್ದು ದಿನಂಪ್ರತಿ ತಲಾ 100 ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತದೆ.

ನಗರದ ವಿತರಣಾ ವ್ಯವಸ್ಥೆ ಹಾಗೂ ಜಲ ಸಂಗ್ರಹಗಾರಗಳನ್ನು ನಿರ್ಮಿಸಲು ರೂ. 14 ಕೋಟಿ ಅಂದಾಜು ವೆಚ್ಚಕ್ಕೆ ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದ್ದು ಕಾಮಗಾರಿಯನ್ನು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೊಳ್ಳಲಾಗಿದ್ದು ಯೋಜನೆ ಪ್ರಗತಿಯಲ್ಲಿದೆ :

1)	ಜೀವ ವಿಮಾ ನಿಗಮದ ಸಾಲರೂ.		700 ಲಕ್ಷ
2)	ಸರ್ಕಾರದ ಸಾಲ .	ರೂ.	280 ಲಕ್ಷ
3)	ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಂತಿಗೆ	ರೂ.	210 ಲಕ್ಷ
4)	ಮಹಾನಗರ ಪಾಲಿಕೆ ವಂತಿಗೆ	ರೂ.	210 ಲಕ್ಷ
	ಒಟ್ಟು	ರೂ.	1400 ಲಕ್ಷ

ಈ ಯೋಜನೆಗೆ ಜೀವವಿಮಾ ನಿಗಮದಿಂದ 2 ಕೋಟಿ ಹಾಗೂ ನಗರಪಾಲಿಕೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ 1.30 ಕೋಟಿ ಬಂದಿದೆ ಮಂಡಳಿಯು ಈಗಾಗಲೇ 3.50 ಕೋಟಿ ರೂ. ವೆಚ್ಚ ಮಾಡಿ ಶಕ್ತಿ ನಗರ ಮೇರಿಹಿಲ್ ವಲಯಗಳಿಗೆ ನೀರನ್ನು ಒದಗಿಸುಲು ಬೀಡು ಕಬ್ಬಿಣದ ಕೊಳವೆಗಳನ್ನು ಖರೀದಿಸಲು ರೂ. 1.79 ಕೋಟಿಗಳಿಗೆ ಈಗಾಗಲೇ ಸರಬರಾಜು ಆದೇಶ ನೀಡಿದೆ. 14 ಕೋಟಿ ರೂ.ಗಳ ಈ ಯೋಜನೆಯನ್ನು

ವಿವಿಧ ಮೂಲಗಳಿಂದ ಸಕಾಲದಲ್ಲಿ ಹಣವನ್ನು ಒದಗಿಸುವ ವ್ಯವಸ್ಥೆ ಮಾಡಿ ಇನ್ನೆರಡು ವರ್ಷಗಳಲ್ಲಿ ಈ ಯೋಜನೆಯನ್ನು ಚಾಲು ಮಾಡಲಾಗುವುದು.

ಈಗಿನ ಆರ್ಥಿಕ ಮಾದರಿಯಂತೆ ಸರ್ಕಾರ ತನ್ನ ವಂತಿಗೆಯನ್ನು ಸಾಲದ ರೂಪದಲ್ಲಿ ಮಾತ್ರ ಬಿಡುಗಡೆ ಮಾಡಲು ಸಾಧ್ಯ. ಈ ಹಣವನ್ನು ಸರ್ಕಾರವು ಆಯವ್ಯಯದಲ್ಲಿ ನಿಗದಿ ಮಾಡಿರುವಂತೆ ಬಿಡುಗಡೆ ಮಾಡಲಾಗುವುದು. ಆದರೆ ಮಹಾನಗರ ಪಾಲಿಕೆಯು ತನ್ನ ವಂತಿಗೆಯನ್ನು ತಾನೇ ಭರಿಸಬೇಕಾಗುತ್ತದೆ. ಇದನ್ನು ಸರ್ಕಾರವು ಅನುದಾನವಾಗಿ ಪರಿಗಣಿಸಲು ಸದ್ಯಕ್ಕೆ ಸಾಧ್ಯವಿರುವುದಿಲ್ಲ.

ಉಪಾಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ಸೇರಲಾಗುವುದು.

(ಸದನವು 5 ಗಂಟೆ 51 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಕ 23ನೇ ಫೆಬ್ರವರಿ ಮಾಹೆ 1996ರ ಶುಕ್ರವಾರದಂದು 9.30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನಸಭೆ

ಹತ್ತನೆಯ ವಿಧಾನ ಸಭೆ

(ಐದನೆಯ ಅಧಿವೇಶನ)

ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 1996

(1996ರ ವಿಧಾನಸಭೆಯ ವಿಧೇಯಕ ಸಂಖ್ಯೆ 2)

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ.

ಭಾರತ ಗಣರಾಜ್ಯ ನಲವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ. - (1) ಈ ಅಧಿನಿಯಮವನ್ನು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 1996 ಎಂದು ಕರೆಯತಕ್ಕದ್ದು.

(2) 4ನೇ ಪ್ರಕರಣವು ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಉಳಿದ ಉಪಬಂಧಗಳು 1995ರ ನವೆಂಬರ್ ಇಪ್ಪತ್ತೊಂಬತ್ತನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 152ನೇ ಪ್ರಕರಣದ ತಿದ್ದುಪಡಿ. - ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮ ಎಂದು ಉಲ್ಲೇಖಿಸಲಾಗುವುದು) 152ನೇ ಪ್ರಕರಣದಲ್ಲಿ,

(i) "ತಾಲ್ಲೂಕು ಪಂಚಾಯತಿಯ ಅಧ್ಯಕ್ಷನು" ಎಂಬ ಪದಗಳಿಗೆ "ಅಧ್ಯಕ್ಷನು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಅವನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ;

(ii) (ಸಿ) ಖಂಡವನ್ನು ಬಿಟ್ಟು ಬಿಡತಕ್ಕದ್ದು..

3. 156ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 156ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ,-

(i) "ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಬೇರೆ ರೀತಿಯಲ್ಲಿ ಸ್ಪಷ್ಟವಾಗಿ ಉಪಬಂಧಿಸಿದುದನ್ನು ಉಳಿದು ಕಾರ್ಯನಿರ್ವಾಹಕ ಅಧಿಕಾರಿಯು" ಎಂಬ ಪದಗಳಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

"152ನೇ ಪ್ರಕರಣದ ಅಡಿಯಲ್ಲಿನ ಅಧ್ಯಕ್ಷರ ಸಾಮಾನ್ಯ ಅಧಿಕಾರಗಳಿಗೊಳಪಟ್ಟು ಕಾರ್ಯನಿರ್ವಾಹಕ ಅಧಿಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಎಂದರೆ",-

(ii) (ಬಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು. ಎಂದರೆ,-

"(ಬಿ) ಅಧ್ಯಕ್ಷನ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ತಾಲ್ಲೂಕು ಪಂಚಾಯಿತಿಯ ಅಥವಾ ಅದರ ಅಧೀನದಲ್ಲಿನ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಿಗಳು ಮತ್ತು ನೌಕರರನ್ನು ನಿಯಂತ್ರಿಸತಕ್ಕದ್ದು".

4. 159ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 159ನೇ ಪ್ರಕರಣದ (1)ನೇ ಉಪಪ್ರಕರಣಲ್ಲಿ "ಜಿಲ್ಲೆಯ ವ್ಯಾಪ್ತಿಯೊಳಗೆ" ಎಂಬ ಪದಗಳಿಗೆ ಅವು ಬರುವ ಎರಡೂ ಕಡೆಗಳಲ್ಲಿ "ಜಿಲ್ಲಾ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯ ಪ್ರದೇಶದೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

5. 193ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 193ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ,-

(i) "ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿದುದನ್ನುಳಿದು ಕಾರ್ಯನಿರ್ವಾಹಕ ಅಧಿಕಾರಿಯು" ಎಂಬ ಪದಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :

" 193ನೇ ಪ್ರಕರಣದ ಅಡಿಯಲ್ಲಿನ ಅಧ್ಯಕ್ಷನ ಸಾಮಾನ್ಯ ಅಧಿಕಾರಿಗಳಿಗೆ ಒಳಪಟ್ಟು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಎಂದರೆ,-"

(ii) (ಬಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :

"(ಬಿ) ಅಧ್ಯಕ್ಷನ ಸಾಮಾನ್ಯ ಮೇಲ್ವಿಚಾರಣೆ ಹಾಗೂ ನಿಯಂತ್ರಣಕ್ಕೆ ಮತ್ತು ನಿಯಮಿಸಬಹುದಾದಂಥ ನಿಯಮದಗಳಿಗೆ ಒಳಪಟ್ಟು ಜಿಲ್ಲಾ ಪಂಚಾಯಿತಿಯ ಅಥವಾ ಅದರ ಅಧೀನದಲ್ಲಿನ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಗಳು ಮತ್ತು ನೌಕರರನ್ನು ನಿಯಂತ್ರಿಸತಕ್ಕದ್ದು"

7. ನಿರಸನ ಮತ್ತು ಉಳಿಸುವಿಕೆ.- (1) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ, 1996ನ್ನು (1996ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 1) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುವ ಸಲುವಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ ಅವುಗಳೆಂದರೆ :

(1) 156 ಮತ್ತು 197ನೇ ಪ್ರಕರಣಗಳನ್ನು ತಿದ್ದುಪಡಿ ಮಾಡುವ ಮೂಲಕ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ನೌಕರರು ಅಧ್ಯಕ್ಷರುಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಸಾಮಾನ್ಯ ಅಧಿಕಾರಿಗಳಿಗೊಳಪಟ್ಟು ಪ್ರಕಾರ್ಯಗಳನ್ನು ನಿರ್ವಹಿಸುವುದು.

(2) 152 ಮತ್ತು 193ನೇ ಪ್ರಕರಣಗಳನ್ನು ತಿದ್ದುಪಡಿ ಮಾಡುವ ಮೂಲಕ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಿಗೆ ಕಾರ್ಯನಿರ್ವಾಹಕ ಮುಖ್ಯಸ್ಥರ ಸ್ಥಾನಮಾನವನ್ನು ನೀಡುವುದು.

(3) 159ನೇ ಪ್ರಕರಣವನ್ನು ತಿದ್ದು ಪಡಿ ಮಾಡುವ ಮೂಲಕ ಜಿಲ್ಲಾ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯಲ್ಲಿ ಯಾವ ಲೋಕಸಭೆ ಮತ್ತು ರಾಜ್ಯ ವಿಧಾನಸಭಾ ಸದಸ್ಯರ ಚುನಾವಣಾ ಕ್ಷೇತ್ರಗಳಿರುವುವೋ ಅಂತಹ ಸದಸ್ಯರನ್ನು ಮತ್ತು ಜಿಲ್ಲಾ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಮತದಾರರೆಂದು ನೋಂದಾಯಿತರಾದ ರಾಜ್ಯ ಸಭಾ ಸದಸ್ಯರನ್ನು ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರನ್ನು ಮಾತ್ರ ಜಿಲ್ಲಾ ಪಂಚಾಯಿತಿಯ ಸದಸ್ಯರೆಂದು ಪರಿಗಣಿಸುವುದು.

ಆದ್ದರಿಂದ ಈ ವಿಧೇಯಕ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡಾವಳಿ ನಿಯಮಗಳ ನಿಯಮ 79ರ ಉಪ-ನಿಯಮ (1)ರ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.

ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುವ ಸಲುವಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ ಅವುಗಳೆಂದರೆ :

(1) 156 ಮತ್ತು 197ನೇ ಪ್ರಕರಣಗಳನ್ನು ತಿದ್ದುಪಡಿ ಮಾಡುವ ಮೂಲಕ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ನೌಕರರು ಅಧ್ಯಕ್ಷರುಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಸಾಮಾನ್ಯ ಅಧಿಕಾರಿಗಳಿಗೊಳಪಟ್ಟು ಪ್ರಕಾರ್ಯಗಳನ್ನು ನಿರ್ವಹಿಸುವುದು.

(2) 152 ಮತ್ತು 193ನೇ ಪ್ರಕರಣಗಳನ್ನು ತಿದ್ದುಪಡಿ ಮಾಡುವ ಮೂಲಕ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಿಗೆ ಕಾರ್ಯನಿರ್ವಾಹಕ ಮುಖ್ಯಸ್ಥರ ಸ್ಥಾನಮಾನವನ್ನು ನೀಡುವುದು.

(3) 159ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ ಜಿಲ್ಲಾ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯಲ್ಲಿ ಯಾವ ಲೋಕಸಭೆ ಮತ್ತು ರಾಜ್ಯ ವಿಧಾನಸಭಾ ಸದಸ್ಯರ ಚುನಾವಣಾ ಕ್ಷೇತ್ರಗಳಿರುವುವೋ ಅಂತಹ ಸದಸ್ಯರನ್ನು ಮತ್ತು ಜಿಲ್ಲಾ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಮತದಾರರೆಂದು

ನೋಂದಾಯಿತರಾದ ರಾಜ್ಯ ಸಭಾ ಸದಸ್ಯರನ್ನು ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರನ್ನು ಮಾತ್ರ ಜಿಲ್ಲಾ ಪಂಚಾಯಿತಿಯ ಸದಸ್ಯರೆಂದು ಪರಿಗಣಿಸುವುದು.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ ಉದ್ದೇಶವನ್ನು ಸಾಧಿಸುವ ಸಲುವಾಗಿ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ, 1996ನ್ನು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವನ್ನು ಅಧ್ಯಾದೇಶದ ಬದಲು ಮಂಡಿಸಲಾಗಿದೆ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ಕ್ರಮದಿಂದಾಗಿ ಯಾವ ಹೆಚ್ಚಿನ ವೆಚ್ಚವೂ ಉಂಟಾಗುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ

ಖಂಡ-2 : 152ನೇ ಪ್ರಕರಣದ (1) ನೇ ಉಪ-ಪ್ರಕರಣದ (ಬಿ) ಖಂಡವನ್ನು ಪ್ರತಿಯೋಜಿಸುವ ಮೂಲಕ ತಾಲ್ಲೂಕು ಪಂಚಾಯಿತಿಯ ಅಥವಾ ಅದರ ಅಧೀನದಲ್ಲಿನ ಹುದ್ದೆಗಳನ್ನು ಧಾರಣ ಮಾಡಿರವ ಅಧಿಕಾರಿಗಳ ಮತ್ತು ನೌಕರನ್ನು ನಿಯಂತ್ರಿಸಲು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡಲಾಗಿದೆ.

ಖಂಡ-6 : 197ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡವನ್ನು ಪ್ರತಿಯೋಜಿಸುವ ಮೂಲಕ ಜಿಲ್ಲಾ ಪಂಚಾಯಿತಿಯ ಅಥವಾ ಅದರ ಅಧೀನದಲ್ಲಿರುವ ಹುದ್ದೆಗಳನ್ನು ಧಾರಣ ಮಾಡಿರವ ಅಧಿಕಾರಿಗಳು ಮತ್ತು ನೌಕರರನ್ನು ನಿಯಂತ್ರಿಸಲು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡಲಾಗಿದೆ.

ಪ್ರಸ್ತಾವಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿದೆ.

ಎಂ.ಪಿ. ಪ್ರಕಾಶ್
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು

ನಿಂ.ಹು.ಮುತ್ತಲಗೇರಿ
ಕಾರ್ಯದರ್ಶಿ

ಅನುಬಂಧ

(ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993-1994ರ ಕರ್ನಾಟಕ ಅಧಿನಿಯಮ 14) ಇದರ ಉದ್ಧೃತ ಭಾಗ)

** ** **

152. ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು.- ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷನು,-

(ಎ) ತಾಲ್ಲೂಕು ಪಂಚಾಯಿತಿಯ ಸಭೆಗಳನ್ನು ಸಮಾವೇಶಗೊಳಿಸತಕ್ಕದ್ದು ; ಅದರ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅದನ್ನು ನಡೆಸತಕ್ಕದ್ದು :

(ಬಿ) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅಡಿಯಲ್ಲಿ ತನಗೆ ವಿಧಿಸಿದ ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಪ್ರದಾನ ಮಾಡಿದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಸರ್ಕಾರವು ತನಗೆ ವಹಿಸಿಕೊಟ್ಟಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(ಸಿ) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಈ ಅಧಿನಿಯಮದಡಿ ಹೊರಡಿಸಿದ ಯಾವುದೇ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳಿಗೆ ಅಸಂಗತವಾಗಿರದ ತಾಲ್ಲೂಕು ಪಂಚಾಯಿತಿಯ ಅಥವಾ ಸ್ಥಾಯೀ ಸಮಿತಿಗಳ ನಿರ್ಣಯಗಳನ್ನು ಅಥವಾ ತೀರ್ಮಾನಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕಾರ್ಯನಿರ್ವಾಹಕ ಅಧಿಕಾರಿಯ ಮೇಲೆ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ಅವನ ಮೇಲೆ ನಿಯಂತ್ರಣ ಅಧಿಕಾರವನ್ನು ಚಲಾಯಿಸತಕ್ಕದ್ದು.

(ಡಿ) ** ** **

156. ಕಾರ್ಯನಿರ್ವಾಹಕ ಅಧಿಕಾರಿಯ, ಇತರ ಅಧಿಕಾರಿಗಳ ಹಾಗೂ ಸಿಬ್ಬಂದಿಯ ಪ್ರಕಾರ್ಯಗಳು.-

(1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಬೇರೆ ರೀತಿಯಲ್ಲಿ ಸ್ಪಷ್ಟವಾಗಿ ಉಪಬಂಧಿಸಿದುದನ್ನು ಉಳಿದು, ಕಾರ್ಯನಿರ್ವಾಹಕ ಅಧಿಕಾರಿಯು,-

(ಎ) ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಅಥವಾ ತಾತ್ಕಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಅವನಿಗೆ ನಿರ್ಧಿಷ್ಟವಾಗಿ ವಿಧಿಸಿರುವ ಅಥವಾ ಪ್ರದತ್ತವಾಗಿರುವ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(ಬಿ) ಸರ್ಕಾರವು ರಚಿಸಿದ ನಿಯಮಗಳಿಗೆ ಅನುಸಾರವಾಗಿ ತಾಲ್ಲೂಕು ಪಂಚಾಯಿತಿಯ ಅಥವಾ ಅದರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಥವಾ ಅದರ ಅಧೀನದಲ್ಲಿ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಿಗಳ ಮತ್ತು ನೌಕರರ ಮೇಲೆ ಕರ್ತವ್ಯಗಳನ್ನು ಗೊತ್ತುಪಡಿಸತಕ್ಕದ್ದು ಮತ್ತು ಅದರ ಮೇಲೆ ನಿಯಂತ್ರಣ ಇಟ್ಟುಕೊಳ್ಳತಕ್ಕದ್ದು.

(ಸಿ) ** ** **

159. ಜಿಲ್ಲಾ ಪಂಚಾಯಿತಿಯ ರಚನೆ.- (1) ಪ್ರತಿಯೊಂದು ಜಿಲ್ಲಾ ಪಂಚಾಯಿತಿಯು,-

(i) 160 ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಿರುವಂತೆ ಚುನಾಯಿತ ಸದಸ್ಯರನ್ನು.

(ii) ಲೋಕಸಭೆ ಮತ್ತು ರಾಜ್ಯ ವಿಧಾನಸಭೆಯ ಯಾವ ಸದಸ್ಯರ ಚುನಾವಣೆ ಕ್ಷೇತ್ರಗಳು ಜಿಲ್ಲೆಯ ವ್ಯಾಪ್ತಿಯೊಳಗೆ ಇರುವುವೋ ಅಂಥ ಜಿಲ್ಲೆಯ ಒಂದು ಭಾಗವನ್ನು ಅಥವಾ ಸಮಗ್ರ ಜಿಲ್ಲೆಯನ್ನು ಪ್ರತಿನಿಧಿಸುವ ಸದಸ್ಯರನ್ನು.

(iii) ಜಿಲ್ಲೆಯ ವ್ಯಾಪ್ತಿಯೊಳಗೆ ಮತದಾರರೆಂದು ನೋಂದಾಯಿತರಾದ ರಾಜ್ಯಸಭೆಯ ಸದಸ್ಯರನ್ನು ಮತ್ತು ರಾಜ್ಯ ವಿಧಾನಪರಿಷತ್ತಿನ ಸದಸ್ಯರನ್ನು ಮತ್ತು

(iv) ಜಿಲ್ಲೆಯ ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರನ್ನು ಒಳಗೊಂಡಿರತಕ್ಕದ್ದು.

193. **ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು** : ಜಿಲ್ಲಾ ಪಂಚಾಯಿತಿಯ ಅಧ್ಯಕ್ಷನು,-

(ಎ) ಜಿಲ್ಲಾ ಪಂಚಾಯಿತಿಯ ಸಭೆಗಳನ್ನು ಕರೆಯತಕ್ಕದ್ದು, ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ನಡೆಸತಕ್ಕದ್ದು.

(ಬಿ) ಅಧ್ಯಕ್ಷನು ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ವಿಧಿಸಿದ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ವಹಿಸಿಕೊಟ್ಟಿರುವ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಅಥವಾ ಸರ್ಕಾರವು ಕಾಲಕಾಲಕ್ಕೆ ವಹಿಸಿಕೊಟ್ಟಿರುವ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(ಸಿ) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೀಡಿದ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳಿಗೆ ಅಸಂಗತವಾಗಿರದ, ಜಿಲ್ಲಾ ಪಂಚಾಯಿತಿಯ ಅಥವಾ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಅಥವಾ ತೀರ್ಮಾನಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮೇಲೆ ಅಂಥ ಆಡಳಿತ ಮೇಲ್ವಿಚಾರಣೆ ಹಾಗೂ ನಿಯಂತ್ರಣ ಅಧಿಕಾರವನ್ನು ಚಲಾಯಿಸತಕ್ಕದ್ದು.

(ಡಿ) ** ** **
** ** **

197. **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಹಾಗೂ ಇತರ ಅಧಿಕಾರಿಗಳ ಕಾರ್ಯಗಳು, ಅಧಿಕಾರಿಗಳು ಮತ್ತು ಕರ್ತವ್ಯಗಳು,-** (1) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿದುದನ್ನುಳಿದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು,-

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನಿರ್ದಿಷ್ಟವಾಗಿ ವಿಧಿಸಿರುವ ಅಥವಾ ವಹಿಸಿ ಕೊಟ್ಟಿರುವ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(ಬಿ) ಸರ್ಕಾರವು ರಚಿಸಿದ ನಿಯಮಗಳಿಗನುಸಾರವಾಗಿ ಜಿಲ್ಲಾ ಪಂಚಾಯಿತಿಯ ಅಥವಾ ಅದರ ಅಧೀನದಲ್ಲಿನ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯಗಳನ್ನು ಗೊತ್ತುಪಡಿಸತಕ್ಕದ್ದು ಮತ್ತು ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡತಕ್ಕದ್ದು.

(ಸಿ) ** ** **
** ** **

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನ ಸಭೆ

ಐದನೇ ಅಧಿವೇಶನ

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1996

(1996ರ ವಿಧಾನ ಸಭಾ ವಿಧೇಯಕ ಸಂಖ್ಯೆ 1)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲಿ ವಿಧೇಯಕ.

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961ನ್ನು (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 10) ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ,

ಭಾರತ ಗಣರಾಜ್ಯದ ನಲವತ್ತೇಳನೆಯ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ ;

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (10 ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ 1996 ಎಂದು ಕರೆಯತಕ್ಕದ್ದು.

(2) ಇದು 1995ರ ಅಕ್ಟೋಬರ್ ಇಪ್ಪತ್ತನೆಯ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 109ನೇ ಪ್ರಕರಣದ ತಿದ್ದುಪಡಿ.– (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗುವ) ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 10) 109ನೇ ಪ್ರಕರಣದ (1 ಎ) ಉಪ ಪ್ರಕರಣದಲ್ಲಿ "ಅಧಿಸೂಚನೆಯ ಮೂಲಕ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ವಿಸ್ತೀರ್ಣದ ಭೂಮಿಗೆ ವಿನಾಯಿತಿ ನೀಡಬಹುದು" ಪದಗಳಿಗೆ "ಅಧಿಸೂಚನೆಯ ಮೂಲಕ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಉಪಬಂಧಗಳಿಗೆ ಮತ್ತು ಅದರ ಮೂಲಕ ನಿರ್ದಿಷ್ಟಪಡಿಸಬಹುದಾದ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು 63,79ಎ, 79ಬಿ ಮತ್ತು 80ನೇ ಪ್ರಕರಣಗಳ ಉಪಬಂಧಗಳಿಂದ ಯಾವುದೇ ವಿಸ್ತೀರ್ಣದ ಭೂಮಿಗೆ ವಿನಾಯಿತಿ ನೀಡಬಹುದು" ಎಂಬ ಪದಗಳು, ಅಂಕಿಗಳು, ಆವರಣಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

3. ನಿರಸನ ಮತ್ತು ಉಳಿಸುವಿಕೆಗಳು.– (1) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧ್ಯಾದೇಶ, 1996ನ್ನು (1996ರ ಕರ್ನಾಟಕ ಅಧ್ಯಾದೇಶ 1) ಈ ಮೂಲಕ ನಿರಸಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರಾಜ್ಯದೊಳಗೆ ವಿದೇಶಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಸಾಮರ್ಥ್ಯವುಳ್ಳ ಲಚರ ಕೃಷಿ, ಪುಷ್ಪ ಕೃಷಿ, ತೋಟಗಾರಿಕೆ ಆಧಾರಿತ ಕೈಗಾರಿಕೆಗಳನ್ನು ಮತ್ತು ಹ ಉದ್ಯಮವನ್ನು ಸಹ ಅಭಿವೃದ್ಧಿಗೊಳಿಸುವುದು ಹಾಗೂ ಅವುಗಳ ಸ್ಥಾಪನೆ ತ್ತು ವಿಸ್ತರಣೆಗೆ ಸುಲಭವಾಗಿ ಭೂಮಿಗಳನ್ನು ಪಡೆಯುವುದು ಸಾಧ್ಯವಾಗುವಂತೆ ರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ 109ನೇ ಪ್ರಕರಣವನ್ನು ದ್ದುಪಡಿ ಮಾಡುವುದಕ್ಕಾಗಿ 1995ರ ಕರ್ನಾಟಕ ಅಧಿನಿಯಮ ಸಂಖ್ಯೆ 31ನ್ನು ಧಿನಿಯಮಿತಗೊಳಿಸಲಾಯಿತು.

109ನೇ ಪ್ರಕರಣದ (1ಎ) ಉಪ-ಪ್ರಕರಣದ ಅಡಿ ನೀಡುವ ಭೂ ವಿನಾಯಿತಿಯು 961ರ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಉಪಬಂಧಗಳಿಗೆ ಳಪಟ್ಟಿರುತ್ತದೆ ಹಾಗೂ ವಿನಾಯಿತಿಯ ನೀಡಿಕೆಯು 63, 79ಎ, 79ಬಿ ಅಥವಾ)ನೇ ಪ್ರಕರಣದ ಉಪಬಂಧಗಳಿಗೆ ಸೀಮಿತವಾಗಿದೆಯೆಂಬುದನ್ನು ಸ್ಪಷ್ಟಪಡಿಸುವ ುವಾಗಿ ಸದರಿ ಉಪ-ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ 1995ರ ರ್ನಾಟಕ ಅಧ್ಯಾದೇಶ ಸಂಖ್ಯೆ 8ನ್ನು ಪ್ರಖ್ಯಾಪಿಸಲಾಯಿತು. 1995ರ ಅಧ್ಯಾದೇಶ ಂಖ್ಯೆ 8ರ ಅವಧಿ 1996 ಫೆಬ್ರವರಿ 8ರಂದು ಕೊನೆಗೊಳ್ಳಲಿದ್ದುದರಿಂದ 1996ರ ಧ್ಯಾದೇಶ ಸಂಖ್ಯೆ 1ನ್ನು ಪ್ರಖ್ಯಾಪಿಸಲಾಗಿತ್ತು. ಸದರಿ ಅಧ್ಯಾದೇಶದ ಬದಲಾಗಿ ಈ ಧೇಯಕವನ್ನು ಮಂಡಿಸಲಾಗಿದೆ. ಆದ್ದರಿಂದ ಈ ವಿಧೇಯಕ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡಾವಳಿ ನಿಯಮಗಳ ನಿಯಮ 80ರ ಉಪ-ನಿಯಮ (1)ರ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ರಾಜ್ಯದೊಳಗೆ ವಿದೇಶಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಸಾಮರ್ಥ್ಯವುಳ್ಳ ಲಚರ ಕೃಷಿ, ಪುಷ್ಪ ಕೃಷಿ,ತೋಟಗಾರಿಕೆ ಆಧಾರಿತ ಕೈಗಾರಿಕೆಗಳನ್ನು ಮತ್ತು ಗೃಹ ುದ್ಯಮವನ್ನು ಸಹ ಅಭಿವೃದ್ಧಿಗೊಳಿಸುವುದು ಹಾಗೂ ಅವುಗಳ ಸ್ಥಾಪನೆ ಮತ್ತು ಸ್ತರಣೆಗೆ ಸುಲಭವಾಗಿ ಭೂಮಿಗಳನ್ನು ಪಡೆಯುವುದು ಸಾಧ್ಯವಾಗುವಂತೆ ಕರ್ನಾಟಕ ೂಸುಧಾರಣಾ ಅಧಿನಿಯಮ, 1961ರ 109ನೇ ಪ್ರಕರಣವನ್ನು ತಿದ್ದುಪಡಿ ಾಡುವುದಕ್ಕಾಗಿ 1995ರ ಕರ್ನಾಟಕ ಅಧಿನಿಯಮ ಸಂಖ್ಯೆ 31ನ್ನು ಧಿನಿಯಮಿತಗೊಳಿಸಲಾಯಿತು.

109ನೇ ಪ್ರಕರಣದ (1ಎ) ಉಪ-ಪ್ರಕರಣ ಅಡಿ ನೀಡುವ ಭೂವಿನಾಯಿತಿಯು)61ರ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಉಪಬಂಧಗಳಿಗೆ ಳಪಟ್ಟಿರುತ್ತದೆ ಹಾಗೂ ವಿನಾಯಿತಿಯ ನೀಡಿಕೆಯು 63, 79ಎ, 79ಬಿ ಅಥವಾ)ನೇ ಪ್ರಕರಣದ ಉಪಬಂಧಗಳಿಗೆ ಸೀಮಿತವಾಗಿದೆಯೆಂಬುದನ್ನು ಸ್ಪಷ್ಟಪಡಿಸುವ ುವಾಗಿ ಸದರಿ ಉಪ-ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ 1995ರ ರ್ಾಟಕ ಅಧ್ಯಾದೇಶ ಸಂಖ್ಯೆ 8ನ್ನು ಪ್ರಖ್ಯಾಪಿಸಲಾಯಿತು. 1995ರ ಅಧ್ಯಾದೇಶ ಖ್ಯೆ 8ರ ಅವಧಿ 1996ರ ಫೆಬ್ರವರಿ 8 ರಂದು ಕೊನೆಗೊಳ್ಳಲಿದ್ದುದರಿಂದ 1996 ಧ್ಯಾದೇಶ ಸಂಖ್ಯೆ 1ನ್ನು ಪ್ರಖ್ಯಾಪಿಸಲಾಗಿತ್ತು.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನಸಭೆಯು ಧಿವೇಶನದಲ್ಲಿಲ್ಲದಿದ್ದುದರಿಂದ ಮೇಲ್ಕಂಡ ಅಧ್ಯಾದೇಶವನ್ನು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಅಧ್ಯಾದೇಶದ ಬದಲಾಗಿ ಮಂಡಿಸಲಾಗಿದೆ.

ಆರ್ಥಿಕ ಜ್ಞಾಪಕ ಪತ್ರ

ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಯಾವುದೇ ಹೆಚ್ಚುವರಿ ಹಣಕಾಸು ವೆಚ್ಚ ಉಂಟಾಗುವುದಿಲ್ಲ.

ಆರ್.ಎಲ್. ಜಾಲಪ್ಪ
ಕಂದಾಯ ಸಚಿವರು

ನಿಂ.ಹು. ಮುತ್ತಲಗೇರಿ
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) ಉದ್ಧೃತ ಭಾಗ

** ** **

109. ಕೆಲವು ಭೂಮಿಗಳಿಗೆ ಕೆಲವು ಉಪಬಂಧಗಳಿಂದ ವಿನಾಯಿತಿ.

"(1) ನಿರ್ದಿಷ್ಟಪಡಿಸಬಹುದಾದಂಥ ನಿಯಮಗಳಿಗೆ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಉಪಬಂಧಗಳಿಗೆ ಒಳಪಟ್ಟು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ 63, 79ಎ, 79ಬಿ ಅಥವಾ 80ನೇ ಪ್ರಕರಣಗಳ ಉಪಬಂಧಗಳಿಂದ ಕೆಳಕಂಡವುಗಳಿಗಾಗಿ ಉಪಯೋಗಿಸಲಾಗುವ ಯಾವುದೇ ಪ್ರದೇಶದಲ್ಲಿನ ಯಾವುದೇ ಭೂಮಿಗೆ ವಿನಾಯಿತಿ ನೀಡತಕ್ಕದ್ದು, ಎಂದರೆ,-

(i) ಕೈಗಾರಿಕಾ ಅಭಿವೃದ್ಧಿಗಳಿಗಾಗಿ ಬಳಸಲಾಗುವ ಭೂಮಿ, ಅದರ ವಿಸ್ತೀರ್ಣವು ನಾಲ್ಕು ಯೂನಿಟ್‌ಗಳನ್ನು ಮೀರತಕ್ಕದ್ದಲ್ಲ.

(ii) ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ, ಸಂಸ್ಥೆಗಳಿಗಾಗಿ, ಕೃಷಿಯೇತರ ಉದ್ದೇಶಕ್ಕಾಗಿ ಬಳಸುವ ಭೂಮಿ, ಅದರ ವಿಸ್ತೀರ್ಣವು ನಾಲ್ಕು ಯೂನಿಟ್‌ಗಳನ್ನು ಮೀರತಕ್ಕದ್ದಲ್ಲ.

(iii) ಮಾನ್ಯತೆ ಪಡೆದ ಅಥವಾ ನೋಂದಾಯಿತವಾದ ನಿಕಾಯದಿಂದ ಸ್ಥಾಪಿತವಾದ ಅಥವಾ ನಿರ್ಮಿತವಾದ, ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸುವ ಪೂಜಾ ಸ್ಥಳಗಳಿಗಾಗಿ ಕೃಷಿಯೇತರ ಉದ್ದೇಶಕ್ಕಾಗಿ ಬಳಸುವ ಭೂಮಿ, ಅದರ ವಿಸ್ತೀರ್ಣವು ಒಂದು ಯೂನಿಟನ್ನು ಮೀರತಕ್ಕದ್ದಲ್ಲ.

(iv) ರಾಜ್ಯ ಸರ್ಕಾರದಿಂದ ಅನುಮೋದಿತವಾದ ಗೃಹ ನಿರ್ಮಾಣ ಯೋಜನೆಗಾಗಿ ಬಳಸುವ ಭೂಮಿ, ಅದರ ವಿಸ್ತೀರ್ಣವು ಹತ್ತು ಯೂನಿಟ್‌ಗಳನ್ನು ಮೀರತಕ್ಕದ್ದಲ್ಲ.

(v) ಪುಷ್ಪ ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು ಒಳಗೊಂಡಂತೆ ತೋಟಗಾರಿಕೆಯ ಉದ್ದೇಶಕ್ಕಾಗಿ ಬಳಸುವ ಭೂಮಿ, ಅದರ ವಿಸ್ತೀರ್ಣವು ಇಪ್ಪತ್ತು ಯೂನಿಟ್‌ಗಳನ್ನು ಮೀರತಕ್ಕದ್ದಲ್ಲ

(1ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ ರಾಜ್ಯ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ, ಅಧಿಸೂಚನೆಯ ಮೂಲಕ, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ವಿಸ್ತೀರ್ಣದ ಭೂಮಿಗೆ ವಿನಾಯಿತಿ ನೀಡಬಹುದು.

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ೨೩ನೇ ಫೆಬ್ರವರಿ ೧೯೯೬, ಮಾಘ, ಶಕ ೧೭ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ ೯.೩೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು : ಶ್ರೀ ಎಸ್. ಅಂಗಾರ ಅವರ ಪ್ರಶ್ನೆ ಸಂಖ್ಯೆ 47ಕ್ಕೆ ಸಚಿವರು ಟೈಂ ಕೇಳಿದ್ದಾರೆ.

ಶ್ರೀ ಕೆ.ಎಸ್. ಬೀಳಗಿ : ಅಧ್ಯಕ್ಷರೇ ರೆಕಾರ್ಡ್ಸ್ ನೋಡಬೇಕಾಗಿದೆ. ಸುಳ್ಯಕ್ಕೊಂಡು ಬಸ್ ನಿಲ್ದಾಣ ಕಟ್ಟಲು ಸಮಸ್ಯೆ ಇಲ್ಲ. ಅಲ್ಲಿ 24 ಗಂಟೆಗೆ ಅಕ್ವಿಜಿಶನ್ ಎಂದು ಹಾಕಿದ್ದರು. ಅದರ ಮಾಲಿಕ ಹೈಕೋರ್ಟ್‌ಗೆ ಹೋಗಿ ತಡೆ ತಂದಿದ್ದಾನೆ.

ಅಧ್ಯಕ್ಷರು : ಅದನ್ನೇ ಉತ್ತರ ಕೊಡಿ, ಅದಕ್ಕೆ ಟೈಂ ಏಕೆ ಬೇಕು?

ಶ್ರೀ ಕೆ.ಎಸ್. ಬೀಳಗಿ : ಅಲ್ಲದೆ ಆ ಜಾಗ ಸಾಲುವುದಿಲ್ಲವೆಂದು ಡಿಸಿಯವರಿಗೆ ಬೇರೆ ಲ್ಯಾಂಡ್ ಪ್ರಪೋಜ್ ಮಾಡಿ ಎಂದು ಹೇಳಿದ್ದೇವೆ. ಮಾನ್ಯ ಸದಸ್ಯರು , ಅಲ್ಲಿ ಸಹಾಯ ಮಾಡಿದರೆ ಬಸ್‌ಸ್ಟ್ಯಾಂಡ್ ಕಟ್ಟಲಿಕ್ಕೆ ತೊಂದರೆ ಇಲ್ಲ.

ಶ್ರೀ ಎಸ್. ಅಂಗಾರ : ಆ ಜಮೀನಿನ ಕೇವಲ 10 ಸೆಂಟ್‌ಗೆ ಮಾತ್ರ ವಿವಾದ ಇದೆ. ಬಾಕಿಯದಕ್ಕೆ ವಿವಾದ ಇಲ್ಲ. ಸರ್ಕಾರದ ಅಧಿಕಾರಿಗಳಿಂದ ವಿಳಂಬವಾಗಿರುವುದು.

ಅಧ್ಯಕ್ಷರು : ಆ 10 ಸೆಂಟ್ ಜಾಗ ಮಧ್ಯದಲ್ಲಿ ಬರುವುದೇ ಅಥವಾ ಅಂಚಿಗೆ ಬರುವುದೇ?

ಶ್ರೀ ಎಸ್. ಅಂಗಾರ : ಅಂಚಿಗೆ ಬರುತ್ತದೆ.

ಅಧ್ಯಕ್ಷರು :ಹಾಗಾದರೆ ಸಚಿವರೇ ಬಸ್‌ಸ್ಟ್ಯಾಂಡ್ ಕೆಲಸ ಶುರುಮಾಡಿಸಿ

ಶ್ರೀ ಕೆ.ಎಸ್. ಬೀಳಗಿ : 24 ಗುಂಟೆಯಲ್ಲಿ 8 ಗುಂಟೆ ಹೋದರೆ 16 ಗುಂಟೆಯಲ್ಲಿ ಬಸ್‌ಸ್ಟ್ಯಾಂಡ್ ಕಟ್ಟುವುದು ಹೇಗೆ ಸ್ವಾಮಿ?

ಅಧ್ಯಕ್ಷರು : ಅಂಗಾರ ಅವರೆ, ಉಳಿಕೆ ಜಾಗದಲ್ಲಿ ಬಸ್‌ಸ್ಟ್ಯಾಂಡ್ ಕಟ್ಟಲು ಆಗುವುದಾದರೆ, you can sit with the Minister and discuss. ಚರ್ಚೆ ಮಾಡಿ, ಅನಂತರ ಮಂತ್ರಿಗಳನ್ನು ಭೇಟಿಯಾಗಿ. ನಿಮ್ಮ ಅಧಿಕಾರಿಗಳನ್ನೂ ಕರೆಯಿಸಿ. Minister may see that the Hon'ble Member is an young man and he comes from a

reserved constituency. You have the responsibility to take special care of youngsters.

ಶ್ರೀ ಬಿ.ಬಿ.ಶಿವಣ್ಣ : ಮಾನ್ಯ ಅಧ್ಯಕ್ಷರೇ ಗುಂಟೆಗೂ ಸೆಂಟ್‌ಗೂ ವ್ಯತ್ಯಾಸ ಇದೆ. ಕೊಡಗು ದಕ್ಷಿಣ ಕನ್ನಡದಲ್ಲಿ 100 ಸೆಂಟ್ಸ್‌ಗೆ ಒಂದು ಎಕರೆ ಬೇರೆ ಕಡೆ 40 ಗುಂಟೆಗೆ ಒಂದು ಎಕರೆ.

ಶ್ರೀ ಕೆ.ಎಸ್. ಬೀಳಗಿ : ಅದನ್ನೇ ನಾನು ಹೇಳುತ್ತಿರುವುದು 0.60 ಸ್ವಾಧೀನತೆಗೆಂದು ಹಾಕಿದ್ದಾರೆ. ಅದಕ್ಕೆ ದುಡ್ಡೂ ತುಂಬಿದ್ದೇವೆ ನಾವು 0.20ಗೆ ಮಾಲಿಕರು ಹೈಕೋರ್ಟಿನಲ್ಲಿ ಸ್ಟೇ ತಂದಿದ್ದಾರೆ. ಉಳಿದಿದ್ದರಲ್ಲಿ ಮಾಡುವುದಕ್ಕೆ ಪ್ರಾಬ್ಲಂ ಇದೆ ಎಂದು ಹೇಳಿದೆ ಅಷ್ಟೆ.

ರಾಜ್ಯದ ಪ್ರತಿ ಗ್ರಾಮಗಳಲ್ಲಿ ಗೋಮಾಳ ಜಮೀನು

274 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರತಿ ಹಳ್ಳಿಗಳಲ್ಲೂ ಗೋಮಾಳ ಉಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಗೋಮಾಳವು ಸೇರಿದಂತೆ ಸರ್ಕಾರಿ ಭೂಮಿ ರಾಜ್ಯದ್ಯಂತ ಎಷ್ಟು ಒತ್ತುವರಿಯಾಗಿದೆ? (ಜಿಲ್ಲೆ ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು).

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯಿದೆ 1964ಕ್ಕೆ ತಿದ್ದುಪಡಿಯನ್ನು ಮಾಡಿ ಕಲಂ 94 ಎ ಇದನ್ನು ಹೊಸದಾಗಿ ಸೇರಿಸಿ, ಗೋಮಾಳ ಮುಂತಾದ ಸರ್ಕಾರಿ ಜಮೀನುಗಳಲ್ಲಿ ಕೃಷಿ ಉದ್ದೇಶಕ್ಕಾಗಿ ಆಗಿರುವ ಒತ್ತುವರಿಗಳನ್ನು ಸಕ್ರಮಗೊಳಿಸುವ ಯೋಜನೆಯು ಸೆಪ್ಟಂಬರ್ 1991 ರಿಂದ ಜಾರಿಗೆ ಬಂದಿದ್ದು, ದಿನಾಂಕ 14.4.90ರ ಹಿಂದೆ ಗೋಮಾಳ ಜಮೀನುಗಳಲ್ಲಿ ಆಗಿರುವ ಒತ್ತುವರಿಗಳನ್ನು (ಸಾರ್ವಜನಿಕ ಉದ್ದೇಶಕ್ಕಾಗಿ ಕಾದಿರಿಸಿರುವ ಜಮೀನುಗಳಾದ ಕೆರೆ ಅಂಗಳ, ಗುಂಡುತೋಪು ಇತ್ಯಾದಿಗಳನ್ನು ಹೊರತುಪಡಿಸಿ) ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಮತ್ತು ದಿನಾಂಕ 14.4.90ರ ನಂತರ ಗೋಮಾಳ ಮತ್ತು ಇತರ ಸರ್ಕಾರಿ ಜಮಿನುಗಳಲ್ಲಿ ಆಗಿರುವ ಅತಿಕ್ರಮಣಗಳನ್ನು ತೆಗೆದುಹಾಕಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಆ) 25, 80, 214 ಎಕರೆಗಳು

(ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ. ತಾಲ್ಲೂಕುವಾರು ಮಾಹಿತಿ ಲಭ್ಯವಿಲ್ಲ).

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ಗೋಮಾಳವು ಸೇರಿದಂತೆ ಸರ್ಕಾರಿ ಭೂಮಿ ರಾಜ್ಯಾದ್ಯಂತ ಒತ್ತುವರಿಯಾಗಿರುವುದು 25,80,214 ಎಕರೆ. ಎಂದು ಹೇಳಿದ್ದಾರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ನಿಜವಾಗಿಯೂ ಸಾರ್ವಜನಿಕವಾಗಿ ಉಪಯೋಗವಾಗುವುದೆಯೋ, ಯಾವುದನ್ನು ಅಕ್ರಮವಾಗಿ ಒತ್ತುವರಿ ಮಾಡಿದ್ದಾರೆ ಇದನ್ನು ಎಷ್ಟು ಬೇಗ ಬಿಡಿಸುವುದಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ? ನಿಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ, ಬಹಳ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತೀದ್ದೀರಿ. ಆದರೆ ಇಷ್ಟೊಂದು ಲಕ್ಷ ಎಕರೆಯನ್ನು ಬಹಿರಂಗವಾಗಿ ಒತ್ತುವರಿ ಮಾಡಿ ಕೊಂಡಿರುವಾಗ ಇದನ್ನು ಯಾವಾಗ ಬಿಡಿಸುತ್ತೀರಿ? ಈ ಭೂಮಿಗಳು

ಯಾವುವು ಎಂದರೆ ಗೋಮಾಳ ಕೆರೆಯಂಗಳ ಈ ಜಾಗಗಳಲ್ಲಿ ಯಾರು ಒತ್ತುವ ಮಾಡಿಕೊಂಡಿದ್ದಾರೋ ಅದನ್ನು ಸಕ್ರಮ ಮಾಡಲು ನಾವು ಹೇಳಿಯೇ ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಈಗ ನಾವು ಏ ಅಂಕಿಅಂಶ ಕೊಟ್ಟಿದ್ದೇವೆ ಇದರಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರವುದೂ ಸೇರಿ ದೇವಸ್ಥಾನದ ಭೂಮಿ ಗುಂಡುತೋಪು ಇವುಗಳನ್ನು ಸಕ್ರಮ ಮಾಡುವುದಿ ಎರಡನೆಯದಾಗಿ 1-3-90ರಿಂದೀಚೆಗೆ ಒತ್ತುವರಿ ಮಾಡಿಕೊಂಡಿದ್ದರೆ ಅದನ್ನು ಕೂ ನಾವು ಸಕ್ರಮಗೊಳಿಸುವುದಿಲ್ಲ. ಇದನ್ನು ನಾನು ಸದಸ್ಯರಿಗೆ ತಿಳಿಸಬಯಸುತ್ತೇ ಈಗಾಗಲೇ ನಾವು ಜಿಲ್ಲಾಧಿಕಾರಿ ಅಸಿಸ್ಟೆಂಟ್ ಕಮಿಶನರ್ ತಹಸೀಲ್ದಾರ್‌ಗಳಿಗೆ ಕಾಗ ಬರೆದಿದ್ದೇವೆ. ಯಾವುದೇ ಕಾರಣದಿಂದ ಅಕ್ರಮವಾಗಿ ಇಂಥ ಜಮಿನನ್ನು ಒತ್ತುವ ಮಾಡಿದ್ದರೆ ಆ ಕಡೇತಾರೀಖಿಂದು ನಾವು ಏನು ನಿಗದಿಮಾಡಿದ್ದವು ಅದರಿಂದೀಚೆ ಒತ್ತುವರಿಯಾಗಿರುವುದನ್ನೆಲ್ಲ ತೆರವುಗೊಳಿಸಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಪ್ರಶ್ನೆಯೂ ಅದೆ. ಬಡವರು ಒತ್ತುವ ಮಾಡಿ ಕೊಂಡಿರುವುದರ ಬಗ್ಗೆ ನಾನೇನೂ ಮಾತನಾಡುತ್ತಿಲ್ಲ. ಪ್ರತಿಹಳ್ಳಿಯಲ್ಲಿ ಗೋಮಾ ಕೆರೆಯಂಗಳ ಹೀಗೆ ಅವಶ್ಯಕವಾಗಿ ಇರಬೇಕು. ಮತ್ತೊಂದು ಕೇಳುತ್ತಿದ್ದೇನೆ, ಅನೇ ಹಳ್ಳಿಗಳಲ್ಲಿ ಸ್ಮಶಾನ ಇಲ್ಲ. ಸ್ಮಶಾನವಿಲ್ಲದೆ ಬೇರೆ ಜಮೀನಿಗೆ ಹೆಣ ಹೂಳಲ ಹೋದಾಗ ನಮ್ಮ ಜಮೀನಿನಲ್ಲಿ ಹೆಣ ಹೂಳಬಾರದೆಂದು ಹೇಳಿ, ದಿನಗಟ್ಟಲೆ ಹೆ ಹೂಳದೆ ಗಲಾಟೆಯಾಗಿರುವ ಪರಿಸ್ಥಿತಿ ಇದೆ. ಅಂಥಾದ್ದರಲ್ಲಿ ಪ್ರತಿ ಹಳ್ಳಿಯಲ್ಲ ಸ್ಮಶಾನಕ್ಕಾಗಿ ಜಾಗ ಕಾದಿರಿಸುವ ಕೆಲಸವನ್ನು ಸರ್ಕಾರ ಪ್ರಾಮಾಣಿಕವಾಗಿ ಯಾವಾ ಮಾಡುತ್ತದೆ?

ಶ್ರೀ ಆರ್.ಎಲ್. ಜಾಲಪ್ಪ : ಈಗಾಗಲೇ ನಾವು ಜಿಲ್ಲಾಧಿಕಾರಿಗಳಿಗೆ ಸೂಚ ಕೊಟ್ಟಿದ್ದೇವೆ. ಎಲ್ಲೆಲ್ಲಿ ಸ್ಮಶಾನವಿರುವುದಿಲ್ಲ ಅಲ್ಲಿ ಸರ್ಕಾರಿ ಜಮಿನಿದ್ದರೆ ಅವರಿ ಕೊಡಿ. ಜಮಿನಿಲ್ಲದಿದ್ದರೆ ಆಶ್ರಯ ಯೋಜನೆಯಂತೆ ಖಾಸಗಿ ಜಮಿನನ್ನೇ ಕೊಂಡ ಸ್ಮಶಾನಕ್ಕಾಗಿ ಕಾದಿಡಿ ಎಂದು ಈಗ 95-96ಕ್ಕೆ 1 ಕೋಟಿ ರೂಪಾಯಿ ಹಣ ಕೂ ಒದಗಿಸಿದ್ದೇವೆ . ಹಲವಾರು ಕಡೆ ಈ ತರಹ ಜಮಿನನ್ನು ಖರೀದಿ ಮಾಡಿಕೊಡುತ್ತಿದ್ದಾರೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಹಿರಿಯ ಸಚಿವರಾ ಶ್ರೀ ಜಾಲಪ್ಪನವರಿಗೆ ಗೊತ್ತಿದೆ, ಗೋಮಾಳ ಕೆರೆಕಟ್ಟೆ ತೋಪುಗಳನ್ನು ಯಾರ ಶಕ್ತಿವಂತರಿದ್ದಾರೆ ಪ್ರಬಲರಿದ್ದಾರೆ ಬಹುತೇಕ ಅವರೇ ಕಬಳಿಸಿರುವುದು ಎಂದು ತಾವ ಹೇಳಿಕೆ ಕೊಟ್ಟಿದ್ದೀರಿ ಬೆಂಗಳೂರು ಸುತ್ತಮುತ್ತ ಅದನ್ನು ಕಾಣುತ್ತಿದ್ದೇವೆ. ಇವತ್ತು ಸರ್ಕಾರದ ಪ್ರಕಾರವೇ ಸುಮಾರು 12 ಲಕ್ಷ ಜನರಿಗೆ ನಿವೇಶನವಿಲ್ಲ ಸಾಮಾನ್ಯವಾ ಗೋಮಾಳ ಜಾನುವಾರಗೋಸ್ಕರ ಇಟ್ಟಿದ್ದು, ಕೊನೆ [illegible] ಯಾರೋ ಒಬ್ಬಿಬ್ಬ ಬಡವ ಒತ್ತುವರಿ ಮಾಡಿದ್ದರೂ ಅದನ್ನು [illegible]ವರಿಗೆ ಕೊ[illegible] ಇನ್ನೆಲ್ಲಾದರೂ ಜಮೀನ ಕೊಟ್ಟು ಗೋಮಾಳ ಉಳಿಸಿಕೊಂಡು ಬಡವರಿಗೆ ನಿವೇಶನ ಹಂಚಲು ಬೇರೆ ಕೆಲಸಕ ಉಪಯೋಗ ಮಾಡಿಕೊಂಡರೆ ಬಹುಶಃ ಈ ಕರೆಕಟ್ಟೆಗಳು ಗೋಮಾಳಗಳ ಉಳಿಯಬಹುದು. ತಮ್ಮ ಕಾಲದಲ್ಲಾದರೂ ಸ್ವಲ್ಪ ದಿಟ್ಟಹೆಜ್ಜೆಯನ್ನು ತೆಗೆದುಕೊಳ್ಳಿ. ನಾವೆಲ್ಲ ನಿಮ್ಮ ಜೊತೆಯಲ್ಲಿದ್ದೇವೆ. ಬಡವರಿಗೆ ವಿಶೇಷ ವ್ಯವಸ್ಥೆ ಮಾಡೋಣ. 100ಕ್ಕೆ 90ರಷ್ಟ ಪ್ರಭಾವ ವ್ಯಕ್ತಿಗಳೇ ಒತ್ತುವರಿ ಮಾಡಿದ್ದಾರೆ, ಅನೇಕ ಪತ್ರಗಳನ್ನು ನಿಮಗೆ ಬರೆದಿದ್ದೇನೆ ತಾವೂ ಹೇಳಿಕೆ ಕೊಟ್ಟಿದ್ದೀರಿ. ನಿಮ್ಮ ಕಾಲದಲ್ಲಾದರೂ ಅದನ್ನು ಬಿಗಿಮಾಡುವ ಅಗತ್ಯವಿದೆ.

ಶ್ರೀ ಆರ್.ಎಲ್. ಜಾಲಪ್ಪ : ಬೆಂಗಳೂರು ನಗರ ಜಿಲ್ಲೆಯಲ್ಲಿ ಎಲ್ಲೆಲ್ಲಿ ಒತ್ತುವರಿಯಾಗಿದೆ ಕೆಲವು ಕೆರೆಗಳೇ ಪತ್ತೆ ಇಲ್ಲದಂತೆ ಮಾಡಿದ್ದಾರೆ. ಇದನ್ನೆಲ್ಲ ನಾವು

ಗುರುತು ಹಚ್ಚಿದ್ದೇವೆ. ಅದರ ಮೇಲೆ ಈಗ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದೇವೆ. ಅವರು ಹೇಳಿದ್ದುದನ್ನು ಒಪ್ಪುತ್ತೇವೆ ಹಳ್ಳಿಗಳಲ್ಲಿ ಬಲಯುತರಾದವರು, ತೋಳ್ಬಲ ಯಾರಿಗಿದೆ ಅಥವಾ ಹಣದ ಬಲ ಇರುವವರೆಗೆ ಸರ್ಕಾರವೂ ಇಲ್ಲ ಯಾವುದೂ ಇಲ್ಲ. ಕೆಲವು ಸಲ ನಮ್ಮ ರೂಲ್ಸ್ ಕಾನೂನು ನೋಡಿದಾಗ ಇದು ಒಂದು ತರಹ ಜೇಡರಬಲೆ ಇದ್ದಂತೆ ದಪ್ಪ ಹುಳ ಹೋದರೆ ಕಿತ್ತುಕೊಂಡು ಹೋಗುತ್ತವೆ. ಸಣ್ಣವು ಹೋದರೆ ಸಿಕ್ಕಿಕೊಳ್ಳುತ್ತವೆ.

Mr. SPEAKER : Two words are very mistakenly used-encroachment and Unauthorised cultivation Encroachment is done by vested interests Powerful man; Unauthorised cultivation is done by a poor and helpless man.

ಶ್ರೀ ಆರ್.ಎಲ್. ಜಾಲಪ್ಪ : ಸನ್ಮಾನ್ಯ ಅಧ್ಯಕ್ಷರೇ, even unauthorised cultivation is done by wealthy people also. They have also grabbed lands ನಾವು ಇದರ ಬಗ್ಗೆ ಹೆಚ್ಚು ಗಮನಹರಿಸಿದ್ದೇವೆ, ಹಿಂದೆ ಜಿಲ್ಲಾಧಿಕಾರಿಗಳ ಕಾರ್ಯದರ್ಶಿಗಳ ಸಭೆ ಕರೆದಿದ್ದಾಗಲೂ ಹೇಳಿದ್ದೇನೆ. ಯಾವುದೇ ಕಾರಣದಿಂದಲೂ ಯಾವುದ ರಿಯಾಯಿತಿ ತೋರಿಸದೆ ಇದನ್ನು ಬಿಡಿಸಬೇಕು ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಚಿವರು ಕೊಟ್ಟ ಅಂಕಿಸಂಖ್ಯೆ ಪ್ರಕಾರವೇ ಸುಮಾರು 25 ಲಕ್ಷ ಎಕರೆ ಒತ್ತುವರಿಯಾಗಿದೆ. ಅದರಲ್ಲಿ ಬಡವರು ಎಸ್.ಸಿ.ಎಸ್.ಟಿ.ಯವರು ಸುಮಾರು 8 ಲಕ್ಷ ಎಕರೆ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೀರಿ. ಇದು ಏನು ತೋರಿಸುತ್ತದೆ ಒತ್ತುವರಿಯನ್ನು ಹೆಚ್ಚಾಗಿ ಬಡವರೇ ಮಾಡಿಕೊಂಡಿದ್ದಾರೆಂಬುದನ್ನು ಒಂದು. ಎರಡನೆಯದೆಂದರೆ, ಸಕ್ರಮಗೊಳಿಸುವ ಪ್ರೊಸೆಸ್‌ನಲ್ಲಿ ಈಗೇನೋ ತಾವು ಅಧ್ಯಕ್ಷರನ್ನು ನೇಮಕ ಮಾಡಿ ಚುರಿಕುಗೊಳಿಸುತ್ತೇನೆಂದು ಹೇಳಿದ್ದಿರಿ. ಅದು ಯಾವಾಗ ಆಗುತ್ತದೆಯೋ ಗೊತ್ತಿಲ್ಲ. ಈಗ ನಾನು ಕೇಳುವುದಿಷ್ಟೆ. ಸತ್ತಮೇಲಾದರೂ ಒಂದು ಕಡೆ ಹೂಳಿಸುವ ಪ್ರಯತ್ನ ಸರ್ಕಾರ ಮಾಡುತ್ತದೆಯೇ? ಸ್ಮಶಾನಕ್ಕೆ ಜಾಗ ಕೇಳುವಾಗ ಜಾತಿಗೊಂದು ಜಾಗಬೇಕು. ಕುಂಬಾರರಿಗೊಂದು ಜಾಗ, ಚಮ್ಮಾರರಿಗೊಂದು ಜಾಗ ಹೀಗೆ - ಆದ್ದರಿಂದ ಸತ್ತಮೇಲಾದರೂ ನಮ್ಮಷ್ಟು ಸಾಮಾಜಿಕ ನ್ಯಾಯವೆಂದು ಹೇಳಿಕೊಂಡಿದ್ದರಲ್ಲ ರಾಜ್ಯಪಾಲರ ಭಾಷಣದಲ್ಲಿ, ಒಂದು ಕಡೆ ಹೂಳುವ ಮೂಲಕ ಅದನ್ನು ಜಾರಿಗೆ ತರುತ್ತೀರಾ?

ಶ್ರೀ ಎಂ. ಶ್ರೀನಿವಾಸ್ : ನಾನು ಎರಡು ಮೂರು ಸಲ ಬರೆದುಕೊಟ್ಟೆ. ಸಹಕಾರಸಂಘದವರು ಬೆಂಗಳೂರು ಸುತ್ತಮುತ್ತ ಒಂದೊಂದು ಜಾಗದಲ್ಲಿ 25 ಎಕರೆ ಒತ್ತುವರಿ ಮಾಡಿದ್ದಾರೆ. ಇದು ತಮಗೆ ಗೊತ್ತಿದೆ. ಅದರ ಬಗ್ಗೆ ಇದುವರೆಗೂ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಒಂದೇ ಸೊಸೈಟಿಯವರು ಸುಮಾರು 20 ಕೋಟಿ ರೂಪಾಯಿನಷ್ಟು ಒತ್ತುವರಿ ಮಾಡಿದ್ದಾರೆ. ಇನ್ನೊಂದು ಸೊಸೈಟಿಯವರು ಸುಮಾರು 10ಕೋಟಿಯಷ್ಟು ಒತ್ತುವರಿ ಮಾಡಿದ್ದಾರೆ, ತಮಗೆ ಇದರ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ. ಇದುವರೆಗೂ ಏನೂ ಮಾಡಿಲ್ಲ. ಏನು ಮಾಡುತ್ತೀರಿ ತಿಳಿಸಿ.

ಶ್ರೀ ಆರ್.ಎಲ್. ಜಾಲಪ್ಪ : ಶ್ರೀನಿವಾಸ್‌ರವರು ಕೆಲವು ವಿಷಯಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ ನಾನು ಕೂಡಲೇ ಜಿಲ್ಲಾಧಿಕಾರಿಯನ್ನು ಆ ಸ್ಥಳಕ್ಕೆ ಕಳುಹಿಸಿ ಎಲ್ಲೆಲ್ಲಿ ಅನ್‌ಆಥರೈಸ್ ಕನ್‌ಸ್ಟ್ರಕ್ಷನ್ಸ್ ಇದೆ ಅದನ್ನು ಸ್ವಲ್ಪ ತೆಗೆಸಿದ್ದೇವೆ ಸ್ವಾಮಿ. ನಾವು ಯಾರಿಗೂ ಪ್ರೋತ್ಸಾಹ ಕೊಡಬೇಕೆಂದು - ಏನೂ ಇಲ್ಲ. ನಾವು ಆತ್ಮಸಾಕ್ಷಿಯಾಗಿ ಪ್ರಯತ್ನಪಟ್ಟು ಎಷ್ಟು ಸಾಧ್ಯವೋ ಅಷ್ಟು ತೆಗೆಸುತ್ತಿದ್ದೇವೆ. ಎರಡನೆಯದಾಗಿ ಖರ್ಗೆಯವರು ಹೇಳಿದ್ದು. ನಾವು ಸರ್ಕಾರದವರು ಕುಂಬಾರರಿಗೆ ಬೇರೆ, ಕುರುಬರಿಗೆ ಬೇರೆ ಸ್ಮಶಾನ ಮಾಡಿಕೊಳ್ಳಿ ಎಂದು ಹೇಳುತ್ತಿಲ್ಲ. ನಮ್ಮ ಜಾತಿಗಿಲ್ಲ ಎಂದು ಅವರು ಅರ್ಜಿ

ಹಾಕುತ್ತಾರೆ,ತಗೊಳ್ಳಪ್ಪ ಒಂದು ಎರಡು ಎಕರೆ ಎಂದು ಹೇಳಬಹುದೇ ವಿನಾ ಅವರಿಗೆ ಗೊತ್ತಿದೆ, ಸಮಾಜದಲ್ಲಿ ಪರಿವರ್ತನೆ ಆಗುವವರೆಗೂ ಇದೇ ಗೋಳು ಆಗುವುದು. ಅಷ್ಟೇ ಅಲ್ಲ, ಎಡಗೈ ಬಲಗೈನವರೇ ಒಂದಾಗಿಲ್ಲ ಇನ್ನೂ. ಒಂದು ಬಾವಿಯಲ್ಲಿ ಅವರು ನೀರು ಸೇದುತ್ತಿರಲಿಲ್ಲ. It will take a long time. ಈಗೇನು ಯುವಕರು ಇದ್ದಾರೆ ಅವರೆಲ್ಲ ವಿದ್ಯಾವಂತರಾದರೆ ಇವೆಲ್ಲ ಚೇಂಜಸ್ ಆಗುತ್ತದೆ.

Mr. SPEAKER : You have no objection for burying

Sri R.L. JALAPPA : Impossible.

Mr. SPEAKER : He is willing to burying them together. ಈಗ ನಮ್ಮೂರು ತೋಬುಗೆರೆಯಲ್ಲಿ ಎಲ್ಲಾ ಒಂದು ಕಡೆಯೇ ಬರಯಲ್‌ಗ್ರಾಂಡ್ ಇರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಸಾಮಾಜಿಕ ವ್ಯವಸ್ಥೆಯೇ ಹೀಗಿದೆ. ನೀವು ಕೆಳಗಿನವರಿಗೆ ಬುದ್ಧಿ ಹೇಳುವುದಕ್ಕೆ ಹೋಗಬೇಡಿ. ಮೇಲಿಂದ ಬಂದರೆ ಕೆಳಗೆ ಆಟೊಮೆಟಿಗಾಗಿ ಸರಿಹೋಗುತ್ತದೆ. ಅದನ್ನು ಬಿಟ್ಟು ಎಲ್ಲಿ ವಿದ್ಯಾವಂತರು ಕಡಿಮೆ ಇದ್ದಾರೋ ಎಲ್ಲಿ ಇಲ್ಲಿಟ್ರಸಿ ಕಡಿಮೆ ಇದೆ ಅವರಿಂದ ನೀವು ಬಯಸುವುದು ನಿಮಗಿಂತ ಮೇಲೆ.......

ಶ್ರೀ ಆರ್. ಎಲ್. ಜಾಲಪ್ಪ : ಸ್ವಾಮಿ ಅವರಿಗೂ ಗೊತ್ತಿದೆ. ಮೇಲಿನವರಲ್ಲಿರುವಷ್ಟು ಜಾತೀಯತೆ ಕೆಳಗಿನವರಲ್ಲಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಿನ್ನೆ ಆಶ್ರಯ ಯೋಜನೆ ನಿವೇಶನ ಹಂಚುವ ವಿಚಾರದಲ್ಲಿ ಎಲ್ಲಾ ಹಳ್ಳಿಗೂ ನಾವು ಹೋಗಿದ್ದಾಗ ಹಿಂದಿನ ಸರ್ಕಾರಗಳು ಎಷ್ಟೊಂದು ತಪ್ಪು ಮಾಡಿದೆ ಎಂದರೆ ಬಹಳ ತಪ್ಪು ತೀರ್ಮಾನವನ್ನು ಗೋಮಾಳ ಕೊಡುವುದರಲ್ಲಿ ಮಾಡಿದ್ದೇವೆ. ವೈಜ್ಞಾನಿಕವಾಗಿ ಆಲೋಚಿಸಿ ಗೋಮಾಳಗಳನ್ನು ಉಳಿಸಿಕೊಂಡಿದ್ದವು. ಗೋಮಾಳ ಗುಂಡುತೋಪು ಕೆರೆಯಂಗಳ ಅತ್ಯವಶ್ಯಕವಾಗಿ ಜಮೀನುಗಳು ಸಾರ್ವಜನಿಕವಾಗಿ. ಈಗ ಎಷ್ಟು ಗೋಮಾಳವನ್ನೂ ಸಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ ಉಳಿದಿರುವ ಜಮಿನನ್ನಾದರೂ ಸರ್ಕಾರ ಉಳಿಸಿಕೊಳ್ಳುವ ವ್ಯವಸ್ಥೆ ಮಾಡಿದರೆ ಶಾಲೆಗೆ ಆಶ್ರಯ ಯೋಜನೆಗೆ ಹಿರಿಯ ಸದಸ್ಯ ವಾಟಾಳ್‌ನಾಗರಾಜ್‌ರವರು ಹೇಳಿದಂತೆ ಸ್ಮಶಾನಕ್ಕೆ ಈ ಮೂರಕ್ಕೂ ಉಪಯೋಗವಾಗುತ್ತದೆ. ಇವತ್ತು ಸರ್ಕಾರ ಒಂದು ಎಕರೆ ಜಮಿನನ್ನು 25 ಸಾವಿರಕ್ಕೆ ತೆಗೆದುಕೊಳ್ಳಿ ಎಂದು ಆದೇಶ ಕೊಡಬಹುದು ಅಷ್ಟು ದುಡ್ಡಿಗೆ ಯಾರು ಜಮಿನು ಕೊಡುತ್ತಾರೆ? ಕೊಟ್ಟಿರುವುದು ಹೋಗಲಿ, ಉಳಿಸಿಕೊಂಡಿರುವುದನ್ನಾದರೂ ಸರ್ಕಾರ ಉಳಿಸಿಕೊಳ್ಳುವ ಪ್ರಯತ್ನ ಮಾಡಿದರೆ ಸಾಕು.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಪ್ರಾಮುಖ್ಯವಾದದ್ದು. ಬದುಕಿರುವವರ ಬಗ್ಗೆ ನಮಗೂ ಹೋರಾಟ ಮಾಡಿ ಸಾಕಾಗಿದೆ. ಅವರಿಗೆ ಅನುಕೂಲ ಮಾಡಿಕೊಡಿ, ಊಟ ಕೊಡಿ ಮನೆ ಕೊಡಿ ಅಂತ. ಕೊನೆಗೆ ತಮ್ಮ ಸರ್ಕಾರದಲ್ಲಿ ಸತ್ತವರ ಬಗ್ಗೆಯಾದರೂ ಕರುಣೆ ಬೇಡವೇ? ಬದುಕಿರುವವರ ಬಗ್ಗೆ ನಿಮಗೆ ಕರುಣೆ ಇಲ್ಲವೆಂದು ನಮ್ಮ ತೀರ್ಮಾನ ಗೊತ್ತಾಗಿದೆ. ಆದ್ದರಿಂದ ಈ ರೀತಿ ನೀವು ಗಾಳಿಗೆ ಉತ್ತರ ಕೊಟ್ಟಂತೆ ಕೊಡಬೇಡಿ. ಪ್ರತಿ ಹಳ್ಳಿಯಲ್ಲೂ ಇದಕ್ಕಾಗಿ ಒಂದು ಕಾನೂನೇ ಮಾಡಿ ಒಂದು ಜಾಗವನ್ನು ಕೊಳ್ಳುತ್ತೇವೆಂದು. ಹಿಂದೆ ಬಂಗಾರಪ್ಪನವರ ಕಾಲದಲ್ಲಿ ಒಂದು ಯೋಜನೇನೂ ಮಾಡಿದ್ದರು. ಅದಕ್ಕೊಂದು ಹೆಸರಿಟ್ಟಿದ್ದರು. ಆ ಹೆಸರು ಕಂದಾಯ ಸಚಿವರರಿಗೇನಾದರೂ ಗೊತ್ತಿದ್ದರೆ ತಿಳಿಸಿ. ಇಲ್ಲ ಎಂದರೆ ಈ ಬಗ್ಗೆ ಸ್ಪಷ್ಟವಾಗಿ ಇಂಥಿಂಥ ಹಳ್ಳಿಯಲ್ಲಿ ಯಾವ ಜನಾಂಗದವರಿಗೆ ಸ್ಮಶಾನ ಹೇಗಿರಬೇಕು ಎಂಬ ಬಗ್ಗೆ ಪರಿಣಾಮಕಾರಿಯಾಗಿ ಒಂದು ಯೋಜನೆಯನ್ನು ಮಾಡುತ್ತೀರ ಸ್ವಾಮಿ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ. ಅಧ್ಯಕ್ಷರೇ, ಯಾವ ಯಾವ ಊರಿನಲ್ಲಿ ಸ್ಮಶಾನವಿಲ್ಲವೆಂದು ನಾವು ಸರ್ವೆ ಮಾಡಿಲ್ಲ. ಎಲ್ಲೆಲ್ಲಿ ಬೇಡಿಕೆ ಬರುತ್ತದೆ ಅದನ್ನು ಪರಿಗಣಿಸುತ್ತಿದ್ದೇವೆ. ಸರ್ಕಾರಿ ಗೋಮಾಳವಿದ್ದರೆ ಅಲ್ಲಿಂದ ತೆಗೆಸಿ ಕೊಡುತ್ತಿದ್ದೇವೆ. ಪ್ರೈವೇಟ್ ಲ್ಯಾಂಡ್ ಎಕರೆಗೆ 25 ಸಾವಿರಕ್ಕೂ ಸಿಕ್ಕುವುದಿಲ್ಲವೆಂದು ಪುಟ್ಟಣ್ಣಯ್ಯನವರು ಹೇಳಿದರು. ಕೆಲವು ಕಡೆ ಸಿಗುವುದಿಲ್ಲ. ಅಂತಹ ಕಡೆ ಸ್ವಲ್ಪ ಜಾಸ್ತಿಯಾದರೂ ಚಿಂತೆಯಿಲ್ಲ, ನೀವು ಮಾರ್ಕೆಟ್ ವ್ಯಾಲ್ಯೂ ಕೊಟ್ಟಿದ್ದರೂ ಪರ್ಚೇಸ್ ಮಾಡಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಇನ್ನೊಂದು ಸಾರಿ ಬೇಡಿಕೆ ಬಂದರೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ಮಶಾನಕ್ಕೆ ಎಲ್ಲಾದರೂ ಬೇಡಿಕೆ ಬರುತ್ತದೆಯೇ? ಇದು ಉಂಟೇ ಎಲ್ಲಿ ಬೇಡಿಕೆ ಇರುತ್ತದೆ ಅಲ್ಲಿ ನಾವು ಸ್ಮಶಾನ ಕೊಡುತ್ತೇವೆ ಎಂದರೆ ಹೇಗೆ ಇದು ಬೇಡಿಕೆ ಎಂದು ಅಲ್ಲ. ಇದು ಅವಶ್ಯಕತೆ ಎಲ್ಲಾ ತಾಲ್ಲೂಕಿನ ಪ್ರತಿ ಹಳ್ಳಿಯಲ್ಲಿ ಅವಶ್ಯಕತೆ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ಅವರಿಗೆ ಗೊತ್ತಿಲ್ಲ, ಕಳೆದ 3-4 ತಿಂಗಳಿಂದ ಈ ರೀತಿಯ. ಬೇಡಿಕೆ ಬಂದಿದೆ. ಸುಮಾರು 15,000 ಜನರನ್ನು ವಾರಸುದಾರರನ್ನಾಗಿ ಮಾಡಿದ್ದೇವೆ.

ಅಧ್ಯಕ್ಷರು : ಅವರು ಬೇಡಿಕೆ ಕೊಡುವುದಿಲ್ಲ. ಸತ್ತಿರುವವರ ವಾರಸುದಾರರ ಬೇಡಿಕೆ ಇದು. ಮುಂದೆ ಸಾಯುವವರಿಗೆಲ್ಲಾ ನಾವು ವಾರಸುದಾರರು, ನಾವು ಸತ್ತ ಮೇಲೆ ಹಿಂದಿರುವವರು ನಮಗೆ ವಾರಸುದಾರರು.

ತುಮಕೂರು ಬಸ್ ನಿಲ್ದಾಣದ ದುರಸ್ತಿ

471 - ಶ್ರೀ ಎನ್. ಶಿವಣ್ಣ (ತುಮಕೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವು ತುಂಬಾ ಅವ್ಯವಸ್ಥಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ದುಸ್ಥಿತಿಯಲ್ಲಿರುವ ಈ ಬಸ್ ನಿಲ್ದಾಣದ ದುರಸ್ಥಿ ಕಾರ್ಯವನ್ನು ಯಾವಾಗ ಮಾಡಲಾಗುವುದು.

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಬಸ್ ನಿಲ್ದಾಣವು ತುಂಬಾ ಅವ್ಯವಸ್ಥಿತವಾಗಿರುವುದಿಲ್ಲ, ಆದರೆ ಬಸ್ ನಿಲ್ದಾಣದ ಉತ್ತರ ಭಾಗದ ಒಳ ಆವರಣದಲ್ಲಿ ಕೆಲವು ಕಡೆ ಗುಂಡಿಗಳು ಉಂಟಾಗಿರುವುದು ಗಮನಕ್ಕೆ ಬಂದಿದೆ.

ಆ) ಶೀಘ್ರದಲ್ಲಿಯೇ ಆವರಣ ದುರಸ್ಥಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಶ್ರೀ ಎಸ್. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ. ಬೆಂಗಳೂರು ಬಿಟ್ಟರೆ ತುಮಕೂರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಕೇಂದ್ರಸ್ಥಾನವಾಗಿದೆ. ಅವರು ಮೊದಲನೆಯ ಪ್ರಶ್ನೆಗೆ ಹೇಳಿರತಕ್ಕಂತಹ ಉತ್ತರದಲ್ಲಿ ಬಸ್ ನಿಲ್ದಾಣದ ಉತ್ತರ ಭಾಗದ ಒಳ ಅವರಣದಲ್ಲಿ ಕೆಲವು ಕಡೆ ಗುಂಡಿಗಳು ಉಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ದುರಸ್ತಿ ಕಾರ್ಯ ಯಾವಾಗ ಮಾಡಲಾಗುವುದು ಎಂದು ಪ್ರಶ್ನೆ ಕೇಳಿದ್ದಕ್ಕೆ ಶೀಘ್ರದಲ್ಲಿಯೇ ಅವರಣವನ್ನು ದುರಸ್ತಿ ಮಾಡಲಾಗುವುದು ಎಂದು ಹೇಳಿದ್ದಾರೆ. ಈಗ ಬೇಸಿಗೆ

ಕಳೆಯುತ್ತಿದೆ. ಅಲ್ಲಿ ಡಾಂಬರು ಮತ್ತೊಂದು ಹಾಕಬೇಕಾಗಿದೆ. ಇವೆಲ್ಲವನ್ನೂ ಎಷ್ಟು ದಿವಸದಲ್ಲಿ ಹಾಕುತ್ತಾರೆಂದು ಮಾನ್ಯ ಮಂತ್ರಿಗಳನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೆ, ಗುಂಡಿಗಳು ಉತ್ಪನ್ನವಾಗಲಿಕ್ಕೆ ಮುನಿಸಿಪಾಲಿಟಿಯವರ ಗಟಾರಗಳು ಏನು ಇವೆ ಅವಕ್ಕೆ ನೀರು ತುಂಬಿಕೊಂಡು ಅಲ್ಲಿ ನೀರು ನಿಂತು ಈ ನೀರು ಸರ್ಕುಲೇಟಾಗಿ ಇಲ್ಲಿ ಗುಂಡಿಗಳಾಗಿವೆ. ಈ ಗಟಾರವನ್ನು ಸರಿ ಮಾಡಿ ಎಂದು ಮುನಿಸಿಪಾಲಿಟಿಯವರಿಗೆ ಬರಿದಿದ್ದೇವೆ. ಅವರು ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಮಳೆಗಾಲ ಶುರುವಾಗುವುದಕ್ಕಿಂತ ಮುಂಚೆ ಈ ಗುಂಡಿಗಳನ್ನು ತುಂಬಿ ಸರಿ ಮಾಡುತ್ತೇವೆಂದು ಮುನಿಸಿಪಾಲಿಟಿಯವರು ಹೇಳಿದ್ದಾರೆ.

ಶ್ರೀ ಎಸ್. ಶಿವಣ್ಣ : ನಗರಸಭೆಗಳು ಯಾವ ರೀತಿ ಇದೆ ಎಂದು ಈಗಾಗಲೇ ತಮ್ಮ ಗಮನಕ್ಕೆ ಬಂದಿದೆ. ರಸ್ತೆ ಸಾರಿಗೆ ನಿಗಮಕ್ಕೆ ಮತ್ತು ನಗರ ಸಭೆಗಳಿಗೆ ಇರತಕ್ಕಂತಹ ಸಂಬಂಧವನ್ನು ಅವರೇ ತಿಳಿದು ಕೊಳ್ಳಬೇಕು. ಯಾವಾಗ ಎಷ್ಟು ದಿವಸದ ಒಳಗೆ ಮಾಡುತ್ತಾರೆ ಎಂಬುದನ್ನು ತಾವು ಹೇಳಬೇಕು. ಏಕೆಂದರೆ ಪ್ರತಿ ದಿವಸ ಸಾವಿರಾರು ಬಸ್‌ಗಳು ಓಡಾಡುತ್ತವೆ, ಅಂಥಾದ್ದರಲ್ಲಿ ಜನಗಳು ಯಾವ ರೀತಿ ಓಡಾಡಬೇಕು ಎಂಬುದನ್ನು ತಮ್ಮನ್ನು ಕೇಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಆದಷ್ಟು ಬೇಗನೆ ಅಂದರೆ ಮಳೆಗಾಲ ಶುರುವಾಗುವುದಕ್ಕೆ ಪೂರ್ವದಲ್ಲಿ ಅಲ್ಲಿನ ಗುಂಡಿಗಳನ್ನು ತುಂಬಿ ಒಳ್ಳೆಯ ಪರಿಸ್ಥಿತಿಗೆ ಆ ಬಸ್ ಸ್ಟ್ಯಾಂಡನ್ನು ತರುತ್ತೇವೆ.

ಅಂಕೋಲಕ್ಕೆ ಬಸ್ ಡಿಪೋ.

209 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಕೋಲದ ಬಸ್ ಡಿಪೋ ಪ್ರಾರಂಭಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಆ) ಇದ್ದರೆ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಮಂತ್ರಿಗಳು ಉತ್ತರವನ್ನು ಬಹಳ ಸೂಕ್ಷ್ಮವಾಗಿ ಒದಗಿಸಿದ್ದಾರೆ. ಅಂಕೋಲದಲ್ಲಿ ನಾವು ಬಸ್ ಡಿಪೋ ಮಾಡುವುದಿಲ್ಲವೆಂದು ಹೇಳಿದ್ದಾರೆ. ಯಾವ ಕಾರಣಕ್ಕಾಗಿ ಅಲ್ಲಿ ಬಸ್ ಡಿಪೋಮಾಡುವುದಿಲ್ಲ? ತಜ್ಞರಿಂದ ಸರ್ವೆ ಏನಾದರೂ ಮಾಡಿಸಿದ್ದೀರೋ ಅವರು ಏನಾದರೂ ಅಲ್ಲಿ ಡಿಪೋ ಬೇಡವೆಂದು ಹೇಳಿದ್ದಾರೆಯೇ ಅಥವಾ ಸರಕಾರದಲ್ಲಿ ಹಣ ಇಲ್ಲವೋ ಅಥವಾ ಪ್ರಯಾಣಿಕರು ಇದೇ ರೀತಿಯ ಕಷ್ಟವನ್ನು ಅನುಭವಿಸಲಿ ಎಂಬ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡುತ್ತಿದೆಯೇ? ಯಾವ ಕಾರಣಕ್ಕೆ ಅಲ್ಲಿ ಬಸ್ ಡಿಪೋ ಮಾಡುವುದಿಲ್ಲವೆಂಬ ಸರಕಾರದ ನಿಲುವು ಇದೆ ಅದನ್ನು ತಿಳಿಸಬೇಕು.

ಶ್ರೀ ಕೆ.ಎಸ್. ಬೀಳಗಿ : ಅಂಕೋಲದಲ್ಲಿ ಸಧ್ಯದ ಪರಿಸ್ಥಿತಿಯಲ್ಲಿ ಬಸ್ ಡಿಪೋ ಮಾಡುವುದಕ್ಕೆ ಅವಕಾಶ ಇಲ್ಲ. ಏಕೆಂದರೆ ಮೊದಲನೆಯದು ಅಲ್ಲಿ ಜಾಗದ ಸಮಸ್ಯೆ ಇದೆ. ಜಾಗ ಸಿಕ್ಕ ಮೇಲೆ ಅಲ್ಲಿ ಹತ್ತಿರದಲ್ಲೆ ಕುಮಟ ಮತ್ತು ಕಾರವಾರದಿಂದ ಅಂಕೋಲಕ್ಕೆ ಬರತಕ್ಕಂತಹ ಸಾರಿಗೆ ವ್ಯವಸ್ಥೆಯ ಷೆಡ್ಯೂಲ್ಸ್ ಏನು ಇದೆ ಈ ಷೆಡ್ಯೂಲ್‌ಗಳು ಹೇಳಿಕೊಳ್ಳುವಂತಹ ಸಂಖ್ಯೆಯಲ್ಲಿ ಇಲ್ಲ. ಅದ್ದರಿಂದ ಸಧ್ಯಕ್ಕೆ ಅದರ ಅವಶ್ಯಕತೆ ಇಲ್ಲ. ಆದ್ದರಿಂದ ಅವಶ್ಯಕತೆ ಬಿದ್ದಾಗ ಮಾನ್ಯ ಸದಸ್ಯರು ಜಾಗದ

ವ್ಯವಸ್ಥೆ ಮಾಡಿದರೆ ಮುಂದಿನ ವರ್ಷ ಇದನ್ನು ಆಕ್ಷನ್ ಪ್ಲಾನ್‌ನಲ್ಲಿ ಸೇರಿಸಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ನಿಮ್ಮ ಉತ್ತರ ಕನ್‌ಫ್ಯೂಸಿಂಗ್ ಆಗಿದೆ. ಜಾಗ ಇಲ್ಲದ ಕಾರಣಕ್ಕೆ ಬಸ್ ಡಿಪೋ ಮಾಡುತ್ತಿಲ್ಲವೋ ಸಾಕಷ್ಟು ಅಲ್ಲಿ ಷೆಡ್ಯೂಲ್ಸ್ ಇಲ್ಲ, ಅಲ್ಲಿ ಡಿಪೋ ಮಾಡಲಿಕ್ಕೆ ಫೀಸಬಲಿಟಿ ಇಲ್ಲ ಎಂದು ಮಾಡುತ್ತಿಲ್ಲವೋ ಎರಡನ್ನೂ ಒಟ್ಟಿಗೆ ಸೇರಿಸಿ ಹೇಳಿದರೆ ಹೇಗೆ?

ಶ್ರೀ ಕೆ.ಎಸ್. ಬೀಳಗಿ : ಡಿಪೋ ಮಾಡಲಿಕ್ಕೆ ಕನಿಷ್ಟ 5 ಎಕರೆ ಜಮೀನು ಬೇಕು.

ಅಧ್ಯಕ್ಷರು : ಜಾಗ ಸಲುವಾಗಿ ಆದರೆ, ಅವರು ಜಾಗದ ವ್ಯವಸ್ಥೆ ಮಾಡಿಕೊಡುತ್ತಾರೆ.

ಶ್ರೀ ಕೆ.ಎಸ್. ಬೀಳಗಿ : ಮಾಡಲಿ. ಅವರು ಜಾಗದ ವ್ಯವಸ್ಥೆ ಮಾಡಿದ ಕೂಡಲೇ ಡಿಪೋ ಮಾಡಲಿಕ್ಕೆ ವಿಚಾರ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಹೇಗೆ ಒಂದಕ್ಕೊಂದು ಕಾಂಟ್ರರಿ ಆಗುತ್ತದೆ. ಒಂದನೆಯದು ಷೆಡ್ಯೂಲ್ಸ್ ಇಲ್ಲದ ಕಾರಣ ಅಲ್ಲಿ ಡಿಪೋ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಎರಡನೆಯದು ಅಲ್ಲಿ ಜಾಗ ಮಾಡಿಕೊಟ್ಟರೆ ಡಿಪೋ ಮಾಡಿಕೊಡುತ್ತೇವೆಂದು ಹೇಳುತ್ತಾರೆ. ಒಂದು ಕಡೆ ಷೆಡ್ಯೂಲ್ಸ್ ಇಲ್ಲವೆಂದು ಹೇಳುತ್ತಾರೆ. ಮತ್ತೊಂದು ಕಡೆ ಜಾಗವಿಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು : ಉತ್ತರ ಕನ್ನಡ ಜಿಲ್ಲೆ ಬಹಳ ಹಿಂದುಳಿದ ಜಿಲ್ಲೆಯಾದ್ದರಿಂದ ಷೆಡ್ಯೂಲ್ಸ್ ಕಡಿಮೆ ಇದ್ದರೂ ಅವರು ಜಾಗದ ವ್ಯವಸ್ಥೆ ಮಾಡಿ ಕೊಟ್ಟರೆ ಮಂತ್ರಿಗಳು ಬಸ್ ಡಿಪೋ ಮಾಡುತ್ತಾರೆ. ನಾನು ಹೇಳಿದಷ್ಟು ಹೇಳಿ ಸಾಕು.

ಶ್ರೀ ಕೆ.ಎಸ್. ಬೀಳಗಿ : ಉತ್ತರ ಕನ್ನಡದಲ್ಲಿ ಈ ಬಯಲು ಸೀಮೆಯಲ್ಲಿ ಮಾಡಿದಂತೆ ಷೆಡ್ಯೂಲ್ಸ್ ಅನ್ನು ಲೆಕ್ಕ ಹಾಕುವುದಕ್ಕಾಗುವುದಿಲ್ಲ. ಅಲ್ಲಿ ಷೆಡ್ಯೂಲ್‌ಕಡಿಮೆ ಇದ್ದರೂ ಮಾಡಬೇಕಾಗುತ್ತದೆ. ಆದರೆ ಜಾಗದ ಸಮಸ್ಯೆ ಇದೆ ಎಂದು ಎರಡೂ ಕಾರಣಗಳನ್ನು ನಾನು ಹೇಳಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ನಾವು ಜಾಗವನ್ನು ಹುಡುಕಿಕೊಡುತ್ತೇವೆ. ಆ ಜಾಗವನ್ನು ಹುಡುಕಿ ತಕ್ಷಣ ಆಕ್ಷನ್ ಪ್ಲಾನ್‌ನಲ್ಲಿ ಸೇರಿಸಿ ಅದು ಯಾವ ವರ್ಷಕ್ಕೆ ಮಂಜೂರಾಗಿ ಬರುತ್ತದೆ ಎಂಬ ಅನುಮಾನ ಇದೆ. ಅಂಕೋಲದಲ್ಲಿ ಬಸ್‌ಡಿಪೋ ಬೇಕು ಎನ್ನುವುದನ್ನು ತಾತ್ವಿಕವಾಗಿ ತಾವು ಒಪ್ಪಿಕೊಂಡ ಹಾಗಾಯಿತು. ಬಸ್ ಡಿಪೋದ ಅಗತ್ಯವಿದೆ. ಜಾಗದ ತೊಂದರೆ ಎಂದು ಈಗ ಹೇಳುತ್ತಿದ್ದಾರೆ. ಅದು ಇರಲಿ, ಅಲ್ಲಿ ಏನು ತೊಂದರೆಯಾಗುತ್ತಿದೆಯೆಂದು ನಮಗೆ ಗೊತ್ತಿದೆ. ಅಲ್ಲಿಯತನಕ 506 ಎಕ್ಸ್‌ಟ್ರಾ ಬಸ್‌ಗಳನ್ನಾದರೂ ಅಲ್ಲಿ ಇಟ್ಟು 4 ಮೆಕ್ಯಾನಿಕ್‌ಗಳನ್ನು ಅಲ್ಲಿ ಇಡಲಿ. ಅಲ್ಲಿ ಎಷ್ಟು ಸಮಸ್ಯೆ ಅಂದರೆ......

ಅಧ್ಯಕ್ಷರು : ಅದೆಲ್ಲಾ ಗೊತ್ತು ಬಿಡಿ, ಎಲ್ಲಾ ಊರಲ್ಲೂ ಆಗಿದೆ.

ಶ್ರೀ ಕೆ.ಎಸ್. ಬೀಳಗಿ : ಆ ರೀತಿ ವ್ಯವಸ್ಥೆ ಮಾಡಿದರೆ ಅನುಕೂಲವಾಗುವುದಿಲ್ಲ. ಡಿಪೋ ಇಲ್ಲದಿದ್ದರೆ ಮೆಕ್ಯಾನಿಕ್‌ಗಳು ಮೆಷನರೀಸ್‌ಗಳು ಬೇಕಾಗುತ್ತದೆ.

ಅಧ್ಯಕ್ಷರು : ನೀವು ಜಾಗ ಬೇಗ ಹುಡುಕಿಕೊಂಡಿ ಅದಷ್ಟು ಬೇಗ ಅವರು ಮಾಡುತ್ತಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಸಿರಸಿಯಲ್ಲಿ ನಾನು ಜಾಗ ಹುಡುಕಿಕೊಟ್ಟಿದ್ದೆ. ಅದಕ್ಕೆ ಕಾಂಪೌಂಡ್ ಹಾಕಿ ಅದು ಹಾಗೆಯೇ ಬಿದ್ದಿದೆ. 10 ವರ್ಷದಿಂದ ಹಾಗೇ ಬಿದ್ದಿದೆ. ನಾನು ಜಾಗ ಹುಡುಕಿಕೊಟ್ಟರೂ ಇವರು ಕಾಂಪೌಂಡ್ ಹಾಕಿ ಅವರು ಡಿಪೋ ಮಾಡುವುದಕ್ಕೆ ಇನ್ನು 10 ವರ್ಷ ಬೇಕಾಗಬಹುದು. ಡಿಪೋ ಅಗತ್ಯ ಇದೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಅಗತ್ಯವಿರುವ ಸ್ಥಳದಲ್ಲಿ ಮಿನಿ ಡಿಪೋ ಟೈಪ್ 5-6 ಬಸ್‌ಗಳನ್ನು ಅಲ್ಲಿ ಇಡಲಿಕ್ಕೆ......

ಅಧ್ಯಕ್ಷರು : ಅವರಲ್ಲಿ ಆ ವ್ಯವಸ್ಥೆ ಇಲ್ಲ. ಇಲ್ಲಿ ನಿಂತುಕೊಂಡು ಡಿಪೋ ಬೇಕೆಂದು ಕೇಳಿದರೆ. ಇಲ್ಲಿ ಯಂತ್ರ ಮಾಡಿ ಮಂತ್ರ ಮಾಡಿ ಕೊಡುವುದಕ್ಕಾಗುತ್ತದೆಯೇ? ಡಿಪೋ ಕೇಳಿದ್ದೀರಿ,. ನೀವು ಜಾಗದ ವ್ಯವಸ್ಥೆ ಮಾಡಿ ನಾನು ಡಿಪೋ ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ. ನೀವು ತಕ್ಷಣ ಹೋಗಿ ಜಾಗದ ವ್ಯವಸ್ಥೆ ಮಾಡಿಕೊಡಿ ಆಮೇಲೆ ಅವರು ಮಾಡಿ ಕೊಡಲಿಲ್ಲ ಅಂದರೆ ಇಲ್ಲಿ ಬಂದು ಹೇಳಿ. ಟೆಂಪೊರಗಿ ಮಾಡುವುದಕ್ಕೆ ಬರುವುದಿಲ್ಲ. There is no such arrangement in KSRTC.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಸಿರಸಿಯಲ್ಲಿ ಹತ್ತು ವರ್ಷಗಳ ಹಿಂದೆ ಜಾಗ ಕೊಟ್ಟಿದ್ದೇವೆ, ಅಲ್ಲಿ ಕಾಂಪೌಂಡ್ ಹಾಕಿ ಇಟ್ಟಿದ್ದಾರೆ. ಇಲ್ಲಿಯ ತನಕ ಅಲ್ಲಿಗೆ ಬಸ್ ಸ್ಟ್ಯಾಂಡ್ ಷಿಫ್ಟ್ ಆಗಿಲ್ಲ. ಯಲ್ಲಾಪುರದಲ್ಲಿ ಈ ವರ್ಷ ಆಯಿತು. ಮಿನಿ ಡಿಪೋ ಮಾಡಲಿ....

ಅಧ್ಯಕ್ಷರು : ನೀವು ಈ ಪ್ರಶ್ನೆಗೆ ಸೀಮಿತವಾಗಿರಬೇಕು. ನೀವು ಸಿರಸಿಗೆ ಹೋಗಿ, ಅಲ್ಲಿಂದ ಹುಬ್ಬಳ್ಳಿಗೆ ಹೋಗಿ, ಹಾಗೆ ಬಿಜಾಪುರಕ್ಕೆ ಹೋಗಿ ಅಲ್ಲಿಂದ ನಮ್ಮ ಕೋಲಾರಕ್ಕೆ ಬಂದು ಬಿಡಿ. See, you should confine yourself to this question. This is not the way. ಜಾಗ ಕೊಡಿಸಿ ಡಿಪೋ ಮಾಡುತ್ತೇವೆಂದು ಹೇಳಿದ್ದಾರೆ. He has made a categorical commitment; it is a commitment to the House, not to Mr. Vishyeshwar Hegde.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಿನಿ ಡಿಪೋ ಬಗ್ಗೆ ನನ್ನ ಬೇಡಿಕೆ ಇತ್ತು. Mr. Speaker : There is no minidepot arrangement. ಮಿನಿ ಡಿಪೋ ಅಂದರೆ ನನಗೂ ಅರ್ಜೆಂಟಾಗಿ ಒಂದು ಬೇಕು.

ವಾರಣಾಸಿಯಲ್ಲಿರುವ ಕರ್ನಾಟಕ ಸರ್ಕಾರದ ಅತಿಥಿಗೃಹ

264 - ಶ್ರೀ ಕುಂಬ್ಳೆಸುಂದರ್ ರಾವ್ (ಸುರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾರಣಾಸಿ (ಕಾಶಿ)ಯಲ್ಲಿರುವ ಸರ್ಕಾರದ ಅತಿಥಿ ಗೃಹವು ಅವ್ಯವಸ್ಥೆಗಳಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಳೆಯ ಕಟ್ಟಡದ ದುರಸ್ಥಿ ಕಾರ್ಯವನ್ನು ಸರ್ಕಾರವು ಆಗಾಗ ಮಾಡುತ್ತಿದೆಯೇ.

ಆ) ಅಂತಹ ಅತಿದೊಡ್ಡ ಯಾತ್ರಾ ಸ್ಥಳದಲ್ಲಿ ಸುವ್ಯವಸ್ಥಿತವಾದ ನೂತನ ಕಟ್ಟಡವನ್ನು ಕಟ್ಟಿ ಯಾತ್ರಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಸರ್ಕಾರವು ಸಕಾಲಿಕ ಕ್ರಮವನ್ನು ಜರುಗಿಸುವುದೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಹಿಂಭಾಗದ ಕಟ್ಟಡವು ಶಿಥಿಲವಾಗಿರುವುದು ಗಮನಕ್ಕೆ ಬಂದಿದೆ. ಮುಖ್ಯ ಕಟ್ಟಡದ ದುರಸ್ಥಿಯನ್ನು 1988ರಲ್ಲಿ ಮಾಡಿದ್ದು ಶಿಥಿಲವಾಗಿರುವ ಕಟ್ಟಡವನ್ನು ಪೂರ್ಣ ಹೊಸದಾಗಿ ನಿರ್ಮಿಸಲು [illegible] ದುರಸ್ತಿ ಮಾಡಿರುವುದಿಲ್ಲ.

ಆ) ಪ್ರಸ್ತುತ ಶಿಥಿಲವಾಗಿರುವ ಹಿಂಭಾಗದ ಹಳೆಯ ಕಟ್ಟಡವನ್ನು ಪೂರ್ಣವಾಗಿ ಹೊಸದಾಗಿ ನಿರ್ಮಿಸಲು ಹಾಗೂ ಮುಖ್ಯ ಕಟ್ಟಡವನ್ನು ನವೀಕರಿಸಲು ಪರಿಶೀಲಿಸಲಾಗುತ್ತಿದೆ.

ಇ) ಸೂಕ್ತ ಸಿಬ್ಬಂದಿ ಈಗಾಗಲೇ ಇದೆ. ಯಾತ್ರಿಕರಿಗೆ ಹೆಚ್ಚಿನ ಅನುಕೂಲದ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೆ, ಪುರಾಣ ಪ್ರಸಿದ್ಧವಾದ ಕಾಶಿ ನಗರದಲ್ಲಿ ಕರ್ನಾಟಕದ ಒಂದು ಛತ್ರ ಇದ್ದು ಅದರ ಹತ್ತಿರ ಹೋದಾಗ ನಾನು ಏಕೆ ಇಲ್ಲಿಗೆ ಬಂದನೋ ಎಂದು ಅನ್ನಿಸಿತು. ಸರ್ವ ಸಾಧಾರಣವಾಗಿ ಸಮಿತಿಯ ಸದಸ್ಯರು ಹೋಗಿದ್ದೆವು, ಕರ್ನಾಟಕದ ಛತ್ರ ಇದೆ ಎಂದು ಕೇಳಿದಾಗ ಅದನ್ನು ನೋಡೋಣವೆಂದು ಅಲ್ಲಿಗೆ ಹೋಗಿದ್ದೆವು. ಸರಕಾರಕ್ಕೆ ಕನ್ನಡದ ಅಭಿಮಾನ ಏನು ಇದೆ ಅದನ್ನು ಹೆಚ್ಚಿಸುವ ರೀತಿಯಲ್ಲಿ ಇದೆಯೋ ಎಂದು ನೋಡಿದಾಗ ಬಹಳ ದುಃಖವಾಯಿತು. ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳುತ್ತಿದ್ದಾರೆ ಹಿಂಭಾಗದ ಕಟ್ಟಡ ಬಹಳ ಶಿಥಿಲವಾಗಿರುವುದು ಗಮನಕ್ಕೆ ಬಂದಿದೆ, ಮುಂಭಾಗದ್ದನ್ನು ನವೀಕರಿಸುವ ಯೋಜನೆ ಇದೆ ಎಂದು. ಅಂದರೆ ಎರಡೂ ಕಡೆ ಸರಿ ಇಲ್ಲವೆಂದು ಸಚಿವರು ಪರ್ಯಾಯವಾಗಿ ಒಪ್ಪಿಕೊಂಡ ಹಾಗಾಯಿತು. ಒಂದು ಶಿಥಿಲವಾಗಿದೆ, ಮತ್ತೊಂದು ನವೀಕರಿಸಬೇಕಾಗಿದೆ. 1988ರ ನಂತರ ದುರಸ್ತಿಯಾಗಿಲ್ಲವೆಂದು ಹೇಳುತ್ತಾರೆ. ಆ ನಂತರ ದುರಸ್ತಿಯಾಗಿಲ್ಲವೆಂದಾದರೂ ಅದರ ಮೈನ್‌ಟೆನೆನ್ಸ್‌ಗೆ ಸರಕಾರದ ಕಡೆಯಿಂದ ಎಷ್ಟು ಖರ್ಚಾಗಿದೆ ಎಂದು ಸರಕಾರವನ್ನು ಕೇಳಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅಲ್ಲಿ ಎರಡು ಪೋರ್ಷನ್ ಇದೆ. ನದಿಗೆ ಮುಖವಾಗಿ ಇರುವುದು ಒಂದು ಪೋರ್ಷನ್ ಅಲ್ಲಿ 9 ರೂಮ್‌ಗಳು ಇದೆ, 3 ರಲ್ಲಿ ಅಟ್ಯಾಚ್ಡ್ ಬಾತ್ ರೂಮ್ಸ್ ಇದೆ. ಇನ್ನು 4ರಲ್ಲಿ ಅಟ್ಯಾಚ್ಡ್ ಬಾತ್ ರೂಮ್ಸ್ ಇಲ್ಲ. ಹಿಂಭಾಗದಲ್ಲಿ 3 - 4 ಕೋಣೆಗಳು ಇವೆ. ಜೊತೆಗೆ ಒಂದು ವಾಸದ ಕೋಣೆ ಇದೆ. 1983-84ರಲ್ಲಿ ಸುಮಾರು 7 ಲಕ್ಷ ಚಿಲ್ಲರೆಗೆ ಅಂದಾಜು ಆಗಿತ್ತು, 3 ಲಕ್ಷ ಮಂಜೂರಾಯಿತು. ಆದರೆ ಕಾರಣಾಂತರದಿಂದ ಕೆಲಸ ಶುರುವಾಗಲಿಲ್ಲ, ಮೊನ್ನೆ ಕಳೆದ ತಿಂಗಳು ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಬಂದಿದ್ದಾರೆ. ನದಿಗೆ ಮುಖವಾಗಿ ಇರುವುದಕ್ಕೆ 3 ಲಕ್ಷ ಬೇಕು, ಅದರ ಹಿಂದುಗಡೆಯ ಕಟ್ಟಡವನ್ನು ಪೂರ್ಣವಾಗಿ ತೆಗೆದು ಹಾಕಿ ರಿಪೇರಿ ಮಾಡಬೇಕೆಂದು ಮೊದಲನೇ ಹಂತವಾಗಿ ಅದಕ್ಕೆ 10 ಲಕ್ಷ ರೂಪಾಯಿ ಬೇಕೆಂದು ಸರಕಾರಕ್ಕೆ ಅವರು ಶಿಫಾರಸ್ಸು ಕಳಿಸಿದ್ದಾರೆ. ನಾವು ಆದಷ್ಟು ಬೇಗ ಈ ಹಣವನ್ನು ಮಂಜೂರು ಮಾಡಿ ಕೆಲಸ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಡಾ|| ಯು. ಚಿತ್ತರಂಜನ್ : ನಾನು ಕೂಡ ವಾರಣಾಸಿಗೆ ಹೋಗಿದ್ದೆ. ಅಲ್ಲಿ ವಸ್ತು ಸ್ಥಿತಿ ಏನು ಇದೆ ಎಂದರೆ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಈಗ ಎಸ್ಟಿಮೇಟ್ ಮಾಡುತ್ತಾರೆ, ಅಲ್ಲಿಗೆ ಹೋಗಿ ಎಸ್ಟಿಮೇಟ್ ಮಾಡಿ ಎಂದು ಬಂದು ಸಬ್‌ಮಿಟ್ ಮಾಡಿ ಆಗುವಾಗ 1 ರಿಂದ ಒಂದೂವರೆ ವರ್ಷ ಕಳೆದುಹೋಗುತ್ತದೆ 1984ನೇ ಇಸವಿಯಿಂದ ಹೀಗೆ ಆಗುತ್ತಾ ಇದೆ. ಮಾನ್ಯ ಸಚಿವರು ಅಧಿಕಾರಿಗಳನ್ನು ಕಳುಹಿಸುತ್ತೇವೆ ಎಂದು ಹೇಳಿದರು, ಮಾಡುತ್ತೇವೆ ಎಂದು ಹೇಳಲಿಲ್ಲ, ಆದ್ದರಿಂದ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ ದಯಮಾಡಿ ಇದು ಪುರಾಣ ಪ್ರಸಿದ್ಧ ಸ್ಥಳವಾಗಿರುವುದರಿಂದ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕುಂಬ್ಳೆ ಸುಂದರರಾವ್ : ಕನ್ನಡಿಗರು ಅಭಿಮಾನ ಪಡುವ ಹಾಗೆ ಇರಬೇಕೆಂದು ನಮ್ಮ ಬೇಡಿಕೆ ಅಷ್ಟೆ.

ಶ್ರೀ ಎಸ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಇನ್ನೂ ಆಶ್ಚರ್ಯ ಎಂದರೆ, ಕಳೆದ ಹಲವು ವರ್ಷಗಳಿಂದ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಕೇವಲ 600 ರೂಪಾಯಿ ಸಂಬಳದಲ್ಲಿ ವಾರಣಾಸಿಯಂಥ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ? ತಮ್ಮನ್ನು ಖಾಯಂಗೊಳಿಸಿ ಮತ್ತು ಅದನ್ನು ರೆಗ್ಯೂಲರೈಸ್ ಮಾಡಿಕೊಳ್ಳಿ ಎಂದು ಅವರು ಸರ್ಕಾರಕ್ಕೆ ಪದೇ ಪದೇ ಮನವಿಯನ್ನು ಸಲ್ಲಿಸುತ್ತಿದ್ದಾರೆ. ಕೊನೆಯ ಪಕ್ಷ ಮಿನಿಮಮ್ ಸಂಬಳ ಕೊಡಿ ಎಂದು ಕೇಳಿದ್ದಕ್ಕೆ ಇಷ್ಟರವರೆಗೆ ಅವರ ಬೇಡಿಕೆಯನ್ನು ಈಡೇರಿಸಿಲ್ಲ, ಅದನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಕೂಡ ತಮ್ಮ ಉತ್ತರದಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಇಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಸಂಬಳ ಬರುತ್ತದೆ ಎನ್ನುವುದಕ್ಕೆ ನನ್ನಲ್ಲಿ ವಿವರ ಇದೆ. ಅವರು ಹೇಳಿದ ಹಾಗೆ ಅಲ್ಲಿನ ಸಿಬ್ಬಂದಿಗೆ ಹಣ ಸಾಲುವುದಿಲ್ಲ, ಸ್ವಲ್ಪ ಜಾಸ್ತಿ ಮಾಡಬೇಕು. ಅದನ್ನು ಪರಿಶೀಲಿಸುತ್ತೇನೆ.

ಶಿಗ್ಗಾಂವ್ ಮತ್ತು ಸವಣೂರು ಬಸ್ ಡಿಪೋಗಳ ಕಾಮಗಾರಿ

267 - ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ಬಸ್ ಸ್ಟ್ಯಾಂಡ್ ಹಾಗೂ ಸವಣೂರು ಬಸ್ ಡಿಪೋಗಳಿಗೆ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ.

ಆ) ಸದರಿ ಶಿಗ್ಗಾಂವ್ ಬಸ್ ಸ್ಟ್ಯಾಂಡ್ ಹಾಗೂ ಸವಣೂರು ಡಿಪೋಗಳ ಕಾರ್ಯವನ್ನು ಬೇಗನೆ ಪ್ರಾರಂಭಿಸಲಾಗುವುದೇ? ಹಾಗಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಎಸ್.ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಶಿಗ್ಗಾಂವ್‌ನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸಾರಿಗೆ ಸಂಸ್ಥೆಯು 2 ಎಕರೆ 20 ಗುಂಟೆ ಭೂಮಿಯನ್ನು ವಶಕ್ಕೆ ತೆಗೆದುಕೊಂಡಿದೆ. ಸವಣೂರಿನಲ್ಲಿ ಬಸ್ ಘಟಕವನ್ನು, ನಿರ್ಮಿಸಲು 12.13. ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಶಿಗ್ಗಾಂವ್ ಬಸ್ ನಿಲ್ದಾಣ ನಿರ್ಮಿಸುವ ಕಾರ್ಯವನ್ನು ಶೀಘ್ರವಾಗಿ ತೆಗೆದುಕೊಳ್ಳಲಾಗುವುದು. ಈಗಾಗಲೇ ಈ ಬಸ್ ನಿಲ್ದಾಣದ ಕೆಲಸದ ಬಗ್ಗೆ ಟೆಂಡರುಗಳು ಬಂದಿದ್ದು ಇವುಗಳು ಪರಿಶೀಲನೆಯ ಹಂತದಲ್ಲಿರುತ್ತದೆ. ಸವಣೂರು ಬಸ್ ಘಟಕದ ವಿಷಯದಲ್ಲಿ ಸ್ವಾಧೀನ ಪಡಿಸಿಕೊಂಡಿರುವ ಭೂಮಿಯ ಬೆಲೆ ಮತ್ತು ಈ ಭೂಮಿಯ ಹಕ್ಕುದಾರರ ಬಗ್ಗೆ ವಿವಾದವಿರುತ್ತದೆ. ವಿಷಯಗಳ ತೀರ್ಮಾನವಾದ ನಂತರ ತಕ್ಷಣವೇ ಬಸ್ ನಿಲ್ದಾಣವನ್ನು ಕಟ್ಟುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಶಿಗ್ಗಾಂವ್‌ನಲ್ಲಿ ಬಸ್ ಸ್ಟ್ಯಾಂಡ್ ನಿರ್ಮಿಸಲು ಸಾರಿಗೆ ಸಂಸ್ಥೆಯಿಂದ 2 ಎಕರೆ 20 ಗುಂಟೆ ಜಾಗವನ್ನು ತೆಗೆದುಕೊಳ್ಳಲಾಗಿದೆ. ಮತ್ತು ಸವಣೂರಿನಲ್ಲಿ ಬಸ್ ಘಟಕ ನಿರ್ಮಾಣ ಮಾಡಲು 13 ಎಕರೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಬಸ್ ನಿಲ್ದಾಣದ ಕಾರ್ಯ ಬಹಳ ದಿವಸಗಳಿಂದ ವಿಳಂಬವಾಗುತ್ತಾ ಬಂದಿದೆ. ಇದಕ್ಕೆ ಬೇಕಾದಂಥ ಜಮೀನನ್ನು ಕೂಡ ಕೊಡಿಸಿದ್ದೇವೆ. ಜೊತೆಗೆ ಹಣಕಾಸಿನ ತೊಂದರೆ ಕೆಎಸ್‌ಆರ್‌ಟಿಸಿಗೆ ಆಗುತ್ತದೆ ಎನ್ನುವುದಕ್ಕೋಸ್ಕರ ನಾವು ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ 5 ಲಕ್ಷ ರೂಪಾಯಿ ಹಣವನ್ನು ಮತ್ತು ಲೋಕಸಭಾ ಸದಸ್ಯರ ಅನುದಾನದಲ್ಲಿ 5 ಲಕ್ಷ ರೂಪಾಯಿ ಹಣವನ್ನು ತಮಗೆ ಈಗಾಗಲೇ ಕೊಡಲಾಗಿದೆ. ಕಾರಣ ಆದಷ್ಟು ಬೇಗನೆ ತಾವು ಇದನ್ನು ಮಾಡುತ್ತಿದ್ದೀರಿ ಎಂದು,

ಆದರೆ ತಾವು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಆದಷ್ಟು ಬೇಗನೆ ಇದನ್ನು ಪರಿಗಣಿಸಿ ಕೂಡಲೇ ಈ ಕೆಲಸ ಮಾಡಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ. ಜೊತೆಗೆ ಸವಣೂರು ಬಸ್ ಘಟಕ, ಆದರ ಬಗ್ಗೆಯೂ 12 ಎಕರೆ 13 ಗುಂಟೆ ಜಮೀನನ್ನು ತಾವು ಭೂಸ್ವಾಧೀನ ಪಡಿಸಿಕೊಂಡಿದ್ದೀರಿ, ಭೂಸ್ವಾಧೀನ ಪಡಿಸಿಕೊಂಡು ಕಬ್ಜಾವನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಆದರೆ ಭೂಮಿಯ ಬೆಲೆ ಮತ್ತು ಭೂಮಿಯ ಹಕ್ಕುದಾರರ ಬಗ್ಗೆ ಒಂದು ವಿವಾದ ಇದೆಯೆಂದು ಹೇಳಿದಿರಿ. ವಿವಾದದ ಪ್ರಶ್ನೆ ಬೇರೆ. ಈಗಾಗಲೇ ತಾವು ಜಮೀನನ್ನು ತೆಗೆದುಕೊಂಡಿದ್ದೀರಿ. ಯಾರೋ ಒಬ್ಬ ಅಪರಚಿತ who is in no way concerned with that property has filed a suit in the court of law. ಈ ಘಟಕವನ್ನು ತಾವು ನಿರ್ಮಾಣ ಮಾಡಬೇಕು. ಏಕೆಂದರೆ ತಾವು ವಿವಾದ ಇದೆಯೆಂದು ಬಿಡುವುದರಿಂದ ಇದು ಬಹಳಷ್ಟು ತಡವಾಗುತ್ತದೆ ಜೊತೆಗೆ ಅದು ಕೋಟ್ಯಾಂತರ ರೂಪಾಯಿಯ ಆಸ್ತಿ ಅವನು ಪರಿಹಾರ ಹಣ ಕೇಳಬಹುದು. ನಾವು ಕೊಡುತ್ತೇವೆ ಬೇಕಾದರೆ. ಆದ್ದರಿಂದ ತಾವು ಕೂಡಲೆ ಈ ಘಟಕವನ್ನು ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಿಮ್ಮ ಅದೃಷ್ಟ ಚೆನ್ನಾಗಿ ಇದೆ. ಮೊದಲು ಏನಾದರೂ ಈ ಪ್ರಶ್ನೆ ಬಂದಿದ್ದರೆ ವಿಶ್ವೇಶ್ವರ ಹೆಗಡೆಯವರ ಪ್ರಶ್ನೆ ಆ ಮೇಲೆ ಬಂದಿದ್ದರೆ ನಿಮಗೆ ಪಜೀತಿ ಆಗುತ್ತಿತ್ತು.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಸಭಾಧ್ಯಕ್ಷರೆ, ಈ ಶಿಗ್ಗಾಂವ್‌ನಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವುದು ಏನೂ ತಡವಾಗುವುದಿಲ್ಲ. ಏಕೆಂದರೆ ಟೆಂಡರ್ ಕರೆದಿದ್ದೇವೆ. ಕಳೆದ ತಿಂಗಳು 29ನೇ ತಾರೀಖು ಕೊನೆಯ ದಿನಾಂಕವಾಗಿತ್ತು. ಈಗ ಟೆಂಡರ್ ಬಂದಿದೆ. ಅದು ಪರಿಶೀಲನೆಯಾಗಿ ಆದಷ್ಟು ಬೇಗನೆ ಬಸ್ ಸ್ಟ್ಯಾಂಡ್ ಕಟ್ಟಿಸವುದಕ್ಕೆ ಪ್ರಾರಂಭ ಮಾಡುತ್ತೇವೆ. ಅದರಲ್ಲಿ ಏನೂ ಸಮಸ್ಯೆಯಿಲ್ಲ, ಸವಣೂರುನಲ್ಲಿ ಬಸ್ ಘಟಕ ಸ್ಥಾಪಿಸಲು 5-6 ಲಕ್ಷ ರೂಪಾಯಿ ಹಣವನ್ನು ಒದಗಿಸಿದ್ದಾರೆ, ಬಹಳ ಸಂತೋಷ. ಇದು ತಮಗೂ ಗೊತ್ತಿದೆ. ಇನ್ನು ಸ್ವಲ್ಪ ಹಣ ಡಿಪೋ ಮಾಡುವುದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಅದು ಏನಾಗಿದೆಯೆಂದರೆ. ಅದು it is property under court order ಡಿ.ಸಿ. ಯವರು ಲ್ಯಾಂಡ್ ಕೊಟ್ಟಿದ್ದಾರೆ. ನಮ್ಮ ಸ್ವಾಧೀನದಲ್ಲಿ ಇದೆ. ಕೆಲವರು claim accept ಮಾಡಿ ಕೋರ್ಟಿಗೆ ಹೋಗಿದ್ದಾರೆ. ಕೆಳಗಿನ ಕೋರ್ಟಿನಲ್ಲಿ ಅವರ ಕಡೆಗೆ ಆಗಿದೆ. ಈಗ ಅದರ ಮೇಲೆ ಡಿ.ಸಿ. ಯವರು ಅಪೀಲ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಇದು ಒಂದು ನೋಟ. ಅದನ್ನು ಕಟ್ಟಬಾರದು ಎಂದು ನಮಗೆ ಸ್ಟೇ ಏನೂ ಇಲ್ಲ. ಆದರೆ ಒಂದು ಸಲ ಶುರು ಮಾಡಿದ ಮೇಲೆ ಕೋರ್ಟ್‌ನಿಂದ ಸ್ಟೇ ಬಂದರೆ ಮತ್ತೆ ಅದೆಲ್ಲಾ ವೇಸ್ಟ್ ಆಗುತ್ತದೆ. ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡರು. ನಾವು ಪ್ರಯತ್ನ ಮಾಡುತ್ತಿದ್ದೇವೆಂದು. ಅವರಿಗೂ ಗೊತ್ತಿದೆ. ಅಲ್ಲಿ 7-8 ಶೆಡ್ಡುಗಳು ಇವೆ, ಆ ಶೆಡ್ಡುಗಳಲ್ಲೇ ಡಿಪೋವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿದ್ದರೆ ಪ್ರಾರಂಭಮಾಡಬೇಕು ಎನ್ನುವಂಥ ವಿಚಾರವನ್ನು ಮಾಡುತ್ತಾ ಇದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಂಜನಾಥ ಸಿ. ಕುನ್ನೂರ್ : ಆದಷ್ಟು ಬೇಗನೆ ತಾವು ತ್ಸಾತ್ಕಾಲಿಕವಾಗಿಯಾದರೂ ಅದನ್ನು ಪ್ರಾರಂಭ ಮಾಡಿ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಿಬ್ಬಂದಿಗೆ ಪ್ರೋತ್ಸಾಹ ಧನ

460 - ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕುಂಡ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಆ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆದಾಯ ಹೆಚ್ಚಿಸುವ ಸಿಬ್ಬಂದಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಈ ರೀತಿಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಅಧ್ಯಕ್ಷರು : ಮಾರುಕಟ್ಟೆ ಸಚಿವರ ಪರವಾಗಿ ತೋಟಗಾರಿಕೆ ಸಚಿವರು ಉತ್ತರ ಕೊಡಬೇಕು. ಅವರು ನನ್ನ ಅನುಮತಿಯನ್ನು ಪಡೆದುಕೊಂಡಿದ್ದಾರೆ.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಸಭಾಧ್ಯಕ್ಷರೆ, ಮಂತ್ರಿಗಳು ಕೊಟ್ಟಿರುವ ಉತ್ತರ ಸೂಕ್ತವಾಗಿಲ್ಲ. ನಾನು ಕೇಳಿರತಕ್ಕಂಥದ್ದೇನೆಂದರೆ ಅಲ್ಲಿಯ ನೌಕರರು ಸಾಕಷ್ಟು ಕೆಲಸ ಮಾಡಿದರೂ ಸಹ ಅವರಿಗೆ ಸಾಕಷ್ಟು ಸಂಬಳ ಕೊಡುತ್ತಿಲ್ಲವೆಂದು ಕೇಳಿಬಂದಿದೆ. ಅವರು ಜಾಸ್ತಿ ದುಡಿದರೆ ಹೇಗೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕಂಡಕ್ಟರುಗಳಿಗೆ ಜಾಸ್ತಿ ಕಲೆಕ್ಷನ್ ಮಾಡಿದರೆ ಶೇಕಡ 2 ರಷ್ಟು ಕೊಡುತ್ತಾರೇ ಅದೇ ರೀತಿ ಇಲ್ಲಿಯೂ ಸಹ ಕೊಡಬೇಕು ಅವರಿಗೆ ಕೊಡುತ್ತಿರತಕ್ಕಂಥ ಸಂಬಳ ಕೂಡ ಕಡಿಮೆ ಇದೆ ಅದನ್ನು ಸಹ ಜಾಸ್ತಿ ಮಾಡಬೇಕೆಂದು ಅವರು ಕೇಳುತ್ತಿದ್ದಾರೆ.

ಶ್ರೀ ಡಿ.ಜಿ. ಜಯಕುಮಾರ್ (ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಇದು ಜಾಸ್ತಿ ಕಡಿಮೆ ಎನ್ನುವ ಪ್ರಶ್ನೆ ಇಲ್ಲ. ಆ ವ್ಯವಸ್ಥೆ ಸರ್ಕಾರದ ಗಮನದಲ್ಲಿ ಇಲ್ಲ. ಶುಲ್ಕವನ್ನು ಕಲೆಕ್ಟ್ ಮಾಡುವಂಥದ್ದು ಅಧಿಕಾರಿಗಳ ಕರ್ತವ್ಯ ಹೆಚ್ಚಿಗೆ ಶುಲ್ಕವನ್ನು ಕಲೆಕ್ಟ್ ಮಾಡಿದವರಿಗೆ ಪ್ರೋತ್ಸಹ ಧನ ಕೊಡಿ ಎಂದು ಕೇಳುತ್ತಿದ್ದಾರೆ. ಆ ವ್ಯವಸ್ಥೆ ಸರ್ಕಾರದಲ್ಲಿ ಇತ್ತು. 1994ನೇ ಇಸವಿಯಲ್ಲಿ ಈ ಒಂದು ಪ್ರಸ್ತಾವನೆ ಸರ್ಕಾರದ ಮುಂದೆ ಬಂದಿತ್ತು. ಅದು ತಿರಸ್ಕೃತವಾಗಿದೆ.

ಶ್ರೀ ಎಸ್.ಎ. ರವೀಂದ್ರನಾಥ : ಇಲ್ಲಿ ಇಲ್ಲ ಎಂದು ಹೇಳುತ್ತಾರೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಅಥವಾ ಬೇರೆ ಕಡೆಯಲ್ಲಿ ಕೊಡುತ್ತಿದ್ದಾರೆ. ಇಲ್ಲಿ ಏಕೆ ಕೊಡುತ್ತಾ ಇಲ್ಲ. ಅದೇ ತರಹ ಇಲ್ಲಿ ಏಕೆ ಕೊಡಬಾರದು?

ಅಧ್ಯಕ್ಷರು : ಸರ್ಕಾರದಲ್ಲಿ ಪುನರ್ ಪರಿಶೀಲನೆ ಮಾಡಿ. ಅವರು ಪುನರ್ ಪರಿಶೀಲನೆ ಮಾಡುತ್ತಾರೆ.

ಶ್ರೀ ಡಿ.ಜಿ. ಜಯಕುಮಾರ್ : ಆಗಬಹುದು.

ರಾಜ್ಯದಲ್ಲಿ ಪ್ರಕೃತಿ ವಿಕೋಪಗಳಿಗೆ ಪ್ರತ್ಯೇಕ ನಿಧಿ

130 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಕೃತ ವಿಕೋಪಗಳಿಂದಾಗುವ ಅನಾಹುತ ಎದುರಿಸಲು ಪ್ರತ್ಯೇಕ ನಿಧಿಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದಿಯೇ? ಹಾಗಿದ್ದಲ್ಲಿ ಇದು ಎಂದಿನಿಂದ ಜಾರಿಗೊಳಿಸಲಾಗುವುದು?

ಆ) ಪ್ರಕೃತಿ ವಿಕೋಪಗಳು ಸಂಬಂಧಿಸಿದಾಗ ಸರ್ಕಾರವು 1995-96ನೇ ಸಾಲಿನಲ್ಲಿ ನಿಗಧಿತ ಹಣಕ್ಕಿಂತ ಹೆಚ್ಚು ವೆಚ್ಚ ಮಾಡಿದಿಯೇ? (ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು)

ಇ) ಪ್ರಕೃತಿ ವಿಕೋಪಗಳಿಗೆ ರಾಜ್ಯ ಸರ್ಕಾರಕ್ಕೆ ನೀಡುವ ಯೋಜನಾ ಬಾಬ್ತಿನ ಅನುದಾನದಲ್ಲಿ ಕೇಂದ್ರ ಸರ್ಕಾರ ಕಡಿತಗೊಳಿಸಿರವುದು ನಿಜವೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಒಂಭತ್ತನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ನೈಸರ್ಗಿಕ ?ಕೋಪಗಳ ಪರಿಹಾರ ಕಾರ್ಯಾಗಳಿಗಾಗಿಯೇ 1990-91ರಿಂದ ಪ್ರತಿ ರಾಜ್ಯಕ್ಕೂ ಪ್ರತ್ಯೇಕವಾಗಿ 'ಪ್ರಕೃತ ವಿಕೋಪ ಪರಿಹಾರ ನಿಧಿ'ಯು ಅಸ್ತಿತ್ವಕ್ಕೆ ಬಂದಿರುತ್ತದೆ. ?990-91ರಿಂದ 1994-95ನೇ ಸಾಲಿನವರೆಗೆ ಕರ್ನಾಟಕ ರಾಜ್ಯದ 'ಪ್ರಕೃತಿ ವಿಕೋಪ ?ರಿಹಾರ ನಿಧಿ'ಗೆ ವಾರ್ಷಿಕ ರೂ. 27.00ಕೋಟಿಗಳ ಅನುದಾನವನ್ನು ನಿಗಧಿಪಡಿಸಲಾಗಿತ್ತು.

ಹತ್ತನೇ ಹಣಕಾಸು ಅಯೋಗದ ಶಿಫಾರಸ್ಸಿನೊಂದಿಗೆ ಪ್ರಸ್ತುತ ಸಾಲಿನಲ್ಲಿ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿ'ಗೆ ರೂ. 39.49 ಕೋಟಿಗಳನ್ನು ನಿಗಧಿಪಡಿಸಿದ್ದು. ?ದರಲ್ಲಿ ಶೇಕಡಾ 75 ಕೇಂದ್ರ ಸರ್ಕಾರದ ಪಾಲು ಹಾಗೂ ಶೇಕಡಾ 25 ರಾಜ್ಯ ?ರ್ಕಾರದ ಪಾಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಪ್ರತ್ಯೇಕವಾಗಿ ಪ್ರಕೃತಿ ವಿಕೋಪಗಳಿಂದಾಗುವ ?ನಾಹುತ ಎದುರಿಸಲು ನಿಧಿಯನ್ನು ಸ್ಥಾಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಇಲ್ಲ ಆದಾಗ್ಯೂ ದಿನಾಂಕ 3.2.96 ರವರೆಗೆ ಪ್ರಕೃತಿ ವಿಕೋಪ ಪರಿಹಾರ ?ಧಿಯಿಂದ ವಿವಿಧ ನೈಸರ್ಗಿಕ ವಿಕೋಪ ಪರಿಹಾರ ಕಾರ್ಯಗಳಿಗಾಗಿ ರೂ. 34.99 ?ೋಟಿಗಳನ್ನು ಬಿಡುಗಡೆ ಮಾಡಿದೆ ಹಾಗೂ ಡಿಸೆಂಬರ್ 95ರ ಅಂತ್ಯಕ್ಕೆ ರೂ. ?5.43 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಇ) ಇಲ್ಲ ಪುಸ್ತಕ ಸಾಲಿನಲ್ಲಿ ಕೇಂದ್ರ ಸರ್ಕಾರದ ವಂತಿಗೆ ರೂ. 29.62 ?ೋಟಿಗಳು ನಾಲ್ಕು ಕಂತುಗಳಲ್ಲಿ ಪೂರ್ಣವಾಗಿ ಬಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಭಾಧ್ಯಕ್ಷರೆ, ನನಗೆ ಜ್ಞಾಪಕ ?ರುವ ಹಾಗೆ ಸನ್ಮಾನ್ಯ ಜಾಲಪ್ಪನವರು ಪ್ರಕೃತಿ ವಿಕೋಪಗಳಿಂದಾಗುವ ಅನಾಹುತಗಳನ್ನು ?ದುರಿಸುವುದಕ್ಕೆ ಪ್ರತ್ಯೇಕ ನಿಧಿಯೊಂದನ್ನು ಮಾಡುತ್ತೇನೆಂದು ಪತ್ರಿಕೆಯಲ್ಲಿ ಹೇಳಿಕೆಯನ್ನು ?ೊಟ್ಟಿದ್ದರೂ. ಆ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ನಾನು ಕೇಳಿದೆ. ಈಗಾಗಲೇ ?ಾನಿಂಗ್ ಕಮಿಷನ್‌ನವರು ನಿಗಧಿ ಮಾಡಿರುವಂಥ ಹಣವನ್ನು ಕೊಡುತ್ತಾ ಇದ್ದಾರೆ. ?ಣಕಾಸು ಆಯೋಗ ಈಗಾಗಲೇ ಕೊಡುತ್ತಾ ಇದೆ. 75 ಪರ್ಸೆಂಟ್ ಕೇಂದ್ರ ಸರ್ಕಾರ, ?5 ಪರ್ಸೆಂಟ್ ರಾಜ್ಯ ಸರ್ಕಾರ ಭರಿಸಬೇಕೆಂದು ನಿಗದಿ ಪಡಿಸದೆ. ಆದ್ದರಿಂದ ಈ ?್ರಶ್ನೆ ಉದ್ಭವವಾಗುವುದಿಲ್ಲ ಎನ್ನುವ ಪ್ರಶ್ನೆಯನ್ನು ತಾವು ಹೇಳಿದ್ದೀರಿ. ಮಾನ್ಯ ?ಧ್ಯಕ್ಷರೆ, ತಮ್ಮಂಥವರು ಆ ಸ್ಥಾನದಲ್ಲಿ ಇದ್ದಾಗ ನನಗೆ ಆಶ್ಚರ್ಯವಾಗುತ್ತಿದೆ. ?ಜ್ಯದಲ್ಲಿ ಈ ತರಹ ಭೀಕರ ಬರಗಾಲ ಇದ್ದಾಗ ತಾವು 1995-96ನೇ ಸಾಲನಲ್ಲಿ ?ೇಂದ್ರಸರ್ಕಾರ 29 ಕೋಟಿ 62 ಲಕ್ಷ ಕೊಡಬೇಕಾದ ಹಣವನ್ನು ಪೂರ್ಣ ಬಿಡುಗಡೆ ?ಾಡಿದೆ ಎಂದು ಹೇಳಿದ್ದಾರೆ. ನೀವು ಇದುವರೆವಿಗೆ ಖರ್ಚು ಮಾಡಿರತಕ್ಕಂಥದ್ದು ?ೇವಲ 25 ಕೋಟಿ 43 ಲಕ್ಷ ಅಂದರೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವಂಥ ?ಣದಲ್ಲೇ ನೀವು 4 ಕೋಟಿ 19 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿಲ್ಲ. ಇನ್ನು ?ಜ್ಯ ಸರ್ಕಾರದ 25 ಪರ್ಸೆಂಟ್ ಅಂದರೆ ತಮ್ಮ ಪಾಲು ಏಳೂವರೆ ಕೋಟಿ ?ರ್ಚು ಮಾಡಿಲ್ಲ, ಅಂದರೆ ಸುಮಾರು ಹನ್ನೊಂದು ಮುಕ್ಕಾಲು ಕೋಟಿ ರಾಜ್ಯ ?ುತ್ತು ಕೇಂದ್ರದ ಪಾಲನ್ನು ತಾವು ಖರ್ಚು ಮಾಡಿಲ್ಲ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ?ೀಕರ ಬರಗಾಲ ಇರಬೇಕಾದರೆ ಕೆರೆಕಟ್ಟೆಗಳ ಕಾಮಗಾರಿ, ನಿರುದ್ಯೋಗಿಗಳಿಗೆ ಕೆಲಸ ?ದಗಿಸುವುದು ಮುಂತಾದವು ಅಗತ್ಯ ಇದೆಯೆಂದು ನಿಮಗೆ ವರದಿಯನ್ನೇ ಕೊಟ್ಟಿಲ್ಲವೇ? ?ಥವಾ ರಾಜ್ಯ ಸುಭಿಕ್ಷವಾಗಿದೆಯೇ? ಅಥವಾ ನೀವು ಇದುವರೆವಿಗೂ ಖರ್ಚು ?ಾಡಿರತಕ್ಕಂಥ ಹಣ ಸಾಕು, ಯಡಿಯೂರಪ್ಪನವರೆ, ಇನ್ನು ಅಗತ್ಯವಿಲ್ಲ ಎಂದ ?ಮಗೆ ಅನಿಸಿದೆಯೇ? ಅಂದರೆ ರೈತರ ಪರ ಇರುವ ನಿಮ್ಮ ಸರ್ಕಾರಕ್ಕೆ ಕೇಂದ್ರ ?ರ್ಕಾರ ಬಿಡುಗಡೆ ಮಾಡತಕ್ಕಂಥ ಹಣಕ್ಕಿಂತ ಎರಡು ಪಟ್ಟು ಹಣವನ್ನು ನೀವು

ಖರ್ಚು ಮಾಡಬೇಕಾಗಿತ್ತು. ಇಂತಹ ಭೀಕರ ಬರಗಾಲ ಇದ್ದರೂ ಖರ್ಚು ಮಾಡಿಲ್ಲ. ಈ ಖರ್ಚು ಮಾಡಿರುವಂಥ 25 ಕೋಟಿ 43 ಲಕ್ಷದಲ್ಲೂ ಸಹ ಹಿಂದಿನ ವರ್ಷ ಕೆಲಸ ಮಾಡಿದಂಥ ಬಾಕಿ ಸಹ ನಮ್ಮ ಜಿಲ್ಲಾಧಿಕಾರಿಗಳು ತೀರಿಸಿದ್ದಾರೆ. ಆದ್ದರಿಂದ ಈಗಲಾದರೂ ವಿಶೇಷವಾದ ಗಮನ ಕೊಟ್ಟು ಹೆಚ್ಚು ಹಣ ಕೊಡಿಸಿ ಖರ್ಚು ಮಾಡುವಂಥ ಉದ್ದೇಶ ತಮಗೇನಾದರೂ ಇದೆಯೇ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದಿಂದ ನಮಗೆ ಬಂದಿರುವ ಹಣ 29.62 ಕೋಟಿ ರೂಪಾಯಿ. ನಾವು ರಿಲೀಸ್ ಮಾಡಿರುವುದು 34.99 ಕೋಟಿ ಡಿಸೆಂಬರ್ ಕೊನೆಯವರೆಗೆ ಖರ್ಚಾಗಿರುವ ಹಣ 25.43 ಕೋಟಿ ರೂಪಾಯಿ. ಅಂದರೆ ಕೇಂದ್ರ ಸರ್ಕಾರ ನಮಗೆ ಕೊಟ್ಟಿದ್ದು ಹಣಕ್ಕಿಂತ ಹೆಚ್ಚಿಗೆ 5 ಕೋಟಿ 37 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇತ್ತೀಚೆಗೆ 15-20 ದಿವಸದ ಹಿಂದೆ ಇದರಲ್ಲಿ 10 ಕೋಟಿ ರೂಪಾಯಿಯನ್ನು ಕುಡಿಯುವ ನೀರಿಗೋಸ್ಕರ ರಿಲೀಸ್ ಮಾಡಿದ್ದೇವೆ. ನಮ್ಮಲ್ಲಿ ಸುಮಾರು 3-4 ಕೋಟಿ ಇರಬಹುದು, ಈಗ ಜಿಲ್ಲಾಧಿಕಾರಿಗಳ ಹತ್ತಿರ ಏನು ಇದೆ, ಅವರಿಗೆ ನಾವು ಹೇಳಿದ್ದೇವೆ. ನೀವು ನೇರವಾಗಿ ಟೆಂಡರ್ ಕರೆದು ಈ ಕುಡಿಯುವ ನೀರಿನ ಬಾವಿಗಳನ್ನು ನೀವೇ ಯಾವ್ಯಾವ ಊರಿಗೆ ಅತಿ ಅವಶ್ಯಕವಾಗಿದೆ ಅಲ್ಲಿಗೆ ಈ ಹಣವನ್ನು ಉಪಯೋಗಿಸಿಕೊಳ್ಳಬೇಕು ಮತ್ತು ಬೋರ್‌ವೆಲ್ ಡ್ರಿಲ್ ಮಾಡುವವರಿಗೆ ನಗದು ಮೂರು ದಿವಸದ ಒಳಗೆ ಕೊಡುತ್ತೇವೆಂದು ಹೇಳಿದರೆ ಅವರು ಕಡಿಮೆ ಡ್ರಿಲ್ ಮಾಡುತ್ತಾರೆಂದು ಅವರಿಗೆ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ. ಬಹುಶಃ ಮಾರ್ಚ್ ಕೊನೆಯೊಳಗಾಗಿ ಈಗ 39 ಲಕ್ಷ ಏನು ಇದೆ ಅದಕ್ಕಿಂತ ಹೆಚ್ಚಿಗೆ ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ. ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಮಿಕ್ಕ ಕೆಲಸಗಳನ್ನು ನಿಲ್ಲಿಸಿ ಮೊದಲು ಕುಡಿಯುವ ನೀರಿಗೆ ಆದ್ಯತೆ ಕೊಡಿ ಎಂದು ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಜಾಸ್ತಿ ಹಣ ಕೊಟ್ಟಿಲ್ಲ. ಕೇಂದ್ರ ಸರ್ಕಾರದ ಪಾಲು 29.62 ಕೋಟಿ ಅದರಲ್ಲಿ 25 ಪರ್ಸೆಂಟ್ ನೀವು ಖರ್ಚುಮಾಡಬೇಕೆಂದರೆ ಸುಮಾರು ಏಳೂವರೆ ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅಂದರೆ ನೀವು ಬಿಡುಗಡೆ ಮಾಡಿರುವಂಥ 34 ಕೋಟಿ 99 ಲಕ್ಷದಲ್ಲಿ ನಿಮ್ಮ ಜಿಲ್ಲಾಧಿಕಾರಿಗಳನ್ನು ತಾವು ಸಚಿವರು ಇದ್ದೀರಿ ಕೇಳಿ. ಹೋದ ವರ್ಷ ಬಿಡುಗಡೆ ಮಾಡಿದಂಥ ಹಣವನ್ನೂ ಹಾಗೇ ಇಟ್ಟುಕೊಂಡಿದ್ದರು. ನೀವು ಜಿಲ್ಲಾಧಿಕಾರಿಗಳಿಗೆ ಅನಿವಾರ್ಯವಾಗಿ ಉಸಿರುಕಟ್ಟಿ ಸಾಯುವಂತಹ ಪರಿಸ್ಥಿತಿ ಬಂದಾಗ ಮಾತ್ರ ಖರ್ಚು ಮಾಡಿ ಎಂದು ಹೇಳಿದ್ದೀರಿ. ಹಣ ಬಿಡುಗಡೆ ಮಾಡುತ್ತಿಲ್ಲ, ಖರ್ಚು ಮಾಡುತ್ತಿಲ್ಲ, ಜಾಲಪ್ಪನವರೆ. ನಾನೇ ತಮ್ಮ ಹತ್ತಿರ ಬಂದು ನನ್ನ ತಾಲ್ಲೂಕಿನ ಸಮಸ್ಯೆ ಹೇಳಿದಾಗ ನಿಮ್ಮ ಜಿಲ್ಲಾಧಿಕಾರಿ 8-10 ದಿವಸದ ಹಿಂದೆ 50-6 ಲಕ್ಷ ರೂಪಾಯಿಗಳಿಗೆ ಕ್ಲಿಯರೆನ್ಸ್ ಕೊಡುವುದುಕ್ಕೆ 10 ಬಾರಿ ನಾನು ಫೋನ್ ಮಾಡಬೇಕಾಯಿತು. ಅವರನ್ನು ಕಾಣುವಂಥ ದುಸ್ಥಿತಿ ಬಂತು. ನಾನು ಯಾವ ಅರ್ಥದಲ್ಲಿ ಹೇಳುತ್ತಿದ್ದೇನೆಂದರೆ ಇಂತಹ ಭೀಕರ ಬರಗಾಲ ಬಂದಾಗ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಿದಾಗ ನಿಮ್ಮ ಸಂಪೂರ್ಣ ಹಣವನ್ನು ಖರ್ಚು ಮಾ[illegible] ಕೇಂದ್ರ ಸರ್ಕಾರದಿಂದ ಮುಂದಿನ ವರ್ಷ ಅಡ್ವಾನ್ಸ್ ತೆಗೆದುಕೊಳ್ಳುವಂಥ ಪ್ರಯತ್ನ ನೀವು ಮಾಡಬೇಕಾಗಿತ್ತು. ಅದು ಇದೆ ಆದರೆ ಅದನ್ನು ನೀವು ಮಾಡಲಿಲ್ಲ. ಆದ್ದರಿಂದ ಈಗಲಾದರೂ ಎಲ್ಲೆಲ್ಲಿ ಕೆರೆಕಟ್ಟೆಗಳು ಪೂರ್ತಿ ಬತ್ತಿಹೋಗಿವೆ. ಎಲ್ಲೆಲ್ಲಿ ಅಗತ್ಯ ಇದೆ. ಜಾನುವಾರುಗಳಿಗೆ ಕುಡಿಯಲು ನೀರು ಇಲ್ಲ, ತೂಬುಗಳು ರಿಪೇರಿ ಆಗದಿರುವಂಥ ಒಂದು ಪರಿಸ್ಥಿತಿ ಇದೆ. ಆ ನೀರಾವರಿ ಇಲಾಖೆಯಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ. ಈ ಸಮಯದಲ್ಲಾದರೂ ಆ ಏರಿಗಳನ್ನು ಬಿಗಿಮಾಡಿ, ತೂಬುಗಳನ್ನು ಕಟ್ಟಿ, ಅಲ್ಲಲ್ಲಿ ನೀವು ಬರಗಾಲ

ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಇದೇ ಯೋಜನೆಯಲ್ಲಿ ನೀವು ತೆಗೆದುಕೊಳ್ಳಬೇಕು. ಕೆರೆಗಟ್ಟೆಗಳನ್ನು ಇನ್ನಾರು ಮಾಡಬೇಕು. ಬರಗಾಲದಲ್ಲಿ ಹಣ ಬಿಡುಗಡೆ ಮಾಡಿರುವಂಥದ್ದೇ ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡುವುದಕ್ಕೋಸ್ಕರ ಈ ತರಹ ಕೆಲಸ ತೆಗೆದುಕೊಳ್ಳಬೇಕು. ಅದು ಆಗುತ್ತಾ ಇಲ್ಲ, ಜಿಲ್ಲಾಧಿಕಾರಿಗಳಿಗೆ ಈಗ ಏನು ಹಣ ಬಿಡುಗಡೆ ಮಾಡಬೇಕು ಎಂದು ಹೇಳುತ್ತೀರಿ ಅದನ್ನು ಬಿಡುಗಡೆ ಮಾಡಿದ್ದೀರೋ? ಮಾರ್ಚ್ ತಿಂಗಳು ಒಳಗಾಗಿ ಸೂಕ್ತವಾಗಿರುವ ಕೆಲಸಗಳಿಗೆ ಖರ್ಚು ಮಾಡುವಂತಹದ್ದಕ್ಕಾದರೂ ಇವತ್ತು ಆದೇಶ ಕೊಡುತ್ತೀರಾ ಸ್ವಾಮಿ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮೊದಲು ಕುಡಿಯುವ ನೀರಿಗೆ ಆದ್ಯತೆ ಕೊಟ್ಟು ಈ ಉಳಿದ ಹಣದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಿ ಎಂದು ನಾನು ಸೂಚನೆಗಳನ್ನು ಕೊಡುತ್ತೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ನ್ಯಾಚುರಲ್ ಕಲಾಮಿಟಿ ಫಂಡ್ ಸುಮಾರು 39ಕೋಟಿ ರೂಪಾಯಿ 10ನೇ ಫೈನಾನ್ಸ್ ಕಮೀಷನ್‌ನಲ್ಲಿ ಫಿಕ್ಸ್ ಆಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದರಲ್ಲಿ ಈಗಾಗಲೇ 34 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಇನ್ನೂ ಐದು ಕೋಟಿ ರೂಪಾಯಿ ಅವರ ಹತ್ತಿರ ಇದೆ ಎಂದು ಹೇಳಿದ್ದಾರೆ. ಆದರೆ ಈ ನ್ಯಾಚುರಲ್ ಕಲಾಮಿಟಿಯಲ್ಲಿ ಒಡೆದ ಸುಮಾರು 10-12 ಕೆರೆಗಳ ಬಗ್ಗೆ ಎಸ್ಟಿಮೇಟ್ಸ್ ಮಾಡಿಸಿ ಜಿಲ್ಲಾಧಿಕಾರಿಗಳಿಗೆ ಕೊಟ್ಟ ಈ ಕೆಲಸವನ್ನು ತೆಗೆದುಕೊಳ್ಳಬೇಕು. ಇಲ್ಲವೆಂದರೆ ಮಳೆಗಾಲದಲ್ಲಿ ಮಳೆ ಬಂದರೆ ಆ 12 ಹಳ್ಳಿಗಳಿಗೆ ರೈತರಿಗೆ ತೊಂದರೆ ಆಗುತ್ತದೆ. ಎಂದು ಮನವಿ ಕೊಟ್ಟರೂ ಕೂಡ ಇಲ್ಲಿಯವರೆಗೆ ಆ ಜಿಲ್ಲಾಧಿಕಾರಿಗಳು ಹೋಗಿ ನೋಡಿಕೊಂಡು ಎಸ್ಟಿಮೇಟ್ ಸಬ್ಮಿಟ್ ಮಾಡಿಲ್ಲ, ನಾನು ಅನೇಕ ಸಾರಿ ರೆವಿನ್ಯೂ ಇಲಾಖೆಯ ಕಾರ್ಯದರ್ಶಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದಾಗ ಅಲ್ಲಿಂದ ಡಿಟೇಲ್ಸ್ ಕಳಿಸುತ್ತಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ತಮಗೂ ಕೂಡ ಒಂದಲ್ಲ, ಎರಡೂ ಮೂರು ಲೆಟರ್ ಬರೆದಿದ್ದೇನೆ. ಹೀಗೆ ಅನೇಕ ಸಾರಿ ನಾವು ಪದೇ ಪದೇ ಹೇಳತಕ್ಕ ಪ್ರಸಂಗ ಬರುತ್ತಿದೆ. ದಯವಿಟ್ಟು ಅಲ್ಲಿ ಸಂಬಂಧಪಟ್ಟ ಅಸಿಸ್ಟೆಂಟ್ ಕಮೀಷನರ್ ಆಗಲೀ ಅಥವಾ ಡೆಪ್ಯೂಟಿ ಕಮೀಷನರ್ ಆಗಲೀ ಯಾವುದೇ ನ್ಯಾಚುರಲ್ ಕಲಾಮಿಟಿಯಲ್ಲಿ ಒಡೆದು ಹೋದಂತಹ ಕೆರೆಗಳ ದುರಸ್ತಿಯನ್ನು ತಕ್ಷಣ ತೆಗೆದುಕೊಳ್ಳಬೇಕು. ಏಕೆಂದರೆ ಅದು ರೈತರಿಗೆ ನೇರವಾಗಿ ಸಂಬಂಧಪಟ್ಟಂಥಾದ್ದು. ಒಂದು ರಸ್ತೆ ದುರಸ್ತಿ ಮಾಡುವ ಕೆಲಸವನ್ನು ನಿಲ್ಲಿಸಬಹುದು, ಆದರೆ ಒಂದು ಕೆರೆ ದುರಸ್ತಿ ಕೆಲಸ ತಕ್ಷಣ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ನಾನು ಅನೇಕ ಸಾರಿ ಹೇಳಿದರೂ ಕೂಡ ಈ ಒಂದು ನ್ಯಾಚುರಲ್ ಕಲಾಮಿಟಿ ಫಂಡ್‌ನಲ್ಲಿ ತೆಗೆದುಕೊಳ್ಳಿ ಎಂದು ಹೇಳಿದರೂ ಕೂಡ ಇನ್ನೂವರೆಗೆ ಅದು ಪೂರ್ತಿ ಆಗುತ್ತಾ ಇಲ್ಲ. ಆದ್ದರಿಂದ ದಯವಿಟ್ಟು ಅಟ್‌ಲೀಸ್ಟ್ ಮೂರು ಕೋಟಿ ರೂಪಾಯಿ ಎಂದು ಹೇಳುತ್ತಿದ್ದೀರಿ, ಆ ರಿಪೋರ್ಟ್ ತರಿಸಿ ಕೊಂಡು ಇದರ ಬಗ್ಗೆ ಏನಾದಾರೂ ಕ್ರಮ ಹಾಕಿಕೊಳ್ಳುತ್ತೀರೋ ಹೇಗೆ ಎಂದು ಕೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ನಾನು ಈ ದಿವಸ ಅಥವಾ ಸೋಮವಾರ ಜಿಲ್ಲಾಧಿಕಾರಿಗಳನ್ನು ನೇರವಾಗಿ ಸಂಪರ್ಕ ಮಾಡಿ ಅಲ್ಲಿನ ಪರಿಸ್ಥಿತಿಯನ್ನು ತಿಳಿದು ಕೊಂಡು ಏನು ಮಾಡುವುದಕ್ಕೆ ಸಾಧ್ಯ ಇದೆ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಉಡುಪಿ ತಾಲ್ಲೂಕಿನಲ್ಲಿ ಸರಕಾರಿ ಜಮೀನಿನ ಕ್ರಮೇಣ

455 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಕೆಳರ್ಕಳಬೆಟ್ಟು ಉದ್ಯಾವರ ಹಾಗೂ ಪುತ್ತೂರಿನಲ್ಲಿ ಕಂದಾಯ ಇಲಾಖೆಯ ಸ್ವಾಧೀನದಲ್ಲಿರುವ ಸರ್ಕಾರಿ ಜಮೀನಿನ ಅಕ್ರಮಣವನ್ನು ತೆಗೆಯಲಾಗುವುದೆಂದು ಸರ್ಕಾರದವರು ಆಶ್ವಾಸನೆ ನೀಡಿರುವುದು ನಿಜವೇ

ಆ) ಹಾಗಿದ್ದರೆ, ಈ ಬಗ್ಗೆ ಕ್ರಮ ಕೈಗೊಳ್ಳಲು ನಿಧಾನ ನೀತಿ ಅನುಸರಿಸುವುದಕ್ಕೆ ಕಾರಣಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹೌದು

ಆ) ಈ ಪ್ರಕರಣಗಳಲ್ಲಿ ಕಾನೂನಿನ್ವಯ ಕ್ರಮ ಜರುಗಿಸಲಾಗುತ್ತಿದ್ದು, ವಿಳಂಬ ನೀತಿಯನ್ನು ಅನುಸರಿಸಿಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ, ರಸ್ತೆ ಬದಿಯಲ್ಲಿ ರೋಡ್ ಮಾರ್ಜಿನ್‌ಗಳು ಏನು ಇವೆ ಅಲ್ಲಿ ಸಾಕಷ್ಟು ರೀತಿಯ ಅಕ್ರಮಗಳು ನಡೆದಿವೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಅದರ ಆಕ್ರಮಣ ತೆಗೆಯುವರು ಕಂದಾಯ ಅಧಿಕಾರಿಗಳೋ ಅಥವಾ ಸಂಬಂಧಪಟ್ಟ ಇಲಾಖಾಧಿಕಾರಿಗಳೋ ಏನೋ ಎನ್ನುವ ಬಗ್ಗೆ ಜಿಜ್ಞಾಸೆ ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ನನಗೆ ಸ್ಪಷ್ಟವಾದ ಒಂದು ಮಾಹಿತಿ ಬೇಕಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಸೆಂಟರ್‌ನಿಂದ ಸ್ಪಡಿ ಎಂದು ಮಾರ್ಜಿನ್ ಇದೆ. ಅಷ್ಟರೊಳಗೆ ಬರುವುದನ್ನೆಲ್ಲಾ ರಾಷ್ಟ್ರೀಯ ಹೆದ್ದಾರಿಯವರು ತೆಗೆಸಬೇಕು.

ಶ್ರೀ ಯು.ಆರ್. ಸಭಾಪತಿ : ಅವರಲ್ಲಿ ಕೇಳಿದಾಗ ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಅದನ್ನು ಕಂದಾಯ ಇಲಾಖೆಯವರೇ ಮಾಡಬೇಕು, ನಮ್ಮಿಂದ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ತಾವು ಸೂಕ್ತವಾದ ನಿರ್ದೇಶನವನ್ನು ಸಂಬಂಧಪಟ್ಟ ಇಲಾಖೆಯವರಿಗೆ ಕಳಿಸುತ್ತೀರಾ ?

ಶ್ರೀ ಆರ್.ಎಲ್. ಜಾಲಪ್ಪ : ತಿಳಿಸುತ್ತೇವೆ. ನಮ್ಮದೇ ಒಂದು ಕಾಲೇಜಿನ ಎದುರುಗಡೆ ಅನ್‌ಅಥರೈಸ್ಡ್ ಕನಸ್ಟ್ರಕ್ಷನ್ಸ್ ರಸ್ತೆಯ ಪಕ್ಕದಲ್ಲಿ ಬಂದಾಗ ನಾನು ಅವರಿಗೆ ಹೇಳಿ ರಿಮೂವ್ ಮಾಡಿಸಿ ಎಂದು ನಾವು ರಿಮೂವ್ ಮಾಡಿಸುವುದಕ್ಕೆ ಹೋಗಲಿಲ್ಲ. ಬೇಕಾದರೆ ಇನ್ನೊಂದು ಸಾರಿ ಅವರ ಹತ್ತಿರ ಮಾತನಾಡುತ್ತೇವೆ. ನಮ್ಮ ಕರ್ತವ್ಯ ಇದ್ದರೆ ನಾವು ಮಾಡುತ್ತೇವೆ. ಅವರ ಕರ್ತವ್ಯ ಇದ್ದರೆ ಅವರು ಕೆಲಸ ಮಾಡಬೇಕು.

ರಾಜ್ಯದಲ್ಲಿ ಸಾವಯವ ಗೊಬ್ಬರದ ಉಪಯೋಗ

469 - ಶ್ರೀ ಬಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಾವಯವ ಗೊಬ್ಬರ ಉಪಯೋಗವನ್ನು ಎಷ್ಟು ಜನ ರೈತರು ಮಾಡುತ್ತಿರುವರು.

ಆ) ಈ ಬಗ್ಗೆ ಸಮಗ್ರ ಪ್ರಚಾರಾಂದೋಳನ ಮಾಡಲು ಸರ್ಕಾರ ಜರುಗಿಸಿರುವ ಕ್ರಮಗಳೇನು ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಸಾವಯವ ಗೊಬ್ಬರದ ಉಪಯೋಗವನ್ನು ಮಾಡುವ ರೈತರ ಬಗ್ಗೆ ಸ್ಪಷ್ಟ ಅಂಕಿ ಅಂಶ ನೀಡಲು ಸಾಧ್ಯವಾಗದಿದ್ದರೂ ಇದು ದಿನದಿಂದ ದಿನಕ್ಕೆ ಸಾಕಷ್ಟು ಹೆಚ್ಚುತ್ತಿದೆ.

ಆ) ಉತ್ಪಾದನೆ ಮತ್ತು ಬಳಕೆಯ ಎರಡು ಹಂತಗಳಲ್ಲಿ ಇಲಾಖೆಯ ಸಿಬ್ಬಂದಿಯವರ ಮುಖಾಂತರ ಪ್ರಚಾರ ಕಾರ್ಯ , ತರಬೇತಿ, ಪ್ರಾತ್ಯಕ್ಷಿಕೆ ಮತ್ತು ಸಹಾಯಧನ ನೀಡುವಿಕೆ ಇತ್ಯಾದಿಗಳ ಬಗ್ಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ರಾಜ್ಯದಲ್ಲಿ ಸಾವಯವ ಗೊಬ್ಬರ ಉಪಯೋಗವನ್ನು ಎಷ್ಟು ಜನ ರೈತರು ಮಾಡುತ್ತಿರುವರು ಎಂದು. ಅದಕ್ಕೆ ಸಮಗ್ರವಾಗಿ ಪ್ರಚಾರಂಧೋಳನದ ಕೆಲಸವನ್ನು ಏನಾದರೂ ಮಾಡುತ್ತಿದ್ದಾರೆಯೋ ಎನ್ನುವ ಪ್ರಶ್ನೆಗೆ ಅವರು ಕೊಟ್ಟಿರುವಂತಹ ಉತ್ತರವನ್ನು ನೋಡದರೆ ನೂರಕ್ಕೆ ನೂರು ಸತ್ಯಕ್ಕೆ ದೂರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ನೂರಕ್ಕೆ ನೂರು ಸತ್ಯಕ್ಕೆ ದೂರವಾದಂತಹ ಉತ್ತರವನ್ನು ಕೊಡುವುದಕ್ಕೆ ಕಾರಣವೇನು ಎಂದರೆ ಬಹುಶಃ ನಾನು ಹಿಂದುಗಡೆ ತಿರುಗಿಸಿ ಇಂಗ್ಲೀಷ್‌ನಲ್ಲಿ ಅಚ್ಚು ಆಗಿರುವುದನ್ನು ನೋಡಿದರೆ ಆರ್ಗ್ಯಾನಿಕ ಮೆನ್ಯೂರ್ಸ್ ಎಂದು ಕಲ್ಪನೆ ಮಾಡಿಕೊಂಡಿದ್ದಾರೆಂದು ಕಾಣುತ್ತದೆ. ನನಗೆ ಅನಿಸುತ್ತದೆ, ಅಚ್ಚ ಕನ್ನಡದಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಈ ರೀತಿಯಾದ ತದ್ವಿರುದ್ಧವಾದಂತಹ ಉತ್ತರಗಳು ಬರತ್ತವೆ ಎನ್ನತಕ್ಕ ಭಾವನೆ ಇದೆ. ಅವರು ಮಿಸ್ಟೇಕ್ ಮಾಡಿಕೊಂಡಿರತಕ್ಕದ್ದು ಆರ್ಗ್ಯಾನಿಕ್ ಮೆನ್ಯೂರ್ಸ್‌ಗೆ ಸಂಬಂಧಪಟ್ಟಂತಹ ಉತ್ತರವನ್ನು ಕೊಟ್ಟಿದ್ದಾರೆ. ಇದು ಸಾವಯವ ಗೊಬ್ಬರ ಇರಬಹುದು ಅಥವಾ ಕಾಂಪೋಸ್ಟ್ ನಿಂದ ಬರತಕ್ಕ ಗೊಬ್ಬರಗಳಿಗೆ ಪ್ರಚಾರ ಮಾಡಲಿಕ್ಕ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎನ್ನುವುದೇ ನನ್ನ ಮೂಲ ಪ್ರಶ್ನೆಯ ಉದ್ದೇಶ. ಅದನ್ನು ಅರ್ಥಮಾಡಿಕೊಳ್ಳದೇ ಆರ್ಗ್ಯಾನಿಕ್ ಮೆನ್ಯೂರ್ಸ್ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ನನಗೆ ಅನಿಸುತ್ತದೆ.

Mr. SPEAKER : were you a student of chemistry?

ಶ್ರೀ ಬಿ.ಟಿ. ಜಯಚಂದ್ರ : ಹೌದು, ಬಿಎಸ್‌ಸಿನಲ್ಲಿ ಕೆಮಿಸ್ಟ್ರಿ.

Mr. SPEAKER : What is the difference between this and organic?

ಶ್ರೀ ಟಿ.ಬಿ. ಜಯಚಂದ್ರ : ಆರ್ಗ್ಯಾನಿಕ್ ಮೆನ್ಯೂರ್ಸ್ ಹಾಕುವುದರಿಂದ ಪರಿಸ್ಥಿತಿ ಏನಾಗುತ್ತದೆ ಎಂದರೆ, ಮಣ್ಣಿನ ಗುಣ ಹಾಳಾಗತಕ್ಕಂಥ ಮತ್ತು ನೀರಿನ ಗುಣ ಕೂಡ ಹಾಳಾಗತಕ್ಕಂಥ ಸಂದರ್ಭ ಇರುವುದರಿಂದ ಇದು ಹೆಚ್ಚು ಪ್ರಚಾರ ಆಗಬೇಕಾಗಿರತಕ್ಕದ್ದು, ತಿಪ್ಪೆಯಿಂದ ಮತ್ತು ಎರೆ ಹುಎಬಿನಿಂದ ಬರತಕ್ಕ ಗೊಬ್ಬರ ಅಂದರೆ ಕಾಂಪೋಸ್ಟ್, ಆ ಗೊಬ್ಬರಕ್ಕೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಈಗ ಏನಾಗಿದೆ ಎಂದರೆ.

Mr. SPEAKER : The chemical ingredient of compost manure and organic manure is not of much difference.

o Sri T.B. JAYACHANDRA : Even then, this is in the direct form ಅದರಲ್ಲಿ ಏನಾಗುತ್ತದೆ ಎಂದರೆ ಆರ್ಗಾನಿಕ್ ಕೆಮಿಕಲ್ಸ್‌ನಲ್ಲಿ it is injurious to health of the plants ಎನ್ನತಕ್ಕದ್ದು ನಮಗೆ ಇನ್ನೂ ಅಷ್ಟು ಗೊತ್ತಿಲ್ಲ. ಅದರಲ್ಲಿಯೂ ನಮ್ಮ ಭಾರತ ದೇಶದಲ್ಲಿ ಬಳಕೆ ಆಗುತ್ತಿರುವುದನ್ನು ನೋಡಿದಾಗ ಎಲ್ಲಾ ಸಬ್‌ಸ್ಟ್ಯಾಂಡರ್ಸ್,

ಶ್ರೀ ಆರ್.ಎಲ್. ಜಾಲಪ್ಪ : ನನ್ನ ಸ್ನೇಹಿತರು ಸ್ವಲ್ಪ ಕನ್‌ಫ್ಯೂಸ್ ಮಾಡಿಕೊಂಡಹಾಗೆ ಕಾಣುತ್ತದೆ. ಆರ್ಗ್ಯಾನಿಕ್ ಮೆನ್ಯೂರ್ ಎಂದರೆ ಸಾವಯವ ಗೊಬ್ಬರಗಳು ಎಂದು. ಇನ್ ಆರ್ಗ್ಯಾನಿಕ್ ಮೆನ್ಯೂರ್, ಕೆಮಿಕಲ್ ಫರ್ಟಿಲೈಸರ್ಸ್ ತಾವು ಹೇಳಿದ ಹಾಗೆ ಮಣ್ಣಿನ ಗುಣ ಹೋಗುತ್ತದೆ. ಮಣ್ಣಿನಲ್ಲಿ ಪೋರ್ಸ್ ಇರುವುದಿಲ್ಲ, ಅದೆಲ್ಲಾ ನೀವು ಹೇಳುತ್ತಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. when use only chemical fertilisers, not this organic manures . ಈಗ ತಮಗೆ ಗೊತ್ತಿದೆ. ಹತ್ತಾರು ವರ್ಷಗಳಿಂದ

20-30 ವರ್ಷಗಳಿಂದ ಕಾಂಪೋಸ್ಟ್ ಗೊಬ್ಬರ ಮಾಡಿ ಮಾಡಿ ಎಂದು ಹೇಳುತ್ತಿದ್ದೇವೆ ಅದನ್ನು ರೈತರು ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಈಗ ಅದನ್ನು ವಿಧಿ ಇಲ್ಲದೆ ಇನ್ನು ಮೇಲೆ ಅವರು ಆರ್ಗ್ಯಾನಿಕ್ ಮೆನ್ಯೂರ್ ಹಾಕಲೇಬೇಕಾಗುತ್ತದೆ. ಏಕೆಂದರೆ ಫರ್ಟಿಲೈಸರ್ ಬೆಲೆ ಜಾಸ್ತಿ ಆಗುತ್ತಾ ಇದೆ. ಈಗ ಹಳೆಯ ಕಾಲದಲ್ಲಿ ಏನು ಮೆತಡ್ ಇತ್ತು ಕೆರೆಗಳಲ್ಲಿ ಮಣ್ಣು ಹೊಡೆಯುವುದನ್ನು ನಾವು ಬಿಟ್ಟು ಬಿಟ್ಟೆವು. ಗೋಡು ಮಣ್ಣು ಹೊಡೆಯುವುದನ್ನು ಬಿಟ್ಟಿದ್ದೇವೆ. ಬರೀ ಕೆಮಿಕಲ್ ಫರ್ಟಿಲೈಸರ್ಸ್ ಯೂಸ್ ಮಾಡಿ ಬಹಳ ದಿವಸ ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು ರೈತರಿಗೆ ಈಗ ಅರ್ಥ ಆಗಿದೆ. ಹೆಚ್ಚು ಹೆಚ್ಚು ಪ್ರಚಾರಕ್ಕೆ ಏನು ಕ್ರಮ ಬೇಕೋ ಮಾಡುತ್ತೇವೆ. ಎರೆಹುಳಕ್ಕೆ ಕೆಲವು ಕಡೆ ಸಬ್ಸಿಡಿ ಕೂಡ ಕೊಡುತ್ತಿದ್ದೇವೆ. ಎರೆಹುಳದ ಬಗ್ಗೆ ತಾವೇನು ಹೇಳುತ್ತಿದ್ದೀರಿ. ಅದು ಬಹಳ ಒಳ್ಳೆಯ ಸಜೆಕ್ಷನ್ ಅದಕ್ಕೆ ಸಬ್ಸಿಡಿ ಕೂಡ ಕೊಡಬೇಕೆಂದು ಹೇಳಿ ಒಂದು ತಾಲ್ಲೂಕಿಗೆ 20-30 ಜನರಿಗೆ ಸಬ್ಸಿಡಿ ಕೊಟ್ಟು ಅದನ್ನು ಕೂಡ ಬೆಳೆಸಬೇಕು, ಅಂತಹ ಗೊಬ್ಬರಗಳನ್ನು ಉಪಯೋಗಿಸಬೇಕು ಎಂದು ಹೇಳಿ ಸರ್ಕಾರ ಆ ದಿಸೆಯಲ್ಲಿ ಈಗ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಶ್ರೀ ಟಿ.ಬಿ. ಜಯಚಂದ್ರ : ಸಬ್ಸಿಡಿ ಕೊಡತಕ್ಕ ಪದ್ಧತಿ ಇದೆ. ಆದರೆ ಅದನ್ನು ಎಲ್ಲೂ ಕೊಟ್ಟಿಲ್ಲ, ಇಲ್ಲಿಯವರೆಗೆ ಆ ಪದ್ಧತಿ ಜಾರಿಗೆ ಬಂದಿಲ್ಲ, ದಯಮಾಡಿ ನೀವು ಕೊಡತಕ್ಕ ಸಬ್ಸಿಡಿ ಕೊನೆಯಪಕ್ಷ ಅರ್ಧದಷ್ಟಾದರೂ ಕೊಟ್ಟರೆ ಅದು ಪ್ರಚಾರಕ್ಕೆ ಅನುಕೂಲ ಆಗುತ್ತದೆ ಎನ್ನುವ ದೃಷ್ಟಿಯಿಂದ ಈ ಪ್ರಶ್ನೆ ಕೇಳಿರತಕ್ಕದ್ದು. ದಯಮಾಡಿ ಇದರ ಬಗ್ಗೆ ಯೋಚಿಸಿ . ಸ್ವತಃ ತಾವು ರೈತರಾದ್ದರಿಂದ ಈ ಬಗ್ಗೆ ಹೆಚ್ಚಾಗಿ ಹೇಳತಕ್ಕ ಅವಶ್ಯಕತೆ ಇಲ್ಲ, ನೀವು ಇದರ ಬಗ್ಗೆ ಹೆಚ್ಚಿನ ಒಂದು ಕಾರ್ಯಕ್ರಮವನ್ನು ಹಾಕಿದರೆ ಬಹಳ ಸೂಕ್ತ ಎಂಬ ಒಂದು ಸಲಹೆಯನ್ನು ಕೊಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಆಯಿತು, ಇದನ್ನು ಒಪ್ಪಿಕೊಳ್ಳುತ್ತೇನೆ.

ಮೈಸೂರು ಕೆಬಿಬಿಸಿ ಮುಚ್ಚಿರುವ ಬಗ್ಗೆ.

302 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಕರ್ನಾಟಕ ಬಾಲ್ ಬೇರಿಂಗ್ ಕಂಪನಿ (ಕೆಬಿಬಿಸಿ) ಕಾರ್ಖಾನೆಯು ಮುಚ್ಚಿ ಇಲ್ಲಿನ ಕಾರ್ಮಿಕರು ಬೀದಿಪಾಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಕಾರ್ಖಾನೆಯನ್ನು ತೆರೆಯುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ಕಾರ್ಖಾನೆಯನ್ನು ತೆರಸಲು ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ಬಂದಿದೆ

ಆ) ಕಾರ್ಖಾನೆ ಪುನರಾರಂಭಿಸುವ ಬಗ್ಗೆ ಸಂಧಾನ ಸಭೆ ನಡೆಸಿ ಒಪ್ಪಂದವೊಂದನ್ನು ಮಾಡಲಾಯಿತು. ಆದರೆ ಒಪ್ಪಂದವನ್ನು ಅನುಷ್ಠಾನಕ್ಕೆ ತರದೆ ಇರುವುದರಿಂದ ಆಡಳಿತ ವರ್ಗದವರ ವಿರುದ್ಧ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕಾರ್ಖಾನೆಯನ್ನು ಪುನರಾರಂಭಿಸುವ ಬಗ್ಗೆ ನಿಗದಿತ ಸಮಯವನ್ನು ಹೇಳಲು ಬರುವುದಿಲ್ಲ, ಆದಾಗ್ಯೂ ಸದರಿ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಲು ಕೂಡಲೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ ಉತ್ತರ ಸಮರ್ಪಕವಾಗಿಲ್ಲ. ಕಾರಣ ಏನೆಂದರೆ ಈ ಮಹತಾ ಗುಂಪಿನವರು ಕರ್ನಾಟಕದಲ್ಲಿ ಹಲವಾರು

ಕಂಪನಿಗಳನ್ನು ಹುಟ್ಟು ಹಾಕುವುದು, ಮುಚ್ಚುವುದು, ರೋಗಗ್ರಸ್ಥಗೊಳಿಸುವುದು ಇವರ ಕಸುಬು ಆಗಿಬಿಟ್ಟಿದೆ. ಇವತ್ತು ಕೆಬಿಬಿಸಿ ಕಾರ್ಖಾನೆಯು ಸುಮಾರು 500 ಕ್ಕೂ ಹೆಚ್ಚು ಮಂದಿ ಕಾರ್ಮಿಕರು ಬೀದಿ ಪಾಲಾಗಿ ಅವರ ಜೀವನ ತುಂಬಾ ಕಷ್ಟದ ಪರಿಸ್ಥಿತಿಯಲ್ಲಿದೆ. ಈಗಾಗಲೇ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವ ಬಗ್ಗೆ ಉತ್ತರದಲ್ಲಿ ಹೇಳಿದ್ದಾರೆ. ಅದನ್ನು ತೆಗೆದುಕೊಂಡು ಮೂರು ವರ್ಷದಿಂದ ಆರು ಕೋಟಿ ರೂಪಾಯಿ ಅವರಿಗೆ ಕೊಡಬೇಕಾಗಿರತಕ್ಕ ಸಂಬಳ ಬಾಕಿ ಇದೆ. ಈ ದಿಸೆಯಲ್ಲಿ ಸರ್ಕಾರ ತಾವು ರೋಗಗ್ರಸ್ಥ ಕಂಪನಿಗಳನ್ನು ಹುಟ್ಟು ಮಾಡಿ ತಾವು ಕೂಡ ರೋಗಗ್ರಸ್ಥರಾಗಿ, ಜನಗಳನ್ನು ರೋಗಗ್ರಸ್ಥರನ್ನಾಗಿ ಮಾಡತಕ್ಕ ಕೆಟ್ಟ ನೀತಿಯನ್ನು ಅನುಸರಿಸುವುದು ಬೇಡ. ಇನ್ನು ಮುಂದೆ ಮಹತಾ ಗುಂಪಿನವರು ಈ ರಾಜ್ಯದಲ್ಲಿ ಕಾರ್ಮಿಕರಿಗೆ ಮಾಡಿರತಕ್ಕ ಅನ್ಯಾಯ ಏನು ಇದೆ, ಆ ಅನ್ಯಾಯವನ್ನು ಸರಿಪಡಿಸಬೇಕಾದರೆ ಸರ್ಕಾರ ತುಂಬಾ ಜವಾಬ್ದಾರಿಯುತವಾಗಿ ತೆಗೆದುಕೊಳ್ಳಬೇಕಾಗಿದೆ. ದಯಮಾಡಿ ಇದಕ್ಕೆ ಕಾರ್ಮಿಕ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಬಾಲ್ ಬೇರಿಂಗ್ ಕಂಪನಿ ಲಿಮಿಟೆಡ್, ಮೈಸೂರಿನಲ್ಲಿ 450ಕ್ಕಿಂತ ಹೆಚ್ಚು ಕೆಲಸಗಾರು ಇಲ್ಲಿದ್ದಾರೆ, 1988ರಲ್ಲಿ ಈ ಕಾರ್ಖಾನೆ ಬಿಐಎಫ್‌ಆರ್ ಎಂದುರುಗಡೆ ಹೋಗಿ, ಅವರ ಕಡೆಯಿಂದ ಮತ್ತು ಹಣದ ಸಹಾಯವನ್ನು ಪಡೆದು ಕಾರ್ಯ ಮಾಡುತ್ತಿತ್ತು. ಆಮೇಲೆ ಮತ್ತೆ 1992-93 ಹಾಗೂ 1995ರವರೆಗೆ ಈ ಕಾರ್ಖಾನೆ ಕ್ಲೋಸ್ ಆಗಿದೆ. ಈ ಕಾರ್ಖಾನೆ ಮೇಲೆ ನಮ್ಮ ಇಲಾಖೆಯ ವತಿಯಿಂದ ಅವರು ಮಾಡಿಕೊಂಡ ಒಪ್ಪಂದದ ವಿರುದ್ಧವಾಗಿ ಕೇಸ್ ಸಹ ಹಾಕಿದ್ದಾರೆ. ಮತ್ತೆ ಈ ಕಾರ್ಖಾನೆಯವರು ಬಿಐಎಫ್‌ಆರ್ ಎದುರುಗಡೆ ಹೋಗಿ ಈ ರೋಗಗ್ರಸ್ಥ ಕಾರ್ಖಾನೆಗೆ ಹಣದ ಸಹಾಯವನ್ನು ಬೇಡಿರುತ್ತಾರೆ. ಆದಷ್ಟು ಬೇಗ ನಾವು ಮತ್ತೊಮ್ಮೆ ಈ ಕಾರ್ಖಾನೆಯ ಆಡಳಿತ ವರ್ಗದ ಮೇಲೆ ಕೇಸನ್ನು ಹಾಕಲು ವಿಚಾರ ಮಾಡುತ್ತಿದ್ದೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಅಧ್ಯಕ್ಷರೆ, ನಾನು ಮಂತ್ರಿಗಳಲ್ಲಿ ಕೇಳುವುದು ಏನು ಎಂದರೆ, ಮೈಸೂರು ನಗರದಲ್ಲಿ ಈ ರೀತಿಯಾದಂತಹ ರೋಗಗ್ರಸ್ಥ ಕಾರ್ಖಾನೆಗಳು ಒಂದಲ್ಲ. ಈಗ ಜೂನ್ ಐದು ತಾರೀಖು ಬಂದರೆ ಕೆ ಆರ್ ಮಿಲ್ಸ್ ಬೇಗ ಮುದ್ರೆ ಆಗಿ 13 ವರ್ಷ ಆಗಿತ್ತು. ಈಗತಾನೇ ಆರು ತಿಂಗಳ ಹಿಂದೆ ಅದರ ಬೇಗ ಮುದ್ರೆ ತೆರವು ಆಗಿದೆ. ಎಂ.ಎಂ.ಸಿ. ಕಾರ್ಖಾನೆಗೆ ಬೀಗಮುದ್ರೆ ಹಾಕಿ ಈಗಾಗಲೇ 8-9 ವರ್ಷಗಳಾದವು. ಅದೇ ರೀತಿ ಕೆ.ಬಿ.ಬಿ.ಸಿ. ಕಾರ್ಖಾನೆ ಸಹ 1993ರಲ್ಲಿ ಬೀಗಮುದ್ರೆಯಾಗಿದ್ದ ಈಗಾಗಲೇ ಮೂರು ವರ್ಷಗಳು ಕಳೆದುಹೋಗಿದೆ., ಈ ರೀತಿ ಬೀಗಮುದ್ರೆ ಹಾಕಿದರೆ ಅಲ್ಲಿ ಕೆಲಸ ಮಾಡುತ್ತಿದ್ದಂಥ ಕಾರ್ಮಿಕರುಗಳು ತಮ್ಮ ಹೆಂಡತಿ-ಮಕ್ಕಳೊಡನೆ ಹೇಗೆ ಜೀವನ ಸಾಗಿಸುತ್ತಾರೆ ಎಂಬುದು ಪ್ರಶ್ನೆ.

ಅಧ್ಯಕ್ಷರು : ಇದರ ಬಗ್ಗೆ ಇಡೀ ಕಾರ್ಮಿಕ ಇಲಾಖೆಯ ಕಾರ್ಯವೈಖರಿ ಕುರಿತು ಚರ್ಚಿಸಬೇಕಾಗುತ್ತದೆ. ಈಗ ಅದಕ್ಕೆ ಸಮಯವಿಲ್ಲದ್ದರಿಂದ ನನಗೂ ಆ ಬಗ್ಗೆ ಆಸಕ್ತಿ ಇದ್ದು ಇಲಾಖಾ ಬೇಡಿಕೆಗಳು ಚರ್ಚೆಗೆ ಬಂದಂಥ ಸಮಯದಲ್ಲಿ ಆಗ ತೆಗೆದುಕೊಳ್ಳೋಣ. ಈಗ ಕೆ.ಬಿ.ಬಿ.ಸಿ.ಗೆ. ಮಾತ್ರ ಕನ್‌ಫೈನ್ ಆಗಬೇಕು.

ಶ್ರೀ ಇ. ಮಾರುತಿರಾವ್ ಪವಾರ್ : ಬೀಗಮುದ್ರೆ ಹಾಕಿರುವ ಕಾರ್ಖಾನೆಗಳನ್ನು ತಕ್ಷಣ ತೆರೆಸಲು ಜಾಗ್ರತೆ ವಹಿಸಿ ಕಾರ್ಯಪ್ರವೃತ್ತರಾದರೆ ಕಾರ್ಮಿಕರಿಗೆ ತುಂಬಾ ಅನುಕೂಲವುಂಟಾಗುತ್ತದೆಂದು ತಮ್ಮ ಮುಖಾಂತರ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಕಾರ್ಮಿಕರ ಸಂಬಳ ಸುಮಾರು ಆರು ಕೋಟಿ ರೂಪಾಯಿಗಳಷ್ಟು ಬಾಕಿ ಇದ್ದು, ಇದನ್ನು ಕೊಡಿಸುವುದಕ್ಕೆ ಸರ್ಕಾರ ಮುಂಗಾದಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ದಿನಾಂಕ 24.3.1995 ರಂದು ಅಲ್ಲಿನ ಆಡಳಿತ ಮಂಡಳಿ ಜೊತೆ ಒಂದು ಒಪ್ಪಂದ ಮಾಡಿಕೊಂಡಿದ್ದು, ಅದರಲ್ಲಿ ಅವರು ಹೇಳಿಕೊಂಡಿದ್ದಾರೆ. ಅವರಿಗೆ ಬರಬೇಕಾದಂಥ ಸಂಬಳದ ಬಾಕಿ ಏನಿದೆ, ಅದನ್ನೆಲ್ಲಾ ಕೊಡುತ್ತೇವೆಂದು ನಮ್ಮ ಇಲಾಖಾ ವತಿಯಿಂದ ಒಂದು ಸಂಧಾನ ನಡೆದಂಥ ಸಮಯದಲ್ಲಿ ಅವರು ಹೇಳಿದರು. ಬಾಕಿ ಹಣ ಕೊಡದಿರುವ ಸನ್ನಿವೇಶದಲ್ಲಿ ಅವರ ಮೇಲೆ ನಾವು ಮೊಕದ್ದಮೆ ಹೂಡಲು ನಿರ್ಣಯ ತೆಗೆದುಕೊಳ್ಳುತ್ತಿದ್ದೇವೆ.

ಅಧ್ಯಕ್ಷರು : ಮೊಕದ್ದಮೆ ಹೂಡಿದ್ದೀರೋ?

ಶ್ರೀ ಸಿ. ಗುರುನಾಥ್ : ಮೊಕದ್ದಮೆ ಹೂಡುತ್ತಿದ್ದೇವೆ.

ಅಧ್ಯಕ್ಷರು : ಎಷ್ಟು ದಿವಸದಲ್ಲಿ ಮೊಕದ್ದಮೆ ಹೂಡುತ್ತೀರಿ?

ಶ್ರೀ ಸಿ. ಗುರುನಾಥ್ : ಸ್ವಲ್ಪ ದಿವಸದಲ್ಲೇ ಮೊಕದ್ದಮೆ ಹೂಡುತ್ತೇವೆ.

ಅಧ್ಯಕ್ಷರು : ಸ್ವಲ್ಪ ದಿವಸದಲ್ಲಿ ಅಂದರೆ ಎಷ್ಟು ದಿವಸದೊಳಗೆ ಮೊಕದ್ದಮೆ ಹೂಡುತ್ತೀರಿ?

ಶ್ರೀ ಸಿ. ಗುರುನಾಥ್ : ಇದಕ್ಕೆ ಕಾನೂನಿನ ರೀತ್ಯ ಒಂದು ನೋಟೀಸನ್ನು ಮೊದಲೇ ಕೊಡಬೇಕಾಗುತ್ತದೆ.

ಅಧ್ಯಕ್ಷರು : ನೋಟೀಸನ್ನು ಎಷ್ಟು ದಿವಸ ಮೊದಲು ಕೊಡಬೇಕು?

ಶ್ರೀ ಸಿ. ಗುರುನಾಥ್ : ಒಂದು ತಿಂಗಳೊಳಗೆ ಕೊಡಬೇಕು.

ಅಧ್ಯಕ್ಷರು : ಇನ್ನೆರಡು ತಿಂಗಳೊಳಗಾಗಿ ಪ್ರಕರಣವನ್ನು ಇತ್ಯರ್ಥಗೊಳಿಸಿ

ಶ್ರೀ ಸಿ. ಗುರುನಾಥ್ : ಇತ್ಯರ್ಥಗೊಳಿಸುತ್ತೇವೆ.

ಅಧ್ಯಕ್ಷರು : ಶ್ರೀ ಆರ್. ಕೃಷ್ಣಪ್ಪನವರು ಪ್ರತಿ ಸಲವೂ ಪ್ರಶ್ನೆ ಕಳುಹಿಸಿ ಅವರ ಪ್ರಶ್ನೆ ಬಂದಂಥ ಸಮಯದಲ್ಲಿ ಅವರು ಸದನದಲ್ಲಿರದೆ ಗೈರು ಹಾಜರಾಗುತ್ತಿದ್ದಾರೆಂದು ತಿಳಿಸುತ್ತಾ ಇನ್ನು ಮುಂದೆ ಇವರ ಪ್ರಶ್ನೆಗಳನ್ನು ಸದನದ ಮುಂದೆ ತರಕೂಡದೆಂದು, ಪ್ರಶ್ನೆಗಳನ್ನು ಸ್ವೀಕರಿಸಕೂಡದೆಂದು ಅಲ್ಲದೇ ಬ್ಯಾಲೆಟ್‌ನಲ್ಲಿ ಅವರ ಪ್ರಶ್ನೆ ಬಂದರೂ ಪರಿಗಣಿಸಕೂಡದೆಂದು ಆದೇಶಿಸುತ್ತೇನೆ.

ರಾಣೆಬನ್ನೂರು ತಾಲ್ಲೂಕಿನ ಬಸ್ ಅಭಾವ ನಿವಾರಣೆ.

132 - ಶ್ರೀ ವಿ.ಎಸ್. ಕರ್ಜಗಿ (ರಾಣೆಬೆನ್ನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿ ಬಸ್ಸಿನ ಅಭಾವವಿದ್ದು ಪ್ರಯಾಣಿಕರಿಗೆ ದಿನ ನಿತ್ಯ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಹೆಚ್ಚಿನ ಬಸ್ಸುಗಳನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೇ.

ಆ) ರಾಣೆಬೆನ್ನೂರು ನಗರವು ದಿನೇ ದಿನೇ ಬೆಳೆಯುತ್ತಿದ್ದು ಸಿಟಿ ಬಸ್ಸುಗಳನ್ನು ರಾಣೆ ಬೆನ್ನೂರಿನಿಂದ ಕುನ್ನೂರು ಪಟ್ಟಣಕ್ಕೆ ಹಾಗೂ ರಾಣೆಬೆನ್ನೂರಿನಿಂದ ಮೂಡಬೆನ್ನೂರವರೆಗೆ ಮಾಡಲು ಸಾಧ್ಯವಿದೆಯೇ ಹಾಗಿದ್ದಲ್ಲಿ ಯಾವಾಗ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಇಲ್ಲ

ಆ) ಇಲ್ಲ

ಶ್ರೀ ವಿ.ಎಸ್. ಕರಜಗಿ : ಮಾನ್ಯ ಅಧ್ಯಕ್ಷರೆ, ರಾಣೆಬೆನ್ನೂರು ತಾಲ್ಲೂಕು 103 ಗ್ರಾಮಗಳಿಂದ ಕೂಡಿದ್ದು, ಅತಿ ಹೆಚ್ಚಿನ ಜನಸಂಖ್ಯೆಯುಳ್ಳ ಗ್ರಾಮವಾಗಿದೆ. ಅಲ್ಲಿಗೆ ಬಸ್ಸಿನ ಸೌಕರ್ಯ ಒದಗಿಸಿದ್ದು, ಅನೇಕ ಬಸ್ಸುಗಳು ದುರಸ್ತಿಗೊಳಗಾಗಿರುತ್ತವೆ. ಇದರಿಂದ ಗ್ರಾಮೀಣ ಜನತೆಗೆ ತುಂಬಾ ತೊಂದರೆಯಾಗಿದ್ದು, ಅಲ್ಲಿ ಹೆಚ್ಚಿನ ಬಸ್ಸುಗಳ ಓಡಾಟದ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ನಾನು ಸಾರಿಗೆ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇವೆ, ಮತ್ತೆ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಎರಡು ಸ್ಪಿನ್ನಿಂಗ್ ಮಿಲ್ಲುಗಳಿದ್ದು ಜೊತೆಗ ಬಿರ್ಲಾ ಫ್ಯಾಕ್ಟರಿಯ. ಇರುವುದರಿಂದ ಅನೇಕ ಕಾರ್ಮಿಕರು ದಿನನಿತ್ಯ ಕಾರ್ಖಾನೆಗಳಿಗೆ ಹೋಗಿಬರಲು ಅನಾನುಕೂಲವುಂಟಾಗಿರುವುದರಿಂದ ಆಯಾ ಗ್ರಾಮೀಣ ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ಸಿಟಿ ಬಸ್ಸುಗಳನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ರಾಣೆಬೆನ್ನೂರು ತಾಲ್ಲೂಕು ಬಹಳ ದೊಡ್ಡ ತಾಲ್ಲೂಕಾಗಿದ್ದು, ಆ ತಾಲ್ಲೂಕಿಗೆ ತನ್ನದೇ ಆದ ಸಾರಿಗೆ ಘಟಕವಿಲ್ಲದ್ದರಿಂದ ಬೇರೆ ಘಟಕಳಿಂದ ಅಲ್ಲಿಗೆ ಬಸ್ಸುಗಳ ಬರುತ್ತಿವೆ. ಬೇರೆ ಘಟಕಗಳೆಂದರೆ ಹಿರೇಕೆರೂರು ಹಾವೇರಿ ಹಾಗೂ ದಾವಣಗೆರೆ ಮೊದಲಾದ ಘಟಕಗಳಿಂದ ಸುಮಾರು 59 ಬಸ್ಸುಗಳು ಈಗಾಗಲೇ ಚಲಿಸುತ್ತಿವೆ.

ಅಧ್ಯಕ್ಷರು : ಬೀಳಗಿಯರೆ, ನೀವೇನೂ ತಪ್ಪು ತಿಳಿದುಕೊಳ್ಳಬೇಡಿ. ನಿಮ್ಮ ಬಸ್ ಇಲಾಖಾ ಬರಬರುತ್ತಾ ರೈಲ್ವೆ ಇಲಾಖೆಯಾಗುತ್ತದೆ, ನೀವು ರೈಲು ಬಿಡುತ್ತಿದ್ದೀರಿ. ನಮ್ಮ ಊರಿನಲ್ಲೂ ಕೂಡ ಇದೇ ಸಮಸ್ಯೆಯಾಗಿದೆ. ಬಸ್ ಬಿಡಿ ಎಂದು ಕೇಳಿದರೆ ರೈಲು ಏಕೆ ಬಿಡುತ್ತಿದ್ದೀರಿ?

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಅದು ಒಪ್ಪಲೇಬೇಕಾದ ವಿಚಾರ. ಇದರಲ್ಲಿ ಸರ್ಕಾರದ ಭಿನ್ನಾಭಿಪ್ರಾಯ ಇಲ್ಲವೇ ಇಲ್ಲ, ಅದು ಬಳುವಳಿಯಾಗಿ ಬಂದಂಥ ಅವ್ಯವಸ್ಥೆ ಅದನ್ನು ಸರಿಪಡಿಸಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಅವರೊಬ್ಬರೇ ರೈಲು ಬಿಡುತ್ತಿಲ್ಲ, ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲರೂ ಈ ಸರ್ಕಾರದಲ್ಲಿ ರೈಲು ಬಿಡುತ್ತಿದ್ದಾರೆ.

ಅಧ್ಯಕ್ಷರು : ನಮ್ಮ ಜಿಲ್ಲೆಯಲ್ಲಿ ನೀವು ಶೇಕಡ 100 ರಷ್ಟು ರಾಷ್ಟ್ರೀಕರಣ ಗೊಳಿಸಿದ್ದೀರಿ. ನನ್ನ ಊರಿಗೆ ಸುಮಾರು ಒಂದು ವರ್ಷದಿಂದ ಬಸ್ ಸೌಕರ್ಯ ಕಲ್ಪಿಸಿಲ್ಲ. ಈ ಕುರಿತು ಮೊನ್ನೆ ಬೇಸರದಿಂದ ಮಾತನಾಡಿದಾಗ ಬಸ್ ಸೌಕರ್ಯ ಕಲ್ಪಿಸಿದರು. ಟೆಂಪೋನಲ್ಲಿ ಪ್ರಯಾಣಿಕರು ಪ್ರಯಾಣಿಸಬಾರದು, ವಾಹನದ ಮೇಲೆ ಪ್ರಯಾಣಿಕರು ಹತ್ತಬಾರದು, ಖಾಸಗಿ ಬಸ್ಸುಗಳಿಗೆ ಪರವಾಗಿ ಕೊಡುವ ಹಾಗಿಲ್ಲ, ನೀವು ಬಸ್ ಸೌಕರ್ಯ ಕಲ್ಪಿಸುವ ಹಾಗಿಲ್ಲ. ಇನ್ನೂ ನಮ್ಮ ಜನರಿಗೆ ಎತ್ತಿನಗಾಡಿ ಕೊಡಬೇಕಷ್ಟೆ! ಇದು ಬಹಳ ಬೇಸರದ ವಿಚಾರ. ಇದಕ್ಕೇನಾದರೂ ಪರಿಹಾರ ಕಂಡು ಹಿಡಿದು ಪರ್ಯಾಯ ವ್ಯವಸ್ಥೆ ಏನಾದರೂ ಮಾಡಿ ಉದಾರೀಕರಣ ಮಾಡಿ.

ಶ್ರೀ ಜಿ.ಬಿ. ಶಿವಕುಮಾರ್ : ಅಧ್ಯಕ್ಷರೆ, ತಾವು ನನ್ನ ರಕ್ಷಣೆಗೆ ಬಂದಿದ್ದಕ್ಕೆ ತಮಗೆ ತುಂಬಾ ಕೃತಜ್ಞತೆಗಳು.

ಅಧ್ಯಕ್ಷರು : ನಾನೂ ನಿಮ್ಮ ಹಾಗೆಯೇ ರಕ್ಷಣೆಗೆ ಬರದೆ ಇನ್ನೇನು ಮಾಡಲಿ.

ಶ್ರೀ ಜಿ.ಬಿ. ಶಿವಕುಮಾರ್ : ಗ್ರಾಮಾಂತರ ಪ್ರದೇಶದ ವ್ಯವಸ್ಥೆ ಹೇಳತೀರದು. ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ಒಂದು ಕಾಲು ವರ್ಷವಾದರೂ ಇನ್ನೂ ಗ್ರಾಮಾಂತರ ಪ್ರದೇಶಗಳಿಗೆ ಬಸ್ ಸೌಕರ್ಯ ಕಲ್ಪಿಸಿಲ್ಲ. ಗ್ರಾಮೀಣ ಜನರ ಪರಿಸ್ಥಿತಿ ತಿಳಿದುಕೊಂಡು ಸಾರಿಗೆ ಸೌಕರ್ಯ ಕಲ್ಪಿಸುವ ಬಗ್ಗೆ ಮನಸ್ಸು ಮಾಡಬೇಕು.

Establishment of cold Storages in the State

136 - Sri N. Suresh Kumar (Rajajinagar) : Will the Minster of State for Horticulture. be pleased to state.

A) *Is there any plan for establishing Cold Storage for fruit and Vegetables in the State? In which districrs it will be established and that is the expenditure involved?*

Sri D.T. Jayakumar (Minister of state for Horticulture) :

A) Yes. It is plenned to establish 3 cold storages in Bangalore diyision 3 cold storages in Mysore divicion, 10 cold storages and 4 per-cooling Units in Belgaum division and 4 cold storages and one pre-cooling unit in Gulbarga division. In all 20 Cold storages and 5 pre-cooling Units are planned to be established.

Total expenditure involved is Rs. 1329.40 lakhs. It is intended to raise funds from NCDC, NHE and the State Government.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 20 ಶೀತಲ ಗೃಹಗಳು ಮತ್ತು ಐದು ಫ್ರೀ ಕೂಲಿಂಗ್ ಘಟಕಗಳನ್ನು ನಿರ್ಮಿಸಲು ಯೋಚಿಸಲಾಗಿದೆಯೆಂದು ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸಿದ್ದಾರೆ. ನನ್ನ ಪ್ರಶ್ನೆಯೇನೆಂದರೆ ಈಗಾಗಲೇ ಬೆಂಗಳೂರು ಹಾಗೂ ಇತರೆಡೆಗಳಲ್ಲಿ ನಿರ್ಮಿಸಿರುವ ಶೈತ್ಯಾಗಾರಗಳೆಲ್ಲವೂ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕೋಲಾರ ಜಿಲ್ಲೆಯ ರೈತರು ತಾವು ಬೆಳೆದಂಥ ಆಲೂಗಡ್ಡೆ ಮತ್ತು ಈರುಳ್ಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿದಾಗ ನಿರ್ಮಿಸಿರುವ ಶೈತ್ಯಾಗಾರಗಳು ಯವುದೇ ರೀತಿಯ ಉಪಯೋಗಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬೆಂಗಳೂರು ಕೃಷಿಕ ಸಮಾಜಕ್ಕೆ ಹೊಂದಿಕೊಂಡಂತಿರುವ ಶೈತ್ಯಾಗಾರ ಪೂರ್ಣಗೊಂಡ ನಂತರ 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆ ಶೈತ್ಯಾಗಾರ ಎರಡು ಸಲ ದುರಸ್ತಿಗೊಳಗಾಯಿತು. ಆದರೂ ಕೂಡ ಮತ್ತೆ ಶಿಥಿಲಗೊಂಡು ಯಾವುದೇ ರೀತಿಯ ಉಪಯೋಗಕ್ಕೆ ಬಂದಿಲ್ಲ. 1990-91ರ ಲೆಕ್ಕ ಪರಿಶೋಧನಾ ವರದಿ ಪ್ರಕಾರ ಬಹಿರಂಗ ಟೆಂಡರ್ ಕರೆಯದೆ, ಕೊಟೇಶನ್ ಕರೆಯದೆ ಅಲ್ಲದೆ, ಗುತ್ತಿಗೆದಾರರಿಗೆ ಕೆಲಸ ಮುಗಿಸುವ ಮುಂಚೆಯೇ ಮುಂಗಡ ಹಣ ಕೊಟ್ಟು, ಈ ರೀತಿಯ ಕಳಪೆ ಕಾಮಗಾರಿ ನಿರ್ವಹಿಸಿದವರ ಮೇಲೆ ಸರ್ಕಾರ ಏನು ಕ್ರಮ ಕೈಗೊಳ್ಳಬೇಕೆಂದು ಯೋಚಿಸಿದೆ? ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗ ಪ್ರಸ್ತಾಪಿಸುತ್ತಿರುವ ಪ್ರಶ್ನೆ ಬೆರೆ ರೀತಿಯಾದಾಗಿದೆ. ಅದು ಕೇಳಿರುವ ಪ್ರಶ್ನೆಯೇನೆಂದರೆ ರಾಜ್ಯದಲ್ಲಿ ಹಣ್ಣು-ತರಕಾರಿಗಳನ್ನಿಡುವ ಶೈತ್ಯಾಗಾರವನ್ನು ಸ್ಥಾಪಿಸುವ ಯೋಜನೆಯೇನಾದರೂ ಇದೆಯೇ? ಇದ್ದರೆ, ಯಾವ್ಯಾವ ಜಿಲ್ಲೆಗಳಲ್ಲಿ ಸ್ಥಾಪಿಸುವ ಯೋಜನೆ ಇದೆ? ಮತ್ತು ಇದಕ್ಕೆ ತಗಲುವ ಖರ್ಚು ಎಷ್ಟು ಎಂದು. ಆದರೆ ಈಗ ನೀವು ಕೇಳುತ್ತಿರುವ ಪ್ರಶ್ನೆಯೇ ಬೇರೆಯಾದಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ನನ್ನ ಪ್ರಶ್ನೆಯೇನೆಂದರೆ ಈಗಾಗಲೇ ಅನೇಕ ಕಡೆಗಳಲ್ಲಿ ಶೈತ್ಯಾಗಾರಗಳನ್ನು ನಿರ್ಮಿಸಿ ಏನು ಕೈಸುಟ್ಟುಕೊಂಡಿದ್ದೀರಿ, ಇದರ ಅನುಭವದ ಆಧಾರದ ಮೇಲೆ ಮತ್ತೆ ಏಕೆ ಹೊಸದಾಗಿ ಶೈತ್ಯಾಗಾರಗಳನ್ನು ನಿರ್ಮಿಸುತ್ತಿದ್ದೀರಿ ಎಂಬುದು ಪ್ರಶ್ನೆ.

ಶ್ರೀ ಡಿ.ಟಿ. ಜಯಕುಮಾರ್ : ಈಗಾಗಲೇ ನಾವು ವಿಶೇಷವಾಗಿ ಸಮಗ್ರ ಯೋಜನೆಯನ್ನು ತಯಾರಿಸಿದ್ದು, ಸುಮಾರು ಅರವತ್ತಾರೂವರೆ ಕೋಟಿ ರೂಪಾಯಿಗಳ ಯೋಜನೆಯಲ್ಲಿ ತೋಟಗಾರಿಕೆ ಉತ್ಪನ್ನಗಳ ಪರಿಷ್ಕರಣೆ, ಸಂಸ್ಕರಣೆ ಸಂಗ್ರಹಣೆ

ಮುಂತಾದವುಗಳನ್ನೊಳಗೊಂಡಂತೆ ಇರುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಒಪ್ಪಿದೆ. ಅದೇ ರೀತಿ ನೂರು ಕೋಟಿ ರೂಪಾಯಿಗಳ ಒಂದು ಯೋಜನಾ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಈಗಾಗಲೇ 66 ಕೋಟಿಗೆ ಕೇಂದ್ರ ಸರ್ಕಾರ ಒಪ್ಪಿದೆ. ಅದರ ಪ್ರಕಾರ ನಾನು ಉತ್ತರ ಕೊಟ್ಟಿದ್ದೇವೆ. ಬೆಂಗಳೂರಿನ ಹಡ್ಸನ್ ವೃತ್ತದಲ್ಲಿ ನಿರ್ಮಿಸಿರುವ ಶೈತ್ಯಾಗಾರದ ಕುರಿತು ತಾವು ಹೇಳಿದಿರಿ. ನೀವು ಹೇಳುತ್ತಿರುವುದು ನಿಜ. ಸದರಿ ಶೈತ್ಯಾಗಾರವನ್ನು ಸರಿಯಾದಂಥ ರೀತಿಯಲ್ಲಿ ದುರಸ್ತಿ ಮಾಡಿಕೊಟ್ಟಿರುವುದಿಲ್ಲ, ಅಲ್ಲದೆ, ಮುಂಗಡವಾಗಿ ಹಣ ಕೊಟ್ಟಿರುವುದೂ ನಿಜ. ಆದರೆ, ಯಾವ ರೂಪದಲ್ಲಿ ಹಣ ಕೊಟ್ಟಿದ್ದಾರೆಂದು ಬಿಡಿಸಿ ಹೇಳಿರುವುದರಿಂದ ಆ ಕುರಿತು ಮಾಹಿತಿ ತರಿಸಿ ಪರಿಶೀಲಿಸಿ ಯಾರು ತಪ್ಪೆಸಗಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ತಯಾರಿದ್ದೇನೆ.

ಉಳ್ಳೂರು- ಮಚ್ಚಟ್ಟು ವ್ಯವಸಾಯ ಸಹಕಾರ ಸಂಘದ ಅವ್ಯವಹಾರ

191 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳೂರು ಮಚ್ಚಟ್ಟು ವ್ಯವಸಾಯ ಸೇವಾ ಸಹಕಾರ ನಾಮನಿರ್ದೇಶನ ಮಾಡಿದ ಸದಸ್ಯರನ್ನು ಹೊರಗಿಟ್ಟು ಆಡಳಿತ ಮಂಡಳಿಯ ಸಭೆಯನ್ನು ಕರೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಆಡಳಿತ ಮಂಡಳಿಯ ಸಭೆಯು ಅಕ್ರಮವಾಗಿ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಅಕ್ರಮವನ್ನು ಸರಿಪಡಿಸಲು ತನಿಖೆ ನಡೆಸಲು ಸರಕಾರ ಆದೇಶಿಸುವುದೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಸಂಘದ ಆಡಳಿತ ಮಂಡಳಿ ಸಭೆಗಳನ್ನು ಸರ್ಕಾರದ ನಾಮನಿರ್ದೇಶಿತ ಸದಸ್ಯರನ್ನೊಳಗೊಂಡು ನಡೆಸಲಾಗುತ್ತಿದೆ.

ಆ) ಸಂಘದ ಆಡಳಿತ ಮಂಡಳಿ ಸಭೆಗಳು ಅಕ್ರಮವಾಗಿ ನಡೆದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾನು ಉಪ ಪ್ರಶ್ನೆ ಕೇಳುವಂಥಾದ್ದು ಏನೂ ಇಲ್ಲ. ನಾನು ಕೇಳಿರುವ ಪ್ರಶ್ನೆಗಳಿಗೆಲ್ಲಾ 'ಇಲ್ಲ' ವೆಂದು ಉತ್ತರಿಸಿದ್ದಾರೆ. ಇದುವರೆವಿಗೂ ಕೂಡ ನನ್ನ ಪ್ರಶ್ನೆಗಳಿಗೆ ಇದೇ ರೀತಿ 'ಇಲ್ಲ' ವೆಂದು ಕೊಟ್ಟಿರುವ ಉತ್ತರಗಳನ್ನು ಸತತವಾಗಿ ನೋಡುತ್ತಿದ್ದೇನೆ. ನಿನ್ನೆಯೂ ಕೂಡ ಪ್ರಶ್ನೋತ್ತರ ಕಾಲದಲ್ಲಿ ಇಂತಹ ತಾಲ್ಲೂಕಿನಲ್ಲಿ ಇಂತಹ ಗ್ರಾಮದಲ್ಲಿ ಗ್ರಾನೈಟ್ ಲೂಟಿಯಾಗುತ್ತಿದೆಯೇ? ಎಂದು ಕೇಳಿದ್ದಕ್ಕೆ ಅದಕ್ಕೂ 'ಇಲ್ಲ'ವೆಂದು ಉತ್ತರ ಕೊಟ್ಟರು. ಇವೊತ್ತು ವ್ಯವಸಾಯ ಸೇವಾ ಸಹಕಾರ ಸಂಘದ ಕುರಿತು ಪ್ರಶ್ನೆಗಳನ್ನು ಕೇಳಿರುವುದಕ್ಕೆ ಅದೇ ರೀತಿಯ ಉತ್ತರಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವು ನಿಮ್ಮ ಜನ್ಮ ಕುಂಡಲಿಯನ್ನು ಸ್ವಲ್ಪ ಪರೀಕ್ಷೆ ಮಾಡಿಸಿ. ಏಕೋ ನೀವು ಕೇಳಿರುವ ಪ್ರಶ್ನೆಗಳಿಗೆಲ್ಲಾ ಉತ್ತರವಾಗಿ 'ಇಲ್ಲ'ವೆಂದು ಬರುತ್ತಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನನ್ನ ಪ್ರಶ್ನೆಯೇನೆಂದರೆ, ಉಳ್ಳೂರು-ಮಚಟ್ಟು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಸಹಕಾರ ನಾಮ ನಿರ್ದೇಶನ ಮಾಡಿದ ಸದಸ್ಯರನ್ನು ಹೊರಗಿಟ್ಟು ಆಡಳಿತ ಮಂಡಳಿಯ ಸಭೆಯನ್ನು ಕರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದಿದ್ದಕ್ಕೆ ಉತ್ತರವಾಗಿ 'ಸಂಘದ ಆಡಳಿತ ಮಂಡಳಿ ಸಭೆಗಳನ್ನು ಸರ್ಕಾರದ ನಾಮ ನಿರ್ದೇಶಿತ ಸದಸ್ಯರನ್ನೊಳಗೊಂಡು ನಡೆಸಲಾಗುತ್ತಿದೆ' ಎಂದಿದ್ದಾರೆ. ಆ ಸಂಘದ ಸದಸ್ಯರು ಹೇಳಿದ್ದಾರೆ. ನಮಗೆ 26.11.1995 ರಂದು ನೋಟೀಸ್ ಬಂದಿದ್ದು, ಅದರಲ್ಲಿ ಯಾವ ದಿನಾಂಕದ ಸಮಯಕ್ಕೆ ಸಭೆ ಕರೆಯಲಾಗಿದೆಯೆಂದು ನಮೂದಿಸಿರುವುದಿಲ್ಲವೆನ್ನುವ ವಿಚಾರ ಹೇಳಿದ್ದಾರೆ. ಇದರ ಜೊತೆಗೆ 13.1.1996ರಂದುಸಭೆ ಕರೆಯದೆ, ಸಭೆ ಕರೆದಿದೆ ಎನ್ನತಕ್ಕ ದಾಖಲಾತಿಗಳೊಂದಿಗೆ ಸಭೆ ನಡೆಸಲಾಗಿದೆ.ಆದರೂ ಇದು ಬಹಳ ಸಮರ್ಪಕವಾಗಿದೆಯೆಂದು ಸಚಿವರು ಉತ್ತರ ಕೊಟ್ಟಿದ್ದಾರೆ. ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಇಬ್ಬರು ಕಾರ್ಯದರ್ಶಿಗಳಿದ್ದು, ಅವರ ಕೋಣೆಗೆ ಬೀಗ ಹಾಕಿದ್ದು, ಇಷ್ಟೆಲ್ಲಾ ಆಗಿದ್ದರೂ ಸರಿಯಾಗಿದೆ, ಸಮರ್ಪಕವಾಗಿದೆಯೆಂಬ ಉತ್ತರವನ್ನು ಕೊಡುವುದಾದರೆ ನಾನು ಪ್ರಶ್ನೆ ಕೇಳುವಂಥ ಔಚಿತ್ಯವಾದರೂ ಏನು?

ಶ್ರೀಮತಿ ಲೀಲಾದೇವಿ ವಿ.ಆರ್. ಪ್ರಸಾದ್ (ಸಹಕಾರ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ನಾಮ ನಿರ್ದೇಶನ ಹೊಂದಿರತಕ್ಕ ಎಲ್ಲಾ ಸದಸ್ಯರು 4-5 ಸಭೆಗಳಿಗೆ ಹಾಜರಾಗಿದ್ದು, ದಿನಾಂಕ 13.1.96ರಂದು ನಡೆಸಿದ ಸಭೆಗೆ ಮುಂಚಿತವಾಗಿ ನೋಟೀಸ್ ಕೊಡದಿರುವುದರಿಂದ ಅವರು ಹಾಜರಾಗಿರುವುದಿಲ್ಲ. ಇದರ ಬಗ್ಗೆ ಈಗಾಗಲೇ ಇಲಾಖೆಯವರು ಆದೇಶ ಕೊಟ್ಟು ತನಿಖೆ ನಡೆಸಲಾಗುತ್ತಿದ್ದು, ಉಳಿದ ಎಲ್ಲಾ ಸಭೆಗಳಿಗೂ ನಾಮ ನಿರ್ದೇಶನ ಹೊಂದಿರುವ ಸದಸ್ಯರುಗಳು ಹಾಜರಾಗಿದ್ದಾರೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಈ ರೀತಿ ಆಪಾದನೆ ಮಾಡುತ್ತಿರುವುದು ನಾನಲ್ಲ. ನಾನು ಆ ವ್ಯವಸಾಯ ಸೇವಾ ಸಹಕಾರ ಸಂಘದ ಸದಸ್ಯನಲ್ಲ. ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಾಮ ನಿರ್ದೇಶನ ಹೊಂದಿದ ಸದಸ್ಯರನ್ನಾಗಿ ಆಯ್ಕೆ ಮಾಡಿದ್ದರೂ ಅವರು ಒದಗಿಸಿರುವ ಮಾಹಿತಿಯ ಆಧಾರದ ಮೇಲೆ ನಾನು ಈ ಪ್ರಶ್ನೆ ಕೇಳುತ್ತಿದ್ದೇನೆ. ಈಗ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಾಮ ನಿರ್ದೇಶನ ಹೊಂದಿರುವ ಸದಸ್ಯರನ್ನಾಗಿ ಏನು ಆಯ್ಕೆ ಮಾಡಿದ್ದೀರಿ, ಅವರ ಮಾತನ್ನು ನೀವು ನಂಬುತ್ತೀರಿ, ನಾನೂ ನಂಬಬೇಕಾಗುತ್ತದೆ. ಆದರೆ, ಮಾನ್ಯ ಸಚಿವರು ಅಂಕಿ-ಸಂಖ್ಯೆ ಇಟ್ಟುಕೊಂಡು ಉತ್ತರಿಸುತ್ತಿದ್ದಾರೆ.

ಶ್ರೀಮತಿ ಲೀಲಾದೇವಿ ವಿ.ಆರ್. ಪ್ರಸಾದ್ : ಈಗಾಗಲೇ ನಡೆಸಲಾಗಿರುವ 5-6 ಸಭೆಗಳಿಗೆ ಎಲ್ಲಾ ಸದಸ್ಯರೂ ಹಾಜರಾಗಿದ್ದಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರ ಪ್ರಶ್ನೆಯೇನೆಂದರೆ, ನೀವೇ ನಾಮಕರಣ ಮಾಡಿರುವಂಥ ನಿರ್ದೇಶಕರುಗಳು ಹೇಳಿರುವ ಆಧಾರದ ಮೇಲೆ ಆ ಸಂಬಂಧವಾದ ದೂರು ಕೊಟ್ಟಿದ್ದಾರೆ. ಇಲ್ಲದಿದ್ದರೆ ನನಗೇನು ಕಾರಣವಿರುತ್ತದೆ, ಅಲ್ಲದೆ, ನಾನು ಆ ಸಹಕಾರ ಸಂಘದ ಸದಸ್ಯನೂ ಅಲ್ಲವೆಂದು ಹೇಳುತ್ತಿದ್ದಾರೆ. ಅಧಿಕಾರಿಗಳು ತಮಗೆ ಉತ್ತರ ಕೊಡುವಾಗ ಕೆಲವು ಸಲ ಈ ರೀತಿ ಮಾಡುವುದು ಸಾಧ್ಯವಿದೆಯಾದ್ದರಿಂದ ದಯಮಾಡಿ ಪರಿಶೀಲಿಸಿ. They you come back to the House.

ಶ್ರೀಮತಿ ಲೀಲಾದೇವಿ ವಿ.ಆರ್. ಪ್ರಸಾದ್ : ಇದರ ಬಗ್ಗೆ ಪುನಃ ಪರಿಶೀಲಿಸಿ ತಮಗೆ ತಿಳಿಸುತ್ತೇನೆ.

ಅಧ್ಯಕ್ಷರು : ಅವರು ಹೇಳಿರತಕ್ಕಂಥಾದ್ದು ನಿಜವಾದರೆ ನೀವು ಆ ಸದಸ್ಯರಿಗೆ ಸುದ್ಧಿ ಕೊಟ್ಟು ಅವರನ್ನು ಕರೆಸಿಕೊಳ್ಳಿ. ಆ ವಿಷಯ ನಿಜವಾಗಿದ್ದರೆ ಯಾರು ನಿಮಗೆ

ಸರಿಯಾಗಿರದ ಮಾಹಿತಿ ಕೊಟ್ಟಿದ್ದಾರೋ You keep those Officers under suspension so that they do not respect.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ತಾವು ಸ್ವಲ್ಪ ಮುಂದೂಡಿ....

Mr. SPEAKER : We found a solution itself.

10.50 ಎ.ಎಂ

ಅಧ್ಯಕ್ಷರು : ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ. ಮಂಜುನಾಥ್(ಉನ್ನತ ಶಿಕ್ಷಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 23ನೇ ಫೆಬ್ರವರಿ 1996ರ ಲಿಖಿತ ಮೂಲಕ ಉತ್ತರಿಸುವ ಐವತ್ತಾರು ಪ್ರಶ್ನೆಗಳ ಪೈಕಿ ಇಪ್ಪತ್ತೆಂಟು ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ರಾಜ್ಯದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ ಡಿವಿಜನ್‌ಗಳು

462 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಬಸ್ಸು ಡಿವಿಜನ್‌ಗಳಿವೆ (ಜಿಲ್ಲಾವಾರು ಡಿವಿಜನ್‌ಗಳ ವಿವರ ನೀಡುವುದು)

ಆ) ಡಿವಿಜನ್‌ವಾರು ಓಡುತ್ತಿರುವ ಬಸ್ಸುಗಳೆಷ್ಟು? ಅವುಗಳಲ್ಲಿ ದುರಸ್ತಿಗೆ ಬಂದಿರುವ ಬಸ್ಸುಗಳು ಎಷ್ಟು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಕ.ರಾ.ರ. ಸಂಖ್ಯೆಯಲ್ಲಿ 19 ವಿಭಾಗಗಳಿವೆ. ಅವುಗಳ ವಿವರ ಪಟ್ಟಿ 'ಅ'ರಲ್ಲಿ ನಮೂದಿಸಿದೆ.

ಆ) ವಿಭಾಗವಾರು ವಾಹನಗಳ ಸ್ಥಿತಿ ಮತ್ತು ವಾಹನಗಳ ನಿಲುಗಡೆಯ ವಿವರ ಪಟ್ಟಿ 'ಅ'ನಲ್ಲಿ ನಮೂದಿಸಿದೆ.

ಪಟ್ಟಿ-'ಅ'

ಕ್ರಮ ಸಂಖ್ಯೆ	ವಿಭಾಗ	ಒಟ್ಟಾರೆ ಬಲ	ಒಟ್ಟಾರೆ ನಿಲುಗಡೆ ವಾಹನಗಳು
1.	ಬೆಂಗಳೂರು (ಕೇಂದ್ರ)	554	72
2.	ಬೆಂಗಳೂರು (ಗ್ರಾ)	332	28
3.	ಕೋಲಾರ	538	29
4.	ಮೈಸೂರು	742	24
5.	ಹಾಸನ	550	28

6.	ಮಂಗಳೂರು	462	47
7.	ಹುಬ್ಬಳ್ಳಿ	647	21
8.	ಗದಗ	369	20
9.	ದಾವಣಗೆರೆ	327	25
10.	ಉತ್ತರ ಕನ್ನಡ	451	32
11.	ಬೆಳಗಾವಿ	813	27
12.	ಬಿಜಾಪುರ	489	26
13.	ಬಾಗಲಕೋಟೆ	374	19
14.	ಗುಲ್ಬರ್ಗಾ	430	11
15.	ಬೀದರ್	313	21
16.	ರಾಯಚೂರು	443	43
17.	ಬಳ್ಳಾರಿ	414	32
18.	ಬೆನಸಾ (ದ)	1003	37
19.	ಬೆನಸಾ (ಉ)	881	43
	ಒಟ್ಟು	10132	585

ಹುಬ್ಬಳ್ಳಿಯಲ್ಲಿ ನೂತನ ಬಸ್ ನಿಲ್ದಾಣ

463 - ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿ ನೂತನ ಬಸ್ ನಿಲ್ದಾಣದ ಕಾರ್ಯ ಈಗ ಯಾವ ಹಂತದಲ್ಲಿದೆ ಹಾಗೂ ಎಷ್ಟು ವರ್ಷಗಳಲ್ಲಿ ಬಸ್ ನಿಲ್ದಾಣ (ಕೇಂದ್ರ) ಸ್ಥಳಾಂತರಿಸುವ ಕಾರ್ಯ ಮುಗಿಯುತ್ತದೆ?

ಆ) ಈ ಬೃಹತ್ ಕೇಂದ್ರ ಬಸ್ ನಿಲ್ದಾಣದ ನೀಲಿ ನಕ್ಷೆಯನ್ನು ಪ್ರಸಿದ್ಧಿಸಲು ಸಾಧ್ಯವೆ, ಸಾಧ್ಯವಿದ್ದಲ್ಲಿ ಎಷ್ಟು ಕಾಲಾವಧಿಯಲ್ಲಿ ನೀಲಿ ನಕ್ಷೆಯನ್ನು ನಿಗದಿಪಡಿಸಿದ ಜಾಗೆಯಲ್ಲಿ ಸಾರ್ವಜನಿಕರ ವೀಕ್ಷಣೆಗಾಗಿ ಹಾಕಲಾಗುವುದು?

ಇ) ಹಳೇಹುಬ್ಬಳ್ಳಿ ಸುತ್ತಮುತ್ತ ಬಡಾವಣೆಗಳು ಬೆಳೆಯುತ್ತಿರುವುದರಿಂದ ಸಿಬಿಟಿ ತಂಗುದಾಣದಂತೆ ಇಲ್ಲಿಯೂ ಒಂದು ಬಸ್ ನಿಲ್ದಾಣ ಮಾಡಲು ಸಾಧ್ಯವೆ, ಸಾಧ್ಯವಿದ್ದಲ್ಲಿ ಎಷ್ಟು ವರ್ಷಗಳಲ್ಲಿ ಮುಗಿಸಲಾಗುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಹುಬ್ಬಳ್ಳಿ ಗೋಕುಲ ರಸ್ತೆಯಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಕೆಲಸಕ್ಕೆ ಗುತ್ತಿಗೆದಾರರನ್ನು ನೇಮಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಎರಡು ವರ್ಷಗಳ ಕಾಲಾವಧಿಯಲ್ಲಿ ಬಸ್ ನಿಲ್ದಾಣ ಕಾರ್ಯ ಪೂರ್ಣಗೊಳಿಸಿ ಸ್ಥಳಾಂತರಿಸಲು ಯೋಜಿಸಲಾಗಿದೆ.

ಆ) ನೀಲಿ ನಕ್ಷೆಯನ್ನು ಪ್ರದರ್ಶಿಸಲು ಸಾಧ್ಯವಿದೆ. ಕಟ್ಟಡ ನಿರ್ಮಾಣ ಪ್ರಾರಂಭಿಸುವ ವೇಳೆ ನಿರ್ಮಾಣದ ನಿವೇಶನದಲ್ಲಿ ಸಾರ್ವಜನಿಕರ ವೀಕ್ಷಣೆಗಾಗಿ ನಕ್ಷೆಯನ್ನು ಪ್ರದರ್ಶಿಸಲು ಯೋಜಿಸಲಾಗಿದೆ.

ಇ) ಹಳೇಹುಬ್ಬಳ್ಳಿ ಭಾಗದಲ್ಲಿ ಸಿಬಿಟಿ ಮಾದರಿಯಲ್ಲಿ ಬಸ್ ಸ್ಟ್ಯಾಂಡ್ ಕಟ್ಟಲು ಅವಶ್ಯವಿರುವ ಸ್ಥಳ ಲಭ್ಯವಾದಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ಮಾಗಡಿ ತಾಲ್ಲೂಕಿನಲ್ಲಿ ಖಾಸಗೀ ಬಸ್ ಮಾಲೀಕರುಗಳ ಉಪಟಳ

449 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕು ಖಾಸಗಿ ಬಸ್ಸುಗಳ ಮಾಲೀಕರು ಮತ್ತು ಏಜೆಂಟರುಗಳು ತಮ್ಮ ಧೂರ್ತ ಪ್ರದರ್ಶನಗಳನ್ನು ಅಮಾಯಕ ಪ್ರಯಾಣಿಕರ ಮೇಲೆ ಬೀರುತ್ತ ಬಸ್‌ಗಳನ್ನು ನಿಲ್ಲಿಸಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಮಾಗಡಿ ತಾಲ್ಲೂಕಿನ ರಸ್ತೆ ಮಾರ್ಗಗಳನ್ನು ರಾಷ್ಟ್ರೀಕರಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಈ) ಇದ್ದರೆ ಈ ಕ್ರಮವನ್ನು ಯಾವಾಗಿನಿಂದ ಅನುಷ್ಠಾನಕ್ಕೆ ತರಲಾಗುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಮುಜರಾಯಿ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳು

447 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಜರಾಯಿ ಇಲಾಖೆಯ ಅಧೀನದಲ್ಲಿ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು ಪ್ರಾಮುಖ್ಯ ಪಡೆದ ದೇವಸ್ಥಾನಗಳಾವುವು ಅವುಗಳಹೆಸರು ತಿಳಿಸುವುದು)

ಆ) ಮುಜರಾಯಿ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸುವ ಅರ್ಚಕರುಗಳ ನೇಮಕ ಮಾಡಲು ಅನುಸರಿಸುವ ನಿಯಮಗಳೇನು? ಹಾಗೂ ಇವರಿಗೆ ನೀಡುವ ಸಂಬಳದ ಮೊತ್ತವೆಷ್ಟು?

ಇ) ಅರ್ಚಕರ ಸಂಬಳದಿಂದ ಸರ್ಕಾರಕ್ಕೆ ತಗಲುವ ವೆಚ್ಚ ಎಷ್ಟು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 43217 ಧಾರ್ಮಿಕ ಸಂಸ್ಥೆಗಳಿವೆ.

(ಜಿಲ್ಲಾವಾರು ಮತ್ತು ಪ್ರಾಮುಖ್ಯ ಪಡೆದ ದೇವಾಲಯಗಳ ವಿವರವನ್ನು ಅನುಬಂಧ 'ಎ' ಮತ್ತು 'ಬಿ'ಗಳಲ್ಲಿ ನೋಡಬಹುದು)

ಆ) ಹೆಚ್ಚಿನ ಮುಜರಾಯಿ ದೇವಾಲಯಗಳಲ್ಲಿ ಅರ್ಚಕರ ಹುದ್ದೆಯು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಬಂದಿರುತ್ತದೆ. ಮತ್ತು ಈ ದೇವಾಲಯದ ಆಗಮ

ಸಂಪ್ರದಾಯಕ್ಕೆ ಅನುಗುಣವಾಗಿ ಆಗಮ 'ಪ್ರವರ' ಪರೀಕ್ಷೆ ಪಾಸಾಗಿರಬೇಕು ಆಯಾ ದೇವಾಲಯದ ಆದಾಯಕ್ಕೆ ಅನುಗುಣವಾಗಿ ಅರ್ಚಕರಿಗೆ ಸಂಬಳ ನೀಡುವುದರಿಂದ ಪ್ರತಿಯೊಂದು ದೇವಾಲಯದ ಅರ್ಚಕರ ಸಂಬಳವೂ ಬೇರೆ ಬೇರೆಯಾಗಿರುತ್ತದೆ.

ಇ) ಅರ್ಚಕರಿಗೆ ಸಂಬಳವನ್ನು ದೇವಾಲಯದ ನಿಧಿಯಿಂದಲೇ ಪಾವತಿಸುವುದರಿಂದ ಸರ್ಕಾರಕ್ಕೆ ಯಾವುದೇ ವೆಚ್ಚ ಬರುವುದಿಲ್ಲ.

ಜಿಲ್ಲಾವಾರು ಪ್ರಮುಖ ದೇವಾಲಯಗಳ ಹೆಸರು

1) ಬೆಂಗಳೂರು ಜಿಲ್ಲೆ (ನಗರ)

(1) ಶ್ರೀ ಬನಶಂಕರಿ ದೇವಸ್ಥಾನ, ಕನಕಪುರ ರಸ್ತೆ, ಬೆಂಗಳೂರು

(2) ಶ್ರೀ ಮಹಾಗಣಪತಿ ದೇವಸ್ಥಾನ, ಮಲ್ಲೇಶ್ವರಂ

(3) ಶ್ರೀ ವೆಂಕಟರಮಣ ದೇವಸ್ಥಾನ, ಕೋಟೆ, ಬೆಂಗಳೂರು

(4) ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನ, ನಗರ್ತರಪೇಟೆ ಬೆಂಗಳೂರು

(5) ಶ್ರೀ ದೊಡ್ಡ ಬಸವಣ್ಣ ದೇವಸ್ಥಾನ, ಬಸವನಗುಡಿ

(6) ಶ್ರೀಕಾಡು ಮಲ್ಲೇಶ್ವರ ದೇವಸ್ಥಾನ, ಮಲ್ಲೇಶ್ವರಂ

(7) ಶ್ರೀ ಗವಿಗಂಗಾಧರ ಸ್ವಾಮಿ ದೇವಸ್ಥಾನ, ಗವೀಪುರಂ

(8) ಶ್ರೀದೊಡ್ಡ ಗಣಪತಿ ದೇವಸ್ಥಾನ, ಬಸವನಗುಡಿ

(2) ಬೆಂಗಳೂರು ಗ್ರಾಮಾಂತರ ಜಿಲ್ಲೆ

(1) ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಘಾಟಿ ದೊಡ್ಡ ಬಳ್ಳಾಪುರ ತಾ.

(2) ಶ್ರೀ ರಂಗನಾಥ ಸ್ವಾಮಿ ದೇವಸ್ಥಾನ, ಮಾಗಡಿ

(3) ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನ, ಮಾಗಡಿ

(4) ಶ್ರೀ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ, ಶಿವಗಂಗೆ, ನೆಲಮಂಗಲ ತಾ.

(5) ಶ್ರೀ ರೇವಣ ಸಿದ್ದೇಶ್ವರ ದೇವಸ್ಥಾನ, ರಾಮನಗರ ತಾಲ್ಲೂಕು

3) ಮೈಸೂರು ಜಿಲ್ಲೆ

(1) ಶ್ರೀ ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

(2) ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ ಹಾಗೂ ಅರಮನೆ ಮುಜರಾಯಿ ಸಂಸ್ಥೆಗಳು, ಮೈಸೂರು

(3) ಶ್ರೀಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ, ಮಲೆ ಮಹದೇಶ್ವರ ಬೆಟ್ಟ, ಕೊಳ್ಳೇಗಾಲ ತಾ.

(4) ಶ್ರೀ ಬಿಳಿಗಿರಿ ರಂಗನಾಥ ಸ್ವಾಮಿ ದೇವಸ್ಥಾನ, ಬಿ.ಆರ್. ಯಳಂದೂರು ತಾ.

(5) ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ, ಚಾಮರಾಜನಗರ

(6) ಶ್ರೀ ವೈದ್ಯೇಶ್ವರ ಮತ್ತು ಸಮೂಹ ದೇವಾಲಯಗಳು, ತಲಕಾಡು, ಟಿ. ನರಸೀಪುರ ತಾ.

4) ಮಂಡ್ಯ ಜಿಲ್ಲೆ

(1) ಶ್ರೀ ಚೆಲುವನಾರಾಯಣ ಮತ್ತು ಯೋಗನರಸಿಂಹ ಸ್ವಾಮಿ ದೇವಾಲಯ, ಮೇಲುಕೋಟೆ

(2) ಶ್ರೀ ರಂಗನಾಥ ಸ್ವಾಮಿ ದೇವಸ್ಥಾನ, ಶ್ರೀರಂಗಪಟ್ಟಣ
(3) ಶ್ರೀ ಲಕ್ಷ್ಮೀಜನಾರ್ಧನ ಸ್ವಾಮಿ ದೇವಸ್ಥಾನ ಮಂಡ್ಯ.

5) **ಕೋಲಾರ ಜಿಲ್ಲೆ**

(1) ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಮುಳುಬಾಗಿಲು
(2) ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನ, ಚಿಕ್ಕತಿರುಪತಿ, ಮಾಲೂರು ತಾ.
(3) ಶ್ರೀಗುಟ್ಟಳ್ಳಿ ವೆಂಕಟರಮಣ ಸ್ವಾಮಿ ದೇವಸ್ಥಾನ, ಬಂಗಾರು ತಿರುಪತಿ, ಬಂಗಾರು ಪೇಟೆ ತಾ.
(4) ಶ್ರೀಯರ ನಾರಾಯಣ ಸ್ವಾಮಿ ದೇವಸ್ಥಾನ, ಕೈವಾರ ಚಿಂತಾಮಣಿ ತಾ.
(5) ಶ್ರೀ ಅಶ್ವತ್ಥ ನಾರಾಯಣ ಸ್ವಾಮಿ ದೇವಸ್ಥಾನ, ವಿದುರಾಶ್ವತ್ಥ

6) **ತುಮಕೂರು ಜಿಲ್ಲೆ**

(1) ಶ್ರೀ ಯಡಿಯೂರು ಸಿದ್ಧಲಿಂಗೇಶ್ವರ ದೇವಸ್ಥಾನ, ಕುಣಿಗಲ್ ತಾಲ್ಲೂಕು
(2) ಶ್ರೀ ಚನ್ನಬಸವೇಶ್ವರ ದೇವಸ್ಥಾನ, ಗುಬ್ಬಿ
(3) ಶ್ರೀ ಸಿದ್ಧರಾಮೇಶ್ವರ ದೇವಸ್ಥಾನ, ಯಳನಾಡು, ಚಿಕ್ಕನಾಯಕನಹಳ್ಳಿ ತಾಲ್ಲೂಕು

7) **ಹಾಸನ ಜಿಲ್ಲೆ**

(1) ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನ, ಬೇಲೂರು
(2) ಶ್ರೀ ಹೊಯ್ಸಳೇಶ್ವರ ದೇವಸ್ಥಾನ, ಹಳೇಬೀಡು
(3) ಶ್ರೀದಿಗಂಬರ ಜೈನ ಮುಜರಾಯಿ ದೇವಾಲಯಗಳು, ಶ್ರವಣಬೆಳಗೊಳ

8) **ಶಿವಮೊಗ್ಗ ಜಿಲ್ಲೆ**

(1) ಶ್ರೀ ರೇಣುಕಾಂಬ ದೇವಸ್ಥಾನ, ಚಂದ್ರಗುತ್ತಿ, ಸೊರಬರ ತಾಲ್ಲೂಕು

9) **ಚಿತ್ರದುರ್ಗ ಜಿಲ್ಲೆ**

(1) ಶ್ರೀ ಗುರುತಿಪ್ಪೇರುದ್ರಸ್ವಾಮಿ ದೇವಸ್ಥಾನ, ನಾಯಕನಹಟ್ಟಿ, ಚಳ್ಳಕೆರೆ ತಾಲ್ಲೂಕು
(2) ಶ್ರೀಹಾಲು ರಾಮೇಶ್ವರ ದೇವಸ್ಥಾನ, ಹೊಳಲ್ಕೆರೆ
(3) ಶ್ರೀ ಹರಿಹರೇಶ್ವರ ದೇವಸ್ಥಾನ, ಹರಿಹರ

10) **ಚಿಕ್ಕಮಗಳೂರು ಜಿಲ್ಲೆ**

(1) ಶ್ರೀ ಕಳಸೇಶ್ವರ ದೇವಸ್ಥಾನ, ಕಳಸ
(2) ಶ್ರೀ ಋಷ್ಯಾ ಶೃಂಗೇಶ್ವರ ದೇವಸ್ಥಾನ, ಕಿಗ್ಗಾ
(3) ಶ್ರೀ ದತ್ತಾತ್ರೇಯ ಪೀಠ ಬಾಬಾ ಬುಡನ್‌ಗಿರಿ ನಗರ, ಬಾಬಾಬುಡನ್ ಗಿರಿ

11) **ಕೊಡಗು**

(1) ಶ್ರೀ ಓಂಕಾರೇಶ್ವರ ದೇವಸ್ಥಾನ, ಮಡಿಕೇರಿ

12) **ದಕ್ಷಿಣ ಕನ್ನಡ ಜಿಲ್ಲೆ**

(1) ಶ್ರೀ ಮಂಜುನಾಥ ದೇವಸ್ಥಾನ, ಕದ್ರಿ ಮಂಗಳೂರು
(2) ಶ್ರೀ ಗೋಕರ್ಣನಾಥ ದೇವಸ್ಥಾನ, ಕುದ್ರೋಳಿ ಮಂಗಳೂರು
(3) ಶ್ರೀ ಬಪ್ಪನಾಡು ದುರ್ಗಾ ಪರಮೇಶ್ವರಿ ದೇವಸ್ಥಾನ, ಮುಲ್ಕಿ

(4) ಶ್ರೀ ಶಾವು ಮಹಾಗಣಪತಿ ದೇವಸ್ಥಾನ, ಮಂಗಳೂರು
(5) ಶ್ರೀ ಬ್ರಹ್ಮ ಬೈದರ್ಕಳಗರಡಿ (ದೇವಾಲಯ) ಕಂಕನಾಡಿ, ಮಂಗಳೂರು
(6) ಶ್ರೀ ಅನಂತ ಪದ್ಮನಾಭ ದೇವಸ್ಥಾನ, ಕುಡುಪು
(7) ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಕಟೀಲು
(8) ಶ್ರೀ ಮಂಗಳಾದೇವಿ ದೇವಸ್ಥಾನ, ಬೋಳಾ ಮಂಗಳೂರು
(9) ಶ್ರೀ ಅನಂತೇಶ್ವರ ಚಂದ್ರ ಮೌಳೀಶ್ವರ ದೇವಸ್ಥಾನ ಉಡುಪಿ
(10) ಶ್ರೀ ಕೃಷ್ಣ ದೇವಸ್ಥಾನ, ಉಡುಪಿ
(11) ಶ್ರೀ ಜನಾರ್ಧನ ಮಹಾಕಾಳಿ ದೇವಸ್ಥಾನ, ಅಂಬಲಪಾಡಿ ಉಡುಪಿ
(12) ಶ್ರೀ ಹೊಸಮಾರಿಗುಡಿ ದೇವಾಲಯ, ಕಾಪು, ಉಡುಪಿ
(13) ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪಡುಬಿದ್ರಿ ಉಡುಪಿ ತಾಲ್ಲೂಕು
(14) ಶ್ರೀ ವೀರಭದ್ರ ದೇವಸ್ಥಾನ ಯಡಕ ಉಡುಪಿ ತಾ.
(15) ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಮಂದರ್ತಿ ಉಡುಪಿ ತಾ.
(16) ಶ್ರೀ ಅನಂತ ಪದ್ಮನಾಭ ದೇವಸ್ಥಾನ, ಪೆರ್ಡೂರು ಉಡುಪಿ ತಾ.
(17) ಶ್ರೀ ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು ಕುಂದಾಪುರ ತಾ.
(18) ಶ್ರೀ ಆನೆಗುಡ್ಡೆ ವಿನಾಯಕ ದೇವಸ್ಥಾನ, ಕುಂಭಾಶಿ, ಕುಂದಾಪುರ ತಾ.
(19) ಶ್ರೀ ಕುಂದೇಶ್ವರ ದೇವಸ್ಥಾನ, ಕುಂದಾಪುರ
(20) ಶ್ರೀ ಮೂಕಾಂಬಿಕಾ ದೇವಸ್ಥಾನ, ಬ್ರಹ್ಮಲಿಂಗೇಶ್ವರ ದೇವಸ್ಥಾನ, ಚಿತ್ತೂರು, ಕುಂದಾಪುರ
(21) ಶ್ರೀ ಬ್ರಾಂಹಿ ದುರ್ಗಾ ಪರಮೇಶ್ವರಿ ದೇವಸ್ಥಾನ, ಕಮಲಶಿಲೆ
(22) ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಪೊಳಲಿ ಬಂಟ್ವಾಳ ತಾಲ್ಲೂಕು
(23) ಶ್ರೀಕಾರಿಂಜೇಶ್ವರಿ ದೇವಸ್ಥಾನ, ಕಾರಂಜಿ ಬಂಟ್ವಾಳ ತಾಲ್ಲೂಕು
(24) ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪುತ್ತೂರು
(25) ಶ್ರೀ ಸಹಸ್ರಲಿಂಗೇಶ್ವರ ದೇವಸ್ಥಾನ, ಉಪ್ಪಿನಂಗಡಿ ಪುತ್ತೂರು
(26) ಶ್ರೀಮಾರಿಯಮ್ಮ ದೇವಸ್ಥಾನ, ಕಾರ್ಕಳ
(27) ಶ್ರೀಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ ಸುಳ್ಯ ತಾಲ್ಲೂಕು

13) **ಬಳ್ಳಾರಿ ಜಿಲ್ಲೆ**

(1) ಶ್ರೀ ವಿರೂಪಾಕ್ಷ ಸ್ವಾಮಿ ದೇವಸ್ಥಾನ, ಹಂಪಿ
(2) ಶ್ರೀ ಮೈಲಾರಲಿಂಗೇಶ್ವರ, ಮೈಲಾರ
(3) ಶ್ರೀ ಕನಕದುರ್ಗಾಮ್ಮ ದೇವಸ್ಥಾನ, ಬಳ್ಳಾರಿ

14) **ಬೀದರ್ ಜಿಲ್ಲೆ**

(1) ಶ್ರೀಜಿರಣಿ ನರಸಿಂಹ ಸ್ವಾಮಿ ದೇವಸ್ಥಾನ, ಬಿದರೆ

15) **ರಾಯಚೂರು ಜಿಲ್ಲೆ**

(1) ಶ್ರೀ ಹುಲಿಗಮ್ಮ ದೇವಸ್ಥಾನ, ಹುಲಿಗೆ ಕೊಪ್ಪಳ ತಾಲ್ಲೂಕು
(2) ಶ್ರೀ ಅಮರೇಶ್ವರ ದೇವಸ್ಥಾನ, ಲಿಂಗಸೂಗೂರು ತಾಲ್ಲೂಕು

16) **ಗುಲ್ಬರ್ಗಾ ಜಿಲ್ಲೆ**

(1) ಶ್ರೀ ದತ್ತಾತ್ರೇಯ ಸ್ವಾಮಿ ದೇವಸ್ಥಾನ, ಗಾಣಗಾಪುರ

(2) ಶ್ರೀ ಶರಣ ಬಸವೇಶ್ವರ ದೇವಸ್ಥಾನ, ಗುಲ್ಬರ್ಗಾ

17) ಬೆಳಗಾವಿ ಜಿಲ್ಲೆ

(1) ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ, ಸವದತ್ತಿ

(2) ಶ್ರೀ ಉಳವಿ ಚನ್ನಬಸವೇಶ್ವರ ದೇವಸ್ಥಾನ, ದಾಂಡೇಲಿ

18) ಧಾರವಾಡ ಜಿಲ್ಲೆ

(1) ಶ್ರೀ ವೀರನಾರಾಯಣ ದೇವಸ್ಥಾನ, ಗದುಗು

19) ಉತ್ತರ ಕನ್ನಡ

(1) ಶ್ರೀ ಮಾರಿಕಾಂಬ ದೇವಸ್ಥಾನ, ಸಿರ್ಸಿ

(2) ಶ್ರೀ ಇರುಗುಂಜಿ ಮಹಾಗಣಪತಿ ದೇವಸ್ಥಾನ, ಕುಮಟಾ ತಾಲ್ಲೂಕು

(3) ಶ್ರೀ ಮಹಾಬಲೇಶ್ವರ ದೇವಸ್ಥಾನ, ಗೋಕರ್ಣ

(4) ಶ್ರೀ ಮದುಕೇಶ್ವರ ದೇವಸ್ಥಾನ, ಬನವಾಸಿ

ಬೆಂಗಳೂರು ನಗರದ ಸುತ್ತಮುತ್ತ ಇರುವ ಗೋಮಾಳದ ಜಮೀನು ಮಂಜೂರು

450 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸುತ್ತುಮುತ್ತಲೂ ಸುಮಾರು 18 ಕಿ.ಮೀ. ವ್ಯಾಪ್ತಿಯಲ್ಲಿ ಬರುವಂತೆ ಸರ್ಕಾರಿ ಗೋಮಾಳದ ಜಮೀನುಗಳನ್ನು ರೈತರಿಗೆ ಮಂಜೂರು ಮಾಡಬಾರದೆಂದು ಸರ್ಕಾರದವರು ಆದೇಶ ಹೊರಡಿಸಿದ್ದಾರೆಯೇ?

ಆ) ಹಾಗಿದ್ದಲ್ಲಿ ಸುಮಾರು 25 ವರ್ಷಗಳಿಂದ ಉಳುಮೆ ಮಾಡುತ್ತಿರುವವರಿಗೆ ಸರ್ಕಾರದವರು ಯಾವ ರೀತಿಯಲ್ಲಿ ಪರಿಹಾರ ನೀಡುವರು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯಿದೆ 1994 ಇದಕ್ಕೆ ತಿದ್ದುಪಡಿಯನ್ನು ಮಾಡಿ ಕಲಂ 94 ಎ ಇದನ್ನು ಹೊಸದಾಗಿ ಸೇರಿಸಿ ಕೆಲವು ವರ್ಗದ ಸರ್ಕಾರಿ ಜಮೀನುಗಳಲ್ಲಿ ಆಗಿರುವ ಒತ್ತುವರಿಯನ್ನು ಸಕ್ರಮಗೊಳಿಸಲು ಅವಕಾಶ ಕಲ್ಪಿಸಿದ್ದು, ಸದರಿ ಕಲಂನ ಉಪ ಕಲಂ 4 ರಂತೆ ಬೆಂಗಳೂರು ನಗರಪಾಲಿಕೆ ಸರಹದ್ದಿನಿಂದ 18 ಕಿ.ಮೀ. ಒಳ ಹಾಗೂ ಬೆಳಗಾಂ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಗುಲ್ಬರ್ಗಾ ಮತ್ತು ಮೈಸೂರು ನಗರಗಳ ಸರಹದ್ದಿನಿಂದ 10 ಕಿ.ಮೀ. ಮತ್ತು ಇತರೆ ನಗರಗಳು ಅವುಗಳ ಜನಸಂಖ್ಯೆ 50,000 ಕ್ಕಿಂತ ಹೆಚ್ಚಾಗಿರುವ ನಗರಗಳ ಸರಹದ್ದಿನಿಂದ 5 ಕಿ.ಮೀ. ಒಳಗೆ ಬರುವ ಎಲ್ಲಾ ಸರ್ಕಾರಿ ಜಮೀನುಗಳಲ್ಲಿ ಆಗಿರುವ ಒತ್ತುವರಿಗಳನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಆ) ಮೇಲೆ ಹೇಳಿರುವ ಹಿನ್ನಲೆಯಲ್ಲಿ ಮತ್ತು ಕಾಯಿದೆಯಲ್ಲಿ ಅವಕಾಶವಿಲ್ಲದಿರುವುದರಿಂದ ಅಂತಹ ಒತ್ತುವರಿದಾರರಿಗೆ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕೆ.ಎಸ್.ಆರ್.ಟಿ.ಸಿ. ಯ ಡಿಪೋವಾರು ನಷ್ಟ ವಿವರ

285 - ಶ್ರೀ ಯು.ಬಿ. ಬಣಕರ್ (ಹಿರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿನ ಡಿಪೋವಾರು 1994-95ರಲ್ಲಿ ಆಗಿರುವ ನಷ್ಟವೇನು?

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿನ ಡಿಪ್ಪೋವಾರು 1995-96ರಲ್ಲಿ 31.12.1995ರ ವರೆಗೆ ಆಗಿರುವ ನಷ್ಟವೆಷ್ಟು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 1994-95ರ ಲಾಭ ನಷ್ಟದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. (ಇದು ಸಾರಿಗೆ ಆದಾಯಕ್ಕೆ ಮಾತ್ರ ಸೀಮಿತವಾಗಿದೆ)

ಆ) 1995-96ರಲ್ಲಿ 31.12.1995ರ ವರೆಗೆ ಡಿಪ್ಪೋವಾರು ಲಾಭ ನಷ್ಟದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ (ಇದು ಸಾರಿಗೆ ಆದಾಯಕ್ಕೆ ಮಾತ್ರ ಸೀಮಿತವಾಗಿದೆ)

APPENDIX-I

Depotwise Profit/Loss for the years 1994-95 & 1995-96 (Apl. to Dec. 95)

(On Traffic Revenue Only)

Sl. No.	Name of the depots	Division to which attached	Profit ()/ Less (–) for the year 1994-95	Profit (+)/ Loss(–) for the year 1995-96 (upto Dec. 95)
1	2	3	4	5
1.	Bangalore-1	Bangalore (C)	-131.25	- 38.46
2.	Bangalore-2	Bangalore (C)	-106.83	+ 3.89
3.	Bangalore-3	Bangalore (C)	-120.81	- 3.87
4.	Bangalore-4	Bangalore (C)	- 45.39	- 0.63
5.	B.B.S.	Bangalore (C)	+ 83.71	+ 70.45
6.	Tumkur	Bangalore (R)	-134.16	- 39.91
7.	Kanakapura	"	- 66.07	+ 10.49
8.	Anekal	"	- 6.27	+ 45.04
9.	Kunigal	"	- 60.38	- 21.54
10.	Kolar	"	-103.51	- 68.52
11.	Chintamani	"	-159.84	-107.27
12.	Chikkaballapura	"	-115.31	- 54.26
13.	K.G.F.	"	- 11.56	+ 31.53

14.	Mysore City-1	Mysore	- 205.69	-136.27
15.	Mysore City-2	"	- 101.35	- 83.51
16.	Mysore City-1	"	- 116.94	- 45.38
17.	Mysore City-2	"	- 59.72	+ 37.57
18.	K.R. Nagar	"	- 77.65	- 52.33
19.	Gundalpet	"	- 71.69	- 13.19
20.	Mandya	"	- 66.29	- 1.60
21.	Hassan	Hassan	-218.96	-131.13
22.	Arsikere	"	-176.19	- 98.65
23.	Sakalespura	"	-195.65	- 90.88
24.	Chikkamagalur	"	-139.23	- 62.53
25.	C.R. Patna	"	197.20	-135.80
26.	Thuruvekere	"	-	- 5.60
27.	Mangalore-1	Mangalore	- 44.55	- 15.06
28.	Mangalore-2	"	-	- 4.20
29.	Puttur	"	- 4.72	- 27.00
30.	Markara	"	- 22.89	+ 3.33
31.	Dharmastala	"	+ 1.67	+ 34.53
32.	Kundapura	"	+ 19.25	+ 30.17
33.	Hubli (Mofussil)	Hulbi	- 39.60	+ 45.03
34.	Hubli City	"	-247.78	-108.11
35.	Dharwad	"	-163.64	- 80.13
36.	Haveri	Hubli	- 21.34	- 41.06
37.	Hirekerur	"	- 83.60	- 42.42
38.	Ranibennur	"	- 57.73	- 45.77
39.	Hubli (City-2)	"	-	- 12.50
40.	Gadag	"	-104.19	- 74.72
41.	Ran	"	- 30.72	- 55.87
42.	Laxmaswar	"	- 28.50	- 24.56
43.	Nargund	"	- 29.60	- 17.21
44.	Kustagi	"	- 97.11	- 55.50

45.	Yelburga	"	-	- 1.65
46.	Davanagere	Davangere	- 74.50	- 38.42
47.	Shimoga	"	- 55.60	- 31.82
48.	Chitradurga	"	- 54.90	- 53.00
49.	Huvinahadagali	"	- 83.72	- 49.31
50.	Sirsi	"Sirsi	-196.58	- 78.63
51.	Kumta	"	-164.19	- 85.25
52.	Karvar	"	- 81.87	- 27.90
53.	Haliyal	"	-133.07	- 43.58
54.	Bhatkal	"	-112.41	60.16
55.	Belgaum (R)	Belgaum	- 72.55	- 48.78
56.	Belgaum (C)	"	-203.55	-122.22
57.	Chikodi	"	- 27.60	- 18.09
58.	Sankeswar	"	49.69	- 34.48
59.	Bailahangal	"	- 84.70	- 66.01
60.	Soundatti	"	- 51.36	- 30.11
61.	Gokak	"	- 39.10	- 19.32
62.	Nippani	"	- 22.46	- 28.28
63.	Ramadurga	"	- 40.86	- 11.78
64.	Bijapur	Bijapur	- 39.94	+ 8.12
65.	Jamakandi	"	- 44.51	- 35.30
66.	Atani	"	- 28.23	- 29.57
67.	Indi	"	- 62.90	- 34.98
68.	Sindagi	"	- 21.40	- 18.35
69.	Bagalkot	Bagalkot	- 49.70	- 8.89
70.	Muddebihal	"	- 55.92	- 17.15
71.	Badami	"	- 29.79	- 17.64
72.	Ilkal	"	- 48.25	- 7.24
73.	Gulbarga-1	Gulbarga	-160.74	-123.01
74.	Yadgir	"	-185.70	-133.51
75.	Gulbarga-2	"	-371.90	-275.68

76.	Shapur	”	-181.99	-141.64
77.	Humnabad	Bidar	-107.69	- 57.96
78.	Bidar	“	-143.78	-111.92
79.	Basavakalyana	”	-104.51	- 80.16
80.	Chincholi	“	- 65.68	- 63.06
81.	Balki	”	- 47.68	- 42.16
82.	Raichur	Raichur	-228.82	-166.17
83.	Lingasagur	“	-156.95	-115.58
84.	Sindanoor	”	-155.88	- 97.20
85.	Gangavathi	“	- 91.71	- 66.96
86.	Manvi	”	- 54.07	- 48.63
87.	Koppal	“	-103.34	- 92.12
88.	Bellary-1	Bellary	- 85.26	- 64.65
89.	Bellary-2	”	- 90.88	- 59.75
90.	Hospet	“	- 41.00	- 25.01
91.	Kudligi	”	- 50.49	- 58.44
92.	BTS-1	BTS (South)	-354.86	-211.90
93.	BTS-2	“	-379.96	-247.05
94.	BTS-3	”	-395.45	-243.95
95.	BTS-4	“	-430.09	-235.14
96.	BTS-5	”	-371.11	-217.53
97.	BTS-12	“	-119.11	- 93.90
98.	BTS-13	”	- 57.49	- 57.11
99.	BTS-6	“ (North)	-309.47	-181.94
100.	BTS-7	”	-271.56	- 80.18
101.	BTS-8	“	-330.91	-160.92
102.	BTS-9	”	-219.07	-135.29
103.	BTS-10	“	-235.96	-133.70
104.	BTS-11	”	-222.17	-117.77

ರಾಜ್ಯದಲ್ಲಿರುವ ಕೃಷಿ ಸಹಾಯಕರ ಸಂಖ್ಯೆ

276 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಇರುವ ಕೃಷಿ ಸಹಾಯಕರ ಸಂಖ್ಯೆ ಎಷ್ಟು?

ಆ) ಪ್ರತಿಯೊಂದು ಗ್ರಾಮ ಪಂಚಾಯ್ತಿಯ ಕ್ಷೇತ್ರಕ್ಕೆ ಒಬ್ಬ ಕೃಷಿ ಸಹಾಯಕರನ್ನು ನೇಮಿಸಿ ಪ್ರತಿಯೊಂದು ಗ್ರಾಮದ ರೈತರಿಗೆ ಕೃಷಿ ಸಹಾಯಕ ಸೇವೆ ಸಿಗುವಂತೆ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಒಟ್ಟು ಕೃಷಿ ಸಹಾಯಕರ ಸಂಖ್ಯೆ 5640

(ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ)

ಆ) ಕೃಷಿ ಮಹತ್ವದಲ್ಲಿರುವ ಪ್ರತಿ ಗ್ರಾಮ ಪಂಚಾಯ್ತಿ ಕ್ಷೇತ್ರಕ್ಕೆ ಒಬ್ಬ ಕೃಷಿ ಸಹಾಯಕರನ್ನು ಮತ್ತು ಕೃಷಿ ಹೆಚ್ಚು ಮಹತ್ವವಿಲ್ಲದ ಜಾಗದಲ್ಲಿ ಎರಡು ಮೂರು ಗ್ರಾಮ ಪಂಚಾಯ್ತಿಗಳಿಗೆ ಒಬ್ಬ ಕೃಷಿ ಸಹಾಯಕರನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿವೆ ಹಾಗೂ ಸರ್ಕಾರಿ ಆದೇಶ ಸಂಖ್ಯೆ : ಎಹೆಚ್‌ಡಿ 278 ಎಎಂಎಲ್ 94, ದಿನಾಂಕ 31-5-95ರ ಪ್ರಕಾರ ಇನ್ನೂ ಮುಂದೆ ಕೃಷಿ ಸಹಾಯಕರ ಹುದ್ದೆಗೆ ನೇಮಕಾತಿ ಮಾಡದೇ ಎರಡು ಕೃಷಿ ಸಹಾಯಕರ ಹುದ್ದೆಯ ಬದಲಾಗಿ ಒಂದು ಸಹಾಯಕ ಕೃಷಿ ಅಧಿಕಾರಿ ಹುದ್ದೆ ಸೃಜಿಸಿ ಮುಂದಿನ ದಿನಗಳಲ್ಲಿ ಎರಡು ಅಥವಾ ಮೂರು ಗ್ರಾಮ ಪಂಚಾಯ್ತಿಗಳಿಗೆ ಒಬ್ಬ ಪದವೀಧರ ಸಹಾಯಕ ಕೃಷಿ ಅಧಿಕಾರಿ ಸೇವೆ ಒದಗಿಸಿ ಆಧುನಿಕ ಕೃಷಿ ತಂತ್ರಜ್ಞಾನ ರೈತರಿಗೆ ಒದಗಿಸಲು ಕ್ರಮಕೈಗೊಳ್ಳಲಾಗುವುದು.

KARNATAKA LEGISLATIVE ASSEMBLY

UNSTARRED QUESTION NO. 276 BY SRI U.B. BANAKAR (HIREKERUR)

ANNEXURE

Sl.No.	Names of the District	No. of Agricultural Asst.
1.	Bangalore (Urban)	115
2.	Bangalore (Rural)	226
3.	Kolar	305
4.	Tumkur	320
5.	Mandya	228
6.	Mysore	364
7.	Kodagu	96
8.	Hassan	265

9.	Dakishna Kannada	354
10.	Chickamagalur	225
11.	Chitradurga	275
12.	Shimoga	364
13.	Uttara Kannada	209
14.	Dharwad	439
15.	Belgaum	473
16.	Bijapur	363
17.	Gulbarga	336
18.	Bidar	176
19.	Raichur	299
20.	Bellary	220

ಚಿಕ್ಕನಾಯಕನಹಳ್ಳಿ ಆರ್.ಎಂ.ಸಿ. ಕ್ಷೇತ್ರವನ್ನು ಮುಂದುವರಿಸುವ ತೀರ್ಮಾನ

13 - ಶ್ರೀ ಎಸ್. ಬಸವಯ್ಯ (ಚಿಕ್ಕನಾಯಕನಹಳ್ಳಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ತಾಲ್ಲೂಕಿಗೆ ಒಂದರಂತೆ ಇರುವ ಆರ್.ಎಂ.ಸಿ. ಕ್ಷೇತ್ರವನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಲ್ಲಿ ಮುಂದುವರೆಸಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಚಿಕ್ಕನಾಯಕನಹಳ್ಳಿ ಮತ್ತು ಹುಳಿಯಾರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸಂಯೋಜಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದ್ದು, ಸಂಯೋಜಿತ ಮಾರುಕಟ್ಟೆ ಸಮಿತಿಯ ಕೇಂದ್ರ ಸ್ಥಾನ ನಿಗದಿಪಡಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ

14 - ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 500ಕ್ಕಿಂತ ಹೆಚ್ಚು ಜನಸಂಖ್ಯೆ ಅಥವಾ 100 ಕ್ಕೂ ಹೆಚ್ಚು ಕುಟುಂಬಗಳನ್ನು ಹೊಂದಿರುವ ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಸರ್ಕಾರವು ತೀರ್ಮಾನಿಸಿದೆ. ಮತ್ತು ಅಂತಹ ಹಟ್ಟಿಗಳನ್ನು ಗುರುತಿಸಿ ಸೂಕ್ತ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಿಳಿಸಲಾಗಿದೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಚೀಟಿ

6 - ಶ್ರೀ ಎನ್. ಬಸವಯ್ಯ (ವಿಧಾನ ಸಭಾಸದಸ್ಯರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಬಗರ್ ಹುಕುಂ ಸಾಗುವಳಿ ಚೀಟಿ ಕೊಟ್ಟಿರುವ ಸಂಖ್ಯೆ ಎಷ್ಟು ಹಾಗೂ ಉಳಿಕೆ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಅವಧಿ ಮೀರಿದಂತಹ ಅರ್ಜಿಗಳ ಸಂಖ್ಯೆ ಎಷ್ಟು? ಹಾಗೂ ಇದರ ಬಗ್ಗೆ ಏನು ಕ್ರಮ ಕೈಗೊಂಡಿರುತ್ತೀರಾ ತಿಳಿಸಿ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಬಗರ್ ಹುಕುಂ ಸಾಗುವಳಿ ಚೀಟಿ ಕೊಟ್ಟಿರುವ ಸಂಖ್ಯೆ : 645

ಉಳಿಕೆ ಅರ್ಜಿಗಳ ಸಂಖ್ಯೆ 9979

ಆ) ಅವಧಿ ಮೀರಿ ಬಂದಂತಹ ಅರ್ಜಿಗಳ ಸಂಖ್ಯೆ 1746

ಅವಧಿ ಮೀರಿ ಬಂದಂತಹ ಅರ್ಜಿಗಳ ಬಗ್ಗೆ ಜಮೀನು ಸಕ್ರಮಗೊಳಿಸಲು ಕ್ರಮ ತೆಗೆದುಕೊಳ್ಳಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ.

ಚಿಕ್ಕನಾಯಕನ ಹಳ್ಳಿಗೆ ಸರ್ಕಾರಿ ಬಸ್ ನಿಲ್ದಾಣ

4 - ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿಗೆ ಸರ್ಕಾರಿ ಬಸ್ ನಿಲ್ದಾಣಕ್ಕೆ ಶಂಕುಸ್ಥಾಪನೆಯಾಗಿದ್ದು ಇಲ್ಲಿಯವರೆವಿಗೂ ಕೆಲಸ ಪ್ರಾರಂಭವಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಪ್ರಾರಂಭಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಹೌದು

ಆ) ಕ.ರಾ.ರ. ಸಂಸ್ಥೆಯು ಹೊಂದಿರುವ 1.10 ಎಕರೆ ನಿವೇಶನವು ಸಾಗಾಗದೇ ಇರುವುದರಿಂದ ಹೆಚ್ಚುವರಿ ನಿವೇಶನವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ. ಹೆಚ್ಚುವರಿ ನಿವೇಶನ ದೊರೆತ ನಂತರ ಬಸ್ ನಿಲ್ದಾಣ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

ಚಿಕ್ಕನಾಯಕನ ಹಳ್ಳಿಯಲ್ಲಿರುವ ಸೇಂದಿವನದ ಬಗ್ಗೆ

18 - ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿರುವ ಸೇಂದಿವನದ ಎಕರೆಗಳ ವಿಸ್ತೀರ್ಣವೆಷ್ಟು?

ಆ) ಸದರಿ ಜಮೀನಿನಲ್ಲಿ ರೈತರು ಉಳುಮೆ ಮಾಡುತ್ತಿರುವ ಜಮೀನೆಷ್ಟು?

ಇ) ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 5838-00 ಎಕರೆಗಳು

ಆ) 5838-00 ಎಕರೆ ಪೂರಾ ಜಮೀನಿನಲ್ಲಿ ರೈತರು ಉಳುಮೆ ಮಾಡಿರುತ್ತಾರೆ.

ಇ) ಸೇಂದಿವನದ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಸಕ್ರಮಗೊಳಿಸುವ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ತೀರ್ಮಾನಕ್ಕೆ ಇಡಲಾಗಿದೆ. ಸದರಿ ತೀರ್ಮಾನದ ನಂತರ ಅದರಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಹೊಸದುರ್ಗ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಣೆ

265 - ಶ್ರೀ ಟಿ.ಹೆಚ್. ಬಸವರಾಜ್ (ಹೊಸದುರ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊಸದುರ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿ 1995-96ನೇ ಸಾಲಿನಲ್ಲಿ ಮಳೆಯ ಅಭಾವದಿಂದ ಹಿಂಗಾರು ಮತ್ತು ಮುಂಗಾರು ಬೆಳೆ ವೈಫಲ್ಯವಾಗಿದ್ದು, ಸರ್ಕಾರದವರು ಈ ಪ್ರದೇಶವನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡಲು ಕ್ರಮ ತೆಗೆದುಕೊಂಡಿದೆಯೇ?*

ಆ) *ತೆಗೆದುಕೊಂಡಿದ್ದರೆ, ಇದರಿಂದ ತಾಲ್ಲೂಕಿಗೆ ಆಗುವ ಅನುಕೂಲಗಳೇನು?*

ಇ) *ಬರಪೀಡಿತ ಪ್ರದೇಶವಾದ್ದರಿಂದ ಜಾನುವಾರುಗಳಿಗೆ ಅತಿ ಶೀಘ್ರವಾಗಿ ಬೇಕಾಗುವ ಮೇವಿನ ಬಗ್ಗೆ ಕ್ರಮ ತೆಗೆದುಕೊಂಡಿದೆಯೇ?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಇಲ್ಲ, ಹೊಸದುರ್ಗ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸರಬರಾಜಿಗೆ ರೂ. 15.10 ಲಕ್ಷಗಳು ಹಾಗೂ ಮೇವು ಸರಬರಾಜಿಗಾಗಿ ರೂ.1.00 ಲಕ್ಷಗಳನ್ನು ಒದಗಿಸಲಾಗಿದೆ.

ಆ) ಮೇಲಿನ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹೊಸದುರ್ಗ ತಾಲ್ಲೂಕಿನಲ್ಲಿ ಮೇವು ಸರಬರಾಜಿಗಾಗಿ ಒಂದು ಲಕ್ಷ ರೂ.ಗಳನ್ನು ಒದಗಿಸಿದ್ದು, ಮೇವು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಬಲ್ಲಾಳ ಸಮುದ್ರ ಕಾವಲ್‌ನ 80 ಹೆಕ್ಟೇರ್ ಹಾಗೂ ದೇವಪುರ ಕಾವಲ್‌ನ 20 ಹೆಕ್ಟೇರ್ ಪ್ರದೇಶಗಳಲ್ಲಿ ಮೇವನ್ನು ಬೆಳೆಸಲಾಗುತ್ತಿದೆ. ನೀರಾವರಿ ಮೂಲ ಇರುವ ಖಾಸಗಿ ಜಮೀನುಗಳಲ್ಲಿ ಮೇವನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ.

ಖಾಸಗಿ ಐ.ಟಿ.ಐ.ಗಳಿಗೆ ಅನುದಾನ ಜಾರಿ

192 - ಶ್ರೀ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಖಾಸಗಿ ಐ.ಟಿ.ಐ.ಗಳಿಗೆ ಅನುದಾನ ಬಿಡುಗಡೆ ಗೊಳಿಸುವ ಕುರಿತು ಸರ್ಕಾರ ನೀಡಿದ ಆಶ್ವಾಸನೆಯನ್ನು ಈಡೇರಿಸದಿರಲು ಕಾರಣಗಳೇನು?*

ಆ) *ಈ ಬಗ್ಗೆ ಸರ್ಕಾರ ತುರ್ತಾಗಿ ಕ್ರಮ ಕೈಗೊಳ್ಳುವುದೇ?*

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ರಾಜ್ಯದಲ್ಲಿ ಪ್ರಸ್ತುತ 200 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿವೆ. 1994ನೇ ಸಾಲಿನಲ್ಲಿ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿವರ್ಗದವರಿಗೆ ವೇತನ ಅನುದಾನವನ್ನು ಮರುಪಾವತಿ ಮಾಡುವ ಮೂಲಕ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ನೆರವು ನೀಡಲು ಸರ್ಕಾರವು ತೀರ್ಮಾನಿಸಿದೆ. ಈ ತೀರ್ಮಾನವು ಎರಡು ಅಂಶಗಳನ್ನೊಳಗೊಂಡಿದ

(1) ಗ್ರಾಮಾಂತರ ಪ್ರದೇಶಗಳಲ್ಲಿರುವ ಅಂದರೆ 50,000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಲ್ಲಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು

(2) ಕನಿಷ್ಠ ಏಳು ವರ್ಷಗಳಿಂದಲೂ ಅಸ್ತಿತ್ವದಲ್ಲಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು.

ಮೇಲಿನ ತೀರ್ಮಾನವನ್ನು ಕಾರ್ಯಗತಗೊಳಿಸುವುದನ್ನು ಪರಿಶೀಲಿಸುತ್ತಿರುವಾಗ ಗೌರವಾನ್ವಿತ ಸದಸ್ಯರು ಹಾಗೂ ಇತರರು ಗ್ರಾಮಾಂತರ ಪ್ರದೇಶ ಹಾಗೂ ನಗರ ಪ್ರದೇಸಗಳಲ್ಲಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೂ ಆ ನೆರವನ್ನು ನೀಡುವಂತೆ ಒತ್ತಾಯಿಸುತ್ತಿರುತ್ತಾರೆ. ಹಾಗೂ ಹಾಲಿ ಇರುವ ಯಂತ್ರೋಪಕರಣಗಳು ಇತ್ಯಾದಿಗಳನ್ನು ಮೇಲ್ದರ್ಜೆಗೇರಿಸಲು ಮತ್ತು ಅಭಿವೃದ್ಧಿಗೊಳಿಸಲು ಹಣಕಾಸನ್ನು ಒದಗಿಸಬೇಕಾಗಿದೆ.

ಕರಡು ಅನುದಾನ ಸಂಹಿತೆಯನ್ನು ರೂಪಿಸುವುದು ಸಹ ಅಂತ್ಯಮ ಹಂತದಲ್ಲಿದೆ.

ಆ) ಸರ್ಕಾರವು ಪೂರ್ಣವಾಗಿ ವಿಷಯವನ್ನು ಮನಗಂಡು ಹಾಗೂ ಈ ಬಗ್ಗೆ ಬಂದಿರುವ ಬೇಡಿಕೆಗಳು ಮತ್ತು ಕೋರಿಕೆಗಳನ್ನು ಗಮನದಲ್ಲಿಟ್ಟುಕೊಂಡು ಶೀಘ್ರದಲ್ಲಿಯೇ ತೀರ್ಮಾನ ಕೈಗೊಳ್ಳಲಿದೆ.

ಆಹಾರ ಧಾನ್ಯ ತರಕಾರಿ ಇಳುವರಿ ಕುರಿತು

269 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಸ್ರೇಲ್‌ನಲ್ಲಿ ಆಹಾರ ಧಾನ್ಯ ಹಾಗೂ ತರಕಾರಿ ಇಳುವರಿ ನಮ್ಮ ದೇಶ (ರಾಜ್ಯ) ಕ್ಕಿಂತ ಎಷ್ಟು ಪಟ್ಟು ಜಾಸ್ತಿ ಇರುತ್ತದೆ ಹಾಗೂ ಕಾರಣವೇನು?

ಆ) ನಮ್ಮ ರಾಜ್ಯದಲ್ಲಿಯೂ ಕೂಡ ಇಳುವರಿ ಹೆಚ್ಚಿಸಲು ಏನು ಕ್ರಮಗಳನ್ನು ಕೈಗೊಳ್ಳಲಾಗುವುದು ಎಷ್ಟು ದಿನಬೇಕು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಇಸ್ರೇಲ್ ದೇಶವು ಕೃಷಿ ಹಾಗೂ ತೋಟಗಾರಿಕಾ ಅಭಿವೃದ್ಧಿಯಲ್ಲಿ ನಮ್ಮ ದೇಶಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸುತ್ತಿರುವುದರಿಂದ ಇವುಗಳ ಉತ್ಪಾದನೆಯು ಹೆಚ್ಚಾಗಿದೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ನಿಖರವಾದ ಮಾಹಿತಿಯು ಸಧ್ಯದಲ್ಲಿ ಸರ್ಕಾರದ ಬಳಿ ಇರುವುದಿಲ್ಲ.

ಆ) ಇತರೇ ದೇಶ ಹಾಗೂ ರಾಜ್ಯಗಳಂತೆ ನಮ್ಮ ರಾಜ್ಯದಲ್ಲಿಯೂ ಸಹ ಕೃಷಿ ಉತ್ಪಾದನೆ ಹಾಗೂ ಎಕರೆವಾರು ಇಳುವರಿಯನ್ನು ಹೆಚ್ಚಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಈಗಾಗಲೇ ಹಮ್ಮಿಕ್ಕೊಳ್ಳಲಾಗಿದೆ.

1. ಕೃಷಿ ಪರಿಕರಗಳಾದ ಉತ್ತಮ ಬೀಜ, ರಸಗೊಬ್ಬರ ಹಾಗೂ ಪೀಡೆನಾಶಕಗಳ ಪೂರೈಕೆ.
2. ಕೃಷಿ ಪರಿಕರಗಳ ಗುಣನಿಯಂತ್ರಣ
3. ಸಾವಯುವ ಕೃಷಿ
4. ಸಮಗ್ರ ಏಕದಳ ಧಾನ್ಯ (ಒರಟು ಧಾನ್ಯ) ಅಭಿವೃದ್ಧಿ ಯೋಜನೆ.
5. ರಾಷ್ಟ್ರೀಯ ಬೇಳೆಕಾಳು ಅಭಿವೃದ್ಧಿ ಯೋಜನೆ
6. ಎಣ್ಣೆಕಾಳು ಅಭಿವೃದ್ಧಿ ಯೋಜನೆ
7. ಕಬ್ಬು, ಹತ್ತಿ ಅಭಿವೃದ್ಧಿ ಯೋಜನೆ
8. ಸಮಗ್ರ ಪೀಡೆ ನಿರ್ವಹಣೆ

9. ತರಬೇತಿ ಕಾರ್ಯಕ್ರಮಗಳು
10. ಭೂಸಾರ ಸಂರಕ್ಷಣೆಗೆ ಸಂಬಂಧಿಸಿದ ಯೋಜನೆಗಳು
11. ಸುಧಾರಿತ ಕೃಷಿ ಉಪಕರಣಗಳ ಪೂರೈಕೆ
12. ವಿಶೇಷ ಘಟಕ ಹಾಗೂ ಬುಡಕಟ್ಟು ಜನಾಂಗದ ಉಪಯೋಜನೆ

- ಈ ಯೋಜನೆಗಳಲ್ಲದೆ ರೈತರಲ್ಲಿ ಅಧಿಕ ಉತ್ಪಾದನೆ ಮಾಡುವ ಬಗ್ಗೆ ಪ್ರೋತ್ಸಾಹ ಉಂಟು ಮಾಡಲು ಮತ್ತು ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸಲು ಕೃಷಿ ಪ್ರಶಸ್ತಿ ಯೋಜನೆಯನ್ನು 1992ನೇ ಸಾಲಿನಿಂದಲೂ ಜಾರಿಗೊಳಿಸಲಾಗುತ್ತಿದೆ.

- ಬೆಳೆಗಳು ಪ್ರಕೃತಿಯ ವಿಕೋಪದಿಂದಾಗಿ ನಷ್ಟವಾಗುವ ಸಂದರ್ಭದಲ್ಲಿ ರೈತರಿಗೆ ಆರ್ಥಿಕವಾಗಿ ನೆರವು ನೀಡಲು ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ ಇವುಗಳಿಲ್ಲದೆ ಆಧುನಿಕ ಕೃಷಿ ತಂತ್ರಜ್ಞಾನವನ್ನು ರೈತಾಪಿವರ್ಗಕ್ಕೆ ಪರಿಣಾಮಕಾರಿಯಾಗಿ ತಲುಪಿಸುವ ದೃಷ್ಟಿಯಿಂದ ಕೃಷಿ ಇಲಾಖೆಯನ್ನು ದಿನಾಂಕ 31-5-95ರಿಂದ ಜಾರಿಗೆ ಬರುವಂತೆ ಪುನರ್ ರಚಿಸಲಾಗಿದೆ.

ಪ್ರತಿ ಗ್ರಾಮಪಂಚಾಯಿತಿ ಕ್ಷೇತ್ರಕ್ಕೂ ಒಬ್ಬ ಕೃಷಿ ಸಹಾಯಕರ ಸೇವೆಯನ್ನು ಒದಗಿಸಲಾಗಿದೆ. ಅಲ್ಲದೆ ರಾಜ್ಯದ ಕೃಷಿ ನೀತಿಯಲ್ಲೂ ಸಹ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ದಿಸೆಯಲ್ಲಿ ಹಲವಾರು ಶಿಫಾರಸ್ಸುಗಳನ್ನು ನೀಡಿದ್ದು ಅವುಗಳನ್ನು ಅನುಷ್ಠಾನಗೊಳಿಸಲು ಕಾಲಮಿತಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ.

ಶಿರಾ ತಾಲ್ಲೂಕಿನಲ್ಲಿ ಬಗರ್ ಹುಕುಂ ,,ಸಾಗುವಳಿ ಸಕ್ರಮ

272 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಶೀಬಿ ಗ್ರಾಮದ ಸ.ನಂ. 188, 189, 190 ಹಾಗೂ ಹುಂಜನಾಳು ಗ್ರಾಮದ ಸ.ನಂ. 204ರಲ್ಲಿ ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸಲು ಇದುವರೆವಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಈ ಸ.ನಂ.ಗಳ ಜಮೀನುಗಳು ಅರಣ್ಯ ಇಲಾಖೆಗೆ ಸೇರಿರುವುದರಿಂದ ಬಗರ್‌ಹುಕುಂ ಸಾಗುವಳಿದಾರರಿಗೆ ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಕೃಷಿ ಮೇಳಗಳನ್ನು ತಾಲ್ಲೂಕು ಮಟ್ಟದಲ್ಲಿ ನಡೆಸುವ ಬಗ್ಗೆ

466 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮೇಳಗಳನ್ನು ತಾಲ್ಲೂಕು ಮಟ್ಟದಲ್ಲಿ ನಡೆಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :

ಅ) ಹೆಚ್ಚಿನ ಸಂಖ್ಯೆಯಲ್ಲಿ ರೈತರು ಹಾಗೂ ಧನಕರುಗಳು ಭಾಗವಹಿಸುವ ಪ್ರಮುಖ ಜಾತ್ರೆಗಳು ನಡೆಯುವ ಜಿಲ್ಲಾ ತಾಲ್ಲೂಕುಗಳಲ್ಲಿ ಆ ಸಮಯದಲ್ಲಿ ಕೃಷಿ ವಸ್ತುಪ್ರದರ್ಶನಗಳನ್ನು (ಕೃಷಿ ಮೇಳ) ಏರ್ಪಡಿಸಲಾಗುತ್ತಿದೆ. ಇದಕ್ಕಾಗಿ ಜಿಲ್ಲಾ ಹಾಗೂ ರಾಜ್ಯ ವಲಯ ಯೋಜನೆಗಳ ಪ್ರತ್ಯೇಕ ಅನುಧಾನವನ್ನೂ ಸಹ ಮೀಸಲಿಡಲಾಗಿದ್ದು ಜಿಲ್ಲಾ ವಲಯದಲ್ಲಿ ಒದಗಿಸಲಾಗಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೃಷಿ ಹಿಡುವಳಿ ಒತ್ತುವರಿ ಭೂಮಿಯನ್ನು ಸಕ್ರಮಗೊಳಿಸುವುದು

448 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 0.15 ಗುಂಟೆಗಿಂತ ಕಡಿಮೆ ಇರುವ ಕೃಷಿ ಹಿಡುವಳಿ ಒತ್ತುವರಿ ಭೂಮಿಯನ್ನು ರೈತರಿಗೆ ಸಕ್ರಮಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ರೈತರಿಗೆ ಈಗ ಅರ್ಜಿ ಸಲ್ಲಿಸಲು ಸರ್ಕಾರದವರು ಏನೇನು ಕ್ರಮ ಕೈಗೊಂಡಿದೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಕ್ಕೆ ತಿದ್ದುಪಡಿ ಮಾಡಿ 1991ರಲ್ಲಿ ಕಲಂ 94 'ಎ' ಇದನ್ನು ಕಾಯ್ದೆಯಲ್ಲಿ ಸೇರ್ಪಡಿಸಿ ಕೆಲವು ವಿಶಿಷ್ಟ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ಕೆರೆ ಅಂಗಳ, ಗುಂಡುತೋಪು ಅಮೃತಮಹಲ್ ಕಾವಲ್ ಮುಂತಾದ ಜಮೀನುಗಳನ್ನು ಹೊರತುಪಡಿಸಿ ಗೋಮಾಳ ಸೇರಿದಂತೆ ಉಳಿದ ಸರ್ಕಾರಿ ಜಮೀನುಗಳಲ್ಲಿ ಕೃಷಿ ಉದ್ದೇಶಕ್ಕಾಗಿ ಆಗಿರುವ ಒತ್ತುವರಿಯನ್ನು ಸಕ್ರಮೀಗೊಳಿಸುವ ಯೋಜನೆಯು ಜಾರಿಗೆ ಬಂದಿರುತ್ತದೆ. ಸದರಿ ಯೋಜನೆಯಡಿಯಲ್ಲಿ ದಿನಾಂಕ 14-4-90ರ ಹಿಂದೆ ಆಗಿರುವ ಒತ್ತುವರಿಗಳನ್ನು ಸಕ್ರಮಗೊಳಿಸಲು ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 19-9-91 ಆಗಿರುತ್ತದೆ, ಹಾಗೂ ಒತ್ತುವರಿದಾರರ ಸ್ವಂತ ಹಿಡುವಳಿ ಜಮೀನು ಸಹ ಸೇರಿಸಿ ಸಕ್ರಮಗೊಳಿಸುವ ಸರ್ಕಾರಿ ಜಮೀನು 2-00 ಹೆಕ್ಟೇರ್ ಕೃಷಿ ಜಮೀನು ಅಂದರೆ 5-00 ಎಕರೆಗಿಂತ ಹೆಚ್ಚಾಗುವಂತಿಲ್ಲ.

ಆ) ಸದರಿ ಬಗರ್‌ಹುಕುಂ ಸಕ್ರಮಗೊಳಿಸುವ ಯೋಜನೆಯಡಿಯಲ್ಲಿ ಈಗಾಗಲೇ ಕೊನೆಯ ದಿನಾಂಕ 19-9-91ರ ವರೆಗೆ 10,86,826 ಅರ್ಜಿಗಳನ್ನು ಸ್ವೀಕರಿಸಲಾಗಿರುವುದ ರಿಂದ ಮತ್ತೊಮ್ಮೆ ಕಾಲಾವಕಾಶವನ್ನು ವಿಸ್ತರಿಸುವುದು ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ಶಕ್ತಿ ಕೋ-ಅಪರೇಟಿವ್ ಹೌಸಿಂಗ್ ಸೊಸೈಟಿ ಹುಬ್ಬಳ್ಳಿ

212 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿರುವ ಶಕ್ತಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯ ಈಗಿದ್ದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಸರ್ಕಾರ ನೇಮಿಸಿರುವ ಆಡಳಿತಾಧಿಕಾರಿಯು ಸೊಸೈಟಿಯ ಆಡಳಿತವನ್ನು ತನ್ನ ವಶಕ್ಕೆ ತೆಗೆದು ಕೊಂಡಿದ್ದಾರೆಯೇ?

ಆ) ಇಲ್ಲವಾದಲ್ಲಿ ಕಾರಣಗಳೇನು ಮತ್ತು ಈ ಕುರಿತು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಇಲ್ಲ.

ಆ) ಸಹಕಾರ ಸಂಘಗಳ ಕಾಯ್ದೆ, ಕಲಂ 30(1)ರ ಕೆಳಗೆ ಆಡಳಿತ ಮಂಡಳಿಯನ್ನು ರದ್ದುಪಡಿಸಿ ದಿನಾಂಕ : 23-9-1995ರಂದು ಸಹಕಾರ ಸಂಘಗಳ ಉಪ ನಿಬಂಧಕರು, ಧಾರವಾಡ ಇವರು ಹೊರಡಿಸಿದ ಆದೇಶಕ್ಕೆ ಮಾನ್ಯ ಉಚ್ಚ ನ್ಯಾಯಾಲಯ ದಿನಾಂಕ 26-11-1995ರಂದು ತಡೆಯಾಜ್ಞೆ ನೀಡಿದೆ.

ಹುಬ್ಬಳ್ಳಿ ನಗರದ ಸೆಂಟ್ರಲ್ ಬಸ್ ಸ್ಟ್ಯಾಂಡಿನ ಸ್ಥಳಾಂತರ

213 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದ ಗೋಕುಲ ರಸ್ತೆಯಲ್ಲಿ ಸೆಂಟ್ರಲ್ ಬಸ್ ಸ್ಟ್ಯಾಂಡ್ ಸ್ಥಳಾಂತರ ಮಾಡಲು ಸರ್ಕಾರ ನಿರ್ಧರಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಹೊಸ ಬಸ್ ಸ್ಟ್ಯಾಂಡ್ ಕಟ್ಟಿಸುವ ಕೆಲಸ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಹೌದು

ಆ) ಸದರೀ ಕೆಲಸಕ್ಕೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು 1996ನೇ ಮಾರ್ಚ್ ತಿಂಗಳಲ್ಲಿ ಪ್ರಾರಂಭಿಸಲಾಗುವುದು.

ಆರಾಧನ ಯೋಜನೆಯಡಿಯಲ್ಲಿ ವೆಚ್ಚಮಾಡಿದ ಹಣ

190 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಯೋಜನೆಯಡಿ 1991-92ರಿಂದ ಇಲ್ಲಿಯವರೆಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಮತ್ತು ಹುಬ್ಬಳ್ಳಿ ತಾಲ್ಲೂಕಿನಲ್ಲಿ ಮಂಜೂರು ಮಾಡಿದ ಹಣವೆಷ್ಟು ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಆ) ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು (ಪ್ರತಿ ವರ್ಷವಾರು ವಿವರ ನೀಡುವುದು)

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ)

ಕ್ರಮ ಸಂಖ್ಯೆ	ವಿವರ		ಮಂಜೂರು ಮಾಡಿದ ಹಣ (1991-92ರಿಂದ ಗಳು 1993-94ರವರೆಗೆ)	ತೆಗೆದುಕೊಂಡ ಕಾಮಗಾರಿ
1	2		3	4
1)	ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿ	ರೂ.	6,88,500-00	47
2)	ಹುಬ್ಬಳ್ಳಿ ತಾಲ್ಲೂಕು	ರೂ.	4,78,000-00	43

ಆ)

ಕ್ರಮ ಸಂಖ್ಯೆ	ವರ್ಷವಾರು ಖರ್ಚುಮಾಡಿದ ವಿವರ		ಹುಬ್ಬಳ್ಳಿ ಧಾರವಾಡ ಮಹಾನಗರ ವ್ಯಾಪ್ತಿ	ಹುಬ್ಬಳ್ಳಿ ತಾಲ್ಲೂಕು
1	2		3	4
1.	1991-92	ರೂ.	1,43,500-00	1,93,000-00
2.	1992-93	ರೂ.	2,45,000-00	95,000-00
3.	1993-94	ರೂ.	2,10,000-00	1,70,000-00
	ಒಟ್ಟು	ರೂ.	5,98,500-00	4,58,000-00

ಸಹಕಾರಿ ಸಂಘಗಳಲ್ಲಿ ರೋಸ್ಟರ್ ಪದ್ಧತಿ ಜಾರಿ ಕುರಿತು

199 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸಹಕಾರ ಸಂಘಗಳಲ್ಲಿ ರೋಸ್ಟರ್ ಪದ್ಧತಿ ಜಾರಿಯಲ್ಲಿದೆಯೇ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಷ್ಟು ಸಹಕಾರಿ ಸಂಘಗಳು ಈ ನಿಯಮಗಳನ್ನು ಜಾರಿಗೊಳಿಸುತ್ತಿವೆ?

ಇ) ರೋಸ್ಟರ್ ಪದ್ಧತಿ ಅನುಸರಿಸದೆ ನೇಮಕಾತಿ ಮಾಡಿದ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು? ಮತ್ತು ಸರ್ಕಾರ ಈ ಸಂಘಗಳ ಮೇಲೆ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಎಸ್.ಎಸ್. ಪಾಟೀಲ್(ಸಹಕಾರ ಸಚಿವರು) :

ಅ) ಹೌದು ಜಾರಿಯಲ್ಲಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 891 ಕಾರ್ಯನಿರತ ಸಹಕಾರ ಸಂಘಗಳಿಗೆ ನೇಮಕಾತಿ ಹಾಗೂ ಪದೋನ್ನತ ಮಾಡುವಾಗ ರೋಸ್ಟರ್ ನಿಯಮವನ್ನು ಕಡ್ಡಾಯವಾಗಿ ಪಾಲಿಸುವ ಬಗ್ಗೆ ನಿರ್ದೇಶನಗಳನ್ನು ಎಲ್ಲಾ ಸಂಘಗಳಿಗೆ ನೀಡಲಾಗಿದೆ.

ಇ) ಇಂತಹ ಒಂದು ಪ್ರಕರಣ ದಕ್ಷಿಣ ಕನ್ನಡ ಜಿಲ್ಲಾಕೇಂದ್ರ ಸಹಕಾರ ಬ್ಯಾಂಕಿನ ಸಿಬ್ಬಂದಿ ಪದೋನ್ನತ ವಿಚಾರದಲ್ಲಿ ಸರ್ಕಾರದ ಗಮನಕ್ಕೆ ಬಂದಿತ್ತು. ಆದರೆ ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯದಿಂದ ಈ ಬಗ್ಗೆ ತಡೆಯಾಜ್ಞೆ ಇರುವುದರಿಂದ ಯಾವುದೇ ಕ್ರಮ ಕೈಗೊಳ್ಳಲಾಗಿರುವುದಿಲ್ಲ.

ದನಕರುಗಳಿಗೆ ಮೇವು ಪೂರೈಸುವ ಬಗ್ಗೆ

133 - ಶ್ರೀ ವಿ.ಎಸ್. ಕೌಜಲಗಿ (ರಾಣೆಬೆನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಳೆ ಇಲ್ಲದೆ ರೈತರು ಕಂಗಾಲಾಗಿರುವ ಹಾಗೂ ಮೇವು ಸಹ ದನಕರುಗಳಿಗಿಲ್ಲದೆ ತೊಂದರೆ ಆಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಾಣೇಬೆನ್ನೂರು ತಾಲ್ಲೂಕಿನಲ್ಲಿ ಅತೀ ಅಭಾವವಿದ್ದು ದನಕರುಗಳಿಗೆ ಮೇವು ಇಲ್ಲದೆ ರೈತರು ತೊಂದರೆಗೆ ಒಳಗಾಗಿರುವುದರಿಂದ ಮೇವು ದನಕರುಗಳಿಗೆ ಪೂರೈಕೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ, ಕೈಕೊಳ್ಳದಿದ್ದಲ್ಲಿ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ ಕಡಿಮೆ ಮಳೆಯಿಂದಾಗಿ ಕುಡಿಯುವ ನೀರಿನ ತೊಂದರೆ ಉಂಟಾಗಿರುತ್ತದೆ. ಚಿತ್ರದುರ್ಗ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಮೇವಿನ ಅಭಾವ ಇರುವುದನ್ನು ಹೊರತುಪಡಿಸಿ, ರಾಜ್ಯದ ಬೇರೆ ಜಿಲ್ಲೆಗಳಿಂದ ಮೇವಿನ ಅಭಾವದ ಬಗ್ಗೆ ವರದಿ ಬಂದಿರುವುದಿಲ್ಲ.

ಆ) ರಾಣೇಬೆನ್ನೂರು ತಾಲ್ಲೂಕಿನಲ್ಲಿ ಸದ್ಯಕ್ಕೆ ಮೇವಿನ ಸಮಸ್ಯೆ ಇರುವುದಿಲ್ಲ.ಆದಾಗ್ಯೂ ಮುಂಜಾಗ್ರತೆ ಕ್ರಮವಾಗಿ ಸರ್ಕಾರವು ರೂ. 6.00 ಲಕ್ಷಗಳನ್ನು ಈಗಾಗಲೇ ಧಾರವಾಡ ಜಿಲ್ಲೆಗೆ ಒದಗಿಸಿದ್ದು, ಮೇವಿನ ಅಭಾವ ಮುಂದೆ ಕಂಡುಬಂದಲ್ಲಿ ಮೇವು ಸರಬರಾಜಿಗೆ ಕ್ರಮ ಕೈಗೊಳ್ಳಲಾಗುವುದು.

ರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಾಹನಗಳ ವಿವರ

298 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ್) : ಮಾನ್ಯ ಸಾರಿಗೆ ಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು (ವಿಭಾಗಾವಾರು ಲಕ್ಸುರಿ ಸೆಮಿ ಲಕ್ಸುರಿ ಬಸ್ಸುಗಳ ವಿವರಗಳನ್ನು ಒದಗಿಸುವುದು)?

ಆ) ಸಂಚಾರಕ್ಕೆ ಯೋಗ್ಯವಲ್ಲದೆ ನಿಂತಿರುವ ವಾಹನಗಳ ಸಂಖ್ಯೆ ಎಷ್ಟು?

ಇ) ಇಂತಹ ವಾಹನಗಳು ಎಷ್ಟು ವರ್ಷಗಳಿಂದ ಚಲಿಸದೆ ನಿಂತಿವೆ? ಈ ವಾಹನಗಳನ್ನು ಹರಾಜು ಮಾಡುವ ಬಗ್ಗೆ ಸಂಸ್ಥೆ ಯಾವ ಕ್ರಮ ಕೈಗೊಂಡಿದೆ?

ಈ) ಇಂತಹ ವಾಹನಗಳ ಬದಲಿಗೆ ಬೇರೆ ವಾಹನಗಳನ್ನು ಕೊಂಡುಕೊಳ್ಳಲಾಗಿದೆಯೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ದಿನಾಂಕ 21-1-96ಕ್ಕೆ ಒಟ್ಟಾರೆ 0132 ವಾಹನಗಳ ಬಲ ಹೊಂದಿದೆ. ಇದರ ವಿವರಣೆಯನ್ನು ಅನುಬಂಧ 'ಅ'ನಲ್ಲಿ ಗತ್ತಿಸಲಾಗಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಒಟ್ಟಾರೆ 85 ವಾಹನಗಳು ನಿಂತಿವೆ.

ಇ) ಅಪಘಾತ ದುರಸ್ತಿಗೆ ಅರ್ಹತಾ ನೋಂದಣೆಗಾಗಿ ಇಂಜಿನ್, ಗೇರ್ ಬಾಕ್ಸ್, ಬ್ರೇಕ್ ಮುಂತಾದ ತಾಂತ್ರಿಕ ದುರಸ್ತಿಗಾಗಿ ನಿಲ್ಲುತ್ತದೆ. ಅಲ್ಪ ಸಮಯದಲ್ಲಿ ವಿಳಂಬ ಮಾಡದೇ ವಾಹನಗಳ ದುರಸ್ತಿಯನ್ನು ಮಾಡಿ ಮಾರ್ಗದ ಮೇಲೆ ತರಲಾಗುವುದು.

ಈ) ನಿಂತ ವಾಹನಗಳನ್ನು ದುರಸ್ತಿ ಮಾಡಿ ಮಾರ್ಗದ ಮೇಲೆ ತರುತ್ತಿರುವುದರಿಂದ ವಾಹನಗಳ ಬದಲಿಗೆ ಬೇರೆ ವಾಹನಗಳನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಲ್ಲದೇ ವಿಭಾಗದ ವಾಹನಗಳ ಕೊರತೆಯನ್ನು ನೀಗಿಸುವ ಸಲುವಾಗಿ ಶೇ. 8 ಷ್ಟು ವಾಹನಗಳನ್ನು ಹೆಚ್ಚುವರಿ ವಾಹನ ಬಲವಾಗಿ ವ್ಯವಸ್ಥೆಗೊಳಿಸಿದೆ.

ಅನುಬಂಧ-ಅ

ವಿಭಾಗವಾರು ವಾಹನಗಳ ವಿವರ

ಮ ಸಂಖ್ಯೆ	ವಿಭಾಗಗಳು	ಸುವಿಹಾರಿ	ಆರ್ ಸುವಿಹಾರಿ	ಗ್ರಾಮಾಂತರ	ನಗರ	ಒಟ್ಟು
)	ಬೆಂಗಳೂರು ಸೆಂಟ್ರಲ್	102	72	380		554
)	ಬೆಂಗಳೂರು ರೂರಲ್	-	-	332		332
)	ಕೋಲಾರ	-	4	527	7	538
)	ಮೈಸೂರು	16	19	462	245	742
)	ಹಾಸನ	3	26	491	30	550

6)	ಮಂಗಳೂರು	42	85	318	17	462
7)	ಹುಬ್ಬಳ್ಳಿ	14	9	377	247	647
8)	ಗದಗ್	4	2	321	42	369
9)	ದಾವಣಗೆರೆ	6	5	316	-	327
10)	ಎನ್.ಕೆ. (ಸಿರಸಿ)	12	28	375	36	451
11)	ಬೆಳಗಾಂ	14	5	663	131	813
12)	ಬಿಜಾಪುರ	7	-	456	26	489
13)	ಬಾಗಲಕೋಟೆ	2	-	360	12	374
14)	ಗುಲ್ಬರ್ಗಾ	13	3	361	53	430
15)	ಬೀದರ್	2	-	311	-	313
16)	ರಾಯಚೂರು	10	4	400	29	443
17)	ಬಳ್ಳಾರಿ	4	4	406	-	414
18)	ಬಿ.ಟಿ.ಎಸ್. ಸೌತ್	-	-	-	1003	1003
19)	ಬಿ.ಟಿ.ಎಸ್. ನಾರ್ತ್	-	-	-	881	881
	ಒಟ್ಟು	251	266	6856	2759	10,132

ಸೂಚನೆ : ನಗರ ವಾಹನಗಳಲ್ಲಿ ಪುಷ್ಪಕ್ ವಾಹನಗಳು ಸೇರಿವೆ.

ಆರಾಧನಾ ಯೋಜನೆಯಡಿಯಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿರುವುದು

273 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಆಯಾ ಕ್ಷೇತ್ರದ ಶಾಸಕರುಗಳನ್ನು ಈ ಯೋಜನೆಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರೂ ಇದುವರೆವಿಗೂ ಈ ಸಮಿತಿಯು ರಚನೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಮಿತಿಯು ಪ್ರಯೋಜನವಾಗುವಂತೆ ಮಾಡಲು ಇದರ ಅನುಷ್ಠಾನವನ್ನು ಯಾವಾಗ ಮಾಡಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಬಹುತೇಕ ವಿಧಾನ ಸಭಾ ಕ್ಷೇತ್ರಗಳಲ್ಲಿ ಸಮಿತಿಗಳನ್ನು ಈಗಾಗಲೇ ರಚಿಸಿ ಆದೇಶಗಳನ್ನು ಹೊರಡಿಸಲಾಗಿದೆ. ಉಳಿದ ಕ್ಷೇತ್ರಗಳ ಸಮಿತಿಗಳನ್ನು ಸಹ ರಚಿಸಲಾಗುತ್ತಿದೆ.

ಆ) ಈ ಯೋಜನೆಯನ್ನು ಕಾರ್ಯಗತ ಮಾಡಲು ಸೂಕ್ತ ಮಾರ್ಗಸೂಚಿಗಳನ್ನು ಈಗಾಗಲೇ ಹೊರಡಿಸಲಾಗಿದೆ.

ಬೆಂಗಳೂರು ನಗರದಲ್ಲಿ ಪುಷ್ಪಕ್ ಸಾರಿಗೆ ವ್ಯವಸ್ಥೆ

453 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪುಷ್ಪಕ್ ಸಾರಿಗೆ ವ್ಯವಸ್ಥೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ?

ಆ) ಪುಷ್ಪಕ್ ಜಾರಿಗೆ ತಂದಿರುವ ಉದ್ದೇಶವೇನು?

ಇ) ಈ ಉದ್ದೇಶ ಸಫಲವಾಗುತ್ತಿದೆಯೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ದಿನಾಂಕ 16.6.1993ರಿಂದ

ಆ) ಬೆಂಗಳೂರು ನಗರದ ಪ್ರಯಾಣಿಕರಿಗೆ ಅನುಕೂಲ ಮತ್ತು ವೇಗದ ಸಾರಿಗೆ ಸೌಲಭ್ಯವನ್ನು ಕೊಡುವ ಉದ್ದೇಶದಿಂದ.

ಇ) ಹೌದು

ಆಟೋರಿಕ್ಷಾ ಚಾಲಕರ ಬಗ್ಗೆ

454 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಟೋರಿಕ್ಷಾ ಚಾಲಕರು ಪ್ರಯಾಣಿಕರು ಕರೆದ ಕಡೆ ಬಾರದಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಮಹಿಳೆಯರು, ಶಾಲಾ ಮಕ್ಕಳು ಹಾಗೂ ವೃದ್ಧರು ಇವರು ಕರೆದ ಕಡೆ ಬಾರದಿರುವ ಆಟೋರಿಕ್ಷಾ ಚಾಲಕರಿಂದ ಉಂಟಾಗುತ್ತಿರುವ ಕಿರುಕುಳದ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಹಾಗೂ ಕಠಿಣಕರವಾದ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆಯೇ?

ಈ) ಹಾಗಿದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಬಂದಿದೆ.

ಆ) ಆಟೋರಿಕ್ಷಾ ಚಾಲಕರಿಂದ ಕಿರುಕುಳಕ್ಕೊಳಗಾದ ಬೆಂಗಳೂರಿನಿಂದ ಪ್ರಯಾಣಿಕರು, ಅದರಲ್ಲೂ ಹೆಂಗಸರು, ಶಾಲಾ ಮಕ್ಕಳು ಮತ್ತು ವೃದ್ಧರು ಕರೆದಾಗ ಬಾರದೇ ಇರುವ ಹೆಚ್ಚುದು ವಸೂಲಿ ಮಾಡುವ ಮತ್ತು ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸುವ ಚಾಲಕರ ವಿರುದ್ಧ ದೂರನ್ನು ಸಲ್ಲಿಸಬಹುದು. ದೂರಿನಲ್ಲಿ ವಾಹನದ ನೋಂದಣಿ ಸಂಖ್ಯೆ, ದಿನಾಂಕ, ಸ್ಥಳ ಮತ್ತು ಸಮಯವನ್ನು ನಮೂದಿಸುವುದಲ್ಲದೆ ದೂರುದಾರರ ಹೆಸರು ಮತ್ತು ವಿಳಾಸವನ್ನು ನಮೂದಿಸಿ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಕೋರಮಂಗಲ, ಬೆಂಗಳೂರು (ಕೇಂದ್ರ) ಇವರ ಕಛೇರಿಯಲ್ಲಿ ಸ್ಥಾಪಿಸಿರುವ ನಿಯಂತ್ರಣ ಕೊಠಡಿಗೆ ಸಲ್ಲಿಸಿದಲ್ಲಿ ಮೋಟಾರು ವಾಹನಗಳ ನಿಯಮಾನಸಾರ ಆಟೋರಿಕ್ಷಾ ಚಾಲಕರು ಮತ್ತು ಮಾಲೀಕರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತದೆ.

ಇ) ಹೌದು, ಈ ರೀತಿ ಬಂದಂತಹ ದೂರಿನ ಆಧಾರದ ಮೇಲೆ ವಿಚಾರಣೆ ನಡೆಸಿ ರುಜುವಾತಾದಲ್ಲಿ ತಪ್ಪಿತಸ್ಥ ಚಾಲಕರ ವಾಹನ ಮಾಲೀಕರ ವಿರುದ್ಧ ಮೋಟಾರು ವಾಹನ ಕಾಯ್ದೆ 1988 ಅಡಿಯಲ್ಲಿ ರಚಿತಗೊಂಡಿರುವ ನಿಯಮದಂತೆ ಕ್ರಮವನ್ನು ಕೈಗೊಂಡು ಚಾಲನಾ ಪತ್ರವನ್ನು ಅಮಾನತ್ತುಗೊಳಿಸುವ ಮತ್ತು ದಂಡ ವಿಧಿಸಿರುವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಈ) ದಿನಾಂಕ 1-4-95 ರಿಂದ 31-12-95ರ ವರೆಗೆ ತಪ್ಪಿತಸ್ಥ ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಂಡಿದ್ದು,

22 ಪ್ರಕರಣಗಳನ್ನು ದಾಖಲಿಸಲಾಗಿದೆ. ಅವುಗಳಲ್ಲಿ 03 ಚಾಲನಾ ಅನುಜ್ಞಾ ಪತ್ರಗಳನ್ನು ಅಮಾನತ್ತುಗೊಳಿಸಿದ್ದು, 15 ಪ್ರಕರಣಗಳಲ್ಲಿ 3,960-00 ರೂಪಾಯಿಗಳ ದಂಡವನ್ನು ವಿಧಿಸಲಾಗಿದೆ. ಉಳಿದ 04 ಪ್ರಕರಣಗಳಲ್ಲಿ ತನಿಖೆ ನಡೆಸಲಾಗುತ್ತಿದೆ.

ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್-ವಿಂಗಡನೆ

478 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್ ವಿಂಗಡನೆ ಕುರಿತು ನೇಮಕಗೊಂಡ ಸಮಿತಿಗಳ ಶಿಫಾರಸ್ ಆಧರಿಸಿ ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್ ವಿಂಗಡನೆಗೆ ಸರಕಾರ ನೀಡಿದ ಭರವಸೆ ಪೂರೈಸಲು ಯಾವ ಕ್ರಮ ಕೈಗೊಂಡಿದೆ?

ಆ) ಭಾರಿ ಕ್ಷೇತ್ರ ವಿಸ್ತಾರ ಹಾಗೂ ಜನಸಂಖ್ಯೆ ಹೊಂದಿರುವ ಜಿಲ್ಲೆಗಳ ಪುನರ್ ರಚನೆ ತೀವ್ರ ಅವಶ್ಯವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಜಿಲ್ಲೆ ಪುನರ್ ವಿಂಗಡನೆಗೆ ಸರಕಾರ ಬರಲಿರುವ ಬಜೆಟ್ಟಿನಲ್ಲಿ ಹಣ ಒದಗಿಸಲು ಚಿಂತನೆ ನಡೆಸಿದೆಯೇ?

ಈ) ಈ ಮೊದಲು ಭರವಸೆ ಕೊಟ್ಟ ಪ್ರಕಾರ ಮುಂದಿನ ಹಣಕಾಸು ವರ್ಷದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪುನರ್ ವಿಂಗಡನೆ ಮಾಡಲಾಗುವುದೆ?

ಉ) ಹಾಗಿದ್ದಲ್ಲಿ, ಗದಗ ಜಿಲ್ಲಾ ರಚನೆಗೆ ಮೊದಲ ಪ್ರಾಶಸ್ತ್ಯ ಸಿಗುವುದೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಹೌದು

ಇ) ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಪ್ರಶ್ನೆ 'ಅ'ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ

ಉ) ಪ್ರಶ್ನೆ 'ಅ'ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಸರ್ವೆ ಇಲಾಖೆಯಲ್ಲಿ ಜಮೀನಿನ ಅಳತೆಗೆ ಇರುವ ನಿಯಮ

465 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವೆ ಇಲಾಖೆಯಲ್ಲಿ ಯಾವ ಆಧಾರದ ಮೇಲೆ ಜಮೀನಿನ ಅಳತೆ ಮಾಡಲಾಗುತ್ತದೆ?

ಆ) ಹಾಗೂ ಜಮೀನಿನ ಅಳತೆಗೆ ಸಂಬಂಧಿಸಿದಂತೆ ನಿಯಮವೇನಾದರೂ ಇದ್ದಲ್ಲಿ, ವಿವರ ನೀಡುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಕರ್ನಾಟಕ ಭೂಕಂದಾಯ ಅಧಿನಿಯಮ, 1964 ಕರ್ನಾಟಕ ಭೂಕಂದಾಯ ನಿಯಮಾವಳಿ, 1966ರಂತೆ ಹಾಗೂ ಸರ್ವೆ ಕೈಪಿಡಿಯಲ್ಲಿನ ಸೂಚನೆಗಳಂತೆ ಜಮೀನಿನ ಅಳತೆ ಮಾಡಲಾಗುತ್ತದೆ.

ಆ) ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ ಅಧ್ಯಾಯ-9 ಹಾಗೂ ಕರ್ನಾಟಕ ಭೂಕಂದಾಯ ನಿಯಮ, 1966ರ ಅಧ್ಯಾಯ-8ರಲ್ಲಿರುವ ನಿಯಮಾವಳಿ-47ರಿಂದ

57 ರವರೆಗಿನ ಮತ್ತು ಸರ್ವೆ ಕೈಪಿಡಿ ಮಾರ್ಗದರ್ಶನಗಳನ್ನನುಸರಿಸಿ ಜಮೀನಿನ ಅಳತೆ ಮಾಡಲಾಗುತ್ತಿದೆ.

ಬೆಂಗಳೂರು ನಗರದಲ್ಲಿರುವ ಪುಷ್ಪಕ್ ಬಸ್ಸುಗಳ ಸಂಖ್ಯೆ

204 - ಶ್ರೀ ಎಸ್. ಸುರೇಶ್ ಕುಮಾರ್(ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕಳೆದ ಒಂದು ವರ್ಷದಿಂದ ಬಿಡುಗಡೆ ಮಾಡಿರುವ ಪುಷ್ಪಕ್ ಬಸ್‌ಗಳ ಸಂಖ್ಯೆ ಎಷ್ಟು?

ಆ) ಪುಷ್ಪಕ್ ಬಸ್ ಹಾಗೂ ಸಾಮಾನ್ಯ ಬಸ್ಸುಗಳ ನಡುವೆ ಇರುವ ಅಂತರವೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಫೆಬ್ರವರಿ 1995ರಿಂದ ಈವರೆಗೆ 101 ಪುಷ್ಪಕ್ ಬಸ್ಸುಗಳನ್ನು ಸೇರಿಸಲಾಗಿದೆ.

ಆ) **ಸಾಮಾನ್ಯ ಬಸ್ಸುಗಳು**

1) ಸರಾಸರಿ 39 ಆಸನಗಳು ಮತ್ತು 24 ನಿಂತು ಪ್ರಯಾಣ ಮಾಡುವ ಸಾಮರ್ಥ್ಯ ಹೊಂದಿರುತ್ತದೆ.

2) ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಮತ್ತು ಇಳಿಸಲು ಎಲ್ಲಾ ನಿಲುಗಡೆಗಳಲ್ಲಿಯೂ ನಿಲುಗಡೆ ಒದಗಿಸಲಾಗಿದೆ.

3) ಸಾಮಾನ್ಯ ನಗರ ಸಾರಿಗೆಗಳಲ್ಲಿ ಪ್ರತಿ ಕಿ.ಮೀ.ನ ದರ 13.45 ಪೈ ಮತ್ತು ಕನಿಷ್ಠ 0.75 ಪೈ ಮತ್ತು ಹೊರವಲಯದ ಸಾರಿಗೆಗಳಲ್ಲಿ 13.89 ಪೈ ಮತ್ತು ಕನಿಷ್ಠ ರೂ. 1.25 ಪೈಯಾಗಿರುತ್ತದೆ.

ಪುಷ್ಪಕ್ ಬಸ್ಸುಗಳು : ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲತೆ ಕೊಡಲು ಪುಷ್ಪಕ್ ಬಸ್ಸುಗಳು ವಿಶೇಷ ವಿನ್ಯಾಸಗೊಂಡಿದೆ. ಪುಷ್ಪಕ್ ಬಸ್ಸುಗಳು 45 ಆರಾಮದಾಯಕ ಆಸನಗಳನ್ನು ಹೊಂದಿವೆ. ಸಾಮಾನ್ಯವಾಗಿ ನಿಂತು ಪ್ರಯಾಣಿಸುವವರಿಗೆ ಈ ಬಸ್ಸುಗಳಲ್ಲಿ ಅವಕಾಶವಿರುವುದಿಲ್ಲ. ಪ್ರಯಾಣದ ವೇಳೆಯನ್ನು ಕಡಿಮೆ ಮಾಡಲು ನಿಲುಗಡೆಗಳನ್ನು ಮಿತಗೊಳಿಸಲಾಗಿದೆ. ಈ ಸಾರಿಗೆಗಳು ಮೇಲುದರ್ಜೆಯ ಸಾರಿಗೆಗಳಾಗಿದ್ದು ಇದರಲ್ಲಿ ಪ್ರತಿ ಕಿ.ಮೀ. 0.40 ಪೈಸೆ ಹಾಗೂ ಕನಿಷ್ಠ ರೂ. 2.00 ದರ ವಿಧಿಸಲಾಗುತ್ತಿದೆ.

ರಾಜ್ಯದಲ್ಲಿ ಕೃಷಿ ಉತ್ಪಾದನೆ ಕುರಿತು

134 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆದ ಕೃಷಿ ಉತ್ಪಾದನೆ ಎಷ್ಟು? ಇದು ಇಳಿಮುಖವಾಗಿದೆಯೇ?

ಆ) ಇಳಿಮುಖವಾಗಿದ್ದರೆ ಕಾರಣವೇನು? ಈ ಬಗ್ಗೆ ಕೈಗೊಂಡ ಪರಿಹಾರ ಮಾರ್ಗವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದ ಕಳೆದ ಮೂರು ಸಾಲುಗಳ ಕೃಷಿ ಉತ್ಪಾದನೆಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಇದರಂತೆ 1994-95ನೇ ಸಾಲಿನಲ್ಲಿ ಮಾತ್ರ ಆಹಾರ ಧಾನ್ಯ ಹಾಗೂ ಎಣ್ಣೆಕಾಳುಗಳ ಉತ್ಪಾದನೆ ಇಳಿಮುಖವಾಗಿರುವುದನ್ನು ಕಾಣಬಹುದಾಗಿದೆ.

ಆ) ರಾಜ್ಯದ ಕೃಷಿ ಉತ್ಪಾದನೆಯಲ್ಲಿ ಶೇ. 75 ಪ್ರದೇಶವು ಮಳೆ ಆಶ್ರಯವಾಗಿರುವುದರಿಂದ ಮತ್ತು 1994-95ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆಯು ಸಕಾಲದಲ್ಲಿ ಬಾರದೆ ಇದ್ದುದರಿಂದ ವಾಡಿಕೆ ಬಿತ್ತನೆ ಕ್ಷೇತ್ರವಾದ 71.60 ಹೆ. ಪೈಕಿ 60.03 ಹೆ.ಗಳಲ್ಲಿ ಮಾತ್ರ ಬಿತ್ತನೆಯಾಗಿದ್ದುದು ಈ ಇಳಿಮುಖಕ್ಕೆ ಪ್ರಮುಖ

ಕಾರಣವಾಗಿರುತ್ತದೆ. ಆದರೆ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಈ ಪರಿಸ್ಥಿತಿಯ ಸ್ವಲ್ಪ ಸುಧಾರಿಸುದುರಿಂದಲೂ ಹಾಗೂ ಇಲಾಖೆಯ ತೀವ್ರಕರ ಕೃಷಿ ಕಾರ್ಯಕ್ರಮಗಳನ ಹಮ್ಮಿಕ್ಕೊಂಡಿದುದರ ಪರಿಣಾಮವಾಗಿಯೂ ಉತ್ಪಾದನೆಯು ಸ್ವಲ್ಪ ಮಟ್ಟಿಗೆ ಸುಧಾರಿಸಲ್ಪಟ್ಟಿರುತ್ತದ

ಕಾರ್ಮಿಕ ನ್ಯಾಯಾಲಯದ ಮೊಕದ್ದಮೆಗಳು

135 - ಶ್ರೀ ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಕಾರ್ಮಿಕ ನ್ಯಾಯಾಲಯಗಳ ಮುಂದಿರುವ ಮೊಕದ್ದಮೆಗಳು ಎಷ್ಟು ಅವುಗಳನ್ನು ಶೀಘ್ರ ಇತ್ಯರ್ಥ ಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು?*

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 15586 ಮೊಕದ್ದಮೆಗಳು ರಾಜ್ಯದ ಕಾರ್ಮಿಕ ನ್ಯಾಯಾಲಯಗಳ ಮುಂದ 1995ರ ಡಿಸೆಂಬರ್ ಅಂತ್ಯಕ್ಕೆ ಬಾಕಿ ಇರುತ್ತವೆ. ಈ ಮೊಕ್ಕದ್ದಮೆಗಳನ್ನು ಹಿರಿಯ ನ್ಯಾಯಾಧೀಶರು ನ್ಯಾಯಾಲಯಗಳಲ್ಲಿ ಸುವ್ಯವಸ್ಥಿತವಾಗಿ ಪರೀಕ್ಷಿಸುತ್ತಿದ್ದು ಅವರು ಇವುಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ

ಕೃಷಿ ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ

2 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಕೃಷಿ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಯದೆ ಇದ್ದು, ಚುನಾಯಿತ ಪ್ರತಿನಿಧಿಗಳಿಲ್ಲದೆ ಕೇವಲ ಆಡಳಿತಾಧಿಕಾರಿಗಳು ಆಡಳಿತವನ್ನು ನಡೆಸುತ್ತಿರುವುದರಿಂದ ಆಡಳಿತ ಯಂತ್ರ ಕುಸಿದಿದ್ದು, ರೈತರಿಗೆ ಸರಿಯಾದ ಸೌಲಭ್ಯಗಳು ದೊರೆಯದೆ ಇರುವುದರಿಂದ ರೈತರು ಕಷ್ಟ ಮತ್ತು ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಆದ್ದರಿಂದ ಈ ಪರಿಸ್ಥಿತಿಯನ್ನು ಪರಿಹರಿಸಲು ಚುನಾವಣೆಗಳು ನಡೆಯುವ ತನಕ ಆಡಳಿತಾಧಿಕಾರಿಗಳಿಗೆ ಸಲಹೆ, ಸೂಚನೆ ನೀಡುವ ಉದ್ದೇಶದಿಂದ ಸಲಹಾ ಸಮಿತಿ ಏನಾದರೂ ರಚಿಸುವ ಯೋಚನೆ ಸರ್ಕಾರಕ್ಕಿದೆಯೇ?*

ಇ) *ಆ ರೀತಿ ಸಲಹಾ ಸಮಿತಿ ರಚಿಸುವುದರಿಂದ ಸರ್ಕಾರಕ್ಕೆ ಏನಾದರೂ ನಷ್ಟ ಆಗುವುದೇ?*

ಶ್ರೀ ಬಿ.ಬಿ. ಶಿವಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಬಂದಿಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ರುದ್ರಭೂಮಿ ವ್ಯವಸ್ಥೆ

44 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಬಹುತೇಕ ಗ್ರಾಮಗಳಲ್ಲಿ ಪ್ರತ್ಯೇಕ ಜನಾಂಗದವರಿಗೆ ರುದ್ರಭೂಮಿಯ ಉದ್ದೇಶಕ್ಕಾಗಿ ಭೂಮಿಯ ಉಪಲಬ್ಧವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ರುದ್ರ ಭೂಮಿಯ ಉದ್ದೇಶಕ್ಕಾಗಿ ಸ್ಥಳವನ್ನು ಕಾಯ್ದಿರಿಸಲು ಸರ್ಕಾರವು ತೆಗೆದುಕೊಳ್ಳುವ ಕ್ರಮಗಳೇನು?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹೌದು

ಆ) ಪ್ರತಿ ಹಳ್ಳಿಯಲ್ಲಿ ಎಲ್ಲಾ ಜನಾಂಗದವರಿಗೆ ರುದ್ರ ಭೂಮಿಗಾಗಿ ಜಮೀನನ್ನು ಕಾಯ್ದಿರಿಸಲು ಪ್ರತಿ ಸಾಲಿನ ಆಯವ್ಯಯದಲ್ಲಿ ಒಂದು ಕೋಟಿ ರೂಪಾಯಿಯ ಅವಕಾಶ ಕಲ್ಪಿಸಲು ಈ ಮೊದಲೇ ಸರ್ಕಾರವು ಕ್ರಮ ಕೈಗೊಂಡಿದೆ. ಅದಲ್ಲದೆ ಭೂಸ್ವಾಧೀನತೆಯಿಂದಾಗಿ ಜಮೀನು ಕಾಯ್ದಿರಿಸಲು ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಆಶ್ರಯ . ಯೋಜನೆ ಮಾದರಿ ನೇರವಾಗಿ ಜಮೀನುಗಳನ್ನು ಕೊಂಡುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ರಾಜ್ಯದಲ್ಲಿನ ಉಪ-ನೋಂದಣಾಧಿಕಾರಿ ಕಛೇರಿಗಳಲ್ಲಿ ನೋಂದಾದ ಪತ್ರಗಳನ್ನು ಪಡೆಯಲು ತಡವಾಗುತ್ತಿರುವ ಬಗ್ಗೆ.

137 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಉಪ-ನೋಂದಣಿ ಕಛೇರಿಗಳಿಂದ ನೋಂದಣಿಯಾಗಿರುವ ದಸ್ತಾವೇಜುಗಳ ಪ್ರತಿಗಳನ್ನು ಕ್ರಯದಾರರು ಮತ್ತು ಖರೀದಿದಾರರು ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಈ ತೊಂದರೆಯನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡು ಕ್ರಮವೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹೌದು

ಆ) ನೋಂದಣಿಯಾದ ದಸ್ತಾವೇಜುಗಳನ್ನು ಸಂಪುಟಗಳಲ್ಲಿ ಕೈ ಬರವಣಿಗೆ ಮೂಲಕ ಪ್ರತಿ ಮಾಡುವ ಪದ್ಧತಿಯ ಬದಲಿಗೆ ದಸ್ತಾವೇಜುಗಳ ಪ್ರತಿಗಳನ್ನು ಪೈಲಿಂಗ್ ಮಾಡುವ ಪದ್ಧತಿಯನ್ನು ಜಾರಿಗೆ ತರುವ ಮೂಲಕ ನೋಂದಾಯಿತ ದಾಖಲೆಯನ್ನು ತ್ವರಿತವಾಗಿ ಹಿಂದಿರಿಗಿಸಬಹುದಾಗಿದೆ. ಈ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

ನಗರ ಹಾಗೂ ಗ್ರಾಮೀಣ ಸಾರಿಗೆಯ ದರ ಕುರಿತು

40 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಮತ್ತು ಗ್ರಾಮೀಣ ಸಾರಿಗೆಯಲ್ಲಿ ಪ್ರತೀ ಹಂತಕ್ಕೆ ಪ್ರತೀ ಪ್ರಯಾಣಿಕರಿಗೆ ವಿಧಿಸುತ್ತಿರುವ ವಿವಿಧ ಪ್ರಯಾಣ ದರಗಳು

ಆ) ನಗರ ಸಾರಿಗೆಯಲ್ಲಿ (ಪ್ರತಿ ಹಂತಕ್ಕೆ) ವಿಧಿಸುತ್ತಿರುವ ದರ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ವಿವಿಧ ಪ್ರಯಾಣ ದರವನ್ನು ವಿವಿಧ ರೀತಿಯ ಸಾರಿಗೆ ಸೌಲಭ್ಯಕ್ಕೆ ನಿಗಧಿಪಡಿಸಲಾಗಿದೆ. ಪ್ರತೀ ಪ್ರಯಾಣಿಕರ ಕಿ.ಮೀ.ನ ಸರಾಸರಿ ದರದ ವಿವರಗಳನ್ನು ಈ ಕೆಳಗೆ (ಪೈಸೆಗಳಲ್ಲಿ) ನೀಡಲಾಗಿದೆ.

ಸಾರಿಗೆಯ ಬಗೆ	ಪ್ರತೀ ಪ್ರಯಾಣಿಕರ ಕಿ.ಮೀ.ನ ಸರಾಸರಿ ದರ (ಪೈಸೆಗಳಲ್ಲಿ)
ಸಾಧಾರಣ ಸಾರಿಗೆ	16.47
ವೇಗದೂತ ಸಾರಿಗೆ	18.76
ಅರೆ ಸುಖಾಸೀನ	23.29

ಸುಖಾಸೀನ ಸಾರಿಗೆ	28.03
ನಗರ ಸಾರಿಗೆ	12.78
ಹೊರವಲಯದ ಸಾರಿಗೆ	13.75
ಪುಷ್ಪಕ್	40.00

ವಿವಿಧ ಬಗೆಯ ಸಾರಿಗೆಯ ಕನಿಷ್ಠ ದರವು ಈ ಕೆಳಕಂಡಂತಿದೆ (ಪೈಸೆಗಳಲ್ಲಿ)

ನಗರ	0.75
ಹೊರವಲಯ	125
ಪುಷ್ಪಕ್	200
ಸಾಧಾರಣ	125
ವೇಗದೂತ	200
ಅರೆ ಸುಖಾಸೀನ	500
ಸುಖಾಸೀನ	800

ಮೇಲಿನ ಸಾರಿಗೆಗೆ ಈ ಕೆಳಕಂಡಂತೆ ಹಂತಗಳನ್ನು ನಿಗಧಿಪಡಿಸಿದೆ.

ನಗರ ಪ್ರತಿ 2 ಕಿ.ಮೀ.ಗೆ

ನಗರ ಹೊರವಲಯ ಪ್ರತೀ 4 ಕಿ.ಮೀ. ಗೆ

ದೂರ ಪ್ರಯಾಣಿಕರಿಗೆ ಪ್ರತೀ 6.5 ಕಿ.ಮೀ.ಗೆ

ಆ) ನಗರ ಸಾರಿಗೆಯ ಹಂತವಾರು ಪ್ರಯಾಣದ ದರಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ದರ ವಿಧಿಸಬೇಕಾದ ಹಂತಗಳು	ದರ (ಪೈಸೆಗಳಲ್ಲಿ)			
	ಸಾಮಾನ್ಯ		ವೇಗದೂತ	
	ದೊಡ್ಡವರು	ಮಕ್ಕಳು	ದೊಡ್ಡವರು	ಮಕ್ಕಳು
1.	075	050	100	050
2.	100	050	050	075
3.	125	075	175	100
4.	125	075	200	100
5.	150	075	225	125
6.	150	075	250	125
7.	225	125	275	150
8.	225	125	275	150
9.	250	125	300	150

10.	250	125	300	150
11.	275	150	325	175
12.	275	150	325	175
13.	300	150	350	175
14.	300	150	350	175
15.	325	175	375	200
16.	325	175	400	200

ಸಹಕಾರ ಸಂಘಗಳ ನಿಬಂಧಕರ ಕಛೇರಿ

138 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿ ರಾಜ್ಯ ಮಟ್ಟದ ಸಹಕಾರ ಸಂಘಗಳ ಅಂದರೆ, ಅಪೆಕ್ಸ್ ಬ್ಯಾಂಕ್, ಕರ್ನಾಟಕ ಕೈಗಾರಿಕಾ ಸಹಕಾರ ಬ್ಯಾಂಕ್, ಕರ್ನಾಟಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಇತರೆ ಇವುಗಳಿಗೆ ಸಂಬಂಧಿಸಿದ ಬಾಕಿಯಿರುವ ಅವಾರ್ಡ್‌ಗಳು ಎಷ್ಟು? ಹಾಗೂ ಯಾವ ದಿನಾಂಕದಿಂದ ಬಾಕಿಯಿವೆ?

ಆ) ಈ ತರಹದ ಬಾಕಿಗೆ ಕಾರಣಗೂ ಮತ್ತು ಇದನ್ನು ತ್ವರಿತಗೊಳಿಸುವುದಕ್ಕೆ ತೆಗೆದುಕೊಂಡಿರುವ ಕ್ರಮಗಳು?

ಇ) ಅವಾರ್ಡುಗೊಳಿಗೋಸ್ಕರವಾಗಿಯೇ ಸಾಲುಗಾರರಿಂದ ವಸೂಲಿಯೂ ವಿಳಂಬವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ನಿಬಂಧಕರ ಕಛೇರಿಯಲ್ಲಿ ಅವಾರ್ಡ್‌ಗಳು ಬಾಕಿ ಇರುವುದಿಲ್ಲ. ಪ್ರಕರಣಗಳಲ್ಲಿ ಅವಾರ್ಡ್‌ಗಳಾದ ನಂತರ ಸಂಬಂಧಪಟ್ಟವರು ಅವುಗಳನ್ನು ಕರೆದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.

ರಾಜ್ಯ ಮಟ್ಟದ ಸಹಕಾರ ಸಂಘಗಳ ವಿವಾದ ಪ್ರಕರಣಗಳ ಇತ್ಯರ್ಥವಾಗಬೇಕಾಗಿರುವ ವಿವರಗಳು

ಕ್ರಮ ಸಂಖ್ಯೆ	ಸಹಕಾರ ಸಂಘದ ಹೆಸರು	ಇತ್ಯಾರ್ಥವಾಗಬೇಕಾಗಿರುವ ದಾವಾ ಪ್ರಕರಣಗಳು			
		1 ವರ್ಷ ದೊಳಗಿನ ಪ್ರಕರಣ ಗಳು	2 ವರ್ಷ ದೊಳಗಿನವು	2 ವರ್ಷ ಮೇಲ್ಪಟ್ಟ	ಮೊತ್ತ
1)	ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ಬೆಂಗಳೂರು	32	107	114	253

2)	ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್, ಬೆಂಗಳೂರು	120	233	334	687
3)	ಭಾರತ ಸಹಕಾರ ಬ್ಯಾಂಕ್ ನಿ	100	50	26	176
4)	ರೆಡ್ಡಿ ಸಹಕಾರ ಬ್ಯಾಂಕ್ ನಿ	270	95	30	395
5)	ಅಮಾನತ್ ಸಹಕಾರ ಬ್ಯಾಂಕ್	32	36	20	88
6)	ಸಿಲ್ಕ್ ಮಾರ್ಕೆಟಿಂಗ್ ಮಹಾಮಂಡಳಿ	-	-	9	9
7)	ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘ	-	23	3	26
8)	ಸಿಲ್ಕ್ ಹ್ಯಾಂಡ್‌ಲೂಂ ವೀವರ್ಸ್ ಸಹಕಾರ ಸಂಘ	-	-	12	12
9)	ಅಂಚೆ ನೌಕರರ ಆಪತ್ತಿನ ಸಹಕಾರ ಸಂಘ (ನಿ)	3	-	5	8
10)	ಕಂಟ್ರೋಲರ್ಸ್ ಸಹಕಾರ ಬ್ಯಾಂಕ್	2	-	3	5
11)	ಕರ್ನಾಟಕ ಸಹಕಾರ ಗ್ರಾಹಕರ ಮಹಾ ಮಂಡಳ (ನಿ) ಬೆಂಗಳೂರು	-	-	-	2
12)	ಕೆಎಂಎಫ್, ಬೆಂಗಳೂರು	10	1	-	11
13)	ಎಜುಕೇಶನ್ ಸಹಕಾರ ಸಂಘ	9	-	-	9
14)	ನರ್ಸರಿಮೆನ್ ಸಹಕಾರ ಸಂಘ	1	-	-	1
15)	ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಅಭಿವೃದ್ಧಿ				

	ಬ್ಯಾಂಕ್, ಬೆಂಗಳೂರು	1	-	-	1
16)	ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳ (ನಿ) ಬೆಂಗಳೂರು	3	4	22	29
	ಒಟ್ಟು	583	551	578	1,712

ಆ) 1) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಕಲಂ 70ರಡಿಯಲ್ಲಿ ಮಾಡಿರುವ ವಿವಾದಗಳು ನ್ಯಾಯಿಕ ಸ್ವರೂಪವಾಗಿದ್ದು, ಇವುಗಳನ್ನು ತೀರ್ಮಾನಿಸುವಲ್ಲಿ ಕಾನೂನಿನ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

2) ವಿವಾದ ಮಾಡುವಲ್ಲಿ ಕೆಲವು ಸಂಸ್ಥೆಗಳು ಅವಧಿ ಮೀರಿ ಹೂಡುತ್ತಿದ್ದು, ವಿಳಂಬ ವಿನಾಯಿತಿ ಅರ್ಜಿಗಳನ್ನು ಇತ್ಯರ್ಥ ಮಾಡಿದ ನಂತರ ವಿವಾದಗಳ ವಿಚಾರಣೆಯನ್ನು ಮುಂದುವರಿಸಬೇಕಾಗುತ್ತದೆ.

3) ವಿವಾದ ಅರ್ಜಿ ಜೊತೆಯಲ್ಲಿ ಮೂಲ ದಾಖಲಾತಿಗಳನ್ನಾಗಲೀ ಅಥವಾ ದೃಢೀಕರಿಸಿದ ದಾಖಲೆಗಳನ್ನಾಗಲಿ ಸಲ್ಲಿಸದೇ ಇರುವುದು.

4) ವಾದಿಗಳು ಮತ್ತು ಪ್ರತಿವಾದಿಗಳು ಗೈರು ಹಾಜರಿ ಆಗುವುದು.

5) ವಿಚಾರಣೆಯು ನಡೆಯುವಾಗ ಉಭಯ ಪಕ್ಷಗಾರರು ಸಲ್ಲಿಸುವ ಮಧ್ಯಂತರ ಅರ್ಜಿಗಳನ್ನು ಇತ್ಯರ್ಥ ಮಾಡುವುದು.

6) ವಿವಾದದ ಪ್ರಕರಣಗಳು ನ್ಯಾಯಾಂಗದ ಸ್ವರೂಪವಾಗಿದ್ದು ವಿವಾದ ಇತ್ಯರ್ಥವು ವಿವಾದದಲ್ಲಿ ನವಿಷಯಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದ ವಿವಾದಗಳನ್ನು ಇತ್ಯರ್ಥಪಡಿಸಲು ಅವಧಿಯನ್ನು ನಿಗಧಿಪಡಿಸುವುದು ಸಾಧುವಲ್ಲ, ಆದರೂ ಶೀಘ್ರ ಇತ್ಯರ್ಥಕ್ಕಾಗಿ ಸಂಬಂಧಪಟ್ಟವರನ್ನು ವಿನಂತಿಸಲಾಗಿದೆ.

ಇ) ಹೌದು.

ಮೈಸೂರು ಬಸ್ ಸ್ಟ್ಯಾಂಡಿನ ಕ್ಯಾಂಟೀನ್ ಕುರಿತು

458 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬಸ್ ಸ್ಟ್ಯಾಂಡಿನ ಕೆ.ಎಸ್.ಆರ್.ಟಿ.ಸಿ. ಕ್ಯಾಂಟೀನ್‌ಗೆ ಟೆಂಡರ್ ಕರೆಯಲಾಗಿದೆಯೇ?

ಆ) ಇದರಲ್ಲಿ ಇಲಾಖಾ ಅಧಿಕಾರಿಗಳು ಶಾಮಿಲಾಗಿದ್ದಾರೆಯೇ ಎಂಬ ಬಗ್ಗೆ ಯಾರು ಸರ್ಕಾರಕ್ಕೆಈವರಿಗೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈ ಗೊಂಡಿರುವ ಕ್ರಮವೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಉಡುಪಿ ವಿಧಾನ ಸಭಾ ಕ್ಷೇತ್ರದಲ್ಲಿ ಬಂದ ಅರ್ಜಿಗಳ ವಿಲೇವಾರಿ ಅಕ್ರಮಸಕ್ರಮ ಸಮಿತಿ

459 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರ?

ಅ) ಉಡುಪಿ ವಿಧಾನ ಸಭಾ ಕ್ಷೇತ್ರದ ಮಲ್ಪೆ ಪುತ್ತೂರು ಮಣಿಪಾಲ ಬೈಲೂರು ಹಾಗೂ ಹೆರ್ಗಾ ಗ್ರಾಮ ಪಂಚಾಯತ್‌ಗಳು ಉಡುಪಿ ಪುರಸಭೆಗೆ ಸೇರಿರುವುದರಿಂದ ಕಳೆದ ಹಲವಾರು ವರ್ಷಗಳಿಂದ ಅಕ್ರಮವಾಗಿ ಕೃಷಿ ಹಾಗೂ ಮನೆಕಟ್ಟಿ ಕುಳಿತವರ ಅಕ್ರಮ ಸಮಿತಿಗೆ ಸಲ್ಲಿಸಿದ ಅರ್ಜಿಗಳ ವಿಲೇವಾರಿ ಮಾಡಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಮೇಲಿನ ಪಂಚಾಯತ್‌ಗಳಿಗೆ ಸೇರಿದ ಪ್ರದೇಶಗಳಿಂದ ನಮೂನೆ 50 ರಲ್ಲಿ ಒಟ್ಟು 1357 ಅರ್ಜಿಗಳು ಬಂದಿದ್ದು, 324.74 ಎಕರೆ ಸರ್ಕಾರಿ ಜಮಿನನ್ನು ಒಳಗೊಂಡಿರುವುದಾಗಿರುತ್ತವೆ. ಈ ಎಲ್ಲಾ ಅರ್ಜಿಗಳ ಬಗ್ಗೆ ಪರಶೀಲನಾ ವರದಿ ತರಿಸಿಕೊಂಡಿದ್ದು, ಈತನಕ 140 ಕಡತಗಳನ್ನು ಸಕ್ರಮೀಕರಣ ಸಮಿತಿಯ ಬೈಠಕ್‌ಗಳಲ್ಲಿ ಪರಿಶೀಲಿಸಿದ್ದು ಅವುಗಳ ಪೈಕಿ 110ಅರ್ಜಿಗಳ ಬಗ್ಗೆ 20.39ಎಕರೆ ಮಂಜೂರಾತಿಯಾಗಿದ್ದು. 30 ಅರ್ಜಿಗಳಲ್ಲಿ $11.80\frac{1}{2}$ ಎಕರೆ ತಿರಸ್ಕೃತವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಸಾರಿಗೆ ಸಂಸ್ಥೆಯ ಬಸ್ಸುಗಳ ಕುರಿತು.

211 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ಸಂಸ್ಥೆಗೆ ಸಂಬಂಧಿಸಿರುವ ಒಟ್ಟು ಬಸ್ಸುಗಳೆಷ್ಟು?

ಆ) ಅದರಲ್ಲಿ ಕೆಂಪು ಬಸ್ಸು, ಸೆಮಿ ಡಿಲಿಕ್ಸ್ ಹಾಗೂ ಸುವಿಹಾರಿ ಬಸ್ಸುಗಳೆಷ್ಟು? (ತಾಲ್ಲೋಕುವಾರು ವಿವರ ನೀಡುವುದು.)

ಇ) ಬಸ್ಸುಗಳ ಕೊರತೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಇದೆ? (ತಾಲ್ಲೋಕುವಾರು ವಿವರ ನೀಡುವುದು.)

ಈ) ಇದರ ಬಗ್ಗೆ ತೆಗೆದುಕೊಂಡ ಕ್ರಮವೇನು.

ಉ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸ ಬಸ್ಸು ಯಾವ ಯಾವ ತಾಲ್ಲೋಕುಗಳಿಗೆ ಎಷ್ಟು ನೀಡಲಾಗಿದೆ.

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆ 450 ವಾಹನ ಬಲವನ್ನು ಹೊಂದಿದೆ.

ಆ) ಈ ವಿಭಾಗದಲ್ಲಿ ಹೊಂದಿರುವ ಸುವಿಹಾರಿ ಅರೆ ಸುವಿಹಾರಿ ಗ್ರಾಮಾಂತರ ವಾಹನಗಳು ಈ ಕೆಳಕಂಡಂತಿವೆ.

ಮಾದರಿ	ಸಿರ್ಸಿ	ಹಳಿಯಾಲ	ಕುಮಟಾ	ಕಾರವಾರ್	ಭಟ್ಕಲ್	ಒಟ್ಟು
ಸುವಿಹಾರಿ	5	2	2	2	2	13
ಅರೆ ಸುವಿಹಾರಿ	5	2	10	7	4	28
ಗ್ರಾಮಾಂತರ	117	84	77	83	48	409
ಒಟ್ಟು	127	88	89	92	54	450

ಇ) ಈ ವಿಭಾಗವು 413 ಅನುಸೂಚಿಗಳಿಗೆ 450 ವಾಹನ ಬಲ ಹೊಂದಿದ್ದು ಶೇ. 9.10 ರಷ್ಟು ಹೆಚ್ಚುವರಿ ವಾಹನ ಬಲ ಹೊಂದಿದೆ. ಈ ವಿಭಾಗದಲ್ಲಿ ಕಾರ್ಯಾಚರಣೆಗಾಗಿ ವಾಹನಗಳ ಕೊರತೆ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉ.ಕ. (ಸಿರ್ಸಿ) ವಿಭಾಗಕ್ಕೆ ಈ ಕೆಳಕಂಡಂತೆ ಹೊಸ ವಾಹನಗಳನ್ನು ನೀಡಲಾಗಿದೆ.

ಮಾದರಿ	ಸಿರ್ಸಿ	ಹಳಿಯಾಲ	ಕುಮಟಾ	ಕಾರವಾರ	ಭಟ್ಕಲ	ಒಟ್ಟು
ಡಿಸೆಂಬರ್-1995ರ ವರೆಗೆ.	13	10	10	11	05	49

ಶಿರಸಿಯಲ್ಲಿರುವ ತೋಟಗಾರಿಕೆ ಇಲಾಖೆ ಸಂಸ್ಕರಣ ಮಂಡಳಿಯಲ್ಲಿ ಅವ್ಯವಹಾರ

197 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಸಿಯಲ್ಲಿರುವ ತೋಟಗಾರಿಕೆ ಇಲಾಖೆಯ ಜಿಲ್ಲಾ ಹಣ್ಣು ಸಂಸ್ಕರಣ ಮಂಡಳಿಯಲ್ಲಿ ಈ ಹಿಂದೆ ನಡೆದ ಅವ್ಯವಹಾರವು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಯಿತು.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬಂದಿದೆ.

ಈ ಸಂಘದಲ್ಲಿ ನಡೆದಿದೆ ಎಂಬ ಅವ್ಯವಹಾರದ ಬಗ್ಗೆ ಈ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರನ್ನು ದಿನಾಂಕ: 2-12-95 ರಂದು ನಿಯೋಜಿಸಿ ತಪಾಸಣೆ ಮಾಡಿಸಿದೆ. ಇದಲ್ಲದೆ ಈ ಸದರಿ ಸಂಘದ ಅವ್ಯವಹಾರದ ಬಗ್ಗೆ ಈಗಾಗಲೇ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಬೆಳಗಾವಿ ವಿಭಾಗ, ಬೆಳಗಾವಿ, ಇವರು ಸಹಕಾರ ಸಂಘಗಳ ಕಾಯ್ದೆ 1959 ಕಾಲಂ 64(1) ಪ್ರಕಾರ ವಿಚಾರಣೆಯನ್ನು ಮಾಡಿ ಕೂಡಲೇ ವರದಿ ಒಪ್ಪಿಸುವಂತೆ ಮಾರಾಟ ಅಧಿಕಾರಿಯನ್ನಾಗಿ ಮಾಡಿ ಆದೇಶ ಹೊರಡಿಸಿರುತ್ತಾರೆ. ಸದರಿ ವಿಚಾರಣಾ ವರದಿ ಬಂದ ಮೇಲೆ ಕೂಡಲೇ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಲಾಗುವುದು.

ತೋಟಗಾರಿಕೆ ಇಲಾಖೆಗೆ ಬಿಡುಗಡೆಯಾದ ಹಣ

188 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಗೆ 1995Ë96ರಲ್ಲಿ ಬಿಡುಗಡೆಯಾದ ಒಟ್ಟು ಹಣವೆಷ್ಟು?

ಆ) ಯಾವ ಯಾವ ಯೋಜನೆಗಳಿಗೆ ಖರ್ಚಾದ ಹಣವೆಷ್ಟು? (ಯೋಜನೆವಾರು)

ಇ) ಎಷ್ಟು ಫಲಾನುಭವಿಗಳಿಗೆ ನೀಡಿದೆ? (ಗ್ರಾಮ ಪಂಚಾಯಿತಿವಾರು ವಿವರ)

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಒಟ್ಟು ರೂ. 5,645.85 ಲಕ್ಷಗಳು.

ರಾಜ್ಯವಲಯ	1,111.14
ಕೇಂದ್ರವಲಯ	1,997.69
ಜಿಲ್ಲಾ ವಲಯ	595.71
ವಿಶೇಷ ಜಿಲ್ಲಾ ಕೇಂದ್ರ ವಲಯ	91.46
ಯೋಜನೇತರ	1,849.81
ಒಟ್ಟು	5,645.85 ಲಕ್ಷಗಳು

ಆ) ಜನವರಿ 1996ರ ಅಂತ್ಯದವರೆಗಿನ ಯೋಜನಾವಾರು ಖರ್ಚಿನ ವಿವರಗಳನ್ನು ಲಗತ್ತಿಸಿದೆ.

ಇ) 1995-96ರಲ್ಲಿನ ಯೋಜನೆಗಳು ಇನ್ನೂ ಅನುಷ್ಠಾನದಲ್ಲಿರುತ್ತದೆ. ಯೋಜನೆಗಳು ಮಾರ್ಚ್ 96ರ ಅಂತ್ಯಕ್ಕೆ ಅನುಷ್ಠಾನ ಅಂತ್ಯಗೊಂಡ ನಂತರ ಫಲಾನುಭವಿಗಳ ಪಟ್ಟಿಯನ್ನು ಒದಗಿಸಲಾಗುವುದು.

Plan Scheme 1995-96

Central Sector Scheme/Centrally Sponsored Scheme State Sector Scheme And District Sector Scheme

Sl.n.	Name of the Scheme	Head of Account	Rs. in lakhs
1	2	3	4
1.	Replacement of old vehicles condemned by R.T.O.	2401-00-001-2-02	15.00
2.	Computerization in the Directorate of Horticulture	2401-00-001-2-03	2.25
3.	Monitoring and Evaluation Unit.	2401-00-001-2-04	-
4.	Strenghtening of Auditing and Accounting	2401-00-001-2-05	1.10
5.	Development of Coconut with Coconut Development Board Assistance	2401-00-108-2-16	2.84
6.	Plantation crops	2401-00-108-2-17	1.46

7.	Centrally Sponsored Scheme for Oil Palm cultivation in Potential States.	2401-00-108-2-18	204.56
8.	Central Sector Scheme for Integrated Development of Spices	2401-00-108-2-19	174.56
9.	Oil Palm Demonstration Project.	2401-00-108-2-23	22.93
10.	Central Sector Scheme for Development of Cocoa	2401-00-108-2-26	9.43
11.	Central Sector Scheme for Development of Arecanut	2401-00-108-2-27	25.54
12.	Central Sector Scheme for Development of Tropical and Arid Zone Fruits	2401-00-108-2-28	63.92
13.	Establishment of Nutritional Gardens in Rural areas.	2401-00-108-2-29	10.80
14.	Centrally Sponsored Scheme for use of plastics in agriculture	2401-00-108-2-30	258.52
15.	Horticulture Marketing Information Central	2401-00-108-2-34	C.72
16.	Scheme for Integrated Farming in Coconut holdings.	2401-00-108-2-35	35.36
17.	New Centrally Sponsored/ Externally Aided Projects	2401-00-119-1-01	-
18.	Development of Mushroom	2401-00-119-1-03	8.09
19.	Central Sector Scheme for Production and Distribution Vegetable Seeds	2401-00-119-1-08	5.93
20.	Scheme for True Potato Seed Production	2401-00-119-1-09	3.77
21.	Lumpsum,. Provision for Externally Aided projects for preparation of project Report.	2401-00-119-1-10	-
22.	Central Sector Scheme for Developement of Betelving	2401-00-119-1-11	3.19

23.	Special programme for Develoment of Grapes, Export market in Bijapur and Belgaum districts.	2401-00-119-1-12	5.67
24.	Development of Region Central for Floricultura	2401-00-119-2-01	8.49
25.	Central Sector Scheme for Development of Commercial Floriculture	2401-00-119-2-04	4.23
26.	Extension and Training	2401-00-119-3-01	12.03
27.	Training to Farmers Bangalore (Urban)	2401-00-119-3-2	-
28.	Training for Horticultural Officers	2401-00-119-3-04	-
29.	Regional Centras for Vegetable Seed Production.	2401-00-119-4-01	17.88
30.	Central Sector Scheme for Intergrated Development of Cashew	2401-00-119-4-02	132.88
31.	Production and distribution of quality planting materials of Horticultural Crops	2401-00-119-4-03	47.20
32.	Development of Infrastructures in Farms and Nurseries including purchase of farms machineries and equipments.	2401-00-119-4-04	29.44
33.	Developing underdeveloped area in farms and nurseries and development of new farms.	2401-00-119-4-05	15.41
34.	Development of Departmental Laboratories	2401-00-119-5-01	44.59
35.	Scheme for Integrated control of pests and diseases of horticultural crops	2401-00-119-5-02	32.29
36.	Plant Protection Measures Banlgalore (Urban)	2401-00-119-5-04	0.41

37.	Horticulture Buildings	2401-00-119-6-03	23.27
38.	Tribunal Sub-Area plan	2401-00-796-2-00	24.65
39.	Fairs and Exhibition Mysore Dasara	2401-00-800-2-01	1.65
40.	Strengthening of Dr. M.H. Marigowda Library	2401-00-800-2-02	0.76
41.	Development of Horticulture in line with Maharastra State (Hombally)	2401-00-800-2-03	31.13
42.	Integrated Development of Horticulture under ACRP Project in Shimoga District Hirehalla Watershed	2401-00-800-2-04	-
43.	Special Component plan	2401-00-800-2-05	93.67
44.	Central Sector Scheme for Roots and Tubers	2401-00-800-2-07	1.47
45.	Lalbhag Botanical Graden	2406-02-112-0-01	20.15
46.	Comprehensive Development of Central Administrative Areas (Chamaraja Park and Vidhana Soudha Unit Gardens)	2406-02-112-0-02	54.27
47.	Maintenance and Development of Hill Stations in the State	2406-02-112-0-05	16.58
48.	Development of Botanical and other Ornamental gardens	2406-02-112-0-07	18.79
49.	Buildings	4401-00-119-1-00	2.59
50.	HOPCOMS	4401-00-119-3-00	-
51.	Cold Storage	4401-00-119-4-00	-

District Sector Scheme For The Year 1995-96

Sl.no.	Head of Account	Rs.in.lakhs
(A) State Plan Schemes		
1.	02-Maintenances of Farms 2401-00-000-0-02	3.88
2.	108 Commercial Crops 2-Horticulture, 71-Scheme for Seed Coconut Procurement and Nursery Maintenance. 2401-00-108-2-71	55.31
3.	119-Horticulture and Vegetable crops 2401-00-119-0-00	-
4.	1-Development of Fruits and Vegetables 76-Marketing of fruits and Vegetables 2401-00-119-1-76	19.51
5.	3-Extension and Training 71-Training to farmers 2401-00-119-3-71	7.88
6.	72-Demonstration (Area Expansion for Horticultural Crops) 2401-00-119-3-72	21.69
7.	73-Seminars, Field Days and Exhibitions 2401-00-119-3-73	3.94
8.	74-Publicity and Literature 2401-00-119-3-74	2.80
9.	75-Mushroom Training 2401-00-119-3-75	2.56
10.	76-Development of Show plants in front of Government offices/Guest Houses. 2401-00-119-3-76	4.56
11.	77-Assistance to Farmers under the programme of Extension of Area under horticulture crops 2401-00-119-3-77	25.75
12.	4-Development of Farms and Infrastructure 71-Development of Infrastructure improvement	21.37

	of Farms and Nurseries. 2401-00-119-4-71	
13.	75-Development of Mandal Nurseries 2401-00-119-4-75	1.15
14.	77-Propagation of Horticultural Crops 2401-00-119-4-77	40.99
15.	78-Social Horticulture 2401-00-119-4-78	4.68
16.	5-plant Protection Measures for Horticutrural Crops 71-Supply of Plant Protection Chemicals to farmers on 50% subsidy. 2401-00-119-5-71	27.13
17.	74-plant Protection Laboratories 2401-00-119-5-74	3.72
18.	75-Control of Mushroom Disease in Coconut and Arecanut crops (Free Supply of pesticides) 2401-00-119-5-75	2.89
19.	76-Horticultural Buildings 71-Horticulture Buildings. 2401-00-119-6-71	18.08
20.	108-Commercial Crops, 2-Horticultur, 68-Coconut Development Board Assistance for Installation of pumpsets (State) 2401-00-108-2-68	-
21.	72-Processing and Preservation of fruits and Vegetables. 2401-00-119-6-72	0.27
22.	119-Horticulture and Vegetable Crops 3-Extension & Training 77-Assistance to farmers under the Programme of Extension of Ares under Horticultural Crops (State) 2401-00-119-3-77	
23.	Special Component plan (State) 2225-01-800-0-05	83.37
24.	Tribal Sub-Plan (State) 2225-02-796-1-08	21.00

25.	Special Component Plan (Central) 2225-01-793-0-01	49.53
26.	Tribal Sub-Plan (Central) 2225-02-0794-0-02	21.14

ಶಿರಸಿ ಆರ್.ಟಿ.ಓ. ಕಛೇರಿಯಲ್ಲಿ ಖಾಲಿ ಇರುವ ಹುದ್ದೆಗಳು

210 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಸಿ ಆರ್.ಟಿ.ಓ. ಆಫೀಸಿನಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳೆಷ್ಟು;

ಆ) ಇವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಇ) ಶಿರಸಿಯಲ್ಲಿ ಆಫೀಸಿಗೆ ಸ್ವಂತ ಕಟ್ಟಡ ಯಾವಾಗ ಆಗುತ್ತದೆ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಶಿರಸಿ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಖಾಲಿಯಿರುವ ಹುದ್ದೆಗಳ ವಿವರಗಳು ಕೆಳಕಂಡಂತಿವೆ.

ಹುದ್ದೆಯ ಹೆಸರು	ಸಂಖ್ಯೆ
ಪ್ರಾದೇಶಿಕ ಸಾರಿಗೆ ಅಧಿಕಾರಿ	1
ಮೋಟಾರು ವಾಹನ ನಿರೀಕ್ಷಕರು	1
ಪ್ರಥಮ ದರ್ಜೆ ಸಹಾಯಕರು	2
ಬೆರಳಚ್ಚುಗಾರ	1
'ಡಿ' ದರ್ಜೆ	1
	6

ಆ) ಈಗಾಗಲೇ ಭರ್ತಿ ಮಾಡುವ ಕ್ರಮ ವಹಿಸಿದೆ. ಆಯ್ಕೆ ಪ್ರಾಧಿಕಾರಗಳಿಂದ ಅಭ್ಯರ್ಥಿಗಳ ಆಯ್ಕೆಪಟ್ಟಿ ಬಂದ ನಂತರ ನೇಮಕಾತಿ ಆದೇಶ ನೀಡುವ ಕ್ರಮ ವಹಿಸಲಾಗುವುದು.

ಇ) ಕಂದಾಯ ಇಲಾಖೆಯವರಿಂದ ಕಛೇರಿಗೆ ಸ್ವಂತ ನಿವೇಶನ ಮಂಜೂರಾತಿ ಆದೇಶ ದೊರಕಿದ ತಕ್ಷಣ ಕಟ್ಟಡ ಕಟ್ಟುವ ಬಗ್ಗೆ ಪ್ರಯತ್ನಿಸಲಾಗುವುದು.

ಅಧ್ಯಕ್ಷರು : ಲಿಖಿತ ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಲಾಯಿತು.

ಮಾನ್ಯ ಜಯರಾಮ್ ಶೆಟ್ಟರೆ ತಾವು ನಿನ್ನೆದಿವಸ ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಿರಿ. ಆದರೆ ನಿನ್ನೆ ಲೋಕೋಪಯೋಗಿ ಸಚಿವರು ಇರಲಿಲ್ಲ, ಇಂದು ಸಚಿವರು ಇದ್ದಾರೆ, ಆದ್ದರಿಂದ ತಾವು ತಮ್ಮ ವಿಚಾರವನ್ನು ಪ್ರಸ್ತಾಪ ಮಾಡಬಹುದು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ

+ ಶ್ರೀ ಕೆ. ಜಯರಾಮ್ ಶೆಟ್ಟಿ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಸಭಾ ಅಧಿವೇಶದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ

ರಸ್ತೆಗಳು ರಾಷ್ಟ್ರೀಯ ಹೆದ್ದಾರಿಯ ರಸ್ತೆಗಳು, ಇತರೆ ರಸ್ತೆಗಳು ಡಾಂಬರೀಕರಣವಾಗದಿರುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಕ್ಕೆ ಜಿಲ್ಲೆಯಲ್ಲಿ ಮಳೆಗಾಲ ಮುಗಿದ ತಕ್ಷಣ ನವೆಂಬರ್ ತಿಂಗಳಿನಿಂದ ಡಾಂಬರೀಕರಣ ವ್ಯವಸ್ಥೆಯನ್ನು ಮಾಡುತ್ತೇವೆಂದು ಈ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದಿರಿ. ಲೋಕೋಪಯೋಗಿ ಇಲಾಖೆಯ ವತಿಯಿಂದ ನನ್ನ ಕ್ಷೇತ್ರದಲ್ಲಿ. ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಇಡೀ ರಾಜ್ಯದಲ್ಲಿಯೇ 1994-95ನೇ ವರ್ಷದಲ್ಲಿ ರಸ್ತೆಗಳ ಡಾಂಬರೀಕರಣಕ್ಕೆ ಏನು ಅನುಧಾನ ಬಿಡುಗಡೆಯಾಗಿದೆ. ರಸ್ತೆಗಳ ಡಾಂಬರೀಕರಣದ ಕೆಲಸವೇನಾಗುತ್ತಿತ್ತು ಅದು ಇನ್ನೂ ಪೂರ್ತಿಯಾಗಿಲ್ಲ. ಇದರ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ವಿಚಾರಿಸಿದಾಗ, ಕಳೆದ ವರ್ಷ ಬಿಡುಗಡೆಯಾಗಬೇಕಾಗಿದ್ದ ಡಾಂಬರ್ ಇನ್ನೂ ಬಿಡುಗಡೆಯಾಗಿಲ್ಲ, ಆದ್ದರಿಂದ ಡಾಂಬರೀಕರಣ ಮಾಡಲು ನಮ್ಮಿಂದಾಗಲಿಲ್ಲವೆಂದು ಉತ್ತರವನ್ನು ಕೊಡುತ್ತಾರೆ. ನಮ್ಮ ಕರ್ನಾಟಕ ರಾಜ್ಯಕ್ಕೆ ಮದ್ರಾಸ್ ರಿಫೈನರೀ ಸಂಸ್ಥೆಯಿಂದ ಡಾಂಬರ್ ಬರಬೇಕು. ಆದರೆ ಅಲ್ಲಿಂದ ನಮ್ಮ ರಾಜ್ಯಕ್ಕೆ ಡಾಂಬರ್ ಬಿಡುಗಡೆಯಾಗುತ್ತಿಲ್ಲವೆಂದು ಉತ್ತರ ಬರುತ್ತದೆ. ಕೇರಳ ಮತ್ತು ಇತರೆ ನಮ್ಮ ನೆರೆ ರಾಜ್ಯಗಳಿಗೆ ಬೇರೆ ಬೇರೆ ಮೂಲಗಳಿಂದ ಡಾಂಬರ್‌ನ್ನು ಒದಗಿಸುತ್ತಿದ್ದಾರಂತೆ ಈ ರೀತಿ ಏಕೆ ನಮ್ಮ ರಾಜ್ಯಕ್ಕೆ ಡಾಂಬರ್ ಬರುತ್ತಿಲ್ಲ. ನಮ್ಮ ಮಂಗಳೂರು ಯೂನಿಟ್‌ನಿಂದಲೇ ನಾಲ್ಕು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಒದಗಿಸಿದ್ದಾರೆ. ಆದರೂ ಡಾಂಬರೀಕರಣದ ಕೆಲಸ ಆಗಲಿಲ್ಲವೆಂದರೆ ಹೇಗೆ? ಕರ್ನಾಟಕಕ್ಕೆ ಮಾತ್ರ ಈ ವ್ಯವಸ್ಥೆ ಏಕೆ? ಒಬ್ಬ ಶಾಸಕನಾಗಿದ್ದು ರಸ್ತೆಗಳ ರಿಪೇರಿಯಾಗದಿದ್ದರೆ, ಡಾಂಬರೀಕರಣವಾಗದಿದ್ದರೆ ಜನರು ನೇರವಾಗಿ ಶಾಸಕರನ್ನೇ ಇದಕ್ಕೆ ಜವಾಬ್ದಾರರನ್ನಾಗಿ ಮಾಡುತ್ತಿರತಕ್ಕ ಸಂದರ್ಭದಲ್ಲಿ ಈ ವರ್ಷದಲ್ಲಿ ತಮ್ಮ ಅನುದಾನದಲ್ಲಿ ಏನು ಹಣ ಬಿಡುಗಡೆಯಾಗಿದೆ, ಡಾಂಬರ್ ಇಲ್ಲದಿದ್ದರೆ ಯಾವ ರೀತಿಯಾದ ವ್ಯವಸ್ಥೆ ಮಾಡುತ್ತೀರಿ? ದಯವಿಟ್ಟು ರಸ್ತೆಗಳ ಡಾಂಬರೀಕರಣದ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು. ತಮ್ಮ ಮತ್ತು ಕೇಂದ್ರ ಸರ್ಕಾರದ ನಡುವೆ ಸೌಹಾರ್ದಯುತವಾದ ಸಂಬಂಧವಿಲ್ಲದ ಕಾರಣ ನಮ್ಮ ರಾಜ್ಯಕ್ಕೆ ಡಾಂಬರ್ ಬರುತ್ತಿಲ್ಲವೆ? ಇದರ ಬಗ್ಗೆ ಮಾನ್ಯ ಮಂತ್ರಿಗಳು ನೇರವಾಗಿ ಉತ್ತರವನ್ನು ಕೊಡಬೇಕು. ಮತ್ತು ರಸ್ತೆಗಳನ್ನು ದುರಸ್ತಿ ಮಾಡಿಸಿಕೊಡಲು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ. ರಾಜ್ಯದಲ್ಲಿ ಡಾಂಬರಿನ ಕೊರತೆ ಇದ್ದದ್ದು ನಿಜ. ಮದ್ರಾಸ್ ಮತ್ತು ಬಾಂಬೆಯ ರಿಫೈನರೀಸ್ಸ್ ಸಂಸ್ಥೆಯವರಿಗೆ ನಾವು ಈಗಾಗಲೇ ಮುಂಗಡವಾಗಿ ಹಣವನ್ನು ಕೊಟ್ಟಿದ್ದೇವೆ. ಆದರೂ ಸಹ ಅಲ್ಲಿ ಬೇಡಿಕೆ ಜಾಸ್ತಿ ಇದ್ದು ಆದ್ಯತೆಯ ಆಧಾರದ ಮೇಲೆ ಕೊಡುತ್ತಿದ್ದಾರೆ. ನಾವು ಮುಂಗಡ ಕೊಟ್ಟಿದ್ದರೂ ಸಹ ಬೇಡಿಕೆ ಜಾಸ್ತಿ ಇರುವುದರಿಂದ ಡಾಂಬರ್‌ನ್ನು ಕೊಡುವುದರಲ್ಲಿ ತೊಂದರೆಯಾಗಿದೆ. ಮತ್ತು ಕಾವೇರಿ ವಿವಾದದ ಬಗ್ಗೆ ಎರಡು ವಾರದ ವರೆಗೆ ನಮಗೆ ಮದ್ರಾಸ್‌ನವರು ಡಾಂಬರ್‌ನ್ನು ಕಳಿಸಿಕೊಡಲಿಲ್ಲ, ಮುಂಬೈನಲ್ಲಿ ರಿಫೈನರೀಸ್ ಸ್ವಲ್ಪ ದಿವಸ ಕೆಟ್ಟಿದ ಕಾರಣ ಅಲ್ಲಿಂದಲೂ ಡಾಂಬರ್ ಬರಲಿಲ್ಲ. ಈಗ ಸಧ್ಯದಲ್ಲಿ ಡಾಂಬರ್ ಬರಲು ಪ್ರಾರಂಭವಾಗಿದೆ, ಆದರೂ ಮೊದಲಿನಷ್ಟು ಸರಾಗವಾಗಿ ಡಾಂಬರ್ ಸಪ್ಲೈಯಾಗುತ್ತಿಲ್ಲ. ಯಾವುದೇ ಪರಿಸ್ಥಿತಿ ಇದ್ದರೂ ನಾವು ಆ ಡಾಂಬರ್‌ನ್ನು ತರಿಸುತ್ತೇವೆ ಮತ್ತು 1994-95ರ ಸಾಲಿನಲ್ಲಿನ ಅಥವಾ ಮತ್ತಾವುದೇ ಯೋಜನೆಯ ಕೆಲಸಗಳಿಗೆ ಅಡೆತಡೆಯಾಗದಂತೆ ನಾವು ನೋಡಿಕೊಳ್ಳುತ್ತೇವೆ. ಎಂದು ಹೇಳಬಯಸುತ್ತೇನೆ.

2) ಕುಂದಾಪುರ ಕ್ಷೇತ್ರದಲ್ಲಿ ನಾಲ್ಕು ಕೊಲೆ ಪ್ರಕರಣಗಳು

+ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ನಾಲ್ಕು ಕೊಲೆ ಪ್ರಕರಣಗಳನ್ನು ಸಿ.ಓ.ಡಿ. ತನಿಖೆಗೆ ವಹಿಸಲಾಗಿದೆ. ಈ

ನಾಲ್ಕು ಪ್ರಕರಣಗಳ ಸಿ.ಓ.ಡಿ. ತನಿಖೆಯಲ್ಲಿ ಬಹುಶಃ ಒಂದರಲ್ಲಿ ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಮತ್ತು ನಾಗರೀಕರು ಸೇರಿಕೊಂಡು ಸುಮಾರು 301 ದಿವಸಗಳಿಂದ ಸರಣಿ ಉಪವಾಸ ಸತ್ಯಾಗ್ರಹವನ್ನು ಮಾಡಿಕೊಂಡು ಬರುತ್ತಿದ್ದಾರೆ. ಅವರ ಸತ್ಯಾಗ್ರಹಕ್ಕೆ ತಮ್ಮ ಆಡಳಿತ ವ್ಯವಸ್ಥೆಗಳ್ಯಾವುದೂ ಸ್ಪಂದಿಸದಂತೆ ಕಾಣುತ್ತಿಲ್ಲ. ಸನ್ಮಾನ್ಯ ಗೃಹ ಸಚಿವರು ಅಲ್ಲಿಗೆ ಭೇಟಿ ಕೊಟ್ಟಿದ್ದರು. ಅವರು ಏಕೆ ಉಪವಾಸ ಮಾಡುತ್ತಿದ್ದೀರಿ ಎಂದು ಕೇಳಲಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಇದ್ದಾರೆ ಅವರು ಬಂದು ವಿಚಾರಣೆ ಮಾಡಲಿಲ್ಲ. ಜಿಲ್ಲಾಧಿಕಾರಿಗಳು ಬಂದು ಏಕೆ ಸತ್ಯಾಗ್ರಹ ಮಾಡುತ್ತಿದ್ದೀರಿ ಎಂದು ಕೇಳಲಿಲ್ಲ. ಉನ್ನತ ಹುದ್ದೆಯಲ್ಲಿರತಕ್ಕ ಪೋಲೀಸ್ ಇಲಾಖೆಯ ಮುಖ್ಯಸ್ಥರು ಕುಂದಾಪುರ ತಾಲ್ಲೂಕಿಗೆ ಬಂದಿದ್ದರು, ಅವರೂ ಸಹ ಇದರ ಬಗ್ಗೆ ವಿಚಾರ ಮಾಡಲಿಲ್ಲ. ಅವರುಗಳು ಕೇಳಬೇಕು.

ಎನ್ನತಕ್ಕ ವಾದ ನನ್ನದಲ್ಲ. ಆದರೆ ಒಂದು ಹುದ್ದೆಯಲ್ಲಿರತಕ್ಕ ಜನರು ಏತಕ್ಕಾಗಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಆ ಸತ್ಯಾಗ್ರಹದ ಮೂಲ ಉದ್ದೇಶವೇನು ಎಂಬ ಬಗ್ಗೆ ಕೇಳತಕ್ಕ ಸೌಜನ್ಯವನ್ನು ಉನ್ನತಾಧಿಕಾರಿಗಳ ಹತ್ತಿರ ಇರಬೇಕಾಗಿತ್ತು. ನಾವುಗಳು ಪ್ರತಿದಿವಸ ತಂತಿಯನ್ನು ಕಳಿಸುತ್ತಿದ್ದೇವೆ, ಅದಕ್ಕೂ ಉತ್ತರಿಸತಕ್ಕ ವ್ಯವಸ್ಥೆ ಮಾಡಿಲ್ಲ. ನಾನು ತಮಗೆ ಕೇಳುವುದೇನೆಂದರೆ,. ತಾವೇನು ಒಂದು ಪ್ರಕರಣದಲ್ಲಿ ಆರೋಪ ಪಟ್ಟಿಯನ್ನು ಸಲ್ಲಿಸಿದ್ದೀರಿ ಅದು ಸರಿಯಾಗಿದೆಯೋ ಅದರಲ್ಲಿ ಸರಿಯಾದ ಅಪರಾಧಿಗಳನ್ನು ಗುರುತಿಸಿದ್ದೀರೋ? ಆ ಆರೋಪ ಪಟ್ಟಿಯನ್ನು ಮೇಲ್ನೋಟಕ್ಕೆ ನೋಡಿದ್ದಲ್ಲಿ ಬಹುಶಃ ಪೂರ್ವಾಗ್ರಹ ಪೀಡಿತವಾದುದು, ಅಪರಾಧಿಗಳನ್ನು ರಕ್ಷಿಸುವುದಕ್ಕೋಸ್ಕರ ತಯಾರು ಮಾಡಿರತಕ್ಕ ಅಪೂರ್ವವಾದ ಆರೋಪ ಪಟ್ಟಿಯೆಂದು ಕಂಡುಬರುತ್ತದೆ. ಆದ್ದರಿಂದ ನಮ್ಮ ಕಾರ್ಯಕರ್ತರು ಮತ್ತು ನಾಗರೀಕರು ಸುಮಾರು ಹತ್ತು ತಿಂಗಳುಗಳಿಂದ ಸತ್ಯಾಗ್ರಹವನ್ನು ಮಾಡುತ್ತಿದ್ದರೂ ಅದರ ಬಗ್ಗೆ ವಿಚಾರ ಮಾಡತಕ್ಕ ಸೌಜನ್ಯವಿಲ್ಲದಿರುವ ರಾಜ್ಯದಲ್ಲಿ ನಾವಿದ್ದೇವೆ. ಕಳೆದ ಹತ್ತು ತಿಂಗಳಿಂದ ನಮ್ಮ ಕಾರ್ಯಕರ್ತರು ಮತ್ತು ನಮ್ಮ ಊರಿನ ನಾಗರೀಕರು ಎಲ್ಲ ಸೇರಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ನಾನು ಇಲ್ಲಿ ಭಾಷಣ ಮಾಡಿಕೊಂಡು ಹೋಗಲು ಬಂದಿಲ್ಲ, ನಮಗೆ ನ್ಯಾಯ ಸಿಗುವವರೆಗೆ ಇಲ್ಲಿ ಕುಳಿತುಕೊಳ್ಳಬೇಕು ಎನ್ನತಕ್ಕ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ಇಲ್ಲದಿದ್ದರೆ ನಮ್ಮ ಪರವಾಗಿ ಉತ್ತರವನ್ನು ಕೊಟ್ಟರೆ ಸರಿಯಾಗುತ್ತದೆ. ಅವರನ್ನು ಬಂಧಿಸಿ ಇವರನ್ನು ಬಂಧಿಸಿ ಎಂದು ಹೇಳತಕ್ಕ ಯಾವುದೇ ಆರೋಪದ ಬಗ್ಗೆ ನಾನು ಮಾತನಾಡುತ್ತಿಲ್ಲ.

ಯಾವುದೇ ಆರೋಪವನ್ನು ವ್ಯಕ್ತಮಾಡತಕ್ಕ ಭಾವನೆಯಿಂದ ಮಾತನಾಡುತ್ತಿಲ್ಲ. ಒಬ್ಬರನ್ನು ಕೊಲೆ ಮಾಡಿರತಕ್ಕ ಸಮಯದಲ್ಲಿ ನ್ಯಾಯಯುತವಾಗಿ ಅಪರಾಧಿಗಳನ್ನು ಪತ್ತೆ ಮಾಡು ಎಂದು ತಮ್ಮಲ್ಲಿ ಕೇಳುವುದೇ ಸರಿಯಾಗಿ ಕಾಣಿಸದಿದ್ದರೆ ನಾವು ಈ ಸದನದಲ್ಲಿ ಸದಸ್ಯರಾಗಿದ್ದು ಏನು ಪ್ರಯೋಜನವೆಂದು ಅನ್ನಿಸುತ್ತದೆ. ಇಂಥ ಪ್ರಸಂಗಗಳು ತಮಗೆ ಸಾಮಾನ್ಯವಾಗಿರಬಹುದು. ಆದರೆ ನನ್ನಂಥವರಿಗೆ ಇದು ಸಾಮಾನ್ಯವಲ್ಲ. ಆದ್ದರಿಂದ ನಾನು ಪ್ರಾಮಾಣಿಕವಾಗಿ ಸನ್ಮಾನ್ಯ ಗೃಹ ಸಚಿವರಲ್ಲಿ ಕೇಳುತ್ತಿದ್ದೇನೆ. ಇದರ ಬಗ್ಗೆ ಬೇಕಾದಷ್ಟು ಕೋರ್ಟ್‌ನಲ್ಲಿದೆ. ನಾವೇನೂ ಮಾಡುವುದಕ್ಕಾಗುವುದಿಲ್ಲವೆಂದು ತಾವು ಹಾರಿಕೆಯ ಉತ್ತರವನ್ನು ಕೊಡಬಹುದು. ಅದನ್ನು ನಾನು ನಿರೀಕ್ಷಣೆ ಮಾಡಿದ್ದೇನೆ. ಆದರೆ ನಾನಾ ಸಹ ಬಹಳಷ್ಟು ತಿಳಿದಿದ್ದೇನೆ. ಯಾವ್ಯಾವ ಪ್ರಕರಣಗಳು ಯಾವುದೇ ಕೋರ್ಟ್‌ನಲ್ಲಿ ಇದ್ದರೂ ಅದನ್ನು ವಾಪಸ್ ತರಿಸಿಕೊಂಡು ಸಿ.ಬಿ.ಐ. ತನಿಖೆ ಮಾಡಿಸಲು ಏನು ಸಮಸ್ಯೆ? ಇದರ ಬಗ್ಗೆ ತನಿಖೆ ಮಾಡಲು ತಮಗೆ ಇರತಕ್ಕ ಒತ್ತಡಗಳೇನು? ನಾವು ಕೇಳಿರತಕ್ಕ ನ್ಯಾಯವನ್ನು ಒದಗಿಸಲು ತಮಗೆ ಏನಾದಾರೂ ಸಮಸ್ಯೆಗಳಿದ್ದರೆ ನೇರವಾಗಿ ಹೇಳಬಹುದು, ಮತ್ತು ಇದರ ಬಗ್ಗೆ ಉತ್ತರವನ್ನು ಮಾನ್ಯ ಗೃಹಸಚಿವರಿಂದ ನಿರೀಕ್ಷೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನಲ್ಲಿ 1990ರಲ್ಲಿ, 1994ರಲ್ಲಿ ಮತ್ತು 1993ರಲ್ಲಿ ಮೂರು ಮರ್ಡರ್‌ಗಳಾಗಿವೆ. 1995ನೇ ಇಸವಿಯಲ್ಲಿ ಆಗಿರತಕ್ಕ ಶ್ರೀ ವಸಂತಕುಮಾರ್ ಶೆಟ್ಟಿ ಎಂಬುವವರ ಕೊಲೆಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಇಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ಸಭೆಯ ಮುಂದಿಡುತ್ತೇನೆ.

ದಿನಾಂಕ 31.3.95ರಂದು ಫಿರ್ಯಾದಿ ಮಹಾಬಲಶೆಟ್ಟಿ ತನ್ನ ಮಗ ವಸಂತಕುಮಾರ ಶೆಟ್ಟಿ ತನ್ನ ಮನೆಗೆ ಹೋಗುವ ಹೊಳೇಕಲ್ ಜರಕ್ಷನ್‌ನಲ್ಲಿ ದಿನಾಂಕ 31.3.95ರ ರಾತ್ರಿ ಕೊಲೆ ಮಾಡಿರುತ್ತಾರೆಂದು ಫಿರ್ಯಾದನ್ನು ನೀಡಿರುತ್ತಾರೆ. ಸ್ಥಳೀಯ ಪೋಲೀಸರು ಶಂಕರನಾರಾಯಣ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 46 : 95 ಕಲಂ 143, 147, 148, 302 ವಿತ್ 149ರ ಪ್ರಕಾರ ನೋಂದಯಿಸಿಕೊಂಡು. ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಶವದ ಫೋಟೋ ತೆಗೆಸಿ., ಪಂಚನಾಮೆ ಮಾಡಿ ನಂತರ ಶವವನ್ನು ಪರೀಕ್ಷೆಗಾಗಿ ವೈದ್ಯಾಧಿಕಾರಿಯವರಿಗೆ ಕಳುಹಿಸಿದ್ದಾರೆ. ವೈದ್ಯಾಧಿಕಾರಿಯವರ ವರದಿಯ ಪ್ರಕಾರ ಮೃತನು ಹೊಡೆದ ಗಾಯದಿಂದ ಶಾಕ್ ಮತ್ತು ಹ್ಯಾಮರೇಜ್ ಆಗಿ ಸತ್ತಿರುತ್ತಾನೆ ಎಂದು ಅಭಿಪ್ರಾಯವನ್ನು ವ್ಯಕ್ತ ಮಾಡಿರುತ್ತಾರೆ. ನಂತರ ಏಳು ಜನ ಆಪಾದಿತರು ನಿರೀಕ್ಷಣಾ ಜಾಮೀನು ಪಡೆದಿದ್ದು, ಅವರನ್ನು ದಸ್ತಗಿರಿ ಮಾಡಿ ವಿಚಾರಮೆ ಮಾಡಿರುತ್ತಾರೆ. ದಿನಾಂಕ 15.5.95 ರಂದು ಈ ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ವಹಿಸಲಾಗಿದ್ದು ಸಿ.ಓ.ಡಿ. ತನಿಖಾಧಿಕಾರಿಗಳು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯವಾದ ಪೋಲೀಸರ ತನಿಖೆಯ ಬಗ್ಗೆ ಮರು ಪರಿಶೀಲನೆಯನ್ನು ಮಾಡಿರುತ್ತಾರೆ. 1ನೇ ಆರೋಪಿ ವಸಂತಕುಮಾರ್ ಶೆಟ್ಟಿ ಕೃತ್ಯ ನಡೆದ ಮೇಲೆ ಅವರನ್ನು ತಾರಾನಾಥ್ ಶೆಟ್ಟಿ ಹಾಲಾಡಿಯವರು ಪರಾರಿ ಮಾಡಲು ಸಹಾಯ ಮಾಡಿರುತ್ತಾರೆ ಎಂಬುದು ತನಿಖೆಯಿಂದ ವ್ಯಕ್ತವಾಗಿರುತ್ತದೆ. ಇವರನ್ನು ದಸ್ತಗಿರಿ ಮಾಡಲಾಗಿದ್ದು ನಂತರ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಸಿ.ಓ.ಡಿ. ತನಿಖೆಯಿಂದ ಹಾಗೂ ಸಾಕ್ಷಿದಾರರುಗಳ ಹೇಳಿಕೆಯಿಂದ 11ಜನ ಆರೋಪಿಗಳು ಮೃತನನ್ನು ಹೊಡೆದು ಗಾಯಗೊಳಿಸಿ, ಸಾಯಿಸಿರುವ ಬಗ್ಗೆ ಸಾಕಷ್ಟು ಪುರಾವೆಗಳು ದೊರಕಿರುವುದರಿಂದ ಅವರುಗಳ ವಿರುದ್ಧ ಕಲಂ 143, 147, 148, 302, 120ಡಿ, 208 ರೆಡ್ ವಿಡ್ 149 ರ ಭಾರತೀಯ ದಂಡ ಸಂಹಿತೆಯ ಪ್ರಕಾರ ನ್ಯಾಯಾಲಯಕ್ಕೆ ದಿನಾಂಕ 5.8.95 ರಂದು ದೋಷಾರೋಪಣೆಯ ಪಟ್ಟಿಯನ್ನು ಸಲ್ಲಿಸಲಾಗಿದೆ. ತಾರಾನಾಥ್ ಶೆಟ್ಟಿ ಹಾಲಾಡಿಯವರು 1ನೇ ಆರೋಪಿಯನ್ನು ಪರಾರಿ ಮಾಡಲು ಸಹಾಯ ಮಾಡಿದ್ದರಿಂದ ಅವರ ವಿರುದ್ಧ ಕಲಂ 202 ರ ಪ್ರಕಾರ ನ್ಯಾಯಾಲಯಕ್ಕೆ ದಿನಾಂಕ 5.8.95 ರಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದೆ. ಈ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿ ಇರುತ್ತದೆ. ಈ ಇಲಾಖೆಯನ್ನು ಸಿ.ಬಿ.ಐ.ಗೆ. ವಹಿಸುವಂತೆ ಕುಂದಾಪುರ ಬ್ಲಾಕ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಹಿರಿಯಣ್ಣ, ಸ್ಥಳೀಯ ಜನರು ಧರಣೆ ಹಾಗೂ ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ. ಆದರೆ ಈ ಪ್ರಕರಣದಲ್ಲಿ ಈಗಾಗಲೇ ಸಿ.ಓ.ಡಿ. ತನಿಖೆಯ್ನು ಮುಗಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದರಿಂದ ಹಾಗೂ ಪ್ರಕರಣ ಈಗ ನ್ಯಾಯಾಲಯದ ವಿಚಾರಣೆಯ ಹಂತದಲ್ಲಿರುವುದರಿಂದ ಸಿ.ಬಿ.ಐ. ತನಿಖೆಯ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಮರು ಪರಿಶೀಲನೆಯಲ್ಲಿ ಇದೆ.

ಅಧ್ಯಕ್ಷರು : ಈ ಬಗ್ಗೆ ಮತ್ತೆ ಚರ್ಚೆ ಬೇಡ. ತಮಗೆ ಮಾನ್ಯ ಸಚಿವರ ಉತ್ತರದಿಂದ ಸಮಾಧಾನವಾಗದಿದ್ದರೆ ಮತ್ತೊಂದು ರೂಪದಲ್ಲಿ ಈ ವಿಚಾರವನ್ನು

ಚರ್ಚೆಗೆ ತೆಗೆದುಕೊಳ್ಳೋಣ ಶೂನ್ಯ ವೇಳೆಯಲ್ಲಿ ತಾವು ವಿಷಯ ಪ್ರಸ್ತಾಪ ಮಾಡಿದ್ದೀರಿ, ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಇದರಿಂದ ತಮಗೆ ತೃಪ್ತಿ ಆಗದಿದ್ದರೆ ಮತ್ತೆ ಈ ವಿಚಾರವನ್ನು ಪುನಃ ತಾವು ಪ್ರಸ್ತಾಪ ಮಾಡಬೇಕು ಎಂಬ ಅಭಿಪ್ರಾಯ ಇದ್ದರೆ ದಯಮಾಡಿ ನನ್ನ ಕೋಣೆಗೆ ಬನ್ನಿ, ಚರ್ಚೆ ಮಾಡೋಣ. ನಾನು ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ಇದೇ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಗಳು ಒಂದು ವೇಳೆ ಸಿ.ಓ.ಡಿ. ಎನ್‌ಕ್ವೈರಿ ಸಮರ್ಪಕವಾಗಿಲ್ಲ ಎಂದು ತಮಗೆ ಅನಿಸಿದರೆ ಬೇಕಾದರೆ ಸಿ.ಬಿ.ಐ.ಗೆ.ಇದನ್ನು ಕಳುಹಿಸಲಿಕ್ಕೆ ನಾನು ತಯಾರಿದ್ದೇನೆ ಎನ್ನುವ ಮಾತನ್ನು ಹೇಳಿದ್ದರು.

Mr. Speaker : We can discuss ofter words.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಂತ್ರಿಗಳು ಈ ಮಾತನ್ನು ಹೇಳಿ ಈಗಾಗಲೇ ಆರು ತಿಂಗಳು ಆಯಿತು. ಒಟ್ಟಾರೆಯಾಗಿ ಮೂರನೆಯೇ ಸಲ ಈ ವಿಷಯವನ್ನು ನಾವಿಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ. ಅದಕ್ಕಾಗಿ ದಯವಿಟ್ಟು ಇದನ್ನು ಸಿ.ಬಿ.ಐ.ಗೆ. ಕಳುಹಿಸಿದರೆ ಏನಾಗುತ್ತದೆ. ತಾಪತ್ರಯ ಏನೂ ಇಲ್ಲ.

ಅಧ್ಯಕ್ಷರು : ಮಾನ್ಯ ಖರ್ಗೆಯವರೇ, ತಾವು ಹಾಗೂ ಪ್ರತಾಪಚಂದ್ರ ಶೆಟ್ಟಿಯವರು ಬಂದರೆ we will ask Home Minister to come.

ಶ್ರೀ ರಮಾನಾಥ ರೈ : ಸನ್ಮಾನ್ಯ ಅಧ್ಯಕ್ಷರೇ, ಹತ್ತು ತಿಂಗಳಿಂದ ಈ ಬಗ್ಗೆ ಅಲ್ಲಿ ಧರಣಿ ಮಾಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ರಮಾನಾಥ ರೈರವರೇ ತಾವು ಏಕೆ ಆ ಬಗ್ಗೆ ತೊಂದರೆ ತೂಗೆದುಕೊಳ್ಳುತ್ತೀರಿ ? ಮಾನ್ಯ ಸಭಾಪತಿಯವರು ಮುಂದಿನ ವಿಷಯ ಪ್ರಸ್ತಾಪಿಸಿ.

3) ಈಡಿಗ ಜಾತಿಯ ಪಟ್ಟಿಯಲ್ಲಿ ಹಾಲ ಕ್ಷತ್ರಿಯ ಎಂಬ ಉಪ ಪದ ಬಿಟ್ಟು ಹೋಗಿರುವುದು.

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಭಾಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳನ್ನು ವಿನಂತಿಸಿಕೊಳ್ಳುವುದೇನೆಂದರೆ, ಹಿಂದುಳಿದ ವರ್ಗದ ಮೀಸಲಾತಿಯ ಈಡಿಗ ಜಾತಿಯ ಪಟ್ಟಿಯಲ್ಲಿ ಈಗ ಜಾತಿಗೆ ಸೇರಿದ ಹಾಲ ಕ್ಷತ್ರಿಯ ಎಂಬ ಉಪ ಪದ ಅಧಿಕಾರಿಗಳ ಕಣ್ತಪ್ಪಿನಿಂದಾಗಿ ಬಿಟ್ಟು ಹೋಗಿದೆ. ಈ ಉಪ ಪದ ಹಾವನೂರು ಆಯೋಗದ ಹಾಗೂ ವೆಂಕಟಸ್ವಾಮಿ ಆಯೋಗದ ವರದಿಯಲ್ಲಿ ಸೇರಿಕೊಂಡಿದೆ. 1995ರ ಸರ್ಕಾರಿ ಆದೇಶದಲ್ಲಿ ಈ ಹಾಲ ಕ್ಷತ್ರಿಯ ಎಂಬ ಈಡಿಗ ಜಾತಿಯ ಉಪ ಪದ ಬಿಟ್ಟು ಹೋದದ್ದಿರಿಂದ ಅನೇಕ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿದ್ದು ಇದು ಸಾಮಾನ್ಯವಾಗಿ ಸೊರಬ, ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಮುಖ್ಯವಾಗಿ ರೂಢಿಯಲ್ಲಿದೆ. ಈ ಬಗ್ಗೆ ಕೂಡಲೇ ಆದೇಶ ಹೊರಡಿಸಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಆದೇಶಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ರಮೇಶ್ ಎಸ್. ಜಿಗಜಿಣಗಿ (ಸಮಾಜ ಕಲ್ಯಾಣ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಈಡಿಗ ಸಮಾಜದ ಒಂದು ಉಪ ಕೋಮು ಪ್ರಿಂಟ್‌ನಲ್ಲಿ ಬಿಟ್ಟು ಹೋಗಿದೆ. ಮಕ್ಕಳಿಗೆ ಇದರಿಂದ ತೊಂದರೆಯಾಗಿದೆ ಎಂಬ ವಿಚಾರವನ್ನು ಮಾನ್ಯ ಸದಸ್ಯರು ಈಗ ತಾನೇ ನನ್ನ ಗಮನಕ್ಕೆ ತಂದಿದ್ದಾನೆ. ಕಾನೂನು ಚೌಕಟ್ಟಿನಲ್ಲಿ ಅದನ್ನು ಯಾವ ರೀತಿ ಸರಿ ಮಾಡಬೇಕು ಎಂಬುದನ್ನು ನೋಡಿ ನಾನು ಅದನ್ನು

ಸರಿಪಡಿಸುತ್ತೇನೆ. ಒಂದು ವೇಳೆ ಪ್ರಿಂಟ್‌ನಲ್ಲಿ ಬಿಟ್ಟು ಹೋಗಿದ್ದೇ ನಿಜವಾದರೆ ತಕ್ಷಣ ಅದನ್ನು ಇನ್‌ಕ್ಲೂಡ್ ಮಾಡಿಸುತ್ತೇನೆ.

4) ವೃತ್ತಿ ಶಿಕ್ಷಣ ನೌಕರರು 5 ದಿವಸಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿರುವುದು.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ವೃತ್ತಿ ಶಿಕ್ಷಣ ನೌಕರರು ಕಳೆದ 5 ದಿವಸಗಳಿಂದ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ. ಬಹುಶಃ ರಾಜ್ಯದ 80 ಸಾವಿರ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಂತಹ, ಅವರಿಗೆ ಸ್ವಾವಲಂಬಿ ಜೀವನವನ್ನು ಕೊಡುವಂತಹ ಶಿಕ್ಷಣವನ್ನು ಕೊಡುವಂತಹ ಶಿಕ್ಷಕರೇ ಇವತ್ತು ತಮ್ಮ ವೃತ್ತಿಯಲ್ಲಿ ಅತಂತ್ರರಾಗಿದ್ದಾರೆ. ತಮ್ಮ ನ್ಯಾಯಯುತ ಬೇಡಿಕೆ ಈಡೇರಿಸಲು ಅವರು ಕೋರಿದ್ದಾರೆ. ತಮ್ಮನ್ನು ಖಾಯಮಾತಿಗೊಳಿಸಿ ಕೇವಲ ಎಂಟು ತಿಂಗಳಲ್ಲಿ ಮಾತ್ರ ತಮಗೆ ಬೇಕಾದಂತಹ ಸಂಬಳ, ಅದೂ ಕೂಡ ನಿಗದಿತ ಸಂಬಳ ಮಾತ್ರ ಬರುತ್ತಿದೆ. ಈ ನಿಟ್ಟಿನಲ್ಲಿ ತಮ್ಮನ್ನು ಖಾಯಮಾತಿಗೊಳಿಸಬೇಕೆಂದು ಹೇಳಿ ಕಳೆದ ಐದು ದಿವಸಗಳಿಂದ ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಕಳೆದ ಒಂದು ವರ್ಷದಲ್ಲಿ ನಡೆಸಿದ ವಿವಿಧ ಹೋರಾಟದ ಸಮಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಖುದ್ದಾಗಿ ಮೂರು ತಿಂಗಳಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟ ಹಿನ್ನಲೆಯಲ್ಲಿ ಅವರು ಉಪವಾಸ ಸತ್ಯಾಗ್ರಹವನ್ನು ಹಿಂತೆಗೆದುಕೊಂಡಿದ್ದರು. ಒಂದು ವರ್ಷವಾದರೂ, ಆದರಿಂದ ಯಾವುದೇ ಫಲಿತಾಂಶ ಬಾರದಿರುವ ಹಿನ್ನೆಲೆಯಲ್ಲಿ ಇವತ್ತು ಅನಿವಾರ್ಯವಾಗಿ ಉಪವಾಸ ಮಾಡುತ್ತಿದ್ದಾರೆ. ಉಪವಾಸ ನಿರತ 5 ಮಂದಿ ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ 2,361 ವೃತ್ತಿ ಶಿಕ್ಷಣ ನೌಕರರನ್ನು ತಾವು ದಯವಿಟ್ಟು ಖಾಯಮಾತಿಗೊಳಿಸಬೇಕು, ರಾಜ್ಯ ಸರ್ಕಾರಕ್ಕೆ ಇದರಿಂದ ಕೇವಲ 7 ಕೋಟಿ ರೂಪಾಯಿಗಳಷ್ಟು ಮಾತ್ರ ಹೊರೆ ಬೀಳುತ್ತದೆ. ಹೀಗೆ ಮಾಡಿದಲ್ಲಿ ಸುಮಾರು 80 ಸಾವಿರ ವಿದ್ಯಾರ್ಥಿಗಳ ಜೀವನವನ್ನು ರೂಪಿಸುವುದಕ್ಕೆ ಸಾಧ್ಯವಾಗುತ್ತದೆ. ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈಗ ತಾನೇ ಟೆಲಿಗ್ರಾಂ ಮೂಲಕ ನನಗೊಂದು ವಿಷಯ ಬಂದಿದೆ. ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ.

ಅಧ್ಯಕ್ಷರು : ಒಂದ ನಿಮಿಷ, ಇದು ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ ವಿಚಾರವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ.

ಅಧ್ಯಕ್ಷರು : ಹಾಗಾದರೆ ಒಂದು ನಿಮಿಷ. ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಮೊದಲು ಸರ್ಕಾರದ ಪರವಾಗಿ ಉತ್ತರ ಕೊಡಲಿ. ನಂತರ ತಾವು ಮಾತನಾಡಬಹುದು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಾನ್ಯ ಸದಸ್ಯರು ಹೇಳಿದಂತಹ ವಿಚಾರವನ್ನು ಸರ್ಕಾರವೂ ಗಮನಕ್ಕೆ ತೆಗೆದುಕೊಂಡಿದೆ. ಎಂದು ಹೇಳಬಯಸುತ್ತೇನೆ.

5. ಶಿರಗುಪ್ಪದಲ್ಲಿ ರಸ್ತೆ ಅಗಲ ಮಾಡುವ ಕಾರಣದಿಂದ ಅಂಗಡಿ-ಮಳಿಗೆಗಳ ಧ್ವಂಸ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ ಮೈನ್ ರೋಡ್‌ಗಳಲ್ಲಿ ಯಾವುದೇ ನೋಟೀಸನ್ನು ಕೊಡದೇ ರೋಡ್ ಅನ್ನು ಅಗಲ ಮಾಡುವಂತಹ ಕಾರಣ ಹೇಳಿ

ನಿನ್ನೆಯಿಂದ ಎಲ್ಲಾ ಅಂಗಡಿ ಮಳಿಗೆಗಳನ್ನು ದೊಡ್ಡ ದೊಡ್ಡ ಮನೆಗಳನ್ನು, ಯಾರು 40-50 ವರ್ಷಗಳಿಂದ ಅಲ್ಲಿ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಅವುಗಳನ್ನು ಯಾವುದೇ ನೋಟೀಸು ಕೊಡದೇ ಕೆಡವುವಂತಹ ಕೆಲಸ ಅಲ್ಲಿ ಪ್ರಾಂರಭ ಆಗಿದೆ. ಮತ್ತೆ ಬಹುಳ ಪ್ರಮುಖವಾಗಿ ಅಲ್ಲೊಂದು ಜೈನ ಮಂದಿರ ಇದೆ. ಸುಮಾರು ನೂರಾರು ವರ್ಷಗಳ ಪುರಾತನ ಜೈನ ಮಂದಿರ ಆದು. ಅದನ್ನೂ ಸಹ ಈಗ ಒಡೆಯುವುದಕ್ಕೆ ಪ್ರಾರಂಭವಾಗಬಹುದು ಎಂದು ಈಗತಾನೇ ನನಗೆ ಬಂದಿರುವ ಸುದ್ದಿಯಿಂದ ತಿಳಿದು ಬಂದಿದೆ. ನಾನೇನು ಹೇಳುವುದು ಏನೆಂದರೆ. ನೂರಾರು ವರ್ಷಗಳಿಂದ ಜಿಲ್ಲೆ ಅಂಗಡಿ ಮಳಿಗೆಗಳನ್ನು ಕಟ್ಟಿ ವಾಸ ಮಾಡುತ್ತಿದ್ದರೆ, ಅದಕ್ಕೆ ಸೂಕ್ತವಾದ ನೋಟೀಸ್ ಕೊಟ್ಟು ಕಾನೂನಿನಂತೆ ಕ್ರಮ ತೆಗೆದುಕೊಳ್ಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಯಾವುದೇ ನೋಟೀಸ್ ಕೊಡದೇ ತರಾತುರಿಯಲ್ಲಿ ಬಿಲ್ಡಿಂಗ್ ಒಡೆಯುವಂತಾದ್ದು, ಮತ್ತು ಜೈನ ದೇವಸ್ಥಾನವನ್ನೂ ಸಹ ಒಡೆಯುವುದಕ್ಕೆ ಪ್ರಯತ್ನ ಮಾಡುತ್ತಿರುವಂತಾದ್ದು ಬಹುಶಃ ಲಾ ಅಂಡ್ ಆರ್ಡರ್‌ಗೆ ಪ್ರಾಬ್ಲಂ ಆಗಬಹುದು ಮತ್ತು ಜನರಿಗೂ ಸಹ ಒಂದು ಪ್ರಕ್ಷುಬ್ಧ ವಾತಾವರಣ ಬರುವುದಕ್ಕೆ ತಾವು ಅವಕಾಶ ಕೊಡದೇ, ತಾವು ಈ ಬಗ್ಗೆ ದಯಾಮಾಡಿ ಒಂದು ಆದೇಶ ನೀಡಿ ಇದಕ್ಕೆ ಸೂಕ್ತವಾದಂತಹ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಸರ್ಕಾರ ಸೂಚನೆ ಕೊಟ್ಟು ಅದನ್ನು ತಡೆಹಿಡಿಯುವಂತಹ ಒಂದು ಆದೇಶವನ್ನು ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಪ್ರಸ್ತಾಪ ಮಾಡಿರತಕ್ಕ ವಿಷಯವು ಮೊನ್ನೆ ತಾನೇ ನನ್ನ ಗಮನಕ್ಕೆ ಬಂದಿತು. ಈಗಾಗಲೇ ನಾನು ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ಯಾವುದೇ ಕಟ್ಟಡಗಳನ್ನು ಒಡೆಯುವ ಅವಶ್ಯಕತೆ ಇಲ್ಲವೆಂದು ಹೇಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅಂದ ಮಾತ್ರಕ್ಕೆ ಇದು ಬ್ಲ್ಯಾಂಕೆಟ್ ಗವರ್ನಮೆಂಟ್ ಡೈರೆಕ್ಷನ್ ಎಂದು ಯಾರೂ ಭಾವಿಸಿಕೊಳ್ಳ ಬೇಕಾಗಿಲ್ಲ, ಈ ಸರ್ಕಾರದ ನಿಲುವು ಏನೆಂದರೆ ಎಲ್ಲಾ ನಗರ ಪ್ರದೇಶಗಳಲ್ಲಿ ಇರತಕ್ಕಂತಹ ಅನಧಿಕೃತವಾಗಿ ಕಟ್ಟಿರತಕ್ಕಂತಹ ಕಟ್ಟಡಗಳು ಏನು ಇವೆ ಅವುಗಳಿಂದ ಸಾರ್ವಜನಿಕರಿಗೆ ಅಡಚಣೆ ಆಗದೆ ಹೋದರೆ, ರಸ್ತೆ ಮಾಡಬೇಕು, ಮತ್ತೊಂದು ಮಾಡಬೇಕು ಈ ತರಹ ಅಡಚಣೆ ಆಗದೆ ಹೋದರೆ ಅಂತಹ ಕಟ್ಟಡಗಳ ಮೇಲೆ ಹೆವೀ ಪೆನಾಲ್ಟಿ ಹಾಕಿ ನಾವು ಅವರವರಿಗೆ ಕನ್‌ಫರ್ಮ್ ಮಾಡಬೇಕು ಅನ್ನತಕ್ಕಂಥದ್ದರ ಬಗ್ಗೆ ಸರ್ಕಾರ ಒಂದು ನೀತಿಯನ್ನು ರೂಪಿಸಿದೆ. ಇಡೀ ಕರ್ನಾಟಕದ ಯಾವುದೇ ನಗರಸಭೆ ಇರಲಿ, ನಗರ ಪಾಲಿಕೆ ಇರಲಿ ಅಥವಾ ಟೌನ್ ಮುನಿಸಿಪಾಲಿಟಿ ಇರಲಿ ಅನಧಿಕೃತವಾಗಿ ಸರ್ಕಾರೀ ಜಾಗ ಆಗಿರಬಹುದು. ಪುರಸಭೆ ಜಾಗ ಆಗಿರಬಹುದು, ರೆವಿನ್ಯೂ ಜಾಗವಾಗಿರಬಹುದು ಕಟ್ಟಿರತಕ್ಕಂತಹ ಮನೆಗಳಿಗೆ ನಾವು ಅವರಿಗೆ ಕನ್‌ಫರ್ಮ್ ಮಾಡಿ ಹೆವಿಪೆನಾಲ್ಟಿ ಹಾಕತಕ್ಕಂಥದ್ದು ಈ ಸರ್ಕಾರದ ಉದ್ದೇಶ.

ಹಾಗೆ ಪೆನಾಲ್ಟಿ ಹಾಕುವಾಗ ಪಾಪ್ಯುಲೇಷನ್‌ನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಬೆಂಗಳೂರಿನಲ್ಲಿ ಒಂದು ರೀತಿ ಸ್ಕೇಲ್ ಬರಬಹುದು, ಜಿಲ್ಲಾ ಮಟ್ಟದಲ್ಲಿ ಒಂದು ಸ್ಕೇಲ್ ಬರಬಹುದು, ಕೆಲವು ನಗರ ಪಾಲಿಕೆ ಬೆಂಗಳೂರಿಗಿಂತ ಕಡಿಮೆ ಜನಸಂಖ್ಯೆ. ಇರತಕ್ಕಂಥದ್ದರಲ್ಲಿ ಕೆಲವು ಸ್ಕೇಲ್ ಬರಬಹುದು. ಆ ಸ್ಲ್ಯಾಬ್‌ನ್ನು ಫಿಕ್ಸ್ ಮಾಡುವಾಗ ಅದರ ಬಗ್ಗೆ ನಾನು ಹೇಳಿದ್ದೇನೆ. ಆದರೆ ಈ ಸಂದರ್ಭದಲ್ಲಿ ಒಂದೇ ಒಂದು ಸೂಚನೆ ಕೊಡಬೇಕಾಗುತ್ತದೆ. ಎಲ್ಲಿ ಸಾರ್ವಜನಿಕರಿಗೆ ಅತೀ ಅವಶ್ಯಕವಾಗಿ ಈ ಜಾಗ ಬೇಕಾಗುತ್ತದೆ ಅಂತಹ ಸನ್ನಿವೇಶದಲ್ಲಿ ನಾವು ಮನೆ ಕೆಡುವುದಕ್ಕಿಂತ ಮುಂಚೆ ನಾವು ನೋಟೀಸ್ ಕೊಡುತ್ತೇವೆ. ಜೈನ ಮಂದಿರ ಕೆಡುವ ಪ್ರಶ್ನೆಯೇ ಇಲ್ಲ, ನಿಲ್ಲಿಸಿದ್ದೇವೆಂದು ಹೇಳಿದ್ದಾರೆ. ಮೊನ್ನೆನೇ ಸೂಚನೆ ಕೊಟ್ಟಿದ್ದೇನೆಂದರು ಹೇಳಿದ್ದೇನೆ. ಅದರ ಜೊತೆಗೆ

ಅವರಿಗೆ ಪರ್ಯಾಯವಾಗಿ ಬೇರೆ ಕಡೆ ಮನೆ ಎಲ್ಲೂ ಇಲ್ಲದೇ ಇದ್ದರೆ ಪರ್ಯಾಯವಾಗಿ ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಬೇರೆ ಜಾಗ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅದರ ಜೊತೆಗೆ ಇನ್ನೊಂದು ಮಾತು ನಾನು ಹೇಳುತ್ತೇನೆ. ಇಡೀ ರಾಜ್ಯದಲ್ಲಿ ಯಾರೇ ಪಂಚಾಯಿತಿ ವ್ಯಾಪ್ತಿಯಲ್ಲಿ ಗುಡಿಸಲು ಹಾಕಿಕೊಂಡಿರಲಿ, ಮನೆಗಳನ್ನು ಕಟ್ಟಿಕೊಂಡಿರಲಿ ಅದು ಗವರ್ನಮೆಂಟ್ ಜಾಗ ಇದ್ದರೆ. ಪಂಚಾಯಿತಿ ಜಾಗ ಅಥವಾ ಬಗರ್ ಹುಕುಂ ಜಾಗವಿದ್ದರೆ ಖರಾರ್ ಜಾಗವಿದ್ದರೆ ಅಂತಹ ಜಾಗಗಳಲ್ಲಿ ಇವರು ಗುಡಿಸಲು ಹಾಕಿಕೊಂಡಿರಲಿ, ಮನೆ ಕಟ್ಟಿಕೊಂಡಿರಲಿ ಅದನ್ನು ತೆಗೆಯಬಾರದು ಅವರವರಿಗೇ ನಾವು ಓನರ್‌ಷಿಪ್ ಸರ್ಟಿಫಿಕೇಟ್ ಕೊಡಬೇಕು, ಒಂದು ವೇಳೆ ಅಲ್ಲಿ ಏನಾದರೂ ಬೇರೆ ಸಾರ್ವಜನಿಕವಾಗಿ ನಮಗೆ ಆ ಜಾಗ ಬೇಕೆಂದಾಗ ಮಾತ್ರ ನಾವು ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಪರ್ಯಾಯವಾಗಿ ಬೇರೆ ವ್ಯವಸ್ಥೆ ಕೂಡ ಮಾಡಿಕೊಡಬೇಕೆಂದು . ಸರ್ಕಾರ ಈಗಾಗಲೇ ಕಟ್ಟುನಿಟ್ಟಾಗಿ ಸೂಚನೆ ಕೊಟ್ಟಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಸಿದ್ದರಾಮಯ್ಯ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲಕರವರು ನೀಡಿರುವ ಕರ್ನಾಟಕ ಸರ್ಕಾರದ 1995ನೇ ಸಾಲಿನ ಮಾರ್ಚ್ 31ರ ಅಂತ್ಯಕ್ಕೆ ಕೊನೆಗೊಂಡಂತೆ (ವಾಣಿಜ್ಯಕ್ಕೆ) ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, 1952ನೇ ಸಾಲಿನ ವಿಚಾರಣಾ ಆಯೋಗಗಳ ಕಾಯ್ದೆಯ 3(4) ನೇ ಕಲುಮಿನ ಮೇರೆಗೆ ದಿನಾಂಕ 8ನೇ ಜೂನ್, 1992ರಂದು ಕುಣಿಗಲ್‌ನಲ್ಲಿ ನಡೆದ ಪೋಲಿಸ್ ಗೋಲಿಬಾರ್ ಬಗ್ಗೆ ಜಸ್ಟೀಸ್ ಎಂ.ಎಸ್. ಪಾಟೀಲ್ ಅವರ ವಿಚಾರಣಾ ಆಯೋಗದ ವರದಿ (ಮೆಮೋರಾಂಡಂ ಸಹಿತ) ಯನ್ನು ಸಭೆಯ ಮುಂದಿಡುತ್ತೇನೆ.

ವರದಿಗಳನ್ನೊಪ್ಪಿಸುವುದು

ಶ್ರೀ ಪ್ರಕಾಶ್ ಹುಕ್ಕೇರಿ (ಮಹಿಳಾ ಕಲ್ಯಾಣ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಮೊದಲನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಸಹಕಾರ ಇಲಾಖಾ ವಿಷಯ ಸಮಿತಿಯ ಅಧ್ಯಕ್ಷರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನ ಕೃಷಿ ಮಾರುಕಟ್ಟೆಗೆ ಸಂಬಂಧಿಸಿದ ಎರಡನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಉಪಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಗಮನ ಸೆಳೆಯುವ ಸೂಚನೆ

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17ರ ಶರಾವತಿ ಸೇತುವೆ ರಿಪೇರಿಯಾಗದಿರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನಗಳ ಓಡಾಟಕ್ಕೆ ಉಂಟಾಗಿರುವ ತೊಂದರೆ .

ಡಾ|| ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17ರ ಶರಾವತಿ ಸೇತುವೆ ರಿಪೇರಿಯಾಗದಿರುವುದರಿಂದ ಸಾರ್ವಜನಿಕರಿಗೆ

ಹಾಗೂ ವಾಹನಗಳ ಓಡಾಟಕ್ಕೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಇದರಲ್ಲಿ ಅತ್ಯಂತ ಪ್ರಮುಖವಾಗಿ 4-5 ಅಂಶಗಳನ್ನು ಉಲ್ಲೇಖ ಮಾಡಿ ಗಮನ ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ. ಸುಮಾರು 25 ವರ್ಷಗಳ ಹಿಂದೆ ನಿರ್ಮಾಣವಾದ ಈ ಸೇತುವೆ 1991ರವರೆಗೆ ಎಲ್ಲಾ ವಾಹನಗಳ ಸಂಚಾರಕ್ಕೆ ಮುಕ್ತವಾಗಿತ್ತು. 1991ರಲ್ಲಿ ಅದರಲ್ಲಿ ಏನೋ ತೊಂದರೆಯಾಗಿದೆ ಅನ್ನುವಂತಹ ವದಂತ ಬಂದಿತು. ವದಂತಿ ಎನ್ನುವ ಶಬ್ದವನ್ನು ನಾನು ಉದ್ದೇಶಪೂರ್ವಕವಾಗಿ ಉಪಯೋಗಿಸುತ್ತೇನೆ. ಸರ್ಕಾರ ಈ ಸೇತುವೆ ಹಾಳಾಗಿದೆ ಎನ್ನುವುದರ ಬಗ್ಗೆ ಇವತ್ತಿನವರೆಗೂ ಕೂಡ ಶಾಸಕರಿಗಾಗಿಲಿ. ಸಾರ್ವಜನಿಕರಿಗಾಗಲಿ ನಿರ್ದಿಷ್ಟವಾದಂತಹ ಮಾಹಿತಿಯನ್ನು ಒದಗಿಸುವಂತಹ ಕೆಲಸವನ್ನು ಮಾಡಲಿಲ್ಲ, ಎಲ್ಲಿ ಹಾಳಾಗಿದೆ ಎನು ಹಾಳಾಗಿದೆ ಯಾವ 30-32 ಸ್ಪ್ಯಾನ್‌ಗಳಲ್ಲಿ ಯಾವ ಸ್ಪ್ಯಾನ್ ಹಾಳಾಗಿದೆ ಎನ್ನುವುದರ ಬಗ್ಗೆ ತಿಳಿಸಿಲ್ಲ.

ಉಪಾಧ್ಯಕ್ಷರು : ಮೊದಲು ಗಮನ ಸೆಳೆಯಲಿ, ಸಚಿವರು ಉತ್ತರ ಕೊಟ್ಟ ನಂತರ ನೀವು ಕ್ಲ್ಯಾರಿಫಿಕೇಷನ್ ಕೇಳಿ.

ಡಾ|| ಯು. ಚಿತ್ತರಂಜನ್ : ಶರಾವತಿ ಸೇತುವೆ ರಿಪೇರಿಯಾಗದಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯೆಂದ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ಶಿವಾನಂದ ಹೆಚ್ . ಕೌಜಲಗಿ (ಲೋಕೋಪಯೋಗಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ನಾನು ಈ ಹೇಳಿಕೆಯನ್ನು ಸದನದ ಮುಂದೆ ನೀಡುತ್ತೇನೆ.

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ -17 ರ ಶರಾವತಿ ದುರಸ್ತಿ ಕೆಲಸವು ಮೆ: ಸ್ಟೂಪ್ ಕನ್ಸಲ್ಟೆಂಟ್ಸ್ ಲಿಮಿಟೆಡ್‌ರವರ ಮತ್ತು ಯುನೈಟೆಡ್ ಕಿಂಗ್‌ಡಂ ದೇಶದ ಏಸರ್ ಫ್ರೀಷರನ್‌ರವರ ಸಹಯೋಗದ ಸಲಹೆಯ ಮೇರೆಗೆ ನಡೆಯುತ್ತಿದೆ. ಸದರಿ ಕೆಲಸಕ್ಕೆ ಸಲಹೆಗಾರರು ತಯಾರಿಸಿದ ಅಂದಾಜು ಪಟ್ಟಿಯಂತೆ ಕೇಂದ್ರ ಸರ್ಕಾರ 435.46 ಲಕ್ಷ ಗಳಿಗೆ ಅನುಮೋದನೆ ನೀಡಿತ್ತು. ಪ್ರಿಕ್ವಾಲಿಫಿಕೇಷನ್ ಮಾಡಿದ ನಂತರ ಗುತ್ತಿಗೆದಾರಿರಾದ ಮೆ: ಫ್ರೆಸ್ಸಿನೆಟ್ ಪ್ರೀಸಟ್ಸ್‌ಸಡ್ ಕಾಂಕ್ರೀಟ್ ಕಂಪನಿ ಲಿಮಿಟೆಡ್ ಮುಂಬೈ ಇವರ ಅತಿ ಕಡಿಮೆ ದರ ಸೂಚಿಸಿದ ಟೆಂಡರನ್ನು ಅನುನೋದಿಸಲಾಗಿದೆ. ಗುತ್ತಿಗೆದಾರರ ದರಗಳನ್ನು ಅನುಸರಿಸಿ ತಯಾರಿಸಿದ ಅಂದಾಜಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ಅಂದಾಜಿನ ಮೊತ್ತ 675.00 ಲಕ್ಷ ರೂ.ಗಳ ಗುತ್ತಿಗೆ ಕರಾರಿನಂತೆ ಒಂದು ಅಂಕಣಕ್ಕೆ ಡಿಸೆಂಬರ್ ತಿಂಗಳಿನಲ್ಲಿ ಗುತ್ತಿಗೆದಾರರಿಂದ ಲೋಡ್ ಟೆಸ್ಟ್ ಮಾಡಲಾಗಿದೆ. ಇದರ ನಂತರ ಸೇತುವೆಯ ಸಲಹೆಗಾರರು ಸೇತುವೆಯ ಮೇಲೆ 6 ಟನ್ ಒಳಗಿರುವ ಲಘು ವಾಹನಗಳನ್ನು ಸೇತುವೆಯ ಮೇಲೆ ಬಿಡಬಹುದೆಂದು ತಿಳಿಸಿರುತ್ತಾರೆ. ಈ ಸೇತುವೆಯ ಕೆಲಸವನ್ನು ಮೆ: ಎಫ್.ಪಿ.ಸಿ.ಸಿ. ಲಿಮಿಟೆಡ್ ರವರು ನಿರ್ವಹಿಸುತ್ತಿದ್ದಾರೆ. ಸದರಿ ಸಲಹೆಗಾರರು ಮಿನಿ ಪ್ಯಾಸೆಂಜರ್ ಟೆಂಪೋ, ಕಾರು, ಜೀಪು, ಆಟೋ ಇತ್ಯಾದಿಗಳು ಸೇತುವೆ ಮೇಲೆ ಓಡಾಡಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಜಿಲ್ಲಾ ದಂಡಾಧಿಕಾರಿಗಳು ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು, ಜೀಪು, ಕಾರು ಮತ್ತು 6 ಟನ್ನಿಗಿಂತ ಕಡಿಮೆ ಭಾರದ ಪ್ಯಾಸೆಂಜರ್ ಟೆಂಪೋ ಮತ್ತು ಕೆ.ಎಸ್.ಆರ್.ಟಿ.ಸಿ. ಖಾಲಿ ಬಸ್ಸುಗಳು ಅಲ್ಲದೆ ಎಲ್ಲಾ ವಾಹನಗಳ ವೇಗದ ಮಿತಿಯು ಸೇತುವೆಯ ಮೇಲೆ ಪ್ರತಿ ಘಂಟೆಗೆ 15 ಕಿ.ಮೀ.ಗೆ ಮೀರದೇ ಇರುವ ನಿಷೇಧವನ್ನು ವಿಧಿಸಿದ್ದಾರೆ. ಇದರ ಪ್ರಕಾರ ಪ್ಯಾಸೆಂಜರ್ ಟೆಂಪೋ ಬಿಡಲಾಗುದ್ದು ಇವುಗಳ ಮೂಲಕ ವೃದ್ಧರು. ಸ್ತ್ರೀಯರು, ಮಕ್ಕಳು ಪ್ರಯಾಣಿಸಬಹುದಾಗಿದೆ. ಈಗ

ಅಂದರೆ ದಿನಾಂಕ 1-3-1995 ರಿಂದ ಚಾಲ್ತಿಯಲ್ಲಿರುವ ಟೆಂಡರ್ ಪ್ರಕಾರ ಸರ್ಕಾರದ 6 ಎಸ್.ಸಿ.ಟಿ.ಗಳ ಜೊತೆಗೆ ಗುತ್ತಿಗೆದಾರರ 2 ಎಲ್.ಸಿ.ಟಿ.ಗಳು ಸೇರಿದಂತೆ ಒಟ್ಟು 8 ಎಲ್.ಸಿ.ಟಿ.ಗಳು ಓಡಾಡುತ್ತಿದ್ದು ವಾಹನಗಳ ಸಂಚಾರವು ಬಹುಮಟ್ಟಿಗೆ ಸುಧಾರಿಸಲಾಗಿದೆ.

ದಿನಾಂಕ 1-6-1995ರ ಹಿಂದೆ ಇದ್ದ ಗುತ್ತಿಗೆ ಪ್ರಕಾರ ಸರ್ಕಾರಕ್ಕೆ ಕರ ವಸೂಲಿಯಿಂದ ತಿಂಗಳಿಗೆ ಸಮಾರು 20.00 ಲಕ್ಷ ರೂ.ಗಳು ವಸೂಲಿಯಾಗುತ್ತಿದ್ದು 6 ಎಸ್.ಸಿ.ಟಿ.ಗಳ ಸಂಚಾರ ಮತ್ತು ನಿರ್ವಹಣೆಗೋಸ್ಕರ 15.6 ಲಕ್ಷ ರೂ. ಗಳಷ್ಟು ಸರ್ಕಾರದಿಂದ ಖರ್ಚಾಗುತ್ತಿದ್ದು ಸುಮಾರು. 4.4 ಲಕ್ಷ ರೂ.ಗಳು ಉಳಿಯುತ್ತಿತ್ತು. ಇದರ ಜೊತೆಗೆ ಸರ್ಕಾರದ ವತಿಯಿಂದ ಕೂಡು ರಸ್ತೆ ಲ್ಯಾಂಡಿಂಗ್ ರ್‍ಯಾಂಪ್ಸ್, ವೇ ಬ್ರಿಡ್ಜ್ ವಿದ್ಯುದ್ಧೀಕರಣ ಇವುಗಳ ನಿರ್ವಹಣೆ ಮತ್ತು ದುರಸ್ತಿಯನ್ನು ಮಾಡಬೇಕಾಗುತ್ತಿತ್ತು.

ಆದರೆ ದಿನಾಂಕ 1-6-1995 ರಿಂದ ಚಾಲ್ತಿಯಲ್ಲಿರುವ ಹೊಸ ಗುತ್ತಿಗೆ ಪ್ರಕಾರ ಮೇಲ್ಕಂಡ ಎಲ್ಲಾ ವೆಚ್ಚವನ್ನು ಅಂದರೆ 6 ಎಲ್.ಸಿ.ಟಿ.ಗಳು ಮತ್ತು 2 ಗುತ್ತಿಗೆದಾರರ ಎಲ್.ಸಿ.ಟಿ.ಗಳನ್ನು ತಂದು ಇವುಗಳ ನಿರ್ವಹಣೆ, ಕೂಡು ರಸ್ತೆ ಮತ್ತು ಲ್ಯಾಂಡಿಂಗ್ ರ್‍ಯಾಂಪ್ಸ್‌ದುರಸ್ತಿ ಮತ್ತು ನಿರ್ವಹಣೆ ವಿದ್ಯುದೀಕರಣ ಇವುಗಳನ್ನೆಲ್ಲಾ ಒಳಗೊಂಡಂತೆ ಎಲ್ಲಾ ಕೆಲಸವನ್ನು ಗುತ್ತಿಗೆದಾರರೇ ನಿರ್ವಹಿಸಿ ಸರ್ಕಾರಕ್ಕೆ ತಿಂಗಳಿಗೆ 5.00 ಲಕ್ಷ ರೂ.ಗಳಷ್ಟು ಪಾವತಿ ಮಾಡುತ್ತಿದ್ದಾರೆ. ಸದರಿ ಕೆಲಸಕ್ಕೆ ಸರ್ಕಾರದಿಂದ ಯಾವ ವೆಚ್ಚವನ್ನೂ ಮಾಡಬೇಕಾಗಿಲ್ಲ ಆದ್ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಆಗುತ್ತಿಲ್ಲ.

ಕೇಂದ್ರ ಸಾರಿಗೆ ಮಂತ್ರಾಲಯದವರೊಡನೆ ಸೇತುವೆಯ ಮೇಲೆ ವಾಹನಗಳನ್ನು ಬಿಡುವ ಬಗ್ಗೆ ದಿನಾಂಕ 13-2-1996 ರಂದು ಚರ್ಚಿಸಲಾಗಿದ್ದು, ಕೇಂದ್ರ ಸಾರಿಗೆ ಮಂತ್ರಾಲಯದವರು ತಮ್ಮ ಪತ್ರ ಸಂಖ್ಯೆ ಆರ್‌ಡಬ್ಲ್ಯು : ಎನ್‌ಹೆಚ್ : 12012:80:95: ಕೆಎನ್‌ಟಿ: ದಿನಾಂಕ 16-2-1996ರ ಪತ್ರದೊಂದಿಗೆ ಕಳುಹಿಸಿರುವ ನಡೆವಳಿಯ ಕಂಡಿಕೆ 11ರಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

ಈಗಾಗಲೇ ಸೇತುವೆಯ ಮೇಲೆ ಓಡಾಡುತ್ತಿರುವ ಲಘು ವಾಹನಗಳ ವೇಗವನ್ನು ಸೇತುವೆಯ ಮೇಲೆ ಕಾಂಕ್ರೀಟ್ ಕೆಲಸ ಮಾಡುವ ಸಮಯದಲ್ಲಿ ಸಲಹೆಗಾರರು ಸೂಚಿಸಿದಂತೆ ಇನ್ನೂ ಕಡಿಮೆ ಮಾಡಬೇಕು ಎಂದು ತಿಳಿಸಿದ್ದಾರೆ.

ಸೇತುವೆಯ ಮೇಲೆ ಎಲ್ಲಾ ವಾಹನ ಸಂಚಾರವನ್ನು ಕಡಿಮೆ ಅವಧಿಯಲ್ಲಿ ಆಗಾಗ್ಗೆ ಸಂಪೂರ್ಣವಾಗಿ ನಿಷೇಧಿಸಬೇಕಾಗುತ್ತದೆ ಎಂತಲೂ ತಿಳಿಸಿದ್ದಾರೆ. ಇದೂ ಅಲ್ಲದೆ ರಾಜ್ಯ ಲೋಕೋಪಯೋಗಿ ಇಲಾಖೆಯವರು ಇವುಗಳ ಬಗ್ಗೆ ಬೇಕಾದಂತಹ ಏರ್ಪಾಟುಗಳನ್ನು ಸುರಕ್ಷತೆಯ ದೃಷ್ಟಿಯಿಂದ ಮಾಡಬೇಕೆಂದು ಸಹ ತಿಳಿಸಿರುತ್ತಾರೆ.

ಸೇತುವೆಯ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸಲು ಗುತ್ತಿಗೆದಾರರು ಸಲಹೆಗಾರರು, ಇಲಾಖೆಯವರೊಂದಿಗೆ ಕೇಂದ್ರ ಸರ್ಕಾರ ದಿನಾಂಕ 13-2-1995ರಲ್ಲಿ ದೀರ್ಘವಾಗಿ ಚರ್ಚಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರವು ಯಾವುದೇ ಕ್ರಮವನ್ನು ಕೇಂದ್ರದ ಒಪ್ಪಿಗೆ ಇಲ್ಲದೆ ತೆಗೆದುಕೊಳ್ಳಲು ಸಾಧ್ಯವಿಲ್ಲ.

11.20 ಎ.ಎಂ

+ ಡಾ|| ಯು. ಚಿತ್ತರಂಜನ್ :ಸನ್ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಅನೇಕ ಅನುಮಾನಗಳು ಬರುತ್ತಿದೆ. ಮೊದಲನೆಯದಾಗಿ ಗುತ್ತಿಗೆದಾರರಿಗೆ ಕೊಟ್ಟಂಥ ಹಣದ ವಹಿವಾಟಿನ ಬಗ್ಗೆ ಅನುಮಾನ ಬರುತ್ತಿದೆ. ಪ್ರತಿದಿವಸ ಸುಮಾರು ಒಂದು ಸಾವಿರ

ಲೋಡೆಡ್ ಟ್ರಕ್‌ಗಳು, ಸುಮಾರು ಮುನ್ನೂರು ಬಸ್ಸುಗಳು, ಇತರೆ ಭಾರಿ ವಾಹನಗಳು ಹೋಗುವುದರಿಂದ ಸುಮಾರು ಒಂದು ಲಕ್ಷದ ಇಪ್ಪತ್ತೈದು ಸಾವಿರದಿಂದ ಒಂದು ಲಕ್ಷದ ನಲವತ್ತು ಸಾವಿರ ರೂಪಾಯಿಗಳವರೆಗೂ ಒಂದು ದಿವಸಕ್ಕೆ ಗುತ್ತಿಗೆದಾರರಿಗೆ ವಸೂಲಿ ಆಗುತ್ತಿದೆ. ಇದರಿಂದ ಒಟ್ಟಾರೆ ಮೂವತ್ತೈದು ಲಕ್ಷ ರೂಪಾಯಿಗಳಿಂದ ನಲವತ್ತು ಲಕ್ಷ ರೂಪಾಯಿಗಳವರೆಗೆ ವಸೂಲಿಯಾಗುತ್ತದೆ.ಅದರಲ್ಲಿ ಸರ್ಕಾರ ಕೇವಲ ಐದು ಲಕ್ಷ ರೂಪಾಯಿಗಳನ್ನು ಮಾತ್ರ ತುಂಬುತ್ತಿದ್ದಾರೆ. ಇದರಿಂದ ಅವರಿಗೆ ನಿವ್ವಳ ಲಾಭ ಎಷ್ಟಾಗುತ್ತದೆ ಎಂಬುದು ತಾವು ಲೆಕ್ಕಾಚಾರ ಮಾಡಿ ಹೇಳಿದರೆ ಗೊತ್ತಾಗುತ್ತದೆ. ಅದರ ಬಗ್ಗೆ ನಮಗೆ ಮೊದಲನೆಯದಾಗಿ ಅನುಮಾನವಿದೆ. ಎರಡನೆಯ ಅನುಮಾನವೇನೆಂದರೆ ತಜ್ಞರು ಕೊಟ್ಟಂಥ ವರದಿಯನ್ನು ಸಾರ್ವಜನಿಕರಿಗೆ ಏಕೆ ಬಿಡುಗಡೆ ಮಾಡುತ್ತಿಲ್ಲ? ಇದರಲ್ಲಿ ಏನೋ ಒಳಸಂಚು ನಡೆದಿದೆ, ಎಂದು ನಮಗನ್ನಿಸುತ್ತಿದೆ. 178 ಟನ್‌ಗಳನ್ನು ಬ್ರಿಡ್ಜ್ ಮೇಲೆ ಹೇರಿದಾಗ ಮಾತ್ರ ಸ್ವಲ್ಪ ಬಿರುಕು ಕಾಣುತ್ತದೆ ಎಂಬುದನ್ನು ಅಲ್ಲಿದ್ದಂಥ ಎಲ್ಲಾ ಜನರು ಕಣ್ಣಾರೆ ನೋಡಿದ್ದಾರೆ. ಇಷ್ಟಾದರೂ ಸಹ ಆರು ಟನ್ನಿಗಿಂತ ಹೆಚ್ಚು ಭಾರವಾದ ವಾಹನಗಳನ್ನು ಏಕೆ ಬಿಡಬಾರದು ಎನ್ನತಕ್ಕದ್ದು ಎರಡನೆಯದು. ಇದನ್ನು ಪರೀಕ್ಷೆ ಮಾಡುವುದಕ್ಕಿಂತಾ ಮೊದಲು ಮೇ ಅಥವಾ ಜೂನ್ ತಿಂಗಳಲ್ಲಿ ಸರ್ಕಾರ ಗುತ್ತಿಗೆದಾರರೊಂದಿಗೆ ಒಂದು ಒಡಂಬಡಿಕೆಗೆ ಸಹಿಹಾಕಿತ್ತು. ಅದರ ಪ್ರತಿ ಮಾನ್ಯ ಕರ್ಕಿಯವರ ಹತ್ತಿರ ಇದೆ. ಆ ಒಡಂಬಡಿಕೆಯ ಪ್ರಕಾರ ಮೂರು ಟನ್ನುಗಳಿಗಿಂತ ಹೆಚ್ಚು ಭಾರದ ವಾಹನಗಳನ್ನು ಬಿಡುವುದಿಲ್ಲವೆಂದು ಇತ್ತು. ಇದನ್ನು ಯಾವ ಆಧಾರದ ಮೇಲೆ ಮಾಡಿದಿರಿ? ಈ ರೀತಿ ಅನೇಕ ಅನುಮಾನಗಳು ಬರುತ್ತಿವೆ. ಆದ್ದರಿಂದ ಪರಿಣಿತರ ವರದಿ ಏನಿದೆ ಅದನ್ನು ಬಹಿರಂಗಪಡಿಸಬೇಕು, ಮೊದಲು ಟೆಂಡರ್ ಕೊಟ್ಟಂಥ ಕಂಪನಿಗೆ ಇರತಕ್ಕ ಅರ್ಹತೆಗಳೇನು? ಕೇವಲ ಕಡಿಮೆ ವೆಚ್ಚಕ್ಕೆ ಟೆಂಡರ್ ಹಾಕಿದೆಯೆಂದು ಕೊಟ್ಟಿದ್ದೀರ ಅಥವಾ ಆ ಕಂಪನಿಯವರು ಈ ಹಿಂದೆ ಕೆಲಸ ಮಾಡಿರುವ ಬಗ್ಗೆ ಅರ್ಹತೆಯ ಬಗ್ಗೆ, ಶಿಫಾರಸ್ಸಿನ ಬಗ್ಗೆ ಪತ್ರಗಳೇನಾದರೂ ಇದೆಯೇ? ಇವುಗಳ ಬಗ್ಗೆ ತಾವು ದಯಮಾಡಿ ತಿಳಿಸಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದ ಸಂಗತಿಯೇನೆಂದರೆ ಈ ಸೇತುವೆ ಕೇಂದ್ರ ಸರ್ಕಾರಕ್ಕೆ ಒಳಪಡುತ್ತದೆ. ಈ ಸೇತುವೆಯ ಮೇಲೆ ವಾಹನಗಳನ್ನು ಓಡಿಸಲು ಆಗುವುದಿಲ್ಲ, ವಾಹನಗಳ ಸಂಚಾರಕ್ಕೆ ಈ ಸೇತುವೆ ಉಪಯೋಗವಿಲ್ಲವೆನ್ನುವ ಸಲುವಾಗಿ ಕೇಂದ್ರ ಸರ್ಕಾರದವರು ಸದರಿ ಸೇತುವೆಯನ್ನು ದುರಸ್ತಿ ಮಾಡಲು ಒಪ್ಪಿಗೆ ಕೊಟ್ಟಿದ್ದಾರೆ. ಇದರ ದುರಸ್ತಿ ಸಲುವಾಗಿ ಕೇಂದ್ರ ಸರ್ಕಾರದವರು ಕೇವಲ ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಸದರಿ ಸೇತುವೆಯ ದುರಸ್ತಿಗೆ ಅಗತ್ಯವಿಲ್ಲ, 136 ಟನ್ ಭಾರವಿರುವ ವಾಹನಗಳನ್ನು ಸೇತುವೆಯ ಮೇಲೆ ಬಿಡಬಹುದು ಎಂದು ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರದವರು ಪ್ರೀ ಕ್ವಾಲಿಫಿಕೇಷನ್ ಇದ್ದಂಥ ಟೆಂಡರುದಾರರನ್ನು ಕರೆದು ಅವರೇ ದುರಸ್ತಿಗಾಗಿ ಯೋಜನೆಯನ್ನು ನಿಗದಿ ಮಾಡಿದ್ದಾರೆ. ಸದರಿ ಸೇತುವೆಯ ದುರಸ್ತಿಯಾಗುವವರಿಗೆ ಆರು ಟನ್ ಭಾರವಿದ್ದಂಥ ಲಘು ವಾಹನಗಳನ್ನು ಬಿಡಬೇಕು, ದುರಸ್ತಿಯಾದ ಮೇಲೆ ಎಷ್ಟು ಭಾರವಾದ ವಾಹನಗಳನ್ನು ಬೇಕಾದವರು ಬಿಡಬಹುದು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರದವರು ಸದರಿ ಸೇತುವೆ ದುರಸ್ತಿ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಸಾರ್ವಜನಿಕರ ಸಂರಕ್ಷಣೆ ಮಾಡಬೇಕಾಗಿದೆ. ಒಂದು ವೇಳೆ ದುರಾದೃಷ್ಟವಶಾತ್ ಪ್ರಯಾಣಿಕರ ವಾಹನವೊಂದು ಸೇತುವೆಯಿಂದ ಬಿತ್ತು ಎಂದರೆ ಸರ್ಕಾರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆಯೇ ಹೊರತು ಸಾರ್ವಜನಿಕರು ಜವಾಬ್ದಾರರಾಗುವುದಿಲ್ಲ. ಆದ್ದರಿಂದ ಜನರಿಗೆ ತೊಂದರೆಯನ್ನು ಕೊಡಬೇಕು ಎನ್ನತಕ್ಕ

ವೈಯಕ್ತಿಕ ಉದ್ದೇಶದಿಂದ ಆ ರೀತಿಯಾದ ವಾಹನಗಳ ಸಂಚಾರಕ್ಕೆ ನಿರ್ಬಂಧವನ್ನು ನಾವು ಹಾಕಿಲ್ಲ, ತಜ್ಞರು ಏನು ವರದಿಯನ್ನು ಕೊಟ್ಟಿದ್ದಾರೊ ಅದರ ಪ್ರಕಾರ ಈ ರೀತಿ ಏರ್ಪಾಡು ಮಾಡಲಾಗಿದೆ. ಇವತ್ತು ನಮ್ಮ ರಾಷ್ಟ್ರದವರಲ್ಲದೆ ವಿದೇಶಿ ತಜ್ಞರೂ ಸೇರಿ ಕೊಂಡು ಆ ಸೇತುವೆಯ ದುರಸ್ತಿಯ ಕೆಲಸವನ್ನು ಮಾಡುತ್ತಿದ್ದಾರೆ. ಇದು ಅತ್ಯಾಧುನಿಕ ವಿಧಾನದಿಂದ ಸೇತುವೆಯ ದುರಸ್ತಿ ಮಾಡುವುದಾಗಿದೆ. ಈ ದಿಸೆಯಲ್ಲಿ ಆದಷ್ಟು ಬೇಗ ಆ ಸೇತುವೆಯ ದುರಸ್ತಿಯ ಕೆಲಸವನ್ನು ಮಾಡುತ್ತೇವೆ, ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಆ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸುತ್ತೇವೆ. ಇನ್ನು ಆದಾಯದ ಬಗ್ಗೆ ಹೇಳುವುದಾದರೆ, ಇವತ್ತಿನದಿವಸ ಏನು ಟೆಂಡರ್ ಕರೆದಿದ್ದಾರೆ, ಅದನ್ನು ಕೇಂದ್ರ ಸರ್ಕಾರದವರು ಕರೆದದ್ದು. ಕೇಂದ್ರ ಸರ್ಕಾರದವರು ಅದರ ಬಗ್ಗೆ ಎಲ್ಲಾ ಕಂಡೀಷನ್‌ಗಳನ್ನು ನಿಗದಿಮಾಡಿದ್ದಾರೆ. ಆದ್ದರಿಂದ ನಮ್ಮ ರಾಜ್ಯಸರ್ಕಾರಕ್ಕೆ ಇದರ ಬಗ್ಗೆ ಯಾವುದೇ ಸಂಬಂಧವಿಲ್ಲ.

+ ಡಾ|| ಎಂ.ಪಿ. ಕರ್ಕಿ (ಕುಮಟಾ) : ಸನ್ಮಾನ್ಯ ಉಪಾಧ್ಯಕ್ಷರೆ, ಸೇತುವೆಯ ಯಾವ ಭಾಗ ಸರಿಯಾಗಿಲ್ಲ, ಅವ್ಯವಸ್ಥೆಯಾಗಿದೆ ಎಂಬ ಬಗ್ಗೆ ಪರೀಕ್ಷೆ ಮಾಡಿದರು. ಆ ರೀತಿ ಪರೀಕ್ಷೆಯನ್ನು ಮಾಡುವುದಕ್ಕಿಂತ ಪೂರ್ವದಲ್ಲಿಯೇ ಬಾರ್ಜ್ ಗುತ್ತಿಗೆದಾರರೊಂದಿಗೆ ಅವರು ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಈ ಒಪ್ಪಂದದಲ್ಲಿ ಅವರು ಮೂರು ಟನ್ ಭಾರಕ್ಕಿಂತ ಜಾಸ್ತಿ ಭಾರದ ವಾಹನಗಳನ್ನು ಬಿಡುವುದಿಲ್ಲವೆಂದು ಹೇಳಿದ್ದಾರೆ. ಅದನ್ನು ಯಾವ ಆಧಾರದ ಮೇಲೆ ಮಾಡಕೊಂಡರು? ಈಗ ಆರು ಟನ್‌ಗಿಂತ ಕಡಿಮೆ ಭಾರದ ವಾಹನಗಳನ್ನು ಸೇತುವೆಯ ಮೇಲೆ ಸಂಚಾರಕ್ಕೆ ಅವಕಾಶ ಮಾಡಿಕೊಡಬಹುದೆಂದು ಸೇತುವೆಯ ಸಲಹೆಗಾರರು ಹೇಳುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದುದು. ನಾವೇ ಸೇತುವೆಯನ್ನು ನೋಡಿದ್ದೇವೆ. ಆದರೆ ಗುತ್ತಿಗೆದಾರರ ಹತ್ತಿರ ಒಪ್ಪಂದ ಮಾಡಿಕೊಂಡಿರುವಲ್ಲಿ ಎಲ್ಲೂ ಸಹ ಆರು ಟನ್‌ಗಿಂತ ಕಡಿಮೆ ಭಾರದ ವಾಹನಗಳನ್ನು ಬಿಡುವ ಬಗ್ಗೆ ಪ್ರಸ್ತಾಪವಿಲ್ಲ.ಅದರ ಬಗ್ಗೆ ದಾಖಲೆ ನನ್ನ ಹತ್ತಿರ ಇದೆ. ಅನಂತರ ಗುತ್ತಿಗೆದಾರರು ಸರ್ಕಾರಕ್ಕೆ ಐದು ಲಕ್ಷ ರೂಪಾಯಿಗಳನ್ನು ಪ್ರತಿ ತಿಂಗಳು ಪಾವತಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಗುತ್ತಿಗೆದಾರರು ಐದು ತಿಂಗಳುಗಳಿಂದ ಹಣವನ್ನು ಪಾವತಿ ಮಾಡಿಲ್ಲ, ನೀವು ಮೂರು ಟನ್‌ಗಿಂತ ಹೆಚ್ಚು ಭಾರದ ವಾಹನಗಳನ್ನು ಬಿಡಲು ಹೇಳುತ್ತಿದ್ದೀರಿ, ಆದ್ದರಿಂದ ನಮಗೇ ನಷ್ಟವಾಗಿದೆ, ನೀವೇ ನಮಗೆ ಹಣವನ್ನು ಕೊಡಬೇಕೆಂದು ಅವರು ಸರ್ಕಾರಕ್ಕೆ ಕೇಳುತ್ತಿದ್ದಾರೆ. ಇವರೇನು ಐದು ಲಕ್ಷ ರೂಪಾಯಿಗಳನ್ನು ಪಾವತಿ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ ಇದೂ ಸತ್ಯಕ್ಕೆ ದೂರವಾದುದು. ಅನಂತರ ಸದರಿ ಸೇತುವೆಯ ಬಗ್ಗೆ ಪರೀಕ್ಷೆ ಮಾಡಿದವರು, ಆ ಗ್ಯಾಪ್ ಏನಿದೆ ಅದು ಸರಿಯಾಗಿದೆ, ಹೊಸ ಸೇತುವೆಯಿಂದ ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಸಚಿವರು ಹೇಳುತ್ತಿರುವ ಪ್ರಕಾರ ಈ ಸೇತುವೆಯು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕದ್ದು, ಅದರ ದುರಸ್ತಿಯನ್ನು ಮಾಡತಕ್ಕವರು ಕೇಂದ್ರ ಸರ್ಕಾರದವರು. ರಾಜ್ಯಸರ್ಕಾರದಿಂದ ಏನಾದರೂ ಆಗಬೇಕಾಗಿದ್ದರೆ ಹೇಳಿ. ಹಣ ವಸೂಲಿಯ ಮತ್ತು ಆದಾಯದ ಬಗ್ಗೆ ಕೇಳುತ್ತೀರಿ ಅದೂ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂಥದ್ದು. ಆದ್ದರಿಂದ ಇವರಿಂದ ಏನಾದರೂ ಆಗಬೇಕಿದ್ದರೆ ಕೇಳಿ.

ಡಾ|| ಎಂ.ಪಿ. ಕರ್ಕಿ : ಟೆಂಡರ್‌ನ್ನು ಕರೆಯತಕ್ಕವರು ರಾಜ್ಯಸರ್ಕಾರದವರೆ, ಅದನ್ನು ಕೇಂದ್ರದವರು ಮಾಡುವುದಿಲ್ಲ, ಆ ರೀತಿ ಕರೆದ ಟೆಂಡರ್‌ನಲ್ಲಿ ಮೂರು ಟನ್‌ಗಿಂತ ಹೆಚ್ಚು ಭಾರದ ವಾಹನಗಳನ್ನು ಬಿಡುವುದಿಲ್ಲವೆಂದು ಮೇ ತಿಂಗಳಿನಲ್ಲೇ ನಿಶ್ಚಯ ಮಾಡಿಕೊಂಡಿದ್ದಾರೆ. ಅನಂತರ ಬೆಂಗಳೂರಿನಲ್ಲಾದ ಸಭೆಯಲ್ಲಿ ಸೇತುವೆ ಸರಿಯಾಗಿದೆ

ಎಲ್ಲಾ ರೀತಿಯಾದ ವಾಹನಗಳನ್ನು .ಬಿಡುತ್ತೇವೆ ಎಂಬ ಬಗ್ಗೆ ನಿರ್ಧಾರ ಮಾಡಿದರು. ಆ ಸಭೆಯಲ್ಲಿ ಉನ್ನತಾಧಿಕಾರಿಗಳೂ ಇದ್ದರು. ರಾಷ್ಟ್ರೀಯ ಹೆದ್ದಾರಿಗಳ ಅಧಿಕಾರಿಗಳು, ಬ್ರಿಡ್ಜ್ ಗುತ್ತಿಗೆದಾರರು ಎಲ್ಲರು ಇದ್ದರೂ ಕೂಡ ಸಭೆಯಲ್ಲಿ ಮೂರು ಟನ್‌ಗಿಂತ ಹೆಚ್ಚು ಭಾರದ ವಾಹನಗಳನ್ನು ಬಿಡುವುದಿಲ್ಲ ಎಂಬ ಷರತ್ತಿನ ಬಗ್ಗೆ ಪ್ರಸ್ತಾಪ ಮಾಡಲಿಲ್ಲ, ಬಹಿರಂಗಪಡಿಸಲಿಲ್ಲ. ಅನಂತರ ಈಗ ಆರು ಟನ್ ಭಾರದವರೆಗೆ ವಾಹನಗಳನ್ನು ಬಿಡುತ್ತೇವೆಂದು ಹೇಳುತ್ತಿದ್ದಾರೆ. ಇದಕ್ಕೂ ಯಾವುದೇ ಆಧಾರವಿಲ್ಲ, ವೈಜ್ಞಾನಿಕವಾಗಿರತಕ್ಕ ಯಾವುದೇ ಆಧಾರವೂ ಇಲ್ಲ. ಯಾವ ಸಲಹೆಗಾರರೂ ಆರು ಟನ್ ಭಾರದವರೆಗೆ ವಾಹನಗಳನ್ನು ಬಿಡಬಹುದೆಂದು ಹೇಳಿಲ್ಲ. ಈಗ ಅಲ್ಲಿಯ ಸ್ಟೂಫ್ ಕನ್‌ಸಲ್ಟೆಂಟ್‌ನ ಸಲಹೆಗಾರರು ಬ್ರಿಡ್ಜ್‌ನ ಗುತ್ತಿಗೆಯನ್ನು ಯಾರಿಗೆ ವಹಿಸಿದ್ದಾರೋ ಅದರ ಆಧಾರದ ಮೇಲೆ ನಾವು ಈ ರೀತಿಯಾದ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ, ಅವರು ನೀವಿರುವ ಆಧಾರದ ಮೇಲೆ ಸೇತುವೆಯ ಶಿಥಲೀಕರಣದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮಾಹಿತಿ ಕಳಿಸುತ್ತಿದ್ದೇವೆ, ಕೇಂದ್ರ ಸರ್ಕಾರದವರು ಇದರ ದುರಸ್ತಿಗಾಗಿ ಒಪ್ಪಿಗೆಯನ್ನು ಕೊಟ್ಟು ಕಳಿಸುತ್ತಿದೆ. ಹಾಗಾಗಿ ಮೂಲಭೂತವಾಗಿ ತಪ್ಪಾಗಿರುವ ವರದಿಯ ಆಧಾರದ ಮೇಲೆ ಕೇಂದ್ರ ನಿರ್ಣಯವನ್ನು ತೆಗೆದುಕೊಂಡರೆ ಕೇಂದ್ರ ಸರ್ಕಾರದ ಮೇಲೆ ನಾವು ಜವಾಬ್ದಾರಿಯನ್ನು ವಹಿಸಲು ಆಗುವುದಿಲ್ಲ. ರಾಜ್ಯಸರ್ಕಾರವೇ ಈ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ರಾಜ್ಯಸರ್ಕಾರ ಉತ್ತರಿಸಬೇಕಾಗುತ್ತದೆ. ನನ್ನ ನೇರವಾದ ಆಪಾದನೆಯೇನೆಂದರೆ ಮೂರು ಟನ್‌ಗಿಂತ ಹೆಚ್ಚಿನ ಭಾರದ ವಾಹನಗಳನ್ನು ಬಿಡುತ್ತೇವೆ ಎಂದು ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಂಡದ್ದು ಮೊದಲ ತಪ್ಪು. ಎರಡನೆಯದಾಗಿ, ಆರು ಟನ್‌ಗಿಂತ ಹೆಚ್ಚಿನ ಭಾರದ ವಾಹನವನ್ನು ಬಿಡುವುದಿಲ್ಲವೆಂಬ ಬಗ್ಗೆ ಯಾವುದೇ ರೀತಿಯಾದ ವೈಜ್ಞಾನಿಕವಾದ ಆಧಾರ ಇಲ್ಲ, ಅವರ ವರದಿಯಲ್ಲಿ ಅದನ್ನು ಹೇಳಿಲ್ಲ, ಮೂರನೆಯದಾಗಿ, ಗುತ್ತಿಗೆದಾರರು ಪ್ರತಿ ತಿಂಗಳು ಐದು ಲಕ್ಷ ರೂಪಾಯಿಗಳನ್ನು ಪಾವತಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ, ಆದರೆ ಕಳೆದ ಐದು ತಿಂಗಳುಗಳಿಂದ ಅವರು ಹಣವನ್ನು ಪಾವತಿ ಮಾಡಿಲ್ಲ, ಅದಕ್ಕೆ 'ಬಾರ್ಜ್ ಗುತ್ತಿಗೆದಾರರು' ಅಬ್ಜೆಷನ್ ಮಾಡುತ್ತಿದ್ದಾರೆ. ಇವುಗಳ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಉಪಾಧ್ಯಕ್ಷರೇ, ಈ ಸೇತುವೆಯ ದುರಸ್ತಿ ಕೆಲಸವನ್ನು ಪ್ರಾರಂಭ ಮಾಡಿದವರು ಕೇಂದ್ರ ಸರ್ಕಾರದವರೆಂದು ನಾನು ಈಗಾಗಲೇ ಹೇಳಿದ್ದೇನೆ. ನಮ್ಮಿಂದ ಹೊರಪಟ್ಟು ಅವರು ಟೆಂಡರ್‌ನ್ನು ಕರೆದಿದ್ದಾರೆ, ಟೆಂಡರ್ ಕರೆದದ್ದು, ಟೆಂಡರ್‌ನ್ನು ಅಂತಿಮವಾಗಿ ನಿರ್ಣಯ ಮಾಡಿದ್ದುದು ಎಲ್ಲವೂ ಭಾರತ ಸರ್ಕಾರದವರು. ನಮಗೂ ಅದಕ್ಕೂ ಏನೇನೂ ಸಂಬಂಧವಿಲ್ಲ, ಎರಡನೆಯದಾಗಿ ಕೇಂದ್ರ ಸರ್ಕಾರದ ಕನ್‌ಸಲ್ಟೆಂಟ್ ಮತ್ತು ಹೊರರಾಷ್ಟ್ರದ ಕನ್‌ಸಲ್ಟೆಂಟ್‌ಗಳು ಕೂಡಿ ಕೊಂಡು ಸೇತುವೆಯ ದುರಸ್ತಿ ಮಾಡುತ್ತಿರಬೇಕಾದರೆ ಅನಗತ್ಯವಾಗಿ ತೊಂದರೆಯಾಗಬಾರದೆಂದು ಸೇತುವೆಯ ವಾಬರಿಂಗ್ (ಶೇಕಿಂಗ್) ಆಗಬಾರದೆಂದು ಆರು ಟನ್‌ಗಿಂತ ಹೆಚ್ಚು ಭಾರವಾದ ವಾಹನಗಳನ್ನು ಬಿಡಬಾರದೆಂದು ಅವರು ಹೇಳಿದರು.

ಉಪಾಧ್ಯಕ್ಷರು : ಈ ರೀತಿಯಾದ ನಿರ್ಣಯವನ್ನು ತೆಗೆದುಕೊಂಡಿರುವುದರಿಂದ ಸಾರ್ವಜನಿಕರಿಗೆ ಆಗಿರತಕ್ಕಂಥ ತೊಂದರೆಯೇನು?

ಡಾ॥ ಎಂ.ಪಿ. ಕರ್ಕಿ : ಖಾಲಿ ಬಸ್ಸುಗಳನ್ನು ಒಂದು ತುದಿಯಿಂದ ಮತ್ತೊಂದು ತುದಿಗೆ ತಂದು ನಿಲ್ಲಿಸುತ್ತಾರೆ. ಇದರಿಂದ ಸಾರ್ವಜನಿಕರು ಒಂದು ತುದಿಯಿಂದ ಸೇತುವೆಯ ಮತ್ತೊಂದು ತುದಿಯವರೆಗೆ ರಾತ್ರಿಹಗಲು ನಡೆದುಕೊಂಡು ಬರಬೇಕಾದ ಪರಿಸ್ಥಿತಿ ಇದೆ. ಈ ರೀತಿ ಆರು ಟನ್‌ಗಿಂತ ಹೆಚ್ಚು ಭಾರವಾದ ವಾಹನಗಳನ್ನು

ಬಿಡಬಾರದೆಂದು ಕೇಂದ್ರ ಸರ್ಕಾರದವರು ನಿರ್ಬಂಧವನ್ನು ಹಾಕಿಲ್ಲ, ಅದಕ್ಕೆ ಯಾವುದೇ ವೈಜ್ಞಾನಿಕವಾದ ಆಧಾರವೂ ಇಲ್ಲ.

ಉಪಾಧ್ಯಕ್ಷರು : ಈ ರೀತಿಯಾದ ನಿರ್ಣಯವನ್ನು ತೆಗೆದುಕೊಂಡಿರುವುದರಿಂದ ಸಾರ್ವಜನಿಕರಿಗೆ ಆಗಿರತಕ್ಕಂಥ ತೊಂದರೆಯೇನು?

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಉಪಾಧ್ಯಕ್ಷರೆ, ಸಾರ್ವಜನಿಕರಿಗೆ ಪ್ರಯಾಣಿಕರಿಗೆ ತೊಂದರೆ ಕೊಡಬೇಕು ಎನ್ನತಕ್ಕ ಉದ್ದೇಶ ಸರ್ಕಾರಕ್ಕಿಲ್ಲ, ಅದಕ್ಕಾಗಿ ಈಗ ಟೆಂಪೊಗಳ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ: ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಹೆಣ್ಣು ಮಕ್ಕಳನ್ನು ಕೂರಿಸಿಕೊಂಡು ಬರಬಹುದೆಂದು ಹೇಳಿದ್ದೇವೆ. 3-4 ಕಿಲೋಮೀಟರ್ ನಡೆಯಬೇಕಾದ ಪ್ರಸಂಗ ಬಂದಿರುತ್ತದೆ. ಆಟೋ ರಿಕ್ಷಗಳಿಗೆ ಹೋಗಲು ಅವಕಾಶವಿದೆ. ಗೋವಾದಲ್ಲಿ ಇದೇ ರೀತಿ ಒಂದು ಬ್ರಿಡ್ಜ್‌ನ್ನು ದುರಸ್ತಿ ಮಾಡುತ್ತಿದ್ದರು, ಆ ರೀತಿ ಮಾಡುವಾಗ ಬಿದ್ದುಬಿಟ್ಟಿತು, ಆಕಸ್ಮಾತ್ ಈ ಬ್ರಿಡ್ಜ್ ಆ ರೀತಿಯಾಗಿಬಿಟ್ಟರೆ ಏನು ಮಾಡಬೇಕಾಗುತ್ತದೆ, ಜೊತೆಗೆ ರಸ್ತೆ ಸಹ ಸರಿಯಾಗಿಲ್ಲ, ಈ ದಿಸೆಯಲ್ಲಿ ನಾವು ಆದಷ್ಟು ಬೇಗ ಅದನ್ನು ದುರಸ್ತಿ ಮಾಡಲಿಕ್ಕೆ ಪ್ರಯತ್ನ ಪಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಹಣ ಪಾವತಿ ಮಾಡುವುದಾಗಲೀ, ಬಿಡುವುದಾಗಲೀ ಎಲ್ಲವೂ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರುತ್ತದೆ. ಇದು ಕೇಂದ್ರ ಸರ್ಕಾರದ ಜವಾಬ್ದಾರಿಯೇ ಹೊರತು ನಮಗೆ ಯಾವುದು ಸಂಬಂಧ ಇಲ್ಲಿ ಇರುವುದಿಲ್ಲ.

ಶ್ರೀ ಡಾ|| ಯು. ಚಿತ್ತರಂಜನ್ : ಇದು ಕೇಂದ್ರ ಸರ್ಕಾರದ ಜವಾಬ್ದಾರಿಯಾದರೆ ಪಿ.ಡಬ್ಲ್ಯೂ.ಡಿ. ಇಲಾಖೆಯವರು ಇದನ್ನು ಪರಿಶೀಲನೆ ಮಾಡಬೇಕಲ್ಲವೆ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಈ ಹೌಸ್‌ನಲ್ಲಿ ನಾವು ಅಲ್ಲಿ ಕುಳಿತಿದ್ದಾಗ ನಾವು ಅವರು ಕೂಡಿ ಈ ಸೇತುವೆ ರಿಪೇರಿ ಆಗಬೇಕು ಎಂದು ಬೆನ್ನುಹತ್ತಿದೆವು. ಕಷ್ಟಪಟ್ಟು ನಮ್ಮ ಸರ್ಕಾರ ಬಂದನಂತರ ಈ ಸೇತುವೆ ರಿಪೇರಿಗೆ ಸಂಬಂಧಪಟ್ಟಂತೆ ಶಾಸಕರ ಜೊತೆ ಸ್ಥಳಕ್ಕೆ ಭೇಟಿ ಕೊಟ್ಟಿದ್ದೇವೆ. ಇದಲ್ಲದೇ ಬೆಂಗಳೂರಿನಲ್ಲಿ ಈ ಸಂಬಂಧ ಮೀಟಿಂಗ್ ಮಾಡಿದ್ದೇವೆ. ಪ್ರಯಾಣಿಕರಿಗೆ ಯಾವುದೇ ರೀತಿಯ ಅನಾನುಕೂಲತೆಗಳು ಆಗಬಾರದು ಎಂದು ಶಾಸಕರ ಸಲಹೆಯನ್ನು ಪಡೆದು ಶೌಚಗೃಹ, ಬಸ್ ನಿಲ್ದಾಣ, ಫುಟ್ ಪಾತ್, ಬ್ರಿಡ್ಜ್ ಮೇಲೆ ಲೈಟ್ಸ್, ರಸ್ತೆಗಳನ್ನು ಎಲ್ಲಾ ಮಾಡಿ ಇವೊತ್ತು ಪ್ರಯಾಣಿಕರಿಗೆ ತೊಂದರೆಯಾಗಬಾರದು ಎನ್ನುವ ಉದ್ದೇಶದಿಂದ ಕೆ.ಎಸ್.ಆರ್.ಟಿ.ಸಿ ಯಿಂದ ಮಿನಿ ಬಸ್ ಸಪ್ಲೈ ಮಾಡುತ್ತಿದ್ದೇವೆ. ಈ ರೀತಿ ಇರುವಾಗ 6 ಟನ್ ಮೇಲೆ ಇರುವ ಬಸ್‌ನ್ನು ಬಿಟ್ಟರೆ ನಮಗೇನಾಗುತ್ತದೆ, ನಾವೇಕೆ ಅಡ್ಡ ಬರಬೇಕು, ನಾವೇನು ಚಾರ್ಜ್ ಕಂಟ್ರಾಕ್ಟರ್‌ಗೆ ಸಹಾಯ ಮಾಡುವುದಕ್ಕೆ ಹೊರಟಿದ್ದೇವೆಯೇ? ಆದರೆ ತಜ್ಞರ ಒಂದು ಅಭಿಪ್ರಾಯ ಕೊಟ್ಟನಂತರ.....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಡಾ|| ಕರ್ಕಿಯವರೇ ನಿಮಗೇ ಗೊತ್ತು, ಇದನ್ನು ಯಾರಿಗೆ ಕೊಡಬೇಕು ಎನ್ನುವಾಗ ನೀವು ಬಂದಿದ್ದೀರಿ.

ಡಾ|| ಯು. ಚಿತ್ತರಂಜನ್ : ಇದು ಕೇಂದ್ರ ಸರ್ಕಾರ ಅಲ್ಲ, ಇದರಲ್ಲಿ ಚಾರ್ಜ್ ಕಂಟ್ರಾಕ್ಟರ್ ಈಸ್ ರೂಲಿಂಗ್, ನಾಟ್ ದಿ ಸೆಂಟ್ರಲ್ ಗೌವರ್ನ್‌ಮೆಂಟ್

ಶ್ರೀ ಆರ್.ವಿ. ದೇಶಪಾಂಡೆ : ನಾವೇನು ಈ ಕೇಸ್‌ನಲ್ಲಿ ರೆಕ್‌ಮೆಂಡ್ ಮಾಡಿಲ್ಲ, ಟೆಂಡರ್ ಮಾಡಿದ್ದಾರೆ. ಈ ಟೆಂಡರ್ ಪ್ರಕಾರ ನಾವು ಮತ್ತು

ಕರ್ಕಿಯವರು ಸೇರಿ ಸ್ಥಳೀಯರಿಗೆ ಕೊಡಲಿಕ್ಕೆ ನಾವು ಪ್ರಯತ್ನ ಮಾಡಲಿಲ್ಲವೇ ಎಂಬುದನ್ನು ನೀವು ಕೇಳಿ ಆದರೂ ಇದರಲ್ಲಿ ಕೇಂದ್ರ ಸರ್ಕಾರದವರು ತಮ್ಮದೇ ಆದ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ರಾಜ್ಯ ಸರ್ಕಾರದ್ದು ಏನಿದೆ? ಇಂದು ಒಂದು ಕಡೆಯಾದರೆ, ಎರಡನೆಯದು ಪ್ರಯಾಣಿಕರಿಗೆ ಎಷ್ಟು ಅನುಕೂಲಗಳನ್ನು ಮಾಡಲಿಕ್ಕೆ ಸಾಧ್ಯವಿದೆಯೋ ಅದನ್ನು ಶಾಸಕರ ಸಹಾಯವನ್ನು ಪಡೆದು ಅವರ ಅಭಿಪ್ರಾಯದ ಪ್ರಕಾರ ಮಾಡಿಕೊಟ್ಟಿದ್ದೇವೆ. ಈ ರೀತಿ ಇರುವಾಗ ಇವೊತ್ತು 6 ಟನ್ ಮೇಲಿರುವ ವಾಹನ ಸೇತುವೆ ಮೇಲೆ ಹೋಗಿ ಮಾನ್ಯ ಲೋಕೋಪಯೋಗಿ ಸಚಿವರು ಹೇಳಿದ ಹಾಗೆ ಏನಾದರೂ ಅನಾಹುತವಾದರೆ ಅದಕ್ಕೆ ಜವಾಬ್ದಾರಿ ಯಾರು. ಆ ಜವಾಬ್ದಾರಿಯನ್ನು ಶಾಸಕರು ತೆಗೆದುಕೊಳ್ಳುತ್ತೇವೆ ಎಂದರೆ ಅದಕ್ಕೆ ಅವರು ಬರೆದುಕೊಡಲಿ ಮುಂದೆ ಅದನ್ನು ವಿಚಾರ ಮಾಡೋಣ

ಡಾ॥ ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, 1991ರಲ್ಲಿ ಸೇತುವೆ ಬಂದ್ ಆಯಿತು. ಆದರೆ ಏತಕ್ಕಾಗಿ ಬಂದ್ ಆಯಿತು ಎಂದು ಯಾರೂ ಹೇಳಲಿಲ್ಲ. 1994ರಲ್ಲಿ ಪುನಃ ಪ್ರಾರಂಭವಾಯಿತು, ಜನಗಳ ಒತ್ತಾಯದಿಂದ ಪುನಃ ಪ್ರಾರಂಭವಾಗಿ ಎಲ್ಲಾ ವಾಹನಗಳು ಆ ಸೇತುವೆ ಮೇಲೆ ಹಾದುಹೋದವು. ಈಗಾಗಲೇ ಒಂದು ವರ್ಷವಾಗುತ್ತಾ ಬಂದಿದ್ದರೂ 1991ರಲ್ಲಿ ಸೇತುವೆಯನ್ನು ಏಕೆ ಬಂದ್ ಮಾಡಿದ್ದರು ಮತ್ತು 1994ಕ್ಕೆ ಮತ್ತೆ ಇದನ್ನು ಏಕೆ ಪ್ರಾರಂಭ ಮಾಡಿದ್ದರು ಎಂಬುದಕ್ಕೆ ಇವೊತ್ತಿನವರೆಗೆ ಕಾರಣವನ್ನು ಕೊಟ್ಟಿಲ್ಲ. ಒಂದು ವರ್ಷ ಮುಗಿದು ಹೋಯಿತು, ಮುಕ್ತವಾಗಿ ಹೋಗಿ ಆ ನಂತರ ಟೆಸ್ಟ್ ಮಾಡಿದ ಮೇಲೆ ಟೆಸ್ಟ್ ರಿಪೋರ್ಟ್‌ನಲ್ಲಿಯೂ ಕೂಡ ಈ ಬ್ರಿಡ್ಜ್ ಸರಿಯಾಗಿದೆ ಎಂದು ಟೆಸ್ಟ್ ಮಾಡಿದವರು ಹೇಳಿದ್ದಾರೆ ಎನ್ನುವ ವರ್ತಮಾನ ಬಂತು. ಜನಗಳಿಗೆ ತೊಂದರೆಯಾಗಿದೆ ಎಂದು ಹೇಳಿ ರೀ-ಇನ್‌ಸ್ಪೆಕ್ಟ್ ಮಾಡಿದರೆ ಯಾರೂ ಅಬ್ಜೆಕ್ಷನ್ ಮಾಡುವುದಿಲ್ಲ, ಆದರೆ ಕೇವಲ 6 ಟನ್ನಿಗೆ ಮಾತ್ರ ಸೀಮಿತವಾಗಿರತಕ್ಕಂಥದ್ದು ಎಂದಾಗ, ಖಾಲಿ ಬಸ್ ಮಾತ್ರ ಓಡತಕ್ಕಂಥದ್ದು, ಏಕೆಂದರೆ ಇದರಲ್ಲಿ ಪ್ಯಾಸೆಂಜರ್ಸ್ ಇದ್ದರೆ 7 ಟನ್ ಮೇಲೆ ಆಗಬಹುದು. ಕೇವಲ 6 ಟನ್‌ಗೆ ಒಳಪಟ್ಟು ವೆಹಿಕಲ್‌ಗಳು ಓಡಾಡಬೇಕು ಎಂದು ಹೇಳಿರುವುದರಲ್ಲಿ ಯಾವುದೇ ರೀತಿಯ ವೈಜ್ಞಾನಿಕ ಆಧಾರಗಳಿಲ್ಲ. ಯಾರೂ ಕೂಡ ಇದಕ್ಕೆ ರೆಕಮೆಂಡೇಶನ್ ಮಾಡಿಲ್ಲ. ನಾವೇ ಮಾಡಿರತಕ್ಕಂಥ ಯೋಜನೆ. ಈ ಯೋಜನೆಯಲ್ಲಿ ಬಾರ್ಜ್ ಗುತ್ತಿಗೆದಾರರಿಗೆ ಅನುಕೂಲವಾಗಬೇಕು. ಬಾರ್ಜ್ ಗುತ್ತಿಗೆದಾರರು ಹಣ ಮಾಡಬೇಕು, ಆ ಹಣದ ಒಂದು ಪಾಲು ಹಂಚಿಕೊಳ್ಳಬೇಕು ಎನ್ನುವ ಒಂದೇ ಉದ್ದೇಶ ಇದೆ ಹೊರತಾಗಿ ಬೇರೆ ಉದ್ದೇಶವಿಲ್ಲ.

ಡಾ॥ ಯು. ಚಿತ್ತರಂಜನ್ : ಕೇಂದ್ರದ ಕಡೆಗೆ ಬೊಟ್ಟು ಮಾಡಿ ತೋರಿಸುವಂಥ ರಾಜ್ಯ ಸರ್ಕಾರ ಇದರ ನಿರ್ವಹಣೆಯನ್ನು ಏಕೆ ಇವರು ಮಾಡಿದರು, ಅದನ್ನೂ ಕೂಡ ಅವರಿಗೇ ಬಿಟ್ಟುಕೊಡಬೇಕಾಗಿತ್ತು. ಪೋರ್ಟ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದರೆ ಇದು ನಮಗೆ ಸಂಬಂಧವಿಲ್ಲ ಪಿ.ಡಬ್ಲ್ಯೂ.ಡಿ.ಯವರದ್ದು ಎಂದು ಹೇಳುತ್ತಾರೆ, ಪಿಡಬ್ಲ್ಯೂಡಿಯವರನ್ನು ಕೇಳಿದರೆ ಇದು ನಮಗೆ ಸಂಬಂಧವಿಲ್ಲ ಪೋರ್ಟ್ ಡಿಪಾರ್ಟ್‌ಮೆಂಟಿನವರದ್ದು ಎಂದು ಹೇಳುತ್ತಾರೆ, ರಸ್ತೆ ಬದಿ ವಿಚಾರ ಪೋರ್ಟ್‌ನವರು ನಮಗೆ ಸಂಬಂಧವಿಲ್ಲ ಎನ್ನುತ್ತಾರೆ. ಹಾಗಾದರೆ ಯಾವ ಆಧಾರದ ಮೇಲೆ

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಉಪಾಧ್ಯಕ್ಷರೇ, ನಾನು ಹೇಳುವ ವಿಷಯ ಏನೆಂದರೆ, ಈಗ ಪರ್ಯಾಯವಾಗಿ ಬಾರ್ಜಿನ್ ವ್ಯವಸ್ಥೆಯನ್ನು ಮಾಡಿದ್ದಾರೆ, ಇಲ್ಲಿ ಖಾಲಿ ಟ್ರಕ್ಕಿಗೆ 25 ರೂಪಾಯಿ ಇದಲ್ಲದೇ ಪ್ರತಿ ಟನ್ನಿಗೆ 10 ರಿಂದ 15

ರೂಪಾಯಿನಂತೆ ಸುಮಾರು 120ರಿಂದ 150ರೂಪಾಯಿಗಳವರೆಗೆ ಸಂಗ್ರಹ ಮಾಡುತ್ತಿದ್ದಾರೆ. ಇದು ಅತಿ ಹೆಚ್ಚಾಯಿತು. ನಾಮಿನಲ್ ದರ ತೆಗೆದುಕೊಳ್ಳಲಿ. ಈಗ ಅದರ ಬದಲಿಗೆ ಬೇರೆ ಒಂದು ರಸ್ತೆ ಅಲ್ಲಿದೆ. ಆ ರಸ್ತೆಯಲ್ಲಿ ಯಾರು ಹೋಗುವುದಕ್ಕೆ ಬಯಸುತ್ತಿಲ್ಲ. ಆ ರಸ್ತೆ ಸಿದ್ದಾಪುರ ಬಂಟ್ವಾಳಕ್ಕೆ ಹೋಗುವ ರಸ್ತೆ. ಆ ರಸ್ತೆ ಸುಧಾರಣೆ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ನಾನು ಏಕೆ ಹೇಳುತ್ತಿದ್ದೇನೆ ಉಸ್ತುವಾರಿ ಸಚಿವರು ಹೇಳುವ ಹಾಗೆ ಅಲ್ಲಿಯ ಜೀವನಾಡಿ ಆ ರಸ್ತೆ ಮತ್ತು ಸೇತುವೆ. ಕಳೆದ ನಾಲ್ಕೈದು ವರ್ಷಗಳಿಂದ ಜನಗಳು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ನಾನು ನೇರವಾಗಿ ಹೇಳುವುದೇನೆಂದರೆ, ಇವೊತ್ತು ಟ್ರಕ್ ಆಗಲೀ, ಬಸ್ ಆಗಲೀ ಏನು ವಾಹನಗಳು ಹೋಗುತ್ತಿವೆ ಅವರಿಂದ ವಸೂಲಿ ಮಾಡುವ ಹಣ ಕಡಿಮೆ ಆಗಬೇಕು, ಅತಿಯಾದ ಹಣವನ್ನು ಸಂಗ್ರಹ ಮಾಡುತ್ತಿದ್ದಾರೆ. ಪರ್ಯಾಯವಾಗಿರುವ ರಸ್ತೆಯ ವ್ಯವಸ್ಥೆ ಸುಧಾರಣೆಯಾಗಬೇಕು. ಆ ರಸ್ತೆ ಸುಧಾರಣೆ ಮಾಡುವುದಕ್ಕೆ ಆಗ್ರಹ ಇಲ್ಲ.

ಉಪಾಧ್ಯಕ್ಷರು : ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದೆ ಎಂದು ಕಂಡುಬಂದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇವೊತ್ತಿನ ದಿವಸ ಕೆಲಸ ಮಾಡುತ್ತಿರುವವರಲ್ಲಿ ನಮ್ಮ ಕಡೆಯ ಅಧಿಕಾರಿಗಳು ಯಾರೂ ಅಲ್ಲಿಲ್ಲ. ಇದನ್ನೆಲ್ಲಾ ಮಾಡುವವರು ಕೇಂದ್ರ ಸರ್ಕಾರದವರು, ಪ್ರೀ ಕ್ವಾಲಿಫಿಕೇಶನ್ ಟೆಂಡರ್ ಈವನ್ ಬಾರ್ಜ್ ಫಿಕ್ಸ್ ಮಾಡುವವರು ಕೇಂದ್ರ ಸರ್ಕಾರದವರೇ. ಇವೊತ್ತಿನ ದಿವಸ ನಮಗೆ ಏನು ಅಧಿಕಾರವಿಲ್ಲ. ಇದರ ಬಗ್ಗೆ ಈಗಾಗಲೇ ಅವರೇ ಕ್ರಮ ತೆಗೆದುಕೊಂಡಿದ್ದಾರೆ. ಇನ್ನೊಂದು ವಿಷಯ ಹೇಳಬೇಕೆಂದರೆ, ಈ ಬ್ರಿಡ್ಜ್ ಎಷ್ಟು ಅವಶ್ಯವಿತ್ತು ಎಂದರೆ ಮೊನ್ನೆ ದಿವಸ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸ್ವತಃ ರಾಜಶೇಖರಮೂರ್ತಿಯವರನ್ನು ಭೇಟಿಯಾಗಿ ಸುಮಾರು 50 ಕೋಟಿ ರೂಪಾಯಿಗಳ ಇನ್ನೊಂದು ಬ್ರಿಡ್ಜ್‌ನ್ನು ಅಲ್ಲೇ ಮಾಡಬೇಕು ಎಂದು ಹೇಳುತ್ತಾ ಇರುವುದನ್ನು ಕೇಳಿಕೊಂಡು ಜಪಾನ್‌ನ ನೆರವಿನಡಿಯಲ್ಲಿ ಇದನ್ನು ಮಾಡಬೇಕು ಎಂದು ಸ್ವತಃ ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರಲ್ಲದೇ, ವೈಯಕ್ತಿಕವಾಗಿ ಕೋರಿಕೊಂಡಿದ್ದಾರೆ. ಆದ್ದರಿಂದ ಜನರಿಗೆ ಅನಾನುಕೂಲವಾಗಬಾರದು ಎನ್ನುವ ದೃಷ್ಟಿಯಿಂದ ಕೆಲಸವನ್ನು ಮಾಡುತ್ತಿದ್ದೇವೆ ಹೊರತಾಗಿ ಕಂಟ್ರಾಕ್ಟರಿಗೆ ತೊಂದರೆಯಾಯಿತು, ಯಾರಿಗೇ ಆಗಲಿ, ಕಂಟ್ರಾಕ್ಟರರನ್ನು ಕರೆದಿದ್ದರು, ಆ ಕಂಟ್ರಾಕ್ಟ್ ಕರೆದಾಗ ಮೂರು ನಾಲ್ಕು ಮಂದಿ ಟೆಂಡರ್ ಹಾಕಿದರು. ಇವೊತ್ತಿನ ದಿವಸ ಟೆಂಡರ್‌ನಲ್ಲಿ ಯಾರು ಹಾಕಿದ್ದರೋ ಅವರಿಗೇ ಕೊಟ್ಟಿದ್ದಾರೆ. ಇವೆಲ್ಲಾ ಪ್ರೀ ಕ್ವಾಲಿಫಿಕೇಶನ್ ಟೆಂಡರ್, ಇವೆಲ್ಲಾ ಬಾರ್ಜ್ ನಡೆಸುವವರು, ನಾವು ನಡೆಸುವ ಹಾಗೆ ಯಾರೂ ಇದನ್ನು ನಾವು ನಡೆಸುವ ಹಾಗೆ ಎಲ್ಲರೂ ನಡೆಸುವುದಕ್ಕೆ ಬರುವುದಿಲ್ಲ.

(ಗೊಂದಲ)

ಡಾ|| ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ಟೆಂಡರ್ ಹಾಕಿದ ಮೇಲೆ ನಂತರ ಟೆಂಡರ್ ಕಂಡೀಶನ್‌ನ್ನು ಬದಲಾಯಿಸಲಾಯಿತು, ಒಬ್ಬರಿಗೇ ಕೊಡಬೇಕೆಂದು ಹೇಳಿ one who has got an experience of running the barge for two years ಎನ್ನುವಂಥ ಕಂಡೀಶನ್ ಮಾಡಲಾಯಿತು. ಮಾನ್ಯ ಉಸ್ತುವಾರಿ ಸಚಿವರು ಹೇಳಿದರು. ಈ ಬಾರ್ಜ್‌ನಲ್ಲಿ 11 ಜನರು ಸತ್ತರು. ಸರ್ಕಾರ ಜವಾಬ್ದಾರಿ ತೆಗೆದುಕೊಂಡಿತೆ? ಆ ರಸ್ತೆ ಬಗ್ಗೆ ಏನು ಕ್ರಮ ತೆಗೆದುಕೊಂಡರು

(ಗೊಂದಲ)

ಪೋಲೀಸ್‌ರನ್ನು ಏಕೆ ಒದಗಿಸುತ್ತಾರೆ ಇವರು, ಕೇಂದ್ರ ಸರ್ಕಾರಕ್ಕೆ ಬಿಟ್ಟುಬಿಡಲಿ, ಬಹಳ ಜನಕ್ಕೆ ಇದರಿಂದ ತೊಂದರೆಯಾಗುತ್ತಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಲೋಕಪಯೋಗಿ ಮಂತ್ರಿಗಳಿಂದ ಒಂದೇ ಒಂದು ಆಶ್ವಾಸನೆಯನ್ನು ಅವರು ಕೇಳುತ್ತಿದ್ದಾರೆ. ಏನೆಂದರೆ 1994ರಲ್ಲಿ ಯಾವ ರೀತಿ ವ್ಯವಸ್ಥೆ ಇತ್ತೋ ಆ ವ್ಯವಸ್ಥೆಯನ್ನು ಮುಂದುವರಿಸಿ ಇದರಿಂದ ಏನು ತೊಂದರೆಯಾಗುವುದಿಲ್ಲವೆಂದು ಆ ಭಾಗದ ಶಾಸಕರು ಹೇಳುತ್ತಾ ಈಗಾಗಲೇ ಇದರ ಬಗ್ಗೆ ನಿಮಗೆ ಬಂದಿರುವ ವರದಿ ಸರಿಯಲ್ಲವಾದ ಕಾರಣ 1994ರ ವ್ಯವಸ್ಥೆಯನ್ನು ಮುಂದುವರಿಸಿ ಎಂದು ಅವರು ಕೇಳುತ್ತಿದ್ದಾರೆ. ಅದನ್ನು ಮಾಡಿ, ಮುಂದೆ ಏನಾದರೂ ತೊಂದರೆಯಾದರೆ ಆಮೇಲೆ ನೋಡೋಣ. ಅಷ್ಟು ಮಾಡುವುದಕ್ಕೆ ಏನು ತೊಂದರೆ ಸ್ವಾಮಿ ನಿಮಗೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸ ಈ ವಿಷಯದ ಬಗ್ಗೆ ಮಾನ್ಯ ಕರ್ಕಿಯವರು ನನಗೆ ಒಂದು ಪತ್ರ ಬರೆದ ನಂತರ ನಾನು ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆದು 6 ಟನ್ ಭಾರಕ್ಕಿಂತಲೂ ಹೆಚ್ಚಿನ ಭಾರವಿರುವ ಟ್ರಕ್ ಅಥವಾ ವಾಹನ ಹೋಗುವುದಕ್ಕೆ ಪರ್ಮೀಶನ್ ಕೊಡಬೇಕೆಂದು ಕೇಳಿದಾಗ ಅವರು ಇದಕ್ಕೆ ಉತ್ತರವಾಗಿ ದಿನಾಂಕ 13-02-96ರಲ್ಲಿ ಪರಿಣಿತರ ತಂಡದೊಂದಿಗೆ ಸಭೆ ನಡೆಸಿ ಇದು ಸೂಕ್ತವಾದದ್ದಲ್ಲ ಬಹಳ ಅಪಾಯಕಾರಿಯಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇವೊತ್ತಿನ ದಿವಸ ಪರಿಣಿತರ ತಂಡ ಈ ರೀತಿಯ ಅಭಿಪ್ರಾಯ ಕೊಟ್ಟಾಗ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೇ ನಾನು 1993-94ರ ವ್ಯವಸ್ಥೆಯನ್ನು ಮರುಕಳಿಸುವುದಕ್ಕೆ ಜಾರಿ ಮಾಡಿದರೆ ಏನಾದರೂ ತೊಂದರೆಯಾದರೆ ಯಾರು ಜವಾಬ್ದಾರಿಯನ್ನು ಹೊರುವುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ಗುತ್ತಿಗೆದಾರರು ಈ ವಿಷಯದಲ್ಲಿ ಶಿಫಾರಸ್ಸು ದೊಡ್ಡವರಿಂದ ಮಾಡಿಸಿ ಈ ರೀತಿಯ ಒತ್ತಡವನ್ನು ತಂದು ವರದಿಯಲ್ಲಿ ತಪ್ಪು ಅಭಿಪ್ರಾಯ ಬಂದಿದೆ. ಇದನ್ನು ತಾವು ಗಮನಿಸಬೇಕು. ನಮ್ಮ ಸರ್ಕಾರ ಇರುವಂಥದ್ದು ಗುತ್ತಿಗೆದಾರರು ಹೇಳುವಂತೆ ಕೇಳುವುದಕ್ಕಲ್ಲ. ಜನಕ್ಕೆ ಅನುಕೂಲವಾಗಬೇಕು ಎಂದರೆ ನೀವು ಮನಸ್ಸು ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ಆ ವರದಿ ಸರಿಯಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನೀವು ಒಂದು ಟೆಕ್ನಿಕಲ್ ಕಮಿಟಿಯನ್ನು ಅಪಾಯಿಂಟ್ ಮಾಡಿ, ಅವರಿಂದ ವರದಿಯನ್ನು ತಯಾರಿಸಿ ನಮಗೆ ಕೊಡಿ, ಆಗ ನಾವು ಬೇಕಾದರೆ ಒಪ್ಪಿಕೊಳ್ಳುತ್ತೇವೆ. ನೀವು ಪರಿಣಿತರನ್ನು ಅಲ್ಲಿಗೆ ಕಳುಹಿಸಿ, ತದನಂತರ ಇಂಥ ವಾಹನವನ್ನು ಕಳುಹಿಸುವುದಕ್ಕೆ ಯಡಿಯೂರಪ್ಪನವರೇ ಆಗುವುದಿಲ್ಲ ಎಂದು ಹೇಳಿದರೆ ನಾನು ಆಗ ಒಪ್ಪಿಕೊಳ್ಳುತ್ತೇನೆ. ನೀವು ಅದನ್ನು ಮಾಡುತ್ತೀರಾ?

ಶ್ರೀ ಶಿವಾನಂದ ಹೆಚ್. ಕೌಜಲಗಿ : 10 ವರ್ಷಗಳಿಂದ ಆಗದಂತಹ ಕೆಲಸವನ್ನು ಈಗ ನಮ್ಮ ಸರ್ಕಾರ ಬಂದಮೇಲೆ ಒಂದು ವರ್ಷದಿಂದ ಕೇಂದ್ರ ಸರ್ಕಾರದ ಜೊತೆ ಫೈಟ್ ಮಾಡಿ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದ ಸಲುವಾಗಿ ಎರಡು ಬಾರಿ ಡೆಲ್ಲಿಗೆ ಹೋಗಿ ಪತ್ರಗಳನ್ನು ಸಹ ಬರೆದು ಸ್ಯಾಂಕ್ಷನ್ ತಂದಿದ್ದೇವೆ. ಕೇವಲ ದುರಸ್ತಿ ಸಲುವಾಗಿ 5 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವಷ್ಟೆ ಅಲ್ಲ, ಒಂದು ಹೊಸ ಸೇತುವೆಯನ್ನು 50 ಕೋಟಿ ರೂಪಾಯಿಗಳ ವೆಚ್ಚದಲ್ಲಿ

ನಿರ್ಮಾಣ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸ್ಯಾಂಕ್ಷನ್ ತಂದಿದ್ದಾರೆ. ಇದಕ್ಕೆ ತಾವು ಅಭಿನಂದನೆಗಳನ್ನು ಹೇಳಬೇಕು. ಅದನ್ನು ಬಿಟ್ಟು ಜನರಿಗೆ ತೊಂದರೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದಿರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ಕನಿಷ್ಠ ಪಕ್ಷ ಟೆಕ್ನಿಕಲ್ ಕಮಿಟಿ ಆದರೂ ಮಾಡಲಿ.

ಉಪಾಧ್ಯಕ್ಷರು : ಈಗ ಇಲ್ಲಿ ಬಂದಿರತಕ್ಕಂಥ ಒಂದೇ ಒಂದು ಪ್ರಶ್ನೆ ಎಂದರೆ, ನೀವು ಟೆಕ್ನಿಕಲ್ ವಿಚಾರದ ಬಗ್ಗೆ ಕೇಳುತ್ತಿದ್ದೀರಿ. ಇಲ್ಲ ಎನ್ನುವುದು ನಿಮ್ಮ ಅಭಿಪ್ರಾಯ. ಈ ವಿಚಾರವನ್ನು ನಿಮ್ಮಗಳ ಸಮಕ್ಷಮದಲ್ಲಿ ಮಾತನಾಡಿ. ಈ ವಿಚಾರಗಳ ಬಗ್ಗೆ ಎಷ್ಟು ಹೊತ್ತು ಈ ಸದನದಲ್ಲಿ ಚರ್ಚೆ ಮಾಡುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ತಾವು ಕ್ಷಮಿಸಬೇಕು. ಈ ವಿಚಾರ ಕಿವಿಯಲ್ಲಿ ಮಾತನಾಡತಕ್ಕಂಥಾದ್ದು ಅಲ್ಲ, ಇದನ್ನು ಸಾರ್ವಜನಿಕರ ಅನುಕೂಲದ ದೃಷ್ಟಿಯಿಂದ ಪ್ರಸ್ತಾಪ ಮಾಡುತ್ತಿದ್ದೇವೆ. ಟೆಕ್ನಿಕಲ್ ಕಮಿಟಿಯನ್ನು ಕಳುಹಿಸಿ ವರದಿ ತರಿಸಿಕೊಂಡು, ಅದು ಸಾಧ್ಯವಿಲ್ಲ ಎಂದು ನಿಮಗೆ ಹೇಳಿದರೆ ಅದನ್ನು ನಾವು ಒತ್ತಾಯ ಮಾಡುವುದಿಲ್ಲ, ಅದನ್ನು ಮಾಡುತ್ತೀರೋ? ಅದನ್ನು ಒಪ್ಪಿಕೊಳ್ಳುವುದಕ್ಕೆ ಏನು ತೊಂದರೆ ಇದೆ. ನಮ್ಮ ಎಕ್ಸ್‌ಪರ್ಟ್ಸ್ ಬಗ್ಗೆ ನಿಮಗೆ ನಂಬಿಕೆ ಇಲ್ಲವೇ? ಅದರ ಆಧಾರದ ಮೇಲೆ ಕೇಂದ್ರಕ್ಕೆ ವರದಿ ಕಳುಹಿಸಿ. ಇಲ್ಲದಿದ್ದರೆ ನೀವು ಬೇರೆ ದೃಷ್ಟಿಯಲ್ಲಿ ಹೇಳುತ್ತಿದ್ದೀರಿ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಈಗಾಗಲೇ ಕೆಲಸ ಪ್ರಾರಂಭವಾಗಿದ್ದು ಒಂದು ವರ್ಷದಲ್ಲಿ ಕೆಲಸವನ್ನು ಮುಗಿಸುತ್ತೇವೆಂದು ಹೇಳುತ್ತಿದ್ದಾರೆ. ಮತ್ತೆ ಈಗ ನಾವು ಮತ್ತೊಂದು ಒಪಿನಿಯನ್ ತೆಗೆದುಕೊಳ್ಳುವುದು, ಮತ್ತೇ ಕೆಲಸ ಸ್ಟಾರ್ಟ್ ಮಾಡುವುದರಲ್ಲಿ ಬಹಳ ಸಮಯವಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಅಲ್ಲಂ ವೀರಭದ್ರಪ್ಪನವರೇ ನಿಯಮ 351ರ ಅಡಿಯಲ್ಲಿ ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇಂತಹ ಒಂದು ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಜೊತೆ ಮಾತನಾಡಿದ್ದಾರೆ ಎನ್ನುವಂತಹ ಮಾತನ್ನು ಹೇಳಿದರು. ಆದರೆ ಮುಂದೆ ಇದಕ್ಕೆ ಪರಿಹಾರವೇನು? ನಮ್ಮ ರಾಜ್ಯದ ತಜ್ಞರ ಒಂದು ಸಮಿತಿಯನ್ನು ನೇಮಿಸುವುದಕ್ಕೆ ಏನಾಗಿದೆ? ನಾನು ಕೇಳುತ್ತಿದ್ದೇನೆ, ಅಲ್ಲಿ ವಿವಿಧ ಇಲಾಖೆಗಳಲ್ಲಿರತಕ್ಕಂಥ ಸರ್ಕಾರಿ ಅಧಿಕಾರಿಗಳು ಆಫ್ ದಿ ರೆಕಾರ್ಡ್ ಬ್ರಿಡ್ಜ್ ಸರಿಯಿದೆಯೆಂದು ಹೇಳುತ್ತಾರೆ. ಹೊಸ ಬ್ರಿಡ್ಜ್‌ನದು ಆಮೇಲಿನ ವಿಚಾರ. ಎಲ್ಲೋ ಒಂದು ಸ್ಪ್ಯಾನ್ ಹಾಳಾಗಿದೆ ಎನ್ನುವಂತಹ ಸಂದರ್ಭದಲ್ಲಿ 4-5 ವರ್ಷಗಳಿಂದ ನ್ಯಾಷನಲ್ ಹೈವೇಯನ್ನು ಬಂದ್ ಮಾಡುತ್ತಾರೆ ಎಂದರೆ ಇದಕ್ಕಿಂತ ಗುರುತರವಾದ ಆರೋಪ ಏನು ಮಾಡಬೇಕು.

ಶ್ರೀ ಐ.ಎಂ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಅಲ್ಲಿ ಓಡಾಡುವಂತಹ ಪ್ರತಿಯೊಂದು ಲಾರಿಯಿಂದ 120 ರಿಂದ 150 ರೂಪಾಯಿಯವರೆಗೂ ಹಣವನ್ನು ಗುತ್ತಿಗೆದಾರರು ಕಲೆಕ್ಟ್ ಮಾಡುತ್ತಿದ್ದಾರೆ. ಒಂದು ದಿವಸಕ್ಕೆ ಸುಮಾರು ಒಂದು ಸಾವಿರ

ಲಾರಿಗಳು ಅಲ್ಲಿ ಹೋಗುತ್ತವೆ. ಈಗ ತಾನೇ ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಇದು ಕರಾವಳಿಯಲ್ಲಿ ಜೀವನ ಕೊಟ್ಟಂತಹ ಹೆದ್ದಾರಿ. ಅಲ್ಲಿನ ಮೀನುಗಾರರು ಮೀನು ತರುವುದಕ್ಕೆ ಅಥವಾ ಹಣ್ಣುಹಂಪಲನ್ನು ತೆಗೆದುಕೊಂಡು ಮಂಗಳೂರಿಗೆ ಬರುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಏಕೆಂದರೆ 6-8 ಗಂಟೆ ತಡವಾಗುತ್ತದೆ. ಗುತ್ತಿಗೆದಾರರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಣವನ್ನು ಸಂಗ್ರಹಿಸಿ, ಆ ಹಣವನ್ನು ಸರ್ಕಾರಕ್ಕೆ ಪಾವತಿ ಮಾಡದೇ ಹಾಗೂ ಜನರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ತೊಂದರೆ ಆಗುತ್ತಿರುವಾಗ, ಅದರಲ್ಲೂ 1994-95ರಲ್ಲಿ ಆ ಒಂದು ದಾರಿಯಲ್ಲಿ ಸರಾಗವಾಗಿ ವಾಹನಗಳು ಓಡಿವೆ. ಯಾವ ತರಹದ ಅಪಘಾತವಾಗಲಿ ಏನೂ ಆಗಿಲ್ಲ. ಆದರೆ ಈಗ ಹಠಾತ್ತಾಗಿ ಈ ನೀತಿಯನ್ನು ಕೈಗೊಂಡದ್ದು ಜನರ ಹಿತದೃಷ್ಟಿಯಿಂದ ಅಲ್ಲ, ಕೇವಲ ಗುತ್ತಿಗೆದಾರರ ಹಿತದೃಷ್ಟಿಯಿಂದ. ಗುತ್ತಿಗೆದಾರರು ಇದುವರೆಗೆ ಎಷ್ಟು ಹಣ ಕಲೆಕ್ಟ್ ಮಾಡಿದ್ದಾರೆ ಎಂಬ ಮಾಹಿತಿಯನ್ನು ಸದನಕ್ಕೆ ಕೊಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಇಷ್ಟೇ, 6 ಟನ್‌ಗಿಂತ ಭಾರವಾದ ವಾಹನಗಳನ್ನು ಬಿಡಬಾರದು ಎಂದು ಯಾವ ವೈಜ್ಞಾನಿಕ ಆಧಾರದಿಂದಲೂ ನಿರ್ಣಯವಾಗಿಲ್ಲ. ಆ ನಿರ್ಣಯ ವೈಜ್ಞಾನಿಕ ಆಧಾರದ ಮೇಲೆ ಆಗಿದೆ ಎಂದು ಹೇಳುವುದಾದರೆ ಒಂದು ಟೆಕ್ನಿಕಲ್ ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಿಸಿ ಒಂದು ತಿಂಗಳಲ್ಲಿ ರಿಪೋರ್ಟ್ ತರಿಸುವ ತನಕ ನಾವು ಕೈಕಟ್ಟಿಕೊಂಡು ಕುಳಿತುಕೊಳ್ಳುತ್ತೇವೆ. ಅದು ಅಲ್ಲದೆ ಇದ್ದರೆ ಅಲ್ಲಿ ವಾಹನಗಳನ್ನು ಬಿಡುತ್ತಾರೆ ಎಂದು ಹೇಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯ ಸರ್ಕಾರದ ಇತಿಮಿತಿಯನ್ನು ಬಿಟ್ಟು ಮುಂದೆ ಹೋಗುವುದಕ್ಕೆ ಆಗುವುದಿಲ್ಲ. ಅದು ರಾಷ್ಟ್ರೀಯ ಹೆದ್ದಾರಿ. ಫಂಡ್ಸ್ ಕೊಡುವವರು ಅವರು. ಫೈನಲ್ ಡಿಸಿಷನ್ ಕೊಡುವವರು ಸಹ ಅವರೇ. ಅವರು ಏನು ಕೊಡುತ್ತಾರೆ ಅದರ ಪ್ರಕಾರ ನಾವು ಮಾಡಬೇಕಾಗುತ್ತದೆ. We are only the implementing agency. ಒಂದು ಹಂತದಲ್ಲಿ ನಮ್ಮಿಂದ ಇದನ್ನು ತೆಗೆಯಬೇಕು ಎಂದು ನಿರ್ಣಯ ಮಾಡಿದರು. There is a resolution in all PWD Minister's conference at Delhi that it will have to be taken away from the purview of the State Government ನ್ಯಾಷನಲ್ ಹೈವೇ ತೆಗೆದು ನ್ಯಾಷನಲ್ ಹೈವೇ ಅಥಾರಿಟಿ ಮಾಡಬೇಕೆಂದು ನಾನು ಪಿ.ಡಬ್ಲ್ಯೂ.ಡಿ. ಮಂತ್ರಿಗಳಿಗೆ ಹೇಳಿದ್ದೇನೆ. ಈಗ ನಾವು ಮಾಡುತ್ತಿರತಕ್ಕಂಥಾದ್ದು Only on the direction of the Central Government ಅದರಲ್ಲೂ Ministry of Surface Transport both technical advice funding. ಇದರಲ್ಲಿ ನಮ್ಮದೇನೂ ಪಾತ್ರವಿಲ್ಲ, ನಾವು ಇಲ್ಲಿ ಯಾವುದೋ ಟೆಕ್ನಿಕಲ್ ಕಮಿಟಿ ನೇಮಕ ಮಾಡಿ ಹೇಳಿದರೂ ಅವರು ಕೇಳುವುದಿಲ್ಲ. Their own machinery is there ಬೇಕಾದರೆ ನೀವು ಹೇಳಿದಿರಿ ಎಂದು ಇನ್ನೊಬ್ಬನ್ನು ಕಳುಹಿಸಿ ನಿಮ್ಮ panel of names ನೀವು ಕೊಟ್ಟುಬಿಡಿ, ನೀವು ಹೇಳಿದ್ದನ್ನು ನಮ್ಮ ಸದಸ್ಯರುಗಳು ಹೇಳುತ್ತಾರೆ, ಬಹಳ ಎಕ್ಸ್‌ಪರ್ಟ್ಸ್ ಎಂದು ಹೇಳುತ್ತಿದ್ದಾರೆ ಅವರಲ್ಲಿ ಯಾರನ್ನಾದರೂ ಒಬ್ಬ ಎಕ್ಸ್‌ಪರ್ಟ್ ಕಳುಹಿಸಿ ಇನ್ನೊಂದು ಸಾರಿ ವರದಿ ತಯಾರಿ ಮಾಡಿ ಎಂದು ಹೇಳುತ್ತೇವೆ. ನಾವು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು It is not under the purview of the state Government. State Government can only implement. That is all the responsibility of the State Government.

ಡಾ|| ಎಂ.ಪಿ. ಕರ್ಕಿ : ಅವರು ಏನು ರಿಪೋರ್ಟ್ ಕೊಟ್ಟಿದ್ದಾರೆ, ಆ ರಿಪೋರ್ಟ್‌ನ್ನು ತರಿಸಿ ನೋಡಿ, ಅದರಲ್ಲಿ 6 ಟನ್‌ಗಿಂತ ಹೆಚ್ಚಿಗೆ ಭಾರವಿರುವ ವಾಹನವನ್ನು ಬಿಡಬಾರದು ಎಂದು ಇಲ್ಲ. I will sit down and I will not talk a single word. ಆ ರಿಪೋರ್ಟ್ ನನ್ನ ಹತ್ತಿರವೂ ಇದೆ.

Mr. Speaker : I will discuss it with the Hon. Minister for PWD.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, 6 ಟನ್‌ಗಿಂತ ಹೆಚ್ಚು ತೂಕ ಇರುವ ವಾಹನಗಳನ್ನು ಓಡಿಸಬಾರದು ಎಂದು ಎಲ್ಲೂ ಆದೇಶವಿಲ್ಲ. ಇದುವರೆವಿಗೂ ನಡೆದುಕೊಂಡು ಬಂದಿದೆ. ಅಲ್ಲಿ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಈ ಹಿನ್ನಲೆಯಲ್ಲಿ ಅಲ್ಲಿ ನಮಗೆ ವಾಹನಗಳು ಓಡಾಡುವುದಕ್ಕೆ ಅವಕಾಶ ಮಾಡಿಕೊಡಿ. ಆಕಸ್ಮಾತ್ ನಿಮಗೆ ಆ ರೀತಿಯ ಆದೇಶ ಇದ್ದರೆ ಅದನ್ನು ಹೇಳಿ. ನಮ್ಮ ಹತ್ತಿರ ರಿಪೋರ್ಟ್ ಇದೆ. ಯಾವುದೇ ಆದೇಶ ಇಲ್ಲದೆ ಈ ತರಹ ಬಂಧನ ಹಾಕುವಂತಾದ್ದು ಅಗತ್ಯವಿಲ್ಲ. ಕೇಂದ್ರ ಸರ್ಕಾರದ ಅನುಮತಿಯ ಅಗತ್ಯವೇ ಇಲ್ಲ. ಇಲ್ಲಿ ಅನಗತ್ಯವಾಗಿ ಕೇಂದ್ರ ಸರ್ಕಾರವನ್ನು ತರುತ್ತಿದ್ದಾರೆ.

ಅಧ್ಯಕ್ಷರು : ನಾನು ಅದನ್ನೇ ಹೇಳುತ್ತೇನೆ. ಸನ್ಮಾನ್ಯ ಲೋಕೋಪಯೋಗಿ ಸಚಿವರ ಹತ್ತಿರ ಮಾತನಾಡಿ, ವರದಿ ತರಿಸಿ ನೋಡಿ, ಏನಾದರೂ ಇದ್ದಲ್ಲಿ ನಿಮಗೆ ಏನು ಅನುಕೂಲವಾಗುತ್ತದೆ ಆ ರೀತಿ ಮಾಡಿಸೋಣ

ನಿಯಮ 351ರ ಮೇರೆಗೆ

1) ಇತಿಹಾಸ ಪ್ರಸಿದ್ಧ ಕಂಬಗಳಿಗೆ ಪ್ರೋತ್ಸಾಹ

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತಿಹಾಸ ಪ್ರಸಿದ್ಧವಾದ ಅಲೂಪ್ ರಾಜರ ರಾಜಶ್ರಯದಲ್ಲಿ ನಡೆಯುತ್ತಿದ್ದ 1400 ವರ್ಷಗಳ ಇತಿಹಾಸವಿರುವ ತದ್ರಿ ಶ್ರೀ ದೇವರ ಕಂಬಳ, ಹಾಗೂ 700 ವರ್ಷಗಳ ಇತಿಹಾಸವಿರುವ ಮುಲ್ಕಿ ಸಾಮಂತರಸರ ಆಶ್ರಯದಲ್ಲಿ ನಡೆಯುತ್ತಿದ್ದ ಅರಸು ಕಂಬಳ ಇತ್ಯಾದಿ ಹಲವು ಇತಿಹಾಸ ಪ್ರಸಿದ್ಧವಾದ ಕಂಬಳಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದ್ದರೂ ಕರ್ನಾಟಕ ಸರ್ಕಾರ ಈ ಜಾನಪದ ಕ್ರೀಡೆಗೆ ಯಾವುದೇ ರೀತಿಯ ಪ್ರೋತ್ಸಾಹವನ್ನು ನೀಡದಿರುವುದು ತುಂಬಾ ವಿಷಾದನೀಯ. ಕೇರಳ ರಾಜ್ಯಸರ್ಕಾರವು ತನ್ನ ಸಮೀಪದ ಜಿಲ್ಲೆಯಾದ ಕಾಸರಗೋಡು ಜಿಲ್ಲೆಯ ಮಂಜೇಶ್ವರ ಕಂಬಳವನ್ನು ಸರ್ಕಾರದ ಪ್ರೋತ್ಸಾಹ ಹಾಗೂ ಅನುದಾನಗಳಿಂದ ನಡೆಸುತ್ತಿರುವಾಗ ನಮ್ಮ ಕರ್ನಾಟಕ ಸರ್ಕಾರ ದಕ್ಷಿಣ ಕನ್ನಡ ಜಿಲ್ಲೆಯ ಹೆಮ್ಮೆಯ ಹಾಗೂ ಅತ್ಯಂತ ಪ್ರಾಚೀನ ಜಾನಪದ ಕ್ರೀಡಾ ಕಲೆಯಾದ ಕಂಬಳವನ್ನು ಗ್ರಾಮೀಣಾ ಕ್ರೀಡಾ ಕಲೆಯೆಂದೇ ಪರಿಗಣಿಸಿ, ಅದನ್ನು ರಾಜ್ಯಪ್ರಶಸ್ತಿ ಪಟ್ಟಿಯಲ್ಲಿ ಸೇರಿಸಿ, ಪ್ರೋತ್ಸಾಹನೀಡಿ ಬೆಳೆಸಬೇಕೆಂದು ರಾಜ್ಯಸರ್ಕಾರವನ್ನು ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಕಂಬಳ ಒಲಂಪಿಕ್ ಕ್ರೀಡೆಯಲ್ಲಿ ಸೇರಿದಂತಹ ಕ್ರೀಡೆಯಲ್ಲ, ಕಂಬಳ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಅತ್ಯಂತ ಪ್ರಾಚೀನ ಜಾನಪದ ಕ್ರೀಡಾಕಲೆಯಾಗಿದ್ದು, ಈ ಕ್ರೀಡೆಗೆ ಸರ್ಕರದ ಪ್ರೋತ್ಸಾಹ ಅಗತ್ಯವಾಗಿದ್ದು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ಕಂಬಳ ಕ್ರೀಡೆಗೆ ರಾಜ್ಯ ಪ್ರಶಸ್ತಿ ನೀಡುವ ಯಾವುದೇ ಯೋಜನೆ, ಸಧ್ಯಕ್ಕೆ ಇಲ್ಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರತಿ ವರ್ಷ ಕ್ರೀಡೆಯಲ್ಲಿ ಸಾಧನೆ ತೋರಿಸಿದ ಮಹನೀಯರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುತ್ತಿದ್ದು, ಗ್ರಾಮೀಣ ಕ್ರೀಡೆಯಾದ ಕಂಬಳವನ್ನು ಪ್ರೋತ್ಸಾಹಿಸುವ

ಮಹನೀಯರುಗಳಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಲು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಶಿಫಾರಸ್ಸು ಮಾಡಲಾಗುವುದು.

ಶ್ರೀ ಕೆ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಅದರ ಮೇಲೆ ಚರ್ಚೆ ಇಲ್ಲ. You can reconsider the Statement. ಅದನ್ನು ರಾಜ್ಯೋತ್ಸವ ಪ್ರಶಸ್ತಿಗೆ ಜಾನಪದ ಕ್ರೀಡೆ ಎಂದು ಹೇಳಿ ಮಾಡುತ್ತಿದ್ದೀರಿ. ಹಾಗೆಯೇ ಅದನ್ನು ಸ್ಪೋರ್ಟ್ಸ್‌ನಲ್ಲಿ ಸೇರಿಸಿ.

2) ಗಡಿನಾಡು ಪ್ರದೇಶಾಭಿವೃದ್ಧಿಗೆ ಸರ್ಕಾರದ ಹಣ

ಶ್ರೀ ಅಲ್ಲಂ ವೀರಭದ್ರಪ್ಪ (ಕುರಗೋಡು) : ಮಾನ್ಯ ಅಧ್ಯಕ್ಷರೇ, ಸರ್ಕಾರವು ಗಡಿನಾಡು ಪ್ರದೇಶಗಳಿಗೆ ಗಡಿನಾಡು ಪ್ರದೇಶಾಭಿವೃದ್ಧಿ ಯೋಜನೆಯಡಿ ಎಷ್ಟು ಹಣವನ್ನು ಒದಗಿಸಿದ್ದೀರಿ? ಈ ತನಕ ನಮ್ಮ ಬಳ್ಳಾರಿ ಜಿಲ್ಲೆಗೆ ಎಷ್ಟು ಹಣವನ್ನು ಒದಗಿಸಿದ್ದೀರೆಂದು ಕೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಕೋರಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಸರ್ಕಾರವು ಗಡಿ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ 1990-91ರಿಂದ ಇದುವರೆಗೆ 56.80 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಬಳ್ಳಾರಿ ಜಿಲ್ಲೆಗೆ ಈ ತನಕ 2.58ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ತಾಲ್ಲೂಕನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಕ್ಷೇತ್ರವಾರು ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲ ಆದ್ದರಿಂದ ಕುರುಗೋಡು ಕ್ಷೇತ್ರಕ್ಕೆ ಪ್ರತ್ಯೇಕವಾಗಿ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಬಳ್ಳಾರಿ ತಾಲ್ಲೂಕಿಗೆ 95.29ಲಕ್ಷ ರೂಪಾಯಿಗಳನ್ನು ಇದುವರೆಗೆ ಬಿಡುಗಡೆ ಮಾಡಲಾಗಿದೆ.

3) ಶಿವಮೊಗ್ಗ ಜಿಲ್ಲಾ ಪಂಚಾಯತಿಯಿಂದ ಮಂಜೂರಾಗಿರುವ ಕಾಮಗಾರಿಗಳು ಕುಂಠಿತಗೊಂಡಿರುವ ಬಗ್ಗೆ

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಪರಿಷತ್ತಿನಿಂದ ಮಂಜೂರಾಗಿರುವ ರಸ್ತೆ ಕಾಮಗಾರಿಗಳು ಡಾಂಬೀರಿನ ಸರಬರಾಜು ಇಲ್ಲದೆ ಕುಂಠಿತಗೊಂಡಿವೆ ಎಂಬುದು ಸರ್ಕಾರದ ಗಮನದಲ್ಲಿದೆಯೇ? ಈ ಬಗ್ಗೆ ಡಾಂಬರು ಸರಬರಾಜು ಮಾಡುವ ಸಂಸ್ಥೆಗೆ ಹಣ ತುಂಬಿ ಸಾಕಷ್ಟು ಸಮಯವಾದರೂ ವಿಶೇಷವಾಗಿ ಸರಬರಾಜು ವಿಳಂಬವಾಗಿದೆ ಎಂದು ಅಧಿಕಾರಿಗಳು ತಿಳಿಸುತ್ತಿದ್ದಾರೆ. ಮಾರ್ಚ್ ತಿಂಗಳ ಅಂತ್ಯದೊಳಗೆ ಕಾಮಗಾರಿ ಮಾಡಿ ಮುಗಿಸದಿದ್ದಲ್ಲಿ ವಿವಿಧ ಯೋಜನೆಗಳಲ್ಲಿ ಮಂಜೂರಾಗಿರುವ ಹಣ ಲ್ಯಾಪ್ಸ್ ಆಗಿಹೋಗುತ್ತದೆ ಹಾಗೂ ಜನರಿಗೆ ಅಲ್ಲಿ ತೊಂದರೆಯಾಗುತ್ತದೆ. ಇಂತಹ ಮಹತ್ವದ ವಿಷಯದಲ್ಲಿ ಸರ್ಕಾರ ಜರೂರು ಕಾರ್ಯ ಪ್ರವೃತ್ತವಾಗಿ ಡಾಂಬರನ್ನು ಸಾಕಷ್ಟು ಸರಬರಾಜು ಮಾಡಿಸುವ ಬಗ್ಗೆ ಕ್ರಮ ಕೈಗೊಳ್ಳಲು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಶಿವಮೊಗ್ಗ ಜಿಲ್ಲಾ ಪಂಚಾಯತಿ ರಸ್ತೆ ಕಾಮಗಾರಿಗಳ ಸಂಬಂಧಿಸಿದಂತೆ ಆಸ್‌ಫಾಲ್ ಟನ್ನು ಇಂಡಿಯನ್‌ಆಯಿಲ್ ಕಾರ್ಪೊರೇಶನ್ ಮದ್ರಾಸ್ ಇವರಿಂದ ಪಡೆಯಬೇಕಾಗುತ್ತದೆ. ಈ ಬಗ್ಗೆ ಈಗಾಗಲೇ ಜಿಲ್ಲಾ ಪಂಚಾಯತಿಯವರು ತಮಗೆ ಅಗತ್ಯವಾಗಿ ಬೇಕಾದ ಅಸ್‌ಪಾಲ್ ಟನ್ನು ಖರೀದಿಸಲು ಇಂಡಿಯನ್ ಆಯಿಲ್ ಕಾರ್ಪೊರೇಶನ್ ಮದ್ರಾಸ್ ಇವರಿಗೆ ತಮ್ಮ ಬೇಡಿಕೆ ಸಲ್ಲಿಸಿ ಹಣ ಮುಂಗಡವಾಗಿ ಪಾವತಿಸಿರುತ್ತಾರೆ. ಇತ್ತೀಚಿನ ಕಾವೇರಿ ನದಿಯ ನೀರಿನ ಚಳುವಳಿ ಮತ್ತು ಇನ್ನಿತರ ಕಾರಣಗಳಿಂದ ಆಸ್‌ಫಾಲ್‌ನ್ನು

ಪಡೆಯಲು ವಿಳಂಬವಾಗಿದೆ. ಆದಾಗ್ಯೂ ಕಳೆದ ಒಂದು ತಿಂಗಳಿಂದ ಅಸ್‌ಫಾಲಟ್ ಸರಬರಾಜು ಲಭ್ಯವಾಗಿದ್ದು ವಾರಕ್ಕೆ ಎರಡು ಸಾರಿ ಅಸ್‌ಫಾಲಟ್ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳು ಪಡೆಯುತ್ತಲಿದೆ. ರೂ. 14.5 ಲಕ್ಷ ಮುಂಗಡ ಹಣವನ್ನು 261 ಮೆಟ್ರಿಕ್ ಟನ್ ಅಸ್‌ಫಾಲಟ್ ಬೇಡಿಕೆ ಪಾವತಿಸಿದೆ. ಈಗಾಗಲೇ 131 ಮೆಟ್ರಿಕ್ ಟನ್ ಅಸ್‌ಫಾಲಟ್ ಬಂದಿದ್ದು, ಕಾಮಗಾರಿಗಳು ಸಾಗುತ್ತಿವೆ. ಈ ಅಸ್‌ಫಾಲಟ್ ಕೊರತೆಯಿಂದಾಗಿ ಯಾವುದೇ ಅನುದಾನ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಲಾಗಿದೆ.

11.50 ಎ.ಎಂ

4) ವೃತ್ತಿ ಶಿಕ್ಷಣಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಸಭಾಧ್ಯಕ್ಷರೆ, ಉನ್ನತ ಶಿಕ್ಷಣ ಸಚಿವರಲ್ಲಿ, ಕಳೆದ ಬಾರಿ ಈ ರಾಜ್ಯದ ವೃತ್ತಿ ಶಿಕ್ಷಣಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ಮಾಡುವುದಿಲ್ಲ ಎಂದು ಸರ್ಕಾರ ಪ್ರಥಮಹಂತದಲ್ಲಿ ಹೇಳಿಕೆಯನ್ನು ನೀಡಿ ಕೊನೆ ಗಳಿಗೆಯಲ್ಲಿ ಧಿಡೀರಾಗಿ ಪ್ರವೇಶ ಪರೀಕ್ಷೆಯನ್ನು ಜರುಗಿಸಿ ವಿದ್ಯಾರ್ಥಿಗಳಲ್ಲಿ ಸಾಕಷ್ಟು ಗೊಂದಲವನ್ನು ಉಂಟುಮಾಡಿ ಅವರ ಭವಿಷ್ಯಕ್ಕೆ ಮಾರಕವಾಗುವಂತಾಗಿದೆ. 1996-97ರಲ್ಲಿ ವೃತ್ತಿ ಶಿಕ್ಷಣಕ್ಕೆ ಅರ್ಜಿ ಹಾಕುವ ವಿದ್ಯಾರ್ಥಿಗಳಿಗೆ ಪ್ರವೇಶಪರೀಕ್ಷೆ ಮಾಡುವ ಇರದೆ ಸರ್ಕಾರಕ್ಕೆ ಇದೆಯೇ? ಇದೆ ಎಂದಾದಲ್ಲಿ ಸಾಕಷ್ಟು ಮುಂದಾಗಿಯೇ ದಿನಾಂಕವನ್ನು ಪ್ರಕಟಿಸುದಲ್ಲಿ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನುಕೂಲವಾಗುವುದು ಸರ್ಕಾರದ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಬೇಕೆಂದು ವಿನಂತಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಪ್ರವೇಶ ಪರೀಕ್ಷೆಯನ್ನು ಮಾಡುವ ಬಗ್ಗೆ ಕಳೆದ ವರ್ಷ ಕೆಲವು ನಿಯಮಾವಳಿಗಳನ್ನು ತಿದ್ದುಪಡಿ ಮಾಡಿದ್ದೇವೆ. ಅದರ ಜೊತೆಗೆ ಕೋರ್ಟಿನಿಂದ ಬಂದ ತೀರ್ಪುಗಳ ಪ್ರಕಾರ ಸ್ವಲ್ಪ ತಡವಾಗಿದೆ. ಈಗಾಗಲೇ ಈ ವರ್ಷ ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಈಗ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯು ಇಷ್ಟರಲ್ಲೆ ತೀರ್ಮಾನವನ್ನು ಮಾಡಿ ವೇಳಾಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಈ ವರ್ಷ ಏನು ವಿಳಂಬವಾಗುವುದಿಲ್ಲ.

5) 1993-94 ಮತ್ತು 1994-95ರ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಿಗೆ ಹಣಪಾವತಿ ಮಾಡುವ ಕುರಿತು

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಿಗೆ 93-94 ಮತ್ತು 94-95ರ ಮನೆಗಳಿಗೆ ಪೂರ್ಣಗೊಳ್ಳದೆ ಇರುವುದರಿಂದ ಫಲಾನುಭವಿಗಳು ಗ್ರಾಮದಿಂದ ತಾಲ್ಲೂಕಿಗೆ ಪರದಾಡಬೇಕಾದಂಥ ಪರಿಸ್ಥಿತಿ ಬಂದಿದೆ. ಹಿಂದಿನ ಸರ್ಕಾರ ಮಂಜೂರು ಮಾಡಿದ ಫಲಾನುಭವಿಗಳು ಎಂಬ ಒಂದು ಕಾರಣದಿಂದ ಆರ್ಥಿಕವಾಗಿ ಹಿಂದುಳಿದ ಫಲಾನುಭವಿಗಳಿಗೆ ಕಿರುಕುಳ ಕೊಡುವುದು ನ್ಯಾಯವೂ ಅಲ್ಲ, ಧರ್ಮವೂ ಅಲ್ಲ ಅಥವಾ ಒಳ್ಳೆಯ ಸಂಪ್ರದಾಯವೂ ಅಲ್ಲ. ಅದೂ ಅಲ್ಲದೆ ಹಿಂದಿನ ಸರ್ಕಾರ ಮಂಜೂರು ಮಾಡಿರತಕ್ಕಂಥ ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ. ಸರ್ಕಾರ ಇನ್ನಾದರೂ ಹಿಂದಿನ ಮತ್ತು ಇಂದಿನ ಮಂಜೂರಾದಂಥ ಎಲ್ಲ ಮನೆಗಳಿಗೆ ಸಕಾಲದಲ್ಲಿ ಹಣ ಬಿಡುಗಡೆ ಮಾಡಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ,

ರಾಜ್ಯದ ವಿವಿಧ ವಸತಿ ಯೋಜನೆಗಳಾದ ಆಶ್ರಯ, ಡಾ|| ಅಂಬೇಡ್ಕರ್ ಮತ್ತು ಇಂದಿರಾ ಅವಾಸ್ ಯೋಜನೆಗಳಿಗೆ ಬಿಡುಗಡೆಯಾದ ಹಣದ ವಿವರಗಳು ಕೆಳಕಂಡಂತಿದೆ. ದಕ್ಷಿಣ ಕನ್ನಡಕ್ಕೆ ಪ್ರತ್ಯೇಕವಾಗಿ ತೋರಿಸಲಾಗಿದೆ.

			(ಲಕ್ಷ ರೂ.ಗಳಲ್ಲಿ)	
		1993-94	1994-95	1995-96
1)	ಆಶ್ರಯ	14,228.00	1591.00	2300.00
2)	ಡಾ|| ಅಂಬೇಡ್ಕರ್	3,820.00	1875.00	3230.00
3)	ಇಂದಿರಾ ಅವಾಸ್	1,785.00	1819.00	3024.00
ದಕ್ಷಿಣ ಕನ್ನಡ ಜಿಲ್ಲೆ :				
1)	ಆಶ್ರಯ	1,150.00	83.00	438.00
2)	ಡಾ|| ಅಂಬೇಡ್ಕರ್	297.90	128.55	221.00
3)	ಇಂದಿರಾ ಅವಾಸ್	58.00	58.00	94.00

ಆಶ್ರಯ ಯೋಜನೆಯಡಿ 1993-94ನೇ ಸಾಲಿನವರೆಗೆ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದೆ. 1994-95ನೇ ಸಾಲಿನ ಸೆಪ್ಟೆಂಬರ್‌ತಿಂಗಳಲ್ಲಿ ಮಾರ್ಪಡಿಸಿ 1,50,000 ಆಶ್ರಯ ಮನೆಗಳ ಗುರಿ 60,000ಕ್ಕೆ ಮಿತಗೊಳಿಸಿ ಅದಕ್ಕೆ ಬೇಕಾಗುವ ಪೂರ್ಣ ಹಣವನ್ನು ಈ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಡಾ|| ಅಂಬೇಡ್ಕರ್ ವಸತಿ ಯೋಜನೆಗೆ 1994-95ನೇ ಸಾಲಿನವರೆಗೆ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದೆ. 1995-96ನೇ ಸಾಲಿಗೆ ಪೂರ್ಣ ಹಣ ಬಿಡುಗಡೆ ಮಾಡಲಾಗುವುದು.

ಇಂದಿರಾ ಅವಾಸ್ ಯೋಜನೆಗೂ ಸಹ 1994-95ನೇ ಸಾಲಿನವರೆಗೆ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದ್ದು 1995-96ನೇ ಸಾಲಿಗೆ ಬೇಕಾಗುವ ಹಣವನ್ನು ಈ ವರ್ಷಾಂತ್ಯದೊಳಗೆ ಬಿಡುಗಡೆ ಮಾಡಲಾಗುವುದು.

6) ಮಂಗಳೂರು ಮಹಾನಗರ ಪಾಲಿಕೆಯ ನಾಗರೀಕರ ವಸತಿ ಸಮಸ್ಯೆ

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಸಭಾಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯ ನಾಗರೀಕರ ಬೃಹತ್ ಸಮಸ್ಯೆಯೆಂದರೆ ವಸತಿ ಸಮಸ್ಯೆಯೆ ಆಗಿದೆ. ಹಲವು ಸಾವಿರ ಕುಟುಂಬಗಳಿಗೆ ತಮ್ಮದ್ದೇ ಆದ ಮನೆ ಇಲ್ಲ, ಈಗಿನ ದರದ ಮೌಲ್ಯದಲ್ಲಿ ನಿವೇಶನವನ್ನು ಕೊಳ್ಳುವ ಚೈತನ್ಯವೂ ಅವರಲ್ಲಿ ಇಲ್ಲ, ಬಾಡಿಕೆ ಮನೆಗಳಿಂದ ಬಿಡಿಸಲ್ಪಡುವವರು ಇದೀಗ ಅಸಹಾಯ ಸ್ಥಿತಿಯಲ್ಲಿ ಇದ್ದಾರೆ ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವೇ ವಸತಿ ನಿವೇಶನವನ್ನು ತುಮಕೂರು, ಕೆಂಜಾರು, ಬೈಕೆಂಪಾಡಿ ಮತ್ತು ಪಣಂಬೂರು ಗ್ರಾಮಗಳಲ್ಲಿ ಇರುವ ಸುಮಾರು ನಾಲ್ಕು ನೂರು ಎಕರೆಗೆ ಮಿಕ್ಕಿರುವ ರಾಜ್ಯ ಸರ್ಕಾರದಲ್ಲಿ ಅಭಿವೃದ್ಧಿಪಡಿಸಿ ಸುಮಾರು ಐದು ಸಾವಿರ ಕುಟುಂಬಗಳಿಗೆ ನಿವೇಶನಗಳನ್ನು ಉಚಿತವಾಗಿ ವಿತರಿಸಬೇಕೆಂದು ಕರ್ನಾಟಕ ರಾಜ್ಯಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ....

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 41,835 ನಿವೇಶನರಹಿತ ಹಾಗೂ 36,665 ಮನೆ ರಹಿತರನ್ನು 1995 ಮೇ ತಿಂಗಳಲ್ಲಿ ನಡೆಸಿದ ಸರ್ವೇಕ್ಷಣೆಯಲ್ಲಿ ಗುರುತಿಸಲ್ಪಟ್ಟಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಗೆ 1995-96ನೇ ಸಾಲಿಗೆ ಒಟ್ಟು 10,910 ನಿವೇಶನಗಳನ್ನು ಹಾಗೂ ಮಂಗಳೂರು ಪಟ್ಟಣಕ್ಕೆ 750 ನಿವೇಶನಗಳನ್ನು ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಾಗಿದೆ. ಅದೇ ರೀತಿ 2,800 ಮನೆಗಳನ್ನು ಆಶ್ರಯ ಯೋಜನೆಯಡಿ, ಅಂಬೇಡ್ಕರ್ ಯೋಜನೆಯಡಿ 1551 ಹಾಗೂ ಇಂದಿರಾ ಅವಾಜ್ ಯೋಜನೆಯಡಿಯಲ್ಲಿ 1330 ಮನೆಗಳನ್ನು ಮಂಗಳೂರು ಜಿಲ್ಲೆಗೆ ನೀಡಲಾಗಿದೆ. ಮಂಗಳೂರು ಪಟ್ಟಣಕ್ಕೆ 705 ಮನೆಗಳ ವಾರ್ಷಿಕ ಗುರಿ ನಿಗದಿಪಡಿಸಲಾಗಿದೆ. ಉಳಿದವರಿಗೆ ಹಂತ ಹಂತವಾಗಿ ಸರ್ಕಾರ 5 ವರ್ಷಗಳಲ್ಲಿ ಜಿಲ್ಲೆಯ ಹಾಗೂ ಮಂಗಳೂರು ಪಟ್ಟಣದ ವಸತಿ : ನಿವೇಶನ ರಹಿತರಿಗೆ ನಿವೇಶನ : ಮನೆ ನೀಡಲಾಗುವುದು.

ಅಧ್ಯಕ್ಷರು : ಉಜಿನೇಶ್ವರ್‌ರವರೆ ತಾವು ಪ್ರಸ್ತಾಪ ಮಾಡಿರುವಂಥ ವಿಚಾರಕ್ಕೆ ಜವಳಿ ಖಾತೆಯ ರಾಜ್ಯ ಸಚಿವರು ಸ್ವಲ್ಪ ಸಮಯವನ್ನು ಕೇಳಿದ್ದಾರೆ.

7) ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಅವಾಸ್ ಯೋಜನೆಗಳಲ್ಲಿ ಕಟ್ಟಲಾಗುವ ಮನೆಗಳನ್ನು ಹಂಚುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್) : ಮಾನ್ಯ ಅಧ್ಯಕ್ಷರೆ, ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಅವಾಸ್ ಯೋಜನೆಗಳಲ್ಲಿ ಕಟ್ಟಲಾಗುವ ಮನೆಗಳನ್ನು ಹಂಚುವ ವಿಚಾರದಲ್ಲಿ ಗ್ರಾಮಸಭೆಗಳನ್ನು ಕರೆದು ಆ ಗ್ರಾಮಸಭೆಗಳಲ್ಲಿ ಫಲಾನುಭವಿಗಳನ್ನು ಗುರುತಿಸಿ ಮನೆಗಳನ್ನು ಅವರುಗಳಿಗೆ ಹಂಚುವಂತೆ ಪದ್ಧತಿ ಜಾರಿಯಲ್ಲಿ ಇದೆ. ಈ ವಿಚಾರದಲ್ಲಿ ಸರ್ಕಾರದ ಸುತ್ತೋಲೆ ಹಾಗೂ ಆದೇಶಗಳಲ್ಲಿ ಸ್ಪಷ್ಟ ನಿರ್ದೇಶವನ್ನು ನೀಡಲಾಗಿದೆ. ಆದರೆ ಯಾದ್‌ಗಿರಿ ತಾಲ್ಲೂಕಿನ ಪಂಚಾಯಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಸರ್ಕಾರದ ಆದೇಶವನ್ನು ಪಾಲನೆ ಮಾಡದೆ ತಮಗೆ ಇಚ್ಛೆ ಬಂದವರಿಗೆ ಮನೆಗಳನ್ನು ಹಂಚಿಕೆ ಮಾಡುತ್ತಿದ್ದು ನಿಜವಾದ ಅರ್ಹ ಫಲಾನುಭವಿಗಳಿಗೆ ಮನೆಗಳು ಸಿಕ್ಕದೆ ಅನ್ಯಾಯವಾಗಿದೆ. ಯಾದ್‌ಗಿರ್ ತಾಲ್ಲೂಕಿನ ಗುರುಮಿಠ್ಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅನೇಕ ಗ್ರಾಮಸಭೆಗಳನ್ನು ನಡೆಸಿ ಫಲಾನುಭವಿಗಳನ್ನು ಗುರುತು ಮಾಡಿದ್ದರೂ ಅವರಿಗಾಗಿ ಮನೆಗಳನ್ನು ಹಂಚಿಕೆ ಮಾಡಿರುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರ್ಕಾರ ಕೈಗೊಂಡಿರತಕ್ಕ ಕ್ರಮಗಳೇನು? ಆಗಿರುವಂಥ ಅನ್ಯಾಯವನ್ನು ಸರಿಪಡಿಸಲಾಗುವುದೇ ಹೇಗೆ? ಈ ಮೇಲ್ಕಂಡ ವಿಚಾರದಲ್ಲಿ ಮಾನ್ಯ ವಸತಿ ರಾಜ್ಯ ಸಚಿವರು ಹೇಳಿಕೆ ನೀಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ,

ಯಾದಗಿರಿ ತಾಲ್ಲೂಕಿನ ಗುರುಮಿಠ್ಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆಶ್ರಯ ಅಂಬೇಡ್ಕರ್, ಇಂದಿರಾ ಅವಾಸ್ ಮನೆಗಳ ಹಂಚಿಕೆ ಸಂಬಂಧ ಫಲಾನುಭವಿಗಳ ಆಯ್ಕೆಯಲ್ಲಿ ನ್ಯೂನತೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಗ್ಗೆ ದಿನಾಂಕ 19-02-96ರಂದು ಗುಲ್ಬರ್ಗಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾಧಿಕಾರಿ, ಗುಲ್ಬರ್ಗಾ ಜಿಲ್ಲೆ, ಇವರಿಗೆ ನಿಕ್‌ನೆಟ್ ಮೂಲಕ ಶೀಘ್ರ ಆದೇಶ ಕಳುಹಿಸುತ್ತಾ, ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 1 ಹೆಚ್‌ಎಹೆಚ್ 95, ದಿನಾಂಕ 18-8-95ರ ಪ್ರಕಾರ, ಫಲಾನುಭವಿಗಳನ್ನು ಆಶ್ರಯ,ಡಾ|| ಅಂಬೇಡ್ಕರ್ ಹಾಗೂ ಇಂದಿರಾ ಅವಾಸ್ ಯೋಜನೆಯಡಿ ಗುರುತಿಸಬೇಕಾದಾಗ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ವಯ ಹಾಗೂ ಮೇಲ್ಕಾಣಿಸಿದ ಸರ್ಕಾರದ ಆದೇಶದನ್ವಯ ಜಿಲ್ಲಾ ಪಂಚಾಯಿತಿಗಳು ಫಲಾನುಭವಿಗಳ ಗುರಿಯನ್ನು ಆಯಾ ತಾಲ್ಲೂಕು ಪಂಚಾಯಿತಿವಾರು ಗುರಿಯನ್ನು ನಿಗದಿಪಡಿಸತಕ್ಕದ್ದು. ತಾಲ್ಲೂಕು ಪಂಚಾಯಿತಿಯು

ನಿವೇಶನ : ಮನೆಗಳ ಗುರಿಯನ್ನು ಜಿಲ್ಲಾ ಪಂಚಾಯಿತಿಯಿಂದ ಪಡೆದ ಮೇಲೆ ಅದನ್ನು ಗ್ರಾಮ ಪಂಚಾಯಿತಿ ಹಾಗೂ ಗ್ರಾಮವಾರು ಗುರಿಗಳನ್ನು ನಿಗದಿಪಡಿಸತಕ್ಕದ್ದು.

ಗ್ರಾಮ ಪಂಚಾಯಿತಿಗಳು ತಾಲ್ಲೂಕು ಪಂಚಾಯಿತಿಯಿಂದ ವಾರ್ಷಿಕ ಗುರಿಯನ್ನು ಪಡೆದ ಮೇಲೆ ಗ್ರಾಮಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಲ್ಲಿ ಕಾಣಿಸಿದಂತೆ ನಿಯಮಾನುಸಾರ ಗ್ರಾಮ ಸಭೆಗಳನ್ನು ನಡೆಸಿ, ಗ್ರಾಮ ಸಭೆಯಲ್ಲಿ "ಬಡವರಲ್ಲಿ ಬಡವರು" ತತ್ವದ ಆಧಾರದ ಮೇಲೆ ಗುರಿಗೆ ಸರಿಹೊಂದುವಂತೆ ಫಲಾನುಭವಿಗಳ ಪಟ್ಟಿಯನ್ನು ತಮ್ಮ ಶಿಫಾರಸ್ಸಿನೊಂದಿಗೆ ವಸತಿ : ನಿವೇಶನಗಳನ್ನು ನೀಡಲು ತಾಲ್ಲೂಕು ಪಂಚಾಯಿತಿಗೆ ಬರೆಯತಕ್ಕದ್ದು. ಇದನ್ನು ಆಧರಿಸಿ ತಾಲ್ಲೂಕು ಪಂಚಾಯಿತಿಯು ಗ್ರಾಮ ಪಂಚಾಯಿತಿ ಸಲ್ಲಿಸಿರುರ ಪಟ್ಟಿಯಲ್ಲಿ ಸೂಚಿಸಿರುವ ಫಲಾನುಭವಿಗಳಿಗೆ ಮಾತ್ರ ಮನೆ : ನಿವೇಶನಗಳನ್ನು ಕೊಡತಕ್ಕದ್ದು. ಇದರ ಹೊರತು ಬೇರೆಯವರಿಗೆ ಕೊಡಲು ಸಾಧ್ಯವಿಲ್ಲ. ಇದನ್ನು ಗುಲ್ಬರ್ಗಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದಿನಾಂಕ 19-2-96ರ ನಿಕ್‌ನೆಟ್ ಸಂದೇಶದ ಮೂಲಕ ಸಂಬಂಧಪಟ್ಟ ಯಾದಗಿರಿ ತಾಲ್ಲೂಕು ಪಂಚಾಯಿತಿಗೆ ಕಾನೂನಿನ ಚೌಕಟ್ಟಿನಲ್ಲಿ ಆಯ್ಕೆ ಮಾಡುವಂತೆ ನಿರ್ದೇಶನ ನೀಡಬೇಕೆಂದು ತಿಳಿಸಲಾಯಿತು. ಇದರ ಪ್ರತಿಯನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಕಳುಹಿಸಲು ಸೂಚನೆ ನೀಡಲಾಗಿದೆ. ಹಾಗೂ ಜಿಲ್ಲಾಪರಿಷತ್ ಮುಖ್ಯ ಕಾರ್ಯನಿರ್ವಾಧಿಕಾರಿಗಳು ಯಾದಗಿರಿ ತಾಲ್ಲೂಕಿಗೆ ಭೇಟಿ ನೀಡಿ ಫಲಾನುಭವಿಗಳನ್ನು ನಿಯಮಾವಳಿಗಳಲ್ಲಿ ಇರುವಂತೆ ಗುರ್ತಿಸಲು ಪ್ರಭಾರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಅದರಂತೆ ಪ್ರಭಾರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ನಿಯಮಾವಳಿಗಳಂತೆ ಫಲಾನುಭವಿಗಳಿಗೆ ಆಯ್ಕೆ ಮಾಡಿ ಜಿಲ್ಲಾ ಪಂಚಾಯತ್ ಅನುಮೋದನೆಗಳಿಗೆ ಕಳುಹಿಸಿದ್ದಾರೆ.

8) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಕಳ್ಳತನ ದರೋಡೆಗಳ ಬಗ್ಗೆ

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಅಧ್ಯಕ್ಷರೆ, ಕಳ್ಳತನ ಮತ್ತು ದರೋಡೆಗಳ ಪ್ರಕರಣಗಳು ಹೆಚ್ಚಾಗುತ್ತಿದ್ದು ಇದರಿಂದ ಜನಸಾಮಾನ್ಯರಲ್ಲಿ ಭೀತಿಯ ವಾತಾವರಣ ಉಂಟಾಗಿದೆ. ಹಗಲಿನಲ್ಲಿ ಮನೆಗಳ ಬಾಗಿಲುಗಳನ್ನು ಒಡೆದು ಮನೆಗಳ್ಳತನ ಮಾಡುವುದು ಮತ್ತು ಸರಗಳ್ಳತನ ಮಾಡುವುದು ಹೆಚ್ಚಾಗಿದ್ದು ಸರ್ಕಾರ ಕೂಡಲೇ ಇದರ ಬಗ್ಗೆ ಕ್ರಮಕೈಗೊಳ್ಳಬೇಕಾಗಿದೆ. ಜನರಲ್ಲಿ ಉಂಟಾಗಿರುವ ಭಯದ ವಾತಾವರಣವನ್ನು ದೂರ ಮಾಡಲು ಹೆಚ್ಚಿನ ಪೋಲೀಸ್ ಪಹರೆಯನ್ನು ಮತ್ತು ರಾತ್ರಿಯ ವೇಳೆ ಗಸ್ತು ಹೆಚ್ಚು ಮಾಡಬೇಕಾಗಿದೆ. ಈ ಬಗ್ಗೆ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮವನ್ನು ಸದನಕ್ಕೆ ತಿಳಿಸಬೇಕೆಂದು ಮಾನ್ಯ ಗೃಹ ಸಚಿವರನ್ನು ಕೋರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

1994ನೇ ಸಾಲಿನಲ್ಲಿ 11,707 ಕಳ್ಳತನದ ಪ್ರಕರಣಗಳು ವರದಿಯಾಗಿದದು, 2441 ಪ್ರಕರಣಗಳು ಪತ್ತೆಯಾಗಿರುತ್ತದೆ. 1995ನೇ ಸಾಲಿನಲ್ಲಿ 11,224ಪ್ರಕರಣಗಳು ವರದಿಯಾಗಿದ್ದು 2728 ಪ್ರಕರಣಗಳು ಪತ್ತೆಯಾಗಿರುತ್ತವೆ. ಈ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗಿ ಕಳ್ಳತನದ ಪ್ರಕರಣಗಳು 1995ನೇ ಸಾಲಿನಲ್ಲಿ ಇಳಿಮುಖವಾಗಿದ್ದು ಪತ್ತೆಯಾದ ಪ್ರಕರಣಗಳು ಹೆಚ್ಚಿದ್ದು ಗಮನಕ್ಕೆ ಬರುತ್ತದೆ.

ದರೋಡೆ ಮತ್ತು ಡಕಾಯಿತಿ ಪ್ರಕರಣಗಳನ್ನು ಗಮನಿಸಿದರೆ 1994ರಲ್ಲಿ 407 ಪ್ರಕರಣಗಳು ವರದಿಯಾಗಿದ್ದು, 177 ಪ್ರಕರಣಗಳು ಪತ್ತೆಯಾಗಿವೆ. 1995ರಲ್ಲಿ 353 ಪ್ರಕರಣಗಳು ವರದಿಯಾಗಿದ್ದು, 160 ಪ್ರಕರಣಗಳು ಪತ್ತೆಯಾಗಿವೆ. ಈ ಅಂಕಿ

ಸಂಖ್ಯೆಗಳನ್ನು ಗಮನಿಸಿದಾಗ ವರದಿಯಾದ ಪ್ರಕರಣಗಳು 1995ರಲ್ಲಿ ಇಳಿಮುಖವಾಗಿದ್ದು ಕಂಡು ಬರುತ್ತದೆ.

1994ನೇ ಸಾಲಿನಲ್ಲಿ 179 ಸರಗಳ್ಳತನ ಪ್ರಕರಣಗಳು ದಾಖಲಾಗಿದ್ದು, 56 ಪ್ರಕರಣಗಳು ಪತ್ತೆಯಾಗಿರುತ್ತವೆ. 1995ನೇ ಸಾಲಿನಲ್ಲಿ 177 ಪ್ರಕರಣಗಳು ದಾಖಲಾಗಿದ್ದು, 52 ಪ್ರಕರಣಗಳು ಪತ್ತೆಯಾಗಿರುತ್ತವೆ. ಸರಗಳ್ಳತನವು ಕಳೆದ (1995ರಲ್ಲಿ) ವರ್ಷದಲ್ಲಿ ಕಡಿಮೆಯಾಗಿರುತ್ತದೆ.

ಜನರಲ್ಲಿ ಉಂಟಾಗಿರುವ ಭೀತಿಯ ವಾತಾವರಣ ದೂರ ಮಾಡಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ :

1. ಈ ಪ್ರಕರಣಗಳನ್ನು ತಡೆಗಟ್ಟಲು ಬೆಂಗಳೂರು ನಗರದಲ್ಲಿ ಪ್ರತ್ಯೇಕವಾಗಿ ಹೊರವಲಯದ ಪೋಲೀಸ್ ಠಾಣೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿ ವರ್ಗದವರನ್ನು ಗುರುತಿಸಲಾದ ಸ್ಥಳಗಳಲ್ಲಿ ರಾತ್ರಿ ಮತ್ತು ಹಗಲು ಪ್ರತ್ಯೇಕವಾಗಿ ಗಸ್ತಿ ವ್ಯವಸ್ಥೆಯನ್ನು ಮಾಡಲಾಗಿದೆ.
2. ಪ್ರತಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಿಯಮಿತವಾದ ನೆರೆಹೊರೆಯ ಕಾವಲು ಸಮಿತಿಯವರ ಸಹಾಯವನ್ನು ಪಡೆದು ರಾತ್ರಿ ಹಾಗೂ ಹಗಲು ಗಸ್ತಿಗೆ ನಿಯೋಜಿಸಲಾಗಿದೆ.
3. ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ಒಬ್ಬರು ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರ ನೇತೃತ್ವದಲ್ಲಿ ವಿಶೇಷವಾದ ಗಸ್ತಿನ ವ್ಯವಸ್ಥೆಯನ್ನು ಮಾಡಲಾಗಿದೆ.
4. ಅಮವಾಸ್ಯೆ ಹಾಗೂ ಅದರ ಹಿಂದೆ ಹಾಗೂ ಮುಂದಿನ ವಾರಗಳಲ್ಲಿ ಗೃಹ ರಕ್ಷಕ ದಳದವರನ್ನು ಪೋಲೀಸ್‌ರವರ ಜೊತೆಯಲ್ಲಿ ಗಸ್ತಿಗಾಗಿ ನೇಮಕ ಮಾಡಲಾಗುತ್ತಿದೆ.
5. ಹೊರವಲಯದ ಸಾರ್ವಜನಿಕರಿಗೆ ಡಕಾಯಿತರ ಪತ್ತೆಗೆ ಹಾಗೂ ಡಕಾಯಿತಿಗಳನ್ನು ತಡೆಯುವುದಕ್ಕಾಗಿ ವಿಶೇಷ ಮಾಹಿತಿಯನ್ನು ಒದಗಿಸಿ ಅಲಾರಂನ್ನು ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.
6. ಪೋಲೀಸರೊಂದಿಗೆ ಸಹಕರಿಸುವ ನಾಗರೀಕರನ್ನು ಗುರುತಿಸಿ ಅವರಿಗೆ ಇಲಾಖೆಯಿಂದ ಪ್ರಶಂಸಾ ಪತ್ರಗಳನ್ನು ನೀಡಲಾಗುತ್ತಿದೆ.

ಪ್ರತಿಯೊಂದು ಪೋಲೀಸ್ ಠಾಣೆಯಲ್ಲಿಯೂ ತಿಂಗಳಿಗೊಮ್ಮೆ ನಾಗರೀಕ ಸಮಿತಿ ಹಾಗೂ ನೆರೆಹೊರೆಯ ಕಾವಲು ಸಮಿತಿಯ ಸಭೆಗಳನ್ನು ಏರ್ಪಡಿಸಿ ಅಪರಾಧ ಸಂಭವಿಸುತ್ತಿರುವ ಪ್ರದೇಶಗಳನ್ನು ಗುರುತಿಸಿ ವಿಶೇಷ ಗಸ್ತು ವ್ಯವಸ್ಥೆಯನ್ನು ಏರ್ಪಾಡು ಮಾಡಲಾಗುತ್ತಿದೆ. ಮುಂಬರುವ ದಿನಗಳಲ್ಲಿಯೂ ಗಸ್ತು ಹಾಗೂ ಅಪರಾಧ ತಡೆಯುವ ಕ್ರಮಗಳನ್ನು ತೀವ್ರಗೊಳಿಸಿ, ಅಪರಾಧಗಳನ್ನು ತಡೆಗಟ್ಟುವ ಪ್ರಮಾಣಿಕ ಪ್ರಯತ್ನ ಮಾಡಲಾಗುತ್ತಿದೆ.

9) ರಾಜಾಜಿನಗರದ 6ನೇ ಬಡಾವಣೆಯಲ್ಲಿರುವ 214 ಸರ್ಕಾರಿ ವಸತಿ ಗೃಹಗಳಿಗೆ ಸುಣ್ಣ ಬಣ್ಣ ಮಾಡಿಸದಿರುವುದರಿಂದ ಗೋಡೆಗಳು ಶಿಥಿಲಗೊಂಡಿರುವುದು.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ರಾಜಾಜಿನಗರದ 6ನೇ ಬಡಾವಣೆಯಲ್ಲಿರುವ ಸುಮಾರು 214 ಸರ್ಕಾರಿ ವಸತಿ ಗೃಹಗಳಿಗೆ ಯಾವುದೇ ಸುಣ್ಣಬಣ್ಣಗಳನ್ನು ಮಾಡಿಸಿರುವುದಿಲ್ಲ, ಇದರಿಂದ ಗೋಡೆಗಳು ಶಿಥಿಲಗೊಂಡಿವೆ. ಇದರ ಜೊತೆಗೆ 5-6 ವರ್ಷಗಳ ಹಿಂದೆ ಎಲ್ಲಾ ವಸತಿ ಗೃಹಗಳಿಗೂ ಎ.ಇ.ಎಚ್. ಮಾಡಬೇಕೆಂದು ಅಂದರೆ ಎ ಯಿಂದ ಜೆ ವಸತಿ ಗೃಹಗಳಿಗೆ ಎ.ಎಚ್. ತಂತಿಗಳನ್ನು ಅಳವಡಿಸಿದ್ದು ಇದುವರೆಗೂ ಸಂಪರ್ಕವನ್ನು ನೀಡಿರುವುದಿಲ್ಲ. ಈ

ತಂತಿಗಳು ಹಾಳಾಗಿವೆ. ಇತ್ತೀಚಿಗೆ ಹೆಚ್ ಅಂಡ್ ಜೆ ವಸತಿ ಗೃಹಗಳಿಗೆ ಎ.ಇ.ಹೆಚ್. ಅಳವಡಿಸಲು ವಿದ್ಯುತ್ ಮಾಪನಗಳನ್ನು ಬಹಳ ಕೆಳಗಡೆ ಹಾಕಿರುತ್ತಾರೆ. ಇದರಿಂದ ಮಕ್ಕಳು ಹಾಗೂ ದೊಡ್ಡವರಿಗೆ ಈಗಾಗಲೇ ವಿದ್ಯುತ್ ಸ್ಪರ್ಶದಿಂದ ಅನಾಹುತಗಳು ಉಂಟಾಗಿರುತ್ತದೆ. ಎ.ಇ.ಹೆಚ್. ಗಳನ್ನು ಮಾಡಲು ಹೋಗಿ ಒಂದನೆ ಹಾಗೂ ಎರಡನೆ ಮಹಡಿಗಳ ಮೆಟ್ಟಿಲುಗಳ ಹತ್ತಿರ ಇದ್ದ ದೀಪದ ಸಂಪರ್ಕವನ್ನು ಕಡಿದು ಹಾಕಲಾಗಿದೆ. ಕಳೆದ 8-10 ತಿಂಗಳುಗಳಿಂದ ಮೆಟ್ಟಲುಗಳಿಗೆ ದೀಪಗಳು ಇಲ್ಲದೆ ಬಹಳ ತೊಂದರೆಯುಂಟಾಗಿರುತ್ತದೆ. ಜೀವನ್‌ಭೀಮನಗರದ ವಸತಿ ಗೃಹಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡುತ್ತಿದ್ದು, ರಾಜಾಜಿನಗರದ ವಸತಿ ಗೃಹಗಳಿಗೆ ಯಾವದೇ ರೀತಿಯ ಸೌಲಭ್ಯಗಳನ್ನು ನೀಡದೆ ತಾರತಮ್ಯ ಉಂಟಾಗಿದೆ. ರಾಜಾಜಿನಗರದ ನೌಕರರು ಜೀವನಭೀಮ ನಗರದ ಅಧಿಕಾರಿಗಳು ಒಂದೇ ರೀತಿಯ ಬಾಡಿಗೆಯನ್ನು ನೀಡುತ್ತಾ ಬಂದಿದ್ದರೂ

ಈ ತಾರತಮ್ಯ ಉಂಟಾಗಿದೆ. ವಿದ್ಯುಚ್ಛಕ್ತಿಯ ದರವು ಜಾಸ್ತಿಯಾಗುವುದೆಂದು ಪರಿಗಣಿಸಿ ವಿದ್ಯುಚ್ಛಕ್ತಿ ಇಲಾಖೆಗೆ ಹಣವನ್ನು ಪಾವತಿ ಮಾಡದೆ ಇರುವುದು ಈ ಒಂದು ಕಾರಣದಿಂದ ನೀರನ್ನು ಸರಿಯಾಗಿ ಕಾಲ ಕಾಲಕ್ಕೆ ಬಿಡದೆ ಇರುವುದರಿಂದ ಅಲ್ಲಿನ ನಿವಾಸಿಗಳು ಬವಣೆ ಪಡುತ್ತಿರುವುದುನ್ನು ಮತ್ತು ಅಲ್ಲಿನ ನಿವಾಸಿಗಳು ತಮ್ಮ ತಮ್ಮ ವಾಹನಗಳನ್ನು ನಿಲ್ಲಿಸಲು ಸೂಕ್ತವಾದ ಸ್ಥಳವಿಲ್ಲದೆ ತೊಂದರೆಗೆ ಈಡಾಗಿರುವುದನ್ನು ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಸದಸ್ಯರಿಗೆ ವಿವರಗಳನ್ನು ತರಿಸಿ ಕೊಡುತ್ತೇನೆ.

ಅಧ್ಯಕ್ಷರು : ಈಗ 69ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ .

ನಿಯಮ 69ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ರೈತರು ಬೆಳೆದಿರುವ ಕಬ್ಬನ್ನು ಹೊಸ ರಾಜ್ಯಗಳಿಗೆ ಸಾಗಿಸಲು ನಿಷೇದ ವಿಧಿಸಿರುವುದರಿಂದ ರಾಜ್ಯದ ರೈತರಿಗೆ ತೊಂದರೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :ಮಾನ್ಯ ಅಧ್ಯಕ್ಷರೆ, ಅತ್ಯಂತ ಗಂಭೀರವಾದಂತಹ ವಿಷಯವೆಂದರೆ, ರೈತ ಬೆಳೆದಂತಹ ಕಬ್ಬನ್ನು ಅರೆಯುವಂತಹ ವ್ಯವಸ್ಥೆ ಇಲ್ಲದೆ ರೈತ ಬೀದಿ ಪಾಲಾಗಿರುವಂತಹ ಈ ಮಹತ್ವವಾದಂತಹ ವಿಷಯವನ್ನು ಈ ನಿಯಮ 69ರ ಅಡಿಯಲ್ಲಿ ಚರ್ಚೆಗೆ ತಾವು ಅನುಮಿತಿಯನ್ನು ನೀಡಿದ್ದರಿಂದ ತಮಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ನಾಡಿನ ರೈತರ ಸಂಕಷ್ಟಗಳನ್ನು ಹೇಳುವವರು ಕೇಳುವವರು ಯಾರು ಇಲ್ಲವೇನೊ ಎಂಬ ಭಾವನೆ ರಾಜ್ಯದ ರೈತರಲ್ಲಿ, ಜನರಲ್ಲಿ ವಿಶೇಷವಾಗಿ ಮೂಡಿದೆ. ಒಂದು ಕಡೆ ಬರಗಾಲಕ್ಕೆ ತುತ್ತಾಗಿ ಯಾವುದೇ ಬೆಳೆಗಳು ಕೈಗೆ ಸಿಕ್ಕದೆ ಕಣ್ಣೀರು ಹಾಕುವಂತಹ ಒಂದು ರೀತಿಯ ದಾರುಣ ಸ್ಥಿತಿ, ಮತ್ತೊಂದು ಕಡೆ ನೀರಾವರಿ ಯೋಜನೆಗಳು ಇರುವಂತಹ ಕಡೆಗಳಲ್ಲೂ ಸಹ ತೊಂದರೆ ಇದೆ. ಮಾನ್ಯ ಕೃಷಿ ಸಚಿವರು ಹೇಳಿಕೆಯನ್ನು ಕೊಟ್ಟಿರುವುದು ಪತ್ರಿಕೆಗಳಲ್ಲಿ ಬಹಳ ದೊಡ್ಡ ಅಕ್ಷರಗಳಲ್ಲಿ ಮುಖ ಪುಟದಲ್ಲಿ ಬಂದಿದೆ. ನಮ್ಮ ರೈತರಿಗೆ ಬುದ್ಧಿ ಇಲ್ಲ, ನಮ್ಮ ರೈತರು ರಾಗಿ, ಜೋಳ, ಭತ್ತ, ಬೆಳೆದು ಹಾಳಾಗುತ್ತಿದ್ದಾರೆ, ಅವರಿಗೆ ವಾಣಿಜ್ಯ ಬೆಳೆಯನ್ನು ಬೆಳೆಯಿರಿ ಎಂದು ನಾನು ಹೇಳುತ್ತಿದ್ದೇನೆ. ಆದರೆ ರೈತರು ಮುಂದೆ ಬರುತ್ತಿಲ್ಲವೆಂಬ ಮಾತನ್ನು ಹೇಳಿದರು. ಅವರು ಅದನ್ನು ಯಾವ ಹಿನ್ನೆಲೆಯಲ್ಲಿ ಹೇಳಿದರೊ, ಆದರೆ ಅದನ್ನು ನಾವು ಒಂದು ಒಳ್ಳೆಯ ಸ್ಪಿರಿಟ್‌ನಲ್ಲಿ ತೆಗೆದುಕೊಳ್ಳೋಣ.

ರೈತರು ಬದುಕುಬೇಕೆಂಬ ದೃಷ್ಟಿಯಿಂದ ಆ ಸಲಹೆಯನ್ನು ಕೊಟ್ಟಿದ್ದಾರೆಂದು ನಾನು ಭಾವಿಸುತ್ತೇನೆ.

ಇವತ್ತು ರೈತರು ಯಾರು ಕಬ್ಬನ್ನು ಬೆಳೆದಿದ್ದಾರೆ, ಅವರು ಹೊಲಗಳಲ್ಲಿ ಕಣ್ಣೀರು ಸುರಿಸುತ್ತಾ ಕುಳಿತಿರುವಂತಹ ದಾರುಣ ದೃಶ್ಯವನ್ನು ಇವತ್ತು ರಾಜ್ಯದಲ್ಲಿ ನಾವು ಕಾಣುತ್ತಿದ್ದೇವೆ. ಕಬ್ಬು ಒಂದು ಪ್ರಮುಖ ವಾಣಿಜ್ಯ ಬೆಳೆ ನೀರಾವರಿ ಪ್ರದೇಶಗಳಲ್ಲಿ ರೈತರ ಬಾಳಿಗೆ ಒಂದು ಕಾಮಧೇನುವಾಗಿ ಅವರ ಆರ್ಥಿಕ ಪರಿಸ್ಥಿತಿ ಸ್ವಲ್ಪ ಸುಧಾರಣೆಯಾಗುತ್ತದೆಯೊ ಏನೋ ಎಂದು ಬಾವಿಸುವಂತಹ ಕಾಲದಲ್ಲಿ ಅವರು ಬೆಳೆದ ಕಬ್ಬನ್ನು ತನ್ನ ಕಣ್ಣ ಮುಂದೆಯೇ ಬೆಂಕಿ ಹಾಕಿ ಸುಡುವಂತಹ ಪರಿಸ್ಥಿತಿ ಲಕ್ಷಾಂತರ ಟನ್ ಕಬ್ಬನ್ನು ಹೋದ ವರ್ಷ ಸುಟ್ಟಿದ್ದನ್ನು ನಾವು ಪ್ರತ್ಯೇಕ್ಷವಾಗಿ ನೋಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರೂ ಸಹ ಆ ಕಡೆ ಗಮನ ಹರಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇಂತಹ ಒಂದು ವಾತಾವರಣ ರಾಜ್ಯದಲ್ಲಿರಬೇಕಾದರೆ ಅಧಿಕಾರದಲ್ಲಿರುವಂತಹ ನಮ್ಮ ರಾಜ್ಯ ಸರ್ಕಾರಗಳು ರೈತರಿಗೆ ಅಗತ್ಯವಿರುವಂತಹ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಿ ಅದನ್ನು ತನ್ನ ನಿಯಂತ್ರಣದಲ್ಲಿಟ್ಟು ಕೊಂಡು ರೈತರಿಗೆ ನೆರವಾಗುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುಂತಹ ಪರಿಣಾಮದಿಂದ ಇವತ್ತು ಲಕ್ಷಾಂತರ ಟನ್ ಕಬ್ಬನ್ನು ಅರೆಯುವಂತಹ ವ್ಯವಸ್ಥೆ ಇಲ್ಲದೆ ರೈತರು ಬೀದಿ ಪಾಲಾಗಿ ಅದನ್ನು ಬೆಂಕಿ ಹಾಕಿ ಸುಡುವಂತಹ ದಾರುಣ ದೃಶ್ಯ ಕರ್ನಾಟಕ ರಾಜ್ಯದಲ್ಲಿದೆ. ಎಲ್ಲಾ ಪತ್ರಿಕೆಗಳಲ್ಲಿ ಕಳೆದ ನಾಲ್ಕೈದು ತಿಂಗಳುಗಳಿಂದ ಪ್ರತಿ ನಿತ್ಯ ಒಂದಲ್ಲ ಒಂದು ಪತ್ರಿಕೆಯಲ್ಲಿ ಮುಖ ಪುಟಗಳಲ್ಲಿ ಮುಂದೆ ಬರುವಂತಹ ದಾರುಣ ಪರಿಸ್ಥಿತಿಯ ಬಗ್ಗೆ ಎಚ್ಚರಿಕೆ ಕೊಟ್ಟು ವಿವರಗಳನ್ನು ಪ್ರಕಟಣೆಯನನ್ನು ಮಾಡಿದ ಮೇಲೂ ಸಹ ಸರ್ಕಾರ ಒಂದು ರೀತಿ ಕುಂಭಕರ್ಣನಂತೆ ನಿದ್ರಾವಸ್ಥೆಯಲ್ಲಿದೆ ಇನ್ನು ಒಂದು ವಾರದಲ್ಲಿ 15 ದಿವಸಗಳಲ್ಲಿ ಅಥವಾ ಒಂದು ತಿಂಗಳಲ್ಲಿ ಕಬ್ಬನ್ನು ಅರೆಯುವಂತಹ ವ್ಯವಸ್ಥೆಯನ್ನು ಮಾಡದಿದ್ದರೆ ಅವರು ಸಂಪೂರ್ಣವಾಗಿ ಸಂಕಷ್ಟಕ್ಕೆ ಸಿಕ್ಕಿ ಕೊಳ್ಳುವಂತಹ ದಾರುಣ ಸ್ಥಿತಿ ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿದೆ.

ಸರ್ಕಾರವೇ ವರದಿಯ್ನು ಕೊಟ್ಟಿರುವ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಈ ವರ್ಷ ಸುಮಾರು ಇನ್ನೂರು ಹತ್ತು ಲಕ್ಷ ಟನ್ ಅಷ್ಟು ಕಬ್ಬನ್ನು ರೈತ ಬೆಳೆದಿದ್ದಾನೆ. ನಮ್ಮ ಎಲ್ಲಾ ಸಕ್ಕರೆ ಕಾರ್ಖಾನೆಗಳೂ ಸಹ ನೂರಕ್ಕ ನೂರರಷ್ಟು ಕಬ್ಬನ್ನು ಅರೆದರೂ ಸಹ ಸುಮಾರು ಎಂಭತ್ತೈದು ಲಕ್ಷದಿಂದ ತ್ತೊಂಭತ್ತು ಲಕ್ಷ ಟನ್ ಕಬ್ಬು ಉಳಿಯುತ್ತದೆ. ಅದನ್ನು ಅರೆಯುವಂಥ ವ್ಯವಸ್ಥೆ ಇಲ್ಲವೆನ್ನುವ ಒಂದು ದಾರುಣ ಪರಿಸ್ಥಿತಿ ಇದೆ. ಹಾಗಾದರೆ ಏನಾಯಿತು? ಕೆಲವರು ಏನು ಹೇಳುತ್ತಾರೆಂದರೆ, ಕರ್ನಾಟಕ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕಬ್ಬನ್ನು ಬೆಳೆದ ಪರಿಣಾಮ ಇವತ್ತು ಈ ದುಸ್ಥಿತಿ ಬಂದಿದೆ. ಎಂದು ಹೇಳುತ್ತಾರೆ. ಅದು ಸತ್ಯಸಂಗತಿ ಅಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾನು ಕಳೆದ ನಾಲ್ಕೈದು ವರ್ಷದ ಅಂಕಿಅಂಶಗಳನ್ನು ಕೊಡುತ್ತೇನೆ. 1992-93ರಲ್ಲಿ ಕಬ್ಬನ್ನು ಬೆಳೆದಂಥ ಪ್ರದೇಶ 2.53 ಹೆಕ್ಟೇರ್. ಎರಡು ಲಕ್ಷದ ಐವತ್ಮೂರು ಸಾವಿರ ಹೆಕ್ಟೇರ್ ಪ್ರದೇಶಗಳಲ್ಲಿ ಅವರು ಕಬ್ಬನ್ನು ಬೆಳೆದಿದ್ದರು. ಎಪ್ಪತ್ತೇರಡು ಮೆಟ್ರಿಕ್ ಟನ್ ನಷ್ಟು ಕಬ್ಬನ್ನು ಬೆಳೆದಿದ್ದರು. 1993-94ರಲ್ಲಿ ಎರಡು ಲಕ್ಷ ನಲವತ್ತ ನಾಲ್ಕು ಸಾವಿರ ಹೆಕ್ಟೇರ್‌ಗಳಲ್ಲಿ ಕಬ್ಬನ್ನು ಬೆಳೆದಿದ್ದರೆ. 218.21 ಲಕ್ಷ ಮೆಟ್ರಿಕ್ ಟನ್ ಅಷ್ಟು ಕಬ್ಬನ್ನು ಬೆಳೆದಿದ್ದರು.

1994-95ರಲ್ಲಿ ಎರಡು ಲಕ್ಷದ ಮೂವತ್ತು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬನ್ನು ಬೆಳೆದಿದ್ದರೆ, ಕಬ್ಬನ್ನು ಬೆಳೆದಿರುವುದು. 196.65 ಲಕ್ಷ ಮೆಟ್ರಿಕ್ ಟನ್ ಅಷ್ಟು. 1995-96ನೇ ಸಾಲಿನಲ್ಲಿ ಎರಡು ಲಕ್ಷ ಐವತ್ತ ಮೂರು ಹೆಕ್ಟೇರ್ ಪ್ರದೇಶದಲ್ಲಿ

ಕಬ್ಬನ್ನು ಬೆಳೆದಿದ್ದರೆ ಇನ್ನೂರು ಅರವತ್ತ ಮೂರು ಲಕ್ಷ ಮೂವತ್ತಾರು ಮೆಟ್ರಿಕ್ ಟನ್ ಅಷ್ಟು ಕಬ್ಬನ್ನು ಬೆಳೆದಿದ್ದಾರೆ. ಅಂದರೆ ನಾನು ಕಳೆದ ನಾಲ್ಕು ವರ್ಷಗಳ ಅಂಕಿಅಂಶಗಳನ್ನು ಕೊಡುತ್ತಿರುವುದು ಎಲ್ಲಾ ಕಡೆ ಪತ್ರಿಕೆಗಳಲ್ಲಿ ವರದಿಯನ್ನು ನೋಡುತ್ತಾ ಇದ್ದೇನೆ. ರೈತ ಬೇಕಾಬಿಟ್ಟೆ ಸಿಕ್ಕಾಪಟ್ಟೆ ಕಬ್ಬನ್ನು ಕಳೆದ ಪರಿಣಾಮ ಇವತ್ತು ಕಬ್ಬನ್ನು ಅರೆಯುವಂಥ ವ್ಯವಸ್ಥೆ ಇಲ್ಲವೆನ್ನುವ ಮಾತನ್ನು ನಾವು ಏನು ಹೇಳುತ್ತಿದ್ದೇವೆ ಅದು ಸತ್ಯಕ್ಕೆ ದೂರವಾದಂಥದ್ದು. ಕಳೆದ ನಾಲ್ಕೈದು ವರ್ಷಗಳ ಕಬ್ಬನ್ನು ಬೆಳೆಯುವಂತ ವಿಸ್ತೀರ್ಣ ಸಹ ಜಾಸ್ತಿಯಾಗಿಲ್ಲ, ಕಬ್ಬನ್ನು ಬೆಳೆದಂಥ ಪ್ರಮಾಣ ಅದಕ್ಕೆ ಸರಿಸಮಾನವಾಗಿದೆಯೇ ಹೊರತು ಬೇರೆ ಏನೂ ಅವ್ಯವಸ್ಥೆ ಆಗಿಲ್ಲ. ನಮ್ಮಲ್ಲಿರುವಂಥ ಸಕ್ಕರೆ ಕಾರ್ಖಾನೆಗಳು, ನಮ್ಮ ಸಹಕಾರಿ ವಲಯದಲ್ಲಿ ಸುಮಾರು ಹದಿನೇಳು ಸಕ್ಕರೆ ಕಾರ್ಖಾನೆಗಳಿವೆ ಅವುಗಳಿಂದ ಇವತ್ತು ಪ್ರತಿನಿತ್ಯ ಸುಮಾರು ಮೂವತ್ತನಾಲ್ಕು ಸಾವಿರದ ನಾನೂರ ಐವತ್ತು ಟನ್ ಕಬ್ಬು ಕ್ರಶಿಂಗ್‌ಗೆ ಬಂದು, ಇದನ್ನು ಅವನು ಪ್ರತಿನಿತ್ಯ ಕ್ರಷ್ ಮಾಡುತ್ತಿದ್ದಾರೆ. ಸಾರ್ವಜನಿಕ ವಲಯದಲ್ಲಿ ಎರಡು ಕಾರ್ಖಾನೆಗಳು ಏಳುಸಾವಿರದ ಐನೂರು ಟಿ.ಸಿ.ಡಿ. ಕಬ್ಬನ್ನು ಅರೆಯುತ್ತಿದ್ದಾರೆ. ಜಂಟಿ ವಲಯದಲ್ಲಿ ಎರಡು ಕಾರ್ಖಾನೆಗಳಿದ್ದಾವೆ. ಮೂರು ಸಾವಿರದ ಏಳನೂರ ಐವತ್ತು ಟನ್ ಅಷ್ಟು ಕಬ್ಬನ್ನು ಪ್ರತಿನಿತ್ಯ ಅವು ಕ್ರಷ್ ಮಾಡುತ್ತಿವೆ. ಖಾಸಗಿ ವಲಯದಲ್ಲಿ ಇಪ್ಪತ್ತಾರು ಸಾವಿರದ ಇನ್ನೂರು ಐವತ್ತು ಟನ್ ಕಬ್ಬನ್ನು ಒಂಬತ್ತು ಕಾರ್ಖಾನೆಗಳಲ್ಲಿ ಕ್ರಷ್ ಮಾಡುತ್ತಿದ್ದಾರೆ.

ಅಂದರೆ ಒಟ್ಟು ಮೂವತ್ತು ಕಾರ್ಖಾನೆಗಳಲ್ಲಿ ಈಗಾಗಲೇ ಕಬ್ಬನ್ನು ಕ್ರಷ್ ಮಾಡಲಾಗುತ್ತಿದೆ. ಕಂಪ್ಲ ಸಕ್ಕರೆ ಕಾರ್ಖಾನೆ ಮುಚ್ಚಿದೆ. ಉಳಿದಂತಹ 29 ಸಕ್ಕರೆ ಕಾರ್ಖಾನೆಗಳು ಇವತ್ತು ನಮ್ಮಲ್ಲಿ ಕೆಲಸ ಮಾಡುತ್ತಿದ್ದಾವೆ. ಈ 29 ಸಕ್ಕರೆ ಕಾರ್ಖಾನೆಗಳ ಕೆಲಸ ಮಾಡಿದ ಮೇಲೂ ಸಹ ಇವತ್ತು ರೈತ ಬೆಳೆದಂಥ ಕಬ್ಬನ್ನು ಅರೆಯುವಂಥ ಸ್ಥಿತಿ ಇಲ್ಲ ಈ ವರ್ಷ ಎಂಭತ್ತೈದು ಲಕ್ಷ ಟನ್‌ಗೂ ಹೆಚ್ಚು ಕಬ್ಬು ಅರೆಯದೆ ನಿಂತಿದೆ ಒಂದು ವರದಿಯ ವಿವರವನ್ನು ಇವತ್ತು ರಾಜ್ಯ ಸರ್ಕಾರ ಕೊಟ್ಟಿದೆ. ಮಾನ್ಯ ಅಧ್ಯಕ್ಷರೆ ಇಲ್ಲಿ ಸಮಸ್ಯೆ ಬಂದಂಥದ್ದು ಏನೆಂದರೆ ಯಾವ ನಮ್ಮ ರೈತ ಕಬ್ಬನ್ನು ಬೆಳೆಯುತ್ತಿದ್ದ, ಅವನು ಪಕ್ಕದ ಮಹಾರಾಷ್ಟ್ರ ಹಾಗೂ ತಮಿಳುನಾಡಿಗೆ ಈ ಬೆಳೆದ ಕಬ್ಬನ್ನು ಕೊಡುವಂಥ ಕೆಲಸವನ್ನು ಮಾಡುತ್ತಿದ್ದ. ಕಳೆದ ಹದಿನೈದು ಇಪ್ಪತ್ತು ವರ್ಷಗಳಿಂದ ನಾವು ನಮ್ಮ ಕಾಲ ಮೇಲೆ ನಿಂತು, ನಮ್ಮ ರಾಜ್ಯದಲ್ಲಿ ಕಬ್ಬನ್ನು ಅರೆಯುವಂಥ ಅಗತ್ಯವಿರುವ ಕಾರ್ಖಾನೆಗಳನ್ನು ಪ್ರಾರಂಭ ಮಾಡುವಂಥ ಒಂದು ಪ್ರಮಾಣಿಕ ಪ್ರಯತ್ನ. ಅದು ಆಗದ ಪರಿಣಾಮ ಹೊರ ರಾಜ್ಯಗಳ ಮೇಲೆ ಅವಲಂಬಿಸಬೇಕಾದಂಥ ಒಂದು ಪರಿಸ್ಥಿತಿ ಒದಗಿ ಬಂದು ಅದನ್ನು ಸರಿಪಡಿಸುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನ ಇವತ್ತು ಮಾಡಲಿಲ್ಲ.ಸನ್ಮಾನ್ಯ ಅಧ್ಯಕ್ಷರೇ, ಇದರ ದುಷ್ಪರಿಣಾಮವನ್ನು ನಾವು ಇವತ್ತು ಎದುರಿಸುತ್ತಾ ಇದ್ದೇವೆ. ಮತ್ತೆ ಇವತ್ತು ನಮ್ಮ ರಾಜ್ಯದಲ್ಲಿರುವ ಕಾರ್ಖಾನೆಗಳು, ಯಾವ ಸುಮಯದಲ್ಲಿ ಈ ಕಬ್ಬನ್ನು ಅರೆಯುವಂತಹ ಕೆಲಸವನ್ನೂ ಪ್ರಾರಂಭ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ, ಉದಾಹರಣೆಗೆ ಜೂನ್ ಮೊದಲನೆಯ ವಾರದಿಂದ ಮುಂದಿನ ಮೇ ಕೊನೆಯವರೆಗೆ ನಿರಂತರವಾಗಿ ಕಾರ್ಖಾನೆಯ ಕೆಪಾಸಿಟಿ ಅಗತ್ಯ ಇರುವಷ್ಟು ಕಬ್ಬನ್ನು ಅರೆಯುವಂಥ ವ್ಯವಸ್ಥೆಯನ್ನು ಮಾಡಿದಿದ್ದರೆ, ಈ ಮಟ್ಟದ ದುಷ್ಪರಿಣಾಮ ಆಗುತ್ತಿರಲಿಲ್ಲ. ಆದರೆ ಸರ್ಕಾರ ಆ ಕಡೆಗೆ ಸಂಪೂರ್ಣ ನಿರ್ಲಕ್ಷ್ಯ ಮಾಡಿದ ಪರಿಣಾಮ ಇವತ್ತು ಈ ಒಂದು ಪರಿಸ್ಥಿತಿ ಬಂದಿದೆ. ಶೇಕಡ ನೂರರಷ್ಟು ಶಕ್ತಿಯ ಕಬ್ಬನ್ನು ಹಾಕಿ ಕಬ್ಬನ್ನು ಅರೆದರೂ ಸಹ ನೂರು ಇಪ್ಪತ್ತೈದು ಲಕ್ಷ ಟನ್ ಕಬ್ಬನ್ನು ಸಹ ಅರೆಯಲು ಸಾಧ್ಯವಿಲ್ಲ ಅಂದರೆ ಸುಮಾರು ಎಂಭತ್ತೈದು ಲಕ್ಷ ಟನ್ ಕಬ್ಬು, ಸರ್ಕಾರದ ವರದಿಯ ಪ್ರಕಾರ

ಅರೆಯುವುದಕ್ಕೆ ಆಗದೆಯೇ ಒಣಗುವಂಥ ಒಂದು ದುಸ್ಥಿತಿ ಇವತ್ತು ನಾವು ಕಾಣುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿರುವಂತಹ ನಮ್ಮ ಸಕ್ಕರೆ ಕಾರ್ಖಾನೆಗಳು ಅವರಿಗೆ ಖುಷಿ ಬಂದಾಗ ಈ ಕಬ್ಬನ್ನು ಅರೆಯುವಂಥ ಒಂದು ಕೆಲಸ ಪ್ರಾರಂಭ ಮಾಡಿಕೊಂಡು ಬಂದರು. ಯಾರೇ ಒಬ್ಬ ವಿಶೇಷವಾಗಿ ಸಕ್ಕರೆ ಸಚಿವರು ಇದ್ದರೂ ಸಹ, ಆ ಕಡೆ ಒಂದು ವಿಶೇಷವಾಂಥ ಗಮನವನ್ನು ಕೊಡದ ಪರಿಣಾಮ ಆ ಸಹಕಾರಿ ಸಕ್ಕರೆ ಕಾರ್ಖಾನೆಗಳು ತಮ್ಮ ಮನಬಂದಂತೆ ಅವರಿಗೆ ಖುಷಿ ಬಂದಾಗ ಈ ಒಂದು ಕಬ್ಬನ್ನು ಅರೆಯುವಂಥ ಕೆಲಸವನ್ನು ಪ್ರಾರಂಭ ಮಾಡಿಕೊಂಡು ಬಂದರು. ಉದಾಹರಣೆಗೆ ಪಾಂಡವಪುರ ಸಕ್ಕರೆ ಕಾರ್ಖಾನೆ, 16-6-95ರಿಂದ ಕಬ್ಬನ್ನು ಅರೆಯುವ ಕೆಲಸವನ್ನು ಪ್ರಾರಂಭ ಮಾಡಿದರು. ಮೈಸೂರು ಸಕ್ಕರೆ ಕಾರ್ಖಾನೆ ಮಂಡ್ಯದಲ್ಲಿ 12-7-95ಕ್ಕೆ ಕಬ್ಬನ್ನು ಅರೆಯುವಂಥ ಕೆಲಸ ಪ್ರಾರಂಭ ಮಾಡಿದರು. ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ 3-9-95ಕ್ಕೆ ಕಬ್ಬನ್ನು ಅರೆಯುವಂಥ ಕೆಲಸವನ್ನು ಪ್ರಾರಂಭ ಮಾಡಿದರು. ಹೇಮಾವತಿ ಸಕ್ಕರೆ ಕಾರ್ಖಾನೆ 8-8-95 ಕ್ಕೆ ಕಬ್ಬನ್ನು ಅರೆಯುವ ಕೆಲಸವನ್ನು ಪ್ರಾರಂಭ ಮಾಡಿದರು.

ಅದೇ ರೀತಿ ತುಂಗಾಭದ್ರಾ ಸಕ್ಕರೆ ಕಾರ್ಖಾನೆ 6-1-96ಕ್ಕೆ, ಮಹದೇಶ್ವರ ಸಕ್ಕರೆ ಕಾರ್ಖಾನೆ 2-11-95ಕ್ಕೆ ಶ್ರೀರಾಮ ಸಕ್ಕರೆ ಕಾರ್ಖಾನೆ 9-8-95ಕ್ಕೆ ಕಬ್ಬನ್ನು ಅರೆಯುವ ಕೆಲಸವನ್ನು ಪ್ರಾರಂಭ ಮಾಡಿದರು. ಅಂದರೆ ಯಾವ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆದು ನಿಂತಿದ್ದರೂ ಸಹ ಮೇ ಜೂನ್ ತಿಂಗಳಲ್ಲಿ ಕಬ್ಬನ್ನು ಅರೆಯುವ ಕೆಲಸ ಪ್ರಾರಂಭ ಮಾಡದೆ ಎರಡರಿಂದ ಮೂರು ತಿಂಗಳು ತಡವಾಗಿ ಕಬ್ಬನ್ನು ಅರೆಯುವಂಥ ಕೆಲಸವನ್ನು ಪ್ರಾರಂಭ ಮಾಡಿದರು, ಇದರ ಪರಿಣಾಮ ಇವತ್ತು ಎಲ್ಲಾ ಕಡೆ ಕಬ್ಬು ಒಣಗಿ ನಿಂತಿರುವ ಒಂದು ಪರಿಸ್ಥಿತಿಯನ್ನು ನಾವು ಇವತ್ತು ಕಾಣುತ್ತಿದ್ದೇವೆ. ಶಿವಮೊಗ್ಗದ ತುಂಗಭದ್ರಾ ಸಕ್ಕರೆ ಕಾರ್ಖಾನೆ ನಿಗದಿತ ಸಮಯಕ್ಕೆ ಕಬ್ಬನ್ನು ಅರೆಯುವ ಕೆಲಸ ಪ್ರಾರಂಭ ಮಾಡಲಿಲ್ಲವೆಂದು ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ರೈತ ಸಂಘದವರು ಒಣಗಿದ ಕಬ್ಬನ್ನು ತೆಗೆದುಕೊಂಡು ಹೋಗಿ ಬೆಂಕಿ ಇಟ್ಟು ಸುಟ್ಟ ಮೇಲೆ ಇವತ್ತು ಸಚಿವರು ಅದಕ್ಕೆ ವಿಶೇಷವಾದಂಥ ಗಮನವನ್ನು ಕೊಟ್ಟ ಮೇಲೆ ಮೂರು ತಿಂಗಳ ನಂತರ ದಿನಾಂಕ 28-10-95ರಿಂದ ಕಬ್ಬನ್ನು ಅರೆಯುವ ಕೆಲಸವನ್ನು ಪ್ರಾರಂಭ ಮಾಡಿದರು. ಅಂದರೆ ಈ ರೀತಿ, ಸಮಯಕ್ಕೆ ಸರಿಯಾಗಿ ಕಬ್ಬನ್ನು ಅರೆಯದಂಥ ದುಷ್ಪರಿಣಾಮದಿಂದ ಇವತ್ತು ಈ ಒಂದು ಪರಿಸ್ಥಿತಿ ಬಂದಿದೆ. ಎರಡನೆಯದು, ಕಬ್ಬನ್ನು ರೈತ ಬೆಳೆದಾಗ ನಾವು ಯಾವ ರೀತಿ ಅವನನ್ನು ನೋಡಿಕೊಂಡೆವು? ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಹೋದ ವರ್ಷ ಜಿಲ್ಲಾಧಿಕಾರಿಗಳು ಒಂದು ಸುತ್ತೋಲೆಯನ್ನು ಹೊರಡಿಸಿದರು. ಯಾವ ಕಾರಣಕ್ಕೂ ಸಹ ಈ ಜಿಲ್ಲೆಯಲ್ಲಿ ಬೆಳೆದಂಥ ಕಬ್ಬನ್ನು ಪಕ್ಕದ ರಾಜ್ಯವಾದ ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗಬಾರದು ಎಂದು ಸುತ್ತೋಲೆಯನ್ನು ಹೊರಡಿಸಿದರು. ಲಕ್ಷಾಂತರ ಕರಪತ್ರಗಳನ್ನು ಹಂಚಿಸಿ ಯಾವುದೇ ಕಾರಣಕ್ಕೆ ಕಬ್ಬನ್ನು ಹೊರಗೆ ಹೋಗುವುದಕ್ಕೆ ಬಿಡುವುದಿಲ್ಲವೆನ್ನುವ ಕಟ್ಟಪ್ಪಣೆಯನ್ನು ಮಾಡಿದರು. ಬೆಲ್ಲ ತಯಾರು ಮಾಡಕೂಡದೆಂದು ಕಟ್ಟಪ್ಪಣೆಯನ್ನು ಮಾಡಿದರು. ಇದೆಲ್ಲದರ ಪರಿಣಾಮ ಹೋದ ವರ್ಷ, ನಮ್ಮ ಸಕ್ಕರೆ ಸಚಿವರು ಇಲ್ಲಿ ಕುಳಿತಿದ್ದಾರೆ. ಅಲ್ಲಿರುವಂಥ ಸಕ್ಕರೆ ಕಾರ್ಖಾನೆ ಮ್ಯಾನೇಜ್‌ಮೆಂಟ್ ದುರುಪಯೋಗ ಮಾಡಿಕೊಂಡು, ಯಾರೂ ಒಪ್ಪಂದ ಮಾಡಿಕೊಂಡಂಥ ರೈತನ ಕಬ್ಬನ್ನು ಅರೆಯದೆ. ಅಲ್ಲಿರುವಂಥ ಸದಸ್ಯರೇ ಕಬ್ಬನ್ನು ಟನ್‌ಗೆ ಇನ್ನೂರು, ಇನ್ನೂರು ಐವತ್ತು ರೂಪಾಯಿಗಳಂತೆ ಕೊಂಡುಕೊಂಡು ಅದೇ ಸಕ್ಕರೆ ಕಾರ್ಖಾನೆ ಅರೆಯುವಂಥ ಒಂದು ಪಾಪದ ಕೆಲಸವನ್ನು ಮಾಡಿದರು. ರಾಮಚಂದ್ರವೀರಪ್ಪ ನಮ್ಮ ಎಂ.ಪಿ.ಯವರು ನಾವು ಅಲ್ಲಿ ಸತ್ಯಾಗ್ರಹ ಮಾಡಬೇಕಾಯಿತು, ಚಳುವಳಿಯನ್ನು ಮಾಡಬೇಕಾಯಿತು.

ಹೋದ ವರ್ಷ ಸುಮಾರು ಒಂದು ಲಕ್ಷ ಟನ್ ಕಬ್ಬನ್ನು ನಮ್ಮ ಕಣ್ಣು ಮುಂದೆಯೇ ಬೆಂಕಿ ಹಾಕಿ ಸುಡುವಂತಹ ಒಂದು ಪರಿಸ್ಥಿತಿಯನ್ನು ನಾವು ಅಲ್ಲಿ ಕಂಡಿದ್ದೇವೆ. ಈ ಒಂದು ಪರಿಸ್ಥಿತಿ ಇವತ್ತು ನಮ್ಮ ರಾಜ್ಯದಲ್ಲಿ ಇರಬೇಕಾದರೆ, ಮೊನ್ನೆ ತಾನೆ ಈ ಸದನ ಒಂದು ದಿವಸ ರಜೆ ಇದ್ದಾಗ ನಾನು ಹಳಿಯಾಳಕ್ಕೆ ಹೋಗಿದ್ದೆ. ಅಲ್ಲೂ ಸಹ ಮಾಹಾರಾಷ್ಟ್ರಕ್ಕೆ ಕಬ್ಬನ್ನು ಕಳುಹಿಸಿಕೊಡುತ್ತಾ ಇದ್ದರು. ಸುಮಾರು ಒಂದು ಒಂದುವರೆ ಲಕ್ಷ ಟನ್ ಅಷ್ಟು ಕಬ್ಬನ್ನು ಅಲ್ಲಿ ಬೆಳೆಯುತ್ತಾರೆ. ಆದರೆ ಇವತ್ತು ಮಹಾರಾಷ್ಟ್ರದಲ್ಲಿ ಆಗಲಿ, ಗೋವಾದಲ್ಲಿ ಆಗಲಿ ಆ ಕಬ್ಬನ್ನು ಕೊಳ್ಳುವಂಥಾ ವ್ಯವಸ್ಥೆ ಇಲ್ಲದ ಪರಿಣಾಮ ಒಂದು ಒಂದು ಕಾಲು ಲಕ್ಷ ಟನ್ ಕಬ್ಬನ್ನು ಅವರು ಏನು ಮಾಡಬೇಕೆಂದು ತೋಚದೆ ಇವತ್ತು ಬೀದಿ-ಪಾಲಾಗಿರುವ ಒಂದು ಸಂದರ್ಭ ಇದೆ. ಉದಾಹರಣೆಗೆ ಧಾರವಾಡದಲ್ಲಿ ನೋಡಿ. ಈ ಹಾನಗಲ್ ತಾಲ್ಲೂಕಿನಲ್ಲಿ ನಮ್ಮ ಉದಾಸಿಯವರಿದ್ದಾರೆ. ಅಲ್ಲಿ ಕಬ್ಬನ್ನು ಬೆಳೆದಂಥ ರೈತನ ಸ್ಥಿತಿಯನ್ನು ನೋಡಿ. ಕರ್ನಾಟಕ ಸಹಕಾರಿ ಕಾರ್ಖಾನೆ ಕ್ಷೇತ್ರದಲ್ಲಿ, ಅಲ್ಲಿ ಮೂರು ಲಕ್ಷದ ಹನ್ನೊಂದು ಸಾವಿರ ಟನ್ ಕಬ್ಬನ್ನು ಅರೆಯುತ್ತೇವೆಂದು ಒಪ್ಪಂದ ಮಾಡಿಕೊಂಡಿದ್ದಾರೆ. ಈವರೆಗೆ ಅಲ್ಲಿ ಕಾರ್ಖಾನೆ ಕಬ್ಬನ್ನು ಅರೆದಿರುವಂಥದ್ದು ಕೇವಲ ಅರವತ್ತೇಳು ಸಾವಿರ ಟನ್ ಮಾತ್ರ ಇನ್ನೂ ಎಪ್ಪತ್ತೈದು ದಿನಗಳಲ್ಲಿ ಎರಡು ಲಕ್ಷ ಟನ್ ಕಬ್ಬನ್ನು ಅರೆಯಬೇಕಾಗಿದೆ. ಅಂದರೆ ಸಕ್ಕರೆ ಕಾರ್ಖಾನೆ ಇದೆ. ಒಪ್ಪಂದ ಆಗಿದೆ ಕಬ್ಬನ್ನು ಅರೆಯುವ ಸಾಮರ್ಥ್ಯ ಇದೆ. ಸಮಯಕ್ಕೆ ಸರಿಯಾಗಿ ಕಬ್ಬನ್ನು ಅರೆಯುವ ಕೆಲಸವನ್ನು ಕಾರ್ಖಾನೆ ಪ್ರಾರಂಭ ಮಾಡದೆಯೇ ಇವತ್ತು ಆ ತಾಲ್ಲೂಕಿನಲ್ಲೇ ಸುಮಾರು ಒಂದು ಲಕ್ಷ ಟನ್ ಕಬ್ಬನ್ನು ಏನು ಮಾಡಬೇಕೆಂದು ತೋಚದೆ ಇರುವಂತ ಒಂದು ಧಾರುಣ ಪರಿಸ್ಥಿತಿ ಇದೆ. ಬಹುಶಃ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬಹುದು, ಒಂದು ಅಂದಾಜಿನ ಪ್ರಕಾರ, ನಮ್ಮ ರಾಜ್ಯದ ಒಳಗಡೆ ಏನು ಕಬ್ಬನ್ನು ಬೆಳೆದಿದ್ದಾರೆ, ಕಾರ್ಖಾನೆಗಳಿಗೆ ಏನು ಕಬ್ಬನ್ನು ಕೊಳ್ಳುತ್ತಿದ್ದೇವೆ. ಹೋದ ವರ್ಷ ರೈತ ತ್ತೊಂಭತ್ತರಿಂದ ನೂರು ಕೋಟಿ ರೂಪಾಯಿಗಳವರೆಗೆ ಏನು ಕಬ್ಬನ್ನು ಕೊಟ್ಟಿದ್ದಾನೆ, ಅದರ ಹಣವನ್ನೂ ಸಹ ಇದುವರೆವಿಗೆ ರೈತನಿಗೆ ಪಾವತಿ ಮಾಡಿಲ್ಲ, ಅಲ್ಪಸ್ವಲ್ಪ ಪಾವತಿ ಮಾಡಿದ್ದಾರೆ. ಉಳಿದ ಹಣ ಕೊಟ್ಟಿಲ್ಲ.

12.20 ಪಿ.ಎಂ.

ಉದಾಹರಣೆಗೆ ಆಳಂದದಲ್ಲಿ ಆ ತಾಲ್ಲೂಕಿನ ರೈತರಿಗೆ 6 ಕೋಟಿ ರೂಪಾಯಿ ಹಣ ಬಾಕಿ ಬರಬೇಕಾಗಿದೆ. ಬೀದರ್ ಸಕ್ಕರೆ ಕಾರ್ಖಾನೆ 14 ಕೋಟಿ ರೂಪಾಯಿ ರೈತರಿಗೆ ಬಾಕಿ ಕೊಡಬೇಕಾಗಿದೆ. ಬೀದರ್‌ನಲ್ಲಿ ಹಿಂದಿನ ವರ್ಷ ಸುಮಾರು 6-7 ಕೋಟಿ ರೂಪಾಯಿನ ಕಬ್ಬು ಒಣಗಿದ್ದಂಥಾದ್ದನ್ನು ಸುಡುವಂಥ ಒಂದು ದಾರುಣ ಸ್ಥಿತಿ ಬಂತು. ನಾನು ಒಂದು ಲಕ್ಷ ಅಂತ ಹೇಳಿದೆ, ಅದು ಸುಮಾರು 6-7 ಕೋಟಿ ರೂಪಾಯಿನ ಬೆಲೆ ಅದು, ಸನ್ಮಾನ್ಯ ಅಧ್ಯಕ್ಷರೇ, ಅಲ್ಲಿ ಹೆಚ್.ಕೆ.ಡಿ.ಬಿ.ಯಿಂದ 1 ಕೋಟಿ ರೂಪಾಯಿಯನ್ನು ಬೀದರ್ ಜಿಲ್ಲೆ, ರೈತರಿಗೆ ಆ ಹಣವನ್ನು ಪಾವತಿ ಮಾಡುವುದಕ್ಕೋಸ್ಕರ ಬಿಡುಗಡೆ ಮಾಡಿಸಿದ್ದಾರೆ. ಬಿಡುಗಡೆ ಮಾಡಿ ಆಗಲೇ ಕೆಲವು ತಿಂಗಳೂಗಳೂ ಕಳೆದು ಹೋದವು. ಇದುವರೆಗೆ ಅಲ್ಲಿರುವಂಥ ಸುದ್ಧಿ ಪ್ರಕಾರ ಮುಖ್ಯ ಮಂತ್ರಿಗಳು ಬಂದಾಗ ಒಂದು ಕಾರ್ಯಕ್ರಮವನ್ನು ಮಾಡಿ ಹಣವನ್ನು ರೈತರಿಗೆ ಕೊಡುತ್ತೇವೆ ಎಂದು ಹೇಳಿಕೊಂಡು. ಹೆಚ್.ಕೆ.ಡಿ.ಬಿ.ಯಿಂದ ಹಣ ಬಿಡುಗಡೆ ಮಾಡಿದ ಮೇಲೂ ಸಹ ಇದುವರೆಗೆ ರೈತರಿಗೆ ಹಣವನ್ನು ಪಾವತಿ ಮಾಡುವಂಥ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ, ಈ ರೀತಿ ಅಲ್ಲಿರುವಂಥ ಮ್ಯಾನೇಜ್‌ಮೆಂಟ್‌ನವರು ಹಣವನ್ನು ದುರುಪಯೋಗ ಮಾಡುತ್ತಿದ್ದಾರೆ. ರೈತನನ್ನು ಶೋಷಣೆ ಮಾಡುವಂಥ ಕೆಲಸವನ್ನು ಮಾಡುತ್ತಿದ್ದಾರೆ., ಬೆಳಗಾವಿ ಜಿಲ್ಲೆ ಬಹುಶಃ

ನಮ್ಮ ರಾಜ್ಯದಲ್ಲಿಯೇ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯುವಂಥ ಜಿಲ್ಲೆ ಒಂದು ಅಂದಾಜಿನ ಪ್ರಕಾರ ಸುಮಾರು 15 ಲಕ್ಷ ಟನ್ ಕಬ್ಬನ್ನು ರೈತ ಏನು ಮಾಡಬೇಕು ಎಂದು ತೋಚದೇ ಇರುವಂಥ ಒಂದು ಪರಿಸ್ಥಿತಿ ಇವತ್ತು ಅಲ್ಲಿ ಕಾಣುತ್ತಿದ್ದೇವೆ.

ಬೆಳಗಾವಿ ಜಿಲ್ಲೆಯಲ್ಲಿ, ಪಕ್ಕದಲ್ಲೇ ಮಹಾರಾಷ್ಟ್ರದ ಬಾರ್ಡರ್‌ನಲ್ಲಿ ಕಬ್ಬನ್ನು ಕೊಳ್ಳುವಂಥ ತೆಗೆದುಕೊಂಡು ಹೋಗುವಂಥ ವ್ಯವಸ್ಥೆ ಇತ್ತು. ಆದರೆ ಮಹಾರಾಷ್ಟ್ರದವರು ಇವತ್ತು ನಿರ್ಭಂಧವನ್ನು, ಹಾಕಿದ್ದಾರೆ. ಕಬ್ಬನ್ನು ಕೊಳ್ಳುವುದಿಲ್ಲ ಎನ್ನುವಂಥ ಮಾತನ್ನು ಇವತ್ತು ಹೇಳಿದ್ದಾರೆ. ಮತ್ತೆ ನಮ್ಮ ಪಕ್ಕದಲ್ಲಿರುವ ಮಂಡ್ಯ ಜಿಲ್ಲೆಯಲ್ಲೂ ಸಹ, ಈ ಸಾಲಿನಲ್ಲಿ ಸುಮಾರು 80 ಸಾವಿರ ಎಕರೆಗಳಲ್ಲಿ ಕಬ್ಬನ್ನು ಬೆಳೆದಿದ್ದಾರೆ. ಜಿಲ್ಲೆಯಲ್ಲಿ ಮೂರು ಸಕ್ಕರೆ ಕಾರ್ಖಾನೆಗಳು, ಖಂಡಸಾರಿ ಇದ್ದರೂ ಸಹ ಈ ಕಬ್ಬನ್ನು ಅರೆಯುವಂಥ ಒಂದು ಸ್ಥಿತಿಯಿಲ್ಲ. ಮತ್ತೆ ಕಳೆದ ವರ್ಷ ಮಂಡ್ಯದಲ್ಲಿ ಅಲ್ಲಿರುವಂಥ ಬೆಲ್ಲಕ್ಕೆ ಎಲ್ಲಿಲ್ಲದ ಒಂದು ಮಾರ್ಕೆಟ್ ಇತ್ತು. ಈ ವರ್ಷ ಬೆಲ್ಲವನ್ನೂ ಕೊಳ್ಳದೇ ಇರುವಂಥ ಒಂದು ಪರಿಸ್ಥಿತಿ ಇರುವುದರಿಂದ ಒಂದೆರಡು ತಿಂಗಳ ನಂತರ ಕಬ್ಬನ್ನು ಅರೆಯುವಂಥ ಕೆಲಸ ಅಲ್ಲಿ ಪ್ರಾರಂಭವಾದ್ದರಿಂದ ಅಲ್ಲೂ ಸಹ ಕಬ್ಬು ಒಣಗಿದಂಥ ದಾರುಣ ಸ್ಥಿತಿಯನ್ನು ಇವತ್ತು ನಾವು ಕಾಣುತ್ತಿದ್ದೇವೆ.

ಶಿವಮೊಗ್ಗ ಜಿಲ್ಲೆಯ ದೇವಿ ಸಕ್ಕರೆ ಕಾರ್ಖಾನೆ ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಇದ್ದಂಥ ಕಾರ್ಖಾನೆಯನ್ನು ಯಾರೋ ಒಬ್ಬ ಕೋಟ್ಯಾಧಿಪತಿ ಅದನ್ನು ಕೊಂಡುಕೊಂಡ, ಅದನ್ನು ಮಾರಿಕೊಂಡು ಹೋಗುವಂಥ ಒಂದು ತಯಾರಿಯಲ್ಲಿ ಅವನು ಇದ್ದಾನೆ. 3 ತಿಂಗಳು ತಡವಾಗಿ ಅಲ್ಲಿ ಕಾರ್ಖಾನೆ ಪ್ರಾರಂಭವಾಯಿತು. ಶಿವಮೊಗ್ಗ ಜಿಲ್ಲೆಯಲ್ಲೂ ಸಹ ಸುಮಾರು 3-4 ಲಕ್ಷ ಟನ್ ಕಬ್ಬು ಬೀದಿ ಪಾಲುಗುವಂಥ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇಂಥ ಒಂದು ಪರಿಸ್ಥಿತಿ ಇರಬೇಕಾದರೆ ಸರ್ಕಾರ ಇದರ ಬಗ್ಗೆ ಏನು ಕಾರ್ಯಕ್ರಮವನ್ನು ಕೈಗೊಂಡಿದೆ? ಇದರ ಬಗ್ಗೆ, ರೈತರುನ್ನು ಉಳಿಸುವಂಥ ಒಂದು ಪ್ರಯತ್ನ ನೀವು ಏನು ಮಾಡುತ್ತಿದ್ದೀರಿ ಎಂದು ಸರ್ಕಾರ ಸ್ಪಷ್ಟವಾದಂಥ ತನ್ನ ನಿಲುವನ್ನು ಹೇಳಬೇಕು ಎನ್ನುವಂಥ ಒತ್ತಾಯವನ್ನು ಇವತ್ತು ನಾನು ಮಾಡುತ್ತಿದ್ದೇನೆ. ಒಂದು ಪದೇ ಪದೇ ನಾವು ಕೇಳುತ್ತಿರುವಂಥಾದ್ದು ಏನೆಂದರೆ ಕಬ್ಬಿನ ಬೆಳೆಗೆ ಸರಿಯಾದಂಥ ಒಂದು ಪರಿಹಾರವನ್ನು ಸಹ ನಾವು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಒಂದು ಕಡೆ ಹೋದಂಥ ಕಾಲದಲ್ಲಿ ಭಾಷಣವನ್ನು ಮಾಡಿದ್ದಾರೆ. ಸಕ್ಕರೆ ಕಾರ್ಖಾನೆಗಳ ಲೈಸೆನ್ಸ್ ಪದ್ಧತಿ ರದ್ಧತಿ ಆಗಬೇಕು ಅನ್ನುವಂಥಾದ್ದನ್ನು ಸಹ ಅವರು ಪತ್ರಿಕೆಯಲ್ಲಿ ಹೇಳಿದ್ದಾರೆ. ನಾನು ಒತ್ತಾಯ ಮಾಡುವಂಥಾದ್ದು ಏನೆಂದರೆ, ಈ ಸದನದಲ್ಲಿ ಸರ್ವಾನುಮತದ ಒಂದು ನಿರ್ಣಯವನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಈ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಈ ಲೈಸೆನ್ಸ್ ಪದ್ಧತಿ ಏನಿದೆ, ಈ ಕ್ರೂರ ಪದ್ಧತಿಯ ಅಗತ್ಯವಿಲ್ಲ, ಆಯಾ ರಾಜ್ಯದಲ್ಲೇ ಅಗತ್ಯವಾದಂಥ ಕಬ್ಬನ್ನು ಅರೆಯುವಂಥ ಒಂದು ಸ್ವಾತಂತ್ರ್ಯ ಅದಕ್ಕೆ ಬೇಕಾದಂಥ ಕಾರ್ಖಾನೆಯನ್ನು ಪ್ರಾರಂಭ ಮಾಡುವಂಥ ಸ್ವಾತಂತ್ರ್ಯ ಆಯಾಯಾ ರಾಜ್ಯಗಳಿಗೇ ಇರಬೇಕು ಎನ್ನುವಂಥ ಒಂದು ಒತ್ತಡವನ್ನು ತರುವ ದೃಷ್ಟಿಯಿಂದ, ಆ ರೀತಿ ಒಂದು ಸರ್ವಾನುಮತದ ನಿರ್ಣಯವನ್ನು ಇಲ್ಲಿ ಮಾಡುವುದರಿಂದ ಬಹುಶಃ ಮುಂದೆ ಈ ರೀತಿ ಲೈಸೆನ್ಸ್‌ಗೋಸ್ಕರ ಕೇಂದ್ರ ಸರ್ಕಾರದ ಮುಂದೆ ನಿಲ್ಲುವಂಥಾದ್ದು ಸಹ ತಪ್ಪಬಹುದು ಎಂದು ನಾನಾದರೂ ಭಾವಿಸಿದ್ದೇನೆ. ಆ ರೀತಿ ಒಂದು ಸರ್ವಾನುಮತದ ನಿರ್ಣಯವನ್ನು ಸಹಾ ಈ ಸಂದರ್ಭದಲ್ಲಿ ಮಾಡಬೇಕು ಎಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಮತ್ತೇ ಕೇಂದ್ರ ಸರ್ಕಾರದಲ್ಲಿ

ಸುಮಾರು 45 ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಪೆಂಡಿಂಗ್ ಇದೆ. ಅದಕ್ಕೆ ಅನುಮತಿ ಕೊಡುವುದಕ್ಕೆ ಈ ಒಂದು ನಿರ್ಣಯವನ್ನು ಮಾಡುವುದರ ಜೊತೆಗೆ ಒಂದು ಅನಮತಿಯನ್ನು ಕೊಡುವಂಥಾದ್ದಕ್ಕೆ ಒತ್ತಾಯವನ್ನು ತರುವಂಥಾದ್ದು ಮತ್ತು ಮಹಾರಾಷ್ಟ್ರ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಪಕ್ಕದ, ಬಾರ್ಡರ್‌ನಲ್ಲಿ ಇರುವಂಥ ಜಿಲ್ಲೆಗಳಿಂದ ಕಬ್ಬನ್ನು ಅರೆಯುವಂಥ ವ್ಯವಸ್ಥೆ ಮಾಡುವಂಥ ಒತ್ತಾಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು ಎನ್ನುವಂಥ ಒತ್ತಾಯವನ್ನು ಸಹ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ 13 ಸಹಕಾರಿ ಸಕ್ಕರೆ ಕಾರ್ಖಾನೆಗಳು ನಿರಂತರವಾಗಿ ಲುಕ್ಸಾನಿನಲ್ಲಿ ನಡೆಯುತ್ತಿವೆ. ಸುಮಾರು 70 - 80 - 90 ಕೋಟಿ ರೂಪಾಯಿ ಇದುವರೆಗೆ ಲಾಸ್ ಆಗಿದೆ. 9 ಕಾರ್ಖಾನೆಗಳಲ್ಲಿ ಕಳೆದ 5 ವರ್ಷಗಳಿಂದ 67 ಕೋಟಿ ರೂಪಾಯಿ ಲುಕ್ಸಾನು ಆಗಿದೆ ಎನ್ನುವುದೂ ಸಹ ಇವತ್ತು ವರದಿಯಾಗಿದೆ. ಅಂದರೆ ಯಾವ ನಮ್ಮ ಅಧಿಕಾರಿಗಳಿದ್ದಾರೆ ಅವರಿಂದ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಎಲ್ಲಾ ರೀತಿಯ ಒಂದು ದುರುಪಯೋಗ ಆಗುತ್ತಿದ್ದರೂ ಸಹ ಅಲ್ಲಿರುವಂಥ ಮ್ಯಾನೇಜ್‌ಮೆಂಟ್‌ನವರು ರೈತರನ್ನು ಶೋಷಣೆ ಮಾಡುತ್ತಿದ್ದರೂ ಸಹ ಅದನ್ನು ಸರಿಪಡಿಸುವಂಥ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಬಿಗಿ ನಿಗುವನ್ನು ತೆಗೆದುಕೊಳ್ಳುವಂಥಾದ್ದು ಇದುವರೆಗೆ ನಾವು ಕಾಣಲಿಲ್ಲ. ಹೀಗಾಗಿ ಇವತ್ತು ಈ ಒಂದು ದುಸ್ಥಿತಿ ಬಂದಿದೆ. ನಮ್ಮ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳನ್ನು ಒತ್ತಾಯಕ್ಕೆ ತರುವಂಥ ಕೆಲಸ ಸಹ ಇವತ್ತು ರಾಜ್ಯ ಸರ್ಕಾರದಿಂದ ಆಗಲಿಲ್ಲ, ಭಾರತೀಯ ಜನತಾ ಪಾರ್ಟಿ ಕಡೆಯಿಂದ ನಾವು ಒಂದು ನಿಯೋಗ ಹೋಗುತ್ತೇವೆ. ಅನ್ನುವುದನ್ನು ಕೇಳಿದ ಮೇಲೆ ಒಂದೆರಡು ಪತ್ರಗಳನ್ನು ಯಾವುದೋ ಒಂದು ದಿನಾಂಕದಲ್ಲಿ ಬರೆದಿದ್ದವು ಎಂದು ಹೇಳಿ ಸಕ್ಕರೆ ಮಂತ್ರಿಗಳು ಹೋಗಿ ಬರಿಗೈಯಲ್ಲಿ ವಾಪಸ್ಸು ಬಂದಿದ್ದಾರೆ ಎನ್ನುವಂಥಾದ್ದನ್ನು ನಾನು ಕೇಳಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳೂ ಸಹ, ನಾನು ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿ ಒತ್ತಡವನ್ನು ತಂದು ಅದರ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನುವಂಥ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ತಾವು ಹೋಗಿ ಭೇಟಿ ಮಾಡಿದ್ದೀರೋ? ಆ ಸಮಸ್ಯೆಯನ್ನು ಬಗೆಹರಿಸಿದ್ದೀರೇ, ಸರ್ಕಾರಿ ಏನು ಹೇಳಿದೆ, ಇದರ ಬಗ್ಗೆಯೂ ಸಹ ಇವತ್ತು ತಾವು ಮಾಹಿತಿಯನ್ನು ಒದಗಿಸಿಕೊಡಬೇಕು ಎನ್ನುವಂಥ ಒತ್ತಾಯವನ್ನು ಮಾಡುತ್ತಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೇ, ಇನ್ನೊಂದು ದೊಡ್ಡ ಸಮಸ್ಯೆ ನಮ್ಮನ್ನು ಕಾಡುತ್ತಿರುವಂಥಾದ್ದು ಏನೆಂದರೆ, ಇನ್ನೊಂದೆರಡು ತಿಂಗಳಾದರೂ ಸಮಯ ಇದೆ, ಕಬ್ಬನ್ನು ಕಟಾವು ಮಾಡಿ ನಾವು ಕ್ರಷ್ ಮಾಡಿಸಬಹುದು ಎಂದರೆ ಆ ಪರಿಸ್ಥಿತಿ ಇವತ್ತು ಇಲ್ಲ, ಲಕ್ಷಾಂತರ ಬೋರ್‌ವೆಲ್‌ಗಳಿಗೆ ಇವತ್ತು ವಿದ್ಯುತ್ ಸರಬರಾಜು ಆಗುತ್ತಿಲ್ಲ. ಯಾವ ರೈತ ನೀರಾವರಿ ಯೋಜನೆಯಿಲ್ಲದೇ ಬೋರ್‌ವೆಲ್ ಮೇಲೆ ಅವಲಂಬಿತನಾಗಿದ್ದಾನೆ, ಆ ಎಲ್ಲಾ ಕಡೆ ಸಹ ಕಳೆದ 2 - 3 ತಿಂಗಳಿಂದ ವಿದ್ಯುತ್ ಸರಬರಾಜು ಆಗದೇ ಸಂಪೂರ್ಣ ಕಬ್ಬು ಒಣಗಿ ಹೋಗುವಂಥ ಒಂದು ದಾರುಣ ಪರಿಸ್ಥಿತಿ ನಾವು ಕಾಣುತ್ತಿದ್ದೇವೆ. ಬೆಳಗಾಂ ಜಿಲ್ಲೆಯಲ್ಲಿ ನಾನು ಪ್ರವಾಸ ಮಾಡಿದಂಥ ಕಾಲದಲ್ಲಿ ಅಲ್ಲಿ ಚಾನಲ್‌ನಲ್ಲಿ ನೀರು ಬಿಡದೇ ಇರುವಂಥ ಪರಿಣಾಮ ಅಲ್ಲಿ ಬೆಳೆದುನಿಂತಿರುವಂಥ ಕಬ್ಬು ಇವತ್ತು ಒಣಗಿ ಹೋಗುತ್ತಿದೆ. ಅದನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲದೇ ಇರುವಂಥ ಉಸಿರು ಕಟ್ಟುವಂಥ ಒಂದು ಪರಿಸ್ಥಿತಿ ಇವತ್ತು ಕರ್ನಾಟಕ ರಾಜ್ಯದಲ್ಲಿ ನಾವು ಕಾಣುತ್ತಿದ್ದೇವೆ. ಆದ್ದರಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಸರ್ಕಾರ ಈ ಬಗ್ಗೆ ನಿರ್ಧಿಷ್ಟವಾದಂಥ ಒಂದು ಕಾರ್ಯಕ್ರಮವನ್ನು ರೂಪಿಸಿ ಅವರಿಗೆ ನೆರವು ಕೊಡುವಂಥ ಅವರನ್ನು ಉಳಿಸುವಂಥ ಒಂದು ಪ್ರಯತ್ನ ಈ ಸರ್ಕಾರ ಮಾಡಬೇಕು

ಎನ್ನುವಂಥ ಒತ್ತಾಯವನ್ನು ಸಹ ಇವತ್ತು ನಾನು ಮಾಡುತ್ತಿದ್ದೇನೆ. ಇನ್ನು ಕೆಲವು ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿ ಸಿಕ್ಕಿದೆ. ಆದರೆ ಆ ಸಕ್ಕರೆ ಕಾರ್ಖಾನೆಗೆ ಕೇಂದ್ರ ಸರ್ಕಾರದ ಅನುಮತಿ ಕೊಟ್ಟಮೇಲೂ ಸಹ, ಅದನ್ನು ಕಾರ್ಯರೂಪಕ್ಕೆ ತರುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ, ಸಕ್ಕರೆ ಕಾರ್ಖಾನೆ ಅಂದರೆ ರಾಜಕಾರಣಿಗಳು ತಮ್ಮ ಒಂದು ಉಳಿವಿಗೋಸ್ಕರ ತಮ್ಮ ವ್ಯವಹಾರವನ್ನು ಮಾಡಿಕೊಳ್ಳುವುದಕ್ಕೋಸ್ಕರ, ತಮ್ಮ ಒಂದು ರಾಜಕೀಯ ಚಟವನ್ನು ತೀರಿಸಿಕೊಳ್ಳುವುದಕ್ಕೋಸ್ಕರ ಅಗುತ್ತಿರುವಂಥ ಸಂಸ್ಥೆಗಳಾಗಿವೆ. ನಾವು ಮುಖ್ಯಮಂತ್ರಿಗಳನ್ನು ಕೇಳಿದರೆ ಹೇಳಬಹುದು ಕೇಂದ್ರ ಸರ್ಕಾರ ಇದಕ್ಕೆ ಹೊಣೆ ನಾವು ಸಕ್ಕರೆ ಕಾರ್ಖಾನೆಗೆ ಅನುಮತಿ ಕೇಳಿದರೆ ಅವರು ಕೊಡುತ್ತಿಲ್ಲ ಈ ಮಾತನ್ನು ಅವರು ಹೇಳಬಹುದು.

ಆದರೆ ಅನಮುತಿ ನೀಡಿದರೂ ಸಹ ಸಕ್ಕರೆ ಕಾರ್ಖಾನೆಗಳನ್ನು ಅನೇಕ ವರ್ಷ ಪ್ರಾರಂಭ ಮಾಡದೇ ಇರುವಂಥ ಅನೇಕ ಉದಾಹರಣೆಗಳು ಇವೆ. ಉದಾಹರಣೆಗೆ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ, ಇದಕ್ಕೆ 2-11-88 ರಂದು ಕೇಂದ್ರ ಸರ್ಕಾರ ಅನುಮತಿಯನ್ನು ಕೊಟ್ಟಿದೆ. ಭಾಗ್ಯಲಕ್ಷ್ಮಿ ಸಕ್ಕರೆ ಕಾರ್ಖಾನೆಗೆ ಅದೂ ಸಹ 2-11-88 ರಲ್ಲಿ ಪರ್ಮಿಷನ್ ಸಿಕ್ಕಿದೆ. ಮಾರ್ಕಂಡೇಯ ಸಕ್ಕರೆ ಕಾರ್ಖಾನೆಗೆ 23-3-94ರಲ್ಲಿ ಅನುಮತಿ ಸಿಕ್ಕಿದೆ. ರೈತರ ಸಕ್ಕರೆ ಕಾರ್ಖಾನೆ, ಮುಧೋಳ್ 23-3-94ರಂದು ಸಿಕ್ಕಿದೆ. ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆ, ಭಾಲ್ಕಿ ಇದಕ್ಕೆ 23-3-94ರಂದು ಸಿಕ್ಕಿದೆ. ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ, ಬೀದರ್, ಇದಕ್ಕೆ 23-3-94 ರಂದು ಲೈಸೆನ್ಸ್ ಸಿಕ್ಕಿದೆ. ಜಮಖಂಡಿ ಸಕ್ಕರೆ ಕಾರ್ಖಾನೆಗೆ 31Ë3Ë94 ರಲ್ಲಿ ಲೈಸೆನ್ಸ್ ಸಿಕ್ಕಿದೆ. ಅಂದರೆ 1988 ರಲ್ಲಿ ಸಕ್ಕರೆ ಕಾರ್ಖಾನೆಗೆ ಅನುಮತಿ ಸಿಕ್ಕಿದರೂ ಸಹ, 1994ರಲ್ಲಿ ಅನುಮತಿ ಸಿಕ್ಕಿದ್ದರೂ ಸಹ ಇದುವರೆಗೆ ಆ ಸಕ್ಕರೆ ಕಾರ್ಖಾನೆಗಳು ಕಾರ್ಯರೂಪಕ್ಕೆ ಬಂದಿಲ್ಲ, ಭೀಮಣ್ಣ ಖಂಡ್ರೆಯವರು ಒಂದು ಸಲ ಸಿಕ್ಕಾಗ ಹೇಳಿದರು, ಯಡಿಯೂರಪ್ಪನವರೇ ನಮ್ಮ ಕಡೆಯಿಂದ ಏನೂ ತಪ್ಪಿಲ್ಲ, ಇದಕ್ಕೆ ಅಗತ್ಯವಿರುವಂಥ 30 ಪರ್ಸೆಂಟ್ ಹಣವನ್ನು ಏನು ರಾಜ್ಯ ಸರ್ಕಾರ ಕೊಡಬೇಕಾಗಿದೆ. ಆ ಹಣವನ್ನು ಕೊಡದೇ ಇದ್ದ ಪರಿಣಾಮ ಇವತ್ತು ಈ ಒಂದು ಪರಿಸ್ಥಿತಿ ನಾವು ಎದುರಿಸುತ್ತಿದ್ದೇವೆ ಎಂದು.

ಅನೇಕ ಈ ಸಕ್ಕರೆ ಕಾರ್ಖಾನೆಯ ಒಂದು ವ್ಯವಸ್ಥೆಯಲ್ಲಿ ಸಮರ್ಥವಾಗಿ ಕೆಲಸ ಮಾಡುತ್ತಿರುವಂಥವರ ಅಭಿಪ್ರಾಯವೂ ಸಹ ಇದಾಗಿದೆ. ಮತ್ತೆ ಸಕ್ಕರೆ ಕಾರ್ಖಾನೆಗಳ ಸಾಮರ್ಥ್ಯ ನಮ್ಮ ವಿಸ್ತರಣೆ ಮಾಡುವುದಕ್ಕೋಸ್ಕರ, ಒಟ್ಟು 15 ಕಾರ್ಖಾನೆಗಳಲ್ಲಿ ಈ ಸಾಮರ್ಥ್ಯ ವಿಸ್ತರಣೆಗೆ ಅನುಮತಿಯನ್ನು ಕೇಳಿದ್ದವು. ಆ ಪೈಕಿ ಮಲಪ್ರಭಾ, ಪಾಂಡವಪುರ, ಗೋದಾವರಿ ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ನೀಡಿದ್ದು, ಉಳಿದ 12 ಅರ್ಜಿಗಳು ಕೇಂದ್ರ ಸರ್ಕಾರದಲ್ಲಿ ಬಾಕಿ ಇವೆ. ಅಂದರೆ ಈ ಒಂದು ವಿಸ್ತರಣೆ ಮಾಡಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅನುಮತಿ ಸಿಕ್ಕಿದ ಮೇಲೂ ಸಹ ಅವರೂ ಸಹ ಕಬ್ಬನ್ನು ಅರೆಯುವಂಥ ಯಾವುದೇ ಒಂದು ಕೆಲಸವನ್ನು ಪ್ರಾರಂಭ ಮಾಡಿಲ್ಲ, ಇಂಥ ಒಂದು ಪರಿಸ್ಥಿತಿ ಇರುವಂಥ ಈ ಕಾಲದಲ್ಲಿ ನಾನು ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತಿರುವಂಥಾದ್ದು, ಇದು ಸರ್ಕಾರದ ಹೊಣೆಯಾಗಿದೆ. ಈ ಸಕ್ಕರೆ ಕಾರ್ಖಾನೆಗಳು ಸಮರ್ಪಕವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವಂಥಾದ್ದು, ಯಾವ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಕೆಲವು ಹೆಗ್ಗಣಗಳು ಸೇರಿಕೊಂಡು ಅಲ್ಲಿ ಲೂಟಿ ಮಾಡುವಂಥಾದ್ದು ಆಗಿ ನಿರಂತರವಾಗಿ ಲಾಸ್ ಆಗುತ್ತಿದೆ, ಅದನ್ನು ಸರಿಪಡಿಸುವಂಥ ಯಾವುದೇ ಒಂದು ಪರಿಸ್ಥಿತಿ ಇದೆ. ಒಂದು ಸಕ್ಕರೆ ಕಾರ್ಖಾನೆಗೆ ಒಂದು ರೀತಿಯಲ್ಲಿ ಮೂರು ಜನ ಯಜಮಾನರು. ಒಂದು ಕಡೆ ಒಬ್ಬ ಡೆಪ್ಯುಟಿ ಕಮೀಷನರ್ ನೋಡಿಕೊಳ್ಳುತ್ತಾನೆ. ಆ ಸೊಸೈಟಿ ಕಡೆಯಿಂದ ಒಬ್ಬ ಎಂ.ಡಿ. ಅಂದರೆ ಮ್ಯಾನೇಜಿಂಗ್ ಡೈರೆಕ್ಟರ್ ಒಬ್ಬರನ್ನು ಹಾಕುತ್ತೀರಿ. ಇವರಿಬ್ಬರ ಮೇಲೆ ಏನೂ ಕಂಟ್ರೋಲ್ ಇಲ್ಲದೇ ಇರುವಂಥ ಒಬ್ಬರು ಸಕ್ಕರೆ ಸಚಿವರು ಇರುತ್ತಾರೆ. ನಾವು

ಸಕ್ಕರೆ ಸಚಿವರನ್ನು ಭೇಟಿ ಮಾಡಿದರೆ ಯಡಿಯೂರಪ್ಪನವರೇ, ನಮ್ಮದು ಏನೂ ನಿಯಂತ್ರಣ ಇಲ್ಲ ಎಂದು ಅದಕ್ಕೆ ನಾನು ಹೇಳುವಂಥಾದ್ದು, ಇವೆಲ್ಲವನ್ನೂ ಮಾನಿಟರ ಮಾಡುವುದಕ್ಕೆ ಒಂದು ವಿಶೇಷವಾದಂಥ ನಿಮ್ಮ ಸರ್ಕಾರದ ಕಂಟ್ರೋಲ್‌ಗೆ ಬರುವಂಥ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಿದೆಯೇ ಸಹಕಾರಿ ಸಂಘಗಳಲ್ಲಿ ಈ ರೀತಿ ಲೂಟಿ ಮಾಡಿದರೂ ಸಹ ಸಂಬಂಧಪಟ್ಟ ಅಧಿಕಾರಿ ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು? ನಿಮಗೆ ಅಗತ್ಯವಿದ್ದಾಗ ಅಲ್ಲಿರುವಂಥ ಎಂ.ಡಿ.ಗಳನ್ನು ಬದಲಾವಣೆ ಮಾಡಿಕೊಂಡು ರಾಜಕೀಯ ತೀಟೆಯನ್ನು ತೀರಿಸಿಕೊಳ್ಳುವಂಥ ಒಂದು ಪರಿಸ್ಥಿತಿಯನ್ನು ಇವತ್ತು ನಾವು ಕಾಣುತ್ತಿದ್ದೇವೆ. ಇದನ್ನು ಸರಿಪಡಿಸುವುದಕ್ಕೆ ನಿಮ್ಮಿಂದ ಏನಾದರೂ ಸಾಧ್ಯವಿದೆಯೇ? ಈ ಕಡೆ ಸರ್ಕಾರದಿಂದ ನಿಶ್ಚಿತವಾದಂಥ ಕೆಲವು ಉತ್ತರವನ್ನು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಕೆಲವು ಶುಗರ್ ಫ್ಯಾಕ್ಟರಿಗಳಲ್ಲಿ, ಪರ್ಟಿಕ್ಯುಲರ್‌ಲಿ ಕೋ-ಅಪರೇಟೀವ್ ಶುಗರ್ ಫ್ಯಾಕ್ಟರಿಗಳಲ್ಲಿ ಎಗ್ಸಿಸ್ಟಿರಿಗೆ ಕೆಪಾಸಿಟಿ ಯೂಟಿಲೈಸೇಷನ್ ಏನಿದೆ, ಅದನ್ನೇ ಪೂರ್ಣವಾಗಿ ಉಪಯೋಗಿಸುತ್ತಿಲ್ಲ ಎನ್ನುವಂಥ ಆಪಾದನೆ ಕೂಡ ಇದೆ. ಅದರ ಬಗ್ಗೆ ವಿವರ ಏನಾದರೂ ನಿಮ್ಮ ಹತ್ತಿರ ಇದೆಯೇ? ಕಬ್ಬು ಅರೆಯದೇ ಇರುವುದಕ್ಕೆ ಸರ್ಪ್ಲಸ್ ಕೇನ್ ಆಗಿದೆ ಎಂದು ಒಂದು ಕಡೆ ಹೇಳುತ್ತಾರೆ, ಕೆಲವು ಕಡೆಗೆ ಎಗ್ಸಿಸ್ಟಿಂಗ್ ಸೀಲಿಂಗ್ ಅವರು ಏನು ಫಿಕ್ಸ್ ಮಾಡಿದ್ದಾರೆ. ಆ ಕೆಪಾಸಿಟಿಯನ್ನೇ ಅವರು ಯೂಟಿಲೈಸ್ ಮಾಡುತ್ತಿಲ್ಲ. ಅಂಡರ್ ಯೂಟಿಲೈಸೇಷನ್ ಆಫ್ ದಿ ಕೆಪಾಸಿಟಿ ಎಂದು ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯವರು ರಿಪೋರ್ಟ್ ಕೊಟ್ಟಿರಬೇಕು ಎಂದು ಕಾಣುತ್ತದೆ. ಅದರ ಡೀಟೈಲ್ಸ್ ಇದ್ದರೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಎರಡು ಸಂಗತಿ ಹೇಳಿದೆ. ಒಂದು ಈಗಿರುವಂಥ ಸಕ್ಕರೆ ಕಾರ್ಖಾನೆಗಳಲ್ಲಿ ಯಾವ ಕೆಪಾಸಿಟಿ ಇದೆ, ಆ ಕಬ್ಬನ್ನು ಅರೆಯದೇ ಇರುವ ಒಂದು ಪರಿಸ್ಥಿತಿ. ಯಾವುದೇ ಸಕ್ಕರೆ ಕಾರ್ಖಾನೆ ಇರಲಿ. ಎರಡು ಸಂಗತಿ ಹೇಳಿದೆ. ಒಂದು, ಅರೆಯದೇ ಇರುವುದಕ್ಕೆ ಕಾರಣವೇನು? ಮೇ ಅಥವಾ ಜೂನ್ ತಿಂಗಳಲ್ಲಿ ಕಬ್ಬನ್ನು ಅರೆಯುವಂಥ ಕೆಲಸ ಪ್ರಾರಂಭವಾಗಬೇಕು. ನಾನು ಪ್ರತಿಯೊಂದು ಕಾರ್ಖಾನೆಯಲ್ಲಿ ಯಾವ ಯಾವ ಡೇಟ್‌ನಲ್ಲಿ ಅವರು ಪ್ರಾರಂಭ ಮಾಡಿದರು ಎಂದು ಹೇಳಿದೆ. ಅಂದರೆ ಮೂರು ತಿಂಗಳು ತಡವಾಗಿ ಕಬ್ಬನ್ನು ಅರೆಯುವಂಥ ಕೆಲಸ ಪ್ರಾರಂಭ ಮಾಡಿದರು. ನಾವು ಮುಂಚೆಯೇ ಒತ್ತಾಯ ತಂದೆವು. ನಮ್ಮಲ್ಲಿ ವಿಶೇಷವಾಗಿ ಇದಕ್ಕಾಗಿ ಒಬ್ಬ ಸಚಿವರು ಇದ್ದಾರೆ ಎಂದು ಹೇಳಿದಮೇಲೆ ಯಾವ ತಿಂಗಳಲ್ಲಿ ಕಬ್ಬು ಕಟಾವು ಆಗಬೇಕು, ಯಾವ ತಿಂಗಳಿಂದ ಕಬ್ಬನ್ನು ಅರೆಯುವಂಥ ಕೆಲಸ ಪ್ರಾರಂಭವಾಗಬೇಕು. ಇದಕ್ಕೆ ನಿಯಂತ್ರಣ ಬೇಕಲ್ಲ! ನಾವೇ ಶಿವಮೊಗ್ಗ ಜಿಲ್ಲೆಯ ಬಗ್ಗೆ ಸತ್ಯಾಗ್ರಹ ಮಾಡಿದೆವು. ಚಳುವಳಿ ಮಾಡಿದೆವು. ನಾನು ಇಲ್ಲಿ ಹಾನ್‌ಗಲ್ ಬಗ್ಗೆ ಉದಾಹರಣೆಯನ್ನು ಕೊಡುತ್ತಿದ್ದೇನೆ. ಅಲ್ಲಿರುವಂಥ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ 3 ಲಕ್ಷ 11 ಸಾವಿರ ಟನ್ ಕಬ್ಬನ್ನು ಅರೆಯುವುದಕ್ಕೆ ಒಪ್ಪಂದ ಮಾಡಿಕೊಂಡಿದೆ. ಒಂದು ವಾರದ ಹಿಂದೆ ನಾನು ಅಲ್ಲಿಗೆ ಹೋಗಿ ಬಂದೆ. ಈವರೆಗೆ ಕಾರ್ಖಾನೆ ಕೇವಲ 67 ಸಾವಿರ ಟನ್ ಕಬ್ಬನ್ನು ಅರೆದಿದೆ. ಇನ್ನೊಂದು 75 ದಿವಸ ಆ ಕಾರ್ಖಾನೆ ಕೇವಲ 67 ಸಾವಿರ ಟನ್ ಕಬ್ಬನ್ನು ಅರೆದಿದೆ. ಇನ್ನೊಂದು 75 ದಿವಸ ಆ ಕಾರ್ಖಾನೆ ಕೆಲಸ ಮಾಡಿದರೂ ಒಂದು ದಿವಸಕ್ಕೆ ಎರಡು ಸಾವಿರ ಟನ್‌ಕಬ್ಬನ್ನು ಅರೆಯುತ್ತಾರೆ ಎಂದರೂ 75 ದಿವಸದಲ್ಲಿ 2 ಲಕ್ಷ ಟನ್ ಕಬ್ಬನ್ನು ಅರೆಯುವುದಕ್ಕಾಗುವುದಿಲ್ಲ. ಅಂದರೆ ಹಾನ್‌ಗಲ್‌ನಲ್ಲಿ ಒಂದೇ ಕಡೆ ಸುಮಾರು ಒಂದೂವರೆ, ಎರಡು ಲಕ್ಷ ಟನ್‌ಕಬ್ಬು ಅರೆಯುವುದು ಅಲ್ಲಿ ಒಣಗಿಹೋಗುವಂಥ ಒಂದು ಪರಿಸ್ಥಿತಿ ಇದೆ. ಎರಡು, ನಮ್ಮಲ್ಲಿರುವಂಥ ಸಕ್ಕರೆ ಕಾರ್ಖಾನೆಗಳೆಲ್ಲವೂ ಸಹ ನೂರು ಪರ್ಸೆಂಟ್ ಕ್ರಷ್ ಮಾಡುವಂಥ ಕೆಲಸ ಮಾಡಿದರೂ ಸಹಾ.....

ಶ್ರೀ ಸಿ.ಎಂ. ಉದಾಸಿ : ಮಾನ್ಯ ಯಡಿಯೂರಪ್ಪನವರೇ, ಒಂದು ನಿಮಿಷ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಮೇಲೆ ಮಾತನಾಡಿ. ನಾನು ಯೀಲ್ಡ್ ಆಗಿಲ್ಲ, ನಾನು ಮಾತನಾಡಿದ ಮೇಲೆ ಮಾತನಾಡಿ.

Mr. SPEAKER : He is a Co-operative.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ನಮ್ಮ ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆ ಈವರೆಗೆ ಕಬ್ಬು ಅರೆಯುವುದನ್ನು 67 ಸಾವಿರ ಟನ್ ಕಬ್ಬನ್ನು ಅರೆಯುವುದಕ್ಕೆ ಸಾಧ್ಯತೆ ಆಗಿದೆ. ಈ ವರ್ಷದ ಅದರ ನವೀಕರಣಕ್ಕಾಗಿ ನಾವು ಕ್ರಮ ತೆಗೆದುಕೊಂಡಿರುವುದರಿಂದ ಸುಮಾರು ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡಿ ನವೀಕರಣ ಮಾಡುತ್ತಿರುವುದರಿಂದ ಡಿಸೆಂಬರ್ ತಿಂಗಳ 7ನೇ ತಾರೀಖಿನಿಂದ ಪ್ರಾರಂಭ ಮಾಡಿದ್ದೇವೆ. ಇವತ್ತು ಮತ್ತೆ ಕ್ರಷಿಂಗ್‌ನ್ನು ಪ್ರಾರಂಭ ಮಾಡಿರುವುದರಿಂದ ಇನ್ನೂ ಒಂದೂವರೆಯಿಂದ ಎರಡು ಲಕ್ಷ ಟನ್ ಕಬ್ಬು ಅರೆಯುವಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ ಈ ವರ್ಷ ನಮ್ಮಲ್ಲಿ ಕಬ್ಬು 25 ಸಾವಿರದಿಂದ 30 ಸಾವಿರ ಟನ್ ಹೆಚ್ಚಿಗೆ ಆಗಬಹುದೇ ಹೊರತು ಅದಕ್ಕಿಂತ ಹೆಚ್ಚಿಗೆ ಕಬ್ಬು ಆಗುವುದಿಲ್ಲ, ಈ ಕಬ್ಬು ಹೆಚ್ಚಿಗೆ ಆಗಿರುವುದು ಎಲ್ಲಾ ಕಾರ್ಖಾನೆಗಳಲ್ಲಿಯೂ ಇದೆಯೇ ಹೊರತು ಕೇವಲ ಹಾವೇರಿ ಸಹಕಾರ ಸಕ್ಕರೆ ಕಾರ್ಖಾನೆಗಳಿಲ್ಲ, ನಾವು ಪೂರ್ಣ ಪ್ರಮಾಣದ ಕಬ್ಬನ್ನು ಅರೆಯುತ್ತೇವೆ. ಹಿಂದಿನ ವರ್ಷ ನಾವು 2 ಲಕ್ಷ 54 ಸಾವಿರ ಟನ್ ಕಬ್ಬನ್ನು ಅರೆದಿದ್ದೇವೆ. ಅತೀ ಹೆಚ್ಚು ಕಬ್ಬು ಅರೆದಿದ್ದೇವೆ. ಹಿಂದಿನ ವರ್ಷ 2 ಲಕ್ಷ 54 ಸಾವಿರ ಟನ್ ಕಬ್ಬು ಅರೆದಿದ್ದೇವೆ. ಈ ವರ್ಷವೂ ಸಹಿತ 2 ಲಕ್ಷ 75 ಸಾವಿರ ಟನ್ ಕಬ್ಬನ್ನು ಅರೆಯುವುದಕ್ಕೆ ಸಾಧ್ಯತೆಯಾಗುತ್ತದೆ. ಆದರೆ ಈ ಸಲ 25 ಸಾವಿರದಿಂದ 30 ಸಾವಿರ ಟನ್ ಕಬ್ಬು ಅಲ್ಲಿ ಬೀಜಕ್ಕೆ ಮತ್ತು ಬೆಲ್ಲಕ್ಕೆ ಹೋಗುವ ಸಾಧ್ಯತೆ ಇದೆ. ಹೀಗಿರಬೇಕಾದರೆ ಬೆಲ್ಲದ ಮಾರುಕಟ್ಟೆ ಬೆಲೆ ಕಡಿಮೆಯಾದ್ದರಿಂದ ಬಹುತೇಕ ರೈತರೆಲ್ಲಾ ಕಬ್ಬನ್ನು ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿಯೇ ಅರೆಯಬೇಕು ಎಂದು ಇಷ್ಟಪಡುತ್ತಿರುವುದರಿಂದ ಈ ಸಮಸ್ಯೆಯಾಗಿದೆ ಹೊರತು ಇಲ್ಲದಿದ್ದರೆ ಈ ಕಬ್ಬನ್ನು ಈಗಾಗಲೇ ಮಹಾರಾಷ್ಟ್ರಕ್ಕೆ ಕಳುಹಿಸುವುದಕ್ಕೆ ಸಾಧ್ಯತೆಯಾಗುತ್ತಿತ್ತು. ಮಹಾರಾಷ್ಟ್ರದಲ್ಲಿ ಹಿಂದಿನ ವರ್ಷವೂ ಕಬ್ಬು ಹೋಗಿದೆ. ಈ ವರ್ಷವೂ ಕಬ್ಬು ಹೋಗಬೇಕಾಗಿತ್ತು. ಅಲ್ಲಿ ಮಹಾರಾಷ್ಟ್ರದವರು ಆತಂಕ ಮಾಡಿದ್ದರಿಂದ ಈ ಸಮಸ್ಯೆಯಾಗಿದೆ ಎನ್ನುವುದನ್ನು ಸನ್ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ನಾವು ಇಲ್ಲಿ ಕಬ್ಬನ್ನು ಅರೆಯುತ್ತಿದ್ದೇವೆ ಎನ್ನುವುದನ್ನೂ ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಾನು ಪ್ರಾರಂಭದಲ್ಲಿಯೇ ಒಂದು ಮಾತು ಹೇಳಿದೆ. ಸರ್ಕಾರವೇ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಈ ವರ್ಷ ಕರ್ನಾಟಕ ರಾಜ್ಯದಲ್ಲಿ 210 ಲಕ್ಷ ಟನ್ ಕಬ್ಬನ್ನು ಬೆಳೆದಿದ್ದಾರೆ. ನಮ್ಮೆಲ್ಲಾ ಕಾರ್ಖಾನೆಗಳು ನೂರಕ್ಕೆ ನೂರು ಅವರು ನಿಗದಿ ಮಾಡಿರುವ ಪ್ರಮಾಣ ಕಬ್ಬನ್ನು ಕ್ರಷ್ ಮಾಡಿದರೂ ಸಹ ಅದು ಯಾವುದೇ ಕಾರಣಕ್ಕೆ 125 ಲಕ್ಷ ಟನ್ ಕಬ್ಬನ್ನು ಅರೆಯುವಂಥ ಸ್ಥಿತಿಯಲ್ಲಿ ಇಲ್ಲ, ಅವರೇ ಅಂಕಿಅಂಶ ಕೊಟ್ಟಿರುವ ಪ್ರಕಾರ ಸುಮಾರು 85 ಲಕ್ಷ ಟನ್ ಕಬ್ಬು ಈ ರಾಜ್ಯದಲ್ಲಿ ಬರುವಂಥ ದಿವಸದಲ್ಲಿ ನಮ್ಮ ಕಾರ್ಖಾನೆಗಳು ಅರೆಯುವುದಕ್ಕೆ ಸಾಧ್ಯವಿಲ್ಲ, ಈ ರೀತಿ ಪರಿಸ್ಥಿತಿ ಇರಬೇಕಾದರೆ ಇಷ್ಟು ವರ್ಷ ಹೇಗಾಯಿತು? ಇಷ್ಟು ವರ್ಷ ಬಹುತೇಕ ಬೆಳಗಾಂ ಭಾಗದ ಸುತ್ತಮುತ್ತ ಮಹಾರಾಷ್ಟ್ರದ ಬಾರ್ಡರ್‌ನಲ್ಲಿ ಗುಲ್ಬರ್ಗಾ, ಬೀದರ್ ಈ ಭಾಗದಲ್ಲಿ ಪಕ್ಕದ ರಾಜ್ಯಗಳಲ್ಲಿ ಬೇಡಿಕೆ ಇತ್ತು, ಕಬ್ಬು ಕೊಡುತ್ತಿದ್ದರು, ಅರೆಯುತ್ತಿದ್ದರು. ದೊಡ್ಡ ಪ್ರಮಾಣದಲ್ಲಿ ಬೆಲ್ಲವನ್ನು ಮಾಡುವಂಥ ಒಂದು ಪ್ರಯತ್ನವನ್ನು ಮಾಡುತ್ತಿದ್ದರು. ಈ ಸರ್ಕಾರದ ಕಪಿಮುಷ್ಟಿಗೆ

ನಾನು ಬೀದರ್ ಜಿಲ್ಲೆಯಲ್ಲಿ ಒಂದು ಉದಾಹರಣೆಯನ್ನು ಕೊಟ್ಟೆ. ಮಹಾರಾಷ್ಟ್ರಕ್ಕೆ ಕಬ್ಬನ್ನು ರೆಗ್ಯುಲರ್ ಆಗಿ ತೆಗೆದುಕೊಂಡು ಹೋಗುತ್ತಿದ್ದರು. ಹೋದವರ್ಷ ಯಾವುದೇ ಕಾರಣಕ್ಕೆ ಮಹಾರಾಷ್ಟ್ರಕ್ಕೆ ಕಬ್ಬನ್ನು ಕೊಡಕೂಡದು ಎಂದು ಹೇಳಿ ಜಿಲ್ಲಾಧಿಕಾರಿಗಳು ಸುತ್ತೋಲೆಯನ್ನು ಹೊರಡಿಸಿದರು. ಮಹಾರಾಷ್ಟ್ರ ಸರ್ಕಾರ, ಇವತ್ತು ನಮಗೆ ಕಬ್ಬು ಬೇಕಾದಾಗ ನೀವು ಸುತ್ತೋಲೆಯನ್ನು ಹೊರಡಿಸಿ ಕಬ್ಬು ಕಳುಹಿಸಿಕೊಡಲಿಲ್ಲ ಎಂದು ಅವರದೇ ಆದ ಕಬ್ಬು ಜಾಸ್ತಿ ಇದೆ ಎಂದು ಹೇಳಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ, ಯಾವುದೇ ಕಾರಣಕ್ಕೆ ಮಹಾರಾಷ್ಟ್ರದ ಗಡಿಯಲ್ಲಿರುವಂಥ ನಮ್ಮ ರಾಜ್ಯದ ಕಬ್ಬನ್ನು ಕೊಳ್ಳಬಾರದು ಎಂದು ಆದೇಶವನ್ನು ಹೊರಡಿಸಿದ್ದಾರೆ. ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಮಹಾರಾಷ್ಟ್ರದ ಆರು ಕಾರ್ಖಾನೆಯವರು....

ಶ್ರೀ ಗೋವಿಂದಪ್ಪ ಕಾರ್‌ಜೋಳ್ : ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು : ಮಾನ್ಯ ಕಾರ್‌ಜೋಳ್‌ರವರೇ, ಹಾಗೆ ಮಾತನಾಡುವುದಕ್ಕೆ ಬರುವುದಿಲ್ಲ. ಅವರು ವಿರೋಧ ಪಕ್ಷದ ನಾಯಕರು.

ಶ್ರೀ ಗೋವಿಂದಪ್ಪ ಕಾರ್‌ಜೋಳ್ : ಒಂದೇ ನಿಮಿಷದಲ್ಲಿ ಹೇಳುತ್ತೇನೆ. ಉಳಿದದ್ದು ಏನೂ ಇಲ್ಲ.

ಅಧ್ಯಕ್ಷರು : ಆಯಿತು. ಅವರು ಹೊಸ ಸದಸ್ಯರು. ಯೀಲ್ಡ್ ಆಗಿ. He is an young man.

ಶ್ರೀ ಗೋವಿಂದಪ್ಪ ಕಾರ್‌ಜೋಳ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಸರ್ಕಾರ ಮಹಾರಾಷ್ಟ್ರಕ್ಕೆ ಕಬ್ಬು ಕಳುಹಿಸಬಾರದು ಎಂದು ಹೇಳಿ ಸುತ್ತೋಲೆ ಹೊರಡಿಸಿದರು, ಜಿಲ್ಲಾಧಿಕಾರಿಗಳು ಆದೇಶ ಮಾಡಿದರು ಎಂದು. ಅದು ಸತ್ಯಕ್ಕೆ ದೂರವಾದ ಸಂಗತಿ. ಸರ್ಕಾರ ಕಳೆದವರ್ಷ ರೈತರು ತಾವು ಬೆಳೆದಂಥ ಕಬ್ಬನ್ನು ಬೇಕಾದ ಕಾರ್ಖಾನೆಗೆ ಕಳುಹಿಸಬಹುದು, ಹಾಗೆ ಕಳುಹಿಸುವುದಕ್ಕೆ ಪರವಾನಿಗೆ ನೀಡುವಂಥ ಅಧಿಕಾರವನ್ನು ತಹಶೀಲ್ದಾರ್‌ರವರಿಗೆ ಕೊಟ್ಟಿದ್ದು ಸರ್ಕಾರದ ಆದೇಶ ಇದೆ. ಅದಕ್ಕಾಗಿ ದಯವಿಟ್ಟು ಹಿರಿಯ ಸದಸ್ಯರ ಗಮನಕ್ಕೆ ತರುತ್ತೇನೆ, ಸರ್ಕಾರ ಆದೇಶ ಹೊರಡಿಸಿದೆ, ರೈತರು ತಾವು ಬೆಳೆದಂಥ ಕಬ್ಬನ್ನು ಬೇಕಾದ ಕಾರ್ಖಾನೆಗೆ ಕಳುಹಿಸಬಹುದು ಮತ್ತು ಪರವಾನಿಗೆ ಕೊಡುವಂಥ ಅಧಿಕಾರವನ್ನು ಆಯಾ ತಹಶೀಲ್ದಾರ್‌ರವರಿಗೇ ಕೊಟ್ಟಿದ್ದಾರೆ. ಇದನ್ನು ಸದನದ ಗಮನಕ್ಕೆ ತರುತ್ತೇನೆ, ತಮ್ಮ ಗಮನಕ್ಕೂ ತರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಅವರ ಹತ್ತಿರ ಮಾಹಿತಿ ಇಲ್ಲದಿದ್ದರೆ ಬಹುಶಃ ಮುಖ್ಯಮಂತ್ರಿಗಳು ಉತ್ತರ ಕೊಡುವ ಕಾಲದಲ್ಲಿ ಹೇಳಲಿ. ನಾನು ಬಹಳ . ಸ್ಪಷ್ಟವಾಗಿ ಸರ್ಕಾರಿ ಆಜ್ಞೆಯನ್ನು ಇಟ್ಟುಕೊಂಡು ಹೇಳುತ್ತಿದ್ದೇನೆ. ಜಿಲ್ಲಾಧಿಕಾರಿಗಳ ಆದೇಶವನ್ನು ಇಟ್ಟುಕೊಂಡು ಹೇಳುತ್ತಿದ್ದೇನೆ. ಬೀದರ್ ಜಿಲ್ಲೆಗೆ ನಾನು ಹೋಗಿ ಬಂದಿದ್ದೇನೆ. ಬೀದರ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಎರಡು ರೀತಿಯ ಆದೇಶಗಳನ್ನು ಹೊರಡಿಸಿದ್ದಾರೆ.

ಅಧ್ಯಕ್ಷರು : ಬಿಜಾಪುರ ಜಿಲ್ಲೆಯವರು ಕಾರ್‌ಜೋಳ್‌ರವರು.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಮಾತನಾಡುತ್ತಿದ್ದೇನೆ.

ಶ್ರೀ ಗೋವಿಂದಪ್ಪ ಕಾರ್‌ಜೋಳ್ : ಸರ್ಕಾರದ ಆದೇಶ ಇದೆ.

ಅಧ್ಯಕ್ಷರು : ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಸನ್ಮಾನ್ಯ ಸಭಾನಾಯಕರು ಇದ್ದಾರೆ, ನೀವು ಕುಳಿತುಕೊಳ್ಳಿ ಕಾರ್‌ಜೋಳ್.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಇದುವರೆಗೆ ಸುಮಾರು 70-80 ಲಕ್ಷ ಟನ್ ಕಬ್ಬನ್ನು ಮಹಾರಾಷ್ಟ್ರದಲ್ಲಿ ಮತ್ತು ತಮಿಳುನಾಡಿನಲ್ಲಿ ನಮ್ಮ ರೈತರ ಕಬ್ಬನ್ನು ಕಳುಹಿಸಿಕೊಟ್ಟು ಅರೆಯುವಂಥ ಒಂದು ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದೆವು. ಇದುವರೆಗೆ ಸರ್ಕಾರಕ್ಕೆ ಅದರ ಬಿಸಿ ತಟ್ಟಿರಲಿಲ್ಲ. ಕಾರ್ಖಾನೆಗಳನ್ನು ಇಲ್ಲಿ ಪ್ರಾರಂಭ ಮಾಡಬೇಕೆನ್ನುವಂಥ ಪ್ರಯತ್ನ ಮಾಡಲಿಲ್ಲ. ಕೇಂದ್ರ ಸರ್ಕಾರ ಅನುಮತಿ ಕೊಟ್ಟಿರುವ ಕಾರ್ಖಾನೆಗಳನ್ನು ಸಹ ಪ್ರಾರಂಭ ಮಾಡದೆಯೇ ರಾಜಕೀಯ ದೊಂಬರಾಟ ಮಾಡಿಕೊಂಡು ಕುಳಿತುಕೊಂಡರು. ಲೈಸೆನ್ಸ್ ತೆಗೆದುಕೊಂಡರು. ಯಾವ ಪಕ್ಷದವರು ಮಾಡಬೇಕು, ಯಾವ ಮುಖಂಡರ ಜೊತೆಯಲ್ಲಿ ಮಾಡಬೇಕು ಎಂದು ಹೇಳಿ ಅದನ್ನು ಹಾಗೆಯೇ ಇಟ್ಟುಕೊಂಡರು. ಎಕ್ಸ್‌ಪ್ಯಾನ್ಷನ್ ಮಾಡುವುದಕ್ಕೆ ಪರ್ಮಿಷನ್ ಸಿಕ್ಕಿದಮೇಲೂ ಸಹ ಅದರ ಕೆಲಸವೂ ತರಾತುರಿಯಲ್ಲಿ ಆಗಲಿಲ್ಲ. ಇದು ಮಾನ್ಯ ಸಕ್ಕರೆ ಸಚಿವರಿಗೆ ಗೊತ್ತಿದೆ. ಬೀದರ್ ಒಂದೇ ಸಕ್ಕರೆ ಕಾರ್ಖಾನೆಯಲ್ಲಿ ಐದಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ಮೇಲೂ ಸಹ ಆ ಒಂದು ಕೆಪಾಸಿಟಿಯನ್ನು ಜಾಸ್ತಿ ಮಾಡಿ ಕಬ್ಬನ್ನು ಅರೆಯಬೇಕಾಗಿತ್ತು. ಅದು ಆಗದೇ ಹೋದವರ್ಷ ಆರು ಕೋಟಿಯಷ್ಟು ಒಂದೇ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರು ಲುಕ್ಸಾನು ಅನುಭವಿಸುವಂಥ ಒಂದು ಪರಿಸ್ಥಿತಿ ಬಂತು. ಮೂರು ನಾಲ್ಕು ರೀತಿಯ ಸಮಸ್ಯೆ. ಒಂದು ನಾವು ಬೆಲ್ಲವನ್ನು ಮಾಡುತ್ತೇವೆ ಎಂದರೆ ಅನುಮತಿ ಕೊಡದೇ ಇದ್ದಂಥದ್ದು. ನಾವು ಹೊರ ರಾಜ್ಯಗಳಿಗೆ ಕಬ್ಬನ್ನು ತೆಗೆದುಕೊಂಡು ಹೋಗುತ್ತೇವೆ ಎಂದರೆ ಜಿಲ್ಲಾಧಿಕಾರಿಗಳು ಸುತ್ತೋಲೆಯನ್ನು ಹೊರಡಿಸಿ ಹೊರರಾಜ್ಯಗಳಲ್ಲಿ ಕಬ್ಬು ತೆಗೆದುಕೊಂಡು ಹೋಗುವುದನ್ನು ತಡೆದಂಥದ್ದು, ಮೂರನೆಯದು, ಈ ರಾಜ್ಯ ಸರ್ಕಾರದ ವೈಫಲ್ಯತೆಯಿಂದ ಅಗತ್ಯ ಇರುವಂಥ ಸಕ್ಕರೆ ಕಾರ್ಖಾನೆಗಳನ್ನು ತೆಗೆಸಿ ಆ ಕಬ್ಬನ್ನು ಅರೆಯುವಂಥ ವ್ಯವಸ್ಥೆ ಮಾಡದೇ ಇರುವಂಥದ್ದು ಮತ್ತು ಇರುವಂಥ ಕಾರ್ಖಾನೆಗಳಲ್ಲೂ ಸಹ ಆ ಕೆಪಾಸಿಟಿ ಪೂರ್ಣವಾಗಿ ಕಬ್ಬನ್ನು ಅರೆಯುವುದಕ್ಕೆ ಯಾವ ದಿನದಲ್ಲಿ ಪ್ರಾರಂಭವಾಗಬೇಕು, ಆ ಒಂದು ತಿಂಗಳಲ್ಲಿ ಪ್ರಾರಂಭವಾಗಿ ಮೇ ಎಂಡ್‌ನಿಂದ ಅಥವಾ ಜೂನ್ ಫಸ್ಟ್ ವೀಕ್‌ನಿಂದ ಪ್ರಾರಂಭವಾಗಿ ಮುಂದಿನ ವರ್ಷ ಮೇ ಕೊನೆಯವರೆಗೆ ನಿರಂತರವಾಗಿ ಕಬ್ಬನ್ನು ಅರೆಯುವಂಥ ಕೆಲಸ ಮಾಡಿದ್ದರೆ ಇನ್ನೂ ಅರ್ಧ ಭಾಗ ಸಮಸ್ಯೆಗಳನ್ನು ಬಗೆಹರಿಸಬಹುದಾಗಿತ್ತು.

ಸರ್ಕಾರ ಕೈಕಟ್ಟಿಕೊಂಡು ಕುಳಿತುಕೊಂಡು ಬಹುಶಃ ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಧ್ಯ ಸದನದ ಕಾರ್ಯಕಲಾಪ ನಡೆಯಲಿಲ್ಲ. ಇವತ್ತು ಪತ್ರಿಕೆಯಲ್ಲಿ ಮುಖಪುಟದಲ್ಲಿ ಬರೆದರು. ದೊಡ್ಡ ಹೋರಾಟಗಳಾಯಿತು. ಸತ್ಯಾಗ್ರಹ ಆಯಿತು. ಚಳುವಳಿ ಆಯಿತು.ಆದರೆ ಇನ್ನೊಂದು ತಿಂಗಳೊಳಗಾಗಿ ಈ ಕಬ್ಬು ಪೂರ್ಣ ಕಟಾವು ಆಗದಿದ್ದರೆ ರೈತ ಬೀದಿ ಪಾಲಾಗುವಂಥ ಒಂದು ಪರಿಸ್ಥಿತಿ ಬಂದಿರಬೇಕಾದರೆ ಕಟಾವು ಮಾಡಿದಂಥ ರೈತರ ಕಬ್ಬನ್ನು ಬೇರೆ ಕಡೆ ಕೊಂಡು ಅದನ್ನು ಹಣವನ್ನು ಪಡೆಯುವಂಥ ವ್ಯವಸ್ಥೆ ಮಾಡದೇ ಇದ್ದಮೇಲೆ ಈ ಸರ್ಕಾರ ರೈತನ ಪಾಲಿಗೆ ಬದುಕಿದೆಯೇ ಎಂದು ನಾವು ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಎರಡನೆಯದು ಇವತ್ತು ಯಾವ ರೈತ ಕಬ್ಬನ್ನು ಕೊಟ್ಟು ಒಂದು ವರ್ಷವಾಗಿದೆ, ಅದಕ್ಕೆ ಅರ್ಧ ಭಾಗ, ಮುಕ್ಕಾಲು ಭಾಗ ಹಣವನ್ನು ಕೊಟ್ಟು ಸುಮಾರು 70-80 ಕೋಟಿ ರೂಪಾಯಿ ರೈತನಿಗೆ ಸಿಕ್ಕಬೇಕಾದ ಹಣ ಈ ನಿಮಿಷದವರೆಗೆ ಪಾವತಿಯಾಗಿಲ್ಲ. ಅದು ಹೋದವರ್ಷ ಹಣ ಈ ವರ್ಷ ಕಬ್ಬು ಒಣಗುತ್ತಿದೆ. ಅದಕ್ಕೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿರುವಂಥದ್ದು ನೀವು ಹೇಗೆ ವ್ಯವಸ್ಥೆ ಮಾಡಿದ್ದೀರಿ? ಸರ್ಕಾರದವರು ಯಾರನ್ನು

ಭೇಟಿ ಮಾಡಿದ್ದೀರಿ? ಅಲ್‌ಟರ್‌ನೇಟಿವ್ ವ್ಯವಸ್ಥೆ ಏನು ಮಾಡಿದ್ದೀರಿ? ಇದರ ಬಗ್ಗೆ ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಸಕ್ಕರೆ ಕಾರ್ಖಾನೆಗೆ ನಿರಂತರವಾಗಿ ತಡೆರಹಿತ ವಿದ್ಯುತನ್ನು ಸರಬರಾಜು ಮಾಡುವಂಥ ಕೆಲಸ ಮಾಡಲಿಲ್ಲ. ಯಾರಿಗೆ ಕೇಂದ್ರ ಸರ್ಕಾರದ ಮಂಜೂರಾತಿ ಸಿಕ್ಕಿದೆ, ಆ ಕಾರ್ಖಾನೆಗಳನ್ನು ಪ್ರಾರಂಭವಾಗುವುದಕ್ಕೇ ಬಿಡಲಿಲ್ಲ. ಯಾರು ಮುಖಂಡರಾಗಿ ಬಂದರೋ ಆ ಪಕ್ಷ ಈ ಪಕ್ಷ ತಮಗೆ ಬೇಕಾದಂಥ ಊರುಗಳಿಗೆ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಿಕೊಳ್ಳುವಂಥ ಒಂದು ಪ್ರಯತ್ನ ಮಾಡಿದರೇ ವಿನಃ ಲೈಸೆನ್ಸ್ ತೆಗೆದುಕೊಂಡು ಮನೆಯಲ್ಲಿ ಕುಳಿತುಕೊಂಡರೇ ವಿನಃ ಆ ಕಾರ್ಖಾನೆಯನ್ನು ಪ್ರಾರಂಭ ಮಾಡಿ ರೈತರನ್ನು ಉಳಿಸುವ ಪ್ರಯತ್ನವಾಗಲಿಲ್ಲ, ರೈತ ಬೆಳೆದಂಥ ಬೆಳೆಗೆ ಯೋಗ್ಯ ಬೆಲೆ ಕೊಡುವಂಥದ್ದು, ರೈತ ಬೆಳದಂಥ ಕಬ್ಬು ಸಮಯಕ್ಕೆ ಸರಿಯಾಗಿ ಕಟಾವು ಆಗಿ ಅವನು ಹಣವನ್ನು ಪಡೆಯುವಂಥ ವ್ಯವಸ್ಥೆ ಮಾಡುವಂಥ ಒಂದು ನೈತಿಕ ಜವಾಬ್ದಾರಿ ಈ ರಾಜ್ಯಸರ್ಕಾರದ ಮೇಲೆ ಇದೆ ಎಂದು ನಾನಾದರೂ ಭಾವಿಸುತ್ತೇನೆ. ಆದ್ದರಿಂದ ಇವತ್ತು ಸುಮಾರು 85 ಲಕ್ಷ ಟನ್ ಕಬ್ಬು ಏನು ಉಳಿಯುತ್ತಿದೆ, ಈ ಕಬ್ಬನ್ನು ಅರೆಯುವುದಕ್ಕೆ ನೀವೇನು ವ್ಯವಸ್ಥೆಯನ್ನು ಮಾಡುತ್ತೀರಿ? ಅವನು ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗುವುದಕ್ಕೆ ಸಿದ್ಧ ಇದ್ದಾನೆ. ಬಹುಶಃ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ಮಾಹಿತಿಯನ್ನು ನೀವು ತರಿಸಿಕೊಳ್ಳಬಹುದು. ಇವತ್ತು ಕೆಲವು ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ತಾವು ಬೇನಾಮ ಹೆಸರಿನಲ್ಲಿ ಒಪ್ಪಂದವನ್ನು ಮಾಡಿಕೊಂಡು ರೈತರಿಂದ 200-250 ರೂಪಾಯಿ ಟನ್ ಕಬ್ಬಿಗೆ ಕಡಿಮೆ ಪಡೆದು ಅವನು ಕಬ್ಬನ್ನು ಕ್ರಷ್ ಮಾಡುವುದಕ್ಕೆ ಕೊಟ್ಟಿರುವ ನೂರಾರು ಉದಾಹರಣೆಗಳು ಬೀದರ್ ಜಿಲ್ಲೆಯಲ್ಲಿ ಇವೆ. ಈ ಬಗ್ಗೆ ತನಿಖೆ ಮಾಡಿಸಿದಾಗ ಸಾಕ್ಷಿ ಸಹ ಅಲ್ಲಿದ್ದ ಮ್ಯಾನೇಜ್‌ಮೆಂಟ್‌ನವರು ಸಿಕ್ಕಿಬಿದ್ದಿದ್ದಾರೆ. ಈ ರೀತಿ ನಿರಂತರವಾಗಿ ಈ ಸಕ್ಕರೆ ಕಾರ್ಖಾನೆಗಳವರು ತಿಮಿಂಗಿಲಗಳಂತೆ ಲೂಟಿ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆಯೇ ಹೊರತು ರೈತನ ಹಿತವನ್ನು ಸಂಪೂರ್ಣ ಮರೆತಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ಇನ್ನೂ ಅನೇಕ ಜನರು ಈ ಒಂದುವಿಷಯದ ಸೂಚನೆಗೆ ಸಹಿ ಮಾಡಿರುವವರು ಕೆಲವು ವಿಷಯಗಳನ್ನು ಬೆಳಕಿಗೆ ತರಬಹುದು. ನಾನು ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತಿದ್ದೇನೆ, ಇನ್ನು 15-20 ದಿವಸಗಳ ಒಳಗಾಗಿ ಇದಕ್ಕೆ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಿ ಈ ಕಬ್ಬನ್ನು ಕ್ರಷ್ ಮಾಡುವಂಥ ಒಂದು ವ್ಯವಸ್ಥೆ ಮಾಡಿ ಹಣ ಸಿಗುವಂಥ ವ್ಯವಸ್ಥೆ ಮಾಡಬೇಕು. ಹೋದ ವರ್ಷ ಯಾರು ಕಬ್ಬನ್ನು ಕಾರ್ಖಾನೆಗಳಿಗೆ ಕೊಟ್ಟಿದ್ದಾರೆ, ಹಣ ಪಾವತಿಯಾಗಿಲ್ಲ, ಆ ಕಾರ್ಖಾನೆಗಳಿಂದ ಅವನಿಗೆ ಹಣವನ್ನು ಪಾವತಿ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕು. ಅವನಿಗೆ ಯಾವ ತಪ್ಪಿಲ್ಲದೇ ಕಬ್ಬನ್ನು ಕ್ರಷ್ ಮಾಡುವಂಥ ವ್ಯವಸ್ಥೆಯನ್ನು ನೀವು ಮಾಡುವುದಕ್ಕಾಗದಿದ್ದರೆ ಮಹಾರಾಷ್ಟ್ರದ ಸರ್ಕಾರ ಯಾವ ರೀತಿ ಹೋದವರ್ಷ ಅದನ್ನು ಮೇವಾಗಿ ಖರೀದಿ ಮಾಡಿ ಟನ್‌ಗೆ 450 ರೂಪಾಯಿ ಪರಿಹಾರವನ್ನು ಕೊಟ್ಟಿರೋ ಆ ರೀತಿ ಒಂದು ಪರಿಹಾರವನ್ನು ಕೊಡುವಂಥ ಒಂದು ಜವಾಬ್ದಾರಿಯನ್ನಾದರೂ ಸರ್ಕಾರ ನೀವು ವಹಿಸಿಕೊಳ್ಳಬೇಕು.

ಈ ಒಂದು ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಬಹುಶಃ ಸರ್ಕಾರ ಜನ ಬೀದಿಗೆ ಇಳಿಯುವುದಕ್ಕೆ ಮುಂಚೆ, ರೈತ ಬೀದಿ ಪಾಲಾಗದಂತೆ ಅವಕಾಶ ಮಾಡಿಕೊಡದೆ ಅದಕ್ಕೆ ಪರ್ಯಾಯವನ್ನು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಟ್ಟ ನಂತರ ಇನ್ನು ಕೆಲವು ಸಂಗತಿಗಳು ಏನಿವೆ ಅದರ ಬಗ್ಗೆ ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡುತ್ತೇನೆ, ಧನ್ಯವಾದಗಳು

+ ಶ್ರೀ ಶಂಕರಗೌಡ (ಹೊಸಪೇಟೆ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕಬ್ಬಿನ ಬೆಳೆಯು ವಾಣಿಜ್ಯ ಬೆಳೆಯಾಗಿದ್ದು, ಅದರಿಂದ ಸಾಕಷ್ಟು ಲಾಭವನ್ನು ನಮ್ಮ ರಾಜ್ಯಕ್ಕೆ ತಂದು ಕೊಡುತ್ತದೆಂದು ಹೇಳಿದರೆ ತಪ್ಪಾಗಲಾರದು. ಈ ಒಂದು ಕಬ್ಬಿನ ಬೆಳೆಯಿಂದ ಸಾಧಾರಣವಾಗಿ 60 ಕೋಟಿ ರೂಪಾಯಿಗಳು ಮತ್ತು ಇದರಿಂದ ಉತ್ಪನ್ನವಾಗುವಂತಹ ಮೊಲಸೀಸ್ ಮಾರಾಟದಿಂದ ಸುಮಾರು 40ಕೋಟಿ ರೂಪಾಯಿಗಳ ಆದಾಯ ನಮ್ಮ ಸರ್ಕಾರಕ್ಕೆ ಬರುತ್ತಿದೆ. 100 ಕೋಟಿ ರೂಪಾಯಿಗಳು ಆದಾಯ ಕಬ್ಬಿನ ಬೆಳೆಯಿಂದ ಬರುತ್ತದೆ. ಇದು ದಿಸ್ಟಿಲಯಿಂದ ತಯಾರಾಗುವ ಉಪ ವಸ್ತುಗಳನ್ನುಹೊರತುಪಡಿಸಿ ಇಷ್ಟೊಂದು ಆದಾಯವನ್ನು ತರತಕ್ಕಂತಹ ವಾಣಿಜ್ಯ ಬೆಳೆಯಾಗಿದೆ. ಈಗ ಈ ಒಂದು ಅಂದಾಜಿನಲ್ಲಿ 21 ಲಕ್ಷ ಟನ್ ಕಬ್ಬು ಕರ್ನಾಟಕ ರಾಜ್ಯದಲ್ಲಿ ಬೆಳೆದು ನಿಂತಿರತಕ್ಕ ವಿಚಾರ ಬಹಳ ವ್ಯಸನಕರವಾದಂತಹ ಸಂಗತಿ. ಕರ್ನಾಟಕ ರಾಜ್ಯದಲ್ಲಿ ಸುಮಾರು 30 ಸಕ್ಕರೆ ಕಾರ್ಖಾನೆಗಳು ಇವೆ. ಆದರೆ ಇದರಲ್ಲಿ ಕೆಲಸ ಮಾಡುತ್ತಿರತಕ್ಕಂತಹ ಕಾರ್ಖಾನೆಗಳು 28 ಸಕ್ಕರೆ ಕಾರ್ಖಾನೆಗಳು ಮಾತ್ರ. ಇದರಲ್ಲಿ ಕಂಪ್ಲಿ ಸಹಕಾರ ಸಕ್ಕರೆ ಕಾರ್ಖಾನೆ ಇಲ್ಲ ಮತ್ತು ಮುನಿರಾಬಾದ್‌ನಲ್ಲಿರತಕ್ಕಂತಹ ಸಾಲಾರಜಿಂಗ್ ಷುಗರ್ ಮಿಲ್ಸ್ ಎಂದು ಏನಿದೆ ಅದು ಸಹಿತ ಈ ಸುಮಾರು 8-10 ವರ್ಷಗಳಿಂದ ಕೆಲಸವನ್ನು ನಿರ್ವಹಿಸುತ್ತಿಲ್ಲ, ಮತ್ತು ಕಂಪ್ಲಿ ಸಕ್ಕರೆ ಕಾರ್ಖಾನೆಯು ಮೂರು ವರ್ಷಗಳಿಂದ ಕೆಲಸವನ್ನು ನಿರ್ವಹಿಸುತ್ತಿಲ್ಲ, ಇಂತಹ ಒಂದು ಕಠಿಣ ಸಂದರ್ಭದಲ್ಲಿ ರೈತ ಕಬ್ಬನ್ನು ಬೆಳೆಯಬೇಕಾದರೆ ಎಂತಹ ಕಷ್ಟವನ್ನು ಅನುಭವಿಸುತ್ತಾನೆಂದು ಯೋಚಿಸಬೇಕು. ಅವನ್ನು ಸಹಕಾರ ಸಂಘಗಳಿಂದ ಸಾಲವನ್ನು ತೆಗೆದುಕೊಂಡು ಕಬ್ಬನ್ನು ಬೆಳೆದು ಈ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನು ಸಪ್ಲೈ ಮಾಡಿದರೆ, ರೈತನಿಗೆ ಸಕಾಲದಲ್ಲಿ ಹಣವನ್ನು ಒದಗಿಸಲಿಕ್ಕೆ ಕಾರ್ಖಾನೆಯವರಾಗಲಿ ಸರ್ಕಾರದವರಾಗಲಿ ಮುಂದೆ ಬಂದು ರೈತನ ಕಷ್ಟ ಕಾರ್ಪಣ್ಯಗಳಿಗೆ ಸುಧಾರಿಸುವಂತಹ ಒಂದು ರೀತಿಯನ್ನು ನಾವು ಇವತ್ತು ಕಾಣುತ್ತಿಲ್ಲ, ಏಕೆಂದರೆ ಈಗ ಸಾಲ ಮಾಡಿ ರೈತ ಬೆಳೆದಂತಹ ಕಬ್ಬನ್ನು ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಮೇಲೆ ಅವನಿಗೆ ಹಂತ ಹಂತವಾಗಿ ವರ್ಷದ ಉದ್ದಕ್ಕೂ ಕಬ್ಬಿನ ಬಟವಾಡೆಯನ್ನು ಸಂಬಂಧಪಟ್ಟಂತಹ ಕಾರ್ಖಾನೆಗಳು ಹಣವನ್ನು ಕೊಡುತ್ತಾ ಬರುವುದರಿಂದ ಇವತ್ತಲ್ಲ, ಇನ್ನು ಮುಂದಾದರೂ ಇದೇ ರೀತಿಯಲ್ಲಿ ಮುಂದುವರೆದಲ್ಲಿ ಅವನ ಆರ್ಥಿಕವಾದ ಮುಗ್ಗಟ್ಟು ಸುಧಾರಣೆಯಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಹೀಗಿರುವಾಗ 28 ಕಾರ್ಖಾನೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಮುಂಚಿತವಾಗಿ ಕಾರ್ಯಾರಂಬವಾಗಿದ್ದರೆ ಈ ಒಂದು ಪರಿಸ್ಥಿತಿಯು ಉಂಟಾಗುತ್ತಿರಲಿಲ್ಲ ಏಕೆಂದರೆ ಅನೇಕ ವಿಷಯಗಳ ಮೇಲೆ ಈ ಕಾರ್ಖಾನೆಗಳನ್ನು ತಡವಾಗಿ ಶುರುಮಾಡಿದ್ದೇ ಇಷ್ಟೆಲ್ಲ ಅನಾಹುತಕ್ಕೆ ಕಾರಣವೆಂದು ನಾನು ಹೇಳುತ್ತೇನೆ. ಏಕೆಂದರೆ ಅನೇಕ ಕಾರ್ಖಾನೆಗಳು ಬಹಳ ತಡವಾಗಿ ಪ್ರಾರಂಭವಾಗಿವೆ. ಮೊದಲೇ ಪ್ರಾರಂಭ ಮಾಡಿದ್ದರೆ ಈ ಒಂದು ತೊಂದರೆಯನ್ನು ನಿಲ್ಲಿಸಬಹುದಿತ್ತು. ಸರ್ಕಾರದವರು ಆಗಲಿ ಅಥವಾ ಈ ಇಲಾಖೆಯವರು ಆಗಲಿ ಕರ್ನಾಟಕ ರಾಜ್ಯದಲ್ಲಿ ಕಬ್ಬು ಬೆಳೆ ಎಷ್ಟು ಇದೆ, ಈ ವರ್ಷ ಎಷ್ಟು ಸಕ್ಕರೆ ಕಾರ್ಖಾನೆಗಳು ಕೆಲಸ ಮಾಡುತ್ತವೆ, ಎಷ್ಟು ಸಕ್ಕರೆ ಕಾರ್ಖಾನೆಗಳು ಕೆಲಸ ಮಾಡಿದರೆ ನಮ್ಮಲ್ಲಿರತಕ್ಕಂತಹ ಕಬ್ಬನ್ನು ಅರೆಯಬಹುದು, ಈ ವರ್ಷ ಬೆಳೆದಂತಹ ಕಬ್ಬಿನ ಬೆಳೆ ಉಳಿಯುತ್ತದೆಯೇ ಅಥವಾ ಸರಿ ಹೋಗುತ್ತದೆಯೇ ಎಂಬ ವಿಚಾರವನ್ನು ಸರ್ಕಾರದವರು ಇವತ್ತಿನವರೆಗೂ ಜನರಿಗೆ ತಿಳಿಸಲು ಸಾಧ್ಯವಾಗಿಲ್ಲ. ಇನ್ನು ಮುಂದಾದರೂ ಸಹಿತ ಸರ್ಕಾರದವರು ತಮ್ಮಲ್ಲಿರತಕ್ಕಂತಹ ಇಲಾಖೆಗಳ ಮೂಲಕ ಮಾಹಿತಿಯನ್ನು ಪಡೆದು ಈಗ ಎರಡು ವರ್ಷಗಳಿಂದ ಆಗಿರುವಂತಹ ಅನ್ಯಾಯ, ಅನಾಹುತಗಳನ್ನು ತಡೆಗಟ್ಟುವುದಕ್ಕೆ ಸರ್ಕಾರ ಮುಂದು ಬಂದು ಇನ್ನು ಮುಂದಾದರೂ ಸಹಿತ ನಾವು ಇಷ್ಟು ಕಬ್ಬನ್ನು ಬೆಳೆದರೆ ನಾವು ಇಂತಹ ಕಾರ್ಖಾನೆಯ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುತ್ತೇವೆ ಇಷ್ಟು ಕಬ್ಬನ್ನು ಜಾಸ್ತಿ ಬೆಳೆದರೆ ನಾವು

ತೆಗೆದುಕೊಳ್ಳುವುದಕ್ಕೆ ಜವಾಬ್ದಾರರು ಅಲ್ಲ, ನೀವು ಬೆಳೆದಂತವರು ಎಲ್ಲಿ ಬೇಕಾದರೂ ಏನಾದರೂ ಮಾಡಬಹುದು ಎಂದು ಮುಂದಾದರೂ ಹೇಳಿದರೆ, ರೈತರಿಗೆ ಒಂದು ರೀತಿಯಲ್ಲಿ ಅನುಕೂಲವನ್ನು ಮಾಡಿಕೊಟ್ಟ ಹಾಗೆ ಆಗುತ್ತದೆ.

ಇವತ್ತು ಕಬ್ಬು ಹೆಚ್ಚು ಬೆಳೆದಿರುವುದಕ್ಕೆ ಕಾರಣ ಏನೆಂದರೆ, ಸುಮಾರು ಎರಡು ಮೂರು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಸಕ್ಕರೆಗೆ ಕಬ್ಬು ಕಡಿಮೆಯಾಗಿ, ಬೆಲ್ಲದ ಧಾರಣೆ ಜಾಸ್ತಿಯಾದುದರಿಂದ, ಬೆಲ್ಲದ ತಯಾರಿಕೆಗೆ ಮತ್ತು ಖಂಡಸಾರಿ ಕಾರ್ಖಾನೆಗಳಿಗೆ ಸುಮಾರು 40 ಪರ್ಸೆಂಟ್ ಕಬ್ಬು ಖರ್ಚಾಗುತ್ತದೆ. 60 ಪರ್ಸೆಂಟ್ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಖರ್ಚಾಗುವಂತಹ ವಾಡಿಕೆ ಇದೆ. ಇದರ ಲೆಕ್ಕಾಚಾರದ ಮೇಲೆ ಸರ್ಕಾರದವರು ಮಾಡದೇ ಇದುದ್ದರಿಂದ ಈ ರೀತಿಯಾಗಿ ಅನಾನುಕೂಲತೆಯಾಗಿದೆ ಎಂದು ನಾನು ಹೇಳುತ್ತೇನೆ. ಸಕ್ಕರೆ ಕಾರ್ಖಾನೆಯವರು ಮುಂಚಿತವಾಗಿ ತಮ್ಮ ಕಾರ್ಖಾನೆಗೆ ಇಷ್ಟು ಕಬ್ಬು ಬೇಕು, ಹೆಚ್ಚಿನ ಕಬ್ಬು ನಮ್ಮಿಂದ ಆಗುವುದಿಲ್ಲ ನೀವು ಏನಾದರೂ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು ಎಂದು ರೈತರಿಗೆ ತಿಳಿಸಬೇಕಾಗಿತ್ತು. ಇದು ಅಲ್ಲದೇ ಸರ್ಕಾರದವರು ಈಗ ಹೆಚ್ಚಿಗೆ ಇರತಕ್ಕಂತಹ ಕಬ್ಬನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಏನೊಂದು ವಿನಂತಿ ಮಾಡಿಕೊಂಡು ಈ ಕಬ್ಬನ್ನು ಖರ್ಚು ಮಾಡುವುದಕ್ಕೆ ನಾವು ಏನಾದರೂ ಒಂದು ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇವರು ಈ ಒಂದು ನಿಲುವನ್ನು ತಾಳಿರುವುದನ್ನು ನೋಡಿದರೆ, ಈ ಒಂದು ತೀರ್ಮಾನ ಬಹಳ ತಡವಾಗಿ ಆಲೋಚನೆ ಎಂದು ನನಗನ್ನಿಸುತ್ತದೆ. ಈ ಒಂದು ಆಲೋಚನೆಯನ್ನು ಮುಂದಾಗಿ ಮಾಡಿದರೆ ಏನಾದರೂ ಆಗಬಹುದಿತ್ತು. ಈಗ ಮಹಾರಾಷ್ಟ್ರದಲ್ಲಿ ಎಲ್ಲಾ ಕಾರ್ಖಾನೆಗಳು ಕರ್ನಾಟಕದ ಕಬ್ಬನ್ನು ತೆಗೆದುಕೊಳ್ಳಬಾರದೆಂದು ಒಂದು ನಿಬಂಧನೆಯನ್ನು ಹಾಕಿರುವಂಥದ್ದು ನನಗೆ ಗೊತ್ತಿದೆ. ಈ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರಕ್ಕೆ ಸರಿಯಾದ ತಿಳುವಳಿಕೆಯನ್ನು ನೀಡಿಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ ನಮ್ಮ ರಾಜ್ಯದ ಬೌಂಡರಿಯಲ್ಲಿರತಕ್ಕಂತಹ ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗುಲ್ಬರ್ಗ, ಮಂಡ್ಯ, ಹಾಸನ ಇಲ್ಲಿಂದ ಕಬ್ಬು ಮಹಾರಾಷ್ಟ್ರಕ್ಕೆ ಹೋಗುತ್ತಿತ್ತು. ಅಲ್ಲಿ ಅವರು ಏನು ಹೇಳುತ್ತಿದ್ದಾರೆ ಎಂದರೆ, ಕರ್ನಾಟಕದ ಕಬ್ಬನ್ನು ತೆಗೆದುಕೊಳ್ಳುವುದರಿಂದ ನಮಗೆ ರಿಕವರಿ ಕಡಿಮೆ ಬರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಒಳ್ಳೆಯ ಹೆಚ್ಚು ಇಳುವರಿಯನ್ನು ಕೊಡತಕ್ಕಂತಹ ಕಬ್ಬನ್ನು ಬೆಳಗಾಂ ಭಾಗದಲ್ಲಿ, ಬೀದರ್ ಭಾಗದಲ್ಲಿ ಎಲ್ಲಾ ಚೆನ್ನಾಗಿ ಬೆಳೆಯುತ್ತಾರೆ. ಇದರಿಂದ ಇಳುವರಿ ಚೆನ್ನಾಗಿ ಬರುತ್ತದೆ. ಮಹಾರಾಷ್ಟ್ರದವರು ತೆಗೆದುಕೊಳ್ಳಲಾರದೇ ಈ ರೀತಿಯಾಗಿ ಹೇಳುತ್ತಿದ್ದಾರೆ. ಅವರು ಕಬ್ಬನ್ನು ತೆಗೆದುಕೊಳ್ಳದೇ ಇರತಕ್ಕಂಥಾದ್ದಕ್ಕೆ ಇನ್ನೊಂದು ಕಾರಣ ಇದೆ. ಎರಡು ಮೂರು ವರ್ಷಗಳ ಹಿಂದೆ ಸಕ್ಕರೆ ಧಾರಣೆ ಹೆಚ್ಚಾಗಿತ್ತು, ಆಗ ಎಲ್ಲಾ ಕಾರ್ಖಾನೆಯವರು ರೈತರಿಗೆ ಹೆಚ್ಚಿನ ಧಾರಣೆಯನ್ನು ಸಹ ಕೊಟ್ಟಿದ್ದರು. ಆದರೆ ಸುಮಾರು ಎರಡು ವರ್ಷಗಳಿಂದ ಏನಾಗಿದೆ ಎಂದರೆ ಸಕ್ಕರೆಯ ಧಾರಣೆಯು ಬಹಳ ಕಡಿಮೆಯಾಗಿದೆ.

ಸಕ್ಕರೆ ಧಾರಣೆಯು ಕಡಿಮೆಯಾಗಿರುವುದರಿಂದ ಅಲ್ಲಿನ ಕಾರ್ಖಾನೆಯವರು ರೈತರಿಗೆ ಎರಡು ವರ್ಷಗಳ ಹಿಂದೆ ಕೊಟ್ಟಂತಹ ಧಾರಣೆಗಿಂತ ಎರಡು ನೂರು ರೂಪಾಯಿಗಳಿಗಿಂತ ಕಡಿಮೆ ಹಣವನ್ನು ಕೊಟ್ಟಿದ್ದಾರೆ. ಈಗ ಸಕ್ಕರೆ ಕಾರ್ಖಾನೆಯವರು ಆರ್ಥಿಕ ಮುಗ್ಗಟ್ಟಿರುವುದರಿಂದ ಅವರು ಕಬ್ಬನ್ನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲವೆಂದು ನನ್ನ ಭಾವನೆ. ಇದನ್ನು ಹೇಗಾದರೂ ಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಸ್ವತಃ ಮಹಾರಾಷ್ಟ್ರ ಸರ್ಕಾರಕ್ಕೆ ನಿವೇದನೆಯನ್ನು ಮಾಡಿಕೊಂಡು ಈಗ ಹೆಚ್ಚಾಗಿರುವಂತಹ ಕಬ್ಬನ್ನು ಸರಬರಾಜು ಮಾಡಿದರೆ ರೈತರ ಒಂದು ಜೀವನ ನಡೆಯುತ್ತದೆ, ಉಳಿಯುತ್ತದೆ, ಇಲ್ಲದಿದ್ದರೆ ರೈತರು ಇದರಿಂದ ಹಾಳಾಗಿ ಆರ್ಥಿಕ ಮುಗ್ಗಟ್ಟಿನಿಂದ ಬಹಳಕಷ್ಟದಲ್ಲಿ

ಸಿಕ್ಕಿ ಹಾಕಿಕೊಳ್ಳುತ್ತಾರೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗ ಸುಮಾರು 28 ರಿಂದ 30 ಲಕ್ಷ ಟನ್ ಕಬ್ಬು ನಮ್ಮ ರಾಜ್ಯದಲ್ಲಿ ಜಾಸ್ತಿ ಇದೆ ಎನ್ನುವುದು ನನಗೆ ಬಂದಿರತಕ್ಕಂತಹ ವರದಿಯ ಪ್ರಕಾರ ಇದೆ. ಇದು ಎಲ್ಲಿ ಎಂದರೆ 50,000 ಟನ್ ಬೆಂಗಳೂರು ಗ್ರಾಮಾಂತರ, ಬೆಳಗಾಂನಲ್ಲಿ ಐದೂವರೆ ಲಕ್ಷ ಟನ್, ಬೀದರ್ 7.5 ಲಕ್ಷ, ಧಾರವಾಡ ಒಂದು ಲಕ್ಷ ಗುಲ್ಬರ್ಗ ಐದು ಲಕ್ಷ, ಹಾಸನ ಎರಡು ಲಕ್ಷ, ಮಂಡ್ಯ ಏಳು ಲಕ್ಷ ಶಿವಮೊಗ್ಗ ಎರಡು ಲಕ್ಷ, ಬಳ್ಳಾರಿ ಒಂದು ಲಕ್ಷ ಹೀಗೆ 28 ಲಕ್ಷಗಳ ಹೆಚ್ಚುವರಿ ಕಬ್ಬಿನ ಪಟ್ಟಿಯು ನನಗೆ ದೊರೆತಿದೆ. ಇದಕ್ಕೆ ಸರ್ಕಾರದವರು ಏನು ಮಾಡಬೇಕೆಂದರೆ, ಬೆಲ್ಲದ ನಿರ್ಯಾತದ ಮೇಲೆ ಒಂದು ನಿರ್ಬಂಧವನ್ನು ಮಾಡಿರುವುದರಿಂದ ಬೆಲ್ಲದ ಗಾಣಗಳೆಲ್ಲ ಮುಚ್ಚಿ ಹೋಗಿ, ಇವತ್ತು ಬೆಲ್ಲಕ್ಕೆ ಧಾರಣೆಯೇ ಇಲ್ಲ, ಬೆಲ್ಲಕ್ಕೂ ಸಕ್ಕರೆಗೂ 15-20 ಪರ್ಸೆಂಟ್ ಧಾರಣೆಯು ಹೆಚ್ಚು ಕಡಿಮೆ ಇದ್ದರೆ, ಬೆಲ್ಲವನ್ನು ಎಲ್ಲಾ ರೈತರು ಮಾಡುತ್ತಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 10,000 ಗಾಣಗಳು ನಡೆಯುತ್ತಿರುವಂತಹ ವಿಚಾರ ನನಗೆ ಗೊತ್ತಿದೆ. ಇದರಲ್ಲಿ ಕ್ರಾಷರ್‌ಗಳು ಮತ್ತು ಎತ್ತಿನ ಗಾಣಗಳು ಸೇರಿವೆ. ಈ ಗಾಣಗಳು ಸರಿಯಾಗಿ ನಡೆದರೆ ಈ ಕಬ್ಬು ಇಷ್ಟು ಉಳಿಯುತ್ತಿರಲಿಲ್ಲವೆಂದು ನನ್ನ ಭಾವನೆ. ಹೀಗಿರುವಾಗ ಈಗ ಇರತಕ್ಕಂತಹ ಕಾರ್ಖಾನೆಗಳನ್ನು ನಡೆಸುವುದಕ್ಕೆ ಟೈಮ್ ಇನ್ನೂ ಹೆಚ್ಚು ಮಾಡಬೇಕು, ಸಕ್ಕರೆ ಕಾರ್ಖಾನೆಯವರನ್ನೆಲ್ಲ ಕರೆಯಿಸಿ ನಮ್ಮ ರಾಜ್ಯದ ಕಬ್ಬು ಬೆಳಗಾರರ ಕಷ್ಟ ಈ ರೀತಿಯಾಗಿರುವುದರಿಂದ ನೀವು ನಿಮ್ಮ ಕಾರ್ಖಾನೆಯನ್ನು ಸರಿಪಡಿಸಿಕೊಂಡು ಇನ್ನು ಹೆಚ್ಚು ಕಾಲ ನಡೆಸಿ, ನಿಮಗೆ ನಾವು ಸರ್ಕಾರದಿಂದ ಏನು ಬೇಕಾದರೂ ಅನುಕೂಲಗಳನ್ನು ಕೊಡುತ್ತೇವೆ ಎಂದು ಹೇಳುವುದು ಒಂದು. ಆಮೇಲೆ ಎರಡನೆಯದಾಗಿ ಈಗ ಇರತಕ್ಕಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಬ್ಬನ್ನು ಅರೆಯುವಂತಹ ಕಾರ್ಖಾನೆಗಳಿಗೆ ನಷ್ಟವಾಗುತ್ತದೆ. ಏಕೆಂದರೆ ಬಿಸಿಲು ಬಂದಂತೆಲ್ಲ, ಕಬ್ಬಿನಲ್ಲಿ ಸಕ್ಕರೆಯ ಅಂಶ ಕಡಿಮೆಯಾಗಿ ಸಕ್ಕರೆ ಕಾರ್ಖಾನೆಗಳೂ ಸಹಿತ ನಷ್ಟವಾಗುವುದರಿಂದ, ಈ ಸಕ್ಕರೆ ಕಾರ್ಖಾನೆಯವರಿಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಪ್ರಯತ್ನ ಮಾಡಿ ಈ ಲೆವಿ ಕೊಡತಕ್ಕಂತಹ ಪದ್ಧತಿಯನ್ನು ರದ್ದು ಮಾಡಬೇಕೆಂದು ಕೇಳಿಕೊಳ್ಳಬೇಕು. ಏಕೆಂದರೆ ನಷ್ಟವಾಗುವುದರಿಂದ ಸಕ್ಕರೆ ಕಾರ್ಖಾನೆಯವರು ಕಾರ್ಖಾನೆಯನ್ನು ಚಾಲು ಮಾಡುವುದಿಲ್ಲ, ಚಾಲು ಮಾಡುವುದಕ್ಕೆ ಹಿಂಜರಿಯುತ್ತಿದ್ದಾರೆ.

12.50 ಪಿ.ಎಂ

ಪರಿಸ್ಥಿತಿ ಹೀಗಿರುವುದರಿಂದ ಅವರಿಗೆ ಯಾವುದಾದರೊಂದು ಅನುಕೂಲವನ್ನು ಮಾಡಿಕೊಟ್ಟರೆ ಅದು ಸರಿದೂಗಿದರೆ ಅವರು ಇನ್ನೂ ಒಂದೆರಡು ತಿಂಗಳ ಕಾಲ ಫ್ಯಾಕ್ಟರಿಯನ್ನು ನಡೆಸಿ ಈ ರೈತರ ಕಷ್ಟವನ್ನು ನೀಗಿಸಬಹುದು. ಮತ್ತು ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಲಿಯವರೂ ಕೂಡ ನಷ್ಟಕ್ಕೆ ಒಳಗಾಗದಂತೆ ಉಳಿದುಕೊಳ್ಳುವುದಕ್ಕೆ ದಾರಿ ಆಗುತ್ತದೆಂದು ನನಗನಿಸುತ್ತದೆ. ಇನ್ನು ಯಾವುದೇ ಫ್ಯಾಕ್ಟರಿ ಆಗಲಿ ಲೆವಿ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧ ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚನೆ ನೀಡುತ್ತೇನೆ. ರೈತ ಬೆಳೆದಂಥ ಕಬ್ಬಿಗೆ ಇವತ್ತಿನವರೆಗೆ ಸರಿಯಾಗಿ ಬಟವಾಡೆಯನ್ನು ಮಾಡಿಲ್ಲ, ಸುಮಾರು 700 ಕೋಟಿ ರೂಪಾಯಿ ಬೆಲೆಯ ಸಕ್ಕರೆ ಗೋಡೌನ್‌ಗಳಲ್ಲಿ ಬಿದ್ದಿದೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಸಕ್ಕರೆ ಕಾರ್ಖಾನೆಗಳು ತಯಾರು ಮಾಡಿದಂಥ ಸಕ್ಕರೆಯಲ್ಲಿ 60 ಪರ್ಸೆಂಟ್ ಫ್ರೀ ಮತ್ತು 40 ಪರ್ಸೆಂಟ್ ಲೆವಿ ಸಕ್ಕರೆ ಇರುತ್ತದೆ. ಈ ಲೆವಿ ಸಕ್ಕರೆ ಕೇಂದ್ರ ಸರ್ಕಾರದ ಅಧೀನದಲ್ಲಿದ್ದು ಅವರು ಪರವಾನಗಿಯನ್ನು ಕೊಟ್ಟಾಗ ಮಾತ್ರ ಇಂತಿಷ್ಟು ಸಕ್ಕರೆಯನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತಾರೆ. 40 ಪರ್ಸೆಂಟ್ ಲೆವಿ ಸಕ್ಕರೆ ಕೇಂದ್ರ ಸರ್ಕಾರದ

ಅಧೀನದಲ್ಲಿದ್ದಾಗ ಅವರು ಏತಕ್ಕೆ ಈ ಸಕ್ಕರೆಗೆ ಮುಂಗಡವಾಗಿ ಹಣವನ್ನು ಕೊಡಬಾರದು? ಅವರು ಸಕಾಲದಲ್ಲಿ ಕೊಟ್ಟರೆ ಆ ಹಣವನ್ನು ರೈತರಿಗೆ ಹಂಚುವುದಕ್ಕೆ ಸಾಧ್ಯವಾಗುತ್ತದೆ. ಇದನ್ನೇ ದೊಡ್ಡದಾಗಿ ಮಾಡಿಕೊಂಡು ಪ್ರತಿವರ್ಷವೂ ಕಾರ್ಖಾನೆಗಳವರು ರೈತರಿಗೆ ಇಡೀ ವರ್ಷದುದ್ದಕ್ಕೂ ಹಣವನ್ನು ಕೊಡುವಂಥ ವ್ಯವಸ್ಥೆ ಇರುವುದನ್ನು ನೋಡಿದರೆ ಇದು ನಿಜಕ್ಕೂ ರೈತರ ದುರ್ದೈವ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ತಾವು ಒತ್ತಾಯ ಮಾಡಿ ಕೇಂದ್ರ ಸರ್ಕಾರದವರು 40 ಪರ್ಸೆಂಟ್ ಲೆವಿ ಸಕ್ಕರೆಯನ್ನು ಏನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ ಆ ಸಕ್ಕರೆಗೆ ಮುಂಗಡವಾಗಿ ಹಣವನ್ನು ಕಾರ್ಖಾನೆಗಳವರಿಗೆ ನೀಡಿದರೆ ಅದು ರೈತರಿಗೆ ಸಿಕ್ಕುತ್ತದೆ.

ಇನ್ನು ಹೊಸದಾಗಿ ಅನೇಕ ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ಸಿಕ್ಕಿದೆ; ಆದರೆ ಆ , ಕಾರ್ಖಾನೆಗಳು ಇನ್ನೂ ಉತ್ಪಾದನೆಯನ್ನು ಶುರು ಮಾಡಿಲ್ಲವೆಂದು ಹೇಳಿದರು. ಇದು ಸತ್ಯವಾದ ಸಂಗತಿ. ಏಕೆಂದರೆ ಈ ರಾಜಕಾರಣದಲ್ಲಿ ಅನೇಕ ಜನರು ಏನೋ ನಾವು ಇವತ್ತು ಅಧಿಕಾರದಲ್ಲಿದ್ದೇವೆ; ಈಗಲೇ ಒಂದು ಸಕ್ಕರೆ ಕಾರ್ಖಾನೆಗೆ ಲೈಸೆನ್ಸ್ ಪಡೆದುಕೊಳ್ಳೋಣ, ಮುಂದೆ ನಾವೇ ನಡೆಸಿದರೂ ಆಗುತ್ತದೆ, ಇಲ್ಲದಿದ್ದರೆ ಯಾರನ್ನಾದರೂ ಸೇರಿಸಿಕೊಂಡು ಕಾರ್ಖಾನೆಯನ್ನು ನಡೆಸಿದರಾಯಿತು ಎಂದು ದೃಷ್ಟಿಯನ್ನಿಟ್ಟುಕೊಂಡು ಯಾರ್‍ಯಾರೋ ಲೈಸೆನ್ಸ್‌ನ್ನು ತೆಗೆದುಕೊಂಡಿದ್ದಾರೆ. ಯಾರು ಲೈಸೆನ್ಸ್ ತೆಗೆದುಕೊಂಡಿದ್ದು, ಇದುವರೆಗೂ ಕಾರ್ಖಾನೆಯನ್ನು ಚಾಲೂ ಮಾಡಿಲ್ಲ ಅಂಥಾದ್ದರ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿ ಅದನ್ನು ಬೇರೆಯವರಿಗೆ ಕೊಡಬಹುದು. ಅದನ್ನಾದರೂ ತಾವು ಮಾಡಬೇಕು. ಇದು ಮುಂದೆ ಮಾಡಬೇಕಾದ ಕೆಲಸ. ಈಗ ಕರ್ನಾಟಕದಲ್ಲಿ ಹಾಲಿ ಒಣಗಿ ಹಾಳಾಗುತ್ತಿರುವ ಕಬ್ಬನ್ನು ಮೊದಲು ಕ್ರಷ್ ಮಾಡಿ ಸಕ್ಕರೆ ತಯಾರಿಸುವ ಕಡೆ ಗಮನಕೊಟ್ಟು ಸಕ್ಕರೆ ಕಾರ್ಖಾನೆಗಳು ಉಳಿಯುವ ರೀತಿಯಲ್ಲಿ ಸರ್ಕಾರ ಯೋಚನೆ ಮಾಡಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯ ಮಾಡುತ್ತೇವೆ.

+ ಶ್ರೀ ಯು.ಬಿ. ಬಣಕಾರ್ (ಹಿರೇಕೇರೂರು) : ಸನ್ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದ ರೈತ ತನ್ನ ಬಾಳು ಹಸನಾಗಲಿ ಎಂದು ತನ್ನ ಅನೇಕ ಸಮಸ್ಯೆಗಳನ್ನು ಪರಿಹರಿಸುತ್ತದೆಂಬ ಉದ್ದೇಶದಿಂದ ಈ ಸರ್ಕಾರವನ್ನು ಅಧಿಕಾರಕ್ಕೆ ತಂದ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಣ್ಣಿನ ಮಗ ಎನ್ನತಕ್ಕ ಹೆಸರಿನಲ್ಲಿ ಕಳೆದ ಒಂದೂವರೆ ವರ್ಷದಿಂದ ನಮ್ಮ ರಾಜ್ಯದಲ್ಲಿ ಆಡಳಿತವನ್ನು ಮಾಡಿದಂಥ ವ್ಯಕ್ತಿ ಇವತ್ತು ಮಣ್ಣು ತಿನ್ನುವಂಥ ಪರಿಸ್ಥಿತಿ ಬಂದಿದೆ. ನಮ್ಮ ರಾಜ್ಯದ ಅದರಲ್ಲೂ ನಮ್ಮ ಉತ್ತರ ಕರ್ನಾಟಕದ ಬಗ್ಗೆ ಹೇಳುವುದಾದರೆ, ಅಲ್ಲಿ ಎರಡು ಪ್ರಾಮುಖ್ಯ ವಾಣಿಜ್ಯ ಬೆಳೆಗಳಾದಂಥ ಹತ್ತಿ ಮತ್ತು ಕಬ್ಬಿನ ಪರಿಸ್ಥಿತಿಯನ್ನು ನೋಡಿದರೆ, ಇವತ್ತು ನಮ್ಮ ರೈತರ ಪರಿಸ್ಥಿತಿ ಯಾವ ಹಂತಕ್ಕೆ ಮುಟ್ಟಿದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳಿದ್ದು ಅವು ದಿನವಹಿ 2750 ಎಕರೆ ಪ್ರದೇಶದಲ್ಲಿ ಬೆಳೆದಂಥ 71,950 ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು ಹೊಂದಿದೆ. ನಮ್ಮ ಸರ್ಕಾರ ಈ ಒಂದು ಸಕ್ಕರೆ ವಿಚಾರವನ್ನು ನೋಡಿಕೊಳ್ಳುವ ಸಲುವಾಗಿಯೇ ಒಬ್ಬ ಸಚಿವರನ್ನು ನೇಮಿಸಿದೆ. ಆ ಸಚಿವರು ಈ ರಾಜ್ಯದಲ್ಲಿ ಕಬ್ಬು ಬೆಳೆಯುವ ಪ್ರಮಾಣ, ಇರತಕ್ಕ ಕಾರ್ಖಾನೆಗಳು ಎಷ್ಟು ಅರೆಯುವುದಕ್ಕೆ ಸಾಧ್ಯ ಎಂಬುದನ್ನು ಮೊದಲೇ ಲೆಕ್ಕ ಹಾಕಿ ಮುಂದೆ ಕಬ್ಬು ಬೆಳೆಗಾರರಿಗೆ ಯಾವ ರೀತಿಯ ಸಮಸ್ಯೆ ಉದ್ಭವಿಸಬಹುದು ಎಂಬುದನ್ನು ಊಹಿಸಬಹುದಿತ್ತು. ಆದರೆ ದುರ್ದೈವದಿಂದ ಈ ಸಮಸ್ಯೆ ಮಿತಿಮೀರಿದಾಗಲೂ ಸರ್ಕಾರ ಲಕ್ಷ್ಯ ವಹಿಸುತ್ತಿಲ್ಲವೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಈ ರಾಜ್ಯದಲ್ಲಿ ಅತಿ ಹೆಚ್ಚಿನ ವಿಸ್ತಾರವಾದ ಕ್ಷೇತ್ರವನ್ನು ಹೊಂದಿರುವಂಥ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ, ನಾನು ಸುಮಾರು

ನಾಲ್ಕೂವರೆ ತಿಂಗಳ ಹಿಂದೆ ಮಾನ್ಯ ಸಕ್ಕರೆ ಖಾತೆ ಸಚಿವರಿಗೆ ಒಂದು ಪತ್ರವನ್ನು ಬರೆದೆ. ಹಾವೇರಿ ಸಕ್ಕರೆ ಕಾರ್ಖಾನೆ ಉತ್ಪಾದನೆ ಪ್ರಾರಂಭ ಮಾಡಲು ವಿಳಂಬ ಮಾಡುತ್ತಿವೆ, ಬಹುಶಃ ಇದೇ ರೀತಿಯ ವಿಳಂಬ ಮುಂದುವರೆದರೆ ಮುಂದೆ ನೀರೂ ಸಿಕ್ಕದೆ ಕಾರ್ಖಾನೆ ಬಂದ್ ಆದರೆ ಕಬ್ಬು ಬೆಳೆಗಾರರಿಗೆ ದೊಡ್ಡ ಸಮಸ್ಯೆಯಾಗುತ್ತದೆ. ಆದ್ದರಿಂದ ಈ ಹಾವೇರಿ ಸಕ್ಕರೆ ಕಾರ್ಖಾನೆಯನ್ನು ಆದಷ್ಟು ಬೇಗ ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ನಾಲ್ಕೂವರೆ ತಿಂಗಳ ಹಿಂದೆಯೇ ಪತ್ರವನ್ನು ಬರೆದೆ. ಆದರೆ ಆ ಕಾರ್ಖಾನೆ ತನ್ನ ಸಾಮರ್ಥ್ಯವನ್ನು ಹೆಚ್ಚು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಅದನ್ನು ತಡವಾಗಿ ಪ್ರಾರಂಭ ಮಾಡಿತು. ನಮ್ಮ ಮಾನ್ಯ ನಾಯಕರು ಮಾತನಾಡುವಾಗ 70 ಸಾವಿರ ಟನ್ ಅರೆಯುತ್ತದೆಂದು ಹೇಳಿದರು. ಮಾನ್ಯ ಅಧ್ಯಕ್ಷರೂ ಮತ್ತು ಶಾಸಕರೂ ಆದಂಥ ಮಾನ್ಯ ಉದಾಸಿಯವರು ಹೇಳಿದರು, 90 ಸಾವಿರ ಟನ್ ಅರೆಯುತ್ತದೆ ಎಂದು. ಆದರೆ ನಮ್ಮ ಮಾನ್ಯ ನಾಯಕರು ಮಾತನಾಡುತ್ತಾ ಕಳೆದ 60 ದಿನಗಳಲ್ಲಿ ಅರೆದಂಥ ವಿವರಗಳನ್ನು ಕೊಟ್ಟಿದ್ದರು. ಆ ಅಂಕಿ ಸಂಖ್ಯೆಗಳನ್ನು ನೋಡಿದರೆ, ದಿನವಹಿ ಇವರು 1800 ಟನ್ ಅರೆಯುತ್ತೇವೆಂದು ಏನು ಹೇಳುತ್ತಿದ್ದಾರೆ ಅದು ಅಲ್ಲ, ದಿನವಹಿ ಅದು 1200 ಟನ್ ಕಬ್ಬನ್ನು ಆ ಸಕ್ಕರೆ ಕಾರ್ಖಾನೆ ಅರೆದಿದೆ. ಈಗತಾನೆ ಅವರು ಉತ್ತರವನ್ನು ಕೊಡುತ್ತಾ ನಮ್ಮಲ್ಲಿ ಬೆಳೆದಂಥ ಪೂರ್ತಿ ಪ್ರಮಾಣದ ಕಬ್ಬನ್ನೂ ಅರೆಯುತ್ತೇವೆಂದು ಹೇಳಿದರಂತೆ. ಆದರೆ ಅವರೇ ಕೊಟ್ಟಿರತಕ್ಕ ಅಂಕಿ ಸಂಖ್ಯೆಗಳನ್ನು ನೋಡಿದರೆ 3.11 ಲಕ್ಷ ಟನ್ ಕಬ್ಬನ್ನು ಈ ಸಕ್ಕರೆ ಕಾರ್ಖಾನೆ ಹೊಂದಿದೆ ಅದರಲ್ಲಿ 90 ಸಾವಿರ ಟನ್ ಹೋದರೆ ಇನ್ನೂ ಅಲ್ಲಿ ಸುಮಾರು 2.21 ಸಾವಿರ ಟನ್ ಕಬ್ಬನ್ನು ಅರೆಯಲು ಸುಮಾರು 180 ದಿನ ಬೇಕಾಗುತ್ತದೆ. ಇದು ನೆನೆಸಲೂ ಸಾಧ್ಯವಿಲ್ಲದ ಮಾತು. ಏಕೆಂದರೆ, ವರದಾ ನದಿಯಲ್ಲಿ ನೀರು ಕಡಿಮೆ ಆಗುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ಆ ಕಾರ್ಖಾನೆಯನ್ನು ಮುಚ್ಚುವಂಥ ಪರಿಸ್ಥಿತಿ ಬಂದಾಗ ರೈತರು ಬೆಳೆದಂಥ ಕಬ್ಬಿಗೆ ನಾವು ಏನು ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿದೆ? ಈ ದಿಸೆಯಲ್ಲಿ ಸರ್ಕಾರ ಮಾಡುತ್ತಿರುವಂಥ ಪ್ರಯತ್ನವನ್ನು ಪತ್ರಿಕೆಗಳ ಮೂಲಕ ನೋಡಿದರೆ, ಮಹಾರಾಷ್ಟ್ರದಲ್ಲಿರತಕ್ಕ ಕಾರ್ಖಾನೆಗಳಿಗೆ ಕಬ್ಬನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಆದರೆ ಏಪ್ರಿಲ್ ಕೊನೆಯವರೆಗೂ ನಾವು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಅವರು ಈಗಾಗಲೇ ಹೇಳಿರುವುದರಿಂದ ಈ ಕಬ್ಬನ್ನು ನಾವು ಬೇರೆ ಕಡೆ ಸಾಗಿಸುವುದಕ್ಕೆ ಸಾಧ್ಯವಿಲ್ಲ ಎಂಬ ವಿಚಾರ ತಿಳಿಯುತ್ತದೆ. ಆದ್ದರಿಂದ ನಾನಾದರೂ ಹೇಳುವುದಿಷ್ಟೆ; ನಮ್ಮ ರೈತರಿಗೆ ತೊಂದರೆ ಆಗಬಾರದೆಂದು ಇದ್ದರೆ ಇವತ್ತು ಅವರು ಬೆಳೆದಿರತಕ್ಕ ಕಬ್ಬನ್ನು ಸರ್ಕಾರ ಖರೀದಿ ಮಾಡಬೇಕು. ಎರಡನೆಯದಾಗಿ ಯಾವ ರೈತ ಸಾಲವನ್ನು ತೆಗೆದುಕೊಂಡು ಮನ್ನಾ ಮಾಡಬೇಕು. ಇವತ್ತು ನಾವು ಕೇವಲ ಸಕ್ಕರೆಯ ಮೇಲೆಯೇ ಅವಲಂಬಿತವಾಗಿದ್ದರೆ ಸಾಧ್ಯವಿಲ್ಲ, ಇದರ ಜೊತೆಗೆ ರೈತರು ಬೆಲ್ಲವನ್ನೂ ಮಾಡುವುದಕ್ಕೆ ಅವಶ್ಯಕವಾಗಿ ಬೇಕಾದ ಉತ್ತೇಜನವನ್ನು ಕೊಡಲು ಕ್ರಮ ಕೈಗೊಳ್ಳಬೇಕಾಗಿದೆ. ಇದು ಈ ವರ್ಷದ ಪರಿಸ್ಥಿತಿ ಆದರೆ ಕಳೆದ ವರ್ಷದ ಪರಿಸ್ಥಿತಿ ಇದಕ್ಕಿಂತ ತೀರಾ ವಿಭಿನ್ನ. ನಮ್ಮ ಹಾವೇರಿಯ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ರೈತರು ಕೊಲ್ಹಾಪುರಕ್ಕೆ ಕಬ್ಬನ್ನು ಕಳುಹಿಸಿದರು. ಕಬ್ಬನ್ನು ಕಳುಹಿಸಿ 1 ವರ್ಷವಾದರೂ ಇನ್ನೂ ಈ ರೈತರಿಗೆ ಪೂರ್ತಿಯಾಗಿ ಹಣ ಪಾವತಿ ಆಗಿಲ್ಲ. ಆದ್ದರಿಂದ ಇವತ್ತು ನಮ್ಮ ರೈತರ ಸಮಸ್ಯೆ ಏನು ಬೃಹದಾಕಾರವಾಗಿ ಬೆಳೆದಿದೆ, ಇದಕ್ಕೆ ಒಂದು ಸೂಕ್ತ ಪರಿಹಾರವನ್ನು ಬೇಗನೆ ಕಂಡು ಹಿಡಿಯಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಕಬ್ಬಿನ ವಿಚಾರದಲ್ಲಿ ಈ ಸದನದಲ್ಲಿ ಅತ್ಯಂತ ಗಂಭೀರವಾದ ಚರ್ಚೆಗಳಾಗಿವೆ. ಅದು ಜೂನ್ ತಿಂಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದಂಥ ದೊಡ್ಡ ಮೀಟಿಂಗ್‌ನಲ್ಲಿ ಈ ವಿಚಾರವನ್ನು ನಾವು ಅವರ ಗಮನಕ್ಕೆ ತಂದೆವು. ಈ ಸಾರಿ ನೀವು ಈ ಕಬ್ಬು ಬೆಳೆಗಾರರ ಸಮಸ್ಯೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸದಿದ್ದರೆ ಅವರು ಆತ್ಮಹತ್ಯೆಯನ್ನು ಮಾಡಿಕೊಳ್ಳುವಂಥ ಪರಿಸ್ಥಿತಿ ಈ ರಾಜ್ಯದಲ್ಲಿ ಸೃಷ್ಟಿಯಾಗುತ್ತದೆಂದು ಹೇಳಿದೆವು. ಆಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು; ಎಲ್ಲ ಕಾರ್ಖಾನೆಗಳ ಅಂಕಿ ಅಂಶಗಳನ್ನು ತರಿಸಿಕೊಂಡು ಇನ್ನು 8 ದಿನದೊಳಗೆ ಮಾತುಕತೆ ಮಾಡಿ ರಾಜ್ಯದ ಕಬ್ಬು ಬೆಳೆಗಾರರಿಗೆ ಕಬ್ಬನ್ನು ಸಾಗಿಸುವ ಬಗ್ಗೆ ಒಂದು ನಿಲುವಿಗೆ ಬರೋಣ ಎಂಬ ಮಾತನ್ನು ಆವತ್ತಿನ ಸಭೆಯಲ್ಲಿ ತಿಳಿಸಿದರು. ಅದರ ನಂತರ ಯಾವುದೇ ಸಭೆಗಳು ಆಗಲಿಲ್ಲ. ಕಾರಣ ಏನೆಂದರೆ, ನಮ್ಮ ರಾಜ್ಯದಲ್ಲಿ ಮೇ ತಿಂಗಳಿಂದ ಕಬ್ಬಿನ ಪ್ಲಾಂಟೇಷನ್ ಆಯಿತು. ಮೇ ತಿಂಗಳಿಂದ ಹಿಡಿದು ಫೆಬ್ರವರಿ ತಿಂಗಳವರೆಗೂ ಕಬ್ಬಿನ ನಾಟಿಯನ್ನು ಮಾಡಿದೆವು. ಕೆಲವು ಜಿಲ್ಲೆಗಳಲ್ಲಿ ಜೂನ್-ಜುಲೈ ತಿಂಗಳಲ್ಲಿ ಕಾರ್ಖಾನೆಗಳು ಉತ್ಪಾದನೆ ಶುರುವಾಗತಕ್ಕಂಥ ಪದ್ಧತಿ ಬೆಳೆದಿದ್ದೇವೆ, ಇದರಲ್ಲಿ ಒಂದೂಕಾಲು ಕೋಟಿ ಟನ್ ಕಬ್ಬನ್ನು ಅರೆಯತಕ್ಕ ಸಾಮರ್ಥ್ಯ ನಮಗಿದೆ, ಇನ್ನು ಒಂದು ಕೋಟಿ ಟನ್ ಕಬ್ಬು ಹೆಚ್ಚಿಗೆ ಆಗಿದೆ, ಇದನ್ನು ಅರೆಯುವುದು ಬಹಳ ಕಷ್ಟವಾಗಿದೆ, ಇದರಿಂದ ಕಬ್ಬನ್ನು ಬೆಳೆದಿರತಕ್ಕ ರೈತರಿಗೆ ಅನಾನುಕೂಲವಾಗಿದೆ ಎಂದು ನಾವೆಲ್ಲಾ ಮಾತನಾಡಿಕೊಳ್ಳುತ್ತಿದ್ದೆವು. ಆದರೆ, ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಣೆ ಮಾಡುವುದರಲ್ಲಿ ತಪ್ಪು ಮಾಡಿದೆ.

ಖಂಡಸಾರಿ ಕಾರ್ಖಾನೆಗಳು ಏನು ಇಡೀ ರಾಜ್ಯದಲ್ಲಿವೆ ಅವರೆಲ್ಲರನ್ನು ಕರೆಯಿಸಿ ಅವರಿಗೆ ಇರತಕ್ಕ ಅನಾನುಕೂಲಗಳನ್ನು ಪರಿಶೀಲನೆ ಮಾಡಿ ತ್ವರಿತವಾಗಿ ಕಾರ್ಖಾನೆ ಶುರು ಮಾಡತಕ್ಕ ಕೆಲಸ ಮಾಡಿಸಿದ್ದರೆ ಇವತ್ತು ಈ ರಾಜ್ಯದಲ್ಲಿ 75 ಭಾಗ ಹೆಚ್ಚುವರಿ ಕಬ್ಬು ಬೆಳೆದಿರತಕ್ಕ ರೈತರ ಸಮಸ್ಯೆ ಬಗೆಹರಿಯುತ್ತಿತ್ತು. ಸುಮಾರು ಅಕ್ಟೋಬರ್, ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಖಂಡಸಾರಿಗಳು ಶುರುವಾದವು. ಜೂನ್, ಜುಲೈನಲ್ಲಿ ಶುರು ಮಾಡಿದ್ದರೆ ಕಬ್ಬು ಬೆಳೆಗೆ ಇಷ್ಟೊಂದು ಅನಾನುಕೂಲವಾಗುತ್ತಿರಲಿಲ್ಲ. ಸುಮಾರು 20-21 ತಿಂಗಳು ಕಬ್ಬಿಗೆ ಆಗಿದೆ. ಇದಕ್ಕೆ ಯಾರು ಹೊಣೆಗಾರರು? ಇದಕ್ಕೆ ಸರ್ಕಾರ ಹೊಣೆಗಾರರು. ಆದರೆ ಕೇನ್ ಕಂಟ್ರೋಲ್ ಆರ್ಡರ್‌ನಲ್ಲಿ ಒಂದು ಕಾನೂನು ಇದೆ. ಅದೇನೆಂದರೆ, ಯಾವ ಯಾವ ಕಾರ್ಖಾನೆಯಲ್ಲಿರತಕ್ಕ ಪ್ರದೇಶಗಳಲ್ಲಿ ಕಬ್ಬು ಬೆಳಯತಕ್ಕ 95 ಭಾಗ ಕಬ್ಬನ್ನು ಆ ಕಾರ್ಖಾನೆ ಅರೆಯಲೇಬೇಕು. ಅರೆಯದಿದ್ದರೆ ಆ ಕಾರ್ಖಾನೆಯೇ ಹೊಣೆಗಾರಿಕೆ. ಇದು ಕೇನ್ ಕಂಟ್ರೋಲ್ ಆರ್ಡರ್‌ನಲ್ಲಿದೆ. ಜೊತೆಗೆ ಅಕಸ್ಮಾತ್ ರೈತರು ತಮ್ಮ ಸ್ವಂತ ಕಬ್ಬನ್ನು ಕಾರ್ಖಾನೆ ಏರಿಯಾದಿಂದ ಆ ಕಾರ್ಖಾನೆಗೆ ಸಾಗಿಸದೆ ಹೊರಗಡೆ ಏನಾದರೂ ಸಾಗಿಸಿದರೆ ಅಂಥ ಕಬ್ಬು ಬೆಳೆಗಾರರ ಮೇಲೆ ಕ್ರಮ ತೆಗೆದುಕೊಂಡಿರತಕ್ಕ ಉದಾಹರಣೆ ಇದೆ. ಹಾಸನ ಜಿಲ್ಲೆಯಲ್ಲಿ ಡೀಸಲ್ ಗಾಣದ ಮೂಲಕ ಕಬ್ಬನ್ನು ಅರೆಯುತ್ತಿರತಕ್ಕ ಗಾಣದ ಮಾಲೀಕರು 120 ಗಾಣಗಳನ್ನು ಅಲ್ಲಿಯ ಜಿಲ್ಲಾಧಿಕಾರಿಯವರು 3 ವರ್ಷಗಳ ಹಿಂದೆ ಸೀಜ್ ಮಾಡಿ ಇವತ್ತು ಗೋಡೌನ್‌ನಲ್ಲಿ ಬಿಸಾಕಿದ್ದಾರೆ. ಅದು ಹೈಕೋರ್ಟಿನಲ್ಲಿ ಕೇಸ್ ನಡೆಯಬೇಕೆಂದು ಹೇಳುವ ಸರ್ಕಾರ, ಹೆಚ್ಚು ಬೆಳೆದರೆ ಕಬ್ಬನ್ನು ಸಾಗಿಸಿ ರೈತರಿಗೆ ನ್ಯಾಯ ದೊರಕಿಸಿಕೊಡಬೇಕಾದುದು ಸರ್ಕಾರದ ಜವಾಬ್ದಾರಿ. ಇವತ್ತು ಹಿಂದೂಪುರದಲ್ಲಿ ಕಬ್ಬು ತೆಗೆದುಕೊಳ್ಳುತ್ತಿದ್ದಾರೆ. ಹಿಂದೂಪುರದಲ್ಲಿ ಕಬ್ಬು ತೆಗೆದುಕೊಳ್ಳತಕ್ಕ ವಿಚಾರದಲ್ಲಿ ಸರ್ಕಾರ ಅತ್ಯಂತ ಜವಾಬ್ದಾರಿ ನಿರ್ವಹಣೆ ಮಾಡಲಿಲ್ಲ. ಉದಾಹರಣೆಗೆ ಮಾನ್ಯ ನಾಗೇಗೌಡರ ನೇತೃತ್ವದಲ್ಲಿ ನಮ್ಮೆಲ್ಲರನ್ನು ಒಂದು ಮೀಟಿಂಗ್‌ಗೆ ಕರೆದಿದ್ದರು. ಆ ಮೀಟಿಂಗ್‌ನಲ್ಲಿ ಕೇವಲ ಮಾತುಕತೆ ಆಯಿತೇ

ಹೊರತು ಅದನ್ನು ಅನುಷ್ಠಾನಕ್ಕೆ ತರಲಿಲ್ಲ. ಉದಾಹರಣೆಗೆ ಹೇಳುವುದಾದರೆ, ಹಿಂದೂಪುರದ ಕಾರ್ಖಾನೆಯಲ್ಲಿ ಈಗ ಸುಮಾರು 350 ರಿಂದ 400-500 ಟನ್ ಕಬ್ಬು ತೆಗೆದುಕೊಳ್ಳುವ ಸಾಮರ್ಥ್ಯ ಇದೆ. ಆದರೆ 50 ಟನ್ ಕಬ್ಬು ಬೆಳೆದಿರತಕ್ಕ ಒಬ್ಬ ರೈತ ತಾನೇ ಲಾರಿ ಮಾಡಿಕೊಂಡು ಅಲ್ಲಿಗೆ ತೆಗೆದುಕೊಂಡು ಹೋಗಬೇಕು. ಅಂದರೆ ಲಾರಿ ಬಾಡಿಗೆ ಎರಡರಿಂದ ಎರಡೂವರೆ ಸಾವಿರ ರೂಪಾಯಿ ಆಗುತ್ತದೆ. 50 ಟನ್ ಕಬ್ಬು ಬೆಳೆದಿರತಕ್ಕ ಒಬ್ಬ ಸಾಮಾನ್ಯ ರೈತ ಅಥವಾ 50 ಟನ್ ಮೇಲೆ ಕಬ್ಬು ಇರತಕ್ಕ ನಾನು ಎರಡೂವರೆ ಸಾವಿರ ರೂಪಾಯಿ ಬಾಡಿಗೆ ಕೊಟ್ಟು ಲಾರಿಯಲ್ಲಿ ತುಂಬಿಸಿಕೊಂಡು ಹೋಗಿ ಹಿಂದೂಪುರಕ್ಕೆ ಸಾಗಿಸತಕ್ಕ ಸಾಮರ್ಥ್ಯ ನನ್ನದು. ಅದರ ಬಗ್ಗೆ ಜಿಲ್ಲಾಧಿಕಾರಿ ಆಗಬಹುದು ಸರ್ಕಾರ ಆಗಬಹುದು, ಸಕ್ಕರೆ ನಿರ್ದೇಶಕರು ಆಗಬಹುದು, ಸಕ್ಕರೆ ಮಂತ್ರಿಗಳಾಗಬಹುದು ನಮ್ಮ ನೆರವಿಗೆ ಬಂದು ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡಬೇಕು. ಕಬ್ಬು ಹೆಚ್ಚುವರಿ ಇರಬಹುದು, ಇದ್ದರೆ ಸರ್ಕಾರ ಯುದ್ಧದೋಪಾದಿಯಲ್ಲಿ ಸಮರೋಪಾದಿಯಲ್ಲಿ ಕಬ್ಬು ಬೆಳೆಗಾರರ ಪ್ರದೇಶದ ಎಲ್ಲಾ ಶಾಸಕರ ಸಭೆ ಮಾಡಿ ಜವಾಬ್ದಾರಿಯುತವಾಗಿ ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬೇಕೆಂದು ಯೋಚನೆ ಮಾಡತಕ್ಕ ಕೆಲಸ ಮಾಡಿದ್ದರೆ ಇವತ್ತು ಈ ಸಮಸ್ಯೆ ಇರುತ್ತಿರಲಿಲ್ಲ. ಆದುದರಿಂದ ಇದರ ಪೂರ್ಣ ಹೊಣೆಗಾರಿಕೆ, ಪೂರ್ಣ ನಷ್ಟಕ್ಕೆ ಕಾರಣ ಸರ್ಕಾರ. ಇವತ್ತು ರೈತರು 250-300 ರೂಪಾಯಿಗಳಿಗೆಲ್ಲ ಕಬ್ಬು ಮಾಡುತ್ತಿದ್ದಾರೆ. ಮೊನ್ನೆ ದಿವಸ ಯಾವ ರೀತಿ ದಾರುಣ ದೃಶ್ಯ ಇತ್ತು ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ, ಇನ್ನು 3-4 ವರ್ಷಗಳಲ್ಲಿ ಏನಾಗುತ್ತದೆಯೋ ಗೊತ್ತಿಲ್ಲ. ಈಗ್ಗೆ 25 ದಿನಗಳ ಹಿಂದೆ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂದಿತ್ತು, ಇಡೀ ದೇಶದಲ್ಲಿ ಕಬ್ಬು ಬೆಳೆಯದೆ ಇರತಕ್ಕ ಪರಿಸ್ಥಿತಿ ಸೃಷ್ಟಿಯಾದರೆ ಆಗಬಹುದು. ಆದುದರಿಂದ ಮೊದಲಿಗೆ ತಾತ್ಕಾಲಿಕವಾಗಿ ಕಬ್ಬು ಬೆಳೆದಿರುವವರ ಸಮಸ್ಯೆಯನ್ನು ಪರಿಹರಿಸಬೇಕಾಗಿದೆ. ಈಗಾಗಲೇ 22-23-24 ತಿಂಗಳು ಆಗತಕ್ಕ ಪರಿಸ್ಥಿತಿ ಬಂದಿದೆ. ಇವತ್ತು ಒಂದು ಟನ್ ಸೌದೆಯೋಪಾದಿಯಲ್ಲಿ ಆಗಿದೆ. ಅದನ್ನು ಸತ್ತ ಕಬ್ಬು ಎಂದು ಕರೆಯುತ್ತಾರೆ. ಸತ್ತ ಕಬ್ಬು ಲೋಡುಗಟ್ಟಲೆ ಸಿಗುತ್ತದೆ. ಆ ಮಟ್ಟದ ಪರಿಸ್ಥಿತಿ ಆಗಿದೆ. ಇದಕ್ಕೆಲ್ಲ ಹೊಣೆಗಾರರು ಯಾರು ಎಂದರೆ ಸರ್ಕಾರ. ಕಬ್ಬು ಬೆಳೆದಿರತಕ್ಕ ರೈತರು ಸಾಲ ಕಟ್ಟುವ ಪರಿಸ್ಥಿತಿಯಲ್ಲಿ ಇಲ್ಲ, ಅವರು ಬದುಕುವ ಪರಿಸ್ಥಿತಿಯಲ್ಲಿ ಇಲ್ಲ, 250 ರಿಂದ 300 ರೂಪಾಯಿ ಅಂದರೆ ಸಭಾಧ್ಯಕ್ಷರ ತಾವು ದಯವಿಟ್ಟು ಯೋಚನೆ ಮಾಡಬೇಕು. 100 ರೂಪಾಯಿ ಕಬ್ಬು ಕುಡಿಯುವುದಕ್ಕೆ 75 ರೂಪಾಯಿ ಲಾರಿಗೆ, 125 ರೂಪಾಯಿ ಉಳಿಯಿತು. 40 ಟನ್ ಕಬ್ಬಿಗೆ 4400 ರೂಪಾಯಿ ಆಯಿತು. ಒಂದು ಎಕರೆಯಲ್ಲಿ ಕಬ್ಬು ಬೆಳೆಯುವುದಕ್ಕೆ ಸೊಸೈಟಿಯಲ್ಲಿ ಕೊಡತಕ್ಕ ಸಾಲ 8 ಸಾವಿರ ರೂಪಾಯಿ. ಅದಕ್ಕೆ ಬಡ್ಡಿ ಸೇರಿಸಿದರೆ 9 ಸಾವಿರ ರೂಪಾಯಿ ಆಯಿತು. ಹೀಗಾದರೆ ರೈತ ಏನು ಮಾಡುವುದಕ್ಕೆ ಸಾಧ್ಯ? ಕಬ್ಬು ಬೆಳೆದ ರೈತ ಇದು ವಾಣಿಜ್ಯ ಬೆಳೆ ಎಂದು ನಂಬಿ ತಾನು ಬದುಕಿನಲ್ಲಿ ಜೀವನ ಸಾಗಿಸಬೇಕೆಂಬ ಪರಿಸ್ಥಿತಿ ಇತ್ತು, ಇವತ್ತು ಅವನು ಸರ್ವನಾಶವಾಗಿದ್ದಾನೆ. ಇದಕ್ಕೆಲ್ಲ ಸರ್ಕಾರ ಹೊಣೆಗಾರಿಕೆ. ಅಂಥ ರೈತರ ಸಾಲ ಮನ್ನಾ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಾ ಇದಕ್ಕೆಲ್ಲ ಪೂರ್ಣ ಜವಾಬ್ದಾರಿ ಸರ್ಕಾರ ಎಂದು ತಮ್ಮ ಪರವಾಗಿ ಸರ್ಕಾರದ ಮೇಲೆ ಹೊಣೆಗಾರಿಕೆ ಹೊರಸುತ್ತಾ ನನ್ನ ಮಾತು ಮುಗಿಸುತ್ತೇನೆ; ನಮಸ್ಕಾರ.

+ ಶ್ರೀ ಕೆ.ಎಸ್. ನಾಗೇಗೌಡ (ಕಿರುಗಾವಲು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು 64ನೇ ನಿಯಮಾವಳಿ ಪ್ರಕಾರ ತಂದಿರತಕ್ಕ ವಿಚಾರ ಅತ್ಯಂತ ಗಂಭೀರವಾದ ವಿಚಾರ. ಇದನ್ನು ನಾವೆಲ್ಲ ಪಕ್ಷಾತೀತವಾಗಿ ನೋಡಬೇಕೆಂಬುದೇ ನನ್ನ ಮನವಿ. ನಾವೆಲ್ಲರೂ ಸಹ ಕಬ್ಬನ್ನು ಬೆಳೆಯತಕ್ಕ ಪ್ರದೇಶವನ್ನು ಪ್ರತಿನಿಧಿಸತಕ್ಕ

ಸದಸ್ಯರಿದ್ದೇವೆ. ಅದರಲ್ಲೂ ಕರ್ನಾಟಕ ರಾಜ್ಯ ಕಬ್ಬು ಬೆಳೆಯಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಂಥದ್ದು. ಇಡೀ ಪ್ರಪಂಚದಲ್ಲಿ, ಯು.ಆರ್. ರಾವ್ ಅವರು ಹೇಳಿದ ಪ್ರಕಾರ ನಮ್ಮ ಭಾಗದಲ್ಲಿ ಬೆಳೆಯತಕ್ಕ ಕಬ್ಬು ಅತ್ಯಂತ ಉತ್ಕೃಷ್ಟವಾದ ಕಬ್ಬು ಎಂದು ಅವರು ಸರ್ಟಿಫೈ ಮಾಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ನಾವು ಮಾಡಿದಂಥ 3-4 ತಪ್ಪುಗಳಿಂದ ನಾವು ಸರ್ಕಾರ ಒಂದರ ಮೇಲೆಯೇ ತಪ್ಪು ಹಾಕತಕ್ಕದ್ದು ಸರಿಯಾದುದಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಒಂದು ವರ್ಷದಲ್ಲಿ ಉದ್ಭವಿಸಿದ ಪರಿಸ್ಥಿತಿ ಅಲ್ಲ, ನಮ್ಮ ಯಡಿಯೂರಪ್ಪನವರಾಗಲಿ, ಪುಟ್ಟಣ್ಣಯ್ಯನವರಾಗಲಿ ಈ ವಿಚಾರದಲ್ಲಿ ಅನುಭವಸ್ಥರು. 10-12 ತಿಂಗಳಿಂದ ಈ ಸಮಸ್ಯೆ ಉದ್ಭವವಾಗಿದ್ದರೆ ಯಾರನ್ನಾದರೂ ಒಬ್ಬರನ್ನು ಜವಾಬ್ದಾರಿ ಮಾಡಿದರೂ ಅರ್ಥ ಇದೆ. ಆದರೆ ಈ ಸಮಸ್ಯೆ 2-3 ವರ್ಷಗಳಿಂದ ಇದೆ. ಮತ್ತು ನಮ್ಮ ರೈತರೂ ಸಹ ಇದರಲ್ಲಿ ಒಂದು ಭಾಗ ಕಾರಣ ಎಂದು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆಂದು ಅನ್ನಿಸುತ್ತದೆ. 2-3 ವರ್ಷಗಳಿಂದ ರೈತರು ಏನು ಬೆಳೆಯನ್ನು ಬೆಳೆದುಕೊಂಡು ಬಂದರೋ ಆ ಬೆಳೆಯನ್ನೂ ಸಹ ಸ್ವಿಚ್ ಆನ್ ಮಾಡಿದ್ದಾರೆ. ನಮ್ಮ ಮನೆಯಲ್ಲಿ 20-25 ಎಕರೆ ಕಬ್ಬು ಬೆಳೆಯತಕ್ಕ ಜಮೀನು ಇದೆ. ನಾವು ಚಿಕ್ಕ ಹುಡುಗರಾಗಿದ್ದಾಗ ನಮ್ಮ ಅಪ್ಪನ ಕಾಲದಲ್ಲಿ ಎಷ್ಟು ಕಬ್ಬು ಬೆಳೆಯುತ್ತಿದ್ದಾರೆಂಬುದನ್ನು ನೋಡಬೇಕಾಗಿದೆ. ನನ್ನ ಅನಿಸಿಕೆ ಏನೆಂದರೆ, ಎರಡು ವಿಚಾರಗಳನ್ನು ಗಂಭೀರವಾಗಿ ಆಲೋಚನೆ ಮಾಡಬೇಕು. ಸರ್ಕಾರ ಮಾಡಬೇಕಾದ ವಿಚಾರ ಯಾವುದು, ರೈತರು ಮಾಡಬೇಕಾದ ವಿಚಾರ ಯಾವುದು, ರೈತರು ಮಾಡಬೇಕಾದ ವಿಚಾರ ಯಾವುದು, ಕಾರ್ಖಾನೆಯವರು ಮಾಡಬೇಕಾದ ವಿಚಾರ ಯಾವುದು ಹಾಗೂ ಖಂಡಸಾರಿಯವರು ಮಾಡಬೇಕಾದ ವಿಚಾರ ಯಾವುದು; ಕೇಂದ್ರ ಸರ್ಕಾರದ ಮಿತಿ ಏನು, ರಾಜ್ಯ ಸರ್ಕಾರದ ಮಿತಿ ಏನು ಎಂಬುದನ್ನು ನಾವು ವಿಮರ್ಶೆ ಮಾಡುವುದಕ್ಕೆ ಇವತ್ತು ಕಾಲ ಅತ್ಯಂತ ಸೂಕ್ತವಾಗಿದೆ. ಇವತ್ತು 15-20 ಲಕ್ಷ ಟನ್ ಕಬ್ಬು ಬೆಳೆದಿದ್ದಾರೆ. ನಮ್ಮ ಸಕ್ಕರೆ ಕಾರ್ಖಾನೆಗಳು ಯಾವಾಗಲೂ ಸೀಸನಲ್ ಕಾರ್ಖಾನೆಗಳು. ಇದುವರೆಗೆ ಅವುಗಳಲ್ಲಿ ಸಂಪೂರ್ಣವಾಗಿ 12 ತಿಂಗಳು ಕಬ್ಬು ಅರೆಯತಕ್ಕ ಟೆಕ್ನಾಲಜಿ ಇಲ್ಲ. ಇನ್ನು ಮುಂದಕ್ಕೆ ಹೊಸ ಟೆಕ್ನಾಲಜಿಯಲ್ಲಿ ನಾವು ವಿಚಾರ ಮಾಡಬೇಕಾಗಿದೆ. ಬೇರೆ ಎಲ್ಲಿಯೂ ಇಲ್ಲ; ಇಡೀ ದೇಶದಲ್ಲಿ ಅಲ್ಲ, ಎಲ್ಲಿಯೂ ಇಲ್ಲ, ಇಡೀ ದೇಶದಲ್ಲಿ ಅಲ್ಲ, ಎಲ್ಲಿಯೂ ಸಹ 12 ತಿಂಗಳು ಕಾಲ ಕಬ್ಬು ಅರೆಯುವುದಕ್ಕೆ ಆಗುವುದಿಲ್ಲ. ಒಂದು ಉದಾಹರಣೆ ಹೇಳುತ್ತೇನೆ, ನಾನು ಸಕ್ಕರೆ ಕಂಪನಿಯ ಛೇರ್ಮನ್ ಆಗಿ 20 ವರ್ಷ ಕೆಲಸ ಮಾಡಿದ್ದೇನೆ. ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಮೊನ್ನೆ ಒಂದು ಟರ್ಬೈನ್ ಹೋಯಿತು. 50 ವರ್ಷಗಳಿಂದಿರತಕ್ಕ ಕಾರ್ಖಾನೆಗಳು, 20 ವರ್ಷಗಳಿಂದಿರತಕ್ಕ ಕಾರ್ಖಾನೆಗಳು, 15 ವರ್ಷಗಳಿಂದಿರತಕ್ಕ ಕಾರ್ಖಾನೆಗಳು ಇವೆ. ಇವತ್ತು ದಿಢೀರ್ ನಮ್ಮ ಬೆಳೆಯಿಂದ ಈ ಪರಿಸ್ಥಿತಿ ಬಂದಿದೆ. ಸರ್ಕಾರ ಏನೂ ಮಾಡಲಿಲ್ಲ ಎಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಮಾನ್ಯ ಪುಟ್ಟಣ್ಣಯ್ಯನವರಿಗೆ ಚೆನ್ನಾಗಿ ಗೊತ್ತಿದೆ. ಮಂಡ್ಯ ಜಿಲ್ಲೆಯಿಂದ ಕಬ್ಬನ್ನು ಹಿರಿಯೂರಿಗೆ ಸಾಗಿಸಿದೆವು. ಅಲ್ಲಿಗೆ ಹೋಗಬೇಕಾದರೆ ನಾವು ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ ಕೊಡುತ್ತೇವೆಂದು ಹೇಳಿದೆವು. ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ 18 ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದೆವು. ನಾನು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕೇಳುತ್ತೇನೆ. ನಾನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಆಡಳಿತ ಪಕ್ಷದಲ್ಲಿ 30 ವರ್ಷಗಳಿಂದ ನೋಡಿದ್ದೇನೆ. 18 ಕೋಟಿ ರೂಪಾಯಿಗಳನ್ನು ಕಬ್ಬು ಸಾಗಾಣಿಕೆಗಾಗಿ ರೈತರಿಗೆ ಕೊಟ್ಟ ಸರ್ಕಾರ ಯಾವುದು ಎಂಬುದನ್ನು ಹೇಳಬೇಕು. ಇವತ್ತು ನಾವು ತಪ್ಪು ಮಾಡಿರತಕ್ಕದ್ದು ಏನು? ನಮ್ಮಿಂದ ಆಗಿರತಕ್ಕ ಒಂದೇ

ಒಂದು ತಪ್ಪು ಎಂದರೆ ಸಾಗಣೆ ಎಂದು ಅಲ್ಲ ಪರ್ಚೇಸ್ ಟ್ಯಾಕ್ಸ್ ಅನ್ನು ನಾವು ಸ್ವಲ್ಪ ಬಿಟ್ಟು ಕೊಡಬೇಕಾಗಿದೆ. ಇವತ್ತು ಎರಡೇ ಎರಡು ವಿಚಾರಗಳನ್ನು ಹೇಳುತ್ತೇನೆ, ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಕಾರ್ಖಾನೆಯಲ್ಲಿ ಬೆಲ್ಲಕ್ಕೆ ಬೆಲೆ ಬಿದ್ದು ಹೋಯಿತು. 1976ರಲ್ಲಿ ನಾನು ಕಾರ್ಖಾನೆಯ ಅಧ್ಯಕ್ಷನಾಗಿದ್ದಾಗ ಕಬ್ಬನ್ನು ಹಾಕಿ ಎಂದು ಮನೆಮನೆಗೆ ಹೋಗಿದ್ದೆ. ಶ್ರೀಮತಿ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡರು ಇಲ್ಲಿಯೇ ಕುಳಿತಿದ್ದಾರೆ ಕೇಳಿ. ಅವರ ಕ್ಷೇತ್ರದಲ್ಲಿ ನಾನು ತೇರಿನ ಮೇಲೆ ನಿಂತುಕೊಂಡು ಕಬ್ಬು ಹಾಕಿ, ಗಾಣಗಳಿಗೆ ಕಬ್ಬು ಹೊಡೆಯಿರಿ ಎಂದು ಹೇಳಿದೆ. ಗಾಣದವರು ನಮಗೆ ಲೆವಿ ಕೊಡಿ ಎಂದು ಕೇಳಿದಂತ ಪ್ರಸಂಗಗಳೂ ಇವೆ.

ಕಬ್ಬಿಲ್ಲದೆ ಕಾರ್ಖಾನೆಗಳು ನಷ್ಟವಾದಂಥ ಪ್ರಸಂಗಗಳಲ್ಲಿ ಇದ್ದಾವೆ. ಜಾಸ್ತಿ ಕಬ್ಬಾಗಿ ಅರೆಯುವುದಕ್ಕೆ ಆಗದೇ ಇರುವಂಥ ಪ್ರಸಂಗ ಇವತ್ತು ಬಂದಿದೆ. ಆದರೆ ಎಂದೂ ಕೂಡ ಯಾವ ಸರ್ಕಾರವೂ ಕೂಡ 18 ಕೋಟಿ ರೂಪಾಯಿ ಪರಿಹಾರವನ್ನು ಕೊಟ್ಟಿರಲಿಲ್ಲ. ಆದರೆ ಇವತ್ತು ಟ್ರಾನ್ಸ್‌ಪೋರ್ಟಿಗೆ ಕೊಟ್ಟಿದ್ದೀರಿ. ಇಲ್ಲ ಎಂದು ನಾವು ಹೇಳುವುದಿಲ್ಲ, ಅಂದರೆ ಒಂದು ನಮ್ಮ ಸರ್ಕಾರ ಏನು ಮಾಡಬೇಕೆಂದರೆ, ಕಬ್ಬನ್ನು ಕನಿಷ್ಠ 10 ರಿಂದ 11 ತಿಂಗಳವರೆಗೆ ಕಾರ್ಖಾನೆಯವರು ಅರೆಯುವಂತೆ ಮಾಡಬೇಕು; ಇದೊಂದು. ಎರಡನೆಯದು ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಗಾಣಗಳಿದ್ದಾವೆ. ಅವಕ್ಕೆ ಯಾವ ರಿಸ್ಟ್ರಿಕ್ಷನ್ನೂ ಇರಕೂಡದು. ನಾನು ಸಕ್ಕರೆ ಮಂತ್ರಿಗಳಿಗೆ ನಾಲ್ಕೈದು ಸಾರಿ ಹೇಳಿದ್ದೇನೆ, ಗಾಣಗಳಿಗೆ ಜಿಲ್ಲಾಧಿಕಾರಿಗಳಾಗಲೀ ಅಥವಾ ರೆವಿನ್ಯೂ ಅಥಾರಿಟೀಸ್ ಆಗಲೀ ಅಥವಾ ಇಂಡಸ್ಟ್ರಿಯಲ್ ಅಥಾರಿಟೀಸ್ ಆಗಲೀ ಅವರನ್ನು ಟಚ್ ಮಾಡಬೇಡಿ. ಗಾಣಗಳು ಅಂದರೆ ಹಳ್ಳಿಗಾಡಿನಲ್ಲಿ ರೈತರು ಅದನ್ನು ಇಟ್ಟುಕೊಂಡು ಬೆಲ್ಲ ಮಾಡತಕ್ಕದ್ದು. ಆದ್ದರಿಂದ ಅವರಿಗೆ ಸಂಪೂರ್ಣವಾಗಿ ಎಲ್ಲಾ ನಿರ್ಬಂಧಗಳನ್ನು ತೆಗೆದು ಗಾಣಗಳನ್ನು ಗ್ರಾಮೀಣ ಕೃಷಿ ಕೈಗಾರಿಕೆ ಅಂತ ಹೇಳಿ ಘೋಷಣೆ ಮಾಡಿ ಅವರಿಗೆ ಸಬ್ಸಿಡಿ ಕೊಟ್ಟು ಹೆಚ್ಚು ಕಬ್ಬನ್ನು ಬೆಲ್ಲ ಮಾಡಿ ಅವರ ಕೈಯಲ್ಲಾದಷ್ಟು ಸ್ಥಳೀಯವಾಗಿ ಮಾಡಿಕೊಂಡು ಹೋಗುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡತಕ್ಕದ್ದು ಎರಡನೇ ಮಾರ್ಗ. ಮೂರನೇ ಮಾರ್ಗ; ಯಾರು ಹೆಚ್ಚು ಕಬ್ಬು ಅರೆದರೆ ನಷ್ಟವಾಗುತ್ತಾ ಇದೆ, ಈಗ ಪಾಂಡವಪುರ ನಮ್ಮ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯಾಗಲೀ, ಮೈಸೂರು ಸಕ್ಕರೆ ಕಾರ್ಖಾನೆಯಾಗಲೀ ಕಬ್ಬು ಅರೆದರೆ ಅಲ್ಲಿ ಇವತ್ತಿನ ದಿವಸ ರಿಕವರಿ ಕಡಿಮೆ ಬರುತ್ತದೆ ಅನ್ನತಕ್ಕಂಥದ್ದು ಅವರ ಭಾವನೆಯಾಗಿದೆ. ಅವರು ನಾಳೆ ರೈತರಿಗೆ ಹಣ ಕೊಡದೇ ಇರುವಂಥ ಪ್ರಸಂಗವೂ ಬಂದು ಹೋಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ಪರ್ಚೇಸ್ ಟ್ಯಾಕ್ಸನ್ನು ಯಾವುದು ಸೀಸನಲ್ ಪೀರಿಯಡ್‌ನಲ್ಲಿ ಅರೆಯುತ್ತಾರೆ ಅಥವಾ ಯಾವುದು ಹೆಚ್ಚುವರಿ ಅರೆಯುತ್ತಾರೆ ಅಂಥ ಕಡೆ ಸ್ವಲ್ಪ ಹೆಚ್ಚು ಕಾಲ ಅರೆದರೆ ಅಥವಾ ಒಂಭತ್ತು, ಒಂಭತ್ತೂವರೆ ಹತ್ತು ತಿಂಗಳು ಅರೆಯತಕ್ಕಂಥ ಕಾರ್ಖಾನೆ ಅಥವಾ ಹನ್ನೊಂದು ತಿಂಗಳಲ್ಲಿ ಅರೆದರೆ ಒಂದು ತಿಂಗಳಲ್ಲಿ ಏನಾದರೂ ಹೆಚ್ಚು ಕಡಿಮೆ ಇದ್ದರೆ ಪರ್ಚೇಸ್ ಟ್ಯಾಕ್ಸನ್ನು ಸ್ವಲ್ಪ ಬಿಟ್ಟು ಕೊಡುವ ಬಗ್ಗೆ ನೋಡಬೇಕೇ ವಿನಾ ಸರ್ಕಾರ ದಿಢೀರನೇ ಕಾರ್ಖಾನೆ ಮಾಡುವುದಕ್ಕಾಗುವುದಿಲ್ಲ. ಇವತ್ತು 9 ಕಾರ್ಖಾನೆಗಳಿಗೆ ಅವಕಾಶ ಕೊಟ್ಟಿದ್ದಾರೆ, ಇನ್ನೂ 6 ಕಾರ್ಖಾನೆಗಳನ್ನು ಕೊಡುತ್ತಿದ್ದಾರೆ ಯಡಿಯೂರಪ್ಪನವರೆ, 15 ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರ ಅನುಮತಿ ಕೊಡುತ್ತಿದೆ. ನೀವು ಹೇಳಿದ ನಾಲ್ಕು ಕಾರ್ಖಾನೆ, ಭಾಲ್ಕಿ ಕಾರ್ಖಾನೆ ಎಲ್ಲಾ ಇದ್ದಾವೆ ಅವರು ವಿನಾಕಾರಣ ಫೈನಾನ್ಸ್ ರಿಸೋರ್ಸಸ್ಸನ್ನು ಮಾಡಿಕೊಳ್ಳದೇ ಕೇಂದ್ರ ಸರ್ಕಾರದಿಂದ ಲೈಸೆನ್ಸ್ ತೆಗೆದುಕೊಂಡು ಬಂದು ಇಟ್ಟುಕೊಂಡು ಕುಳಿತುಕೊಂಡರೆ ರಾಜ್ಯ ಸರ್ಕಾರ ಏನು ಮಾಡುವುದಕ್ಕಾಗುತ್ತದೆ. ಎನ್ನುವುದನ್ನು ನಾವು ಆಲೋಚನೆ ಮಾಡಬೇಕು. ನಾನು

ಎಷ್ಟೋ ಸಾರಿ ಅರ್ಜುನ್‌ಸಿಂಗ್ ಅವರನ್ನು ಮೀಟ್ ಮಾಡಿದ್ದೆ. ಯು.ಪಿ.ಯಲ್ಲಿ 30 ಪರ್ಸೆಂಟ್ ಕ್ರಷ್ ಮಾಡಿಲ್ಲ, ಯು.ಪಿ.ಯಲ್ಲಿ 300 ರೂಪಾಯಿ 250 ರೂಪಾಯಿಗೆ ಕಬ್ಬು ತೆಗೆದುಕೊಳ್ಳುತ್ತಿದ್ದಾರೆ. ಇದು ನಮ್ಮ ರಾಜ್ಯಕ್ಕೆ ಮಾತ್ರ ಬಂದಿರತಕ್ಕ ಪರಿಸ್ಥಿತಿಯಲ್ಲ. ಈ ಪರಿಸ್ಥಿತಿಯನ್ನು ನಾವು ಅರ್ಥ ಮಾಡಿಕೊಂಡು ಒಂದನೆಯದು, ಪರ್ಚೇಸ್ ಟ್ಯಾಕ್ಸನ್ನು ನಾವು ಬಿಟ್ಟುಕೊಡತಕ್ಕಂಥದ್ದು, ಎರಡನೆಯದು ಟ್ರಾನ್ಸ್‌ಪೋರ್ಟಿಗೆ ಹಣ ಕೊಡತಕ್ಕಂಥದ್ದು ಮೂರನೆಯದು ಹೆಚ್ಚು ಗಾಣಗಳಿಗೆ ಅವಕಾಶ ಕೊಡತಕ್ಕಂಥದ್ದು ಹೆಚ್ಚು ಒಂದು ತಿಂಗಳ ಕಾಲ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಡ್ಡಾಯವಾಗಿ ಅರೆಯಬೇಕು ಎಂದು ಹೇಳಿ ಹೆಚ್ಚು ಅರೆಯುವುದಕ್ಕೆ ಅವಕಾಶ ಮಾಡಿಕೊಡುವಂಥದ್ದು. ಇವತ್ತು ಮಹಾರಾಷ್ಟ್ರದಲ್ಲಿ ಅವರು ಒಪ್ಪಲಿಲ್ಲ. ಮಹಾರಾಷ್ಟ್ರದಲ್ಲಿ ಬೇಕಾದಷ್ಟಿದೆ. ನಾವು ವಸಂತದಾದಾ ಅವರ ಕಾಲದಿಂದ ನೋಡಿಕೊಂಡು ಬಂದಿದ್ದೇವೆ. ಸಾಂಗ್ಲಿ ಫ್ಯಾಕ್ಟರಿ ಅತ್ಯಂತ ಒಳ್ಳೆ ಶುಗರ್ ಫ್ಯಾಕ್ಟರಿ. ಅದನ್ನೂ ಕೂಡ ನೋಡಿಕೊಂಡು ಬಂದಿದ್ದೇವೆ. ಮಹಾರಾಷ್ಟ್ರದಲ್ಲೂ ಕೂಡ ಕಬ್ಬು ಜಾಸ್ತಿಯಾಗಿದೆ. ಎಲ್ಲಾ ಕಡೆ ಕಬ್ಬು ಜಾಸ್ತಿಯಾಗಿ ರೈತರೂ ಕೂಡ ಜಾಸ್ತಿ ಕಬ್ಬು ಬೆಳೆದು ಇವತ್ತು ಕಾರ್ಖಾನೆಯಲ್ಲೂ ಕಡಿಮೆ ಕೆಪಾಸಿಟಿಯಲ್ಲಿ ಅರೆಯುತ್ತಿರುವುದರಿಂದ ತೊಂದರೆಯಾಗಿದೆ. ಇವತ್ತು ನೀವು ಎಲ್ಲಾ ಅರೆದರೂ ಒಂದೂವರೆ ಕೋಟಿ ಅರೆಯಬಹುದು ಅಷ್ಟೇ ಅದೂ ಹನ್ನೊಂದು ತಿಂಗಳು ಅರೆದರೆ, ಈ ವರ್ಷ ಜಾಸಿತಿ ಅರೆದರೆ ಬರುವ ವರ್ಷ ಕಬ್ಬು ಅರೆಯುವುದಕ್ಕಾಗುವುದಿಲ್ಲ. ಫ್ಯಾಕ್ಟರಿ ಕ್ಲೀನ್ ಆಗುವುದಿಲ್ಲ, ಫ್ಯಾಕ್ಟರಿ ಕ್ಲೀನ್ ಆಗದಿದ್ದರೆ ಬರುವ ವರ್ಷಕ್ಕೆ ಸಮಸ್ಯೆಯಾಗುತ್ತದೆ. ಆದ್ದರಿಂದ ನಮಗೆ ಏನ ಅನ್ನಿಸಿದೆ ಎಂದರೆ ನೀವು ಏನಾದರೂ ಮಾಡಿ ಬೆಲ್ಲದ ಕಡೆ ಜನರನ್ನು ಹೋಗುವಂತೆ ಮಾಡಬೇಕು. ಆಮೇಲೆ ಖಂಡಸಾರಿಯವರು ಬಗ್ಗೆ ಪುಟ್ಟಣ್ಣಯ್ಯನವರು ಹೇಳಿದರು. ಖಂಡಸಾರಿಯವರು ಸ್ವಲ್ಪ ಕಳ್ಳಾಟ ಆಡಿದ್ದಾರೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಖಂಡಸಾರಿಯವರು ಕಳ್ಳಾಟ ಆಡಿದ್ದಾರೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಚನ್ನಗಾಲ್ ಗ್ರಾಮದಲ್ಲಿ ಖಂಡಸಾರಿ ಕಾರ್ಖಾನೆ ಇನ್ನೂ ಶುರುವಾಗಿಲ್ಲ. ಇನ್ನೂ ಶುರು ಮಾಡಿಲ್ಲ ಅಂದರೆ ಇದಕ್ಕೆ ಕಾರಣ ಯಾರು? ಸರ್ಕಾರ ಒತ್ತಡ ತರಬೇಕು. ಏಕೆಂದರೆ ಖಂಡಸಾರಿ ಏರಿಯಾದಲ್ಲಿರತಕ್ಕ ರೈತರು ಖಂಡಸಾರಿಯನ್ನೇ ನಂಬಿಕೊಂಡು ಕಬ್ಬು ಹಾಕಿರುತ್ತಾರೆ. ಪ್ರತಿ ವರ್ಷ 50 ಸಾವಿರಾನೋ, 1 ಲಕ್ಷ ಟನ್ನೋ ಅವರು ತೆಗೆದುಕೊಳ್ಳುತ್ತಾರೆ. ಎಂಬ ಉದ್ದೇಶದ ಮೇಲೆ ಕಬ್ಬು ಹಾಕಿರುತ್ತಾರೆ. ಆದರೆ ಆ ಚನ್ನಗಾಲ್ ಫ್ಯಾಕ್ಟರಿ ತೆಗೆದುಕೊಂಡಿರತಕ್ಕ ಮೋಡೇಸ್ ಕಾರ್ಖಾನೆ ಇನ್ನೂ ಶುರು ಮಾಡಿಲ್ಲ. ಅದಕ್ಕೆ ಕಾರಣ ಏನು ಎಂದು ಸರ್ಕಾರ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ರೈತರ ಜೀವನದ ಜೊತೆ ಚೆಲ್ಲಾಟ ಆಡುತ್ತಿಲ್ಲವೇನು? ಯಾವುದೇ ಸರ್ಕಾರ ಇರಲಿ. ಯಾವ ರೈತ ಕಬ್ಬನ್ನು ಬೆಳೆದು ಅವನು ಬದುಕುವಂಥ ವ್ಯವಸ್ಥೆ ಮಾಡಿಕೊಂಡಿದ್ದ, ಕಬ್ಬನ್ನು ಬೆಳೆದು ಬೆಲ್ಲ ಮಾಡುವಂಥ ವ್ಯವಸ್ಥೆ ಮಾಡಿಕೊಂಡಿದ್ದ ಆ ರೀತಿ ಬೆಲ್ಲ ಮಾಡುವ ರೀತಿಯಲ್ಲಿ ಸರ್ಕಾರದ ಸುತ್ತೋಲೆ ಹಾಕಿ, ಸೀಟ್ ಮಾಡಿ ಕೇಸ್ ಹಾಕಿ ಅವನ ಮನೆ ಹಾಳು ಮಾಡಿದವರು ನಾವೇನೆ. ಖಂಡಸಾರಿಯವರು ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡಿದರೆ ಅವರಿಗೆ ಕಿರುಕುಳ ಕೊಡದೆ ಅವರಿಗೆ ಬೇಕಾದಂಥ ಸವಲತ್ತನ್ನು ಒದಗಿಸಿಕೊಟ್ಟು ಮಾಡಬೇಕು. ಏಕೆಂದರೆ ಖಂಡಸಾರಿ ಒಬ್ಬ ಮಾಲೀಕನ ಪ್ರಶ್ನೆ ಅಲ್ಲ. ಅಲ್ಲಿ ಸ್ವಲ್ಪ ಕಬ್ಬು ಕ್ರಷ್ ಆಗಿದ್ದರೆ ಅಷ್ಟು ಭಾರ ನಮಗೆ ಕಡಿಮೆಯಾಗುತ್ತಿತ್ತು. ರೈತ ಉಳಿಮುಕೊಳ್ಳುತ್ತಿದ್ದ. ಅವನ ಸಂಕಷ್ಟಗಳನ್ನು ಬಗೆಹರಿಸತಕ್ಕ ಯಾವುದೇ ಪ್ರಯತ್ನ

ಮಾಡಲಿಲ್ಲ. ಪಕ್ಕದ ರಾಜ್ಯಗಳಿಗೆ ಕಬ್ಬನ್ನು ಸಪ್ಲೈ ಮಾಡುವಂಥ ಸಂದರ್ಭ ಇದ್ದಾಗ ನಾವೇ ನಮ್ಮ ಸರ್ಕಾರಗಳು ಸುತ್ತೋಲೆಗಳನ್ನು ಹೊರಡಿಸಿ ಕಬ್ಬನ್ನು ಪಕ್ಕದ ರಾಜ್ಯಗಳಿಗೆ ಕೊಡುವುದಿಲ್ಲ ಎಂದು ಹೇಳಿದಾಗ ನಿಮಗೆ ಅರೆಯುವುದಕ್ಕೆ ಅವಕಾಶ ಇಲ್ಲದ ಕಬ್ಬು ಕೊಡಿ ಎಂದು ಕೇಳುವುದು ಹೇಗೆ? ನಿಮಗೇ ಗೊತ್ತಿರುವ ಹಾಗೆ ನೀವು ಅದರಲ್ಲಿ ನುರಿತವರು, ಅಧ್ಯಕ್ಷರಾಗಿದ್ದವರು. ಅದಕ್ಕೆ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಸಹಕಾರಿ ವಲಯದಲ್ಲಿ ಸುಮಾರು 17 ಸಕ್ಕರೆ ಕಾರ್ಖಾನೆಗಳು ಏನಿವೆ ಅದಕ್ಕೆ 32 ಕೋಟಿ ರೂಪಾಯಿ ಷೇರು ಹಣ ನೀವು ಕೊಟ್ಟಿದ್ದೀರಿ. ಕಳೆದ ಐದು ವರ್ಷಗಳ 9 ಸಕ್ಕರೆ ಕಾರ್ಖಾನೆಗಳಲ್ಲಿ 67 ಕೋಟಿ ರೂಪಾಯಿ ಲುಕ್ಸಾನಾಗಿದೆ. ಸಕ್ಕರೆ ಸಚಿವರು ಏನು ಮಾಡುತ್ತಿದ್ದರು? ಆ ಇಲಾಖೆ ಏನು ಮಾಡುತ್ತಿತ್ತು? ಯಾರನ್ನು ಜೈಲಿಗೆ ಕಳುಹಿಸಿದಿರಿ? ಇವತ್ತು ಒಂದು ಟನ್ ಕಬ್ಬಿಗೆ ಒಂದು ಕ್ವಿಂಟಾಲ್ ಸಕ್ಕರೆ ಆಗುತ್ತಿರುವಂಥ ಕಾಲದಲ್ಲಿ ಲಾಭದಾಯಕವಾಗಿ ಕೋಟ್ಯಾಂತರ ರೂಪಾಯಿ ಉಳಿಸತಕ್ಕ ಕಾಲದಲ್ಲಿ ಅಲ್ಲಿ ಮ್ಯಾನೇಜ್ ಮೆಂಟಿನಲ್ಲಿ ಹೆಗ್ಗಣಗಳು ಸೇರಿಕೊಂಡು ಲೂಟಿ ಆಗುತ್ತಿದ್ದರೆ ಸರ್ಕಾರ ಕೈಕಟ್ಟಿಕೊಂಡು ಕುಳಿತಿರಬೇಕಾದರೆ ರೈತ ಏನು ಮಾಡಬೇಕು ಈ ಪರಿಸ್ಥಿತಿಯಲ್ಲಿ? ಅದಕ್ಕೆ ಪರಿಹಾರ ಅಂದರೆ ಈಗ ಏನು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ 75 ಲಕ್ಷ ಟನ್ ಒಣಗುತ್ತದೆ ಎಂದು ಸರ್ಕಾರಕ್ಕೆ ಏನು ವರದಿ ಬಂದಿದೆ ಅವನನ್ನು ಉಳಿಸುವುದಕ್ಕೆ ತಕ್ಷಣಕ್ಕೆ ಏನು ಕಾರ್ಯಕ್ರಮ ಮಾಡಬೇಕೆಂದು ಸಲಹೆ ಕೊಡುತ್ತೀರೋ ನೋಡಿ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಮೂರು ವಿಚಾರಗಳೇನಿವೆ ಅದು ನಮ್ಮ ಸರ್ಕಾರ ಬಂದಮೇಲೆ ಮಾಡಿಲ್ಲ. ಗಾಣಗಳಿಗೆ ಯಾವುದೇ ಆದಂಥ ನಿರ್ಬಂಧ ಇಲ್ಲ. ಡೈರೆಕ್ಟರ್ ಆಫ್ ಶುಗರ್ಸ್ ಏರಿಯಾ ಜ್ಯೂರಿಸ್‌ಡಿಕ್ಷನ್ ಏನು ಮಾಡಿದವರು ಅದನ್ನು ನಾವು ರಿಮೂವ್ ಮಾಡಿದ್ದೇವೆ. ಎಲ್ಲಿಂದ ಎಲ್ಲಿಗೆ ಬೇಕಾದರೂ ಸಾಗಾಣಿಕೆ ಮಾಡಬಹುದು ಎಂದು ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೀದರ್‌ನಲ್ಲಿ ಮಾಡಿರುವ ಸರ್ಕಾರಿ ಆಜ್ಞೆಯನ್ನು ನಾನು ಕಳುಹಿಸಿಕೊಡಲೇ? ಬೀದರ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ಸುತ್ತೋಲೆ ಹೊರಡಿಸಿದ್ದಾರೆ. ಕರಪತ್ರ ಹಂಚಿದ್ದಾರೆ. ಬೆಲ್ಲ ಮಾಡಬಹುದು ಕಬ್ಬನ್ನು ಕಳುಹಿಸಿಕೊಡಬಾರದು ಎಂದು ನೀವು ಅಧಿಕಾರಕ್ಕೆ ಬಂದ ಮೇಲೆ ಹೊರಡಿಸಿರುವಂಥ ಸುತ್ತೋಲೆ.

ಶ್ರೀ ಕೆ.ಎನ್. ನಾಗೇಗೌಡ : ನಾವು ನಮ್ಮ ಜಿಲ್ಲೆಯಲ್ಲಿ ಬೆಳಗ್ಗೆಯಿಂದ ಸಾಯಂಕಾಲದ ವರೆಗೆ ಬೆಲ್ಲ ಮತ್ತು ಕಬ್ಬು ಸಾಗಾಣಿಕೆ ಮಾಡತಕ್ಕ ರೈತರ ಹತ್ತಿರವೇ ಇರುವುದು. ನನಗೆ ಗೊತ್ತಿರುವ ಹಾಗೆ ಪುಟ್ಟಣ್ಣಯ್ಯನವರು ನನಗಿಂತ ಜಾಸ್ತಿ ರೈತರಾಗಿದ್ದಾರೆ. ಯಾವುದೇ ನಿರ್ಬಂಧ ನಮ್ಮ ಏರಿಯಾದಲ್ಲಿ ಇಲ್ಲ. ನಾವುಗಳೇ ಸಕ್ಕರೆ ಕಾರ್ಖಾನೆ ಛೇರ್ಮನ್ನರಾಗಿದ್ದಾಗ ಏರಿಯಾ ಮಾಡಿಕೊಟ್ಟೆವು. ಗ್ರಾಮ ಮಾಡಕೂಡದು ಎಂದು ರಿಸ್ಟ್ರಿಕ್ಟ್ ಮಾಡಿದೆವು. ಅವೆಲ್ಲವೂ ಹಿಂದೆ ಇತ್ತು. ಆದರೆ ಒಂದು ವರ್ಷದಿಂದ ಇಲ್ಲ. ಈಗ ತಾತ್ಕಾಲಿಕವಾಗಿ ಮಾಡಬೇಕಾದ್ದು ಏನೆಂದರೆ ಒಂದು ತಿಂಗಳ ಕಾಲ ಎಲ್ಲಾ ಕಾರ್ಖಾನೆಗಳು ಅರೆಯಬೇಕು. ಎಲ್ಲಾ ಖಂಡಸಾರಿ ಕಾರ್ಖಾನೆಗಳನ್ನು ಪ್ರಾರಂಭ ಮಾಡಬೇಕು ಮತ್ತು ಗಾಣದವರಿಗೆ ಸಂಪೂರ್ಣವಾಗಿ ಎಲ್ಲಾ ನಿರ್ಬಂಧವನ್ನು ತೆಗೆದುಹಾಕಿ ಲೈಸೆನ್ಸ್ ಫೀಸ್ ಇಲ್ಲ ಮತ್ತೊಂದಿಲ್ಲ ಎಂದು ಹೇಳಬೇಕು. ಅವರಿಗೆ ಪವರ್ ಇಲ್ಲ ಅಂದರೆ ಗಾಣದವರಿಗೆ ಡೀಸಲ್ ಸೆಟ್ ಕೊಟ್ಟು ಅರೆಯುವಂಥದ್ದು ಮಾಡಬೇಕೇ ವಿನಾ ಇನ್ನು ಬೇರೆ ಯಾರೂ ತೆಗೆದುಕೊಳ್ಳುವುದಿಲ್ಲ. ಯಾವ ರಾಜ್ಯಗಳಲ್ಲೂ ಕಬ್ಬು ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ನಾವೆಲ್ಲಾ ಕೇಂದ್ರದಲ್ಲಿ ಮಾತನಾಡಿ ಆಗಿದೆ. ರಾಜ್ಯದಲ್ಲಿ ಮಾತನಾಡಿ ಆಗಿದೆ. ಕಾರ್ಖಾನೆಗಳ ಹತ್ತಿರ ಮಾತನಾಡಿ ಆಗಿದೆ. ಒಂದನ್ನು ಮಾತ್ರ

ಸರ್ಕಾರ ಮಾಡಬಹುದು. ಮಾನ್ಯ ಯಡಿಯೂರಪ್ಪನವರು ಒಂದು ಫ್ಯಾಕ್ಟರಿ ವಿಚಾರ ಹೇಳಿದರು. ಈ ಫ್ಯಾಕ್ಟರಿ ಕೆಪಾಸಿಟಿ 2.5. ಲಕ್ಷ ಟನ್ಸ್ ಇದ್ದರೆ ಅವರು ಕ್ರಷ್ ಮಾಡಿರುವುದು 2 ಲಕ್ಷ . ಟನ್ಸ್ ಇದ್ದರೆ ಇನ್ನೂ 50 ಸಾವಿರ ಟನ್ ಅರೆಯಬೇಕಾಗಿದ್ದು ಅವರದೇ ಇದ್ದರೆ ಆಗ ನಾವು ಅರೆಯಲೇಬೇಕು ಎಂದು ಹೇಳಿ ಅವರಿಗೆ ಒತ್ತಾಯ ಮಾಡಿದರೆ ಅದರಿಂದ ಪ್ರಯೋಜನವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷತೆಯಲ್ಲಿ ಒಂದ ಹೈ ಪವರ್ ಕಮಿಟಿ ಇದೆ. ಅದರಲ್ಲಿ ಎಲ್ಲಾ ಶುಗರ್ ಫ್ಯಾಕ್ಟರಿ ಛೇರ್ಮನ್ನರುಗಳಿದ್ದಾರೆ. ಖಾಸಗಿ ಶುಗರ್ ಫ್ಯಾಕ್ಟರಿಯವರು ಇನ್ನೂ ಕಳ್ಳಾಟ ಆಡುತ್ತಿದ್ದಾರೆ. ಕಾರಣ ಏನೆಂದರೆ ಅವರಿಗೆ ರಿಕವರಿ ಕಡಿಮೆ ಬರುತ್ತಿದೆ. ಜಾಸ್ತಿ ಅರೆದಷ್ಟು ನಷ್ಟವಾಗುತ್ತದೆ. ಹೆಚ್ಚು ಕಬ್ಬು ಅರೆದರೆ ಹೆಚ್ಚು ನಷ್ಟವಾಗುತ್ತದೆ ಎಂದು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ಸರ್ಕಾರ ತಡೆಗಟ್ಟಬಹುದು. ಹೆಚ್ಚು ಅರೆಯಲೇಬೇಕು ಎಂದು ಹೇಳಿ ನಿರ್ಬಂಧ ಹಾಕಬಹುದು. ಅವರಿಗೆ ಟಾರ್ಗೆಟ್ ಫಿಕ್ಸ್ ಮಾಡಬೇಕು. ಎಲ್ಲಾ ಶುಗರ್ ಫ್ಯಾಕ್ಟರಿಗಳಿಗೆ ಟಾರ್ಗೆಟ್ ಫಿಕ್ಸ್ ಮಾಡಬೇಕು. ಸ್ವಾಮಿ, 20 ತಿಂಗಳಿಂದ ಕಬ್ಬನ್ನು ಅರೆಯದೇ ಇರುವಂಥ ಕಾರ್ಖಾನೆಗಳಿವೆ. ಈಗ 18-20 ತಿಂಗಳು ಕಬ್ಬು ಅರೆದರೆ 8 ಪರ್ಸೆಂಟ್ ಮೇಲೆ ಶುಗರ್ ಬರುವುದಿಲ್ಲ, ನಷ್ಟವಾಗುತ್ತದೆ. ನಷ್ಟ ಆದರೂ ಕೂಡ ನಾವು ಪರ್ಚೇಸ್ ಟ್ಯಾಕ್ಸ್ ಬಿಟ್ಟುಕೊಡುತ್ತೇವೆ. ನಿಮಗೆ ಟ್ರಾನ್ಸ್ ಪೋರ್ಟ್ ಕನ್‌ಸೆಕ್ಷನ್ ಕೊಡುತ್ತೇವೆ, ನೀವು ಅರೆಯಲೇಬೇಕು, ರೈತರನ್ನು ಉಳಿಸಬೇಕು ಎಂದು ಸರ್ಕಾರ ಆದೇಶ ಮಾಡಿದರೆ ಮಾತ್ರ ಸರಿಹೋಗುತ್ತದೆಯೇ ಹೊರತು ಬೇರೆ ಯಾವುದೇ ಮಾರ್ಗ ಇಲ್ಲ ಎನ್ನತಕ್ಕದ್ದನ್ನು ಹೇಳಿ ಈ ಮೂರನ್ನು ಸರ್ಕಾರ ಕೂಡಲೇ ಮಾಡಬೇಕು ಎಂದು ಹೇಳಿ ಸರ್ಕಾರದಲ್ಲಿ ನಾನು ಮನವಿ ಮಾಡುತ್ತೇನೆ.

ಶ್ರೀ ಎಸ್. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಖಾಸಗಿ ಶುಗರ್ ಫ್ಯಾಕ್ಟರಿಗೆ ಕಬ್ಬನ್ನು ಏನು ನಾವು ಕೊಡುತ್ತೇವೆ ಅದಕ್ಕೆ ಕಟಿಂಗ್ ಛಾರ್ಜೂ ಕೂಡ ಕೊಡುತ್ತಿಲ್ಲ. ರೈತರ ಕಷ್ಟ ಏನಿದೆ ಅಂದರೆ ಕಬ್ಬು ಕೊಟ್ಟರೆ ಅದಕ್ಕೆ ಟ್ರಾನ್ಸ್‌ಪೋರ್ಟೇಷನ್ ಛಾರ್ಜ್ ಕೊಡುತ್ತಿಲ್ಲ. ಕಟಿಂಗ್ ಛಾರ್ಜ್ ಕೊಡುತ್ತಾ ಇಲ್ಲ, ಮತ್ತೆ ಹಣ ಏನು ಬಾಕಿ ಕೊಡಬೇಕು ಅದನ್ನು ಕೊಡುತ್ತಾರೆ ಎಂಬ ನಂಬಿಕೆಯೇ ಹೊರಟುಹೋಗಿದೆ. ಬೆಳೆದಿರತಕ್ಕಂಥ ಕಬ್ಬನ್ನು ಖಾಸಗಿ ಫ್ಯಾಕ್ಟರಿಯವರು ಏನಾದರೂ ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕಾದರೆ ಪಕ್ಕವಾದ ರಿಜಿಸ್ಟ್ರೇಷನನ್ನು ರೈತರಿಗೆ ಕೊಡುತ್ತಿಲ್ಲ ಅವರಿಷ್ಟ ಬಂದ ಹಾಗೆ ಅವರು ನೋಂದಾಯಿಸಿಕೊಳ್ಳುತ್ತಿದ್ದಾರೆ. ಇಷ್ಟಬಂದ ಹಾಗೆ ಅವರು ಪರ್ಮಿಟ್ ಕೊಡುತ್ತಿದ್ದಾರೆ. ಖಾಸಗಿ ಫ್ಯಾಕ್ಟರಿಯವರು ಇವತ್ತಿನ ದಿವಸ ಕಬ್ಬಿನ ರಸಕ್ಕೆ ಬದಲಾಗಿ ರೈತರ ರಕ್ತವನ್ನು ಹೀರುವಂಥ ಸ್ಥಿತಿಯಲ್ಲಿದ್ದಾರೆ. ನಾನು ಸಭಾಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಕಡೇ ಪಕ್ಷ ಏನು ಕಬ್ಬನ್ನು ಶುಗರ್ ಫ್ಯಾಕ್ಟರಿಗೆ ಹೊಡೆದಿದ್ದಾರೆ ಅವರ ಕಟಿಂಗ್ ಛಾರ್ಜನ್ನು ತಾತ್ಕಾಲಿಕವಾಗಿಯಾದರೂ ಕೊಡುವಂತೆ ವ್ಯವಸ್ಥೆ ಮಾಡಬೇಕು. ಮೂರು ತಿಂಗಳು ನಾಲ್ಕು ತಿಂಗಳಾದರೂ ಒಂದು ರೂಪಾಯಿ ಕಟಿಂಗ್ ಛಾರ್ಜನ್ನು ಕೊಟ್ಟಿಲ್ಲ, ಉದಾಹರಣೆಗೆ ಹೇಳುವುದಾದರೆ ಮಹದೇಶ್ವರ ಶುಗರ್ ಫ್ಯಾಕ್ಟರಿಯವರು ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಸರ್ಕಾರ ಇದರ ಕಡೆ ಗಮನ ಹರಿಸಿ ರೈತರ ಕಷ್ಟಕ್ಕೆ ಭಾಗಿಯಾಗಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

1.20 ಪಿ.ಎಂ.

ಉಪಾಧ್ಯಕ್ಷರು : ಮಾನ್ಯ ಶಿವರಾಮೇಗೌಡರೆ ತಾವು ಹೆಚ್ಚಿಗೆ ಮಾತನಾಡಬಾರದು ಬೇಗ ಮುಗಿಸಿ. ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವವರಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ದಯಮಾಡಿ ಮಾನ್ಯ ನಾಗೇಗೌಡರ ಒರಿಜನಲ್ ನಾನು ಇನ್ನು ಸ್ವಲ್ಪ ಅಡ್ಜೆಸ್ಟ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊನ್ನೆ ಎಲ್ಲಾ ಸಂಪೂರ್ಣ ಆಗಿದೆ. ಮೊನ್ನೆ 19ನೇ ತಾರೀಖು ಪೂರ್ಣ ಸದಸ್ಯರಾಗಿದ್ದೀರಿ.

ಉಪಾಧ್ಯಕ್ಷರು : ಮಾನ್ಯ ಚಿತ್ತರಂಜನ್‌ರವರು ಸಹಿ ಹಾಕಿದ್ದಾರೆ ಅವರು ಮಾತನಾಡಲಿ ಅವರು ಮಾತನಾಡಿದ ಮೇಲೆ ನೀವು ಮಾತನಾಡಿ.

+ ಡಾ॥ ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಉಪಾಧ್ಯಕ್ಷರೆ, ಕಬ್ಬಿನ ಪರಿಸ್ಥಿತಿಯ ಗಂಭೀರತೆಯನ್ನು ಸರ್ಕಾರದ ಗಮನಕ್ಕೆ ತರವುದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರ ನೇತೃತ್ವದಲ್ಲಿ ನಾವು ಈ ವಿಷಯವನ್ನು ಇವತ್ತು ಸಭೆಯ ಮುಂದೆ ಇಡುತ್ತಿದ್ದೇವೆ. ಅತ್ಯಂತ ಪ್ರಾಮುಖ್ಯವಾಗಿ ನಾನು ಹೇಳಬೇಕಾದ ವಿಷಯವೇನೆಂದರೆ ಎಲ್ಲಾ ಅಂಕಿಸಂಖ್ಯೆಯನ್ನು ಎಲ್ಲಾ ವಸ್ತುಸ್ಥಿತಿಯನ್ನು ಹಿರಿಯಸದಸ್ಯರುಗಳು ಕಬ್ಬಿನ ಬೆಳೆಯ ಬಗ್ಗೆ ಅನುಭವ ಇರುವವರು ಎಲ್ಲರೂ ಸರ್ಕಾರದ ಮುಂದೆ ಮಂಡಿಸಿದ್ದಾರೆ. ಮಾನ್ಯ ಮಂತ್ರಿಗಳಿಗಾಗಲೀ ಮಾನ್ಯ ಮುಖ್ಯಮಂತ್ರಿಗಳಿಗಾಗಲೀ ಇದೆಲ್ಲ ಗೊತ್ತಿಲ್ಲ ಎನ್ನತಕ್ಕ ವಿಚಾರವೇನಿಲ್ಲ. ಬಹಳ ಅನುಭವವಿರುವಂತಹ ಕೃಷಿ ಮಂತ್ರಿಗಳು ನಮ್ಮ ಹತ್ತಿರವಿದ್ದಾರೆ. ಸಕ್ಕರೆ ಖಾತೆಗೆ ಒಬ್ಬರು ಮಂತ್ರಿಗಳನ್ನು ಸರ್ಕಾರ ನೇಮಕ ಮಾಡಿದೆ. ಮೆಣಸಿನಕಾಯಿಗೆ ಉಳ್ಳಾಗಡ್ಡೆಗೆ, ಆಲೂಗಡ್ಡೆಗೆ ಮಂತ್ರಿಗಳನ್ನು ಕೊಡಿದಿದ್ದರೂ ಕೂಡ ಸಕ್ಕರೆ ಖಾತೆಗೆ ಒಬ್ಬರು ಮಂತ್ರಿಗಳನ್ನು ಗಂಭೀರತೆಯನ್ನು ನೋಡಿಕೊಂಡು ಕೊಟ್ಟಿದ್ದಾರೆ.

ಆದರೂ ಕೂಡ ಅದಕ್ಕೊಂದು ವಿಶೇಷವಾದ ಖಾತೆಯನ್ನೂ ನಿರ್ಮಣ ಮಾಡಿದ್ದರೂ ಕೂಡ ಪದೇ ಪದೇ ಆಳುವ ಪಕ್ಷದ ಸದಸ್ಯರು ಇದರ ಕಡೆಗೆ ನಮ್ಮ ಜೊತೆಗೆ ಧ್ವನಿಗೂಡಿಸಿ ಮಾತನಾಡಿದರೂ ಕೂಡ ಕಳೆದ ವಿಧಾನಸಭಾ ಅಧಿವೇಶನದಲ್ಲಿ ಆಳುವ ಪಕ್ಷದ ಸದಸ್ಯರು ನಾವು ಸಭಾತ್ಯಾಗ ಮಾಡುತ್ತೇವೆ ರೈತರು ನಮ್ಮ ಮನೆಗೆ ಬಂದು ತೊಂದರೆ ಕೊಡುತ್ತಾರೆನ್ನುವಂತಹ ವಿಚಾರವನ್ನು ಸರ್ಕಾರದ ಗಮನಕ್ಕೆ ಮತ್ತು ಮುಖ್ಯ ಮಂತ್ರಿಗಳ ಗಮನಕ್ಕೆ ತಂದರೂ ಕೂಡ ಇವತ್ತು ಈ ಸಮಸ್ಯೆ ಏಕೆ ನಿರ್ಮಾಣವಾಗದೆ ಎಂದು ನೀವು ಕೇಳಿದರೆ, ಬಹುಶಃ ವೈಜ್ಞಾನಿಕವಾಗಿ ಬೆಳೆ ಹೆಚ್ಚಾಗಿದೆ ಅಥವಾ ಅರೆಯುವ ಸಾಮರ್ಥ್ಯ ಕಡಿಮೆಯಾಗಿದೆ ಅನ್ನುವಂತಹ ಉತ್ತರವನ್ನು ಕೊಡಲಿಕ್ಕೆ ಸಾಕು. ಆದರೆ ಅದೆಲ್ಲವನ್ನು ಅಲ್ಲಗೆಳೆಯುವಂತಹ ಅಂಕಿಸಂಖ್ಯೆಯನ್ನು ನಮ್ಮ ವಿರೋಧಪಕ್ಷದ ನಾಯಕರು ಸರ್ಕಾರದ ಮುಂದಿಟ್ಟಿದ್ದಾರೆ. ಹಾಗಾದರೆ ಈ ಕೊತರೆ ಏಕೆ ಆಗಿದೆ? ಈ ರೀತಿಯಾಗಿ ರೈತರಿಗೆ ಏಕೆ ತೊಂದರೆಯಾಗುತ್ತದೆ? ಎನ್ನುವಂತಹ ವಿಶ್ಲೇಷಣೆಯನ್ನು ನಾವು ಮಾಡುವಂತಹ ಅವಶ್ಯಕತೆ ಇವತ್ತು ಇದೆಯೆಂದು ನನಗೆ ಪ್ರಾಮಾಣಿಕವಾಗಿ ಅನಿಸುತ್ತದೆ. you can take the horse to water but you cannot make the horse to drink ಇವತ್ತು ಸರ್ಕಾರಕ್ಕೆ ನಾವು ಕಿವಿಗಡವಷ್ಟು ಹೇಳಬಹುದು. ಪಾಪ ರೈತರು ಹೊಟ್ಟೆಗಿಲ್ಲದೆ ಆ ಕಬ್ಬಿಗೆ ಬೆಂಕಿಯನ್ನು ಕೊಡುವಂತಹ ಕೆಲಸವನ್ನು ಕೂಡ ಮಾಡಿದರು, ಆದರೆ ಸರ್ಕಾರಕ್ಕೆ ಇದನ್ನು ಬಗೆಹರಿಸಲಿಕ್ಕೆ ರೈತರ ಒಂದು ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಇಚ್ಛೆಯಿಲ್ಲದಿದ್ದರೆ ನಮ್ಮ ಹತ್ತಿರ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ, ಇದು ಕೇವಲ ಅರಣ್ಯರೋಧನವಾಗುತ್ತದೆ ಎನ್ನುವಂತಹ ಮಾತನ್ನು ಮೊಟ್ಟ ಮೊದಲನೆಯದಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇವತ್ತು ಕೇಂದ್ರ ಸರ್ಕಾರದ ನೀತಿಯಲ್ಲಿ ಸಾಕಷ್ಟು ತಪ್ಪಿರಬಹುದು. ಅದರ ಬಗ್ಗೆ ಮಾತನಾಡಲಿಕ್ಕೆ ನಮಗೆ ಹಕ್ಕಿಲ್ಲವೆಂದಲ್ಲ. ಇವತ್ತು ಸಕ್ಕರೆಯನ್ನು ರಫ್ತು ಮಾಡುವಂತಹ ನೀತಿಯ ಬಗ್ಗೆ ಇಲ್ಲಿ ಮಾತನಾಡುವಂತಹದ್ದು ಪ್ರಸ್ತುತವಾಗಲಿಕ್ಕಿಲ್ಲ. ಇವೆಲ್ಲ ನೀತಿಗಳ ಹಿನ್ನೆಲೆಯಲ್ಲಿ ಕೇಂದ್ರಸರ್ಕಾರದ ರಾಜ್ಯಗಳ ಮಟ್ಟದಲ್ಲಿ ಲೈಸೆನ್ಸ್‌ಗಳನ್ನು ನೀಡುವಲ್ಲಿ

ಒಂದು ನೀತಿಯನ್ನು ಅನುಸರಿಸಿತು. ಆದರೂ ಕೂಡ ಅನೇಕ ಲೈಸೆನ್ಸ್‌ಗಳು ಕೊ-ಆಪರೇಟಿವ್ ಫೀಲ್ಡ್‌ನಲ್ಲಿ ಇರಬಹುದು ಅಥವಾ ಖಾಸಗಿಯವರು ಇರಬಹುದು ಇವರಿಗೆ ಸಿಕ್ಕಿದೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಉದಾರಣೆಯನ್ನು ನಾನು ಕೊಡಲಿಕ್ಕೆ ಇಚ್ಛಿಪಡುತ್ತೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹುಭಾಗ ನಾವು ಕರಾವಳಿಯಲ್ಲಿರತ್ತೇವೆ. ಆದರೆ ಸ್ವಲ್ಪಭಾಗ ಏನು ಇವತ್ತು ಹಳಿಯಾಳ ದಾಂಡೇಲಿ ಭಾಗದಲ್ಲಿ ಕೇವಲ ಒಂದು ಒಂದೂಕಾಲು ಲಕ್ಷ ಟನ್ ಕಬ್ಬನ್ನು ಮಾತ್ರ ನಾವು ಬೆಳೆಯುತ್ತೇವೆ.. ಆದರೆ ಈ ಪ್ರದೇಶದ ರೈತರಿಗೆ ಇದು ಜೀವಾಳ. ಅವರಿಗೆ ಕ್ಯಾಷ್‌ಕ್ರಾಪ್ ಹಣ ಬರುವಂತಹ ಬೆಳೆ ಬೇರೆ ಯಾವುದೂ ಇಲ್ಲ. ಈ ಪ್ರದೇಶದ ಜನರಿಗೆ ಮತ್ತು ನಮ್ಮ ಜಿಲ್ಲೆಗೆ ಇದುವರೆಗೆ ಒಂದೇ ಒಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವಂತಹ ಪರಿಸ್ಥಿತಿ ಸರ್ಕಾರದ ನೀತಿಯಿಂದ ತಪ್ಪು ನೀತಿಯಿಂದ ಸಕ್ಕರೆ ಕಾರ್ಖಾನೆಯನ್ನು ನಿರ್ಮಾಣ ಮಾಡದ ಪರಿಸ್ಥಿತಿ ಉಂಟಾಗಿದೆ. ಒಂದೂ ಕೂಡ ಸಕ್ಕರೆ ಕಾರ್ಖಾನೆ ನಮ್ಮ ಜಿಲ್ಲೆಯಲ್ಲಿಲ್ಲ. ಇದಕ್ಕೆ ಕಾರಣವೇನೆಂದರೆ, ಸರ್ಕಾರದ ವತಿಯಿಂದ ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆಯನ್ನು ಮಾಡಬೇಕೆನ್ನುವಂತಹ ಪ್ರಯತ್ನವನ್ನು ರೈತರು ಮಾಡುತ್ತಿದ್ದರೂ ಕೂಡ ಅವರನ್ನು ದಬ್ಬಾಳಿಕೆ ನೀತಿಯಿಂದ ದಮನ ಮಾಡಿ ಖಾಸಗಿಯವರಿಗೆ ಸಕ್ಕರೆ ಕಾರ್ಖಾನೆ ಮಾಡಲು ಲೈಸೆನ್ಸ್ ಕೊಡಬೇಕೆನ್ನುವ ಹುನ್ನಾರ ಕಳೆದ ಮುರ್ನಾಲ್ಕು ವರ್ಷಗಳಿಂದ ಬೇರೆ ಬೇರೆ ಸರ್ಕಾರಗಳಿಂದ ಮಾಡಿದೆ. ಈ ಜಟಾಪಟಿಯಲ್ಲಿ ಸಹಕಾರಿ ವಲಯದಲ್ಲಿ ರೈತರು ಪ್ರಾರಂಭ ಮಾಡಬೇಕೆನ್ನುವಂತಹ ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್‌ನ್ನು ಕೊಡಬೇಕೋ ಅಥವಾ ಖಾಸಗಿ ವಲಯದಲ್ಲಿ ಯಾರು ಸರ್ಕಾರಕ್ಕೆ ತೀವ್ರ ಬಂಧುಗಳಿದ್ದಾರೆ.

ಹತ್ತಿರದವರಿದ್ದಾರೆ ಅಂತಹವರಿಗೆ ಲೈಸೆನ್ಸ್ ಕೊಡಬೇಕೆನ್ನುವಂಥ ವಿವಾದದಲ್ಲಿ ಇವತ್ತು ರೈತ ಚಟ್ನಿಯಾಗುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಇದರಲ್ಲಿ ಇನ್ನೊಂದು ಮಹತ್ತರವಾದಂತಹ ವಿಷಯವನ್ನು ಈಗತಾನೇ ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಹಿರಿಯ ಸದಸ್ಯರಾದ ನಾಗೇಗೌಡರಲ್ಲಿರುವಂತಹ ವಿವರ ನನ್ನಲ್ಲಿಲ್ಲ. ನಾನು ಅಷ್ಟು ಎಕ್ಸ್‌ಪರ್ಟ್ ಅಲ್ಲ. ಆದರೆ ನಾನು ಒಬ್ಬ ಸಾಮಾನ್ಯ ರೈತನನ್ನು ಅತ್ಯಂತ ಹತ್ತಿರದಿಂದ ನೋಡಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇದು ರಾಜಕೀಯವಾಗಿ ರೈತರನ್ನು ದಮನ ಮಾಡಲಿಕ್ಕೆ ಮಾಡುವಂತಹದ್ದು ಅತ್ಯಂತ ದುಃಖ ತರುವಂತಹ ಸಂಗತಿಯೆಂದು ನಾನು ತಮ್ಮ ಮುಂದೆ ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಪಡುತ್ತೇನೆ. ಇಂತಹ ದಾರುಣ ಪರಿಸ್ಥಿತಿಯಲ್ಲಿ ಅಧಿಕಾರದಲ್ಲಿರುವಂತಹ ಜನ ಇಂತಹವರ ಕಬ್ಬನ್ನು ಅರೆಯಿರಿ ಇಂತಹವರ ಕಬ್ಬನ್ನು ಅರೆಯಬೇಡಿ ಎಂದು ಹೇಳುತ್ತಿದ್ದಾರೆ. ಸ್ವಾಮಿ ನಾನು ಇವತ್ತು ಕೇಳುತ್ತೇನೆ. ರೈತರ ಕಬ್ಬಿಗೆ ಅದು ಬಿಜೆಪಿ ಕಬ್ಬು ಅದು ದಳದ ಕಬ್ಬು ಅದು ಕಾಂಗ್ರೆಸ್ ಕಬ್ಬು ಎನ್ನುವಂತಹ ನಾಮಾಂಕಿತವನ್ನು ನಾವು ಕೊಡಲಿಕ್ಕೆ ಇಚ್ಛಿಪಡುತ್ತೇವೆಯೇ? ಪಾಪ ರೈತ ತನ್ನ ಹೊಟ್ಟೆಪಾಡಿಗಾಗಿ ಬೆಳೆಯುವಂತಹ ಸಂದರ್ಭದಲ್ಲಿ ಈ ರೀತಿ ವಿವಿಧವಾಗ ವಿಂಗಡಣೆ ಮಾಡಿ ಮಾಡುವಂತಹ ಕ್ರಮವನ್ನು ನಾನು ಕಟುವಾಗಿ ಖಂಡಿಸುತ್ತೇನೆ. ನಾನು ಈ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಬೇರೆ ದೇಶಗಳಲ್ಲಿ ಕ್ರಾಪ್ ಇನ್ಶೂರೆನ್ಸ್ ಸ್ಕೀಮ್ ಇದೆ. ನಾನು ಈಗಾಗಲೇ ರೈತರ ಬಗ್ಗೆ ಅತ್ಯಂತ ಮಾಹಿತಿ ಇರುವಂತಹ ಮಾನ್ಯ ಪುಟ್ಟಣ್ಣಯ್ಯನವರನ್ನು ಕೇಳಿದೆ.

ಇದು ಏಕೆ ಕ್ರಾಪ್ ಇನ್ಶೂರೆನ್ಸ್ ಮಾಡುವುದಿಲ್ಲವೆಂದು, ಹಾಗಿ ಮಾಡಿದರೆ ಕೋಟ್ಯಾಂತರ ರೂಪಾಯಿ ಕೊಡಬೇಕಾಗುತ್ತದೆನ್ನುವ ಮಾತನ್ನು ಅವರು ಹೇಳಿದರು. ಸಮೂಹವಾಗಿ ಎಲ್ಲರ ಕಬ್ಬಿನ ಬೆಳೆ ನಾಶ ಆದರೆ ಮಾತ್ರ ಇನ್ಶೂರೆನ್ಸ್ ಕೊಡುತ್ತಾರಂತೆ ನಮ್ಮಲ್ಲಿ ಕಾರುಗಳಿಗೆ ಇನ್ಶೂರೆನ್ಸ್ ಕೊಡುತ್ತಾರೋ ಅಥವಾ ಒಂದು ಕಾರಿಗೆ ಆಕ್ಸಿಡೆಂಟ್

ಆದಾಗ ಮಾತ್ರ ಇನ್ಸೂರೆನ್ಸ್ ಕೊಡುತ್ತಿದ್ದಾರೋ? ಇವತ್ತು ವಿದೇಶಗಳಲ್ಲಿ ನಮ್ಮ ಮಂತ್ರಿಗಳೆಲ್ಲ ಪ್ರವಾಸ ಮಾಡಿ ಬಂದಿದ್ದಾರೆ. ಅಲ್ಲಿ ಕೃಷಿಯ ಆಧಾರಿತವಾದ ಬೆಳೆಗಳನ್ನು ಯಾವ ರೈತ ಬೆಳೆಯುತ್ತಾನೆ ಅವನಿಗೊಂದು ಇನ್ಸೂರೆನ್ಸ್ ಸ್ಕೀಮ್ ಇದೆ. ಆ ಇನ್ಸೂರೆನ್ಸ್ ಸ್ಕೀಮ್‌ನಲ್ಲಿ ಕೆಲವು, ಕಟ್ಟುಪಾಡುಗಳನ್ನು ಹಾಕಲಿ. ಆ ಇನ್ಸೂರೆನ್ಸ್ ಸ್ಕೀಮ್‌ನ್ನು ಜಾರಿ ಮಾಡುವಂತಹ ಸಂದರ್ಭದಲ್ಲಿ ಈ ಕಬ್ಬನ್ನು ಅರೆಯಲಿಕ್ಕೆ ಸಾಧ್ಯವಿದೆಯಾ ಇಲ್ಲವಾ, ಯಾವ ಕಾರ್ಖಾನೆಗೆ ಕೊಡತಕ್ಕೆ ಸಾಧ್ಯವಿದೆ. ಯಾವ ಕಾರ್ಖಾನೆಯಿಂದ ಉತ್ಪನ್ನ ಹೆಚ್ಚು ಬರುತ್ತದೆ ರೀತಿಯಾದ ಒಂದು ಪ್ರಾಮಾಣಿಕವಾದ ಪ್ರಯತ್ನ ಅದೆಲ್ಲ ಆಗುಹೋಗುವಬಾಬಲ್ಲ, ಹೌದಪ್ಪ ರೈತನ ಬಗ್ಗೆ ಮಾತನಾಡುವಾಗ ಆಗುಹೋಗುವ ಬಾಬು ಯಾವುದೂ ಇಲ್ಲ. ಇವತ್ತು ದೊಡ್ಡ ದೊಡ್ಡ ಶ್ರೀಮಂತರ ಬಗ್ಗೆ ಅಥವಾ ಸಹಕಾರಿ ಮಾಲೀಕರಿಗೆ ಏನಾದರೂ ತೊಂದರೆ ಬಂದರೆ ಇವತ್ತು ರಾಜಕೀಯದಲ್ಲಿ ಮುಂದಿರುವಂತಹ ಜನ 24 ಗಂಟೆ ತಡ ಮಾಡುವುದಿಲ್ಲ, ಅಥವಾ 48 ತಾಸು ತಡ ಮಾಡುವುದಿಲ್ಲ ಕೂಡಲೇ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ. ಕಳೆದ ಎರಡು ಮೂರು ವರ್ಷಗಳಲ್ಲಿ ಚುನಾವಣೆ ಹಿಂದಿನ ಸಂದರ್ಭದಲ್ಲಿ ಒಂದು ಸಂಗತಿ ನಡೆಯಿತು. 8.50 ಮತ್ತು 9.00 ರೂಪಾಯಿ ಇದ್ದಂತಹ ಸಕ್ಕರೆ ಒಂದೇ ಪಟ್ಟಿಗೆ 16 ರೂಪಾಯಿ 20 ರೂಪಾಯಿಗಳಾಯಿತು. ಸುಮಾರು ಮೂರು ತಿಂಗಳ ಕಾಲ ಆ ದರ ಇತ್ತು.

ಸಕ್ಕರೆ ಕಾರ್ಖಾನೆಯ ಆ ಜನ ಈ ಸಂದರ್ಭದಲ್ಲಿ ಎಷ್ಟು ಕೋಟಿ ರೂಪಾಯಿ ಲಾಭ ಮಾಡಿ ಅದನ್ನು ಯಾರ್ಯಾರಿಗೆ ಹಂಚಿದರು ಎಂದು ಹೇಳಿ ಬಹುಶಃ ಈಗ ಹವಾಲ ಪ್ರಕರಣ ಮಾಡಿ ಒಂದು ಸಾರಿ ಸಿಬಿಐನವರ ಹತ್ತಿರ ಕೇಳಬೇಕೆಂದು ಮಾಡಿದರು. ನನಗೆ ಅನುಮಾನ ಬರುತ್ತಿದೆ, ಈಗ ಲೋಕಸಭಾ ಚುನಾವಣೆ ಹತ್ತಿರ ಬರುತ್ತಿದೆ. ಬಹುಶಃ ಇದಕ್ಕೂ ರಾಜಕೀಯಕ್ಕೂ ಏನಾದರೂ ಸಂಬಂಧವಿದೆಯೇ? ಈ ಸಕ್ಕರೆ ಕಾರ್ಖಾನೆಯವರಲ್ಲಿ ಏನಾದರೂ ಒಪ್ಪಂದ ಆಗಿದೆಯೇ? ಈಗ ಸಕ್ಕರೆ ಒಂದು ಕೆ.ಜಿ.ಗೆ. ದಿಢೀರ್ ಆಗಿ ಹದಿಮೂರುವರೆ ರೂಪಾಯಿ ಇದ್ದನದ್ನು 17 ರೂಪಾಯಿ, 18 ರೂಪಾಯಿ ಒಂದೆರಡು ತಿಂಗಳ ಮಟ್ಟಿಗೆ ಹೆಚ್ಚು ಮಾಡಿದರೆ. ಅಷ್ಟು ಮಾಡಿದರೆ ಸಾಕು. ಅವರಿಗೆ ಬೇಕಾದ್ದೆಲ್ಲ ಆಗಿ ಹೋಗಿಬಿಡುತ್ತದೆ. ಆದರೆ ರೈತ ಮಾತ್ರ ಈ ಕಬ್ಬನ್ನು ಇಟ್ಟುಕೊಂಡು ಅದನ್ನು ಸುಡಲಿಕ್ಕೆ ಉದ್ಘಾಟನೆ ಮಾಡಲಿಕ್ಕೆ ಯಾವ ಮಂತ್ರಿಗಳು ಕರೆಯುತ್ತಾರೆನ್ನುವಂತಹದ್ದು ನನಗಂತೂ ಗೊತ್ತಿಲ್ಲ, ಕೊನೆಯದಾಗಿ ನಾನು ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. There should be a political will to resolve this problem. ಇದನ್ನು ಸಮರೋಪಾದಿಯಲ್ಲಿ ಮಾಡುತ್ತೇವೆಂದು ಹೇಳಿ ನಿಮಗೆ ಮನಸ್ಸು ಬೇಕು ಮೊನ್ನೆ ನಾವು ಬೆಂಗಳೂರಿನಲ್ಲಿ ಒಂದು ಸಭೆಯನ್ನು ಮಾಡಿದಾಗ ರಾಜ್ಯ ಸರ್ಕಾರದ ಬಸ್ ಆದರೂ ಅಡ್ಡಿಯಿಲ್ಲ ನಮಗೆ, ಲಾರಿಗಳಾದರೂ ಅಡ್ಡಿಯಿಲ್ಲ ನಮಗೆ, ಖಾಸಗಿ ಲಾರಿಗಳಾದರೂ ಅಡ್ಡಿಯಿಲ್ಲ ಪಿಡಬ್ಲ್ಯೂಡಿ ಲಾರಿಗಳಾದರೂ ಅಡ್ಡಿಯಿಲ್ಲ, ಯಾವುದೇ ಆಗಲಿ 1 ಲಕ್ಷ 2 ಲಕ್ಷ ಜನರನ್ನು ತರುವಂತಹ ಪ್ರಯತ್ನವನ್ನು ನಾವು ಅನೇಕ ಬಾರಿ ಮಾಡುತ್ತೇವೆ.

ಆದರೆ ಕಬ್ಬನ್ನು ಸಾಗಿಸಲಿಕ್ಕೆ ನಮ್ಮ ರೈತನಿಗೆ ಆಗುವುದಿಲ್ಲ, ಏಕೆ ಸರ್ಕಾರ ಮುಂದಾಗಬಾರದು? ಎಲ್ಲಿ ಆ ಕಬ್ಬನ್ನು ಅರೆಯಲಿಕ್ಕೆ ಸಾಧ್ಯವಿದೆ ಅಂತಹ ಕಾರ್ಖಾನೆಗಳನ್ನು ಗುರುತಿಸಿ. ಸರ್ಕಾರ ಅದನ್ನು ಸಾಗಿಸುವಂತಹ ಕೆಲಸವನ್ನು ಮಾಡಲಿ. ಅದನ್ನು ಮಾಡಿ ಇರುವಂತಹ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಪ್ರಯತ್ನ ಮಾಡಬೇಕು. ಅದು ಸಾಧ್ಯವಿಲ್ಲದಿದ್ದರೆ ಯಾವ್ಯಾವ ರೈತ ಇವತ್ತು ಕಬ್ಬನ್ನು ಬೆಳೆದಿದ್ದಾನೆ ಅವನ ಬಗ್ಗೆ ನಮ್ಮ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿರಬಹುದು ದಾಂಡೇಲಿಯಲ್ಲಿರಬಹುದು ಯಾರು ಇವತ್ತು ಆಕಾಶದ ಕಡೆಗೆ ನೋಡುತ್ತಿದ್ದಾರೆ ಕಬ್ಬನ್ನು ಬೆಳೆದು ಬರುವ

ವರ್ಷಕ್ಕೆ ಊಟಕ್ಕೆ ನಮಗೇನು ಗತಿ ಎಂದು. ಆಸ್ಪತ್ರೆಗೆ ಹೋಗಲಿಕ್ಕೆ ಅವನ ಹತ್ತಿರ ಹಣವಿಲ್ಲ. ಇವತ್ತು ನಮ್ಮ ಸರ್ಕಾರಿ ಆಸ್ಪತ್ರೆಯಲ್ಲಿ ಏನು ಸಿಗುತ್ತದೆಂದು ನಿಮಗೆ ಗೊತ್ತಿದೆ. ರೈತರ ಮನೆಯಲ್ಲಿ ತನಗೆ ಬೇಕಾದ ವಸ್ತುಗಳನ್ನು ಕೊಳ್ಳಲಿಕ್ಕೆ ಅವನ ಹತ್ತಿರ ಹಣವಿಲ್ಲ, ಆಕಾಶವನ್ನು ನೋಡುವಂತಹ ಸಂದರ್ಭದಲ್ಲಿ ಸರ್ಕಾರ ಅವನ ರಕ್ಷಣೆಗೆ ಹೋಗಿ ಅವನಿಗೆ ಯಾವ್ಯಾವ ರೀತಿಯಲ್ಲಿ ಪರಿಹಾರವನ್ನು ಕೊಡಬೇಕು, ಬಹುಶಃ ಮೇವೆಂದು ಖರೀದಿ ಮಾಡಿದ್ದಿರಿ, ಇವತ್ತು ನಮ್ಮ ಕರ್ನಾಟಕದಲ್ಲಿ ಆ ಮೇವನ್ನು ಕೊಡಲಿಕ್ಕೆ ಆಗುತ್ತಿತ್ತು.

ಆದರೆ ಕೇಳುವವರು ಇಲ್ಲ. ಆದರೂ ಕೂಡ ಒಂದು ಎಕರೆಗೆ ಇಂತಿಷ್ಟು ಅಥವಾ ಇಂತಿಷ್ಟು ಲಕ್ಷ ಟನ್ ಅವನು ಬೆಳೆದು ಸಾವಿರ ಟನ್, ಸಾವಿರ ಟನ್ ಎಲ್ಲಿ ಬೆಳೆಯುತ್ತಾನೆ ಅದಕ್ಕಿಂತ ಕಡಿಮೆ ಬೆಳೆಯುವಂತಹ ರೈತ ಆಗಿದ್ದಾರೆ. ಅವನಿಗಿಷ್ಟು ಪರಿಹಾರವನ್ನು ಸರ್ಕಾರ ಕೊಡಬೇಕು ಅನ್ನುವಂತಹ ರೀತಿಯಲ್ಲಿ There should be a thinking ಅದು ಆಗುವುದೇ ಇಲ್ಲ ಎಂದು ಹೇಳುವುದಲ್ಲ. ಮಾನ್ಯ ವಿದ್ಯುತ್ ಸಚಿವರು ಹೇಳಿದಹಾಗೆ ನಾವು ವಿದ್ಯುತ್ ಪ್ರೊಡ್ಯೂಸ್ ಮಾಡುವುದಕ್ಕೆ ಆಗುವುದೇ ಇಲ್ಲ. ಈ ರೀತಿಯ ನಿರ್ಧಾರ ತೆಗೆದುಕೊಂಡರೆ ಖಂಡಿತಾ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ, ಇವತ್ತು ತಮ್ಮ ಮುಖಾಂತರ ನಾನು ಸರ್ಕಾರದ ಗಮನವನ್ನು ಸೆಳೆಯುಲಿಕ್ಕೆ ಇಚ್ಛಿಪಡುತ್ತೇನೆ. ರೈತ ಭಿಕ್ಷೆ ಬೇಡುವು ಹಾಗೆ ನೀವು ಮಾಡಬೇಡಿ, ದಯವಿಟ್ಟು ನಿಮ್ಮ ಕೈಯಲ್ಲಿರುವಂತಹ ಎಲ್ಲ ಸಾಮರ್ಥ್ಯಗಳನ್ನು ರಾಜಕೀಯ ಅಧಿಕಾರವಿರಬಹುದು, ಇದೆಲ್ಲ ಸಾಮರ್ಥ್ಯವನ್ನು ಉಪಯೋಗಿಸಿ ಆ ರೈತರ ಕಬ್ಬಿಗೆ ಯೋಗ್ಯವಾದ ಬೆಲೆ ಸಿಗದಿದ್ದರೂ ಕೂಡ ಒಂದು ವರ್ಷದ ಮಟ್ಟಿಗೆ ತಕ್ಷಣ ಬದುಕುವಹಾಗೆ ಯಾವುದಾದರೂ ಒಂದು ಯೋಜನೆಯನ್ನು ನಿರೂಪಿಸಿ ತಿನ್ನುವಂತಹ ಮನವಿಯನ್ನು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಮಾಡುತ್ತಾ, ಈ ಸಮಸ್ಯೆಯ ಗಂಭೀರತೆಯ ಬಗ್ಗೆ ಪುನಃ ಆಲೋಚನೆ ಮಾಡಿ ತಾವು ಸಂಬಂಧಪಟ್ಟ ಎಲ್ಲ ಅಧಿಕಾರಿಗಳ ಜೊತೆ ಕೇಂದ್ರಸರ್ಕಾರದ ಜೊತೆ ಕೂಡ ಇದರ ಬಗ್ಗೆ ಮಾತನಾಡಿ ರೈತನಿಗೆ ಬಂದಂತಹ ಕಷ್ಟವನ್ನು ಪರಿಹಾರ ಮಾಡಬೇಕೆಂದು ಮತ್ತೊಮ್ಮೆ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ವಿನಂತಿಸಿ ಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸೆಂಟ್ರಲ್ ಗವರ್ನಮೆಂಟ್ ಇವತ್ತು ಕಬ್ಬಿಗೆ ಸಪೋರ್ಟಿಂಗ್ ಪ್ರೈಸ್‌ನ್ನು ಅನೌನ್ಸ್ ಮಾಡಿದೆ. ನಮ್ಮ ರಾಜ್ಯ ಸರ್ಕಾರ ಯಾವುದೋ ಒಂದು ನೋಟಿಫಿಕೇಶನ್ ಅನ್ನು ಹೊರಡಿಸಬೇಕಾಗಿತ್ತು, ಅದನ್ನು ಹೊರಡಿಸಲಿಲ್ಲ ಎನ್ನುವ ಕಾರಣಕ್ಕೋಸ್ಕರ ಹೈಕೋರ್ಟಿನಲ್ಲಿ ಒಂದು ಸ್ಟೇ ಆಗಿದೆ. ಈಗ ಸಪೋರ್ಟಿಂಗ್ ಪ್ರೈಸ್‌ನ್ನು ಕೊಡುತ್ತಿಲ್ಲ. ಬೀದರ್ ಜಿಲ್ಲೆಯವರು ಆ ತರಹ ಸ್ಟೇಅನ್ನು ತೆಗೆದುಕೊಂಡಿದ್ದಾರೆ. ಕಾನೂನಿನ ಚೌಕಟ್ಟಿನಲ್ಲಿ ಈ ತೊಂದರೆ ಇದೆ. ತಾವು ಉತ್ತರ ಕೊಡಬೇಕಾದರೆ ಹೇಳಿ. ತಮ್ಮ ಮಾಹಿತಿಗೋಸ್ಕರ ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

+ ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಸಭಾಧ್ಯಕ್ಷರೇ, ಇಂದೇನು ಸದನದಲ್ಲಿ ಅತ್ಯಂತ ಪ್ರಾಮುಖ್ಯವಾದ ವಿಷಯದ ಬಗ್ಗೆ ಚರ್ಚೆ ನಡೆದಿದೆ. ರಾಜ್ಯದ ಕಬ್ಬು ಬೆಳೆಯತಕ್ಕಂಥ ರೈತರು ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ ಈ ಒಂದು ವಿಷಯದ ಬಗ್ಗೆ ವಿಷಯದ ಗಂಭೀರತೆಯನ್ನು ಮನಗಂಡು ವಿಶೇಷವಾದ ಚರ್ಚೆಗೆ ತಾವು ಅನುಮತಿಯನ್ನು ಕೊಟ್ಟು ಈ ರಾಜ್ಯದ ರೈತರು ಏನು ಕಷ್ಟವನ್ನು ಅನುಭವಿಸುತ್ತಿದ್ದಾರೆ ಎಂಬುದರ ಬಗ್ಗೆ ಈ ಸಭೆಯ ಮುಖೇನ ಚರ್ಚೆ ಮಾಡಿ ಈ ರಾಷ್ಟ್ರದ....

ಉಪಾಧ್ಯಕ್ಷರು : ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಐದು ನಿಮಿಷ ಅವರಿಗೆ ಪಾರ್ಟಿಸಿಪೇಶನ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಅಧ್ಯಕ್ಷರಿದ್ದಾಗಲೂ ಬರೆದುಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಬಿ. ಶಿವರಾಮು : ಶಿವರಾಮೇಗೌಡರು ಅಲ್ಲ, ನಾನು ಮಾತನಾಡುತ್ತೇನೆ ಎಂದು ಕೇಳಿದ್ದೇನೆ. ನಾನು ಬರೆದು ಕಳಿಸಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಯಾರು ಚರ್ಚೆ ಮಾಡುವುದಕ್ಕೂ ನಾನು ಅಡ್ಡಿ ಬರುವುದಿಲ್ಲ. ನಾನು ಸುಮ್ಮನೆ ಕುಳಿತುಕೊಂಡು ಕೇಳುತ್ತಿದ್ದೇನೆ. ಯಾರೇ ಮಾತನಾಡಿದರೂ ನನ್ನದೇನೂ ತಕರಾರಿಲ್ಲ. ತಾವು ಎಷ್ಟು ಹೊತ್ತು ಬೇಕಾದರೂ ಮಾತನಾಡಿ. ನಾನು ಕುಳಿತುಕೊಳ್ಳುತ್ತೇನೆ. ಆದರೆ ಈ ಒಂದು ವಿಷಯದ ಬಗ್ಗೆ ಚರ್ಚೆಯಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಜೊತೆಗೆ ಅನೇಕ ಜನ ಸದಸ್ಯರುಗಳು ಈ ವಿಷಯದ ಬಗ್ಗೆ ನಿಯಮಾವಳಿಗೆ ಹೊರತಾಗಿಯೂ ಕೂಡ ಮಾತನಾಡಿದ್ದಾರೆ. ಯಾರು ರುಜು ಮಾಡಿಲ್ಲವೋ ಅವರೂ ಮಾತನಾಡಿದ್ದಾರೆ. ಸಿಗ್ನೇಟರೀಸ್ ಇದ್ದರೆ ಮಾತ್ರ ಚರ್ಚೆ ಮಾಡಬೇಕೆಂದು ನಮ್ಮ ನಿಯಮಾವಳಿ ಇದೆ. ಆದರೆ ಅದಕ್ಕೂ ನಾನು ಅಡ್ಡಿ ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಒಪ್ಪಿಕೊಂಡೇ ನಾವು ಸುಮ್ಮನೆ ಇದ್ದೇವೆ. ಆ ಕಡೆಯವರು ಮಾತನಾಡಿದರು, ಬೇರೆಯವರಿಗೂ ಅವಕಾಶ ಕೊಡಿ ಎಂದು ನಾವು ಕೇಳಿದೆವು.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಯಾರಿಗೂ ಅಡ್ಡಿ ಮಾಡಲಿಲ್ಲ. ನನ್ನ ಪಾಡಿಗೆ ನಾನು ಸುಮ್ಮನೆ ಕುಳಿತಿದ್ದೇನೆ. ಕೇಳುತ್ತಾ ಇದ್ದೇನೆ. ಇದು ತುಂಬಾ ಗಂಭೀರವಾದ ವಿಷಯ. ಆದ್ದರಿಂದ ನಿಯಮಗಳ ವ್ಯಾಪ್ತಿಯಲ್ಲೇ ಚರ್ಚೆಯಾಗಬೇಕೆಂದು ನಾನೇನೂ ಹೇಳಲಿಲ್ಲ. ಇನ್ನು ಯಾರು ಮಾತನಾಡಬೇಕೆಂದರೂ, ನನ್ನದೇನೂ ತಕರಾರು ಇಲ್ಲ. ಅಧ್ಯಕ್ಷರು ನನ್ನನ್ನು ಕರೆದರು, ಅದಕ್ಕಾಗಿ ನಾನು ನಿಂತಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೇ, ಈ ಚರ್ಚೆಯ ಮುಖೇನ ಈ ರಾಜ್ಯದ ಕಬ್ಬಿನ ಬೆಳೆಗಾರರು ಎಷ್ಟು ಸಂಕಷ್ಟಕ್ಕೆ ಸಿಕ್ಕಿದ್ದಾರೆ ಎನ್ನತಕ್ಕಂಥಾದ್ದನ್ನು ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ವ ಸ್ತು ಸಂಬಂಧಪಟ್ಟವರೆಲ್ಲರಿಗೂ ಅವರ ಗಮನಕ್ಕೆ ಬರಲಿಕ್ಕೆ ಬಹಳ ಉಪಯೋಗವಾ ದ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಈ ಚರ್ಚೆಯನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಒಂದೇ ಒಂದು ವಿಷಯವನ್ನು ಈ ಸಂದರ್ಭದಲ್ಲಿ ನಾನು ಹೇಳಲೇಬೇಕಾಗುತ್ತದೆ. ಈ ವರ್ಷ ಕಬ್ಬಿನ ಬೆಳೆ ಅಥವಾ ಉತ್ಪಾದನೆ ಹೋದ ವರ್ಷಕ್ಕಿಂತ ಹೆಚ್ಚಾಗಿದೆ. ಇದು ನಮ್ಮ ಅಧಿಕಾರಿಗಳು ಕೊಟ್ಟಿರತಕ್ಕಂಥ ಲೆಕ್ಕ. ಹೋದವರ್ಷ ಸುಮಾರು 180 ಲಕ್ಷ ಟನ್ ಉತ್ಪಾದನೆ ಮಾಡಿದ್ದಾರೆ. ಈ ಸಾರಿ ಸುಮಾರು 215 ರಿಂದ 220 ಲಕ್ಷ ಟನ್‌ವರೆಗೂ ನಮ್ಮ ರೈತರು ರಾಜ್ಯದಲ್ಲಿ ಕಬ್ಬನ್ನು ಬೆಳೆದಿದ್ದಾರೆ. ಈ ಎಲ್ಲ ವಿವರಣೆಯನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಕಬ್ಬನ್ನು ಅರೆಯುವಂಥ ಸಾಮರ್ಥ್ಯ ಕೂಡ ಅದರಲ್ಲಿ ಬಹುಶಃ ವ್ಯತ್ಯಾಸ ಕಾಣಲಿಲ್ಲ. ಶ್ರೀಮಾನ್ ಯಡಿಯೂರಪ್ಪನವರು ಹೇಳಿದ್ದಾರೆ; 120 ಲಕ್ಷ ಟನ್ ನಾವು ಅರೆಯುವುದಕ್ಕೆ ಸಾಧ್ಯವಿದೆಯೆಂದು. ಹಾಗಾದರೆ ಉಳಿದ ಕಬ್ಬನ್ನು ಏನು ಮಾಡಬೇಕು? ಆದರೆ ಹಿಂದೆ ಏಕೆ ಆಗಲಿಲ್ಲ ಎನ್ನುವ ಪ್ರಶ್ನೆಯನ್ನು ಅವರು ಕೇಳಿದ್ದಾರೆ. ಹೋದ ವರ್ಷ 180 ಲಕ್ಷ ಟನ್ ಕಬ್ಬು ಬೆಳೆದಿದ್ದು ನಮಗೆ ಇರತಕ್ಕಂಥ ಸಕ್ಕರೆ ಕಾರ್ಖಾನೆಗಳ ಕಬ್ಬನ್ನು ಬಿತ್ತನೆ ಬೀಜಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಉಳಿದಿದ್ದನ್ನು ಖಂಡಸಾರಿ

ಶುಗರ್ ಫ್ಯಾಕ್ಟರಿಗೆ ಮತ್ತು ಬೆಲ್ಲ ಮಾಡುವುದಕ್ಕೆ ನಮ್ಮ ರೈತರು ಅದನ್ನು ಬಳಕೆ ಮಾಡುತ್ತಿದ್ದಾರೆ.

ಸನ್ಮಾನ್ಯ ಅಧ್ಯಕ್ಷರೇ, ನಾವೆಲ್ಲರೂ ರೈತರ ಮಕ್ಕಳೇ. ಯಾವ ರೈತರ ಬಗ್ಗೆಯೂ ಅನಾದರಣೆ ಇದೆಯೆಂದು, ಯಾರ ಬಗ್ಗೆಯೂ ನಾನು ಕೇಳುವುದಕ್ಕೆ ಹೋಗುವುದಿಲ್ಲ. ಆದರೆ ವಸ್ತುಸ್ಥಿತಿಯನ್ನು ನಾವು ಅರ್ಥ ಮಾಡಿಕೊಳ್ಳಬಾಕಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ಅಥವಾ ಎರಡು ವರ್ಷ ಹಿಂದೆ ಸರ್ಕಾರ ಬ್ಯಾನ್ ಹಾಕಿತ್ತು ಎಂದು ಶ್ರೀಮಾನ್ ಯಡಿಯೂರಪ್ಪನವರು ಹೇಳಿದರು. ನಾನು ಕೇಳಿದೆ ಯಾವಾಗ ಬ್ಯಾನ್ ಹಾಕಿದ್ದರು ಎಂದು. ನಾವಂತೂ ಬ್ಯಾನ್ ಹಾಕಿಲ್ಲ. ಹಿಂದೆ ಬ್ಯಾನ್ ಹಾಕಿದ್ದುದು ನಿಜ. ಅದರಲ್ಲೂ ಬಹಳ ದಿನ ಹಾಕಲಿಲ್ಲ. 14.10.94ರಲ್ಲಿ ಬೀದರ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಒಂದು ಆರ್ಡರ್‌ರನ್ನು ಹೊರಡಿಸಿದ್ದಾರೆ. ಕಾರಣ ಇಷ್ಟೆ. ಯಾವಾಗ ಕಬ್ಬಿನ ಬೆಳೆ ಕಡಿಮೆ ಇರುತ್ತದೆ, ಆಗ ಸಕ್ಕರೆ ಕಾರ್ಖಾನೆಗಳು ಸಫರ್ ಆಗುತ್ತವೆ. ಆ ಕಾರಣದಿಂದ ಹೊರರಾಜ್ಯಕ್ಕೆ ಹೋಗತಕ್ಕಂಥ ಕಬ್ಬನ್ನು ನಿಲ್ಲಿಸಿ ಅಂತ ಹೇಳಿ ಬೀದರ್ ಜಿಲ್ಲೆಯಲ್ಲಿ 14.10.94ರಲ್ಲಿ ಜಿಲ್ಲಾಧಿಕಾರಿಗಳು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಅಲ್ಲಿರತಕ್ಕಂಥ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಿಗದೆ ತೊಂದರೆಯಾಗುತ್ತದೆ ಎಂದು ಹೇಳಿ. ಅದನ್ನು ಲಿಫ್ಟ್ ಮಾಡಿರತಕ್ಕಂಥಾದ್ದು 95ರ ಜನವರಿಯಲ್ಲಿ. ನಾನು ಅಷ್ಟಕ್ಕೇ ನಿಲ್ಲಿಸುತ್ತೇನೆ. ನಾವು ಬಂದು ಲಿಫ್ಟ್ ಮಾಡಿದ್ದೇವೆ ಎಂದು ಅದರ ಕ್ರೆಡಿಟ್ ನಮಗೆ ಬೇಕು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದ್ದ ವಸ್ತುಸ್ಥಿತಿಯನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಈ ಸರ್ಕಾರ ಬೇಜವಾಬ್ದಾರಿಯಿಂದ ವರ್ತನೆ ಮಾಡಿದೆ, ಇವರಿಗೆ ಆಸಕ್ತಿ ಇಲ್ಲ, ಇವರ ಬಗ್ಗೆ ಯಾವುದೇ ಗಮನ ಇಲ್ಲ ಎಂದು ಹೇಳಿ ಹೀಗೆ ಸ್ವಾಭಾವಿಕವಾಗಿ ಆರೋಪ ಮಾಡತಕ್ಕಂಥಾದ್ದು ಸಹಜ. ಇದರ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲ.

ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರ 17.9.95ರಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಗವರ್ನಮೆಂಟ್ ಆರ್ಡರ್ ಕಾಪಿ ನನ್ನ ಕಡೆ ಇದೆ. ಈ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದು ನಿನ್ನೆ ಮೊನ್ನೆ ತೆಗೆದುಕೊಂಡಿರತಕ್ಕಂಥ ನಿರ್ಣಯ ಅಲ್ಲ. 17.9.95 ಅಂದರೆ ಐದು ತಿಂಗಳಾಯಿತು. ಆ ನಿರ್ಣಯದಲ್ಲಿ ನಾವು ಕೆಲವು ಬೆನಿಫಿಟ್‌ಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಯೋಚನೆ ಮಾಡಿದೆವು. ಇವತ್ತು ನಾನು ಬಹಳ ಸೂಕ್ಷ್ಮವಾಗಿ ಹೇಳುತ್ತೇನೆ. ಖಂಡಸಾರಿ ಸಕ್ಕರೆ ಕಾರ್ಖಾನೆಗಳ ಮೇಲೆ ಬೆಲ್ಲ ಮಾಡತಕ್ಕಂಥಾದ್ದರ ಬಗ್ಗೆ ಏನೇನು ನಿರ್ಬಂಧಗಳು ಇದ್ದವು. ಆ ಎಲ್ಲಾ ನಿರ್ಬಂಧಗಳನ್ನು 17.9.95 ಆಜ್ಞೆಯ ಪ್ರಕಾರ ತೆಗೆದುಹಾಕಿದ್ದೇವೆ. ಟ್ರಾನ್ಸ್‌ಪೋರ್ಟೇಶನ್ ಸಬ್ಸಿಡಿ 250 ಕಿಲೋಮೀಟರ್‌ವರೆಗೆ, ಒಂದು ಕಿಲೋಮೀಟರ್‌ಗೆ 50 ಪೈಸೆ ಅಂದರೆ 125 ರೂಪಾಯಿ ಟ್ರಾನ್ಸ್‌ಪೋರ್ಟೇಶನ್ ಸಬ್ಸಿಡಿ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಹಿಂದೆ ಇದ್ದಂಥ ಪರ್ಚೇಸ್ ಟ್ಯಾಕ್ಸ್ ಪದ್ಧತಿ, ಟನೇಜ್ ಬೇಸಿಸ್ ಮೇಲೆ ಇತ್ತು. ಅದನ್ನು ಈಗ ರಿಕವರಿ ಬೇಸಿಸ್ ಮೇಲೆ ತಂದಿದ್ದೇವೆ. ಇದು ರೈತರದ್ದು ಬಹುದಿನದ ಬೇಡಿಕೆಯಾಗಿತ್ತು. ನಮ್ಮ ಕಾರ್ಖಾನೆಯವರದ್ದು ಮಾತ್ರ ಪ್ರಶ್ನೆ ಅಲ್ಲ. ಕೇನ್ ಗ್ರೋಯರ್ಸ್ ಈ ಬಗ್ಗೆ ಹೆಚ್ಚು ಒತ್ತಡವನ್ನು ನಮ್ಮ ಮೇಲೆ ತಂದಿದ್ದರು. ಅದನ್ನು 9.5 ಪರ್ಸೆಂಟ್ ಗ್ರೋಯಿಂಗ್ ಇರತಕ್ಕಂಥ ಭಾಗದಲ್ಲಿ 65 ರೂಪಾಯಿಗೆ ಇಳಿಸಿದ್ದೇವೆ. ಹಳೆಯ ಮೈಸೂರು ಭಾಗದಲ್ಲಿ ರಿಕವರಿ ಕಡಿಮೆ. ಅದಕ್ಕೋಸ್ಕರ ಅದನ್ನು 50 ರೂಪಾಯಿಗೆ ಇಳಿಸಿದ್ದೇವೆ. ಮೊದಲು 90 ರೂಪಾಯಿ ಮೇಲೆ ಹೋಗುತ್ತಿತ್ತು. ಮಾನ್ಯ ಅಧ್ಯಕ್ಷರೆ, purchase tax. Rebate payable to farmers from out of purchase tax is enhanced from 12 to 15. ಮೂರು ರೂಪಾಯಿ

ಜಾಸ್ತಿ ಮಾಡಿದೆವು. ಆದಾದ ಮೇಲೆ ಮೊಲಾಸಿಸ್ 20 ರಿಂದ 25 ಪರ್ಸೆಂಟ್‌ವರೆಗೆ, ಇನ್‌ಕ್ರೀಸ್ ಮಾಡಿದೆವು. ಅದು ಕೂಡ ಲುಕ್ಸಾನು ಆಗುತ್ತದೆ ಎಂದು ಏನು ಹೇಳುತ್ತಿದ್ದರು, ಅದನ್ನು ಇನ್‌ಕ್ರೀಸ್ ಮಾಡಿದ್ದೇವೆ. ಯಾವ ಸಕ್ಕರೆ ಕಾರ್ಖಾನೆಗಳು ಪವರ್ ಕೋ-ಜನರೇಶನ್ ಮಾಡುತ್ತವೆ, ಅವರಿಗೆ ಸಂಪೂರ್ಣವಾಗಿ ಟ್ಯಾಕ್ಸ್ ಎಕ್ಸಂಪ್ಟ್ ಮಾಡಿದ್ದೇವೆ. ಇನ್ನು 7 ಪರ್ಸೆಂಟ್ ಟ್ಯಾಕ್ಸ್ ಇತ್ತು. ಅದನ್ನು ಎಕ್ಸಂಪ್ಟ್ ಮಾಡಿದೆವು.

ಇದರ ಜೊತೆಗೆ, ಕೆಲಸ ಮಾಡತಕ್ಕಂಥ ಯಾವ ಯಾವ ಕಾರ್ಖಾನೆಗಳು, ನಾನಾ ಕಾರಣಗಳಿಂದ ಅರೆಯುವುದಕ್ಕೆ ಸಾಧ್ಯತೆ ಇರಲಿಲ್ಲವೋ, ಅಂತಹ ಕಾರ್ಖಾನೆಗಳಿಗೆ ಆರ್ಥಿಕ ನೆರವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದೆವು. ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಬೀದರ್ ಸಕ್ಕರೆ ಕಾರ್ಖಾನೆ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಹೋಗಿ ಅದನ್ನು ಪರಿಶೀಲನೆ ಮಾಡಿದೆ. ಹಿಂದಿನ ವರ್ಷ ಸುಮಾರು ಹದಿನಾರುವರೆ ಕೋಟಿ ರೂಪಾಯಿಗಳ ಲುಕ್ಸಾನಾಗಿದೆ. ಇದಕ್ಕೆ ಯಾರು ಹೊಣೆ ಎನ್ನುವುದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಕ್ಯುಮಿಲೇಟಿವ್ ಲಾಸ್ 57 ಕೋಟಿಯವರೆಗೂ ಲುಕ್ಸಾನಾಗಿದೆ ಎಂದು ಹೇಳುತ್ತಾರೆ. ಆ ವಿಷಯ ಬೇರೆ. ನಾನು ಅದರ ಬಗ್ಗೆ ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಹದಿನಾರುವರೆ ಕೋಟಿ ರೂಪಾಯಿಗಳು ಲುಕ್ಸಾನಾಗಿದ್ದರೆ, ಅದಕ್ಕೆ ಕಾರಣ ಏನು? ಅದರ ಬಗ್ಗೆ, ಈಗ ಚರ್ಚೆ ಮಾಡಿ ಉಪಯೋಗ ಏನಿದೆ? ಕೆಲವು ಕಡೆ ಮಧ್ಯವರ್ತಿ ದಳ್ಳಾಳಿಗಳು ಸೇರಿ, ರೈತರ ಹತ್ತಿರ ಮುನ್ನೂರು ರೂಪಾಯಿಗಳಿಗೆ ಕೊಂಡುಕೊಂಡು, ಇಲ್ಲಿ 500-600 ರೂಪಾಯಿಗಳಿಗೆ ಬಿಲ್ ಹಾಕಿಸಿರತಕ್ಕಂತಾದ್ದು ಅಥವಾ ರೈತರ ಹೆಸರಿನಲ್ಲಿ ಇವತ್ತು ಮಧ್ಯವರ್ತಿಗಳು, ಅವನ ಹೊಲದಲ್ಲಿ ಮಧ್ಯವರ್ತಿ ಅಂದರೆ ಅವನೂ ಬೆಳೆಗಾರನೇ, ಅವನು 100 ಟನ್ ಬೆಳೆದಿದ್ದರೆ, 1000 ಸಾವಿರ ಟನ್‌ಗೋ ಅಥವಾ 2000 ಸಾವಿರ ಟನ್‌ಗೋ ಇಲ್ಲಿ ಪರ್ಮಿಟ್ ತೆಗೆದುಕೊಳ್ಳುವುದು. ಅವನು ಬೇರೆಯವರ ಹತ್ತಿರ 150-200 ರೂಪಾಯಿಗಳಿಗೆ ಪರ್ಚೇಸ್ ಮಾಡಿ, ಲಾಭ ಮಾಡುತ್ತಾನೆ, ಇವೆಲ್ಲಾ ಘಟನೆಗಳು ನಡೆದಿವೆ. ಇವೆಲ್ಲವನ್ನೂ ಚರ್ಚೆ ಮಾಡುವುದರಿಂದ, ಕಳೆದುಹೋದ, ಗತಿಸಿಹೋದ ವಿಷಯಗಳ ಬಗ್ಗೆ ಚರ್ಚೆ ಮಾಡುವುದರಿಂದ ಪ್ರಯೋಜನವಿಲ್ಲ, ಈ ರೀತಿ ಒಂದು ಕಡೆ ಅಲ್ಲ, ನಾನಾ ಕಡೆ ಆಗಿರುತ್ತವೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅನೇಕ ಕಡೆ, ನಮ್ಮ ರೈತರಿಗೆ, ಸಕ್ಕರೆ ಕಾರ್ಖಾನೆಗಳವರು ಕಬ್ಬನ್ನು ತೆಗೆದುಕೊಂಡ ಮೇಲೆ ಹಣವನ್ನೇ ಕೊಟ್ಟಿಲ್ಲ, 2-3 ವರ್ಷಗಳಿಂದ ಬಾಕಿ, ಪೆಂಡಿಂಗ್ ಇದೆ. ಇದರ ಮೇಲೆ ನಾನು ಯೋಚನೆ ಮಾಡಿದೆ. ಆ ತನಿಖೆ ನಡೆಸುವುದು ಒಂದು ಭಾಗ, ಆದರೆ ಈಗ ಬೆಳೆದು ನಿಂತಿರತಕ್ಕ ಕಬ್ಬನ್ನು ಅರೆಯುವುದಕ್ಕೆ ಏನು ಮಾಡಬೇಕೆನ್ನುವುದು ನಮ್ಮ ಮುಂದಿರತಕ್ಕಂಥ ಪ್ರಶ್ನೆ. ಅಲ್ಲಿ ಜಿಲ್ಲಾಧಿಕಾರಿಗಳು ಮತ್ತು ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿದಂಥ ಕಾಲದಲ್ಲಿ ಅವರು ಹೇಳಿದರು. ಸರ್ಕಾರದವರು ಕನಿಷ್ಠ 3-4 ಕೋಟಿ ರೂಪಾಯಿಗಳನ್ನು ಕೊಟ್ಟರೆ, ನಾವು ಈ ಕಾರ್ಖಾನೆಗಳನ್ನು ರಿವೈವ್ ಮಾಡುವುದಕ್ಕೆ ಸಾಧ್ಯವಾಗಬಹುದು. ಹಿಂದೆ ಆಗಿರತಕ್ಕ ಹದಿನಾರುವರೆ ಕೋಟಿ ವಿಷಯ ಬೇರೆ. ಆಗ ನೀವೇ ಹೇಳಿದ ಹಾಗೆ, ಹೆಚ್‌ಕೆಡಿಬಿ ಯಿಂದ 2 ಕೋಟಿ ರೂಪಾಯಿ ಹಣ ಬಂತು. ಬೇರೆ ಬೇರೆ ಲಾಭದಾಯವಾಗಿ ಯಾವ ಯಾವ ಸಕ್ಕರೆ ಕಾರ್ಖಾನೆಗಳು ನಡೆಯುತ್ತಿವೆಯೋ, ಅವರಿಂದ 1 ಕೋಟಿ ರೂಪಾಯಿ ಕೊಡಿಸಿದೆವು.

ಆ ಜವಾಬ್ದಾರಿಯನ್ನು ನಾವೇ ತೆಗೆದುಕೊಂಡಿದ್ದೇವೆ. ಅಷ್ಟೇ ಅಲ್ಲ, ಬೀದರ್ ಜಿಲ್ಲಾ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ನಾಗಮಾರಪಲ್ಲಿಯವರು ಇಲ್ಲಿಯೇ ಕುಳಿತಿದ್ದಾರೆ. ಅವರು ಒಂದು ಕೋಟಿ ರೂಪಾಯಿ ಕೊಟ್ಟರು. ಇವತ್ತು ಆ ಕಾರ್ಖಾನೆಯು

ಕಬ್ಬನ್ನು ಅರೆಯುತ್ತಾ ಇದೆ. ಆದರೆ, ಆ ಕಾರ್ಖಾನೆ ಎಷ್ಟು ಪ್ರಮಾಣದಲ್ಲಿ ಕಬ್ಬನ್ನು ಅರೆಯುತ್ತಾ ಇದೆ ಎಂಬ ವಿವರಣೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ಒಟ್ಟು, ಇಷ್ಟು ಕಬ್ಬನ್ನು ಅರೆಯತಕ್ಕ ಸಾಮರ್ಥ್ಯ ಇದೆ ಎನ್ನತಕ್ಕಂಥಾದ್ದನ್ನು ಆಮೇಲೆ ತಿಳಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, 4 ಕೋಟಿ ರೂಪಾಯಿ ಹಣವನ್ನು ನಮ್ಮ ಮೈಮೇಲೆ ಹಾಕಿಕೊಂಡು ಕೊಡಬೇಕಾಗಿ ಬಂತು. ಸಹಕಾರಿ ಸಕ್ಕರೆ ಕಾರ್ಖಾನೆಯವರು ಏತಕ್ಕೆ ಈ ರಾಜ್ಯದಲ್ಲಿ ಯಾರೂ ಮುಂದೆ ಬರುವುದಿಲ್ಲ ಎನ್ನುವ ಬಗ್ಗೆ ಆಮೇಲೆ ಬರುತ್ತೇನೆ. ಇದರಲ್ಲಿ ಹಿಂದಿನ ಸರ್ಕಾರ, ಮುಂದಿನ ಸರ್ಕಾರ ಎಂದು ಹೇಳುವುದಿಲ್ಲ. ಕರ್ನಾಟಕದಲ್ಲಿ ಷುಗರ್ ಫ್ಯಾಕ್ಟರಿ ಲಾಬಿ ಬಗ್ಗೆ ಯಾರೋ ಹೇಳಿದರು. ಇಲ್ಲಿ ಯಾರದೂ ಲಾಬಿ ಇಲ್ಲ. ಲಾಬಿ ಇರುವುದು ಮಹಾರಾಷ್ಟ್ರದಲ್ಲಿ ಮತ್ತು ಉತ್ತರ ಪ್ರದೇಶದಲ್ಲಿ. ಕರ್ನಾಟಕದಲ್ಲಿ ಯಾರೇ ಸರ್ಕಾರ ನಡೆಸಿದರೂ, ಸಕ್ಕರೆ ಫ್ಯಾಕ್ಟರಿ ಲಾಬಿ ಮಾಡುವವರು ಯಾರೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಸಕ್ಕರೆ ಲಾಬಿ ಇಲ್ಲ, ಲಿಕ್ಕರ್ ಲಾಬಿ ಇದೆ.

ಶ್ರೀ ಹೆಚ್.ಡಿ. ದೇವೇಗೌಡ : ಅದರ ಅನುಭವ ನಿಮಗೂ ಇದೆ, ಎಲ್ಲರಿಗೂ ಇದೆ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ. ಈ ರಾಜ್ಯದಲ್ಲಿ ಸಕ್ಕರೆ ಫ್ಯಾಕ್ಟರಿಗೆ ಸಂಬಂಧಪಟ್ಟಂತೆ ಯಾವ ಲಾಬಿಯೂ ಇಲ್ಲ. ಲಾಬಿಗೆ ಅವರವರ ಆತ್ಮ ಮುಟ್ಟಿ ನೋಡಿಕೊಳ್ಳಬೇಕು. ಯಾರು, ಯಾರು, ಯಾವ ಯಾವ ಸಂದರ್ಭದಲ್ಲಿ ಲಾಬಿಗೆ ಒಳಗಾಗಿದ್ದಾರೆ ಎಂಬ ಬಗ್ಗೆ ಚರ್ಚೆಗೆ ಹೋಗುವುದು ಬೇಡ; ಇದನ್ನು ನಿಲ್ಲಿಸೋಣ. ನಾವು ಈಗ ಚರ್ಚೆ ಮಾಡತಕ್ಕಂಥ ವಿಷಯ ಬೇರೆ, ಲಾಬಿ ಬಗ್ಗೆ ಬೇರೆ ಸಂದರ್ಭದಲ್ಲಿ ಚರ್ಚೆ ಮಾಡೋಣ. ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಸರ್ಕಾರ ಕೈಕಟ್ಟಿಕೊಂಡು ಕುಳಿತಿಲ್ಲ. ಆದರೆ ಸರ್ಕಾರ ನಿದ್ದೆ ಮಾಡುತ್ತಾ ಇದೆ, ಕೈಕಟ್ಟಿಕೊಂಡು ಕುಳಿತಿದೆ ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಾ ಇದೆ. ಈ ರೀತಿ ಪದ ಪ್ರಯೋಗ, ಶಬ್ದ ಪ್ರಯೋಗ ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಆದರೆ, ನಾವೇನು ಮಾಡಿದ್ದೇವೆನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಮೂರು ಸಭೆಗಳನ್ನು ಮಾಡಿದ್ದೇನೆ. ಇಷ್ಟನ್ನು ಹೇಳುವಷ್ಟು ಸ್ವಾತಂತ್ರ್ಯ ಇದೆ ಎಂದು ಭಾವಿಸಿ ಕೊಂಡಿದ್ದೇನೆ. ಆದಾದ ಮೇಲೆ, ಅಳಂದ್ ವಿಷಯ ಪ್ರಸ್ತಾಪ ಮಾಡಿದರು. ಅಲ್ಲಿ ಆರೂವರೆ ಕೋಟಿ ರೂಪಾಯಿಗಳು ಲುಕ್ಸಾನು. ಈ ಸಕ್ಕರೆ ಕಾರ್ಖಾನೆಗೆ ಇವತ್ತು ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳನ್ನು ಜವಾಬ್ದಾರಿ ಮಾಡಿ, ನೀವೇ ಅರೆಸತಕ್ಕ ಕೆಲಸತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಅದು ಇವತ್ತು ಅರೆಯುತ್ತಾ ಇದೆ. ಶಿವಮೊಗ್ಗದಲ್ಲಿ ಲಕ್ಷ್ಮಿ ಷುಗರ್ ಫ್ಯಾಕ್ಟರಿ ಬಗ್ಗೆ ಅವರು ಹೇಳಿದರು. ಆ ಶಬ್ದ ಪ್ರಯೋಗದಿಂದ ನನಗೆ ಯಾರು ಶಿಕ್ಷೆ ಕೊಡುವರು? ಅಲ್ಲಿ ಹನ್ನೆರಡೂವರೆ ಕೋಟಿ ರೂಪಾಯಿಗಳ ಲುಕ್ಸಾನು, ಇದು ನಿಮ್ಮ ಜಿಲ್ಲೆಯಲ್ಲಿಯೇ ಇದೆ. ನಾನು ಅವರನ್ನೂ ಕರೆಸಿದೆ. ಅವರು ಖಾಸಗಿಯವರು. ಇವರ ಸಹವಾಸ ನಮಗೆ ಬೇಡ ಎಂದು ನಮ್ಮ ಸರ್ಕಾರದ ಎಲ್ಲಾ ಅಧಿಕಾರಿಗಳು ಹೇಳಿದರು. ನಾನು ಹೇಳಿದೆ, ಏನಾದರೂ ಹಾಳಾಗಿ ಹೋಗಲಿ, ಅವರಿಗೆ ಕರೆದು ಈ ಸಕ್ಕರೆ ಕಾರ್ಖಾನೆ ಪ್ರೊಡಕ್ಷನ್‌ಗೆ ಬರಬೇಕಾದರೆ ಏನು ಮಾಡಬೇಕು ಎಂದು ಕೇಳಿದೆ. ಅವರು ಒಂದು ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ, ನಾವು ಕೆಲಸ ಶುರು ಮಾಡುತ್ತೇವೆಂದರು. ಅದಕ್ಕೆ ನಮ್ಮ ಅಧಿಕಾರಿಗಳು, ನೀವು ಕೊಟ್ಟರೆ, ಈ ಒಂದು ಕೋಟಿ ರೂಪಾಯಿಗಳ ಹಣವನ್ನು ನಿಮ್ಮ ಕೈಗೆ ಕೊಡುತ್ತೇವೆ, ಇದು ಪ್ರೊಡಕ್ಷನ್‌ಗೆ ಬರುವುದಕ್ಕೆ ಏನೇನು ಮಾಡಬೇಕು, ಪ್ರತಿ ಹಂತದಲ್ಲೂ ನೀವೇ ಜವಾಬ್ದಾರಿ ಹೊತ್ತು, ರಿಪೇರಿ ಮಾಡುವುದಕ್ಕೆ

ಮತ್ತೊಂದು ಮಗದೊಂದು ಮಾಡಿಕೊಂಡು, ಆ ಹಣವನ್ನು ಮಾತ್ರ ನೀವು ಬಳಕೆ ಮಾಡಬೇಕೇ ಹೊರತಾಗಿ ಅವರ ಕೈಗೆ ಕೊಡುವುದಿಲ್ಲವೆಂದು ಹೇಳಿದೆವು. ಮತ್ತು ಆ ಒಂದು ಲಕ್ಷ ರೂಪಾಯಿಗಳಿಗೆ, ಜಿಲ್ಲಾಧಿಕಾರಿಯವರಿಗೆ ಜವಾಬ್ದಾರಿಯಿಂದ ಹೊಣೆಗಾರಿಕೆ ಹೊರಿಸಿ, ಇವತ್ತು ಆ ಸಕ್ಕರೆ ಕಾರ್ಖಾನೆಯನ್ನು ಅರೆಯುವ ಸ್ಥಿತಿಗೆ ತಂದಿದ್ದೇವೆ. ಇದಕ್ಕೆ ಹೋಲುವಂಥ ಇನ್ನೊಂದು, ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ. ಸರ್ಕಾರಕ್ಕೆ ಹಣದ ಮುಗ್ಗಟ್ಟು ಒಂದು ಕಡೆ. ಇದಕ್ಕೋಸ್ಕರ ಇವತ್ತು 6 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಯಾವ ಯಾವ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯುವುದಕ್ಕೆ ನಾನಾ ಕಾರಣಗಳಿಂದ ಸಮಸ್ಯೆಗಳಿದ್ದವೋ, ಅವುಗಳನ್ನು ಬಿಡಿಸುವುದಕ್ಕೆ ನಮ್ಮ ಕೈಲಾದಂತೆ, ಶಕ್ತಿಮೀರಿ ಪ್ರಯತ್ನ ಮಾಡಿದ್ದೇವೆ. ಇದು ಒಂದು ಭಾಗ. ನಾನು ಕೆಲವು ರಿಯಾಯಿತಿ ಹೇಳಿದ್ದೇನೆ. ಈ ಮಾತನ್ನು ಹೇಳುವಾಗ, ಸಕ್ಕರೆ ಮಂತ್ರಿಗಳಾದ ಶ್ರೀಮಾನ್ ಅಜಯಸಿಂಗ್‌ರವರು ಹೇಳಿದರು, ಇಷ್ಟೊಂದು ರಿಯಾಯಿತಿಯನ್ನು ಉತ್ತರ ಪ್ರದೇಶದಲ್ಲೂ ಕೊಟ್ಟಿಲ್ಲವೆಂದರು. ನಾನು ಅವರಿಗೆ ಹೇಳಿದೆ. ನನಗೆ ದುಡ್ಡಿಲ್ಲ, ಕಾಸಿಲ್ಲ, ಆದರೂ ಇವತ್ತು 20 ಕೋಟಿ ರೂಪಾಯಿ ಮೇಲೆ ಜವಾಬ್ದಾರಿಯನ್ನು ಹೊತ್ತು ಕೊಳ್ಳಬೇಕಾಗಿ ಬಂದಿದೆ. ನಮಗೆ ನಾನಾ ಸಮಸ್ಯೆಗಳು ಇವೆ. ಆ ಸನ್ನಿವೇಶ ಏಕೆ ಬಂತು ಈ ಚರ್ಚೆಯಲ್ಲಿ ಎಂದರೆ, ಅವತ್ತು ನಮ್ಮಲ್ಲಿ ಸುಮಾರು 800 ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನು ಇತ್ತು. ಇದನ್ನು ಮಾಡಿದ ಮೇಲೆ ನಾನು ಹೇಳಿದೆ, ಇಷ್ಟು ರಿಯಾಯಿತಿ ಕೊಟ್ಟಿದ್ದೇನೆ. ನೀವು ದಯಮಾಡಿ, ಇಲ್ಲಿರತಕ್ಕ ಸಕ್ಕರೆಯನ್ನು ರಿಲೀಸ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಪ್ರತಿಯೊಂದು ಸಕ್ಕರೆ ಕಾರ್ಖಾನೆಯಲ್ಲಿರತಕ್ಕ ದಾಸ್ತಾನು ಲೆಕ್ಕ ತೆಗೆದಾಗ, ನಾನು 17-9-95ರ ಮಾತು ಹೇಳುತ್ತಿದ್ದೇನೆ. 800 ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನು ಇತ್ತು. ಲೆವಿ ಸಕ್ಕರೆಯನ್ನು ರಿಲೀಸ್ ಮಾಡಬೇಕಾದರೂ ಅವರೇ ಮಾಡಬೇಕು. ನಾನ್ ಲೆವಿ ಸಕ್ಕರೆಯನ್ನು ರಿಲೀಸ್ ಮಾಡಬೇಕಾದರೂ ಅವರೇ ಮಾಡಬೇಕು. ಈ ಎರಡಕ್ಕೂ ನಮಗೆ ಅಧಿಕಾರ ಇಲ್ಲ, ನಾವು ಏನು ಮಾಡಬೇಕು? ನನ್ನ ಜಿಲ್ಲೆಯಲ್ಲಿರತಕ್ಕ ಒಂದು ಸಕ್ಕರೆ ಕಾರ್ಖಾನೆ ಎಂದು ಹೇಳಿದರೆ ತಪ್ಪಾಗುವುದಿಲ್ಲ, ಇವತ್ತು 12 ಕೋಟಿ ರೂಪಾಯಿಗಳ ಲಾಭ ಮಾಡಿದ್ದೇವೆ. ಅಲ್ಲಿ 1993-94ರ ಸ್ಟಾಕ್ ಇದೆ, ಇನ್ನೂ ರಿಲೀಸ್ ಆಗಿಲ್ಲ, ನಾನು ಪತ್ರವ್ಯವಹಾರ ಮಾಡಿದ್ದೇನೆ. 1993-94ರ ಸ್ಟಾಕ್ ರಿಲೀಸ್ ಮಾಡುವುದಕ್ಕೆ ಅನುಮತಿ ಕೊಡಿ ಎಂದೂ ಬರೆದಿದ್ದೇನೆ. ಆ ಸಕ್ಕರೆಯು ಚೀಲದಲ್ಲಿಯೇ ಕಪ್ಪು ಬಂದು, ಲಿಕ್ವಿಡ್ ಫಾರಂ ಆಗಿ, ಒಂದು ನೂರು ಕೆ.ಜಿ. ಇರತಕ್ಕಂಥಾದ್ದು, ಇವತ್ತು 30-40-50 ಕೆ.ಜಿ. ಕೂಡ ಬರುವುದಿಲ್ಲ, ಮತ್ತೆ ಅದನ್ನು, ಅದೇ ಸಕ್ಕರೆ ಕಾರ್ಖಾನೆಯಲ್ಲಿ ಹಾಕಿ, ಪುನಃ ಸಕ್ಕರೆ ತಯಾರು ಮಾಡಿಕೊಳ್ಳಬೇಕು. ಈ ಸಕ್ಕರೆಯನ್ನು ಯಾರೂ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ, ಎಲ್ಲಾ ಕಪ್ಪು ಬಂದಿದೆ. ಇದಕ್ಕೆ ನಮ್ಮಲ್ಲಿ ಮುಗ್ಗಲು ಬರುತ್ತದೆಂದು ಹೇಳುತ್ತಾರೆ; ಇದನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ, ಆ ಸ್ಥಿತಿಗೆ ಬಂದಿದೆ. ಇದನ್ನೂ ಕೂಡ ಬರೆದಿದ್ದೇನೆ. ದಯಮಾಡಿ, 1993-94ರ ಸ್ಟಾಕನ್ನಾದರೂ ರಿಲೀಸ್ ಮಾಡಿ, ಪುನಃ ಅದನ್ನು ಅದೇ ಸಕ್ಕರೆ ಕಾರ್ಖಾನೆಯಲ್ಲಿ, ಸಕ್ಕರೆ ಮ್ಯಾನ್ಯುಫ್ಯಾಕ್ಚರ್ ಮಾಡಿ, ಈಗಲಾದರೂ ಮಾರಾಟ ಮಾಡುವುದಕ್ಕೆ ಅನುಕೂಲ ಮಾಡಿ, ಇಲ್ಲದೇ ಹೋದರೆ, ಇರುವುದೂ ಹೋಗುತ್ತದೆಂದು ಪತ್ರ ಬರೆದಿದ್ದೇನೆ. ರಿಲೀಸ್ ಮಾಡುವವರು ಯಾರು? ನಾನು ಯಾರಿಗೂ ದೋಷ ಮಾಡುತ್ತಾ ಇಲ್ಲ, ಕೇಂದ್ರ ಸರ್ಕಾರಕ್ಕೆ ದೋಷ ಶೋಷಣೆ ಮಾಡುತ್ತಾ ಇಲ್ಲ, ವಸ್ತು ಸ್ಥಿತಿಯನ್ನು ಇವತ್ತು ನಾನು, ಸದನದ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಾವು ಡೆಲ್ಲಿಗೆ ಸುಮಾರು ಹತ್ತು ಸಾರಿ ಹೋಗಿರಬಹುದು, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ನನಗೆಷ್ಟು ಸಾಧ್ಯವೋ ಅಷ್ಟು ಪ್ರಯತ್ನ ಮಾಡಿದ್ದೇನೆ. ಆ ಸಂದರ್ಭದಲ್ಲಿ ನಾನು ಈ ಆರ್ಡರನ್ನು ಅವರ ಕೈಗೆ ಕೊಟ್ಟಾಗ, ಉತ್ತರ ಪ್ರದೇಶದಲ್ಲೂ ಕೂಡ

ರೈತರಿಗೆ ಈ ರಿಯಾಯಿತಿ ಕೊಟ್ಟಿಲ್ಲ ಎನ್ನುವ ಮಾತನ್ನು, ಶ್ರೀಮಾನ್ ಅಜಯಸಿಂಗ್‌ರವರೇ ಹೇಳಿದಂಥ ಮಾತನ್ನು ಈ ಸಭೆಯಲ್ಲಿ ತಿಳಿಸುತ್ತಿದ್ದೇನೆ.

1.50 ಪಿ.ಎಂ.

ಸನ್ಮಾನ್ಯ ಅಧ್ಯಕ್ಷರೇ, ಇವತ್ತು ವಸ್ತು ಸ್ಥಿತಿಯನ್ನು ನಾನು ಸಭೆಯ ಮುಂದೆ ಇಟ್ಟಿದ್ದೇನೆ, ನಿಜ. ನಮ್ಮ ರೈತರು ಯಾವುದಾದರೂ ಒಂದು ಬೆಳೆಯಲ್ಲಿ ಹೆಚ್ಚು ಲಾಭ ಬರುತ್ತದೆ ಅಂದರೆ ಎಲ್ಲರೂ ಅದನ್ನೇ ಶುರು ಮಾಡುತ್ತಾರೆ. ಅದು ಹೆಚ್ಚಾದಾಗ ಬೆಲೆ ಬಿದ್ದು ಹೋದರೆ ಆಮೇಲೆ ಎಲ್ಲಾ ರೀತಿಯ ನಷ್ಟವನ್ನು ಅನುಭವಿಸುವವನು ಅವನೇ. ಎಲ್ಲಿದೆ ನಮ್ಮಲ್ಲಿ ಅದನ್ನು ಕೊಂಡುಕೊಳ್ಳುವ ವ್ಯವಸ್ಥೆ. ಹಾಲಿ ದಾಸ್ತಾನು ಇರುವುದನ್ನು ಮಾರಾಟ ಮಾಡುವುದಕ್ಕೆ ಪರವಾನಿಗೆ ಕೊಡಿ ಎನ್ನುವುದಕ್ಕೆ ಇವತ್ತು ಸಾಕಷ್ಟು ನಿರ್ಬಂಧಗಳು ಇವೆ. ಅವರು ಹೇಳುತ್ತಾರೆ, ನಾವು ಒಂದೇ ಸಾರಿ ಈ ಎಲ್ಲಾ ಸಕ್ಕರೆಯನ್ನು ಮಾರುಕಟ್ಟೆಗೆ ಬಿಟ್ಟರೆ ರೇಟ್ ಬಿದ್ದು ಹೋಗುತ್ತದೆ. ಅಲ್ಲಿ ಒಂದು ಆರ್ಗ್ಯುಮೆಂಟ ನಡೆಯಿತು. ಕೇಂದ್ರ ಸರ್ಕಾರ ನಮ್ಮ ಮುಂದೆ ನಡೆಸಿದ ಮೀಟಿಂಗ್‌ನಲ್ಲಿ ಬಂದ ಆರ್ಗ್ಯುಮೆಂಟ್. ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಹಂತ ಹಂತವಾಗಿ ಇದೇ ರೀತಿಯಲ್ಲಿ ಸಕ್ಕರೆ ಸ್ಟಾಕ್ ಇದೆ. ಅದನ್ನು ನಾವು ಹಂತ ಹಂತವಾಗಿ ನಾವು ರಿಲೀಜ್ ಮಾಡಬೇಕಾಗುತ್ತದೆ. ಹಾಗೆಯೇ ನಾವು ರೈತರಿಗೆ ಪರವಾನಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಇದು ಒಂದು ವಾದ ಮಾಡುತ್ತಾರೆ. ಎಲ್ಲಾ ರೈತ್ತರು ಒಂದೇ ಸಾರಿ ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ, ಎಲ್ಲಾ ಶುಗರ್ ಫ್ಯಾಕ್ಟರಿಗಳು ಇರುವ ಸಕ್ಕರೆಯನ್ನು ಮಾರಾಟ ಮಾಡಿ ಎಂದು ನಾವು ಅನುಮತಿ ಕೊಡುವುದಾದರೆ ಇಡೀ ಹಿಂದೂಸ್ಥಾನದಲ್ಲಿ ಈ ಸಾರಿ ಸುಮಾರು 138-140 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿದೆ.

ಓವರ್ ಪ್ರೊಡಕ್ಷನ್ ಆಗಿದೆ. ಇದರ ಮೇಲೆ ಆಮದು ಕೂಡ ಮಾಡಿಕೊಂಡಿದ್ದಾರೆ.

ಶ್ರೀ ಹೆಚ್. ಶಿವಪ್ಪ : ಹಾಲಿ ಇರತಕ್ಕಂಥಾದ್ದು 160 ಲಕ್ಷ ಟನ ಲಾಟ್ ಇಯರ್ ಕ್ಯಾರಿ ಓವರ್ ಬಗ್ಗೆ ತಾವು ಹೇಳಲಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಕ್ಯಾರಿ ಓವರ್ ಬಗ್ಗೆ ತಾವು ತುಂಬಾ ಎಕ್ಸ್‌ಪೋರ್ಟ್ ಇದ್ದೀರಿ. ನಾನು ಕ್ಯಾರಿ ಓವರ್ ಹೇಳಲಿಲ್ಲ. ಹೋದ ವರ್ಷ ಬೆಳೆದಿರತಕ್ಕಂಥಾದ್ದೇ 138 ಲಕ್ಷ ಟನ್. Internal domestic consumption may not exceed more than 115 lakhs tons ಎನ್ನತಕ್ಕಂಥಾದ್ದನ್ನು ಹೇಳಿ ಇನ್ನೂ 30 ಲಕ್ಷ ಟನ್ ನಮಗೆ ಸರ್‌ಪ್ಲೆಸ್ ಇದೆ, ಇದನ್ನು ಹೊರ ದೇಶಕ್ಕೆ ರಫ್ತು ಮಾಡುವುದಕ್ಕೆ ನೀವು ಅವಕಾಶ ಮಾಡಿಕೊಡಿ ಎಂದು ಹೇಳಿದರೆ ಅವರು ಆಮದು ಮಾಡಿ ಕೊಂಡಿದ್ದಾರೆ. ಇದು ವಸ್ತು ಸ್ಥಿತಿ. ಮಾನ್ಯ ಅಧ್ಯಕ್ಷರೇ, ನಾವು ತಮಿಳುನಾಡಿಗೆ ನಮ್ಮ ಪಕ್ಕದ ಬಾರ್ಡರ್‌ಗಳಲ್ಲಿ ಇರತಕ್ಕಂಥ ಸಕ್ಕರೆ ಕಾರ್ಖಾನೆಗಳಿಗೆ ಕಳುಹಿಸಬೇಕು ಎಂದು ಪ್ರಯತ್ನ ಮಾಡಿದೆವು. ಮಾಹಾರಾಷ್ಟ್ರಕ್ಕೆ ಪ್ರಯತ್ನ ಮಾಡಿದೆವು. ಇವತ್ತು ಅಲ್ಲ, ನಾನು ಏನು 17-9-95ರಲ್ಲಿ ಈ ಆರ್ಡರ್ ಮಾಡಿದೆ ಅದೇ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳಿಗೆ ಹೇಳಿ ನೆರೆರಾಜ್ಯಗಳವರ ಮೇಲೆ ಸಾಧ್ಯವಾದ ಮಟ್ಟಿಗೆ ನಾವು ಹೆಚ್ಚು ಒತ್ತಡ ತರೋಣ ಎಂದು ಪ್ರಯತ್ನ ಮಾಡಿದೆವು. ದುರ್ದೈವ ಅಲ್ಲೂ ಕೂಡ ಎಕ್ಸೆಸ್ ಪ್ರೊಡಕ್ಷನ್ ಆಗಿದೆ. ಅವರು ನಮ್ಮ ರೈತರಿಗೆ ಕಷ್ಟವಾಗಿದೆ ಎಂದು ವಾದ ಮಾಡುತ್ತಾರೆ. ಮಾನ್ಯ ಅಧ್ಯಕ್ಷರೆ; ನಮ್ಮ ಸಕ್ಕರೆ ಮಂತ್ರಿಗಳು ಹೋಗಿದ್ದು ಅಲ್ಲದೇ ನಾನೇ ಹೋದೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಹತ್ತಿರ. ನಾನು ಇಲ್ಲಿ ಯಾವುದೇ ರಾಜಕೀಯವನ್ನು ಬೆರೆಸುವುದಕ್ಕೆ ಹೋಗುವುದಿಲ್ಲ. ಅದರ ಅವಶ್ಯಕತೆ ಕೂಡ ನನಗೆ ಇಲ್ಲ. ನಮಗೆ ವಿದ್ಯುತ್ ಕೊರತೆ ಇದ್ದಾಗ ಅವರು ನಮಗೆ ವಿದ್ಯುತ್ ಕೊಟ್ಟು

ಹಕರಿಸಿದ್ದಾರೆ. ಅವರು ಎಷ್ಟು ವಿದ್ಯುತ್ ಕೊಟ್ಟಿದ್ದಾರೆ ಆ ವಿಷಯ ಬೇರೆ. ಮುಂದೆ ೨ವು. ಪವರ್ ವಿಷಯದ ಬಗ್ಗೆ ಚರ್ಚೆ ಮಾಡುವಂತಹ ಕಾಲದಲ್ಲಿ ನಾನು ಅದರ ಗ್ಗೆ ವಿವರಣೆಯನ್ನು ಕೊಡುತ್ತೇನೆ. ಆದರೆ ಅವರಿಗೂ ಅಲ್ಲೂ ಕೂಡ ರಾಜಕೀಯ ದೆ. ಅಲ್ಲಿ ಹಿಂದಿನ ಮಾಜಿ ಮುಖ್ಯಮಂತ್ರಿಗಳು 4-5 ಲಕ್ಷ ಜನರನ್ನು ಸೇರಿಸಿ ೂಡ್ಡ ಪ್ರತಿಭಟನಾ ಸಭೆಯನ್ನು ಮಾಡಿದರು. ಅದನ್ನು ನಾನು ತಪ್ಪು ಎಂದು ೀಳುವುದಿಲ್ಲ, ರಾಜಕಾರಣ ನಾವೆಲ್ಲರೂ ಮಾಡುತ್ತೇವೆ. ಪ್ರತಿಯೊಂದು ರಾಜಕೀಯ ಕ್ಷದವರು ಮಾಡುತ್ತಾರೆ. ಇಲ್ಲಿ ತಾವು ಮಾತನಾಡುವಾಗ ನನ್ನನ್ನು ಅಟ್ಯಾಕ್ ಾಡಲಿಲ್ಲವೇ? ಅಲ್ಲಿ ಅವರು ಹೇಳುವುದು ಏನೆಂದರೆ ನಮ್ಮಲ್ಲಿ ಹೆಚ್ಚು ಸಕ್ಕರೆ ಾರ್ಖಾನೆಗಳು ಇವತ್ತು ಕರ್ನಾಟಕದ ಕಬ್ಬನ್ನು ಅರೆಯುವುದಕ್ಕೆ ಅವಕಾಶಕೊಟ್ಟಿರುವುದರಿಂದ ಮ್ಮ ರೈತರಿಗೆ ಅನ್ಯಾಯ ಆಯಿತು ಎಂದು ಮಾಜಿ ಮುಖ್ಯಮಂತ್ರಿಗಳಿದ್ದು ನೇರ ಾದನೆ ಈಗ ಇರತಕ್ಕಂಥ ಸರ್ಕಾರದ ಮೇಲೆ. ಅದಕ್ಕೆ ಪರ್ಯಾಯವಾಗಿ ಈದ ರತಕ್ಕಂಥ ಮುಖ್ಯಮಂತ್ರಿಗಳು ಅವರೂ ಕೂಡ ಹಲವಾರು ರೈತರ ಸಭೆಗಳನ್ನುಉದ್ದೇಶಿಸಿ ಾಷಣ ಮಾಡಿರುವುದು, ಫೋಟೋಗಳು ಬಂದಿರತಕ್ಕಂಥಾದ್ದು ಯಾವ ಸಭೆಯಲ್ಲಿ ಷ್ಟು ಜನರು ಸೇರಿದ್ದಾರೆ ಎನ್ನುವುದು ಬೃಹತ್ ಸಭೆ ಎಂದು ನಾವು ಏನು ೀಳುತ್ತೇವೆಯಲ್ಲ, ಆ ರೀತಿ ಸಭೆಗಳನ್ನು ನಡೆಸುತ್ತಿರುವುದು ಎರಡೂ ಕಡೆ ಆಗಿದೆ. ಕಡೆ ಹಿಂದಿನ ಮಾಜಿಮಂತ್ರಿಗಳೂ ಮಾಡಿದ್ದಾರೆ, ಆ ಕಡೆ ಹಾಲಿ ುಖ್ಯಮಂತ್ರಿಗಳೂ ಮಾಡಿದ್ದಾರೆ.

ನಾನು ಮೊನ್ನೆ ಒಂದು ವಾರದ ಹಿಂದೆ ಚರ್ಚೆ ಮಾಡಿದಂತಹ ಕಾಲದಲ್ಲಿ ುದಿನ ಚರ್ಚೆಯಲ್ಲಿ ನಡೆದಂತಹ ವಿವರಣೆಯನ್ನು ಈ ಸಭೆಯಲ್ಲಿ ಹೇಳುವುದಕ್ಕೆ ೋಗುವುದಿಲ್ಲ, ಅದರ ಅವಶ್ಯಕತೆ ಕೂಡ ಇಲ್ಲ ಇಲ್ಲ. ನಾನು ಅದನ್ನು ಹೇಳುವುದೂ ಲ್ಲ ಆದರೆ ಅವರು ತಮ್ಮ ಕಷ್ಟವನ್ನು ಹೇಳಿದರು. ಪರಿಸ್ಥಿತಿ ಹೀಗಿದೆ, ನನಗೆ ನ್ನದೇ ಆದಂತಹ ಸಮಸ್ಯೆಗಳು ಇವೆ. ನಾನು ನಮಗೆ ವಿದ್ಯುತ್ ಕೊಡುವುದಕ್ಕೆ ್ರಮಾಣಿಕ ಪ್ರಯತ್ನ ಮಾಡಿದ್ದೇನೆ ಆದರೆ ನಾನು ಕಬ್ಬನ್ನು ಅರಿಯುವುದಕ್ಕೆ ಅವಕಾಶ ಾಡುವುದಕ್ಕೆ ನನಗೆ ಏನೇನು ತೊಂದರೆಗಳು ಇದೆ ಎನ್ನುವುದನ್ನು ಅವರು ಅವರ ಮಸ್ಯೆಗಳನ್ನು ಹೇಳಿಕೊಂಡರು. ಅವರು ದಯಮಾಡಿ ಇದನ್ನು ಹೊರಗಡೆ ಪ್ರಸ್ತಾಪ ಾಡುವುದಕ್ಕೆ ಹೋಗಬೇಡಿ ಎಂದು ಹೇಳಿದ್ದಾರೆ. ಆದ್ದರಿಂದ ನಾನು ಅದನ್ನು ಇಲ್ಲಿ ಸ್ತಾಪ ಮಾಡುವುದಿಲ್ಲ, ಆಟ್‌ಲೀಸ್ಟ್ ಒಂದು ಜಂಟ್ಲ್‌ಮ್ಯಾನ್ಲಿ ಅಂಗ್ರಿಮೆಂಟ್ ಎಂದು ಳೋಣ ಅವರ ಕಾರಣಗಳನ್ನು ಅವರು ಹೇಳಿದ್ದಾರೆ. ಆ ದಿವಸ ಅವರ ಉಪ ುಖ್ಯಮಂತ್ರಿಗಳೂ ಇದ್ದರೂ. ಶ್ರೀಮಾನ್ ಮುಂಡೆಯವರು, ಅವರು ನಾನು ನಮ್ಮ ರೆ ಮಂತ್ರಿಗಳು ನಾವೆಲ್ಲ ಒಟ್ಟಿಗೆ ಕುಳಿತುಕೊಂಡು ಚರ್ಚೆ ಮಾಡಿದಂತಹ ಕಾಲದಲ್ಲಿ ಮ್ಮ ಅಧಿಕಾರಿಗಳು ಅವರ ಅಧಿಕಾರಿಗಳು ಇದ್ದರು. ಅವರು ಅಲ್ಲಿ ಇರತಕ್ಕಂಥ ಮಸ್ಯೆಗಳನ್ನು ಹೇಳಿ ಈ ಕಾರಣಗಳಿಂದ ನನಗೆ ಸ್ವಲ್ಪ ಕಾಲಾವಕಾಶ ಬೇಕು ಎಂದು ಳಿದ್ದಾರೆ. ಇವತ್ತು ಪ್ರತಿಕೆಗಳಲ್ಲಿ ಓದಿದೆವು. ಕಾಂಗ್ರೆಸ್ಸ್ ಮುಖಂಡರೇ ಬ್ಯಾನ್‌ನ್ನು ಸ್ಟ್ ಮಾಡಬೇಕೆಂದು ಹೇಳಿದ್ದಾರೆ. ಪರಿಸ್ಥಿತಿ ಏನಾದರೂ ಸುಧಾರಣೆ ಅಗಬಹುದಾ ತ ನಾನು ನೋಡುತ್ತೇನೆ.

"The Sugarcane dispute between Maharashtra and Karnataka has acquired political tone with the Congress confronting the coalition government on ıalf of the Maharashtra Ekikarana Samithi. The Leader of the Opposition the Maharashtra Assembly, Mundakara Rao, holding a letter written to the .te Chief Minister Manohar Joshi, has asked him to lift the ban on cane ›vement across the border."

ಅಂದರೆ ಅಲ್ಲಿ ನಮ್ಮ ಬೆಳಗಾಂ ಮತ್ತು ಬಿಜಾಪುರ ಆ ಕಡೆ ಇರತಕ್ಕಂಥ ರೈತರು ಏನು ಇದ್ದಾರೆ ಅಲ್ಲಿ ಸುಮಾರು 14-15 ಸಕ್ಕರೆ ಕಾರ್ಖಾನೆಗಳು ಆ ಬಾರ್ಡರ್‌ನಲ್ಲಿ ಬರುತ್ತದೆ. ಅದನ್ನು ಲಿಫ್ಟ್ ಮಾಡುವುದರಿಂದ ಆ ಭಾಗದ ನಾನು ನಮ್ಮವರೇ ಎಂದು ಹೇಳುತ್ತೇನೆ. ನಾನು ಮರಾಠಿ ಮಾತನಾಡುವ ರೈತರು ಎಂದು ಹೇಳುವುದಕ್ಕೆ ಹೋಗುವುದಿಲ್ಲ, ನಾನು ಕಾರಣಗಳು ಇರಬಹುದು ಮತ್ತೆ ಅದಕ್ಕೆ ಒಂದು ವ್ಯಾಖ್ಯಾನ ಬೇಡ. ನಮ್ಮ ಗಡಿ ಭಾಗದಲ್ಲಿರತಕ್ಕಂಥ ರೈತರಿಗೆ ಆಗಿರುವಂತಹ ತೊಂದರೆಯನ್ನು ಮಹಾರಾಷ್ಟ್ರ ಕಾಂಗ್ರೆಸ್ ಪಕ್ಷದ ವಿರೋಧಪಕ್ಷದ ನಾಯಕರು ರೈಜ್ ಮಾಡಿ ಈಗ ಇರುವಂತಹ ಬ್ಯಾನ್ ಅನ್ನು ಲಿಫ್ಟ್ ಮಾಡಿ ಎಂದು ಹೇಳಿರುವುದು ಪತ್ರಿಕೆಯಲ್ಲಿ ವರದಿ ಆಗಿದೆ. ಇದರಿಂದ ಬಹುಶಃ ಮಹಾರಾಷ್ಟ್ರದ ಮಾನ್ಯ ಮುಖ್ಯಮಂತ್ರಿಗಳ ಕೈ ಬಲ ಆಗಬಹುದು, ಇದರ ಬಗ್ಗೆ ಅವರು ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಎಂದು ಅಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಾವು ಬಹಳ ಒತ್ತಡ ತಂದಿದ್ದೇವೆ, ಅಷ್ಟೇ ಬಾರ್ಡರ್‌ನಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು ಹೋಗಿ ನಮ್ಮ ಸಕ್ಕರೆ ಕಾರ್ಖಾನೆಯ ಮಾಲೀಕರು ಅದು ಕೋ-ಅಪರೇಟೀವ್ ಸೆಕ್ಟಾರ್‌ನಲ್ಲಿರಬಹುದು ಖಾಸಗಿ ಸೆಕ್ಟಾರ್‌ನಲ್ಲಿ ಇರಬಹುದು ಅವರು ಭೇಟಿ ಮಾಡಿದಾಗ ಅವರು ತಮ್ಮ ಒಂದು ಸಹಕಾರವನ್ನು ಕೊಡುತ್ತೇವೆ ನೀವು ನಮಗೆ ಬ್ಯಾನ್ ಅನ್ನು ಲಿಫ್ಟ್ ಮಾಡಿಸಿ ಎಂದು ಹೇಳಿದ್ದಾರೆ. ಸುಮಾರು ಮೂರು ಮೂರುವರೆ ಲಕ್ಷ ಟನ್ ಕಬ್ಬನ್ನು ಅರಿಯುವುದಕ್ಕೆ ಸಿದ್ಧರಿದ್ದೇವೆ ನಮಗೆ ನೀವು ಈ ಬ್ಯಾನ್ ಅನ್ನು ಲಿಫ್ಟ್ ಮಾಡಿಸಿಕೊಡಿ ಎಂದು ಹೇಳಿದ್ದಾರೆ. ಅವರು ನಮಗೆ ರೈಟಿಂಗ್‌ನಲ್ಲಿ ಕೊಟ್ಟಿದ್ದಾರೆ ನಾವು ಕಬ್ಬನ್ನು ಅರಿಯುವುದಕ್ಕೆ ಸಿದ್ಧರಿದ್ದೇವೆ ಎಂದು. ಬೆಳಗಾಂ ಜಿಲ್ಲಾಧಿಕಾರಿಗಳು ಹೋಗಿದ್ದಾರೆ. ಬಿಜಾಪುರ ಜಿಲ್ಲಾಧಿಕಾರಿಗಳು ಹೋಗಿದ್ದಾರೆ. ಬೀದರ್ ಜಿಲ್ಲಾಧಿಕಾರಿಗಳು ಹೋಗಿದ್ದಾರೆ. ರೈಟಿಂಗ್‌ನಲ್ಲಿ ಅವರು ನಮಗೆ ಹೇಳಿದ್ದಾರೆ ಇವತ್ತು ತಾವು ಬ್ಯಾನ್ ಲಿಫ್ಟ್ ಮಾಡಿಸಿದರೆ ನಾವು ಕಬ್ಬನ್ನು ಅರಿಯುವುದಕ್ಕೆ ಸಿದ್ಧರಿದ್ದೇವೆ ಎಂದು ಬ್ಯಾನ್ ಅನ್ನು ಲಿಫ್ಟ್ ಮಾಡುವುದಕ್ಕೆ ಅಲ್ಲಿರತಕ್ಕಂಥ ಸಮಸ್ಯೆಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.

ಇವತ್ತು ಅಲ್ಲಿನ ಕಾಂಗ್ರೆಸ್(ಐ)ನ ವಿರೋಧ ಪಕ್ಷದ ನಾಯಕರು ಎಂದರೆ ಅಸೆಂಬ್ಲಿಯಲ್ಲಿರತಕ್ಕಂಥ ವಿರೋಧ ಪಕ್ಷದ ನಾಯಕರು ಮಹಾರಾಷ್ಟ್ರ ಮುಖ್ಯಮಂತ್ರಿಗಳಿಗೆ ಬ್ಯಾನ್ ಲಿಫ್ಟ್ ಮಾಡುವ ಬಗ್ಗೆ ಪತ್ರ ಬರೆದಿರುವುದರಿಂದ ಪರಿಸ್ಥಿತಿ ಸುಧಾರಣೆ ಆಗಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಇಲ್ಲಿ ಎಷ್ಟೇ ಮಾತನಾಡಿದರು ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ? ನಮ್ಮ ರಾಜ್ಯದಲ್ಲಿ ಸಕ್ಕರೆ ಅರಿಯುವಂತಹ ಸಾಮರ್ಥ್ಯ ಎಷ್ಟು ಇದೆ ಎಂದರೆ 120 ಲಕ್ಷ ಟನ್. ಭಿತ್ತನೆ ಬೀಜಕ್ಕೆ 15 ಲಕ್ಷ ಟನ್ ಹೋಗುತ್ತದೆ. ಇನ್ನು 75-80 ಲಕ್ಷ ಟನ್ ಕಬ್ಬನ್ನು ಹೇಗೆ ಅರಿಯುವುದು ಈಗ, ಅವರು ಸ್ಟ್ಯಾಚುಟರಿ ರಿಪೇರಿಗೋಸ್ಕರ 3 ತಿಂಗಳು ಮುಚ್ಚುತ್ತಾರೆ. ಅದನ್ನು ಕೂಡ ನಾವು ಒಂದು ತಿಂಗಳು ಬೇಡ ಎಂದು ಒತ್ತಾಯಾ ತರಬಹುದು. ಅವರು ಬಾಯಲರ್ ಮತ್ತೊಂದು ರಿಪೇರಿ ಮಾಡುವುದು ಬೇಡ ಎಂದು ಹೇಳಿದರೆ ಅವರು ಹೇಳುತ್ತಾರೆ ರಿಪೇರಿ ಮಾಡಿದಿದ್ದರೆ ನಮಗೆ ಇಳುವರಿ ಬರುವುದಿಲ್ಲ ನಾವು ಹೇಗೆ ಮಾಡುವುದಕ್ಕೆ ಸಾಧ್ಯ ಎಂದು ಹೇಳುತ್ತಾರೆ. ಅವರಿಗೂ ಅವರದ್ದೇ ಆದ ಸಮಸ್ಯೆ ಇದೆ. ಈಗ ಏನು ಸಕ್ಕರೆ ಸ್ಟಾಕ್ ಇದೆ ಅದನ್ನು ಬ್ಯಾಂಕ್‌ಗೆ ಹೈಪೋಥಿಕೇಟ್ ಮಾಡಿದ್ದಾರೆ. ಅದರ ಮೇಲೆ ಬಡ್ಡಿ ಸಿಕ್ಕಾಪಟ್ಟೆ ಬೆಳೆಯುತ್ತಿದೆ.

ಎರಡು ವರ್ಷ ಮೂರು ವರ್ಷಗಳಿಂದ ಬಡ್ಡಿ ಸಿಕ್ಕಾಪಟ್ಟೆ ಬೆಳೆಯುತ್ತಿದೆ. ಮತ್ತೆ ಅವರಿಗೆ ಗ್ಲೋಬಲ್ ಮಾರ್ಕೆಟ್ ಕೂಡ ಬಿದ್ದು ಹೋಗಿದೆ. ಇದು ಬರೀ

ಹಿಂದೂಸ್ಥಾನದ ಪ್ರಶ್ನೆಯಲ್ಲ. ಪ್ರಪಂಚದ ಬಹು ಬಾಗ ರಾಷ್ಟ್ರಗಳಲ್ಲಿ ಸಕ್ಕರ ಹೆಚ್ಚು ಬೆಳೆದಿರುವುದರಿಂದ ಉತ್ಪಾದನೆ ಮಾಡಿರುವುದ್ದರಿಂದ ವಿಶ್ವ ಮಾರುಕಟ್ಟೆಯಲ್ಲೂ ಕೂಡ ಸಕ್ಕರೆಗೆ ಹೆಚ್ಚು ಬೆಲೆ ಇಲ್ಲವೆನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಆದರಿಂದ ಅವರು ಏನು ಹೇಳುತ್ತಾರೆ ಎಂದರೆ ಇವತ್ತು ನಮ್ಮ ಕೈಯಲ್ಲಿ ಸಾಧ್ಯವಿಲ್ಲ. ಇಳುವರಿ 6 ಬರಬಹುದು, 5 ಬರಬಹುದು, ಐದೂವರೆ ಬರಬಹುದು, ನಾಲ್ಕು ಬರಬಹುದು ಕೊನೆಗೆ ಎರಡೂವರೆಗೆ ಬಂದು ನಿಲ್ಲುತ್ತದೆ. ಕಾರಣವೇನೆಂದರೆ ಓವರ್ ಮೆಚ್ಯೂರ್ 13-14 ತಿಂಗಳಿಗೆ ಕಬ್ಬನ್ನು ಅರೆಯಬೇಕಾದದ್ದು 18 ತಿಂಗಳು , 20 ತಿಂಗಳು, 22 ತಿಂಗಳ ಕಬ್ಬನ್ನು ಅರೆದರೆ ಇಳುವರಿ ಕಡಿಮೆಯಾಗುತ್ತದೆ. ಕೆಲವು ಕಡೆ ಕಟ್ಟಿಗೆ ಬೆಂಕಿ ಹಚ್ಚಿರುವುದರು ನಿಜ. ಇದನ್ನು ಉತ್ಪ್ರೇಕ್ಷೆ ಮಾಡಿ ಹೇಳಿದಿರಿ ಎಂದು ಕೂಡಾ ನಾನು ಹೇಳುವುದಿಲ್ಲ. ವಸ್ತು ಸ್ಥಿತಿ ಸತ್ಯ ಇದೆ. ನನ್ನ ಜಿಲ್ಲೆಯಲ್ಲಿ ಇವತ್ತು 5 ಲಕ್ಷ ಟನ್ ಕಬ್ಬು ಬೆಳೆದು ನಿಂತಿದೆ.

ಹಿರಿಯೂರು, ಗೌರಿಬಿದನೂರು ಮತ್ತು ಬ್ರಹ್ಮಾವರ ಈ ಮೂರು ಫ್ಯಾಕ್ಟರಿಗಳ ಮೇಲೆ ಒತ್ತಡ ತಂದು ಒಂದು ಟನ್‌ಗೆ 125 ರೂಪಾಯಿಯಂತೆ ಸಬ್ಸಿಡಿ ಕೊಡುತ್ತೇವೆ. ಟ್ಯಾಕ್ಸ್ ಎಕ್ಸೆಮ್ಪ್ಟ್ ಮಾಡುತ್ತೇವೆಂದು ಹೇಳಿದ್ದೇವೆ. ಇಷ್ಟೆಲ್ಲಾ ಮಾಡಿ ಇನ್ನು ಮುಂದಕ್ಕೆ ಏನು ಮಾಡಬೇಕೆಂದು ನನಗೇ ದಿಕ್ಕು ತೋಚುತ್ತಿಲ್ಲ. ಇದರ ಜೊತೆಗೆ ಬೆಲ್ಲದ ಬೆಲೆ ಬಿದ್ದು ಹೋಗಿದೆ. ಬೆಲ್ಲದಲ್ಲಿ ಹೆಚ್ಚು ಬೆಲೆ ಬರುತ್ತದೆ ಎಂದಾಗ ಸಕ್ಕರೆ ಕಂಪನಿಗೆ ಕಬ್ಬು ಕೊಡದೆ ಬೆಲ್ಲ ಮಾಡುವ ಬಗ್ಗೆ ರೈತರು ಮನಸ್ಸು ಮಾಡುತ್ತಾರೆ. ಯಾವಾಗ ಬೆಲ್ಲದ ಬೆಲೆ ಬಿದ್ದು ಹೋಗುತ್ತದೆಯೋ ಆಗ ನಾನು ಕಬ್ಬು ಕೊಡುತ್ತೇನೆಂದು ರೈತ ಬರುತ್ತಾನೆ. ಇದು ಸ್ವಾಭಾವಿಕ. ಎರಡು ವರ್ಷಗಳ ಹಿಂದೆ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ರೈತರು ಕೊಡದೇ ಇದ್ದುದರಿಂದ ಖಂಡಸಾರಿಗಳಲ್ಲಿ ಬೆಲ್ಲ ಮಾಡಬಾರದೆಂದು ತಡೆ ಹಿಡಿದರು ನಿಜ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಆವರು ಇವತ್ತು ಏಕೆ ಬೆಲ್ಲ ಮಾಡುವುದಿಲ್ಲ? ಗಿಟ್ಟುವುದಿಲ್ಲವೆಂದು ಮಾಡುತ್ತಿಲ್ಲ. 1 ಟನ್ ಕಬ್ಬನ್ನು ಅರೆದರೆ 1.3 ಕ್ವಿಂಟಾಲ್ ಬೆಲ್ಲ ಬರುತ್ತದೆ. ಇದನ್ನು 250 ರೂಪಾಯಿಗೋ 350 ರೂಪಾಯಿಗೋ ಮಾರಿದರೆ ಬೆಲ್ಲ ಮಾಡುವ ಖರ್ಚು 150 ರೂಪಾಯಿ ಕಳೆದರೆ ಇನ್ನು ಉಳಿಯುವ 120 ರೂಪಾಯಿ ತೆಗೆದುಕೊಂಡು ರೈತರು ಮಣ್ಣು ಹಾಕಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ರೈತರು ಇವತ್ತು ಬೆಲ್ಲ ಮಾಡುವುದಕ್ಕೆ ಸಿದ್ಧವಿಲ್ಲ. ನಾವು ಒಂದು ಟನ್‌ಗೆ 125 ರೂಪಾಯಿ ಸಬ್ಸಿಡಿ ಕೊಟ್ಟು ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಕಳುಹಿಸಿಕೊಡಿ ಎಂದರೆ, ಅದಕ್ಕೆ ಲಾರಿ ಬಾಡಿಗೆ ಒಂದೂವರೆ ಸಾವಿರ ಅಥವಾ ಎರಡು ಸಾವಿರ ರೂಪಾಯಿಯಾಗುತ್ತದೆಂದು ಹೇಳುತ್ತಾರೆ. ಅದರಿಂದಲೂ ಗಿಟ್ಟುವುದಿಲ್ಲ.

ಆಮೇಲೆ ಗೋವಾ ಚೀಫ್ ಮಿನಿಸ್ಟರ್‌ರವರನ್ನು ಕಾಂಟಾಕ್ಟ್ ಮಾಡಲಾಯಿತು. ಅವರು 1.05 ಲಕ್ಷ ಟನ್ ಕಬ್ಬನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಈಗಾಗಲೇ ಅಲ್ಲಿಗೆ ಸುಮಾರು 65 ಸಾವಿರ ಟನ್ ಕಬ್ಬು ಹೋಗಿರಬೇಕು. ಸ್ವಾಮಿ ಮಾನವ ಸಹಜವಾದ ನನ್ನ ಕೈಯಲ್ಲಿ ಏನಿ ಶಕ್ತಿ ಇದೆಯೋ ಅದನ್ನೆಲ್ಲಾ ನಾನು ಮಾಡಿದ್ದೇನೆ. ಇದಕ್ಕಿಂತ ಹೆಚ್ಚು ಶಕ್ತಿ ನನಗಿದೆಯೆಂದು ಹೇಳಲಿಕ್ಕೆ ಸಿದ್ಧನಿಲ್ಲ. ನಾವು ನಿರ್ಲಕ್ಷತನದಿಂದ ಕೆಲಸ ಮಾಡುತ್ತಿದ್ದೇವೆ. ಇತ್ತ ಕಡೆ ಗಮನಹರಿಸುತ್ತಿಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ನಾನು ಆ ಕಡೆ ಇದ್ದಿದ್ದರೂ ಇದೇ ಮಾತನ್ನು ಹೇಳುತ್ತಿದ್ದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಹೋದ ಜೂನ್ ತಿಂಗಳಲ್ಲಿ ಮಿಟಿಂಗ್ ಕರೆದಿದ್ದಾಗ ಇನ್ನೊಂದು ವಾರದಲ್ಲಿ ಪುಃ ಎಲ್ಲರನ್ನು ಕರೆದು ಮಾತನಾಡುತ್ತೇವೆಂದು

ಹೇಳಿ 9ನೇ ತಿಂಗಳಲ್ಲಿ ತೀರ್ಮಾನವನ್ನು ಮಾಡಿದರು. ಅದೇ ತೀರ್ಮಾನವನ್ನು ಜೂನ್ ಅಥವಾ ಜುಲೈ ತಿಂಗಳಲ್ಲಿ ತೆಗೆದುಕೊಂಡಿದ್ದಿದ್ದರೆ ಸುಮಾರು 50 ರಿಂದ 60 ಭಾಗದಷ್ಟು ಎರಡು ಜಿಲ್ಲೆಗಳ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು.

ಶ್ರೀ ಹೆಚ್.ಡಿ. ದೇವೇಗೌಡ : ಎರಡು ತಿಂಗಳು ಮೊದಲೇ ತೀರ್ಮಾನ ಮಾಡಬೇಕಾಗಿತ್ತೆಂದು ಮಾನ್ಯ ಸದಸ್ಯರು ಹೇಳಿರುವ ವಿಷಯದ ವಾದ ವಿವಾದಕ್ಕೆ ನಾನು ಹೋಗುವುದಿಲ್ಲ. ಸರ್ಕಾರದಿಂದ ಜಿ.ಓ. ಆಗಿರುವನ್ನಾದರೂ ಮಾನ್ಯ ಸದಸ್ಯರು ನಂಬುತ್ತಾರಾ? ಅದನ್ನೂ ನಂಬುವುದಿಲ್ಲವೆಂದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದಲ್ಲಿ 17 ಸಹಕಾರಿ ಸಕ್ಕರೆ ಕಾರ್ಖಾನೆಗಳಿವೆ, ಅವುಗಳಲ್ಲಿ ಪ್ರತಿ ದಿನಕ್ಕೆ 34,450 ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯ ಇದೆ. ಸಾರ್ವಜನಿಕ ಜಂಟಿ ಕ್ಷೇತ್ರದಲ್ಲಿ 4 ಸಕ್ಕರೆ ಕಾರ್ಖಾನೆಗಳಿವೆ. ಇವುಗಳಲ್ಲಿ ಪ್ರತಿ ದಿನ 11,200 ಟನ್ ಕಬ್ಬನ್ನು ಕ್ರಷ್ ಮಾಡಬಹುದು. ಖಾಸಗಿ ವಲಯದಲ್ಲಿ 9 ಸಕ್ಕರೆ ಕಾರ್ಖಾನೆಗಳಿವೆ ಇವುಗಳಲ್ಲಿ ಪ್ರತಿ ದಿನ 26,250 ಟನ್ ಕಬ್ಬನ್ನು ಕ್ರಷ್ ಮಾಡಬಹುದು. ಅಂದರೆ, ಒಂದು ದಿನಕ್ಕೆ 71,950 ಟನ್ ಕಬ್ಬನ್ನೆ ಅರೆಯಲಿಕ್ಕೆ ಸಾಮರ್ಥ್ಯ ಇದೆ. ಇದು ಇರತಕ್ಕಂಥ ವಸ್ತು ಸ್ಥಿತಿ. ಈಗ ನಾವು ಮುಂದೆ ಏನು ಮಾಡಬೇಕು? ಅದಕ್ಕೆ ಕ್ಲೋಸಿಂಗ್ ಟೈಮ್ 3 ತಿಂಗಳು ಇದೆಯಲ್ಲಾ ಅದನ್ನು ಮಾಡದೆ ಇನ್ನು ಒಂದು ತಿಂಗಳಾದರೂ ಕಬ್ಬು ಅರೆಯುವುದನ್ನು ಮುಂದುವರೆಸಿ ಎಂದು ನಾವು ಒತ್ತಾಯ ತರಬಹುದು. ಒಂದು ತಿಂಗಳು ಹೆಚ್ಚುವರಿಯಾಗಿ ಕಬ್ಬನ್ನು ಅರೆದರೆ, ಪ್ರತಿ ದಿನ 71,950 ಟನ್ ಅರೆದರೆ 30 ದಿವಸಕ್ಕೆ ಸುಮಾರು 20 ಲಕ್ಷ ಟನ್ ಕಬ್ಬನ್ನು ಅರೆಯಬಹುದು. ಇನ್ನು ಉಳಿಯುವ 50 ರಿಂದ 60 ಲಕ್ಷ ಟನ್ ಕಬ್ಬನ್ನು ನಾವು ಏನು ಮಾಡಬೇಕು? ಇದನ್ನು ಏನು ಮಾಡಬೇಕೆಂಬ ಬಗ್ಗೆ ತಾವು ಸಲಹೆ ಕೊಟ್ಟರೆ ಅದನ್ನು ನಾನು ಸ್ವೀಕಾರ ಮಾಡುತ್ತೇನೆ. ಒಂದುವರೆ ತಿಂಗಳಾದರೂ ಫ್ಯಾಕ್ಟರಿಯನ್ನು ಮುಚ್ಚಿ ಕ್ಲೀನ್ ಮಾಡದೆ ಇದ್ದರೆ ಮುಂದಿನ ವರ್ಷ ಕಬ್ಬನ್ನು ಅರೆಯುವುದಕ್ಕೆ ಆಗುವುದಿಲ್ಲ. ಆಮೇಲೆ ಯಾರೋ ಮಾನ್ಯ ಸದಸ್ಯರುಗಳು, ಸಹಕಾರಿ ರಂಗದಲ್ಲಿ ಪ್ರಾರಂಭ ಮಾಡಬೇಕೆಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಒಪ್ಪಿಗೆ ಕೊಡುವುದಿಲ್ಲ. ಬರೀ ಖಾಸಗಿ ಯಾವರ ಕಡೆಗೇ ಇವರ ಒಲವು ಎಂದು ಹೇಳಿರುವುದು ನನ್ನ ಗಮನಕ್ಕೆ ಬಂದಿದೆ. ಒಂದೊಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕಾದರೆ 45 ರಿಂದ 50 ಕೋಟಿ ರೂಪಾಯಿ ಬೇಕಾಗುತ್ತದೆ. ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆ ಮಾಡುತ್ತೇವೆಂದು ಅರ್ಜಿ ಹಾಕಿಕೊಂಡಿರುವವರು 2 ಕೋಟಿ ಒಂದೂವರೆ ಕೋಟಿ ರೂಪಾಯಿಗಳ ಷೇರು ಬಂಡವಾಳವನ್ನು ಕಲೆಕ್ಟ್ ಮಾಡಿಕೊಂಡು 50 ಕೋಟಿ ರೂಪಾಯಿಗಳನ್ನು ಮತ್ತೆ ಒದಗಿಸಿಕೊಳ್ಳುತ್ತೇವೆಂದರೆ ಸಾಧ್ಯ ಇದೆಯೇ? ಇದು ಯಾರ ಕೈಯಲ್ಲೂ ಸಾಧ್ಯವಿಲ್ಲ. ಇದರ ಜೊತೆಗೆ ಎರಡು ಮೂರು ವರ್ಷಗಳಿಂದ ಲೈಸೆನ್ಸ್ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡದೇ ಇರುವವರನ್ನು ಕರೆಯಿಸಿ, ನೀವು ಕೆಲಸವನ್ನು ಪ್ರಾರಂಭ ಮಾಡಿ ಅಥವಾ ಲೈಸೆನ್ಸ್‌ನ್ನು ಸರೆಂಡರ್ ಮಾಡಿ ಇಲ್ಲವೆಂದರೆ ಲೈಸೆನ್ಸ್ ಕ್ಯಾನ್ಸಲ್ ಮಾಡುವುದಕ್ಕೆ ಬರೆಯಬೇಕಾಗುತ್ತದೆಂದು ತಿಳಿಸಿದ್ದೇನೆ. ಅವರು ಮೂರು ಕೋಟಿ, ಮೂರುವರೆ ಕೋಟಿ ರೂಪಾಯಿಗಳಷ್ಟು ಮಾತ್ರ ಕಲೆಕ್ಟ್ ಮಾಡಿಕೊಂಡು 13 ಕೋಟಿ, 14 ಕೋಟಿ 15 ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಬೇಕೆಂದು ಕೇಳುತ್ತಿದ್ದಾರೆ. ಮತ್ತು ಇದರ ಜೊತೆಗೆ ಇನ್ಸಿಟಿಟ್ಯೂಷನಲ್ ಫೈನಾನ್ಸ್‌ಗಳಿಗೆ ಜಾಮಿನು ನಿಲ್ಲಬೇಕೆಂದು ಕೇಳುತ್ತಾರೆ. ಉದಾರೀಕರಣ ಆರ್ಥಿಕ ನೀತಿ ಜಾರಿಗೆ ಬಂದ ಮೇಲೆ ಸಕ್ಕರೆ ಕಾರ್ಖಾನೆಗಳಿಗೆ ಏನು ಆರ್ಥಿಕ ಸಹಾಯವನ್ನು ಈ ಹಿಂದೆ ಕೊಡುತ್ತಿದ್ದರೋ ಅದನ್ನು ಕೊಡಬಾರದೆಂದು ಕೇಂದ್ರ ಸರ್ಕಾರವು

ಇತ್ತೀಚೆಗೆ ಒಂದು ನಿರ್ಣಯವನ್ನು ಮಾಡಿದೆ. ಈಗ ಶಾಸಗೀಯವರು ಮುಂದೆ ಬಂದು ಕಬ್ಬು ಅರೆಯುವ ವ್ಯವಸ್ಥೆ ಮಾಡಬೇಕೆಂದು ಕೇಳುವುದೇ ಉಳಿದಿರುವ ಮಾರ್ಗ. ಹಿಂದಿನ ಸರ್ಕಾರ ಮತ್ತು ನಮ್ಮ ಸರ್ಕಾರ ಇದುವರೆಗೂ 41 ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ಕೊಡಬಹುದೆಂದು ಕೇಂದ್ರ ಸರ್ಕಾರಕ್ಕೆ ರೆಕಮೆಂಡ್ ಮಾಡಲಾಗಿದೆ. ಇದರ ಬಗ್ಗೆ ನಾನು ದೆಹಲಿಗೆ ಹೋದಾಗಲೆಲ್ಲಾ ವಿಚಾರ ಮಾಡುತ್ತಿದ್ದೇನೆ. ಇನ್ನೊಂದು ವಿಷಯವನ್ನು ಪ್ರಧಾನ ಮಂತ್ರಿಗಳಿಗೆ ತಿಳಿಸಿದ್ದೇನೆ. ಅದೇನೆಂದರೆ ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ತೆಗೆದುಕೊಳ್ಳುವ ನಿಯಮವನ್ನು ಏಕೆ ತೆಗೆದುಹಾಕಬಾರದೆಂದು ಸಲಹೆ ಮಾಡುದ್ದೇನೆ. ಇದರ ಬಗ್ಗೆ ನಾನೂ ಕೂಡ ಯೋಚನೆ ಮಾಡುತ್ತಿದ್ದೇನೆ, ಲೈಸೆನ್ಸ್ ಪದ್ಧತಿಯನ್ನು ತೆಗೆದುಹಾಕುವುದರಿಂದ ಮನಸ್ವೇಚ್ಛೆ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗುವುದರಿಂದ ಅದರಿಂದಲೂ ಅನಾಹುತವಾಗುತ್ತದೆಂದು ಕೆಲವರು ಸಲಹೆ ಮಾಡಿರುವುದರಿಂದ ಪರಿಶೀಲಿಸುತ್ತಿದ್ದೇನೆಂದು ತಿಳಿಸಿದರು.

ಫ್ರೀ ಫಾರ್ ಆಲ್ ಎಂದು ಮಾಡಿದಾಗ ಬೇರೆ ಕೈಗಾರಿಕೆಗೂ ಇದಕ್ಕೂ ವ್ಯತ್ಯಾಸ ಇದೆ. ಇದು ಅಷ್ಟೊಂದು ಸುಲಭವಾಗಿಲ್ಲ. ದುಷ್ಪರಿಣಾಮ, ಸತ್ಪರಿಣಾಮ ಎರಡನ್ನೂ ಆಲೋಚಿಸಿ ನಿರ್ಣಯ ಕೊಡಬೇಕಾಗುತ್ತದೆ. ಇಲ್ಲಿ ಹೇಳಿದಂತಹ ಮಾತನ್ನೇ ಅವರಿಗೆ ಸಲಹೆ ಕೊಟ್ಟೆ ಲೈಸೆನ್ಸ್ ತೆಗೆದು ಹಾಕಿ ಯಾರು ಬೇಕಾದರೂ ಮಾಡಿಕೊಂಡು ಹೋಗಲಿ, ಈ ಸಹವಾಸ ಬೇಡ ಎಂದು ನಾನು ಹೇಳಿದೆ. ನಮಗೆ ಉಳಿದಿರತಕ್ಕಂಥಾದ್ದು ಒಂದೇ ಮಾರ್ಗ. ಇವತ್ತು ಈಗ ಫ್ಯಾಕ್ಟರಿಗಳೇನು ಇದ್ದಾವೋ ಅದರ ಸ್ಟ್ಯಾಟ್ಯುಟರಿ ರಿಕ್ವೆರ್ ಮೆಂಟ್ 3ತಿಂಗಳು ಅವುಗಳನ್ನು ನಿಲ್ಲಿಸಿ ಓವರ್ ಆಲ್ ಮಾಡಿಕೊಳ್ಳತಕ್ಕಂಥಾದ್ದು ಏನು ಇದೆ ಅದನ್ನು ಒಂದು ತಿಂಗಳು ಕಡಿಮೆ ಮಾಡಿಕೊಳ್ಳಿ ಎಂದ ನಾನು ಅವರಲ್ಲಿ ವಿನಂತಿ ಮಾಡಿಕೊಂಡು ಇನ್ನು 20-25 ಲಕ್ಷ ಟನ್ ಕಬ್ಬು ಅರೆಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಬಂದ ಮೇಲೆ ಮಹಾರಾಷ್ಟ್ರ ಮುಖ್ಯ ಮಂತ್ರಿಗಳಿಗೆ ಪುನಃ ಪತ್ರ ಬರೆದಿದ್ದೇನೆ ಅದನ್ನು ಓದಲಿಕ್ಕೆ ಹೋಗುವುದಿಲ್ಲ, ನಾನು ಪತ್ರಿಕೆಗಳಿಗೂ ಅದನ್ನು ಬಿಡುಗಡೆ ಮಾಡಲಿಲ್ಲ. ಬಂದ ತಕ್ಷಣ ಅವರಿಗೆ ನನ್ನ ವಂದನೆಗಳನ್ನು ಹೇಳಿ ಸೌಜನ್ಯತೆಯಿಂದ ಅವರು ಸಹಕರಿಸಿದ್ದರ ಬಗ್ಗೆ ಹೇಳಿದರು ಆ ವಿಷಯವನ್ನು ಪ್ರಸ್ತಾಪ ಮಾಡಿ ದಯಮಾಡಿ ಸ್ವಲ್ಪ ಮಟ್ಟಿಗಾದರೂ ಸಹಕಾರ ಕೊಡಿ ಎಂದು ಪತ್ರ ಬರೆದೆ. ಅದಕ್ಕಿಂತ ಮುಂದೆ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಕಷ್ಟ ಇದೆ. ಏಕೆಂದರೆ ಈಗ ಬೆಲ್ಲ ಮಾಡಲಿಕ್ಕೆ ತಯಾರು ಇಲ್ಲ, ಖಂಡಸಾರಿ ಸಕ್ಕರೆ ಕಾರ್ಖಾನೆಯಲ್ಲಿ ಎಲ್ಲಾ ಇದನ್ನು ಕಿತ್ತು ಹಾಕಿದ್ದೇವೆ. ಖಂಡಸಾರಿ ಶುಗರ್ ಫ್ಯಾಕ್ಟರಿಗಳಿಗೆ ಮಾತ್ರ ಪವರ್ ಅನ್ನು ಕೊರತೆ ಮಾಡಬಾರದೆಂಬ ನಿರ್ಣಯ ಮಾಡಿದ್ದೇವೆ. ಬೇರೆ ಯಾವುದೇ ಶುಗರ್ ಫ್ಯಾಕ್ಟರಿಗಳಿಗೇನಾದರೂ ಮಡಿಕೊಳ್ಳಿ. ಖಂಡಸಾರಿ ಶುಗರ್ ಫ್ಯಾಕ್ಟರಿಗಳಿಗೆ ಪವರ್ ಖೋಟಾ ಮಾಡಬಾರದೆಂಬ ನಿರ್ಣಯ ಮಾಡಿದ್ದೇವೆ. ಇದಕ್ಕಿಂತ ಹೆಚ್ಚು ಏನೂ ಮಾಡುವುದಕ್ಕೆ ಶಕ್ತಿ ಇಲ್ಲ, ನಮ್ಮ ದೇಶದಲ್ಲಿ ಇಂತಹ ಬೆಳೆ ಬೆಳೆಯಬೇಕೆಂಬ ನಿರ್ಬಂಧವನ್ನು ಮಾಡಲಿಕ್ಕೆ ನಮಗೆ ಯಾರಿಗೂ ಸಾಧ್ಯವಿಲ್ಲ, ಅಂತಹ ಕಾನೂನು ತರುವುದಕ್ಕೆ ಸಾಧ್ಯವಾಗುವುದಿಲ್ಲ, ನಮ್ಮ ರಾಜಕಾರಣದ ವ್ಯವಸ್ಥೆಯಲ್ಲಿ ಡೆಮಾಕ್ರಟಿಕ್ ಸಿಸ್ಟಂನಲ್ಲಿ ನಾವು ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ವಾಭಾವಿಕವಾಗಿ ಹೆಚ್ಚು ಹಣ ಬರುತ್ತದೆಂಬ ವಾತಾವರಣ ಬಂದಾಗ ರೈತರು ಸಾಮಾನ್ಯವಾಗಿ ಆ ಕಡೆಗೆ ಹೋಗುತ್ತಾರೆ. ಇದೊಂದು ಬೆಳೆ ಅಲ್ಲ, ನನ್ನ ಜಿಲ್ಲೆಯಲ್ಲಿ ಅಂದರೆ ಕೋಲಾರ, ಹಾಸನದಲ್ಲಿ ಸಾಕಷ್ಟು ಆಲೂಗಡ್ಡೆ ಬೆಳೆಯುತ್ತೇವೆ ಆಗ ಒಂದೊಂದು ಸಲ ಅದನ್ನು ಹೇಳುವವರು ಕೇಳುವವರು ಇಲ್ಲದಂತಾಗುತ್ತದೆ ಆಗ ಶಿಕ್ಷೆಯನ್ನು ಅನುಭವಿಸುತ್ತೇವೆ. ಆ ವ್ಯವಸ್ಥೆಯನ್ನು ಸರಿಪಡಿಸಲು ಕೇವಲ ರಾಜ್ಯ ಸರಕಾರ ಕೇಂದ್ರ ಸರಕರಾದ ಕೈಯಲ್ಲಿ ಸಾಧ್ಯವಿಲ್ಲ.

ಕೇಂದ್ರ ಮಾರುಕಟ್ಟೆ ವ್ಯವಸ್ಥೆಯನ್ನು ರಾಜ್ಯ ಮಾರುಕಟ್ಟೆ ವ್ಯವಸ್ಥೆಯನ್ನು ಮಾರ್ಪಾ ಮಾಡಬೇಕಾಗಿದ್ದರೆ ಅಷ್ಟು ಸುಲಭವಲ್ಲ. ಬೇರೆ ರಾಜಕಾರಣವನ್ನು ಬೆರೆಸುವುದ ಹೋಗುವುದಿಲ್ಲ. ಇಲ್ಲಿನ ಕಷ್ಟ ಪರಿಸ್ಥಿತಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇ ರೈತರು ಅತ್ಯಂತ ಸಂಕಷ್ಟ ಪರಿಸ್ಥಿತಿಯಲ್ಲಿದ್ದಾರೆ,. ಅವರು ಕಬ್ಬನ್ನು ಸುಡತಕ್ಕಂತ ಸನ್ನಿವೇಶಕ್ಕೆ ಹೋಗಿರುವುದೂ ಸತ್ಯ ಇದೆ, ಅನೇಕ ಕಡೆ ನಡೆಯುತ್ತಿದೆ ಅದರ ಅನುಮಾನವಿಲ್ಲ, ಏನು ಮಾಡಬೇಕೆಂದು ದಿಕ್ಕು ತೋಚದೇ ಇರತಕ್ಕಂತಹ ಪರಿಸ್ಥಿತಿಯ ನಾನು ಇದ್ದೇನೆ. ನಾವು ಇಲ್ಲಿ ಎಷ್ಟೇ ಮಾತನಾಡಲಿ ಸಾವಿರ ಮಾತನಾಡಲಿ ಕಬ್ಬನ್ನು ಅರೆಯಬೇಕಲ್ಲ. ರೈತನ ಬಗ್ಗೆ ಬಹಳ ನೋವಾಯಿತು ನೋವಾಯಿತ ಸರಕಾರದ ಬಂದು ಎಂದು ನೀವು ಬೈದರೂ ನನಗೆ ಅದರ ಬಗ್ಗೆ ಬೇಸರ ಇ ಬೈದರು ಎನ್ನುವ ಶಬ್ದ ಹೇಳುವುದಿಲ್ಲ. ಉಗ್ರವಾದ ಟೀಕೆ ಮಾಡಿದರೂ ನನ ಅದರಿಂದ ಬೇಸರ ಇಲ್ಲ, ನೀವು ಎಷ್ಟು ಮಾತನಾಡಿದರೂ ಟೀಕೆ ಮಾಡಿದರ ಪ್ರಯೋಜನವಾಗುವುದಿಲ್ಲ. ನಾನು ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡುವಾ ಹೇಳುತ್ತೇನೆ. ಈಗ ಬೇಡ ನೀವೆಲ್ಲಾ ಮಾತನಾಡಿಕೊಂಡು ಬನ್ನಿ..

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕಾಗಿಯೇ ನಾವು ಬಯ್ಯುವುದನ ಬಿಟ್ಟಿದ್ದೇವೆ. ಏನು ಹೇಳಿದ್ದರೂ ನಿಮ್ಮ ಮೇಲೆ ಅದರಿಂದ ಏನೂ ಪರಿಣಾಮವಾಗುವುದಿಲ್ಲವೆಂದು ಬಿಟ್ಟುದ್ದೇವೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿ ನನ್ನ ಕೈಯ್ಯ ಏನೂ ಸಾಧ್ಯವಿಲ್ಲವೆಂದು ಹೇಳುವುದು ಅಸಹಾಯಕತೆಯನ್ನನು ತೋಡಿಕೊಳ್ಳುವುದಕ್ಕಿ ಏನು ಬೇಕು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : 9 ಸಕ್ಕರೆ ಕಾರ್ಖಾನೆಗಳು ಯಾ ಕಾಲದಲ್ಲೂ ಆಗಿರಲಿಲ್ಲ. ನಮ್ಮ ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆಯನ್ನು ಮಂಜೂರು ಮಾಡಿದ್ದಾರೆ ನಮ್ಮ ಕಥೆ ಅಷ್ಟೆ. ಅಭಿನಂದನೆ ಸಲ್ಲಿಸುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಷ್ಟಕ್ಕೆ ಇಷ್ಟು ಸಪೋರ್ಟ್ ಮಾಡುತ್ತಿದ್ದಾರೆ ಮುಂದೆ ಗತಿ ಏನು. ಎಂದರೆ ದಿವಸ. ರಾಜ್ಯ ಸಭೆ ಚುನಾವಣೆಗೆ ಒಂದು ಗಂಟ ಮುಂಚಿತವಾಗಿ ಇವರು ಸಹ ಸದಸ್ಯರಾದರು. ಮುಂದೆ ಇವರ ಗತಿ ಏನು? ಯಾವ ಮುಖ್ಯಮಂತ್ರಿ ಬಂದರೂ ಇವರೂ ಸಹ ಸದಸ್ಯರೇ ಪರಿಸ್ಥಿತಿ ಏನು?

ಶ್ರೀ ಹೆಚ್.ಡಿ. ದೇವೇಗೌಡ : ವಿಷಯದ ತೀವ್ರತೆಯನ್ನು ಅರ್ಥ ಮಾಡಿಕೊಳ್ಳೋಣ. ರಾಜಕೀಯವಾಗಿ ಚರ್ಚೆ ಮಾಡುವುದು ಬೇಡ. ಲಘುವಾಗಿ ಕೆಲವ ಸಂದರ್ಭದಲ್ಲಿ ಚಟಾಕಿ ಹಾರಿಸತಕ್ಕಂಥದ್ದರಲ್ಲಿ ನನಗೇನೂ ತೊಂದರೆ ಇಲ್ಲ, ಯಾವ ಮುಖ್ಯಮಂತ್ರಿ ಬಂದರೂ ಸಹ ಸದಸ್ಯರೇ ಎಂದು ಅವರಿಗೆ ಹೇಳಿದಿರಿ. ಮಾನ ವಾಟಾಳ್ ನಾಗರಾಜ್‌ರವರೇ ಯಾವ ಮುಖ್ಯಮಂತ್ರಿಗಳು ಬಂದರೂ ನಿಮ್ಮ ಸಹಕಾರವನ್ ಅಪೇಕ್ಷೆ ಮಾಡಿಕೊಂಡೇ ಹೋಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಗುಟ್ಟನ್ನು ಬಹಿರಂಗ ಮಾಡಬೇಕು

ಶ್ರೀ ಹೆಚ್.ಡಿ. ದೇವೇಗೌಡ : ಸಹಕಾರ ಅಪೇಕ್ಷೆ ಮಾಡುತ್ತಾರೆಂದು ಹೇಳಿದೆ

ಶ್ರೀ ವಾಟಾಳ್ ನಾಗರಾಜ್ : ಯಡಿಯೂರಪ್ಪನವರಿಂದ ಅಪೇಕ್ಷೆ ಮಾಡಿದಿರಿ ನಿಮಗೆ ಅನುಕೂಲವಾಗಿಬಿಟ್ಟಿದೆ.

ಶ್ರೀ ಹೆಚ್.ಡಿ. ದೇವೇಗೌಡ : ಅವರು ಏಕೆ ಮಾಡುತ್ತಾರೆ. ಅವರು ನಮ್ಮ ಜಾಗಕ್ಕೆ ಬರಬೇಕು, ಅಲ್ಲಿಯವರೆಗೂ ಅವರು ಕೊಡುವುದಿಲ್ಲ, ನಿಮ್ಮ ಸಹಕಾರವನ್ನು ಎಲ್ಲಾ ಮುಖ್ಯಮಂತ್ರಿಗಳು ಅಪೇಕ್ಷೆ ಮಾಡುತ್ತಾರೆಂದು ಹೇಳಿದೆ ಅಷ್ಟೇ. ಸಹಕಾರ ಕೊಡುವುದು ಬಿಡುವುದು ನಿಮಗೆ ಸೇರಿದ್ದುದು. ಸರಕಾರಕ್ಕೆ ಹಣಕಾಸಿನ ಮುಗ್ಗಟ್ಟು ಇದ್ದರೂ ಸುಮಾರು 20 ಕೋಟಿ ರೂಪಾಯಿಯವರೆಗೆ ಕೆಲವು ರಿಯಾಯಿತಿಗಳನ್ನು ಕೊಡಲಿಕ್ಕೆ ಉಳಿಸುವುದಕ್ಕೆ ಇನ್ನು ಏನಾದರೂ ಸಹಾಯ ಮಾಡೋಣವೆಂದು ಪ್ರಯತ್ನ ಮಾಡುತ್ತೇವೆಂದು ಇಟ್ಟುಕೊಳ್ಳೋಣ. ಟ್ರಾನ್ಸ್‌ಪೋರ್ಟೇಷನ್ ಸಬ್ಸಿಡಿಯನ್ನು ಹೆಚ್ಚು ಮಾಡುತ್ತೇವೆಂದು ಇಟ್ಟುಕೊಳ್ಳಿ, ಇದನ್ನು ಅರೆಯುವುದು ಎಲ್ಲಿ, ಈಗ ಹಾಲಿ 50-00 ಲಕ್ಷ ಟನ್ ಕಬ್ಬು ಬಿದ್ದಿದೆ. ಮಹಾರಾಷ್ಟ್ರಕ್ಕೆ ಕಳಿಸಲಿಕ್ಕಾಗುವುದಿಲ್ಲ, ಅಲ್ಲಿ ಅವರ ಸಮಸ್ಯೆ ಇದೆ. ಅಲ್ಲಿ ಬಾರ್ಡರ್‌ನಲ್ಲಿರತಕ್ಕಂತಹ 14 ಸಕ್ಕರೆ ಕಾರ್ಖಾನೆಗಳಲ್ಲಿ ಕ್ರಷಿಂಗ್ ಆಗುತ್ತಿಲ್ಲ, ಏಕೆಂದರೆ ಆ ಭಾಗದಿಂದ ಇಲ್ಲಿಗೆ ಕಬ್ಬನ್ನು ತರಬೇಕಾದರೆ 800-900 ಕಿಲೋ ಮೀಟರ್ ದೂರದಿಂದ ತರಬೇಕು. ಅವರಿಗೆ ಅಲ್ಲಿ ಮೂರು ಮೂರುವರೆ ಸಾವಿರ ಲಾರಿ ಬಾಡಿಗೆ ಕೇಳುತ್ತಾರೆ. ಈ ಕಡೆ ನಮ್ಮ ಮಹಾರಾಷ್ಟ್ರ ಕರ್ನಾಟಕ ಬಾರ್ಡರ್‌ನಲ್ಲಿ ಇರತಕ್ಕಂತಹ 14 ಸಕ್ಕರೆ ಕರ್ಖಾನೆಗಳು ಕ್ರಷಿಂಗ್ ಮಾಡುವುದಕ್ಕೆ ತಯಾರಿವೆ. They are ready to cruch, but politics has involved there. ಅವರಿಗೆ ಕಷ್ಟ ಇದೆ, ಪಾರ್ಲಿಮೆಂಟ್ ಚುನಾವಣೆ ಬರುತ್ತಿದೆ. ಅಲ್ಲಿಗೆ ನಾನು ನಿಲ್ಲಿಸುತ್ತೇನೆ. ನಾನು ಕೊಡುತ್ತೇನೆ, ತೆಗೆದುಕೊಂಡು ಹೋಗಿ, ಅವರಿಗೆ ಇನ್ನು 50 ರೂಪಾಯಿ ಜಾಸ್ತಿ ಮಾಡುತ್ತೇನೆಂದು ಹೇಳುತ್ತೇನೆಂದು ಇಟ್ಟುಕೊಳ್ಳೋಣ ಅದರಿಂದ ಏನೂ ಆಗುವುದಿಲ್ಲ, ಆದರೆ ಅಲ್ಲಿ ಅರೆಯುವುದಕ್ಕೆ ಸಾಧ್ಯವಿಲ್ಲ, ಇಲ್ಲಿ ನಾನು ಕೊಡುತ್ತೇನೆಂದು ಪೇಪರಿನಲ್ಲಿ ಹೇಳಬಹುದೇ ಹೊರತಾಗಿ ನಿಜವಾಗಿ ರೈತರಿಗೆ ಅನುಕೂಲವಾಗುವುದಿಲ್ಲ. ನನಗಂತಲೂ ದಿಕ್ಕು ತೋಚುತ್ತಿಲ್ಲ, ಇವತ್ತೋ ನಾಳೆಯೋ 9-10 ಕ್ಕೋ ಲೈಸೆನ್ಸ್ ಬರುತ್ತದೆಂದು ಹೇಳುತ್ತಿದ್ದಾರೆ. ಬಂದರೂ ಅದನ್ನು ಕಟ್ಟಲಿಕ್ಕೆ ಎರಡು ವರ್ಷ ಬೇಕಾಗುತ್ತದೆ. ಒಂದು ಸಕ್ಕರೆ ಕಾರ್ಖಾನೆಗೆ 40-45 ಕೋಟಿ ಬೇಕಾಗುತ್ತದೆ ಸಹಕಾರಿ ರಂಗದಲ್ಲಿ ಯಾರು ಕೊಟ್ಟಿದ್ದಾರೋ ಅವರಿಗೆ ನಾನು ಒಂದೊಂದು ಸಕ್ಕರೆ ಕಾರ್ಖಾನೆಗೆ ನಾನು 13-14 ಕೋಟಿ ಹಣಕಾಸಿನ ನೆರವನ್ನು ಕೊಡುತ್ತೇನೆಂದು ಹೇಳಿದರೂ ನನ್ನ ಬಾಕಿ ಪ್ಲಾನ್ ಎಲ್ಲಾ ಟೋಟಲ್ ಅಪ್‌ಸೆಟ್ ಆಗುತ್ತದೆ. ನಾನಾದರೂ ಅಧಿಕಾರ ನಡೆಸಲಿ ನೀವಾದರೂ ಅಧಿಕಾರ ನಡೆಸಿ ಅದು ಅಷ್ಟು ಸುಲಭ ಅಲ್ಲ. ಒಂದು ಪಾಸಿಬಲಿಟೀಸ್ ಯೋಚನೆ ಮಾಡುತ್ತಿದ್ದೇನೆ. 1 ತಿಂಗಳ ಮಟ್ಟಿಗೆ ನಾವು ಪರ್ಚೇಸ್ ತೆರಿಗೆ ಹಾಕುತ್ತಿದ್ದೇವೆ ಅದನ್ನು ಸ್ವಲ್ಪ ಮಟ್ಟಿಗೆ ಮತ್ತೆ ಫರ್ದರ್ ರಿಡಕ್ಷನ್ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಇಲಾಖಾ ಅಧಿಕಾರಿಗಳೊಂದಿಗೆ ಕುಳಿತು ಚರ್ಚೆ ಮಾಡುತ್ತೇನೆ. 1 ತಿಂಗಳ ಮಟ್ಟಿಗೆ.

ಒಬ್ಬ ಮಾನ್ಯ ಸದಸ್ಯರು : ಗೋಡೌನ್ ಕಾಸ್ಟ್ ಜಾಸ್ತಿಯಾಗುತ್ತದೆ, ಅದನ್ನು ಪ್ಲೆಡ್ಜ್ ಮಾಡಬೇಕು ಬಡ್ಡಿ ಬರುತ್ತದೆ ಲಾಸ್ ಇರುತ್ತದೆ 6 ಪರ್ಸೆಂಟ್ ರಿಕವರಿ ಬರುತ್ತದೆ ಸಕ್ಕರೆ ಕಾರ್ಖಾನೆ ಉಷ್ಣಾನಾಗಿದೆ ಎಂದು ಇವರು ಹೇಳುತ್ತಾರೆ ಹೆಗ್ಗಣ ತಿಮಿಂಗಿಲ ಎಂದು ಹೇಳುತ್ತಾರೆ. ಈ ಕಾರಣಗಳಿಂದ ಸಕ್ಕರೆ ಕಾರ್ಖಾನೆಗಳು ನಷ್ಟ ಅನುಭವಿಸುತ್ತಿವೆ. 2 ಕೋಟಿ ಬಡ್ಡಿಯನ್ನು ನನ್ನ ಸಕ್ಕರೆ ಕಾರ್ಖಾನೆ ಬಡ್ಡಿ ಕೊಡುತ್ತಿದೆ. ಇದು ವಸ್ತು ಸ್ಥಿತಿ ಇದೆ.

ಶ್ರೀ ಹೆಚ್.ಡಿ. ದೇವೇಗೌಡ : ನನ್ನ ಜಿಲ್ಲೆಯೊಳಗೆ ಇರುವ ಸಕ್ಕರೆ ಕಾರ್ಖಾನೆ ಯಾರ ಕಾಲದಲ್ಲಾದರೂ ಆಗಿರಲಿ ಅದು ಕರಗಿ ಹೋಗಿದೆ. ಬೂಷ್ಟ್ ಬಂದಿದೆ.

ಕಷ್ಟು ಬಂದಿಗೆ ಎಂದು ಹೇಳಿದೆ. ನಾನು ಹೋಗಿ ವಿಚಾರ ಮಾಡಿದರೆ ಮತ್ತೆ ಪುನಃ ಹಾಕಿ ಷುಗರ್ ರೀ ಪ್ರೊಡ್ಯೂಸ್ ಮಾಡಬೇಕೆಂದು ಹೇಳಿದ್ದಾರೆ. ನೂರು ಕೆ.ಜಿಯಲ್ಲಿ 40 ಕೆ ಜಿಯಾದರೂ ಬರಲಿ ವಿ ಹ್ಯಾವ್ ನೋ ಆಪ್ಷನ್ ಎಂದು ಹೇಳಿದ್ದಾರೆ. 1993-94ರ ಸ್ಟಾಕ್‌ಗೆ ಪರ್ಮಿಷನ್ ಕೊಡಿ ಎಂದರೆ ಇಲ್ಲ. ಅದನ್ನು ತುಂಬುವುದಕ್ಕೆ ಗೋಡೌನ್ಸ್ ಇಲ್ಲ. ಎಲ್ಲಾ ಕಡೆ ಭರ್ತಿ ಮಾಡಿದ್ದಾರೆ. ನನಗೇನೂ ಗೊತ್ತಾಗುವುದಿಲ್ಲ. ಹೊರಗಿನ ದೇಶಕ್ಕೆ ಕಳಿಸಬೇಕೆಂದರೆ ಗ್ಲೋಬಲ್ ಮಾರ್ಕೆಟ್ ಬಿದ್ದು ಹೋಗಿದೆ ಎಂದು ಹೇಳುತ್ತಾರೆ. Even for that there is no such encouragement. ನಾವು ಅತ್ಯಂತ ಸಂಕಷ್ಟ ಕಠಿಣ ಪರಿಸ್ಥಿತಿಯಲ್ಲಿದ್ದೇವೆ. ರೈತನಿಗೋಸ್ಕರ ಇನ್ನೊಂದು 5-10 ಕೋಟಿ ನೆರವು ಕೊಡೋಣವೆಂದರೆ ಅದರಿಂದ ರೈತರಿಗೆ ನಿಜವಾದ ಸಮಸ್ಯೆಗೆ ಪರಿಹಾರ ಸಿಗುತ್ತದೆಯೇ ಎಂದರೆ ನನಗಂತೂ ಸಂಶಯ ಇದೆ. ಪರಿಹಾರ ಸಿಗುತ್ತದೆಂದು ಹೇಳಲಿಕ್ಕೆ ನಾನು ಸಿದ್ಧನಿಲ್ಲ. ವಸ್ತು ಸ್ಥಿತಿಯನ್ನು ಸಭೆಯ ಮುಂದಿಟ್ಟಿದ್ದೇನೆ. ನಾನು ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಈಗ ಏನು ಅನಾಹುತವಾಗಬೇಕೋ ಆಗಿದೆ ಇಷ್ಟೊಂದು ತಡಮಾಡಿ ಲೈಸೆನ್ಸ್ ಅನ್ನು 2-3 ವರ್ಷ ತಡ ಮಾಡ ಕೊಡಬೇಕಾದ್ದಿಲ್ಲ.

ಖಾಸಗಿ ವಲಯದಲ್ಲಿ ಏನು ಉತ್ತೇಜನ ಕೊಡುತ್ತಿದ್ದೀರಿ ಅದರ ಹಿನ್ನೆಲೆಯೊಳಗೆ ಅನೇಕರು ಇವತ್ತು ಕಾರ್ಖಾನೆಗಳನ್ನು ಕಟ್ಟಲಿಕ್ಕೆ ಸಿದ್ಧರಿದ್ದಾರೆ ಅವರಿಗೆ ಪರವಾನಗಿ ಕೊಡಿ. ಲೈಸೆನ್ಸ್ ಗೋಸ್ಕರ 2-3 ವರ್ಷ ಅಲೆದಾಡುವುದು ಬೇಡ ಎಂದು ವಿನಂತಿ ಮಾಡುವುದರ ಜೊತೆಗೆ ಇವತ್ತು ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ ರೈತ ಸಪ್ಲೈ ಮಾಡಿರತಕ್ಕಂತಹ ಕಬ್ಬಿಗೆ ಪೂರ್ಣ ಹಣ ಪಾವತಿಯಾಗಿಲ್ಲ. ಅವನು ಆ ಸಕ್ಕರೆಯನ್ನು ಬ್ಯಾಂಕ್‌ಗಳಿಗೆ ಹೈಪಾತಿಕೇಟ್ ಮಾಡಿದ್ದಾನೆ. ಮಾರಲಿಕ್ಕೂ ಅವನಿಗೆ ಗತಿ ಇಲ್ಲ. ಈ ಸಂದರ್ಭದಲ್ಲಿ ಒಂದು ಸಲಹೆ ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಕೇಂದ್ರ ಸರಕಾರ ಇವತ್ತು ಗೋಡೋನ್ಸ್‌ನಲ್ಲಿರತಕ್ಕಂತಹ ಸಕ್ಕರೆಯನ್ನು, ಅದು ಖಾಸಗಿ ಕಾರ್ಖಾನೆ ಇರಲಿ, ಸಹಕಾರಿ ಸ್ವಾಮ್ಯದಲ್ಲಿರುವ ಕಾರ್ಖಾನೆ ಇರಲಿ, ಸಹಕಾರಿ ರಂಗದ ಕಾರ್ಖಾನೆಯಲ್ಲಿ ಇರಲಿ, ಯಾವುದೇ ಕಾರ್ಖಾನೆಯ ಗೋಡೌನ್ಸ್‌ನಲ್ಲಿ ಇವತ್ತು 700-750 ಕೋಟಿ ಸ್ಟಾಕ್ ಇದೆಯೋ ಅದರ ಮೇಲೆ ಬ್ಯಾಂಕಿನಲ್ಲಿ ಎಷ್ಟು ಬಡ್ಡಿ ತೆಗೆದುಕೊಂಡಿದ್ದೇವೆ ಆ ಬಡ್ಡಿಯನ್ನು ಮನ್ನಾ ಮಾಡಿದರೆ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಒನ್ ಟೈಂ ಇಂಟರ್‌ಸ್ಟೆ ವೇವ್ ಮಾಡಿದರೆ ಅದರಿಂದ ರೈತರಿಗೆ ಸಹಾಯವಾಗುತ್ತದೆ. ನಷ್ಟ ಅನುಭವಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ಚೇತರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತವೆ. ಆ ಕೆಲಸ ಮಾಡಲಿ ಎಂದು ಈ ಸದನದ ಮೂಲಕ ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡುತ್ತೇನೆ. ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಒಂದು ಸಾರಿಗೆ ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಸಕ್ಕರೆ ಕಾರ್ಖಾನೆಗಳು, ಕಬ್ಬು ಬೆಳೆಗಾರರು ಇರಬಹುದು ಒಂದು ಸಾರಿಗೆ ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿರತಕ್ಕಂತಹ ಸಕ್ಕರೆ ಕಾರ್ಖಾನೆಗಳು ಹಾಗೂ ಕಬ್ಬು ಬೆಳೆಗಾರರನ್ನು ರಕ್ಷಿಸಿ ಎಂದು ನಾನು ವಿನಂತಿಸುತ್ತಿದ್ದೇನೆ. ನಾವು ಇಲ್ಲಿ ಎಷ್ಟೇ ಚರ್ಚೆ ಮಾಡಲಿ ಅವರಿಗೆ ಪರಿಹಾರ ಸಿಗುವುದಕ್ಕೆ ಸಾಧ್ಯವಾಗುವುದಿಲ್ಲ. ಕೇಂದ್ರ ಸರಕಾರಕ್ಕೆ ಇರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರಕಾರಕ್ಕೆ ಈ ವಿಷಯ ತಿಳಿಸಿದ್ದೇನೆ. ಇವತ್ತೂ ಈ ಸದನದ ಮುಖೇನ ನಾನು ಅವರನ್ನು ಒತ್ತಾಯ ಮಾಡುತ್ತೇನೆ ಆದಷ್ಟು -ಜಾಗ್ರತೆ ಲೈಸನ್ಸ್ ಕೊಡಿ ಎಂದು. ಈಗ ಆದದ್ದೆಲ್ಲ ಆಗಿ ಹೋಗಿದೆ. ನಮ್ಮಲ್ಲಿ ಇರಿಗೇಷನ್ ಡೆವಲಪ್‌ಮೆಂಟ್ ಹೆಚ್ಚಿಗೆ ಆಗುತ್ತಿರುವುದರಿಂದ ನಮ್ಮ ರೈತರು ಕಬ್ಬು ಹೆಚ್ಚು

ಬೆಳೆಯುತ್ತಾರೆ. ನನ್ನ ಜಿಲ್ಲೆಯಲ್ಲಿ ಎಂದೂ ಇಷ್ಟು ಪ್ರಮಾಣದಲ್ಲಿ ಕಬ್ಬು ಬೆಳೆದಿಲ್ಲ. ಹಿಂದೆ ಒಂದು ಸಕ್ಕರೆ ಕಾರ್ಖಾನೆ ಮಾಡಬೇಕಾದರೆ ಅಲ್ಲಿ ಕಬ್ಬು ಇಲ್ಲ ಎಂದು ಟೆಕ್ನಿಕಲ್ ವರದಿ ಕೊಡುತ್ತಿದ್ದರು, ಆದರೆ ಇವತ್ತು 5 ಲಕ್ಷ ಟನ್ ಕಬ್ಬು ಬೆಳೆ ಜಾಸ್ತಿಯಾಗಿದೆ, ನಾನೇನು ಮಾಡುವುದಕ್ಕಾಗುತ್ತದೆ. ಆದ್ದರಿಂದ ಲೈಸೆನ್ಸ್ ಇಷ್ಯೂ ಮಾಡುವುದಕ್ಕೆ ವಿಳಂಬ ಮಾಡುವುದು ಬೇಡ ಜೊತೆಗೆ ಸ್ಟಾಕ್ ಅನ್ನು ಹೈಪಾತಿಕೇಟ್ ಮಾಡಿ ಅದರ ಮೇಲೆ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡಿದ್ದಾರೆ ಅದರ ಬಡ್ಡಿ ಏನು ಇದೆಯೋ ಒನ್ ಟೈಂ ಅದನ್ನು ವೇವ್ ಮಾಡೂಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

2.20 ಪಿ.ಎಂ.

ಜೊತೆಗೆ ನನ್ನ ಕಡೆಯಿಂದ ನಮ್ಮ ರಾಜ್ಯದಲ್ಲಿನ 29 ಸಕ್ಕರೆ ಕಾರ್ಖಾನೆಗಳಿಗೆ 1 ತಿಂಗಳು ಪುನಃ ಅರೆಯಲಿಕ್ಕೆ ಇರುವ ಅವಧಿಯನ್ನು ವಿಸ್ತರಣೆ ಮಾಡಲಿಕ್ಕೆ ಅವರನ್ನು ಕರೆಸಿ ಅವರ ಮನ ಒಲಿಸುವುದಕ್ಕೆ ಪ್ರಯತ್ನಿಸುತ್ತೇನೆ. ಸಾಧ್ಯವಾದ ಮಟ್ಟಿಗೆ ಪರ್ಚೇಸ್ ಟ್ಯಾಕ್ಸ್ ಏನು ಇದೆಯೋ ಅದರಲ್ಲಿ ಇನ್ನೂ ಕೆಲವು ರಿಯಾಯಿತಿಗಳನ್ನು ಕೊಡಲಿಕ್ಕೆ ಇವತ್ತು ನಿರ್ಣಯ ತೆಗೆದುಕೊಳ್ಳಲಿಕ್ಕೆ ನಾನು ಸಿದ್ಧನಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಯಾರು ಏನೇ ಹೇಳಿದರೂ ರೈತರ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ನಾವೆಲ್ಲರೂ ಒಟ್ಟುಗೂಡಿ ಪ್ರಯತ್ನ ಮಾಡೋಣ. ಇದರಲ್ಲಿ ರಾಜಕೀಯ ಬೇಡ, ರಾಜಕೀಯ ಬೇರೆ ವಿಷಯಕ್ಕೆ ಮಾಡೋಣ. ಇವತ್ತಿನ ಸಂದರ್ಭದಲ್ಲಿ ನಾವು ಎಷ್ಟು ಭಾಷಣ ಮಾಡಿದರೂ ನಾನು ಎಷ್ಟೇ ಉತ್ತರ ಹೇಳಿದರೂ ನೀವೇನೇ ಟೀಕೆ ಮಾಡಿದರೂ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವುದು ಸುಲಭ ಅಲ್ಲ. ನಮ್ಮ ಇತಿಮಿತಿಯೊಳಗೆ ರಾಜ್ಯ ಸರಕಾರದ ಎಲ್ಲಾ ಶಕ್ತಿಯನ್ನು ಬಳಕೆ ಮಾಡುತ್ತೇವೆ. ಇನ್ನೂ ಒಂದು ಸಲ ಬೇಕಾದರೆ ಮಹಾರಾಷ್ಟ್ರಕ್ಕೆ ಹೋಗಿ ಬನ್ನಿ ಅಂದರೆ ಅವರನ್ನೂ ಜೊತೆಗೆ ಕರೆದುಕೊಂಡು ಹೋಗುತ್ತೇನೆ. ಬನ್ನಿ ಹೋಗೋಣ ಅಲ್ಲಿರುವ ಸನ್ನಿವೇಶವನ್ನೂ ನೋಡಿಕೊಂಡು ಬರೋಣ. ಬೆಳಿಗ್ಗೆ ಹೋಗಿ ಸಂಜೆ ನಾವು ವಾಪಸ್ ಬರಬಹುದು. ಎಷ್ಟು ಪ್ರಯತ್ನ ಮಾಡುವುದಕ್ಕೆ ಸಾಧ್ಯವೋ ಅಷ್ಟು ನಾವೆಲ್ಲ ಸೇರಿ ಪ್ರಯತ್ನ ಮಾಡುತ್ತೇವೆ. ಸರ್ಕಾರದ ವತಿಯಿಂದ ಇಷ್ಟು ಮಾತ್ರ ಹೇಳುತ್ತೇನೆ. ರೈತರನ್ನು ಉಪೇಕ್ಷೆ ಮಾಡಿ ರೈತರ ಬಗ್ಗೆ ಯಾವುದೇ ರೀತಿಯ ಅಲಕ್ಷ್ಯ ಮನೋಭಾವನೆಯಿಂದ ನಡೆಸಿಕೊಳ್ಳುವುದಕ್ಕೆ ಈ ಸರಕಾರ ಅವಕಾಶ ಕೊಡುವುದಿಲ್ಲ, ಶಕ್ತಿ ಮೀರಿ ನಾನು ಪ್ರಯತ್ನ ಮಾಡುತ್ತೇವೆ, ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತು 1 ತಿಂಗಳು ಕಬ್ಬನ್ನು ಅರೆಯುವುದಕ್ಕೆ ಹೆಚ್ಚು ಅವಕಾಶ ಕೇಳುತ್ತೇನೆ ಕಾರ್ಖಾನೆಗಳ ಮಾಲೀಕರನ್ನು ವಿನಂತಿ ಮಾಡುತ್ತೇನೆಂದು ಹೇಳಿದರು. ಅದೇ ಕೆಲಸವನ್ನು ಯಾವ ಸಕ್ಕರೆ ಕಾರ್ಖಾನೆಯವರು ನವೆಂಬರ್, ಡಿಸೆಂಬರ್, ಜನವರಿವರೆಗೆ ಪ್ರಾರಂಭ ಮಾಡಿದರೋ ಅದು ಜೂನ್ ತಿಂಗಳಲ್ಲೇ ಪ್ರಾರಂಭವಾಗುವಂತೆ ನೋಡಿಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನವನ್ನು ಈ ಸರಕಾರ ಮಾಡಬಹುದಾಗಿತ್ತು. ಅದನ್ನು ಮಾಡಲಿಲ್ಲ. ಎರಡನೆಯದು ಖಂಡ ಸಾರಿ ಸಕ್ಕರೆ ಕಾರ್ಖಾನೆಗಳಿಗೆ ಬೇಕಾದಂತಹ....

ಒಬ್ಬ ಮಾನ್ಯ ಸದಸ್ಯರು : ಜೂನ್‌ನಲ್ಲಿ ಮಾಡಲಿಕ್ಕಾಗುವುದಿಲ್ಲ ಮಾನ್ಯ ವಿರೋಧ ಪಕ್ಷದ ನಾಯಕರಿಗೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಇದುವರೆಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿಂತಹ ಉತ್ತರದ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲ. ವಾಸ್ತವಿಕ ಸ್ಥಿತಿ ಹೇಳಿದರು. ಆದರೆ ಯಾವುದೇ ಸರಕಾರ ಈ ವಾಣಿಜ್ಯ ಬೆಳೆಯನ್ನು ಬೆಳೆದಂತಹ

ರೈತನನ್ನು ಉಳಿಸಬೇಕೆನ್ನುವ ಪ್ರಯತ್ನ ಮಾಡಿದ್ದರೆ ಮುಂದಾಲೋಚನೆ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಇವತ್ತು ಏನು ಚರ್ಚೆ ಮಾಡುತ್ತಿದ್ದೇವೆ ಇದೇ ಚರ್ಚೆಯನ್ನು ಮುಂದಿನ ವರ್ಷವೂ ಮಾಡಬೇಕಾಗುತ್ತದೆ. ಎಲ್ಲಿ 88 ರಲ್ಲಿ ಲೈಸನ್ಸ್ ಸಿಕ್ಕಿತು ಆವತ್ತು ಕಾರ್ಖಾನೆ ಪ್ರಾರಂಭ ಮಾಡಲಿಲ್ಲ. ಈಗ ಲೈಸನ್ಸ್ ಸಿಗಲಿಲ್ಲವೆಂದು ಹೇಳುತ್ತಿದ್ದೀರಿ ಲೈಸನ್ಸ್ ಸಿಕ್ಕಿದಾಗ ಮಾಡಲಿಲ್ಲ. ಖಂಡಸಾರಿಗೆ ಬೇಕಾದ ಸವಲತ್ತುಗಳನ್ನು ಕೊಡಲಿಲ್ಲ. ಆಗ ಹೆಗ್ಗಣಗಳಂತೆ ಸಹಕಾರಿ ಸಂಘಗಳಲ್ಲಿ ಲೂಟಿ ಮಾಡಿರಲಿಲ್ಲ ಅದನ್ನು ಹಿಡಿತದಲ್ಲಿ ತರುವ ಪ್ರಯತ್ನ ಮಾಡಲಿಲ್ಲ. ಇವತ್ತು ಇಲ್ಲಿ ಮುಖ್ಯಮಂತ್ರಿಗಳೇ ಹೇಳಿಧರು ಇವತ್ತು ಇಷ್ಟು ದೊಡ್ಡ ಪ್ರಮಾಣದಲ್ಲಿ ಕಬ್ಬು ಬೆಳೆದಂತಹ ರೈತರಿಗೆ ಹಣ ಸಿಕ್ಕಲಿಲ್ಲವಲ್ಲ; ಅವನು ಸರ್‌ಪ್ಲಸ್ ಸ್ಟಾಕ್ ಮಾಡಿದ್ದರೆ 80 ಪರ್ಸೆಂಟ್ ಹಣವನ್ನು ಸಾಲ ಪಡೆದಿರುತ್ತಾನೆ ಅದನ್ನು ಹಿಂದಿರುಗಿಸಬಹುದಾಗಿತ್ತು. ಅಥವಾ ಸರಕಾರ ತಾತ್ಕಾಲಿಕವಾಗಿ ಹಣ ಕೊಡಿಸಿ ಅವನು ಅದನ್ನು ಮಾರಿದ ಮೇಲೆ ದುಡ್ಡು ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕಾಗಿತ್ತು. ರೈತ ಇಂದು ತಬ್ಬಲಿಯಾಗಿದ್ದಾನೆ. ಯಾವುದೇ ನೆರವು ಅವನಿಗೆ ಇಲ್ಲ. ಅವರೇ ಒಪ್ಪಿಕೊಳ್ಳುತ್ತಾರೆ. ಇವತ್ತು 60-70 ಲಕ್ಷ ಟನ್ ಕಬ್ಬು ಉಳಿಯಿತು, ಅದನ್ನು ಅವನು ಏನು ಮಾಡಬೇಕು? ಬೆಂಕಿ ಹಚ್ಚಬೇಕೇ? ಯಾವುದೇ ಪೂರ್ವ ಭಾವಿ ಯೋಚನೆ ಇಲ್ಲದೆ ಕಬ್ಬಿನ ಬೆಳೆಯನ್ನು ಬೆಳೆದು ಸಾಕಾಗಿ, ಬರಗಾಲ ಒಂದು ಕಡೆ ಮತ್ತೊಂದು ಕಡೆ ಒಂದೆರಡು ತಿಂಗಳು ತಡೆದು ಕಬ್ಬನ್ನು ಕೊಡೋಣ ಅಂದರೆ ಬೋರ್‌ವೆಲ್‌ನಲ್ಲಿ ನೀರು ಇಲ್ಲ ಕರೆಂಟ್ ಇಲ್ಲ ಅವನು ಬೀದಿ ಪಾಲಾಗುವ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ನಿಮ್ಮ ಕಡೆಯಿಂದ ಈ ಕಬ್ಬನ್ನು ಅರೆಯುವಂತಹ ವಾಸ್ತವಿಕ ಪ್ರಾಮಾಣಿಕ ಪ್ರಯತ್ನ ಆಗಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಎಲ್ಲಾ ಪ್ರಯತ್ನ ಆಗಿ ಕೊನೆಗೆ ಉಳಿದಂತಹ ಕಬ್ಬಿಗೆ ಸರಕಾರದಿಂದ ಪರ್‌ಟನ್ 450 ಪರಿಹಾರ ಕೊಡುತ್ತೇನೆಂದು ಹೇಳುವುದಕ್ಕೆ ಸಾಧ್ಯವೇ? ಒಂದು ವರ್ಷದಿಂದ ಇದುವರೆಗೆ ಅವನಿಗೆ ಹಣ ಪಾವತಿಯಾಗಿಲ್ಲ, ಹಣವನ್ನು ಕೊಡಿಸುವ ಪ್ರಯತ್ನ ಆಗಿಲ್ಲ. ಮಹಾರಾಷ್ಟ್ರ, ತಮಿಳುನಾಡಿಗೆ 2-3 ತಿಂಗಳ ಹಿಂದೆ ಸಕ್ಕರೆ ಸಚಿವರು ನೀವು ಹೋಗಿ ಅವರ ಮನ ಒಲಿಸುವ ಪ್ರಯತ್ನ ಆಗಿಲ್ಲ. ಮಹಾರಾಷ್ಟ್ರ, ತಮಿಳುನಾಡಿಗೆ 2-3 ತಿಂಗಳ ಹಿಂದೆ ಸಕ್ಕರೆ ಸಚಿವರು ನೀವು ಹೋಗಿ ಅವರ ಮನ ಒಲಿಸುವ ಪ್ರಯತ್ನ ಮಾಡುತ್ತಿದ್ದೀರಿ. "ಗಾಣಗಿತ್ತಿ ಅಯ್ಯೋ ಅಂದರೆ ಮಗನ ನೆತ್ತಿ ತಣ್ಣಗಾಗುತ್ತದೆಯೇ" ಎನ್ನುವ ಗಾದೆ ಇದೆ. ಹಾಗೆ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ. ರೈತರ ಬಗ್ಗೆ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದಾರೆ, ರೈತರ ಕಡೆಗೆ ಗಮನ ಕೊಟ್ಟಿಲ್ಲ, ರೈತರು ಬೀದಿ ಪಾಲಾಗಿದ್ದಾರೆ. ರೈತರ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ಅನಿವಾರ್ಯವಾಗಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರು ಹೊರಗೆ ಹೋದರು)

ಶ್ರೀ ಹೆಚ್.ಡಿ. ದೇವೇಗೌಡ : ನೀವೂ ವಾಕೌಟ್ ಮಾಡುತ್ತೀರೋ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ನಮಗೆ ಸಮಾಧಾನವಾಗಿಲ್ಲ. ಬೆಳೆ ನೀತಿಯ ಬಗ್ಗೆ ಈ ಸರಕಾರ ಪ್ರಾಮಾಣಿಕವಾದ ಪ್ರಯತ್ನ ಮಾಡಿಲ್ಲ. ಕಬ್ಬು ಬೆಳೆಯುವ ರೈತರ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನ ಮಾಡಿಲ್ಲ. ರೈತರು ತಾವು ಬೆಳೆಯತಕ್ಕಂತಹ.....

ಶ್ರೀ ಪಿ.ಸಿ. ಸಿದ್ದನಗೌಡರ್ : ಕಬ್ಬು ಬೆಳೆಯುವುದು ಯಾವಾಗ ಅದರ ಕಟಾವು ಯಾವಾಗ ಎಂದು ಇವರಿಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ರೈತರು ಸಂಕ್ರಾಂತಿ ಹಬ್ಬದ ದಿವಸ ಖರೀದಿಗೆ ತೆಗೆದುಕೊಳ್ಳದೇ ಇದ್ದರೂ ಚಿಂತೆ ಇಲ್ಲವೆಂದು ಪುಗಸಟ್ಟೆಯಾಗಿ ರಸ್ತೆಯಲ್ಲಿ ಲಾರಿಗಟ್ಟಲೆ ತಂದು ಹಾಕಿ ಹೋಗಿದ್ದಾರೆ ನಾನು ನೋಡಿದ್ದೇನೆ. ಕಾರ್ಡ್ ರೋಡಿನಲ್ಲಿ ಒಬ್ಬನು ಲಾರಿ ತಂದು ಜೈಲಿಗೆ ಹೋಗಿದ್ದಾರೆ. ಈ ಪರಿಸ್ಥಿತಿ ಬಂದಿದೆ. ಮಾನ್ಯ ಬೈರೇಗೌಡರನ್ನು ಕೇಳಿ, ಹೋದ ಸಲ ನೀವು ಬೆಲೆ ಇಲ್ಲವೆಂದು ಹೇಳಿ ಆಲೂಗೆಡ್ಡೆಯನ್ನು ತಂದು ಏನು ಮಾಡಿದಿರಿ? ವಿಧಾನ ಸೌಧದ ಮುಂದೆ ಲಾರಿಗಟ್ಟಲೆ ತಂದು ಸುರಿದಿದ್ದಿರಿ, ಅದು ನಿಮಗೆ ಜ್ಞಾಪಕ ಇದೆಯೇ? ಗಾಣಗಿತ್ತಿ ಅಯ್ಯೋ ಅಂದರೆ ಮಗುವಿನ ನೆತ್ತಿಗೆ ಎಣ್ಣೆ ಬರುತ್ತದಾ ಅನ್ನತಕ್ಕಂತಹ ಗಾದೆ ಏನು ಇದೆ ಅದೇ ಪರಿಸ್ಥಿತಿ ಇಲ್ಲಿ ಇದೆ. ಎಲ್ಲ ವಿವರಣೆ ಕೊಟ್ಟರು, ಪರಿಸ್ಥಿತಿಯನ್ನು ಹೇಳಿದರು. ಆದರೆ ಬೆಳೆದಿರತಕ್ಕಂತಹ ರೈತರಿಗೆ ಇವರ ರಕ್ಷಣೆ ಏನು? ಅದು ಸ್ಪಷ್ಟವಾಗಬೇಕು. ಅದು ಖಂಡಿತ ಆಗಿಲ್ಲ. ಆದ್ದರಿಂದ ನಾವೂ ರೈತ ಸಂಘದವರು ಇಲ್ಲಿ ಧರಣೆ ಮಾಡುತ್ತಿದ್ದೇವೆ, ಇದು ರೈತ ವಿರೋಧಿ ಸರಕಾರ, ಅದರಲ್ಲಿ ಬೇರೆ ಮಾತೇ ಇಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ವಾಟಾಳ್‌ರವರೇ ಪ್ರತಿಭಟನೆ ಮಾಡಿ ಹೊರಗೆ ಹೋಗಲ್ಲವೇ? ಕಬ್ಬು ಬೆಳೆಯುವುದೇ ಗೊತ್ತಿಲ್ಲ, ವಾಟಾಳ್ ಅವರಿಗೆ ಕಬ್ಬು ಬೆಳೆಯುವುದೇ ಗೊತ್ತಿಲ್ಲ.

(ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಮಾನ್ಯ ಪುಟ್ಟಣ್ಣಯ್ಯನವರು ವೆಲ್‌ನಲ್ಲಿ ಇದ್ದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ದೀರ್ಘವಾಗಿ ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಸುಮಾರು 50 ಲಕ್ಷ ಟನ್ ಕಬ್ಬು ಉಳಿಯುತ್ತದೆ. ಇದಕ್ಕೆ ನಾನೇನು ಮಾಡಲಿ ಅಯ್ಯೋ ಅಂದರೆ ಅವರ ಸಮಸ್ಯೆಗೆ ನಾವು ಪರಿಹಾರ ಕೊಟ್ಟ ಹಾಗೆ ಆಗುವುದಿಲ್ಲ. ಏನಾದರೂ ಕಾಂಪನ್‌ಸೇಷನ್ ಕೊಡಬೇಕೆಂದು ಮಾಡಿದ್ದೀರೋ ಅಥವಾ ಬೇರೆ ಯಾವ ರೀತಿಯಲ್ಲಿ ರೈತರಿಗೆ ಸಹಾಯ ಮಾಡಬೇಕೆಂಬ ಯೋಚನೆಯನ್ನು ಹಾಕಿಕೊಂಡಿದ್ದೀರಿ. ಏಕೆಂದರೆ ಇಲ್ಲಿಗೆ ಇದನ್ನು ಬಿಡತಕ್ಕಂಥಾದ್ದು ಅಲ್ಲ. ಪರಿಹಾರವನ್ನು ಹುಡಕಬೇಕಾಗುತ್ತದೆ. ಯಾ ಪರಿಹಾರವನ್ನು ಹುಡುಕಿದ್ದೀರಿ. ಷುಗರ್ ಗ್ರೋತ್ ಫಾರ್ಮರ್ಸ್ ಫಂಡ್ ಎಂದು ಕ್ರಿಯೇಟ್ ಮಾಡಿಕೊಂಡು ಯಾವಾಗ ಯಾವಾಗ ಇಂತಹ ಸಮಸ್ಯೆಗಳು ಬರುತ್ತವೆ ಆಗ ಇದರಿಂದ ಅನುಕೂಲವಾಗುತ್ತದೆ. ಏಕೆಂದರೆ ಈಗ ಈ ಪ್ರಶ್ನೆ ಉದ್ಭವಿಸಿಲ್ಲ. ಹೋದ ವರ್ಷ ಕೂಡ ಈ ಪ್ರಶ್ನೆ ಬಂದಿತ್ತು. ಬೀದರ್‌ನಲ್ಲಿ ಈ ಪ್ರಶ್ನೆ ಬಂದಾಗ ತಾವು ಹೇಳಿದ್ದೀರಿ. ಹಿಂದೆ ತೊಗರಿ ಬೇಳೆಗೆ ಕಾಂಪನ್‌ಸೇಷನ್ 10-12 ಕೋಟಿ ಕೊಟ್ಟಿರಿ. ರೈತರು ಆಗ ಇದೇ ರೀತಿ ಗೋಳಾಡುತ್ತಿದ್ದರು. ನಾವು ಪುನಃ ಷುಗರ್‌ಕೇನ್ ಬೆಳೆಗಾರರಿಗೆ ಕೊಡಿ ಎಂದು ಹೇಳಿದಾಗ ಕೊಡುವುದಕ್ಕೆ ಸಾಧ್ಯವಿಲ್ಲ ಮುಂದೆ ಇದರ ಬಗ್ಗೆ ಯೋಚನೆ ಮಾಡೋಣವೆಂದು ತಾವು ಕಳೆದ ವರ್ಷ ಹೇಳಿದ್ದಿರಿ. ಆದರೆ ಈಗ ಪುನಃ ಇದೇ ಸಮಸ್ಯೆ ಉದ್ಭವವಾಗಿದೆ. ಇದಕ್ಕೆ ಯಾವ ರೀತಿಯಾಗಿ ಪರಿಹಾರವನ್ನು ಕಂಡು ಹಿಡಿಯುತ್ತೀರಿ. ಯಾವುದಾದರೂ ಒಂದು ಫಂಡ್ ಕ್ರಿಯೇಟ್ ಮಾಡಿ ಪ್ರತಿ ಸಲ ಇಂತಹ ಸಮಸ್ಯೆಗಳು ಬಂದಾಗ ಅದರಿಂದ ಕೊಡತಕ್ಕಂತಹಾದ್ದರ ಬಗ್ಗೆ ವಿಚಾರ ಮಾಡುತ್ತೀರಾ? ಎರಡನೆಯದಾಗಿ 50 ಲಕ್ಷ ಟನ್ ಏನು ಉಳಿಯುತ್ತದೆ ಆ ಉಳಿತಾಯವಾಗತಕ್ಕಂತಹ ರೈತರಿಗೆ ಯಾವ ರೀತಿ ಸಹಾಯ ಮಾಡಬೇಕೆಂಬ ಯೋಚನೆ ಹಾಕಿಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ಬೀದರ್ ಜಿಲ್ಲೆ ಬಗ್ಗೆ ಹೇಳಿದಿರಿ, ಅಲ್ಲಿ ನಾರಂಜ ಕೋ-ಆಪರೇಟಿವ್ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ

ಮಾಡಬೇಕೆಂದು ಈಗಾಗಲೇ ಹೆಚ್‌ಕೆಡಿಯಿಂದಲೇ ಅದಕ್ಕೆ ಸುಮಾರು 5-6 ಕೋಟಿ ರೂಪಾಯಿಯನ್ನು ಕೊಟ್ಟಿದೆ. ಏಕೆಂದರೆ ರೈತರು ಅದನ್ನು ಕಲೆಕ್ಷನ್ ಮಾಡುವುದಕ್ಕಾಗುವುದಿಲ್ಲ ಸಕ್ಕರೆ ಕಾರ್ಖಾನೆಗಳು ಬರುವುದಿಲ್ಲ ಎನ್ನುವುದನ್ನು ತಿಳಿದುಕೊಂಡೇ ಸರಕಾರದ ವತಿಯಿಂದ ಹೆಚ್‌ಕೆಡಿ ಯಿಂದಲೇ 7-8 ಕೋಟಿ ಕಾಂಟ್ರಿಬ್ಯೂಷನ್ ಮಾಡಿ ನೀವು ಇದನ್ನು ತಕ್ಷಣ ಪ್ರಾರಂಭ ಮಾಡಬೇಕೆಂದು ಹೇಳಿ ಅದಕ್ಕೆ ಚಾಲನೆ ಕೊಟ್ಟಿದ್ದರು. ಆದರೆ ಒಂದೂವರೆ ವರ್ಷ ಸಾಕಷ್ಟು ಪ್ರಯತ್ನ ಮಾಡಿ ಅದನ್ನು ಒಂದು ಹಂತಕ್ಕೆ ತಂದಿದ್ದೆವು. ಆದರೆ ಈ ಒಂದು ವರ್ಷದಲ್ಲಿ. ಅದರ ಕಡೆಗೆ ಸರಕಾರ ಲಕ್ಷ್ಯ ಹಾಕದೇ ಇದ್ದ ಕಾರಣ ಆ ಸಕ್ಕರೆ ಕಾರ್ಖಾನೆ ಅಲ್ಲಿಗೇ ನಿಂತಿದೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ, ಸರಕಾರದ ವತಿಯಿಂದ ಹಣ ಕೊಡಬೇಕೆಂದು ಮಾಡಿದ್ದೀರೋ ಅಥವಾ ನಬಾರ್ಡಿನಿಂದ ಸಹಾಯ ಪಡೆಯಬೇಕೆಂದು ಮಾಡಿದ್ದೀರೋ ಅಥವಾ ಯಾವ ರೀತಿ ಆ ಫ್ಯಾಕ್ಟರಿಯನ್ನು ಕಟ್ಟಬೇಕೆಂಬ ಪ್ರಯತ್ನ ಮಾಡುತ್ತೀರಿ ಎನ್ನುವುದನ್ನು ತಾವು ಸ್ಪಷ್ಟಪಡಿಸಬೇಕು. ಈ ಮೂರು ಪ್ರಶ್ನೆಗಳಿಗೆ ತಾವು ಉತ್ತರ ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಖರ್ಗೆಯವರು 3 ಸಮಸ್ಯೆಗಳನ್ನು ಎತ್ತಿದ್ದಾರೆ. ಉಳಿಯತಕ್ಕಂತಹ ಕಬ್ಬಿಗೆ ನೀವೇನು ಮಾಡುತ್ತೀರಿ ಎಂದು ಹೇಳಿದ್ದಾರೆ. ನಾವು ನಮ್ಮ ಹಣಬರಹ ಎಲ್ಲಿ ಇದೆ ಎಂದರೆ, ಕ್ಲೋಷರ್ ಪೀರಿಯಡ್ ಅನ್ನು ಎಕ್ಸ್‌ಟೆಂಡ್ ಮಾಡುವುದು ಯಾವ ಸಂದರ್ಭದಲ್ಲಿ ಮುಚ್ಚಬೇಕು ಯಾವ ತಿಂಗಳು ತೆಗೆಯಬೇಕು ಎನ್ನುವ ನಿರ್ಣಯವನ್ನು ಕೇಂದ್ರ ಸರಕಾರವೇ ಮಾಡುತ್ತದೆ. ನಮ್ಮ ಅಧಿಕಾರಿಗಳು ಈ ಚೀಟಿ ಬರೆದು ಕಳಿಸಿದ್ದಾರೆ. ಇದು ನನಗೆ ಗೊತ್ತಿರಲಿಲ್ಲ, ಕಬ್ಬು ಅರೆಯಲು ಆರಂಭಿಸುವ ದಿನಾಂಕವನ್ನು ಕೇಂದ್ರ ಸರಕಾರ ಸೂಚಿಸುತ್ತದೆ. ಮುಚ್ಚುವ ದಿನವನ್ನು ಅವರೇ ಸೂಚಿಸುತ್ತಾರೆಂದರೆ ನಾನು ಮತ್ತೆ ಅರ್ಜಿ ಹಿಡಿದುಕೊಂಡು ಅವರ ಕಡೆಗೇ ಹೋಗಬೇಕು. ಆಮೇಲೆ ನಾರಂಜಾ ಬಗ್ಗೆ ತಾವು ಹೇಳಿದಿರಿ. ನಾನು ಹೋಗಿ ನೋಡುವುದಕ್ಕಾಗಲಿಲ್ಲ. ನಾನು ಇನ್ನೊಂದು ಖಿಂಡ್ರೆಯವರು ನಡೆಸುತ್ತಿರುವ ಅವರ ಕಾಲದಲ್ಲಿ ಪ್ರಾರಂಭವಾಗಿರುವುದನ್ನು ನೋಡಿಕೊಂಡು ಬಂದೆ. $16\frac{1}{2}$ ಕೋಟಿ ಲುಕ್ಸಾನಾಗಿದೆ ನಮ್ಮ ಸರಕಾರ 4 ಕೋಟಿ ಕೊಟ್ಟಿದ್ದೇವೆ. ನಾರಂಜ ಬಗ್ಗೆ ಅವರೇನು ಹಣ ಕೊಟ್ಟಿದ್ದಾರೆ ಅವರು ಸಿವಿಲ್ ವರ್ಕ್ಸ್ ಮಾಡಿದ್ದಾರೆ ಇನ್‌ಕ್ಲೂಡಿಂಗ್ ಗೆಸ್ಟ್ ಹೌಸ್, ಕಾಂಪೌಂಡ್ ಎಲ್ಲಾ ಹಾಕಿದ್ದಾರೆ, ಇನ್ನೇನು ಮಾಡಿಲ್ಲ. ಅದು ಸಹಕಾರಿ ಸಕ್ಕರೆ ಕಾರ್ಖಾನೆ, ಈಗ 40 ಕೋಟಿ ಬೇಕು. ಹೆಚ್‌ಕೆಡಿಬಿಯವರು 8 ಕೋಟಿ ಕೊಟ್ಟಿದ್ದೇವೆಂದು ಹೇಳುವುದಾದರೆ ನಾನೂ 2 ಕೋಟಿ ಕೊಟ್ಟಿದ್ದೇನೆಂದು ಹೇಳಿದೆ. ಹಾಗಾದರೆ ಇದನ್ನು ಸಹಕಾರಿ ಸಕ್ಕರೆ ಕಾರ್ಖಾನೆ ಎಂದು ಏಕೆ ಕರೆಯಬೇಕು. ಹೆಚ್.ಕೆ.ಡಿ.ಬಿ.ಯಿಂದಲಾದರೂ ಕೊಡೋಣ ಮಲೆನಾಡು ಡೆವಲಪ್‌ಮೆಂಟ್ ಬೋರ್ಡಿನಿಂದ ಲಾದರೂ ಕೊಡೋಣ ಮೈರಾನ್ ಡೆವಲಪ್‌ಮೆಂಟ್ ಏರಿಯಾ ಕಾರ್ಯಕ್ರಮದಲ್ಲಾದರೂ ಕೊಡೋಣ. It is the Government money funded through some other agency. ಹಾಗಾದರೆ ಇದನ್ನು ಕೋ-ಆಪರೇಟಿವ್ ಸಕ್ಕಾರ್ ಎಂದು ನಾವು ಏಕೆ ಕರೆಯಬೇಕು. ಆ ರೀತಿ ಕರೆಯಬೇಕಾದರೆ ಅವಶ್ಯಕತೆ ನನಗೆ ಕಾಣಲಿಲ್ಲ. ಗವರ್ನ್‌ಮೆಂಟ್‌ಗೆ ಟೇಕ್ ಓವರ್ ಮಾಡಿ?...

Sri M. MALLIKARJUNA KHARGE : I am interested in commissioning that factory.

ಶ್ರೀ ಹೆಚ್.ಡಿ. ದೇವೇಗೌಡ : ನನ್ನ ಕೈಯಲ್ಲಿ ಇಲ್ಲ. ಎಷ್ಟು ದಿನ ಕಬ್ಬನ್ನು ಅರೆಯಬೇಕು ಯಾವಾಗ ಮುಚ್ಚಬೇಕು ಯಾವಾಗ ತೆರೆಯಬೇಕು ಎಂದು ನಿರ್ಣಯ

ಮಾಡುವುದನ್ನು ಕೇಂದ್ರ ಸರಕಾರಕ್ಕೆ ಇಟ್ಟುಕೊಂಡಿದೆ. ನಮ್ಮ ಸ್ಥಿತಿ ಏನು ಇದೆ ಎಂದು ಮಾನ್ಯ ಖರ್ಗೆಯವರಿಗೆ ಚೆನ್ನಾಗಿ ಗೊತ್ತಿದೆ. At every stage the Government of is intervening so far as sugar industry is concerned. ಎಂದು ಆಯಿತು. ನಾನು ಈಗ ಉಳಿದಿರತಕ್ಕಂತಹ ಕಬ್ಬನ್ನು ಅರೆಸಲಿಕ್ಕೆ I am seriously thinking to further reduce the purchase tax ಯೋಚನೆ ಮಾಡುತ್ತಿದ್ದೇನೆಂದು ಹೇಳಿದೆ, ಮಾಡಿದ್ದೇನೆಂದು ಹೇಳಲಿಲ್ಲ. I have to calculate about the financial implication.

ನೀವು ತೊಗರಿ ಬೇಳೆ ಎಂದು ಹೇಳಿದಿರಿ, ಅದಕ್ಕೂ ಇದಕ್ಕೂ ಬಹಳ ವ್ಯತ್ಯಾಸ ಇದೆ. ಯಾವ ಕಾಲದಲ್ಲೂ ಕೊಡಲಿಲ್ಲ. ತೊಗರಿ ಬೇಳೆಗೆ ಕೊಡಲಿಕ್ಕೆ ಕಾರಣ ಹೇಳುತ್ತೇನೆ. ಯಾರು ಮಾಲೀಕರುಗಳು ಔಷಧಿ ಹಂಚಿದರೋ ಪೆಸ್ಟಿಸೈಡ್ಸ್ ಅನ್ನು ಅದು ಅಡಲ್ಟ್ರೇಟೆಡ್ ಇವತ್ತು ಸರಕಾರದ ಅಧಿಕಾರಿಗಳು ಕೃಷಿ ಇಲಾಖೆ ಫೆಲ್ಯೂರಾಗಿದೆ ಎಂದು ಹೇಳಿ ವರದಿ ಕೊಟ್ಟ ಮೇಲೆ it is the failure on the failure on the part of the Agriculture Department, ಎಂದು ಬಂದ ಮೇಲೆ ರೈತನಿಗೆ ನಷ್ಟವಾಯಿತೆಂದು ಬಂತು. ಎಲ್ಲಾ ಬೆಳೆ ಲುಕ್ಸಾನಾಗುತ್ತದೆ. ಯಾವ ಬೆಳೆಗೂ ನಮ್ಮಲ್ಲಿ ಕ್ರಾಪ್ ಇನ್‌ಶ್ಯೂರೆನ್ಸ್ ಇಲ್ಲ. ನಮ್ಮ ಜಿಲ್ಲೆಯೊಳಗೆ ಈ ವರ್ಷ 40-45 ಕೋಟಿ ರೂಪಾಯಿಯ ಆಲೂಗಡ್ಡೆ ಹೋಯಿತು ನಾನೇನೂ ಕೊಡಲಿಕ್ಕಾಗಲಿಲ್ಲ ನಾವೇನೂ ಕೊಡಲಿಲ್ಲ. ತೊಗರಿ ಬೇಳೆ ಕಾರಣ ಬೇರೆ ಇದು ಬೇರೆ. ಆಮೇಲೆ ಸೂರ್ಯಕಾಂತಿ. ರಾಯಚೂರಿಗೆ ನಾನೇ ಹೋಗಿದ್ದೆ. ನಿಮ್ಮ ಸರಕಾರವಿದ್ದಾಗ ಮತ್ತು ನಮ್ಮ ಸರಕಾರ ಬಂದ ಮೇಲೂ ಹೋಗಿದ್ದೆ. ನೂರು ಕೋಟಿಗಿಂತ ಹೆಚ್ಚು ಸೂರ್ಯಕಾಂತಿ ಬೆಳೆ ಹೆಚ್ಚು ಮಳೆಯಾಗಿ ಲುಕ್ಸಾನಾಯಿತು. ಪರ್ಟಿಕ್ಯುಲರ್ ಸೀಜನ್‌ನಲ್ಲಿ ಮಳೆ ಜಾಸ್ತಿಯಾಯಿತು ಎಲ್ಲಾ ಹೋಯಿತು, ಏನು ಮಾಡುವುದಕ್ಕಾಗುತ್ತದೆ? ಪರಿಸ್ಥಿತಿ ಏನು ಮಾಡುವುದಕ್ಕಾಗುತ್ತದೆಂದು ನಾನು ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಸಿದ್ಧ ಇಲ್ಲ. ಈ ದೇಶದಲ್ಲಿ ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರ ಎರಡೂ ಕುಳಿತು ಯೋಚನೆ ಮಾಡಬೇಕಾಗುತ್ತದೆ. ಇಂತಹ ಸಂಕಷ್ಟ ಪರಿಸ್ಥಿತಿಗೆ ರೈತರನ್ನು ದೂಡತಕ್ಕಂಥಾದ್ದು ಸರಿಯಾದುದಲ್ಲ. ಒಂದು ಮಾರ್ಕೆಟ್ ಮೆಕಾನಿಸಂ ಎಂದು ಒಂದು ಆರ್ಗನೈಸೇಷನ್ ಇದೆ. ಅದು ಮೂರೇ ರಾಜ್ಯಗಳಿಗೆ ಸೀಮಿತ. ಪಂಜಾಬ್, ಹರಿಯಾಣ, ವೆಸ್ಟರ್ನ್ ಯು.ಪಿ. ಯಾವುದೇ ರೈತನ ಬೆಳೆಯ ಬೆಲೆ ಬಿದ್ದು ಹೋದರೂ ಅಲ್ಲಿ ಕೇಂದ್ರ ಸರಕಾರ ಪ್ರವೇಶ ಮಾಡಿ ಅದಕ್ಕೆ ಶಕ್ತಿ ಕೊಡುವುದಕ್ಕೆ ಒಂದು ಆರ್ಗನೈಸೇಷನ್ ಏನು ಇದೆ ಅದು ಎರಡೊವರೆ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದೆ. ಅದು ಬೇರೆ ಕಡೆಗೆ ಡೌನ್ ಸೌತ್‌ಗೆ ಬರಲಿಕ್ಕೆ ಸಾಧ್ಯವೇ ಇಲ್ಲ. ಇವತ್ತು ಈ ವೇದಿಕೆಯಲ್ಲಿ ಕುಳಿತು ನಾವು ಇಲ್ಲಿ ಚರ್ಚೆ ಮಾಡಲಿಕ್ಕೆ ಸಿದ್ಧವಿಲ್ಲ. ಅದಕ್ಕೆ ಮಾನ್ಯ ಖರ್ಗೆಯವರಲ್ಲಿ ವಿನಂತಿ ಮಾಡುತ್ತೇನೆ. ಪರ್ಚೇಸ್ ಟ್ಯಾಕ್ಸ್ ಕಡಿಮೆ ಮಾಡಬೇಕು ಒಂದು ತಿಂಗಳ ಅವಧಿಯನ್ನು ವಿಸ್ತರಣೆ ಮಾಡುವುದಕ್ಕೆ ಹೇಳುತ್ತೇನೆಂದು ಹೇಳಿದೆ ಅಂದರೆ ರೆಕವರಿ ಕಡಿಮೆಯಾಗುತ್ತದೆ, ಇಳುವರಿ ಕಡಿಮೆಯಾಗುವ ನಷ್ಟವನ್ನು ಸ್ವಲ್ಪ ಮಟ್ಟಿಗೆ ಸುಧಾರಣೆ ಮಾಡಿಕೊಡಲಿಕ್ಕೆ ಎಷ್ಟು ಕೋಟಿಯಾಗುತ್ತದೆ ಎಂದು ವಿಚಾರ ಮಾಡಬೇಕಾಗುತ್ತದೆ. ನಾನು ಪರ್ಚೇಸ್ ಟ್ಯಾಕ್ಸನ್ನು ಒಂದು ತಿಂಗಳು ರೆಡ್ಯೂಸ್ ಮಾಡುತ್ತೇನೆಂದು ಹೇಳಿದರೆ ಕೇಂದ್ರ ಸರಕಾರಕ್ಕೆ ಅರೆಯಲಿಕ್ಕೆ ಒಂದು ತಿಂಗಳು ಹೆಚ್ಚು ಸಮಯ ಕೊಡಿ ಎಂದು ಕೇಳಿಕೊಳ್ಳಬೇಕು ಫೈನಾನ್ಸಿಯಲ್ ಇಂಪ್ಲಿಕೇಷನ್ ಏನು ಎಂದು ನೋಡಬೇಕು. ಈ ಹಂತದಲ್ಲಿ ಕಬ್ಬು ಬೆಳೆಗಾರರಿಗೆ ನಾನು ಅವಕಾಶ ಮಾಡಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದೆ. ಇರತಕ್ಕಂತಹ ಕಬ್ಬನ್ನು ಅರೆಯಲಿಕ್ಕೆ ಅವಕಾಶ ಮಾಡಿಕೊಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಬಹುದೆಂದು

ಸಲಹೆ ಮಾಡಿದ್ದೇನೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ. ಅದಕ್ಕಿಂತ ಮುಂದೆ ಹೋಗಿ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಷುಗರ್‌ಕೇನ್ ಗ್ರೋಯರ್ಸ್ ವೆಲ್‌ಫೇರ್ ಫಂಡ್ ಎಂದು ಕ್ರಿಯೇಟ್ ಮಾಡಿ ಇಂತಹ ಸಂದರ್ಭದಲ್ಲಿ ನಾವು ಅವರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ.

Sri H.D. DEVEGOWDA : It is a good suggestion and it is a very valuable suggestion. ನನ್ನದೇನೂ ಅದರ ಬಗ್ಗೆ ತಕರಾರು ಇಲ್ಲ. ಬಹಳ ಉತ್ತಮವಾದ ಸಲಹೆ ಕೊಟ್ಟಿದ್ದೀರಿ. ಅದೇ ಬೆಳೆಗಾರರು ಒಂದು ಟನ್‌ಗೆ 5-10 ರೂಪಾಯಿ ಹಾಕಿದರೆ, ನಮ್ಮ ಸರಕಾರದ ವತಿಯಿಂದ ಕರೆಸ್ಪಾಂಡಿಂಗ್ ಆಗಿ ನಾವೂ ಸ್ವಲ್ಪ ಸಹಾಯ ಮಾಡಿ ಅದೊಂದು ಕಾರ್ಪಸಸ್ ಫಂಡ್ ಎಂದು ಕ್ರಿಯೇಟ್ ಮಾಡಿ ಈ ರೀತಿ ತೊಂದರೆ ಬಂದಾಗ ಮಾಡುವುದು ಬೇರೆ ವಿಷಯ. ಅದರ ಬಗ್ಗೆ ಯೋಚನೆ ಮಾಡೋಣ. ನಾನು ಪಾರ್ಲಿಮೆಂಟ್ ಸದಸ್ಯನಾಗಿದ್ದಾಗ ಕ್ರಾಪ್ ಇನ್‌ಷ್ಯೂರೆನ್ಸ್ ಬಗ್ಗೆ ಚರ್ಚೆ ಮಾಡಿದೆ. ನೀವು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ಅಲ್ಲಿ ನಾನು ಒಂದು ಸಜೆಸ್ಟ್ ಮಾಡಿದೆ. ಕ್ರಾಪ್ ಇನ್‌ಷ್ಯೂರೆನ್ಸ್ ತರುತ್ತೇವೆಂದು ನಾವು 20Ë25 ವರ್ಷಗಳಿಂದ ಚರ್ಚೆ ಮಾಡಿದ್ದೇ ಮಾಡಿದ್ದು. ಕೊನೆಗೆ ಎಷ್ಟು ದೂರ ಹೋಗಿ ನಾನು ಹೇಳಿದೆ ಎಂದರೆ, ಮಾನ್ಯ ಬಲರಾಂ ಜಾಖಡ್ ಅವರು, ರೈತರ ಬಗ್ಗೆ ಸಾಕಷ್ಟು ಹೋರಾಟ ಮಾಡಿದಂತಹ ಒಬ್ಬ ವ್ಯಕ್ತಿ, ಯಾವುದೇ ಪಕ್ಷ ಇರಲಿ. ನಾನು ಅಗ್ರಿಕಲ್ಚರ್ ಕನ್‌ಸಲ್ಟೇಟೀವ್ ಕಮಿಟಿಯಲ್ಲಿದ್ದೆ. ಅವರಿಗೆ ಅಟ್‌ಲೀಸ್ಟ್ ಯಾವುದೇ ಬೆಳೆ whether it is potato, whether it is sugarcane, whether it is any type of other food cultivation.

ಯಾವುದೇ ಇರಲಿ, ದ್ರಾಕ್ಷಿಗೆ ಹುಳ ಹೊಡೆದು ಹೊರಟು ಹೋಗುತ್ತದೆ. ಅಟ್‌ಲೀಸ್ಟ್ ಕಾಸ್ಟ್ ಆಫ್ ಕಲ್ಟಿವೇಷನ್ ಏನಿದೆ, ಅವನಿಗೆ ಲೇಬರ್ ಛಾರ್ಜ್ ಇರಬಹುದು, ಸೀಡ್ಸ್ ಇರಬಹುದು, ಫರ್ಟಿಲೈಜರ್ಸ್ ಇರಬಹುದು, ಎಷ್ಟು ಖರ್ಚಾಗುತ್ತದೆ ಅದರ ಮೇಲೆ ನೀವು 20 ಪರ್‌ಸೆಂಟ್ ಮಾರ್ಜಿನ್ ಪ್ರಾಫಿಟ್ ಇಟ್ಟು ನೀವು ಅಷ್ಟಕ್ಕೆ ಇನ್‌ಸೂರೆನ್ಸ್ ಮಾಡಿಕೊಡಿ. ನೀವು ಒಂದು ಎಕರೆಯೊಳಗೆ ಆಲೂಗಡ್ಡೆ ಬೆಳೆದರೆ ಅವನಿಗೆ 25 ಸಾವಿರ ರೂಪಾಯಿ ಬರುತ್ತದೆ ಎಂದು ಲೆಕ್ಕ. ಚೆನ್ನಾಗಿ ಬೆಳೆದರೆ ಬರಬಹುದು. ಒಂದು ಮೂಟೆಗೆ 30 ಮೂಟೆ? ನಾನು ಬೆಳೆದಿದ್ದೇನೆ. ಅದು ಬೇಡ ನಮಗೆ. 30 ಮೂಟೆ ಲೆಕ್ಕ ಹಿಡಿದು ಅವನಿಗೆ ಪರಿಹಾರ ಕೊಡುವುದಕ್ಕೆ ಹೋದರೆ ಯಾವುದೇ ಸರ್ಕಾರಗಳ ಕೈಯಲ್ಲಿ, ಯಾವುದೇ ಇನ್‌ಸೂರೆನ್ಸ್ ಕಂಪನಿ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಕನಿಷ್ಟ ಅವನು ಆ ಯಾವುದೇ ಬೆಳೆ ಮೇಲೆ ಖರ್ಚು ಮಾಡುತ್ತಾನೆ ಅಂದರೆ ಏನು ಅವನು ಬೆಳೆ ಇಡಲಿಕ್ಕೆ ಖರ್ಚು ಮಾಡುತ್ತಾನೆ ಹಣ, ಅದು ಗೊಬ್ಬರ ಇರಬಹುದು ಬಿತ್ತನೆ ಬೀಜ ಇರಬಹುದು, ಅವನ ಮನೆ ಹೆಂಡತಿ ಮಕ್ಕಳು ಕೆಲಸ ಮಾಡುವುದು ಇರಬಹುದು, ವಿದ್ಯುಚ್ಛಕ್ತಿ ಇರಬಹುದು, ಇವತ್ತು ಅವನೇನು ಖರ್ಚು ಮಾಡುತ್ತಾನೆ ಅದನ್ನು ಪರ ಏಕರ್ ಇಷ್ಟು ಎಂದು ಲೆಕ್ಕ ಮಾಡಿ ಅದರ ಮೇಲೆ 20 ಪರ್‌ಸೆಂಟ್ ಕೊಟ್ಟು ಅವನ ಕುಟುಂಬಕ್ಕೆ ಆಗುವ ಅನಾಹುತ ಏನಿದೆಯೋ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನಿಸಬೇಕು. ನೀವು ಅವನಿಗೆ ಅಷ್ಟು ಕೊಟ್ಟರೆ ಬ್ಯಾಂಕಿನಿಂದ ತೆಗೆದುಕೊಂಡಿರುವ ಸಾಲ ಅವನ ಮೈಮೇಲೆ ಬರುವುದಿಲ್ಲ. ನಾವು ಗೌರ್ನಮೆಂಟ್ ಇನ್‌ಸೂರೆನ್ಸ್ ಕಂಪನಿಗೆ ತೀರಿಸುವ ವ್ಯವಸ್ಥೆ ಮಾಡೋಣ. ಈ ಒಂದು ನಿಟ್ಟಿನಲ್ಲಿ ಯೋಚನೆ ಮಾಡಿ ಎಂದು ಹೇಳಿದಾಗ ಶ್ರೀಮಾನ್ ಬಲರಾಂ ಜಾಖಡ್‌ರವರು ಹೇಳಿದರು, ಇದು ಅತ್ಯಂತ ಉತ್ತಮವಾದ

ಸಲಹೆ; ಇಲ್ಲಿಯವರೆಗೆ ನಮ್ಮ ಅಧಿಕಾರಿಗಳೆಲ್ಲಾ ಹೇಳುತ್ತಿದ್ದರು, ನಾವು ಅವನಿಗೆ ಎಷ್ಟು ಪ್ರೊಡಕ್ಷನ್ ಬರುತ್ತದೆ, ಅದರ ಮೇಲೆ ನಾವು ಪರಿಹಾರ ಕೊಡಬೇಕಾಗಿ ಬರುತ್ತದೆ. ಅದು ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ. ಸಾಧ್ಯವಾಗುವುದಿಲ್ಲ ಎಂದು ಹೇಳಿ ಇದುವರೆಗೂ ವಾದ ಮಾಡುತ್ತಿದ್ದರು. ಈಗ ನೀವೇನು ಸಲಹೆ ಕೊಟ್ಟಿದ್ದೀರಿ, ಕಾಸ್ಟ್ ಆಫ್ ಕಲ್ಟಿವೇಷನ್ + 20 ಪರ್‌ಸೆಂಟ್. ಯಾವುದೇ ಉದ್ಯಮ ಮಾಡಿದಾಗ ಕನಿಷ್ಟ 20 ಪರ್‌ಸೆಂಟ್ ಲಾಭ ಸಿಗುತ್ತದೆ, ಅದಕ್ಕಾಗಿ ಇನ್‌ಸೂರೆನ್ಸ್ ಸ್ಕೀಮ್‌ನ್ನು ಇಂಟ್ರಡ್ಯೂಸ್ ಮಾಡಿ ಎಂದು ಹೇಳಿದೆ. ನಾನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು. ಕನ್‌ಸಲ್ಟೇಟಿವ್ ಕಮಿಟಿಯಲ್ಲಿ ಪ್ರೊಸೀಡಿಂಗ್ಸ್ ಆಗಿದೆ ಮಾಡುತ್ತೇನೆ ಎಂದು ಹೇಳಿದರು. ಇದುವರೆಗೂ ರೈತರ ಬಗ್ಗೆ ಚರ್ಚೆ ಮಾಡದೇ ಇರುವವರೆಲ್ಲ ಇವತ್ತು ಚರ್ಚೆ ಮಾಡುವುದಕ್ಕೆ ಹೊರಟಿದ್ದಾರೆ. ರೈತರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೊರಟಿದ್ದಾರೆ. ರೈತರ ಬಗ್ಗೆ ಚರ್ಚೆ ಮಾಡುವುದಕ್ಕೆ ಇಷ್ಟವಿಲ್ಲದೇ ಇದ್ದವರೆಲ್ಲಾ ಈ ದೇಶದಲ್ಲಿ ಚರ್ಚೆ ಮಾಡುತ್ತಿದ್ದಾರೆ. ನೀವು ಪಾರ್ಲಿಮೆಂಟಿನಲ್ಲಿ ಹೋಗಿ ಕುಳಿತುಕೊಂಡರೆ ಇಂದಲ್ಲ ನಾಳೆ ನೀವು ಹೋಗಬಹುದು ಅಲ್ಲಿಗೆ. ಅಲ್ಲಿ ಲಾಬಿ ಹೇಗೆ ನಡೆಯುತ್ತಿದೆ ಎಂದು ನೋಡಬೇಕು. ಇಲ್ಲಿ ಯಾವುದೋ ಹೇಳಿದಿರಿ, ಷುಗರ್ ಲಾಬಿ, ಲಕ್ಷುರ್ ಲಾಬಿ ಎಂದು. ಈ ಲಾಬಿಗಿಂತ ಹೆಚ್ಚಾಗಿ ನಾಡಿದ್ದು ನಾನು ಕೆಲವೆಲ್ಲಾ ಹೇಳುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವಾಗ ಹೇಳುತ್ತೇನೆ. ಅಲ್ಲಿ ನಡೆಯುವ ಲಾಬಿಗಳು ಬೇರೆ. ಅಲ್ಲಿ ಇನ್‌ಕಂ ಟ್ಯಾಕ್ಸ್ ಎಕ್ಸ್‌ಪಕ್ಷನ್ ಹೇಗೆ ಕೊಡಬೇಕು, ಇಂಪೋರ್ಟ್ ಡ್ಯೂಟಿ ಎಕ್ಸ್‌ಷನ್ ಹೇಗೆ ಕೊಡಬೇಕು ಇದೆಲ್ಲ ದೊಡ್ಡ ಚರ್ಚೆ ನಡೆದಿದೆ. ಅಲ್ಲಿ ದೊಡ್ಡ ದೊಡ್ಡವರು ಇದ್ದಾರೆ. ನಾವು ಇಲ್ಲಿ ಕುಳಿತು ಈ ಸಭೆಯಲ್ಲಿ ಮಾತನಾಡಿ ಏನು ಪ್ರಯೋಜನ? ಅದರಿಂದ ಇನ್‌ಕಂ ಟ್ಯಾಕ್ಸ್ ಎಕ್ಸ್‌ಪ್‌ಕ್ಷನ್ ಹೆಚ್ಚು ಕೊಡಬೇಕು, ಅದರ ಸ್ಲಾಬ್‌ನ್ನು ಹೆಚ್ಚು ಮಾಡಬೇಕು ಎಂದು ಹೇಳುವವರೆಲ್ಲಾ ರೈತರು, ಕಬ್ಬು ಇದೆಲ್ಲಾ ಭಾಷಣ ಮಾಡುವುದಕ್ಕೆ ಹೊರಟಿದ್ದಾರೆ. ನೀವು ಅದರ ಬಗ್ಗೆ ಎಚ್ಚರಿಕೆಯಿಂದ ಇರಿ ಅಷ್ಟೇ. ಬಾಕಿಯ ದರ ಬಗ್ಗೆ ಚರ್ಚೆ ಬೇಡ. ಈಗ ಅವರು ಹೋದರಲ್ಲ ವಾಕ್‌ಔಟ್ ಮಾಡಿದರಲ್ಲ. ನಾನು ತಮಾಷೆಗೆ ಹೇಳುವುದಿಲ್ಲ, ಇದು ವಸ್ತುಸ್ಥಿತಿ. I have seen four budgets in Parliament. At every time their argument is only for income tax exemption, import duty exemption, excise duty exemption. Is it going to benefit farmers? ಅವರು ಈಗ ರೈತರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೊರಟರೆ ವಾಟಾಳ್ ನಾಗರಾಜ್‌ರವರು ಏಕೋ ಸ್ವಲ್ಪ ದೂರ ಆಗುತ್ತಿದ್ದಾರೆ. ಅವರು ಹೋದರು, ನೀವು ಇಲ್ಲಿಯೇ ಉಳಿದಿರಿ, ಸಂತೋಷ. ಅವರು ಹೇಳಿದರಲ್ಲ, ಈ ಸರ್ಕಾರಕ್ಕೆ ಏನು......

ಅಧ್ಯಕ್ಷರು : ನಮ್ಮ ಭಯ ಏನು ಎಂದರೆ, ನೀವು ಅಲ್ಲಿ ಏನೇನೋ ಲಾಬಿಗಳು ಇವೆ ಎಂದು ಹೇಳಿದಿರಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಇಲ್ಲಿ ಕುಳಿತಿದ್ದು ಏಕೆಂದರೆ, ಕನಿಷ್ಟ ವಿಮೆ ಪರಿಹಾರ ಕೊಡುತ್ತಾರೆ ಎಂದು ಹೇಳುವುದನ್ನು ಕೇಳಿ ಕುಳಿತುಕೊಂಡಿದ್ದೇವೆ.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಹೇಳಿದ್ದುದು ಎರಡೂ ಒಪ್ಪಿಕೊಂಡಿದ್ದೇನೆ. Corpus fund ಕ್ರಿಯೇಟ್ ಮಾಡಬೇಕು ಎಂದು ಹೇಳಿದಿರಿ, ಅದರ ಬಗ್ಗೆ ಯೋಚನೆ ಮಾಡೋಣ. ನಾವು ನೀವು ಕಲೆಕ್ಟೀವ್ ಆಗಿಯೇ ಯೋಚನೆ ಮಾಡೋಣ. ಅದರ ಬಗ್ಗೆ ಏನೂ ದೊಡ್ಡ ವ್ಯಾಖ್ಯಾನ ಇಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೇ, ಎರಡು ಸಕ್ಕರೆ ಕಾರ್ಖಾನೆಗಳು ಬೆಳಗಾಂ ಜಿಲ್ಲೆಯಲ್ಲಿ ಲೈಸೆನ್ಸ್ ಸಿಕ್ಕಿದೆ. ಒಂದು ಭಾಗ್ಯಲಕ್ಷ್ಮಿ ಮತ್ತು

ಇನ್ನೊಂದು ಕೃಷ್ಣ ಸಕ್ಕರೆ ಕಾರ್ಖಾನೆ, ಅಥಣಿ. ಈಗ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು ಎಂದರೆ ಸಹಕಾರಿ ತಳದ ಮೇಲೆ ಹಣ ಕೂಡಿಸುವುದಕ್ಕೆ ಆಗುವುದಿಲ್ಲ ಎಂದರು. ಎಂದರೆ ಅವೆರಡೂ ಕಾರ್ಖಾನೆಗಳು ಮೇಲೆ ಬರುವುದಿಲ್ಲ ಎಂದು ನಮಗೆ ಅನಿಸುತ್ತಿದೆ. ಆ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಏನು ಮಾಡಿದರು ಎಂದರೆ ಮಾಜಿ ಮುಖ್ಯಮಂತ್ರಿಗಳಾದ ಶರದ್ ಪವಾರ್ರವರು ಸಹಕಾರಿ ತಳದ ಮೇಲೆ ಹೊಸ ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ಸಿಕ್ಕಿ,ಅದು ಸಿಕ್ಕಿದ ಮೇಲೆ ಯಾರು ಕಬ್ಬನ್ನು ನುರಿಸುತ್ತಿದ್ದಾರೆ, ಆ ಸಕ್ಕರೆ ಕಾರ್ಖಾನೆಯ ಮಾಲೀಕರನ್ನೆಲ್ಲಾ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಅವರನ್ನು ಮೀಟಿಂಗ್ ಕರೆದು ಪ್ರತಿ ಟನ್ನಿಗೆ ನೂರು ರೂಪಾಯಿಯಂತೆ ಎಲ್ಲಾ ಕಾರ್ಖಾನೆಗಳಿಂದ ದುಡ್ಡು ಸಂಗ್ರಹ ಮಾಡಿ ಸಹಕಾರಿ ತಳದ ಮೇಲೆ ಯಾವ ಯಾವ ಸಕ್ಕರೆ ಕಾರ್ಖಾನೆಗಳಿಗೆ ಲೆಸೆನ್ಸ್ ಸಿಕ್ಕಿವೆ, ಅಂಥ ಕಾರ್ಖಾನೆಗಳನ್ನು ಹಿಡಿದು ಹಣವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದರು. ಅದನ್ನು ಕೂಡ ನಮ್ಮ ಕರ್ನಾಟಕದಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕು ಎಂದು ನಮ್ಮದ್ದೊಂದು ವಿಚಾರ ಇದೆ. ಇಲ್ಲದಿದ್ದರೆ ಏನು ಸಹಕಾರಿ ತಳದ ಮೇಲೆ ಲೈಸೆನ್ಸ್ಗಳು ಸಿಕ್ಕಿವೆ, ನಾಳೆ ಖಾಸಗೀಯವರು ಯಾರಾದರೂ ತೆಗೆದುಕೊಂಡು ಬಂದರೆ ನಮ್ಮಲ್ಲೇ ಬೆಳಗಾಂ ಜಿಲ್ಲೆಯಲ್ಲಿ ಅಥಣಿ ಫಾರ್ಮರ್ಸ್ ಎಂದು ಖಾಸಗಿಯವರು ಪ್ರಯತ್ನ ಮಾಡುತ್ತಿದ್ದಾರೆ. ಅವರಿಗೆ ಆ ಲೆಸೆನ್ಸ್ ಸಿಕ್ಕಿದರೆ ಆ ಕಾರ್ಖಾನೆಯೇ ಬರುತ್ತದೆಯೇ ಹೊರತಾಗಿ ಸಹಕಾರಿ ತಳದ ಮೇಲೆ ಸಿಕ್ಕಂಥ ನಮ್ಮ ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಯು ಮೇಲೆ ಬರುವುದಿಲ್ಲ ಎಂಬ ಉದ್ದೇಶ ಇಟ್ಟುಕೊಂಡು ಆ ದೃಷ್ಟಿಯಿಂದ ಮಾನ್ಯ .ಮುಖ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು ಎಂದು ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಸಕ್ಕರೆ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಹುಕ್ಕೇರಿಯವರು ಅದೇ ಜಿಲ್ಲೆಯವರು ಅವರಿಗೆ ಮಾಹಿತಿ ಇದ್ದ ಹಾಗೆ ಇಲ್ಲ. ಖಾನಾಪುರ್ ಸಕ್ಕರೆ ಕಾರ್ಖಾನೆಗೆ ಈಗಾಗಲೇ ಸರ್ಕಾರದವರು ನಾವು ದುಡ್ಡು ಕೊಟ್ಟಿದೇವೆ. ಕೇಂದ್ರ ಸರ್ಕಾರ ಯಾವುದೇ ಹಣಕಾಸಿನ ವ್ಯವಸ್ಥೆ ಮಾಡಲಿಲ್ಲ ಎಂದ ಕೂಡಲೇ ನಾವು ಕಮರ್ಷಿಯಲ್ ಬ್ಯಾಂಕ್, ಕೋ ಆಪರೇಟಿವ್ ಬ್ಯಾಂಕ್ನಿಂದ ಸಾಲ ಕೊಡಿಸಿ ಈ ವರ್ಷ ನಾವು ಖಾನಾಪುರದಲ್ಲಿ ಕಬ್ಬನ್ನು ಅರೆಯುತ್ತೇವೆ. ಇನ್ನು ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಗೆ ನಾವು ಈಗಾಗಲೇ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಉಳಿದುದ್ದನ್ನು ಬಿಡುಗಡೆ ಮಾಡಲಿಕ್ಕೆ ಹಣಕಾಸಿನ ಇಲಾಖೆಗೆ ನಾವು ಕೇಳಿದ್ದೇವೆ. ಆದರೆ ನಾನು ವಿನಂತಿ ಮಾಡುವುದು ಏನೆಂದರೆ, ಸಹಕಾರಿ ರಂಗದ ಹೆಸರಿನ ಮೇಲೆ ಲೈಸೆನ್ಸ್ ತೆಗೆದುಕೊಂಡು ಅನೇಕ ರಾಜಕೀಯ ಮುಖಂಡರು ಖಾಸಗಿಯಾಗಿ ಮಾಡಿದ್ದಾರೆ. ಅದನ್ನು ಮಾಡಿದರೆ ಬಹಳ ಸಂತೋಷ. ಏಳರಲ್ಲಿ ಲೈಸೆನ್ಸ್ ಸಿಕ್ಕಿದ್ದು, ಒಂದು ...

ಅಧ್ಯಕ್ಷರು : ನೀವು ಹೇಳುವುದೇನು ಪ್ರೈವೇಟ್ ಕೋ-ಆಪರೇಷನ್ ಎಂತಲೋ.

ಶ್ರೀ ಪಿ.ಸಿ. ಸಿದ್ದನಗೌಡರ್ : ಪ್ರೈವೇಟ್ ಕೋ-ಆಪರೇಷನ್ ಆಗಿದೆ. ಒಬ್ಬರು ಎಂಪಿಯವರು ಮಾಡಿದ್ದಾರೆ. ಅವರ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ ರೀತಿ ಕೋ-ಆಪರೇಟಿವ್ ಇದ್ದಿದ್ದು ನಿಮ್ಮಷ್ಟಕ್ಕೇ ನೀವು ಪ್ರೈವೇಟ್ ಮಾಡಿಕೊಳ್ಳಬೇಡಿ. ಈಗ ಆರು ಉಳಿದಿವೆ. ಈಗಾಗಲೇ ಮೂರಕ್ಕೆ ನಾವು ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರ ಈ ನ್ಯಾಷನಲ್ ಫೆಡರೇಷನ್ ಇದೆಯಲ್ಲ, ಷೆಡ್ಯೂಲ್ ಬ್ಯಾಂಕ್ ಇದೆಯಲ್ಲ ಅವರು ಮಾಡಿಲ್ಲ. ಆ ತೊಂದರೆಗೆ ಆಗಿದೆ ಎನ್ನುವುದನ್ನು ಅವರ ಗಮನಕ್ಕೆ ತಂದೆ ಅಷ್ಟೆಯ

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಪ್ರಕಾಶ್ ಹುಕ್ಕೇರಿಯವರು ಹೇಳಿದಂಥ ಒಂದು ಸೂಚನೆ ಏನು ಇದೆ, ಒಂದು ಟನ್ಗೆ ಒಂದುನೂರು ರೂಪಾಯಿ ಕೂಡಿಸತಕ್ಕಂಥದ್ದು, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಅದನ್ನು ಲಘುವಾಗಿ ತೆಗೆದುಕೊಳ್ಳುವುದಿಲ್ಲ. ನೀವು ಕೊಟ್ಟಿರುವ ಸಲಹೆಯನ್ನು ನಾವು ಕುಳಿತು ಯೋಚನೆ ಮಾಡೋಣ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೇ, ಈ ಕಬ್ಬು ಬೆಳೆಗಾರರ ಬಗ್ಗೆ ನಾನು ಕೂಡ ಸವಿಸ್ತಾರವಾಗಿ ಮಾತನಾಡಬೇಕು ಎಂದು ಮಾಡಿದ್ದೆ. ಆದರೆ ಅನೇಕ ಹಿರಿಯರು ತಮ್ಮ ಬೆಳಕನ್ನು ಇಲ್ಲಿ ಚೆಲ್ಲಿ ಸಮಗ್ರವಾಗಿ ಚರ್ಚೆ ಮಾಡಿದ್ದಕ್ಕೆ ತಮಗ ಕಡ ನಾನು ಅಭಿನಂದನೆಗಳನ್ನು ಸಲ್ಲಿಸಿ ಕನಿಷ್ಟ ಪಕ್ಷದ ಪರಿಹಾರವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕಲ್ಪಿಸಿಕೊಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಕೂಡ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಅಧ್ಯಕ್ಷರು : ಈಗ ಭಾಷಣ ಬೇಡಿ. ಡಿಸ್ಕಷನ್ ಕ್ಲೋಸ್ ಆಗಿದೆ. ಕ್ಲಾರಿಫಿಕೇಷನ್ ರೂಪದಲ್ಲಿ ಹೇಳಿ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ನಾನು ನಮ್ಮ ಜಿಲ್ಲೆಗೆ ಸೀಮಿತವಾಗಿ ಸಂಗೂರ್ ಸಕ್ಕರೆ ಕಾರ್ಖಾನೆ ಬಗ್ಗೆ ಹೇಳುತ್ತೇನೆ. ಇವತ್ತು ಇಲ್ಲಿ ಅಂಕಿ ಸಂಖ್ಯೆಗಳನ್ನು ನಾವು ನೋಡಿದಾಗ ಒಂದು ವರ್ಷಕ್ಕೆ 3 ಲಕ್ಷ 11 ಸಾವಿರ ಟನ್ ಕಬ್ಬನ್ನು ಅರೆಯಬೇಕಾಗಿದೆ. ಆದರೆ ಈ ವರ್ಷ ಮಾನ್ಯ ಸದಸ್ಯರಾದ ಸಿಎಂ. ಉದಾಸಿಯವರು ಹೇಳಿದಂತೆ ಕೇವಲ 92 ಸಾವಿರ ಟನ್ ಕಬ್ಬನ್ನು ಅಲ್ಲಿ ಅರೆದಿದ್ದಾರೆ. ಇದರಿಂದ ಸುಮಾರು ಎರಡು ಲಕ್ಷ ಟನ್ ಮೇಲ್ಪಟ್ಟು ಕಬ್ಬನ್ನು ಅರೆಯಲಿಕ್ಕೆ ಇವತ್ತು ಸಾಧ್ಯವಾಗಿಲ್ಲ. ಇವತ್ತು ಇಡೀ ಜಿಲ್ಲೆಯಲ್ಲಿ ಅಂದರೆ ಹಾವೇರಿ, ಹಾನಗಲ್, ಶಿಗ್ಗಾವ್, ಸವಣೂರು ಅನೇಕ ಕಡೆಗಳಲ್ಲಿ ಬೆಳೆದು ನಿಂತಂಥ ಕಬ್ಬನ್ನು ಬೆಂಕಿ ಹಚ್ಚುವ ಕಾರ್ಯಕ್ರಮವನ್ನು ಈಗಾಗಲೇ ಅಲ್ಲಿ ರೈತರು ಪ್ರಾರಂಭ ಮಾಡಿದ್ದಾರೆ. ಮುಂದೆಯೂ ಕೂಡ, ಅದನ್ನು ಮಾಡುವ ಒಂದು ಪರಿಸ್ಥಿತಿ ಅಲ್ಲಿ ಇದೆ. ಕಾರಣ ಈ ಕಬ್ಬನ್ನು ಬೇರೆ ಕಡೆಗೆ ಒಯ್ಯುತಕ್ಕಂಥ ವ್ಯವಸ್ಥೆಯನ್ನು ಅನುಕೂಲ ಮಾಡಿಕೊಡಬೇಕು ಎಂದು ತಮ್ಮ ಮುಖೇನ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಒಂದು ಸಕ್ಕರೆ ಕಾರ್ಖಾನೆ ಮಾಡಬೇಕು ಎಂದು ಕೇಳಿದ್ದಾರೆ. ನಾನು ರೆಕಮಂಡ್ ಮಾಡಿದ್ದೇನೆ. ಅದನ್ನು ಮಾಡಿಕೊಂಡು ಬಂದರೆ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ಹೇಳಿ ಸೂಕ್ಷ್ಮವಾಗಿ ಉತ್ತರ ಕೊಡುತ್ತೇನೆ. ಮುಖ್ಯಮಂತ್ರಿಗಳು ಹೇಳಿದ ಹಾಗೆ ಯಾವ ಸರ್ಕಾರವೂ ಮಾಡಿಲ್ಲ; ಅಷ್ಟು ಸಹಾಯವನ್ನು ಮಾಡಿದ್ದೇವೆ. ಎಲ್ಲಾ ಹೇಳಿದ್ದೇವೆ. ಪುನಃ ಪುನಃ ಕೇಳಿದರೆ ಅವರಿಗೆ ಒಂದು ರೆಕಮಂಡ್ ಮಾಡಿದ್ದೇವೆ. ಅವರು ದೆಹಲಿಗೆ ಹೋಗಿ ಅವರದೇ ಸರ್ಕಾರ ಇದೆ, ಅಲ್ಲಿಂದ ಲೈಸೆನ್ಸ್ ತೆಗೆದುಕೊಂಡು ಬಂದರೆ ಸಮಸ್ಯೆ ಬಗೆಹರಿಯುತ್ತದೆಯೇ ಹೊರತು ಇದು ನಮ್ಮ ಕಡೆಯಿಂದ ಸಾಧ್ಯವಿಲ್ಲ.

ಅಧ್ಯಕ್ಷರು : ಮಾನ್ಯ ಶಿವರಾಂರವರು ಕೈ ಎತ್ತುತ್ತಿದ್ದಾರೆ. ಎಲ್ಲರಿಗೂ ಒಂದು ಅವಕಾಶ ಕೊಡೋಣ. ಪ್ರಕಾಶ್‌ರವರೇ ನಿಮ್ಮ ಸಲಹೆಯನ್ನು ಒಪ್ಪಿದ್ದೇವೆ ಎಂದು ಹೇಳಿದ್ದಾರಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೇ, ಕರ್ನಾಟಕ-ಮಹಾರಾಷ್ಟ್ರ ಬಾರ್ಡರ್‌ನಲ್ಲಿ ತಾವು ಸಕ್ಕರೆ ಕಾರ್ಖಾನೆ, ಕಾಗದ ಮತ್ತು ಮಾಂಕಾಳ್ ಕೋಟೆ ಸಕ್ಕರೆ ಕಾರ್ಖಾನೆ ಈ ಎರಡು ಕಾರ್ಖಾನೆಗಳಲ್ಲಿ ಕಬ್ಬು ಕಡಿಮೆ ಇದೆ. ಅದಕ್ಕೆ ನಮ್ಮ

ಕರ್ನಾಟಕದ ಕಬ್ಬನ್ನು ಏತಕ್ಕೆ ಅಲ್ಲಿಗೆ ಕಳುಹಿಸಬಾರದು? ಕಳುಹಿಸುವಂಥ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ಎಂದು ಕೇಳುತ್ತಿದ್ದೇನೆ.

ಶ್ರೀ ಪಿ.ಸಿ. ಸಿದ್ಧನಗೌಡರ್ : ಮಹಾರಾಷ್ಟ್ರಕ್ಕೆ ಹೋಗಿ ಬಂದಿದ್ದೇವೆ. ಅವರು ಬ್ಯಾನ್ ಮಾಡಿದ್ದಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಈಗ ಐದಾರು ನೂರು ಟನ್ ಕಬ್ಬನ್ನು ನುರಿಸುತ್ತಿದ್ದಾರೆ. ಆ ಎರಡು ಕಾರ್ಖಾನೆಗಳಿಗೆ ಕಬ್ಬನ್ನು ಕಳುಹಿಸುವ ವ್ಯವಸ್ಥೆ ನಮ್ಮ ಮಾನ್ಯ ಸಚಿವರು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಸನ್ಮಾನ್ಯ ಹುಕ್ಕೇರಿ ಅವರು ಮಹಾ ಮಂಡಲದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಸಕ್ಕರೆ ಕಾರ್ಖಾನೆಗೆ ಅವರೂ ಸಂಬಂಧ ಇದ್ದಾರೆ. ಮುಖ್ಯ ಮಂತ್ರಿಗಳೂ, ನಾನು ಮಹಾರಾಷ್ಟ್ರಕ್ಕೆ ಹೋಗಿ ಬಂದೆವು. ಗೋವಾಕ್ಕೆ ಹೋಗಿ ಬಂದಿದ್ದೇವೆ. ಎಲ್ಲಾ ಹೇಳಿದ್ದೇವೆ, ಬೇರೆ ಏನಾದರೂ ಕೇಳಿದರೆ ಒಳ್ಳೆಯದು ಎಂದು ನನ್ನ ಭಾವನೆ. ಮಹಾರಾಷ್ಟ್ರ ಸರ್ಕಾರದವರು ನಿರ್ಣಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ನಮಗೆ ಅಲ್ಟರ್‌ನೇಟೀವ್ ಸಜೆಷನ್ ಏನಾದರೂ ಕೊಟ್ಟರೆ ನಾವು ಸಹಕಾರ ಮಾಡುವುದಕ್ಕೆ ತಯಾರು ಇದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಸಂಪೂರ್ಣವಾದಂತಹ ವಿವರಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ.

ಅಧ್ಯಕ್ಷರು : ಸಾಕು, ಮಾನ್ಯ ಉದಾಸಿಯವರೆ ಕ್ಲೋಸ್ ಮಾಡೋಣ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಸಹಕಾರ ಸಚಿವರು ಹೋದಾಗ ಅವರನ್ನು ಭೇಟಿ ಆಗಿಲ್ಲ ಎಂದು ಎಲ್ಲಾ ಪೇಪರ್‌ನಲ್ಲಿ ಬಂದುಬಿಟ್ಟಿದೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಭೇಟಿ ಆಗಿದ್ದೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮತ್ತೆ ಏನು ಪ್ರಯತ್ನ ಮಾಡಿದ್ದಾರೆಂದು ನನಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು : ಇರಲಿ ಬಿಡಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಪೇಪರ್‌ನಲ್ಲಿ ಬಂದಿದೆ; ಸುಮ್ಮನೆ ಹೇಳುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸಕ್ಕರೆ ಮಂತ್ರಿಗಳು ಬಹಳಷ್ಟು ಪ್ರಯತ್ನ ಪಟ್ಟಿದ್ದಾರೆ.

ಅಧ್ಯಕ್ಷರು : ಈಗ ಚರ್ಚೆ ಮುಕ್ತಾಯವಾಗಿದೆ. ಮಾನ್ಯ ವಾಟಾಳ್ ಅವರೇ ಈಗ ತಮ್ಮ ಹೆಸರಿನಲ್ಲಿ ಖಾಸಗಿ ಸದಸ್ಯರ ನಿರ್ಣಯ ಇದೆ. ತಾವು ಧರಣಕ್ಕೆ ಬಂದಿದ್ದೀರಿ. ನಿಮ್ಮ ನಿರ್ಣಯ ತೆಗೆದುಕೊಳ್ಳುತ್ತೀರೋ ಅಥವಾ ಧರಣಿ ಮುಂದುವರಿಸುತ್ತೀರೋ? ನೀವು ಧರಣಿ ಮುಕ್ತಾಯ ಮಾಡಿ. ಖಾಸಗಿ ನಿರ್ಣಯದ ಬಗ್ಗೆ ಒಂದು ಹತ್ತು ನಿಮಿಷ ನೀವು ಪ್ರಸ್ತಾಪ ಮಾಡಿಬಿಡಿ.

(ಬಾವಿಯಿಂದ)

ಶ್ರೀ ವಾಟಾಳ್ ನಾಗರಾಜ್ : ಮಾತನಾಡುತ್ತಿದ್ದರು.

ಶ್ರೀ ಪಿ.ಸಿ. ಸಿದ್ಧನಗೌಡರ್ : ವಾಟಾಳ್ ಅವರೇ ಸಕ್ಕರೆ ಬಹಳ ಸಿಹಿ, ಇದರಲ್ಲಿ ಏಕೆ?

ಅಧ್ಯಕ್ಷರು : ಇನ್ನು ಹತ್ತು ನಿಮಿಷ ಮಾತನಾಡಿ, ಎಲ್ಲರೂ ಆಸಕ್ತಿಯಿಂದ ಇದ್ದಾರೆ. ನೀವು ಧರಣಿ ಮಾಡಿಕೊಂಡು ಇದ್ದೀರಿ.

ಅಧ್ಯಕ್ಷರು : ಇನ್ನು ಹತ್ತು ನಿಮಿಷ ಮಾತನಾಡಿ, ಎಲ್ಲರೂ ಆಸಕ್ತಿಯಿಂದ ಇದ್ದಾರೆ. ನೀವು ಧರಣಿ ಮಾಡಿಕೊಂಡು ಇದ್ದೀರಿ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಲಾಗಿದೆ. ಸಭೆ ಪುನಃ ಸೋಮವಾರ 10ಗಂಟೆಗೆ ಸೇರುತ್ತದೆ.

(ಸಭೆಯು ಮಧ್ಯಾಹ್ನ 2.52ಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 26.02.96ರ ಸೋಮವಾರ 10.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(+ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೨೬ನೇ ಫೆಬ್ರವರಿ ೧೯೯೬, ಸಾಯನಸೌರ ಫಾಲ್ಗುಣ, ೧೯ನೇ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಿಗ್ಗೆ : ೧೧-೦೦ ಗಂಟೆಗೆ ಸಮಾವೇಶಗೊಂಡಿತು

ಸಭಾಪತಿಯವರು : (ಶ್ರೀ ರಮೇಶ್‌ಕುಮಾರ್)ಅವರು ಪೀಠವನ್ನು ಅಲಂಕರಿಸಿದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ನೆರೆ ರಾಜ್ಯಗಳಿಂದ ಪಡೆಯುತ್ತಿರುವ ವಿದ್ಯುತ್

316 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಮಂಡಳಿಯವರು ಯಾವ ಯಾವ ರಾಜ್ಯಗಳಿಂದ ಎಂದಿನಿಂದ ಎಷ್ಟು ವಿದ್ಯುತ್ ಪಡೆಯುತ್ತಿದ್ದಾರೆ.

ಆ) ಇದಕ್ಕೆ ಪ್ರತಿ ಯೂನಿಟ್‌ಗೆ ಕೊಡುತ್ತಿರುವ ಹಣ ಎಷ್ಟು?

ಶ್ರೀ ಜೆ. ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) :

ಅ)

ಮಹಾರಾಷ್ಟ್ರ	- ರಿಂದ ರವರೆಗೆ	26-9-95 31-1-96	140.0 ಎಂ.ಯು.
ಆಂಧ್ರಪ್ರದೇಶ	- ರಿಂದ ರವರೆಗೆ	1-4-95 31-10-96	20.0 ಎಂ.ಯು
ತಮಿಳುನಾಡು	- ರಿಂದ ರವರೆಗೆ	11-11-95 17-11-95	2.9 ಎಂ.ಯು
		8-12-95	5.2 ಎಂ.ಯು
	ರಿಂದ	19-12-95ರ	ವರೆಗೆ
		ಒಟ್ಟು	166.1 ಎಂ.ಯು

ಅ) ವಿವರಗಳು ಕೆಳಕಂಡಂತಿದೆ :

	ಪ್ರತಿ ಯೂನಿಟ್‌ನ ದರ
	ರೂ. ಪೈ.
ಮಹಾರಾಷ್ಟ್ರ	2.00
ಆಂಧ್ರಪ್ರದೇಶ	1.50
ತಮಿಳುನಾಡು	1.80

ಶ್ರೀ ಯು.ಬಿ. ಬಣಕಾರ್ : ಅಧ್ಯಕ್ಷರೇ ಪರರಾಜ್ಯಗಳಿಂದ ವಿದ್ಯುತ್ ಪಡೆಯುವ ದೃಷ್ಟಿ ಎಂದರೆ, ಈ ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್ ರಾಜ್ಯಕ್ಕೇ ಸಾಕಾಗುವುದಿಲ್ಲವೆಂಬ ಭಾವನೆ ಬರುತ್ತಿದೆ. ಮಾನ್ಯ ಉಪಮುಖ್ಯಮಂತ್ರಿಗಳು 8-10 ದಿವಸದ ಹಿಂದೆ ಸಂಜೆ 6ರಿಂದ 10ರ ವರೆಗೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿದ್ಯುತ್ ಪೂರೈಸುವುದಾಗಿ ಹೇಳಿದ್ದಾರೆ. ಇದರರ್ಥ ಅವರು ಇನ್ನೂ ಹೆಚ್ಚು ವಿದ್ಯುತ್ ಪಡೆಯಬೇಕಾಗಿತ್ತು ಆದರೆ ಅವರು ಹೇಳಿದಂತೆ ಗ್ರಾಮಿಣ ಪ್ರದೇಶದಲ್ಲಿ 6-10ರ ವರೆಗೆ ವಿದ್ಯುತ್ ಪೂರೈಕೆಯಾಗುತ್ತಿಲ್ಲ ಆದ್ದರಿಂದ 6ರಿಂದ 10ರ ವರೆಗೆ ವಿದ್ಯುತ್ತನ್ನು ಯಾವ ರೀತಿ ಅವರು ಪೂರೈಸುತ್ತಾರೆಂದು ತಿಳಿಯ ಬಯಸುತ್ತೇನೆ.

ಶ್ರೀ ಜೆ.ಎಚ್. ಪಟೇಲ್ : ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಕರ್ನಾಟಕ ವಿಧಾನಮಂಡಲಿಯು ಯಾವ್ಯಾವ ರಾಜ್ಯಗಳಿಂದ ಎಷ್ಟು ವಿದ್ಯುತ್ ಪಡೆಯುತ್ತಿದ್ದಾರೆ ಎಂದಿದೆ, ಅದಕ್ಕೆ ಉತ್ತರ ಕೊಟ್ಟಿದ್ದೇವೆ. ಮಹಾರಾಷ್ಟ್ರದಿಂದ 140 ಎಂ.ಯು. ಆಂಧ್ರದಿಂದ 20 ಎಂ.ಯು ತಮಿಳುನಾಡಿನಿಂದ ಒಟ್ಟು 8 ಎಂ.ಯು ಇಷ್ಟು ಪಡೆಯುತ್ತಿದ್ದೇವೆ. ಇದಕ್ಕೆ ಬೆಲೆ ಕೇಳಿದ್ದೀರಿ, ಮಹಾರಾಷ್ಟ್ರದಿಂದ ಪಡೆಯುವ ವಿದ್ಯುತ್‌ಗೆ ಒಂದು ಯೂನಿಟ್‌ಗೆ 2 ರೂ, ಆಂಧ್ರ ಪ್ರದೇಶದಿಂದ ಅಲ್ಲಿ ವಿದ್ಯುತ್ ಉತ್ಪತ್ತಿ ಕಡಿಮೆ, ಅಲ್ಲಿಗೆ 1.50 ಪೈಸೆ ಕೊಡುತ್ತೇವೆ, ತಮಿಳುನಾಡಿನದಕ್ಕೆ 1.80 ಪೈಸೆ ತಾವು 6 ಗಂಟೆಯಿಂದ 10 ಗಂಟೆವರೆಗೆ ಮಕ್ಕಳಿಗೆ ಓದಲಿಕ್ಕೆ ತೊಂದರೆಯಾಗಬಾರದು ಎಂಬುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂದು ಕೇಳಿದ್ದಾರೆ ಆ ಪ್ರಶ್ನೆ ಸಂಬಂಧಪಡುವುದಿಲ್ಲ.

ಶ್ರೀ ಯು.ಬಿ. ಬಣಕಾರ್ : ಅಧ್ಯಕ್ಷರೇ, 6 ರಿಂದ 10 ಗಂಟೆವರೆಗೆ ವಿದ್ಯುತ್ ಕೊಡಬೇಕಾದರೆ ನಮ್ಮ ರಾಜ್ಯದಲ್ಲಿ ವಿದ್ಯುತ್‌ಸೌಕರ್ಯ ಇಲ್ಲವೆಂದು ಕೇಳಿಬರುತ್ತಿದೆ. ಅದನ್ನು ಪೂರೈಸಬೇಕಾದರೆ ಇನ್ನೂ ಹೆಚ್ಚಿನ ವಿದ್ಯುತ್ತನ್ನು ಪರರಾಜ್ಯಗಳಿಂದ ಪಡೆದುಕೊಳ್ಳಬೇಕಾಗುತ್ತದೆ. ಈಗ ಕೊಟ್ಟಿರುವ ಮಾಹಿತಿಯಲ್ಲಿ ಫೆಬ್ರವರಿ ತಿಂಗಳಲ್ಲಿ ಇನ್ನೂ ಹೆಚ್ಚಿನ ವಿದ್ಯುತ್ ಪಡೆಯುವಂತಹದ್ದು ಇರಬೇಕಾಗಿತ್ತು. ಈಗಿರುವ ವಿದ್ಯುತ್‌ನಿಂದ 6ರಿಂದ 10ರ ವರೆಗೆ ವಿದ್ಯುತ್ ಪೂರೈಸಲು ಹೇಗೆ ಸಾಧ್ಯವೆಂದು ನನ್ನ ಪ್ರಶ್ನೆ.

ಅಧ್ಯಕ್ಷರು : ಪರರಾಜ್ಯಗಳಿಂದ ಪಡೆಯುವ ವಿದ್ಯುತ್ ಹಕ್ಕಿನಿಂದ ಬರುವುದಲ್ಲ. ಬೇಡಿ ತೆಗೆದುಕೊಳ್ಳುವುದು. ಅದಕ್ಕೆ ನಾವು ಡಿಮಾಂಡ್ ಮಾಡುವುದಕ್ಕಾಗುವುದಿಲ್ಲ. ನಾವು ದೈನೇಸಿಗಳು ಹೋಗಿ ಕೇಳಿಕೊಂಡರೆ ಅವರು ಏನು ಕೊಡುತ್ತಾರೋ ತೆಗೆದುಕೊಳ್ಳಬೇಕು.

ಶ್ರೀ ಯು.ಬಿ. ಬಣಕಾರ್ : ನನ್ನದಿಷ್ಟೇ ಪ್ರಶ್ನೆ ಅಧ್ಯಕ್ಷರೇ, 8-10 ದಿವಸಗಳ ಹಿಂದೆ ತಾವು 6 ರಿಂದ 10ರ ವರೆಗೆ ವಿದ್ಯುತ್ ಪೂರೈಸುತ್ತೀವಿ ಅಂತ ಹೇಳಿದ್ದಿರಿ. ತಮ್ಮ ಹೇಳಿಕೆಯಂತೆ ಗ್ರಾಮೀಣಪ್ರದೇಶದಲ್ಲಿ ಇನ್ನೂ ಸ್ಟಾರ್ಟಾಗಿಲ್ಲ, ಯಾವಾಗಿನಿಂದ ಮಾಡುತ್ತೀರಿ ಅದನ್ನಾದರೂ ದಯವಿಟ್ಟು ಹೇಳಿ.

ಶ್ರೀ ಜೆ.ಎಚ್. ಪಟೇಲ್ : ಘೋಷಣೆ ಮಾಡಿರುವ ಪ್ರಕಾರ ಕುಡಿವ ನೀರಿನ ಪೂರೈಕೆಗೆ ತೊಂದರೆಗೆ ಬರದಂತೆ ಪ್ರಿಯಾರಿಟಿ ಕೊಡುವುದು, ಎರಡನೆಯದು ಮಕ್ಕಳ ವಿದ್ಯಾಭ್ಯಾಸಕ್ಕೆ ಪರೀಕ್ಷೆ ಸಮಯ ಬಂತು, ಅವರಿಗೆ ತೊಂದರೆಯಾಗದಂತೆ 6ರಿಂದ 10 ಗಂಟೆವರೆಗೂ ಕೊಡಬೇಕೆಂದು. ಆದರೆ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಕೆಲವು ಉತ್ತರವನ್ನು ಇದಕ್ಕೆ ಸಂಬಂಧಪಡದಿದ್ದರೂ ಹೇಳಬೇಕಾಗಿದೆ. 6ರಿಂದ 10ರವರೆಗೆ ಯಾವುದೇ ಕೊರತೆ ಇರದಂತೆ ವಿದ್ಯುತ್ ಕೊಡಿ ಅಂತ ಹೇಳಿದ್ದೇವೆ. ಕೆಇಬಿಯವರು ಕೊಡುತ್ತಾ ಇದ್ದಾರೆ. ಏನಾಗುತ್ತದೆ ಅಂದರೆ 6ರಿಂದ 10ರ ವರೆಗೆ ಸಿಂಗಲ್‌ಫೇಸ್ ಅಂತ ಕೊಡುತ್ತಾರೆ, ಬರೀ ಲೈಟ್ ಮಾತ್ರ ಹಾಕುವುದು. ಆಗ ಮೋಟಾರ್ ಬೇರೆ ಯಂತ್ರಗಳನ್ನು ಚಾಲೂ ಮಾಡಬಾರದು. ನಾವು ಮಕ್ಕಳಿಗೆ ಅಂತಹ ಕೊಟ್ಟಾಗ ಇರಿಗೇಶನ್ ಪಂಪ್‌ಸೆಟ್‌ನವರು ಸಣ್ಣ ಉದ್ಯಮದವರು ಬಳಸಲು ತೊಡಗುವುದರಿಂದ ಒಂದನೆಯದಾಗಿ ಅವರಿಗೇ ಲುಕ್ಸಾನ ಆಗುತ್ತದೆ, ಅವರ ಮೋಟಾರುಗಳು ಬರ್ನ್ ಆಗುತ್ತವೆ. ಎರಡನೆಯದು, ಕೆಇಬಿಯ ಟ್ರಾನ್ಸ್‌ಫಾರ್ಮರ್‌ಗಳು ಆ ಲೋಡ್ ತೆಡೆದುಕೊಳ್ಳಲಾರದೆ ಅವು ಸುಡುತ್ತವೆ. ಹೀಗಾಗಿ ತಾವು ಕೇಳಿದ್ದು ಒಳ್ಳೆಯದಾಯಿತು. ನಾನು ಜನತೆಗೆ ಮನವಿ ಮಾಡಿಕೊಳ್ಳುವುದಿಷ್ಟೆ : ಇನ್ನು ಎರಡು ತಿಂಗಳ ಮಟ್ಟಿಗೆ ಸಹಕಾರ ಕೊಡಿ. ನಾವು ಸಿಂಗಲ್ ಫೇಸ್ ಲೈಟ್‌ಕೊಟ್ಟಾಗ ಬೇರೆ ಉಪಕರಣಗನ್ನು ಆನ್ ಮಾಡಬಾರದು. ಮಾಡಿದರೆ ಅವರಿಗೂ ತೊಂದರೆಯಾಗುತ್ತದೆ ಕೆಇಬಿಗೂ ತೊಂದರೆಯಾಗುತ್ತದೆ. ಮಾನ್ಯ ಬಣಕಾರ್‌ರವರ ಕಳಕಳಿ ಏನಿದೆ ಇನ್ನೂ ಶುರುಮಾಡಿಲ್ಲ ಅಂತ, ನಾವು ಶುರುಮಾಡಿದ್ದೇವೆ, ಸಾಮಾನ್ಯವಾಗಿ ವೋಲ್ಟೇಜ್ ಇಂಪ್ರೂವ್ ಆಗಿದೆ, 6ರಿಂದ 10ರ ವರೆಗೆ ನಾವು ಟೈಂ ರೆಗ್ಯೂಲೇಟ್ ಏನುಮಾಡಿದ್ದೇವೆ ಅದು ಪೂರ್ಣ ಸರಿಯಾಗಿದೆ ಅಂತ ನಾನು ಹೇಳುವುದಿಲ್ಲ ನಿಮ್ಮ ಭಾಗದಲ್ಲೇ ಏನಾದರೂ ಕೊರತೆ ಇದ್ದರೆ ತಿಳಿಸಿದರೆ ನಾನು ಅಧಿಕಾರಿಗಳಿಗೆ ತಿಳಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ ಇಲ್ಲಿ ತಮಿಳುನಾಡಿನಿಂದ 11-11-95ರಿಂದ 17-11-95ರ ವರೆಗೆ 2.9ಎಂಯು ವಿದ್ಯುತ್ ಸರಬರಾಜಾಗುತ್ತಿತ್ತು. ಮತ್ತೆ 8-12-95ರಿಂದ 19-12-1995ರ ವರೆಗೆ 5.2 ಎಂಯು ಸರಬರಾಜಾಗುತ್ತಿತ್ತು. ಈಗ ನಮಗೇನಾದರೂ ತಮಿಳುನಾಡಿನಿಂದ ಬರುತ್ತಿದೆಯೇ? ಎರಡನೆಯದು ಮಹಾರಾಷ್ಟ್ರ ಆಂಧ್ರ ತಮಿಳುನಾಡಿನಿಂದ ಈಗ ಎಷ್ಟು ವಿದ್ಯುತ್ ಪಡೆಯುತ್ತಿದ್ದೇವೆ ಅದರಿಂದ ನಮ್ಮ ಅಗತ್ಯಗಳನ್ನು ಪೂರೈಸಲಿಕ್ಕೆ ಸಹಕಾರಿಯಾಗುತ್ತಿದೆಯೇ?

ಶ್ರೀ ಜೆ.ಎಚ್. ಪಟೇಲ್ : ದಕ್ಷಿಣದ ಯಾವ ರಾಜ್ಯದಲ್ಲೂ ಇವತ್ತು ಸ್ಥಿತಿ ಸರಿಯಿಲ್ಲ. ಆಂಧ್ರ ಪ್ರದೇಶದಲ್ಲೂ ತಮಿಳುನಾಡಿನಲ್ಲೂ ನಮಗಿಂತ ಹೆಚ್ಚು ಪವರ್‌ಕಟ್ ಇಂಪೋಸ್ ಮಾಡಿದ್ದಾರೆ. ಲೋಡ್‌ಶೆಡಿಂಗ್ ಟೈಂ ಜಾಸ್ತಿ ಇದೆ. ಆದ್ದರಿಂದ ತಮಿಳುನಾಡಿನಿಂದ ಆಂಧ್ರಗಳಿಂದ ಯಾವುದೇ ರೀತಿಯ ವಿದ್ಯುತ್ ಸಲಕರಣೆಗಳಾಗಲಿ ಸಹಾಯವನ್ನಾಗಲಿ ನಿರೀಕ್ಷೆ ಮಾಡುವಂತಿಲ್ಲ.

ಶ್ರೀ ಬಿ.ಬಿ. ಶಿವಪ್ಪ : ಅಧ್ಯಕ್ಷರೇ ಉಪಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಎರಡು ವಿಚಾರ ಪ್ರಸ್ತಾಪ ಮಾಡಿದರು. ವೋಲ್ಟೇಜ್ ಇಂಪ್ರೂವ್ ಆಗಿದೆ ಮತ್ತೆ ಸಿಂಗಲ್ ಫೇಸನ್ನು ನಾವು ದಿನಬಿಟ್ಟು ಏನು ಕೊಡುತ್ತಿದ್ದೇವೆ ಅದು ಸಮರ್ಪಕವಾಗಿ ವಿತರಣೆಯಾಗುತ್ತಿದೆ ಅಂತ. ಆದರೆ ನಾನು ಇಷ್ಟು ಮಾತ್ರ ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ವೋಲ್ಟೇಜ್ ತುಂಬ ಹಾಳಾಗಿದೆ. ಹಿಂದಿಗಿಂತ ಹಾಳಾಗಿದೆ. ಇದನ್ನು ತಾವು ಗಮನಿಸಬೇಕು. ಏಕೆಂದರೆ ಕೆಇಬಿಯಲ್ಲಿ ವಿದ್ಯುತ್ ಕೊರತೆ ಇದೆ. ಅದಕ್ಕೆ ಸಹಕಾರ ನಾವೆಲ್ಲ ಕೊಡಲೇಬೇಕು. ಕೇವಲ ಕೊರತೆ ಮಾತ್ರವಲ್ಲ ಸಮರ್ಪಕವಾಗಿ ಚಾಕರಿ ಕೂಡ ಅಲ್ಲಿ ಆಗುವುದಿಲ್ಲ. ನಗರ ಪ್ರದೇಶಗಳಲ್ಲಿ ಪ್ರಾಬ್ಲಂ ಇದೆ. ಗ್ರಾಮಿಣ

ಪ್ರದೇಶದಲ್ಲಿ ಕೇಳುವವರೇ ಇಲ್ಲ. ನೀವು ಕೊಡತಕ್ಕಂತಹ 6ರಿಂದ 7, 8ರಿಂದ 10 ಯಾವುದು 2, 4, ಗಂಟೆ ಕೊಡುತ್ತೀರಿ, ಕೊನೇ ಪಕ್ಷ 10 ರಿಂದ 15 ಸಾರಿ ಅದು ಮಧ್ಯೆ. ಹೋಗುತ್ತದೆ. ಒಟ್ಟಾರೆ ನೀವು ಕೊಡುವ ಎರಡು ಗಂಟೆಯಲ್ಲಿ ಅರ್ಧ ಗಂಟೆ ಕೂಡ ಪವರ್ ಸಂಪೂರ್ಣ ಸಿಗುವುದಿಲ್ಲ. ಆದ್ದರಿಂದ ನಾನು ಕೇಳುತ್ತಿರುವುದು, ಗ್ರಾಮೀಣ ಪ್ರದೇಶಗಳಲ್ಲಿ ತಾವು 24 ಗಂಟೆಗಳಲ್ಲಿ 4 ಗಂಟೆ ಕರೆಂಟ್ ಕೊಡಿ. ನಾವು ಅಳವಡಿಸಿಕೊಳ್ಳುತ್ತೇವೆ. ಆದರೆ ಆ 4 ಗಂಟೆಗಳಲ್ಲಿ ಯಾವ ತೊಂದರೆ ಇಲ್ಲದೆ ಬರುವುದಾದರೆ ನಾವುನಿಜಕ್ಕೂ ಸಂತೋಷ ಪಡುತ್ತೇವೆ. ಮಧ್ಯೆ ನಿಂತು ಹೋಗುವ ವ್ಯವಸ್ಥೆ ಏನಿದೆ ಅದು ಆಗಬಾರದು. ಹಳ್ಳಿಯಲ್ಲಿ ಕೆಇಬಿ ಎಂದರೆ ಕರೆಂಟ್ ಇಲ್ಲ ಬಿಡಿ, ಎಂದು ಹೇಳಲು ಶುರುಮಾಡಿಬಿಟ್ಟಿದ್ದಾರೆ. ಅದು ಸತ್ಯ. ಅದರ ಬಗ್ಗೆ ನಾವೇನೂ ಮಾತನಾಡುವುದೇ ಬೇಡ. ಕೊರತೆ ಇದೆ, ಆದರೆ ಇರುವುದನ್ನು ಸಮರ್ಪಕವಾಗಿ ವಿತರಣೆ ಮಾಡುವ ಜವಾಬ್ದಾರಿ ತಾವ್ಯಾರೂ ತೆಗೆದುಕೊಳ್ಳುತ್ತಿಲ್ಲ. ಇವತ್ತು ಎಲ್ಲದಕ್ಕೂ ಕೊರತೆ ಇದೆ. ಸದನಕ್ಕೂ ಕೊರತೆಯೇ ಸರಿಮಾಡಬೇಕಲ್ಲ. ಇರುವ ವಸ್ತುವನ್ನು ಸರಿಯಾದ ರೀತಿ ವಿತರಣೆ ಮಾಡುವಲ್ಲಿ ಈ ಇಲಾಖೆ ವಿಫಲವಾಗಿದೆ ಎಂದು ಹೇಳಲು ಇಷ್ಟಪಡುತ್ತೇನೆ.

ಶ್ರೀ ಜೆ.ಎಚ್. ಪಟೇಲ್ : ಅವರ ಪ್ರದೇಶದಲ್ಲಿ ಈ ಸಮಸ್ಯೆಗಳಿರಬಹುದು ಇಲ್ಲ ಎನ್ನುವುದಿಲ್ಲ ಅಧ್ಯಕ್ಷರೇ, ಮೂರು ದಿವಸ ವಿದ್ಯುತ್ ಇಲ್ಲದಿದ್ದಾಗಲೆಲ್ಲ ಇದೇ ಶಿವಪ್ಪನವರು ಸುಮ್ಮನೇ ಇದ್ದರು. ನೀವು ಕೆಡಿಸಿದ್ದನ್ನು ಇನ್ನು 10 ವರ್ಷ ಹೋದರೂ ಸರಿಮಾಡುವುದಕ್ಕೆ ಸಾಲದು. ಏಕೆ ಮಾತನಾಡುತ್ತೀರಿ, ನೀವ್ಯಾರು ಮಾತನಾಡಬಾರದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರು ಕೆಡಿಸಿದ್ದನ್ನೇ ನಾವು ಸರಿ ಮಾಡಲು 5 ವರ್ಷ ಬೇಕಾಯಿತು ಮತ್ತೆ ಈಗ ನಮಗೆ ಹೇಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇವರಿಬ್ಬರೂ ಕೆಡಿಸಿದ್ದಕ್ಕೋಸ್ಕರ ಕರ್ನಾಟಕದ ರೈತರು ಕೆಟ್ಟುಹೋಗಿಬಿಟ್ಟರು.

ಶ್ರೀ ಜೆ.ಎಚ್. ಪಟೇಲ್ : ಕೆಇಬಿ ಬಗ್ಗೆ ಶಿವಪ್ಪನವರು ಹೇಳಿದರು, ಕೆಇಬಿಗೂ ಒಂದು ಮಿತಿ ಇಲ್ಲವೇ? ಉತ್ಪಾದನೆ ಇಂಪ್ರೂವ್5 ಆಗದ ಹೊರತು ನಾವು ಏನೇ ತೇಪೆ ಹಚ್ಚಿದರೂ ಅದು ತೇಪೆನೆ ಆಗುವುದು. ಜನರೇಶನ್ ಇಂಪ್ರೂವ್ ಆದಾಗ ನಮ್ಮ ಸಮಸ್ಯೆ ಅರ್ಧ ಕಡಿಮೆಯಾಗುತ್ತದೆ. ತಾವು ಸ್ವಲ್ಪ ಸಹಕರಿಸಬೇಕು.. ಆದರೆ ಕೆಲವಲು ಕಡೆ ತಾವು ಹೇಳಿದಂತೆ um scheduled Interruption ಜಾಸ್ತಿಯಾಗುತ್ತಿದೆ ಅದು ಗಮನಕ್ಕೆ ಬಂದಿದೆ, ಅದನ್ನು ಸರಿಪಡಿಸುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನೂ ಕೈಗೊಳ್ಳುತ್ತೇವೆ. ಸ್ಪೆಸಿಫಿಕ್ಕಾಗಿ ಏನಾದರೂ ನಿಮ್ಮ ಸಜೆಶನ್ ಇದ್ದರೆ I will certaionly take it.

ಪಡಿತರ ಚೀಟಿಗಳ ಕುರಿತು.

157 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಆಹಾರ ಮತ್ತು ನಾಗರೀಕಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೂತನವಾಗಿ ಎಷ್ಟು ಜನರಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. (ಜಿಲ್ಲಾವಾರು ವಿವರ ನೀಡುವುದು)

ಆ) ಎಷ್ಟು ಜನರಿಗೆ ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನರಿಗೆ ನೂತನ ಹಸಿರು ಪಡಿತರ ಚೀಟಿಗಳನ್ನು ಹಂಚಲಾಗಿದೆ.

ಈ) ಈಗಾಗಲೇ ನೀಡಲ್ಪಟ್ಟಿರುವ ಎಷ್ಟು? ಜನರಿಗೆ ಹಸಿರು ಕಾರ್ಡುಗಳನ್ನು ರದ್ದು ಮಾಡಲಾಗಿದೆ ಹಾಗೂ ಯಾವ ಯಾವ ಕಾರಣಗಳಿಗಾಗಿ ರದ್ದು ಮಾಡಲಾಗಿದೆ.

ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯತನದಿಂದಾಗಿ ಬಹಳಷ್ಟು ಕಡುಬಡವರು ಈಗಾಗಲೇ ಹೊಂದಿರುವ ಹಸಿರು ಕಾರ್ಡುನಿಂದ ವಂಚಿತರಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ರಾಜ್ಯದಲ್ಲಿ ದಿನಾಂಕ 31-12-95ರ ಅಂತ್ಯಕ್ಕೆ ವಿವಿಧ ಪಡಿತರ ಚೀಟಿಗಳ ಜಿಲ್ಲಾವಾರು ತಃಖ್ತೆಲಗತ್ತಿಸಿದೆ.

ಆ) ದಿನಾಂಕ 1-4-95 ರಿಂದ ದಿನಾಂಕ 31-1-96ರ ವರೆಗೆ 2,15,609 ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ.

ಇ) ದಿನಾಂಕ 1-4-95 ರಿಂದ 31-12-95ರ ವರೆಗೆ 8,157 ಪಡಿತರ ಚೀಟಿಗಳನ್ನು ನೀಡಿದೆ.

ಈ) ಅಕ್ಟೋಬರ್ 1995ರ ಮಾಹೆಯಲ್ಲಿ ನಡೆದ ಗ್ರಾಮ ಸಭೆಗಳಲ್ಲಿ ಒಟ್ಟು 7,890 ಪಡಿತರ ಚೀಟಿಗಳನ್ನು ರದ್ದು ಪಡಿಸಲಾಗಿದೆ. ಸದರಿ ಪಡಿತರ ಚೀಟಿಗಳನ್ನು ವಾರ್ಷಿಕ ಆದಾಯ ರೂ, 6,400ಕ್ಕಿಂತ ಹೆಚ್ಚಿಗೆ ಇದ್ದವರು ಹಾಗೂ ಮತದಾರರ ಪಟ್ಟಿಯಲ್ಲಿ ದಾಖಲಾಗಿಲ್ಲದಿದ್ದು, ಹಾಗೂ ವಿಳಾಸದಲ್ಲಿ ವಾಸವಿಲ್ಲದ ಕಾರಣಗಳಿಂದ ರದ್ದು ಪಡಿಸಲಾಗಿದೆ.

ಉ) ಇಂತಹ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ.

FOR THE MONTH OF DECEMBER 95

Sl. No.	Districts	Tr Photo Cards	Tr Green Caida	Urban Photo	Urban Green Cards	Rural Green	Rural Saffran	Grand Total
1.	Bangalore(TR)	888331	41400	-	-	-	-	929731
2.	Bangalore (U)	-	-	5476	200	1362219	127653	269548
3.	Bangalore (R)	10446	3305	28065	1866	281144	81333	446159
4.	Belgaum	96832	1402	57783	2445	320708	274935	754105
5.	Bellary	59206	7752	16301	3483	210524	81199	378465
6.	Bidar	24031	331	15502	3879	173405	36330	253478
7.	Bijapur	59996	15986	34400	8817	343686	160810	623695
8.	Chikamagalur	15217	2125	14476	2998	161161	43825	239802
9.	Chitradurga	76655	8782	11417	1936	277197	72634	444621
10	D Kannada	97315	612	25579	3259	67821	192922	487508
11.	Dharwar	165879	10433	38142	15626	352634	143970	726684
12.	Gulbarga	71234	2244	25962	4918	312655	128607	545620
13	Hassan	22279	2610	25917	7240	190810	94807	343663
14.	Kodagu	-	-	6401	-	72370	46007	124778
15.	Kolar	66866	957	28058	1247	300906	94725	492759
16.	Mandya	21982	2790	17305	4441	225903	118373	390794
17.	Mysore	139231	2263	44130	4507	456136	124727	770994
18.	Raichur	41187	13811	12422	2342	290130	106754	466646
19	Shimoga	61863	6515	15110	2520	235496	95133	416637
20.	Tumkur	32989	3515	24220	6006	314746	157859	539335
21.	U. Kannada	29873	508	18201	1829	138723	63076	252210
	Total	20,07,412	1 27,342	4,64,867	79,559	49,62,374	22,55,679	98,97,232

Abstract

Photo Cards	=	24,72,279
Tri-colour	=	51,69,274
Saffran	=	22,55,679
Total	=	98,97,232

ಶ್ರೀ ಕೆ. ಜಯರಾಮಶೆಟ್ಟಿ : ಅಧ್ಯಕ್ಷರೇ ಹೊಸ ಪಡಿತರ ಮತ್ತು ಹಸಿರು ಪಡಿತರ ಚೀಟಿ ಬಗ್ಗೆ ನನ್ನ ಪ್ರಶ್ನೆಗೆ ಉತ್ತರ ನೀಡಿದ್ದಾರೆ. ಅದು ಬಹಳ ವಿರೋಧಾಭಿಪ್ರಾಯಗಳನ್ನು ನೀಡುತ್ತದೆ. ನಾನು ಸಚಿವರಿಗೆ ಪ್ರಶ್ನೆ ಕೇಳುತ್ತಿದ್ದೇನೆ, ಮತದಾರರ ಪಟ್ಟಿಯಲ್ಲಿ ಹೆಸರು ಯಾವುದೇ ಕಾರಣಕ್ಕಾಗಿ ಬಿಟ್ಟುಹೋದಲ್ಲಿ ಅವರನ್ನು ಪಡಿತರ ಚೀಟಿಯಿಂದ ವಂಚಿತರನ್ನಾಗಿ ಮಾಡಿಕೊಂಡಿದ್ದೀರಿ? ಈಗಾಗಲೇ ನಿಮ್ಮ ಹತ್ತಿರ ಸಾಕಷ್ಟು ಮುದ್ರಿತ ಕಾರ್ಡ್ ಇಲ್ಲದ ಕಾರಣಕ್ಕೆ ಅಧಿಕಾರಿಗಳ ಮೂಲಕ ನೀವು ಪಡಿತರ ಸಾಮಗ್ರಿ ವ್ಯವಸ್ಥೆ ಮಾಡಿಕೊಳ್ಳುವುದಕ್ಕಾಗಿ ಇದನ್ನು ಕ್ಯಾನ್ಸಲ್ ಮಾಡಿಸಿಕೊಂಡಿದ್ದೀರಿ? ಅಥವಾ ಆದಾಯ ಮಿತಿಯನ್ನು ಯಾವ ಮಾನದಂಡದಿಂದ ಯಾರ ಮೂಲಕ ಎಷ್ಟು ಸಮಯದಿಂದ ಮಾಡಿಕೊಂಡಿದ್ದೀರಿ? ಗ್ರಾಮಪಂಚಾಯಿತಿ ಕರಣಿಕರ ಮೂಲಕ ಮಾಡಿಸಿಕೊಂಡಿದ್ದೀರೋ? ಜಿಲ್ಲಾಪರಿಷತ್ ತಾಲ್ಲೂಕು ಪಂಚಾಯ್ತಿಗಳಲ್ಲಿ ಕೂರಿಸಿ ಮಾತನಾಡಿಸಿದ್ದೀರೋ?

ಶ್ರೀ ಎಸ್. ನಂಜಪ್ಪ : ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿದ ಉಪಪ್ರಶ್ನೆಗಳು, ಕಾರ್ಡಿಲ್ಲದ ಕಾರಣ ಕಾರ್ಡ್ ವಿತರಣೆ ಮಾಡಿಲ್ಲವೆಂದು ಹೇಳಿರುವುದು ಸರಿಯಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಹಸಿರು ಕಾರ್ಡ್‌ಗಾಗಿ 29 ಸಾವಿರ ಅರ್ಜಿಗಳು ಬಂದಿವೆ ಆದರೆ ಅದರಲ್ಲಿ 50 ಭಾಗವನ್ನು ಪರಿಶೀಲನೆ ಮಾಡಿದ್ದೇವೆ. ಇನ್ನು 50 ಭಾಗ ಪರಿಶೀಲನೆಯ ಹಂತದಲ್ಲಿದೆ. ಪರಿಶೀಲನೆ ನಂತರ ಅನರ್ಹರನ್ನು ಪಟ್ಟಿಯಿಂದ ತೆಗೆದುಹಾಕಿ ಅರ್ಹರಿಗೆ ಹಸಿರು ಕಾರ್ಡ್ ಕೊಡಬೇಕಾದ ಕಾರ್ಯ ಹಮ್ಮಿಕೊಂಡಿದ್ದೇವೆ. ಕಾರ್ಡಿಲ್ಲದೆ ಹಸಿರು ಕಾರ್ಡ್ ಕೊಟ್ಟಿಲ್ಲವೆಂಬುದಾಗಲಿ ಅಥವಾ ಕರಣಿಕರಿಗೆ ನಾವು ಮುನ್ಸೂಚನೆ ನೀಡಿದಿದ್ದಕ್ಕೆ ಅವರು ನಮಗ ಸಹಕಾರ ಕೊಡುತ್ತಿಲ್ಲವೆಂಬುದು ಸರಿಯಲ್ಲ. ಪರಿಶೀಲನೆ ನಡೆದಿದೆ ಫಲಾನುಭವಿಗಳಿಗೆ ನಾವು ಖಂಡಿತವಾಗಿಯೂ ಹಸಿರು ಕಾರ್ಡ್‌ಗಳನ್ನು ಕೊಡುತ್ತೇವೆ.

ಶ್ರೀ ಕೆ. ಜಯರಾಂ ಶೆಟ್ಟಿ : ಅಧ್ಯಕ್ಷರೇ ಮತದಾರರ ಪಟ್ಟಿ ಬಗ್ಗೆ ತಮ್ಮ ಗಮನಕ್ಕೆ ಒಂದು ವಿಚಾರವನ್ನು ನೇರವಾಗಿ ತರುತ್ತಿದ್ದೇನೆ. ಮಂಗಳೂರು ತಾಲ್ಲೂಕು ಬೋರ್ಡ್ ಸದಸ್ಯರು ಉಮಾನಾಥನಾಯಕ್ ಅಂತ. ಮತದಾರರ ಪಟ್ಟಿಯಲ್ಲಿ ಅವರ ಹೆಸರಿಗೆ ಬದಲು ಬರ್ಸತ್‌ನಾಯಕ್ ಅಂತ ಬಿದ್ದಿತ್ತು. ಈಗಿನ ಹೊಸ ಪಟ್ಟಿಯಲ್ಲಿ ಉಮಾನಾಥನಾಯಕ್ ಬದಲು ಉಮರ್ ಬ್ಯಾರಿ ಸನ್‌ಆಫ್ ಬರ್ಸತ್‌ನಾಯಕ್ ಅಂತ ಬಂದಿದೆ. ಆ ಒಂದೇ ಕಾರಣಕ್ಕಾಗಿ ಉಮಾನಾಥ ನಾಯಕರ ಪಡಿತರ ಚೀಟಿಯನ್ನು ರದ್ದು ಮಾಡಿದ್ದಾರೆ. ಈ ತರಹದ ನೂರಾರು ಉದಾಹರಣೆಗಳು ಮತದಾರರ ಪಟ್ಟಿಯಲ್ಲಿವೆ. ಆದ್ದರಿಂದ ತಾವು ಮತದಾರರ ಪಟ್ಟಿಯನ್ನು ಮಾನದಂಡ ಮಾಡಿಕೊಂಡಿದ್ದರೆ ಅದು ತಪ್ಪಾಗುತ್ತದೆ. ಎರಡನೆಯದಾಗಿ ಹಸಿರು ಕಾರ್ಡ್ ಬಗ್ಗೆ ಬಹಳಷ್ಟು ಜನರಿಗೆ ತೊಂದರೆಯಾಗಿದೆ. ಹೊಸ ಪಡಿತರ ಚೀಟಿಗಳನ್ನು ಶ್ರೀಮಂತ ವರ್ಗಕ್ಕೆ ಕೊಟ್ಟಿದ್ದೀರಿ, ಕಡುಬಡವರನ್ನು ಇದರಿಂದ ವಂಚಿತಮಾಡಿದ್ದೀರಿ. ವಿಶೇಷವಾಗಿ ಗ್ರಾಮ ಕರಣಿಕರು ಕೂತಲ್ಲೆ ಲಿಸ್ಟ್ ಮಾಡಿದ್ದಾರೆ. ದಯವಿಟ್ಟು ಸಮಗ್ರವಾಗಿ ತಾವು ಪರಿಶೀಲನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಸ್. ನಂಜಪ್ಪ : ಅಧ್ಯಕ್ಷರೇ ಆ ರೀತಿ ಅನರ್ಹರಿಗೇನಾದರೂ ಹಸಿರು ಕಾರ್ಡ್ ಕೊಟ್ಟಿದ್ದರೆ ಅವರನ್ನು ಖಂಡಿತ ಪಟ್ಟಿಯಿಂದ ತೆಗೆದುಹಾಕುತ್ತೇವೆ. ಮತ್ತು ನಿರ್ದಿಷ್ಟ ಪ್ರಕರಣಗಳನ್ನು ಗೌರವಾನ್ವಿತ ಸದಸ್ಯರು ತಿಳಿಸಿದಲ್ಲಿ ಖಂಡಿತವಾಗಿ ಅರ್ಹರಿಗೆ ಹಸಿರು ಕಾರ್ಡ್ ಕೊಡಿಸುವ ವ್ಯವಸ್ಥೆ ಮಾಡುವುದಾಗ ಆಶ್ವಾಸನೆ ಕೊಡುತ್ತೇವೆ.

ಶ್ರೀ ಕೆ.ವಿ. ಸದಾನಂದಗೌಡ : ಅಧ್ಯಕ್ಷರೇ ವಾರ್ಷಿಕ ಆದಾಯವನ್ನು 5400 ರೂಗಳಿಗೆ ನಿಗದಿಪಡಿಸಿದ್ದಾರೆ. ಪ್ರಾಯಶಃ 6400 ವಾರ್ಷಿಕ ಆದಾಯ ಇರುವವರು

ಯಾರೂ ನಮ್ಮ ಏರಿಯಾದಲ್ಲಿ ಸಿಕ್ಕುವುದಿಲ್ಲ. ಏಕೆಂದರೆ ವಸ್ತುಗಳ ಬೆಲೆ ಕೂಡ ಅಷ್ಟೇ ಏರಿದೆ. ಅದೇ ರೀತಿಯಲ್ಲಿ 6400 ವಾರ್ಷಿಕ ಆದಾಯವನ್ನು 12 ಸಾವಿರಕ್ಕೆ ಏರಿಸುವ ಇರಾದೆಯೇನಾದರೂ ಇದೆಯೋ ಈ ವಾರ್ಷಿಕ ಆದಾಯವನ್ನು 6400 ರಿಂದ 12 ಸಾವಿರಕ್ಕೆ ಏರಿಸಬೇಕೆಂದು ಕಳಕಳಿಯ ವಿನಂತಿ ಮಾಡುತ್ತೇನೆ.

ಶ್ರೀ ಎಸ್. ನಂಜಪ್ಪ : ಅಧ್ಯಕ್ಷರೇ ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಶಿವರಾಂ : ಅಧ್ಯಕ್ಷರೇ, ಸಚಿವರು ಹಾಸನದ ಉಸ್ತುವಾರಿ ಸಚಿವರೂ ಹೌದು. ಅವರನ್ನು ಈಗಾಗಲೇ ಅರ್ಹ ಅನರ್ಹ ಫಲಾನುಭವಿಗಳನ್ನು ಯಾವ ರೀತಿ ವಿಂಗಡಣೆ ಮಾಡಿದ್ದಿರೆಂದು ಕೇಳಿದ್ದೆ. ಏನಾಗಿದೆ ಎಂದರೆ ಏನು 1.94 ಲಕ್ಷ ಕಾರ್ಡ್ ಕೊಟ್ಟಿದ್ದರು ಅದರಲ್ಲಿ ಸಾರಾಸಗಟಾಗಿ ಜಿಲ್ಲೆಯಲ್ಲಿ 10 ಪರ್ಸೆಂಟ್ ಕಟ್ ಮಾಡಿದ್ದಾರೆ. ಅದನ್ನು ಯಾವ ಆಧಾರದ ಮೇಲೆ ಮಾಡಿದಿರಿ ಎಂಬುದನ್ನು ಸಮರ್ಪಕ ಉತ್ತರ ಸಿಕ್ಕಿಲ್ಲ ಏಕೆಂದರೆ ಯಾವ ಬಡವ ಇದ್ದಾನೆ ಅವನನ್ನು ಆ 10 ಪರ್ಸೆಂಟ್‌ನಲ್ಲಿ ಸೇರಿಸುವುದು ಮಾಡಿದ್ದಾರೆ 6400ಕ್ಕಿಂತ ಹೆಚ್ಚು ಆದಾಯ ಇರುವವರಿಗೆ ಕಾರ್ಡ್ ಕೊಟ್ಟಿದ್ದಾರೆ. ಆ 10 ಪರ್ಸೆಂಟ್ ಕೊಡುತ್ತೇವೆಂದು ಹೇಳಿದ್ದರೂ ಇನ್ನೂ ಕಡುಬಡವರಿಗೆ ಕೊಡುವುದು ತಪ್ಪುತ್ತಿದೆ. ಇದನ್ನು ಹೇಗೆ ಬಗೆಹರಿಸುತ್ತೀರಿ?

ಶ್ರೀ ಎಸ್. ನಂಜಪ್ಪ : ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ 91ರ ಸೆನ್ಸಸ್‌ಪ್ರಕಾರ 81 ಲಕ್ಷ ಕುಟುಂಬಗಳಿವೆ, ಒಂದು ವರ್ಷಕ್ಕೆ ಎರಡೂವರೆ ಪರ್ಸೆಂಟ್ ಕುಟುಂಬಗಳು ಜಾಸ್ತಿ ಆಗುತ್ತವೆ ಎಂದರೂ ಈಗ 92 ಲಕ್ಷ ಕುಟುಂಬಗಳಾಗುತ್ತವೆ. ಆದರೆ ನಾವು ಕೊಟ್ಟಿರುವ ಕಾರ್ಡ್‌ಗಳು 98 ಲಕ್ಷ. ಪಟ್ಟಣ ಮತ್ತು ಹಳ್ಳಿಗಳ ಅರ್ಜಿದಾರರ ಪಟ್ಟಿ ನಾವು ಪರಿಶೀಲನೆ ಮಾಡಿದಾಗ ಪುನಃ 22 ಲಕ್ಷ ಹೊಸ ಪಡಿತರ ಚೀಟಿಗಳಿಗಾಗಿ ಅರ್ಜಿಗಳಿ ಬಂದಿವೆ. ಅಂದರೆ 1.20 ಕೋಟಿ ಕುಟುಂಬಗಳಾಗುತ್ತವೆ. ಆದರೆ ಸೆನ್ಸಸ್ ಪ್ರಕಾರ 92 ಲಕ್ಷ ಕುಟುಂಬಗಳಿವೆ. ಸುಮಾರು 28 ಲಕ್ಷ ಕುಟುಂಬಗಳ ಅರ್ಜಿಗಳು ಬಂದಾಗ ಅರ್ಹರು ಯಾರು ಅನರ್ಹರು ಯಾರು ಎಂದು ಪರಿಶೀಲನೆ ನಡೆಸುವಾಗ ಕೆಲವವು ಸತ್ತುಹೋಗಿರುತ್ತಾರೆ ಕೆಲವರು ಬೋಗಸ್‌ನವರು ಇರುತ್ತಾರೆ. ಆದ್ದರಿಂದ ಚೆನ್ನಾಗಿ ಪರಿಶೀಲನೆ ಮಾಡಿ ಕಾರ್ಡ್ ವಿಲೇವಾರಿ ಮಾಡಬೇಕೆಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ವಿನಾಃ 10 ಪರ್ಸೆಂಟ್ ಕಮ್ಮಿ ಮಾಡಬೇಕೆಂಬುದು ಸರ್ಕಾರ ದ ಉದ್ದೇಶವಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೇ ಹಿಂದೆ ಹಸಿರು ಕಾರ್ಡ್ ಕೊಡುವ ಸಂದರ್ಭದಲ್ಲಿ ಐಆರ್‌ಡಿಪಿಯಲ್ಲಿ ವರಮಾನ ಮಿತಿ ಏನು ಇಟ್ಟುಕೊಂಡಿದ್ದರು ಈಗ ಅದನ್ನು ಕೈ ಬಿಟ್ಟಿದ್ದಾರೆ. ಈಗ ಐಆರ್‌ಡಿಪಿಯ ಆದಾಯದ ಮಿತಿ 11 ಸಾವಿ. ಆ ದೃಷ್ಟಿಯಿಂದ ಐಆರ್‌ಡಿಪಿಯಲ್ಲಿ ಏನು ಆದಾಯಮಿತಿ ಇಟ್ಟುಕೊಂಡಿದ್ದಾರೆ ಅದನ್ನೇ ಈ ಪಡಿತರ ಹಸಿರು ಕಾರ್ಡ್ ಕೊಡುವವರಿಗೂ ಸರ್ಕಾರ ಏನಾದರೂ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಎಸ್. ನಂಜಪ್ಪ : ಐಆರ್‌ಡಿಪಿ ಯೋಜನೆ ಫಲ ಪಡೆದುಕೊಳ್ಳಲಿಕ್ಕೆ ನಾವು ಪಟ್ಟಿ ಮಾಡಿದಾಗ 6400ರೂ ಕ್ಕಿಂತ ಕಡಿಮೆ ಇರುವ ಪಟ್ಟಿಗಿಂತಲೂ ಕಮ್ಮಿ ಇದೆ. ಐಆರ್‌ಡಿಪಿ ಫಲಾನುಭವಿಗಳ ಸಂಖ್ಯೆ ಕಮ್ಮಿ 6400 ಆದಾಯಕ್ಕಿಂತ ಕಡಿಮೆ ಇರುವವರ ಹಸಿರು ಕಾರ್ಡ್ ಫಲಾನುಭವಿಗಳ ಸಂಖ್ಯೆ ಜಾಸ್ತಿ ಇದೆ. ಐಆರ್‌ಡಿಪಿ ಯೋಜನೆಯನ್ನು ಪರಿಗಣನೆಗೆ ತೆಗೆದುಕೊಂಡಾಗ ಆ ಯೋಜನೆಯಲ್ಲಿ ಸಂಖ್ಯೆ ಪ್ರಮಾಣ ಕಡಿಮೆಯಾಗುವುದರಿಂದ ಈ ಸರ್ಕಾರದವರು ಬಡವರ ಸಂಖ್ಯೆ ಕಡಿಮೆ ಮಾಡುತ್ತಿದ್ದಾರೆಂಬ ಆರೋಪವೂ ಈ ಸರ್ಕಾರದ ಮೇಲೆ ಬರುತ್ತದೆ. ಐಆರ್‌ಡಿಪಿ ನಾಲಕ್ಕೋಸ್ಕರ

ಮಾಡಿದಂತಹ ಪಟ್ಟಿನೆ ವಿನಾಃ ಅದನ್ನು ನಾವು ಪರಿಗಣನೆಗೆ ತೆಗೆದುಕೊಂಡರೆ ಬಹಳ ಬಡವರು ಅದರಿಂದ ವಂಚಿತರಾಗುತ್ತಾರೆಂದು ತಿಳಿಸಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇದು ರಾಷ್ಟ್ರವ್ಯಾಪಿ ಯೋಜನಾ ಆಯೋಗದವರು ಬಡತನ ರೇಖೆಗಿಂತ ಕೆಳಗಿರುವವರು ಯಾರು ಎಂದು ಗುರ್ತಿಸುವಾಗ ಆ ಮಿತಿಯನ್ನು ನಿಗದಿಪಡಿಸಿದ್ದರು. ನಾವು ಹಸಿರು ಕಾರ್ಡನ್ನು ಕೊಡುವುದು ಕೂಡ ಬಡವರಿಗಾಗಿ. ರಾಷ್ಟ್ರವ್ಯಾಪಿ ಒಂದು ಅಳತೆಗೋಲು ಇಟ್ಟುಕೊಂಡಿರುವಾಗ ಅದನ್ನೇ ತಾವೂ ಪರಿಗಣಿಸಬೇಕೆಂದು ಕೋರುತ್ತೇನೆ.

ಶ್ರೀ ಎಸ್. ನಂಜಪ್ಪ : ಮಾನ್ಯತ ಗೌರವಾನ್ವಿತ ಸದಸ್ಯರಿಗೆ ನಾನು ಉತ್ತರ ಹೇಳಲು ಇಷ್ಟಪಡುತ್ತೇನೆ. ಐ ಆರ್ ಡಿ ಪಿ ಯೋಜನೆಯಲ್ಲಿರುವ ಪಟ್ಟಿ ಸಂಖ್ಯೆ ಕಡಿಮೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಆ ನಾರ್ಮ್ಸ್ ಅನ್ನು 11,800 ರೂಪಾಯಿ ಆದಾಯ ಇರುವವರಿಗೂ ಹಸಿರು ಕಾರ್ಡ್ ಕೊಡಬೇಕೆಂಬ ಯೋಜನೆ ಸರಕಾರದ ಪರಿಶೀಲನೆಯಲ್ಲಿದೆ. ಆದ್ದರಿಂದ ಬಡವರಿಗೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಡಾ|| ಎಂ.ಪಿ. ಕರ್ಕಿ : 11,800 ರೂ. ಆದಾಯೆ ಇರುವವರಿಗೂ ಕಾರ್ಡುಮಾಡಲು ಸರಕಾರ ಈಗಾಗಲೇ ಒಪ್ಪಿದೆ. ಬರೀ ಐ ಆರ್‌ಡಿಸಿಗೆ ಅಷ್ಟೇ ಅಲ್ಲ, ಸಮಾಜಕಲ್ಯಾಣ ಇಲಾಖೆ ಕೂಡ ಇದನ್ನು ಒಪ್ಪಿದೆ. ಫ್ರೀಷಿಪ್ ಕೊಡಲಿಕ್ಕೆ 3600 ರಿಂದ 11,500 ಎಂದು ಸರಕಾರ ಒಪ್ಪಿಕೊಂಡಿದೆ. ಸರ್ಕಾರ ಒಂದಕ್ಕೆ ಒಪ್ಪಿದಾಗ ಮತ್ತೊಂದಕ್ಕೆ ಪರಿಶೀಲನೆ ಮಾಡುವ ಅವಶ್ಯಕತೆ ಇಲ್ಲ, ಬಡತನದ ರೇಖೆ ಎಂದು 11,800 ನಿಗದಿಮಾಗಿರಬೇಕಾದರೆ ಅದಕ್ಕಿಂತ ಕೆಳಗೆ ಇರತಕ್ಕಂತಹವರಿಗೆ........

ಅಧ್ಯಕ್ಷರು : ಈ ಸಮಸ್ಯೆಗೆ ಮಾನ್ಯ ತಿಮ್ಮಪ್ಪನವರು ಹೇಳಿದರು. ಬಡತನದ ರೇಖೆ ಗೀಖೆ ಎಲ್ಲ ಯಾರು ಗೊತ್ತೆ ಎಳೆಯುವುದು ಅವರ್‍ಯಾರಿಗೂ ಬಡತನವೇ ಗೊತ್ತಿಲ್ಲ ಎಲ್ಲೋ ಕುಳಿತುಕೊಂಡು ಬರೆ ಎಳೆಯುವುದು. ಗೆರೆ ಎಳೆಯುವುದು ಅಂದರೆ ಅದೇ......

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭ ಮಾಡಿದ್ದಾರೆ. ಅವರು ಕೊಟ್ಟಿರತಕ್ಕಂತಹ ಅಂಕಿ ಅಂಶಗಳ ಪ್ರಕಾರ ಇದುವರೆಗೂ ರಾಜ್ಯದಲ್ಲಿ ಫೋಟೋ ಕಾರ್ಡ್ಸ್ 24,72,279 ತ್ರಿವರ್ಣ ಬಣ್ಣದ ಕಾರ್ಡುಗಳು 51,69,274 ಸ್ಯಾಫ್ರನ್ ಕಾರ್ಡುಗಳು 22,55,679. ಎಲ್ಲಾ ಜನರಿಗೂ ಕಾರ್ಡನ್ನು ಕೊಡಲು ನಿಮಗೆ ಇನ್ನೂ ಎಷ್ಟು ವರ್ಷಗಳು ಎಷ್ಟು ತಿಂಗಳುಗಳು ಬೇಕಾಗುತ್ತದೆಂಬುದನ್ನು ತಿಳಿಸಬೇಕು. ಇವರೇನು ನಾರ್ಮ್ಸ್ ಫಿಕ್ಸ್ ಮಾಡಿದ್ದಾರೆ ಅದರ ಪ್ರಕಾರ ಅಕ್ಟೋಬರ್ ತಿಂಗಳಿನಿಂದ ಎಲ್ಲರಿಗೂ ಕಾರ್ಡನ್ನು ಕೊಡಲಿಕ್ಕೆ ಸಾಧ್ಯವಾಗಿಲ್ಲ, ಕೋಲಾರ ಜಿಲ್ಲೆಯಲ್ಲಿ ಇದರ ಪರಿಸ್ಥಿತಿ ಬಹಳ ಕೆಟ್ಟದಾಗಿದೆ. ಡಿಸೆಂಬರ್ 95 ರ ವರೆಗೆ 957 ಹಸಿರು ಕಾರ್ಡ್ ಅನ್ನು ಕೊಟ್ಟಿದ್ದಾರೆ. 23058 ನಗರ ಪ್ರದೇಶದಲ್ಲಿ ಕೊಟ್ಟಿದ್ದಾರೆ. ಹಸಿರು ಕಾರ್ಡ್ ಕೊಟ್ಟಿರತಕ್ಕಂಥಾದ್ದು 1,247. ಎಲ್ಲರಿಗೂ ಕಾರ್ಡ್ ಅನ್ನು ಕೊಡಲು ಸರಕಾರಕ್ಕೆ ಇನ್ನು ಎಷ್ಟು ದಿವಸ ಬೇಕು? ಇವರ ಇಲಾಖೆಯ ಅಧಿಕಾರಿಗಳೇನು ಕೆಲಸ ಮಾಡುತ್ತಿದ್ದಾರೆ. ಅಕ್ಟೋಬರ್ 95 ರಲ್ಲಿ ಪ್ರಾರಂಭ ಮಾಡಿದ್ದಾರೆ ಈಗ ಮಾರ್ಚ್ ಹತ್ತಿರ ಬರುತ್ತಿದೆ. ಆದರೂ ಎಲ್ಲರಿಗೂ ಕಾರ್ಡ್ ಹಂಚಿಕೆಯಾಗಿಲ್ಲ, ನಿಮ್ಮ ಇಲಾಖೆಯವರು ಏನು ಮಾಡುತ್ತಿದ್ದಾರೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಬೇಕು. ಮತದಾರರ ಪಟ್ಟಿಯಲ್ಲಿ ಗುರುತಿಸಿರತಕ್ಕಂತಹವರನ್ನು ಮತದಾರರ ಪಟ್ಟಿ ಪ್ರಕಾರ ಕಾರ್ಡ್ಸ್ ಕೊಡಬೇಕೆಂದು ಇದೆ. ಅದರಲ್ಲಿ ಒಂದಾಗಿದೆ. ಮತದಾರರ ಪಟ್ಟಿಯನ್ನು ಬರೆಯತಕ್ಕಂತಹ ಸಂದರ್ಭದಲ್ಲಿ ಕೆಲವು ಅವಿಭಕ್ತ ಕುಟುಂಬಗಳು ಇರುತ್ತವೆ ಆ ಪಟ್ಟಿ ತಯಾರಾದನಂತರ ವಿಭಕ್ತಿ

ಕುಟುಂಬಗಳು ಆಗುತ್ತವೆ. ಅವರನ್ನು ಅದರಲ್ಲಿ ಬಿಟ್ಟಿದ್ದಾರೆ. ಎಫ್.ಡಿ.ಡಿಪ್ಪೋ ನಡೆಸತಕ್ಕಂತಹವರಿಗೆ ಕಾರ್ಡ್ಸ್ ಪಟ್ಟಿ ಮಾಡಲಿಕ್ಕೆ ಕೊಟ್ಟಿದ್ದಾರೆ. ಆ ಎಫ್.ಡಿ. ಡಿಪ್ಪೋ ನಡೆಸತಕ್ಕಂತಹ ಜನ ಎಂಥವರೆಂದು ನಿಮಗೆಲ್ಲ ಗೊತ್ತಿದೆ. ಅವರಿಗೆ ಯಾರಾದರೂ ಆಗದೇ ಇರುವವರು ಇದ್ದರೆ ಆ ಪಟ್ಟಿಯಲ್ಲಿ ಅವರ ಹೆಸರನ್ನು ಬರೆಯುವುದೇ ಇಲ್ಲ, ಇಂತಹ ಸಮಸ್ಯೆಗಳು ಬರುತ್ತವೆ.

ಅಧ್ಯಕ್ಷರು : ಪ್ರಶ್ನೋತ್ತರದಲ್ಲಿ ಸಪ್ಲಿಮೆಂಟರಿ ಕೇಳಿ ಅಂದರೆ ನೀವು ಚರ್ಚೆ ಮಾಡುತ್ತಿದ್ದೀರಲ್ಲ, you cannot debate. It becomes very difficult for me to conduct.

ಶ್ರೀ ಎಸ್. ನಂಜಪ್ಪ : ರಾಜ್ಯದಾದ್ಯಂತ ಹೊಸ ಹಸಿರು ಕಾರ್ಡಿಗಳಿಗೋಸ್ಕರ 14, 633 ಅರ್ಜಿಗಳು ಬಂದಿವೆ. ಅದರಲ್ಲಿ ಈಗಾಗಲೇ 50 ಭಾಗವನ್ನು ನಾವು.......

ಅಧ್ಯಕ್ಷರು : ಅವರು ಹೇಳುತ್ತಿರುವುದೇನು ನಾವು ಹೇಳದೇ ಇರುವುದೇನು? ಪರಿಣಾಮಕಾರಿಯಾಗಿ ಈ ಕೆಲಸ ನಡೆಯುತ್ತಿಲ್ಲ. ದಯಮಾಡಿ ನೀವು ಎಲ್ಲರನ್ನು ಕರೆಯಿಸಿ ಚರ್ಚೆ ಮಾಡಿ. ನಮಗೆಲ್ಲಾ ಬಹಳ ತೊಂದರೆಯಾಗುತ್ತದೆ. ನಾನು ಹೇಳುವ ಹಾಗಿಲ್ಲ ಅವರು ಹೇಳುತ್ತಿದ್ದಾರೆ.

ಶ್ರೀ ಎಸ್. ನಂಜಪ್ಪ : ಮುಂದಿನ ತಿಂಗಳ ಅಖೈರಿಗೆ ಅರ್ಹರಿಗೆ ಹಸಿರು ಕಾರ್ಡ್ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶರಾವತಿ ನದಿ ಸೇತುವೆ ದುರಸ್ತಿ

225 - ಡಾ|| ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿಯಲ್ಲಿ ಶರಾವತಿ ನದಿಗೆ ಸೇತುವೆ ದುರಸ್ತಿ ಕಾಮಗಾರಿಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತಿದೆಯೇಯ

ಆ) ಈ ದುರಸ್ಥಿ ಕಾಮಗಾರಿಗೆ ಮಂಜೂರಾದ ಹಣ ಎಷ್ಟು. ಬಿಡುಗಡೆಯಾದ ಹಣ ಎಷ್ಟು.

ಇ) ಈ ದುರಸ್ತಿ ಕಾಮಗಾರಿಯು ಯಾವಾಗ ಮುಕ್ತಾಯಗೊಳ್ಳುತ್ತದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿಯವರು) :

ಅ) ಕೇಂದ್ರ ಸರ್ಕಾರದ ಮಂಜೂರಾತಿ ದೊರೆತಿದೆ.

ಆ) ದುರಸ್ತಿ ಕಾಮಗಾರಿಗೆ ಮಂಜೂರಾದ ಅಂದಾಜು ಮೊತ್ತ ರೂ. 675.00 ಲಕ್ಷ ಬಿಡುಗಡೆಯಾದ ಹಣ ರೂ. 18.00 ಲಕ್ಷ.

ಇ) ದುರಸ್ತಿ ಕಾಮಗಾರಿಯನ್ನು ಮೇ 1997ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಡಾ|| ಯು. ಚಿತ್ತರಂಜನ್ : ಶರಾವತಿ ಸೇತುವೆ ಬಗ್ಗೆ ಮಾನ್ಯ ಅಧ್ಯಕ್ಷರು ಮೊನ್ನೆ ಸಾಕಷ್ಟು ಸಮಯವನ್ನು ಕೊಟ್ಟಿದ್ದಾರ್. ಅದಕ್ಕಾಗಿ ಮಾನ್ಯ ಅಧ್ಯಕ್ಷರೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದಕ್ಕೆ ಪೂರಕವಾಗಿ ಒಂದೆರಡು ವಿಷಯಗಳನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ದುರಸ್ತಿ ಕಾಮಗಾರಿಗೆ, ಮಂಜೂರಾದ ಅಂದಾಜು ಮೊತ್ತ 675 ಲಕ್ಷ ಎಂದು ಉತ್ತರದಲ್ಲಿ ಇದೆ. ಅಲ್ಲಿ ನಮಗೆ ತಿಳಿಸಿದ್ದು 18 ತಿಂಗಳಲ್ಲಿ ಕೆಲಸ ಆಗುತ್ತದೆಂದು. ಹೇಳಿ ತಾವು ಇಲ್ಲಿ 1997ನೇ ಇಸವಿ ಎಂದು ಕೊಟ್ಟಿದ್ದೀರಿ. ಹಾಗಾಗಿದೆ ನಾವು ಎರಡು ವರ್ಷವೆಂದು ತಿಳಿದುಕೊಳ್ಳಬೇಕಾಗುತ್ತದೆ. 675 ಲಕ್ಷದಲ್ಲಿ 18 ಲಕ್ಷ ಮಾತ್ರ ಬಿಡುಗಡೆಯಾಗಿದೆ. ವಸ್ತು ಸ್ಥಿತಿ ಏನು ಇದೆ ಎಂದು ನಿನ್ನೆ ಕೂಡ ನಾವು ಮತ್ತು ಮಾನ್ಯ ಕರ್ಕಿಯವರು ನೋಡಿ ಬಂದಿದ್ದೇವೆ. ನೂರು

ಮೀಟರ್ ಕೂಡ ಅಲ್ಲಿ ಕೆಲಸ ಆಗಿಲ್ಲ ಅಲ್ಲ ಒಂದು ಕಿಲೋ ಮೀಟರ್ ಉದ್ದದ ಸೇತುವೆಯಲ್ಲಿ ನೂರು ಮೀಟರ್ ಕೂಡ ಕೆಲಸ ಅಗಿಲ್ಲ. ಎಲ್ಲಾ ಆದ ಮೇಲೆ ಇದಕ್ಕೆ ಸಮಜಾಯಿಷಿಏನು ಕೊಟ್ಟಿದ್ದರು ಅಂದರೆ ಇದು ನಮಗೆ ಸಂಬಂಧ ಇಲ್ಲ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದು ಎಂದು ಹೇಳಿದರು. ಜಿಲ್ಲಾಧಿಕಾರಿಯವರು ನಮ್ಮವರು. ಟ್ರಾಫಿಕ್ ಕಂಟ್ರೋಲ್ ಆರ್ಡರ್ ಕೊಟ್ಟವರು ಜಿಲ್ಲಾಧಿಕಾರಿಗಳು ಅದನ್ನು ಸೂಪರ್‌ವೈಸ್ ಮಾಡುವವರು ಯಾರು? ನ್ಯಾಷನಲ್ ಹೈವೇ ಎಕ್ಸಿಕ್ಯುಟಿವ್ ಇಂಜನಿಯರ್ ನಮ್ಮವರು. ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರು ನಮ್ಮವರು. ಕೇಂದ್ರ ಸರಕಾರವನ್ನು ತೋರಿಸಲಿಕ್ಕೆ ಮಾತ್ರ. ರಾಜ್ಯ ಸರ್ಕಾರದ ಪಾತ್ರ ಇದರಲ್ಲಿ ಏನು ಇದೆ.? ರಾಜ್ಯ ಸರ್ಕಾರದ ಇದನ್ನು ಒತ್ತಾಯಿಸುತ್ತದೆಯೇ? ಇದರ ಬಗ್ಗೆ ಬೇಕಾದರೆ ಟೆಕ್ನಿಕಲ್ ಒಪೀನಿಯನ್ ತೆಗೆದುಕೊಳ್ಳಿ. ನಿಮ್ಮ ಎಕ್ಸ್‌ಪರ್ಟ್ ಮತ್ತು ಕೇಂದ್ರದ ಎಕ್ಸ್‌ಪರ್ಟ್ಸ್ ಅನ್ನು ಕೂರಿಸಿ ಕೊಂಡು 6 ಟನ್ ಇದ್ದುದನ್ನು 8 ಟನ್ ಮಾಡಲಿಕ್ಕೇನು ತೊಂದರೆ ಏನಿದೆ?

ಅಧ್ಯಕ್ಷರು : ಮೊನ್ನೆ ಇದರ ಬಗ್ಗೆ ಚರ್ಚೆಯಾದಾಗ ಮಾನ್ಯ ಮುಖ್ಯ ಮಂತ್ರಿಗಳು ನೀವು ಹೇಳಿದಂತಹ ಅಂಶ ವರದಿಯಲ್ಲಿ ಇರುವುದಾದರೆ ಅದನ್ನು ತರಿಸಿ ಕೂಡಲೇ ಕ್ರಮ ತೆಗೆದು ಕೊಳ್ಳುತ್ತೇನೆಂದು ಹೇಳಿದ್ದಾರೆ. ಮತ್ತೆ ಅದರ ಪುನರ್ ಪ್ರಸ್ತಾಪನೇ ಬೇಕಾಗಿಲ್ಲ, ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ.

ಡಾ|| ಯು. ಚಿತ್ತರಂಜನ್ : ರಾಜ್ಯ ಸರ್ಕಾರದ ಜವಾಬ್ದಾರಿ ಬಗ್ಗೆ ನಮಗೆ ಅಶ್ವಾಸನೆ ಕೊಡಲಿ.

ಅಧ್ಯಕ್ಷರು : ಪೂರ್ಣ ಜವಾಬ್ದಾರಿಯಿಂದ ಕೆಲಸ ಮಾಡುತ್ತೇವೆಂದು ಹೇಳಿ.

ಡಾ|| ಯು. ಚಿತ್ತರಂಜನ್ : ನೀವೂ ಕೂಡ ಒಂದು ಸಲ ಅಲ್ಲಿಗೆ ಬರಬೇಕು.

ಡಾ|| ಎಂ.ಪಿ. ಕರ್ಕಿ : ಟೆಸ್ಟ್ ಆಗಿ ಎರಡು ತಿಂಗಳು ಕಳೆದು ಹೋಯಿತು. ಆ ಟೆಸ್ಟ್ ಆದ ಮೇಲೆ ಇನ್ನೂ ಕೂಡ ಅವರಿಗೆ ಫೈನಲ್ ಡ್ರಾಯಿಂಗ್ ಕೊಟ್ಟಿಲ್ಲ ಕೆಲಸ ಪ್ರಾರಂಭ ವಾಗಿಲ್ಲ, ಕೆಲಸ ಪ್ರಾರಂಭವಾಗಿದೆ ಎಂದು ಹೇಳುತ್ತಾರೆ. ಅಲ್ಲಿ 10-15 ಜನ ಡ್ರಿಲ್ಲಿಂಗ್ ಮಾಡುತ್ತಿದ್ದಾರೆ. ಅಲ್ಲಿ ಇಲ್ಲಿ ಕಾಂಕ್ರೀಟ್ ಆಗೆಯುತ್ತಿದ್ದಾರೆ ಅಷ್ಟೆ ಗರ್‌ಡರ್ ಅನ್ನು ಸ್ಟ್ರೆಂಥನ್ ಮಾಡತಕ್ಕಂಥಹ ಕೆಲಸ ಅದಕ್ಕೆ ಬೇಕಾದಂತಹ ಜಾಕೆಟ್ ಕೂಡಿಸತಕ್ಕಂಥಹ ಕೆಲಸ ಇನ್ನೂ ಯೂವುದೂ ಪ್ರಾರಂಭವಾಗಿಲ್ಲ, ಎಂದು ತಿಂಗಳಿನಿಂದ ಕೆಲಸ ಸ್ಥಗಿತವಾಗಿದೆ. ಕೆಲಸ ಪ್ರಾರಂಭವಾಗಿದೆ ಎಂದು ಉತ್ತರ ಹೇಳುತ್ತಾರೆ. 1997ಕ್ಕೆ ಮುಗಿಸುತ್ತೇವೆ ಎಂದು ಹೇಳುತ್ತಾರೆ. ಕಂಟ್ರಾಕ್ಟರ್ ಎರಡು ವರ್ಷ ಬೇಕೆಂದು ಹೇಳುತ್ತಾರೆ. 1997ನೇ ಮೇನಲ್ಲಿ ಹೇಗೆ ಪೂರೈಸುತ್ತಾರೆಂಬುದಕ್ಕೆ ಉತ್ತರ ಹೇಳಬೇಕು.

ಅಧ್ಯಕ್ಷರು : ಅಧಿವೇಶನ ಮುಗಿದ ಮೇಲೆ ಒಂದು ಸಲ ಮಂತ್ರಿಗಳೇ ಅಲ್ಲಿಗೆ ಬರುತ್ತಾರೆ. ನೀವೂ ಅವವೂ ಸ್ವತಃ ಜಾಗಕ್ಕೆ ಹೋಗಿ ನೋಡಿ ಕ್ರಮ ತೆಗೆದುಕೊಳ್ಳಿ. ಅಲ್ಲಿಗೆ ಭೇಟಿ ಮಾಡಿ ಡಾ|| ಕರ್ಕಿಯವರು ನೀವು ಚಿತ್ತರಂಜನ್ ಅವರು ಎಲ್ಲರೂ ಹೋಗಿ.

ಡಾ|| ಎಂ.ಪಿ. ಕರ್ಕಿ : ಅಲ್ಲೂ ಕೂಡ ಹಾರಿಕೆ ಉತ್ತರವೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ : ಯಾವುದೇ ಪರಿಸ್ಥಿತಿಯೊಳಗೆ 18 ತಿಂಗಳಲ್ಲಿ ಕೆಲಸ ಮುಗಿಯುತ್ತದೆ. 6 ಕೋಟಿ 75 ಲಕ್ಷ ರೂಪಾಯಿಗೆ ಈಗಾಗಲೇ ಆಡಳಿತಾತ್ಮಕ ಮಂಜೂರಾತಿ ಹಾಗೂ ತಾಂತ್ರಿಕ ಮಂಜೂರಾತಿ ಮಂಜೂರಾತಿ ನೀಡಲಾಗಿದೆ. ಈ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಗರ್‌ಡರ್ ಟೆಸ್ಟ್ ಈಗಾಗಲೇ ಆಗಿದ್ದು

ಅದರಲ್ಲಿ ಸಲ್ಪ ಪ್ರಾಬ್ಲಂ ಆಗಿತ್ತು. ಈಗ ಸ್ಟಾರ್ಟ್ ಮಾಡುತ್ತಾರೆ 18 ಲಕ್ಷ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದೇವೆ. ನಾವು ಯಾವ ರೀತಿ ಖರ್ಚು ಮಾಡುತ್ತೇವೆ ಆದರಂತೆ ಕೇಂದ್ರದವರು ರೀಇಂಬರ್ಸ್ ಮಾಡುತ್ತಾರೆ. There is no problem regarding this work.

ಡಾ|| ಎಂ.ಪಿ. ಕರ್ಕಿ : ಅಧ್ಯಕ್ಷರೇ Final drawings have not been given even to this day.

ನಾನು ನಿನ್ನೆ ಅಲ್ಲಿನ ಕಂಟ್ರಾಕ್ಟರ್ ಅನ್ನು ಕೇಳಿದೆ. Final drawings have not been given up to this day. ಇವರು ಏನು ಕೆಲಸವಾಗುತ್ತದೆಂದು ಹೇಳುತ್ತಾರೆ.

ಡಾ|| ಯು. ಚಿತ್ತರಂಜನ್ : ಅಧಿವೇಶನ ಮುಗಿದ ತಕ್ಷಣ ನಾವು ಬಂದು ಅಲ್ಲಿ ಉಪವಾಸ ಸತ್ಯಾಗ್ರಹ ಕುಳಿತುಕೊಳ್ಳುತ್ತೇವೆಂದು ಹೇಳಿ ಬಂದಿದ್ದೇವೆ.

ಅಧ್ಯಕ್ಷರು ; ಬೇಡಿ ಎಲ್ಲರೂ ಉಪವಾಸ ಕುಳಿತು ನನಗೇಕೆ ತೊಂದರೆ ಕೊಡುತ್ತೀರಿ.

ಡಾ|| ಯು. ಚಿತ್ತರಂಜನ್ : ಇಲ್ಲವಾದರೆ ಜನ ನಮ್ಮನ್ನು ಬರಲಿಕ್ಕೆ ಬಿಡುವುದಿಲ್ಲ.

ಅಧ್ಯಕ್ಷರು : ಸುರೇಶ್ ಒಬ್ಬರು ಕುಳಿತಿದ್ದನ್ನು ಎಬ್ಬಿಸಿದೆ ಅದನ್ನೇ ಇನ್ನೂ ಸುಧಾರಿಸಿಕೊಳ್ಳುವುದಕ್ಕಾಗಿಲ್ಲ.

ಡಾ|| ಎಂ.ಪಿ. ಕರ್ಕಿ : ಫೈನಲ್ ಡ್ರಾಯಿಂಗ್ ಯಾವಾಗ ಕೊಡುತ್ತೀರಿ?

ಶ್ರೀ ಶಿವನಂದ ಹೆಚ್. ಕೌಜಲಗಿ : ಯಾವುದೇ ಫೈನಲ್ ಡ್ರಾಯಿಂಗ್ ದೊರೆಯುವುದಿಲ್ಲ. ಕೆಲಸ ಪ್ರಾರಂಭವಾಗಿದೆ. We have started the work. Don't worry. ನಮಗೆಷ್ಟು ಬೇಕೋ ಅಷ್ಟು ಅಪ್ರೂವಾಗಿದೆ. ಯಾವ್ಯಾರ ಕೆಲಸಗಳು ಯಾವ ರೀತಿ ನಡೆಯಬೇಕು ಎಂದು ನೋಡುತ್ತಾರೆ ಅದರಂತೆ ನಾವು ತರಿಸಿಕೊಳ್ಳುತ್ತೇವೆ. There is no problem.

MR. SPEAKAR : You are a docter. You are trying to talk about engineering. ಹೇಗೆ ಸಾಧ್ಯ ಹೇಳಿ.?

ಶ್ರೀ ಶಿವಾನಂದ ಹೆಚ್. ಕೌಜಲಗಿ : ಟೆಕ್ನಿಕಲ್ ಮಂಜೂರಾತಿ ಕೊಡುವ ಮೊದಲು ಡ್ರಾಯಿಂಗ್ ನೋಡಿಯೇ ಕೊಡುತ್ತಾರೆ.

ಡಾ|| ಎಂ.ಪಿ. ಕರ್ಕಿ : ಡ್ರಾಯಿಂಗ್ಸ್ ಬಂದಿಲ್ಲ.

ಒಬ್ಬ ಮಾನ್ಯ ಸದಸ್ಯರು : ಯಾವುದೇ ಒಂದು ಕಟ್ಟದ ಸೇತುವೆ ಕಟ್ಟುವುದು ಇರಲಿ ಡ್ರಾಯಿಂಗ್ ಅಪ್ರೂವ್ ಆಗದೇ ಕಟ್ಟುತ್ತೇವೆಂದು ಹೇಳುವುದು ಸಮಂಜಸವಾದ ಉತ್ತರ ಅಲ್ಲ.

ಅಧ್ಯಕ್ಷರು : ತರಿಸಿಕೊಂಡು ಮಾಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ಇಷ್ಟೆಲ್ಲಾ ಇದ್ದರೂ ಕೂಡ ಅಧ್ಯಕ್ಷರು ಮೊದಲೇ ಸರ್ಟಿಫಿಕೇಟ್ ಕೊಟ್ಟಿರಲ್ಲ ಎಂದು ನನಗೆ ಆಶ್ಚರ್ಯವಾಗುತ್ತಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : 7-8 ವರ್ಷಗಳಿಂದ ಇವರು ಗುದ್ದಾಡುತ್ತಿದ್ದರು. ನಾವು 3 ಸಲ ಹೋಗಿ ಮಾನ್ಯ ಮುಖ್ಯ ಮಂತ್ರಿಗಳು ಹೋಗಿ ಆಡಳಿತಾತ್ಮಕ ಮಂಜೂರಾತಿ ತಂದು ಟೆಕ್ನಿಕಲ್ ಒಪೀನಿಯನ್, ತಂದು ಇವತ್ತಿನ ದಿವಸ ಇವರ ಕೈಯಲ್ಲಿ ಅನ್ನಿಸಿಕೊಳ್ಳುತ್ತಿದ್ದೇವೆ. ಅಷ್ಟೆಲ್ಲಾ ಮಾಡಿದರೂ ಇವರ ಕಡೆಯಿಂದ ಥ್ಯಾಂಕ್ಸ್

ಇಲ್ಲ, ಅದರ ಬದಲು ಅದನ್ನು ಇದನ್ನು ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ ನಾವು ದುರಸ್ತಿ ಮಾಡುತ್ತಿದ್ದೇವೆ.

ಅಧ್ಯಕ್ಷರು : ಅವರ ಪರವಾಗಿ ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ.

10.40 ಎ.ಎಂ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೆ, ಮಂತ್ರಿಗಳ ಉತ್ತರವನ್ನು ತಾವೇ ಕೊಡುವುದಾದರೆ ನೀವು ಒಂದು ರೀತಿ ಕ್ಯಾಬಿನೆಟ್ ಇದ್ದ ಹಾಗೆ ಆಗಿಬಿಡುತ್ತದೆ

ಅಧ್ಯಕ್ಷರು : ಹಾಗೇನಿಲ್ಲ, ನಿಮ್ಮ ಕೆಲಸ, ಅವರ ಕೆಲಸ ಎಂದಲ್ಲ, ನನಗೆ ಟೈಮ್ ಹೊಂದಾಣಿಕೆ ಆಗಬೇಕಷ್ಟೆ ಮತ್ತೆ ಇನ್ನೇನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಸಚಿವ ಸಂಪುಟಕ್ಕೆ ಹೋಗಬೇಡಿ. ಅಲ್ಲಿ ಕುಲಗೆಟ್ಟು ಹೋಗಿದೆ. ಇಲ್ಲಿ ಸ್ವಲ್ಪ ತಮಗ್ಗೆ ಉಳಿದಿದೆ. ಹೆಚ್ಚು ಕಡಿಮೆ ಏನಾದರೂ ಅಲ್ಲಿಗೆ ಹೋಗಿ ಬಿಡುತ್ತೀರೋ ಎನ್ನುವ ಭಯ ನನಗೆ ಬರುತ್ತಿದೆ.

ಅಧಯ್ಕ್ಷರು : ನನ್ನನ್ನು ಎಲ್ಲಿಗೂ ಕಳುಹಿಸಬೇಡಿ ನಾನು ಇಲ್ಲಿಯೇ ಇರುತ್ತೇನೆ

ಶ್ರೀ ವಾಟಾಳ್ ನಾಗರಾಜ್ : ತಾವು ಇಲ್ಲಿದ್ದರೆ ಸದನಕ್ಕೆ ಶೋಭೆ.

ಮೈಸೂರು- ಬೆಂಗಳೂರು ರಸ್ತೆಯ ಸುಧಾರಣೆ

307 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಮೈಸೂರು-ಬೆಂಗಳೂರು ರಸ್ತೆಯು ತೀರ ಹದಗೆಟ್ಟಿದ್ದು ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಪ್ರಸ್ತುತ ರಸ್ತೆಯ ಸುಧಾರಣೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು.

ಶ್ರೀ ಶಿವನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರು-ಮೈಸೂರು ರಸ್ತೆಯ ಸುಸ್ಥಿತಿಯಲ್ಲಿಡಲಾಗಿದೆ. ವಾಹನಗಳ ತೀವ್ರ ಹೆಚ್ಚಳ ಅತಿ ವೇಗ ಹಾಗೂ ನಿರ್ಲಕ್ಷ ವಾಹನ ಚಾಲನೆ ಇತ್ಯಾದಿಗಳಿಂದ ಅಪಘಾತಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ ರಸ್ತೆಯನ್ನು ವ್ಯಾಪಕವಾಗಿ ಅಭಿವೃದ್ಧಿಪಡಿಸಲು 200.00 ಲಕ್ಷ ರೂ.ಗಳ ಅಂದಾಜಿನ ಕಾಮಗಾರಿಗಳನ್ನು ಮಾಡಲಾಗುತ್ತಿದೆ. ಇದರಲ್ಲಿ ಪೂರ್ಣ ಪ್ರಮಾಣದ ಮರು ಡಾಂಬರೀಕರಣ, ತಿರುವುಗಳನ್ನು ನೇರ ಮಾಡುವುದು, ಪಟ್ಟಣ ಪ್ರದೇಶ ವ್ಯಾಪ್ತಿಯಲ್ಲಿ ಜೋಡಿ ರಸ್ತೆ ಮಾಡುವುದು ಸೇತುವೆಗಳನ್ನು ಅಗಲಪಡಿಸುವುದು. ಸೂಕ್ತ ಸಂಚಾರ ಸೂಚನಾ ಫಲಕಗಳನ್ನು ಅಳವಡಿಸುವುದು ಸೇರಿರುತ್ತದೆ. ಮುಖ್ಯ ಪಟ್ಟಣ ಪ್ರದೇಶ ವ್ಯಾಪ್ತಿಯಲ್ಲಿ ಸಿಗ್ನಲ್ ದೀಪಗಳನ್ನು ಸಹ ಅಳವಡಿಸಲಾಗಿದೆ.

ಅಧ್ಯಕ್ಷರು : ಆಯಿತು, ಆಯಿತು, ಭಾಷಣ ಶುರು ಮಾಡಿಬಿಡುತ್ತೀರಲ್ಲ, ಉಪ ಪ್ರಶ್ನೆ ಹೇಗಿರಬೇಕೆಂದು ನಿಮಗೆ ಗೊತ್ತಿಲ್ಲವೇ? ಪ್ರಾಕ್ಟೀಸ್ ಮಾಡಬೇಕು. ನೀವೆಲ್ಲ ಟ್ರೈನಿಂಗ್‌ಗೆ ಬಂದಿದ್ದೀರಿ.

ಶ್ರೀ ಇ. ಮಾರುತಿ ರಾವ್ ಪವಾರ್ : ಅದರ ಬಗ್ಗೆ ಒಂದು ಉಪ ಪ್ರಶ್ನೆ ಕೇಳಿಬಿಡುತ್ತೇನೆ.

ಅಧ್ಯಕ್ಷರು : ಅವರು ಉತ್ತರ ಹೇಳುವುದು ಬೇಡವೇ? ಉತ್ತರವಿಲ್ಲದೆ ಉಪಪ್ರಶ್ನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಸಭಾಧ್ಯಕ್ಷರೆ, ಮೈಸೂರು ಬೆಂಗಳೂರು ರಸ್ತೆಯನ್ನು 4ವರ್ಷದೊಳಗಾಗಿ ಪೂರ್ಣಗೊಳಿಸಬೇಕು ಎನ್ನುವ ಉದ್ದೇಶದಿಂದ ಈ ವರ್ಷ 2 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಇಟ್ಟಿದ್ದೇವೆ. ಮಾರ್ಚಿ ತಿಂಗಳು ಮುಗಿಯುವುದರೊಳಗಾಗಿ 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಈಗಾಗಲೇ ಕೆಲಸ ಪ್ರಾರಂಭ ವಾಗಿದೆ. ಈಗ 8 ಕಿ.ಮಿ. ರಸ್ತೆಯನ್ನು ದಾಂಬರೀಕರಣ ಮಾಡಿ ಮುಗಿಸಿದ್ದೇವೆ.ತ 28 ಕಿ.ಮೀ.ರಸ್ತೆಯನ್ನು ಮಾರ್ಚ್ ತಿಂಗಳೊಳಗಾಗಿ ಮಾಡಿ ನಿಮಗೆ ತೋರಿಸುತ್ತೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಏಕೆ ಆವಾಗಲೇ ಉತ್ತರ ಕೇಳುತ್ತೇನೆಂದು ಹೇಳಿದೆನೆಂದರೆ ಅಲ್ಲಿ ಮೊದಲೇ ಹೇಳಿದ್ದಾರೆ, ಮೈಸೂರು ಬೆಂಗಳೂರಿನ ರಸ್ತೆ ಸುಸ್ಥಿಯಲ್ಲಿದೆ ಎಂದು ಮೊದಲೇ ಉತ್ತರ ಕೊಟ್ಟಿದ್ದಾರೆ. ಆ ನಂತರ ಸಂಪೂರ್ಣವಾದಂಥ ಡಾಂಬರೀಕರಣ ಆಗಬೇಕಾಗಿದೆ ಎಂದು ಹೇಳಿದ್ದಾರೆ. ಒಳ್ಳೆಯ ರಸ್ತೆಗೆ ದಾಂಬರೀಕರಣ ಏಕೆ? ಇದು ಮೊದಲನೇ ಪ್ರಶ್ನೆ. 2ನೆಯದು ಸೂಕ್ತವಾದ ಸಂಚಾರದ ಫಲಕಗಳನ್ನು ಹಾಕಬೇಕಾಗಿದೆ. ಸಂಚಾರದ ಫಲಕಗಳನ್ನೇ ಹಾಕದೆ ಸಂಚಾರಕ್ಕೆ ಹೋಗ್ಯವಾಗಿದೆಯೆದು ಹೇಳಿ ಸರ್ಟಿಫಿಕೇಟನ್ನು ಮೊದಲೇ ಕೊಟ್ಟಿದ್ದಾರೆ. ಅದೇ ಉತ್ತರ ಸರಿಯೇ ಎಂದು ನಾನು ಕೇಳುತ್ತಿದ್ದೇನೆ. ಈ ರೀತಿಯಾದಂಥ ರಸ್ತೆ ಇದೆಯೇ? ಅಥವಾ ಸುಸ್ಥಿತಿಯಾದಂಥ ರಸ್ತೆ ಇದೆಯೇ?

ಅಧ್ಯಕ್ಷರು : ಎಲ್ಲ ಇರುವುದಿಲ್ಲ, ಎಲ್ಲಿಯೋ ಕೆಲವು ಪಿಟ್ಸ್ ಆಗಿರುವುದನ್ನು ಮಾಡಿಸುತ್ತೇವೆಂದು ಹೇಳಿದರು. ಪ್ರಶ್ನೆಯನ್ನು ಕೇಳಬೇಕು ಎನ್ನುವ ಉದ್ದೇಶದಿಂದ ಕೇಳುತ್ತಾರೆ.

ಶ್ರೀ ಡಿ.ವಿ. ಸದಾನಂದ ಗೌಡ : ಪ್ರತಿ ದಿವಸ 4-5 ಆಕ್ಸಿಡೆಂಟ್ ಆಗುತ್ತಲೇ ಇರುತ್ತದೆ. ಕೊನೆಯ ಪಕ್ಷ 8-10 ಆಕ್ಸಿಡೆಂಟ್ ಮೈಸೂರು ಬೆಂಗಳೂರು ರಸ್ತೆಯಲ್ಲಿ ಆಗುವಂಥ ಪರಿಸ್ಥಿತಿ ಇದೆ.

ಅಧ್ಯಕ್ಷರು : ಅದು ಏನು ಇವರು ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಆದ ಮೇಲೆ ಮಾತ್ರ ಆಗುತ್ತಿದೆಯೇಕೆ? There should be some limit. Hon'ble Minister has given a categorical answer.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಈ ಅಪಘಾತಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ, ಈ ರಸ್ತೆ ಕೆಲವು ಕಡೆ ದುರಸ್ತಿಗೆ ಒಳಪಟ್ಟಿರುವುದು ನಿಜ. ನಾವು ರಸ್ತೆ ದುರಸ್ತಿ ಮಾಡುವ ಸಲುವಾಗಿ ಕ್ರಮ ಕೈಗೊಂಡಿದ್ದೇವೆ. ಈ ವರ್ಷ ಮಾರ್ಚ್ ತಿಂಗಳೊಳಗಾಗಿ 2ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರುತ್ತೇವೆ. ಆದಷ್ಟು ಬೇಗ ಈ ಮೈಸೂರು ಬೆಂಗಳೂರು ರಸ್ತೆಯನ್ನು ಉತ್ತಮಪಡಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಸನ್ಮಾನ್ಯ ಅಧ್ಯಕ್ಷರೆ, ಮೈಸೂರು ಬೆಂಗಳೂರು ರಸ್ತೆಯಲ್ಲಿ ಅಪಘಾತಗಳು ಜಾಸ್ತಿ ಆಗುತ್ತಿವೆ ಎನ್ನುವುದು ನಿಜ. ಅಲ್ಲಿ ಟ್ರಾಫಿಕ್ ಲೋಡ್ ಬಹಳ ಜಾಸ್ತಿ ಆಗಿವೆ: ಅದು ನಮ್ಮ ಸರ್ಕಾರದ ಜವಾಬ್ದಾರಿ ಅಲ್ಲ, ಎಲ್ಲಾ ನಿಯಂತ್ರಣಗಳನ್ನು ಮಾಡಿದರೂ ಸಹ ಆ ರಸ್ತೆ ಎಷ್ಟು ಲೋಡ್ ತಡೆಯುವ ಶಕ್ತಿ ಇದೆಯೋ ಅದಕ್ಕಿಂತ ಹೆಚ್ಚಿಗೆ ವಾಹನಗಳ ಸಂಖ್ಯೆ ಅಲ್ಲಿ ಇದೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ನಾವು ಬಂದ ಮೇಲೆ ರಸ್ತೆ ರಿಪೇರಿ ಮಾಡಿಸುತ್ತೇವೆ. ಆದರೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ನಾವು ಬಂದ ಮೇಲೆ ರಸ್ತೆ ರಿಪೇರಿ ಮಾಡಿಸುತ್ತೇವೆ. ಆದರೆ for future plan .... ಬೆಂಗಳೂರು ಮೈಸೂರು ಸೂಪರ್

ಹೈವೇ ಮಾಡದೇ ಇದ್ದರೆ ಅದನ್ನು ನಾವು ಸರ್ಕಾರಿ ಬಂಡವಾಳದಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ಮೈಸೂರು ಬೆಂಗಳೂರು ಸೂಪರ್ ಹೈವೇಯನ್ನು ಖಾಸಗಿ ಕಂಪೆನಿಯವರಿಗೆ ಕೊಟ್ಟಿದ್ದೇವೆ. ಈಗಾಗಲೇ ಅವರು ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಅವರ ಕೆಲಸ ಆದಮೇಲೆ ಬಹುಶಃ ಈ ಅಪಘಾತಗಳು ಕಡಿಮೆಯಾಗಬಹುದು.

ಶ್ರೀ ವಾಟಾಳ್ ನಾಗರಾಜ್ : ಮಾರ್ಚ್ 30ನೇ ತಾರೀಖಿನೊಳಗಾಗಿ 2 ಕೋಟಿ ರೂಪಾಯಿ ಬೆಂಗಳೂರು ಮೈಸೂರು ರಸ್ತೆಗೋಸ್ಕರ ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ನೀವು ಹೇಗೆ 2 ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ? ಈಗಾಗಲೇ 26ನೇ ತಾರೀಖು. ಮಾರ್ಚ್ 30ರೊಳಗೆ ಅಂದರೆ ಆ 2 ಕೋಟಿ ರೂಪಾಯಿಯನ್ನು ತೆಗೆದುಕೊಂಡು ಹೋಗಿ ನೀರಿಗೆ ಹಾಕುತ್ತೀರೋ ಅಥವಾ ರಸ್ತೆಗೆ ಹಾಕುತ್ತೀರೋ ಗೊತ್ತಾಗುತ್ತಿಲ್ಲ. ಇದು ಸ್ಪಷ್ಟ. ತಮ್ಮ ಮೇಲೆ ನನಗೆ ಬಹಳ ವಿಶ್ವಾಸ ಇದೆ. ನೀವು ಹೇಳುವ ಮಾತನ್ನು ಕೇಳಿ ನಿಮ್ಮ ಮೇಲೆ ವಿಶ್ವಾಸವನ್ನು ಕಳೆದುಕೊಳ್ಳುವಂತಾಯಿತು. ನಂತರ ಮಾನ್ಯ ಉಪಮುಖ್ಯ ಮಂತ್ರಿಗಳು ಹೇಳಿದರು ನಿಜ, ಈ ಅಪಘಾತ ಆಗುತ್ತಿರುವುದು ನಮ್ಮ ಸರ್ಕಾರದ ಜವಾಬ್ದಾರಿ ಅಲ್ಲ, ಅಂದರೆ ಇದು ಯಾವ ಸರ್ಕಾರದ ಜವಾಬ್ದಾರಿ? ನಿಮ್ಮ ಸರ್ಕಾರ ಇರುವಾಗ ಈ ಜವಾಬ್ದಾರಿಯನ್ನು ನೀವುಗಳು ಒಪ್ಪಿಕೊಳ್ಳಲೇಬೇಕು. ರಸ್ತೆ ರಿಪೇರಿ ಇಲ್ಲದೇ ಇರುವುದರಿಂದ, ರಸ್ತೆಯ ವ್ಯವಸ್ಥೆ ಸರಿಯಿಲ್ಲದಿರುವುದರಿಂದ, ಅಲ್ಲಿ ಆಗತಕ್ಕಂಥ ಅಪಘಾತಗಳಿಗೆ ನಮ್ಮ ಸರ್ಕಾರದ ಜವಾಬ್ದಾರಿ ಎಂದು ತಾವು ನೇರವಾಗಿ ಒಪ್ಪಿಕೊಳ್ಳಬೇಕು. ಇದು ಒಂದನೆಯದು. ಎರಡನೆಯದು, ಯಾವುದೋ ಕಂಪೆನಿ ಬರುತ್ತದೆ ಏಕ ಮುಖ ಸಂಚಾರ ವ್ಯವಸ್ಥೆ ಮಾಡಿಸುತ್ತೇವೆ ಎಂದು ಆಕಾಶ ತೋರಿಸುತ್ತಿದ್ದಾರೆ. ಆ ಏಕಮುಖ ಸಂಚಾರದ ಕರಾರುಗಳೇನು? ಅದರ ಷರತ್ತುಗಳು ಏನು? ಅಲ್ಲಿ ಓಡಾಡತಕ್ಕಂಥ ಜನರ ಮೇಲೆ ಏನು ತೆರಿಗೆ ಬೀಳುತ್ತದೆ?

ಅಧ್ಯಕ್ಷರು : ಅದು ಈ ಪ್ರಶ್ನೆಗೆ ಸಂಬಂಧಿಸುವುದಿಲ್ಲ. ಇದೆ ಪ್ರಶ್ನೇ ಬಗ್ಗೆ ಚರ್ಚೆಯಾದರೆ ಹೇಗೆ? ಬೇರೆ ಪ್ರಶ್ನೆಗಳೂ ಇವೆಯಲ್ಲ, ಅದಕ್ಕೆ ಸಮಯ ಸಾಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಆಯಿತು ಸ್ವಾಮಿ. ನಾನು ಎಷ್ಟು ಕೇಳಿದ್ದೇನೆ ಅದಕ್ಕೆ ಉತ್ತರ ಕೊಡಿಸಿ ಕೊಡಿ ಸ್ವಾಮಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸರ್ ಈ ವರ್ಷ ನಾವು ಸುಮಾರು 25 ಕಿ.ಮೀ. ರಸ್ತೆಗೆ ಡಾಂಬರೀಕರಣ ಮಾಡಿಸಬೇಕೆಂದು ಇದ್ದೇವೆ.

ಶ್ರೀ ಜೆ.ಹೆಚ್. ಪಟೇಲ್ : 3 ದಿನ ಇದೆ ಎಂದು ಹೇಳುತ್ತಿದ್ದಾರೆ. ಈ ತಿಂಗಳು ನಂತರ ಮಾರ್ಚ್ 30 ದಿವಸ ಇದೆ. ಈ ನಾಗರಾಜುರವರಿಗೆ ದಿವಸಗಳು ತಿಂಗಳುಗಳು ಗೊತ್ತಾಗುವುದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ನಾನು ಉಪಮುಖ್ಯಮಂತ್ರಿಗಳಿಗೆ ಪಂಚೇಂದ್ರಿಯಗಳು ಚೆನ್ನಾಗಿವೆ ಎಂದು ತಿಳಿದುಕೊಂಡಿದ್ದೇನೆ. ನಾನು ಹೇಳಿದ್ದುದು ಅವರ ಕಿವಿಗೆ ಕೇಳಲಿಲ್ಲ. ಈ ತಿಂಗಳು 26 ಆಗಿದೆ. ಇನ್ನು ಇರುವುದು 3 ದಿವಸ. ಮುಂದಿನ ತಿಂಗಳು 30 ದಿವಸ ಒಟ್ಟು 33 ದಿವಸದಲ್ಲಿ ತಾವು ಕೆಲಸ ಮಾಡಿಸುತ್ತೀರಾ ಎಂದು ಕೇಳಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸರ್ ಡಾಂಬರೀಕರಣ ಮಾಡದೇ ಇದ್ದರೂ ಸಹ ಈಗ ಫೆಬ್ರವರಿ, ಮಾರ್ಚ್, ಏಪ್ರಿಲ್ ಮತ್ತು ಮೇ ಈ 4 ತಿಂಗಳೊಳಗೆ ನಾವು ಕೆಲಸ ಮಾಡುತ್ತೇವೆ. ನಾನು ಹೇಳುತ್ತಿರುವು 4 ತಿಂಗಳೊಳಗೆ ಕೆಲಸ ಮಾಡಿ ಮುಗಿಸುತ್ತೇವೆಂದು.

ಶ್ರೀ ವಾಟಾಳ್ ನಾಗರಾಜ್ : ಈ ಕೆಲಸವನ್ನು ಈ ತಿಂಗಳೇ ಮಾಡುವುದು. ಇದನ್ನು 33 ದಿವಸದಲ್ಲಿ ಮುಗಿಸುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತಿರುವು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಈ ಕೆಲಸವನ್ನು ಪೂರ್ತಿ ಮಾಡಿ ನಾವು ತೋರಿಸುತ್ತೇವೆ. ಆ ಕೆಲಸವನ್ನು ಮುಗಿಸದೇ ಇದ್ದರೆ ತಾವು ಏಪ್ರಿಲ್ ತಿಂಗಳಿನಲ್ಲಿ ನನ್ನನ್ನು ಕೇಳಿ. ಆ ರಸ್ತೆ ಕೆಲಸವನ್ನು ಮುಗಿಸಿದ ತಕ್ಷಣ ತಮಗೆ ಪತ್ರ ಬರೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಏಪ್ರಿಲ್ ಒಂದನೇ ತಾರೀಖು ಸದನ ಕಾರ್ಯಕಲಾಪ ನಡೆದರೆ ಈ ವಿಷಯದ ಬಗ್ಗೆ ಆ ದಿನ ಕೇಳುತ್ತೇನೆ.

ಅಧ್ಯಕ್ಷರು : ನಂಜಾಮರಿಯವರೆ, ತಮ್ಮ ಪ್ರಶ್ನೆಗೆ ಸನ್ಮಾನ್ಯ ಸಚಿವರು ಸ್ವಲ್ಪ ಕಾಲಾವಕಾಶ ಕೇಳಿದ್ದಾರೆ. ಉತ್ತರ ಬಂದಿಲ್ಲ. ಅದನ್ನು ತಡೆ ಹಿಡಿದಿದ್ದೇನೆ. ಮುಂದಿನ ಪ್ರಶ್ನೋತ್ತರ ಸಮಯದಲ್ಲಿ ಇದನ್ನು ತೆಗೆದುಕೊಳ್ಳೋಣ.

ಪ್ರವಾಸೋದ್ಯಮ ಇಲಾಖೆಯ ಪ್ರೇಕ್ಷಣೀಯ ಸ್ಥಳಗಳು

610 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಾಂಡವಪುರ ತಾಲ್ಲೂಕಿನಲ್ಲಿ ಮೇಲುಕೋಟೆ : ಕೆರೆತೊಣ್ಣೂರು ಮತ್ತು ಕುಂತಿ ಬೆಟ್ಟ ಈ ಮೂರು ಪ್ರೇಕ್ಷಣೀಯ ಸ್ಥಳಗಳು ಪ್ರವಾಸೋದ್ಯಮ ಇಲಾಖೆಗೆ ಸೇರ್ಪಡೆ ಆಗಿವೆಯೇ?

ಆ) ಹಾಗಿದ್ದಲ್ಲಿ ಇವುಗಳ ಅಭಿವೃದ್ಧಿಗೆ ಈ ವರ್ಷದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಮೇಲುಕೋಟೆಯಲ್ಲಿ ಕೇಂದ್ರ ಧನ ಸಹಾಯದಿಂದ ರೂ. 33.00 ಲಕ್ಷ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ. ಈ ಕಾಮಗಾರಿಗಾಗಿ ಇದುವರೆವಿಗೆ ಒಟ್ಟು ರೂ. 13.00 ಲಕ್ಷ ಬಿಡುಗಡೆ ಮಾಡಲಾಗಿದೆ. ಕೆರೆತೊಣ್ಣೂರು ಗ್ರಾಮದ ಕೆರೆಯಲ್ಲಿ ದೋಣಿ ವಿಹಾರಕ್ಕಾಗಿ ಪ್ರವಾಸೋದ್ಯಮ ಇಲಾಖೆಯಿಂದ ಪೆಡಲ್ ಬೋಟು, ರೋಯಿಂಗ್ ಬೋಟು ಹಾಗೂ ಇತರ ಸಲಕರಣೆಗಳನ್ನು ತಿರುಮಲ ಸಾಗರ ಛತ್ರ ಗ್ರಾಮ ಪಂಚಾಯಿತಿಗೆ ನೀಡಲಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಸರ್ಕಾರದ ಧನಸಹಾಯದಿಂದ 33 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಮೇಲುಕೋಟೆ ಪ್ರವಾಸೋದ್ಯಮ ಕಾಮಗಾರಿ ಕೆಲಸವನ್ನು ಕೈಗೊಂಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಕೆರೆತೊಣ್ಣೂರಿನಲ್ಲಿ ಪೆಡಲ್ ಬೋಟು ಮತ್ತು ರೋಯಿಂಗ್ ಬೋಟು ಎರಡನ್ನು ಇಲ್ಲಿ ಬಿಟ್ಟಿದ್ದಾರೆ. ಕೆರೆ ತೊಣ್ಣೂರು ಇಲ್ಲಿಗೆ ನಾನು 3 ತಿಂಗಳ ಹಿಂದೆ ಹೋಗಿದ್ದಾಗ ಅಲ್ಲಿ ಯಾವುದೇ ಬೋಟ್‌ನ ವ್ಯವಸ್ಥೆ ಇರಲಿಲ್ಲ, ಈ ಉತ್ತರ ವಾಸ್ತವಿಕ ವಿಚಾರಕ್ಕೆ ತಪ್ಪಾಗಿದೆ. ನಂತರ ಕುಂತಿಬೆಟ್ಟ. ಇದು ಪೌರಾಣಿಕ ಸ್ಥಳ. ಇಲ್ಲಿ ಪಾಂಡವರು ಅಜ್ಞಾತವಾಸವನ್ನು ಅನುಭವಿಸಿದರು ಎಂದು ಹೇಳುತ್ತಾರೆ. ಪ್ರವಾಸೋದ್ಯಮದಲ್ಲೂ ಸಹ ಆ ಸ್ಥಳ ಅಜ್ಞಾತವಾಸವನ್ನು ಅನುಭವಿಸುತ್ತಿದೆ. ಅದರ ಬಗ್ಗೆ ಏನೂ ಉತ್ತರವನ್ನು ಕೊಟ್ಟಿಲ್ಲ, ಇನ್ನೊಂದು ಕೇಂದ್ರ ಸರ್ಕಾರ ಧನಸಹಾಯ ಕೊಟ್ಟಿದೆ. ಆದರೆ ರಾಜ್ಯ ಸರ್ಕಾರ ಏನು ಧನ ಸಹಾಯ ನೀಡಿದೆ ಇಲ್ಲಿಗೆ ಮತ್ತು ಯಾವ ಮಟ್ಟದ

ಕಾರ್ಯಕ್ರಮ ನಡೆಯುತ್ತಿದೆ ಎನ್ನುವುದರ ಬಗ್ಗೆ ಸಚಿವರು ಪೂರ್ಣ ಮಾಹಿತಿಯನ್ನು ನೀಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಸಾಕಷ್ಟು ವಿವರಣಾತ್ಮಕವಾಗಿ ಕೊಟ್ಟಿದ್ದೇನೆ. ಮೇಲುಕೋಟೆಯಲ್ಲಿ ಕೇಂದ್ರ ಧನಸಹಾಯದಿಂದ 33 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ. ಇದರಲ್ಲಿ ಆಗಿದೆಯೆಂದು ನಾನು ಹೇಳಲಿಲ್ಲ, ಹಾಗೆಯೇ ಅಲ್ಲಿ ಒಂದು ಕೆರೆ ಇದೆ. ಆ ಕೆರೆಯಲ್ಲಿ ಬೋಟಿಂಗ್ ವ್ಯವಸ್ಥೆಗಳನ್ನು ಮಾಡಿದರೆ ಪ್ರವಾಸಿಗಳು ಅಲ್ಲಿಗೆ ಹೋಗಬಹುದೆಂಬ ಕಾರಣದಿಂದ, ಇಲ್ಲಿ ಪ್ರವಾಸೋದ್ಯಮದ ಬಗ್ಗೆ ಮಾತನಾಡುವಾಗ ಪುಟ್ಟಣ್ಣಯ್ಯನವರು ಒಂದು ಮಾತನ್ನು ಹೇಳಿದರು. ಕೆಲವು ವಿಷಯದಲ್ಲಿ ಅವು ಪೌರಾಣಿಕವಾಗಿ ಬಹಳ ಪ್ರಸಿದ್ಧವಾಗಿ ಇರಬಹುದು. ಅವರ ಕಾಲದಲ್ಲಿ ಪಾಂಡವರು ವನವಾಸಕ್ಕೆ ಹೋಗಿದ್ದರೆಂದು ಹೇಳಿದರು. ಹಿಂದಿನ ಸರ್ಕಾರ ಇದ್ದಾಗ ಅವೆಲ್ಲ ವನವಾಸಗಳಿಗೆ ಹೋಗಿದ್ದವು. ವನವಾಸಕ್ಕೆ ಹೋಗಿದ್ದಂಥ ಕ್ಷೇತ್ರಗಳನ್ನು ಈಗ ಸಾಧ್ಯವಾದರೆ ಪ್ರವಾಸಕ್ಕೆ ಬರುವ ರೀತಿ ಏನು ಮಾಡಬೇಕೋ ಆ ರೀತಿ ಮಾಡುತ್ತಿದ್ದೇವೆ. ಆ ಕೆರೆಯನ್ನು ಪಂಚಾಯಿತಿಯವರಿಗೆ ಕೊಟ್ಟಿದ್ದೇವೆ. ಆ ಬೋಟುಗಳನ್ನು ತಿರುಮಲ ಸಾಗರ ಛತ್ರದ ಪಂಚಾಯಿತಿಗೆ ಕೊಟ್ಟಿದ್ದೇವೆ. ಅವರು ಅದನ್ನು ಉಪಯೋಗ ಮಾಡಿಕೊಳ್ಳಬೇಕು. ನಾವು ನೇರವಾಗಿ ಇಲಾಖೆಯಿಂದ ಉಪಯೋಗ ಮಾಡಿಕೊಳ್ಳುವುದಿಲ್ಲ, ಏಕೆಂದರೆ ಇಂತಹ ಕೆರೆಗಳನ್ನು ಕಾಪಾಡಿಕೊಂಡು ಪ್ರವಾಸಿಗರನ್ನು ಆಕರ್ಷಣೆ ಮಾಡಿ ನಡೆಸಿಕೊಂಡು ಹೋಗಬೇಕು. ಆದ್ದರಿಂದ ಅದನ್ನು ಆ ಪಂಚಾಯಿತಿಗೆ ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈಗ ಹಿಂದಿನ ಸರ್ಕಾರ ವನವಾಸಕ್ಕೆ ಹೋದಾಗ ಆ ಕಡೆಗೆ ಹೋಗಿದ್ದರು ಎಂದು ಹೇಳಿದರು. ಈಗ ಪ್ರವಾಸಕ್ಕೆ ಬಂದಿದ್ದಾರೆ ಎಂದು ಗೊತ್ತಾಯಿತು. ನೀವು ಮುಂದೆ ವನವಾಸಕ್ಕೆ ಹೋಗುವುದಕ್ಕೆ ಆದರೂ ಅದನ್ನು ಸರಿಪಡಿಸಿಕೊಳ್ಳಿ. ನೀವು ಮುಂದೆ ಹೋಗಲೇಬೇಕಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಇಲ್ಲ ಇಲ್ಲ ಹೋಗುವುದಿಲ್ಲ, ಹೋಗುವಾಗ ಅವರನ್ನು ಕರೆದುಕೊಂಡೇ ಹೋಗುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಯಾವತ್ತೂ ಪಟೇಲರ ಜೊತೆಯಲ್ಲಿ ವನವಾಸಕ್ಕೆ ಮಾತ್ರ ಹೋಗುವುದಿಲ್ಲ,

ಅಧ್ಯಕ್ಷರು : ಅವರ ಜೊತೆ ವನವಾಸಕ್ಕೆ ಅಲ್ಲದಿದ್ದರೂ ಪ್ರವಾಸಕ್ಕೆ ಹೋಗುವುದಕ್ಕೆ ಸಿದ್ಧರಾಗಿ.

ಬೀಳಗಿ ಮತ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾವಳಗಿ ಇಲ್ಲವೇ ಹೀರೇ ಪಡಸಲಗಿ ಸಮೀಪ ವಿದ್ಯುತ್ ಸ್ಥಾವರ ಸ್ಥಾಪನೆ

503 - ಶ್ರೀ ಜೆ. ಟಿ. ಪಾಟೀಲ್ (ಬೀಳಗಿ) : ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀಳಗಿ ಮತ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾವಳಗಿ ಇಲ್ಲವೇ ಹೀರೆ ಪಡಸಲಗಿ ಸಮೀಪ 110 ವಿದ್ಯುತ್ ಸ್ಥಾವರ ಸ್ಥಾಪಿಸುವ ಸಲುವಾಗಿ ಬೇಡಿಕೆ ಇದ್ದುದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದರೆ ಸರ್ಕಾರ ಇದರ ಸಲುವಾಗಿ ತೆಗೆದುಕೊಂಡ ಕ್ರಮಗಳೇನು?

ಇ) 1996-97ನೇ ಸಾಲಿನಲ್ಲಿ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದೇ?

ಶ್ರೀ ಜೆ. ಹೆಚ್. ಪಟೇಲ್ (ಉಪಮುಖ್ಯ ಮಂತ್ರಿ) :

ಅ) ಹೌದು

ಅ) ಹಿರೇ ಪಡಸಲಗಿಯಲ್ಲಿ 110 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಮತ್ತು ಸಾವಳಗಿಯಲ್ಲಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸ್ಥಾಪನೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ತಾಂತ್ರಿಕ ಸಮಿತಿಯು ತತ್ವಶಃ ಒಪ್ಪಿಗೆಯನ್ನು ಡಿಸೆಂಬರ್ 95ರಲ್ಲಿ ನೀಡಿದೆ. ಈ ಯೋಜನೆಗಳ ವಿವರವಾದ ಯೋಜನಾ ವರದಿಗಳನ್ನು ಸಿದ್ಧಪಡಿಸಲಾಗುತ್ತಿದೆ.

ಇ) ಹೌದು

ಶ್ರೀ ಜಿ.ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸಾವಳಗಿ ಮತ್ತು ಹಿರೇಪಡಸಲಗಿ ಎರಡೂ ನಮ್ಮ ಕ್ಷೇತ್ರದಲ್ಲಿ ಬರತಕ್ಕ ಗ್ರಾಮಗಳು. ಕಳೆದ ಮೂರು ತಿಂಗಳ ಹಿಂದೆ ಕೆಇಬಿ ಅಧ್ಯಕ್ಷರು ಬಿಜಾಪುರಕ್ಕೆ ಬಂದಾಗ ಸಾವಳಗಿಯಲ್ಲಿ 110 ಕೆ.ವಿ. ಸ್ಟೇಷನ್ ಪ್ರಾರಂಭ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ತಮ್ಮ ಉತ್ತರದಲ್ಲಿ ಹಿರೇ ಪಡಸಲಗಿ ಎಂದು ಇದೆ. ಅದಕ್ಕೆ ದಯಮಾಡಿ ಹೇಳಿ. ಈಗಾಗಲೇ ಸಾವಳಗಿಯಲ್ಲಿ ಜಹಗೀರ್ ಸೈಟ್ ಕೊಟ್ಟಿದ್ದು ಆಗಿದೆ. ಅದಕ್ಕೆ ಸಾವಳಗಿಯಲ್ಲಿ 110 ಕೆ.ವಿ. ಸ್ಟೇಷನ್ ಪ್ರಾರಂಭ ಮಾಡಿಸುವ ಸಲುವಾಗಿ ತಾವು ಭರವಸೆ ಕೊಡುತ್ತೀರಾ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅದ್ಯಕ್ಷರೇ, ಯಾವ್ಯಾವ ಸ್ಥಳದಲ್ಲಿ ಎಷ್ಟೇ ಶಕ್ತಿಯ ಕೇಂದ್ರಗಳನ್ನು ಹಾಕಬೇಕೆಂದು ನಾವು ಸ್ಟಡಿ ಮಾಡಿದೆ ಹೀರೇ ಪಡಸಲಗಿಯಲ್ಲಿ 220 ಕೆ.ವಿ. ವಿದ್ಯುತ್ ಉಪಕೇಂದ್ರ ಮತ್ತು ಸಾವಳಗಿಯಲ್ಲಿ 33 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ತತ್ವಶಃ ಒಪ್ಪಿಗೆ ನೀಡಲಾಗಿದೆ. ಹಿಂದೆ ಏನು ಮಾಡಿದ್ದರು ಅಂದರೆ ಅಲ್ಲಿನ ಲೋಡ್ ಫ್ಯಾಕ್ಟರ್ ತೆಗೆದುಕೊಳ್ಳದೇ ಹಿರೇ ಪಡಸಲಗಿಯಲ್ಲಿ 33 ಮತ್ತು ಸಾವಳಗಿಯಲ್ಲಿ 110 ಎಂದು ಮಾಡಿದ್ದರು. ಈಗ ಆ ಪ್ರಾಜೆಕ್ಟ್ ಅಥವಾ ಕಾರ್ಯಕ್ರಮವನ್ನು ಜಾರಿಗೊಳಿಸುವಾಗ ನಮಗೆ ಮಾಹಿತಿ ಏನು ಬಂದಿದೆ ಎಂದರೆ ಹಿರೇ ಪಡಸಲಗಿಯಲ್ಲಿ 110, ಸಾವಳಗಿಯಲ್ಲಿ 33 ಕೆ.ವಿ. ಅವಶ್ಯಕತೆ ಇದೆ. ಇದರಿಂದ 80 ಲಕ್ಷ ರೂಪಾಯಿ ಹಣ ಕೆಇಬಿಗೂ ಉಳಿಯುತ್ತದೆ. ಮತ್ತು ಸುತ್ತಮುತ್ತಲಿನ 8-10 ಗ್ರಾಮದ ಜನರಿಗೂ ಅನುಕೂಲ ಆಗುತ್ತದೆ. ಮಾನ್ಯ ಸದಸ್ಯರು ಸಾವಳಗಿ ತಮ್ಮ ಕ್ಷೇತ್ರದಲ್ಲಿ ಬರುತ್ತದೆ ಎನ್ನುವ ಒಂದು ಕಾರಣ ನಿಜ. ಆದರೆ ಈಗ ನಾವು ಕೈಕೊಂಡಿರತಕ್ಕ ಕಾರ್ಯಕ್ರಮದಿಂದ ಇಡೀ ಪ್ರದೇಶದ ಜನರಿಗೆ ಅನುಕೂಲ ಆಗುತ್ತದೆ.

ಶ್ರೀ ಜಿ.ಟಿ. ಪಾಟೀಲ್ : ಹಿರೇ ಪಡಸಲಗಿ ಕೂಡ ನನ್ನ ಕ್ಷೇತ್ರಕ್ಕೆ ಬರುತ್ತದೆ. ಸಾವಳಗಿ ಕೂಡ ನನ್ನ ಕ್ಷೇತ್ರಕ್ಕೆ ಬರುತ್ತದೆ. ಜನರ ಬೇಡಿಕೆ ಸಾವಳಗಿಗೆ ಸ್ಪಷ್ಟವಾಗಿ ಬೇಕು ಎಂದು ಇದೆ. ಇದರಿಂದ ನಿಮಗೆ 80 ಲಕ್ಷ ರೂಪಾಯಿ ಖರ್ಚು ಹೆಚ್ಚು ಬಂದರೂ ಸಹಿತ ಇತರ ಹಳ್ಳಿಗಳನ್ನು ಕವರ್ ಮಾಡುವುದಕ್ಕೆ ಸಾಧ್ಯ ಇದೆ. ಆದ್ದರಿಂದ ಕೇವಲ 80 ಲಕ್ಷದ ಸಲುವಾಗಿ ಹಿರೇ ಪಡಸಲಗಿಯಲ್ಲಿ ಮಾಡುವ ಬದಲು ಸಾವಳಗಿಯಲ್ಲಿ ಮಾಡಬೇಕು ಎಂದು ನಾನು ಸ್ಪಷ್ಟವಾಗಿ ಕೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ನಾವು 80 ಲಕ್ಷ ರೂಪಾಯಿ ಉಳಿಸುವುದಕ್ಕೋಸ್ಕರ ಬದಲಾವಣೆ ಮಾಡಿದ್ದಲ್ಲ, ಹಿರೇ ಪಡಸಲಗಿಯಲ್ಲಿ 110, ಸಾವಳಗಿಯಲ್ಲಿ 33 ಕೆ.ವಿ. ಉಪಕೇಂದ್ರ ಆದರೆ ಅದರಿಂದ ಹೆಚ್ಚಿನ ಗ್ರಾಮಗಳಿಗೆ ಅದು ಅನುಕೂಲ ಆಗುತ್ತದೆ ಎಂದು, 80 ಲಕ್ಷ ರೂಪಾಯಿ ಉಳಿಯುತ್ತದೆ ಎಂದಲ್ಲ, ಆದರೂ ಮಾನ್ಯ ಸದಸ್ಯರು ಹೇಳುವ ಪ್ರಕಾರ 110 ಕೆವಿ ಕೇಂದ್ರ ಮಾಡುವ ಅವಶ್ಯಕತೆ ಇದೆ ಎಂದು ಕಂಡರೆ ಅದರ ಬಗ್ಗೆ ತೀರ್ಮಾನ ಮಾಡೋಣ.

ಶ್ರೀ ಜಿ.ಟಿ. ಪಾಟೀಲ್ : ಮಾನ್ಯ ಉಪ ಮುಖ್ಯಮಂತ್ರಿಗಳು ಲೋಡ್ ಶೆಡ್ಡಿಂಗ್ ಪ್ರಕಾರ ಎಲ್ಲಾ ಕಡೆಗೆ ಸರಿಯಾಗಿ ವಿದ್ಯುತ್ ಸರಬರಾಜು ಮಾಡಲಿಕ್ಕೆ

ಹತ್ತಿದ್ದೇವೆ. ಈಗ ಇಂಪ್ರೂವ್ ಮೆಂಟ್ ಆಗಿದೆ ಎಂದು ಹೇಳಿದರು. ನಾನ ಈಗಾಗಲೇ ಈ ಸಮಸ್ಯೆಯನ್ನು ಅಧ್ಯಕ್ಷರ ಗಮನಕ್ಕೆ ತಂದಿದ್ದೇನೆ. ನಮ್ಮ ಟೇಲ ಎಂಡಿನ ಬೀಳಗಿ ಜಮಖಂಡಿ ಕ್ಷೇತ್ರದಲ್ಲಿ ಸಂಪೂರ್ಣವಾಗಿ ಬರತಕ್ಕ ಏರಿಯಾ ಇಲ ನಾಲ್ಕೈದು ದಿವಸಗಳಿಂದ ಕುಡಿಯುವ ನೀರಿಗೆ ಸಹ ತಾಪತ್ರಯ ಆಗಿದೆ. ಇದ ಸಲುವಾಗಿ ತಾವು ಏನು ಟೈಮ್ ಕೊಟ್ಟಿದ್ದೀರಿ, ವಿದ್ಯುತ್ ಸರಬರಾಜಿಗೆ, ಆ ಟೈಮ ಪ್ರಕಾರ ಸಪ್ಲೈ ಮಾಡುವಂತಹ ವ್ಯವಸ್ಥೆ ಮಾಡುತ್ತೀರೋ?

ಅಧ್ಯಕ್ಷರು : ಇದು ಬೇರೆ ಪ್ರಶ್ನೆ ಆಯಿತಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಪ್ರಯತ್ನ ಮಾಡುತ್ತೇನೆ.

ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್ ಹಾಗೂ ನಗರ ಸಭೆಗಳಲ್ಲಿ ಮಹಿಳೆಯರಿಗಾಗಿ ಮೀಸಲಿಟ್ಟ ಹುದ್ದೆಗಳು

323 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪರಿಶಿಷ್ಟ ವರ್ಗಕ್ಕೆ ಸೇರಿದ ಮಹಿಳೆಯರಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಹುದ್ದೆ ಮೀಸಲಾತಿ ಇದ್ದರೂ ಸಹ ಅಂತಹವರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತಂದು ಮಹಿಳೆಯರಿಗೆ ಲಭ್ಯವಿರುವ ಹುದ್ದೆಗಳನ್ನು ತೆಗೆದುಹಾಕಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗೇನಾದರೂ ಬಂದಿದ್ದಲ್ಲಿ ಅಂತಹ ಪ್ರಕರಣಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?*

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಅಧ್ಯಕ್ಷಿಣಿಯವರನ್ನು ಅವಿಶ್ವಾಸ ನಿರ್ಣಯದ ಮೂಲಕ ತೆಗೆದುಹಾಕಿರುವ ಪ್ರಕರಣ ಗಮನಕ್ಕೆ ಬಂದಿದೆ ಆದರೆ ಪರಿಶಿಷ್ಟ ವರ್ಗದ ಮಹಿಳೆಯರಿಗೆ ಲಭ್ಯವಿರುವ ಹುದ್ದೆಗಳನ್ನು ತೆಗೆದು ಹಾಕಿರುವುದಿಲ್ಲ.

ಆ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 49 1440(3) ಮತ್ತು 179 (3)ರ ಪ್ರಕಾರ ಅಧ್ಯಕ್ಷ : ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶವಿದೆ. ಅವಿಶ್ವಾಸ ನಿರ್ಣಯದಿಂದ ತೆರವಾದ ಸ್ಥಾನಕ್ಕೆ ಅದೇ ವರ್ಗದ ಸದಸ್ಯರಿಂದ ಚುನಾವಣೆ ಮೂಲಕ ತುಂಬಲು ಕ್ರಮ ತೆಗೆದುಕೊಳ್ಳತಕ್ಕದ್ದೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈಗಾಗಲೇ ನಿರ್ದಿಷ್ಟವಾದ ವರ್ಗಕ್ಕೆ ಮೀಸಲಿಟ್ಟಿರುವ ಅಧ್ಯಕ್ಷ : ಉಪಾಧ್ಯಕ್ಷರ ಸ್ಥಾನವನ್ನು ಬದಲಾಯಿಸಲು ಸರ್ಕಾರ ಯಾವುದೇ ಆದೇಶ ಹೊರಡಿಸಿರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಈ ಒಂದು ರೆಸಲ್ಯೂಷನ್ ಮಹಿಳೆಯರಿಗೆ ಎಂದು ಮಾಡಿ ಅಧ್ಯಕ್ಷರಿಗೆ : ಉಪಾಧ್ಯಕ್ಷರಿಗೆ ಮೀಸಲಾತಿ ಇಡುತ್ತೇವೆ ಎಂದು ಇಟ್ಟು ಮತ್ತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳಿಗೆ ರಿಸರ್ವೇಷನ್ ಇಟ್ಟರು. ಆದರೆ ಪರಿಸ್ಥಿತಿ ಏನು ಆಗಿದೆ ಎಂದರೆ ಇಡೀ ಕರ್ನಾಟಕದಲ್ಲಿ ಎಲ್ಲೆಲ್ಲಿ ಪರಿಶಿಷ್ಟ ಮಹಿಳೆಯರಿಗೆ ಅಧ್ಯಕ್ಷರು ಉಪಾಧ್ಯಕ್ಷರು ಇಟ್ಟಿದ್ದಾರೋ ಅದನ್ನು ಮಹನೀಯರು ಸಹಿಸದೇ ಈಗ ಅವರ ಮೇಲೆ ಅವಿಶ್ವಾಸ ನಿರ್ಣಯ ತಂದಿರತಕ್ಕ ವಿಷಯ ತಮ್ಮ ಗಮನಕ್ಕೆ ಬಂದಿದೆ ಎಂದು ಈಗ ಹೇಳಿದಿರಿ. ಅದು ಎಷ್ಟು ಕಡೆ ಈ ರೀತಿ ಆಗಿದೆ? ಅವರನ್ನು ಮತ್ತೆ ಆ ಸ್ಥಾನದಲ್ಲಿ ಕೂರಿಸುವುದಕ್ಕೋಸ್ಕರ

ತಾವೇನು ಪ್ರಯತ್ನ ಮಾಡಿದ್ದೀರಿ? ಉಪಾಧ್ಯಕ್ಷರು ಅಧ್ಯಕ್ಷರು ಬಗ್ಗೆ ಎಂಬುದನ್ನು ತಿಳಿಸಬೇಕು. ಏಕೆಂದರೆ ನಾನು ಹೋಗಿದಂತಹ ಸಂದರ್ಭದಲ್ಲಿ ಹಲವಾರು ಕಡೆ ಮಹಿಳೆಯರನ್ನು ಕಳುಹಿಸಿಕೊಟ್ಟಿದ್ದಾರೆ. ಉಪಾಧ್ಯಕ್ಷರು ಎಲ್ಲೆಲ್ಲಿ ಮಹನೀಯರು ಆಗಿದ್ದಾರೋ ಅಂತಹ ಕಡೆ ಅವರೇ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ, ಮಹಿಳೆಯರನ್ನು ಅಧ್ಯಕ್ಷ ಸ್ಥಾನದಲ್ಲಿ ಕೆಲಸ ಮಾಡಲಿಕ್ಕೆ ಅವಕಾಶ ಕೊಟ್ಟಿಲ್ಲ, ಅದರ ಬಗ್ಗೆ ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯಣಿಯವರ ಕಳಕಳಿ ನಮಗೆಲ್ಲಾ ಅರ್ಥ ಆಗುತ್ತಿದೆ. ಆದರೆ ಅವರು ಹೇಳಿದಂತೆ ಬಹಳ ಕಡೆ ಈ ರೀತಿ ಆಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲ, ನಮಗೆ ಗೊತ್ತಿದ್ದಂತೆ ಸರ್ಕಾರದ ಮಾಹಿತಿಗೆ ಅನುಗುಣವಾಗಿ ಕನಕಪುರ ತಾಲ್ಲೂಕಿನಲ್ಲಿರುವಂತಹ ಹುಕುಂದ ಎನ್ನುವಂತಹ ಗ್ರಾಮದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದಂತಹ ಒಬ್ಬ ಮಹಿಳೆ ಮೇಲೆ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿ ಅದಾದ ನಂತರ ಎರಡು ಮೂರು ಬಾರಿ ಚುನಾವಣೆಗಳ ಸಂದರ್ಭವನ್ನು ನಡೆಸಿದರೂ ಕೂಡ ಕೋರಂ ಇಲ್ಲದಂಥ ರೀತಿಯಲ್ಲಿ ಅವರು ಹೊರಗಡೆ ಉಳಿದಿರುವುದರಿಂದ ಅಲ್ಲಿ ಅದ್ಯಕ್ಷರಿಗೆ ಚುನಾವಣೆ ಆಗಿಲ್ಲ, ಉಪಾಧ್ಯಕ್ಷರೇ ಕಾರ್ಯವನ್ನು ನಿರ್ವಹಿಸುತ್ತಾ ಇದ್ದಾರೆ. ಅದೇ ರೀತಿ ಆನೇಕಲ್ ತಾಲ್ಲೂಕಿನಲ್ಲಿ ಒಂದು ಪರಿಶಿಷ್ಟ ಜಾತಿಗೆ ಸೇರಿದಂತಹ ಒಬ್ಬ ಮಹಿಳೆಯನ್ನು ಅವಿಶ್ವಾಸ ಗೊತ್ತುವಳಿಯ ಮೂಲಕ ಕೆಳಗೆ ಇಳಿಸಿದ ನಂತರ ·ಒಬ್ಬ ಉಪಾಧ್ಯಕ್ಷ ಅಲ್ಲಿ ಕಾರ್ಯ ನಿರ್ವಹಿಸುತ್ತಾ ಇದ್ದಾನೆ. ಇವೆರಡು ಪ್ರಕರಣಗಳು ಮಾತ್ರ ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ. ತಮಗೆ ಗೊತ್ತಿದ್ದಂತೆ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸತಕ್ಕದ್ದು. ಕಾನೂನಿಗೆ ಸಂಬಂಧಿಸಿದ್ದುದು. ಕಾನೂನಿನಲ್ಲಿಯೂ ಕೂಡ ಸಂಬಂಧಿಸಿದಂತಹ ವಿಧಿ ನಿಯಮಾವಳಿಗಳು ಇದೆ. ಯಾರನ್ನೂ ಕೂಡ ಅವಿಶ್ವಾಸ ಗೊತ್ತುವಳಿ ಮಂಡಿಸಬಾರದೆಂದು ಹೇಳಿ ಪ್ರತಿಬಂಧಕ ಮಾಡಲು ಸಾಧ್ಯವಾಗುವುದಿಲ್ಲ, ಆದರೆ ಇಲ್ಲಿಯವರೆಗೆ ತಾವೇನು ಅಂದು ಕೊಂಡಿದ್ದೀರಿ, ಮಹನೀಯರುಗಳು ಈ ರೀತಿಯಾದಂತಹ ಒತ್ತಡವನ್ನು ತರುತ್ತಾರೆನ್ನುವುದು ಸುಳ್ಳು. ಮೀಸಲಾತಿಯ ಪ್ರಕರಣಗಳು ಬಂದಂತಹ ಅನೇಕ ಸಂದರ್ಭದಲ್ಲಿ ಈ ರೀತಿಯ ತೊಂದರೆಗಳು ಆಗಿವೆ. ಆದರೆ ತಮಗೆ ಗೊತ್ತಿದ್ದಂತೆ ಪುರುಷ ಪ್ರಧಾನವಾದಂತಹ ಸಮಾಜ ತನ್ನ ಪರಿವರ್ತನಾ ಶೀಲ ಯುಗದಲ್ಲಿ ಇಂತಹ ವಿಚಾರಗಳಲ್ಲಿ ಉದಾರೀತನರನ್ನು ತೋರಿಸುತ್ತಾರೆಂದು ನಾನು ಭಾವಿಸಿದ್ದೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೆ, ಕರಚಿಕೆರೆ ಬಳ್ಳಾರಿ ಜಿಲ್ಲೆ ಗ್ರಾಮದಲ್ಲಿ ಇದೇ ಪರಿಸ್ಥಿತಿ ಆಗಿದೆ. ಏಕೆಂದರೆ ತಮಗೆ ಮಾಹಿತಿ ಸರಿಯಾಗಿ ಕೊಟ್ಟಿಲ್ಲವೆಂದು ಕಾಣುತ್ತದೆ. ಬೇಕಾದಷ್ಟುಕಡೆ ಆಗಿದೆ. ಸುಮಾರು 15 ಪ್ರಕರಣಗಳು ಹೈಕೋರ್ಟಿನ ಮುಂದೆ ಬಂದಿವೆ. ಏತಕ್ಕೆ ನಾನು ಹೇಳುತ್ತಿದ್ದೇನೆಂದರೆ ಇಂತಹ ಪ್ರಕರಣಗಳು ಎಷ್ಟೆಷ್ಟು ಕಡೆ ಆಗಿದೆ, ಆ ಅವಿಶ್ವಾಸ ನಿರ್ಣಯ ತಂದಾಗ ಅದನ್ನು ತರಬರಾದು, ಮಹಿಳೆಯರು ಇರತಕ್ಕ ಸಂದರ್ಭದಲ್ಲಿ ಎಂದು ತಾವೇನಾದರೂ ಕಾನೂನಿಗೆ ಬದಲಾವಣೆ ಮಾಡಲು ಪ್ರಯತ್ನ ಮಾಡುತ್ತೀರಾ?. ಇಲ್ಲದೇ ಇತ್ತು ಎಂದರೆ ಅಧ್ಯಕ್ಷ ಸ್ಥಾನವನ್ನು ಮಹಿಳೆಯರ ಕೊಟ್ಟು ಅವರನ್ನು ಎರಡನೇ ಮೀಟಿಂಗ್‌ನಲ್ಲಿ ಅವರನ್ನು ತೆಗೆದು ಹಾಕಿ, ಮತ್ತೆ ನೀವು ಎಲೆಕ್ಷನ್ ಕರೆದಾಗ ಕೋರಂ ಇಲ್ಲದೆ ಇದ್ದಾಗ ಎಲೆಕ್ಷನ್ ಮಾಡದೇ ಮಹನೀಯನರೇ ಇರತಕ್ಕ ಸಂದರ್ಭದಲ್ಲಿ ಅಂತಹ ಪಂಚಾಯತಿಗಳನ್ನು ಸೂಪರ್ ಸೀಡ್ ಮಾಡತಕ್ಕಂಥ ಕ್ರಮವನ್ನು ತಾವೇನಾದರೂ ತೆಗೆದುಕೊಂಡರೆ ಅಂಥ ಪ್ರಕರಣದ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು. ಲ್ಲದೇ ಇದ್ದರೆ ಮಹಿಳೆಯರು ಅಧ್ಯಕ್ಷರಾಗಿ ಕೆಲಸ ನಿರ್ವಹಿಸಲು ಆಗುವುದಿಲ್ಲ, ಹೆಸರಿಗೆ ಸ್ಟ್ಯಾಟಿಸ್ಟಿಕ್ಸ್‌ನಲ್ಲಿ ಅವರು

ಅಧ್ಯಕ್ಷರಾಗಿರುತ್ತಾರೆ. ಆದರೆ ನಿಜವಾಗಿಯೂ ಮಹನೀಯರು ಅಧ್ಯಕ್ಷರಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಈ ಪರಿಸ್ಥಿತಿಯನ್ನು ತಾವೇನಾದರೂ ಸುಧಾರಣೆ ಮಾಡಬೇಕಾದರೆ ಕಾನೂನಿನ ತಿದ್ದುಪಡಿ ತರಬೇಕಾಗುತ್ತದೆ. ಸಂದರ್ಭದಲ್ಲಿ ಸೂಪರ್‌ಸೀಡ್ ಮಾಡತಕ್ಕ ಕ್ರಮವನ್ನೇನಾದರೂ ತಾವು ತೆಗೆದುಕೊಳ್ಳುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸಭಾಧ್ಯಕ್ಷರೆ, ತಮಗೆ ಗೊತ್ತಿದ್ದಂತೆ ಇಂತಹ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಂತಹ ಸಂದರ್ಭದಲ್ಲಿ ಸಮಾಜ ಒಂದೊಂದು ಸಲ ಇದನ್ನು ಒಪ್ಪದೇ ಇರುವಂತಹ ಸ್ಥಿತಿಗಳೂ ಕೂಡ ಇವೆ. ಕಾನೂನಿನಲ್ಲಿ ಅವಿಶ್ವಾಸ ಗೊತ್ತುವಳಿಯನ್ನು ತರತಕ್ಕ ಅಧಿಕಾರ ಅಂತರ್ಗತವಾಗಿರುವುದರಿಂದ ಅದನ್ನು ಇಂತಹ ಕಾರಣಕ್ಕಾಗಿ ನಾವು ಏನಾದರೂ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಬಾರದು ಎಂದು ಹೇಳಿ ತಿದ್ದುಪಡಿ ತರುವುದು ಆಗಿದ್ದರೆ ಅದರಿಂದ ಹೆಚ್ಚು ಅಪಾಯಕಾರಿಯಾಗಿರತಕ್ಕ ಪರಿಣಾಮಗಳು ಆಗುತ್ತವೆ. ಸ್ವತಃ ಪ್ರಮೀಳಾ ನೇಸರ್ಗಿಯವರೇ ಕೋರ್ಟಿಗೆ ಹೋಗುವಂತಹ ಸಂಬವ ಕೂಡ ಇರುತ್ತದೆ.

ಅಧ್ಯಕ್ಷರು : ಲಾಯರ್ಸ್‌ಗೆ ಈ ಕೆಲಸ ಹೆಚ್ಚು ಆಗುತ್ತದೆ.

ಶ್ರೀ ಎಂ.ಪ. ಪ್ರಕಾಶ್ : ಆದ್ದರಂದ ಇದನ್ನು ನಾವು ತರಬೇಕಾಗಿರತಕ್ಕಂಥ ಪ್ರಶ್ನೆ ಬರುವುದಿಲ್ಲ, ಆದರೆ ನಾವು ಅನೇಕ ಕಡೆ ಸೂಪರ್‌ಸೀಡ್ ಮಾಡಬಹುದು ಎಂದು ಹೇಳಿ, ಆದರೆ ಇಂತಹ ಕಾನೂನಿಗೆ ಅನುಗುಣವಾಗಿರತಕ್ಕಂಥ ನಡವಳಿಕೆಗಳಲ್ಲಿ ಅನೇಕ ಸಂದರ್ಭದಲ್ಲಿ ಕಾನೂನು ತಜ್ಞರು ಕೊಟ್ಟಂತಹ ಸಲಹೆ ಮೂಲಕ ಕೂಡ ಅವರು ರಂಗೋಲಿಯ ಕೆಳಗೆ ಹೋಗುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇನ್ನೂ ಎರಡು ಮೂರು ಸಲ ಇದಕ್ಕೆ ಪ್ರಯತ್ನ ಮಾಡಿದ್ದೇವೆ. ಚುನಾವಣೆಗಳನ್ನು ಮತ್ತೆ ಮತ್ತೆ ಕರೆದಿದ್ದೇವೆ.. ಇದರ ಬದಲು ಈ ತರಹ ಕೋರಂ ಇಲ್ಲದಂತಹ ರೀತಿಯಲ್ಲಿ ಉದ್ದೇಶಪೂರ್ವಕವಾಗಿ ಮೀಸಲಾತಿ ಇಟ್ಟಿರತಕ್ಕ ಕ್ಷೇತ್ರದಲ್ಲಿ ಅಧ್ಯಕ್ಷರು ಕೆಲಸ ಮಾಡಬಾರದೆಂದು ಹೇಳಿ ನಿರ್ಣಯ ಮಾಡುವುದಾಗಿದ್ದರೆ ಅವರ ಮೇಲೆ ಇನ್ನಾವುದೇ ತೆರಹವಾಗಿರತಕ್ಕಂಥ ದಂಡನೆಯ ಕ್ರಮಗಳನ್ನು ಅಂದರೆ ಪುನಿಟೀವ್ ಆಕ್ಷನ್ ಎನ್ನುವುದಾದರೆ ಅವರಿಗೆ ಹಣವನ್ನು ಜೆ.ಆರ್. ವೈನವರಿಗೆ ಕೊಡುವುದನ್ನು ಬಿಡುವುದೋ, ಹಾಗೆ ಬಿಡುವುದಾಗಿದ್ದರೆ ಜನಸಾಮಾನ್ಯರು ಏಕೆ ತೊಂದರೆಗೆ ಒಳಗಾಗಬೇಕು ಎನ್ನುವುದು ಇಂತಹ ವಿಚಾರವನ್ನು ಕೂಡ ತೀವ್ರವಾಗಿ ಸರ್ಕಾರ . ಗಮನದಲ್ಲಿಟ್ಟುಕೊಂಡು ಪರಿಶೀಲಿಸುತ್ತದೆ ಎಂದು ತಮ್ಮ ಮೂಲಕ ಅರಿಕೆ ಮಾಡಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಮಂತ್ರಿಗಳು ಹೇಳಿದರು. ವೋಟ್ ಆಫ್ ನೋ ಕಾನ್‌ಫಿಡೆನ್ಸ್ ತಂದ ಮೇಲೆ ಆ ಪ್ರಾವಿಜನ್ ತೆಗೆಯುವುದಕ್ಕೆ ಆಗುವುದಿಲ್ಲ. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ವೋಟ್ ಆಫ್‌ನೋ ಕಾನ್‌ಫಿಡೆನ್ಸ್ ತಂದು ಅಲ್ಲಿರತಕ್ಕ ಪರಿಶಿಷ್ಟ ಜಾತಿ : ಪಂಗಡದವರು ಆಗಲಿ, ಅಥವಾ ಇನ್ನಾರಾದರೂ ರೋಸ್ಟರ್ ಪ್ರಕಾರ ಯಾರು ಬರುತ್ತಾರೆ ಅಧ್ಯಕ್ಷರಾಗಿ ಅವರನ್ನು ತೆಗೆಯತಕ್ಕ ಪ್ರಯತ್ನ ಮಾಡುತ್ತಾರೆ. ಏಕೆಂದರೆ ಅವರಿಗೆ ಬೇಕಾದಂತಹವರು ಅಲ್ಲಿ ಇಲ್ಲ ಎಂದು ಮಾಡುತ್ತಾರೆ. ಅಂದಾಗ ನೀವು ವೋಟ್ ಅಪ್ ನೋ ಕಾನ್‌ಫಿಡೆನ್ಸ್ ತಂದು ಅವರನ್ನು ತೆಗೆದ ಮೇಲೆ ನೆಕಸ್ಟ್ ರೋಸ್ಟರ್ ಪ್ರಕಾರ ಅದೇ ಪಂಗಡದವರಿಗಾದರೂ ಕೊಡಬೇಕು. ಕೊಡುವುದಕ್ಕೆ ಅಲ್ಲಿ ಅವಕಾಶ ಇಲ್ಲ ಎಂದಾಗ ಅಂತಹ ಕಡೆ ಸೂಪರ್‌ಸೀಡ್ ಆದರೂ ಮಾಡಿದರೆ ಅವರಿಗೆ ಹೆದರಿಕೆ ಹುಟ್ಟುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಯಾರೂ ನಮ್ಮನ್ನು ಕೇಳುವವರಿಲ್ಲ. ಇದೇ ರೀತಿಯಾಗಿ ಸುಮ್ಮನೆ ವೋಟ್ ಆಫ್ ನೋ ಕಾನ್‌ಫಿಡೆನ್ಸ್ ತರುವುದು, ಅವರನ್ನು ತೆಗೆಸುವುದು. ಉಪಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದವರು ಅದನ್ನು ಐದು ವರ್ಷ ನಡೆಸಿಕೊಂಡು ಹೋಗುವುದು. ಅದಕ್ಕಾಗಿ ಅವರಿಗೆ ನೀವು ಏನಾದರೂ ಒಂದು

ಹೆದರಿಕೆ ಹುಟ್ಟಿಸಬೇಕಾದರೆ ಅಥವಾ ನಾವು ಮಾಡಿದ್ದು ತಪ್ಪು ಇದೆ ಎಂದು ಅವರಿಗೆ ಭಾವನೆ ತಂದು ಕೊಡಬೇಕಾದರೆ ಕೊನೆಗೆ ನೀವು ಈ ಅಸ್ತ್ರವನ್ನು ಉಪಯೋಗ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನಾಳೆ ಅದಕ್ಕೆ ತೊಂದರೆ ಆಗುತ್ತದೆ.

MR. SPEAKER : When the office of the Chairman falls vacant by way of passing no confidence motion, the vacancy that arises shall be filled within a period of three months. ಆ ತರಹ ಮಾಡಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಈ ಅಪಾಯ ಏಕೆ ಬಂತೆಂದರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ತಮ್ಮ ಕಾಲದಲ್ಲಿ ನೀವು ಏನು ಮಾಡಿದಿರಿ ಎಂದರೆ ಇಂತಹ ಸ್ಥಾನವನ್ನು ಇಂತಹ ವರ್ಗಕ್ಕೆಂದು ಮೀಸಲಿಟ್ಟು, ಚುನಾವಣೆಯಾದ ನಂತರ ಇಂತಹವರೇ ಅಧ್ಯಕ್ಷರು ಉಪಾಧ್ಯಕ್ಷರು ಆಗಬೇಕೆಂದು ಮಾಡಿದಿರಿ. ಈಗ ಪರಿಶಿಷ್ಟ ಜಾತಿಯ ಪುರುಷ ಸ್ತ್ರೀಯರಿಗೆ ಏನು ಮೀಸಲಾತಿ ಇಟ್ಟಿದ್ದೇವೆ, ಇದರ ಬಗ್ಗೆ ಇನ್ನು ಮುಂದೆ ತೊಂದರೆಯಿಲ್ಲ, ಆಗಿದ್ದ ತೊಂದರೆಯನ್ನು ಈಗ ನಾವು ಸರಿಪಡಿಸಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ ಮಾತಿನಲ್ಲೂ ಸತ್ಯಾಂಶವಿದೆ. ನಾವು ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ನಡೆಸುವಾಗ ಅದರ ಅಧ್ಯಕ್ಷ : ಉಪಾಧ್ಯಕ್ಷರ ಪದವಿ ಇಂತಹ ನಿರ್ದಿಷ್ಟ ಕೋಮಿನವರಿಗೆ ಹೋಗುತ್ತದೆನ್ನುವ ಮಾತನ್ನು ಹೇಳಿದ್ದರಿಂದ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಈ ತರಹದ ತಂತ್ರಗಾರಿಕೆ ನಡೆದಿಲ್ಲ, ಆದರೆ, ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವಾಗ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನಾದರೂ ವ್ಯತ್ಯಾಸವಿದೆಯೇ? ವ್ಯತ್ಯಾಸವಿದ್ದರೆ ಹೇಳಿ, ನಮಗಾದರೂ ಅರ್ಥವಾಗಲಿ.

ಶ್ರೀ ಎಂ.ಪಿ. ಪ್ರಕಾಶ್ : ವ್ಯತ್ಯಾಸವೆಂದರೆ ಇಷ್ಟೆ: ಪ್ರಾಯಶಃ ಯಾರು ತಾವೇ ಅಧ್ಯಕ್ಷರಾಗಬೇಕೆಂದು ಮಾನಸಿಕವಾಗಿ ಭಾವಿಸಿಕೊಂಡು ಅದರ ಏರ್ಪಾಡು ಮಾಡಿ ಹಣ್ಣು ತಿನ್ನುವಂಥ ಸ್ಥಿತಿಗೆ ಬಂದಾಗ ತಿನ್ನಲಾರದೆ ಹೋಯಿತು ಎಂಬ ಕಾರಣಗಳ ಮೂಲಕವಾಗಿ ಕೆಲವರು ಇಂತಹ ಪ್ರತಿರೋಧಗಳ ತಂತ್ರಗಾರಿಕೆ ನಡೆಸಿರಬಹುದು. ಆದರೆ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಚುನಾವಣೆ ಸಂದರ್ಭದಲ್ಲಿ ಇಂತಹ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷ ಹಾಗ ಉಪಾಧ್ಯಕ್ಷರ ಸ್ಥಾನ ಇಂತಹವರಿಗೇ ಹೋಗುತ್ತದೆಂದು ಘೋಷಿಸಿದ್ದೆವು. ಹಾಗೆ ಘೋಷಿಸಿದ್ದರಿಂದ ಕೆಲವರು ಅಧ್ಯಕ್ಷರಾಗದೆ ಬರೀ ಸಾಮಾನ್ಯ ಸದಸ್ಯರಾಗಿ ಏಕೆ ಕುಳಿತುಕೊಳ್ಳಬೇಕೆನ್ನುವ ಕಾರಣಕ್ಕಾಗಿ ಚುನಾವಣೆಯಲ್ಲಿ ಸ್ಪರ್ಧಿಸದೇ ಹೋದರೂ ತೀವ್ರವಾದ ಪೈಪೋಟಿಗಳು ಇಲ್ಲದೇ ಹೋದರೂ ಈ ತರಹದ ಕಾರಣಗಳಿವೆ. ಈಗ ಸನ್ಮಾನ್ಯ ಅಧ್ಯಕ್ಷರು ಸೂಚಿಸಿದಂತೆ ಈ ವಿಚಾರದಲ್ಲಿ ಸರ್ಕಾರದವರಾದ ನಾವು ಏನು ಮಾಡಿದ್ದೇವೆಂದರೆ ನೀವು ಅವಿಶ್ವಾಸ ಗೊತ್ತುವಳಿಯನ್ನು ಕೆಳಗಿಳಿಸಿದ್ದರೂ ಆ ಸ್ಥಾನವನ್ನು ನಿರ್ದಿಷ್ಟ ವರ್ಗಕ್ಕೆ ಮೀಸಲಿಟ್ಟಿದ್ದೇವೆ. ಇದರಿಂದ ಎಲ್ಲೆಲ್ಲಿ ಎರಡು ಅಥವಾ ಮೂರು ಬಾರಿ ಚುನಾವಣೆಗಳು ನಡೆಯದೆ ಕೇವಲ ತಂತ್ರಗಾರಿಕೆ ಉಪಯೋಗಿಸಿಕೊಂಡು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಮಾತು ನಿಜವಾಗಿಯೂ ಸ್ವಾಗತಾರ್ಹವಾದುದು. ನಾವು ಖಂಡಿತವಾಗಿಯೂ ಸೂಪರ್‌ಸೀಡ್ ಮಾಡುತ್ತೇವೆ ಮತ್ತು ಆ ಬಗ್ಗೆ ಎರಡು ಮೂರು ಬಾರಿ ಅವಕಾಶ ಕೊಡಬೇಕೆಂದು ಹೇಳುತ್ತಾರೆ, ಅದೇ ರೀತಿ ಮೂರು ಬಾರಿ ಅವಕಾಶ ಕೊಡುತ್ತೇವೆ. ಒಂದು ವೇಳೆ ಮತ್ತೆ ಇದೇ ರೀತಿಯ ಕೆಲಸ ಮಾಡಿದರೆ ನಾವು ಆ ಹೆದರಿಕೆಯನ್ನು ಹಾಕುತ್ತೇವೆ ಮತ್ತು ಅದಕ್ಕೆ ಕಾನೂನು ತಿದ್ದುಪಡಿ ಸಹ ತರುತ್ತೇವೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಅನೇಕಲ್‌ನ ಜಿಗಣಿ ಹೋಬಳಿಯಲ್ಲಿ ಒಬ್ಬ ಹೆಣ್ಣು ಮಗಳಿಗೆ ಹೊಡೆದು ಊರಿನಿಂದ ಓಡಿಸಿದರು. ಆ ವಿಚಾರವನ್ನು ನಾನು ತಮ್ಮ ಗಮನಕ್ಕೆ ತಂದೆ ಹಾಗೂ ಹಿಂದಿನ ಅಧಿವೇಶನದ ಸಮಯದಲ್ಲೂ ವಿಧಾನಸಭೆಯಲ್ಲಿ ಪ್ರಸ್ತಾಪವಾಯಿತು. ಇದರಿಂದ ಏನು ಪರಿಣಾಮವಾಯಿತು? ಕ್ರಿಮಿನಲ್ ಸುದ್ದಿ ಬೇರೆ. It is altogether a different issue. ನಾನು ಹೇಳುತ್ತಿರುವಂಥಾದ್ದು ಏನೆಂದರೆ, ಅಧಿಕಾರ ವರ್ಗ ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿಟ್ಟಂಥ ಸ್ಥಾನವನ್ನು ಈಗ ಉದಾಹರಣೆಗೆ, ನನ್ನ ಕ್ಷೇತ್ರದ ಬೇಗೂರು ಎಂಬಲ್ಲಿ ಸಭೆ ನಡೆಯುವಾಗ ಪರಿಶಿಷ್ಟ ಜಾತಿಗೆ ಸೇರಿದವರೊಬ್ಬರಿಗೆ ಕೆನ್ನೆಗೆ ಹೊಡೆದಿದ್ದಾರೆ. By using caste name - ಇಂತಹ ಅಬ್ಯೂಸ್ ಆಫ್ ಪವರ್ಸ್ ಅನ್ನು ತಡೆಯುವುದಕ್ಕೆ ತಾವು ಏನು ಕಾನೂನು ತಂದಿದ್ದೀರಿ? ಸಸ್ಪೆನ್‌ಶನ್ ಅಥವಾ ಪ್ಯುನಿಟಿವ್ ಫೈನ್ ಅಥವಾ ಕಾನೂನು ತಿದ್ದುಪಡಿ may not be possible ಎಂದು ಹೇಳಿದ್ದೀರಿ. ಮತ್ತೆ ಅವರಿಗೆ ಬೇರೆ ಏನು ರಕ್ಷಣೆ ಕೊಡುತ್ತೀರಿ? Safeguards to make more effective ಬೇರೆ ಏನನ್ನು ನೀವು ತೆಗೆದುಕೊಂಡು ಬರುತ್ತೀರಿ? ಒಂದು ವೇಳೆ ಸರ್ಕಾರದ ಉದ್ದೇಶ ತಿದ್ದುಪಡಿ ಮೂಲಕ ತಂದು ಇದನ್ನು ನಾವು ಸರಿಪಡಿಸುತ್ತೇವೆಂದರೆ..... ಇವೊತ್ತು ತಾವು ಮಸೂದೆಯನ್ನು ತೆಗೆದುಕೊಂಡು ಬಂದಿದ್ದೀರಿ, today it is coming up for consideration, therefore, ಇದರಲ್ಲಿ ತಾವು ಇನ್‌ಕಾರ್ಪೊರೇಟ್ ಮಾಡಬಹುದಲ್ಲ?

MR. SPEAKER : We will take it up afterwords.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸದಸ್ಯರು ಹೇಳಿದಂತೆ, ಇದು ನೂರಾರು ಶತಮಾನಗಳಿಂದ ಕೇಳಿ ಬಂದಿರುವಂಥ ಮಾತು. ಡಾ॥ ಬಿ.ಆರ್. ಅಂಬೇಡ್ಕರ್‌ರವರು ಮಹಾತ್ಮ ಗಾಂಧೀಜಿಯವರಿಗೆ ಏನು ಹೇಳಿದರೆಂಬುದು ತಮಗೆ ಗೊತ್ತಿದೆ. Many mahathmas have come, many mahathmas have gone. They have succeeded in raising their level of dust, but not their levels. ಇಂತಹ ಒಂದು ಕಾನೂನಿನ ಮೂಲಕವಾಗಿಯೇ ಸಮಾಜದಲ್ಲಿ ಪರಿವರ್ತನೆ ತರುತ್ತೇವೆ, ಉದಾರವಾದ ನಡವಳಿಕೆ ತರುತ್ತೇವೆನ್ನುವುದೂ ಕೂಡ ಭ್ರಮಾತ್ಮಕ ಕಲ್ಪನೆ. ಅದರ ಜೊತೆಗೆ ಇಂತಹ ಒಂದು ಪ್ರಯತ್ನಗಳು ನಿರಂತರವಾಗಿ ಆಘಬೇಕಾಗಿರುವುದರಿಂದ ಪರಿಶಿಷ್ಟ ಜಾತಿಯವರ ಕೆನ್ನೆಗೆ ಹೊಡೆದಿರುವಂಥಾದ್ದಲ್ಲ, ಅಪ್ರಬುದ್ಧರಾಗಿರುವಂಥ ಸಮಾಜದ ಪ್ರತಿನಿಧಿಗಳು ಇಂತಹುದೇ ಒಂದು ವಿಧಾನಸಭೆಯಲ್ಲಿ ಜಗಳ ಮಾಡಿ ಮುಖ್ಯಮಂತ್ರಿಗಳ ಸೆರಗನ್ನು ಹಿಡಿದೆಳೆದಿರುವುದನ್ನೂ ಕೂಡ ಕಂಡಿದ್ದೀರಿ. ಆದುದರಿಂದ, ನಮ್ಮಲ್ಲಿ ಹೆಚ್ಚು ಪ್ರಭುತ್ವ ಹಾಗೂ ಪ್ರಬುದ್ಧತೆ ಕಂಡುಬಂದರೆ ಇಂತಹ ವ್ಯವಸ್ಥೆಗಳೆಲ್ಲವೂ ಸರಿಯಾಗಿ ನಡೆಯುತ್ತವೆ. ಸರ್ಕಾರ ಖಂಡಿತವಾಗಿಯೂ ಇಂತಹ ಪ್ರಕರಣಗಳಲ್ಲಿ ತೀವ್ರವಾದ ಕ್ರಮಗಳನ್ನು ಕೈಗೊಳ್ಳುತ್ತೇವೆ ಹಾಗೂ ನಿಮ್ಮ ಜೊತೆಯಲ್ಲಿ ನಾವೂ ಇದ್ದೇವೆಂಬ ಆಶ್ವಾಸನೆ ಕೊಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಹಿರೇಕೆರೂರು ತಾಲ್ಲೂಕಿನ ಒಂದು ಪಂಚಾಯಿತಿ ಅಧ್ಯಕ್ಷ ಸ್ಥಾನ ಮಹಿಳೆಯರಿಗೆ ಮೀಸಲಿರಿಸಲಾಗಿತ್ತು. ಆಗ ಅಲ್ಲಿ ಅವಿಶ್ವಾಸ ಗೊತ್ತುವಳಿ ತಂದಿದ್ದರಿಂದ ಅಲ್ಲಿ ಚುನಾವಣೆಯಾಗಲಿಲ್ಲ. ಪರಿಣಾಮ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದಾಗ ಆ ಸ್ಥಾನಕ್ಕೆ ಮೀಸಲಾತಿ ಇಲ್ಲವೆಂದರೆ 'ಸಾಮಾನ್ಯ ವರ್ಗ'ವೆಂದು ಪರಿಗಣಿಸಿ ಚುನಾವಣೆ ನಡೆಸಬೇಕೆಂದು ನಿರ್ದೇಶನ ಕೊಟ್ಟರು. ತಮಗೆ ಅದರ ಬಗ್ಗೆ ಏನಾದರೂ ಮಾಹಿತಿ ಇದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತತ್‌ಕ್ಷಣದಲ್ಲಿ ಒಂದು ನಿರ್ದಿಷ್ಟ ಪ್ರಕರಣದ ಕುರಿತು ಹೇಳಿದ್ದರಿಂದ ಆ ಕುರಿತ ಮಾಹಿತಿ ನನ್ನಲ್ಲಿ ಲಭ್ಯವಿಲ್ಲ. ಆದರೆ, 'ಎ' ಪ್ರವರ್ಗದವರಿಗೆ ಮೀಸಲಿಟ್ಟಂಥ ಅಧ್ಯಕ್ಷ ಸ್ಥಾನಕ್ಕೆ ಆ

ವರ್ಗದಲ್ಲಿ ಯಾರೂ ಆಯ್ಕೆಯಾಗದೇ ಇದ್ದರೆ ಆ ಸ್ಥಾನವನ್ನು 'ಬಿ' ಪ್ರವರ್ಗಕ್ಕೆ ಕೊಡಬಹುದು. ಅಲ್ಲದೆ, 'ಬಿ' ಪ್ರವರ್ಗಕ್ಕೆಂದು ಮೀಸಲಿಟ್ಟಂಥ ಸ್ಥಾನಕ್ಕೆ ಆ ವರ್ಗದವರು ಯಾರೂ ಇಲ್ಲದೇ ಹೋದರೆ ಅದನ್ನು 'ಎ' ಪ್ರವರ್ಗಕ್ಕೆ ಕೊಡಬೇಕೆಂದು ಹೇಳಿದ್ದೇವೆ. ಆದರೆ, ಇತ್ತೀಚೆಗೆ ಕೆಲವು ಚುನಾವಣೆಗಳು ಸಹ ನಡೆದಿವೆ.

ಅಧ್ಯಕ್ಷರು : ಮಾನ್ಯ ಸದಸ್ಯರ ಪ್ರಶ್ನೆಯೇನೆಂದರೆ, ಸರ್ಕಾರ ನಿಗದಿಪಡಿಸಿದಂಥ ಮೀಸಲಾತಿಯನ್ನು ಉಚ್ಚ ನ್ಯಾಯಾಲಯ ರದ್ದುಪಡಿಸಿದೆಯೆಂಬುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸರ್ಕಾರ ನಿಗದಿ ಮಾಡಿತ್ತು, ಅದಕ್ಕೆ ಅವಿಶ್ವಾಸ ನಿರ್ಣಯವನ್ನಿತಾದರು ಚುನಾವಣೆಯನ್ನೇ ಮಾಡಲಿಲ್ಲ. ಹೈಕೋರ್ಟಿಗೆ ಹಾಕಿದರು, ಹೈಕೋರ್ಟ್‌ನಲ್ಲಿ ರಿಜರ್ವೇಷನ್ ಇಲ್ಲವೆಂದು ಜನರಲ್ ಆಗಿ ಮಾಡಿ ಎಂದು ಡೈರಕ್ಷನ್ ಕೊಟ್ಟರು.

ಅಧ್ಯಕ್ಷರು : ಅದು ಹೇಗೆ ಮಾಡುತ್ತಾರೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾಡಿದ್ದಾರೆ, ಕೋರ್ಟ್ ಸುಮ್ಮನಿದೆ.

MR. SPEAKER : In principle the High Court can say reservation policy is not correct. It can never give a direction. If they have passed such an order we can ask for reconsideration. There is limitation to High courts also. They also cannot transgress and traverse limits all over the world. Its all right.

ಶ್ರೀ ಎಂ.ಪಿ. ಪ್ರಕಾಶ್ : ಅದಕ್ಕೆ ಸರಿಯಾದ ಉತ್ತರ ಕೊಡುತ್ತೇವೆ. ನಾನು ಆಗಲೇ ಹೇಳಿದಂತೆ 'ಎ' ಮತ್ತು 'ಬಿ' ಪ್ರವರ್ಗದಲ್ಲಿ ಬದಲಾವಣೆಗಳನ್ನು ಮಾಡಬಹುದೆಂದು ಹೇಳಿದ್ದೇನೆ. ಇತ್ತೀಚೆಗೆ ಕೆಲವು ಚುನಾವಣೆಗಳು ನಡೆದಿರುವ ಸಂದರ್ಭದಲ್ಲಿ ತಾಲ್ಲೂಕನ್ನು ಒಂದು ಅವಿಭಾಜ್ಯ ಘಟಕವೆಂದು ಪರಿಶೀಲಿಸಬೇಕಾದರೆ ನಾನೂರು ಅಂಶಗಳನ್ನು ಏನು ಕೊಟ್ಟಿದ್ದಾರೆ, ಆ ಅಂಶಗಳ ಮೂಲಕ ಅದನ್ನು 1, 2, 3 ಮತ್ತು 4 ರಲ್ಲಿ ಪುನಃ ವ್ಯತ್ಯಾಸಗಳನ್ನು ಮಾಡಿಕೊಂಡು ಹೋಗುತ್ತಾರೆ. ಹಾಗೆಯೇ ಜಿಲ್ಲಾಧಿಕಾರಿಯವರಿಗೆ ಕೊಟ್ಟಿರುವ ಪ್ರಕರಣಗಳಿರಬಹುದು. ಆದರೆ, ನಿರ್ದಿಷ್ಟ ವಿಚಾರ ಬಂದಾಗ ತಮಗೆ ಆ ಕುರಿತು ಪತ್ರ ಬರೆದು ತಿಳಿಸುತ್ತೇನೆ.

ಮೈಸೂರು ನಗರದಲ್ಲಿ ವಿದ್ಯುತ್ ಸಮಸ್ಯೆ

312 - ಶ್ರೀ ಹೆಚ್.ಎಸ್. ಶಂಕರಲಿಂಗೇ ಗೌಡ (ಚಾಮರಾಜ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿ ವಿದ್ಯುತ್ ವೋಲ್ಟೇಜ್‌ನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಯಾವ ಯಾವ ಬಡಾವಣೆಗಳಲ್ಲಿ ಈ ಸಮಸ್ಯೆ ಇದೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಕೆಳಕಂಡ ಬಡಾವಣೆಗಳಲ್ಲಿ ಈ ಸಮಸ್ಯೆ ಇದೆ.

(1) ಶಾಂತಿ ನಗರ	(2) ಗೌಸಿಯಾ ನಗರ
(3) ಕ್ಯಾತಮಾರನಹಳ್ಳಿ	(4) ಗಣೇಶ ನಗರ
(5) ರಾಘವೇಂದ್ರ ನಗರ	(6) ಜೆ.ಪಿ. ಲೇಔಟ್

(7)	ವಿದ್ಯಾನಗರ	(8)	ಐ.ಜಿ. ಬ್ಲಾಕ್
(9)	ದೇವನೂರು	(10)	ಡಿ.ಸಿ. ಬ್ಲಾಕ್
(11)	ಜನತಾ ನಗರ	(12)	ಗುಂಡೂರಾವ್ ನಗರ
(13)	ಚನ್ನಗಿರಿ ಕೊಪ್ಪಲು	(14)	ಗೌರಿಶಂಕರ ನಗರ
(15)	ಮಹದೇವಪುರ ನಗರ	(16)	ನಾಚಿನಹಳ್ಳಿ ಪಾಳ್ಯ
(17)	ಜೆ.ಎಸ್.ಎಸ್. ಕಾಲೇಜ್‌ನ ಹಿಂಭಾಗದ ಪ್ರದೇಶ	(18)	ಕನಕಗಿರಿ
(19)	ಮುನೇಶ್ವರ ನಗರ	(20)	ಬಿ.ಎಂ.ಸಿ. ನಗರ
(21)	ಹೆಬ್ಬಾಳು	(22)	ಹಿನಕಲ್
(23)	ಮಂಜಿಗೌಡನ ಕೊಪ್ಪಲು	(24)	ಜೋಗಾದಿ
(25)	ಜಯದೇವ ನಗರ	(26)	ಬೆಳವಾಡಿ ಮತ್ತು ಮಾರದಹಳ್ಳಿ
(27)	ಕೆ.ಹೆಚ್.ಬಿ. ಕಾಲೋನಿ, ಹೂಜಗಲ್ಲಿ		

ಇ) ಮೇಲಿನ ಬಡಾವಣೆಗಳೂ ಸೇರಿದಂತೆ ಮೈಸೂರು ನಗರದಲ್ಲಿ ವಿದ್ಯುತ್ ಪರಿಸ್ಥಿತಿಯ ಸಮಗ್ರ ಸುಧಾರಣೆಗಾಗಿ ಮೈಸೂರು ನಗರ ವಿದ್ಯುತ್ ವಿತರಣಾ ವ್ಯವಸ್ಥೆ ಸುಧಾರಣೆ (ಯುಡಿಐಎಸ್) ಯೋಜನೆಯನ್ನು ಸುಮಾರು 47.7 ಕೋಟಿ ರೂ. ವೆಚ್ಚದಲ್ಲಿ ಸಿದ್ಧಪಡಿಸಿ, ಏಷಿಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಪವರ್ ಫೈನಾನ್ಸ್ ಕಾರ್ಪೊರೇಷನ್ ಸಂಸ್ಥೆಗಳು ನೀಡುವ ಸಾಲ ಸೌಲಭ್ಯದಿಂದ ಹಂತ ಹಂತವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಕನಿಷ್ಠ 2 ರಿಂದ 3 ವರ್ಷಗಳ ಕಾಲಾವಕಾಶ ಬೇಕಾಗುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಮೈಸೂರು ನಗರ ತನ್ನದೇ ಆಗಿರತಕ್ಕಂಥ ಐತಿಹಾಸಿಕ ಹಿನ್ನೆಲೆ ಹೊಂದಿರುವ ನಗರವಾಗಿದ್ದು, ಇವೊತ್ತು ಮೈಸೂರಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದಲ್ಲದೆ ನಿಗದಿತ ವೇಳೆಯಲ್ಲಿ ವಿದ್ಯುತ್ ಕಡಿತವುಂಟಾಗುತ್ತದೆಂದು ಮಾನ್ಯ ಉಪಮುಖ್ಯಮಂತ್ರಿಗಳು ಹೇಳುತ್ತಿದ್ದರೂ ನಿಗದಿತ ವೇಳೆಯಿಲ್ಲದೆ ಇತರ ವೇಳೆಯಲ್ಲೂ ಕೂಡ ವಿದ್ಯುತ್ ಹೋಗುತ್ತಿರುತ್ತದೆ. ನಾನು ಕೇಳಿರುವ ಎರಡನೇ ಪ್ರಶ್ನೆಗೆ ಉತ್ತರವಾಗಿ 27 ಬಡಾವಣೆಗಳಲ್ಲಿ ವಿದ್ಯುತ್ ವೋಲ್ಟೇಜ್‌ನ ಸಮಸ್ಯೆಯಿದೆಯೆಂದು ಹೇಳಿದ್ದಾರೆ. ಬಹುಶಃ ಮೈಸೂರಿನ ಅರ್ಧ ಭಾಗಕ್ಕೆ ವಿದ್ಯುತ್ ಅಭಾವವಿರುವಾಗ ಇನ್ನೂ ಮೈಸೂರಿನ ಉಳಿದ ಬಡ ಜನರಿಗೆ ಸೀಮೆಎಣ್ಣೆ ಸಿಗುವುದು ಕಷ್ಟವಾಗಿದ್ದರೂ ಸೀಮೆಎಣ್ಣೆ ಬುಡ್ಡಿ ಉರಿಸಿ ಜೀವನ ಸಾಗಿಸುತ್ತಚಿರುವ ಜಾಗಗಳಲ್ಲಿ ವಿದ್ಯುತ್ ಸೌಲಭ್ಯ ಕೊಡಲು ಸರ್ಕಾರ ಮುಂದಾಗದೆ ಹೋದರೆ ಮೈಸೂರಿನ ಜನತೆ ಯಾವ ರೀತಿ ಅವರ ಮಕ್ಕಳನ್ನು ಓದಿಸಬೇಕು? ಅವರ ದೈನಂದಿನ ಬದುಕನ್ನು ಹೇಗೆ ನಡೆಸಬೇಕು? ರಾತ್ರಿ ಹೊತ್ತು ವಿದ್ಯುತ್ ಇಲ್ಲದೆ ಕಳ್ಳಕಾಕರ ಹಾಗೂ ವಿಷ ಜಂತುಗಳ ಭಯದಿಂದ ಬಳಲುತ್ತಿರುವ ಆ ಬಡಾವಣೆಗಳಲ್ಲಿ ವಾಸಿಸುತ್ತಿರುವವರನ್ನು ಕಣ್ಣಾರೆ ವೀಕ್ಷಿಸಿದಾಗ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಸರ್ಕಾರ ಏನೂ ಕ್ರಮ ಕೈಗೊಂಡಿಲ್ಲವೆನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಈ ಕುರಿತು ಮಾನ್ಯ ಉಪಮುಖ್ಯಮಂತ್ರಿಗಲು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯೇನೆಂದರೆ, ಮೈಸೂರು ನಗರದಲ್ಲಿ ವಿದ್ಯುತ್ ವೋಲ್ಟೇಜ್‌ನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದಿದ್ದಕ್ಕೆ ಉತ್ತರವಾಗಿ 'ಹೌದು' ಎಂದು ತಿಳಿಸಿದ್ದು, ಅದೇ ರೀತಿ ಯಾವ್ಯಾವ ಬಡಾವಣೆಗಳಲ್ಲಿ ಈ ಸಮಸ್ಯೆ ಇದೆ? ಎಂದು ಕೇಳಿರುವುದಕ್ಕೆ ಸುಮಾರು 27 ಬಡಾವಣೆಗಳ ಹೆಸರುಗಳನ್ನು ಉತ್ತರದಲ್ಲಿ ತಿಳಿಸಿದ್ದೇವೆ. ಮೂರನೆಯದಾಗಿ, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಎಂದು ಕೇಳಿರುವುದಕ್ಕೆ ಉತ್ತರವಾಗಿ ಹೇಳುವುದಾದರೆ ಈಗಾಗಲೇ ಸುಮಾರು 47.7 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಗರ ಪ್ರದೇಶಗಳಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ಮೈಸೂರಾಗಲಿ, ಬೆಳಗಾಂ ಆಗಲಿ, ಬೆಂಗಳೂರಾಗಲಿ ಅದಕ್ಕೆ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಮತ್ತು ಪವರ್ ಫೈನಾನ್ಸ್ ಕಾರ್ಪೋರೇಷನನಿಂ ಸಾಲ ತೆಗೆದುಕೊಂಡು ಸುಮಾರು 66.11 ಕೆ.ವಿ.ಯಷ್ಟು ಸಾಮರ್ಥ್ಯದ ವಿದ್ಯುತ್ ವಿತರಣಾ ಕೇಂದ್ರಗಳನ್ನು, ಈಗ ಇರುವುದರ ಜೊತೆಗೆ ಹೊಸದಾಗಿ ಏಳನ್ನು ಪ್ರಾರಂಭಿಸುತ್ತಿದ್ದೇವೆ. ಅಲ್ಲದೆ, ಸುಮಾರು 20ಕೋಟಿ ರೂಪಾಯಿಗಳ ವೆಚ್ಚದಲ್ಲಿ 220 ಕೆ.ವಿ. ಸಾಮರ್ಥ್ಯದ ಒಂದು ದೊಡ್ಡ ವಿದ್ಯುತ್ ವಿತರಣಾ ಕೇಂದ್ರವನ್ನು ಕಡಕೋಳ ಎಂಬಲ್ಲಿ ನಿರ್ಮಿಸುತ್ತಿದ್ದೇವೆ. ಇಪ್ಪತ್ತೂರ್‍ರೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ವಿದ್ಯುತ್ ಸ್ವೀಕರಣಾ ಕೇಂದ್ರ ಸ್ಥಾಪಿಸುತ್ತಿದ್ದು, ಈಗಾಗಲೇ 11 ವಿದ್ಯುತ್ ಸ್ವೀಕರಣಾ ಕೇಂದ್ರಗಳು ಇರುವುದರ ಜೊತೆಗೆ ಮತ್ತೆ 11 ವಿದ್ಯುತ್ ಸ್ವೀಕರಣಾ ಕೇಂದ್ರಗಳನ್ನು ಹೊಸದಾಗಿ ನಿರ್ಮಿಸುತ್ತಿದ್ದೇವೆ. ಮೈಸೂರು ನಗರವೊಂದಕ್ಕೆ ವಿದ್ಯುತ್ ವ್ಯವಸ್ಥೆ ಸುಧಾರಿಸುವುದಕ್ಕೆ ಐವತ್ತು ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿದ್ದು, ಕೆಲಸವನ್ನು ಈಗಾಗಲೇ ಪ್ರಾರಂಭಿಸಿದ್ದೇವೆ. ಕೆಲಸಗಳನ್ನು ಈಗ ತಾನೇ ಪ್ರಾರಂಭಿಸಿರುವುದರಿಂದ ಪೂರ್ಣಗೊಳ್ಳಲು ಇನ್ನು ಕನಿಷ್ಠ 2 ರಿಂದ 3 ವರ್ಷಗಳ ಕಾಲಾವಕಾಶ ಬೇಕಾಗುತ್ತದೆ. ಆಗ ವೋಲ್ಟೇಜ್ ಸುಧಾರಣೆಯಾಗುತ್ತದೆ. ನಾನು ಮಾನ್ಯ ಸದಸ್ಯರಿಗೆ ಮೊದಲಿನಿಂದಲೂ ಹೇಳುತ್ತಿರುವುದೇನೆಂದರೆ, ಪವರ್ ಜನರೇಶನ್ ಸುಧಾರಿಸದ ಹೊರತು, ಹೆಚ್ಚು ವಿದ್ಯುತ್ ಉತ್ಪಾದನೆಯಾಗದ ಹೊರತು ಈ ಸಮಸ್ಯೆಗಳು ತಾಂತ್ರಿಕವಾಗಿ, ಪ್ರಾಸಂಗಿಕವಾಗಿ ಸರಿಹೋಗಬಹುದೇ ಹೊರತು ಪೂರ್ಣ ಸರಿಹೋಗುವುದಿಲ್ಲ, ಆದುದರಿಂದ, ಮೈಸೂರು ನಗರದ ಸುಮಾರು 27 ಬಡಾವಣೆಗಳಲ್ಲಿ ಮತ್ತು ಸುತ್ತಮುತ್ತ ವಿದ್ಯುತ್ ವೋಲ್ಟೇಜ್‌ನ ಸಮಸ್ಯೆ ಇದೆಯೆಂದು ತಿಳಿಸಿದ್ದು, ಅದರ ಸುತ್ತಮುತ್ತಲಿರುವ ಪ್ರದೇಶಗಳಲ್ಲೂ ವಿದ್ಯುತ್ ವೋಲ್ಟೇಜಿನ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ಏನೇನು ಮಾಡಬೇಕೋ ಅದೆಲ್ಲಾ ಪ್ರಯತ್ನವನ್ನು ಮಾಡುತ್ತಿದ್ದು, ಕೆಲಸ ನಡೆಯುತ್ತಿದೆ. ತಾವು ಕಳ್ಳಕಾಕರ ಕಾಟವಿದೆಯೆಂದು ಹೇಳಿದಿರಿ, ಅವರ ಕಾಟವನ್ನು ನಮ್ಮ ವಿದ್ಯುತ್ ಮಂಡಳಿಯಿಂದ ತಪ್ಪಿಸುವುದಕ್ಕಾಗುವುದಿಲ್ಲ,

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ವಿದ್ಯುತ್ ದೀಪಗಳ ಕೊರತೆಯಿಂದ ಕಳ್ಳಕಾಕರ, ವಿಷ ಜಂತುಗಳ ಕಾಟ ಜಾಸ್ತಿಯಾಗಿದೆಯೆಂದು ಹೇಳಿದ್ದೇನೆ. ಇಡೀ ರಾಜ್ಯಾದ್ಯಂತ ವಿದ್ಯುತ್ ಕೊರತೆಯಿರುವುದು ನಮಗೂ-ನಿಮಗೂ ಗೊತ್ತಿರುವ ವಿಷಯ. ಆದರೆ, ಮೈಸೂರು ನಗರಕ್ಕೆ ವಿದ್ಯುತ್ ಸೌಲಭ್ಯ ಕಲ್ಪಿಸಿಕೊಡುವ ವಿಷಯದಲ್ಲಿ ಇಷ್ಟು ನಿರ್ಲಕ್ಷ್ಯ ಮಾಡಿದ್ದೇಕೆ? ಎಂದು ಜನರು ನಮ್ಮನ್ನು ಕೇಳುತ್ತಿದ್ದಾರೆ.

11.10 ಎ.ಎಂ.

ಶ್ರೀ ಹೆಚ್.ಕೆ. ಪಾಟೀಲ್ : ಎಲ್ಲೂ ಕಡೆಗಣಿಸಿಲ್ಲವೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಇ. ಮಾರುತಿರಾವ್ ಪವಾರ್ : ತಾವು ಕೊಟ್ಟಿರುವ ಉತ್ತರದ ಪ್ರಕಾರವೇ 27 ಬಡಾವಣೆಗಳ ಪೈಕಿ ರೆವಿನ್ಯೂ ನಿವೇಶನಗಳೇ 24 ಬಡಾವಣೆಗಳಲ್ಲಿದೆ. ಈಗಾಗಲೇ ಇಂಥ ಬಡಾವಣೆಗಳಲ್ಲಿ ವಿದ್ಯುತ್‌ನ್ನು ಕಿತ್ತು ಹಾಕುತ್ತಿದ್ದಾರೆ. ಬಡವರು, ಕೂಲಿ ಮಾಡತಕ್ಕವರು, ಹರಿಜನರು, ಗಿರಿಜನರು ವಾಸ ಮಾಡತಕ್ಕ ಇಂಥ ಏರಿಯಾಗಳಲ್ಲಿ ವಿದ್ಯುತ್‌ನ್ನು ಕೊಡದಿದ್ದರೆ ಅವರುಗಳು ಯಾವ ರೀತಿಯಲ್ಲಿ ಜೀವನ ಮಾಡುತ್ತಾರೆ? ಬಹಳ ಹಿಂಸೆಯಾಗುತ್ತದೆ. ಇಂಥ ಏರಿಯಾಗಳಲ್ಲಿ ವಿದ್ಯುಚ್ಛಕ್ತಿ ನಿಲ್ಲಿಸದೆ ಇರುವ ರೀತಿ ಮಾನ್ಯ ಉಪಮುಖ್ಯಮಂತ್ರಿಯವರು ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಇದೆಲ್ಲದಕ್ಕೂ ಅವರೇನು ಮಾಡುತ್ತಾರೆ? ಮೂರ್ವಿ ಪ್ರಶ್ನೆ ಶ್ರೀ ಬಿ.ಬಿ. ಶಿವಪ್ಪನವರು.

ಸಕಲೇಶಪುರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸ್ಥಾಪನೆ

547 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ಮತ್ತು ಆಲೂರಿನಲ್ಲಿ ಅಪರ ಜಿಲ್ಲಾ ಮತ್ತು ಸತ್ರ • ನ್ಯಾಯಾಲಯವನ್ನು ಸ್ಥಾಪಿಸುವ ಪ್ರಸ್ತಾಪವು ಸರ್ಕಾರವು ಮುಂದಿದೆಯೇ;

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಸ್ಥಾಪಿಸಲಾಗುವುದು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರ ಇಲ್ಲವೆಂದು ಮತ್ತೊಂದಕ್ಕೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ನಾನು ಸಕಲೇಶಪುರ ಅಥವಾ ಆಲೂರಿನಲ್ಲಿ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವನ್ನು ಸ್ಥಾಪಿಸುವ ಪ್ರಸ್ತಾಪವು ಸರ್ಕಾರದ ಮುಂದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಈ ರೀತಿ ಪ್ರಶ್ನೆಯನ್ನು ಕೇಳಲು ಕಾರಣಗಳಿದೆ, ಅದೇನೆಂದರೆ ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಮಾತ್ರ ಇಂಥ ನ್ಯಾಯಾಲಯವಿರುವುದರಿಂದ ತೀರ್ಪನ್ನು ಕೊಡುವುದರಲ್ಲಿ ಬಹಳ ತಡವಾಗುತ್ತಿದೆ. ಮತ್ತು ಪ್ರತಿನಿತ್ಯ ಮೊಕದ್ದಮೆಗಳ ಸಂಖ್ಯೆ ಏರಿಕೊಂಡು ಹೋಗುತ್ತಿರುವುದರಿಂದ ಅದರ ಸಂಖ್ಯೆ ಕಡಿಮೆಯಾಗುತ್ತಿಲ್ಲ, ಆದುದರಿಂದ ಸರ್ಕಾರದ ಇದರ ಬಗ್ಗೆ ಯೋಚನೆ ಮಾಡಿ ಈ ಜಾಗದಲ್ಲಿ ವಿಚಾರಣೆ ಮಾಡಲು ಬದಲೀ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) (ಕಾನೂನು ಸಚಿವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ಅವರ ಕ್ಷೇತ್ರದಲ್ಲಿ ಇರತಕ್ಕ ಆಲೂರು ಮತ್ತು ಸಕಲೇಶರಪುರಕ್ಕೆ ಸತ್ರ ನ್ಯಾಯಾಲಯಗಳನ್ನು ತೆರೆಯಬೇಕೆಂದು ಕೇಳುವುದು ಅವರ ಆಸೆಯಾಗಿದ್ದರೂ ಇದರ ಬಗ್ಗೆ ಸರ್ವ ಶ್ರೇಷ್ಠ ನ್ಯಾಯಾಲಯ ತನ್ನ ನಿರ್ಣಯವನ್ನು ಮಾಡಬೇಕಾಗುತ್ತದೆ. ಸರ್ವಶ್ರೇಷ್ಠ ನ್ಯಾಯಾಲಯ ತನ್ನ ನಿರ್ಣಯವನ್ನು ಮಾಡಬೇಕಾಗುತ್ತದೆ. ಸರ್ವಶ್ರೇಷ್ಠ ನ್ಯಾಯಾಲಯ ಸಂಪೂರ್ಣವಾದ ಪೀಠ ಕುಳಿತುಕೊಂಡು ಸದರಿ ಸ್ಥಳದಲ್ಲಿ ನ್ಯಾಯಾಲಯದ ಅಗತ್ಯವಿದೆಯೇ, ಎಷ್ಟು ಮೊಕದ್ದಮೆಗಳು ಅಲ್ಲಿ ಬರುತ್ತವೆ ಎಂಬ ಬಗ್ಗೆ ಮತ್ತು ಆಯವ್ಯಯದಲ್ಲಿ ಹಣವೆಷ್ಟು ಲಭ್ಯತೆ ಇದೆ ಮುಂತಾದ ಎಲ್ಲಾ

ವಿಚರಗಳನ್ನು ಸಮಾಲೋಚನೆ ಮಾಡಿ ಮಾಡುತ್ತಾರೆ. ಮತ್ತು ಇಲ್ಲಿಯವರೆಗೆ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಸತ್ರ ನ್ಯಾಯಾಲಯಗಳು ಸ್ಥಾಪನೆಯಾಗಿದೆಯೇ ಹೊರತು ತಾಲ್ಲೂಕು ಮಟ್ಟಗಳಲ್ಲಿ ಸ್ಥಾಪನೆಯಾಗಿಲ್ಲ, ಆದ್ದರಿಂದ ಆ ಪ್ರಶ್ನೆ ಉದ್ಭವವಾಗುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿನ ಪ್ಲೋರೈಡನ್ನು ತಡೆಗಟ್ಟಲು ಸರ್ಕಾರದ ಕ್ರಮ

613 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣ ಪ್ರದೇಶದಲ್ಲಿನ ಕುಡಿಯುವ ನೀರಿನಲ್ಲಿರುವ ಫ್ಲೋರೈಡ್ ನಿವಾರಣೆಗೆ ತೆಗೆದುಕೊಂಡಿರುವ ಕ್ರಮಗಳೇನು?

ಆ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಬೇರೆ ಎಲ್ಲಾ ಕಡೆಗಿಂತ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) (ಅ)

ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ನಿಯೋಗದಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಜಲಮೂಲಗಳ ರಾಸಾಯನಿಕ ಗುಣಮಟ್ಟ ಪ್ರದೇಶದಲ್ಲಿನ ಜಲಮೂಲಗಳ ರಾಸಾಯನಿಕ ಗುಣಮಟ್ಟ ಸಮೀಕ್ಷೆಯನ್ನು ನಡೆಸಲಾಗುತ್ತಿದೆ.

(ಆ) ಸಮೀಕ್ಷೆಯಲ್ಲಿ 1.5 ಎಂ.ಜಿ:ಎಲ್‌ಗಿಂತ ಹೆಚ್ಚಿಗೆ ಫ್ಲೋರೈಡ್ ಅಂಶವಿರುವ ಜಲಮೂಲಗಳನ್ನು ಗುರುತಿಸಿದ ಮೇಲೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಫ್ಲೋರೊಸಿನ್ ಕಾಯಿಲೆ ಬಗ್ಗೆ ಆರೋಗ್ಯ ಸಮೀಕ್ಷೆ ನಡೆಸಲಾಗುತ್ತದೆ (ಇ) ಎಲ್ಲಿ ನೀರಿನಲ್ಲಿ 'ಫ್ಲೋರೈಡ್ ಅಂಶ 1.5 ಎಂ.ಜಿ:ಎಲ್‌ಗಿಂತ ಜಾಸ್ತಿ ಇರುವುದು ದೃಢಪಟ್ಟಲ್ಲಿ ಅಲ್ಲಿ ವಿವರವಾದ ಯೋಜನೆಗಳನ್ನು ತಯಾರಿಸಿ ಕುಡಿಯುವ ನೀರಿನ ಗುಣಮಟ್ಟವನ್ನು ಸುಧಾರಿಸುವ ಕೆಲಸಗಳಿಗೆ ಅಂದಾಜು ಸಲ್ಲಿಸಲು ಜಿಲ್ಲಾಪಂಚಾಯತ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಆ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಸಮೀಕ್ಷಣೆ ನಡೆಯುತ್ತಿದ್ದು ಈಗಾಗಲೇ ತಾಲ್ಲೂಕಿನಲ್ಲಿ ಒಟ್ಟು 154 ಕುಡಿಯುವ ನೀರಿನ ಸ್ಯಾಂಪಲ್‌ಗಳ ಗುಣಮಟ್ಟವನ್ನು ಪರೀಕ್ಷಿಸಲಾಗಿದೆ. ಇವುಗಳ ಪೈಕಿ ಒಟ್ಟು 135 ಸ್ಯಾಂಪಲ್‌ಗಳಲ್ಲಿ ಫ್ಲೋರೈಡ್ ಅಂಶ ನಿಗದಿಪಡಿಸಿರುವ ಮಟ್ಟಕ್ಕಿಂತ ಹೆಚ್ಚಾಗಿದೆಯೆಂದು ತಿಳಿದುಬಂದಿದೆ. ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳಿಂದ ಫ್ಲೋರೊಸಿನ್ ಕಾಯಿಲೆಯ ಆರೋಗ್ಯ ಸಮೀಕ್ಷೆ ನಡೆಸಿ 307 ಹಳ್ಳಿಗಳಲ್ಲಿ ಫ್ಲೋರೋಸಿನ್ ಕಾಯಿಲೆ ಇರುವುದೆಂದು ತಿಳಿದುಬಂದಿದೆ.

ಈಗಾಗಲೇ ಬಾಗೇಪಲ್ಲಿ ತಾಲ್ಲೂಕಿನ 6 ಫ್ಲೋರೈಡ್ ಪೀಡಿತ ಗ್ರಾಮಗಳಲ್ಲಿ ಕೊಳವೆನೀರು ಸರಬರಾಜು ಯೋಜನಾ ಅಭಿವೃದ್ಧಿ ಕಾಮಗಾರಿಯ ಹಾಗೂ ಫ್ಲೋರೈಡ್ ಪೀಡಿತ ತೋಳಪಲ್ಲಿ ಹರಿಜನ ಕಾಲೋನಿಗೆ ಕಿರುನೀರು ಸರಬರಾಜು ಯೋಜನೆಯ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಮತ್ತು ಈ 6 ಗ್ರಾಮಗಳಿಗೆ ಪ್ರತಿ ಮನೆಗೂ ಒಂದರಂತೆ ಗೃಹಬಳಕೆ ಡಿಫ್ಲೋರೈಡೇಷನ್ ಕಿಟ್ ವಿತರಣೆ ಮಾಡಲು ಸಮೀಕ್ಷೆ ನಡೆಸಲಾಗುತ್ತಿದೆ. ಇದು ಅಲ್ಲದೆ ನಲ್ಲಚೆರವು ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಡಿಫ್ಲೋರೈಡೇಷನ್ ಘಟಕವನ್ನು ಅಳವಡಿಸಿ ಶುದ್ಧ ನೀರು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ರೀತಿ ಹಂತ ಹಂತವಾಗಿ ಫ್ಲೋರೈಡ್ ಪೀಡಿತ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ

ತೆಗೆದುಕೊಳ್ಳಲಾಗುವುದು. ಫ್ಲೋರೈಡ್ ಅಂಶ ಹೆಚ್ಚಾಗಿರುವ ಗ್ರಾಮಗಳಲ್ಲಿ ಫ್ಲೋರೈಡ್ ಅನ್ನು ಕಡಿಮೆ ಮಾಡುವ ಕ್ರಮಗಳನ್ನು ಸ್ಥಾಪಿಸಲು ಯೋಜನೆಯೊಂದನ್ನು ತಯಾರಿಸಲು ಜನಾರೋಗ್ಯ ಶಿಲ್ಪಕಾರ್ಯ ಇಲಖೆಗೆ ನಿರ್ದೇಶನ ನೀಡಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಎರಡು ಉತ್ತರವನ್ನು ಕೊಟ್ಟಿದ್ದಾರೆ. ಮೊದಲ ಉತ್ತರದಲ್ಲಿ ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ನಿಯೋಗದಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಜಲಮೂಲಗಳ ರಾಸಾಯನಿಕ ಗುಣಮಟ್ಟ ಸಮೀಕ್ಷೆಯನ್ನು ನಡೆಸಲಾಗುತ್ತಿದೆಯೆಂದು ಹೇಳಿದ್ದಾರೆ. ಇದೇ ಉತ್ತರವನ್ನು ಕಳೆದ ಅಧಿವೇಶನದ ಸಮಯದಲ್ಲೂ ಕೊಟ್ಟಿದ್ದರು. ಪುನಃ ಅದೇ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಯಾವುದೇ ರೀತಿಯಾದ ಕಾರ್ಯಕ್ರಮಗಳೂ ಆಗುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಎರಡನೆಯ ಭಾಗದ ಉತ್ತರದಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಎರಡುಮೂರು ಕಡೆಗಳಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದ್ದಾರೆ. ತೋಳನಪಲ್ಲಿಯಲ್ಲಿ ಪರಿಶಿಷ್ಟಜಾತಿ ಮತ್ತು ಪಂಗಡದವರ ಕಾಲೋನಿಗೆ ಕುಡಿಯುವ ನೀರಿನ ಸರಬರಾಜಿನ ಕೆಲಸ ಪ್ರಗತಿಯಲ್ಲಿರುತ್ತದೆ. ಆರು ಗ್ರಾಮಗಳಲ್ಲಿ ಪ್ರತಿಯೊಂದು ಮನೆಗ ಸರಬರಾಜಿನ ಕೆಲಸ ಪ್ರಗತಿಯಲ್ಲಿರುತ್ತದೆ. ಆರು ಗ್ರಾಮಗಳಲ್ಲಿ ಪ್ರತಿಯೊಂದು ಮನೆಗೂ ಗೃಹಬಳಕೆಯ ಡಿಫ್ಲೋರೈಡೇಷನ್ ಕಿಟ್‌ಗಳನ್ನು ವಿತರಣೆ ಮಾಡಲು ಸಮೀಕ್ಷೆ ನಡೆಸಲಾಗುತ್ತಿದೆ. ಇದಲ್ಲದೆ ನಲ್ಲಚೆರವು ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಡಿಫ್ಲೋರೈಡೇಷನ್ ಘಟಕವನ್ನು ಅಳವಡಿಸಿ ಶುದ್ಧ ನೀರು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಆದರೆ ಇವರು ಉತ್ತರದಲ್ಲಿ ಹೇಳಿರುವಂತೆ ನನ್ನ ಕ್ಷೇತ್ರದ ಯಾವುದೇ ಭಾಗದಲ್ಲಿ ಈ ಕೆಲಸ ನಡೆಯುತ್ತಿಲ್ಲ. ಈ ರೀತಿಯ ಉತ್ತರವನ್ನು ಹಿಂದಿನ ಅಧಿವೇಶನದಲ್ಲೇ ಕೊಟ್ಟಿದ್ದರೂ. ಈಗಲೂ ಅದೇ ಉತ್ತರವನ್ನು ಕೊಟ್ಟಿದ್ದಾರೆ. ಅವರು ಎರಡನೆಯ ಪ್ರಶ್ನೆಗೆ ಏನು ಉತ್ತರವನ್ನು ಕೊಟ್ಟಿದ್ದಾರೆ ಅದರಂತೆ ಕೆಲಸ ನಡೆಯುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಕ್ಷಾರಯುಕ್ತವಾಗಿರತಕ್ಕ ಫ್ಲೋರೈಡ್ ನೀರು ಎಲ್ಲಾ ಕಡೆ ಕೊಳವೆ ಬಾವಿಗಳಲ್ಲಿ, ಸುಮಾರು ಇಪ್ಪತ್ತು ಜಿಲ್ಲೆಗಳಲ್ಲಿ ಹದಿನೈದು ಜಿಲ್ಲೆಗಳಲ್ಲಿ....

ಅಧ್ಯಕ್ಷರು : ಅವರ ಪ್ರಶ್ನೆ ಏನೆಂದರೆ ತಾವು ಹೋದ ಅಧಿವೇಶನದಲ್ಲಿ ಕೊಟ್ಟ ಉತ್ತರಕ್ಕೂ ಈ ಸಲ ಕೊಡುತ್ತಿರುವ ಉತ್ತರಕ್ಕೂ ಅಷ್ಟಾಗಿ ವ್ಯತ್ಯಾಸವಿಲ್ಲ, There has not been much progress. You can ask one of your Officers to get the latest report and reply.

ಶ್ರೀ ಎಂ.ಪಿ. ಪ್ರಕಾಶ್ : ಅಂದೊಂದೇ ವಿಚಾರವಲ್ಲ, ಫ್ಲೋರೈಡ್ ವಿಚಾರದಲ್ಲಿ ಎರಡು ಭಾಗ ಮಾಡಿ ಉತ್ತರ ಕೊಟ್ಟಿದ್ದಾರೆಂದು ಹೇಳಿದ್ದಾರೆ. "ಗಾಂಧಿಜಿಯವರಿಗೆ ಹೀಗೆ ಕೇಳಿದರಂತೆ, ಯಾವಾಗಲೂ ಸತ್ಯ ಸತ್ಯವೆಂದು ನೀವು ಮಾತನಾಡುತ್ತೀರಲ್ಲ ಎಂದು ಕೇಳಿದ್ದಕ್ಕೆ ಗಾಂಧಿಜಿಯವರು, I have a poor memory ಎಂದ ಹೇಳಿದರಂತೆ. ಸತ್ಯವನ್ನು ಹೇಳಬೇಕಾದರೆ ಜ್ಞಾಪಕಶಕ್ತಿಯೇನು ಇರಬೇಕಾಗಿಲ್ಲ, ಸತ್ಯವು ಎಲ್ಲಾ ಕಾಲದಲ್ಲೂ ಇರುತ್ತದೆ. ಸುಳ್ಳನ್ನು ಹೇಳಬೇಕಾದರೆ ಯಾವಾಗಲು ಸುಳ್ಳನ್ನೇ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಾವು ಸತ್ಯವಾದ ವಿಚಾರವನ್ನು ಹೇಳಿದ್ದರಿಂದ ಅದಕ್ಕೂ ಬೇರೆ ವಿಷಯಕ್ಕೂ ಏನು ವ್ಯತ್ಯಾಸವಿಲ್ಲ.

MR. SPEAKER : I compliment you.

ಶ್ರೀ ಜಿ.ವಿ. ರಾಮರೆಡ್ಡಿ : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಅರ್ಥ ಮಾಡಿಕೊಳ್ಳಬೇಕು, ಹೋದ ಅಧಿವೇಶನದಲ್ಲಿ ಮೊದಲನೆಯ ಪ್ರಶ್ನೆಗೆ ಏನು ಉತ್ತರವನ್ನು ಕೊಟ್ಟಿದ್ದಿರಿ ಅದೇ ಉತ್ತರವನ್ನು ಇಂದು ಮೊದಲ ಭಾಗದಲ್ಲಿ ಕೊಟ್ಟಿದ್ದೀರಿ. ಎರಡನೆಯ

ಭಾಗದ ಉತ್ತರದಲ್ಲಿ ಕಾರ್ಯಕ್ರಮ ಪ್ರಗತಿಯಲ್ಲಿದೆಯೆಂದು ಹೇಳಿದ್ದೀರಿ ಆ ಕೆಲಸ ನನ್ನ ಕ್ಷೇತ್ರದಲ್ಲಿ ಆಗುತ್ತಿಲ್ಲವೆಂದು ನಾನು ಕೇಳುತ್ತಿದ್ದೇನೆ. ಇದರಲ್ಲಿ ಜ್ಞಾಪಕಶಕ್ತಿಯ ಪ್ರಶ್ನೆ ಇರುವುದಿಲ್ಲ.

SRI M.P. PRAKASH : I think you have not understood it.

MR. SPEAKER : I have understood it.

SRI M.P. PRAKASH : Thank you Sir.

ಸನ್ಮಾನ್ಯ ಅಧ್ಯಕ್ಷರೆ, 1.5 ಎಂ.ಜಿ.ಎಲ್. ನಷ್ಟು ಕ್ಷಾರಯುಕ್ತವಾದಂಥ ನೀರಿದ್ದಾಗ ರಾಜೀವ್‌ಗಾಂಧಿ ಟೆಕ್ನಲಾಜಿಕಲ್ ಮಿಷನ್‌ಗೆ ಸಮೀಕ್ಷೆಗಾಗಿ ಪ್ರಸ್ತಾವನೆ ಸಲ್ಲಿಸಿದೆ. ಸುಮಾರು ಇಪ್ಪತ್ತು ಜಿಲ್ಲೆಗಳಲ್ಲಿ ಹದಿನೈದು ಜಿಲ್ಲೆಗಳಲ್ಲಿ ಇಂಥ ಪರಿಸ್ಥಿತಿ ಇದೆ, ಅದರಲ್ಲಿ ಬಾಗೆಪಲ್ಲಿ ತಾಲ್ಲೂಕಿನಲ್ಲಿ, ಬಳ್ಳಾರಿ ಜಿಲ್ಲೆಯಲ್ಲಿ, ಕೋಲಾರ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಇಂಥದ್ದು ಇದೆ, ಇದರ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತಿದ್ದೇವೆ. ಈಗ ತತ್‌ಕ್ಷಣಕ್ಕೆ ತೋಳಪಲ್ಲಿಯಲ್ಲಿ, ನೆಲ್ಲಚೆರವು ಘಟಕ್ಕೆ ಅಳವಡಿಸಿಕೊಡತಕ್ಕ ಪ್ರಯತ್ನ ಮಾಡ್ದೇವೆ. ತಮಗೆ ಬೇಕಾದರೆ ಅದನ್ನು ತೋರಿಸುತ್ತೇವೆ.

ಶ್ರೀ ಜಿ.ವಿ. ರಾಮರೆಡ್ಡಿ : ಅಧ್ಯಕ್ಷರೆ, ನಾನು ಹೇಳಿದ್ದನ್ನು ತಾವು ಅರ್ಥಮಾಡಿಕೊಳ್ಳಲಿಲ್ಲ. ಮೊದಲ ಭಾಗದಲ್ಲಿ ಕೊಟ್ಟಿರುವ ಉತ್ತರವನ್ನೇ ಹೋದ ಅಧಿವೇಶನದಲ್ಲಿ ಕೊಟ್ಟಿದ್ದೀರಿ, ಅದರಲ್ಲಿ ಏನು ಪ್ರಗತಿಯನ್ನು ಸಾಧಿಸಲಿಲ್ಲ ಮತ್ತು ಎರಡನೆಯ ಭಾಗದಲ್ಲಿ ಏನು ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಉತ್ತರವನ್ನು ಕೊಟ್ಟಿದ್ದೀರಿ ಆ ಕೆಲಸ ನಡೆಯುತ್ತಿಲ್ಲ ಎಂದು ನಾನು ಹೇಳುತ್ತಿರತಕ್ಕದ್ದು. ನನ್ನನ್ನು ನೀವು ಅರ್ಥ ಮಾಡಿಕೊಳ್ಳಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೆ, ಈಗ ಯರು ಯಾರನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಬೇಡ. ಸಧ್ಯಕ್ಕೆ ವಿಷಯದ ಅರ್ಥವಾದರೆ ಸಾಕು. ವಿಸ್ತೃತವಾಗಿ ಇರತಕ್ಕ ಯೋಜನೆಗಳನ್ನು ರೂಪಿಸಲು ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಕಳಿಸಿಕೊಟ್ಟಿದ್ದೇವೆ. ರಾಜೀವ್‌ಗಾಂಧಿ ತಾಂತ್ರಿಕ ಸಮುಚ್ಚಯಗಳಿಗೆ ಸಂಬಂಧಪಟ್ಟಂತೆ ಸರ್ಕಾರವು ಇಂಥ ಅನೇಕ ಪ್ರಸ್ತಾವನೆಗಳನ್ನು ಕಳಿಸಿಕೊಟ್ಟಿದೆ. ಕಾರವಾರದಲ್ಲಿನ ಎಂಟು ಕೋಟಿ ರೂಪಾಯಿಗಳ ಎರಡು ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಸಹ ಬಂದಿದೆ. ಆದ್ದರಿಂದ ಇಂತಹ ಹದಿನೈದು ಜಿಲ್ಲೆಗಳಲ್ಲಿನ ಇಂಥ ಪರಿಸ್ಥಿತಿಯನ್ನು ಬಗೆಹರಿಸಲು ಪ್ರಯತ್ನ ಮಾಡುತ್ತಿದ್ದೇವೆ. ಅವರ ತಾಲ್ಲೂಕಿಗೆ ಸಂಬಂಧಪಟ್ಟಂತೆ ತೋಳಪಲ್ಲಿಯಲ್ಲಿ ಮತ್ತು ನೆಲ್ಲಚೆರವು ಘಟಕದಲ್ಲಿ ಈ ರೀತಿಯಾಗಿದೆ, ಅಲ್ಲಿ ಕ್ರಮ ಜರುಗಿಸಿದಿಲ್ಲವೆನ್ನುವುದಾಗಿದ್ದರೆ ನಮ್ಮ ಹಿರಿಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟು ಸರಿಪಡಿಸಿಕೊಡುತ್ತೇನೆ.

MR. SPEAKER : Yes. That is a correct thing.

ಸೌರಶಕ್ತಿಯಿಂದ ವಿದ್ಯುತ್

227 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಉಂಟಾಗುತ್ತಿರುವ ತೀವ್ರ ವಿದ್ಯುತ್ ಅಭಾವದ ಹಿನ್ನೆಲೆಯಲ್ಲಿ ಬೆಂಗಳೂರು ನಗರದ ರಸ್ತೆ ದೀಪ ಸಂಚಾರಾ ಸಿಗ್ನಲ್ ದೀಪಗಳಿಗೆ ಸೌರ ಶಕ್ತಿ ಬಳಸಿ ವಿದ್ಯುತ್ ಪಡೆಯುವುದರ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ?

ಆ) ಹಾಗಿದ್ದರೆ ವಿವರಗಳನ್ನು ನೀಡುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಿರುವ ವಿಚಾರದ ಬಗ್ಗೆ ಕೆ.ಇ.ಬಿ.ಯ ಅಧ್ಯಕ್ಷರೊಂದಿಗೆ ಸಹ ಮಾತನಾಡಿ ಚರ್ಚೆ ಮಾಡಿದ್ದೇನೆ. ಬೆಂಗಳೂರು ನಗರದಲ್ಲಿ ಯಾವಾಗ ಅಂದರೆ ಅವಾಗ ವಿದ್ಯುತ್‌ನ್ನು ತೆಗೆಯುತ್ತಿರುವುದರಿಂದ, ವಿಶೇಷವಾಗಿ ರಸ್ತೆಗಳ ದೀಪವನ್ನು ತೆಗೆಯುತ್ತಿರುವುದರಿಂದ, ರಸ್ತೆಗಳ ದೀಪಕ್ಕೆ ವಿದ್ಯುತ್‌ನ್ನು ನಿಲ್ಲಿಸುವುದರಿಂದ ಸಂಜೆಯ ವೇಳೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ರಸ್ತೆಗಳಲ್ಲಿ ಓಡಾಡಲು ತೊಂದರೆಯಾಗುತ್ತಿದೆ. ಪೀಕ್ ಅವರ್‌ನಲ್ಲಿ ವಿದ್ಯುತ್‌ನ್ನು ತೆಗೆಯುವುದರಿಂದ ಟ್ರಾಫಿಕ್ ಸಿಗ್ನಲ್‌ನಲ್ಲಿ ಪೋಲೀಸರು ಪರದಾಡುವುದನ್ನು ನಾವುಗಳು ನೋಡಿದ್ದೇವೆ. ಕಾನೂನನ್ನು ಪಾಲನೆ ಮಾಡದೆಯೇ ಸಂಚಾರ ಮಾಡುವುದನ್ನು ನಾವು ನೋಡಿದ್ದೇವೆ. ಇಂದು ಪರ್ಯಾಯವಾದ ವಿದ್ಯುತ್ ಉತ್ಪಾದನೆಯ ಬಗ್ಗೆ ಯೋಚನೆ ಮಾಡುತ್ತಿರುವ ಸಂದರ್ಭದಲ್ಲಿ ನಾವು ರಸ್ತೆ ದೀಪಕ್ಕೆ ಮತ್ತು ಟ್ರಾಫಿಕ್ ಸಿಗ್ನಲ್‌ಗಳಿಗೆ ಸೌರಶಕ್ತಿಯನ್ನು ಉಪಯೋಗ ಮಾಡಲು ಏಕೆ ಪ್ರಯತ್ನ ಪಟ್ಟಿಲ್ಲ ಎನ್ನತಕ್ಕದ್ದು ನನ್ನ ಪ್ರಶ್ನೆ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಸಲಹೆ ಬಹಳ ಉಪಯುಕ್ತವಾದುದು. ಆದರೆ ಸೋಲಾರ್ ಶಕ್ತಿಯನ್ನು ಏಕೆ ಅಳವಡಿಸಿಲ್ಲವೆಂದರೆ: ನಾವು ಈಗ ರಸ್ತೆ ದೀಪಗಳನ್ನು ಹಿಂದಿಗಿಂತಲೂ ಚೆನ್ನಾಗಿ ಒಳ್ಳೆಯ ರೀತಿಯಲ್ಲಿ ರೆಗ್ಯುಲೇಟ್ ಮಾಡುತ್ತಿದ್ದೇವೆ ಎಂಬುದನ್ನು ತಾವುಗಳೆಲ್ಲರೂ ಒಪ್ಪಿಕೊಳ್ಳಬೇಕು. ಹಿಂದೆ ತಾವು ಹೇಳಿದಂತೆ ರಸ್ತೆ ದೀಪಗಳ ತೊಂದರೆ ಇತ್ತು, ಈಗ ಬಹಳಷ್ಟು ಸುಧಾರಣೆಯನ್ನು ಮಾಡಿದ್ದೇವೆ. ಆದರೆ ಬೀದಿ ದೀಪಗಳಿಗೆ ಸೌರಶಕ್ತಿಯನ್ನು ಬಳಸಲು ಏಕೆ ಸಾಧ್ಯವಿಲ್ಲವೆಂದರೆ ಹೈಡಲ್, ಥರ್ಮಲ್ ಅಥವಾ ಇನ್ನಾವುದೇ ಮೂಲದಿಂದ ವಿದ್ಯುತ್‌ನ್ನು ಉತ್ಪಾದನೆ ಮಾಡಿದರೆ ಒಂದು ಮೆಗಾವ್ಯಾಟ್‌ಗೆ ಮೂರು ಕೋಟಿ ರೂ.ಗಳು ವೆಚ್ಚವಾಗುತ್ತದೆ. ಬೆಂಗಳೂರು ನಗರಕ್ಕೆ ರಸ್ತೆ ದೀಪಕ್ಕೆ ಏಳು ಮೆಗಾವ್ಯಾಟ್ ವಿದ್ಯುತ್ ಬೇಕು. ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡಿದರೆ ಒಂದು ಮೆಗಾವ್ಯಾಟ್‌ಗೆ ಮೂವತ್ತಮೂರು ಕೋಟಿ ರೂ.ಗಳು ವೆಚ್ಚವಾಗುತ್ತದೆ, ಅಂದರೆ ಎರಡೂವರೆ ಸಾವಿರ ಕೋಟಿ ರೂಪಾಯಿಗಳ ವೆಚ್ಚ ತಗಲುತ್ತದೆ. ಏಳು ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡಲು ಅಷ್ಟು ಹಣವು ಬೇಕಾಗುತ್ತದೆ. ಆ ಕಾರಣದಿಂದ ತಮ್ಮ ಸಲಹೆಯನ್ನು ಇನ್ನೂ ಜಾರಿಗೆ ಮಾಡಲು ಆಗಿಲ್ಲ.

ಶ್ರೀ ಎನ್. ಸುರೇಶ್‌ಕುಮಾರ್ : ಅಧ್ಯಕ್ಷರೆ, ಬೆಂಗಳೂರಿನಲ್ಲಿ ಗ್ರಾಂಟ್ ರಸ್ತೆಯೆಂದು ಇತ್ತು. ಅದಕ್ಕೆ ವಿಠ್ಠಲ್ ಮಲ್ಯ ರಸ್ತೆಯೆಂದು ಹೆಸರನ್ನಿಟ್ಟಿದ್ದೇವೆ. ಆ ರಸ್ತೆಯಲ್ಲಿ ಸಂಪೂರ್ಣವಾಗಿ ರಸ್ತೆ ದೀಪಗಳನ್ನು ಸೋಲಾರ್ ಶಕ್ತಿಯಿಂದ ಯು.ಬಿ. ಗ್ರೂಪ್‌ನವರು ಮಾಡುತ್ತಿದ್ದಾರೆ. ತಾವು ಇದೇ ರೀತಿ ಯಾರಾದರ ಖಾಸಗಿಯವರನ್ನು ಕರೆದು ಅವರು ಈ ರಸ್ತೆಯನ್ನು ಸೋಲಾರ್ ಶಕ್ತಿಯಿಂದ ನಿರ್ವಾಹಣೆ ಮಾಡುತ್ತೇವೆಂದರೆ ಅದರ ಬಗ್ಗೆ ಪ್ರಯತ್ನ ಮಾಡಬಹುದೆ?

ಶ್ರೀ ಹೆಚ್.ಕೆ. ಪಾಟೀಲ್ : ಅಧ್ಯಕ್ಷರೆ, ಇದರ ಬಗ್ಗೆ ಪ್ರಯತ್ನ ಮಾಡುವುದಲ್ಲದೆ ಬೀದಿ ದೀಪಗಳನ್ನು ರೆಗ್ಯುರೇಟ್ ಮಾಡುವುದಕ್ಕೆ, ಅದು ಆರು ಗಂಟೆಯೊಳಗೆ ಆಫ್ ಆಗುವುದಕ್ಕೆ ಸ್ವಯಂಚಾಲಿತ ಯಂತ್ರಗಳನ್ನು ತಂದಿರುವ ಬಗ್ಗೆ ಮತ್ತು ಇನ್ನಿತರೆ ಕ್ರಮಗಳ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದರೆ. ಅದರ ಬಗ್ಗೆ ತಾಂತ್ರಿಕವಾಗಿ ಪರಿಶೀಲನೆ ಮಾಡಿ ನಮಗೆ ವಿದ್ಯುತ್‌ನ್ನು ಉಳಿಸಿಕೊಡುವ ಬಗ್ಗೆ ಗಮನಹರಿಸಬೇಕು, ಕೆಲವು ಕಡೆ ಬೆಳಿಗ್ಗೆ ಏಳು ಗಂಟೆಯಾದರೂ ದೀಪ ಉರಿಯುತ್ತಿರುತ್ತದೆ. ಆದರೆ ವಿದ್ಯುತ್ ಕೊರತೆ ಇದೆಯೆಂದು ಹೇಳುತ್ತಿದ್ದಾರಲ್ಲವೆಂದು ಪ್ರಶ್ನೆ ಬರುತ್ತದೆ. ಆದುದರಿಂದ ತಾವು

ಹೇಳಿದಂತೆ ಪ್ರೈವಟೈಸೇಷನ್ ಮಾಡುವುದಕ್ಕೆ, ಮ್ಯಾನೇಜ್‌ಮೆಂಟ್ ಸರಿಯಾಗಿ ರೆಗ್ಯುಲೇಟ್ ಮಾಡುವುದಕ್ಕೆ ಯಾರಾದರೂ ಸಲಹೆ ಕೊಟ್ಟರೆ ಅದನ್ನು ಬಳಸಿಕೊಳ್ಳುತ್ತೇವೆ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಕೆಲವು ಕಡೆ ಬೆಳಿಗ್ಗೆ 10 ಗಂಟೆಯವರೆಗೂ ಬೀದಿ ದೀಪಗಳು ಉರಿಯುತ್ತಿರುತ್ತವೆ. ಕೆಲವು ಕಡೆ ಶೆಡ್ ಡೌನ್ ಆಗಿ 12 ಗಂಟೆಯಾದರೂ ಪವರ್ ಇರುವುದಿಲ್ಲ. ನಿನ್ನೆ ರಾತ್ರಿ ನನ್ನ ಕ್ಷೇತ್ರದಲ್ಲಿ ಕೆಲವು ಮಕ್ಕಳು ಓದುವುದಕ್ಕೆ ಬೆಳಕಿಲ್ಲ, ಲೈಟು ಕೊಡಿ ಎಂದು ಲೇಜರ್ ರೋಡ್‌ನಲ್ಲಿರುವ ಕೆ.ಇ.ಬಿ. ಯೂನಿಟ್‌ಗೆ ಹೋದರು. ಅಲ್ಲಿದ್ದ ಸಂಬಂಧಪಟ್ಟ ಇಂಜಿನಿಯರವರು ಯಾರಾದರೂ ಮಿನಿಷ್ಟು ಹೇಳಿದರೆ ರಿಪೇರಿ ಮಾಡುತ್ತೇವೆ ಎಂಬಂತಹ ಉತ್ತರವನ್ನು ಮಕ್ಕಳಿಗೆ ಹೇಳಿ ಕಳುಹಿಸಿದ್ದಾರೆ. ಮಿಸ್ಟರ್ ಪಾಲೇಕರ್‌ರವರು ರಾತ್ರಿ 10.30ರ ಗಂಟೆಗೆ ನನ್ನ ಮನೆಗೆ ಫೋನ್ ಮಾಡಿ ನನ್ನನ್ನು ಡಿಸ್ಟರ್ಬ್ ಮಾಡಿ ನನ್ನಿಂದ ಅವರಿಗೆ ಹೇಳಿಸಿದರು. ಆದರೂ ಪವರ್ ಬಂದಿರಲಿಲ್ಲ, ಇವತ್ತು ಬೆಳಿಗ್ಗೆ ಮತ್ತೆ ಆ ಬಗ್ಗೆ ಸಂಬಂಧಪಟ್ಟವರಿಗೆ ಒಂದು ಲೆಟರ್ ಕಳುಹಿಸಿ ಬಂದಿದ್ದೇನೆ. ದಯವಿಟ್ಟು ಅಧಿಕಾರಿಗಳು ಸಹಾನುಭೂತಿಯಿಂದ ದೂರುಕೊಟ್ಟವರಿಗೆ ಉತ್ತರ ಹೇಳಿ, ಅದನ್ನು ರಿಪೇರಿ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ನೀವು ಹೇಳಿದ ರೀತಿಯಲ್ಲಿ ಬೆಳಿಗ್ಗೆಯವರೆಗೂ ಬೀದಿ ದೀಪಗಳು ಉರಿಯುತ್ತಿರುತ್ತದೆ.

ಅಧ್ಯಕ್ಷರು : ಎಷ್ಟೇ ಆಗಲಿ ನಾವು ಜನ ಸೇವಕಲ್ಲವೇ? ಎಲ್ಲೆಲ್ಲಿ ಸ್ವಿಚ್ ಇರುತ್ತದೆ ಎಂದು ತಿಳಿದುಕೊಂಡು, ನಾವೇ ಹೋಗಿ ಸ್ವಿಚ್ ಆಫ್ ಮಾಡಿದರಾಯಿತು.

ಶ್ರೀ ಹೆಚ್.ಕೆ. ಪಾಟೀಲ್ : ಎಲ್ಲೆಲ್ಲಿ ಯಾವ ಸಮಯಕ್ಕೆ ಆಫ್ ಮಾಡಿಸಬೇಕೋ ಅದನ್ನು ನಾನು ಮಾಡಿಸುತ್ತೇನೆ.

ಶ್ರೀ ವಸಂತ್ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾಗಿ ನನ್ನ ಕ್ಷೇತ್ರದಲ್ಲಿ ಬರುವಂತಹ ಒಂದು ಕಾಮಗಾರಿ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ, ಅಕ್ಟೋಬರ್ 1993ರಲ್ಲಿ ಇದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ದೊರಕಿದೆ ಎಂದು ಹೇಳಿದ್ದಾರೆ. ಕಾಮಗಾರಿಗೆ ಸುಮಾರು 56ಲಕ್ಷ 20 ಸಾವಿರ ಕಾಮಗಾರಿ ಆದೇಗ ಇದಕ್ಕೆ ಟೆಂಡರ್ ಕರೆದಿದ್ದೇವೆಂದು ಹೇಳಿದ್ದಾರೆ. ಟೆಂಡರ್ ಕರೆದ ರೀತಿಯಲ್ಲಿ ಇವತ್ತು ಸಂಧಾನ ಮಾಡುತ್ತಿದ್ದೇವೆಂದು ಹೇಳಿದ್ದೀರಿ. 1994ನೇ ಇಸವಿಯಿಂದ 1996ನೇ ಇಸವಿವರಗೆ ಎಷ್ಟು ಸಲ ಸಂಧಾನ ಮಾಡಿದ್ದೀರಿ? ಯಾರ್‍ಯಾರ ಜೊತೆ ಸಂಧಾನ ಮಾಡಿದ್ದೀರಿ? ಮತ್ತು ಕಾಮಗಾರಿಯ ಮಹತ್ವವನ್ನು ತಾವು ತಿಳಿದುಕೊಂಡು ಕಾಮಗಾರಿಯನ್ನು ಮೇ ಒಳಗೆ ಪ್ರಾರಂಭ ಮಾಡದಿದ್ದರೆ ಪುನಃ ಬರುವ ವರ್ಷಕ್ಕೆ ಹೋಗುತ್ತದೆ. ಏಕೆಂದರೆ ಆ ನದಿಯಲ್ಲಿ ನೀರು ಮಾರ್ಚ್ ತಿಂಗಳಲ್ಲ ಕಡಿಮೆಯಾಗಿ ಮಾರ್ಚ್‌ನಿಂದ ಮೇ ತಿಂಗಳವರೆಗೆ ತಾವು ಕಾಮಗಾರಿ ಪ್ರಾರಂಭ ಮಾಡದೇ ಇದ್ದರೆ ಪುನಃ ಒಂದು ವರ್ಷ ತಡವಾಗುತ್ತದೆ. ಅದೇ ರೀತಿಯಲ್ಲಿ ಗುತ್ತಿಗೆ ತೆಗೆದುಕೊಂಡಂತಹ ಕಂಟ್ರಾಕ್ಟರ್ ಯಾವುದೇ ಒಂದು ಹಂತದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಆದ್ದರಿಂದ ಈ ಮಾರ್ಚ್ ತಿಂಗಳಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡದೇ ಇದ್ದರೆ ಕೆಲಸ ಪ್ರಾರಂಭ ಮಾಡಲೇಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಈ ಕೆಲಸಕ್ಕೆ ಗುತ್ತಿಗೆದಾರರನ್ನು ಕರೆದು ಆಗಿದೆ. ಸಿ.ಎಸ್.ಆರ್.ಐ 19/1995-96ರ ಪ್ರಕಾರ 68 ಎಬೋವ್ ಹಾಕಿದ್ದಾರೆ. 68 ಎಬೋವ್ ಹಾಕಿದ ಸಲುವಾಗಿ ಅಲ್ಲಿ ಬೇರೆ ಬೇರೆ

ಗುತ್ತಿಗೆದಾರರು ಯಾರೂ ಬರುವುದಕ್ಕೆ ತಯಾರಿಲ್ಲ. ಅದ ಕಾರಣ ನಾವು ಅವರನ್ನು ಸಂಧಾನಕ್ಕೆ ಕರೆದಿದ್ದೇವೆ. ಮಾರ್ಚ್ ತಿಂಗಳಲ್ಲಿ ಅವರು ಬರುತ್ತೇವೆಂದು ಹೇಳಿದ್ದಾರೆ. ಬಂದ ನಂತರ ನಾವು ಎಷ್ಟು ಸಾಧ್ಯ ಇದೆ ಅಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆಂದು ಇವತ್ತಿನ ದಿವಸ ಹೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ್ : ಕ್ರಮದ ಪ್ರಶ್ನೆ ಇಲ್ಲ. 1993ನೇ ಇಸವಿಯಲ್ಲಿ ಅಕ್ಟೋಬರ್‌ನಲ್ಲಿ ಇದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ದೊರಕಿದೆ. ನಾನು ಮತ್ತು ಮಾನ್ಯ ಆಗಿನ ಮುಖ್ಯಮಂತ್ರಿಗಳು ಹೋಗಿ ಫೌಂಡೇಷನ್ ಹಾಕಿ ಸುಮಾರು ಒಂದೂವರೆ ವರ್ಷ ಆದರೂ ಸಹ ನಮ್ಮ ಇಲಾಖೆಯ ಅಧಿಕಾರಿಗಳಿಗೆ ಟೆಂಡರ್ ಕರೆಯುವಂತಹ ಯೋಗ್ಯತೆ ಇಲ್ಲದೆ ಹೋದರೆ ಹೇಗೆ? ಅವರ ಜೊತೆ ಈಗ ಸಂಧಾನ ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ ಇದಕ್ಕೆ ಮುಂಚೆ ತಾವು ಸಂಧಾನ ಪ್ರಾರಂಭ ಮಾಡಿದ್ದರೆ. ಈ ರೀತಿ ತೊಂದರೆ ಬರುತ್ತಾ ಇರಲಿಲ್ಲ. ಆದುದರಿಂದ ಇದು ನಿಮ್ಮ ಇಲಾಖೆಯ ಒಂಧು ಲ್ಯಾಪ್ಸ್ ಆದುದರಿಂದ ತಾವು ಈ ಒಂದು ಕಾಮಗಾರಿಯನ್ನು ಇವತ್ತು ಸಹ ಪ್ರಾರಂಭ ಮಾಡದೆ ಇದ್ದರೆ ಬರುವ ವರ್ಷ ಇದು ಒಂದು ಕೋಟಿ ರೂಪಾಯಿಯಾಗುತ್ತದೆ. ಏಕೆಂದರೆ ಸ್ಟೀಲ್ ದರ ಏರುತ್ತದೆ. ಸಿಮೆಂಟ್ ದರ ಹೆಚ್ಚಾಗುತ್ತದೆ. ಆದ್ದರಿಂದ ಒಂದು ಕೋಟಿ ರೂಪಾಯಿಯಲ್ಲಿ ನಾವು ಮಾಡುವುದಕ್ಕಾಗುವುದಿಲ್ಲ ಎಂದು ತಾವು ಉತ್ತರ ಕೊಡುತ್ತೀರಿ. ಆದ್ದರಿಂದ ನಾನು ಇವತ್ತು ಸನ್ಮಾನ್ಯ ಅಧ್ಯಕ್ಷರ ಮುಖೇನ ತಮಗೆ ಒತ್ತಾಯ ಮಾಡುತ್ತೀದ್ದೇನೆ. ಇದು ಬಹಳ ಪ್ರಮುಖ್ಯವಾದ ನದಿಯಲ್ಲಿ ಏಕೆಂದರೆ ಒಂದು ಕಡೆಯಲ್ಲಿ ಮೀನುಗಾರಿಕೆ ರಸ್ತೆ ಇನ್ನೊಂದು ಕಡೆಯಲ್ಲಿ ನ್ಯಾಷನಲ್ ಹೈವೇ, ಇದಕ್ಕೆ ಸಂಪರ್ಕವಾದಂತಹ ಕೃಷಿಕರು ಹೋಗಲಿಕ್ಕೆ ಮೀನುಗಾರರು ಹೋಗಲಿಕ್ಕೆ, ಸಾರ್ವಜನಿಕರಿಗೆ ಬಹಳ ಪ್ರಾಮುಖ್ಯವಾದಂತಹ ಒಂದು ಸೇತುವೆ.

11.40 ಎ.ಎಂ.

ಆದುದರಿಂದ ತಾವು ಈ ವರ್ಷದಲ್ಲಿ ಪ್ರಾರಂಭ ಮಾಡದಿದ್ದರೆ ಮುಂದಿನ ವರ್ಷಕ್ಕೆ ಹೆಚ್ಚಾಗಿ ಒಂದು ಕೋಟಿ ಮೇಲೆ ಹೋಗುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : 1993ರಲ್ಲಿ ಆಡಳಿತಾತ್ಮಕ ಮಂಜೂರಾತಿ-ನೀಡಿದೆ. 1993ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರ ತಾಂತ್ರಿಕ ಮಂಜೂರಾತಿ ನೀಡುವ ಕಾಲಕ್ಕೆ ಕೆಲವು ಪಾಯಾದಲ್ಲಿ ಬದಲಾಯಿತು. Change on estianales ಆಯಿತು. ಹೀಗಾಗಿ ಕೆಲಸ ಸ್ವಲ್ಪ ನಿಧಾನವಾದುದು ನಿಜ. ಆದರೆ ಒಂದು ಮಾತ್ರ ನಾನು ಸದಸ್ಯರಿಗೆ ಅಶ್ವಾಸನೆಯನ್ನು ಕೊಡುತ್ತೇನೆ. ಆದಷ್ಟು ಬೇಗನೆ ಈ ಕೆಲಸ ಪ್ರಾರಂಭ ಮಾಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಡಿ. ಮಂಜುನಾಥ : ದಿನಾಂಕ 26ನೇ ಫೆಬ್ರವರಿ 1996ರ 4ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 116 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸಿದ್ದೇನೆ.

ಲೋಕೋಪಯೋಗಿ ಇಲಾಖೆಗಳ ರಸ್ತೆ ದುರಸ್ತಿಮಾಡುವುದು.

675 - ಶ್ರೀ ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖ ರಸ್ತೆಗಳ ದುರಸ್ಥಿಗಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಮೊದಲನೇ ಕಂತಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಆ) ಈ ಯೋಜನೆಯನ್ನು ನಗರ ಪ್ರದೇಶದ ವಿಧಾನಸಭಾ ಕ್ಷೇತ್ರಕ್ಕೂ ಸಹ ಅನ್ವಯಿಸಲಾಗುವುದೇ.

ಇ) ಎರಡನೇ ಕಂತಿನ ಹಣವನ್ನು ಯಾವಾಗ ಮತ್ತು ಎಷ್ಟು ಬಿಡುಗಡೆ ಮಾಡಲಾಗುವುದು.

ಈ) ಈಗಾಗಲೇ ಎಷ್ಟು ಕ್ಷೇತ್ರಗಳಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಬಂದಿದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) 808 ಲಕ್ಷ ರೂ.ಗಳು

ಆ) ಈ ಯೋಜನೆಯು ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮವಾಗಿದ್ದು, ನಗರ ಪ್ರದೇಶ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿ ರಸ್ತೆಗಳು ಇದ್ದಲ್ಲಿ ಅವುಗಳ ಅಭಿವೃದ್ಧಿಯೂ ಈ ಕಾರ್ಯಕ್ರಮದಲ್ಲಿ ಸೇರುತ್ತದೆ.

ಇ) ಕಾಮಗಾರಿಯ ಪ್ರಗತಿಯನ್ನು ಅನುಸರಿಸಿ, ಹಾಗೂ ಲೋಕೋಪಯೋಗಿ ವಿಭಾಗಗಳ, ಬೇಡಿಕೆ ಅನುಸರಿಸಿ ಹಣ ಭರವಸೆ ಪತ್ರವನ್ನು ಬಿಡುಗಡೆ ಮಾಡಲಾಗುವುದು.

ಈ) 212 ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

ಯುವಕ ಮಂಡಳಿಗಳಿಗೆ ಟಿ.ವಿ. ವಿತರಣೆ

690 - ಶ್ರೀ ಅಶೋಕ ಕಾಟವೆ, (ಹುಬ್ಬಳ್ಳಿ) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಗೆ ಹಾಗೂ ಹುಬ್ಬಳ್ಳಿ ನಗರದ ಎಷ್ಟು ಯುವಕ ಮಂಡಳಿಗೆ 1994-95 ಮತ್ತು 1995-96ನೇ ಸಾಲಿಗೆ ಟಿ.ವಿ. ವಿತರಿಸಲಾಗಿದೆ. ಈ ಬಗ್ಗೆ ಎಷ್ಟು ಹಣ ಖರ್ಚು ಮಾಡಲಾಗದೆ?

ಆ) ಸಹಾಯ ಧನ ಮತ್ತು ಬೇರೆಬೇರೆ ಮನರಂಜನಾ ಸಾಮಗ್ರಿಗಳಿಗಾಗಿ ಬಂದ ಅರ್ಜಿ ಎಷ್ಟು? ಅವುಗಳನ್ನು ಎಷ್ಟು ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಧಾರವಾಡ ಜಿಲ್ಲೆಗೆ ವಿಶೇಷ ಘಟಕ ಯೋಜನೆಯಡಿ 1993-94 ಮತ್ತು 1995-96ನೇ ಸಾಲಿನಲ್ಲಿ ಒಟ್ಟು 22 ಬಣ್ಣದ ದೂರದರ್ಶನ ಸೆಟ್ಟುಗಳನ್ನು ಪರಿಶಿಷ್ಟ ಜಾತಿಯವರ ಗ್ರಾಮ : ಕಾಲೋನಿಗಳಲ್ಲಿ ಸ್ಥಾಪನೆಗಾಗಿ ಸರಬರಾಜು ಮಾಡಿದ. ಯುವಕ ಮಂಡಳಿಗೆ ಒದಗಿಸಿರುವುದಿಲ್ಲ.

1995-96ನೇ ಸಾಲಿಗಾಗಿ ವಿಶೇಷ ಘಟಕ ಯೋಜನೆಯಡಿ ದೂರದರ್ಶನಗಳನ್ನು ಎಲ್ಲೂ ಒದಗಿಸಿರುವುದಿಲ್ಲ. ಒಂದು ಬಣ್ಣದ ಟಿ.ವಿ. ಹಾಗೂ ಪೂರಕ ಉಪಕರಣ ಸೇರಿದಂತೆ ಅಂದಾಜು ರೂ. 15,000.00 ಖರ್ಚು ತಲಗುತ್ತದೆ.

ಆ) ಭಜನೆ ಸಾಮಗ್ರಿಗಳಿಗಾಗಿ ಸ್ವೀಕರಿಸಿರುವ ಮನವಿಗಳು- 9

ಕ್ರೀಡೆ ಸಾಮಗ್ರಿಗಳಿಗಾಗಿ ಸ್ವೀಕರಿಸಿರುವಮನವಿಗಳು - 30

ಮೂರು ತಿಂಗಳುಗಳೊಳಗಾಗಿ ಪೂರ್ಣಗೊಳಿಸಲಾಗುವುದು.

ಗ್ರಾಮೀಣಾಭಿವೃದಧಿ ಇಲಾಖೆಯಿಂದ ಯೋಜನೆಗಳಿಗೆ ಹಣ ಬಿಡುಗಡೆ

691 - ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಗೆ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣವನ್ನು 1995-96ನೇ ಸಾಲಿಗೆ ಬಿಡುಗಡೆ ಮಾಡಲಾಗಿದೆ. ಎಷ್ಟು ಹಣ ಖರ್ಚು ಮಾಡಲಾಗಿದೆ?

ಆ) ಗ್ರಾಮೀಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಧಾರವಾಡ ಜಿಲ್ಲೆ ಎಷ್ಟು ಸ್ವಯಂಸೇವಾ ಸಂಸ್ಥೆಗಳು ಸಹಯೋಗ ನೀಡಿದ್ದವು. ಸರ್ಕಾರದಿಂದ ಈ ಬಗ್ಗೆ 1995-96ಕ್ಕೆ ಎಷ್ಟು ಹಣ ಕೊಡಲಾಗಿದೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಲಗತ್ತಿಸಲಾಗಿದೆ.

ಆ) ಧಾರವಾಡ ಜಿಲ್ಲೆಯಲ್ಲಿ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಯಾವ ಸ್ವಯಂಸೇವಾ ಸಂಸ್ಥೆಗಳು ಸಹಯೋಗ ನೀಡಿರುವುದಿಲ್ಲ, ಮತ್ತು ಸರ್ಕಾರದಿಂದ ಈ ಬಗ್ಗೆ ಸ್ವಯಂ ಸೇವಾ ಸಂಸ್ಥೆಗಳಿಗೆ 1995-96ನೇ ಸಾಲಿನಲ್ಲಿ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

1995-96ನೇ ಸಾಲಿನಲ್ಲಿ ಜನವರಿ 1996ರ ಅಂತ್ಯಕ್ಕೆ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಧಾರವಾಡ ಜಿಲ್ಲೆಗೆ ಬಿಡುಗಡೆಯಾದ ಹಣ ಮತ್ತು ಖರ್ಚಿನ ವಿವರ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾರ್ಯಕ್ರಮದ ಹೆಸರು	ಬಿಡುಗಡೆಯಾದ ಹಣ	ಖರ್ಚಾದ ಹಣ
1)	ಜವಾಹರ್‌ರೋಜ್‌ಗಾರ್ ಯೋಜನೆ	667.750	799.349
2)	ದಶಲಕ್ಷಬಾವಿ ಯೋಜನೆ	79.250	71.828
3)	ಇಂದಿರಾ ಆವಾಸ್ ಯೋಜನೆ	167.860	125.195
4)	ಉದ್ಯೋಗ ಭರವಸೆ ಯೋಜನೆ	1075.000	807.200
5)	ಜವಾಹರ್‌ರೋಜ್‌ಗಾರ್ ಯೋಜನೆ 2ನೇ ವಾಹಿನಿ	176.250	437.515
6)	ನೆಮ್ಮದಿ	-	21.511
7)	ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ	228.000	114.399
8)	ಸಮಗ್ರ ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆ	16.560	12.370
9)	ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ	90.060	278.636
10)	ಟ್ರೈಸಂ (ಸುಧಾರಿತ ಉಪಕರಣಗಳು)	12.370	-
11)	ಟ್ರೈಸಂ	-1-	21.920
12)	ಕೃಷಿ ಉತ್ಪನ್ನದ ಹೆಚ್ಚಳಕ್ಕಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೆರವು ಕಾರ್ಯಕ್ರಮ (100 ಬಾವಿ ಯೋಜನೆ)	7.000	6.583
13)	ಜೀತವಿಮುಕ್ತರ ಪುನರ್‌ವಸತಿ ಕಾರ್ಯಕ್ರಮ	-	-
14)	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ	102.500	51.450

15)	ಸಮಗ್ರ ಗ್ರಾಮೀಣ ಇಂಧನಶಕ್ತಿ ಕಾರ್ಯಕ್ರಮ	9.500	0.851
16)	ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ	4.870	3.060
17)	ಜಿಲ್ಲಾಪಂಚಾಯತಿಗೆ ಅನುದಾನ	40.600	40.600
18)	ಗ್ರಾಮಪಂಚಾಯ್ತಿಗೆ ಅನುದಾನ	414.375	414.375
19)	ಗ್ರಾಮೀಣ ನೀರು ಸರಬರಾಜು	575.930	482.504

ವಿದ್ಯುತ್ ಕಳವು ಪ್ರಕರಣಗಳ ಬಗ್ಗೆ.

659 - ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಕಳವು ಪ್ರಕರಣಗಳ ಪತ್ತೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು.

ಆ) ಕೈಗೊಂಡಿದ್ದರೆ 1996 ಜನವರ ವರೆಗೆ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ.

ಇ) ಇದರಿಂದ ಸರ್ಕಾರಕ್ಕೆ ಬಂದ ಹಣವೆಷ್ಟು?

ಈ) ಅಪರಾಧಿಗಳ ಮೇಲೆ ಕೈಗೊಂಡ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಮಂಡಳಿಯಲ್ಲಿ ಟೆಕ್ನಿಕಲ್ ಆಡಿಟ್ ಸೆಲ್ ಮತ್ತು ಜಾಗ್ರತ ದಳಗಳು ವಿದ್ಯುತ ಕಳ್ಳತನವನ್ನು ಪತೆಹಚ್ಚುವ ಕಾರ್ಯದಲ್ಲಿ ನಿರತಗೊಂಡಿದೆ. ಟೆಕ್ನಿಕಲ್ ಆಡಿಟ್ ಸೆಲ್ ಮುಖ್ಯ ಇಂಜಿನಿಯರ್ ರವರ ನೇತೃತ್ವದಲ್ಲಿ ಮತ್ತು ಜಾಗ್ರತದಳವು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರ ನೇತೃತ್ವದಲ್ಲಿ ಕೆಲಸ ಮಾಡುತ್ತಿವೆ.

ಜಾಗ್ರತ ದಳ ಮತ್ತು ಟೆಕ್ನಿಕಲ್ ಆಡಿಟ್‌ಸೆಲ್‌ಗಳ ಸಿಬ್ಬಂದಿಗಳು ಅನಿರೀಕ್ಷಿತ ದಾಳಿಗಳ ಮೂಲಕ ವಿದ್ಯುತ್ ಕಳ್ಳತನವನ್ನು ಪತ್ತೆಹಚ್ಚುತ್ತಿದೆ. ಎಲ್ಲಾ ಹೆಚ್.ಟಿ. ಸ್ಥಾವರಗಳ ವಿದ್ಯುತ್ ಬಳಕೆಯ್ನು ಕಂಪ್ಯೂಟರ್‌ಗಳ ಮೂಲಕ ಅಭ್ಯಸಿಸಿ ಈ ರೀತಿ ಪಡೆದ ಮಾಹಿತಿಯನ್ನು ಜಾಗ್ರತದಳ ಮತ್ತು ಟೆಕ್ನಿಕಲ್ ಆಡಿಟ್ ಸೆಲ್‌ಗಳಿಗೆ ಒದಗಿಸಲಾಗುತ್ತಿದೆ. ಇದರಿಂದ ವಿದ್ಯುತ್ ಕಳ್ಳತನವನ್ನು ಪತ್ತೆ ಹಚ್ಚುವಲ್ಲಿ ಅನುಕೂಲವಾಗುತ್ತದೆ. ಲೆಡ್ಜರ್ ಪುಸ್ತಕಗಳನ್ನು ಪರಿಶೀಲಿಸಿ ಅವುಗಳ ಆಧಾರದ ಮೇಲೆ ಎಲ್.ಟಿ. ಸ್ಥಾವರಗಳ ಕಳ್ಳತನವನ್ನು ಪತ್ತೆ ಹಚ್ಚಲಾಗುತ್ತದೆ

ಆ) 1995-96ನೇ ಸಾಲಿನಲ್ಲಿ ಜನವರಿ 96ರ ವರೆಗೆ ಒಟ್ಟು 142 ಅಪರಾಧಾರ್ಹ (ಕಾಗ್ನಿಸಬಲ್) ಮತ್ತು 3216 ಅಪರಾಧಾರ್ಹವಲ್ಲದ (ನಾನ್‌ಕಾಗ್ನಿಸಬಲ್) ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಇ) ಜನವರಿ 96ರ ಅಂತ್ಯದವರೆಗೆ ಅಪರಾಧರ್ಹ ಪ್ರಕರಣಗಳಲ್ಲಿ ವಸೂಲಾದ ಹಣದ ಮೊತ್ತ ರೂ. 23.50 ಲಕ್ಷ ರೂ.ಗಳು ಮತ್ತು ಅಪರಾಧಾರ್ಹವಲ್ಲದ ಪ್ರಕರಣಗಳಲ್ಲಿ ವಸೂಲಾದ ಹಣದ ಮೊತ್ತ ರೂ. 170.96 ಲಕ್ಷಗಳು.

ಈ) ಅಪರಾಧರ್ಹ ಪ್ರಕರಣಗಳಲ್ಲಿ (ಕಾಗ್ನಿಸಬಲ್) ಮಂಡಳಿಯು ಸಂಬಂಧಪಟ್ಟ ಪೋಲೀಸ್ ಠಾಣೆಗಳಲ್ಲಿ ದೂರುಗಳನ್ನು ದಾಖಲೆ ಮಾಡಿದ್ದು ಪೋಲೀಸ್ ಇಲಾಖೆಯು ಅಪಾದಿತರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲು ಕ್ರಮ ಕೈಗೊಳ್ಳುತ್ತದೆ.

ವಿರಾಜಪೇಟೆ ತಾಲ್ಲೂಕು ರಸ್ತೆ ದುರಸ್ತಿ

673 - ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಬರುವ ರಸ್ತೆಗಳ ದುರಸ್ತಿ ಇನ್ನೂ ಪೂರ್ಣವಾಗದೆ ಬಹಳಷ್ಟು ನಿಧಾನ ಗತಿಯಲ್ಲಿ ಕೆಲಸವಾಗಿದ್ದು ಸಾರ್ವಜನಿಕರಿಗೆ - ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ;

ಆ) ಹಾಗಿದ್ದಲ್ಲಿ, ಅಪೂರ್ಣಗೊಂಡ ರಸ್ತೆಗಳ ದುರಸ್ತಿಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ರಸ್ತೆಗಳ ದುರಸ್ತಿಯನ್ನು ಮಾಡಲಾಗುತ್ತಿದ್ದು, ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ಆ) ಈ ಸಾಲಿನಲ್ಲಿ ಇದುವರೆವಿಗೂ ರಸ್ತೆ ದುರಸ್ತಿಗೆ 28.56 ಲಕ್ಷ ರೂ.ಗಳ ವೆಚ್ಚವನ್ನು ಮಾಡಲಾಗಿದೆ. ಇನ್ನುಳಿದ ತಿಂಗಳುಗಳ ಒಳಗಾಗಿ ಇನ್ನು ಸುಮಾರು 30.00 ಲಕ್ಷ ರೂ.ಗಳ ದುರಸ್ತಿ ಹಾಗೂ ನವೀಕರಣ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ.

ಕೊಡಗು ಜಿಲ್ಲೆಯಲ್ಲಿ ಸೀಮೆಎಣ್ಣೆ ವಿತರಣೆ

664 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಗೆ ಪ್ರತಿ ತಿಂಗಳು ಎಷ್ಟು ಸೀಮೆಎಣ್ಣೆ ವಿತರಿಸಲಾಗುತ್ತಿದೆ. (ತಾಲ್ಲೂಕುವಾರು ವಿವರ ನೀಡುವುದು);

ಆ) ಕೊಡಗು ಜಿಲ್ಲೆಗೆ ಸರಬರಾಜು ಮಾಡಲು ನಿಗದಿಪಡಿಸಿರುವ ಸೀಮೆಎಣ್ಣೆಯ ಪ್ರಮಾಣವೆಷ್ಟು (ತಾಲ್ಲೂಕುವಾರು ನೀಡುವುದು)?

ಶ್ರೀ ಎನ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ನಿಗದಿತ ಪ್ರಮಾಣ ಹಾಗೂ ಹೆಚ್ಚುವರಿ ಬಿಡುಗಡೆ ಪ್ರಮಾಣದ ವಿವರ ಲಗತ್ತಿಸಿದೆ.

ಆ) ಹಂಚಿಕೆ ಮಾಡಲಾದ ಪ್ರಮಾಣವನ್ನು ವಿತರಣೆಗೆ ನಿಗದಿ ಪಡಿಸಲಾಗಿದೆ.

ಅನುಬಂಧ 1

ಪ್ರಶ್ನೆಸಂಖ್ಯೆ 664

ಕೊಡಗು ಜಿಲ್ಲೆಗೆ ನಿಗಧಿತ ಪ್ರಮಾಣದಲ್ಲಿ ಬಿಡುಗಡೆ ಮಾಡಿದ ಪ್ರಮಾಣ ಹಾಗೂ ಕೇಂದ್ರ ಸರ್ಕಾರವು ರಾಜ್ಯಕ್ಕೆ 1995ನೇ ನವೆಂಬರ್ ತಿಂಗಳಿನಿಂದ 2000Ë3000 ಕೆ.ಎಲ್. ನಂತೆ ಸೀಮೆಎಣ್ಣೆಯನ್ನು ಹೆಚ್ಚುವರಿಯಾಗಿ ನೀಡಿದ ಪ್ರಮಾಣದಲ್ಲಿ ಕೊಡಗು ಜಿಲ್ಲೆಯ ಗ್ರಾಮಾಂತರ ಪ್ರದೇಶದ ಪಡಿತರ ಚೀಟಿದಾರರಿಗೆ ವಿತರಿಸಲು ಬಿಡುಗಡೆ ಮಾಡಿದ ಸೀಮೆಎಣ್ಣೆಯ ಪ್ರಮಾಣ ಈ ಕೆಳಕಂಡಂತಿದೆ.

ತಿಂಗಳು ಪ್ರಮಾಣ	ನಿಗಧಿತ	ಹೆಚ್ಚುವರಿ	ಒಟ್ಟು	ಷರಾ
	(ಕೆ.ಎಲ್. ಗಳಲ್ಲಿ)			
ಡಿಸೆಂಬರ್ 95	636	120	852	ಗ್ರಾಮಾಂತರ ಪ್ರದೇಶದ ಪಡಿತರ ಚೀಟಿದಾರರಿಗೆ ತಲಾ 1 ಲೀ.ನಂತೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಹಂಚಿಕೆ ಮಾಡಿರುತ್ತ, ಮತ್ತೆ 825 ಎಂ.ಎಲ್.ನಂತೆ ಇತರ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಪ್ರಮಾಣದಲ್ಲಿ ಪ್ರತಿ ಪಡಿತರ ಚೀಟಿಗೆ ಹೆಚ್ಚುವರಿಯಾಗಿ ಪ್ರಮಾಣ ನಿಗಧಿಪಡಿಸಿ 1 ಲೀ ನಂತೆ ವಿತರಿಸಲು ಹಂಚಿಕೆ ಮಾಡಿದೆ.
ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಹೆಚ್ಚುವರಿ ಪ್ರಮಾಣ ಸೇರಿಸಿ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಪ್ರಮಾಣ ದಂತೆ ಈ ಜಿಲ್ಲೆಗೆ ಬಿಡುಗಡೆ ಮಾಡಿದ ಪ್ರಮಾಣ		96		
ಜನವರಿ 96	636	48	684	ಗ್ರಾಮಾಂತರ ಪ್ರದೇಶದ ಪಡಿತರ ಚೀಟಿಗೆ 396 ಎಂ.ಎಲ್. ನಂತೆ ಹೆಚ್ಚುವರಿಯಾಗಿ ಹಂಚಿಕೆ ಮಾಡಿದೆ.
ಫೆಬ್ರವರಿ 96	636	40	696	ಗ್ರಾಮಾಂತರ ಪ್ರದೇಶದ ಪಡಿತರ ಚೀಟಿಗೆ 524 ಎಂ.ಎಲ್. ನಂತೆ ಹೆಚ್ಚುವರಿಯಾಗಿ ಹಂಚಿಕೆ ಮಾಡಿದೆ.

ಅನುಬಂಧ-2

ಪ್ರಶ್ನೆ ಸಂ.664

ಕೊಡಗು ಜಿಲ್ಲೆಯ ತಾಲ್ಲೂಕುಗಳಿಗೆ 1995ನೇ ನವೆಂಬರ್ ತಿಂಗಳಿನಿಂದ ಫೆಬ್ರವರಿ 96ರವರೆಗೆ ಹಂಚಿಕೆ ಮಾಡಲಾದ ಸೀಮೆಎಣ್ಣೆಯ ವಿವರ

ಕ್ರ. ಸಂ.	ತಿಂಗಳು	ತಾಲ್ಲೂಕಿನ ಹೆಸರು	ನಿಗಧಿತ ಪ್ರಮಾಣ ಪಟ್ಟಣ	ಗ್ರಾ.	ಹೆಚ್ಚುವರಿ ಪ್ರಮಾಣ ಪಟ್ಟಣ	ಗ್ರಾ.	ಷರಾ
1.	ನವೆಂಬರ್ 95	ಮಡಿಕೇರಿ	72	96	-	-	
		ವಿರಾಜಪೇಟೆ	-	228	-	-	
		ಸೋಮವಾರಪೇಟೆ	-	240	-	-	
			72	564			636

2.	ಡಿಸೆಂಬರ್ 95	ಮಡಿಕೇರಿ	72	96	12	72	
		ವಿರಾಜಪೇಟೆ	-	228	-	72	
		ಸೋಮವಾರಪೇಟೆ	-	240	-	60	
			72	564	12	204	852
3.	ಜನವರಿ 96	ಮಡಿಕೇರಿ	72	96	-	24	
		ವಿರಾಜಪೇಟೆ	-	228	-	12	
		ಸೋಮವಾರಪೇಟೆ	-	240	-	12	
			72	564		48	684
4.	ಫೆಬ್ರವರಿ 96	ಮಡಿಕೇರಿ	72	96	12	36	
		ವಿರಾಜಪೇಟೆ	-	228	-	-	
		ಸೋಮವಾರಪೇಟೆ	-	240	-	12	
			72	564	12	48	696

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು

715 - ಶ್ರೀ ಬಸವನಗೌಡ ಆರ್. ಪಾಟೀಲ್ (ವಿಜಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1994-95ನೇ ಸಾಲಿನಲ್ಲಿ ಸರ್ಕಾರವು ರಾಜ್ಯದ ಪ್ರತಿ ಜಿಲ್ಲೆಗೆ ಎಷ್ಟು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಟ್ಟಿದೆ. ವಿವರ ನೀಡುವುದು

ಆ) ವಿಜಾಪುರ ಜಿಲ್ಲೆಗೆ ಎಷ್ಟು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ನೀಡಲಾಗಿದೆ ಸಂಪೂರ್ಣ ವಿವರವನ್ನೊದಗಿಸುವುದು.

ಇ) ವಿಜಾಪುರ ಜಿಲ್ಲೆಯ ಇಂಡಿ ಮತ್ತು ಜಮಖಂಡಿಗೆ ಡೀಸಲ್ ಜನರೇಟರ್‌ಗಳನ್ನು ಮಂಜೂರು ಮಾಡಿರುವುದು ಸರ್ಕಾರದ ಗಮನದಲ್ಲಿಯೆ, ಜನರೇಟರ್‌ಗಳು ಕಾರ್ಯಗತವಾಗದಿರುವುದಕ್ಕೆ ಕಾರಣವೇನು?

ಶ್ರೀ ಹೆಚ್.ಕೆ. ಪಾಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 1994-95ನೇ ಸಾಲಿನಲ್ಲಿ ಒಟ್ಟು 1675 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿಜಾಪುರ ಜಿಲ್ಲೆಗೆ ಒದಗಿಸಿದೆ. ಅವುಗಳ ಸಾಮರ್ಥ್ಯವಾರು ವಿವರಗಳು ಕೆಳಕಂಡಂತಿದೆ.

	ಸಾಮರ್ಥ್ಯ	ಸಂಖ್ಯೆ
1)	25 ಕೆ.ವಿ.ಎ.	615
2)	63 ಕೆ.ವಿ.ಎ.	694
3)	100 ಕೆ.ವಿ.ಎ.	312
4)	250 ಕೆ.ವಿ.ಎ.	54
	ಒಟ್ಟು	1675

ಇ) ಹೌದು. ಈ ಹಿಂದೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವತಿಯಿಂದ ಈ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿತ್ತು.

ಆದರೆ ಈಗ ಖಾಸಗೀ ವಲಯದಲ್ಲಿ ಸದರಿ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿದೆ.

ವಿಧಾನ ಸಭಾ ಸದಸ್ಯರದ ಶ್ರೀ ಬಸವನಗೌಡ ಆರ್. ಪಾಟೀಲ್‌ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 715ಕ್ಕೆ ಅನುಬಂಧ.

1994-95ನೇ ಸಾಲಿನಲ್ಲಿ ಒದಗಿಸಿದ ಟ್ರಾನ್ಸ್‌ಫಾರ್ಮರುಗಳ ಜಿಲ್ಲಾವಾರು ವಿವರ

ಕ್ರಮ. ಸಂಖ್ಯೆ	ಜಿಲ್ಲೆಯ ಹೆಸರು	ಒದಗಿಸಲಾದ ಟ್ರಾನ್ಸ್‌ಫಾರ್ಮರುಗಳ ಸಂಖ್ಯೆ
1.	ಬೆಂಗಳೂರು	2488
2.	ಕೋಲಾರ	2311
3.	ತುಮಕೂರು	2845
4.	ಮೈಸೂರು	997
5.	ಮಂಡ್ಯಾ	549
6.	ಹಾಸನ	924
7.	ಶಿವಮೊಗ್ಗ	859
8.	ಚಿಕ್ಕಮಗಳೂರು	433
9.	ಮಡಕೇರಿ	97
10.	ದಕ್ಷಿಣ ಕನ್ನಡ	965
11.	ಧಾರವಾಡ	1349
12.	ಚಿತ್ರದುರ್ಗ	1025
13.	ಬೆಳಗಾಂ	1767
14.	ಬಿಜಾಪುರ	1675
15.	ಉತ್ತರ ಕನ್ನಡ	296
16.	ಬಳ್ಳಾರಿ	1285
17.	ರಾಯಚೂರು	1097
18.	ಬೀದರ್	421
19.	ಗುಲ್ಬರ್ಗ	832

ಮಾಗಡಿ ತಾಲ್ಲೂಕು ಅಗಲಕೋಟೆ ರಸ್ತೆ ಬಗ್ಗೆ

702ಎ - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಗಡಿ ತಾಲ್ಲೂಕು ಅಗಲಕೋಟೆ ಕೋಟಗಾನಹಳ್ಳಿ ಮಧ್ಯೆ ರಸ್ತೆ ಹದಗಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮ ಏನು ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ

ಆ) ಸುಗಮ ಸಂಚಾರಕ್ಕೆ ತೊಂದರೆ ಆಗದಂತೆ ರಸ್ತೆಯನ್ನು ಸುಸ್ಥಿತಿಯನ್ನುಡುವಂತೆ ಸರ್ಕಾರದಿಂದ ಸೂಚನೆಯನ್ನು ಮುಖ್ಯ ಇಂಜಿನಿಯರ್‌ರವರಿಗೆ ನೀಡಲಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ವಿದ್ಯುತ್ ಕುರಿತು

19 - ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಎಷ್ಟು ಹಳ್ಳಿಗಳಲ್ಲಿ ಹಾಗೂ ಹ್ಯಾಮ್ಲೆಟ್ ಹಳ್ಳಿಗಳಲ್ಲಿ ವಿದ್ಯುತ್ ಇರುತ್ತದೆ, ಇಲ್ಲದಿರುವ ಗ್ರಾಮಗಳಲ್ಲಿ ವಿದ್ಯುತ್ ಅಳವಡಿಸಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 1981ರ ಜನಗಣತಿ ಪ್ರಕಾರ ಚಿಕ್ಕನಾಯಕನ ಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಜನವಸತಿ ಇರುವ ಎಲ್ಲಾ 234 ಕಂದಾಯ ಗ್ರಾಮಗಳನ್ನು ಈಗಾಗಲೇ ವಿದ್ಯುಧೀಕರಿಸಲಾಗಿದೆ.

ಈ ವಿಧಾನ ಸಭಾ ಕ್ಷೇತ್ರಗಳಲ್ಲಿ 145 ಹ್ಯಾಮ್ಲೆಟ್ (ಉಪ ಗ್ರಾಮ)ಗಳಿದ್ದು, ಇವುಗಳ ಪೈಕಿ ಜನವರಿ 96ರ ಅಂತ್ಯದವರೆಗೆ ಒಟ್ಟು 86 ಉಪ ಗ್ರಾಮಗಳನ್ನು ವಿದ್ಯುದ್ದೀಕರಿಸಲಾಗಿದೆ. ವಿದ್ಯುಧೀಕರಣಕ್ಕಾಗಿ ಬಾಕಿ ಉಳಿಸಿರುವ 59 ಉಪ ಗ್ರಾಮಗಳನ್ನು ಮಂಡಳಿಗೆ ಲಭ್ಯವಿರುವ ಆರ್ಥಿಕ ಸಂಪನ್ಮೂಲ್ಯಕ್ಕನುಗುಣವಾಗಿ ವಿದ್ಯುಧೀಕರಣ ಮಾಡಲು ಕ್ರಮ ಕೈಗೊಳ್ಳಲಗುವುದು.

ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ

16 - ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಮಳೆ ಕಡಿಮೆಯಾಗಿರುವುದರಿಂದ ಕೆರೆ ಕಟ್ಟೆಗಳಲ್ಲಿ ನೀರಿಲ್ಲದೆ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವುದರಿಂದ ಚಿಕ್ಕ ನಾಯಕನಹಳ್ಳಿ ತಾಲ್ಲೂಕಿಗೆ ಆದಷ್ಟು ಬೇಗನೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದೆ ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಚಿಕ್ಕನಾಯಕನಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರನ್ನು 23 ಕೊಳವೆ ನೀರು ಸರಬರಾಜು ಕಿರು ನೀರು ಸರಬರಾಜು ಯೋಜನೆ ಮತ್ತು 933 ಕೈಪಂಪು ಕೊಳವೆ ಬಾವಿಗಳ ಮೂಲಕ ಸರಬರಾಜು ಮಾಡಲಾಗುತ್ತದೆ. ಕುಡಿಯುವ ನೀರು ಸರಬರಾಜನ್ನು ಉತ್ತಮ ಗೊಳಿಸಲು 28 ಕೊಳವೆ ನೀರು ಸರಬರಾಜು ಯೋಜನೆ, 45 ಕಿರು ನೀರು

ಸರಬರಾಜು ಯೋಜನೆ ಮತ್ತು 136 ಕೈಪಂಪು ಕೊಳವೆಬಾವಿ ಕಾಮಗಾರಿಗಳ ಕೆಲಸವು ಪ್ರಗತಿಯಲ್ಲಿದೆ.

ಈ ವರ್ಷದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಕುಡಿಯುವ ನೀರಿನ ಸಲುವಾಗಿ ರೂ. 30.02 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದೆ.

ಬಾದಾಮಿ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳು

708 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾದಾಮಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಎಷ್ಟು ಪಶು ಚಿಕಿತ್ಸಾ ಕೇಂದ್ರಗಳಿಗೆ ಮಂಜೂರಾತಿ ನೀಡಲಾಗಿದೆ; (ಪ್ರಾರಂಭವಾದ ತಿಂಗಳು - ವರ್ಷ)

ಆ) 1996-97ರಲ್ಲಿ ಜನರ ಬೇಡಿಕೆ ಅನ್ವಯ ಹಾಗೂ ಇಲಾಖೆಯ ಅವಶ್ಯಕತೆ ಅನುಗುಣವಾಗಿ ನೀರಲಕೇರಿ, ನೀಲಗುಂದ ಗ್ರಾಮಗಳಿಗೆ ಆಸ್ಪತ್ರೆಗಳನ್ನು ಮಂಜೂರಾತಿ ನೀಡಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) 16

ವಿವರ ಈ ಕೆಳಕಂಡಂತೆ ಇರುತ್ತವೆ

ಸಂಸ್ಥೆ ಹೆಸರು		ಪ್ರಾರಂಭವಾದ	
		ತಿಂಗಳು	ವರ್ಷ
ಪಶು ಆಸ್ಪತ್ರೆ :			
1)	ಬಾದಾಮಿ	-	1938
2)	ಗುಡೇದ ಗುಡ್ಡ	-	1961
3)	**ಪಶು ಚಿಕಿತ್ಸಾಲಯ:**		
3)	ಕೆರೂರ	-	1948
4)	ಬಿ. ಜಾಲಿಹಾಳ	ಮಾರ್ಚ್	1990-91
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ			
5)	ಕಟಗೇರಿ	ಮಾರ್ಚ್	1984
6)	ನಂದಿಕೇಶ್ವರ	ಮಾರ್ಚ್	1956
7)	ಕುಳಗೇರಿ ಕ್ರಾಸ್	ಮಾರ್ಚ್	1956
8)	ಅನವಾಲ	ಮಾರ್ಚ್	1991
9)	ಹಲಕುರ್ಕಿ	ಫೆಬ್ರವರಿ	1992
10)	ಹುಬ್ಬಳ್ಳಿ	ಮಾರ್ಚ್	1993
11)	ಕೆಲವಡಿ	ಮೇ	1994
12)	ಬೊಳಚಗುಡ್ಡ	ಏಪ್ರಿಲ್	1994

13)	ಯಂಕಚಿಮಣೆನಾಗರ	ಏಪ್ರಿಲ್	1994
14)	ಕಾಕನೂರ	ಆಗಸ್ಟ್	1995
15)	ನೀರಬೂದಿಹಾಳ	ಆಗಸ್ಟ್	1995
16)	ಕಾಗಲಗೊಂಬ	ಆಗಸ್ಟ್	1995

ಆ) ಬೇಡಿಕೆ ಬಂದಲ್ಲಿ ಸದರಿ ಗ್ರಾಮಗಳಿಗೆ 1996-97ನೇ ಸಾಲಿನಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಬಾದಾಮಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ

709 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾದಾಮಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯಾತ್ಮಕ ಹಳ್ಳಿಗಳಿಗೆ ರ. 20.00 ಲಕ್ಷ ರೂಪಾಯಿಗಳ ವಿಶೇಷ ಅನುದಾನ ಬಿಡುಗಡೆ ಮಾಡಲು ಸರ್ಕಾರ ಒಪ್ಪಿದೆಯೇ?

ಆ) ಮಂತ್ರಿಗಳ ಆದೇಶದಂತೆ ಜಿಲ್ಲಾ ಪಂಚಾಯತಿಯವರು ಕಳುಹಿಸಿರುವ ಪ್ರಸ್ತಾವನೆಗೆ ಸರ್ಕಾರ ಶೀಘ್ರವಾಗಿ ಮಂಜೂರಾತಿ ನೀಡಿ, ಕೆಲಸ ಪ್ರಾರಂಭಿಸುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಮತ್ತು ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ, ಜಿಲ್ಲಾ ಪಂಚಾಯತ್, ಬಿಜಾಪುರ ಇವರು ಕಳಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಆರ್.ಇ.ಸಿ. ಸ್ಕೀಮ್‌ನಲ್ಲಿ ಭಟ್ಕಳ ತಾಲ್ಲೂಕಿನ ವಿದ್ಯುತ್ತೀಕರಣದ ಕುರಿತು

711 - ಶ್ರೀ ಡಾ|| ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದ ಆರ್.ಇ.ಸಿ. ಸ್ಕೀಮ್‌ನ ಅನ್ವಯ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿಗೆ ಮಂಜೂರಾದ ಹಣವೆಷ್ಟು? ಎಷ್ಟು ಹಣ ಖರ್ಚಾಗಿದೆ?

ಆ) ಗ್ರಾಮಾಂತರದಲ್ಲಿರುವ ಮಜರ್‌ಗಳಿಗೆ (ಹ್ಯಾಮ್ಲೆಟ್ ಎಲೆಕ್ಟ್ರಿಫಿಕೇಷನ) ವಿದ್ಯುತ್ ಪೂರೈಸಲು ಈ ಯೋಜನೆಯನ್ವಯ ಅಂದಾಜು ಪತ್ರಗಳನ್ನು ಸಿಬ್ಬಂದಿ ಕೊರತೆಯಿಂದಾಗಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಭಟ್ಕಳ ತಾಲ್ಲೂಕಿನಲ್ಲಿ ಆರ್.ಇ.ಸಿ. ಸ್ಕೀಮ್‌ನಲ್ಲಿ ಮಜಿರೆಗಳ ವಿದ್ಯುದ್ದೀಕರಣಕ್ಕಾಗಿ ರೂ. 113.53 ಲಕ್ಷದ ಅಂದಾಜು ವೆಚ್ಚದ ಒಂದು ಹೊಸ ಯೋಜನೆಯನ್ನು ರೂಪಿಸಿ ಅದನ್ನು ಮಂಜೂರಾತಿಗಾಗಿ ಗ್ರಾಮೀಣ ವಿದ್ಯುದ್ದೀಕರಣ ನಿಗಮ, ದೆಹಲಿರವರಿಗೆ ಕಳುಹಿಸಿದ್ದು ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ.

ಭಟ್ಕಳ ತಾಲ್ಲೂಕಿನಲ್ಲಿ 20 ಮಜಿರೆಗಳನ್ನು ವಿದ್ಯುದ್ದೀಕರಿಸಲು ಸುಮಾರು 19 ಲಕ್ಷ ರೂ. ಗಳನ್ನು ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಮಂಜೂರಾತಿಯನ್ನು ನಿರೀಕ್ಷಿಸಿ ಈಗಾಗಲೇ ಖರ್ಚು ಮಾಡಲಾಗಿದೆ.

ಆ) ಸಿಬ್ಬಂದಿ ಕೊರತೆಯಿದ್ದರೂ ಸಹ ಅಂದಾಜು ಪಟ್ಟಿಗಳನ್ನು ತಯಾರಿಸುವ ಕಾರ್ಯವನ್ನು ಸ್ಥಗಿತಗೊಳಿಸಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬಂದರು ಕಾಮಗಾರಿ

220 - ಡಾ|| ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಬಂದರು ಮತ್ತು ಮೀನುಗಾರಿಕೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ವಿವಿಧ ಬಂದರುಗಳಲ್ಲಿ 1995-96 ರಲ್ಲಿ ನಡೆದ ಕಾಮಗಾರಿಗಳು ಯಾವುವು? ಈ ಬಗ್ಗೆ ಎಷ್ಟು ಹಣ ಖರ್ಚಾಗಿದೆ?

ಆ) ಭಟ್ಕಳ ಬಂದರಿನ ಹೊಳೆತ್ತುವ ಕೆಲಸ ಮಂಜೂರಾಗಿ 1 1/2 ವರ್ಷಗಳಾದರೂ ಇನ್ನೂ ಕೂಡ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು; ಹಾಗೂ ಯಾವಾಗ ಕೆಲಸ ಪ್ರಾರಂಭವಾಗಲಿದೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬಂದರು ಮತ್ತು ಮೀನುಗಾರಿಕೆ ರಾಜ್ಯ ಮಂತ್ರಿಗಳು) :

ಅ) ಉತ್ತರ ಕನ್ನಡ ಜಿಲ್ಲೆಯ ಕಾರವಾರ ಬಂದರಿನಲ್ಲಿ ಅಲೆತಡೆ ಗೋಡೆ ನಿರ್ಮಾಣ, ಆಡಳಿತ ಕಛೇರಿ ನಿರ್ಮಾಣ ಹಾಗೂ ಕಾರವಾರ ಬೇಲಿಕೇರಿ, ತದಡಿ ಹೊನ್ನಾವರ ಮತ್ತು ಭಟ್ಕಳ ಬಂದರುಗಳ ನಿರ್ವಹಣೆ ಹಾಗೂ ಸಣ್ಣಪುಟ್ಟ ಕಾಮಗಾರಿಗಳನ್ನು ನೆರವೇರಿಸಲು ಯೋಜನೆ ಮತ್ತು ಯೋಜನೇತರ ಅಡಿಯಲ್ಲಿ 1995-96ನೇ ಸಾಲಿನಲ್ಲಿ ಇದುವರೆಗೆ ರೂ. 56.88 ಲಕ್ಷ ವೆಚ್ಚವಾಗಿರುತ್ತದೆ.

ಆ) ದಿನಾಂಕ: 28-12-95 ರಂದು ಗುತ್ತಿಗೆದಾರರಿಗೆ ಕಾರ್ಯದೇಶ ನೀಡಲಾಗಿದೆ.

ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

153 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಕುಸುಗಲ್ ಗ್ರಾಮದಲ್ಲಿ ಗ್ರಾಮದ ಕೆರೆಯ ನೀರನ್ನು ಹೊರತುಪಡಿಸಿ ಗ್ರಾಮಸ್ಥರಿಗೆ ಕುಡಿಯುವ ನೀರಿನ ಬೇರೆ ವ್ಯವಸ್ಥೆ ಇಲ್ಲದೆ ಇರುವುದರಿಂದ ಕೆರೆ ಬತ್ತಿಹೋದಲ್ಲಿ ಹಲಿ ಸದರಿ ಗ್ರಾಮಸ್ಥರು ನೀರಿಗಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಲ್ಲಿ ಸದರಿ ಗ್ರಾಮದ ಜನರಿಗೆ ಕುಡಿಯುವ ನೀರಿನ ಸಲುವಾಗಿ ಬದಲಿ ಖಾಯಂ ವ್ಯವಸ್ಥೆಯನ್ನು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹುಬ್ಬಳ್ಳಿ ತಾಲ್ಲೂಕಿನ ಕುಸುಗಲ್ ಗ್ರಾಮಕ್ಕೆ ಈಗಾಗಲೇ ಕುಡಿಯುವ ನಲ್ಲಿ ನೀರು ಸರಬರಾಜು ಯೋಜನೆ. ಹಾಗೂ ಕಿರು ನೀರು ಸರಬರಾಜು ಯೋಜನೆಗಳು ಕಾರ್ಯ ರೂಪದಲ್ಲಿದ್ದು ಸದರಿ ಗ್ರಾಮಕ್ಕೆ ಈ ಯೋಜನೆಯಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಇದನ್ನು ಹೊರತುಪಡಿಸಿ, ನಾಲ್ಕು ಕೈಪಂಪು ಕೊಳವೆ ಬಾವಿಗಳು ಕೂಡಾ ಕಾರ್ಯನಿರ್ವಹಿಸುತ್ತಿದೆ. ಸದ್ಯ ಕೆರೆಯಲ್ಲಿ ಇನ್ನೂ ಸ್ವಲ್ಪ ನೀರು ಇದ್ದು ಗ್ರಾಮದ ಜನರು ಈ ನೀರನ್ನು ಹೊರಬಳಕೆಗಾಗಿ ಮಾತ್ರ ಉಪಯೋಗಿಸುತ್ತಿದ್ದಾರೆ. ಕಾರಣ ಸಧ್ಯ ಕುಡಿಯುವ ನೀರಿನ ಯಾವುದೇ ಸಮಸ್ಯೆ ಇರುವುದು ಕಂಡುಬರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಖೋಟಾ ರೇಷನ್ ಕಾರ್ಡ್‌ಗಳ ಬಗ್ಗೆ

156 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸರ್ಕಾರ ಕಳೆದ ಒಂದು ವರ್ಷದಲ್ಲಿ ಎಷ್ಟು ಖೋಟಾ ರೇಷನ್ ಕಾರ್ಡ್‌ಗಳನ್ನು ಪತ್ತೆ ಹಚ್ಚಿದೆ;

ಆ) ತಪ್ಪಿತಸ್ಥರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಮುಂದೆ ಈ ರೀತಿ ಆಗದಂತೆ ಯಾವ ಯಾವ ಮುಂಜಾಗ್ರತೆಯ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ರಾಜ್ಯದಲ್ಲಿ ಇಲ್ಲಿಯವರೆಗೆ 215609 ಖೋಟಾ ಪಡಿತರ ಚೀಟಿಗಳನ್ನು 31-13-95ರವರೆಗೆ ಪತ್ತೆ ಹಚ್ಚಲಾಗಿದೆ.

ಆ) ಅಗತ್ಯ ವಸ್ತು ಕಾಯಿದೆ ಪ್ರಕಾರ ಸದರಿ ನ್ಯಾಯ ಬೆಲೆ ಅಂಗಡಿಯ ಮೇಲೆ ಕ್ರಮ ಜರುಗಿಸಲಾಗುತ್ತದೆ. ಹಾಗೂ ಪಡಿತರ ಚೀಟಿ ನೀಡಿದ ಅಧಿಕಾರಿ: ಸಿಬ್ಬಂದಿ ಮೇಲೆ ಸಿಸಿಎ ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುತ್ತದೆ.

ಇ) ರಾಜ್ಯಾದ್ಯಾಂತ ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರುಗಳ ಹಂತದಿಂದ ಆಹಾರ ನಿರೀಕ್ಷಕರ ಹಂತದವರೆಗೆ ಪ್ರತಿಯೊಬ್ಬರಿಗೂ ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ಗುರಿ ನಿಗದಿಪಡಿಸಿದ್ದು ಕಾರ್ಯ ವೈಖರಿಯನ್ನು ಆಗಿಂದಾಗ್ಗೆ ವಿಮರ್ಶಿಸಲಾಗುತ್ತಿದೆ.

ಹೊಸ ರೇಷನ್ ಕಾರ್ಡ್‌ಗಳು

163 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಕಳೆದ ಆರು ತಿಂಗಳಲ್ಲಿ ಎಷ್ಟು ಹೊಸ ರೇಷನ್ ಕಾರ್ಡ್‌ಗಳನ್ನು ಹಂಚಲಾಗಿದೆ;

ಆ) ಅವುಗಳಲ್ಲಿ ಹಸಿರು ಕಾರ್ಡುಗಳು ಎಷ್ಟು;

ಇ) ಇನ್ನೂ ಎಷ್ಟು ಹೊಸ ರೇಷನ್ ಕಾರ್ಡುಗಳಿಗೆ ಬೇಡಿಕೆ ಇದೆ;

ಈ) ಬೇಡಿಕೆ ಇದ್ದಲ್ಲಿ ಆ ಕುರಿತು ಸರ್ಕಾರ ಕೈಕೊಂಡ ಕ್ರಮಗಳೇನು?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹುಬ್ಬಳ್ಳಿ ಮಹಾನಗರದಲ್ಲಿ 11,870 ಹಾಗೂ ಧಾರವಾಡ ಮಹಾನಗರದಲ್ಲಿ 4,439 ಪಡಿತರ ಚೀಟಿಗಳನ್ನು ಕಳೆದ 6 ತಿಂಗಳಿನಲ್ಲಿ ವಿತರಿಸಲಾಗಿದೆ.

ಆ)	ಹುಬ್ಬಳ್ಳಿ	-	14,249
	ಧಾರವಾಡ	-	3,960

ಇ) ಈಗ ಫೋಟೋ ಪಡಿತರ ಚೀಟಿಗೆ ಮಾತ್ರ ಬೇಡಿಕೆ ಇದ್ದು, ವಿವರಗಳು ಕೆಳಕಂಡಂತಿದೆ.

ಹುಬ್ಬಳ್ಳಿ	-	177
ಧಾರವಾಡ	-	254
ಒಟ್ಟು	-	431

ಈ) 20,000 ಫೋಟೋ ಪಡಿತರ ಚೀಟಿ ಹಾಗ 65,811 ಹಸಿರು ಚೀಟಿಗಳನ್ನು ಧಾರವಾಡ ಜಿಲ್ಲೆಗೆ ಹಂಚಿಕೆ ಮಾಡಲಾಗಿದೆ.

ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆ ನಿರ್ಮಾಣ

162-ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಹೊರವಲಯದಲ್ಲಿ ನಿರ್ಮಾಣವಾಗುತ್ತಿರುವ ಬೈಪಾಸ್ ರಸ್ತೆ ನಿರ್ಮಾಣ 1996 ಮಾರ್ಚ್ ಅಂತ್ಯದಲ್ಲಿ ಮುಕ್ತಾಯಗೊಳ್ಳುವುದೇ?

ಆ) ಮುಕ್ತಾಯಗೊಳ್ಳದೆ ಇದ್ದಲ್ಲಿ ಅದಕ್ಕೆ ಇರುವ ಅಡ್ಡಿ ಆತಂಕಗಳೇನು;

ಇ) ಹಾಗಿದ್ದಲ್ಲಿ ಅವುಗಳ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಇನ್ನು ಎಷ್ಟು ಸಮಯದಲ್ಲಿ ಈ ರಸ್ತೆ ನಿರ್ಮಾಣದ ಕೆಲಸ ಪೂರ್ಣಗೊಳ್ಳುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಈಗ ತೆಗೆದುಕೊಂಡಿರುವ ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆಯ ಮೊದಲನೇ ಹಂತದ ಕೆಲಸದಲ್ಲಿ (ಅಂದರೆ ಹೆಬ್ಬೂರಿನಿಂದ ಯಾರೆಕೊಪ್ಪದವರೆಗೆ) ಕಿ.ಮೀ. 29.993 ರಿಂದ ಕಿ.ಮೀ. 12.475ರ ವರೆಗೆ) ಡಾಂಬರೀಕರಣದ ಕಾಮಗಾರಿ ಹೊರತು ಪಡಿಸಿ, ಬಾಕಿ ಉಳಿದ ಕೆಲಸಗಳು ಅಂದರೆ ಡಬ್ಲ್ಯು.ಬಿ.ಎಂ. ಕಾಮಗಾರಿಯನ್ನು ಮಾರ್ಚ್ 1996 ಅಂತ್ಯದಲ್ಲಿ ಮುಕ್ತಾಯಗೊಳಿಸಿ ವಾಹನಗಳನ್ನು ಸದರಿ ರಸ್ತೆಯಲ್ಲಿ ಬಿಡಲಾಗುವುದು.

ಆ) ಭಾಗಶಃ ಗುತ್ತಿಗೆದಾರರು ಮಂದಗತಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದು, ಧಾರವಾಡ ಸುತ್ತ ಮುತ್ತ ಜಿಲ್ಲೆಯ ಅಭಾವ.

ಇ) ಗುತ್ತಿಗೆದಾರರು ಕೆಲಸ ಚುರುಕುಗೊಳಿಸುವಂತೆ ತಿಳಿಸಿದ್ದು, ಅವರು ಜೆಲ್ಲಿ ಇತ್ಯಾದಿ ಸಂಗ್ರಹಿಸಿ ಕೆಲಸವನ್ನು ಮಾಡಿಸಲಾಗುತ್ತಿದೆ.

ಈ) ಡಬ್ಲ್ಯು.ಬಿ.ಎಂ. ಕೆಲಸವನ್ನು ಮಾರ್ಚ್ ಅಂತ್ಯಕ್ಕೆ ಮುಗಿಸಿ ಮೇ 1996ರ ತೊಳಗೆ ಡಾಂಬರೀಕರಣ ಮುಗಿಸಲಾಗುವುದು.

ಹುಬ್ಬಳ್ಳಿ ಗ್ರಾಮೀಣಾ ಪ್ರದೇಶದಲ್ಲಿ ಕುಡಿಯುವ ನೀರು ವಿಷಪೂರಿತವಾಗಿರುವುದು

154-ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಕಿರೇಸೂರ, ಹೆಬ್ಬಸೂರ ಮತ್ತು ಸುಳ್ಳ ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ಉಪಯೋಗಿಸುವ ಕೆರೆಗಳ ನೀರು ವಿಷಪೂರಿತವಾಗಿದ್ದು ಕುಡಿಯಲು ಯೋಗ್ಯವಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪ.ರಾಜ್ ಸಚಿವರು) :

ಅ) ಕಿರೇಸೂರ ಮತ್ತು ಹೆಬ್ಬಸೂರ ಗ್ರಾಮಗಳಲ್ಲಿ ಕುಡಿಯುವ ನೀರು ಯೋಗ್ಯವಿಲ್ಲವೆಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆ. ಸುಳ್ಳ ಗ್ರಾಮದಲ್ಲಿ ಕುಡಿಯುವ ನೀರಿನ ಯಾವುದೇ ಕೆರೆ ಇರುವುದಿಲ್ಲ.

ಆ) ಕಿರೇಸೂರ ಹಾಗೂ ಹೆಬ್ಬಸೂರ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೆರೆಗಳ ರಾಸಾಯನಿಕ ವಿಶ್ಲೇಷಣೆ ಮಾಡಿಸಲಾಗುತ್ತಿದ್ದು ವರದಿಯ ಫಲಿತಾಂಶಗಳಲ್ಲಿ ನೀರು ದೋಷಪೂರಿತವಾಗಿದ್ದು ಕಂಡುಬಂದಲ್ಲಿ ಗ್ರಾಮವಾಸಿಗಳಿಗೆ ಜಿಲ್ಲಾ ಆಡಳಿತ ವತಿಯಿಂದ

ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರಿನ ತಾತ್ಕಾಲಿಕ ವ್ಯವಸ್ಥೆ ಮಾಡಲು ಉದ್ದೇಶಿಸಿದೆ.

ಕುಂದಾಪುರ ತಾಲ್ಲೂಕು ದಕ್ಷಿಣ ಹೆಮ್ಮಾಡಿ, ಮದುವನ ಹಾಲಾಡಿಗಳು ವಿದ್ಯುತ್ ಸಬ್ ಸ್ಟೇಷನ್

725 - ಶ್ರೀ ಐ.ಎಂ. ಜಯರಾಮ ಶೆಟ್ಟಿ (ಬೈಂದೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕು ದಕ್ಷಿಣ ಹೆಮ್ಮಾಡಿ, ಮದುವನ ಹಾಲಾಡಿಗಳಲ್ಲಿ ವಿದ್ಯುತ್ ಸಬ್-ಸ್ಟೇಷನ್ ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಹಾಗಿದ್ದಲ್ಲಿ ಯಾವಾಗಿನಿಂದ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ಕುಂದಾಪುರ ತಾಲ್ಲೂಕಿನ ಹಾಲಾಡಿಯಲ್ಲಿ ಒಂದು 110 ಕೆ.ವಿ. ಸಬ್-ಸ್ಟೇಷನ್ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದೇ ತಾಲ್ಲೂಕಿನ ದಕ್ಷಿಣ ಹೆಮ್ಮಾಡಿಯಲ್ಲಿ ಒಂದು 33 ಕೆ.ವಿ. ಸಬ್‌ಸ್ಟೇಷನ್ ಸ್ಥಾಪಿಸುವ ಬಗ್ಗೆ ಪರಶೀಲಿಸಲಾಗುತ್ತಿದೆ ಆದರೆ ಮದುವನದಲ್ಲಿ ವಿದ್ಯುತ್ ಸಬ್-ಸ್ಟೇಷನ್ ಸ್ಥಾಪನೆ ಬಗ್ಗೆ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ

ಆ) ಹಾಲಾಡಿಯಲ್ಲಿ 110 ಕೆ.ವಿ. ಸಬ್-ಸ್ಟೇಷನ್ ನಿರ್ಮಾಣದ ಕಾರ್ಯವನ್ನು 1996-97ರ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿದೆ.

ಕೊಲ್ಲೂರು ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ

719 - ಶ್ರೀ ಐ.ಎಂ. ಜಯರಾಮ ಶೆಟ್ಟಿ (ಬೈಂದೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಿದ್ಧ ಯಾತ್ರಾಸ್ಥಳವಾದ ಕೊಲ್ಲೂರು ಮುಕಾಂಬಿಕೆಯ, ಕೊಲ್ಲೂರು ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ವ್ಯಾಪಕ ಕೊರತೆ ಇರುವ ವಿಷಯ ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ?

ಇ) ಹಾಗಿಲ್ಲದಿದ್ದಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪ.ರಾಜ್ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಕುಂದಾಪುರ ತಾಲ್ಲೂಕು "ಮರವಂತೆ"ಯನ್ನು ಪ್ರವಾಸಿ ತಾಣವಾಗಿ ಮಾಡುವುದು

729 - ಶ್ರೀ ಐ.ಎಂ. ಜಯರಾಮಶೆಟ್ಟಿ (ಬೈಂದೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಪ್ರಖ್ಯಾತ ಸಮುದ್ರ ದಂಡೆಯಿಂದ ಕುಂದಾಪುರ ತಾಲ್ಲೂಕು, ಮರವಂತೆಯನ್ನು ಪ್ರವಾಸಿತಾಣವಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಈ ಬಗ್ಗೆ ನಡೆದಿರುವ ಪ್ರಗತಿಯ ವಿವರ ಒದಗಿಸುವುದು?

ಇ) ಮರವಂತೆ ಯಾವ ವೈಶಿಷ್ಟ್ಯಗಳನ್ನು ಪ್ರವಾಸಿಗರಿಗೆ ಒದಗಿಸಲು ಸರ್ಕಾರ ನಿರ್ಧರಿಸಿದೆಯೇ ಮತ್ತು ಈ ಬಗ್ಗೆ ಚಿಂತನೆ ನಡೆದಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಹೌದು

ಆ) ಪ್ರವಾಸೋದ್ಯಮ ಇಲಾಖೆಯು ಮರವಂತೆಯಲ್ಲಿ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅಲಂಕಾರಿಕ ತೋಟ, ಕುಡಿಯುವ ನೀರಿನ ವ್ಯವಸ್ಥೆ, ಲ್ಯಾಂಡ್ ಸ್ಕೇಪಿಂಗಾಗಿ ರೂ. 5.00 ಲಕ್ಷಗಳನ್ನು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಗೆ 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಿದೆ.

ಇ) ಇಲ್ಲ

ಗ್ರಾಮ ಪಂಚಾಯಿತಿಗಳ ಬಗ್ಗೆ

730 - ಶ್ರೀ ಐ.ಎಂ. ಜಯರಾಮಶೆಟ್ಟಿ (ಬೈಂದೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಗ್ರಾಮ ಪಂಚಾಯಿತಿಗಳಿವೆ, ಇವುಗಳಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯದರ್ಶಿಗಳ ಹುದ್ದೆಗಳು ಖಾಲಿ ಇವೆ, ಈ ಕಾರ್ಯದರ್ಶಿಗಳ ಕೊರತೆಯಿಂದ ಜನತೆಗೆ ಉಂಟಾಗಿರುವ ಸಮಸ್ಯೆಗಳೇನು?

ಆ) ಈ ಖಾಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆಗಳನ್ನು ಎಷ್ಟು ದಿನಗಳಲ್ಲಿ ಸರ್ಕಾರ ಭರ್ತಿ ಮಾಡುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪ.ರಾಜ್ ಸಚಿವರು) :

ಅ)

	ಗ್ರೇಡ್-1	ಗ್ರೇಡ್-2
1) ಒಟ್ಟು ಗ್ರಾಮ ಪಂಚಾಯಿತಿಗಳು	136	219
2) ಖಾಲಿ ಹುದ್ದೆಗಳು	11	44

ಖಾಲಿ ಇರುವ ಒಟ್ಟು 55 ಹುದ್ದೆಗಳಲ್ಲಿ ಪ್ರಭಾರ ವ್ಯವಸ್ಥೆಯ ಮೂಲಕ ಗ್ರಾಮ ಪಂಚಾಯಿತಿಯ ಕೆಲಸ ಕಾರ್ಯವನ್ನು ನಿರ್ವಹಿಸಲು ಏರ್ಪಾಟು ಮಾಡಲಾಗಿದೆ. ಇದರಿಂದಾಗಿ ಗ್ರಾಮ ಪಂಚಾಯಿತಿ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ಸ್ವಲ್ಪಮಟ್ಟಿಗೆ ವಿಳಂಬವಾಗುತ್ತಿವೆ.

ಆ) ಖಾಲಿ ಇರುವ 55 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ನೇಮಕಾತಿ ನಿಯಮಗಳ ಪ್ರಕಾರ ಭರ್ತಿ ಮಾಡಲು ಕ್ರಮವನ್ನು ಪ್ರಾರಂಭಿಸಲಾಗಿದೆ. ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುವುದು.

ಮೀನುಗರಿಕಾ ರಸ್ತೆ ನಿರ್ಮಾಣ

155 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 1995-96 ಸಾಲಿನಲ್ಲಿ ಮೀನುಗಾರಿಕೆ ರಸ್ತೆ ನಿರ್ಮಾಣಕ್ಕಾಗಿ ಎಷ್ಟು ಅನುದಾನ ನೀಡಲಾಗಿದೆ?

(ಜಿಲ್ಲಾವಾರು ವಿವರ ನೀಡುವುದು)

ಆ) ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಮೀನುಗಾರಿಕಾ ರಸ್ತೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಎಷ್ಟು ಹಣ ಬಿಡುಗಡೆಯಾಗಿದೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) 1995-96 ಸಾಲಿನಲ್ಲಿ ಮೀನುಗಾರಿಕಾ ಕೊಂಡಿ ರಸ್ತೆಗಳ ನಿರ್ಮಾಣಕ್ಕಾಗಿ ರೂ. 55.00 ಲಕ್ಷ ಅನುದಾನ ಒದಗಿಸಲಾಗಿದ್ದು, ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ. 35.00 ಲಕ್ಷ, ಉತ್ತರ ಕನ್ನಡ ಜಿಲ್ಲೆಗೆ ರೂ. 15.00 ಲಕ್ಷ ಹಾಗೂ ಮೈಸೂರು ಜಿಲ್ಲೆಗೆ ರೂ. 5.00 ಲಕ್ಷ ಅನುದಾನ ನೀಡಲಾಗಿದೆ.

ಆ) ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಒಂದು ರಸ್ತೆಯನ್ನು ರೂ. 0.96 ಲಕ್ಷ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಜಾನಪದ ಪರಂಪರೆ ಉಳಿಸುವಲ್ಲಿ ಸರ್ಕಾರದ ಕಾರ್ಯಕ್ರಮ

55 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಜಾನಪದ, ಸಾಹಿತ್ಯ, ನೃತ್ಯ, ನಾಟಕ, ಯಕ್ಷಗಾನ ಇವೇ ಮುಂತಾದ ಕರ್ನಾಟಕ ಜಾನಪದ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಮತ್ತು 1995-96ರಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಿದೆ;

ಆ) ಈ ಬಗ್ಗೆ ರಾಜ್ಯಸರ್ಕಾರ ಜಿಲ್ಲಾ ಮಟ್ಟದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದೆ?

ಶ್ರೀ ಎಂ.ಪಿ. ಪ್ರಕಾಶ್ (ಕನ್ನಡ ಮತ್ತು ಸಂಸ್ಕೃತಿ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) :

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಅಕಾಡೆಮಿಗಳು ರಾಜ್ಯದಾದ್ಯಂತ ಕಲೆ, ಸಾಹಿತ್ಯ ನೃತ್ಯ, ನಾಟಕ, ಯಕ್ಷಗಾನ, ಜಾನಪದ ಹಾಗೂ ಲಲಿತಕಲೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ವಿಚಾರ ಸಂಕಿರಣ, ಸಂಸ್ಕೃತಿ ಸುದನ, ಅಂತಾರಾಜ್ಯ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳು, ಶಿಬಿರಗಳು, ಕಮ್ಮಟಗಳು, ಉತ್ಸವಗಳು, ರಾಷ್ಟ್ರೀಯ ಹಬ್ಬಗಳ ಆಚರಣೆ, ಪ್ರಕಟಣೆ ಮತ್ತು ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಈ ಉದ್ದೇಶಗಳಿಗಾಗಿ ಧನಸಹಾಯ ನೀಡುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಉದ್ದೇಶಕ್ಕಾಗಿ ಆಯವ್ಯಯದಲ್ಲಿ 557.00 ಲಕ್ಷ ರೂ. (ಯೋಜನೆ) ಹಾಗೂ 471.66 ಲಕ್ಷ ರೂ. (ಯೋಜನೇತರ) ಶೀರ್ಷಿಕೆಯಡಿ ಒದಗಿಸಿದೆ.

ಆ) 'ಅ' ನಲ್ಲಿ ತಿಳಿಸಿರುವಂತೆ ಜಿಲ್ಲಾ ಮಟ್ಟದಲ್ಲೂ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಕಾಮಗಾರಿಯ ಅಳತೆ ಪುಸ್ತಕಗಳ ಪ್ರತಿಯನ್ನು ಶಾಸಕರಿಗೆ ಒದಗಿಸುವುದು

479 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕ್ಷೇತ್ರ ಕಾಮಗಾರಿಯ ಅಳತೆ ಪುಸ್ತಕಗಳ ಪ್ರತಿಯನ್ನು ಚುನಾವಣ ಕ್ಷೇತ್ರದ ಶಾಸಕರಿಗೆ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಂತಹ ಪ್ರಸ್ತಾಪ ಸರ್ಕಾರದಲ್ಲಿ ಇರುವುದಿಲ್ಲ.

ಕಾಮಗಾರಿಯ ಅಳತೆ ಪುಸ್ತಕಗಳ ಪ್ರತಿಯನ್ನು ಸಾರ್ವಜನಿಕರಿಗೆ ಒದಗಿಸುವುದು

480 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾಮಗಾರಿಯ ಅಳತೆ ಪುಸ್ತಕದ ಪ್ರತಿಯನ್ನು ಸಾರ್ವಜನಿಕರಿಗೆ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಈ ವ್ಯವಸ್ಥೆಯನ್ನು ಎಷ್ಟು ದಿನಗಳಲ್ಲಿ ಮಾಡಲಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಂತಹ ಪ್ರಸ್ತಾಪ ಸರ್ಕಾರದಲ್ಲಿ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಮೀನುಗಾರರಿಗೆ ಗ್ರೂಪ್ ಹೌಸಿಂಗ್ ಮಂಜೂರಾತಿ

532 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೀನುಗಾರರಿಗೆ ಗ್ರೂಪ್ ಹೌಸಿಂಗ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಮಂಜೂರಾದ ಹಣ ಎಷ್ಟು; ಹಾಗೂ ಅದರ ಗುರಿ ಎಷ್ಟು?

ಆ) ರಾಜ್ಯದಲ್ಲಿ ಈ ಯೋಜನೆಯಡಿ ಎಷ್ಟು ಮನೆ ಮಂಜೂರಾಗಿದೆ?

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಮಟಾ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಮಂಜೂರಾದ ಮನೆಗಳೆಷ್ಟು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಮೀನುಗಾರರ ಗುಂಪು ಮನೆಯೋಜನೆಯಡಿ ಕೇಂದ್ರ ಸರ್ಕಾರದಿಂದ ರೂ. 180.2476 ಲಕ್ಷ ಹಣವನ್ನು 1589 ಮನೆಗಳನ್ನು 48 ಕೊಳವೆ ಬಾವಿಗಳನ್ನು ಮತ್ತು 7 ಸಾಮೂಹಿಕ ಭವನವನ್ನು ನಿರ್ಮಿಸುವ ಗುರಿಯ ಮಂಜೂರಾತಿ ನೀಡಿರುತ್ತದೆ.

ಆ) ರಾಜ್ಯದ 32 ಸ್ಥಳಗಳಲ್ಲಿ 1589 ಮನೆಗಳು ಮಂಜೂರಾಗಿದೆ:

1)	ಮಂಡ್ಯ ಜಿಲ್ಲೆ	-	250
2)	ಮೈಸೂರು ಜಿಲ್ಲೆ	-	340
3)	ಹಾಸನ ಜಿಲ್ಲೆ	-	139
4)	ಶಿವಮೊಗ್ಗ ಜಿಲ್ಲೆ	-	123
5)	ಉತ್ತರ ಕನ್ನಡ ಜಿಲ್ಲೆ	-	99
6)	ದಕ್ಷಿಣ ಕನ್ನಡ ಜಿಲ್ಲೆ	-	109
7)	ಬೆಳಗಾಂ ಜಿಲ್ಲೆ	-	217
8)	ಗುಲಬರ್ಗ ಜಿಲ್ಲೆ	-	100
9)	ಬಿಜಾಪುರ ಜಿಲ್ಲೆ	-	162
10)	ಕೋಲಾರ ಜಿಲ್ಲೆ	-	50
	ಒಟ್ಟು		1589

ಇ) ಇಲ್ಲ

ನವಮಂಗಳೂರು ಬಂದರು ಪ್ರದೇಶದಲ್ಲಿರುವ ಅನಧಿಕೃತ ಕಟ್ಟಡಗಳ ಬಗ್ಗೆ

713 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನವಮಂಗಳೂರು ಬಂದರು ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡ ಹಲವಾರು ಅನಧಿಕೃತ ಕಟ್ಟಡಗಳು ನಿರ್ಮಾಣಗೊಂಡಿರುವುದು ಸರ್ಕಾರದ ಗಮನದಲ್ಲಿದೆಯೇ ಇಂಥ ಅನಧಿಕೃತ ಕಟ್ಟಡಗಳನ್ನು ತೆಗೆಸಲು ಸರ್ಕಾರದವರು ಯೋಚಿಸಿದ್ದಾರೆಯೇ) ಹಾಗಿದ್ದಲ್ಲಿ ಆ ಕುರಿತು ಜರುಗಿಸಿರುವ ಕ್ರಮಗಳೇನು?

ಆ) ಸದರಿ ಕಟ್ಟಡಗಳಿಗೆ ಸಂಬಂಧಪಟ್ಟ ಪಂಚಾಯತ್‌ಗಳು ಪರವಾನಿಗೆಯನ್ನು ನೀಡಿವೆಯೇ, ನೀಡಿದ್ದಲ್ಲಿ ಅದು ಕಾನೂನು ಬಾಹಿರವಲ್ಲವೇ?

ಇ) ಇಂಥ ಅನಧಿಕೃತ ಕಟ್ಟಡಗಳನ್ನು ತೆಗೆಸಲು ಕ್ರಮ ಜರುಗಸುವುದು ಹಾಗೂ ಇನ್ನು ಮುಂದೆ ಅಲ್ಲಿ ಅಂಥ ಕಟ್ಟಡಗಳು ಬಾರದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳುವರೇ?

ಶ್ರೀ ಶಿವನಾಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ನವಮಂಗಳೂರು ಬಂದರು ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡು ಹಲವಾರು ಕಟ್ಟಡಗಳು ನಿರ್ಮಾಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಮಾಲೀಕರಿಗೆ ನೋಟಿಸ್‌ಗಳನ್ನು ನೀಡಲಾಗುತ್ತದೆ.

ಆ) ಸದರಿ ನಿವೇಶನಗಳುಳ್ಳ ಭಾಗವು ಮಂಗಳೂರು ಬಂದರು ಪ್ರಾಧಿಕಾರಕ್ಕೆ ಸೇರಿದ್ದು, ಪ್ರಾಧಿಕಾರರವರು ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿರುವುದು ಈ ವಲಯದ ಗಮನಕ್ಕೆ ಬಂದಿರುತ್ತದೆ ಮತ್ತು ಅಕ್ರಮ ಕಟ್ಟಡಗಳಿಗೆ ಈ ವಲಯದಿಂದ ಪರವಾನಗಿ ನೀಡಿರುವುದಿಲ್ಲ.

ಇ) ರಾಷ್ಟ್ರೀಯ ಹೆದ್ದಾರಿ ಇಕ್ಕೆಲಗಳಲ್ಲಿ ಕಟ್ಟಡ ನಿರ್ಮಾಣದ ಬಗ್ಗೆ ಕೇಂದ್ರ ಸರ್ಕಾರದ ಭೂ ಸಾರಿಗೆ ಸಚಿವಾಲಯದ ನಿಯಮಾವಳಿಯಂತೆ ಹೆದ್ದಾರಿ ಮಧ್ಯರೇಖೆಯಿಂದ ನಿರ್ದಿಷ್ಟ ಅಂತರದಲ್ಲಿ ಇಲಾಖೆಯ ಅನುಮತಿ ಪಡೆಯದೇ ಕಟ್ಟಡಗಳನ್ನು ನಿರ್ಮಿಸಬಾರದಾಗಿರುತ್ತದೆ ಇದಕ್ಕೆ ತದ್ವಿರುದ್ಧವಾಗಿ ಯಾವ ವ್ಯಕ್ತಿಯಾಗಲೀ:ಸಂಸ್ಥೆಯಾಗಲೀ ಕಟ್ಟಡ ನಿರ್ಮಿಸಿದಲ್ಲಿ ನಿಯಮಾವಳಿಯಂತೆ ಕ್ರಮ ಕೈಗೊಳ್ಳಲಾಗುತ್ತದೆ.

ಪಡಿತರ ಚೀಟಿ ಕುರಿತು

721 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಡಿತರ ಚೀಟಿ ಸರಿಯಾಗಿ ವಿತರಣೆಯಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರದ ಕ್ರಮವೇನು?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಪಡಿತರ ಚೀಟಿ ವಿತರಣೆಯಲ್ಲಿ ಯಾವುದೇ ಲೋಪದೋಷಗಳುಂಟಾಗದಂತೆ ಎಲ್ಲಾ ಅಗತ್ಯ ಕ್ರಮ ವಹಿಸಲಾಗುತ್ತಿದೆ.

ನೀರಾವರಿ ಪಂಪ್‌ಸೆಟ್‌ಗಳಿಗೆ ಸರಬರಾಜು ಮಾಡುವ ವಿದ್ಯುತ್

722 - ಶ್ರೀ ಎಸ್.ವಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್‌ಚ್ಛಕ್ತಿಯಲ್ಲಿ ಶೇಕಡ ಎಷ್ಟು ಭಾಗ ನೀರಾವರಿ ಪಂಪ್‌ಸೆಟ್‌ಗಳಿಗಾಗಿ ಖರ್ಚಾಗುತ್ತಿದೆ?

ಆ) ಎಷ್ಟು ಕುಟುಂಬಗಳು ನೀರಾವರಿ ಪಂಪ್‌ಸೆಟ್ ಬಳಸುತ್ತಿವೆ?

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) 1994-95ರ ಸಾಲಿನಲ್ಲಿ ರಾಜ್ಯದಲ್ಲಿ ಲಭ್ಯವಿರುವ ಒಟ್ಟು ವಿದ್ಯುಚ್ಛಕ್ತಿಯಲ್ಲಿ ಶೇಕಡ 45.9 ರಷ್ಟು ವಿದ್ಯುತ್ತನ್ನು ನೀರಾವರಿ ಪಂಪುಸೆಟ್ಟುಗಳಿಗೆ ಖರ್ಚಾಗುತ್ತಿದೆ.

ಆ) ಜನವರಿ 96ರ ಅಂತ್ಯದಲ್ಲಿರುವಂತೆ ರಾಜ್ಯದಲ್ಲಿರುವ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ 10,06,544.

ಬೆಂಗಳೂರು - ಮೈಸೂರು ಹೈವೇ ನಿರ್ಮಾಣ

296 - ಶ್ರೀ ಇ. ಮಾರುತಿರಾವ್ (ನರಸಿಂಹರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು - ಮೈಸರು ಮಧ್ಯೆ ಎಕ್ಸ್‌ಪ್ರೆಸ್ ಹೈವೇ ನಿರ್ಮಾಣದ ಕಾಮಗಾರಿ ಪ್ರಾರಂಭವಾಗಿದೆಯೇ?

ಆ) ಪ್ರಾರಂಭವಾಗದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು, ಪ್ರಾರಂಭವಾಗಿದ್ದಲ್ಲಿ ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಲಾಗುವುದು.

ಇ) ಇದಕ್ಕೆ ಸಂಬಂಧಪಟ್ಟ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ ಇದರ ಒಟ್ಟು ಖರ್ಚು ಎಷ್ಟು; ಹಾಲಿ ಎಷ್ಟು ಹಣ ಇದಕ್ಕೆ ವಿನಿಯೋಗವಿದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ

ಆ) ಶೀಘ್ರದಲ್ಲಿ ಪ್ರಾರಂಭಿಸುವುದಕ್ಕೆ ಏರ್ಪಾಡು ಮಾಡಲಾಗುತ್ತದೆ. ಈ ಯೋಜನೆಯನ್ನು ಪ್ರಾರಂಭಿಸಿದ 3 ವರ್ಷಗಳಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿರುತ್ತದೆ.

ಇ) ಈ ಯೋಜನೆಯನ್ನು ಖಾಸಗಿ ಉದ್ಯಮಶೀಲರು ತಮ್ಮ ಸ್ವಂತ ಮೂಲಗಳಿಂದ ಹಣ ತೊಡಗಿಸಿ ಅದನ್ನು 30 ವರ್ಷಗಳ ಕಾಲ ನಿರ್ವಹಿಸಿ ಖರ್ಚು ವೆಚ್ಚಗಳನ್ನು ಟೋಲ್ ಸಂಗ್ರಹದಿಂದ ಭರಿಸಿ, ನಂತರ ಸರ್ಕಾರಕ್ಕೆ ಮುಪ್ಪತ್ತಾಗಿ ಬಿಟ್ಟುಕೊಡುವ ಯೋಜನೆಯಾಗಿರುತ್ತದೆ. ಈ ಬಗ್ಗೆ ಭೂಸ್ವಾಧೀನ ಇತ್ಯಾದಿ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ. ಸದರಿ ವೇಗದ ಹೆದ್ದಾರಿಯ ಅಂದಾಜು ಸುಮಾರು 800 ಕೋಟಿ ರೂ.ಗಳಾಗುತ್ತದೆ. ಸರ್ಕಾರದ ವತಿಯಿಂದ ಯಾವುದೇ ವೆಚ್ಚವಿರುವುದಿಲ್ಲ.

ಮೈಸೂರಿನ ಕೈಗಾರಿಕಾ ವಲಯಕ್ಕೆ ಹಾಲಿ ವಿದ್ಯುತ್ ಬೇಡಿಕೆಯ ಬಗ್ಗೆ

310 - ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರಿನ ಕೈಗಾರಿಕಾ ವಲಯಕ್ಕೆ ಹಾಲಿ ವಿದ್ಯುತ್ ಬೇಡಿಕೆಯ ಪ್ರಮಾಣವೆಷ್ಟು?

ಆ) ಮೈಸೂರು ನಗರವು ಕೈಗಾರಿಕೆ ದೃಷ್ಟಿಯಿಂದ ವ್ಯಾಪಕ ಬೆಳವಣಿಗೆಯಾಗುತ್ತಿರುವುದರಿಂದ ಮುಂದಿನ ಮೂರು ವರ್ಷದ ನಂತರ ವಿದ್ಯುತ್ ಬೇಡಿಕೆಯ ಪ್ರಮಾಣವನ್ನು ಅಂದಾಜು ಮಾಡಲಾಗಿದೆಯೇ.

ಇ) ಈ ವಿದ್ಯುತ್ ಬೇಡಿಕೆ ಪೂರೈಸುವುದಕ್ಕೆ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ;

ಈ) ಮೈಸೂರು ಜಿಲ್ಲೆಯಲ್ಲಿ ವಿದ್ಯುತ್ ಉತ್ಪಾದನೆಗೆ ಯಾವ ಕ್ರಮಗಳು ಯಾವ ಕ್ಷೇತ್ರ ಅಥವಾ ಸ್ಥಳಗಳನ್ನು ಗುರುತಿಸಿದೆ, ಹಾಗಿದ್ದಲ್ಲಿ ವಿವರ ಒದಗಿಸುವುದು?

ಶ್ರೀ ಹೆಚ್.ಕೆ. ಪಾಟೀಲ್ (ಉಪ ಮುಖ್ಯಮಂತ್ರಿಗಳು) :

ಅ) 60 ಮೆಗಾವಾಟ್ಸ್

ಆ) ಹೌದು

ಇ) ಈ ವಿದ್ಯುತ್ ಬೇಡಿಕೆ ಪೂರೈಸಲು ಕಡಕೊಳದಲ್ಲಿ ಒಂದು 220:66 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಮತ್ತು ದೊಡ್ಡಕೆರೆ ಮೈದಾನ, ವಿಜಯನಗರ 2ನೇ ಹಂತ, ಕೆ.ಹೆಚ್.ಬಿ. ಕಾಲೋನಿ - ಹೂಟಗಳ್ಳಿ, ಬೋಗಾದಿ, ದೇವನೂರು, ದತ್ತಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶ - ಈ ಏಳು ಸ್ಥಳಗಳಲ್ಲಿ 66 :11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಾಣ ಮಾಡಲಾಗುತ್ತದೆ.

ಈ) ಮೈಸೂರು ಜಿಲ್ಲೆಯಲ್ಲಿ ಖಾಸಗೀ ವಲಯದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ವಿದ್ಯುತ್ ಉತ್ಪಾದನೆಗೆ ಉದ್ದೇಶಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

ಸ್ಥಳ	ಖಾಸಗೀ ಕಂಪನಿಯ ಹೆಸರು	ವಿದ್ಯುತ್ ಉತ್ಪಾದನಾ ಸಾಮರ್ಥ್ಯ
ಚಾಮಲಾಪುರ	ಪಬ್ಲಿಕ್ ಪವರ್ ಇಂಟರ್ ನ್ಯಾಷನಲ್ ಯು.ಎಸ್.ಎ.	1000 ಮೆಗಾ ವಾಟ್ (ಶಾಖೋತ್ಪನ್ನ)
ನಂಜನಗೂಡು	ಇಂಡಿಪೆಂಡೆಂಟ್ ಪವರ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು	100 ಮೆಗಾ ವಾಟ್ (ಕಂಬೈಂಡ್ ಸೈಕಲ್)

ಅಲ್ಲದೇ ಜಂಜನಗೂಡಿನಲ್ಲಿ ಖಾಸಗೀ ಕ್ಷೇತ್ರದಲ್ಲಿ 20 ಮೆಗಾವಾಟ್ ಸಾಮರ್ಥ್ಯದ ಬಹು ಇಂಧನ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ.

ಶಿಗ್ಗಾಂವ ಹಾಗೂ ಸವಣೂರು ತಾಲ್ಲೂಕು ವಿದ್ಯುತ್ ಪೂರೈಕೆ ಸುಧಾರಿಸುವ ಬಗ್ಗೆ

304 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರಿನಲ್ಲಿ 110 ಕೆ.ವಿ. ಸ್ಟೇಷನ್ ಕೆಲಸವನ್ನು ಎಂದು ಪ್ರಾರಂಭ ಮಾಡಲಾಗಿದೆ. ಸದರಿ ಕೆಲಸವನ್ನು ಎಷ್ಟು ದಿವಸದೊಳಗಾಗಿ ಮುಗಿಸಲಾಗುವುದು.

ಆ) ಧಾರವಾಡ ಜಿಲ್ಲೆಯ ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಅತಿ ಕಡಿಮೆ ವೋಲ್ಟೇಜ್ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಶಿಗ್ಗಾಂವ ತಾಲ್ಲೂಕು ಬಂಕಾಪುರಕ್ಕೆ 33 ಕೆ.ವಿ. ಸ್ಟೇಷನ್ ಹಾಗೂ ಸವಣೂರು ತಾಲ್ಲೂಕು ಹತ್ತಿ ಮತ್ತೂರುದಲ್ಲಿ 33 ಕೆ.ವಿ. ಸ್ಟೇಷನ್ ಕೆಲಸಗಳನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಅಕ್ಟೋಬರ್ 95 ರಲ್ಲಿ ಪೂರ್ವಭಾವಿ ಕೆಲಸಗಳನ್ನು ಪ್ರಾರಂಭಮಾಡಲಾಗಿದ್ದು, ನಿರ್ಮಾಣಾ ಕಾರ್ಯವನ್ನು ಜೂನ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಗುರಿ ಹೊಂದಿದೆ.

ಆ) ಹೌದು

ಇ) ಸವಣೂರಿನಲ್ಲಿ 110 ಕೆ.ವಿ. ಸ್ಟೇಷನ್ ಕಾರ್ಯಾರಂಭ ಮಾಡಿದಾಗ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳೆರಡರಲ್ಲೂ ವಿದ್ಯುತ್ ಸರಬರಾಜು ಪರಿಸ್ಥಿತಿ ಸುಧಾರಣೆಗೊಳ್ಳುತ್ತದೆ. ಆದ್ದರಿಂದ ಸವಣೂರಿನಲ್ಲಿ 110 ಕೆ.ವಿ. ಸ್ಟೇಷನ್ ಸ್ಥಾಪನೆ ಬಗ್ಗೆ ಈಗ ಕ್ರಮಕೈಗೊಳ್ಳಲಾಗಿದೆ.

ಬಂಕಾಪುರ ಮತ್ತು ಹತ್ತಿಮತ್ತೂರುಗಳಲ್ಲಿ 33 ಕೆ.ವಿ. ಸ್ಟೇಷನ್‌ಗಳ ಸ್ಥಾಪನೆ ಬಗ್ಗೆ ಯೋಜನಾ ವರದಿಗಳನ್ನು ಪರಿಶೀಲಿಸಲಾಗುತ್ತಿದೆ.

ತಿಪಟೂರು ತಾಲ್ಲೂಕು ಹೊನ್ನಾವಳಿಯಲ್ಲಿ ಪ್ರಾರಂಭಿಸಲುದ್ದೇಶಿಸಿದ್ದ ವಿದ್ಯುತ್ ವಿತರಣಾ ಕೇಂದ್ರ

222 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಿಪಟೂರು ತಾಲ್ಲೂಕು ಹೊನ್ನವಳ್ಳಿಯಲ್ಲಿ ಪ್ರಾರಂಭಿಸಲುದ್ದೇಶಿಸಿದ್ದ ವಿದ್ಯುತ್ ವಿತರಣಾ ಕೇಂದ್ರದ ಯೋಜನೆ ಯಾವ ಹಂತದಲ್ಲಿದೆ ಇದು ಪೂರ್ಣಗೊಳ್ಳಲು ಎಷ್ಟು ಸಮಯ ಬೇಕಾಗುತ್ತದೆ.

ಆ) ಇದೇ ತಾಲ್ಲೂಕು ನೊಣವಿನಕೆರೆ ಗ್ರಾಮದಲ್ಲಿ ಈಗಾಗಲೇ 1993 ಉದ್ಘಾಟನೆಯಾದ ವಿದ್ಯುತ್ ಘಟಕ ಎಂ.ಎಸ್. ಕೇಂದ್ರ, ಯಾವಾಗ ಕಾರ್ಯ ಪ್ರಾರಂಭವಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಈ ಪ್ರಸ್ತಾವನೆಯು ಇನ್ನು ಪರಿಶೀಲನೆಯ ಹಂತದಲ್ಲಿದೆ. ಆದ್ದರಿಂದ, ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ವಿಷಯವು ಈಗ ಉದ್ಭವಿಸುವುದಿಲ್ಲ.

ಆ) ನೊಣವಿನ ಕೆರೆಯಲ್ಲಿ 110 ಕೆವಿ ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾರ್ಯವನ್ನು ಜುಲೈ 95ರಲ್ಲಿ ಪ್ರಾರಂಭಿಸಲಾಗಿದೆ. ನಿರ್ಮಾಣ ಕಾರ್ಯವನ್ನು ಜೂನ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ರಸ್ತೆಗಳ ದುರಸ್ಥಿಯ ಸಲುವಾಗಿ ಬಿಡುಗಡೆಯಾದ ಹಣ

217 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರ ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೂ ರಸ್ತೆಗಳ ದುರಸ್ಥಿಯ ಸಲುವಾಗಿ 30 ಲಕ್ಷ ಹಣವನ್ನು ಬಿಡುಗಡೆ ಮಾಡಿರುವುದು ಸರಿಯೇ.

ಆ) ಈ ಯೋಜನೆ ಅನುಷ್ಠಾನಕ್ಕೊಳಗಾಗಿದ್ದರೆ, ಇದುವರೆವಿಗೂ ಬಿಡುಗಡೆಯಾಗಿರುವ ಹಣವೆಷ್ಟು, ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಪ್ರತಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು 30 ಲಕ್ಷ ರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿ ಪಡಿಸಲು ದಿನಾಂಕ 14-11-1995ರಲ್ಲಿ ಆದೇಶಿಸಲಾಗಿದೆ.

ಆ) ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಇದುವರೆವಿಗೂ ಡಾಂಬರು, ಇತ್ಯಾದಿಗಳಿಗಾಗಿ 808.19 ಲಕ್ಷ ರೂ.ಗಳ ಹಣ ಬಿಡುಗಡೆಯಾಗಿದೆ. ಲೋಕೋಪಯೋಗಿ ಇಲಾಖೆ ವ್ಯಾಪ್ತಿ ರಸ್ತೆಗಳ ಡಾಂಬರೀಕರಣ ಕೈಗೆತ್ತಿಕೊಳ್ಳಲಾಗಿದೆ.

ತಿಪಟೂರು ನಗರಕ್ಕೆ ಬೈಪಾಸ್ ರಸ್ತೆ ನಿರ್ಮಿಸುವ ವಿಚಾರ

231 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಿಪಟೂರು ನಗರಕ್ಕೆ ಬೈಪಾಸ್ ರಸ್ತೆ ನಿರ್ಮಿಸುವ ವಿಚಾರ ಸರ್ಕಾರಕ್ಕಿದೆಯೇ ಇದ್ದರೇ ಇದು ಯಾವ ಹಂತದಲ್ಲಿದೆ, ಹಾಗೂ ಈ ಕಾರ್ಯ ಯಾವಾಗ ಪೂರ್ಣಗೊಳ್ಳುವುದು.

ಆ) ಈ ಯೋಜನೆಯು ದುಬಾರಿ ವೆಚ್ಚದೆಂದು ಭಾವಿಸಿ ಸರ್ಕಾರವೇನಾದರೂ ಇದರ ಬದಲಿಗೆ ಲಿಂಕ್ ರಸ್ತೆಯನ್ನು ನಿರ್ಮಿಸುವ ನಿರ್ಧಾರ ಮಾಡಿದೆಯೇ; ಮಾಡಿದ್ದರೆ ಇದಕ್ಕೆ ತಗಲುವ ವೆಚ್ಚವೆಷ್ಟು?

ಇ) ಇವೆರಡೂ ರಸ್ತೆಗಳ ಕಾಮಗಾರಿ ಯೋಜನೆಯ ವ್ಯತ್ಯಾಸದ ಮೊತ್ತವೆಷ್ಟು?

ಈ) ಲಿಂಕ್ ರಸ್ತೆಯನ್ನು ನಿರ್ಮಿಸುವ ಬಗ್ಗೆ ಸರ್ಕಾರವೇನಾದರೂ ಯೋಜಿಸಿದ್ದರೆ ಇದನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ತಿಪಟೂರು ನಗರಕ್ಕೆ ಬೈಪಾಸ್ ನಿರ್ಮಿಸುವ ವಿಚಾರವು ಸರ್ಕಾರದಲ್ಲಿದೆ. ಪ್ರಸಕ್ತ ಈ ರಸ್ತೆಗೆ ಬೇಕಾದ ಭೂಸ್ವಾಧೀನ ಪ್ರಕ್ರಿಕಿಯೆಯು ಅಂತಿಮ ಹಂತದಲ್ಲಿದೆ. ಪೂರ್ಣ ಭೂಸ್ವಾಧೀನವಾಗಿ ಲೋಕೋಪಯೋಗಿ ಇಲಾಖೆಗೆ ಜಮೀನು ಹಸ್ತಾಂತರಿಸುವ ಮೇಲೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಕಾಮಗಾರಿಯನ್ನು ಕೈಗೊಂಡು ಪ್ರಾರಂಭಿಸಿದ ಸುಮಾರು 3 ವರ್ಷಗಳ ಅವಧಿಯಲ್ಲಿ ಮುಗಿಸುವ ಒಂದು ಯೋಜನೆ ಇರುತ್ತದೆ.

ಆ) ವಿಷಯವು ಸಧ್ಯದಲ್ಲಿ ಪರಿಶೀಲನೆಯಲ್ಲಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಲಿಂಕ್ ರಸ್ತೆ ವಿಚಾರದಲ್ಲಿ ವಿವರವಾದ ಸರ್ವೆ ಮಾಡಲು ಪ್ರಸ್ತಾಪಿಸಲಾಗಿದೆ.

ಕೇಸರಿ ಕಾರ್ಡು ಮತ್ತು ತ್ರಿವರ್ಣ ಕಾರ್ಡು ವಿತರಣೆ

694 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಲ್ಲ ಅರ್ಹ ಫಲಾನುಭವಿಗಳಿಗೆ ಕೇಸರಿ ಕಾರ್ಡು ಹಾಗೂ ತ್ರಿವರ್ಣ ಕಾರ್ಡು ವಿತರಣೆಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳೆದ ಅಧಿವೇಶನದಲ್ಲಿ ಈ ಬಗ್ಗೆ ನೀಡಿದ ಭರವಸೆ ಈಡೇರಿಸಲು ಇರುವ ತೊಂದರೆಗಳೇನು?

ಇ) ಇನ್ನು ಎಷ್ಟು ಅವಧಿಯಲ್ಲಿ ಎಲ್ಲ ಅರ್ಹ ಫಲಾನುಭವಿಗಳಿಗೆ ತ್ರಿವರ್ಣ ಕಾರ್ಡು ಕೇಸರಿ ಕಾರ್ಡು ವಿತರಣೆ ಮಾಡಲಾಗುವುದು?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ರಾಜ್ಯದ ಎಲ್ಲ ಅರ್ಹ ಫಲಾನುಭವಿಗಳಿಗೂ ಕೇಸರಿ ಹಾಗೂ ತ್ರಿವರ್ಣ ಹಸಿರು ಕಾರ್ಡ್‌ನ್ನು ವಿತರಿಸಲು ಎಲ್ಲಾ ಎಚ್ಚರಿಕೆ ಕ್ರಮವನ್ನು ವಹಿಸಲಾಗಿದೆ.

ಆ) ಅನ್ವಯಿಸುವುದಿಲ್ಲ.

ಇ) ದಿನಾಂಕ 31-3-96ರ ಅಂತ್ಯಕ್ಕೆ ಹಸಿರು ಕೇಸರಿ ಪಡಿತರ ಚೀಟಿಗಳನ್ನು ಕೋರಿ ರಾಜ್ಯಾದ್ಯಂತ ಎಲ್ಲಾ ಪಡಿತರ ಚೀಟಿ ಅರ್ಜಿಗಳನ್ನು ಪರಿಶೀಲಿಸಿ ಪಡಿತರ ಚೀಟಿ ವಿತರಿಸಲು ಕ್ರಮ ವಹಿಸಲಾಗುವುದು.

ವಿದ್ಯುತ್ ಪೂರೈಸುವ ವ್ಯವಸ್ಥೆ ಕುರಿತು

696 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗ-ಬೆಟಗೇರಿ ಅವಳಿನಗರಕ್ಕೆ ನೀರು ಪೂರೈಸುವ ಯೋಜನೆಗೆ ಪ್ರತಿನಿತ್ಯ ಎಷ್ಟು. ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ ಪೂರೈಸುವ ವ್ಯವಸ್ಥೆ ಮಾಡಲಾಗಿದೆ.

ಆ) ಗದಗ ಬೆಟಗೇರಿ ಕುಡಿಯುವ ನೀರು ಪೂರೈಕೆಯ ಯೋಜನೆಗೆ ನಿತ್ಯ ಕನಿಷ್ಠ 18 ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ ಪೂರೈಸಲು ಇರುವ ತೊಂದರೆಗಳೇನು?

ಇ) ಈ ಕುಡಿಯುವ ನೀರು ಪೂರೈಕೆಯ ಯೋಜನೆಗೆ ವಿದ್ಯುತ್ ಪೂರೈಕೆಯಲ್ಲಿರುವ ತೊಂದರೆ ನಿವಾರಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಪ್ರಸ್ತುತ ಈ ನೀರು ಪೂರೈಸುವ ಯೋಜನೆಗೆ ಪ್ರತಿನಿತ್ಯ 20 ಗಂಟೆಗಳ ಕಾಲ ಸಾಕಷ್ಟು ಒಳ್ಳೆಯ ಗುಣಮಟ್ಟದಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ.

ಆ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) 22-1-96ರವರೆಗೆ ಈ ಕುಡಿಯುವ ನೀರು ಪೂರೈಸಿ ಯೋಜನೆಗೆ ಮಹರಾಷ್ಟ್ರ ಗ್ರಿಡ್‌ನಿಂದ ರಾತ್ರಿ ವೇಳೆಯಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿತ್ತು. ಈ ಕಾರಣದಿಂದಾಗಿ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಉಂಟಾದ 22-1-96ರ ನಂತರದಿಂದ ಈ ಕುಡಿಯುವ ನೀರಿನ ಯೋಜನೆಗೆ ಕರ್ನಾಟಕದ ಗ್ರಿಡ್‌ನಿಂದಲೇ ವಿದ್ಯುತ್ ಸರಬರಾಜು ಮಾಡುತ್ತಿರುವುದರಿಂದ ಈಗ ಕಡಿಮೆ ವೋಲ್ಟೇಜ್ ಪರಿಸ್ಥಿತಿಯನ್ನು ನಿವಾರಿಸಲಾಗಿದೆ.

ವಿದ್ಯುತ್ ತೀವ್ರ ಕೊರತೆಗೆ ಪರಿಹಾರ

614 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ತಲೆದೋರಿರುವ ತೀವ್ರ ವಿದ್ಯುತ್ ಬಿಕ್ಕಟನ್ನು ಬಗೆಹರಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ.

ಆ) ಇಂತಹ ಸನ್ನಿವೇಶದಲ್ಲಿ ಸಂಪ್ರದಾಯವಲ್ಲ ಇಂಧನ ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವರೆ ಸರ್ಕಾರದವರು ಕ್ರಮಕೈಗೊಳ್ಳುವರೆ.

ಇ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ?

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಶೀಘ್ರಕಾಲಿಕ ಕ್ರಮಗಳಾಗಿ ದಕ್ಷಿಣ ವಿದ್ಯುತ್ ಜಾಲದ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ಪಾಲನ್ನು ಪಡೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ರಾಜ್ಯದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಳಗೊಳಿಸಲಾಗಿದೆ. ಮಹಾರಾಷ್ಟ್ರದಿಂದ ಅಕ್ಟೋಬರ್ 95 ರಿಂದ ಪ್ರತಿ ತಿಂಗಳೂ ವಿದ್ಯುಚ್ಛಕ್ತಿಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಜನವರಿ 96ರ ಅಂತ್ಯದವರೆಗೆ ಒಟ್ಟು 140 ದಶಲಕ್ಷ ಯೂನಿಟ್ ವಿದ್ಯುತ್‌ನ್ನು ಪಡೆಯಲಾಗಿದೆ.

ಅಲ್ಪಾವಧಿಯ ಕ್ರಮವಾಗಿ ಕರ್ನಾಟಕ ಕರಾವಳಿ ಪ್ರದೇಶಗಳಲ್ಲಿ ಬಾರ್ಜ್ ಮೌಂಟೆಡ್ 'ವಿದ್ಯುತ್ ಉತ್ಪಾದನಾ ಕೇಂದ್ರಗಳ ಮೂಲಕ ಸುಮಾರು 400 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಬಿಡ್‌ಗಳನ್ನು ಆಹ್ವಾನಿಸಲಾಗಿದ್ದು ಇವು 96ರ ಅಂತ್ಯದ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ.

ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ 5 ಮತ್ತು 6ನೇ (ತಲಾ 210 ಮೆ.ವಾ. ಸಾಮರ್ಥ್ಯದ) ವಿದ್ಯುತ್ ಉತ್ಪಾದನೆ ಘಟಕಗಳನ್ನು ಸ್ಥಾಪಿಸಲು ಮತ್ತು ಬಿಡದಿ ಬಳಿ 300 ಮೆ.ವಾ. ಸಾಮರ್ಥ್ಯದ ಕಂಬೈಂಡ್ ಸೈಕಲ್ ವಿದ್ಯುತ್ ಉತ್ಪಾದನಾವನ್ನು ಖಾಸಗೀ ವಲಯದ ಸಹಭಾಗಿತ್ವದಲ್ಲಿ ಸ್ಥಾಪಿಸಲು ಕರ್ನಾಟಕ ವಿದ್ಯುತ್ ನಿಗಮಕ್ಕೆ ಅನುಮೋದನೆಯನ್ನು ನೀಡಲಾಗಿದೆ.

ಕರ್ನಾಟಕ ವಿದ್ಯುತ್ ನಿಗಮವು ಕದ್ರಾ, ಕೊಡಸಳ್ಳಿ ಮತ್ತು ಶರಾವತಿ ಟೈಲರೇಜ್ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳ ನಿರ್ಮಾಣವನ್ನು ಕೈಗೊಂಡಿದ್ದು ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

ದೀರ್ಘಕಾಲಿಕ ಪರಿಹಾರ ಕ್ರಮವಾಗಿ ಸರ್ಕಾರವು ರಾಜ್ಯದ ವಿವಿಧ ಸ್ಥಳಗಳಲ್ಲಿ ಖಾಸಗೀ ವಲಯದ ಏಜನ್ಸಿಗಳ ಮೂಲಕ ಒಟ್ಟು 6910 ಮೆಗಾವಾಟ್ಸ್ ಸಾಮರ್ಥ್ಯದ ವಿದ್ಯುತ್ ಉತ್ಪಾದನೆಗೆ ಅನುಮತಿಯನ್ನು ನೀಡಲಾಗಿದ್ದು ಇದರಲ್ಲಿ ಮಂಗಳೂರು ಸಮೀಪ ಮಂಗಳೂರು ವಿದ್ಯುತ್ ಕಂಪನಯು (ಕೋಜೆಂಟ್ರಿಕ್ಸ್ ಸಂಸ್ಥೆ) ಸ್ಥಾಪಿಸಲಿರುವ 1000 ಮೆ.ವಾ. ಸಾಮರ್ಥ್ಯ ವಿದ್ಯುತ್ ಉತ್ಪಾದನಾ ಕೇಂದ್ರವೂ ಸೇರಿದೆ.

ಅಲ್ಲದೇ ರಾಜ್ಯದ 20 ಸ್ಥಳಗಳಲ್ಲಿ ಒಟ್ಟು 400 ಮೆಗಾ ವಾಟ್ಸ್ ಸಾಮರ್ಥ್ಯದ ಬಹು ಇಂಧನ (ಮಲ್ಟಿಫ್ಯೂಯೇಲ್) ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬಿಡ್‌ಗಳನ್ನು ಆಹ್ವಾನಿಸಿ, ಸ್ವೀಕೃತವಾದ ಬಿಡ್‌ಗಳನ್ನು ತೆರೆಯಲಾಗಿದ್ದು ಈ ಬಿಡ್‌ಗಳ ತಾಂತ್ರಿಕ ಮೌಲೀಕರಣವನ್ನು ಮಾಡಲಾಗುತ್ತಿದೆ.

ಆ) ಅಸಂಪ್ರದಾಯ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಗಮನವನ್ನು ಹರಿಸಲಾಗುತ್ತಿದೆ.

ಇ) ಕರ್ನಾಟಕ ವಿದ್ಯುತ್ ನಿಗಮ, ಕಪ್ಪದ ಗುಡ್ಡದಲ್ಲಿ ಒಂದು ಗಾಳಿಯಂತ್ರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಿದ್ದು ಸುಮಾರು 2 ಮೆ.ವಾ. ವಿದ್ಯುತ್ ಉತ್ಪಾದನೆಯನ್ನು ನವೆಂಬರ್ 95 ರಿಂದ ಮಾಡುತ್ತಿದೆ.

ಹೊಸದಾಗಿ ಆಸ್ಪತ್ರೆಗಳನ್ನು ಪ್ರಾರಂಭಿಸುವುದು

305 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ಆಸ್ಪತ್ರೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗುತ್ತಿರುತ್ತದೆ; (ಜಿಲ್ಲಾವಾರು ವಿವರ ನೀಡುವುದು)

ಆ) ಇನ್ನು ಅನುಮತಿ ಕೊಟ್ಟಿರದಿದ್ದಲ್ಲಿ ಹೊಸದಾಗಿ ಆಸ್ಪತ್ರೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಇ) ಬೀಳಗಿ ಮತ ಕ್ಷೇತ್ರದಲ್ಲಿ ಕಡಿಮೆ ಆಸ್ಪತ್ರೆಗಳಿದ್ದು ಆ ಮತ ಕ್ಷೇತ್ರಕ್ಕೆ ಹೆಚ್ಚಿನ ಆಸ್ಪತ್ರೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ಸಚಿವರು) :

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವುದೇ ಹೊಸ ಪಶು ವೈದ್ಯಕೀಯ ಆಸ್ಪತ್ರೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದಿಲ್ಲ.

ಆ) ಇಲ್ಲ

ಇ) 1996-97ನೇ ಸಾಲಿನಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ದನಗಳ ಜಾತ್ರೆ ಕುರಿತು

609 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 300ಕ್ಕ ಹೆಚ್ಚು ದನಗಳ ಜಾತ್ರೆ ನಡೆಯುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಜಾತ್ರೆಗಳಲ್ಲಿ ಆಯ್ಕೆಯಾದ ದನಗಳಿಗೆ ಬಹುಮಾನ ಕೊಡಲು ಹೆಚ್ಚು ಹಣವನ್ನು ಬಿಡುಗಡೆ ಮಾಡಲು ಸರ್ಕಾರವನ್ನು ಕೋರಿರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ ಹೆಚ್ಚಿನ ಮಟ್ಟದಲ್ಲಿ ಹಣವನ್ನು ಬಿಡುಗಡೆ ಮಾಡದೇ ಇರಲು ಕಾರಣಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ಸಚಿವರು) :

ಅ) ರಾಜ್ಯದಲ್ಲಿ 206 ದನಗಳ ಜಾತ್ರೆ ನಡೆಯುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಉದ್ಭವಿಸುವುದಿಲ್ಲ.

ಮೀನುಗಾರರಿಗೆ ವಸತಿ ಸೌಕರ್ಯ

611 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಾಂಡವಪುರ ತಾಲ್ಲೂಕು ಕೆರೆ ತೊಣ್ಣೂರು ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಹೆಚ್ಚು ಮೀನುಗಾರರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಮೀನುಗಾರರಿಗೆ ವಸತಿ ಸೌಕರ್ಯವನ್ನು ನೀಡುವ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಇ) ಇದ್ದಲ್ಲಿ, ಎಷ್ಟು ದಿನಗಳೊಳಗೆ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು ?

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ (ಮೀನನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು

ಆ) ಸದರಿ ಗ್ರಾಮಗಳ ಮೀನುಗಾರರಿಂದ ಬೇಡಿಕೆ ಬಂದಾಗ ಪರಿಗಣಿಸಲಾಗುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಗ್ರಾಮದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಮಾಡುವ ಬಗ್ಗೆ

684 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜನ್ನು ಆಯಾಯ ಗ್ರಾಮದಲ್ಲಿ ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗಿದೆಯೇ ?

ಆ) ಬಹಳಷ್ಟು ಗ್ರಾಮಗಳಿಂದ ತಮ್ಮ ಗ್ರಾಮದಲ್ಲೇ ವಿತರಣೆ ಮಾಡಬೇಕೆಂಬ ಬೇಡಿಕೆಯಿದ್ದರೂ ವಿತರಣೆ ಮಾಡದಿರಲು ಕಾರಣವೇನು ?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹೌದು

ಆ) ಇಂತಹ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ ನಗರ ಪ್ರದೇಶದಲ್ಲಿ ಕನಿಷ್ಟ 500 ಪಡಿತರ ಚೀಟಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ 350 ಪಡಿತರ ಚೀಟಿಗಳಿಗೆ ಒಂದು ನ್ಯಾಯ ಬೆಲೆ ಅಂಗಡಿ ಮಂಜೂರು ಮಾಡುವಂತೆ ಸೂಚಿಸಲಾಗಿತ್ತು, ಒಂದು ವೇಳೆ ಅದಕ್ಕಿಂತ ಕಾರ್ಡುದಾರರ ಸಂಖ್ಯೆ ಕಡಿಮೆ ಇದ್ದರೂ ಸಹ ಕಾರ್ಡುದಾರರ ಹಿತವನ್ನು ಗಮನದಲ್ಲಿರಿಸಿಕೊಂಡು ನಿಗಧಿತ ಸಂಖ್ಯೆಗಿಂತ ಕಡಿಮೆ ಪಡಿತರ ಚೀಟಿದಾರರಿದ್ದರೂ ಸಹ ನ್ಯಾಯಬೆಲೆ ಅಂಗಡಿಗಳನ್ನು ಸ್ಥಾಪಿಸುವ ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ದೋಣಿ ವ್ಯವಸ್ಥೆ ಕುರಿತು

685 - ಶ್ರೀ ಪ್ರತಾಪ್ ಚಂದ್ರಶೆಟ್ಟಿ ಕೆ. (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿ ತಾಲ್ಲೂಕು ನಂಜೂರು ಗ್ರಾಮದ ಆನೆಗುಂದಿ ಹೊಳೆಗೆ ಬಂದರು ಮತ್ತು ಒಳನಾಡು ಸಾರಿಗೆ ವ್ಯವಸ್ಥೆಯಿಂದ ದೋಣಿ ವ್ಯವಸ್ಥೆ ಮಾಡಿರುವುದು ನಿಜವೇ ?

ಆ) ಅದನ್ನು ವಾಪಸ್ಸು ಪಡೆದಿರುವ ಹಿನ್ನೆಲೆ ಏನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು

ಆ) ಮಳೆಗಾಲ ಮುಗಿದಿದ್ದು, ನದಿಯಲ್ಲಿ ಪ್ರವಾಹ ಇಲ್ಲದೇ ಇರುವ ಪ್ರಯುಕ್ತ ನಂಜಾರು ಗ್ರಾಮದ ದೋಣಿಯನ್ನು ವಾಪಸ್ಸು ಪಡೆಯಲಾಗಿರುತ್ತದೆ.

ವಿದ್ಯುಚ್ಛಕ್ತಿ ಕಡಿತದಲ್ಲಿ ತಾರತಮ್ಯ

687 - ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಕಡಿತವನ್ನು ರಾಜ್ಯದ ಬೇರೆ ತಾಲ್ಲೂಕುಗಳಿಗೆ ಹೋಲಿಸಿದಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ತಾರತಮ್ಯ ಮಾಡಲು ಕಾರಣವೇನು?

ಇ) ವಿದ್ಯುಚ್ಛಕ್ತಿ ಇಲಾಖೆಯ ವಿದ್ಯುತ್ ಕಡಿತದ ತಾರತಮ್ಯ ನೀತಿಯನ್ನು ವಿದ್ಯಾರ್ಥಿಗಳು ಬಳಕೆದಾರರು, ಸಂಘಸಂಸ್ಥೆಗಳು ಪ್ರತಿಭಟಿಸಿರುವುದು.

ಈ) ಇದನ್ನು ಸರಿಪಡಿಸಲು ಸರ್ಕಾರ ಏನು ಕ್ರಮಸ ಕೈಗೊಂಡಿದೆ.

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಲ್ಲ

ಇ) ಮತ್ತು ಉ) ಮುಂಗಾರು ಮಳೆಯ ವಿಫಲತೆಯಿಂದಾಗಿ ಮತ್ತು ರಾಜ್ಯವು ತೀವ್ರ ರೀತಿಯಲ್ಲಿ ವಿದ್ಯುಚ್ಛಕ್ತಿ ಅಭಾವವನ್ನು ಎದುರಿಸುತ್ತದೆ. ಆದ್ದರಿಂದ ಮಂಡಳಿಯು ರಾಜ್ಯದ ಎಲ್ಲೆಡೆ ನಿಯಮಿತ ಮತ್ತು ಕೆಲವೊಮ್ಮೆ ಅನಿಯಮಿತ ಲೋಡ್ ಷೆಡ್ಡಿಂಗನ್ನು ನಿರ್ವಹಿಸುವುದು ಅನಿವಾರ್ಯವಾಗಿದೆ. ಸಾರ್ವಜನಿಕರು ಈ ವಿಷಯದಲ್ಲಿ ಮಂಡಳಿಯೊಡನೆ ಸಹಕರಿಸಬೇಕಾಗಿದೆ.

ಗ್ರಾಮ ಪಂಚಾಯಿತಿಗಳಿಗೆ ಇರುವ ಎಲ್ಲಾ ಅಧಿಕಾರಿಗಳನ್ನು ತಾಲ್ಲೂಕು ಪಂಚಾಯಿತಿಗಳಿಗೆ ಕೊಟ್ಟಿರುವುದರ ಬಗ್ಗೆ

612 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯ್ತಿಗಳಿಗೆ ಇದ್ದ ಕೆಲವು ಮುಖ್ಯ ಅಧಿಕಾರಗಳನ್ನು ಇತ್ತೀಚೆಗೆ ತಾಲ್ಲೂಕು ಪಂಚಾಯ್ತಿಗಳಿಗೆ ಹಸ್ತಾಂತರಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ತಡೆಗಟ್ಟಲು ಗೆದ್ದು ಕೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ,

ವಿದ್ಯುತ್ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಸರಾಸರಿ ನಷ್ಟ

680 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟದ ರಾಷ್ಟ್ರೀಯ ಸರಾಸರಿ ಶೇಕಡವಾರು ಎಷ್ಟು?

ಆ) ರಾಜ್ಯದ ಸರಾಸರಿ ಶೇಕಡವಾರು ನಷ್ಟ ಎಷ್ಟು?

ಇ) ಈ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟವನ್ನು ಕಡಿಮೆ ಮಾಡಲು ಕೈಗೊಂಡ ಕ್ರಮಗಳೇನು?

ಈ) ಖಾಸಗಿ ವಿದ್ಯುತ್ ಕಂಪನಿಗಳಲ್ಲಿ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟಗಳು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ರಾಜ್ಯ ವಿದ್ಯುತ್ ಟ್ರಾನ್ಸ್‌ಮಿಷನ್ಸ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಲು ಕಾರಣಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 1993-94ನೇ ಸಾಲಿನ ಮಾಹಿತಿ ಪ್ರಕಾರ ವಿದ್ಯುತ್ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟದ ರಾಷ್ಟ್ರೀಯ ಶೇಕಡವಾರು ಪ್ರಮಾಣ 24.46 ಆಗಿದೆ.

ಆ) 1993-94 ಮತ್ತು 1994-95ರ ಸಾಲುಗಳಲ್ಲಿ ರಾಜ್ಯದ ಸರಾಸರಿ ಶೇಕಡವಾರು ನಷ್ಟ 18.6

ಇ) ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟವನ್ನು ಕಡಿಮೆಗೊಳಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದೆ. ಈ ಸುಧಾರಣೆಯ ಕ್ರಮವಾಗಿ ಪ್ರತಿವರ್ಷವು ಹೊಸ ಟ್ರಾನ್ಸ್‌ಮಿಷನ್ ಲೈನುಗಳನ್ನು ಮತ್ತು ಹೊಸ ಸಬ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಅಲ್ಲದೇ ಅಗತ್ಯವಿರುವ ಸ್ಥಳಗಳಲ್ಲಿ ಸಬ್ ಸ್ಟೇಷನ್‌ಗಳ ಸಾಮರ್ಥ್ಯವನ್ನು ಹೆಚ್ಚಿಸಲಾಗುತ್ತಿದೆ. ವಿದ್ಯುತ್ ವಿತರಣೆಯ ವ್ಯವಸ್ಥೆಯ ಸುಧಾರಣೆಗಾಗಿ ಕಪಾಸಿಟರ್ ಬ್ಯಾಂಕರ್‌ಗಳನ್ನು ಅಳವಡಿಸಲಾಗುತ್ತಿದೆ. ಎಕ್ಸ್‌ಪ್ರೆಸ್ ಫೀಡರ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಟ್ರಾನ್ಸ್‌ಫಾರ್ಮರ್‌ಗಳ ಪುನರ್ ವಿಂಗಡಣೆ ವಿದ್ಯುತ್ ತಂತಿಗಳ ಬಲಪಡಿಸುವಿಕೆ ಇತ್ಯಾದಿ ವ್ಯವಸ್ಥೆ ಸುಧಾರಣೆ ಕ್ರಮಗಳನ್ನು ನಿರ್ವಹಿಸಲಾಗುತ್ತಿದೆ.

ಈ) ಉ) ರಾಜ್ಯದ ವಿದ್ಯುತ್ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವುದರಿಂದ ಇದು ಉದ್ಭವಿಸುವುದಿಲ್ಲ.

ರಾಜ್ಯ ಸರ್ಕಾರವು ಜವಾಹರ್ ರೋಜಗಾರ್ ಯೋಜನೆ ಇಂದಿರಾ ಅವಾಜ್‌ಯೋಜನೆಯು ಹಾಗೂ ಇತರ ಯೋಜನೆಗಳಲ್ಲಿ ಖರ್ಚು ಮಾಡಿರುವ ಹಣ

678 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತಿ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು 1995-96ರಲ್ಲಿ ಇಲ್ಲಿಯವರೆಗೆ ಜೆಆರ್‌ವೈ, ಇಂದಿರಾ ಅವಾಸ್ ಯೋಜನೆ, ಮಿಲಿಯನ್ ವೆಲ್ ಯೋಜನೆ ಹಾಗೂ ಐಆರ್‌ಡಿಪಿ ಯೋಜನೆಗಳಲ್ಲಿ ಖರ್ಚು ಮಾಡಿರುವ ಹಣವೆಷ್ಟು?

ಆ) ಈ ಯೋಜನೆಗಳಲ್ಲಿ ಮೀಸಲಿಟ್ಟಿದ್ದ ಹಣದಲ್ಲಿ ಶೇಕಡಾ ಎಷ್ಟು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಲಾಗಿದೆ?

ಇ) ಕೇಂದ್ರ ಸರ್ಕಾರದಿಂದ ಈ ಯೋಜನೆಗಳಿಗೆ ಬಂದಿರುವ ಹಣವೆಷ್ಟು?

ಈ) ಈ ಯೋಜನೆಗಳಿಗೆ ನಿಗದಿಪಡಿಸಿರುವ ಹಣವನ್ನು 31-3-96ರೊಳಗೆ ಖರ್ಚು ಮಾಡಲಾಗುವುದೇ?

ಶ್ರೀ ಎಂ.ಸಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ರಾಜ್ಯ ಸರ್ಕಾರವು 95-96ನೇ ಸಾಲಿಗೆ (31-1-96ರವರೆಗೆ) ಖರ್ಚು ಮಾಡಿದ ವಿವರ ಕೆಳಗಿನಂತಿದೆ.

			(ಲಕ್ಷ ರೂ.ಗಳಲ್ಲಿ)
1.	ಜೆಆರ್‌ವೈ	:	12816.176
2.	ಇಂದಿರಾ ಅವಾಸ್ ಯೋಜನೆ	:	3148.768
3.	ಮಿಲಿಯನ್ ವೆಲ್	:	1715.386
4.	ಐ.ಆರ್.ಡಿ.ಪಿ.	:	3288.136

ಆ) ಖರ್ಚು ಮಾಡಲಾದ ಶೇಕಡಾವಾರು ಪ್ರಮಾಣ ಕೆಳಗಿನಂತಿದೆ.

1.	ಜೆಆರ್‌ವೈ	:	ಶೇಕಡಾ 60
2.	ಇಂದಿರಾ ಅವಾಸ್ ಯೋಜನೆ	:	ಶೇಕಡಾ 47
3.	ಮಿಲಿಯನ್ ವೆಲ್	:	ಶೇಕಡಾ 58
4.	ಐ.ಆರ್.ಡಿ.ಪಿ.	:	ಶೇಕಡಾ 68

ಇ) ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ವಿವರ ಈ ಕೆಳಗಿನಂತಿದೆ.

			(ಲಕ್ಷ ರೂ.ಗಳಲ್ಲಿ)
1.	ಜೆಆರ್‌ವೈ	:	8437.88
2.	ಇಂದಿರಾ ಅವಾಸ್ ಯೋಜನೆ	:	2606.68
3.	ಮಿಲಿಯನ್ ವೆಲ್ ಯೋಜನೆ	:	1166.28
4.	ಐ.ಆರ್.ಡಿ.ಪಿ.	:	1268.260

ಈ) ಈ ಯೋಜನೆಗಳಡಿ ನಿಗದಿಪಡಿಸಿರುವ ಅನುದಾನವನ್ನು 31-3-96ರೊಳಗಾಗಿ ಲಭ್ಯವಾದಷ್ಟು ಸಂಪೂರ್ಣವಾಗಿ ಉಪಯೋಗಿಸಲು ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಬೆಂಗಳೂರು ಸಮೀಪದ ದೊಡ್ಡ ಆಲದಮರ ಕಣ್ವಾ ಜಲಾಶಯ ಮುಂತಾದ ಪ್ರವಾಸ ಸ್ಥಳ ಅಭಿವೃದ್ಧಿ

682 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ರಜತ ಮಹೋತ್ಸವ ವರ್ಷದ ಸಂದರ್ಭದಲ್ಲಿ ಪ್ರವಾಸೀ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆಯೇ?

ಆ) ಹಾಗಿದ್ದಲ್ಲಿ ಬೆಂಗಳೂರಿಗೆ ಸಮೀಪದಲ್ಲಿರುವ ದೊಡ್ಡ ಆಲದ ಮರ, ಕಣ್ವಾ ಜಲಾಶಯ, ಬನ್ನೇರುಘಟ್ಟ, ನಂದಿಬೆಟ್ಟ, ಮುಂತಾದ ಪ್ರವಾಸಿ ಸ್ಥಳಗಳನ್ನು ಈ ಕಾರ್ಯಕ್ರಮದಲ್ಲಿ ಅಭಿವೃದ್ಧಿ ಪಡಿಸಲಾಗುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಪ್ರವಾಸೀ ಸ್ಥಳಗಳನ್ನು ಅಭಿವೃದ್ಧಿಪಡಿಸವ ಕಾರ್ಯಗಳು ಪ್ರವಾಸೋದ್ಯಮ ನಿರ್ದೇಶಕರ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತವೆ. ಆದರೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ತನ್ನ ರಜತ ಮಹೋತ್ಸವ ವರ್ಷದಲ್ಲಿ ಈಗಿರುವ ಅನೇಕ ಸೌಲಭ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಅನೇಕ ಸ್ಥಳಗಳಲ್ಲಿ ಎಸ್‌ಟಿಡಿ, ಐಎಸ್‌ಡಿ ಸೌಲಭ್ಯಗಳನ್ನು ಮತ್ತು ಇಂಟರ್‌ಕಾಮ್ ಸೌಲಭ್ಯಗಳನ್ನು, ಹವಾನಿಯಂತ್ರಿತ ಸೌಲಭ್ಯಗಳನ್ನು ಟಿವಿಗಳನ್ನು ಹಂತ ಹಂತವಾಗಿ ಒದಗಿಸುವ ಯೋಜನೆಗಳನ್ನು, ಮಕ್ಕಳಿಗೆ ಮನರಂಜನಾ ಕ್ರೀಡೆಗಳಿಗೆ ಅವಕಾಶ ಮಾಡಿಕೊಡುವ ವಸ್ತುಗಳನ್ನು ಮತ್ತು ಹಳೆಯ ಕಟ್ಟಡಗಳನ್ನು ರಿಪೇರಿ ಮಾಡುವುದು ಮುಂತಾದ ಯೋಜನೆಗಳನ್ನು ಹಾಕಿ ಕೊಳ್ಳಲಾಗಿದೆ. ಖಾಸಗೀ ಉದ್ಯಮಿಗಳೊಂದಿಗೆ ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯ ಸಂಪೂರ್ಣ ಸರ್ವೆಯನ್ನು ಮಾಡಲಾಗಿದೆ ಮತ್ತು ಸಮುದ್ರ ತೀರದಲ್ಲಿ ಬೇಸಿಗೆಯ ತಾಣವನ್ನು ಮತ್ತು ಅರಣ್ಯ ಧಾಮವನ್ನು ಅರಣ್ಯ ಇಲಾಖೆಯ ಸಹಯೋಗದಿಂದ ಅಭಿವೃದ್ಧಿಪಡಿಸಲು ಯೋಜನೆ ಹಾಕಿಕೊಳ್ಳಲಾಗಿದೆ. ಈ ಅಭಿವೃದ್ಧಿ ನಿಗಮವು ಈಗಿರುವ ಬಸ್ಸುಗಳ ಜೊತೆಗೆ 5 ಸುವಿಹಾರಿ ಬಸ್ಸುಗಳನ್ನು ಮತ್ತು 3 ಹವಾ ನಿಯಂತ್ರಿತ ಬಸ್ಸುಗಳನ್ನು ಹೊಂದಲು ಸಹ ಯೋಜಿಸಲಾಗಿದೆ. ಮಯೂರ, ಹೊಯ್ಸಳ, ಮೈಸೂರಿನಲ್ಲಿ, 20 ಹೊಸ ಕೊಠಡಿಗಳನ್ನು ಮತ್ತು ಕೆ.ಆರ್. ಸಾಗರದಲ್ಲಿ 10ಹೆಚ್ಚಿನ ಕೊಠಡಿಗಳನ್ನು ರಾಜ್ಯ ಸರ್ಕಾರದ ಅನುದಾನದೊಂದಿಗೆ ಮತ್ತು ವೇಲ್‌ಕಾಮನ ಹಳ್ಳಿಯಲ್ಲಿ 8 ಕೊಠಡಿಗಳನ್ನು ಹಾಗೂ ಬೆಳಗಾಂ ಘಟಕದಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ಸಹಾಯದೊಂದಿಗೆ ಹೈವೇ ಸೌಲಭ್ಯಗಳನ್ನು ಒದಗಿಸುವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

ಆ) ಹೌದು. ಈ ನಿಗಮವು ದೊಡ್ಡ ಆಲದ ಮರ, ಬನ್ನೇರುಘಟ್ಟ ಮತ್ತು ನಂದಿಬೆಟ್ಟ ಘಟಕಗಳನ್ನು ಅಭಿವೃದ್ಧಿಪಡಿಸಲು ಯೋಜನೆಗಳನ್ನು ಹಮ್ಮಿಕ್ಕೊಂಡಿದೆ. ದೊಡ್ಡ ಆಲದ ಮರ ಘಟಕ, ಬನ್ನೇರು ಘಟ್ಟ ಘಟಕಗಳಲ್ಲಿ ಮಕ್ಕಳಿಗೆ ಮನರಂಜನಾ ಕ್ರೀಡೆಗಳಿಗೆ ಅವಕಾಶ ಮಾಡಿಕೊಡುವ ಯೋಜನೆಗಳನ್ನು ಸಹ ಹಮ್ಮಿಕ್ಕೊಂಡಿದೆ. ಬನ್ನೇರುಘಟ್ಟ ಘಟಕಕ್ಕೆ ಈ ನಿಗಮವು ಸಂಬಂಧಿಸಿದ ಸೀಸರ್‌ಗಳಲ್ಲಿ ನಿಗಧಿತ ಪ್ರವಾಸಗಳ ವ್ಯವಸ್ಥೆಯನ್ನು ಮಾಡಿದೆ. ನಂದಿ ಬೆಟ್ಟದ ಘಟಕವು 2 ಕೊಠಡಿಗಳನ್ನು ಈಗ ಹೊಂದಿದ್ದು, 5 ಕೊಠಡಿಗಳನ್ನು ಕಟ್ಟಿಸಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಹಮ್ಮಿಕ್ಕೊಳ್ಳಲಾಗಿದೆ.

ಕೆ.ಎಂ.ಎಫ್ ವಿದೇಶದಿಂದ ಹೊಸತಳಿಗಳನ್ನು ಆಮದು ಮಾಡಿಕೊಂಡಿರುವುದು

712 - ಶ್ರೀ ಎನ್. ರಾಜಣ್ಣ (ಭಾರತೀನಗ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಂ.ಎಫ್. ಹೊಸ ತಳಿಗಳನ್ನು ವಿದೇಶದಿಂದ ಆಮದು ಮಾಡಿಕೊಂಡಿದೆಯೇ?

ಆ) ಹಾಗಿದ್ದಲ್ಲಿ 1995ನೇ ಜನವರಿಯಿಂದ ಇಲ್ಲಿಯವರೆಗೆ ಯಾವ ಯಾವ ದೇಶಗಳಿಂದ ಎಷ್ಟು ತಳಿಗಳನ್ನು ಆಮದು ಮಾಡಿಕೊಳ್ಳಲಾಗಿದೆ?

ಇ) ಇದಕ್ಕಾಗಿ ಖರ್ಚು ಮಾಡಿದ ವೆಚ್ಚವೆಷ್ಟು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಹೌದು

ಆ) ಆಸ್ಟ್ರೇಲಿಯಾದಿಂದ 65 ಹೋರಿಗಳನ್ನು ಆಮದು ಮಾಡಿಕೊಳ್ಳಲಾಗಿದೆ.

ಅದರಲ್ಲಿ : 46 ಹೆಚ್.ಎಫ್. ತಳಿ

19 ಜರ್ಸಿ ತಳಿ

ಇ) ರೂ. 51,53,325-30

ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ

727 - ಶ್ರೀ ರೇವುನಾಯಕ ಬೆಳಮಗಿ (ಕಮಲಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು?

ಇ) ಕಮಲಾಪುರ ನರೋಣ್ ಈ ಎರಡು ಗ್ರಾಮಗಳಿಗೆ ವಿಶೇಷವಾಗಿ ಹೆಚ್ಚಿನ ಕುಡಿಯುವ ನೀರಿನ ತೊಂದರೆಯಾಗಿರುವುದು ನಿಜವೇ?

ಈ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಬಂದಿದೆ

ಆ) 1995-96ರ ಕ್ರಿಯಾ ಯೋಜನೆಯಲ್ಲಿ ಆದ್ಯತೆ ಮೇಲೆ ಕೊಳವೆ ಬಾವಿ ತೊರೆಯಲು ಕ್ರಮ ಕೈಗೊಳ್ಳಲಾಗಿದೆ.

ಇ) ಕಮಲಾಪುರ ಮತ್ತು ನರೋಣ ಗ್ರಾಮಗಳ ಹೊಸ ಬಡಾವಣೆಗಳ ಕೆಲವು ಭಾಗಗಳಲ್ಲಿ ಸ್ವಲ್ಪ ಕುಡಿಯುವ ನೀರಿನ ತೊಂದರೆ ಇದೆ.

(ಈ)

1) **ಕಮಲಾಪುರ ಗ್ರಾಮ** : ಈ ವಿಷಯದಲ್ಲಿ ಉದ್ಯೋಗ ಭರವಸೆ ಯೋಜನೆಯ ಅಡಿಯಲ್ಲಿ ಕೆಲಸ ಮುಗಿದಿದ್ದು, ಮಾರ್ಚ್ ತಿಂಗಳ ಮಧ್ಯದವರೆಗೆ ಸಮಸ್ಯೆಯನ್ನು ಬಗೆಹರಿಸಲಾಗುವುದು.

2) **ನರೋಣಾ ಗ್ರಾಮ** : ಕೆಲವು ಬಡಾವಣೆಗಳಿಗೆ ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿದ್ದು ಸ್ವಲ್ಪಮಟ್ಟಿಗೆ ನೀರಿನ ಸಮಸ್ಯೆ ಇರುತ್ತದೆ. ಇದನ್ನು ಹೋಗಲಾಡಿಸಲು 1995-96ನೇ ಸಾಲಿನ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ (ಹೆಚ್ಚಿನ ಅನುದಾನದಲ್ಲಿ) ರೂ. 4.00 ಲಕ್ಷ ಕಾಯ್ದಿರಿಸಲಾಗಿದೆ. ಬೇಗನೆ ಕೆಲಸ ಮುಗಿಸಿ ನೀರು ಸರಬರಾಜು ಸಮಸ್ಯೆಯನ್ನು ಬಗೆಹರಿಸಲಾಗುವುದು.

ಕಮಲಾಪುರ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜು ಆಗದೆ ಇರುವ ಗ್ರಾಮಗಳು

726 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಮಲಾಪುರದ ಮತ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜು ಎಷ್ಟು ತಾಂಡಾಗಳಿಗೆ ಸಂಪರ್ಕ ಸೌಲಭ್ಯ ಕಲ್ಪಿಸಲಾಗಿದೆ, ಇನ್ನುಳಿದ ತಾಂಡಾಗಳಿಗೆ ಯಾವಾಗ

ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು, ಕಲ್ಪಿಸಬೇಕಾಗಿರುವ ತಾಂಡಾಗಳ ಸಂಖ್ಯೆ ಎಷ್ಟು?

ಆ) ಪರಿಶಿಷ್ಟ ಜಾತಿ ವರ್ಗದವರಿಗೆ ವಿದ್ಯುತ್ ಸಂಪರ್ಕ ಸೌಲಭ್ಯ ಒದಗಿಸಿದ ಬಸದಿಗಳು ಎಷ್ಟು

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕಮಲಾಪುರ ಮತ ಕ್ಷೇತ್ರದಲ್ಲಿ ಒಟ್ಟು 54 ತಾಂಡಾಗಳಿದ್ದು, ಇವುಗಳ ಪೈಕಿ 50 ತಾಂಡಾಗಳಿಗೆ ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು 4 ತಾಂಡಾಗಳು ವಿದ್ಯುದ್ಧೀಕರಣಕ್ಕಾಗಿ ಬಾಕಿ ಉಳಿದಿವೆ ಈ 4 ತಾಂಡಾಗಳ ಪೈಕಿ 2 ತಾಂಡಾಗಳಿಗೆ ಮಾರ್ಚ್ 96ರ ಅಂತ್ಯದ ವೇಳೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಂಡಿದ್ದು, ಉಳಿದ 2 ತಾಂಡಾಗಳನ್ನು ಗ್ರಾಮೀಣ ವಿದ್ಯುದ್ಧೀಕರಣ ನಿಗಮದ ಯೋಜನೆಯಡಿಯಲ್ಲಿ ವಿದ್ಯುದ್ಧೀಕರಿಸುವ ಬಗ್ಗೆ ಪರಿಶೀಲಸಲಾಗುತ್ತಿದೆ.

ಆ) ಜನವರಿ 96ರ ಅಂತ್ಯದವರೆಗೆ ಈ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 105 ಹರಿಜನ ಬಸ್ತಿಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲಾಗಿದೆ.

ಲೋಕೋಪಯೋಗಿ ರಸ್ತೆಗಳ ದುರಸ್ತಿ

698 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ರಸ್ತೆಗಳೆಂದೇ ಗುರುತಿಸಿ ಅವುಗಳ ದುರಸ್ಥಿಗಾಗಿ ಸರ್ಕಾರ ಕಾದಿರಿಸಿರುವ ಹಣವನ್ನು ಕ್ಷೇತ್ರದ ಇತರೆ ರಸ್ತೆಗಳ ದುರಸ್ಥಿಗಾಗಿ ಬಳಸಲು ಸರ್ಕಾರ ಅನುಮತಿ ನೀಡುವುದೆ?

ಆ) ಈ ಕಾರ್ಯಕ್ಕಾಗಿ ಶಾಸಕರ ಹೆಸರಿನಲ್ಲಿ 30 ಲಕ್ಷಗಳನ್ನು ಪ್ರತಿ ವಿಧಾನ ಸಭಾ ಕ್ಷೇತ್ರರಿಗೆ ನಿಗದಿಪಡಿಸಿ ಕಾದಿಸಲಾಗಿದೆಯೇ?

ಇ) ಕಾದಿರಿಸಿದ್ದರೆ ಆ ಹಣವನ್ನು ಲೋಕೋಪಯೋಗಿ ರಸ್ತೆಗಳ ಜೊತೆಗೆ ಇತರೆ ರಸ್ತೆಗಳ ದುರಸ್ಥಿಗೂ ಕೂಡ ಬಳಸಲು ಶಾಸಕರುಗಳಿಗೆ ಅಧಿಕಾರ ನೀಡುವುದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ

ಆ) ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ಮಾತ್ರ 30 ಲಕ್ಷ ರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿ ಪಡಿಸುವ ಯೋಜನೆ ಇದಾಗಿದ್ದು, ಅಗತ್ಯಕ್ಕೆ ತಕ್ಕಂತೆ ರಸ್ತೆಗಳನ್ನು ಗುರುತು ಪಡಿಸುವ ಬಗ್ಗೆ ಶಾಸಕರ ಅಭಿಪ್ರಾಯವನ್ನು ಪಡೆಯಲಾಗುತ್ತದೆ. ಅವರ ಹೆಸರಿನಲ್ಲಿ ಹಣವನ್ನು ಕಾಯ್ದಿರಿಸುವ ಪ್ರಸ್ತಾಪವಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಪಶುವೈದ್ಯ ವಿಶ್ವ ವಿದ್ಯಾಲಯಗಳು

703 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುವೈದ್ಯ ವಿಶ್ವವಿದ್ಯಾಲಯ ಸ್ಥಾಪಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಮತ್ತು ಎಲ್ಲಿ ಪ್ರಾರಂಭ ಮಾಡಲಾಗುವುದು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಉಡುಪಿ ನ್ಯಾಯಾಲಯದಲ್ಲಿ "ಕಾಪಿಯರನ್ನು" ಬದಲಾಯಿಸಿ ಜೆರಾಕ್ಸ್ ಯಂತ್ರವನ್ನು ಅಳವಡಿಸುವ ಬಗ್ಗೆ

499 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನ್ಯಾಯಾಲಯದಲ್ಲಿ ದಿನಕ್ಕೆ 100 ಪ್ರತಿಗಳನ್ನು ತೆಗೆಯುವ ಸಾಮರ್ಥ್ಯಯಿರುವ ಕೋಪಿಯರ್ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಇದೇ ಕೋಪಿಯರ್‌ನಿಂದ ಉಡುಪಿ, ಕುಂದಾಪುರ, ಕಾರ್ಕಳ ನ್ಯಾಯಾಲಯಗಳ ದಾಖಲೆಗಳ ಪ್ರತಿ ತೆಗೆಯಬೇಕಾದುದರಿಂದ, ತುಂಬಾ ವಿಳಂಬವಾಗುವುದೆಂಬ ದೂರು ಸಾರ್ವಜನಿಕರಿಂದ ಸರಕಾರಕ್ಕೆ ಬಂದಿದೆಯೇ?

ಇ) ದಿನಕ್ಕೆ 1500 ಪ್ರತಿಗಳ ಬೇಡಿಕೆ ಇರುವ ಈ ನ್ಯಾಯಾಲಯಕ್ಕೆ ಝೆರಾಕ್ಸ್ ಯಂತ್ರವನ್ನು ಅಳವಡಿಸುವ ಯೋಜನೆ ಸರಕಾರದ ಮುಂದಿದೆಯೇ?

ಈ) ಸರಕಾರದ ಯೋಜನೆಯಿದ್ದಲ್ಲಿ ಯಾವಾಗ ಎಷ್ಟು ತಿಂಗಳಲ್ಲಿ ಅಳವಡಿಸಲಾಗುವುದು?

ಶ್ರೀ ಯಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಹೌದು

ಆ) ವಿಳಂಬವಾಗುವುದು ನಿಜವಾಗಿದ್ದರೂ, ಈ ಬಗ್ಗೆ ಸಾರ್ವಜನಿಕರಿಂದ ಸರ್ಕಾರಕ್ಕೆ ದೂರುಗಳು ಬಂದಿಲ್ಲ

ಇ) ಹೌದು

ಈ) ರಾಜ್ಯದ ಎಲ್ಲ ಸಿವಿಲ್ ನ್ಯಾಯಾಲಯಗಳಲ್ಲಿ 1000 ಪ್ರತಿಗಳಿಗಿಂತ ಹೆಚ್ಚಿನ ಶಕ್ತಿಯ ಕಾಪಿಯರ್ ಯಂತ್ರಗಳನ್ನು ಒದಗಿಸಲು ಹೆಚ್ಚುವರಿ ಅನುದಾನಕ್ಕಾಗಿ ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಕೆ.ಆರ್. ಸಾಗರದ ವಿಶ್ವೇಶ್ವರಯ್ಯ ಮತ್ಸ್ಯಾಲಯ ನಿರ್ಮಾಣ ಕಾರ್ಯ

496 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್. ಸಾಗರದಲ್ಲಿ "ವಿಶ್ವೇಶ್ವರಯ್ಯ ಮತ್ಸ್ಯಾಲಯ" ನಿರ್ಮಾಣ ಕಾರ್ಯವನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು?

ಆ) ಹಾಗಿದ್ದಲ್ಲಿ ಈ ಕಾರ್ಯವನ್ನು ಇದುವರೆಗೂ ಪೂರ್ತಿಗೊಳಿಸದಿರಲು ಕಾರಣಗಳೇನು?

ಇ) ಸಾರ್ವಜನಿಕರ ಪ್ರವೇಶಕ್ಕೆ ಯಾವಾಗ ತೆರೆಯಲಾಗುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕೆ.ಆರ್. ಸಾಗರದಲ್ಲಿ ವಿಶ್ವೇಶ್ವರಯ್ಯ ಮತ್ಸ್ಯಾಲಯದ ನಿರ್ಮಾಣ ಕಾರ್ಯವನ್ನು 1987-88ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.

ಆ) "ಮತ್ಸ್ಯಾಲಯ ಕಟ್ಟಡ ಕಾಮಗಾರಿಯನ್ನು ನೀರಾವರಿ ಇಲಾಖೆಯವರ ನಿರ್ವಹಿಸುತ್ತಿದ್ದು, 1989-90ನೇ ಸಾಲಿನಲ್ಲಿ ಬಹುಮಟ್ಟಿಗೆ ಕೆಲಸವನ್ನು ಪೂರ್ಣಗೊಳಿಸಿರುವರು ಮತ್ಸ್ಯಾಲಯಗಳಲ್ಲಿ ನಿರ್ಮಿಸಬೇಕಾದ ಮೀನು ತೊಟ್ಟಿಗಳ ನಿರ್ಮಾಣ, ಒಳಾಂಗಣ ವ್ಯವಸ್ಥೆ, ಅಲಂಕಾರ ಕೆಲಸಗಳು ಸೂಕ್ಷ್ಮ ಮತ್ತು ಆಧುನಿಕ ತಂತ್ರಜ್ಞಾನದಿಂದ ಕೂಡಿರುವುದರಿಂದ ಮತ್ಸ್ಯಾಲಯದ ಒಳಗಿನ ವ್ಯವಸ್ಥೆಯ ಕೆಲಸಗಳಿಗೆ ನಿಗದಿತ ದರಪಟ್ಟಿ ಇಲ್ಲದೇ ಇರುವುದರಿಂದ ಬೇರೆ ಬೇರೆ ಸ್ಥಳಗಳಿಂದ ಸಂಬಂಧಪಟ್ಟ ಮಾಹಿತಿಗಳನ್ನು ಸಂಗ್ರಹಿಸಿ ಅಂದಾಜು ತಯಾರಿಸಬೇಕಾಯಿತು. ಮೂಲ ಅಂದಾಜಿನಲ್ಲಿ ಈ ಕೆಲಸಗಳಿಗೆ ವಿವರವಾದ ಅಂದಾಜುಪಟ್ಟಿ ಮತ್ತು ಕೆಲಸದ ವಿವರ ತಯಾರು ಮಾಡಿಲ್ಲದುದರಿಂದ ಪರಿಷ್ಕೃತ ಅಂದಾಜನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆದು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ದಿ : 25-3-93ರಲ್ಲಿ ಪಡೆಯಲಾಯಿತು. 1994ರಲ್ಲಿ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ನೇತೃತ್ವದಲ್ಲಿ ನೀರಾವರಿ ಇಲಾಖೆಯನ್ನೊಳಗೊಂಡಂತೆ ಮತ್ಸ್ಯಾಲಯದ ಕಾಮಗಾರಿಗೆ ಟೆಂಡರನ್ನು ಕರೆಯಲು ಸಮಿತಿಯೊಂದನ್ನು ರಚಿಸಲಾಗಿದ್ದು, ಸಾಕಷ್ಟು ಸ್ಪರ್ಧಾತ್ಮಕ ಟೆಂಡರುಗಳು ಸ್ವೀಕೃತವಾಗಿಲ್ಲದೇ ಇದ್ದುದರಿಂದ ಮತ್ತು ಹೆಚ್ಚುವರಿ ಕಾರ್ಯದರ್ಶಿಗಳು ನಿವೃತ್ತಿ ಹೊಂದಿರುವುದರಿಂದ ಪುನಃ ಸರ್ಕಾರವು ನೀರಾವರಿ ಇಲಾಖೆಗೆ ಟೆಂಡರನ್ನು ಕರೆಯುವ ಕಾರ್ಯವನ್ನು ವಹಿಸಿತ್ತು. ಈ ಕೆಲಸಗಳಿಗೆ ಟೆಂಡರನ್ನು ಕರೆಯಲಾಗಿದ್ದು, ನೀರಾವರಿ ಇಲಾಖೆಯು ಕೆಲಸಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುತ್ತಿದೆ.

ಇ) ಆದಷ್ಟು ಶೀಘ್ರ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಸಾರ್ವಜನಿಕ ಪ್ರವೇಶಕ್ಕೆ ತೆರೆಯಲಾಗುವುದು.

ಉಡುಪಿ ನ್ಯಾಯಾಲಯದ ಕಟ್ಟಡ, ನೀರು ಸರಬರಾಜು ಕುರಿತು

498 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನ್ಯಾಯಾಲಯದ ಕಟ್ಟಡ ನಿರ್ವಹಣೆಗೆ ಈವರೆವಿಗೆ ಒದಗಿಸಲಾಗಿರುವ ಹಣವೆಷ್ಟು?

ಆ) ಈ ಕಟ್ಟಡ ಮತ್ತು ವಕೀಲರ ಸಂಘದ ಕಟ್ಟಡ ತುಂಬಾ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ನ್ಯಾಯಾಲಯಕ್ಕೆ ನೀರು ಸರಬರಾಜು, ಕಟ್ಟಡ ವಿಸ್ತರಣೆ ಮತ್ತು ಪೀಠೋಪಕರಣ ವ್ಯವಸ್ಥೆಗಾಗಿ ಈಗಾಗಲೇ ಅರ್ಜಿಗಳು ಸರ್ಕಾರಕ್ಕೆ ಬಂದಿದೆಯೇ?

ಈ) ಅರ್ಜಿಗಳು ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಯಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಪ್ರತಿ ವರ್ಷ ಕಟ್ಟಡದ ನಿರ್ವಹಣೆ ವೆಚ್ಚ 13,550.00 ರೂ. ಖರ್ಚು ಮಾಡಲಾಗುತ್ತಿದೆ.

ಆ) ಹೌದು

ಇ) ಹೌದು. ಫರ್ನೀಚರ್ ಒದಗಿಸುವ ಬಗ್ಗೆ ಸಾರ್ವಜನಿಕರಿಂದಾಗಲೀ ಅಥವಾ ವಕೀಲರ ಸಂಘದಿಂದಾಗಲೀ ನಿರ್ದಿಷ್ಟ ಕೋರಿಕೆಗಳು ಬಂದಿರುವುದಿಲ್ಲ.

ಈ) ಉಡುಪಿ ನ್ಯಾಯಾಲಯದ ದುರಸ್ತಿ ಕಾರ್ಯಗಳಿಗಾಗಿ ಎರಡು ಲಕ್ಷ ರೂ.ಗಳ ನಕ್ಷೆ ಮತ್ತು ಅಂದಾಜು ಸ್ವೀಕೃತವಾಗಿದ್ದು, ಅದು ಪರಿಶೀಲನೆಯಲ್ಲಿದೆ.

ಉಡುಪಿ ನ್ಯಾಯಾಲಯ ಕಟ್ಟಡಕ್ಕೆ ನೀರು ಸರಬರಾಜು ಇತ್ಯಾದಿಗಳಿಗೆ 1.25 ಲಕ್ಷ ರೂ.ಗಳ ರೇಖಾ ಅಂದಾಜು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಬೆಂಗಳೂರು, ಇವರು ಸಿದ್ಧಪಡಿಸಿ, ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಕಳುಹಿಸಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಸರ್ಕಾರಕ್ಕೆ ಈಗ ಬಂದಿದ್ದು ಪರಿಶೀಲನೆಯಲ್ಲಿದೆ.

ನ್ಯಾಯಾಲಯಗಳಲ್ಲಿ ಪೀಠೋಪಕರಣಗಳಿಗಾಗಿ 14.18 ಲಕ್ಷ ರೂ.ಗಳನ್ನು ಈ ವರ್ಷ ಬಿಡುಗಡೆ ಮಾಡಲಾಗುತ್ತಿದೆ.

ಮೀನುಗಾರರ ಕ್ಷೇತ್ರಾಭಿವೃದ್ಧಿ ಬಗ್ಗೆ

500 : ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಮೀನುಗಾರರ ಕ್ಷೇಮಾಭಿವೃದ್ಧಿ ಯೋಜನೆಯಲ್ಲಿ ಕೇಂದ್ರ ಸರ್ಕಾರವು ಮಾರ್ಚ್ 95ರಲ್ಲಿ ಮೀನುಗಾರರಿಗಾಗಿ ಎಷ್ಟು ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದೆ? ಇವುಗಳಲ್ಲಿ ಎಷ್ಟು ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ?

ಆ) ನಿರ್ಮಾಣ ಕಾರ್ಯ ಪ್ರಾರಂಭವಾಗದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು?

ಇ) 1995-96ನೇ ಸಾಲಿಗೆ ಎಷ್ಟು ಮನೆಗಳ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ?

ಈ) ಸಲ್ಲಿಸದಿದ್ದಲ್ಲಿ ಕಾರಣಗಳೇನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ) ಕೇಂದ್ರ ಸರ್ಕಾರವು ಮಾರ್ಚ್ 95ರಲ್ಲಿ 402 ಮನೆಗಳು ಮತ್ತು 18 ಕೊಳವೆ ಬಾವಿಗಳಿಗೆ ಅನುಮೋದನೆ ನೀಡಿದೆ. ಇವುಗಳ ನಿರ್ಮಾಣ ಕಾರ್ಯ ಪ್ರಾರಂಭವಾಗುತ್ತಿದೆ.

ಆ) ಕೇಂದ್ರ ಸರ್ಕಾರದಿಂದ ಮಂಜೂರಾತಿ ಆದೇಶ ಮಾರ್ಚ್ 95ರ ಕೊನೆಯಲ್ಲಿ ಬಂದಿದ್ದು, ರಾಜ್ಯದಲ್ಲಿ ಕೇಂದ್ರ ಸರ್ಕಾರದ ಹಣ ತಲುಪಿದ ನಂತರ ಇದನ್ನು 95-96ನೇ ಸಾಲಿನಲ್ಲಿ ಬಳಸಲು ಕೇಂದ್ರ ಸರ್ಕಾರದಿಂದ ಅನುಮತಿ ದೊರೆತನಂತರ ಮನೆಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ.

ಇ) 270 ಮನೆಗಳು ಮತ್ತು 12 ಕೊಳವೆ ಬಾವಿಗಳ ನಿರ್ಮಾಣಕ್ಕೆ ಪ್ರಸ್ತಾವನೆ ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಸುಮಾರು 400 ಹೆಚ್ಚುವರಿ ಮನೆಗಳ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಪ್ರತ್ಯೇಕವಾಗಿ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಕನ್ನಡ - ಕನ್ನಡ ನಿಘಂಟು ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಕುರಿತು

26 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ-ಕನ್ನಡ ನಿಘಂಟು ಕಛೇರಿಯಲ್ಲಿ ಸುಮಾರು 17-20 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರು ನಿಘಂಟಿನ ಕಾರ್ಯ ಮುಗಿದ ಮೇಲೆ ಅವರ ಪರಿಸ್ಥಿತಿ ಏನು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ನೌಕರರನ್ನು ಅನುದಾನ ಸಂಹಿತೆಗೆ ಒಳಪಡಿಸುವ ಆದೇಶವನ್ನು ಸರ್ಕಾರದವರು ಹೊರಡಿಸುವರೇ?

ಶ್ರೀ ಎಂ.ಸಿ. ಪ್ರಕಾಶ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) :

ಅ) ಹೌದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ

ರಿಗ್ ಬೋರ್‌ಗಳ ಬಗ್ಗೆ

42 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಬ್ಲಿಕ್ ಹೆಲ್ತ್ ಇಂಜನಿಯರಿಂಗ್ ಇಲಾಖೆಯಲ್ಲಿರುವ ಒಟ್ಟು ರಿಗ್ ಬೋರ್‌ಗಳು ಎಷ್ಟು?

ಆ) ಇವುಗಳಲ್ಲಿ ಕೆಲಸ ಮಾಡುವ ಸ್ಥಿತಿಯಲ್ಲಿರುವ ರಿಗ್ ಬೋರ್‌ಗಳೆಷ್ಟು?

ಇ) ಕೆಟ್ಟು ನಿಂತಿರುವ ಬೋರ್‌ಗಳನ್ನು ದುರಸ್ತಿಪಡಿಸದಿರಲು ಕಾರಣಗಳೇನು? ಇದರಿಂದಾಗುವ ಹಾನಿಗೆ ಕಾರಣಕರ್ತರಾದವರ ಮೇಲೆ ಕ್ರಮಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 94

ಆ) 84

ಇ) ಅನೇಕ ರಿಗ್ ಯಂತ್ರಗಳು ನಿಗಧಿತ ಅವಧಿ ಅಂದರೆ 12,000 ಕಂಪ್ರೆಸರ್ ಗಂಟೆಗಳು : 12 ವರ್ಷಗಳು ಮೀರಿ ಕೆಲಸ ನಿರ್ವಹಿಸಿದ್ದು ಪದೇ ಪದೇ ರಿಪೇರಿ ಕೆಲಸಗಳು ಬರುತ್ತಿವೆ. ಇದಲ್ಲದೆ ಕೆಲವೊಂದು ರಿಗ್ ಯಂತ್ರಗಳು ಹೊರದೇಶಗಳಿಂದ ಆಮದು ಮಾಡಿಕೊಂಡಿರುವುದರಿಂದ ಅವುಗಳ ಬಿಡಿಭಾಗಗಳು ಸಮಯಕ್ಕೆ ಸಿಗದೇ ಇರುವುದರಿಂದ, ರಿಪೇರಿ ಕೆಲಸ ತಡವಾಗುತ್ತದೆ. ಈ ಮುಖ್ಯ ಕಾರಣಗಳಿಂದಾಗಿ ರಿಗ್ ಯಂತ್ರಗಳನ್ನು ರಿಪೇರಿ ಮಾಡಲು ಬಹಳ ಕಾಲವಾಗುತ್ತದೆ. ಆದ್ದರಿಂದ ರಿಗ್ ಯಂತ್ರಗಳ ಹಾನಿಗೆ ಕಾರಣಕರ್ತರಾದವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಜವಾಹರ್ ರೋಜ್‌ಗಾರ್ ಯೋಜನೆ ಕುರಿತು

540 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಸಾಲಿನಲ್ಲಿ ಜೆ.ಆರ್. ವೈ. ಅಡಿಯಲ್ಲಿ ಸಕಲೇಶಪುರ ತಾಲ್ಲೂಕಿಗೆ ನಿಗದಿ ಮಾಡಿದ ಹಣ ಎಷ್ಟು? ಬಿಡುಗಡೆ ಆದ ಹಣ ಎಷ್ಟು? ಖರ್ಚು ಮಾಡಿದ ಹಣ ಎಷ್ಟು?

ಆ) ಸದರಿ ಯೋಜನೆಗೆ ಕೇಂದ್ರ ಸರ್ಕಾರ ನೀಡಿದ ಹಣ ಎಷ್ಟು? ಹಾಗೂ ರಾಜ್ಯ ಸರ್ಕಾರದ ಹಣ ಎಷ್ಟು?

ಇ) 1995-96ನೇ ಸಾಲಿನಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಸಕಲೇಶಪುರ - ಆಲೂರು ತಾಲ್ಲೂಕಿಗೆ ನಿಗದಿ ಮಾಡಿದ ಹಣ ಎಷ್ಟು? (30-12-95ರೊಳಗೆ ಬಿಡುಗಡೆ ಮಾಡಿದ ಹಣ ಎಷ್ಟು? ಖರ್ಚು ಮಾಡಿದ ಹಣ ಎಷ್ಟು?

ಈ) 1994-95ನೇ ಸಾಲಿನಲ್ಲಿ ಹೆಚ್ಚುವರಿ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಬಿಡುಗಡೆಯಾದ ಮತ್ತು ಖರ್ಚಾದ ಹಣ ಎಷ್ಟು? (ಸಕಲೇಶಪುರ - ಆಲೂರು ತಾಲ್ಲೂಕು)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ)

ನಿಗದಿ ಮಾಡಿದ ಹಣ	ಬಿಡುಗಡೆ ಆದ ಹಣ	ಖರ್ಚು ಮಾಡಿದ ಹಣ
	(ಲಕ್ಷ ರೂ.ಗಳಲ್ಲಿ)	
46.776	46.281	32.906

ಆ)

ಕೇಂದ್ರ ಸರ್ಕಾರ ನೀಡಿದ ಹಣ	ರಾಜ್ಯ ಸರ್ಕಾರ ನೀಡಿದ ಹಣ	ಒಟ್ಟು
37.024	9.257	46.281

ಇ)

	ತಾಲ್ಲೂಕು	ನಿಗದಿ ಮಾಡಿದ ಹಣ	ಬಿಡುಗಡೆ ಮಾಡಿದ ಹಣ	ಖರ್ಚು ಮಾಡಿದ ಹಣ
1)	ಸಕಲೇಶಪುರ	61.299	24.625	17.373
		(ಲಕ್ಷ ರೂ.ಗಳಲ್ಲಿ)		
2)	ಆಲೂರು	29.706	17.375	11.632

ಈ) 1994-95ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಹೆಚ್ಚುವರಿ ಜವಾಹರ್ ರೋಜ್ ಗಾರ್ ಯೋಜನೆ ಅನುಷ್ಠಾನದಲ್ಲಿರುವುದಿಲ್ಲ.

ಸಕಲೇಶಪುರ - ಆಲೂರು ತಾಲ್ಲೂಕಿನಲ್ಲಿ ನೀರಿನ ಅಭಾವ

546 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಹಾಗೂ ಆಲೂರು ತಾಲ್ಲೂಕುಗಳಲ್ಲಿ ವಿವಿಧ ಯೋಜನೆಗಳಲ್ಲಿ ನೀರಿನ ಪೂರೈಕೆ ಕುರಿತು ಎಷ್ಟು ಗ್ರಾಮಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಅವುಗಳು ಯಾವ ಹಂತದಲ್ಲಿವೆ?

ಆ) ಅವುಗಳನ್ನು ಎಷ್ಟು ದಿನಗಳಲ್ಲಿ ಪೂರೈಸಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಸಕಲೇಶಪುರ ಮತ್ತು ಆಲೂರು ಕ್ಷೇತ್ರಗಳಲ್ಲಿ 51 ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಳ್ಳಲಾಗಿವೆ. ವಿವರಗಳು ಕೆಳಗಿನಂತಿವೆ.

ತಾಲ್ಲೂಕು	ಎನ್.ಆರ್.ಡಬ್ಲ್ಯೂ ಎಸ್. ನಲ್ಲಿ ನೀರು ಸರಬರಾಜು ಯೋಜನೆ		ಎ.ಆರ್.ಡಬ್ಲ್ಯೂ ಡಬ್ಲ್ಯೂ.ಎಸ್. ನಲ್ಲಿ ನೀರು ಸರಬರಾಜು ಯೋಜನೆ	
	ಮುಗಿದಿ ರುವುವು	ಚಾಲ್ತಿಯ ಲ್ಲಿರುವುವು	ಮುಗಿದಿ ರುವುವು	ಚಾಲ್ತಿಯ ಲ್ಲಿರುವುವು
ಸಕಲೇಪುರ	10	-	7	1
ಆಲೂರು	17	6	17	7
ಒಟ್ಟು	27	6	24	8

ಆ) ಉಳಿದ 37 ಯೋಜನೆಗಳನ್ನು ಹಂತಹಂತವಾಗಿ ಮಾರ್ಚ್ 1998ರ ಅಂತ್ಯದೊಳಗೆ ಮುಗಿಸಲು ಯೋಜಿಸಲಾಗಿದೆ.

ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸುವುದು

539 - ಶ್ರೀ ಬಿ.ಬಿ. ಶಿವಪ್ಪ (ಸಕಲೇಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್ ವ್ಯಾಪ್ತಿಗೊಳಪಟ್ಟ ಕೆಲವು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಹಾಗಿದ್ದಲ್ಲಿ, ಸಕಲೇಪುರ ಕ್ಷೇತ್ರಕ್ಕೊಳಪಟ್ಟ (ಸಕಲೇಪುರ-ಆಲೂರು) ಯಾವ ಯಾವ ರಸ್ತೆ ವರ್ಗಾಯಿಸುವಂತೆ ನಿರ್ಧರಿಸಲಾಗಿದೆ (ಕಿಲೋ ಮೀಟರ್‌ವಾರು ವಿವರ ನೀಡುವುದು)

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರ ಆಲೋಚಿಸುವುದೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಈ ಬಗ್ಗೆ ಪರಿಶೀಲಿಸಲಾಗುವುದು

ಸಕಲೇಪುರ – ಆಲೂರು ತಾಲ್ಲೋಕಿನಲ್ಲಿ ಕುಡಿಯುವ ನೀರಿನ ಯೋಜನೆ

541 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಪುರ-ಆಲೂರು ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಕುಡಿಯುವ ನೀರಿನ ಯೋಜನೆಗಳೆಷ್ಟು (ಎನ್‌ಆರ್‌ಡಬ್ಲ್ಯೂಎಸ್ ಹಾಗೂ ಮಿನಿವಾಟರ್ ಸಪ್ಲೆ ತಾಲ್ಲೂಕುವಾರು ವಿವರ ನೀಡುವುದು)

ಆ) ಆ ಪೈಕಿ ಪೂರ್ಣಗೊಂಡ ಕಾಮಗಾರಿಗಳೆಷ್ಟು ಹಾಗೂ ಪೂರ್ಣಗೊಂಡು ವಿದ್ಯುಚ್ಛಕ್ತಿ ಸರಬರಾಜು ಇಲ್ಲದೆ ಇರುವ ಕಾಮಗಾರಿಗಳೆಷ್ಟು?

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅವಧಿ ನಿಗಧಿ ಮಾಡಲಾಗಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) 69 ಚಾಲ್ತಿಯಲ್ಲಿರುವ ಕುಡಿಯುವ ನೀರು ಸರಬರಾಜು ಯೋಜನೆಗಳಿವೆ. ವಿವರಗಳು ಕೆಳಗಿನಂತಿವೆ.

ತಾಲ್ಲೂಕು	ಕೊಳವೆನೀರು ಸರಬರಾಜು ಯೋಜನೆ	ನಲ್ಲಿ ನೀರು ಸರಬರಾಜು ಯೋಜನೆ	ಒಟ್ಟು
ಸಕಲೇಪುರ	17	13	30
ಆಲೂರು	34	5	39
ಒಟ್ಟು	51	18	69

ಆ) ಮುಗಿದಿರುವ ಯೋಜನೆಗಳು

ತಾಲ್ಲೂಕು	ಕೊಳವೆನೀರು ಸರಬರಾಜು ಯೋಜನೆಗಳು	ಕಿರುನೀರು ಸರಬರಾಜು ಯೋಜನೆಗಳು	ಒಟ್ಟು
ಸಕಲೇಷ್ಪುರ	1	3	4
ಆಲೂರು	13	2	15
ಒಟ್ಟು	14	5	19

ವಿದ್ಯುತ್ ಸರಬರಾಜು ಇಲ್ಲದಿರುವ ಆದರೆ ಮುಗಿದಿರುವ ಯೋಜನೆಗಳು

ತಾಲ್ಲೂಕು	ಕೊಳವೆನೀರು ಸರಬರಾಜು ಯೋಜನೆಗಳು	ಕಿರುನೀರು ಸರಬರಾಜು ಯೋಜನೆಗಳು	ಒಟ್ಟು
ಸಕಲೇಶಪುರ	2	3	5
ಆಲೂರು	3	-	3
ಒಟ್ಟು	5	3	8

ಇ) ಸಾಮಾನ್ಯವಾಗಿ, ಕೊಳವೆ ·ನೀರು ಸರಬರಾಜು ಯೋಜನೆಯನ್ನು ಮುಗಿಸಲು ಮೂರು ವರ್ಷಗಳು ಮತ್ತು ಕಿರುನೀರು ಸರಬರಾಜು ಯೋಜನೆಯನ್ನು ಮುಗಿಸಲು ಒಂದು ವರ್ಷ ನಿಗದಿ ಮಾಡಲಾಗಿದೆ.

ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುವ ಪ್ರಕರಣ

228 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುವ ಪ್ರಕರಣಗಳೆಷ್ಟು ?

ಆ) ಪ್ರಕರಣಗಳ ಶೀಘ್ರ ವಿಲೇವಾರಿಗೆ ತೆಗೆದುಕೊಂಡಿರುವ ಹಾಗೂ ತೆಗೆದುಕೊಳ್ಳಬೇಕೆಂದಿರುವ ಕ್ರಮಗಳೇನು?

ಶ್ರೀ ಯಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುವ ವಿವಿಧ ಪ್ರಕರಣಗಳು (31ನೇ ಡಿಸೆಂಬರ್ 1995ರಲ್ಲಿ ಇದ್ದಂತೆ)

	ನ್ಯಾಯಾಲಯಗಳ ಹೆಸರು	ಸಿವಿಲ್	ಕ್ರಿಮಿನಲ್	ಒಟ್ಟು
1.	ಉಚ್ಛ ನ್ಯಾಯಾಲಯ	1,56,484	5,009	1,61,493
2.	ಸಿಟಿ ಸಿವಿಲ್ ಕೋರ್ಟ್, ಬೆಂಗಳೂರು	72,424	2,833	75,257
3.	ಜಿಲ್ಲಾ ಮತ್ತು ಸೆಷನ್ಸ್ ಜಡ್ಜ್ ಕೋರ್ಟುಗಳು	48,129	23,426	71,555
4.	ಕುಟುಂಬ ನ್ಯಾಯಾಲಯ, ಬೆಂಗಳೂರು, ಬಿಜಾಪುರ ಮತ್ತು ಬೆಳಗಾಂ	3,661	2,623	6,284
5.	ಸಿವಿಲ್ ಜಡ್ಜ್ ಕೋರ್ಟುಗಳು	2,03,415	38,552	2,41,968
6.	ಲಘು ವ್ಯಾಜ್ಯಗಳ ನ್ಯಾಯಾಲಯ, ಬೆಂಗಳೂರು	40,452	-	40,452
7.	ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಮತ್ತು ಹೆಚ್ಚುವರಿ ಚೀಫ್ ಮೆಟ್ರೋ ಪಾಲಿಟನ್ ಮ್ಯಾಜಿಸ್ಟ್ರೇಟ್ಸ್, ಬೆಂಗಳೂರು	-	64,129	64,129
8.	ಸಂಚಾರಿ ನ್ಯಾಯಾಲಯಗಳು, ಬೆಂಗಳೂರು	-	2,53,010	2,53,010
9.	ಮುನ್ಸಿಫ್ ಮತ್ತು ಜೆಎಂಎಫ್‌ಸಿ ಕೋರ್ಟುಗಳು	2,57,800	2,42,556	5,00,358
	ಒಟ್ಟು	7,82,367	6,32,138	14,14,505

ಆ) ಪ್ರಕರಣಗಳ ಶೀಘ್ರ ವಿಲೇವಾರಿಗೆ ಈ ಕೆಳಕಂಡ ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಗಿದೆ

1) ನ್ಯಾಯಾಲಯಗಳಲ್ಲಿ ಖಾಲಿ ಇರುವ ನ್ಯಾಯಾಧೀಶರ ಹಾಗೂ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡುವುದು

2) ನ್ಯಾಯಾಲಯಗಳು ಇಲ್ಲದೆ ಇರುವ ಕಡೆಗಳಲ್ಲಿ ಹೊಸ ನ್ಯಾಯಾಲಯಗಳ ಸ್ಥಾಪನೆ

3) ಮೊಕದ್ದಮೆಗಳ ಸಂಖ್ಯೆ ಹೆಚ್ಚಾಗಿರುವ ಸ್ಥಳಗಳಲ್ಲಿ ಅಧಿಕ ನ್ಯಾಯಾಲಯಗಳ ಸ್ಥಾಪನೆ

4) ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕಾನೂನು ನೆರವು ಸಮಿತಿಗಳ ಮೂಲಕ ಜನತಾ ನ್ಯಾಯಾಲಯ ಶಿಬಿರಗಳನ್ನು ಕಾಲಬದ್ಧವಾಗಿ ನಡೆಸುವುದು

5) 5 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಇತ್ಯರ್ಥವಾಗದೇ ಬಾಕಿ ಉಳಿದಿರುವ ಹಾಗೂ ಸಮಾಜದ ಮೇಲೆ ದುಷ್ಪರಿಣಾಮ ಬೀರದ ಪ್ರಕರಣಗಳನ್ನು ನ್ಯಾಯಾಲಯದಿಂದ ಹಿಂತೆಗೆದುಕೊಳ್ಳುವುದನ್ನು ಪರಿಶೀಲಿಸಲು ಸಮಿತಿ ರಚನೆ. ಸಮಿತಿ ಒಂದು ಸಭೆ ನಡೆಸಿದೆ.

ವಿದ್ಯುತ್ ಉತ್ಪಾದನೆ ಕುರಿತು

152 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಮೇರಿಕದ ಕೊಜೆಂಟ್ರಿಕ್ಸ್ ಸಂಸ್ಥೆಗೆ ಶಾಖೋತ್ಪನ್ನ ಉತ್ಪಾದನೆಗೆ ಮಂಗಳೂರಿನಲ್ಲಿ ಭೂಮಿಯನ್ನು ಕೊಟ್ಟಿದೆಯೇ?

ಆ) ಇದು ಕಾರ್ಯಾರಂಭವನ್ನು ಯವಾಗ ಮಾಡಲಿದೆ ಇದರ ಅಂದಾಜು ಯೋಜನಾ ವೆಚ್ಚವೆಷ್ಟು?

ಇ) ವಿದ್ಯುತ್ ಚಿತಾಗಾರಗಳಿಗೆ ಈಗ ವಿದ್ಯುತ್ ದರವನ್ನು ವಿಧಿಸುತ್ತಿರುವುದರಲ್ಲಿ ಕಡಿಮೆ ಮಾಡುವ ಬಗ್ಗೆ ಸರ್ಕಾರವೇನಾದರೂ ಯೋಚಿಸಿರುವರೆ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಕೋಜೆಂಟ್ರಿಕ್ಸ್ ಸಂಸ್ಥೆಯು ಜನವರಿ 2000ನೇ ಇಸವಿಯಲ್ಲಿ - ಯೋಜನೆ ಅಂತಿಮ ಹಂತವನ್ನು ತಲುಪುವ ನಿರೀಕ್ಷೆ ಇದೆ. ಈ ಯೋಜನೆಯ ಒಟ್ಟು ವೆಚ್ಚವು ರೂ. 4298.78 ಕೋಟಿ ಆಗಬಹುದೆಂದು ಅಂದಾಜು ಮಾಡಲಾಗಿದೆ.

ಇ) ಇಲ್ಲ

ಜನರೇಟರ್‌ಗಳಿಗೆ ತೆರಿಗೆ ವಿಧಿಸುವುದನ್ನು ರದ್ದು ಪಡಿಸುವುದು

161ಎ - ಶ್ರೀ ಎನ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಪೂರೈಕೆಗಾಗಿ ಖಾಸಗಿ ಉದ್ದಿಮೆಗಳು ಬಳಸುವ ಸಣ್ಣ ಜನರೇಟರ್‌ಗಳಿಗೆ ತೆರಿಗೆ ವಿಧಿಸುವುದನ್ನು ರದ್ದು ಪಡಿಸುವ ವಿಷಯ ಸರ್ಕಾರದವರ ಮುಂದಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಹೆಚ್.ಪಿ. ವರೆಗಿನ ಜನರೇಟರ್‌ಗಳಿಗೆ ಇದು ಅನ್ವಯವಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಈಗಾಗಲೇ ಅಗತ್ಯವಾದ ಸರ್ಕಾರಿ ಆದೇಶ ಹೊರಡಿಸಿದೆ.

ಆ) ಉದ್ದಿಮೆದಾರರು ಅಳವಡಿಸಿಕೊಂಡಿರುವ ಎಲ್ಲಾ ಹೆಚ್.ಪಿ.ಗೂ ಇದು ಅನ್ವಯವಾಗುವುದು.

ಕೆ.ಇ.ಬಿ.ಗೆ ಬರಬೇಕಾದ ಬಾಕಿ ಹಣ

161 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಹಣವೆಷ್ಟು, ಯಾವ ಯಾವ ಕಂಪನಿಗಳಿಂದ ಎಷ್ಟೆಷ್ಟು ಹಣ ಬರಬೇಕಾಗಿದೆ, ಬಾಕಿ ವಸೂಲಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ದಿನಾಂಕ : 30-11-95ರ ಅಂತ್ಯಕ್ಕೆ ವಿವಿಧ ಗ್ರಾಹಕರುಗಳಿಂದ ಮಂಡಳಿಗೆ ಬರಬೇಕಾಗಿದ್ದ ಬಾಕಿ ಹಣದ ಒಟ್ಟು ಮೊತ್ತ ರೂ. 71,364.68 ಲಕ್ಷಗಳು, ದಿನಾಂಕ 30-11-95ರ ಅಂತ್ಯದಲ್ಲಿರುವಂತೆ ರೂ. ಒಂದು ಲಕ್ಷಕ್ಕಿಂತ ಮೇಲ್ಪಟ್ಟು ಬಾಕಿ ಉಳಿಸಿ ಕೊಡುವ ಖಾಸಗಿ ಗ್ರಾಹಕರುಗಳ ಹೆಸರು ಮತ್ತು ಬಾಕಿ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಬಾಕಿ ವಸೂಲಾತಿಯ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತೀವ್ರವಾಗಿ ಪರಿಗಣಿಸಿ ಬಾಕಿ ವಸೂಲಿಗಾಗಿ ಮಂಡಳಿಯ ಪ್ರತಿಯೊಂದು ವಿಭಾಗಕ್ಕೆ ಮಾಹೆಯಾನದ ಗುರಿಯನ್ನು ನಿಗದಿಪಡಿಸಲಾಗಿದೆ. ಗುರಿ ಸಾಧಿಸಲು ಕೆ.ಇ.ಬಿ. ಎಲ್ಲ ಪ್ರಯತ್ನ ಮಾಡುತ್ತಿದೆ.

ಕಾಗ್ನಿಸಬಲ್ ಮತ್ತು ನಾನ್ ಕಾಗ್ನಿಸಬಲ್ ಪ್ರಕರಣಗಳಲ್ಲಿ ನೀಡಲಾಗುವ ಹಿಂಬಾಕಿ ಬಿಲ್ಲುಗಳ ಬಗ್ಗೆ ಕೆಲವು ಗ್ರಾಹಕರುಗಳು ಮೇಲ್ಮನವಿ ಸಲ್ಲಿಸಿದ್ದು, ಇವುಗಳನ್ನು ತ್ವರಿತ ಗತಿಯಲ್ಲಿ ವಿಲೇವಾರಿ ಮಾಡಲು ಮಂಡಳಿಯು ಅಪಲೆಟ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮತ್ತು ಕೆಲವು ಗ್ರಾಹಕರುಗಳು ಬಾಕಿ ಹಣದ ಬಗ್ಗೆ ವಿವಾದವನ್ನು ನ್ಯಾಯಾಲಯಗಳಿಗೆ ಕೊಂಡೊಯ್ದಿದ್ದು, ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಬಾಕಿಯಿರುವ ವಿದ್ಯುತ್ ಗ್ರಾಹಕರುಗಳಿಗೆ ವಿದ್ಯುತ್ ಸಂಪರ್ಕ ಬಂದ್ ಮಾಡುವ ಕಾರ್ಯವನ್ನು ಎಲ್ಲಾ ಹಂತಗಳಲ್ಲಿ ಪರಿಶೀಲಿಸಲಾಗುತ್ತಿದೆ. ವಿದ್ಯುತ್ ಬಾಕಿಯನ್ನು ಭೂಕಂದಾಯ (ಲ್ಯಾಂಡ್ ರೆವಿನ್ಯೂ) ವೆಂದು ಪರಿಗಣಿಸಿ ಬಾಕಿ ವಸೂಲಾತಿಗಾಗಿ ಕ.ವಿ.ಮಂ. (ರಿಕವರಿ ಆಫ್ ಡ್ಯೂಸ್) ರೂಲ್ಸ್ 1978ರ ಪ್ರಕಾರ 'ಎ', ಬಿ ಮತ್ತು 'ಸಿ' ಫಾರಂಗಗಳನ್ನು ನೀಡಿ ಬಾಕಿ ವಸೂಲಾತಿಗಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮೈಸೂರಿನಲ್ಲಿ ಹೊಸದಾಗಿ ಪಶುವೈದ್ಯಶಾಲೆ ತೆರೆಯುವುದು

311 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನಲ್ಲಿ ಎಷ್ಟು ಪಶುವೈದ್ಯ ಆಸ್ಪತ್ರೆಗಳಿವೆ, ಅವು ಎಲ್ಲೆಲ್ಲಿ?

ಆ) ಮೈಸೂರಿನ ಕುಂಬಾರಕೊಪ್ಪಲು, ಒಂಟಿಕೊಪ್ಪಲು ಹಾಗೂ ತೊಣಚಿಕೊಪ್ಪಲಿಗೆ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಬೇಕೆಂದು ಸಾರ್ವಜನಿಕರು ಕೋರಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಒಟ್ಟು 11

ವಿವರ ಕೆಳಕಂಡಂತಿವೆ

	ಪಶು ಆಸ್ಪತ್ರೆ		ಪ್ರಾಥಮಿಕ ಚಿಕಿತ್ಸಾಲಯ		ಪಶು ಪಶುಚಿಕಿತ್ಸಾ ಕೇಂದ್ರ
1)	ನಗರ ಪಶು ಆಸ್ಪತ್ರೆ ಧನ್ವಂತ್ರಿರಸ್ತೆ	1)	ಇಂಡಸ್ಟ್ರಿಯಲ್ ಸಬರ್ಬ್	1)	ಇಟ್ಟಿಗೆಗೂಡು
		2)	ಕೆ.ಎ.ಆರ್.ಪಿ.	2)	ಪಡುವಾರ ಹಳ್ಳಿ
3)	ರಾಜೇಂದ್ರನಗರ			3)	ಬೋಗಾದಿ
4)	ಕನ್ನೇಗೌಡನ-ಕೊಪ್ಪಲು			4)	ಹಿನಕಲ್
5)	ಕುಂಬಾರಕೊಪ್ಪಲು				

ಆ)

1) ಕುಂಬಾರಕೊಪ್ಪಲಿನಲ್ಲಿ ಈಗಾಗಲೇ ಒಂದು ಪಶು ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದೆ.

2) ತೊಣಚಿಕೊಪ್ಪಲಿನಲ್ಲಿ ಪಶುವೈದ್ಯ ಸಂಸ್ಥೆ ಪ್ರಾರಂಭಿಸಲು ಕೋರಿಕೆ ಬಂದಿದ್ದು, ಇದನ್ನು 1996-97ನೇ ಸಾಲಿನಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು

3) ಒಂಟಿಕೊಪ್ಪಲಿನಲ್ಲಿ ಪಶುವೈದ್ಯ ಸಂಸ್ಥೆಯನ್ನು ಪ್ರಾರಂಭಿಸಲು ಯಾವ ಕೋರಿಕೆಯೂ ಬಂದಿರುವುದಿಲ್ಲ, ಕೋರಿಕೆ ಬಂದಲ್ಲಿ ಇದನ್ನು ಸಹ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಮೈಸೂರು ನಗರದ ಲೋಕೋಪಯೋಗಿ ಇಲಾಖೆಯ ಕಟ್ಟಡಗಳ ಬಗ್ಗೆ

313 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಕಟ್ಟಡಗಳು ಯಾವುವು?

ಆ) ಈ ಕಟ್ಟಡಗಳ ದುರಸ್ತಿ ಕಾರ್ಯ ಹಾಗೂ ಸುಣ್ಣ ಬಣ್ಣ ಬಳಿಯುವ ಕಾಮಗಾರಿಗಳು ಸಕಾಲಕ್ಕೆ ನಡೆಸಲಾಗುತ್ತಿದೆಯೇ, ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಇ) ಈ ಕಟ್ಟಡಗಳಿಗೆ ದುರಸ್ತಿಕಾರ್ಯ ಹಾಗೂ ಸುಣ್ಣ ಬಳಿಯುವ ಕಾರ್ಯಕ್ಕೆ ಸರ್ಕಾರ ಈ ವರ್ಷದಲ್ಲಿ ಎಷ್ಟು ಹಣ ಕಾಯ್ದಿರಿಸಿದೆ, ಎಷ್ಟು ಹಣ ಖರ್ಚಾಗಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿಗಳು) :

ಅ)	ಸರ್ಕಾರ ವಸತಿಗೃಹಗಳು	75
	ಸರ್ಕಾರದ ಕಛೇರಿ ಕಟ್ಟಡಗಳು	125
	ಒಟ್ಟು	200

ಆ) ಅನುದಾನದ ಲಭ್ಯತೆಗೆ ಅನುಗುಣವಾಗಿ ಆಸ್ಪತ್ರೆ ಕಟ್ಟಡಗಳಿಗೆ ಹೊರತಾಗಿ ಬೇರೆ ಕಟ್ಟಡಗಳಿಗೆ ಸುಣ್ಣ ಬಣ್ಣಗಳನ್ನು ಯೋಜನೇತರ ವೆಚ್ಚದಲ್ಲಿ ಅನುದಾನದ ಕಡಿತವಿರುವುದರಿಂದ ಮಾಡುತ್ತಿಲ್ಲ.

ಇ) ಸರ್ಕಾರದ ಕಛೇರಿ ಕಟ್ಟಡಗಳಿಗೆ 31.50 ಲಕ್ಷ ರೂ.ಗಳು ಮತ್ತು ಸರ್ಕಾರದ ವಸತಿಗೃಹಗಳಿಗೆ 5.00 ಲಕ್ಷ ರೂ.ಗಳು ಒದಗಿಸಿದ್ದು ಅದರ ಪೈಕಿ ಜನವರಿ 96ರವರೆಗೆ 13.69 ಲಕ್ಷ ರೂ.ಗಳು ಮತ್ತು 1.37 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಕದ್ರಾ ಜಲ ವಿದ್ಯುತ್ ಯೋಜನೆ

508 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲಾ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕದ್ರಾ ಜಲವಿದ್ಯುತ್ ಯೋಜನೆಗೆ ಕುವೈತ್ ದೇಶ ಏನಾದರೂ ಆರ್ಥಿಕ ನೆರವು ನೀಡುವುದಾಗಿ ಹೇಳಿದೆಯೇ?

ಆ) ಹಾಗಿದ್ದರೆ ಎಷ್ಟು ನೆರವನ್ನು ನೀಡುವುದಾಗಿ ಹೇಳಿದೆ, ಯಾವಾಗ ನೀಡುವುದು?

ಇ) ಇದುವರೆಗೆ ಎಷ್ಟಾದರೂ ಹಣವನ್ನು ಬಿಡುಗಡೆ ಮಾಡಲಾಗಿದೆಯೇ?

ಈ) ಕಲ್ಕತ್ತಾ ಮುಂಬೈ ನಗರಗಳ ಮಾದರಿಯಲ್ಲಿ ಬೆಂಗಳೂರು ನಗರದಲ್ಲೂ ವಿದ್ಯುತ್ ವಿತರಣೆಯನ್ನು ಬೆಂಗಳೂರು ನಗರದಲ್ಲೂ ವಿದ್ಯುತ್ ವಿತರಣೆಯನ್ನು

ಖಾಸಗಿಯವರಿಗೆ ವಹಿಸಲು ಉದ್ದೇಶಿಸಿದಯೇ? ಇದುವರೆಗೆ ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕುವೈತ್ ದೇಶದ ಕುವೈತ್ ಫಂಡ್ ಫಾರ್ ಅರಬ್ ಎಕನಾಮಿಕ್ ಡೆವೆಲೇಪ್‌ಮೆಂಟ್ ಸಂಸ್ಥೆಯವರು ಕದ್ರಾ ಅಣೆಕಟ್ಟಿನ ಸಿವಿಲ್ ಕಾಮಗಾರಿಗಳ ಸಲುವಾಗಿ ನೆರವನ್ನು ನೀಡಲು 1986ರಲ್ಲಿ ಒಪ್ಪಿರುತ್ತಾರೆ.

ಆ) ಕಾಳಿನದಿ 2ನೇ ಹಂತದ ಕದ್ರಾ ಅಣೆಕಟ್ಟಿನ ಸಿವಿಲ್ ಕಾಮಗಾರಿಗಳಿಲಾಗಿ 7 ಮಿಲಿಯನ್ ಕುವೈತ್ ದಿನಾರದ ಆರ್ಥಿಕ ನೆರವನ್ನು ಸಾಲ ರೂಪದಲ್ಲಿ ಕೊಟ್ಟಿರುತ್ತಾರೆ. ಈ ಆರ್ಥಿಕ ನೆರವು 1987-88ರಲ್ಲಿ ಶುರುವಾಗಿರುತ್ತದೆ.

ಇ) ಈ ಆರ್ಥಿಕ ನೆರವಿನಲ್ಲಿ ಇಲ್ಲಿಯವರೆಗೆ, 3.10 ಮಿಲಿಯನ್ ಕುವೈತ್ ದಿನಾರ (ಅಂದರೆ 28.21 ಕೋಟಿ ರೂ.ಗಳು) ದಷ್ಟು ನೆರವು ಕರ್ನಾಟಕ ವಿದ್ಯುತ್ ನಿಗಮಕ್ಕೆ ಸಾಲದ ರೂಪದಲ್ಲಿ 1988-89ರಿಂದ ಜನವರಿ 1996ರ ವರೆಗೆ ಕೊಟ್ಟಿರುತ್ತಾರೆ.

ಈ) ಇಲ್ಲ

ತಡಸ - ಕುಮಟಾ ರಸ್ತೆ ಅಗಲಗೊಳಿಸುವುದು

214 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಡಸ - ಕುಮಟಾ ರಸ್ತೆ ಅಗಲಗೊಳಿಸುವ ಕೆಲಸ ಯಾವಾಗ ಪ್ರಾರಂಭವಾಗುವುದು;

ಆ) ಸಿರ್ಸಿ - ವಟ್ಟಿ - ಕಾರವಾರ ರಸ್ತೆಗೆ ಈ ವರ್ಷ ಸರ್ಕಾರದಿಂದ ಅನುದಾನ ಬಿಡುಗಡೆಯಾಗುವುದೇ?

ಇ) ಖಾನಾಪುರ - ತಾಳಗುಪ್ಪಾ ರಸ್ತೆ ಅಗಲಗೊಳಿಸುವ ಕೆಲಸ ಯಾವಾಗ ಪ್ರಾರಂಭವಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ತಡಸ - ಕುಮಟಾ ರಸ್ತೆಯ 12.80 ಕಿ.ಮೀ. ಭಾಗವನ್ನು ಅಗಲಗೊಳಿಸುವ ಕೆಲಸವು ಪ್ರಗತಿಯಲ್ಲಿದೆ.

ಆ) 1995-96ನೇ ಸಾಲಿನಲ್ಲಿ ಈ ರಸ್ತೆಯ ಅಭಿವೃದ್ಧಿಗೆ ರೂ. 2.70 ಲಕ್ಷ ಅನುದಾನ ಒದಗಿಸಲಾಗಿದೆ.

ಇ) ಖಾನಾಪುರ - ತಾಳಗುಪ್ಪ ರಸ್ತೆಯ ಒಟ್ಟು 32 ಕಿಮೀ. ಉದ್ದದ ಭಾಗ ಅಗಲಗೊಳಿಸುವ ಕೆಲಸ ಪ್ರಗತಿಯಲ್ಲಿದೆ.

ಅಂಕೋಲ ಕ್ಷೇತ್ರದ ಪ್ರವಾಸಿ ತಾಣ ಕುರಿತು

215 - ಶ್ರೀ ವಿಶ್ವೇಶ್ವರ ಹೆಗಡೆ (ಅಕೋಲ) : ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಕೋಲ ಕ್ಷೇತ್ರದ ಸಿರ್ಸಿ-ಯಲ್ಲಾಪುರ ಅಂಕೋಲ ತಾಲ್ಲೂಕಿನಲ್ಲಿರುವ ಪ್ರವಾಸಿ ತಾಣಗಳೆಷ್ಟು? ಅಧಕ್ಕೆ ಸರ್ಕಾರ ಕಳೆದ ಮೂರು ವರ್ಷದ ಅವಧಿಗೆ ನೀಡಿದ ಅನುದಾನ ಎಷ್ಟು? (ವರ್ಷವಾರು ವಿವರ ನೀಡುವುದು)

ಆ) ಪ್ರವಾಸಿ ತಾಣಕ್ಕೆ ಈ ವರ್ಷ ವಿಶೇಷ ಅನುದಾನ ನೀಡುವ ಉದ್ದೇಶವಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ಸಿರ್ಸಿ, ಯಲ್ಲಾಪುರ, ಅಂಕೋಲ ತಾಲ್ಲೂಕಿನಲ್ಲಿ ಒಟ್ಟು 7 ಸ್ಥಳಗಳನ್ನು ಪ್ರವಾಸೋದ್ಯಮ ನೀತಿಯಲ್ಲಿ ಗುರ್ತಿಸಲಾಗಿದೆ. ಈ ಸ್ಥಳಗಳ ಅಭಿವೃದ್ಧಿಗಾಗಿ ಇಲಾಖೆಯು ಸೊಂಡದಲ್ಲಿ ಪ್ರವಾಸಿ ಸೌಲಭ್ಯ ನಿರ್ಮಾಣಕ್ಕಾಗಿ 1993-94ರಲ್ಲಿ ರೂ. 2.00 ಲಕ್ಷ (ಎರಡು ಲಕ್ಷ)ಗಳನ್ನು ಬನವಾಸಿಯಲ್ಲಿ ಪ್ರವಾಸಿ ಸೌಲಭ್ಯ ನಿರ್ಮಾಣಕ್ಕಾಗಿ ರೂ. 10.00 ಲಕ್ಷಗಳನ್ನು 1992-93ರಲ್ಲಿ ಒದಗಿಸಲಾಗಿದೆ. ಕದಂಬ ಮಹಾದ್ವಾರ ನಿರ್ಮಾಣಕ್ಕಾಗಿ 1994-95ರಲ್ಲಿ ಒಂದು ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಆ) ಇಲ್ಲ.

ಒಳನಾಡು ಮೀನುಗಾರಿಕೆ ಮಾರುಕಟ್ಟೆ ಬಲವರ್ಧನ ಯೋಜನೆ

501 - ಶ್ರೀ ವಸಂತ ವಿ. ಸಾಲಿಯಾನ್ (ಕಾಪು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಒಳನಾಡು ಮೀನುಗಾರಿಕೆ ಮಾರುಕಟ್ಟೆ ಬಲವರ್ಧನ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ಮಂಜೂರಾತಿಯಾದ ಹಣ ಎಷ್ಟು?

ಆ) ಇಲ್ಲಿಯವರೆಗೆ ಆಗಿರುವ ವೆಚ್ಚವೆಷ್ಟು? ಪ್ರಗತಿ ಕುಂಠಿತವಾಗಿದ್ದರೆ ಸರಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಕೆ. ಜಯಕುಮಾರ್ ಹೆಗ್ಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಯೋಜನೆಯಲ್ಲಿ ಒಟ್ಟು ಮಂಜೂರಾದ ರೂ. 98.00 ಲಕ್ಷಗಳಲ್ಲಿ ರೂ.40.00 ಲಕ್ಷಗಳನ್ನು 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.

ಆ) ರೂ. 8.61 ಲಕ್ಷಗಳು ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದ ಹಾಲು ಶೀಥಲೀಕರಣ ಘಟಕ

559 - ಶ್ರೀ ಬಿ.ಎಸ್ ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದ ಹಾಲು ಶೀಥಲೀಕರಣ ಘಟಕ (ಚಿಲ್ಲಿಂಗ್ ಸೆಂಟರ್) ಪ್ರಾರಂಭಿಸಿದ್ದು ಯಾವಾಗ; ಮತ್ತು ಇದಕ್ಕೆ ಎಷ್ಟು ಖರ್ಚು ಮಾಡಲಾಗಿದೆ;

ಆ) ಈ ಘಟಕ ಈಗ ಕಾರ್ಯ ನಿರ್ವಹಿಸುತ್ತಿದೆಯೇ ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಇ) ಈ ಘಟಕದ ಯಂತ್ರೋಪಕರಣಗಳನ್ನು ಪೂರ್ತಿ ಬದಲಾಯಿಸಿ ಹೊಸ ಯಂತ್ರಗಳನ್ನು ಅಳವಡಿಸಲಾಗುವುದೆ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ದಿನಾಂಕ 18-11-1988ರಂದು ಇದಕ್ಕೆ ರೂ. 9.90 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಇಲ್ಲ, ಈ ಕೇಂದ್ರದ ಮಾರ್ಗದಲ್ಲಿ ಶೇಖರಣೆಯಾಗುತ್ತಿದ್ದ ಹಾಲಿನ ಪ್ರಮಾಣವು ಅತೀ ಕಡಿಮೆ ಇದ್ದು ಸಾಗಾಣಿಕೆ ಮತ್ತು ನಿರ್ವಹಣಾ ವೆಚ್ಚ ಅಧಿಕವಾಗಿದ್ದು ಆರ್ಥಿಕವಾಗಿ ನಷ್ಟ ಅನುಭವಿಸುತ್ತಿದ್ದ ಕಾರಣ ಸದರಿ ಕೇಂದ್ರದ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಯಿತು.

ಇ) ಈ ಘಟಕಕ್ಕೆ ಯಂತ್ರೋಪಕರಣಗಳನ್ನು ಬದಲಾಯಿಸಿ 10,000 ಲೀಟರ್ ಸಾಮರ್ಥ್ಯದ ಅಮೋನಿಯಾ ಕಂಪ್ರೆಸರ್ ಪ್ಲಾಂಟ್ ಸ್ಥಾಪಿಸಲು ನಿರ್ಧರಿಸಿದ್ದು ಇದಕ್ಕೆ ಸುಮಾರು ರೂ. 23.00 ಲಕ್ಷ ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದ್ದು ಇದಕ್ಕಾಗಿ ಶಿವಮೊಗ್ಗ ಜಿಲ್ಲಾ ಪರಿಷತ್ತು ಮತ್ತು ಮಲೆನಾಡು ಅಭಿವೃದ್ಧಿ ನಿಗಮದಿಂದಲೂ ಆರ್ಥಿಕ ನೆರವು ಕೋರಲಾಗಿದೆ.

ಕೈಗಾ ಅಣುಶಕ್ತಿ ಕೇಂದ್ರದ ಗೋಪುರ ಕುಸಿದಿರುವುದು

568 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೈಗಾ ಅಣುಶಕ್ತಿ ಕೇಂದ್ರದ ಗೋಪುರ ಕುಸಿದು ಬಿದ್ದದ್ದು ನಿಜವೇ?

ಆ) ಈ ಬಗ್ಗೆ ಎ.ಇ.ಆರ್.ಬಿ ಮತ್ತು ಎ.ಇ.ಸಿ. ವರದಿ ಸಲ್ಲಿಸಿದೆಯೇ?

ಇ) ವರದಿ ಸಲ್ಲಿಸಿದ್ದರೆ ಅದರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ. ವರದಿಯ ಪ್ರತಿಯನ್ನು ನೀಡಲಾಗುವುದೇ?

ಶ್ರೀ ಹೆಚ್.ಕೆ. ಪಾಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವುದಾಗಿ ತಿಳಿದು ಬಂದಿದೆ.

ಇ) ವರದಿಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ತಿಳಿದುಬಂದಿದೆ. ವರದಿಯ ಪ್ರತಿಯು ರಾಜ್ಯ ಸರ್ಕಾರದಲ್ಲಿ ಲಭ್ಯವಿಲ್ಲದ ಕಾರಣ ಪ್ರತಿ ನೀಡಲು ಸಾಧ್ಯವಾಗುತ್ತಿಲ್ಲ.

ರಾಜ್ಯದಲ್ಲಿರುವ ನ್ಯಾಯಾಲಯಗಳಿಗೆ ಸ್ವಂತ ಕಟ್ಟಡದ ಬಗ್ಗೆ

566 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ನ್ಯಾಯಾಲಯಗಳಿಗೆ ಸ್ವಂತ ಕಟ್ಟಡಗಳು ಇರುವುದಿಲ್ಲ (ಪ್ರತ್ಯೇಕವಾಗಿ ಜಿಲ್ಲಾವಾರು ವಿವರ ನೀಡುವುದು) :

ಆ) ಸ್ವಂತ ಕಟ್ಟಡಗಳು ಇಲ್ಲದಿರುವ ನ್ಯಾಯಾಲಯಗಳಿಗೆ ಕಟ್ಟಗಳನ್ನು ಯಾವಾಗ ಒದಗಿಸಲಾಗುವುದು? ಇದಕ್ಕಾಗಿ ಎಷ್ಟು ಹಣ ತೆಗೆದಿರಿಸಲಾಗಿದೆ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 46 (ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಸೂಚಿಸಲಾಗಿದೆ)

ಆ) ಆದಷ್ಟು ತ್ವರಿತವಾಗಿ ಅಂದರೆ ಐದು ವರ್ಷಗಳ ಒಳಗೆ ಒದಗಿಸುವ ಸಾಧ್ಯತೆ ಇದೆ.

1995-96ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ "4059" ಇದರಡಿ ನ್ಯಾಯಾಲಯ ಕಟ್ಟಡಗಳ ನಿರ್ಮಾಣಕ್ಕೆ ರೂ. 450.00 ಲಕ್ಷಗಳನ್ನು ನಿರ್ದಿಷ್ಟ ಕಾಮಗಾರಿಗಳಿಗಾಗಿ ಮತ್ತು 126.00 ಲಕ್ಷ ರೂ.ಗಳನ್ನು ಒಟ್ಟಾರೆ ಅನುದಾನವಾಗಿ ಮೀಸಲಾಗಿರಿಸಿದೆ.

ANNEXURE

Statement showing the courts located in rented buildings

I.	**BANGALORE RURAL DISTRICT, BANGALORE**		**REMARKS**
1.	Munsiff and JMFC., Channapatna	-	Land to be selected.
2.	Munsiff and JMFC., Magadi	-	Land acquisition undr progress.
3.	Munsiff and JMFC., Nelamangala	-	Land acquisition under progress.
4.	Munsiff and JMFC., Kanakapura	-	Under construction.
5.	Munsiff and JMFC., Hosakote	-	Land acquisition under progress
6.	Munsiff and JMFC., Devanahalli	-	Under construction.
II.	**KOLAR DISTRCT:**		
7.	Munsiff and JMFC., Bagepalli	-	Under construction.
8.	Munsiff and JMFC., Shidlaghatta	-	Plans & Estimates
9.	Munsiff and JMFC., Malur	-	Under construction
10.	Munsiff and JMFC., Mulabagal	-	Under construction.
III.	**TUMKUR DISTRICT:**		
11.	Munsiff and JMFC., Turuveker		
12.	Munsiff and JMFC., Koratagere	-	Drawings to be approved
13.	Munsiff and JMFC., Chikkanayakana	-	Under construction
IV.	**MYSORE DISTRICT:**		
14.	Munsiff and JMFC., T. Narasipura	-	Under construction.
15.	Munsiff and JMFC., Periyapatna	-	Under construction
16.	Munsiff and JMFC., Heggadadevanakote	-	Land has to be identified.
17.	Munsiff and JMFC., Gundlupet	-	Land acquisition under progress
V.	**SHIMOGA DISTRICT :**		
18.	Munsiff and JMFC.,	-	Under construction
19.	Munsiff and JMFC., Shikaripura	-	Under construction
20.	Munsiff and JMFC., Honnali	-	Under construction
21.	Munsiff and JMFC., Soraba	-	Land to be selected.
VI.	**MANDYA DISTRICT:**		
22.	Munsiff and JMFC., K.R. Pet	-	Under construction
23.	Munsiff and JMFC., Malavalli	-	Under construction
VII.	**CHICKMANGALUR DISTRICT:**		
24.	Munsiff and JMFC., Koppa	-	Land finalised and plans & Estimates to b sent to Government.
VIII.	**CHITRADURGA DISTRICT:**		
25.	Civil Judge, Davanagere	-	Under construction

26.	Munsiff and JMFC., Hosadurga	-	Plans and estimates were approved and sent to PWD authorities for execution of work.
27.	Munsiff and JMFC., Harihar		
28.	Additional Munsiff and JMFC., Devanagere	-	Under construction
29.	Munsiff and JMFC., Holakere	-	Land to be selected.
30.	Munsiff and JMFC., Challakere	-	Land to be selected.
31.	Munsiff and JMFC., Jagalur	-	Land to be selected
IX.	HASSAN DISTRICT :		
32.	Munsiff and JMFC., Sakaleshapura	-	Land to be finalised.
33.	Munsiff and JMFC., Arkalgud	-	Under construction.
34.	Munsiff and JMFC., Belur	-	Under construction
X.	BELGAUM DISTRICT :		
35.	Munsiff and JMFC., Khanapura	-	Plans and estimate is sent to Govern ment for approval.
XI.	BIJAPUR DISTRICT:		
36.	Munsiff and JMFC., Banahatti	-	Land to be finalised
37.	Munsiff and JMFC., Bilagi	-	Land to be selected.
XII.	DHARWAD DISTRICT:		
38.	Munsiff and JMFC., Hanagal	-	Under construction
39.	Munsiff and JMFC., Hirekerur	-	Work Completed.
40.	Munsiff and JMFC., Byadgi	-	Land to be finalised.
41.	Munsiff and JMFC., Naragund	-	Plans and estimates approved vide G.O.No. LAW 243 LCE 95 dt. 3.2.96 work has to be taken up by PWD
XIII.	UTTARA KANNADA, KARWAR:		
42.	Munsiff and JMFC., Yellapura	-	Under construction
43.	Munsiff and JMFC., Dandeli	-	Land to be selected
44.	Munsiff and JMFC., Mundgod	-	Under construction
XIV.	GULBARGA DISTRICT :		
45.	Munsiff and JMFC., Aland	-	II Stage work under progress.
XV.	DAKSHINA KANNADA, MANGALORE:		
46.	Civil Judge Court and Munsiff Court at Puttur	-	Under construction

ಕೇಂದ್ರ ಸರ್ಕಾರದಿಂದ ಬಂದ ಹಣವನ್ನು ವೆಚ್ಚ ಮಾಡದಿರುವ ಬಗ್ಗೆ

562 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣಾಭಿವೃದ್ಧಿ ಮತ್ತು ಬಡತನ ನಿವಾರಣೆ ಯೋಜನೆಗಳ ಅನುಷ್ಠಾನಕ್ಕೆಂದು ಕೇಂದ್ರ ಸರ್ಕಾರ ನೀಡಿರುವ ಹಣವನ್ನು ವೆಚ್ಚ ಮಾಡದೇ ರಾಜ್ಯ ಸರ್ಕಾರ ಹಿಂದೆ ಬಿದ್ದಿದೆಯೆಂದು ಕೇಂದ್ರ ಸಚಿವರು ಆರೋಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 1995-96ನೇ ಸಾಲಿಗೆ ಜವಾಹರ್ ರೋಜ್‌ಗಾರ್ ಯೋಜನೆ, ಇಂದಿರಾ ಆವಾಸ್ ಯೋಜನೆ ದಶಲಕ್ಷ ಬಾವಿ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಎಷ್ಟು ಹಣ ನೀಡಿದೆ? ಮತ್ತು ಈ ಹಣದಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹೌದು

ಆ) ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ

(ಜನವರಿ 1996ರ ಅಂತ್ಯದವರೆಗೆ)

			(ರೂ. ಲಕ್ಷಗಳಲ್ಲಿ)
1)	ಜವಾಹರ್ ರೋಜ್‌ಗಾರ್	-	8278.78
2)	ಇಂದಿರಾ ಆವಾಸ್	-	2419.37
3)	ದಶಲಕ್ಷಬಾವಿ	-	1166.27
4)	ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ	-	1268.26
	ಖರ್ಚು ಮಾಡಿರುವ ಹಣ		
1)	ಜವಾಹರ್ ರೋಜ್‌ಗಾರ್	-	10183.03
2)	ಇಂದಿರಾ ಆವಾಸ್	-	2454.24
3)	ದಶಲಕ್ಷಬಾವಿ	-	1363.34
4)	ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ	-	1922.41

ಪತ್ರಿಕೋದ್ಯಮಿಗಳಿಗೆ ನೀಡುತ್ತಿರುವ ಪುರಸ್ಕಾರಗಳ ಬಗ್ಗೆ

688 - ಶ್ರೀ ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪತ್ರಿಕೋದ್ಯಮಿಗಳಿಗೆ ನೀಡಲಾಗುವ ಟಿ.ಎಸ್.ಆರ್. ಪ್ರಶಸ್ತಿ ಆಯ್ಕೆ ಸಮಿತಿಯನ್ನು ರಚಿಸಲಾಗಿದೆಯೇ? (ಸಮಿತಿಯ ವಿವರ ನೀಡುವುದು)

ಆ) ಸಣ್ಣ ಪತ್ರಿಕೆಗಳ ಜಾಹೀರಾತು ದರದಲ್ಲಿ ಪ್ರತಿಶತಃ ಎಷ್ಟು ಹೆಚ್ಚು ಮಾಡಲು ನಿರ್ಧರಿಸಲಾಗಿದೆ?

ಇ) ಇದು ಯಾವಾಗಿನಿಂದ ಜಾರಿಗೆ ಬರುವುದು:

ಈ) ಪತ್ರಕರ್ತರ ಮಾಸಾಶನಕ್ಕೆ ಒಟ್ಟು ಎಷ್ಟು ಅರ್ಜಿಗಳು ಬಂದಿವೆ? ಇದರಲ್ಲಿ ಎಷ್ಟು ಅರ್ಜಿಗಳು ವಿಲೇವಾರಿಯಾಗಿದೆ?

ಉ) ಅಧಿಕೃತ ಪತ್ರಕರ್ತರಿಗೆ ನೀಡಲಾಗುವ ಬಸ್ ಕೂಪನ್ ಹಣವನ್ನು ಹೆಚ್ಚಿಸುವ ತೀರ್ಮಾನವೇನನ್ನಾದರೂ ಸರ್ಕಾರ ತೆಗೆದುಕೊಂಡಿದೆಯೇ? ಹಾಗಿದ್ದಲ್ಲಿ ಎಷ್ಟು ಹಣದಿಂದ ಎಷ್ಟು ಹಣದವರೆಗೆ ಹೆಚ್ಚಿಸಲಾಗುವುದು.

ಊ) ಯಾವಾಗಿನಿಂದ ಜಾರಿಗೆ ಬಂದಿದೆ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ರಚಿಸಲಾಗಿದೆ.

ನ್ಯಾಯಮೂರ್ತಿ ಶ್ರೀ ಇ.ಎಸ್. ವೆಂಕಟರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯಲ್ಲಿ ಶ್ರೀ ಬಿ.ವಿ. ಮಲ್ಲಿಕಾರ್ಜುನಯ್ಯ ಅಧ್ಯಕ್ಷರು, ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ, ಬೆಂಗಳೂರು. ಶ್ರೀ ಕೆ. ಶ್ರೀಧರ ಆಚಾರ್, ಅಧ್ಯಕ್ಷರು, ಬೆಂಗಳೂರು ಪ್ರೆಸ್ ಕ್ಲಬ್, ಶ್ರೀ ಸಿ.ವಿ. ರಾಜಗೋಪಾಲ್ ಹಿರಿಯ ಪತ್ರಕರ್ತರು, ಬೆಂಗಳೂರು, ಶ್ರೀ ಹೆಚ್.ಎನ್. ಷಡಾಕ್ಷರಪ್ಪ, ಸಂಪಾದಕರು, ಜನತಾವಾಣಿ, ದಾವಣಗೆರೆ ಸದಸ್ಯರಾಗಿರುವ ಈ ಸಮಿತಿಯ ಸದಸ್ಯ-ಕಾರ್ಯದರ್ಶಿಯಾಗಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರು ಇರುವರು.

ಆ) ಪ್ರತಿಶತಃ 25ರ ದರದಲ್ಲಿ ಹೆಚ್ಚಿಸಲಾಗಿದೆ.

ಇ) ದಿನಾಂಕ: 1-11-1995ರಿಂದ ಜಾರಿಗೊಳಿಸಲಾಗಿದೆ.

ಈ) ಜನವರಿ 1996ರವರೆಗೆ 171 ಅರ್ಜಿಗಳು ಬಂದಿದ್ದು, ಅದರಲ್ಲಿ 155 ಪತ್ರಕರ್ತರಿಗೆ ಮಾಸಾಶನ ಮಂಜೂರು ಮಾಡಲಾಗಿದೆ.

ಉ) ಇದುವರೆಗೆ ಮಾನ್ಯತೆ ಪಡೆದ ಪತ್ರಕರ್ತರಿಗೆ ಶೇ. 50ರ ರಿಯಾಯಿತಿಯಲ್ಲಿ ಬಸ್ ಕೂಪನ್‌ಗಳನ್ನು ನೀಡಲಾಗುತ್ತಿತ್ತು ಸರ್ಕಾರದ ಆದೇಶ ಸಂಖ್ಯೆ : ಐಟಿವೈ 55 ವಾಪ್ರಪ 94, ದಿನಾಂಕ: 23-9-1995ರ ಆದೇಶದಲ್ಲಿ ಸರ್ಕಾರವು ಪ್ರತಿ ಪತ್ರಕರ್ತರಿಗೆ ರೂ. 500 ಬೆಲೆಯ ಬಸ್ ಕೂಪನ್‌ಗಳನ್ನು ಮಂಜೂರು ಮಾಡಿದೆ.

ಊ) ದಿನಾಂಕ: 23-9-1995ರಂದು ಸರ್ಕಾರದ ಆದೇಶ ಹೊರಡಿಸಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 22ನೇ ತಾರೀಖು ಪ್ರಶ್ನೋತ್ತರ ನಡೆಯತಕ್ಕಂಥ ಸಂದರ್ಭದಲ್ಲಿ ಜಯಮಹಲ್ ಕ್ಷೇತ್ರದ ಸದಸ್ಯರಾದ ಶ್ರೀ ಕೃಷ್ಣಪ್ಪನವರ ಪ್ರಶ್ನೆ ಇತ್ತು ಅವರು ಗೈರು ಹಾಜರಾಗಿದ್ದರು. ನಾನು ಆ ವಿಚಾರದಲ್ಲಿ ಸ್ವಲ್ಪ ಸಿಟ್ಟಿನಲ್ಲಿ ಅವರ ಪ್ರಶ್ನೆಗಳನ್ನು ಪಟ್ಟಿಯಲ್ಲಿ ತರಬೇಡಿ ಎಂದು ಹಾಳಿದ್ದೆ. ಎರಡು ಮೂರು ಸಾರಿ ಗೈರು ಹಾಜರಾಗಿದ್ದರ ಬಗ್ಗೆ ಶ್ರೀಯುತ ಕೃಷ್ಣಪ್ಪನವರು ನನ್ನನ್ನು ಭೇಟಿಯಾಗಿ ನನ್ನ ಕ್ಷೇತ್ರದಲ್ಲಿ ಆವೊತ್ತು ಯಾವುದೋ ಅನಿವಾರ್ಯ ಕೆಲಸ ಇತ್ತು. ಆದುದರಿಂದ ನಾನು ತಮಗೆ ತಿಳಿಸುವುದಕ್ಕಾಗಲಿಲ್ಲ ಕ್ಷಮಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಿದರು. ಇದರಲ್ಲಿ ಯಾರನ್ನು ಯಾರೂ ಕ್ಷಮಿಸತಕ್ಕಂಥದ್ದು ಏನೂ ಇರುವುದಿಲ್ಲ. ಅವರು ಮೊದಲನೇ ಬಾರಿಗೆ ಆರಿಸಿ ಬಂದಿರತಕ್ಕಂಥವರು ಮತ್ತೆ ಹಿಂದುಳಿದ ವರ್ಗಕ್ಕೆ ಸೇರಿದಂಥ ಒಬ್ಬ ಶಾಸಕರು. ಶಾಸನ ಸಭೆಯ ಕಲಾಪಗಳಿಗೆ ಅಗೌರವ ತೋರಿಸತಕ್ಕಂಥ ಭಾವನೆ

ಇಲ್ಲವೆಂದು ಏನು ಹೇಳಿದ್ದಾರೆ ಆ ಮಾತು ನನಗೆ ಮನವರಿಕೆಯಾಗಿದೆ. ಪೇಪರ್‌ಗಳಲ್ಲಿ ಈ ವಿಚಾರ ಬಹಳ ವ್ಯಾಪಕವಾಗಿ ಚರ್ಚೆ ಆಗಿದ್ದರಿಂದ ಸ್ವಲ್ಪಮಟ್ಟಿಗೆ ಅವರ ಮನಸ್ಸಿಗೆ ಕೂಡ ನೋವಾಗಿದೆ. ಯಾರ ಮನಸ್ಸನ್ನು ನೋಯಿಸುವುದಕ್ಕೆ ನಾನು ಪ್ರತಿಕ್ರಿಯೆ ತೋರಿಸಲಿಲ್ಲ, ಹೊಸ ಸದಸ್ಯರಲ್ಲಿ ಒಂದು ಶಿಸ್ತು ಮೂಡಿಸಬೇಕು, ಕಲಾಪಗಳಲ್ಲಿ ಅವರು ಸಕ್ರೀಯವಾಗಿ ಭಾಗವಹಿಸಬೇಕು. ಅವರು ಪ್ರಶ್ನೆಯನ್ನು ಕಳುಹಿಸಿದ ಮೇಲೆ, ಅವರು ಒಂದು ವೇಳೆ ಬರಲಿಕ್ಕೆ ಆಗದೇಹೋದರೆ ಮೊದಲೇ ತಿಳಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ಹೇಳಿದೆ ಅಷ್ಟೆ. ಈ ವಿಚಾರದಲ್ಲಿ ಪತ್ರಿಕಾ ಮಿತ್ರರಲ್ಲೂ ಕೂಡ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಗೆಳೆಯರಾದ ಕೃಷ್ಣಪ್ಪನವರಿಗೆ, ಅವರ ವ್ಯಕ್ತಿತ್ವಕ್ಕೆ ನಾನು ತೋರಿಸಿರತಕ್ಕಂಥ ಪ್ರತಿಕ್ರಿಯೆಯಿಂದ ಯಾವುದಾದರೊಂದು ತರಹ ನಷ್ಟ ಆಗಿದ್ದರೆ ಅದನ್ನು ಸರಿಪಡಿಸತಕ್ಕಂಥ ಹೊಣೆಯನ್ನು ತಾವೇ ಹೊರಬೇಕು ಎಂದು ಹೇಳಿ ನಾನು ಈ ಮತನ್ನು ಹೇಳುತ್ತೇನೆ. ಈಗ ರಾಜೇಂದ್ರನ್‌ರವರು ಬಂದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಇಬ್ಬರೂ ಒಂದೇ ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆಂದು ಹೇಳಿದ್ದೀರಿ. ಕುಡಿಯುವ ನೀರಿನ ವಿಚಾರ ಚಾಮರಾಜಪೇಟೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ. ಇಬ್ಬರಲ್ಲಿ ಯಾರು ಮೊದಲನೆ ಪ್ರಸ್ತಾಪ ಮಾಡುತ್ತೀರಿ? ನೀವೇ ಇತ್ಯರ್ಥ ಮಾಡಿಕೊಳ್ಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಮತನಾಡುತ್ತೇನೆ.

ಅಧ್ಯಕ್ಷರು : ಅವರು ಮಾತನಾಡುತ್ತಾರೆ, ಆಗಬಹುದೇ ಸುರೇಶ್?

ಶ್ರೀ ಎಸ್. ಸುರೇಶ್ ಕುಮಾರ್ : ಸ್ಟೇಶನ್‌ನಲ್ಲಿ ಏನು ತೊಂದರೆ ಆಗುತ್ತಿದೆ ಎಂದು ನಾನು ಒಂದೆರಡು ನಿಮಿಷ ಆಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು : ಆಯಿತು. ಪ್ರಸ್ತಾಪ ಮಾಡಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(1) ಚಾಮರಾಜಪೇಟೆ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ

+ ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೇ, ಚಾಮರಾಜ್‌ಪೇಟೆ ಕ್ಷೇತ್ರ ಮೂರು ಕ್ಷೇತ್ರಗಳ ಮಧ್ಯದಲ್ಲಿದೆ. ಒಂದು ಕಡೆ ಬಿನ್ನಿಪೇಟೆ, ಮತ್ತೊಂದು ಕಡೆ ಬಸವನಗುಡಿ ಮತ್ತೊಂದು ಕಡೆ ಶಿವಾಜಿನಗರ; ತಮ್ಮ ಕ್ಷೇತ್ರ. ಈ ಮಧ್ಯೆ ಇರತಕ್ಕಂಥ ಕ್ಷೇತ್ರದಲ್ಲಿ ನೀರಿನ ಅಭಾವ ಎಷ್ಟಾಗಿದೆ ಎಂದು ಹೇಳಿದರೆ ಈ ಮೂರು ಕ್ಷೇತ್ರಗಳಲ್ಲಿ ನೀರು ಬರುತ್ತಿದೆ ಆದರೆ ಚಾಮರಾಜಪೇಟೆ ಕ್ಷೇತ್ರದಲ್ಲಿ ನೀರು ಇದುವರೆಗೂ ಸರಾಗವಾಗಿ ಬರುತ್ತಿಲ್ಲ, ಇದು ಕೇವಲ ಆರು ತಿಂಗಳಿಂದಾಚೆಗೆ ಆಗಿದೆ ಎಂದು ನಾನು ಕೇಳಿದ್ದೇನೆ. ಇದಕ್ಕೆ ಕಾರಣ ಏನು ಎಂಬುದು ತಮಗೆ ಗೊತ್ತಾಗಿದೆ. ಹಲವಾರು ಬಾರಿ ಇದರ ಬಗ್ಗೆ ಮನವರಿಕೆ ಮಾಡಿದರೂ ಕೂಡ ಇದು ಆಗಿಲ್ಲ. ನೆನ್ನೆ ಪರಿಸ್ಥಿತಿ ವಿಕೋಪಕ್ಕೆ ಹೋಗಿ ನಮ್ಮಲ್ಲಿರತಕ್ಕಂಥ ಎಲ್ಲಾ ನಾಗರೀಕರು ಅಲ್ಲಿರತಕ್ಕಂಥ ನೀರಿನ ಟ್ಯಾಂಕ್ಸಿಗೆ ದಂಗೆ ಹೋಗಿ ಒಡೆದು ಹಾಕತಕ್ಕಂಥ ಪರಿಸ್ಥಿತಿಗೆ ಹೋಗಿತ್ತು. ನಾಲ್ಕು ದಿವಸದಿಂದ ಸತತವಾಗಿ ಇಡೀ ಚಾಮರಾಜಪೇಟೆಯಲ್ಲಿ ನೀರು ಸರಬರಜಾ ಆಗಿಲ್ಲ, ಇದರ ಬಗ್ಗೆ ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ನಾನು ನೆನ್ನೆಯಿಂದ ಇವೊತ್ತಿನವರೆಗೆ ಮಾಹಿತಿಯನ್ನು ಕಲೆಕ್ಟ್ ಮಾಡಿದ್ದೇನೆ, ಅದರ ಪ್ರಕಾರವಾಗಿ ಬಿನ್ನಿಪೇಟೆ ಕ್ಷೇತ್ರದಲ್ಲಿ ಬೆಳಿಗ್ಗೆ ಮಾಗಡಿ ರೋಡಿಗೆ ಆರರಿಂದ ಹತ್ತೂವರೆ ಗಂಟೊಗೆ

ನೀರು ಕೊಡುತ್ತಿದ್ದಾರೆ. ಹನ್ನೊಂದು ಗಂಟೆಯಿಂದ ಏಳು ಗಂಟೆಯವರೆಗೆ ಗೋರಿಪಾಳ್ಯ, ಬಿನ್ನಿಪೇಟೆ ಕ್ಷೇತ್ರಕ್ಕೆ ನೀರು ಬಿಡುತ್ತಿದ್ದಾರೆ. ಆಜಾದ್ ನಗರಕ್ಕೆ ಬೆಳಿಗೆಗಳು ಗಂಟೆಯಿಂದ ಹನ್ನೊಂದು ಗಂಟೆಯವರೆಗೆ ನೀರು ಬಿಡುತ್ತಿದ್ದಾರೆ. ಹನ್ನೊಂದು ಗಂಟೆಯಿಂದ ಮಧ್ಯಾಹ್ನದವರೆಗೆ ವಿಠಲ್‌ನಗರಕ್ಕೆ ನೀರು ಬಿಡುತ್ತಿದ್ದಾರೆ. ಬಿನ್ನಿಪೇಟೆ ಕ್ಷೇತ್ರದಲ್ಲಿ ಬೆಳಿಗ್ಗೆ ಸತತವಾಗಿ ಏಳು ಗಂಟೆಯಿಂದ ಹತ್ತು ಗಂಟೆಯವರೆಗೆ ನೀರು ಬಿಡುತ್ತಿದ್ದಾರೆ. ಆದರೆ ಚಾಮರಾಜ್‌ಪೇಟೆ ಕ್ಷೇತ್ರದಲ್ಲಿ ಬೆಳಗಿನ ಜಾವ ಮೂರು ಗಂಟೆಗೆ ಹೆಣ್ಣುಮಕ್ಕಳು ಎದ್ದು ಕ್ಯೂನಲ್ಲಿ ನಿಂತರೂ ಕೂಡ ನಾಲ್ಕು ಗಂಟೆಯಿಂದ ಎರಡು ಗಂಟೆಗಳ ಕಾಲ ಕೂಡ ನೀರು ಬರುತ್ತಿಲ್ಲ. ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ.

ಮೊದಲು ಆಲ್ಟರ್‌ನೇಟಿವ್ ಆಗಿ ದಿನ ಬಿಟ್ಟು ದಿನ ನೀರು ಬಿಡುತ್ತೇವೆ ಎಂದು ಹೇಳುತ್ತಿದ್ದರು. ಅದರಿಂದ ಜನರು ನೀರನ್ನು ಆಗ ಸಂಪು ಎಲ್ಲಾ ತುಂಬಿಸಿಕೊಂಡು ಬಳಸಿಕೊಳ್ಳತಕ್ಕ ಪರಿಸ್ಥಿತಿ ಇತ್ತು ಆದರೆ ಅದನ್ನೂ ಕೂಡ ಕಾರಣಾಂತರದಿಂದ ನಿಲ್ಲಿಸಿದ್ದಾರೆ. ಅಲ್ಲಿರತಕ್ಕಂಥ ವಾಲ್‌ಮೆನ್‌ಗಳು ಏನು ಇದ್ದಾರೆ ಅವರುಗಳಿಗೆ ಮಾಹಿತಿ ನೀಡಿ ಅಧಿಕಾರಿಗಳು ಚಾಮರಾಜಪೇಟೆಗೆ ಬರತಕ್ಕಂಥ ನೀರನ್ನು ಅಲ್ಲಿ ಕ್ಲೋಸ್ ಮಾಡಿ ಬೇರೆ ಕ್ಷೇತ್ರಗಳಿಗೆ ಸಂಪಂಗಿ ರಾಮನಗರಕ್ಕೆ ಇತರ ಕಡೆಗೆ ಬರದಹಾಗೆ ಮಾಡಿ, ಸಂಪಂಗಿ ರಾಮನಗರಕ್ಕೆ ಚಾಮರಾಜಪೇಟೆಗೆ ಬರದಹಾಗೆ ಮಾಡಿ ಬಿನ್ನಿಪೇಟೆ ಕ್ಷೇತ್ರಕ್ಕೆ ಈ ವ್ಯವಸ್ಥೆ ಮಾಡಿರುತ್ತಾರೆ. ಇದರಿಂದ ಇಡೀ ಚಾಮರಾಜಪೇಟೆ ಕ್ಷೇತ್ರದಲ್ಲಿ ಇರತಕ್ಕಂಥ ನಾಗರೀಕರು ಬಹಳ ದುಃಖವನ್ನು ಅನುಭವಿಸುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಎರಡು ಗಂಟೆ ಕೂಡ ನೀರು ಸಿಗದೇ, ವಾರಕ್ಕೆ ಎರಡು ದಿವಸ ನೀರು ಸಿಗದೇ ತೊಂದರೆ ಅನುಭವಿಸುತ್ತಿದ್ದಾರೆ. ಟಿಪ್ಪುನಗರದಲ್ಲಿ ಹತ್ತು ಸಾವಿರ ಅಲ್ಪಸಂಖ್ಯಾತರು ಇದ್ದಾರೆ ಆನಂದಪುರ್‌ನಲ್ಲಿ ಸ್ಲಮ್ ಇದೆ. ಆ ಸ್ಲಮ್‌ನಲ್ಲಿರತಕ್ಕಂಥವರು ಬರೀ ಬಡವರು, ಹರಿಜನರು ಇರತಕ್ಕಂಥ ಕೇರಿಗಳು ಏನಿವೆ ಇಲ್ಲಿಗೂ ಕೂಡ ನೀರು ಬರದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಮನೆ ಮಠ ಬಿಟ್ಟು ಎಲ್ಲರೂ ನೀರಿಗೆ ಹೋಗುವಂಥ ಪರಿಸ್ಥಿತಿ ಒದಗಿ ಬಂದಿದೆ.

ನಾನು ಆಗಲೇ ತಮ್ಮ ಹಾಗೂ ವಾಟರ್ ಬೋರ್ಡ್ ಛೇರ್ಮನ್‌ರ ಗಮನಕ್ಕೆ ತಂದಿದ್ದೇನೆ. ಏತಕ್ಕೆ ಈ ರೀತಿ ಆಗುತ್ತದೆ. ಎಂದು ಕೇಳಿದಾಗ ಅವರು ಹೇಳಿದರು ಮೊದಲು ಚಾಮರಾಜ್‌ಪೇಟೆ ಕ್ಷೇತ್ರಕ್ಕೆ ಈ ಬಸವನಗುಡಿಯಿಂದ ಬಂದನಂತರ ನೀರು ಅಲ್ಲಿ ಕೊಟ್ಟು ನಂತರ ಮುಂದಕ್ಕೆ ಹೋಗುತ್ತಿತ್ತು. ಆದರೆ ಈ ವಾಲ್ವಗಳನ್ನೆಲ್ಲಾ ಕ್ಲೋಸ್ ಮಾಡಿ ಬಾಕಿ ಕಡೆ ಬಿಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಈ ರೀತಿ ಆಗುತ್ತಿದೆ. ಆರು ತಿಂಗಳಿಂದ ಈ ರೀತಿ ಪರಿಸ್ಥಿತಿಯಾಗಿದೆ ಎಂಬ ವಿಷಯವನ್ನು ಅವರು ತಿಳಿಸಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅವರ ಪರಿಸ್ಥಿತಿ ಮುಂದುವರೆದರೆ ಇಡೀ ಚಾಮರಾಜಪೇಟೆಯಲ್ಲಿ ಇರತಕ್ಕಂಥ ಜನರು ತಮ್ಮ ಮನೆ ಮುಂದೆ ಬಂದು ಧರಣಿ ಮಾಡತಕ್ಕಂಥ ಪರಿಸ್ಥಿತಿ ಒದಗಿ ಬರುತ್ತದೆ. ಅವರಿಗೆ ನೀರನ್ನು ಕೊಡಬೇಕಾಗುತ್ತದೆ. ಆ ಪರಿಸ್ಥಿತಿ ಬರುತ್ತದೆ ಅದರ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ.

ನಾನು ಇನ್ನೊಂದು ಕೇಳುತ್ತಿದ್ದೇನೆ, ಇಡೀ. ಚಾಮರಾಜ್‌ಪೇಟೆ ಕ್ಷೇತ್ರದಲ್ಲಿ ಇರತಕ್ಕಂಥ ನಾಗರೀಕರಿಗೆ ಬೆಳಿಗ್ಗೆ ಮೂರರಿಂದ ಐದು ಅಥವಾ ನಾಲ್ಕರಿಂದ ಆರು ಗಂಟೆಯ ವರಗೆ ಎರಡು ಗಂಟ ಟೈಮ್ ನೀವು ಏನು ಬಾಕಿ ಕಡೆ ಮಧ್ಯಾಹ್ನದ ಹೊತ್ತು ನೀರನ್ನನು ವಿತರಣೆ ಮಾಡುತ್ತಿದ್ದೀರಿ, ಕೆಲವೊಂದು ಸಾರಿ ವಿತರಣೆ ಟೈಮ್ ನಲ್ಲೂಕೂಡ ಅಲಾಟ್‌ಮೆಂಟ್ ಮಾಡತಕ್ಕಂಥ ಸಂದರ್ಭದಲ್ಲಿ ಡಿಸ್‌ಕ್ರಿಮಿನೇಶನ್ ಮಾಡುತ್ತಿದ್ದೀರಿ. ಬೇರೆ ಕಡೆ ಕ್ಷೇತ್ರಕ್ಕೆ ಹೆಚ್ಚು ನೀರನ್ನು ಒದಗಿಸಿಕೊಟ್ಟು ಈ ಒಂದು ಕ್ಷೇತ್ರಕ್ಕೆ ನೀವು ನೀರು ಇಲ್ಲದಹಾಗೆ ಮಾಡುತ್ತಿದ್ದೀರಿ. ಇದಕ್ಕೆ ಕಾರಣ ಏನು ಎನ್ನತಕ್ಕಂಥ ಪ್ರಶ್ನೆಗೆ ಉತ್ತರ ಕೊಡುವುದಕ್ಕಾಗುತ್ತಿಲ. ದಯವಿಟ್ಟು ತಾವು ಇದರ ಬಗ್ಗೆ ಏನು ಮಾಡುತ್ತಿದ್ದೀರಿ

ಎಂಬುದನ್ನು ಹೇಳಬೇಕಾಗುತ್ತದೆ. ಬಿ.ಟಿ.ಎಂ. ಲೇಔಟ್ ದೊಡ್ಡ ಲೇಔಟ್ ಅಲ್ಲಿ, ಒಂದು ಹೊಸ ಟ್ಯಾಂಕ್ ಮತ್ತು ಒಂದು ಹಳೆ ಟ್ಯಾಂಕ್ ಇದೆ. ಈ ಹೊಸ ಟ್ಯಾಂಕ್‌ದಿಂದ ಇನ್ನೂರು ಅಡಿ ಪೈಪ್ ಹಾಕಿದರೆ ಚಾಮರಾಜಪೇಟೆ ಕ್ಷೇತ್ರಕ್ಕೆ ಬರತಕ್ಕಂಥ ಪೈಪುಗಳಿಗೆ ಕನೆಕ್ಷನ್ ಬರುತ್ತದೆ ಎಂದು ಒಂದು ವರ್ಷದ ಹಿಂದೆ ತಜ್ಞರು ವರದಿಯನ್ನು ಕೊಟ್ಟಿದ್ದಾರೆ. ತಜ್ಞರು ವರದಿ ಕೊಟ್ಟು ವಾಟರ್ ಬೋರ್ಡ್ ಚೇರ್ಮನ್‌ರಿಗೆ ಕರೆದುಕೊಂಡು ಬಂದು ಅಲ್ಲಿ ಇರತಕ್ಕಂಥ ಇಂಜಿನಿಯರ್ಸ್ ಮತ್ತು ಎಲ್ಲರಿಗೂ ಹೇಳಿದರೂ ಕೂಡ ಇದುವರೆಗೂ ಆ ಕೆಲಸ ಶುರು ಆಗಿಲ್ಲ, ಕಾಂಟ್ರ್ಯಾಕ್ಟರ್ ಕೆಲಸ ಮಾಡಲಿಲ್ಲ, ಇದೇ ರೀತಿ ಅಣ್ಣೆಪೂರ್‌ದಲ್ಲಿ ಮತ್ತು ಸುಧಾಮನಗರದಲ್ಲಿ ಬೈರಸಂದ್ರದಿಂದ ನೀರಿನ ಪೈಪನ್ನು ಕೊಟ್ಟರೆ ನೀರು ಬರುತ್ತದೆ ಎಂದು ಹೇಳಿದರೆ ಅದಕ್ಕೆ ಕೂಡ ಕಾರ್ಯಕ್ರಮ ಹಾಕಿಕೊಂಡಿಲ್ಲ. ಈಗ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗಿದೆ. ತಾವು ದಯವಿಟ್ಟು ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ? ಜನಗಳಿಗೆ ತಾರತಮ್ಯ ಭಾವನೆ ಇಲ್ಲದೆ ಇಡೀ ಬೆಂಗಳೂರಿನಲ್ಲಿ ಇರತಕ್ಕಂಥ ನಾಗರೀಕರಿಗೆ ಸರಿಸಮಾನವಾಗಿ ನೀರು ಬಿಡುವುದಕ್ಕೆ ತಾವು ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ? ಒಂದು ಕ್ಷೇತ್ರದಲ್ಲಿ ಬೆಳಗಿನ ಜಾವ ಹೆಣ್ಣುಮಕ್ಕಳು ನೀರು ತೆಗೆದುಕೊಳ್ವುದು ಮತ್ತೊಂದು ಕ್ಷೇತ್ರದಲ್ಲಿ ಮಧ್ಯಾಹ್ನ ನೀರನ್ನು ತೆಗೆದುಕೊಳ್ಳುವುದು, ಈ ಪರಿಸ್ಥಿತಿಯನ್ನು ತಾವು ತರಬಾರದು ಅವರಿಗೆ ನೀರನ್ನು ವಿತರಣೆ ಮಾಡತಕ್ಕಂಥ ಸಂದರ್ಭದಲ್ಲಿ ಯಾವ ರೀತಿ ಟೈಮ್ಸ್‌ನ್ನು ನೀವು ಅಲಾಟ್ ಮಾಡುತ್ತೀರಿ ಇದನ್ನು ಕೂಡ ನೀವು ದಯವಿಟ್ಟು ಸಭೆಗೆ ಹಾಗೂ ನಾಗರೀಕರಿಗೆ ತಿಳಿಸಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ನಿನ್ನೆ ಏನು ಚಾಮರಾಜ್‌ಪೇಟೆದಲ್ಲಾ ಆಗಿದೆ. ಇವೊತ್ತು ಅಥವಾ ನಾಳೆ ರಾಜಾಜಿನಗರದಲ್ಲೂ ಕೂಡ ಇದೇ ಪರಿಸ್ಥಿತಿ ಆಗುತ್ತದೆ. ಕಳೆದ ನಾಲ್ಕು ಅಥವಾ ಆರು ದಿವಸದಿಂದ ನೀರು ಬರದೇ ಇರುವಂಥ ಪ್ರದೇಶಗಳು ರಾಜಾಜಿನಗರದಲ್ಲಿ ಬಹಳಷ್ಟು ಇವೆ. ಕೇಳಿದರೆ ನೀರು ಇದೆ ಕರೆಂಟ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ವಿಶೇಷವಾಗಿ ಹೊಸಳ್ಳಿಕಡೆಯಿಂದ ನಮಗೆ ನೀರು ಬರಬೇಕು. ಆ ನೀರು ಬರುವುದ್ಕಕೆ ಕರೆಂಟ್ ಇಲ್ಲ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆ ಬರದ ಹಾಗೆ ನೋಡಿಕೊಳ್ಳುತ್ತೇವೆ, ಅದಕ್ಕೆ ಕರಂಟ್ ಕೊಡುತ್ತೇವೆ ಎಂದು ಬೆಂಗಳೂರಿನಲ್ಲಿ ಆ ಭಾಗದಲ್ಲಿ ಕರೆಂಟ್ ಕೊಡುತ್ತಿಲ್ಲ, ಇವೊತ್ತು ಬೆಳಿಗ್ಗೆ ನಾನು ಕೆ.ಇ.ಬಿ. ಚೀಫ್ ಇಂಜಿನಿಯರ್ ವಿಜಯ್‌ಭಾಸ್ಕರನ್‌ರವರಿಗೆ ಫೋನ್ ಮಾಡಿದರ ಇದು ನನ್ನ ಕೆಲಸ ಅಲ್ಲ, ಇದು ಜೂನಿಯರ್ ಇಂಜಿನಿಯರ್‌ರವರ ಕೆಲಸ ಎಂದು ಇಷ್ಟು ಬೇಜವಾಬ್ದಾರಿಯಿಂದ ಉತ್ತರವನ್ನು ಅವರು ಇವೊತ್ತು ಕೊಟ್ಟಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ಕಳೆದ ನಾಲ್ಕೈದು ದಿವಸಗಳಿಂದ ನೀರು ಬಂದಿಲ್ಲ ವಿಶೇಷವಾಗಿ ರಾಜಾಜಿನಗರಕ್ಕೆ ನೀರು ಬರುತ್ತಿಲ್ಲ, ಅಲ್ಲೆ ಕರೆಂಟನ್ನು ಪಂಪಿಂಗ್ ಸ್ಟೇಶನ್‌ಗೆ ಸರಿಯಾಗಿ ಕೊಟ್ಟು ನೀರು ಬರುವ ರೀತಿಯಲ್ಲಿ ಮಾಡದೇ ಇದ್ದರೇ ಚಾಮರಾಜ್‌ಪೇಟೆಯಲ್ಲಿ ಏನು ಮಾಡಿದ್ದಾರೆ ಅದೇ ರೀತಿಯಲ್ಲಿ ರಾಜಾಜಿ ನಗರದಲ್ಲಿ ಕೂಡ ಮಾಡುತ್ತಾರೆ ಹಾಗೂ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗುತ್ತದೆ ಎಂದು ನಮಗೆ ಕಾಣುತ್ತಿದೆ. ದಯವಿಟ್ಟು ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಉತ್ತರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಬಿನ್ನಿಪೇಟೆ ನನ್ನ ಹಳೆಯ ಕ್ಷೇತ್ರ. ವಸ್ತು ಸ್ಥಿತಿಯ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಒಂದು ಕಡೆ ವಿದ್ಯುಚ್ಛಕ್ತಿ ಧಾರಾಳವಾಗಿ ಕೊಡುತ್ತೇವೆ ಎಂದು ಹೇಳುತ್ತೀರಿ. ಮತ್ತೊಂದು ಕಡೆ ನೀರು ಧಾರಾಳವಾಗಿ ಕೊಡುತ್ತೇವೆ ಎಂದು ಹೇಳುತ್ತೀರಿ. ಬೆಂಗಳೂರು ನಗರದಲ್ಲಿ

ಅನೇಕ ಕಡೆ ನೀರಿನ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಇದನ್ನು ಸರಿಪಡುಸುವುದಕ್ಕೆ ಪ್ರಾಮಾಣಿಕನಾದ ಪ್ರಯತ್ನವನ್ನು ನೀವು ಮಾಡಿ.

ಸುಮ್ಮನೇ ಬರೀ ಹೇಳಿಕೆಯನ್ನು ಕೊಡುವುದರಿಂದ ಪ್ರಯೋಜನ ಆಗುವುದಿಲ್ಲ. ಈ ನಿಟ್ಟಿನಲ್ಲಿ ಪ್ರಾಮಾಣಿಕವಾದ ಪ್ರಯತ್ನ ಆಗಬೇಕು. ನನಗನ್ನಿಸುತ್ತದೆ ಬೆಂಗಳೂರು ಸುತ್ತ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳ ಜಂಬೂಸವಾರಿ ನಡೆದು 12 ಕಲ್ಲುಗಳನ್ನು ನೆಟ್ಟು ಶಂಕುಸ್ಥಾಪನೆ ಮಾಡಿದಿರಿ, ಉದ್ಘಾಟನೆಯನ್ನು ಮಾಡಿದಾಗ ಪ್ರತಿ ಕ್ಷೇತ್ರದಲ್ಲೂ ಮಾನ್ಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ, ಪಾದ ಯಾತ್ರೆ ಮಾಡುತ್ತಿದ್ದಾರೆ ಎನ್ನುತ್ತಿದ್ದಾಗ ಜನರು ನಮಗೆ ಸ್ವರ್ಗವೇ ಇಲ್ಲಿಗೆ ಇಳಿಯಿತೇನೋ ಎಂದು ತಿಳಿದುಕೊಂಡಿದ್ದರು. ಆದರೆ ಇವೊತ್ತು ಕುಡುಯುವುದಕ್ಕೆ ನೀರು ಸಿಗುತ್ತಿಲ್ಲ, ಹೆಣ ಸುಡುವುದಕ್ಕೆ ವಿದ್ಯುತ್ ಇಲ್ಲ, ಏನು ಪರಿಸ್ಥಿತಿ ಇವೊತ್ತು ಬಂದೊದಗಿದೆ, ಅದರ ಬಗ್ಗೆ ಹೇಳಿ.

ಉಪಾಧ್ಯಕ್ಷರು : ಶ್ರೀ ರೋಷನ್ ಬೇಗ್‌ರವರೇ ಮಾನ್ಯ ಸದಸ್ಯರಿಗೆ ಉತ್ತರ ಕೊಡಿ.

ಶ್ರೀ ಆರ್. ರೋಶನ್ ಬೇಗ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಕೆಲವೊಂದು ವಿಷಯಗಳನ್ನು ಇಲ್ಲಿ ಹೇಳಿದ್ದಾರೆ. ಈ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಸದನದಲ್ಲಿ ವಿವರವಾಗಿ ಒಂದು ಹೇಳಿಕೆಯನ್ನು ನಾಳೆ ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಇವೊತ್ತೇ ಬಿ.ಡಬ್ಲ್ಯೂ. ಎಸ್.ಎಸ್.ಬಿ.ಯವರನ್ನು ಮತ್ತು ಕೆ.ಇ.ಬಿ. ಯವರನ್ನು ಕರೆಯಿಸಿ ಇದರ ಬಗ್ಗೆ ಅವರಿಗೆ ಒಂದು ಸೂಚನೆಯನ್ನು ಕೊಡಿ. ಏಕೆಂದರೆ ಇವೊತ್ತು ರಾತ್ರಿ ನಾವು ಮನೆಗೆ ಹೋಗುವುದಕ್ಕೆ ತುಂಬಾ ಕಷ್ಟವಾಗುತ್ತದೆ.

ಶ್ರೀ ಆರ್. ರೋಶನ್ ಬೇಗ್ : ಖಂಡಿತ, ಖಂಡಿತ ಮಾಡುತ್ತೇನೆ.

(2) ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವುದರಿಂದ ಸತ್ಯಾಗ್ರಹ

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಕಳೆದ 19-02-96ರಿಂದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುತ್ತಿರತಕ್ಕಂಥವರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಕಳೆದ ನಾಲ್ಕು ದಿವಸಗಳಿಂದ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದು ಈಗಾಗಲೇ 8 ಜನರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಮಾನ್ಯ ಸದಸ್ಯರಾದ ಯೋಗಿಶ್‌ಭಟ್‌ರವರು ಸರ್ಕಾರದ ಗಮನ ಸೆಳೆದಾಗ ಮಾನ್ಯ ಮುಖ್ಯಮಂತ್ರಿಗಳು ಆ ಸಮಸ್ಯೆ ನಮ್ಮ ಗಮನಕ್ಕೆ ಬಂದಿದ್ದು ಅದನ್ನು ಬಗೆಹರಿಸುತ್ತೇವೆ ಎಂದು ಹೇಳಿದರು. ಆದರೆ ಇದುವರೆಗೂ ಕೂಡ ಅದರ ಬಗ್ಗೆ ಗಮನಹರಿಸಿ ಪರಿಹಾರವನ್ನು ಮಾಡಲಿಲ್ಲ, ಇದರ ಬದಲು ಅಮರಣಾಂತ ಉಪವಾಸವನ್ನು ಅಧ್ಯಾಪಕರು ಕೈಗೊಂಡು 8 ಜನರು ಆಸ್ಪತ್ರೆಗೆ ದಾಖಲಾಗುವಂಥ ಗಂಭೀರವಾದ ಪರಿಸ್ಥಿತಿ ಉಂಟಾಗಿದೆ. ಈ ಅಧ್ಯಾಪಕರುಗಳು ಸುಮಾರು ಒಂದು ವರ್ಷದಿಂದ ನಮ್ಮನ್ನು ಖಾಯಂ ಮಾಡಿ ಎಂದು ಹೋರಾಟ ನಡೆಸುತ್ತಿದ್ದಾರೆ. ಕಳೆದ ವರ್ಷದ ಫೆಬ್ರವರಿ ತಿಂಗಳಲ್ಲಿ ಅವರು ಹೋರಾಟ ಮಾಡಲು ಪ್ರಾರಂಭ ಮಾಡಿದಾಗ ಸರ್ಕಾರದ ಕಡೆಯಿಂದ ಮಾನ್ಯ ಮುಖ್ಯಮಂತ್ರಿಗಳೇ ಈ ಸಮಸ್ಯೆಯನ್ನು ಪರಿಹರಿಸುತ್ತೇನೆಂದು ಅವರಿಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಈ ರೀತಿ ಆಶ್ವಾಸನೆ ಕೊಟ್ಟಿದ್ದರಿಂದ ಅವೊತ್ತು ಅವರು ಉಪವಾಸ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಂಡಿದ್ದರು. ಇದಾದ ಮೇಲೆ

ಒಂದು ವರ್ಷವಾದರೂ ಕೂಡ ಅವರ ಸಮಸ್ಯೆಯ ಕಡೆ ಗಮನಹರಿಸಿಲ್ಲವಾದ ಕಾರಣ ಮತ್ತೆ 19ನೇ ತಾರೀಖಿನಿಂದ ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡಿದರು.

ಆ ಸಮಯದಲ್ಲಿ ಮಾನ್ಯ ಸದಸ್ಯರೊಬ್ಬರು ಪ್ರಶ್ನೆ ಎತ್ತಿದಾಗ ನಮ್ಮ ಗಮನಕ್ಕೆ ಬಂದಿದೆಯೆಂದರು, ಆದರೆ ಇವೊತ್ತಿನವರೆಗೂ ಅವರ ಸಮಸ್ಯೆ ಪರಿಹಾರವಾಗದೇ ಗಂಭೀರವಾದ ಪರಿಸ್ಥಿತಿ ಉಂಟಾಗಿದೆ. ಅವರು ಸುಮಾರು ವರ್ಷದಿಂದ ಅರೆಕಾಲಿಕ ಶಿಕ್ಷಕರಾಗಿ ದುಡಿಯುತ್ತಿದ್ದಾರೆ, ಇದರ ಜೊತೆಗೆ ಸರ್ಕಾರದವರು ಅಲ್ಲಿ ಸಾವಿರಾರು ಜನರು ಕೆಲಸ ಮಾಡುತ್ತಿರುವ ಕಾರಣ ಅವರೆಲ್ಲರನ್ನೂ ಖಾಯಂ ಮಾಡುವುದಕ್ಕಾಗುವುದಿಲ್ಲವೆನ್ನುತ್ತಿದ್ದಾರೆ. ಈ ವಿಷಯದಲ್ಲಿ ಸರ್ಕಾರ ಒಂದು ವಿಚಾರವನ್ನು ಗಮನಿಸಬೇಕು, ವೃತ್ತಿ ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರತಕ್ಕಂಥ ಎಲ್ಲಾ ಉಪನ್ಯಾಸಕರು ಮತ್ತು ಸ್ಟಾಫ್ ಏನಿದ್ದಾರೆ ಅವರನ್ನು ಖಾಸಗಿಯವರು ಬೇರೆ ಕಾಲೇಜುಗಳಿಂದ ದೇಣಿಗೆಯನ್ನು ಪಡೆದುಕೊಂಡು ಪಾಠವನ್ನು ಮಾಡುತ್ತಿದ್ದಾರೆ. ಆದರೆ ಸರ್ಕಾರ ಅವರೆಲ್ಲನ್ನೂ ಕೂಡ ಅರೆಕಾಲಿಕ ಶಿಕ್ಷಕರು ಎಂದು ತಿಳಿದುಕೊಂಡು ಅದನ್ನು ಮುಂದಿಟ್ಟುಕೊಂಡು ಹೆಚ್ಚು ಜನ ಇರುವುದರಿಂದ ಸಮಸ್ಯೆ ಪರಹಾರ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಈ ರೀತಿಯಲ್ಲಿ ಸರ್ಕಾರದವರು ಆಲೋಚನೆಯನ್ನು ಮಾಡುತ್ತಿದ್ದಾರೆ. ಆದರೆ ಅಲ್ಲಿ ನಿಜವಾಗಿರತಕ್ಕಂಥವರು ಅಂದರೆ ವೃತ್ತಿ ಶಿಕ್ಷಣ್ ತರಬೇತಿ ಸಂಸ್ಥೆಯಲ್ಲಿ ವಾಸ್ತವವಾಗಿ ಅರೆಕಾಲಿಕ ಶಿಕ್ಷಕರಾಗಿ ಸಂಪೂರ್ಣವಾಗಿ ಅದರ ಮೇಲೆ ತಮ್ಮ ಜೀವನದ ಆಧಾರವಾಗಿ ಇಟ್ಟುಕೊಂಡು ಕೆಲಸ ಮಾಡತಕ್ಕವರ ಸಂಖ್ಯೆ 2361 ನೌಕರರು ಮಾತ್ರ ಆದರೆ ಸರ್ಕಾರದವರು ಜಾಸ್ತಿ ಇದ್ದಾರೆ ಎಂದು ಹೇಳುತ್ತಿದ್ದಾರೆ. ಅವರುಗಳು ಯಾರು ಎಂದರೆ ವಾಸ್ತವವಾಗಿ ಬೇರೆ ಬೇರೆ ಕಾಲೇಜುಗಳಿಂದ ದೇಣಿಗೆಯನ್ನು ತೆಗೆದುಕೊಂಡು ಮಾಡುತ್ತಾ ಇರುವವರು, ಅವರ ಹೆಸರಿನಲ್ಲಿ ಸಂಬಳವನ್ನು ಡ್ರಾ ಮಾಡಿಕೊಂಡು ಸಂಬಂಧಪಟ್ಟವರು ದುರುಪಯೋಗಪಡಿಸಿಕೊಳ್ಳುತ್ತಿರುವ ಪರಿಸ್ಥಿತಿ ಇದೆ. 1977ರಿಂದಲೂ ಪ್ರತಿ ವರ್ಷ 8 ತಿಂಗಳು ಕೆಲಸ ಮಾಡುತ್ತಿರತಕ್ಕಂಥವರಿಗೆ ಯಾವ ಕೆಲಸದ ಭದ್ರತೆ ಇರುವುದಿಲ್ಲ, ಅವರಿಗೆ ಸಂಬಳವೂ ಕೂಡ ನಿಗಧಿಯಾಗಿಲ್ಲ, ಇಂಥ ಒಂದು ಗಂಭೀರ ಪರಿಸ್ಥಿತಿಯ ವಿರುದ್ಧ 2 ವರ್ಷಗಳಾದ ಹೋರಾಟ ಮಾಡುತ್ತಿದ್ದರೂ ಕೂಡ ಸರ್ಕಾರ ಇದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದರೂ ಸಹಿತ ಇದುವರೆಗೂ ಆ ಸಮಸ್ಯೆಯನ್ನು ಪರಿಹಾರ ಮಾಡದೇ ಮಾಡಲಿಕ್ಕೆ ಆಗದೇ ಈಗ ಇದು ಗಂಭೀರ ಪರಿಸ್ಥಿತಿಗೆ ಹೋಗಿ ಇವೊತ್ತು 8 ಜನ ಆಸ್ಪತ್ರೆಗೆ ದಾಖಲಾಗಿದ್ದಾರೆ ಸರ್ಕಾರ ಈ ಸಮಸ್ಯೆಗೆ ತಕ್ಷಣ ಪರಿಹಾರವನ್ನು ಕಂಡುಹಿಡಿದು ಸಮಸ್ಯೆಯನ್ನು ಬಗೆಹರಿಸಬೇಕು ಎಂದು ತಮ್ಮ ಮುಖಾಂತರ ಸಂಬಂಧಪಟ್ಟ ಸಚಿವರಲ್ಲಿ ಒತ್ತಾಯ ಮಾಡುತ್ತಿದ್ದೇನೆ, ಸರ್ಕಾರದ ಕಡೆಯಿಂದ ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕು. ಈಗಾಗಲೇ 8 ಜನರು ಆಸ್ಪತ್ರೆಗೆ ದಾಖಲಾಗಿದ್ದಾರೆ, ಸಂಬಂಧಪಟ್ಟ ಸಚಿವರು ಖುದ್ದಾಗಿ ಹೋಗಿ ಅವರನ್ನು ಖುದ್ದು ಮಾತನಾಡಿಸಿ ಅವರ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವತ್ತ ಪ್ರಯತ್ನ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರದವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಹೋದ ವರ್ಷವೂ ಕೂಡ ಅರೆಕಾಲಿಕ ಶಿಕ್ಷಕರು ಬಹಳ ಬೇಡಿಕೆಯನ್ನು ಸಲ್ಲಿಸಿದ್ದರು. ಈ ಬೇಡಿಕೆಗೆ ಸರ್ಕಾರದವರು ಒಂದು ಸ್ಪಷ್ಟ ಭರವಸೆಯನ್ನು ಕೊಟ್ಟು ಬೇಡಿಕೆಗಳನ್ನು ಈಡೇರಿಸುತ್ತೇವೆ ಉಪವಾಸ ಸತ್ಯಾಗ್ರಹವನ್ನು ಕೈಬಿಡಬೇಕೆಂದು ತಿಳಿಸಿದ್ದರು ಆ ಒಂದು ಸರ್ಕಾರದ ಭರವಸೆಯ ಮೇರೆಗೆ ಉಪವಾಸ ಸತ್ಯಾಗ್ರಹವನ್ನು ಬಿಟ್ಟು ಮತ್ತೆ ಅವರು ತಮ್ಮ ತಮ್ಮ ಕೆಲಸಗಳಿಗೆ ಹೋದರು. ಇಲ್ಲಿಗೆ ಒಂದು ವರ್ಷವಾದರೂ ಕೂಡ ಆ ಭರವಸೆಯನ್ನು ಈಡೇರಿಸತಕ್ಕಂಥ ಒಂದು ಸಣ್ಣ ಪ್ರಯತ್ನವನ್ನೂ ಕೂಡ ಸರ್ಕಾರ

ಮಾಡಲಿಲ್ಲ, ಈ ಭರವಸೆಯ ಬಗ್ಗೆ ಅವರನ್ನು ಕರೆದು ನಿಮ್ಮ ಪರಿಸ್ಥಿತಿ ಏನು? ಮತ್ತೆ ನಮ್ಮ ಪರಿಸ್ಥಿತಿ ಏನು, ಇದಕ್ಕೆ ಏನು ವ್ಯವಸ್ಥೆ ಮಾಡಬೇಕು ಎಂಬುದರ ಕಡೆಗೆ ಇಲ್ಲಿಯವರೆವಿಗೂ ಕೂಡ ಏನೂ ಮಾಡಲಿಲ್ಲ. ಈಗ ವಿಧಿಯಿಲ್ಲದೇ ಅವರುಗಳು ಒಂದು ಅಲ್ಲಿ ಕುಳಿತು ಸತ್ಯಾಗ್ರಹವನ್ನು ಮಾಡುತ್ತಿರುವಾಗ ಯಾರಾದರೂ ಸರ್ಕಾರದ ಕಡೆಯಿಂದ ಅಲ್ಲಿಗೆ ಹೋಗಿ ನಿಮ್ಮ ಪರಿಸ್ಥಿತಿ ಏನು, ಬನ್ನಿ, ಕುಳಿತು ಮಾತನಾಡೋಣ ಎಂದು ಅವರನ್ನು ಕರೆಯತಕ್ಕಂಥ ಸೌಜನ್ಯವನ್ನೂ ಕೂಡ ತಾವು ತೋರಿಸಲಿಲ್ಲ. ಆದಕಾರಣ ಅವರು ಅಮರಣಾಂತ ಉಪವಾಸ ಕೂತಿದ್ದಾರೆ, ನಾಳೆ ಅದು ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಮತ್ತೆ ನೀವು ಭರವಸೆಯನ್ನು ಕೊಡುತ್ತೀರಾ. ಈ ಭರವಸೆಯಿಂದ ಏನೂ ಪ್ರಯೋಜನ ಆಗುವುದಿಲ್ಲ. ತಾವು ಭರವಸೆ ಕೊಡುವಾಗ ಯಾವ ತಿಂಗಳಿನಲ್ಲಿ ಮತ್ತು ಯಾವಾ ದಿನಾಂಕದೊಳಗೆ ಮುಗಿಸುತ್ತೀರಿ ಎಂಬುದಕ್ಕೆ ಒಂದು ಸಮಯ ನಿರ್ಧಾರ ಮಾಡಿ ಹೇಳಬೇಕು. ಇಲ್ಲದಿದ್ದರೆ ಇದರಲ್ಲಿ ಬಹಳ ಗೊಂದಲ, ತೊಂದರೆ ಉಂಟಾಗುತ್ತದೆ. ಪ್ರತಿ ಸಾರಿ ಭರವಸೆ ಕೊಟ್ಟು ಈಡೇರದಿದ್ದರೆ ಮುಂದಿನ ಸಲ ಶಾಸನ ಸಭೆ ಸೇರಿದಾಗ ಮತ್ತೆ ಇದೇ ಪರಿಸ್ಥಿತಿ ಉದ್ಭವವಾಗುತ್ತದೆ.

ಶ್ರೀ ಹೆಚ್.ಎನ್. ಬಸವರಾಜು : ಮಾನ್ಯ ಅಧ್ಯಕ್ಷರೇ, ದಯಮಾಡಿ ಅವರೆಲ್ಲರನ್ನೂ ಕರೆದು ಮಾತನಾಡಲಿಕ್ಕೆ ಹೇಳಿ. ಬಹಳ ಕಷ್ಟ ಪರಿಸ್ಥಿತಿ ಅವರಿಗೆದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿದ್ಯಾರ್ಥಿಗಳಿಗೆ ಪರೀಕ್ಷೆ ಪ್ರಾರಂಭವಾಗುವುದರಲ್ಲಿವೆ. ಈಗ ಸತ್ಯಾಗ್ರಹದಿಂದ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುವ ದೃಷ್ಟಿಯಿಂದ ಇದರ ಬಗ್ಗೆ ಆದಷ್ಟು ಬೇಗ ಕ್ರಮ ಈ ವಿಚಾರದಲ್ಲಿ ಕೈಗೊಳ್ಳಬೇಕು.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ವೃತ್ತ ಪರ ಶಿಕ್ಷಣ ಪದವಿ ಪೂರ್ವ ಕಾಲೇಜು ಎಲ್ಲಿದೆಯೋ ಅಲ್ಲಿ ಇದಕ್ಕೆ ಒಂದು ಅವಕಾಶವಿದೆ. ಇದಕ್ಕೆ ಕೇಂದ್ರ ಸರ್ಕಾರದ ಸಹಾಯ ಕೂಡ ಬರುತ್ತಿದೆ. ಬರೀ ನಮ್ಮ ರಾಜ್ಯ ಸರ್ಕಾರದ ಸಹಾಯ ಮಾತ್ರವಿಲ್ಲ, ಅಲ್ಲೇನಾಗಿದೆಯೆಂದರೆ ಕೆಲವರು ಪಾರ್ಟ್ ಟೈಂ ಲೆಕ್ಚರರ್ಸ್ ಆಗಿ........

ಉಪಾಧ್ಯಕ್ಷರು : ಗಮನ ಸೆಳೆಯುವ ಸೂಚನೆಯೊಳಗೂ ಕೂಡ ಇದು ಬಂದಿದೆ, ಒಟ್ಟಿಗೆ ಉತ್ತರ ಕೊಡಬಹುದಲ್ಲಾ, ಶೂನ್ಯ ವೇಳೆಯಲ್ಲಿ ನೀವು ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಈಗ ಶೂನ್ಯ ವೇಳೆಯಲ್ಲಿ ಇದನ್ನು ಎತ್ತಿದ್ದಾರೆ, ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಬೇರೆ ರೀತಿಯಲ್ಲಿ ಈ ಸದನಕ್ಕೆ ತಂದರೆ ಚರ್ಚೆ ಮಾಡಲಿಕ್ಕೆ ಪರಿಹಾರ ಕಂಡುಹಿಡಿಯಹುದು, ಇದು ಬಹುಶಃ ಕಳೆದ ಸಾರಿ ಸದನ ನಡೆಸುವಾಗ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕೂಡ ಕೇಳಿದ್ದರು. ಇಲ್ಲೇನಾಗಿದೆಯೆಂದರೆ ಈ ವೃತ್ತಿ ಪರ ಶಿಕ್ಷಣವನ್ನು ಎಲ್ಲಿ ಪದವಿ ಪೂರ್ವ ಕಾಲೇಜುಗಳಿವೆ ಅಲ್ಲಿ ಇಟ್ಟುಕೊಂಡಿದ್ದಾರೆ. ಆದಾ ಕಾರಣ ಪದವಿ ಪೂರ್ವ ಕಾಲೇಜುಗಳಲ್ಲಿರತಕ್ಕಂಥವರೇ ಅಲ್ಲಿ ಕೆಲಸ ಮಾಡುತ್ತಾರೆ. ಇನ್ನು ಕೆಲವು ಕಡೆ ಪಾರ್ಟ್ ಟೈಂ ಆಗಿ ತೆಗೆದುಕೊಂಡಿದ್ದಾರೆ. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯದಿಂದ ನಡೆಯುತ್ತಿದೆ. ಆದ್ದರಿಂದ ನನ್ನ ಸಹೋದ್ಯೋಗಿಯಾದ ಮಾನ್ಯ ಗೋವಿಂದೇಗೌಡರ ಹತ್ತಿರ ಈ ವಿಚಾರವಾಗಿ ನಾನು ಮಾತನಾಡಿ ಅವರನ್ನು ಕರೆಸಿಯಿ ಏನಾದರೂ ಮಾಡಿ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್. ಯೋಗಿಶ್ ಭಟ್ : ಮಾನ್ಯ ಅಧ್ಯಕ್ಷರೇ, ನಿಮಗೆ ಒಂದೇ ಒಂದು ಅವಕಾಶ ಕೊಡಿ. ಕಳೆದ ಸಾರಿ ನಾನು ಈ ವಿಚಾರವಾಗಿ ಪ್ರಸ್ತಾಪ

ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ ಅವರು ಇದನ್ನು ನಾನು ಗಮನಿಸುತ್ತೇನೆ ಎಂದಿದ್ದರು. ಪಕ್ಕದ ರಾಜ್ಯಗಳಾದ ಆಂಧ್ರದಲ್ಲಿ ಮತ್ತು ಗೋವಾದಲ್ಲಿಯೂ ಕೂಡ ಕೇಂದ್ರ ಸರ್ಕಾರದ ಅನುದಾನಿತ ಯೋಜನೆಗೆ ರಾಜ್ಯ ಸರ್ಕಾರವೂ ಕೂಡ ಸಮ್ಮತಿ ಕೊಟ್ಟು ಒಪ್ಪಿಗೆ ಕೊಟ್ಟಿದೆಯಲ್ಲದೇ ಅಲ್ಲಿರುವ ಎಲ್ಲಾ ಅರೆಕಾಲಿಕ ಶಿಕ್ಷಕರನ್ನು ಖಾಯಂಗೊಳಿಸಿದೆ. ಆದರೆ ನಮ್ಮ ರಾಜ್ಯದಲ್ಲಿ ಕೇವಲ 2361 ವೃತ್ತಿ ಶಿಕ್ಷಕರನ್ನು ಖಾಯಂ ಗೊಳಿಸಬೇಕಾಗಿದೆ. ಸರ್ಕಾರಕ್ಕೆ ಬರುವ ಹೊರೆ ಇದರಿಂದ ಕೇವಲ 7 ಕೋಟಿ ರೂ.ಗಳು ಮಾತ್ರ.

ಶ್ರೀ ವಾಟಾಳ್ ನಾಗರಾಜ್ : ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು ಸರ್ಕಾರ. ಏನೆಂದರೆ ಅಮರಣಾಂತ ಉಪವಾಸ ಅಲ್ಲಿ ಮಾಡುತ್ತಿರತಕ್ಕಂಥವರು ಮಹಿಳೆ, ಜ್ಞಾನ ತಪ್ಪಿದೆ ಮಹಿಳೆಯನ್ನು ಎತ್ತಿಕೊಂಡು ಹೋಗುತ್ತಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರದ ಪರವಾಗಿ ಮಂತ್ರಿಗಳು ಇಲ್ಲಿ ಕೂಡಲೇ ಅಮರಣಾಂತ ಉಪವಾಸ ನಿಲ್ಲಿಸತಕ್ಕಂಥದ್ದರ ಬಗ್ಗೆ ಮತ್ತು ಇದರ ಬಗ್ಗೆ ಸರ್ಕಾರ ಒಂದು ಸ್ಪಷ್ಟಭರವಸೆಯನ್ನು ಕೊಡಲು ಆದೇಶವನ್ನು ತಾವು ಸಂಬಂಧಪಟ್ಟ ಮಂತ್ರಿಗಳಿಗೆ ಕೊಡಬೇಕು.

ಉಪಾಧ್ಯಕ್ಷರು : ಸರ್ಕಾರದ ವತಿಯಿಂದ ಅಲ್ಲಿಗೆ ಯಾರಾದರೊಬ್ಬರು ಹೋಗಿ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು 20 ಸಾವಿರ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಯಾಗಿದೆ. ಅಮರಣಾಂತ ಉಪವಾಸದಲ್ಲಿ ತೊಡಗಿರತಕ್ಕಂಥವರಲ್ಲಿ ಕೆಲವರು ಪ್ರಜ್ಞೆ ತಪ್ಪಿ ಆಸ್ಪತ್ರೆಯಲ್ಲಿದ್ದಾರೆ. ತಕ್ಷಣ ಇದರ ಬಗ್ಗೆ ಅವರುಗಳನ್ನು ಕರೆಯಿಸಿ ಮಾತನಾಡಬೇಕು, ಸಮಸ್ಯೆ ಇತ್ಯಾರ್ಥಕ್ಕೆ ವ್ಯವಸ್ಥೆಯಾಗಬೇಕು.

ಶ್ರೀ ಡಿ.ಮಂಜುನಾಥ್ : ಪತ್ರಿಕೆಗಳಲ್ಲಿ ವಿಷಯವನ್ ಓದಿದ್ದೇನೆ. ನನ್ನ ಸಹೋದ್ಯೋಗಿಯನ್ನು ಕಂಡು ಇದರ ಬಗ್ಗೆ ಮಾತನಾಡುತ್ತೇನೆ. ಇವೊತ್ತೋ ಅಥವಾ ನಾಳೆ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾತನಾಡಿ ಈ ವಿಷಯದ ಬಗ್ಗೆ ಹೇಳುತ್ತೇನೆ.

(ಈ ಹಂತದಲ್ಲಿ ಬಸವರಾಜು ಯೋಗಿಶ್‌ಭಟ್ ಮತ್ತು ವಾಟಾಳ್ ನಾಗರಾಜ್ ಎದ್ದುನಿಂತು ಇವೊತ್ತೇ ಕರೆಸಿ ಮಾತನಾಡಬೇಕು ಎಂದಾಗ)

ಶ್ರೀ ಡಿ. ಮಂಜುನಾಥ್ : ಆಯಿತು, ಇವೊತ್ತು ಕರೆಯಿಸಿ ನಾನು ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾಳೆಯವರೆವಿಗೂ ಇದು ಹೋಗತಕ್ಕಂಥದ್ದಲ್ಲ, ಇವೊತ್ತು ಕರೆಯಿಸಿ ಮಾತನಾಡಬೇಕು.

ಉಪಾಧ್ಯಕ್ಷರು : ವಾಟಾಳ್ ನಾಗರಾಜ್‌ರವರು ಬಹಳ ಆಗ್ರಹ ಮಾಡುತ್ತಿದ್ದಾರೆ, ಇವೊತ್ತೇ ಕರೆಯಿಸಿ ಮಾತನಾಡಿ.

ಶ್ರೀ ಡಿ. ಮಂಜುನಾಥ್ : ಆಯಿತು, ಇವೊತ್ತೇ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯತ ಉಪಾಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಉಪಾಧ್ಯಕ್ಷರು : ಶೂನ್ಯವೇಳೆಯಲ್ಲಿ ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದಿರಿ.

(3) **ಕಡ್ಡಾಯವಾಗಿ ಕನ್ನಡ ಚಿತ್ರಗಳ ಪ್ರದರ್ಶನ**

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ ನಿಲುವಳಿ ಸೂಚನೆ ಪ್ರಾರಂಭ ಮಾಡುವ ಮೊದಲು ನಾನು ಶೂನ್ಯ ವೇಳೆಯಲ್ಲಿ ಒಂದು ಪ್ರಶ್ನೆ ಕೇಳಬೇಕು ಎಂದು ಮಾನ್ಯ ಅಧ್ಯಕ್ಷರಿಗೆ ಹೇಳಿದ್ದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಇದ್ದಿದ್ದರೆ ಚೆನ್ನಾಗಿ ಇತ್ತು. ಆದರೂ ಕೂಡ ಇವತ್ತು ಆ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಅದಕ್ಕೆ ತಾವೂ ಅವಕಾಶ ಕೊಡಬೇಕು. ಬೆಂಗಳೂರು ನಗರದಲ್ಲಿ ಹಾಗೂ ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಿತ್ರಗಳು ಕಡ್ಡಾಯತ ಪ್ರದರ್ಶನಕ್ಕಾಗಿ ಒಂದು ದೊಡ್ಡ ಹೋರಾಟವನ್ನು ನಡೆಯುತ್ತಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಮಾತನಾಡುತ್ತಿದ್ದಾರೆ ಅದು ಬಹಳ ಇಂಪಾರ್ಟೆಂಟ್.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಅದಕ್ಕೆಕ ಸಚಿವರು ಯಾರದರೂ ಉತ್ತರ ಕೊಡಲಿ. ಚಿತ್ರಮಂದಿರದ ಮಾಲೀಕರಿಗೂ ಮತ್ತು ನಿರ್ಮಾಪಕರಿಗೂ ಭಾರೀ ದೊಡ್ಡ ಅಂತರವೇ ನಿರ್ಮಾಣವಾಗಿದೆ. ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡಬೇಕು ಎನ್ನುವಂಥ ಒಂದು ಸ್ಪಷ್ಟ ನಿಲುವಿನಲ್ಲಿ ನಿರ್ಮಾಪಕರು ಒತ್ತಾಯಮಾಡುತ್ತಿದ್ದಾರೆ. ಇದರ ಜೊತೆಗೆ ಚಿತ್ರ ಮಂದಿರದ ಮಾಲೀಕರುಗಳು ಇದಕ್ಕೆ ವಿರುದ್ಧವಾದಂತಹ ಧೋರಣೆಯನ್ನು ತಳೆದು ಅವರು ಕುಳಿತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಇಬ್ಬರನ್ನು ಕರೆಯಿಸಿ ಮಾತುಕತೆ ಆಡುತ್ತೇವೆ ಎಂದು ಒಂದು ತೀರ್ಮಾನಕ್ಕೆ ಬಂದಿದ್ದರು. ಒಂದು ಬಾರಿ ಸಭೆಯನ್ನು ಕರೆದು ಸಭೆ ಮಾಡಿದರೂ ಸಹ ಈ ಪ್ರಶ್ನೆ ಬಗೆಹರಿಯಲಿಲ್ಲ, ಮತ್ತೆ ಈ ವಿಚಾರ ಬೀದಿಗೆ ಬರತಕ್ಕಂಥ ಪರಿಸ್ಥಿತಿಯಾಗಿದೆ. ವಸ್ತು ಸ್ಥಿತಿ ಇಷ್ಟೆ. ಕರ್ನಾಟಕದಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ತೊಂದರೆಯಾಗಿದೆ. ಇದು ಸತ್ಯ ಬಹಳ ಅತಿರೇಕವಾಗಿ ಪರಭಾಷೆ ಚಿತ್ರಗಳು ಕರ್ನಾಟಕದ ಉದ್ದಗಲಕ್ಕೂ ದಾಳಿ ನಡೆಯುತ್ತಿವೆ. ಇಷ್ಟೊಂದು ಪರಭಾಷೆ ಚಿತ್ರಗಳ ಪ್ರದರ್ಶನ ಬೇರೆ ಯಾವ ರಾಜ್ಯದಲ್ಲೂ ಇಲ್ಲ, ಹಾಗೂ ನಮ್ಮ ಕನ್ನಡ ಚಿತ್ರಗಳ ಪ್ರದರ್ಶನ ಬೇರೆ ಯಾವ ರಾಜ್ಯಗಳಲ್ಲೂ ಇಲ್ಲ, ಕೇರಳದಲ್ಲ, ಆಂಧ್ರದಲ್ಲಿ, ತಮಿಳುನಾಡಿನಲ್ಲಿ, ಪಾಂಡಿಚೇರಿಯಲ್ಲಿ, ಗೋವಾದಲ್ಲಿ ಎಲ್ಲೂ ಇಲ್ಲ, ಆದರೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಪರಭಾಷೆ ಚಿತ್ರಗಳನ್ನು ಪ್ರದರ್ಶನ ಮಾಡಬೇಕು. ಇದರಿಂದ ಇಲ್ಲಿ ಆ ಚಿತ್ರಗಳು ವರ್ಷಾನುಗಟ್ಟಲೆ ಪ್ರದರ್ಶನಗಳು ಹೋಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಹಾಗೂ ಶತಮಾನೋತ್ಸವ ಆಚರಿಸತಕ್ಕಂಥ ಪರಿಸ್ಥಿತಿ ಉದ್ಭವವಾಗಿದೆ. ಇದರಿಂದ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಅಡ್ಡಿಯಾಗಿದೆ. ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡುವ ಬಗ್ಗೆ ಸರ್ಕಾರದವರು. ಈ ಸದನದಲ್ಲಿ ಅನೇಕ ಬಾರಿ ಭರವಸೆ ಕೊಟ್ಟಿದ್ದರು. ಹಿಂದಿನ ಸರ್ಕಾರವಮು ಸೇರಿದಂತೆ ಕೊಟ್ಟಿದ್ದರು. ಹಾಗೂ 6 ತಿಂಗಳ ಕಾಲ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡುತ್ತೇವೆಂದು ಹೇಳಿದ್ದರು. ಇದೆಲ್ಲಾ ಪರಿಸ್ಥಿತಿ ನೋಡಿದಾಗ ಇವತ್ತು ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಅಡ್ಡಿಯಾಗಿದೆ. ಜೊತೆಗೆ ಚಿತ್ರ ಮಂದಿರಗಳ ಪ್ರವೇಶ ದರ ಹೆಚ್ಚು ಕಡಿಮೆ ಕನಿಷ್ಟ ದರ 10. ರೂ. ಹಾಗೂ ಗರಿಷ್ಟ ದರ 40 ರೂಪಾಯಿಯವರೆಗೂ ಆಗಿದೆ. ಇದು ಸಾಧ್ಯವಿಲ್ಲ, ಇದನ್ನು ನಮ್ಮ ವರದಿಯಲ್ಲೂ ಕೊಟ್ಟಿದ್ದೇವೆ. ಗರಿಷ್ಟ ಪ್ರವೇಶದರ ಕೇವಲ 10 ರೂಪಾಯಿ ಸಾಕು. 40-50 ರೂಪಾಯಿಯವರೆಗೆ ಪ್ರವೇಶ ದರವನ್ನು ವಸೂಲುಮಾಡತಕ್ಕಂಥಾದ್ದು ಸರಿಯಲ್ಲ, ಕೆಲವಿ ಚಿತ್ರಮಂದಿರಗಳು ಹವಾನಿಯಂತ್ರಣವೆಂದು ಹೇಳುತ್ತಾರೆ, ಆದರೆ ಅಲ್ಲಿ ಹವಾ ನಿಯಂತ್ರಣ ವ್ಯವಸ್ಥೆ ಇರುವುದಿಲ್ಲ, ಶೌಚಾಲಯಗಳು ಸರಿಯಾಗಿ ಇಲ್ಲ, ಅವುಗಳು ಒಂದು ರೀತಿ ದೊಡ್ಡಿಗಿಂತ ಕಡೆಯಾದ ಸ್ಥಿತಿಯಲ್ಲಿವೆ. ಈಗ ಚಿತ್ರಮಂದಿರಗಳವರಿಗೆ

ಏನಾಗಿದೆ ಎಂದರೆ ನಾವು ಚಿತ್ರಗಳನ್ನು ಪ್ರದರ್ಶನ ಮಾಡದೇ ಇದ್ದರೂ ಚಿಂತೆ ಇಲ್ಲ, ಚಿತ್ರಮಂದಿರಗಳನ್ನು ಒಡೆದು ಹಾಕಿ ಬಹುಮಹಡಿ ಕಟ್ಟಡಗಳನ್ನು ಕಟ್ಟುತ್ತೇವೆ ಎನ್ನುವಂತಹ ಧೋರಣೆಯಲ್ಲಿ ಇದ್ದಾರೆ. ಆದುದರಿಂದ ಸರ್ಕಾರ ಅವರಿಬ್ಬರನ್ನೂ ಕರೆಯಿಸಿ ಪರಿಣಾಮಕಾರಿಯಾಗಿ ಮತ್ತೊಮ್ಮೆ ಮಾತುಕತೆಯಾದ ಸಮಸ್ಯೆಯನ್ನು ಬಗೆಹರಿಸಬೇಕು. ಇದು ಬೀದಿಗೆ ಬಂದು ಗಂಭೀರವಾಂದಂತಹ ಪರಿಸ್ಥಿತಿ ನಿರ್ಮಾಣವಾಗಿ, ಶಾಂತಿಗೆ ಭಂಗವಾಗತಕ್ಕಂಥ ಪರಿಸ್ಥಿತಿ ಬರಬಾರದು. ಆದುದರಿಂದ ಕಡ್ಡಾಯವಾಗಿ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡತಕ್ಕಂಥ ವ್ಯವಸ್ಥೆಯಾಗಬೇಕು ಮತ್ತು ಪರಿಣಾಮಕಾರಿಯಾದಂತಹ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು ಎಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಎಷ್ಟು ನಿಧಾನ ಮಾಡುತ್ತೀರಿ, ಅಷ್ಟೇ ರೀತಿಯಲ್ಲಿ ಪರಿಸ್ಥಿತಿ ಹಡಗೆಡುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರ ಸಂಪೂರ್ಣವಾಗಿ ನಿಜ. ಸರ್ಕಾರವೇನಾದರೂ ಇವತ್ತು ಇದರ ಬಗ್ಗೆ ಜವಾಬ್ದಾರಿ ತೆಗೆದುಕೊಂಡು ಇಬ್ಬರನ್ನು ಕರೆಯಿಸಿ ಮಾತನಾಡಲಿಲ್ಲವೆಂದರೆ ಕಾನೂನು ಪರಿಸ್ಥಿತಿ ಬಹಳ ತೊಂದರೆಯಾಗುತ್ತದೆ. ಮಾನ್ಯ ಗೃಹಮಂತ್ರಿಗಳು ಎಚ್ಚರ ವಹಿಸಬೇಕಾಗುತ್ತದೆ. ಈ ವಿಚಾರದಲ್ಲಿ ಎಲ್ಲಾ ಹುಡುಗರು ಹಾಗೂ ನಟರುಗಳು ಬೀದಿಗೆ ಇಳಿಯುವಂತಹ ಪರಿಸ್ಥಿತಿ ಇದೆ.

ಉಪಾಧ್ಯಕ್ಷರು : ಮಾನ್ಯ ಗೃಹಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಕೊಡುತ್ತೀರೋ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಇದು ಎಲ್ಲರಿಗೂ ಗೊತ್ತಿರುವಂತಹ ವಿಷಯ. ಮಾನ್ಯ ಗೃಹ ಮತ್ರಿಗಳಿಗೆ ಗೊತ್ತಿಲ್ಲವೆಂದರೆ ಹೇಗೆ? ಇಧು ಇಡೀ ರಾಜ್ಯಕ್ಕೆ ಗೊತ್ತಿದೆ. ಎಲ್ಲಾ ಜನರಿಗೂ ಗೊತ್ತಿದೆ. ಚಿತ್ರಮಂತದಿರಗಳೆಲ್ಲಾ ಮುಚ್ಚಿಹೋಗಿದೆ. ಪರಿಸ್ಥಿತಿ ಕೆಟ್ಟಿದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಸ್ಥಿತಿ ಎಲ್ಲಿಗೆ ಬಂದಿದೆ, ಎಂದರೆ ಕನ್ನಡ ಭಾಷೆ ಉಳಿಯುದೇ ಕಷ್ಟವಿದೆ. ಆದುದರಿಂದ ಕನ್ನಡ ಚಿತ್ರಗಳನ್ನು ಕಡ್ಡಾಯ ಮಾಡಲೇಬೇಕು. ಹಾಗೂ ಪ್ರಥಮ ಆದ್ಯತೆ ಕೊಡಬೇಕು. ಇದಕ್ಕೆ ಬಿಗಿಯಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು.

ಶ್ರೀ ಡಿ.ಕೆ. ಶಿವಕೂಮರ್ : ಈಗ ಇದಕ್ಕೆ ಉತ್ತರವನ್ನು ಸಾಯಂಕಾಲ ಕೊಡಲಿ, ಅಥವಾ ಬೆಳಿಗ್ಗೆ ಕೊಡಲಿ, ಅದು ಬಿಟ್ಟು ಅದು ನಮಗೆ ಗೊತ್ತೇ ಇಲ್ಲ ಎಂದರೆ ಹೇಗೆ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಎಲ್ಲರಿಗೂ ಗೊತ್ತಿದ್ದ ಹಾಗೆ ಈಗಾಗಲೇ 2 ಬಾರಿ ನಿರ್ಮಾಪಕರನ್ನು ಹಾಗೂ ಚಿತ್ರಮಂದಿರದ ಮಾಲೀಕರನ್ನು ಕರೆದು ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ. ಹಾಗೂ ಒಂದು ಇಂಟರಿಂ ಅಗ್ರಿಮೆಂಟ್ ಕೂಡ ತಂದಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಾಗ ಈ ಬಗ್ಗೆ ಒಂದು ಹೇಳಿಕೆಯನ್ನು ಮಾಡಬೇಕೆಂದು ನಾನು ಸದನದ ಅಭಿಪ್ರಾಯವನ್ನು ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಪ್ರತಿಯೊಂದಕ್ಕೂ ಮುಖ್ಯಮಂತ್ರಿಗಳು ಬರಲಿ, ಅವರು ಹೇಳಿಕೆ ಮಾಡಲಿ ಎಂದರೆ ಹೇಗೆ? ಚಲನ ಚಿತ್ರ ಮಾನ್ಯ ವಾರ್ತಾ ಇಲಾಕೆ ಸಚಿವರಿಗೆ ಸೇರಿರತಕ್ಕಂಥಾದ್ದು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಮುಖ್ಯಮಂತ್ರಿಗಳು ಹೋಗಿ ಅವ ಹತ್ತಿರ ಕುಳಿತುಕೊಂಡು ಚರ್ಚೆ ಮಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಉತ್ತರವನ್ನು ಕೊಡಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಕಡ್ಡಾಯವಾಗಿ ಪರಭಾಷಾ ಚಿತ್ರಗಳನ್ನು ಬಹಿಷ್ಕಾ ಹಾಕತಕ್ಕಂಥ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕು. ಬೇರೆ ರಾಜ್ಯದಲ್ಲಿ ಕನ್ನ ಚಿತ್ರಗಳನ್ನು ಪ್ರದರ್ಶನ ಮಾಡದೇ ಇರುವಾಗ ಕರ್ನಾಟಕದಲ್ಲಿ ಏಕೆ ಬೇರ್ ಭಾಷೆಗ ಚಿತ್ರವನ್ನು ಪ್ರದರ್ಶನ ಮಾಡಬೇಕು? ಕರ್ನಾಟಕದಲ್ಲಿ ಪರಭಾಷೆ ಚಿತ್ರಗಳನ್ನು ಬಹಿಷ್ಕಾ ಮಾಡಿದ್ದಾರೆ ಎನ್ನುವ ದಿಟ್ಟ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕು.

4. **ಕೆ.ಜಿ.ಎಫ್.ನಲ್ಲಿ ಪೋಲೀಸರಿಂದ ದಬ್ಬಳಿಕೆ**

+ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಉಪಾಧ್ಯಕ್ಷರೇ, ಕೆ.ಜಿ.ಎಫ್ ನಲ್ಲಿ ಬಹಳ ಜಸ್ಟೀಸ್ ನಡೆಯುತ್ತಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏನ ಜಸ್ಟೀಸ್ ಎಂದರೆ ನಮ್ಮ ಕೆ.ಜಿ.ಎಫ್.ನಲ್ಲಿ ನಡೆಯುವುದೆಲ್ಲಾ ಜಸ್ಟೀಸ್.

I brought this several times to the notice of the Government, but the are keeping quiet. ಅವರು ಏನಾದರೂ ಆಕ್ಷನ್ ತೆಗೆದುಕೊಂಡರೆ ಇನ ಜಸ್ಟೀಸ್ ಆಗಿ ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಅರ್ಥ. ತಮ್ಮ ಸರ್ಕಾರಕ್ಕೆ ಎಷ್ಟೊ ಸಲ ಈ ವಿತಾರವನ್ನು ತೆಗೆದುಕೊಂಡು ಬಂದಿದ್ದೇವೆ. ಅವರು ಸೈಲೆನ್ಸ್ ಆಗಿದ್ದಾ ಎಂದರೆ ಅದು ನನಗೆ ಅನಿಸುತ್ತದೆ ಜಸ್ಟೀಸ್ ತರಹ ಎಂದು. Government ha now proposed that if a Scheduled Caste person marries an upper Casts c of other community, they would be provided Rs. 20,000/-. This is the polic of the Government. When such is the case, a police officer along with tw policemen, chased and caught hold of that person. The moment he was caught he escaped. Let him be a rowdy, a 420 or a robber; who ever he may be But his wife, from Achari community and he is a scheduld caste boy.

ಪೋಲೀಸ್‌ನವರು ಆ ಹೆಣ್ಣು ಮಗಳನ್ನು ನೋಡಿಕೊಂಡು ನಿಮ್ಮ ಗಂಡ ರೌಡಿಕೆಲಸ, ಕಳ್ಳತನ ಮಾಡುತ್ತಾನೋ ನಿಮ್ಮ ಬ್ಯಾಗ್‌ನಲ್ಲಿ ಏನು ಇಟ್ಟುಕೊಂಡಿದ್ದೀ ಎಂದು ಕೇಳಿದ್ದಾರೆ. ಅದಕ್ಕೆ ಆ ಹೆಣ್ಣುಮಗಳು ಆ ತರಹ ಏನೂ ಇಲ್ಲ ಈಗತಾನೇ ನಾವು ಊರಿನಿಂದ ಬರುತ್ತಿದ್ದೇನೆ. ನನ್ನ ಬ್ಯಾಗ್‌ನಲ್ಲಿ ಏನೂ ಇಲ ಎಂದೂ ಹೇಳಿದ್ದಾಳೆ. ಆದರೂ ತೋರಿಸು ಎಂದು ಮೇನ್ ರೋಡ್‌ನಲ್ಲಿ ಚೆಕ್ ಮಾಡಿದ್ದಾರೆ. ಅದಕ್ಕೆ ಅವಳು ಏನೂ ಇಲ್ಲ ಎಂದು ಹೇಳಿದ್ದಾಳೆ. ಅವನು ಕಳ್ಳತನ ಮಾಡಿಕೊಂಡು ಬಂದು ಎಲ್ಲಾ ನಿಮ್ಮ ಹತ್ತಿರ ಕೊಡುತ್ತಾನೆ. ನೀವು ಇಟ್ಟುಕೊಂಡಿರುತ್ತೀ ಎಂದು ಕೇಳಿದ್ದಾರೆ. ಅದಕ್ಕೆ ಅವಳು ನಾನು ಏಕೆ ಸ್ವಾಮಿ ಮಾಡಲಿ ಎಂದು ಹೇಳಿದ್ದಾಳೆ. ಕೊನೆಗೆ ನಿಮ್ಮ ಜಾತಿ ಎನು ಅವನ ಜಾತಿ ಏನು ಎಂದು ಕೇಳಿದ್ದಾರೆ. I am sorry to use here the unparliamentary language which they have used (telugu words) They have fired in Telugu but that lady was wounded very much. She felt badly and the police Officer is Mr. Gopalaiah. Crime sub Inspector. He was earlier constable and head constable in KGF. Now he is Asst. Sub Inspector and he has become Sub Inspector in KGF. ಅಲ್ಲಿ ಅನ್ಯಾಯ ನಡೆಯುತ್ತಿದೆ, ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

12.10 ಪಿ.ಎಂ.

ನ್ಯಾಯನೀತಿಗಾಗಿ ಒಂದು ಅನ್ಯಾಯ ನಡೆಯುತ್ತಿದೆ ಸ್ವಾಮಿ ನಾನು ಇದನ್ನು ಮ್ಮ ಗಮನಕ್ಕೆ ತೆಗೆದುಕೊಂಡು ಬರತ್ತಿದ್ದೇನೆ. The Government is encouraging cheduled castes people to come up in life, but the same Government, niformed people, are harassing people on the road.It hurts me, Tomorrowm may get married to an Upper Caste girl. What now affectsf that poor upper aste girl will also affect my wife who is from the upper wife. In what way nis is justice in this Government? Being a police officer, along with two onstables, he has mis behand in public road. I feel ashemed being an MLA n my constituency This is the way the Department making justice to the oor people on the road? I am requesting this through hon.Speaker to take ction to suspend him and conduct an enquiry. A copy of the complaint which I have sent to the C.R.E. Cell is also hered. It hurts me; it wounds ne. I do not mind if this harassment is meted out to an SC girl, because I vill fight it out. She is an upper caste girl in this case, who was married a cheduled Caste boy. What affects that girl. is also affecting me. It hurtsme. is injustice. Government has failed to do their duty. They are not maintaining he law and order in KGF. Several times I have brought this to our hon. Home Minister. That is way I am quoting Crime Sub Inspector, his name is Gopalaiah. He was a constable and head constable in KGF.

MR. SPEAKER : I have heard you. you had your say. Now Hon'ble Minister.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀಮತ್ ಪಾರ್ವತಮ್ಮ ವಯಸ್ಸು 23 ವರ್ಷ, ಉಲ್ಲಾಳ್ ಪೇಟೆ, ಕೆ.ಜಿ.ಎಫ್. ಜಾತಿ ಆಚಾರಿ ಇವರು ಸ್ವಾಮಿನಾಥಪೂರ್ಣ ಶ್ರೀ ಸೋಕೊತಂದೆ ಕಾಳಿದಾಸ ಎಂಬುವವರ ಎರಡನೇ ಪತ್ನಿ, ಊರಿಗಾಂಪೇಟೆಯಲ್ಲಿ ವಾಸವಾಗಿರುತ್ತಾರೆ. ಸೋಕೊ ಇವರು ಈ ಕೆಳಕಂಡ ಒಂಭತ್ತು ಪ್ರಕರಣಗಳಲ್ಲಿ ಅಪರಾಧಿಗಳಾಗಿದ್ದು ಪೋಲೀಸರಿಗೆ ಬೇಕಾಗಿರುತ್ತಾರೆ. ಎರಡನೇ ಪ್ರಕರಣದಿಂದ ಏಳನೇ ಪ್ರಕರಣದವರೆಗೆ ಇರುವ ಅಪರಾಧಗಳಲ್ಲಿ ಬಂಧನದ ವಾರೆಂಟ್‌ಗಳು ಬಾಕಿ ಇರುತ್ತದೆ. ದಿನಾಂಕ 22-02-96ರಂದು ರಾತ್ರಿ ಎಂಟು ಗಂಟೆಗೆ ಎಸ್‌ಆಫ್.ಕ್ರೈಂ ಸಿ. ಗೋಪಾಲಯ್ಯ, ಹೆಚ್.ಸಿ. ಶೇಖರ್ 13, ಸಿ.ಪಿ.ಸಿ.7, ಸಿ.ಪಿ.ಸಿ. 08, ಸಿ.ಪಿ.ಸಿ 120, ಇವರೆಲ್ಲರೂ ಸೇರಿ ಸೋಕೋ ಇವರ ಮೇಲೆ ಸಂಶಯ ರುವುದರಿಂದ ಇವರ ಮನೆಗೆ ಹೋಗಿರುತ್ತಾನೆ. ಪೋಲೀಸರು ಬೆನ್ನುಹತ್ತಿದರೂ ಕ್ಕಿರುವುದಿಲ್ಲ, ಅದೇ ಮನೆಯಲ್ಲಿದ್ದ ಎರಡನೇ ಪತ್ನಿ ಪಾರ್ವತಮ್ಮನವರನ್ನು ಅಪರಾಧಿ ಗ್ಗೆ ವಿಚಾರಿಸಲಾಯಿತು. ಪೋಲೀಸ್ ತಂಡದ ಯಾವ ಸದಸ್ಯರು ಪಾರ್ವತಮ್ಮನವರ ಮನೆಯೊಳಗೆ ಪ್ರವೇಶ ಮಾಡಿರುವುದಿಲ್ಲ, ಅದರ ಜೊತೆಗೆ ಪೋಲೀಸ್ ತಂಡದವರು ಯಾವುದೇ ರೀತಿಯ ದುರ್ವತನೆಯನ್ನು ಮಾಡಿರುವುದಿಲ್ಲ.

ಮಾನ್ಯ ಸಭಾಧ್ಯಕ್ಷರೆ, ಈ ಸೋಕು ಎನ್ನತಕ್ಕವನ ಮೇಲೆ 7 ಕ್ರಿಮಿನಲ್ ಮೊಕದ್ದಮೆಗಳಿವೆ. ಅವನು ತಪ್ಪಿಸಿಕೊಂಡಿದ್ದಾನೆ. ಶ್ರೀಮತಿ ಪಾರ್ವತಮ್ಮ ಎರಡನೇ

ಹೆಂಡತಿ, ಅವನನ್ನು ಅರೆಸ್ಟ್ ಮಾಡುವುದಕ್ಕೆ ಹೋಗಿದ್ದಾರೆ, ಆಗ ಅವನು ಇರಲಿಲ್ಲ ಓಡಿ ಹೋಗಿದ್ದ, ಇವಳಿಗೆ ಮನೆಯೊಳಗಡೆಯೆ ವಿಚಾರಣೆ ಮಾಡಿ ಬಿಟ್ಟಿದ್ದಾರೆ ಅಷ್ಟೆ.

ಶ್ರೀ ಎಸ್. ರಾಜೇಂದ್ರನ್ : ಮಾಯ ಸಭಾಧ್ಯಕ್ಷರೆ, kindly permit me. It is a sensitive matter. It is my request. ನಾನು ಯಾವಾಗಲೂ ಒಮ್ಮೆ ಮಾತನಾಡುವುದು. ನಮ್ಮ ಪಕ್ಕದಲ್ಲಿ ಇರುವಂಥದ್ದು ನಾನೊಬ್ಬನೆ, ಸ್ವಾಮಿ ನಾನು ಪೊಲೀಸ್ ಇಲಾಖೆಯವರು ಏನು ತಪ್ಪು ಮಾಡಿದ್ದಾರೆ ಅದನ್ನು ಸೇವ್ ಮಾಡುವುದಕ್ಕೋಸ್ಕರ ನಮ್ಮ ಗೃಹ ಸಚಿವರು ಹೇಳಿದ್ದನ್ನು ನಾನು ಕೇಳುವುದಿಲ್ಲ I do not bring personal things. I am not coming in Vakalath of Soiku. I am speaking in vakalath of justice. ಅವನು ಏಳು ಕ್ರಿಮಿನಲ್ ಕೇಸಸ್‌ನಲ್ಲಿದ್ದಾನೆ, ಕೆ.ಜಿ.ಎಫ್.ನಲ್ಲಿದ್ದಾರೆ ಬೇರೆ ಎಲ್ಲೂ ಇಲ್ಲ, ಇದು ಪೊಲೀಸಿನವರಿಗೆ ಗೊತ್ತಿಲ್ಲವೆ?

ಅಧ್ಯಕ್ಷರು : ರಾಜೇಂದ್ರನ್ ರವರೆ ನೀವು ಆಮೇಲೆ ನನ್ನ ಕಛೇರಿಗೆ ಬನ್ನಿ, ಅಲ್ಲಿಗೆ ಗೃಹಮಂತ್ರಿಗಳನ್ನೂ ಕರೆಯಿಸುತ್ತೇನೆ. ನಾನು ಇದನ್ನು ಬಗೆಹರಿಸುತ್ತೇನೆ. ನನ್ನ ಮೇಲೆ ನಿಮಗೆ ನಂಬಿಕೆ ಇಲ್ಲವ? ನಿಮಗೆ ನನ್ನ ಮೇಲೆ ವಿಶ್ವಾಸ ಇದೆಯೊ, ಇಲ್ಲವೋ.

ಶ್ರೀ ಎಸ್. ರಾಜೇಂದ್ರನ್ : The Hon'ble Speaker should know I have got a case.. ನಿಮ್ಮ ಮೇಲೆ ನನಗೆ ವಿಶ್ವಾಸ್ಸ ಇದೆ, ತಾವು ತಿಳಿಸಿದಂತೆ ನಾನು ತಮ್ಮ ಛೇಂಬರ್‌ಗೆ ಬರುತ್ತೇನೆ. ಒಂದು ಉದಾಹರಣೆಯನ್ನು ತಮಗೆ ಕೊಟ್ಟು ಬಿಡುತ್ತೇನೆ. Yesterday there ws a burning of shops on the main road. ಈ ಶಾಪ್‌ಗಳನ್ ನಾನು ನೋಡಿ ಪೋಲೀಸಿನವರಿಗೆ 100ಗೆ ಫೋನ್ ಮಾಡಿ ಕರೆದಿದ್ದೇನೆ. It is next to that police station. But they are not aware of it.

ಯಾವ ರೀತಿಯಾಗಿ ಲಾ ಅಂಡ್ ಆರ್ಡರ್‌ಇದೆ ಎಂದು ಒಂದು ಮಾತ್ರ ಹೇಳುತ್ತೇನೆ. ಈ ಬರ್ನಿಂಗ್ ಏನೆಂದರೆ ಜ್ಯುವೈಲರಿ ಶಾಪ್ಸ್ ಏನೂ ಇಲ್ಲ, ಅದರಲ್ಲಿ ಮರ್ಚೆಂಟ್ಸ್ ಏನೂ ಮಾಡಿಕೊಂಡಿಲ್ಲ, ಪೆಟಿ ಶಾಪ್. ಯಾವುದೋ ಅಂಗಡಿಯನ್ನು ಕೇಳಿದ್ದಾರೆ, ಪೊಲೀಸಿನವರಿಗೆ ಗೊತ್ತಿಲ್ಲ ಎಂದು ಹೇಳ್ತುತ್ತಿದ್ದಾರೆ ಏಕೆಂದರೆ ಅವರಿಗೆ ಹೇಳುವುತದಕ್ಕೆ ಸಾಧ್ಯವಾಗುವುದಿಲ್ಲ, ಮಿಕ್ಸಚರ್ ಅಂಗಡಿ, ನಾನು ಕೇಳಿದ ಮಿಕ್ಸಚರ್‌ನಲ್ಲಿ ಸ್ವೀಟ್ ಏನಾದರೂ ಇದೆಯಾ ಎಂದೆರ ಇಲ್ಲ, There they are mixing petro. with kerosene. There they take bribes from them and.. ಸ್ವಾಮಿ ಇಲ್ಲಿ ಫೋಟೋ ಎಲ್ಲಾ ಇದೆ, ನನ್ನನ್ನು ನಂಬಿ, ನನ್ನನ್ನು ತಪ್ಪು ತಿಳಿದುಕೊಳ್ಳ ಬೇಡಿ.

MR. SPEAKER : You are an young man. You had your say. Please come and meet me. I will also call the Hon.Minister. We will solve this.

ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ.

ಕೆಂಟಕಿ ವಿದೇಶಿ ಕೋಳಿ ಮಾಂಸದ ಮಳಿಗೆ ಪ್ರಾರಂಭಕ್ಕೆ ನಿರೋಧ.

ಅಧ್ಯಕ್ಷರು : ನಿಲುವಳಿ ಸೂಚನೆಯನ್ನು ನಾವು ತೆಗೆದುಕೊಳ್ಳಬೇಕೆ ಎಂಬುದಕ್ಕೆ ನನ್ನನ್ನು ತಾವು ಮನವರಿಕೆ ಮಾಡಬೇಕಾದ ಜವಾಬ್ದಾರಿ ತಮ್ಮ ಮೇಲೆ ಇದೆ. ಆದ್ದರಿಂದ ತಾವು ಮತ್ತು ಶ್ರೀಮಾನ್ ಪುಟ್ಟಣ್ಣಯ್ಯನವರು ಪ್ರಾಸ್ತಾವಿಕವಾದಂಥ ವಿಚಾರವನ್ನು ಏನು ಮಂಡನೆ ಮಾಡುತ್ತೀರೋ ಮಾಡಿ.

+ ಶ್ರೀ ವಾಟಾಳ್ ನಾಗರಾಜ್ : ನಾನು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದನ್ನು ತಾವು ನಿಲುವಳಿ ಸೂಚನೆಯಾಗಿ ಮಾಡಬಹುದು ಅದಕ್ಕೆ ಚರ್ಚೆಗೆ ಅವಕಾಶವಿದೆ ಎಂದು ನಾನು ತಮಗೆ ಮನವರಿಕೆ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಜನವರಿ 30ನೇ ತಾರೀಖು ಈ ಕೆಂಟಕಿ ವಿದೇಶಿ ಕೋಳಿ ಮಾಂಸದ ಮಳಿಗೆಯನ್ನು ವಿರೋಧಿಸಿ ರೈತ ಸಂಘದವರು ಒಂದು ಪ್ರಾಮಾಣಿಕ ಹಿನ್ನೆಲೆಯನ್ನು ಇಟ್ಟುಕೊಂಡು ಬಹುರಾಷ್ಟ್ರೀಯ ಕಂಪನಿಗಳು ಈ ರಾಜ್ಯಕ್ಕೆ ಈ ದೇಶಕ್ಕೆ ಬಂದಾಗ ಈ ದೇಶದ ಪರಿಸ್ಥಿತಿ ಸ್ವಾತಂತ್ರ್ಯಪೂರ್ವದಲ್ಲಿ ಇದ್ದ ಪರಿಸ್ಥಿತಿ ಉದ್ಭವ ಆಗುತ್ತದೆ ಎಂದು ಹೇಳಿ ಈಸ್ಟ್ ಇಂಡಿಯಾ ಕಂಪನಿಯ ಪರಿಸ್ಥಿತಿ ಯಾವ ರೀತಿ ಆಯಿತು ಅದೇ ಪರಿಸ್ಥಿತಿ ಇವತ್ತು ಮತ್ತೊಮ್ಮೆ ಈ ದೇಶ ಮತ್ತು ರಾಜ್ಯಕ್ಕೆ ಬಹುರಾಷ್ಟ್ರೀಯ ಕಂಪನಿಗಳು ದಾಳಿ ಜಾಸ್ತಿಯಾಗಿದೆ ಎಂದು ಹೇಳಿ ಈ ದಾಳಿಯಿಂದ ಕರ್ನಾಟಕಕ್ಕಾಗಲಿ, ಇಡೀ ದೇಶದ ಜನತೆಗೆ ಸ್ವಾತಂತ್ರ್ಯ ಹರಣವಾಗುತ್ತೆ ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇವರೆಲ್ಲರನ್ನೂ ಈ ದೇಶ ಬಿಟ್ಟು ತೊಲಗಿಸಬೇಕು ಎನ್ನತಕ್ಕಂಥ ಸದುದ್ದೇಶವನ್ನು ಇಟ್ಟುಕೊಂಡು ನಡೆಸತಕ್ಕಂಥ ಚಳುವಳಿಯೆ ಹೊರತು ಈ ಚಳುವಳಿ ದರೋಡೆಯಾಗಲಿ, ಸುಲಿಗೆಯಾಗಲಿ ಅಥವಾ ಕೊಲೆಯನ್ನು ಮಾಡತಕ್ಕಂಥ ಉದ್ದೇಶವಾಗಲಿ, ಕಳ್ಳತನವನ್ನು ಮಾಡತಕ್ಕಂಥದ್ದಾಗಲಿ ಯಾವುದೂ ಅಲ್ಲ; ಇದಕ್ಕೆ ಒಂದು ಇತಿಹಾಸ ಇದೆ.

ಪ್ರೊ। ನಂಜುಂಡ ಸ್ವಾಮಿಯವರನ್ನು ಫೆಬ್ರವರಿ 4ನೇ ತಾರೀಖಿನಂದು ಬಂಧಿಸುತ್ತಾರೆ, ಜನವರಿ 30ನೇ ತಾರೀಖು ಬ್ರಿಗೇಡ್ ರೋಡ್‌ನಲ್ಲಿ ಚಳುವಳಿ ಆರಂಭವಾಗುತ್ತದೆ ಆ ಚಳುವಳಿ ಆರಂಭಕ್ಕೂ ಪ್ರೊ: ನಂಜುಂಡ ಸ್ವಾಮಿಯವರನ್ನು ಬಂಧನ ಮಾಡುವುದಕ್ಕೂ ಸ್ವಲ್ಪ ಹೆಚ್ಚು ಕಡಿಮೆ 4-5 ದಿನ ಆಗುತ್ತದೆ. ಒಂದಕ್ಕೊಂದು ಸಂಬಂಧ ಇಲ್ಲ. ಇವರು ಏನು ಹೇಳುತ್ತದೆ ಎಂದರೆ ನಂಜುಂಡಸ್ವಾಮಿಯವರು ತಲೆತಪ್ಪಿಸಿಕೊಂಡಿದ್ದಾರೆ ಎಂದು. ಖಂಡಿತ ಇಲ್ಲ, ಪ್ರಾಮಾಣಿಕವಾಗಿ ಅವರು ಮನೆಯಲ್ಲೇ ಇದ್ದರು. ಅವರೇನು ತಲೆತಪ್ಪಿಸಿಕೊಂಡು ಹೋಗತಕ್ಕಂಥ ಚಿಂತನೆ ಮಾಡಿದವರೂ ಅಲ್ಲ ಮತ್ತು ಯಾವತ್ತೂ ಅವರು ಇಂತಹ ವಿಚಾರಕ್ಕೆ ಹೆದರಿ ಎಲ್ಲೂ ಓಡಿದವರಲ್ಲ, ಜೀವನ ದುದ್ದಕ್ಕೂ ತ್ಯಾಗ ಮಾಡಿರತಕ್ಕಂಥ ಒಬ್ಬ ವ್ಯಕ್ತಿ ಅದು ತಮಗೆ ಗೊತ್ತಿದೆ, ಈ ಸದನಕ್ಕೂ ಗೊತ್ತಿದೆ. ಮತ್ತು ಅವರು ದರೋಡೆ ಮಾಡಿದ್ದಾರೆ. ಕೊಲೆಯನ್ನು ಮಾಡುವ ಪ್ರಯತ್ನ ಮಾಡಿದ್ದಾರೆ ಎನ್ನುವ ಅನೇಕ ಮೊಕದ್ದಮೆಗಳನ್ನು ಅವರ ಮೇಲೆ ಕೇಸುಗಳನ್ನು ಹಾಕಿದ್ದಾರೆ, ಚಳುವಳಿಯನ್ನು ನಡೆಸಿದಂಥ 102 ರೈತರ ಮುಖಂಡರ ಮೇಲೂ ಮೊಕದ್ದಮೆಯನ್ನು ದಾಖಲು ಮಾಡಿದ್ದಾರೆ. ಸ್ವಾಮಿ ಅವರ ಇತಿಹಾಸ ತಮಗೆ ಗೊತ್ತಿದೆ. ಪ್ರೊ। ನಂಜುಂಡಸ್ವಾಮಿಯವರು ಹಿಂದೆ ಕಾರ್ಗಿಲ್ ಕಟ್ಟಡದ ಮೇಲೆ ದೊಡ್ಡ ಚಳುವಳಿಯನ್ನು ನಡೆಸಿದರು. ಆಗಿನ ಸರ್ಕಾರ ಅವರ ಮೇಲೆ ಇದೊಂದು ಪ್ರಾಮಾಣಿಕವಾದಂಥ ಹೋರಾಟ ಎಂಬ ದೃಷ್ಟಿಯಿಂದ ಇವರ ಮೇಲೆ ಯಾವುದೇ ರೀತಿಯ ಬಂಧನವಾಗಲಿ, ಅಥವಾ ಇವರ ಮೇಲೆ ಕೇಸ್‌ಗಳನ್ನು ಹಾಕುವುದಾಗಲಿ ಯಾವುದನ್ನೂ ಮಾಡಲಿಲ್ಲ, ಯಾವ ರೈತರನ್ನೂ ಬಂಧನ ಮಾಡಲಿಲ್ಲ. ಶ್ರೀಮಾನ್ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭ ಅದು. ಅದರ ಹಿಂದೆ ಇಂತಹ ರೈತರ ಚಳುವಳಿ ರಾಜ್ಯಾದ್ಯಂತ ಪ್ರಚಂಡವಾಗಿ ನಡೆದಾಗ ಅವರ ಮೇಲೆ ಇದ್ದಂಥ ಅನೇಕ ಮೊಕದ್ದಮೆಗಳನ್ನು ಶ್ರೀಮಾನ್ ಬಂಗಾರಪ್ಪನವರ ಸರ್ಕಾರದಲ್ಲಿ ಹಿಂತೆಗೆದುಕೊಂಡರು. ಇದಕ್ಕೆ ಒಂದು ಇತಿಹಾಸ ಇದೆ, ಹಿನ್ನೆಲೆ ಇದೆ, ಇದಕ್ಕೆ ನಿಜವಾದಂಥ ಪ್ರಾಮಾಣಿಕ ಪ್ರಯತ್ನ ಇದೆ.....

ಅವರು ಯಾರು ದರೋಡೆಕೋರರೂ ಅಲ್ಲ, ರೌಡಿಗಳೂ ಅಲ್ಲ, ಲೂಟಿಕೋರರೂ ಅಲ್ಲವೆಂದು ತೀರ್ಮಾನ ಮಾಡಿ ಆ ಕೇಸನ್ನು ಹಿಂದಕ್ಕೆ ತೆಗೆದುಕೊಂಡರು. ಆದರೆ ಈಗಿನ ಸರ್ಕಾರ ತೆಗೆದುಕೊಂಡ ನಿಲುವು ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ಚಳುವಳಿ ಮಾಡಿದಂತಹ ರೈತ ಮುಖಂಡರು 102 ಜನರನ್ನು 30ರಂದು ಮತ್ತು ನಾಲ್ಕು ದಿವಸಗಳ ನಂತರ ಮಾನ್ಯ ನಂಜುಂಡಸ್ವಾಮಿಯವರನ್ನು ಬಂಧನ ಮಾಡಿ ಅವರ ಮೇಲೆ ಎಷ್ಟು ವಿಧಿಗಳನ್ನು ಹಾಕಿದ್ದಾರೆಂದರೆ 143- 144- 147- 148- 150- 152- 153- 309- 324- 307- 53- 399- 427- 448- 435- 436- 450- 452- 506- ಅನ್ನು ಹಾಕಿದ್ದಾರೆ. ಸೆಕ್ಷನ್ 302- 375ಅನ್ನು ಬಿಟ್ಟಿದ್ದಾರೆ. ಇದನ್ನು ನೋಡಿದಾಗ ಮಾನ್ಯ ನಂಜುಂಡ ಸ್ವಾಮಿಯವರ ಇತಿಹಾಸ ನೋಡಿದರೆ ಅವರು ಲಾಯರ್ ಮಹಂತ ದೇವರು ಎಂದು ಕರ್ನಾಟಕದಲ್ಲಿ ಹೆಸರಾಂತ ಮನೆತನದವರು ಅವರ ತಂದೆಯವರನ್ನು ಮೈಸೂರಿನಲ್ಲಿ ಯಜಮಾನರೆಂದು ಕರೆಯುತ್ತಿದ್ದರು. ಅವರ ಇಡೀ ಮನೆತನ ಸಾರ್ವಜನಿಕ ಜೀವನದಲ್ಲಿ ಬಂದು ಬಡವರ ಪರವಾಗಿ ವಕಾಲತ್ತನ್ನು ವಹಿಸಿ ತ್ಯಾಗ ಮಾಡಿದಂಥವರು. ಇವರು ಸಮಾಜವಾದ ಸಿದ್ಧಾಂತದಲ್ಲಿ ಆೋಹಿಯಾರವರ ತತ್ವರನ್ನು ಅಳವಡಿಸಿಕೊಂಡು ಹೋರಾಟನಡೆಸಿ ಇಡೀ ರಾಜ್ಯದಲ್ಲಿ ಹೊಸ ಬೆಳಕನ್ನು ಚೆಲ್ಲಿದಂತಹ ವ್ಯಕ್ತಿ ಯಾಗಿದ್ದಾರೆ. ಇವರ ಮೇಲೆ ಹೆಚ್ಚು ಕಡಿಮೆ 19 ಮೊಕದ್ದಮೆಗಳನ್ನು ದಾಖಲು ಮಾಡಿದ್ದಾರೆ. ಇದೆಲ್ಲವೂ ನಿಜವಾದರೆ ಮಾನ್ಯ ನಂಜುಂಡ ಸ್ವಾಮಿಯವರಿಗೆ 60 ವರ್ಷ ಶಿಕ್ಷ ಆಗಬೇಕಾಗುತ್ತದೆ. ಹೆಚ್ಚು ಕಡಿಮೆ ಒಂದೊಂದಕ್ಕೂ ಒಂದು ವರ್ಷ, ಎರಡೂವರೆ ವರ್ಷವೆಂದು ಶಿಕ್ಷೆ ಇದೆ. ಇದೆಲ್ಲವೂ ಆದರೆ ಅವರ ಜೀವಾವಧಿ 60 ವರ್ಷಗಳು ಮುಗಿದು ಕೊನೆಗೆ, ಅಂದರೆ ಇದರ ಅರ್ಥ ಏನನಿಸುತ್ತದೆ. ಮಾನ್ಯ ಮುಖ್ಯಮಂತ್ರಿಯವರಾದ ಹೆಚ್.ಡಿ. ದೇವೇಗೌಡರಿಗೆ ಮಾನ್ಯ ನಂಜುಂಡಸ್ವಾಮಿಯವರ ಮೇಲೆ ಒಂದು ರೀತಿಯ ವೈಯುಕ್ತಿಕ ದ್ವೇಷವಿದೆ ಎಂದನಿಸುತ್ತದೆ. ಇದರಲ್ಲಿ ಬೇರೆ ಏನೂ ಕಾಣುತ್ತಾ ಇಲ್ಲ. ಈ ದ್ವೇಷಕ್ಕೆ ಒಬ್ಬ ಹೋರಾಟಗಾರರ ಮೇಲೆ, ರೈತ ಮುಖಂಡರ ಮೇಲೆ ಇವರು ನಡೆಸಿದಂತಹ ಗಧಾಪ್ರಹಾರ ಇದನ್ನು ಇಡೀ ರಾಜ್ಯದ ಜನತೆಯು ಖಂಡಿಸುತ್ತದೆ. ಇಡೀ ದೇಶದ ಜನತೆಯೂ ಇದನ್ನು ಖಂಡಿಸಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಈ ರಾಷ್ಟ್ರದ ಯವುದೇ ಒಂದು ವಿಷಯ ಕೋರ್ಟಿನ ಮುಂದೆ ಮೊಕದ್ದಮೆಯಾಗಿರುವಾಗ ಅದನ್ನು ನಿಲುವಳಿ ಸೂಚನೆಯನ್ನಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯವಾಗಿದೆ. ಇದಕ್ಕೆ ತಮ್ಮ ರೂಲಿಂಗ್ ಏನು ಎಂಬುದನ್ನು ತಿಳಿಸಬೇಕು.

MR. SPEAKER : Are you on a point of order?

SRI R.L. JALAPPA : Yes.

ಶ್ರೀಮತಿ ಪ್ರಮೀಳ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೆ, ಪ್ರತಿಯೊಬ್ಬರ ಮೇಲೂ ಕೇಸ್ ಹಾಕುತ್ತಾರೆ. ಆದರೆ ಇಲ್ಲಿ ವಿಷಯ ಬಂದಿರುವಂಥಾದ್ದು ಯಾರ ಮೇಲೆ ಯಾರು ಕೇಸ್ ಹಾಕಬೇಕಾಗಿತ್ತು ಎಂಬುದು, ಇದು ಕೋರ್ಟಿನಲ್ಲಿ ಕೇಸ್ ಇದೆ ಎನ್ನುವಂತಹ ಕಾರಣಕ್ಕಾಗಿ ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು, ಇದರಲ್ಲಿ ಪುಟ 27, 7ನೇಯಗು ನಿಲುವಳಿ ಸೂಚನೆಯು ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿರತಕ್ಕುದ್ದಲ್ಲ, ಇದನ್ನು ಈ ಸದನವೇ ಸಂಸದೀಯ ಚೌಕಟ್ಟಿನಲ್ಲಿ ಹಾಕಿಕೊಂಡಿರುವಂಥಾದ್ದು.

ಶ್ರೀಮತಿ ಪ್ರಮೀಳ ನೇಸರ್ಗಿ : ಕೋರ್ಟಿನಲ್ಲಿ ಏನು ಕೇಸ್‌ಇದೆ. ಅವರ ಮೇಲೆ ಏನು ಸೆಕ್ಷನ್ ಹಾಕಿದ್ದಾರೆ, ಅದು ಏನು ಟ್ರಯಲ್ ಆಗುತ್ತದೆ, ಎಂಬ ಬಗ್ಗೆ ಕೋರ್ಟ್ ತೀರ್ಮಾನ ಮಾಡುತ್ತದೆ. ಆದರೆ ಹಾಕಿದಂತಹ ಸನ್ನಿವೇಶ, ಮತ್ತು ಹಾಕುವುದಕ್ಕೆ ಏನಾದರೂ ಕಾರಣಗಳು ಇದೆಯೇ? ಎಂಬ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇವತ್ತು ಪಾರ್ಲಿಮೆಂಟ್‌ನಲ್ಲೂ "ಹವಾಲ" ಬಗ್ಗೆ ಬರುತ್ತದೆ. ಎಲ್ಲಾ ಕೇಸ್ ಹಾಕಿದ್ದಾರೆ. ಕೋರ್ಟಿನಲ್ಲಿ ಕೇಸ್ ಇದೆ ಅದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ, ಯಾವ ಸನ್ನಿವೇಶದಲ್ಲಿ ಹಾಕಿದರು, ಯಾವ ಕಾರಣಕ್ಕೆ ಹಾಕಿದರೂ, ಏನು ದುರುದ್ದೇಶವಿತ್ತು, ಅದರ ಬಗ್ಗೆ ವಿಚಾರ ಮಾಡಬೇಕು, ಯಾವ ವಿಚಾರವನ್ನು ತೆಗೆದುಕೊಳ್ಳಬಾರದೆಂದು ಕೇಸ್ ಹಾಕಿ ಬಿಡಬಹುದು, ಇದು ಸಬ್ ಜ್ಯೂಡಿಸ್ ಆಗುತ್ತದೆಂದು, ಅದು ಬರುವುದಿಲ್ಲ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಹವಾಲ ಕೇಸ್‌ನಲ್ಲಿ ಬಹಳಷ್ಟು ಜನರು ಇನ್‌ವಾಲ್ವ್ ಆಗಿದ್ದಾರೆ. ಆದ್ದರಿಂದ ಮೊದಲು ಇದರ ಬಗ್ಗೆ ಚರ್ಚೆ ಮಾಡಿ ಎಂದು ತರುತ್ತಾ ಇದ್ದಾರೆಯೇ ವಿನಃ...

(ಗೊಂದಲ)

ಶ್ರೀಮತಿ ಪ್ರಮೀಳ ನೇಸರ್ಗಿ : ಹವಾಲ ಕೇಸ್ ಕೂಡ ಕೋರ್ಟ್ ಮುಂದೆ ಇದೆ, ಅದು ಕೂಡ ಚರ್ಚೆಗೆ ಬರುತ್ತಿದೆ.

(ಗೊಂದಲ)

SRI R.L.JALAPPA : I am on my legs. ಮಾನ್ಯ ಅಧ್ಯಕ್ಷರೆ, ನಾನು ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡುತ್ತಿದ್ದೇನೆ.

ಶ್ರೀಮತಿ ಪ್ರಮೀಳ ನೇಸರ್ಗಿ : ಇವತ್ತಿನವರೆಗೂ ಛಾರ್ಜ್ ಷೀಟ್ ಹಾಕಿಲ್ಲ. ಇನ್ನು ಅದು ಎಫ್.ಐ.ಆರ್. ಸ್ಟೇಜ್‌ನಲ್ಲಿದೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ಅದು ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿದೆ. This may affect the investigation also. ಅವರ ಮೇಲೆ ಎಫ್.ಐ.ಆರ್. ಫೈಲು ಆಗಿದೆ. ನಾನು ಇದನ್ನು ಹೇಳಿದ್ದೇನೆ, ಇದನ್ನು ಇಲ್ಲವೆನ್ನುವುದಾದರೆ ತಾವು ರೂಲಿಂಗ್ ಕೊಟ್ಟರೆ ನಮ್ಮದು ಏನು ಅಭ್ಯಂತರವಿಲ್ಲ. It is alright . But when he is attributing motives to the Chief Minister by saying he has got personal vengeance in this matter, I don't think it is proper.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ಈಗ ಸರ್ಕಾರದವರು ಇನ್ನು ಕೋರ್ಟ್‌ನ ಮುಂದೆ ಚಾರ್ಜ್ ಷೀಟ್ ಹಾಕಿಲ್ಲ, ಅದು ತನಿಖೆಯ ಹಂತದಲ್ಲಿಯೇ ಇದೆ. ಈಗ ಕೋರ್ಟ್ ಮಾಡಿರುವಂತಹ ತೀರ್ಪು ಅಥವಾ ಕೋರ್ಟ್ ಮಾಡಿರುವಂತಹ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ, ಸರ್ಕಾರ ತೆಗೆದುಕೊಂಡಿರುವಂತಹ ಕ್ರಮದ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿರುವುದು. ಕೋರ್ಟಿನ ಮುಂದೆ ಇರುವಂತಹ ವಿಷಯವಾಗಲಿ ಅಥವಾ ಕೋರ್ಟಿನ ತೀರ್ಪಿನಲ್ಲಿ ಕಾಯ್ದಿರಿಸುವಂತಹ ವಿಷಯವಲ್ಲ, ಆದುದರಿಂದ ಅದು ಸಬ್‌ಜ್ಯೂಡಿಸ್ ಆಗುವುದಕ್ಕೆ ಸಾಧ್ಯವಿಲ್ಲ, ಸರ್ಕಾರ ಆ ಚಳುವಳಿಗಾರರ ಮೇಲೆ ತೆಗೆದುಕೊಂಡಿರುವಂತಹ ಕ್ರಮದ ಬಗ್ಗೆ ಇಲ್ಲಿ ಪ್ರಸ್ತಾಪವಾಗುತ್ತಿದೆ. ಕೋರ್ಟಿನ ಮುಂದೆ ಇರುವಂತಹ ವಿಷಯ ಇಲ್ಲಿ ಚರ್ಚೆಯಾಗುತ್ತಿಲ್ಲ, ಕೋರ್ಟಿನ ತೀರ್ಪು ಇಲ್ಲಿ ಚರ್ಚೆಯಾಗುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು : ಪುಟ 27ರಲ್ಲಿ ಮುಂದೆ ಪರಂತು ಎಂದು ಇ[illegible] ಅಂಥ ವಿಚಾರವನ್ನು ಚರ್ಚಿಸಲು ಅವಕಾಶ ಕೊಡುವುದರಿಂದ ಶಾಸನಬದ್ಧ ನ್ಯಾಯಾಧೀಕರ[illegible] ಪ್ರಾಧಿಕಾರ, ಆಯೋಗ ಅಥವಾ ವಿಚಾರಣಾ ನ್ಯಾಯಾಲಯದವರು ಆ ವಿಷಯವ[illegible] ಪರಿಶೀಲಿಸಲು ಭಾಧಕವುಂಟಾಗುವ ಸಂಬಂಧವಿಲ್ಲವೆಂದು ಅಧ್ಯಕ್ಷರಿಗೆ ಮನವರಿಕೆಯಾದ[illegible] ಅವರು ತಮ್ಮ ವಿವೇಚಾನುಸಾರ ವಿಚಾರಣೆಯ ಕಾರ್ಯವಿಧಾನ ಅಥವಾ ವಿಷ[illegible] ಅಥವಾ ಹಂತಕ್ಕೆ ಸಂಬಂಧಪಟ್ಟಂತೆ ಅಂಥ ವಿಷಯವನ್ನು ಕುರಿತು ಸಭೆಯಲ್ಲಿ ಚರ್ಚೆ ನಡೆಸಲು ಅವಕಾಶ ಕೊಡಬಹುದು.

ಅಧ್ಯಕ್ಷರು : ಈಗ ನನ್ನ ವಿವೇಚನೆಗೆ ಬಿಟ್ಟಿದ್ದೀರಿ. ನನ್ನ ಮೇಲೆ ಅಷ್ಟು ವಿಶ್ವಾಸವಿದೆಯಲ್ಲ!

ಶ್ರೀ ವಾಟಾಳ್ ನಾಗರಾಜ್ : ಈ ರೀತಿ ಮಾನ್ಯ ನಂಜುಡಸ್ವಾಮಿಯವ[illegible] ಇಡೀ ರೈತ ಚಳುವಳಿಯಲ್ಲಿ ಸರ್ಕಾರದ ಧೋರಣೆಯನ್ನು ಅನೇಕ ಸಾರಿ ಕಟುವಾ[illegible] ಟೀಕೆ ಮಾಡಿದ್ದಾರೆ. ಮುಖ್ಯಮಂತ್ರಿಗಳ ನಡತೆಯ ಬಗ್ಗೆಯೂ ಸಹ ಅವರು ಬಹ[illegible] ಪರಿಣಾಮಕಾರಿಯಾದ ಪದಗಳಲ್ಲಿ ಹೇಳಿದ್ದಾರೆ. ಎಲ್ಲಾ ಹಿನ್ನಲೆಯನ್ನು ನಾವು ನೋಡಿದಾ[illegible] ಯಾವ ಸರ್ಕಾರವೂ ಈ ರೀತಿ ಯಾರ ಮೇಲೂ ಯಾವ ಚಳುವಳಿಗಾರ[illegible] ಮೇಲೂ, ನಾನು ಸಾವಿರದ ಒಂಬೈನೂರ ಅರವತ್ತೇಳರಿಂದಲೂ ಈ ಶಾಸ[illegible] ಸಭೆಯಲ್ಲಿದ್ದೇನೆ, ನಾನು ನೋಡಿದ್ದೇನೆ, ಈ ರೀತಿ ಕೇಸನ್ನು, ಈ ರೀತಿ ಹದಿನೆಂ[illegible] ಮೊಕ್ಕದ್ದಮೆಗಳನ್ನು ನೇರವಾಗಿ, ಉದ್ದೇಶಪೂರ್ವಕವಾಗಿ ಅದನ್ನು ಹಾಕಿ ಅವರ[illegible] ಯಾವುದಾದರೂ ಒಂದು ರೀತಿಯಲ್ಲಿ ತೊಂದರೆಯನ್ನು ಕೊಡಲೇ ಬೇಕು, ಇವರು ಜೈಲಿನಲ್ಲಿ ಇರಲೇಬೇಕು, ಇವರ ಚಳುವಳಿಯನ್ನು ಮುರಿಯಬೇಕೆನ್ನುವ ಉದ್ದೇ[illegible] ಹೊಂದಿದಂಥವರನ್ನು ನಾನು ನೋಡಿಲ್ಲ, ನಾನು ಇದುವರೆಗೂ ನೋಡಿದೆ, ನಾನ[illegible] ದಿವಂಗತ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಅಸೆಂಬ್ಲಿಯಲ್ಲಿ ಇಲ್ಲದೆ ಇದ್ದರು ಅವರ ಆಡಳಿತವನ್ನು ನೋಡಿದ್ದೆ. ಕೆ.ಸಿ. ರೆಡ್ಡಿಯವರ ಕಾಲದಲ್ಲಿ ಅಸೆಂಬ್ಲಿಯ[illegible] ಇಲ್ಲದೆ ಇದ್ದರೂ ಅವರ ಆಡಳಿತವನ್ನು ಕೇಳಿದ್ದೆ, ನಿಜಲಿಂಗಪ್ಪನವರ ಕಾಲದಲ್ಲಿ [illegible] ಸದನದಲ್ಲಿ ನಾನು ಇದ್ದೆ ಮತ್ತು ಹಿರಿಯರಾದಂಥ ಶ್ರೀಮಾನ್ ಬಂಗಾರಪ್ಪನವ[illegible] ಹೀಗೆ ನಾವೆಲ್ಲರೂ ಇದ್ದೆವು. ಇದಕ್ಕಿಂತ ಉನ್ನತವಾದ, ದೊಡ್ಡ ದೊಡ್ಡ ಹೋರಾಟಗಳ[illegible] ಚಳುವಳಿಗಳು ನಡೆಯಿತು; ಮಧುಗಿರಿ ಪ್ರಕರಣವೇ ಸುಳಿಯಿತು. ಆ ಪ್ರಕರಣದ[illegible] ಅಲ್ಲಿದ್ದಂತಹ, ಅಲ್ಲಿ ಚಳುವಳಿ ನಡೆಸಿದಂಥ ಚಳುವಳಿಗಾರರ ಮೇಲೂ ಆವತ ಇಂತಹ ಕೇಸ್‌ಗಳನ್ನು ಹಾಕಿರಲಿಲ್ಲ; ಈ ಪರಿಸ್ಥಿತಿ ಆಗಿರಲಿಲ್ಲ, ಇದು, ಯಾರ ದರೋಡೆಕೋರರ ಮೇಲೆ, ಹಾಕಬೇಕಾಗಿತ್ತು ಅವರೆಲ್ಲಾ ಬೀದಿಯಲ್ಲಿ ಆರಾಮವಾ[illegible] ಓಡಾಡುತ್ತಿದ್ದಾರೆ, ಯಾರನ್ನು ಟಾಡದಲ್ಲಿ ಇರಬೇಕಾಗಿತ್ತು ಅವರೆಲ್ಲಾ ಬೀದಿಯ[illegible] ಆರಾಮವಾಗಿ ಓಡುತ್ತಿದ್ದಾರೆ, ಆದರೆ ಯಾರು - ಈ ದೇಶದ ಸ್ವಾತಂತ್ರ್ಯ[illegible] ಸ್ಮರಣೆಗೋಸ್ಕರವಾಗಿ ಮತ್ತೊಂದು ಸ್ವಾತಂತ್ರ್ಯ ಹೋರಾಟವನ್ನು ಪ್ರಾರಂಭ ಮಾಡಿರತಕ್ಕಂ[illegible] ಶ್ರೀಮಾನ್ ಪ್ರೊ। ನಂಜುಂಡಸ್ವಾಮಿಯವರ ಉದಾತ್ತ ಧ್ಯೇಯವನ್ನು ಗಮನಿಸದರೆ, ಅವ[illegible] ಚಳುವಳಿಯನ್ನು ಮುರಿಯಬೇಕು ಎನ್ನುವುದೇ ಇವರ ಉದ್ದೇಶವಾಗಿದೆ.

ಮುಖ್ಯಮಂತ್ರಿಯವರು ವೈಯಕ್ತಿಕವಾಗಿ ಪ್ರೊ। ನಂಜುಂಡಸ್ವಾಮಿಯವರನ್ನು ಎಲ[illegible] ರೀತಿಯಿಂದ ತುಳಿಯತಕ್ಕಂಥ ತಂತ್ರವೇ ಹೊರತು ಬೇರೆಯ ಮಾತಲ್ಲವೆಂದು ನಾನ ನೇರವಾಗಿ ಹೇಳುತ್ತಿದ್ದೇನೆ. ಸ್ವಾಮಿ, ಇದಕ್ಕೆ ಇನ್ನೊಂದು ನಿದರ್ಶನವನ್ನು ಕೊಡುತ್ತೇನೆ ಹನ್ನೊಂದನೆ ಮೆಟ್ರೊಪಾಲಿಟನ್ ನ್ಯಾಯಾಲಯದಲ್ಲಿ ಪ್ರೊ। ನಂಜುಂಡಸ್ವಾಮಿಯವರಿ[illegible] ಜಾಮೀನು ಸಿಕ್ಕಿತು, ಜಾಮೀನು ಕೊಟ್ಟರು. ಆರನೇ ಸೆಷನ್ ನ್ಯಾಯಾಲಯದ[illegible] ಜಾಮೀನು ಕೊಡಕೂಡದೆಂದು ಮತ್ತೆ ನೆನ್ನೆ ಸರ್ಕಾರ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಸರ್ಕಾರ ಅರ್ಜಿಯನ್ನು ಹಾಕುತ್ತಿದೆ. ಇದರ ಅರ್ಥವೇನು? ಇದರ ಅರ್ಥ ಪ್ರೊ

ನಂಜುಂಡಸ್ವಾಮಿಯವರ ಮೇಲೆ ಇವರಿಗೆ ಇರತಕ್ಕಂಥ ಒಂದು ಭಾವನೆ ಇದಲ್ಲ, ಇದು ವೈಯಕ್ತಿಕವಾಗಿರತಕ್ಕಂಥ ದ್ವೇಷ. ಸ್ವಾಮಿ, ನಾನು ತಮಗೆ ಹೇಳುತ್ತಿರುವುದೇನೆಂದರೆ, ಮುಖ್ಯಮಂತ್ರಿಗಳಾದವರು ಬಹಳ ಉನ್ನತವಾದ ಸ್ಥಾನಕ್ಕೆ ಬಂದವರು. ಅವರು ಯಾವುದೇ ಪೂರ್ವಗ್ರಹಪೀಡಿತರಾಗಬಾರದು; ಈ ರಾಜ್ಯದಲ್ಲಿ ಎಲ್ಲರನ್ನು ಒಂದೇ ಸಮಾನರಂತೆ ನೋಡಿಕೊಂಡು ಹೋಗಬೇಕು. ನಂಜುಂಡ ಸ್ವಾಮಿಯವರಿಗೇ ಬೇರೆ, ವೈ.ಕೆ. ರಾಮಯ್ಯನವರಿಗೆ ಬೇರೆ, ಶಿವರಾಮೇಗೌಡರಿಗೆ ಬೇರೆ, ನನಗೆ ಬೇರೆ ಈ ರೀತಿ ನೋಡಬಾರದು. ಈ ರೀತಿಯ ವ್ಯತ್ಯಾಸವಿರಬಾರದು. ಈ ವ್ಯತ್ಯಾಸಗಳಿವೆಯಲ್ಲ, ಇದು ಒಳ್ಳೆಯ ಸದ್ಬುದ್ಧಿ ಅಲ್ಲವೆನ್ನತಕ್ಕ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ನನಗೇನು ಇವರ ಮೇಲೆ ಏಕ್‌ದಂ, ನೇರವಾಗಿ ದ್ವೇಷ ಮಾಡಬೇಕೆಂದಾಗಲಿ ಅಥವಾ ಇವರನ್ನು ನಾನು ದೂಷಣೆ ಮಾಡಬೇಕೆನ್ನುವ ಉದ್ದೇಶವಾದರೂ ನನಗಿಲ್ಲ, ಈ ವಸ್ತುಸ್ಥಿತಿಯನ್ನು ತಮಗೆ ಹೇಳುತ್ತಿದ್ದೇನೆ. ಈ ವಸ್ತು-ಸ್ಥಿತಿಯನ್ನು ನೋಡಿದಾಗ, ಇಷ್ಟೊಂದು ಮೊಕದ್ದಮೆಗಳನ್ನು ಹಾಕಿ ಮತ್ತೆ ಆ ಮೊಕದ್ದಮೆಗಳಿಂದ ಜಾಮೀನಿನ ಮೇಲೆ ಬಿಡುಗಡೆಯಾದವರನ್ನು ಮತ್ತೆ ಬಿಡುಗಡೆ ಮಾಡಬಾರದೆನ್ನತಕ್ಕಂಥ ಅರ್ಜಿಯನ್ನು ಆರನೇ ನ್ಯಾಯಾಲಯಕ್ಕೆ ಸಲ್ಲಿಸುವುದನ್ನು ನೋಡಿದಾಗ ನನಗನಿಸುತ್ತದೆ, ಇದು ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ, ಚಳುವಳಿಗಾರರನ್ನು, ರೈತರನ್ನು ದಮನ ಮಾಡತಕ್ಕಂಥ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೊರಟ್ಟಿದ್ದಾರೆ ಎನ್ನುವ ನೇರವಾದ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ.

ನಾನು ಅದನ್ನು ಎರಡು ಮೂರು ಸಂದರ್ಭಗಳಲ್ಲಿ ಮುಖ್ಯಮಂತ್ರಿಗಳಲ್ಲಿ ಗಮನಿಸುತ್ತೇನೆ; ಬೇರೆ ಮಾತೇ ಇಲ್ಲ, ನಾನು ಅವರ ಮಳವಳ್ಳಿಯಲ್ಲಿ ಮಾಡಿದ ಭಾಷಣವನ್ನು ಓದಿದ್ದೇನೆ. ಮಳವಳ್ಳಿಯಲ್ಲಿ ಬಹಳ ಆವೇಶದಿಂದ ರೈತರನ್ನು ತುಳಿಯುತ್ತೇನೆ ಎನ್ನುವ ರೀತಿಯಲ್ಲಿ ಭಾಷಣವನ್ನು ಮಾಡಿ ಅಲ್ಲಿ ಮಾತನಾಡಿದ್ದಾರೆ. ಕೆ.ಎಂ. ದೊಡ್ಡಿಯಲ್ಲಿ ಮಾತನ್ನಾಡಿದ್ದಾರೆ. ಅಲ್ಲೂ ಕೂಡ ರೈತರ ವಿರುದ್ಧವಾದಂತಹ ಧಾಳಿಯನ್ನು ಮಾಡಿದ್ದಾರೆ. ಮೈಸೂರಿನಲ್ಲಿ ಚಾವುಂಡರಾಯ ಪ್ರಶಸ್ತಿಯನ್ನು ಬಿಡುಗಡೆ ಮಾಡುವ ಮುಖ್ಯಮಂತ್ರಿಯವರ ಸಮಾರಂಭಕ್ಕೆ ನಾನು ಹೋದಾಗ ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಎದುರಿಗೆ ಕೇವಲ ಹಸಿರು ಶಾಲುಗಳನ್ನು ಪ್ರದರ್ಶನ ಮಾಡಿ, ನಮ್ಮ ರೈತರ ಮೇಲೆ ನೀವು ತೆಗೆದುಕೊಂಡ ಕ್ರಮ ಸರಿಯಿಲ್ಲ ಎಂದು ಹೇಳಿದವರ ಮೇಲೆ ಇವರ ಪಕ್ಷದ ಜನತಾದಳದ ಮುಖಂಡರುಗಳೇ ನೇರವಾಗಿ, ಮುಖ್ಯಮಂತ್ರಿಗಳ ಮುಖದ ಎದುರೇ ಹೊಡೆದರು, ಸಿಕ್ಕಾಪಟ್ಟೆ ಹೊಡೆದರು. ಆಗ ಮಾನ್ಯ ಮುಖ್ಯಮಂತ್ರಿಯವರು ಇದು ಸರಿಯಲ್ಲ ಎಂದೂ ಹೇಳಲಿಲ್ಲ, ಹೊಡೆದಂಥವರನ್ನು ಇದುವರೆವಿಗೂ ಬಂಧಿಸಿಲ್ಲ; ಅವರುಗಳ ಮೇಲೆ ಯಾವುದೇ ಒಂದು ಕೇಸನ್ನು ದಾಖಲು ಮಾಡಿಲ್ಲ, ಇಷ್ಟೆಲ್ಲಾ ಇದ್ದಾಗ್ಯೂ ನೇರವಾಗಿ ಪ್ರೊ। ನಂಜುಂಡಸ್ವಾಮಿಯವರ ಮೇಲೆ ಈ ಒಂದು ಗಧಾಪ್ರಹಾರ ಮಾಡಬೇಕಾದ ಉದ್ದೇಶ ಏನಿತ್ತು ಎನ್ನುವುದು ಒಂದು. ಇಲ್ಲಿ ಈ ಕೆಂಟಕಿ ಚಿಕನ್ ಮೇಲೆ ದಾಳಿ ನಡೆಸಿದ ತಕ್ಷಣ ಮುಖ್ಯಮಂತ್ರಿಗಳೇ ಹೇಳಿರುವ ಪ್ರಕರ ಅರ್ಧಗಂಟೆಯೊಳಗೆ ಅಮೇರಿಕಾದಿಂದ ಫೋನ್ ಬರುತ್ತದೆ, ನನಗೆ ಅಮೇರಿಕಾದಿಂದ ದೂರವಾಣಿಯ ಮೂಲಕ ಫೋನ್ ಬರುತ್ತಿದೆ, ನಾನು ಅವರಿಗೆ ರಕ್ಷಣೆ ಕೊಡಬೇಕೆಂದು ಈ ಊರಿನ ನಲವತ್ತೇಳು ಇಂತಹ ಬಹುರಾಷ್ಟ್ರೀಯ ಕಂಪನಿಗಳು ಇವರದೇನಿದೆ, ಅವರೆಲ್ಲಾ ಬಹುರಾಷ್ಟ್ರೀಯ ಕಂಪನಿಗಳ ಮುಂದೆ ಪೋಲಿಸ್ ವ್ಯಾನ್ ಕೊಟ್ಟು, ಪೋಲಿಸರನ್ನು ಕಾವಲು ಹಾಕಿದರು. ಯಾರು ಸ್ವಾಮಿ ಈ ಖರ್ಚುಗಳನ್ನೆಲ್ಲಾ ಕೊಡತಕ್ಕಂಥವರು ಯಾರು? ಈ ಬಹುರಾಷ್ಟ್ರೀಯ ಕಂಪನಿಯವರು ಕೊಡುತ್ತಾರೋ ಅಥವಾ ನಮ್ಮ ಸರ್ಕಾರದವರು ಕೊಡುತ್ತಾರೋ ಯಾರು? ಈ ರಾಜ್ಯವನ್ನು, ದೇಶವನ್ನು ಮತ್ತೊಮ್ಮೆ ಈಸ್ಟ್ ಇಂಡಿಯಾ ಕಂಪನಿಗೆ ಮಾರತಕ್ಕಂಥ ಹುನ್ನಾರ ನಮ್ಮಲ್ಲಿ ನಡೆದಿದೆಯೋ ಏನೋ ಎನ್ನುವ ಒಂದು ಚಿಂತನೆ; ಒಂದು

ನೋವು ಇವತ್ತು ನನಗೆ ಬರುತ್ತಿದೆ. ಆದುದರಿಂದ, ನಾನು ತಮಗೆ ತಿಳಿಸುತ್ತಿದ್ದೇನೆ ಅಧ್ಯಕ್ಷರೆ, ಈ ರೀತಿ ಕೇಸುಗಳನ್ನು ದ್ವೇಷದಿಂದ ಹಾಕತಕ್ಕಂಥದ್ದು ಸಮಂಜಸವಲ್ಲ, ನಾನು ಅನೇಕ ಸಾರಿ ನೋಡಿದ್ದೇನೆ, ಅವರಿಗೂ ಗೊತ್ತಿದೆ. ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರಾಗಿದ್ದರು. ವಿರೋಧ ಪಕ್ಷದ ನಾಯಕರಾಗಿದ್ದಾಗ ಎಷ್ಟೋ ಚಳುವಳಿಗಳು, ಬಹಳ ದೊಡ್ಡ ದೊಡ್ಡ ಚಳುವಳಿಗಳು ಮುನಿಯಮ್ಮನ ಪ್ರಕರಣ ನಡೆಯಿತು, ಮತ್ತೊಮ್ಮೆ ಜ್ಞಾಪಿಸುತ್ತಿದ್ದೇನೆ, ಮಧುಗಿರಿ ಪ್ರಕರಣ ನಡೆಯಿತು, ಅನೇಕ ಚಳುವಳಿಗಳು ನಡೆಯಿತು. ಯಾರು ಚಳುವಳಿ ನಡೆಸಿದವರ ಮೇಲೆ ಇಷ್ಟು, ಈ ರೀತಿಯಾದಂಥ ಸುಮಾರು ಹತ್ತೊಂಭತ್ತು ಮೊಕದ್ದಮೆಗಳನ್ನು ಹಾಕಿರುವುದು ನಾನು ಸಾಮಾನ್ಯವಾಗಿ ಇದುವರೆವಿಗೂ ನೋಡಿಲ್ಲ ಸ್ವಾಮಿ. ನಿಜವಾಗಿಯೂ ಇದು ನನಗನಿಸುವಂತೆ, ಇದು ಒಂದು ರೀತಿಯ ಚಿಂತನೆ. ಏಕೆ?

ಮುಖ್ಯಮಂತ್ರಿಗಳಾದವರು ಆಡಳಿತದಲ್ಲಿ ರಾಜ್ಯದಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳು, ಎಲ್ಲಾ ಚಳುವಳಿಗಾರರು, ಎಲ್ಲರೂ ಒಂದೇ ಎನ್ನುವ ಭಾವನೆ ಇರಬೇಕೇ ಹೊರತು, ಅದು ಇಲ್ಲವೆಂದರೆ ಇವರ ಆಡಳಿತ ಪೂರ್ವಗ್ರಹಪೀಡಿತವಾಗಿದೆ ಎನ್ನುವ ನಿರ್ಧಾರಕ್ಕೆ ನೇರವಾಗಿ ಬರಬೇಕಾದಂಥ ಪ್ರಶ್ನೆ ಬರುತ್ತದೆ. ಒಂದು ಕಡೆ ಹಿರಿಯ ಪತ್ರಕರಾದ ಆ ಜಾಣಗೆರೆ ವೆಂಕಟರಾಮಯ್ಯನವರನ್ನು ಮೂರು ದಿವಸ ಬಂಧಿಸಿ, ಚಳುವಳಿಗರರೆಲ್ಲರನ್ನೂ ನವು ಮುಗಿಸುತ್ತೇವೆ ಎನ್ನತಕ್ಕ ಧೋರಣೆ ಈ ರಾಜ್ಯ ಸರ್ಕಾರಕ್ಕೆ ಇರುವುದು ಒಳ್ಳೆಯದಲ್ಲ, ಪೋಲಿಸ್ ಅಧಿಕಾರಿಗಳನ್ನೆಲ್ಲಾ ಕರೆಯುತ್ತಾರೆ. ಕರೆದು ಅಲ್ಲಿ ಏನು ಭಾಷಣ ಮಾಡುತ್ತಾರೆಂದರೆ, ರಸ್ತೆ ರಸ್ತೆಯಲ್ಲಿ ಯಾವುದೇ ಚಳುವಳಿ ನಡೆಯಕೂಡದು, ರಸ್ತೆ ತಡೆಯುವವರನ್ನು ನಿಲ್ಲಿಸಬೇಕು. ಹಾಗಾದರೆ ಈ ರಾಜ್ಯದಲ್ಲಿ ನಾವು ಯಾವುದರ ಬಗ್ಗೆಯೂ ಚಳುವಳಿ ಮಾಡುವ ಹಾಗಿಲ್ಲ, ಯಾವುದರ ಬಗ್ಗೆಯೂ ಪ್ರತಿಭಟನೆ ಮಾಡುವ ಹಾಗಿಲ್ಲ, ಹಾಗಾದರೆ, ಯಾವುದರ ಬಗ್ಗೆ ಪ್ರತಿಭಟನೆ, ರಸ್ತೆ ತಡೆಯನ್ನು ಪ್ರಜಾಸತ್ತಾತ್ಮಕವಾಗಿ ಮಾಡುವ ಎಲ್ಲಾ ಚಳುವಳಿಗಳನ್ನು ನಿಲ್ಲಿಸುತ್ತೇವೆ ಎನ್ನತಕ್ಕದ್ದು ಇದೇನು ನೀತಿ? ಅಧ್ಯಕ್ಷರೆ, ಮತ್ತೊಂದು ಮನಸ್ಸಿಗೆ ಬಹಳ ನೋವಾಗಿರತಕ್ಕಂಥದ್ದು, ಶ್ರೀಮಾನ್ ನಂಜುಂಡಸ್ವಾಮಿಯವರ ಕಾರಿಯ ಮೇಲೆ ಹಸಿರು ದೀಪವಿದೆ, ಹಸಿರು ದೀಪ ಹಾಕಕೂಡದು. ಏತಕ್ಕೆ ಸ್ವಾಮಿ ಹಸಿರು ದೀಪವನ್ನು ಹಾಕಕೂಡದು? ಯಾವ ಕಾನೂನು? ನಮ್ಮ ಕಾರುಗಳಿಗೆ ಅಲಂಕಾರ ಮಾಡಿಕೊಳ್ಳುವುದಕ್ಕೆ ಹಸಿರು ದೀಪ ಹಾಕಿಕೊಳ್ಳುತ್ತೇವೆ, ಕೆಂಪು ದೀಪ ಹಾಕಿಕೊಳ್ಳುತ್ತೇವೆ, ಕಪ್ಪು ದೀಪ ಹಾಕಿಕೊಳ್ಳುತ್ತೇವೆ. ಹಾದಿ ಬೀದಿಯಲ್ಲಿ ಎಲ್ಲಾ ದೀಪ ಹಾಕಿಕೊಂಡಿರುವ ಅನೇಕ ಕಾರುಗಳಿವೆ, ಶ್ರೀಮಾನ್ ಶಿವರಾಮೇಗೌಡರು ಒಂದೊಂದು ಸಾರಿ ಕೆಂಪು ದೀಪ ಹಾಕಿಕೊಂಡಿರುತ್ತಾರೆ. ಇಲ್ಲವೇ?.......

ಶ್ರೀ ಎಲ್.ಆರ್. ಶಿವರಾಮೇಗೌಡ : ಹಸಿರು ದೀಪ ಹಾಕಿಕೊಳ್ಳುವುದಕ್ಕೆ ಎಲ್ಲಿದೆ ಕಾನೂನು ಹೇಳಿ. ಹಾಗಾದರೆ ಸರ್ಕಾರಕ್ಕೆ ಹೇಳಿ ಎಲ್ಲರೂ ಒಂದೊಂದು ದೀಪ ಹಾಕಿ ಕೊಳ್ಳುವುದಕ್ಕೆ ಅವಕಾಶ ಕೊಡಿಸಿ ಹಾಕಿಕೊಳ್ಳೋಣ. ಎಲ್ಲರಿಗೂ ಒಂದೊಂದು ಎಂದು ತೀರ್ಮಾನ ಮಾಡಲಿ, ಅದೊಂದು ಖರ್ಚಾಗಲಿ. ಹಸಿರು ದೀಪ ಹಾಕಿಕೊಳ್ಳುವುದಕ್ಕೆ ಸರ್ಕಾರ ಅನುಮತಿಯನ್ನು ಕೊಟ್ಟಿಲ್ಲ, ಕೆಂಪು ದೀಪ ಹಾಕಿಕೊಳ್ಳುವುದಕ್ಕೆ ಆ ಸ್ಥಾನಮಾನ ಇರುವವರಿಗೆ ಮಾತ್ರ ಅವಕಾಶ ಕೊಟ್ಟಿದೆ; ನೀವು ನಮಗೂ ಒಂದೊಂದು ಕೊಡಿಸುವುದಾದರೆ ದಯವಿಟ್ಟು ಎಲ್ಲರಿಗೂ ಒಂದೊಂದು ಕೊಡಿಸಿ.

ಶ್ರೀ ವಾಟಾಳ್ ನಾಗರಾಜ್ : ಯಾವ ಸ್ಥಾನಮಾನ?

ಶ್ರೀ ಎಲ್.ಆರ್. ಶಿವರಾಮೇಗೌಡ : ಸ್ಥಾನ ಯಾವುದು, ಮಾನ ಯಾವುದು? ಅವರೆಡೂ ಇಲ್ಲದವರು ಹಾಕಿಕೊಳ್ಳಬೇಕೆ? ಎರಡೂ ಇಲ್ಲ, ಅದಕ್ಕೆ ನಾನು ತಮಗೆ ಹೇಳುತ್ತಿದ್ದೇನೆ, ದಯಮಾಡಿ....

ಅಧ್ಯಕ್ಷರು : ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ತಾವು ನಿಲುವಳಿ ಸೂಚನೆಯ ವಿಚಾರದಲ್ಲಿ.....

ಶ್ರೀ ಆರ್.ಎಲ್. ಜಾಲಪ್ಪ : ಏನೇನೂ ಇಲ್ಲವೋ ಅದು ನಮಗೂ ಇಲ್ಲವೆಂದು ಅವರು ಹೇಳುತ್ತಾರೆ. ಸಾರ್.

ಅಧ್ಯಕ್ಷರು : ವಾಟಾಳ್ ನಾಗರಾಜ್ ಅವರು ಬಹಳ ಹಿರಿಯ ಸದಸ್ಯರು, ಸಾವಿರದ ಒಂಬೈನೂರ ಅರವತ್ತೇಳನೇ ಇಸವಿಯಿಂದ ಇಲ್ಲಿ ಇದ್ದೀರಿ. ತಾವು ನಮ್ಮ ನಿಯಮ ಅರವತ್ತರ ಕೆಳಗೆ ಸೂಚನೆಯನ್ನು ಕೊಟ್ಟಿದ್ದೀರಿ. ನನ್ನನ್ನು ಮನವರಿಕೆ ಮಾಡುವ ಜವಾಬ್ದಾರಿ ತಮ್ಮ ಮೇಲೆ ಇದೆ. ಆ ವಿಷಯಕ್ಕೆ ಸೀಮಿತವಾಗಿ ಎಷ್ಟು ಅಗತ್ಯವೋ ಅಷ್ಟನ್ನು ಪ್ರಸ್ತಾಪ ಮಾಡಿದರೆ ಚೆನ್ನಾಗಿರುತ್ತದೆ ಎಂದು ನನ್ನ ಸಲಹೆ ಅಂದರೆ, ದಯಮಾಡಿ ಇಲ್ಲಿ ಬೇರೆ ವಿಷಯಾಂತರವಾಗುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳಿರುವುದನ್ನು ಹೇಳುತ್ತಿದ್ದೇನೆ, ನಾನೇನು ಅದಕ್ಕಿಂತ ಮುಂದೆ ಹೋಗಿಲ್ಲ, ಅವರು ಹೇಳಿರತಕ್ಕಂಥದ್ದನ್ನು ಸಭೆಯಲ್ಲಿ ಮತ್ತೆ ಜ್ಞಾಪಿಸುತ್ತಿದ್ದೇನೆ, ತಮಗೆ ನಿವೇದನೆ ಮಾಡುತ್ತಿದ್ದೇನೆ. ಇನ್ನೂ ಮುಂದೆ ಕಾರಿಗೆ ಹಸಿರು ದೀಪ ಹಾಕಿಕೊಂಡು ಹೋಗುವ ಹಾಗಿಲ್ಲ, ನಮ್ಮ ಸರ್ಕಾರದಲ್ಲಿ ಇವೆಲ್ಲಾ ನಡೆಯುವುದಿಲ್ಲವೆಂದು ನೇರವಾಗಿ ಹೇಳಿದ್ದಾರೆ. ಅದನ್ನು ಜ್ಞಾಪಿಸುತ್ತಿದ್ದೇನೆಯೇ ಹೊರತು ಬೇರೆ ಏನೂ ಇಲ್ಲ, ಆದ್ದರಿಂದ, ಅಧ್ಯಕ್ಷರೆ ನನಗನಿಸುವುದೇನೆಂದರೆ, ಈ ದೀಪ ಹಾಕಿಕೊಂಡು ಹೋಗುವುದು, ಕೆಲವರು ಒಂದು ತತ್ವ ನಿಷ್ಠೆಯಿಂದ ಹಾಕಿಕೊಂಡು ಹೋಗತಕ್ಕಂಥದ್ದು ಮತ್ತೆ ಕೆಲವರು ಕಾರನ್ನು ಅಲಂಕಾರವಾಗಿ ಇಡುವುದಕ್ಕೆ ಅನೇಕ ದೀಪಗಳನ್ನು ಹಾಕತಕ್ಕಂಥ ವ್ಯವಸ್ಥೆಯನ್ನು ತಾವು ನೋಡಿದ್ದೀರಿ. ಹೊಸ ಕಾರುಗಳನ್ನು ತೆಗೆದುಕೊಂಡಾಗ ಮೇಲೆ ಲೈಟ್ ಹಾಕುವುದು, ಕೆಳಗಡೆ ಲೈಟ್ ಹಾಕುವುದು, ಪಕ್ಕದಲ್ಲಿ ಲೇಟ್ ಹಾಕುವುದು ಇವೆಲ್ಲಾ ನಡೆದಿರುತ್ತವೆ. ಇದೇನು ಹೊಸದೇನಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸಾರ್, ಇಲ್ಲ, ಮತ್ತೆ ದಾರಿ ತಪ್ಪುತ್ತಿದ್ದೀರಿ ದಯಮಾಡಿ ಕೇಳಿ, ಪಕ್ಕಕ್ಕೆ ಹಾಕುವುದು, ಹಿಂದಕ್ಕೆ ಹಾಕುವುದೆಲ್ಲಾ ಬೇರೆ ಲೈಟು, ನೆತ್ತಿ ಮೇಲೆ ಹಾಕುವುದಿದೆಯಲ್ಲ ಅದು ಬೇರೆ ಲೈಟು. ಆದುದರಿಂದ ನೆತ್ತಿ ಮೇಲೆ ಹಾಕುವ ಲೈಟಿಗೆ ಅನುಮತಿಯನ್ನು ಕೊಡಿಸಿ. ನಿಮಗೆ ಧನ್ಯವಾದವನ್ನು ಹೇಳೋಣ. ಆದರೆ ಇದನ್ನು ಯಾರು ಹಾಕಿಕೊಳ್ಳಬೇಕೋ ಅವರೇ ಹಾಕಿಕೊಳ್ಳಬೇಕು, ಉಳಿದವರೆಲ್ಲಾ ಹಾಕಿಕೊಳ್ಳುವುದಕ್ಕೆ ಅವಕಾಶವಿಲ್ಲ, ಕೆಲವು ಲೈಟ್ ಅನ್ನು ಹಾಕಿಕೊಳ್ಳುವಂತಿಲ್ಲ, ಅದನ್ನು ದಯಮಾಡಿ ಹೇಳಿ.

12.40 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ನಾನು ಒಟ್ಟಾರೆ, ಹೇಳುವುದಾದರೆ ಪ್ರೊ| ನಂಜುಂಡಸ್ವಾಮಿಯವರು ಆರಂಭಿಸಿರತಕ್ಕಂಥಾದ್ದು ಇದು ಒಂದು ಪ್ರಾಮಾಣಿಕ ಚಳುವಳಿ. ಇದು. ದೇಶದ ಮತ್ತೊಂದು ಸ್ವಾತಂತ್ರ್ಯ ಹೋರಾಟ. ಅದರಲ್ಲೇನೂ ಎರಡನೆಯ ವಿಚಾರವಿಲ್ಲ, ಇದನ್ನು ಬೇರೆ ರೂಪ ಎನ್ನತಕ್ಕಂಥಾದ್ದು, ಅರಿತುಕೊಳ್ಳತಕ್ಕಂಥಾದ್ದು ಒಳ್ಳೆಯದು ಅಲ್ಲ, ನಮ್ಮ ರಾಜ್ಯಕ್ಕೆ ಎಷ್ಟು ಬಹುರಾಷ್ಟ್ರೀಯ ಕಂಪನಿಗಳು ಬರುತ್ತಿವೆ ಎಂದು ತಮಗೆ ಗೊತ್ತಿದೆ. ಜೀವನ್ ಇನ್ಸ್‌ಟಿಟ್ಯೂಟ್ ಎಂದು ಹೇಳಿ ಒಂದು ಸಂಸ್ಥೆ ಇದ್ದು, ಇದು ಒಂದು ಬಹು ರಾಷ್ಟ್ರೀಯ ಕಂಪನಿ. ಸ್ವಾಮಿ, 44 ಸಾವಿರ ಕೋಟಿ ಗಿಡಮೂಲಿಕೆಗಳು, ನಮ್ಮ ದೇಶದ ಗಿಡಮೂಲಿಕೆಗಳು 44 ಸಾವಿರ ಕೋಟಿ ರೂಪಾಯಿಗಳ ವ್ಯವಸ್ಥೆಯಾಗಿದ್ದು ಅಮೇರಿಕಾ ರಾಯಬಾರಿಯಾಗಿ ಇಂಥ ಕಂಪನಿಗಳು ಕರ್ನಾಟಕ ದೇಶಾದ್ಯಂತ ಹಬ್ಬಿದಾಗ, ಇದರ ಬಗ್ಗೆ ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಒಂದು ಚಳುವಳಿಯನ್ನು ಆರಂಭಿಸಿದರೆ, ಇದನ್ನು ಚಳುವಳಿ ಮಾಡಿದ್ದಾರೆ ಎನ್ನತಕ್ಕಂಥ

ಒಂದು ದೊಡ್ಡ ಉದ್ದೇಶದಿಂದ ತೀರ್ಮಾನ ತೆಗೆದುಕೊಳ್ಳಬೇಕಾಗಿರತಕ್ಕಂಥ ಸರ್ಕಾರ, ಅದನ್ನು ಬಿಟ್ಟು ಇಲ್ಲಿ ನಾವು ಈ ಚಳುವಳಿದಾರರನ್ನೇ ದಮನ ಮಾಡುತ್ತೇವೆ ಎನ್ನತಕ್ಕಂಥ ನೇರವಾದಂಥ ದೃಷ್ಟಿಗೆ ಹೋಗುವುದಾದರೆ ಇದು ಸರಿಯಾದ ಮಾರ್ಗವಲ್ಲ. ಆದ್ದರಿಂದ ನನ್ನ ನಿಲುವಳಿ ಸೂಚನೆಗೆ ಸಮಗ್ರವಾಗಿ ಚರ್ಚೆ ಮಾಡತಕ್ಕಂಥಾದ್ದಕ್ಕೆ ತಾವು ಅವಕಾಶ ಕೊಡಬೇಕು ಎನ್ನತಕ್ಕಂಥಾದ್ದನ್ನು ನಾನು ತಮ್ಮಲ್ಲಿ ಕಳಕಳಿಯಿಂದ....

ಅಧ್ಯಕ್ಷರು : ಇಲ್ಲ, ಇಲ್ಲ, ಶ್ರೀರಾಮರೆಡ್ಡಿಯವರು ಕೈ ಎತ್ತಿದರು. ಅವರು ಸಿಗ್ನಟೆರಿ ಅಲ್ಲ. ಅದಕ್ಕೆ. ತಮಗೆಲ್ಲ, ನೋಡಿ ನೀವು ಹೀಗೆ ಆತುರ ಪಟ್ಟು ನಮ್ಮನ್ನು ನೀವು ತಪ್ಪು ತಿಳಿದುಕೊಳ್ಳುವುದು.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ತಮಗೆ ನಾನು ಏನು ಕೇಳುತ್ತಿದ್ದೇನೆ ಎಂದರೆ, ಈ ವಿಷಯವನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಎಲ್ಲಾ ರೀತಿಯ ಅವಕಾಶಗಳಿವೆ ಎನ್ನತಕ್ಕಂಥಾದ್ದನ್ನು ತಮಗೆ ಮನವರಿಕೆ ಮಾಡಿಕೊಡುತ್ತಿದ್ದೇನೆ. ದಯಮಾಡಿ ತಾವು ಇದಕ್ಕೆ ಹೆಚ್ಚಿನ ಅವಕಾಶ ಕೊಡಬೇಕು, ಸವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು, ಸವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಅಲ್ಲಿ ಇನ್ನೂ ಚಾರ್ಜ್ ಷೀಟ್ ಹಾಕದೇ ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಏನು ಕೇಳುತ್ತಿದ್ದೇನೆ ಎಂದರೆ ಕೃಪೆ ಏನೂ ಅಲ್ಲ, ಮುಖ್ಯಮಂತ್ರಿಗಳು ಕೃಪೆ ಮಾಡಿ ಅಂತಲೂ ಅಲ್ಲ, ಈ ಒಂದು ಸಂಪ್ರದಾಯ ಆಗುವುದು ಬೇಡ. ನಾವು ಯಾರೂ ಇಲ್ಲಿ, ಈ ವಿಧಾನಸೌಧದಲ್ಲಿ ಗೂಟ ಹೊಡೆದುಕೊಂಡು ಇರುವುದಿಲ್ಲ. ನಾವು ಅಲ್ಲಿಂದ ಇಲ್ಲಿಯವರೆಗೆ ಎಲ್ಲಾ ಮುಖ್ಯಮಂತ್ರಿಗಳನ್ನು ನಾವು ನೋಡುತ್ತಾ ಬಂದಿದ್ದೇವೆ. ಇಲ್ಲಿ ಯಾರಿಗೂ, ಭಗವಂತ ಎಷ್ಟು ದಿವಸ ಅವಕಾಶ ಕೊಟ್ಟಿರುತ್ತಾನೋ ಅಷ್ಟು ದಿವಸ ನಾವೆಲ್ಲಾ ಅಧಿಕಾರದಲ್ಲಿರತಕ್ಕಂಥಾದ್ದು. ಎಷ್ಟು ದಿವಸವೋ ಅಷ್ಟೇ. ಆದ್ದರಿಂದ ನಾವು ಈ ಒಂದು ಸ್ಥಾನದಲ್ಲಿದ್ದಾಗ ಅವರನ್ನು ನಾನು ಕಳಕಳಿಯಿಂದ ಅವರ ಮೇಲೆ ನನಗೇನೂ ದ್ವೇಷವಿಲ್ಲ, ನನಗೆ ಯಾವ ದ್ವೇಷವೂ ಅವರ ಮೇಲೆ ಇಲ್ಲ. ನಾನು ಪ್ರಾಮಾಣಿಕವಾಗಿ ಕಳಕಳಿಯಿಂದ ಅವರನ್ನು ಕೇಳುತ್ತಿದ್ದೇನೆ, ಎಲ್ಲಾ ಮುಖ್ಯಮಂತ್ರಿಗಳು, ಅವರೂ ನೋಡಿದ್ದಾರೆ, ಆ ಮುಖ್ಯಮಂತ್ರಿಗಳು ಇದ್ದಾಗ ಇಲ್ಲಿ ವಿರೋಧ ಪಕ್ಷದ ನಾಯಕರಾಗಿಯೂ ಇದ್ದಾರೆ. ತಾವು ಸ್ವಲ್ಪ ವಿಶಾಲವಾದಂಥ ಹೃದಯದಲ್ಲಿ ನೋಡಿ, ಇದೇನು ಕೃಪೆ ಕೊಡುತ್ತೀರಿ ಎನ್ನತಕ್ಕಂಥ ದೃಷ್ಟಿ ಅಲ್ಲ, ಆದ್ದರಿಂದ ಈ ಒಂದು ಮೊಕದ್ದಮೆಗಳನ್ನು ಏನು ಹಾಕಿದ್ದಾರೆ ಅದನ್ನು ಸಂಪೂರ್ಣವಾಗಿ ಹಿಂದಕ್ಕೆ ಪಡೆಯಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚಿಗೆ ಚರ್ಚೆಗೆ ತಾವು ಅವಕಾಶ ಕೊಡಬೇಕು ಎಂದು ಹೇಳಿ ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಸರ್ಕಾರ ಹೋರಾಟದ ನಿಜ ಸ್ವರೂಪವನ್ನೇ ಸರ್ಕಾರ ಅತ್ಯಂತ ಜವಾಬ್ದಾರಿಯಾಗಿ ಪರಿಗಣಿಸಿದೆ. ಹೋರಾಟವನ್ನೇ ಪೂರ್ಣ ನಾಶ ಮಾಡುತ್ತೇವೆ ಎಂದು ಕೆಟ್ಟ ಆಲೋಚನೆಗಳನ್ನು ಮಾಡಿದಂಥ ಯಾವುದೇ ಸರ್ಕಾರಗಳು ಇದುವರೆಗೂ ಉಳಿದುಕೊಂಡಿಲ್ಲ. ಇದು ಬಹಳ ಸಣ್ಣ ವಿಚಾರ ಎಂದು ನಾವೆಲ್ಲಾ ತಿಳಿದುಕೊಂಡಿರಬಹುದು. ಇದರ ದಂಧೆಯ ಮೂಲಕ ಇಡೀ ರೈತರಿಗೆ ಅನಾಹುತ ಆಗತಕ್ಕಂಥ ಒಂದು ಪರಿಸ್ಥಿತಿ ಇದೆ. ಇದರ ಬಗ್ಗೆ ತಮ್ಮ ಹತ್ತಿರ ಕೆಲವು ಮಾಹಿತಿಗಳನ್ನು ಕಳುಹಿಸಿ ಕೊಡುತ್ತೇನೆ ನಾನು. ಆಹಾರ ಪದಾರ್ಥಗಳಿಂದ ಮಾನವನ ದೇಹದ ಮೇಲೆ, ಮಾನವನ ಆರೋಗ್ಯದ ಮೇಲೆ ಎಷ್ಟೊಂದು ಅನಾನುಕೂಲವಾಗುತ್ತದೆ ಎನ್ನುವುದಕ್ಕೆ ತಮ್ಮ ಮುಂದೆ ಒಂದೇ ಒಂದು ಉದಾಹರಣೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪಾಶ್ಚಿಮಾತ್ಯ ದೇಶದಲ್ಲಿ ಎಂ.ಎಸ್.ಜಿ. ಬೆರಕೆಯ ಬಗ್ಗೆ ದೂರು ಇಲ್ಲವೇ ಇಲ್ಲ. ಆರೋಪ ಏನಿದ್ದರೂ ಕೋಳಿಯನ್ನು

ಕರಿಯುವ ಎಣ್ಣೆಯ ಬಗ್ಗೆ. ಏಕೆಂದರೆ ಅಲ್ಲಿ ದನದ ಕೊಬ್ಬಿನ ತೈಲದಲ್ಲಿ ಕೋಳಿಯನ್ನು ಕರಿಯುತ್ತಾರೆ. ದನದ ಕೊಬ್ಬಿನಿಂದ ಕೋಳಿಯನ್ನು ಉರಿದು ನಂತರ ತೈಲವನ್ನು ಸೇರಿಸಿ ಅದನ್ನು ಜನರಿಗೆ ಮಾರತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ಸ್ಟೀರಾಯಡ್ಸ್ ಕೆಮಿಕಲ್ಸ್ ಯೂಸ್ ಮಾಡಿ, ಆ ಕೋಳಿಯನ್ನೇ ತಿನ್ನತಕ್ಕಂಥ ಮನಸ್ಸು ಬರತಕ್ಕಂಥ ಒಂದು ಸ್ಟೀರಾಯಡ್ಸ್ ಕೆಮಿಕಲ್ಸ್ ಯೂಸ್ ಮಾಡಿ, ಆ ಕೋಳಿಯನ್ನೇ ತಿನ್ನತಕ್ಕಂಥ ಮನಸ್ಸು ಬರತಕ್ಕಂಥ ಒಂದು ಸ್ಟೀರಾಡಸ್ಸ್ ಯೂಸ್ ಮಾಡುವುದರಿಂದ ಅದರಿಂದ ಎಷ್ಟರ ಮಟ್ಟಿಗೆ ಪೂರ್ಣವಾಗಿ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದರೆ ಫಾರ್ವಡ್ ವೈದ್ಯಕೀಯ ತಜ್ಞರು ಏನು ಹೇಳಿದ್ದಾರೆ, ನಿಮ್ಮ ಮಕ್ಕಳನ್ನು ದ್ವೇಷಿಸುವುದಾದರೆ, ನಿಮ್ಮ ಮಕ್ಕಳನ್ನು ನೀವು ದ್ವೇಷಿಸುವುದೇ ಆದರೆ, ಮನುಷ್ಯರನ್ನು ದ್ವೇಷಿಸುವಂಥ ಸರ್ಕಾರ ಇದ್ದರೆ, ಮನುಷ್ಯರು ಮನುಷ್ಯರನ್ನು ದ್ವೇಷಿಸುವಂಥ ಮನಸ್ಸು ಇದ್ದರೆ ಇಂಥ ಹೋಟೆಲ್‌ಗಳಿಗೆ ಕಳುಹಿಸಿ, ಇದು ಒಬ್ಬ ವಿಜ್ಞಾನಿ ಹೇಳಿರುವುದು. ಮನುಷ್ಯ ಪೂರ್ಣ ಸಾವನ್ನು ಅಪೇಕ್ಷೆ ಪಡಬೇಕು ಎಂದು ಆಸೆ ಇದ್ದರೆ ಇಂಥ ಒಂದು ಹೋಟೆಲ್‌ಗೆ ಕಳುಹಿಸಿ ಎಂದು ಹೇಳಿದರು.

ವಾಷಿಂಗ್‌ಟನ್ನಿನ ಆಸ್ಪತ್ರೆಯಲ್ಲಿ ನಿರ್ದೇಶಕರು ಹೇಳಿದರು, ಪಾಶ್ಚಿಮಾತ್ಯ ದೇಶದಲ್ಲಿ ಕೆಳವರ್ಗದ ಜನರು ಮಾತ್ರ ಇಂಥ ಫಾಸ್ಟ್ ಫುಡ್ ಹೋಟೆಲ್‌ಗೆ ಹೋಗುತ್ತಾರೆ. ಅಂದರೆ ತಿಳುವಳಿಕೆ ಇಲ್ಲದಿರುವವರು. ಅಂದರೆ ಅವರು ಏಕೆ ಕೆಂಟಕಿ ಚಿಕನ್ ತಿನ್ನುತ್ತಾರೆ. ತಿನ್ನುವ ತರಕಾರಿ, ಕೀಟನಾಶಕಗಳ ಬಗ್ಗೆ ಇಂಥ ವಿವಾದ ಎದ್ದಿದ್ದರೆ ಚೆನ್ನಾಗಿತ್ತಲ್ಲವೇ? ಅಂತ ಕೆಲವು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದಾರೆ. ದಯವಿಟ್ಟು ಇದನ್ನು ತಾವು ತಿಳಿದುಕೊಳ್ಳಬೇಕು. ವಾಟಾಳ್ ನಾಗರಾಜ್‌ರವರು ಪೂರ್ತಿಯಾಗಿ 19 ಮೊಕದ್ದಮೆಗಳ ಬಗ್ಗೆ ಮಾತನಾಡಿದರು.

ಈ ಬಹುರಾಷ್ಟ್ರೀಯ ಕಂಪನಿಗಳವರಿಂದ ಮುಂದೆ ಆಗತಕ್ಕಂಥ ಮಾಂಸದ ದಂಧೆಯಿಂದ ಇಡೀ ದನಗಳೇ ನಾಶ ಆಗತಕ್ಕಂಥ ಪರಿಸ್ಥಿತಿ ಸೃಷ್ಟಿಯಾಗಬಹುದು. ಆಂಧ್ರದಲ್ಲಿ ಅಲ್ ಕಬೀರ್ ಎನ್ನತಕ್ಕಂಥ ಕಸಾಯಿಖಾನೆ ಇದೆ. ಅದು ಒಂದು ವರ್ಷಕ್ಕೆ 60 ಸಾವಿರ ದನಗಳನ್ನು ಕತ್ತರಿಸಿ ಮಾರತಕ್ಕಂಥ ಅಲ್ ಕಬೀರ್ ಕಸಾಯಿಖಾತೆ ಕರ್ನಾಟಕದಲ್ಲಿ ಇವತ್ತು ಒಂದು ಕೋಟಿ ಒಂದು ಲಕ್ಷ ದನಗಳು, 47 ಲಕ್ಷ ಎಮ್ಮೆಗಳು ಇರುವುದು. ಈ ತರಹದ ಒಂದು ಅಲ್ ಕಬೀರ್ ಏನಾದರೂ ನಾ[illegible] ಉದ್ಘಾಟನೆ ಮಾಡಿದರೆ, ನಮ್ಮ ದನಗಳು ಪೂರ್ತಿ ಮೂರಿಂದ ನಾಲ್ಕು ವರ್ಷಗಳ[illegible] ಮುಗಿದು ಹೋಗುತ್ತವೆ. ಬೇಕಾದರೆ ಆಂಧ್ರದಿಂದ ತಾವು ಮಾಹಿತಿಯನ್ನು ಪಡೆಯಬಹುದು. ಅನಂತರಪುರ ಜಿಲ್ಲೆಯಲ್ಲಿ ಕೇವಲ 25 ರಿಂದ 30 ದನಗಳು ಮಾತ್ರ ಉಳಿದುಕೊಂಡಿವೆ. ಅಲ್ಲಿ ಎಲ್ಲಾ ದನಗಳನ್ನು ಅಲ್ ಕಬೀರ್ ಪೂರ್ಣ ಮುಗಿಸಿವೆ. ಆದ್ದರಿಂದ ಕರ್ನಾಟಕದಲ್ಲಿಯೂ ಇಂಥ ಮಾಂಸದ ದಂಧೆಯಿಂದ ಅನಾನುಕೂಲವಾಗಬಹುದು ಎಂದು ಹೇಳಿ ರೈತ ಸಂಘದವರು ಅತ್ಯಂತ ಜವಾಬ್ದಾರಿಯುತವಾಗಿ ಈ ಚಳುವಳಿಯನ್ನು ಮಾಡುತ್ತಾ ಇರತಕ್ಕಂಥ ಸಮಯದಲ್ಲಿ, ಸಾಯಂಕಾಲ, ಮಧ್ಯಾಹ್ನ 2 ರಿಂದ 3 ಗಂಟೆಯಲ್ಲಿ ಪೋಲೀಸ್‌ನವರು ಅವರನ್ನು ದಸ್ತಗಿರಿ ಮಾಡಿ ಯಾವುದೇ ಪ್ರಕರಣ ಇಲ್ಲದೆಯೇ, ರೈತ ಸಂಘದ 101 ಕಾರ್ಯಕರ್ತರನ್ನು ಬಂಧನ ಮಾಡಿ ಆದಮೇಲೆ ಡಕಾಯಿತಿ ಕೇಸ್, ದರೋಡೆ ಮೊಕದ್ದಮೆಗಳನ್ನು ಹಾಕಿದ್ದಾರೆ. ರೈತ ಕುಲದಲ್ಲಿ ಹುಟ್ಟಿರತಕ್ಕಂಥ ಯಾವುದೇ ರೈತ, ಯಾವ ತಾಯಿ ತನ್ನ ಮಗನನ್ನು, ರೈತ ಕುಲದಲ್ಲಿ ಹುಟ್ಟಿರತಕ್ಕಂಥ ಮಗನನ್ನು, ಒಂದು ಹೋಟೆಲ್ಲಿಗೆ ಹೋಗಿ ಒಂದು ಕೋಳಿಯನ್ನೋ, ಒಂದು ರೂಪಾಯಿಯನ್ನೋ ಕದ್ದು ತಿನ್ನುವಂಥ ಮಗನನ್ನು ಹೆತ್ತಿರತಕ್ಕಂಥ ತಾಯಿ ಕರ್ನಾಟಕದಲ್ಲಿ ಯಾವ ರೈತ ತಾಯಿಯೂ ಇಲ್ಲ, ಅಂಥ ಪಾಪದ ಗರ್ಭದಲ್ಲಿ ಹುಟ್ಟಿದರೆ ಅವರು ಈ ದೇಶದಲ್ಲಿ ರೈತರ ಮಕ್ಕಳೇ ಅಲ್ಲ.

ಉದಾಹರಣೆಗೆ ಒಬ್ಬ ವಿದೇಶೀ ಕಂಪನಿಯವನು ಒಂದು ಸೂಟ್‌ಕೇಸ್, ಡಾಲರ್, ಕ್ಯಾಮೆರಾ ಎಲ್ಲಾ ಬಿಟ್ಟು ಹೋಗಿದ್ದರು. ಅಲ್ಲಿ ಊಟ ಮಾಡುತ್ತಿದ್ದ. ನಮ್ಮ ರೈತ ಸಂಘದ ಕಾರ್ಯಕರ್ತರ ಹತ್ತಿರ ಅವನು ಪುನಃ ಬಂದು that is my suitcase ಎಂದು ಕೇಳಿದ ತಕ್ಷಣ come, take, go ಎಂದು ಹೀಗೆ ಮೂರು ಪದಗಳಲ್ಲಿ ಅಷ್ಟು ದೊಡ್ಡ ಆಸ್ತಿ ಇರತಕ್ಕಂಥ ಸೂಟ್‌ಕೇಸ್‌ನ್ನು ಕೊಟ್ಟರು, ಅಂಥ ರೈತರ ಮೇಲೆ ಇವತ್ತು ಡಕಾಯಿತಿ ಕೇಸ್. ಇದು ಉದ್ದೇಶಪೂರ್ವಕವಾಗಿ ಮಾಡಿರತಕ್ಕಂಥಾದ್ದು. ಸನ್ಮಾನ್ಯ ಅಧ್ಯಕ್ಷರೇ, ಹೋರಾಟಗಾರರು ಒಂದು ಜವಾಬ್ದಾರಿಯನ್ನು ನಿರ್ವಹಣೆ ಮಾಡುತ್ತರೆ. ಈ ಹೋರಾಟದ ಚಳುವಳಿಯ ಉದ್ದೇಶ ಇಡೀ ರಾಜ್ಯದ ಜನತೆಯನ್ನು ಕಣ್ಣು ತೆರಸತಕ್ಕಂಥ ಕಾರ್ಯಕ್ರಮ, ಇದು ನಮ್ಮ ಜವಾಬ್ದಾರಿಯ ಕೆಲಸ ಮಾಡಿದ್ದೇವೆ. ಸರ್ಕಾರ ದಸ್ತಗಿರಿ ಮಾಡಿದ ಮೇಲೆ ನ್ಯಾಯಯುತವಾಗಿ ಮೊಕದ್ದಮೆಗಳನ್ನು ಹಾಕಿದರೆ ಪರವಾಗಿಲ್ಲ; ಉದ್ದೇಶಪೂರ್ವಕವಾಗಿ ಇಡೀ ಚಳುವಳಿಯನ್ನು ದಮನ ಮಾಡತಕ್ಕಂಥ ಒಂದು ವಿಚಾರದ ಆಧಾರಧ ಮೇಲೆ ಸರ್ಕಾರ ಈ ನಿಲುವು ಹೊಂದಿರುವುದರಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ, ತಾವು ನಮ್ಮ ಸಹಾಯಕ್ಕೆ ಬರಬೇಕು. ಇದು ಅತ್ಯಂತ ಗಂಭೀರವಾದ ವಿಷಯ. ಸನ್ಮಾನ್ಯ ಮುಖ್ಯಮಂತ್ರಿಗಳು ಯಾವ ಉದ್ದೇಶದಿಂದ ನಮ್ಮ ಬಗ್ಗೆ ಈ ನಿಲುವು ತಾಳಿದರೋ ನನಗೆ ಗೊತ್ತಿಲ್ಲ.

ಉದಾಹರಣೆಗೆ ನಾನು ಅವರ ಮನೆಗೆ ಹೋಗಿದ್ದೆ. ಅವರ ಮನೆಗೆ ನಾನು, ಒಂದು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ವಿಷಯಕ್ಕೆ ಹೋದರೆ, ಸುಮಾರು 30-35 ನಿಮಿಷಗಳ ಕಾಲ, ಅದೇನು ಹಸಿರು ಟವೆಲ್ ಕಂಡರೆ ಅವರಿಗೆ ಸಿಟ್ಟಿತ್ತೋ, ಏನಿತ್ತೋ, ನನ್ನನ್ನು ಏನು ಅಂತಲ ಮಾತನಾಡಿಸಲಿಲ್ಲ. ನನ್ನ ಪಕ್ಕದಲ್ಲಿ ಅವರು ಬಂದ ತಕ್ಷಣ ನಾನು ಎದ್ದು ನಿಂತುಕೊಂಡೆ. ಅವರು ಪಕ್ಕದಲ್ಲಿದ್ದ ಒಬ್ಬ ವಿದೇಶೀಯವ, ಡಿಸೋಜ ಎನ್ನುವ ಒಬ್ಬ ವ್ಯಕ್ತಿಯನ್ನು ಬರಹೇಳು ಅಂತ ಹೇಳಿದರು. ಅವರ ಮುಂದೆಯೇ 30-35 ನಿಮಿಷಗಳ ಕಾಲ ನಾನು ನನ್ನ ಸ್ವಂತಕ್ಕೋಸ್ಕರ, ಯಾವುದಾದರೂ ಖಾಸಗಿ ಕೆಲಸಕ್ಕಾಗಿ ಅವರ ಹತ್ತಿರ ಹೋಗಿರಲಿಲ್ಲ. ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ವಿಷಯದ ಬಗ್ಗೆ, ಬಡಾವಣೆ ಬಗ್ಗೆ, ಸರ್ಕಾರ ಹಣ ಕೊಡುವುದರ ಬಗ್ಗೆ ಅವರ ಹತ್ತಿರ ಕೇಳಿಕೊಳ್ಳುವುದಕ್ಕೆ ಅಂತ ಹೋದಾಗ 30-35 ನಿಮಿಷಗಳ ಕಾಲ ನಾವು ಅಲ್ಲೇ ನಿಂತಿದ್ದರು ಮಾತನಾಡಲಿಲ್ಲ. ನನಗೆ ಗೊತ್ತಿಲ್ಲ. ನಾನು ಒಬ್ಬ ಹೊಸ ಸದಸ್ಯ. ಈ ರಾಜ್ಯದ ಮುಖ್ಯಮಂತ್ರಿ ಇಡೀ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳ ಬಗ್ಗೆ ಯಾವ ತರಹದ ನಿಲುವು ಇರಬೇಕು, ಯಾವ ತರಹದ ಒಂದು ವಿಶ್ವಾಸದ ಭಾವನೆ ಇರಬೇಕು, ಯಾವ ಉದ್ದೇಶದಲ್ಲಿ ಇರಬೇಕು ಎನ್ನತಕ್ಕಂಥ ವಿಷಯದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ರೀತಿ ರೈತ ಸಂಘವನ್ನು ಕಂಡರೆ ಅದು ವೈಯಕ್ತಿಕ ದ್ವೇಷವನ್ನು ಯಾವ ಕಾರಣಕ್ಕೆ ವಿರೋಧ ಮಾಡುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ, ನಂತರ ಈಗ ಮೊನ್ನೆ ದಿವಸವೂ ಅಷ್ಟೇ, 19 ನೇ ತಾರೀಖು. ಸುಮಾರು 30ನೇ ತಾರೀಖಿನಿಂದ 19ನೇ ತಾರೀಖಿನವರೆಗೆ ನಡೆದಂಥ ನಡವಳಿಕೆ ಬಗ್ಗೆ ತಮಗೆ ಹೇಳುತ್ತೇನೆ ನೋಡಿ. ವಾಟಾಳ್ ನಾಗರಾಜ್‌ರವರು ಆ ವಿಷಯ ಹೇಳಿದರು. ಮೈಸೂರಿನ ವೇದಿಕೆಯಲ್ಲಿ ನಡೆದಂಥ ಒಂದು ಸಂಗತಿ. ಮೈಸೂರಿನ ವೇದಿಕೆಯಲ್ಲಿ, ಹೌದು, ನಾನು ಹೇಳುತ್ತೇನೆ, ಒಪ್ಪಿಕೊಳ್ಳುತ್ತೇನೆ, ನಾನು ಪ್ರತಿಭಟನೆ ಮಾಡಿದ್ದೇನೆ. ನನ್ನನ್ನು ಕಾನೂನು ಪ್ರಕಾರ ಪೋಲೀಸರು ಬಂಧನ ಮಾಡಲಿ, ನ್ಯಾಯಾಲಯಕ್ಕೆ ಒಪ್ಪಿಸಲಿ. ಆದರೆ ಜನತಾ ದಳದ ಕೆಲವು ಕಾರ್ಪೊರೇಟರ್‌ಗಳು, ಇವತ್ತು ಉನ್ನತ ಹುದ್ದೆಯಲ್ಲಿ ಇರತಕ್ಕಂಥ ಕಾರ್ಪೊರೇಟರ್‌ಗಳು, ಇವತ್ತು ಏನು ಮೇಯರ್ ಆಗಿದ್ದಾರೆ ಅವರೂ ಸೇರಿದ ಹಾಗೆ ರೈತ ಸಂಘದ ಕಾರ್ಯಕರ್ತರಿಗೆ, ಒಬ್ಬ ಅಂಗವಿಕಲನಿಗೆ ಕಾಲಿನಿಂದ ಹೊಡೆಯುತ್ತಾರೆ.

ಅದರಿಂದಾಗಿ ಅವನು ಆಸ್ಪತ್ರೆಯಲ್ಲಿ ಸುಮಾರು ಎರಡು ದಿವಸ ಇದ್ದ. ಬೂಟ್ಸ್‌ಕಾಲಿನಿಂದ ಹೊಡೆಯತಕ್ಕಂಥ ವ್ಯವಸ್ಥೆಗೆ ದಳದ ಕಾರ್ಪೊರೇಟರ್‌ಗಳು ಮಾನ್ಯ ಮುಖ್ಯಮಂತ್ರಿಗಳ ಎದುರಿಗೆ ಪ್ರಯತ್ನ ಪಟ್ಟಿದ್ದಾರೆ. ಇದು ಯಾವ ತರಹದ ಕಾರ್ಯಕ್ರಮ.? ಚಳುವಳಿ ನನ್ನ ಹಕ್ಕು. ನನ್ನನ್ನು ಕಾನೂನು ಪ್ರಕಾರ ನೀವು ಬಂಧನ ಮಾಡಿ. ನನಗೆ ಏನು ಶಿಕ್ಷೆ ಕೊಡಬೇಕೋ ಕೊಡಲಿ. ಆದರೆ ಮುಖ್ಯಮಂತ್ರಿಗಳ ಎದುರುಗಡೆ ದಳದ ಕಾರ್ಯಕರ್ತರು ಹಲ್ಲೆ ಮಾಡುವುದು ಎಷ್ಟೊಂದು ಅಮಾನುಷ ಎಂದು ಸಭಾಧ್ಯಕ್ಷರು ಯೋಜನೆ ಮಾಡಬೇಕು. ನಂತರ, ಅದೇ ಸಭೆಯಲ್ಲಿ ಹೇಳಿದ್ದಾರೆ. "ಇವರನ್ನು ಎಲ್ಲಿಯಾದರೂ ದೂರ ಕರೆದುಕೊಂಡು ಹೋಗಿ ಬಿಟ್ಟುಬಿಡಿ" ಎಂದು ಸಿಎಂ ರವರು ಹೇಳಿದರು. ಯಾವತ್ತು? ನಕಲಿ ರೈತರ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ನಾವು ನಕಲಿ ರೈತರು. ಅಸಲಿ ರೈತರು ಯಾರು ಎಂದು ನಮಗೆ ಗೊತ್ತಾಗಬೇಕು. ಈ ರಾಜ್ಯದಲ್ಲಿ ನಮಗೆ ಎರಡು ಕಾರ್ಡ್ ಕೊಟ್ಟರೆ ಒಳ್ಳೆಯದು. ಅಸಲಿ ರೈತರು ಯಾರು ಎಂದು ಒಂದು ಗುರುತಿನ ಕಾರ್ಡ್, ನಕಲಿ ರೈತರು ಯಾರು ಎಂದು ಒಂದು ಗುರುತಿನ ಕಾರ್ಡ್. ನಕಲಿ ರೈತರು ಗುರುತು ಕಾರ್ಡ್ ಕೊಟ್ಟತಕ್ಷಣ ಪೋಲಿಸ್‌ನವರು ಅರೆಸ್ಟ್ ಮಾಡುವುದಕ್ಕೆ ಗೊತ್ತಾಗುತ್ತದೆ ಇವರು ಡೂಪ್ಲಿಕೇಟ್ ರೈತರು, ಇವನು ಒರಿಜಿನಲ್ ರೈತ ಎಂದು. ಇಲ್ಲೊಂದು ಇದೆ ನೋಡಿ. "ಮಳವಳ್ಳಿ ಜನಸಾಮಾನ್ಯರ ನಿತ್ಯ ಜೀವನಕ್ಕೆ ತೊಂದರೆಯಾಗುವ ರಸ್ತೆ ತಡೆ ನಡೆಸುವ ಚಳುವಳಿಗಾರರ ವಿರುದ್ಧನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ" ಹೀಗೆಂದು ಸನ್ಮಾನ್ಯ ದೇವೆಗೌಡರು ಭಾರತೀನಗರದಲ್ಲಿ ಭಾಷಣ ಮಾಡುತ್ತಾ ರೈತ ಸಂಘದ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶನ ಮಾಡಿದಾಗ ಇಂಥ ಚಳುವಳಿಗಾರರನ್ನು ನನ್ನ ಜನ ನೋಡಿಕೊಳ್ಳುತ್ತಾರೆ. "ಅಂತ ಹೇಳಿದ್ದಾರೆ. ಯಾವ ಭಾಷೆ? ಚಳುವಳಿಗಾರರನ್ನು ಚಳುವಳಿ ಮಾಡುವವರನ್ನು ನನ್ನ ಜನ ನೋಡಿಕೊಳ್ಳುತ್ತಾರೆಂದರೆ ಅರ್ಥವೇನು? ಇವರ ಜನ ಯಾರು? ನನಗೆ ಗೊತ್ತಿಲ್ಲ, ಈ ಬಗ್ಗೆ ಹೇಳಿದಾಗ ಸಭೆ ನಿಶ್ಯಬ್ಧವಾಯಿತು. 19ನೇ ತಾರೀಖು ಮೈಸೂರಿನಲ್ಲಿ ನಡೆದಂಥ ಗಲಾಟೆಯ ವಿರುದ್ಧ ಒಂದು ಪ್ರತಿಭಟನಾ ಸಭೆಯನ್ನು ಮಾಡುವುದಕ್ಕೆ ನಾವು ಹೋದಾಗ ಇಡೀ ಮೈಸೂರು ಸುತ್ತ ಪೋಲೀಸ್ ಪಡರೆಯನ್ನು ಹಾಕಿ ಯಾರ್‍ಯಾರು ಹಸಿರು ಟವಲನ್ನು ಹಾಕಿದ್ದಾರೆ. ಯಾರ್‍ಯಾರು ಹಸಿರು ಸೀರೆ ಉಟ್ಟಿದ್ದಾರೆ, ಅವರೆಲ್ಲರನ್ನೂ ಕೆರೆಗೆ ಎಸೆಯಿರಿ. ನೀವ್ಯಾರು ಮೈಸೂರಿನೊಳಗದ ಹೋಗಬಾರದು, ಸರ್ಕಾರದಿಂದ ಆದೇಶ ಬಂದಿದೆ ನಮಗೆ. ಪ್ರತಿಭಟನೆ ಮಾಡಕೂಡದು ಎಂದು ಹೇಳಿ ನನ್ನನ್ನು ಕಾರಿಗೆ ತಳ್ಳಿ ರೈತ ಸಂಘದವರು ಅಹಿಂಸಾತ್ಮಕಮಾರ್ಗದಲ್ಲಿ ಚಳವಳಿ ಮಾಡಬಾರದು, ಪ್ರತಿಭಟನಾ ಸಭೆ ಮಾಡಬಾರದು ಎಂದು ಸಂವಿಧಾನದ ವಿಚಾರವನ್ನು ಮೊಟಕುಗೊಳಿಸುವಂಥ ಕಾರ್ಯಕ್ರಮ ಗೃಹಇಲಾಖೆಯಿಂದ ಆಗಿದೆ. ಯಾವ ಕಾರಣಕ್ಕೆ ಆಗಿದೆ ಎಂದು ಗೊತ್ತಿಲ್ಲ.

ಒಬ್ಬ ಪೋಲೀಸ್ ಅಧಿಕಾರಿ ನನಗೆ ಏನೂ ಗೊತ್ತಿಲ್ಲ, ನಿಮ್ಮನ್ನು ಬಿಡುವುದಿಲ್ಲ ಎಂದು ಹೇಳಿದ ಅಲ್ಲೇನು ಅವರು ಪೋಲಿಸ್‌ನವರೋ ಇದ್ದರೋ ಅಥವ ಫ್ಯಾನ್ಸಿ ಡ್ರೆಸ್ ಹಾಕಿದ್ದರೋ ನನಗೆ ಗೊತ್ತಾಗಲಿಲ್ಲ, ನಾನು ಒಬ್ಬ ಶಾಸಕ, ಯಾವ ಕಾರಣಕ್ಕೋಸ್ಕರ ನೀವು ನನ್ನನ್ನು ತಡೆಯುತ್ತಿದ್ದೀರಿ ಹಸಿರು ಟವಲ್ ನವರನ್ನೆಲ್ಲ ಎಂದಾಗ ಅದು ಸರ್ಕಾರದ ಆದೇಶ, ನನಗೆ ಗೊತ್ತಿಲ್ಲ ಅಂತ ಹೇಳಿದ. ಸರ್ಕಾರ ಅಹಿಂಸಾತ್ಮಕ ಮಾರ್ಗದಲ್ಲಿ ಮಾಡಿರುವ ಚಳುವಳಿಗಳನ್ನು ದಮನ ಮಾಡಬೇಕೆಂದು ಹೇಳಿದೆಯೇ? ನಂತರ ಧರ್ಮೇಶ್ ಎಂದು ಒಬ್ಬ ಪೋಲೀಸ್ ಅಧಿಕಾರಿ, ಅವನು ಯಾರ ಗ್ರೇಡ್‌ನವನೋ ಗೊತ್ತಿಲ್ಲ ಹಾಗೂ ಇನ್ನೊಬ್ಬ ಟ್ರಾಫಿಕ್‌ನವರು ಬೇಜವಾಬ್ದಾರಿತನದಲ್ಲಿ ನನಗೆ ಮಾತನಾಡಿದರು. ಕೊನೆಗೆ ಸರ್ಕಾರದಿಂದ ಈಗ ಆದೇಶ ಬಂದಿದೆ. ನಿಮ್ಮನ್ನು ಟೌನ್‌ಹಾಲ್‌ಗೆ ತೆಗೆದುಕೊಂಡು ಹೋಗಿ ಬಿಡಬಹುದು ಬೀದಿಯಲ್ಲಿ ಇನ್ನೆಲ್ಲೂ ಬಿಡುವ

ಹಾಗೆ ಇಲ್ಲ, ಅಂತ ಹೇಳಿ ನಮ್ಮನ್ನೆಲ್ಲಾ ಅರೆಸ್ಟ್ ಮಾಡಿಕೊಂಡು ಟೌನ್‌ಹಾಲ್‌ಗೆ ಕರೆದು ಕೊಂಡು ಹೋಗಿ ಬಿಡುವ ಒಂದು ವ್ಯವಸ್ಥೆ. ಟೌನ್‌ಹಾಲ್‌ನಲ್ಲಿ ಸುತ್ತ ಪೋಲೀಸ್ ಸಾಮ್ರಾಜ್ಯವನ್ನೇ ರಚನೆ ಮಾಡಿದ್ದಾರೆ. ಡಿಸಿ. ಹತ್ತಿರ ನಮ್ಮ ವಿಚಾರವನ್ನು ಕೊಟ್ಟು ಅವರ ಗಮನಕ್ಕೆ ತರಬೇಕು ಎಂದು ಬಂದಾಗ ಡಿಸಿ ಕಛೇರಿ ಸುತ್ತ 50 ಮಿಟರ್ ನಿಷೇದಾಜ್ಞೆ, ನಾನು ಹೇಳುತ್ತೇನೆ, ಕಾನೂನು ವ್ಯವಸ್ಥೆ ಎಷ್ಟು ಅಧೋಗತಿಗೆ ಹೋಗಿದೆ. ದಿನನಿತ್ಯ ಬದುಕುವ ಜೀವನದ ಜನರಿಗೆ ಕಾನೂನು ವ್ಯವಸ್ಥೆ ಇಲ್ಲ.

ಉದಾ:ಗೆ ಹೈಕೋರ್ಟ್ ನ್ಯಾಯಮೂರ್ತಿ ಎಂ.ಎಸ್. ಸಲ್ಡಾನಾ ಅವರು ಹೇಳಿದರು. ಈ ರಾಜ್ಯಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎಷ್ಟೊಂದು ಪತ್ರಿಕೆಗಳಲ್ಲಿ ಬಂದಿದೆ. ಕೊಲೆ, ಅತ್ಯಾಚಾರ ಎಷ್ಟೊಂದು ಅನಾನುಕೂಲಗಳಾಗಿದೆ. ಅಪರಾಧಗಳನ್ನು ಪತ್ತೆ ಹಚ್ಚುವಲ್ಲಿ ಪೋಲೀಸರು ಕರ್ತವ್ಯದಲ್ಲಿ ವಿಫಲರಾಗಿದ್ದಾರೆ. ಕಾನೂನು ಪಾಲನೆ ಅದಕ್ಕಿಂತ ಮುಖ್ಯವಾದ ಕರ್ತವ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ನ್ಯಾಯಾಲಯದ ಆದೇಶಗಳನ್ನು ತಕ್ಷಣ ಜಾರಿಗೊಳಿಸುವಲ್ಲಿ ಪೋಲೀಸರು ತೋರುವ ತಾತ್ಸಾರ. ಎಂದೆಲ್ಲ ಹೇಳಿದ್ದಾರೆ. ಇಡೀ ಪೋಲೀಸ್‌ನವರ ಬಗ್ಗೆ ನ್ಯಾಯಮೂರ್ತಿಗಳು, ಇಡೀ ಗೃಹಇಲಾಖೆಯ ಬಗ್ಗೆ ಎಷ್ಟೊಂದು ಬೇಜವಾಬ್ದಾರಿತನದ ನಡವಳಿಕೆ ನಡೆಯುತ್ತಿದೆ ಎನ್ನುವ ಬಗ್ಗೆ ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಚಳುವಳಿಗಳನ್ನು ಹತ್ತಿಕ್ಕತಕ್ಕಂಥ ಒಂದು ವಿಷಯದಲ್ಲಿ ಸರ್ಕಾರ ದಮನ ನೀತಿಯನ್ನು ಅನುಸರಿಸುತ್ತಿದೆ. ಈ ಸರ್ಕಾರದ ನೀತಿಯ ವಿರುದ್ಧ ನಾವು ಬಹಳ ಜವಾಬ್ದಾರಿಯುತವಾಗಿ ನಾವು ಹೋರಾಟ ಮಾಡಬೇಕಾಗಿದೆ. ಸಭಾಧ್ಯಕ್ಷರು ಮಧ್ಯೆ ಬಂದು ಪ್ರೊ: ನಂಜುಂಡಸ್ವಾಮಿ ಹಾಗೂ ರೈತ ಸಂಘದ ಕಾರ್ಯಕರ್ತರ ಮೇಲೆ ಹಾಕಿರುವ ಒಂದು ಮೊಕದ್ದಮೆಯನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಸರ್ಕಾರದ ಮೇಲೆ ಒತ್ತಾಯ ಮಾಡಬೇಕೆಂದು ಹೇಳುತ್ತಾ ದಯವಿಟ್ಟು ತಾವು ಮಧ್ಯೆ ಪ್ರವೇಶ ಮಾಡಿ ಈ ರೀತಿಯ ನಡವಳಿಕೆ ನಡೆಯದ ಹಾಗೆ ನಿಲುವಳಿ ಜೊತೆಗೆ ಇನ್ನೂ ಬಹಳ ಜನ ಜವಾಬ್ದಾರಿಯುತವಾಗಿ ಚರ್ಚೆ ಮಾಡುವವರು ಬಹಳ ಜನ ಇದ್ದಾರೆ. ಈ ನಿಲುವಳಿ ಸೂಚನೆಯ ಚರ್ಚೆಗೆ ತಾವು ಹೆಚ್ಚು ಒತ್ತು ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆ, ಬಗ್ಗೆ ಬೆಂಬಲ ಸೂಚಿಸಿ ಒಂದೆರಡು ಮಾತು ಹೇಳುತ್ತೇನೆ. ಇದು ಬಹಳ ಪ್ರಾಮುಖ್ಯವಾಗಿರತಕ್ಕಂಥದ್ದು. ನಾನು ಒಪ್ಪಿಕೊಳ್ಳುತ್ತೇನೆ, ನಾನು ಸಹಿ ಮಾಡಿಲ್ಲ.

MR. SPEAKER : It becomes very difficult. I will be laying down a new precedent. ಹೀಗಾದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಬಹಳ ಪ್ರಾಮುಖ್ಯವಾಗಿರುವ ವಿಷಯ.

ಅಧ್ಯಕ್ಷರು : ವಿಷಯ ಪ್ರಾಮುಖ್ಯವಲ್ಲ ಎಂದು ನಾನು ಹೇಳುತ್ತಲೇ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರ ಬಗ್ಗೆ ನಾನು ಮಾತನಾಡಲಿಕ್ಕೆ ಎದ್ದಿರತಕ್ಕಂಥದ್ದು. ದಯವಿಟ್ಟು ಸ್ವಲ್ಪ ಕಾಲಾವಕಾಶ ಮಾಡಿಕೊಡಿ.

ಅಧ್ಯಕ್ಷರು : ನಾನು ಏನು ಹೇಳುತ್ತೇನೆ, ದಯಮಾಡಿ ಅರ್ಥಮಾಡಿಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎರಡು ನಿಮಿಷ ನನಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷು : ಒಂದು ದಿವಸ ಇದನ್ನು ನಾನು ಪ್ರಾರಂಭ ಮಾಡಿದರೆ ಮತ್ತೆ ಸದಾಕಾರ ನಾನು ಇದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಇನ್ನೊಂದು ಸಂದರ್ಭ ಇಂಥದೇ ಬಂದಾಗ ಈ ವಿಷಯ ಪ್ರಾಮುಖ್ಯವಲ್ಲ ಎಂದಾಗಲಿ ಅಥವಾ ತಮ್ಮನ್ನು ಮಾತನಾಡುವುದಕ್ಕೆ ಅವಕಾಶ ಕೊಡಬಾರದು ಎಂದಾಗಲಿ ಇಲ್ಲ ನಾನು ಖಂಡಿತ

ತಮಗೆ ಅವಕಾಶ ಕೊಡುತ್ತಿದ್ದೆ. ನನ್ನ ಸಮಸ್ಯೆ ಏನೆಂದರೆ ಅಧಿಕೃತವಾಗಿ ನಮ್ಮ ದಾಖಲೆಗಳಲ್ಲಿ ತಾವು ಸಹಿ ಮಾಡಿ ಕಳುಹಿಸಿಲ್ಲ. ಇವೊತ್ತು ಒಂದು ದಿವಸ ಈ ವಿಷಯಕ್ಕೆ ನಾನು ಆ ರೀತಿ ಅಧಿಕಾರವನ್ನು ಚಲಾವಣೆ ಮಾಡಿದರೆ ಇದನ್ನೇ ಮತ್ತೊಬ್ಬರು ಕೋಟ್ ಮಾಡಿದಾಗ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ವಿಷಯಕ್ಕೂ ಬೇರೆ ವಿಷಯಕ್ಕೂ ವ್ಯತ್ಯಾತಸ ಇದೆ.

ಅಧ್ಯಕ್ಷರು : ನನಗೆ ಗೊತ್ತಿದೆ ಅದು. ನನ್ನ ಸಮಸ್ಯೆಯನ್ನು ನೀವು ಅರ್ಥ ಮಾಡಿಕೊಳ್ಳಬೇಕು. ನಾನು ಸದನವನ್ನು ನಡೆಸಬೇಕಲ್ಲವೇ. ನಾವೇ ರೂಪಿಸಿಕೊಂಡಿರುವ ನಿಯಮಾವಳಿಗಳು ಇವೆ. ಒಂದು ಚೌಕಟ್ಟಿನಲ್ಲಿ ಕೆಲಸ ಮಾಡಬೇಕು. ನಿಮಗೆ ಗೊತ್ತಿದೆ ನನ್ನ ಸ್ವಭಾವ ಕೂಡ. ನಿಮಗೆ ಅವಕಾಶ ಕೊಡಬಾರದು ಎಂತಲ್ಲ, ನನ್ನ ಸಮಸ್ಯೆ ಏನೆಂದರೆ ಈಗ ನಿಮಗೆ ನಾನು ಮಾತನಾಡುವುದಕ್ಕೆ ಅವಕಾಶ ನೀಡಿದರೆ ಖರ್ಗೆಯವರು ಕೈಎತ್ತಿದರೆ ನಾನೇನು ಮಾಡಲಿ ಹೇಳಿ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಸದರಿ ವಿಷಯವನ್ನು ಬೆಂಬಲಿಸಿ ನಾನು ಎರಡು ಮಾತುಗಳನ್ನು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಕುನ್ನೂರ್‌ರವರು ಆಗಲೇ ಎದ್ದು ನಿಂತೇಬಿಟ್ಟಿದ್ದಾರೆ. ನಿಮಗೇನು ಕೋಳಿದೇನು ಸಂಬಂಧ? ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಕೋಳಿಯದಲ್ಲ, ಬಹಳ ಗಂಭೀರವಾದಂಥ ವಿಷಯ ಇದೆ. ದಯವಿಟ್ಟು ಈ ಒಂದು ವಿಷಯಕ್ಕೆ ನಮಗೆ ಅವಕಾಶ ಮಾಡಿಕೊಡಿ. ನಾವು ಬೇರೆ ವಿಷಯದಲ್ಲಿ ಕೇಳುವುದಿಲ್ಲವಲ್ಲ.

MR. SPEAKER : I don't think I can do it. Please call the Secretary. You are putting me in avery embarrassing situation. I am definitely unwilling to displease. you. ತಾವು ಕುಳಿತುಕೊಳ್ಳಿ ಕುನ್ನೂರ್‌ರವರೇ. ಇದೊಂದು ರಾಜಕೀಯ ಸಿದ್ಧಾಂತದ ವಿಚಾರದಲ್ಲಿ ನಡೆಯುತ್ತಿರತಕ್ಕಂಥ ಚರ್ಚೆ. ಅವರ ಪಕ್ಷದಿಂದ ಈ ಸದನದಲ್ಲಿ ಅವರೊಬ್ಬರೇ ಪ್ರತಿನಿಧಿಗಳು. ಅವರು ಏನು ಬೇಕಾಗಿದ್ದರೂ ಹೇಳುವುದಕ್ಕೆ ಬರುತ್ತದೆ. ಅವರು ಪಕ್ಷದ ಪ್ರತಿನಿಧಿಯಾಗಿ ಹೇಳುತ್ತಾರೆ. ಪುಟ್ಟಣ್ಣಯ್ಯನವರು ನಿಮ್ಮ ಪರವಾಗಿ ಆ ವಿಚಾರದಲ್ಲಿ ಏನಾದರೂ ಹೇಳುವುದಿದ್ದರೆ ನೀವು ಸ್ವತಂತ್ರವಾಗಿ ಹೇಳುವುದಕ್ಕೆ ಬರುವುದಿಲ್ಲ, ನಿಮ್ಮ ನಾಯಕರು ಹೇಳಬೇಕು ಅಷ್ಟೆ. ನೀವು ಹಾಗೆ ಎದ್ದುನಿಂತುಕೊಂಡರೆ ನಾನು ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರ್ :ನಮ್ಮ ನಾಯಕರ ಪರ್ಮಿಷನ್ ತೆಗೆದುಕೊಂಡೇ ನಾನು ಎದ್ದುನಿಂತಿದ್ದೇನೆ.

ಅಧ್ಯಕ್ಷರು : ಹಾದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಬರೀ ಅರೆಸ್ಟ್ ಬಗ್ಗೆ ಮಾತ್ರ ಮಾತನಾಡುತ್ತಾರೆ. ಬೇರೆ ವಿಷಯದಲ್ಲ.

MR. SPEAKER : No, you cannot speak. ನೀವು ಆ ರೀತಿ ಮಾಡಿ ಮಾಡುವುದಕ್ಕಾಗುವುದಿಲ್ಲ, ಇದು ನಿಮ್ಮದ್ದೇ ಪ್ರಸಾರ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ತಾರೀಖು 20ರಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾವೊಂದು ಮನವಿಯನ್ನು ತಮಗೆ ಕೊಟ್ಟಿದ್ದೇವೆ.

ಅಧ್ಯಕ್ಷರು : ಕೊಟ್ಟಿದ್ದೀರಿ. I will see to it.

ಶ್ರೀ ಬಿ.ಬಿ. ಶಿವಪ್ಪ : ಏಕೆಂದರೆ ಈ ಬಹು ರಾಷ್ಟ್ರೀಯ ಸಂಸ್ಥೆಗಳು ರಾಷ್ಟ್ರದಲ್ಲಿ ಜನಸಾಮಾನ್ಯರ ....

MR. SPEAKER : It is before me. I have not closed it.

ಶ್ರೀ ಬಿ.ಬಿ. ಶಿವಪ್ಪ : ಇದರ ಜೊತೆ ಸೇರಿಸಿದ್ದೀರೋ ಇಲ್ಲಾ ಬೇರೆ ಅದಕ್ಕೆ ಅನುಮತಿ ಕೊಡುತ್ತಿದ್ದೀರೋ?

ಅಧ್ಯಕ್ಷರು : ಇದರ ಜೊತೆಯಲ್ಲೇ ಕೊಡುತ್ತೇನೆ.

ಶ್ರೀ ಜಿ.ಬಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಈ ವಿಷಯವೆಲ್ಲಾ ಪ್ರಸ್ತಾಪವಾಗಿದೆ. ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ದಯಮಾಡಿ ತಿಳಿದುಕೊಳ್ಳಿ. It is an academic interest. ಎಲ್ಲ ವಿಚಾರಗಳನ್ನು ಚರ್ಚೆ ಮಾಡುವುದು ಸರಿಯಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಅಷ್ಟಕ್ಕೇ ಸೀಮಿತವಾಗಿ ಹೇಳುತ್ತೇನೆ.

ಅಧ್ಯಕ್ಷರು : ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಅಡ್ಮಿಟ್ ಮಾಡಬೇಕೇ ಅಥವ ಮಾಡಬಾರದೇ, ಎಂಬುದಕ್ಕೆ ಸೀಮಿತವಾಗಿ ಮಾತ್ರ ಹೇಳಿ. Kindly listen to me.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಡ್ಜರ್ನ್‌ಮೆಂಟ್ ಮೋಷನ್ ಅಡ್ಮಿಟ್ ಮಾಡತಕ್ಕಂಥ....

MR. SPEAKER : Kindly listen to me. ನೀವು ಅದಕ್ಕೆ ಮೊದಲು ಏನು ಮಾಡಬೇಕು ಎಂದರೆ ಅಂಡರ್ ರೂಲ್ 60,61,62 ಇನ್‌ಗ್ರೇಡಿಯೆಂಟ್ಸ್ ಏನೇನು ಇರುತ್ತವೆ, ಏನು ಇರಬೇಕು to convince the Speaker about the admissibility.ಆ ಲಿಮಿಟ್ ಒಳಗೆ Whatever you want to say yoyu should cover it up you should display that skill to present all that you have decided to say well within the ambit of this rule.

SRI G.V, SREERAM REDDY : Definitely I will try for it.

MR. SPEAKER : Please do ir.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಮಾಡತಕ್ಕಂತಹ ಹಕ್ಕು ನಮಗೆ ಇದೆ. ಆದರೆ ಇದರ ಸ್ವರೂಪಗಳು ಬೇರೆ ಬೇರೆ ರೀತಿಯಲ್ಲಿರುತ್ತವೆ, ಆದರ ಪ್ರತಿಭಟನೆ ಮಾಡುವವರು ಆಯ್ಕೆ ಮಾಡಿಕೊಳ್ಳುವಂಥ ವಿಷಯ ಬೇರೆ ಬೇರೆಯಾಗಿರುತ್ತದೆ. ರೈತ ಸಂಘದವರು ಬಹು - ರಾಷ್ಟ್ರೀಯ ಸಂಸ್ಥೆಗಳ ವಿರುದ್ಧ ಆಯ್ಕೆ ಮಾಡುವಂತಹ ವಿಧಾನವನ್ನು ಖಂಡತವಾಗಿ ನಾನು ಕೂಡ ಒಪ್ಪುವುದಿಲ್ಲ, ಆದರೆ ಆ ಚಳುವಳಿಯ ಹಕ್ಕನ್ನು ನಿರಾಕರಿಸುವಂಥದ್ದನ್ನು ಕೂಡ ನಾನು ಒಪ್ಪಲಿಕ್ಕೆ ತಯಾರಿಲ್ಲ. ರೈತ ಸಂಘದವರು ಚಳುವಳಿಯನ್ನು ಮಾಡಿದ್ದಾರೆ. ಆದರೆ ಅವರ ಮೇಲೆ ಹಾಕಿರತಕ್ಕಂತಹ ಮೊಕದ್ದಮೆಗಳ, ಬಗ್ಗೆ ಎರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಈಗ ಅಧಿಕಾರದಲ್ಲಿರತಕ್ಕಂತಹ ಸರ್ಕಾರ ಮಾತ್ರ ಈ ರೀತಿಯಾಗಿ ಕೇಸ್ ಹಾಕಿದ್ದಾರೆ. ಎಂದು ಹೇಳಿದಂಥ ಮಾತನ್ನು ನಾನು ಒಪ್ಪುವುದಿಲ್ಲ. 15ನೇ ಏಪ್ರಿಲ್ 1993ನೇ ಇಸವಿಯಲ್ಲಿ ಡ್ಯಾಟ್ ಒಪ್ಪಂದಕ್ಕೆ ಸಹಿ ಹಾಕುವಂತಹ ಸಂದರ್ಭದಲ್ಲಿ ನಾವು ರಾಜಭವನಕ್ಕೆ ಮುತ್ತಿಗೆ ಹಾಕುವಂತಹ ಸಂದರ್ಭದಲ್ಲಿ ಶ್ರೀ

ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಅವರ ಸರ್ಕಾರ ಅಧಿಕಾರದಲ್ಲಿದ್ದಾಗ ನಮ್ಮ ಮೇಲೆ ಇದೇ ರೀತಿಯ ಸೆಕ್ಷನ್ 307 ಕೇಸನ್ನು ಬೆಂಗಳೂರಿನಲ್ಲಿಯೇ ಹಾಕಿದ್ದಾರೆ. ಆದರೆ ಶ್ರೀ ವೀರಪ್ಪ ಮೊಯಿಲಿಯವರ ಸರ್ಕಾರ ಯಾವ ಕಾರ್ಯವನ್ನು ಅನುಸರಿಸಿದೆಯೋ ಅದನ್ನು ಮಾನ್ಯ ಶ್ರೀ ದೇವೇಗೌಡರ ಸರ್ಕಾರ ಆ ದಾರಿಯನ್ನು ಅನುಸರಿಸಬಾರದು ಎನ್ನುವಂಥದ್ದು ನಮ್ಮ ಕಳಕಳಿಯ ಮನವಿ. ಪ್ರೊ| ನಂಜುಂಡಸ್ವಾಮಿಯವರ ನೈತೃತ್ವದಲ್ಲಿರತಕ್ಕಂತಹ ರೈತ ಸಂಘದವರ ಚಳುವಳಿಯನ್ನು ನಾವು ಒಪ್ಪದೇ ಇರಬಹುದು, ಮಾನ್ಯ ದೇವೇಗೌಡರು ಒಪ್ಪದೇ ಇರಬಹುದು, ಸರ್ಕಾರ ಕೂಡ ಒಪ್ಪದೇ ಇರಬಹುದು, ಆದರೆ ಆ ಚಳುವಳಿಯಿಂದ ಆಗಿರತಕ್ಕಂಹ ಅನಾಹುತಗಳ ಬಗ್ಗೆ ಸರ್ಕಾರದವರು ಅವರ ವಿರುದ್ಧ ಮೊಕದ್ದೊಮೆಗಳನ್ನು ಬೇಕಾದರೆ ದಾಖಲು ಮಾಡಿಕೊಳ್ಳಲಿ, ಆದರೆ ಚಳುವಳಿಕಾರರ ಮೇಲೆ ದರೋಡೆ ಕೇಸನ್ನು ಮತ್ತು ಸೆಕ್ಷನ್ಸ್ 307ನೇ ಅಟೆಮ್ಪ್ಟ್‌ಕೇಸನ್ನು ಹಾಕಿರತಕ್ಕಂಥದ್ದು ಇದು ನಿಜವಾಗಿಯೂ ಕೂಡ ಪ್ರಜಾಪ್ರಭುತ್ವದ ಹಕ್ಕನ್ನು ನಿರಾಕರಣೆ ಮಾಡತಕ್ಕಂಥದ್ದಕ್ಕೆ ಪ್ರೇರಣೆ ಕೊಡತಕ್ಕಂಥ ಒಂದು ಕ್ರಮ ಎಂದು ಹೇಳತಕ್ಕಂಥದ್ದು ಒಂದು ಸ್ಪಷ್ಟವಾದಂತಹ ಅಭಿಪ್ರಾಯವಾಗಿದೆ. ಎರಡನೆಯದಾಗಿ ಬಹು ರಾಷ್ಟ್ರೀಯ ಸಮಸ್ಯೆಗಳು ಈ ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯಲಿಕ್ಕೆ ಬರುತ್ತಿರತಕ್ಕಂತಹ ಸಂದರ್ಭದಲ್ಲಿ ನಮ್ಮ ದೇಶದ ಸಂಪತ್ತನ್ನು ನಮ್ಮ ದೇಶದಲ್ಲಿಯೇ ಉಳಿಸಬೇಕು, ನಮ್ಮ ದೇಶದ ಸ್ವತಂತ್ರ, ಸರ್ವಾಭೌಮತ್ವವನ್ನು ನಾವು ರಕ್ಷಣೆ ಮಾಡಬೇಕೆಂದು ಹೋರಾಟ ಮಾಡತಕ್ಕಂಥದ್ದು ನಮ್ಮ ದೇಶದಲ್ಲಿರತಕ್ಕಂಥವರ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇದು ಕಾನೂನಿನ ವ್ಯವಸ್ಥೆಯ, ಕಾನೂನಿನ ಪರಿಪಾಲನೆಯ ಪ್ರಶ್ನೆ ಇದು ಎಂದು ಸರ್ಕಾರ ಬೇಕಾದೆರ ಹೇಳಬಹುದು. ನಾನು ಖಂಡಿತವಾಗಿ ಹೇಳುತ್ತೇನೆ. ಶ್ರೀಮಾನ್ ಮಹಾತ್ಮ ಗಾಂಧಿಜಿಯವರು ಏನು ಹೇಳಿದ್ದಾರೆ ಎಂದರೆ, If law is illegal it is ony right to protest against That Law" ಅಂತ ಆ ಬಹು ರಾಷ್ಟ್ರೀಯ ಸಮಸ್ಯೆಗಳು ಬರತಕ್ಕಂಥದ್ದೇ ಅಕ್ರಮ ಈ ರೀತಿ ಬರತಕ್ಕಂಥ ಸಂದರ್ಭದಲ್ಲಿ ನನ್ನ ಪ್ರಜಾಪ್ರಭುತ್ವದ ಹಕ್ಕು ಈ ದೇಶದ ಸ್ವತಂತ್ರವನ್ನು ಉಳಿಸಲಿಕ್ಕೆ ಅದನ್ನು ನಾನು ಮಾಡತಕ್ಕಂತಹ ಹೋರಾಟವಾಗಿರುತ್ತದೆ. ನಾನು ಹೋರಾಟದಲ್ಲಿ ಕಾನೂನನ್ನು ಮುರಿದಿದ್ದೇನೆ ಎಂದರೆ ನಿಮ್ ಕಾನೂನೇ ಸರಿ ಇಲ್ಲದೇ ಇರತಕ್ಕಂತಹ ಸಂದರ್ಭದಲ್ಲಿ ನಿಮ್ಮ ಕಾನೂನುನ್ನು ಮುರಿಯತಕ್ಕಂಥದ್ದೆ ನನ್ನ ಹಕ್ಕು. ಅದುದರಿಂದ ಅಧ್ಯಕ್ಷರೇ ಈ ದೇಶದಲ್ಲಿ, ಈ ಜಗತ್ತಿನಲ್ಲಿ ಯಾವುದೇ ದೇಶವನ್ನು ತೆಗೆದುಕೊಂಡರೂ ಕೂಡ...

ಅಧ್ಯಕ್ಷರು : ಮಹಾತ್ಮ ಗಾಂಧಿಜಿಯವರು ಹಾಗೆ ಹೇಳಿದಂತಹ ಕಂಟೆಕ್ಸ್ ಯಾವುದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಬ್ರಿಟಿಷರ ವಿರುದ್ಧ ಹೋರಾಟ ಮಾಡತಕ್ಕಂಥ ಸಂದರ್ಭದಲ್ಲಿ ಈ ಮಾತನ್ನು ಹೇದ್ದಾರೆ. ಈಗ ಅಮೇರಿಕ ಸಾಮ್ರಾಜ್ಯ ಶಾಹಿ ವಿರುದ್ಧ ಹೋರಾಟ ಮಾಡುವಾಗ ಇದನ್ನು ತೀವ್ರವಾಗಿ ನಾವು ಹೇಳಬೇಕಾಗುತ್ತದೆ. ಬ್ರಿಟಿಷ್ ಶಾಹಿ ಸಾಮ್ರಾಜ್ಯಗಿಂತ ಇವರು ಬಹಳ ಅಪಾಯಕಾರಿಯಾದಂತಹ ಸಾಮ್ರಾಜ್ಯಶಾಹಿಗಳು, ಇವರು ನಮ್ಮ ದೇಶವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಸಂಸ್ಕೃತವಾಗಿ ಕೊಳ್ಳೆ ಹೊಡೆದು, ದರೋಡೆಯನ್ನು ಮಾಡಿ ಇಡೀ ದೇಶವನ್ನು ಸಂಪೂರ್ಣ ವಾಗಿ ನಾಶ ಮಾಡಲು ಪ್ರಯತ್ನಿಸುತ್ತಿರುವಂತಹ ಬಹುರಾಷ್ಟ್ರೀಯ ಸಂಸ್ಥೆಗಳ ವಿರುದ್ಧ ಮತ್ತು ಹೊಸ ಆರ್ಥಿಕ ಧೋರಣೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹಲವಾರು ಸಂದರ್ಭದಲ್ಲಿ ಶ್ರೀಮಾನ್ ಪಿ.ವಿ. ನರಸಿಂಹರಾಯರ ಹೊಸ ಆರ್ಥಿಕ ಧೋರಣೆಯನ್ನು ನಾನು ಒಪ್ಪುವುದಿಲ್ಲವೆಂದು, ಆದರೆ ದುರಾದೃಷ್ಟವಶತ್ ಆ ಹೊಸ ಆರ್ಥಿಕ ಧೋರಣೆಯ ಅಂಗವಾಗಿಯೇ ಬಹುರಾಷ್ಟ್ರೀಯ ಸಂಸ್ಥೆಗಳನ್ನು ರಕ್ಷಣೆ ಮಾಡುವುದಕ್ಕೆ, ನೀವು ಕಾನೂನಿನಲ್ಲಿ ಒಬ್ಬರ

ಹಕ್ಕನ್ನು ಇನ್ನೊಬ್ಬರು ಅತಿಕ್ರಮ ಮಾಡತಕ್ಕಂಥದ್ದನ್ನು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ನಾನು ಒಪ್ಪುತ್ತೇನೆ. ಒಬ್ಬರ ಆಸ್ತಿಯನ್ನು ಇನ್ನೊಬ್ಬರು ನಾಶ ಮಾಡಲಿಕ್ಕೆ ಅಧಿಕಾರವಿಲ್ಲ ಅದನ್ನು ಸಹ ನಾನು ಒಪ್ಪುತ್ತೇನೆ. ಬಹುರಾಷ್ಟ್ರೀಯ ಸಂಸ್ಥೆಗಳ ಆಸ್ತಿಯನ್ನು ಹಕ್ಕನ್ನು ರಕ್ಷಣೆ ಮಾಡಿ, ಆದರೆ ಅವರ ಆಸ್ತಿ ಮತ್ತು ಹಕ್ಕನ್ನು ರಕ್ಷಣೆ ಮಾಡತಕ್ಕಂತಹ ಹೆಸರಿನಲ್ಲಿ ಇನ್ನೊಬ್ಬರ ಹಕ್ಕನ್ನು ಕಿತ್ತುಕೊಳ್ಳತಕ್ಕಂಥದ್ದು ಕಾನೂನಿನಲ್ಲಿ ವಿರೋಧವಾಗುತ್ತದೆ. ಆದುದರಿಂದ ಪ್ರೊ॥ ನಂಜುಂಡಸ್ವಾಮಿಯವರ ವಿರುದ್ಧ ಹಾಕಿರತಕ್ಕಂಥ ದರೋಡೆ ಮತ್ತು ಕೊಲೆ ಮಾಡಿರತಕ್ಕಂತಹ ಆರೋಪ ಏನಿದೆ ಅದು ಖಂಡಿತವಾಗಿ ಯಾರೂ ಕೂಡ ಒಪ್ಪಲಿಕ್ಕೆ ಸಾಧ್ಯವಿಲ್ಲ ಅದು ಇಡೀ ಕರ್ನಾಟಕ ಜನತೆ ಯಾರು ಕೂಡ ಒಪ್ಪಲಿಕ್ಕೆ ಸಾಧ್ಯವಿಲ್ಲ, ಅವರು ಹೋರಾಟ ಮಾಡಿದ್ದಾರೆ, ಪಿಠೋಪಕರಣಗಳನ್ನು ನಾಶ ಮಾಡಿದ್ದಾರೆ ಅದಕ್ಕೆ ಬೇಕಾದರೆ ನೀವು ಕಾನೂನಿನಲ್ಲಿ ಅದರ ವಿರುದ್ಧ ಬೇಕಾದರೆ ಕ್ರಮವನ್ನು ತೆಗೆದುಕೊಳ್ಳಿ, ಕೇಸ್ ಹಾಕಿ. ಶ್ರೀಮಾನ್ ದೇವೇಗೌಡರು ಕೂಡ ಹಿಂದೆ ಹೋರಾಟಗಳನ್ನು ಮಾಡಿದ್ದಾರೆ, ಮತ್ತು ಮುಂದೆಯೂ ಕೂಡ ಮಾಡಬೇಕಾದಂತ ಪರಿಸ್ಥಿತಿಗಳು ಬರಬಹುದು. ಹೋರಾಟ ಮಾಡುವವರ ವಿರುದ್ಧ ಸೆಕ್ಷನ್ 307ರ ಕೆಸ್‌ನ್ನು ಹಾಕಿಬಿಟ್ಟರೆ, ಪರಿಸ್ಥಿತಿ ಏನಾಗುತ್ತದೆ? ಇದು ಪ್ರಜಾಪ್ರಭುತ್ವದಲ್ಲಿ ಖಂಡಿತವಾಗಿಯೂ ಕೂಡ ಒಪ್ಪಲಿಕ್ಕೆ ಸಾಧ್ಯವಿಲ್ಲ. ಆ ಪ್ರಜಾಪ್ರಭುತ್ವದ ಮೇಲೆ ಕನಿಷ್ಟ ನಂಬಿಕೆ ಇರತಕ್ಕಂತಹ ಯಾವುದೇ ಸರ್ಕಾರ ಚಳುವಳಿಕೆಗಳನ್ನು ಹತ್ತಿಕಲಿಕ್ಕೆ ಹೋಗಬಾರದು, ಏಕೆಂದರೆ ಯಾವುದೇ ಚಳುವಳಿಗಳನ್ನು, ಹೋರಾಟಗನ್ನು ಹತ್ತಿಕಲಿಕ್ಕೆ ಹೋದಂತಹ ಯಾವುದೇ ಸರ್ಕಾರಗಳು ಈ ದೇಶದಲ್ಲಿ ಉಳಿದಿಲ್ಲ.

ಆದುದರಿಂದ ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಗಂಭೀರವಾಗಿ ಚರ್ಚೆಯಾಗಬೇಕಾಗಿದೆ. ನಮ್ಮ ಮೇಲು ಕೂಡ ಶ್ರೀಮಾನ್ ವೀರಪ್ಪ ಮೊಯಿಲ್ಲಿಯವರ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ, ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಬಾರದು ಎಂದು ಹೋರಾಟ ಮಾಡಿದಾಗ ಸೆಕ್ಷನ್ 307 ರ ವಿರುದ್ಧ ಕೇಸ್‌ಹಾಕಿದ್ದಾರೆ. ಚಳುವಳಿಗಳನ್ನು ಮಾಡಿದಾಗ ಹಾಕಿರತಕ್ಕಂತಹ ಕೇಸ್‌ಗಳನ್ನು ಮತ್ತು ನಮ್ಮ ಜಿಲ್ಲೆಯಲ್ಲಿ ರೈತರು ಹೋರಾಟ ಮಾಡಿದಾಗ ಹಾಕಿರತಕ್ಕಂತಹ ಮೊಕದ್ದಮೆಗಳನ್ನು ವಾಪಸ್ಸು ಪಡೆಯಬೇಕೆಂದು ನಾನು ಸುಮಾರು ನಾಲ್ಕು ವರ್ಷಗಳಿಂದ ಮನವಿಗಳನ್ನು ಮಾಡುತ್ತಿದ್ದೇನೆ, ಇವತ್ತಿಗೂ ಕೂಡ ಅಂತಹ ಕೇಸ್‌ಗಳನ್ನು ಸರ್ಕಾರ ವಾಪಸ್ಸು ಪಡೆದುಕೊಂಡಿಲ್ಲ. ಆದುದರಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ವಿಷಯ ಬಹಳ ಪ್ರಮುಖ ವಾಗಿದೆ, ಪ್ರಜಾಪ್ರಭುತ್ವದ ಆಯಾಮಗಳನ್ನು ನಿರ್ಧರಿಸತಕ್ಕಂತಹ ಪ್ರಶ್ನೆ ಇದು. ಪ್ರಜಾಪ್ರಭುತ್ವದಲ್ಲಿ ಮನುಷ್ಯನಿಗೆ ಇರತಕ್ಕಂತಹ ಮೂಲಭೂತವಾದಂತಹ ಹಕ್ಕುಗಳನ್ನು ರಕ್ಷಣೆ ಮಾಡಿಕೊಳ್ಳುವಂತಹ ಪ್ರಶ್ನೆ ಇದರಲ್ಲಿ ಅಡಗಿದೆ. ಈ ಹಕ್ಕುಗಳ ಮೇಲೆ ದಮನ, ದಾಳಿ, ದಬ್ಬಳಿಕೆ ನಡೆಯತಕ್ಕಂತಹ ಪ್ರವೃತಿಯನ್ನು ನಾವು ತಡೆಯಲಿಕ್ಕೆ ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಗಂಭೀರವಾಗಿ ಚರ್ಚೆಯನ್ನು ಮಾಡಬೇಕಾಗಿದೆ. ಅದಕ್ಕೋಸ್ಕರ ಈ ನಿಲುವಳಿಯ ಸೂಚನೆಯನ್ನು ಅಂಗೀಕರ ಮಾಡಬೇಕೆಂದು ನಾನು ತಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) : ಸನ್ಮಾನ್ಯ ಸಭಾಧ್ಯಕ್ಷರೆ, ನಿಯಮ 69ರ ಪ್ರಕಾರ ನಮ್ಮ ಭಾರತೀಯ ಜನತಾ ಪಕ್ಷದ ಎಲ್ಲಾ ಸದಸ್ಯರ ಪರವಾಗಿ ಒಂದು ಮನವಿಯನ್ನು ಕೊಟ್ಟಿದ್ದೇವೆ. ನಮ್ಮ ಪಕ್ಷದ್ದು ಕೂಡ ಬಹು ರಾಷ್ಟ್ರೀಯ ಸಂಸ್ಥೆಗಳು ನಮ್ಮ ದೇಶಕ್ಕೆ ಪ್ರವೇಶ ಮಾಡುವುದಕ್ಕೆ ಬಹಳ ವಿರೋಧವಿದೆ. ಈ ಸಂಬಂಧವಾಗಿ ನಾವುಗಳೆಲ್ಲರೂ ಒಂದು ಮನವಿ ಸಹಿಯನ್ನು ಮಾಡಿ ಕೊಟ್ಟಿದ್ದೇವೆ. ವಿರೋಧ ಪಕ್ಷಗಳು ಮಾಡತಕ್ಕಂತಹ ಚಳುವಳಿಯನ್ನು ದಮನ ಮಾಡತಕ್ಕಂತಹ ಧೋರಣೆ ಏನಿದೆ ಅದಕ್ಕೆ ನಮ್ಮ ಪಕ್ಷದವರೆಲ್ಲರದು ಸಹ ವಿರೋಧವಿದೆ. ಈ

ರೀತಿಯಾಗಿ ಧಮನ ಮಾಡತಕ್ಕಂತಹ ಪರಿಸ್ಥಿತಿಯು ಬರಬಾರದಿತ್ತು. ಕಾರಣಾಂತರಗಳಿಂದ ಇಂತಹ ಪರಿಸ್ಥಿತಿಯು ಬಂದಿದೆ. ಇದನ್ನು ತೆಗೆದುಹಾಕುವುದಕ್ಕೆ ಇದೊಂದು ಪ್ರಯತ್ನವೆಂದು ನಾನು ಅಂದುಕೊಂಡಿದ್ದೇನೆ. ಅದರೂ ಸಹ ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಪ್ರಶ್ನೆಯನ್ನೂ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಯಾರಾದರೂ ಸಹಿತ ಕೊಲೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಅವರ ಮೇಲೆ ಕೇಸ್‌ಹಾಕುವಂಥದ್ದನ್ನು ನಾವು ನೋಡುತ್ತಿದ್ದೇವೆ. ಇವತ್ತು ಏನು ಕೆಂಟಕಿ ಚಿಕನ್ ಎನ್ನತಕ್ಕಂತಹ ಬಹು ರಾಷ್ಟ್ರೀಯ ಸಂಸ್ಥೆಯು ಬೆಂಗಳೂರಿನಲ್ಲಿ ಬಂದು ಕೋಳಿಯ ಮಾಂಸವನ್ನು ಮಾರತಕ್ಕಂತಹ ಕೆಲಸವನ್ನು ಏನು ಮಾಡುತ್ತಿದೆ, ಅದರಲ್ಲಿ ಅಂದರೆ ಕೋಳಿಯ ಮಾಂಸವನ್ನು ಹರಿಯುವಂಥ ಸಂದರ್ಭದಲ್ಲಿ ಮೊನೋ ಸೋಡಿಯಂ ಸಲ್ಫೇಟ್ ಎನ್ನತಕ್ಕಂತಹ ಲವಣವನ್ನು ಬಳಸುತ್ತಿದ್ದಾರೆ. ಇದು ಬಹಳ ಗಂಭೀರವಾಗಿರತಕ್ಕಂತಹ ವಿಷಯವಾಗಿದೆ. ಈ ಲವಣವನ್ನು ಉಪಯೋಗಿಸತಕ್ಕಂತಹ ಸಂದರ್ಭದಲ್ಲಿ, ಇದು ಮನುಷ್ಯನ ದೇಹಕ್ಕೆ ಅನಾರೋಗ್ಯವನ್ನು ಉಂಟುಮಾಡತಕ್ಕಂಥದ್ದು ಎಂದು ಇದನ್ನು ಬೆಂಗಳೂರು ಕಾರ್ಪೋರೇಷನ್‌ರವರು ಕೆಂಟಕಿ ಚಿಕನ್‌ಸೆಂಟರ್‌ಗಳ ಲೈಸನ್ಸ್‌ನ್ನು ರದ್ದು ಮಾಡಿದರು. ಹಾಗೆ ರದ್ದು ಮಾಡಿದಂತಹ ಸಂದರ್ಭದಲ್ಲಿ ಕೆಂಟಕಿ ಚಿಕನ್ ಸೆಂಟರ್‌ರವರುಗಳು ಹೈ ಕೋರ್ಟ್‌ಗೆ ಈ ವಿಚಾರವನ್ನು ತೆಗೆದುಕೊಂಡು ಹೋದಂತಹ ಸಂದರ್ಭದಲ್ಲಿ ಹೈಕೋರ್ಟ್‌ನಲ್ಲಿ ಈ ಸೆಂಟರ್‌ಗಳಿಗೆ ನೋಟೀಸ್ ಕೊಟ್ಟಿಲ್ಲ, ಅವಕಾಶವನ್ನು ಕೊಟ್ಟಿಲ್ಲ ಎನ್ನುವರ ಏಕ ಮಾತ್ರ ಕಾರಣಕ್ಕಾಗಿ ಅವರು ಮುಂದುವರೆಸುವುದಕ್ಕೆ ಅವಕಾಶವಾಗುವಂತಹ ತೀರ್ಮಾನವನ್ನು ಇವತ್ತು ಕೊಟ್ಟರು. ಕೊಟ್ಟ ನಂತರ ಇವತ್ತು ಅದರೂ ಕೂಡ ಬೆಂಗಳೂರು ನಗರ ಕಾರ್ಪೋರೇಷನ್‌ರವರು ಕೆಂಟಕಿ ಚಿಕನ್ ಸೆಂಟರ್‌ರವರಿಗೆ ಒಂದು ಅವಕಾಶವನ್ನು ಕೊಟ್ಟು ತಕ್ಷಣ ರದ್ದು ಮಾಡಬೇಕಾಗಿತ್ತು ಅದರೆ ಇದನ್ನು ಇವತ್ತಿನವರೆಗೂ ಕೂಡ ಮಾಡಿಲ್ಲ, ಕೊಲೆ ಪ್ರಯತ್ನ ಎಂದು ನಾವು ಏನು ಹೇಳುತ್ತೇವೆ, ಸ್ಲೋ ಪಾಯ್‌ಝುನ್, ಮನುಷ್ಯನಿಗೆ ಅನಾರೋಗ್ಯವನ್ನು ತರತಕ್ಕಂತಹ ಒಂದು ವಿಷ.

ಅದುದರಿಂದ ಈ ಸಂಸ್ಥೆಯವರು ಸಾರ್ವಜನಿಕರನ್ನು ಅಹ್ವಾನ ಮಾಡಿ ಅವರಿಗೆ ಈ ಕೋಳಿ ಮಾಂಸವನ್ನು ಕೊಡುತ್ತ ಇರತಕ್ಕಂತಹ ಸಂದರ್ಭದಲ್ಲಿ, ದುಡ್ಡು ತೆಗೆದುಕೊಂಡು ಈ ಕೋಳಿ ಮಾಂಸವನ್ನು ಮಾರುತ್ತಿರತಕ್ಕಂತಹ ಸಂದರ್ಭದಲ್ಲಿ ವಿಷ ಪೂರಿತವಾದಂತಹ ಅಹಾರವನ್ನು ಮಾರಾಟ ಮಾಡುತ್ತಿದ್ದಾರೆ ಎನ್ನತಕ್ಕಂತಹ ಸಂದರ್ಭದಲ್ಲಿ ಕೆಂಟಕಿ ಚಿಕನ್ ಸೆಂಟರ್ ಏನು ಬಹುರಾಷ್ಟ್ರೀಯ ಸಂಸ್ಥೆಗಳಿವೆ ಇದರ ಮೇಲೆ ನಮ್ಮ ಸರ್ಕಾರದವರು ಕೊಲೆಯ ಪ್ರಯತ್ನವೆಂದು ಕೇಸ್ ಹಾಕಬೇಕಾಗಿತ್ತು.

ಅಧ್ಯಕ್ಷರು : ಈ ಕೋಳಿ ಮಾಂಸಕ್ಕೆ ಇಂತಹ ಲವಣವನ್ನು ಹಾಕಿ ಹುರಿಯುತ್ತಾರೆಂದು ನಿಮಗೆ ಹೇಗೆ ಗೊತ್ತು?

ಶ್ರೀಮತಿ ಪ್ರಮೀಳಾ ನೇಸರ್ಗಿ : ಈಗಾಗಲೇ ಬೆಂಗಳೂರು ಕಾರ್ಪೋರೇಷನ್‌ರವರು ಇದರ ಬಗ್ಗೆ ತನಿಖೆಯನ್ನು ಮಾಡಿದ್ದಾರೆ. ಲ್ಯಾಬ್ ಅಂಡ್ ಟೆಕ್ನಾಲಜಿಯವರಿಗೆ ಕೊಟ್ಟು ರಿಪೋರ್ಟ್ ಬಂದಿದೆ. ತಾವು ಈ ಪ್ರಶ್ನೆಯನ್ನು ಕೇಳತಕ್ಕಂಥದ್ದು ಬಹಳ ಒಳ್ಳೆಯದು.

ಅಧ್ಯಕ್ಷರು : ನನಗೆ ಏನು ಅನುಮಾನ ಬಂತು ಎಂದರೆ, ನೀವು ಏನಾದರೂ ಕನ್‌ವರ್ಟ್ ಆಗಿಬಿಟ್ಟಿದ್ದೀರೋ ಏನೋ ಎಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಖಂಡಿತವಾಗಿ ಇಲ್ಲ, ಇದರ ಹತ್ತಿರ ಸಹ ನಾವು ಹೋಗುವುದಿಲ್ಲ.

ಅಧ್ಯಕ್ಷರು : ಹೋಗುವುದಿಲ್ಲವೆಂದು ಹೇಳಿ ನೀವು ಆ ಕಡೆಗೆ ಕೈ ತೋರಿಸಿದರೆ, ಶ್ರೀಮತಿ ಲೀಲಾದೇವಿಯವರು ಹೋಗುತ್ತಾರೆಂದು ಅರ್ಥವೇ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಖಂಡಿತವಾಗಿ ಇಲ್ಲ. ಶ್ರೀಮತಿ ಲೀಲಾದೇವಿಯವರು ಆಗಲಿ,ನಾನಾಗಲಿ ಇದರಿಂದ ಬಹಳವಾಗಿ ದೂರ ಇರತಕ್ಕಂಥವರು.

ಶ್ರೀ ಲೀಲಾದೇವಿ ಆರ್ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ನಾವಿಬ್ಬರೂ ಆ ಕೋಳಿ ಮಾಂಸವನ್ನು ತಿನ್ನದೇ ಇದ್ದರೂ ಕೂಡ ಇದರಿಂದ ಆಗತಕ್ಕಂತಹ ನ್ಯಾಯ, ಅನ್ಯಾಯಗಳನ್ನು ಕೂಡ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು : ಸಾರ್ವಜನಿಕ ಹಿತದೃಷ್ಟಿಯಿಂದ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಖಂಡಿತವಾಗಿ, ಅವರೂ ಕೂಡ ಇದರ ಬಗ್ಗೆ ಸಂಪೂರ್ಣವಾಗಿ ಸಹಮತಿ ಹೊಂದಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಇಡೀ ಬೆಂಗಳೂರಿನಲ್ಲಿರತಕ್ಕಂಥ ಯುವಕರು ಏನು ಇದ್ದಾರೆ, ಸಣ್ಣ ಹರೆಯದ ಮಕ್ಕಳುಗಳು ಏನು ಇದ್ದಾರೆ, ಈ ಮಕ್ಕಳುಗಳನ್ನು ಇದರ ಬಗ್ಗೆ ಆಕರ್ಷಣೆಯನ್ನು ಮಾಡಿ, ಕೆಂಟಕಿ ಚಿಕನ್ ಎನ್ನತಕ್ಕಂತಹ ಹೆಸರಿನಲ್ಲಿ ಆಕರ್ಷಣೆಯನ್ನು ಮಾಡಿ ಈ ವಿಷಪೂರಿತ ಆಹಾರವನ್ನು ಸರಬರಾಜು ಮಾಡುತ್ತಿದ್ದಾರೆ.

1.10 ಪಿ.ಎಂ.

ಸರ್ಕಾರದವರಾಗಲಿ, ಪೋಲೀಸರಾಗಲಿ ಈ ಸಂಸ್ಥೆಯು ಸಾರ್ವಜನಿಕರನ್ನು ಕೊಲೆ ಮಾಡುವಂಥ ಸಂಸ್ಥೆ ಎಂದು ಆ ಕೆಂಟಕಿ ಸಂಸ್ಥೆಯ ಮೇಲೆ ಕೂಡಲೇ ಎಫ್.ಎ.ಆರ್.ನ್ನು ಹಾಕಿ ಅವರ ಮೇಲೆ ಕೇಸನ್ನು ರಿಜಿಸ್ಟರ್ ಮಾಡಬೇಕಾಗಿತ್ತು. ಆದರೆ ಇವತ್ತಿನವರೆಗೂ ಕೇಸನ್ನು ರಿಜಿಸ್ಟರ್ ಮಾಡಿಲ್ಲ, ಅವರು ಮಾಡುವುದು ಇರಲಿ, ಇವರು ಅವರ ಜೊತೆ ಶಾಮಿಲಾಗಿದ್ದಾರೆ. ಅಂದರೆ ಈ ಸರ್ಕಾರ ಕೊಲೆಗಾರರ ಜೊತೆ ಶಾಮಿಲಾಗಿದೆ. ಈ ಪೋಲೀಸರು ಅವರ ಜೊತೆ ಶಾಮಿಲಾಗಿದ್ದಾರೆ ಅಂದಮೇಲೆ ಕೊಲೆಗಾರರ ಜೊತೆ ಯಾರು ಶಾಮಿಲಾಗಿದ್ದಾರೆ ಸರ್ಕಾರ ಆದ್ದರಿಂದ ಇವರು ಅಧಿಕಾರದಲ್ಲಿರಲು ಅವಕಾಶ ಇದೆಯೇ? attempt to murder .ಯಾರು ಮಾಡುತ್ತಿದ್ದಾರೆ ಅವರ ಜೊತೆ ಯಾರು ಕೋ-ಆಪರೇಟ್ ಮಾಡುತ್ತಿದ್ದಾರೆ ಅವರೆಲ್ಲರೂ ಅಫೆಂಡರ್ಸ್ ಆಗುತ್ತಾರೆ. ಸೆಕ್ಷನ್ 34ರ ಪ್ರಕಾರ ಇವರೆಲ್ಲರಮೇಲೂ ಕೇಸ್ ಹಾಕಬೇಕಾಗಿತ್ತು. ಇವರ ಮೇಲೆ ಕೊಲೆ ಆರೋಪವನ್ನು ಹೊರಿಸಬೇಕಾಗಿತ್ತು ಸರ್ಕಾರ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಅದನ್ನು ಬಿಟ್ಟು ಸಾರ್ವಜನಿಕರನ್ನು ರಕ್ಷಣೆ ಮಾಡುವುದಕ್ಕಾಗಿ ಮಾನ್ಯ ನಂಜುಂಡಸ್ವಾಮಿಯವರು ಮಕ್ಕಳನ್ನು, ಹೆಣ್ಣು ಮಕ್ಕಳನ್ನು, ಸಾರ್ವಜನಿಕರನ್ನು ಉಳಿಸುವುದಕ್ಕಾಗಿ ಈ ವಿಷಪೂರಿತ ಆಹಾರವನ್ನು ತಿನ್ನುವುದನ್ನು ತಪ್ಪಿಸುವುದಕ್ಕಾಗಿ ಹೋದಂಥ ಇವರ ಮೇಲೆ ಕೊಲೆ ಮೊಕದ್ದಮೆಯನ್ನು ನೀವು ಹಾಕಿದ್ದೀರಿ ಎನ್ನುವುದಾದರೆ ನಾವು ಇವತ್ತು ಕೇಳಬೇಕಾಗುತ್ತದೆ. ಯಾರು ಕೊಲೆಯನ್ನು ಮಾಡುತ್ತಿದ್ದಾರೆ ಅವರ ಮೇಲೆ ಕೊಲೆ ಮೊಕದ್ದಮೆ ಇಲ್ಲ, ಯಾರು ಕೊಲೆ ಮಾಡುವುದನ್ನು ತಪ್ಪಿಸುವುದ್ಧಕೆ ಹೋಗುತ್ತಿದ್ದಾರೆ ಅವರ ಮೇಲೆ ಕೊಲೆ ಮೊಕದ್ದಮೆಯನ್ನು ಹಾಕುವುದಕ್ಕೇ ಹೋಗುತ್ತಿರುವ ಈ ಸರ್ಕಾರ ಎಂಥ ಸರ್ಕಾರವೆಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಈ ಕೆಂಟಕಿ ಚಿಕನ್ ಅನಾರೋಗ್ಯಕರ ಎಂದು ಅಮೆರಿಕಾದಲ್ಲಿ ಬ್ಯಾನ ಮಾಡಿದ್ದಾರೆ. ಇಡೀ ವಿಶ್ವವಿದ್ಯಾನಿಲಯದವರು, ಅಮೆರಿಕಾ ವಿಶ್ವವಿದ್ಯಾನಿಲಯದವರು ಬ್ಯಾನ್ ಮಾಡಿದ್ದಾರೆ ಆದರೆ ನಮ್ಮ ಈ ರಾಜ್ಯದಲ್ಲಿ ಬಹುರಾಷ್ಟ್ರೀಯ ಸಂಸ್ಥೆಯ ನೆಪದಲ್ಲಿ ಈ ಕೆಂಟಕಿ ಚಿಕನ್ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ನನಗೆ ಇಲ್ಲಿ ಬಹಳ ಆಶ್ಚರ್ಯವಾದುದೆಂದರೆ, 30ನೇ ತಾರೀಖು ಮಹಾತ್ಮ ಗಾಂಧೀಜಿಯವರ ಜನ್ಮ ದಿನಾಚರಣೆ ದಿನದಂದು ಮಾನ್ಯ ನಂಜುಂಡಸ್ವಾಮಿಯವರು ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಇಲ್ಲಿನ ಜನರನ್ನು

ಉಳಿಸುವುದಕ್ಕೆ ಹೋದರು, ಅಷ್ಟೇ ಅಲ್ಲ, ಅವರು ಬಹಳ ಶಾಂತಿಯುತವಾಗಿ ಉಳಿಸುವುದಕ್ಕೆ ಪ್ರಯತ್ನ ಮಾಡಿದರು. ಅವರು ಕೊಲೆ ಮಾಡುವುದಕ್ಕೆ ಉಪಯೋಗಿಸಿದ ಆಯುಧ ಏನಿದೆ ಅದನ್ನು ಸೀಸ್ ಮಾಡಬೇಕಾಗಿತ್ತು.

ಅದೇ ರೀತಿ ಕೆಂಟಕಿ ಚಿಕನ್ ಸೆಂಟರ್‌ನಲ್ಲಿ ಈ ಮಾಂಸವನ್ನು ಉರಿಯುವುದಕ್ಕೆ ಮತ್ತು ಮಾರಾಟ ಮಾಡುವುದಕ್ಕೆ ಉಪಯೋಗಿಸಿದಂಥ ವಸ್ತುಗಳನ್ನು ಇವತ್ತು ಧ್ವಂಸ ಮಾಡಿದ್ದರೆ ಇದು ತಪ್ಪು ಮಾಡಿದಂತಾಗುವುದಿಲ್ಲ. ಜನರನ್ನು ರಕ್ಷಣೆ ಮಾಡುವುದಕ್ಕೆ ಅವರು ಕೊಲೆ ಆಗುತ್ತಿದ್ದುದನ್ನು ತಪ್ಪಿಸುವುದಕ್ಕೋಸ್ಕರ ಈ ರೀತಿ ಅವರು ಮಾಡಿದ್ದರೆ ಖಂಡಿತ ಅದು ತಪ್ಪಾಗಲಿಕ್ಕಿಲ್ಲ. ಇದರ ಜೊತೆಗೆ ಅಟೆಮ್ಪ್ಟ್ ಟು ಮರ್ಡರ್ ಜೊತೆಗೆ ಮಾನಭಂಗ ಮೊಕದ್ದಮೆಯನ್ನು ಮಾನ್ಯ ನಂಜುಂಡಸ್ವಾಮಿಯವರ ಮೇಲೆ ಹೂಡುತ್ತೇವೆಂದು ಈ ಸರ್ಕಾರ ಹೇಳುತ್ತಿದೆಯಲ್ಲಾ ಇದನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಇವರ ಮೇಲೆ ಏನು ಅಪಾದನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ ಅದು ಈ ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ನೋಡಿದ್ದೇನೆ. ಮಾನ್ಯ ನಂಜುಂಡಸ್ವಾಮಿಯವರ ಮೇಲೆ ಮಾನಭಂಗ ಮೊಕದ್ದಮೆಯನ್ನು ಹಾಕಿದ್ದಾರೆಂದು ನಾನು ಕೇಳಿದ್ದೇನೆ. ತಪ್ಪಿದ್ದರೆ ಹೇಳಬೇಕು. ಒಂದು ವೇಳೆ ಹಾಕಿಲ್ಲದಿದ್ದರೂ ಇರಬಹುದು. ಮಾನ್ಯ ನಂಜುಂಡಸ್ವಾಮಿಯವರ ಮೇಲೆ ತಾವು ಕೊಲೆ ಮೊಕದ್ದಮೆಯನ್ನು ಹಾಕಿದಿರಿ ಮೈಸೂರಿನಲ್ಲಿ ಏನಾಯಿತು?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯತ ಪ್ರಮೀಳಾರವರು ಹೇಳುತ್ತಿರುವುದು ಸರಿಯಲ್ಲ, ಯಾರು ಎಂದು ತಮಗೆ ಗೊತ್ತಿದ್ದರೆ ಹೇಳಬೇಕು.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರಿಗೆ ಗೊತ್ತಿದ್ದರೆ ಅವರು ಹೇಳುತ್ತಾರೆ. ಮಾನಭಂಗ ಮೊಕದ್ದಮೆಯನ್ನು ಹಾಕಿದ್ದಾರೆಂದು ಹೇಳಿದ್ದಾರೆ. ಇದು ತಪ್ಪಿರಬಹುದು. ಈ ಪತ್ರಿಕೆಯ ವರದಿ ತಪ್ಪಿರಬಹುದು. ಇದಕ್ಕೆ ನಾನೇನೂ ಮಾಡುವುದಕ್ಕೆ ಆಗುವುದಿಲ್ಲ, ಅವರು ಏನು ಹಾಕಿದ್ದಾರೆಂದು ನೋಡೋಣ....

ಅಧ್ಯಕ್ಷರು : ಪ್ರಮೀಳಾರವರೇ, ಮಾನಭಂಗದವಿಚಾರವನ್ನು ಮಾತನಾಡುವಾಗ ಅಕಡೆಗೆ ತಿರುಗಿಕೊಂಡು ಹೇಳುತ್ತಿದ್ದಿರಿ. ನೀವು ನನ್ನ ಕಡೆ ತಿರುಗಿಕೊಂಡು ಹೇಳಲಿಲ್ಲ. ಮಾನ್ಯ ನಂಜುಂಡಸ್ವಾಮಿಯವರ ಮೇಲೆ ಹಾಕಿದ್ದುದು ತಪ್ಪು ಅಲ್ಲಿ ಯಾರಮೇಲಾದರೂ ಹಾಕಬೇಕಾಗಿತ್ತು ಎಂಬುದು ನಿಮ್ಮ ಅಭಿಪ್ರಾಯವೆ?

ಶ್ರೀ ವಾಟಾಳ್ ನಾಗರಾಜ್ : ಯಾರ ಮಾನಭಂಗ ಎಂಬುದನ್ನು ತಾವು ಹೇಳಬೇಕು. ಏಕೆಂದರೆ ಅವರ ಕಣ್ಣು ಈಕಡೆ 12 ಜನರ ಮೇಲೆ ಬರುತ್ತಿದೆ. ಅದು ಸರಿಯಾಗಿ ಕಾಣುವುದಿಲ್ಲ.

ಅಧ್ಯಕ್ಷರು : ನನಗೆ ಗೊತ್ತಾಗದೇ ಇದ್ದುದರಿಂದ ನಾನು ಅವರನ್ನು ಕೇಳಿದೆ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಗೊತ್ತಿದ್ದರೆ ಅದು ಯಾರು ಎಂದು ಹೇಳಬೇಕು.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರಿಗೆ ಗೊತ್ತಿದ್ದರೆ ಹೇಳುತ್ತಾರೆ ನೀವು ಅದರ ಬಗ್ಗೆ ಯೋಚನೆ ಮಾಡಬೇಡಿ. ಅವರ ಛೇಂಬರ್‌ಗೆ ಕರೆಸಿ ಯಾರ್‍ಯಾರು ಮಾಡಿದ್ದಾರೆ ಎಂಬುದನ್ನು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನಭಂಗ ವಿಚಾರ ಅವರ ಕಾರ್ಯಾಲಯದ ಸ್ವತ್ತಲ್ಲ. ಆದ್ದರಿಂದ ಅವರ ಕಾರ್ಯಾಲಯದಲ್ಲಿ ಗುಪ್ತವಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ. ಈಗ ಅವರು ಹೇಳಿರುವುದರಿಂದ ಬಹಿರಂಗವಾಗಿ ಹೇಳಲಿ.

ಅಧ್ಯಕ್ಷರು : ನನ್ನ ಕಾರ್ಯಾಲಯದಲ್ಲಿ ಮಾನಭಂಗಕ್ಕೆ ಅವಕಾಶವಿಲ್ಲ.

ಶ್ರೀ ವಾಟಾಳ್ ನಾಗಾರಜ್ : ಮಾನ್ಯ ಪ್ರಮಿಳಾರವರು ಬಹಳ ಪ್ರಾಮಾಣಿಕವಾಗಿ ಮಾತನಾಡುತ್ತಿದ್ದಾರೆ. ಕೊಲೆ ಮತ್ತು ದರೋಡೆ ಪ್ರಯತ್ನವನ್ನ ಮಾಡಿರಬೇಕಾದರೆ ಈ ಹಿಂದೆ ಇಂಥ ಕೊಲೆ ಮಾಡಿದ್ದಾರೆ, ದರೋಡೆ ಮಾಡಿದ್ದಾರೆ, ಆಗ ಇಂಥ 12 ಕೇಸುಗಳನ್ನು ಹಾಕಲಾಗಿತ್ತು ಎಂದು ಮಾನ್ಯ ಮಂಜುಂಡಸ್ವಾಮಿಯವರ ಮೇಲೆ ಹಿಂದೆ ಎಂದಾದರೂ ಅಂಥ ದರೋಡೆ ಕೇಸುಗಳು ಇದ್ದುವೆ? ಅಥವಾ ಕೊಲೆ ಪ್ರಯತ್ನ ಹಿಂದೆ ಮಾಡಲಾಗಿತ್ತೇ ಎಂಬುದನ್ನು ನೋಡಬೇಕಲ್ಲವೆ? ಏಕೆಂದರೆ ಅದು ಯವುದೂ ಇಲ್ಲದೆ, ಪೋಲೀಸ್ ಕಾಯಿದೆಯಲ್ಲಿ 1860ನೇ ಇಸವಿಯಲ್ಲಿ ಮಾಡಿದಂಥ ಎಲ್ಲ ಕಾನೂನುಗಳನ್ನೂ ಬಳಸಿ ಕೇಸ್ ಹಾಕಿ ಕಳುಹಿಸಿಟ್ಟಿದ್ದಾರೆ.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ಮೈಸೂರಿನಲ್ಲಿ ಇದರ ಬಗ್ಗೆ ಪ್ರತಿಭಟನೆ ನಡೆಯಿತು. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಅಲ್ಲಿ ಪ್ರತಿಭಟನಾಕಾರರು ಇದ್ದರು. ಆಗ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಬೇಕು? ಯಾರು ಪ್ರತಿಭಟನೆಯನ್ನು ಮಾಡುತ್ತಾರೆ ಅವರನ್ನು ಹಿಡಿದುಕೊಂಡು ಬನ್ನಿ ಎಂದು ಹೇಳುವುದೇ ನಾನಾದರೂ ಕೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ ಇದು ಶೋಭೆಯನ್ನು ತರುವಂಥ ವಿಷಯವೇ ದಮನ ಮಾಡುವಂಥಾದ್ದು ಕಪ್ಪು ಬಾವುಟವನ್ನು ತೋರಿಸುವುದು, ಎಲ್ಲರೂ ಮಾಡುತ್ತಾರೆ. ಮಾನ್ಯ ದೇವೇಗೌಡರ ಜೊತೆಯಲ್ಲಿ ನಾವೂ ಬಹಳಷ್ಟು ಸಂದರ್ಭದಲ್ಲಿ ಪ್ರತಿಭಟನೆಯನ್ನು ಮಾಡಿದ್ದೇವೆ,. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಆ ಸಂದರ್ಭದಲ್ಲಿ ನಮ್ಮನ್ನೂ ಮತ್ತು ನಿಮ್ಮನ್ನೂ ಹಿಡಿದುಕೊಂಡು ಬನ್ನಿ ಎಂದು ಹೇಳಿದ್ದಿದರೆ ಆಗ ನೀವೇನು ಮಾಡುತ್ತಿದ್ದಿರಿ? ಎನ್ನತಕ್ಕ ಪ್ರಶ್ನೆಯನ್ನು ನಾನು ಕೇಳಬಯಸುತ್ತೇನೆ. ತಾವು ಈಗ ಮಾನ್ಯ ಮಂತ್ರಿಯಾದ ಮಾತ್ರಕ್ಕೇ....

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ : ಅಂದರೆ ನಾವು ಇದ್ದಾಗ ಮಾಡಲಿಲ್ಲ ಎಂಬುದನ್ನು ಇವರು ಹೇಳುತ್ತಿದ್ದಾರೆ. ಅವರೇ ಹೇಳುತ್ತಿದ್ದಾರೆ, ಅವರಿಬ್ಬರೂ ಪ್ರತಿಭಟನೆಯನ್ನು ಮಾಡಿದರೂ ನಮ್ಮ ಸರ್ಕಾರ ಅವರಿಗೆ ಏನೂ ಮಾಡಲಿಲ್ಲ.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ಮಾಡಲಿಲ್ಲವೆಂದು ನಾನು ಹೇಳಲಿಲ್ಲ. ಹಾಗೆ ಮಾಡಿದ್ದಿದ್ದರೆ ಏನು ಮಾಡುತ್ತಿದ್ದಿರಿ ಎಂದು ಕೇಳುತ್ತಿದ್ದೇನೆ. ಏಕೆಂದರೆ ಅವರೂ ಕೂಡ ಇಲ್ಲಿ ವಿರೋಧಪಕ್ಷದ ನಾಯಕರಾಗಿದ್ದರು. ಎಷ್ಟೋ ಪ್ರತಿಭಟನೆಗಳನ್ನು ಮಾಡಿದ್ದಾರೆ. ನಾವೆಲ್ಲರೂ ಅವರ ಜೊತೆ ಒಟ್ಟಿಗೇ ಪ್ರತಿಭಟನೆ ಮಾಡಿದ್ದೇವೆ. ನಾವು 1978ನೇ ಇಸವಿಯಲ್ಲಿ ಮಾನ್ಯ ಜಯಪ್ರಕಾಶ್ ನಾರಾಯಣ್‌ರವರ ಜೊತೆಯಲ್ಲಿ ಜನತಾ ಆಂಧೋಳನವನ್ನು ಮಾಡುವ ಸಂದರ್ಭದಲ್ಲಿ ಇವರು ನಮ್ಮ ಜೊತೆಯಲ್ಲೇ ಸೇರಿ ಮಾಡಿದ್ದಾರೆ. ಆ ಸಂದರ್ಭದಲ್ಲಿ ಈಗಿನಂತೆ ಅರೆಸ್ಟ್ ಮಾಡಿದ್ದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತೆಂಬ ಪ್ರಶ್ನೆಯನ್ನು ಇವತ್ತು ಮಾನ್ಯ ಮುಖ್ಯ ಮಂತ್ರಿಗಳ ಮುಂದಿಡುತ್ತಿದ್ದೇನೆ. ಇತ್ತೀಚೆಗೆ ಮೈಸೂರಿನಲ್ಲಿ ಇವರ ಸಮ್ಮುಖದಲ್ಲೇ ಆಯಿತು.ಈಗ ಏನು ಮೇಯರ್ ಇದ್ದಾರೆ ಅವರ ಈಗ್ಗೆ 3 ದಿನದ ಹಿಂದೆ ಕತ್ತಿನ ಪಟ್ಟಿಯನ್ನು ಹಿಡಿದು ಗಲಾಟೆ ಮಾಡಿದಾಗ ರೈತರ ಮೇಲೆ ಕೊಲೆಯ ಆಪಾದನೆ ಆಯಿತು. ಇವತ್ತು ಅವರ ಮೇಲೆ ಎಫ್.ಐ.ಆರ್. ಆಗಿದೆ. ಅದು ಸೆಕ್ಷನ್ 302ರ ಪ್ರಕಾರ. ಪೋಲೀಸರು ಎಫ್.ಐ.ಆರ್. ನ್ನು ರಿಜಿಸ್ಟರ್ ಮಾಡಿದ್ದಾರೆ. ಇನ್ನು 3 ದಿನ ಆದಮೇಲೆ ಅವರನ್ನೇ ಮೇಯರ್ ಆಗಿ ಮಾಡುತ್ತೀರಿ. ರಾಜಾರೋಷವಾಗಿ ಮೈಸೂರಿನಲ್ಲಿ ರೈತರನ್ನು ಹೊಡೆದು ಕೊಲೆಯ ಆಪಾದನೆಯನ್ನು ಹೊತ್ತು ಕೊಂಡಿರುವಂಥವರ ಮೇಲೆ ಇವತ್ತು ನೀವು ಅರೆಸ್ಟ್ ವಾರೆಂಟ್ ತಂದಿಲ್ಲ, ಅರೆಸ್ಟ್ ಮಾಡಿಲ್ಲ. ಅವರ ಮೇಲೆ ಯಾವುದೇ ಕ್ರಮವನ್ನೂ ನೀವು ಜರುಗಿಸಿಲ್ಲ, ಆದರೆ ಮಾನ್ಯ ನಂಜುಂಡಸ್ವಾಮಿಯವರು ಕೆಂಟಕಿ ಚಿಕನ್ ಸೆಂಟರ್ ಹತ್ತಿರ ಹೋಗದೇ ಇದ್ದರೂ, ಅವರು ಮನೆಯಲ್ಲೇ ಇದ್ದರೂ ಅವರ ಮೇಲೆ ನೀವು ಮರ್ಡರ್ ಕೇಸು ಹಾಕಿ ಅಟೆಮ್ಪ್ಟ್ ಟು ಮರ್ಡರ್ ಎಂದು

ಹೇಳಿ, ಅವರನ್ನು ಅರೆಸ್ಟ್ ಮಾಡಿ ಜೈಲಿನಲ್ಲಿಟ್ಟಿದ್ದೀರಿ. ಇದರಲ್ಲಿ ಯಾವುದೇ ಹುರುಳೂ ಇಲ್ಲವೆಂದು ಕೋರ್ಟ್‌ನವರು ಜಾಮಿನನ್ನು ಕೊಟ್ಟರೆ, ಅದಕ್ಕೆ ನಿಮ್ಮಲ್ಲಿ ಸಮಾಧಾನ ಇಲ್ಲದೆ ನೀವು ಏತಕ್ಕೆ ಜಾಮಿನು ಕೊಟ್ಟಿರಿ ಎಂದು ನೀವು ಅಪೀಲು ಹಾಕಿದ್ದೀರಿ. ನಾನಾದರೂ ಕೇಳುತ್ತೇನೆ, ನಿಮ್ಮ ಪಕ್ಷದ ಕಾರ್ಯಕರ್ತರು ಮೇಯರ್‌ಆದರು ಎಂದು ಅವರ ಮೇಲೆ ಸೆಕ್ಷನ್ 302ರ ಪ್ರಕಾರ ಕೇಸು ಇದ್ದರೂ ....

ಅಧ್ಯಕ್ಷರು : ಮಾನ್ಯ ನಂಜುಂಡಸ್ವಾಮಿಯವರ ಮೇಲೆ 302ನೇ ಸೆಕ್ಷನ್ ಹಾಕಿಲ್ಲ.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ಎಫ್.ಐ.ಆರ್.ನಲ್ಲಿದೆ

ಅಧ್ಯಕ್ಷರು : 307 ಇದೆ. ಆದರೆ 302 ಹಾಕಿಲ್ಲ.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ಅಟೆಮ್ಪ್ಟ್ ಟು ಮರ್ಡರ್. 302 ಎಂದರೆ ಮರ್ಡರ್.

ಅಧ್ಯಕ್ಷರು : ತಾವು ಮಾತನಾಡುವ ಭರದಲ್ಲಿ 302ನೇ ಸೆಕ್ಷನ್ ಎಂದು ಹೇಳಿದಿರಿ.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ಅಟೆಮ್ಪ್ಟ್ ಟು ಮರ್ಡರ್ ಎಂದರೆ 307. ಮರ್ಡರ್ ಎಂದರೆ 302.

ಅಧ್ಯಕ್ಷರು : ತಮ್ಮ ಮಾತಿನ ಭರದಲ್ಲಿ ಸೆಕ್ಷನ್ 302 ಹಾಕಿದ್ದಾರೆಂದು ಹೇಳಿದಿರಿ.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ನಾನು ಹೇಳಿದ್ದುದು ಮೈಸೂರಿಗೆ ಸಂಬಂಧಪಟ್ಟಿದ್ದುದು ಮೈಸೂರಿನಲ್ಲಿ ಈಗ ಏನು ಮೇಯರ್ ಆಗಿದ್ದಾರೆ ಅವರು ರೈತರನ್ನು ಹೊಡೆದರೂ ಅವರ ಮೇಲೆ 302 ನೇ ಸೆಕ್ಷನ್ ಹಾಕಿಲ್ಲ.

ಅಧ್ಯಕ್ಷರು : ಹೊಡೆದರೇ 302 ಆಗುವುದಿಲ್ಲ, ಯಾರಾದರೂ ಸತ್ತಿದ್ದರೆ ಮಾತ್ರ. ತಾವು ವಕೀಲರು. I am not an advocate. Even if the injured is on the verge of death, it is only section 307. The moment he dies, Section 307 gets converted into section 302.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. 307ನೇ ಹಾಕುಬೇಕಾಗಿತ್ತು. ಆದರೆ ಹಾಕಿಲ್ಲ ಎಂಬುದನ್ನು ನಾನು ಹೇಳುತ್ತಿರುವುದು. 307ರ ಪ್ರಕಾರ ಅಟೆಮ್ಪ್ಟ್ ಟು ಮರ್ಡರ್ ಎಂದು ಆಗಿದ್ದರೂ ಕೂಡದ that is a non bailable offence.

ಅಧ್ಯಕ್ಷರು : ದಯವಿಟ್ಟು ಆ ವಿಚಾರದಲ್ಲಿ ನಾನು ಹೇಳುತ್ತಿಲ್ಲ. ಇಲ್ಲಿ ಸೆಕ್ಷನ್ 302 ಎಂದು ಹೇಳುವುದು ಬೇಡ ಎಂದು ನಾನು ಹೇಳುತ್ತಿರುವುದು. ಇದು ರೆಕಾರ್ಡ್‌ಗೆ ಹೋಗುವುದು ಬೇಡ.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ಸೆಕ್ಷನ್ 392 ಮತ್ತು 307 ಎರಡರ ಪ್ರಕಾರವೂ ಹಾಕಿದ್ದಾರೆ. ಅವರಮೇಲೆ ಇವೆರಡೂ ಸೆಕ್ಷನ್ ಪ್ರಕಾರ ಹಾಕಿ......

ಅಧ್ಯಕ್ಷರು : ಬೇರೆ ಸಾವಿರಾರು ಸೆಕ್ಷನ್ಸ್ ಇದ್ದರೂ I am not going into those things. It is for you to mention. what I am trying to say is Section 302 ಇಲ್ಲ.

ಶ್ರೀಮತಿ ಎಸ್. ಪ್ರಮಿಳಾ ನೇಸರ್ಗಿ : ತಾವು ಹೇಳುವುದನ್ನು ಒಪ್ಪುತ್ತೇನೆ. ಅಕಸ್ಮಾತ್ ಅವರೇನಾದರೂ ಸತ್ತರೆ 307ನೇ ಸೆಕ್ಷನ್‌ನ್ನು ಕನ್ವರ್ಟ್ ಮಾಡಿ 302ರ

ಪ್ರಕಾರ ಹಾಕುತ್ತಾರೆ ಆದರೆ ಆ ಸಂದರ್ಭದಲ್ಲಿ ಮಾನ್ಯ ನಂಜುಂಡಸ್ವಾಮಿಯವರ ಕೇಸಿಗೂ, ಮೈಸೂರಿನ ಕೇಸಿಗೂ ಸಂಬಂಧಪಟ್ಟಂತೆ ಅಟೆಮ್ಪ್ಟ್ ಟು ಮರ್ಡರ್ ಎಂದು ಕೇಸು ಹಾಕಿ ಇಲ್ಲಿ ಇವರನ್ನು ಅರೆಸ್ಟ್ ಮಾಡಿ ಜೈಲಿನಲ್ಲಿ ಇಡುವುದೇನು? ಅಲ್ಲಿ ನಿಮ್ಮ ಪಕ್ಷದವರು ಈಗ ಮೇಯರ್ ಆಗಿರುವವರು ಎನ್ನತಕ್ಕ ಕಾರಣದಿಂದ ಅವರ ಮೇಲೆ ಯಾವುದೇ ಕ್ರಮವನ್ನೂ ತೆಗೆದುಕೊಳ್ಳದೆ ಅರೆಸ್ಟನ್ನು ಕೂಡ ಮಾಡಿಲ್ಲ, ಅಲ್ಲಿ ಅವರು ಮೇಯರ್ ಆಗಿ ಕೆಲಸ ನಿರ್ವಹಣೆ ಮಾಡುವುದಕ್ಕೂ ಬಿಟ್ಟಿದ್ದಾರೆ, ಇದನ್ನು ನಾನು ಇವತ್ತು ಕೇಳುತ್ತಿದ್ದೇನೆ. ಸಾರ್ವಜನಿಕ ಜೀವನದಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯ ನ್ಯಾಯ ತೋರಿಸುವುದು ಸರಿಯಾಗಿ ಕಾಣುವುದಿಲ್ಲ, ಈ ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ. ಇವತ್ತು ಬಹುರಾಷ್ಟ್ರೀಯ ಕಂಪೆನಿಗಳು ಈ ದೇಶಕ್ಕೆ ಬಂದು ನಮ್ಮ ದೇಶದ ಜನರ ಹಕ್ಕುಬಾಧ್ಯತೆಗಳು ಏನಿವೆ, ಅವರ ಜೀವನ ನಿರ್ವಹಣೆಗೆ ಕಷ್ಟವಾಗತಕ್ಕ ಸಂದರ್ಭದಲ್ಲಿ ಜನರನ್ನು ಉಳಿಸುವುದಕ್ಕಾಗಿ, ರಕ್ಷಿಸುವುದಕ್ಕಾಗಿ ಸ್ವದೇಶ ಅಂಧೋಳನದ ತತ್ವವನ್ನು ಇಟ್ಟುಕೊಂಡು ಸ್ವದೇಶಕ್ಕೋಸ್ಕರ ಅಂಧೋಳನದ ಮೂಲಕ ನಮ್ಮ ಜನರಿಗೆ ನಮ್ಮ ಆಹಾರ ಸಿಕ್ಕಲಿ ಎಂಬ ಉದ್ದೇಶದಿಂದ ಮಾನ್ಯ ನಂಜುಂಡಸ್ವಾಮಿಯವರು ಹೋರಾಟ ಮಾಡುತ್ತಿರುವ ಆ ಸಂದರ್ಭದಲ್ಲಿ ಅವರನ್ನು ಆ ಅರೆಸ್ ಮಾಡಿ. ನಂತರ ಜಾಮಿನಿನಮೇಲೆ ಬಿಟ್ಟನಂತರ ಇದನ್ನು ಕ್ಯಾನ್ಸಲ್ ಮಾಡಿ ಎಂದು ಏನು ಇವರು ಹೇಳುತ್ತಿದ್ದಾರೆ, ಈ ಧೋರಣೆಯ ಬಗ್ಗೆ ನಾವು ನಮ್ಮ ವಿವಾದವನ್ನು ವ್ಯಕ್ತಪಡಿಸಬೇಕಾಗಿದೆ.

ಇವತ್ತು ನಾವು ಯೋಚನೆ ಮಾಡಬೇಕಾಗಿದೆ. ಇಂಥ ಚಳುವಳಿಗಳನ್ನು ಈ ಜನ ಮಾಡಬೇಕೇ ಅಥವಾ ಬೇಡವೆ, ಅಂದೋಳನಗಳನ್ನು ಮಾಡಬೇಕೇ ಬೇಡವೇ ಇದು ಇವತ್ತೇನು ಹೊಸದಲ್ಲ, ಹಿಂದೆ ಈ ರೀತಿ ಅಂದೋಳನಗಳು ಬಹಳ ಆಗಿವೆ. ನಮ್ಮ ದೇಶದಲ್ಲಿ ನಾವು ನೋಡಿದ್ದೇವೆ. ಎಷ್ಟು ಅಂಧೋಳನಗಳು ಆಗಿವೆ ಎಂದರೆ, ಹಿಮಾಲಯ ಬಚಾವ್ ಆಂದೋಳನವಾಗಿದೆ, ಗಂಗಾ ಮುಕ್ತಿ ಅಂದೋಳನವಾಗಿದೆ, ಅಜಾಜ್ ಬಚಾವ್ ಅಂದೋಳನವಾಗಿದೆ. ಎಲ್ಲರೂ ಕೂಡ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ಇವತ್ತು ಇಲ್ಲಿ ನಮ್ಮ ಕರ್ನಾಟಕದಲ್ಲಿ ಪ್ರೊ। ನಂಜುಂಡಸ್ವಾಮಿಯವರು ಸ್ವದೇಶಿ ಅಂದೋಳನ ಮಾಡಿ ಈ ರೀತಿ ಕೆಂಟುಕಿ ಚಿಕನ್‌ನಿಂದ ಆಗುತ್ತಿರತಕ್ಕ ಅನಾರೋಗ್ಯಕರ ಪರಿಣಾಮವನ್ನು ಎತ್ತಿ ತೋರಿಸಿದ್ದಾರೆ. ತಮಗೆ ಗೊತ್ತಿವೆ. ಶ್ರೀಮತಿ ಮೇನಕಾ ಗಾಂಧಿಯವರು ಮತ್ತು ವಂದನಾ ಶಿವ ಇವರು ಎಲ್ಲರೂ ಕೂಡ ಬಂದು ಗಾಂಧಿ ಭವನದಲ್ಲಿ 3 ಗಂಟೆಗಳ ಕಾಲ ಸತತವಾಗಿ ಇದರ ಬಗ್ಗೆ ವಿಚಾರ ಸಂಕೀರ್ಣಮಾಡಿ ಇದರಲ್ಲಿ ಆಗುತ್ತಿರತಕ್ಕ ಅನಾಹುತಗಳು ಏನೇನು, ಅಹಾರದಲ್ಲಿ ಏನು ಕೆಟ್ಟ ಪದಾರ್ಥ ಸೇರಿ ಸರಬರಾಜಾಗುತ್ತಿದೆ ಎಂಬುದನ್ನು ಪತ್ತೆ ಮಾಡಿ ಎಲ್ಲದರ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಹೀಗೆ ಮಾಹಿತಿ ಕೊಟ್ಟ ಮೇಲೆ ಕಾರ್ಪೊರೇಶನ್‌ನವರು ಇವತ್ತು ಎಕ್ಸಾಮಿನ್ ಮಾಡಿ, ಲ್ಯಾಬರೇಟರಿ ಟೆಕ್ನಿಶಿಯನ್ ಎಕ್ಸಾಮಿನ್ ಮಾಡಿ ಈ ರೀತಿ ವಿಷಪೂರಿತ ಆಹಾರ ಇದರಲ್ಲಿ ಸೇರಿದೆ ಎಂಬ ಸಂದರ್ಭದಲ್ಲಿ ಇದನ್ನು ಮಾರಬಾರದೆಂದು ಹೇಳಿದ್ದಾರೆ. ಈ ರೀತಿ ಇರತಕ್ಕ ಸಂದರ್ಭದಲ್ಲಿ ನಿಮಗೆ ನಿಜವಾಗಿ ಮನಸ್ಸು ಇದ್ದದ್ದೇ ಆದರೆ ಕೆಂಟುಕಿ ಚಿಕನ್ ಎಂಬ ಏನು ಬಹುರಾಷ್ಟ್ರೀಯ ಸಂಸ್ಥೆ ಇದೆ ಅದಕ್ಕೆ ಅಟೆಂಮ್ಪ್ಟ್ ಮಾಡಿ ಎಂದು ಹೇಳಿ, ಸಾಮಾನ್ಯ ಜನರ ಕೊಲೆ ಮಾಡತಕ್ಕ ಕೆಲಸ ಅವನು ಏನು ಮಾಡುತ್ತಿದ್ದಾರೆ ಅವರ ಮೇಲೆ ಮೊಕದ್ದಮೆ ಮಾಡಿ ಧೈರ್ಯ ಇದ್ದರೆ ಅವರನ್ನು ಅರೆಸ್ಟ್ ಮಾಡಿ. ಅವರ ಮೇಲೆ ಕ್ರಮ ತೆಗೆದುಕೊಂಡು ಅವರ ಲೈಸೆನ್ಸನ್ನು ರದ್ದು ಮಾಡಿ. ಜನಗಳಿಗೆ ಇವತ್ತು ಏನು ಅನ್ಯಾಯವಾಗುತ್ತಿದೆ ಇದನ್ನು ಸರಿಪಡಿಸಿ. ಅದು ಬಿಟ್ಟು ಯಾರು ಇವತ್ತು ಜನರನ್ನು ರಕ್ಷಣೆ ಮಾಡುವುದಕ್ಕೆ ಹೋಗುತ್ತಾರೆ ಅವರನ್ನು ಅರೆಸ್ಟ್ ಮಾಡಿ ಅವರನ್ನು ಜೈಲಿಗೆ ಕಳುಹಿಸತಕ್ಕ ಪ್ರಮೇಯ ಹಾಕಿಕೊಂಡಿರತಕ್ಕದ್ದು ಖಂಡಿತ ತಪ್ಪು. ಒಬ್ಬರ ಕಣ್ಣಿಗೆ ಬೆಣ್ಣೆ

ಮತ್ತೊಬ್ಬರ ಕಣ್ಣಿಗೆ ಸುಣ್ಣ ಹಾಕತಕ್ಕದ್ದು ಖಂಡಿತ ಸರಿಯಲ್ಲ, ಈಗಲಾದರೂ ತಪ್ಪು ಮೊಕದ್ದಮೆ, ಸುಳ್ಳು ಮೊಕದ್ದಮೆ ಹಾಕಿರತಕ್ಕದ್ದು ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿದೆ. ಈಗಲಾದರೂ ಸರಿ, ತಮ್ಮ ಅಧಿಕಾರಿಗಳಿಗೆ ಹೇಳಿ, ಸುಳ್ಳು ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಂಡು ನಿಜವಾಗಿ ಯಾರು ಅಪರಾಧಿಗಳಾಗಿದ್ದಾರೆ ಯಾರು ಅನ್ಯಾಯ ಮಾಡುತ್ತಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಂಡು ಜನರನ್ನು ರಕ್ಷಣೆ ಮಾಡತಕ್ಕ ಕೆಲಸವನ್ನು ಗೃಹ ಮಂತ್ರಿಗಳು ಕೂಡ ಮಾಡಬೇಕು. ಈ ಸಂದರ್ಭದಲ್ಲಿ ಒಂದೇ ಒಂದು ವೈಯಕ್ತಿಕ ಕಾರಣದಿಂದ, ರೈತ ಸಂಘ ಆಂದೋಳನ ಮಾಡುತ್ತಿದೆ, ನಂಜುಂಡಸ್ವಾಮಿಯವರ ಮೇಲೆ ವೈಯಕ್ತಿಕ ದ್ವೇಷ ಇದೆ ಎಂದು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಬಿಟ್ಟು ಸಾರ್ವಜನಿಕವಾಗಿ ಸರ್ಕಾರ ನಡೆಸತಕ್ಕ ಸಂದರ್ಭದಲ್ಲಿ ತಾವು ಎಲ್ಲರನ್ನು ಕೂಡ ಒಂದೇ ವಿಧವಾಗಿ ನೋಡಿಕೊಂಡು, ಚಳುವಳಿ ನಮ್ಮ ಮೂಲಭೂತ ಹಕ್ಕು, ಫಂಡಮೆಂಟಲ್ ರೈಟ್ಸ್ ಎಂದು ಏನು ನಮಗೆ ರಾಜ್ಯಾಂಗದಲ್ಲಿ ಸ್ಪಷ್ಟವಾಗಿದೆ ಆ ಹಕ್ಕನ್ನು ನಾವು ಚಲಾವಣೆ ಮಾಡುವುದಕ್ಕೆ ನಮಗೆ ಸ್ವಾತಂತ್ರ್ಯ ಕೊಡಬೇಕು. ವಿರೋಧ ಪಕ್ಷಗಳನ್ನು ದಮನ ಮಾಡತಕ್ಕ ಸಂದರ್ಭದಲ್ಲಿ ಈ ಕೆಲಸ ಮಾಡಬಾರದು ಮತ್ತು ಈ ಕ್ರಿಯೆ ಮಾಡುವುದಕ್ಕೆ ಯಾರಿಗೂ ಕೂಡ ಅನುಮತಿ ಕೊಡಬಾರದೆಂದು ತಮ್ಮನ್ನು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಎತ್ತಿರತಕ್ಕ ವಿಚಾರದಲ್ಲಿ ಪ್ರೊ| ನಂಜುಂಡಸ್ವಾಮಿಯವರ ಮೇಲೆ ಮುಖ್ಯ ಮಂತ್ರಿಗಳಿಗೆ ವೈಯಕ್ತಿಕವಾದ ದ್ವೇಷ ಇದೆ, ಅದಕ್ಕೋಸ್ಕರ ಇದೆಲ್ಲ ಮಾಡಿದ್ದಾರೆಂಬತಕ್ಕ ಆಪಾದನೆಯನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಈ ಅಪಾದನೆಯಲ್ಲಿ ಯಾವುದೇ ತಿರುಳಿಲ್ಲವೆಂಬುಗದನ್ನು ನಾನು ಪ್ರಾರಂಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ವೈಯಕ್ತಿಕವಾಗಿ ನಮ್ಮ ಮುಖ್ಯಮಂತ್ರಿಗಳಿಗೆ ಆಗಲಿ, ನಮಗಾಗಲಿ, ನಂಜುಂಡಸ್ವಾಮಿಯವರ ಮೇಲಾಗಲಿ ಅಥವಾ ರೈತ ಸಂಘದವರ ಮೇಲಾಗಲಿ ಅಥವಾ ಈ ಸದನದ ಗೌರವಾನ್ವಿತ ಯಾವುದೇ ಸದಸ್ಯರಾಗಿರಲಿ, ಹೊರಗಡೆ ಇರತಕ್ಕ ಮುಖಂಡರುಗಳ ಮೇಲಾಗಲಿ ಯಾವುದೇ ರೀತಿಯ ವೈಯಕ್ತಿಕ ದ್ವೇಷಾಸೂಯೆ ಯಾವುದೂ ಸಹಿತ ಇರುವುದಕ್ಕೆ ಸಾಧ್ಯವಿಲ್ಲ, ಒಬ್ಬೊಬ್ಬರು ಒಂದೊಂದು ವಿಚಾರಧಾರೆ ಇಟ್ಟುಕೊಂಡು ಕೆಲಸಮಾಡುತ್ತಾರೆ. ಆ ವಿಚಾರಧಾರೆಗಳಿಗೂ ಸಹಿತ ನಮ್ಮದೇನು ತಕರಾರು ಇಲ್ಲ, ಸರ್ಕಾರದ ನಿಲುವು ಬಹಳ ಸ್ಪಷ್ಟವಾಗಿದೆ. ಯಾರು ಹಿಂಸಾಚಾರದಲ್ಲಿ ತೊಡಗುತ್ತಾರೆ ಅಂಥವರ ಮೇಲೆ ಕಾನೂನು ಬದ್ಧವಾಗಿ ಕ್ರಮ ಕೈಗೊಳ್ಳುವುದಕ್ಕೆ ನಮಗೆ ಸಂವಿಧಾನಬದ್ಧವಾಗಿ ಜನರು ಅವಕಾಶ ಮಾಡಿಕೊಟ್ಟಿದ್ದಾರೆ. ಮುಗ್ಧ ಜನರ ಮೇಲೆ ಹಿಂಸೆ ಆದ ಸಂದರ್ಭದಲ್ಲಿ ಸರ್ಕಾರ ಸುಮ್ಮನೆ ಇರುತ್ತದೆ, ಈ ಸರ್ಕಾರ ಕೆಲಸ ಮಾಡುತ್ತಿಲ್ಲವೆಂದು ನೀವೇ ಹೇಳಿದ್ದೀರಿ. ಅದರಿಂದಾಗಿ ಕೆಲವು ಕ್ರಮಗಳನ್ನು ಇದರ ಹಿನ್ನಲೆಯಲ್ಲಿ ನಾವು ತೆಗೆದುಕೊಳ್ಳಬೇಕಾಗಿತ್ತು ಎಂಬುದನ್ನು ಕೆಲವು ಘಟನಾವಳಿಗಳನ್ನು ಏನು ನಡೆದಿದೆ ಆ ವಿಚಾರಗಳನ್ನು ಸದನದ ಗಮನಕ್ಕೆ ತಮ್ಮ ಮೂಲಕ ತರುವುದಕ್ಕೆ ಬಯಸುತ್ತೇನೆ.

"ಬೆಂಗಳೂರು ನಗರದ ಬ್ರಿಗೇಡ್ ರಸ್ತೆಯಲ್ಲಿ ಮೇ 1995ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಪರವಾನಗಿ ಪಡೆದು ಕೆ.ಎಫ್.ಸಿ. ಎಂಬ ಬಹು ರಾಷ್ಟ್ರೀಯ ಕಂಪನಿಯ ಹೋಟೆಲು ಜುಲೈ ಒಂದರಿಂದ ಪ್ರಾರಂಭವಾದಾಗಿನಿಂದ ಪ್ರೊ: ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರೈತ ಸಂಘದವರು ಕೆ.ಎಫ್.ಸಿ.ಯ ಮಳಿಗೆಯನ್ನು ಎತ್ತಬೇಕೆಂದು ಇಲ್ಲವಾದರೆ ದೈಹಿಕವಾಗಿ ಅದನ್ನು ಓಡಿಸಲು ಕ್ರಮ ಕೈಗೊಳ್ಳುವುದಾಗಿ ಬೆದರಿಕೆ ಹಾಕಲು ಪ್ರಯತ್ನಸಿದರು ಮತ್ತು ಈ ಒಂದು ಕೋಳಿ ಮಾಂಸದಲ್ಲಿ ರೋಗಾಣುಗಳು ಇದ್ದು ಕ್ಯಾನ್ಸರ್ ಪೀಡಿತ ಕೋಳಿಗಳನ್ನು ಈ ಸಂಸ್ಥೆ ಆಹಾರಕ್ಕಾಗಿ ಬಳಸುತ್ತಿದೆ. ಈ ರೋಗಾಣುಗಳು ಬೊಜ್ಜು ಮೈ, ಹೃದಯ ರೋಗಗಳು, ಕ್ಯಾನ್ಸರ್,

ವಯೋವೃದ್ಧರಿಗೆ ಮಾರಣಾಂತಿಕ ಟೈಫಾಯ್ಡ್ ಮುಂತಾದ ರೋಗಗಳಿಗೆ ಸಂಬಂಧಿಸಿವೆ ಎಂದು ಅಮೆರಿಕಾದ ಸಂಶೋಧನಾ ಸಂಸ್ಥೆ ತನಿಖಾ ವರದಿ ನೀಡಿದ್ದರೂ ಇವುಗಳನ್ನು ತೆರೆಯಲು ಅನುಮತಿ ನೀಡಿರುವುದು ಹೇಗೆ ಎಂದು ನಂಜುಂಡಸ್ವಾಮಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿಕೊಂಡು ಬಂದಿದ್ದಾರೆ.

ಕೆ.ಎಫ್.ಸಿ. ಮುಚ್ಚದಿದ್ದಲ್ಲಿ ನೇರ ಕ್ರಮ ಕೈಗೊಳ್ಳುವುದಾಗಿ ಜೂಲೈ 31ರಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅದೇ ರೀತಿ ರೈತ ಸಂಘವು ಕೆ.ಎಫ್.ಸಿ. ಮಳಿಗೆಯನ್ನು ಮುಚ್ಚುವ ಬಗ್ಗೆ ವಿಧಾನ ಮಂಡಲದ ಅಧಿವೇಶನ ಸಂದರ್ಭದಲ್ಲೂ ಸಹಿತ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಮುಚ್ಚುವವರೆಗೆ ನಾವು ಹೋರಾಟ ಮಾಡುತ್ತೇವೆಂಬ ಮಾತನ್ನು ಸಹ ಅವರು ಹೇಳಿದ್ದಾರೆ. ಬ್ರಿಗೇಡ್ ರಸ್ತೆಯಲ್ಲಿ 3 ಕೋಟಿ ವೆಚ್ಚದಲ್ಲಿ ಸ್ಥಾಪನೆಯಾಗಿರತಕ್ಕ ಕೆ.ಎಫ್.ಸಿ. ಮಳಿಗೆಯ ಕೋಳಿ ಮಾಂಸವನ್ನು ತಿಂದರೆ ಕ್ಯಾನ್ಸರ್ ರೋಗ ಬರುತ್ತದೆಂಬ ಬಗ್ಗೆ ತಮಗೆ ಯಾವುದೇ ಮಾಹಿತಿ ದೊರಕಿಲ್ಲವೆಂದು ಪಶು ಸಂಗೋಪನಾ ಸಚಿವರು ಇದೇ ವಿಚಾರದಲ್ಲಿ ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡಿದಾಗ ಉತ್ತರವನ್ನು ಕೊಟ್ಟಿದ್ದಾರೆ ಈ ಹೋಟೆಲ್ ಮೇಲೆ ಧಾಳಿ ನಡೆಸುವುದಾಗಿ ರಾಜ್ಯ ರೈತ ಸಂಘದವರು ಹಾಕಿದ ಬೆದರಿಕೆಯ ಹಿನ್ನೆಲೆಯಲ್ಲಿ ಆಗಸ್ಟ್ 25ರಿಂದ ಸೆಪ್ಟಂಬರ್ 1ರ ವರೆಗೆ ಹೋಟೆಲ್ ಸುತ್ತ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಪೋಲೀಸ್ ಕಾಯಿದೆ ಸೆಕ್ಷನ್ 35ರ ಪ್ರಕಾರ ಪ್ರತಿಬಂಧಕಾಜ್ಞೆಯನ್ನು ಸಹಿತ ಜಾರಿ ಮಾಡಲಾಗಿತ್ತು. ಈ ಮಧ್ಯೆ ಅವರು ತಯಾರಿಸಿದ ಖಾದ್ಯವನ್ನು ಬೆಂಗಳೂರು ಮಹಾನಗರ ಪಾಲಿಕೆಯು ವೈಜ್ಞಾನಿಕವಾಗಿ ಪರೀಕ್ಷೆಗೆ ಒಳಪಡಿಸಿದ ನಂತರ ತಿನ್ನಲು ಯೋಗ್ಯವಲ್ಲದ ಕಳಪೆ ಕಲಬೆರಕೆ ಹಾಗೂ ಪೊನೋ ಸೋಡಿಯಂನ್ನು ಹೆಚ್ಚಾಗಿ ಬಳಸಿದೆ ಎಂದು ಅವರ ಹೋಟೆಲಿ ಪರವಾನಗಿಯನ್ನೂ ರದ್ದು ಮಾಡುವುದಕ್ಕೆ ನೋಟೀಸನ್ನು ದಿನಾಂಕ 30ನೇ ಆಗಸ್ಟ್‌ನಿಂದ ಜಾರಿಗೆಕೊಟ್ಟಿರುತ್ತಾರೆ. ಸೆಪ್ಟಂಬರ್ 12ರಂದು ಬೆಂಗಳೂರು ಮಹಾನಗರ ಪಾಲಿಕೆಯು ಮಳಿಗೆಯ ಲೈಸೆನ್ಸನ್ನು ರದ್ದು ಮಾಡಿದೆ. ನಂತರದಲ್ಲಿ ಈ ಪರವಾನಗಿಯನ್ನು ಹೈ ಕೋರ್ಟಿನವರು ತಡೆಯಾಜ್ಞೆ ಮೂಲ ನಿಲ್ಲಿಸಿದ್ದಾರೆ.

ಈ ಮಧ್ಯೆ ಕೆಂಟಕಿ ಮಳಿಗೆಯ ತೆರವಿಗೆ ಕಾನೂನು ವಾದವಿವಾದಕ್ಕೆ ಕಾಯದೆ ಜನಾಂಧೋಳನದ ಮೂಲಕ ಈ ಹೊಟೆಲನ್ನು ಹೊರಹಾಕುವುದಾಗಿ ನಂಜುಂಡಸ್ವಾಮಿಯವರು ತಿಳಿಸಿದ್ದಾಗ ವರದಿಯಾಗಿದೆ. ಕೆ.ಎಫ್.ಸಿ.ಯ ಆರಂಭದ ಸಮಯದಲ್ಲಿ ಸಂಘವು ಬೆದರಿಕೆ ಹಾಕಿದ್ದರಿಂದ ಪೊಲೀಸ್ ಕಾವಲು ಹಾಕಲಾಗಿತ್ತು. ಸಮಯ ಹೋದಂತೆ ಆ ಮಳಿಗೆ ಮೇಲೆ ರೈತ ಸಂಘದವರು ಬೆದರಿಕೆ ಒಡ್ಡುವುದನ್ನು ನಿಲ್ಲಿಸಿದ್ದರಿಂದ ಅಲ್ಲಿಯವರೆಗೆ ಇಡಲಾಗಿದ್ದ ಬಲವಾದ ಸಶಸ್ತ್ರ ಪಡೆಯನ್ನು ಕಡಿಮೆ ಮಾಡಿ ಕೆಲವು ಸಿಬ್ಬಂದಿಯನ್ನು ಮಾತ್ರ ರಕ್ಷಣೆಗೋಸ್ಕರ ಅಲ್ಲೆ ಇಡಲಾಗಿತ್ತು. ದಿನಾಂಕ 30-1-96ರಂದು ಮಧ್ಯಾಹ್ನ ಸುಮಾರು ಎರಡು ಗಂಟೆಗೆ ರಾಜ್ಯ ರೈತಸಂಘದವರು ಎನ್ನಲಾದ ನೂರಾರು ಜನರು ಕೆ.ಎಫ್.ಸಿ. ಮಳಿಗೆ ನುಗ್ಗಿ ಒಳಗಿದ್ದ ಪೀಠೋಪಕರಣಗಳನ್ನು ಕಂಪ್ಯೂಟರ್ ಇತ್ಯಾದಿ ವಸ್ತುಗಳನ್ನು ಧ್ವಂಸ ಮಾಡಿ ಕೆಲವು ವಸ್ತುಗಳನ್ನು ರಸ್ತೆಗೆ ತೆಗೆದುಕೊಂಡು ಹೋಗಿ ಸುಟ್ಟಿರುತ್ತಾರೆ. ಇವರು ಈ ವಿಧ್ವಂಸಕ ಕೃತ್ಯ ಎಸಗುತ್ತಿದ್ದಾಗ ನಂಜುಂಡಸ್ವಾಮಿಯವರ ಮತ್ತು ರೈತ ಸಂಘದ ಪರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು. ಆ ಘಟನೆಯ ಕಾಲಕ್ಕೆ ಅಪರಾಧಿಗಳು ಕೆ.ಎಫ್.ಸಿ.ಯು ಕೆಲಸಗಾರರ ಮೇಲೆ ಧಾಳಿ ಮಾಡಿರುವುದಲ್ಲದೆ ಅವರನ್ನು ಮುಗಿಸುವುದಾಗಿ ಬೆದರಿಕೆ ಸಹಿತ ಒಡ್ಡಿದ್ದಾರೆ.

ಈ ಘಟನೆಯಿಂದಾಗಿ ಕೆ.ಎಫ್.ಸಿ.ಗೆ ಕೆಲವು ಲಕ್ಷ ರೂಪಾಯಿಗಳು ನಷ್ಟವಾಯಿತಲ್ಲದೆ ಹಲವು ವಸ್ತುಗಳು ಸಹಿತ ಅಲ್ಲಿ ಕಾಣೆಯಾಗಿದೆ. ಈ ವಿಷಯ ತಿಳಿದ ಮೇಲೆ ಪೋಲೀಸ್ ಅಧಿಕಾರಿಗಳು ಹೆಚ್ಚಿನ ಸಿಬ್ಬಂದಿಯೊಂದಿಗೆ ಅಲ್ಲಿಗೆ ಹೋಗಿ ಸ್ಥಳದಿಂದ ಪಲಾಯನ ಮಾಡುತ್ತಿದ್ದ ರೈತ ಸಂಘದ ಕಾರ್ಯಕರ್ತರನ್ನು ಹಿಡಿದು ಬಂಧಿಸಿರುತ್ತಾರೆ.

ಈ ಘಟನೆಗೆ ಸಂಬಂಧಿಸಿದಂತೆ ಕೆ.ಎಫ್.ಸಿ. ಅಸಿಸ್ಟೆಂಟ್ ಮ್ಯಾನೇಜರ್ ವಿನೋದ್ ಅವರು ಅಶೋಕ್‌ನಗರ ಪೋಲೀಸ್ ಸ್ಟೇಷನ್ನಿನಲ್ಲಿ ಕೊಟ್ಟಿರತಕ್ಕ ದೂರಿನ ಮೇರೆಗೆ ಅಲ್ಲಿನ ಪೋಲೀಸ್ ಠಾಣಾಧಿಕಾರಿಗಳು ನಂಜುಂಡಸ್ವಾಮಿ ಮತ್ತು ಇತರೆ ಅಪರಾಧಿಗಳ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ. ನಂಜುಂಡಸ್ವಾಮಿಯವರು ಈ ಮೊದಲು ಕೆ.ಎಫ್.ಸಿ.ಯನ್ನು ಮುಚ್ಚಬೇಕೆಂದು, ಮುಚ್ಚದಿದ್ದರೆ ಇದರ ಮೇಲೆ ದಾಳಿ ಮಾಡಲಾಗುವುದೆಂದು ಪತ್ರಿಕೆಗಳ ಮುಖಾಂತರ ಎಚ್ಚರಿಕೆಯನ್ನೂ ನೀಡಿದ್ದರು. ಆಗ ಈ ಜಾಗದಲ್ಲಿ ಒಂದು ಸಶಸ್ತ್ರ ಪೋಲೀಸ್ ಪಡೆ ಮತ್ತು ಸಿವಿಲ್ ಅಧಿಕಾರಿಗಳ ಸಿಬ್ಬಂದಿ ನೇಮಕವಾಗಿತ್ತು. ಈ ಬೆದರಿಕೆ ವಿರುದ್ಧ ಕೆ.ಎಫ್.ಸಿ.ಯವರು ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಈ ಮಳಿಗೆಯ 25 ಅಡಿ ಸುತ್ತಳತೆ ಜಾಗದಿಂದ ಒಳಕ್ಕೆ ನಂಜುಂಡಸ್ವಾಮಿಯವರಾಗಲೀ ರೈತ ಸಂಘದವರಾಗಲೀ ಯಾವುದೇ ಚಳುವಳಿ ಮುಷ್ಕರ ಇತ್ಯಾದಿ ಮಾಡಬಾರದೆಂದು 5-8-1995ರಂದು ಇಂಜೆಂಕ್ಷನ್ ಆರ್ಡರನ್ನೂ ಸಹಿತ ಕೋರ್ಟಿನವರು ಕೊಟ್ಟಿರುತ್ತಾರೆ. ನಂಜುಂಡಸ್ವಾಮಿಯವರು ಕೆ.ಎಫ್.ಸಿ. ಮಳಿಗೆ ಮೇಲಿನ ಬೆದರಿಕೆ ಹಾಗೂ ಎಚ್ಚರಿಕೆಯನ್ನು ಕಾರ್ಯಗತಗೊಳಿಸಲು 30-1-96ರಂದು ರೈತಸಂಘದ ಅನುಯಾಯಿಗಳಿಂದ ದಾಳಿನಡೆಸಿ ದಾಳಿಯ ಕಾಲಕ್ಕೆ ಅಪರಾಧಿಗಳು ನಂಜುಂಡಸ್ವಾಮಿಯವರ, ರೈತಸಂಘದ ಪರ ಘೋಷಣೆಗಳನ್ನು ಕೂಗುತ್ತಿದ್ದ ಕಾರಣ ಈ ದಾಳಿ ನಂಜುಂಡಸ್ವಾಮಿಯವರ ಪ್ರಚೋದನೆಯಿಂದಲೇ ನಡೆದಿದೆಯೆಂದು ಇವತ್ತು ಸ್ಪಷ್ಟವಾಗುತ್ತದೆ. ಹೀಗಾಗಿ ದಿನಾಂಕ 3-2-96ರಂದು ನಂಜುಂಡಸ್ವಾಮಿಯವರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ನ್ಯಾಯಾಲಯವು ಅವರನ್ನು 12-2-96ರಂದು ನ್ಯಾಯಾಂಗ ಬಂಧನಕ್ಕೆ ಗುರಿಪಡಿಸಿತು. ಮುಂದೆ ನಂಜುಂಡಸ್ವಾಮಿಯವರ ಪರವಾಗಿ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆಯನ್ನು ಕೈಗೊಂಡ ಮ್ಯಾಜಿಸ್ಟ್ರೇಟ್‌ರವರು 9-2-96ರಂದು ನಂಜುಂಡಸ್ವಾಮಿಯವರಿಗೆ ಷರತ್ತಿನ ಜಾಮೀನನ್ನು ನೀಡಿ ಉಳಿದ 101 ಜನ ರೈತರಿಗೆ ಜಾಮೀನನ್ನು ತಿರಸ್ಕರಿಸಿದರು.

ಆ ಬಳಿಕ 101 ಜನರ ಪರವಾಗಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಸೆಷನ್ಸ್ ಜಡ್ಜ್, ಬೆಂಗಳೂರು ಇವರು ಪುರಸ್ಕರಿಸಿ 16-2-96ರಂದು ಷರತ್ತಿನ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ. ನಂಜುಂಡಸ್ವಾಮಿಯವರು ನ್ಯಾಯಾಲಯದಲ್ಲಿ ಸಲ್ಲಿಸಿದ ಜಾಮೀನು ಅರ್ಜಿಯಲ್ಲಿ ತಾನು ಕೆ.ಎಫ್.ಸಿ.ಯನ್ನು ಬಹಿಷ್ಕರಿಸಬೇಕೆಂದು ರಾಜ್ಯ ರೈತ ಸಂಘಕ್ಕೆ ಕರೆ ಇತ್ತಿದ್ದು ಕೆ.ಎಫ್.ಸಿ.ಯ ವಿರುದ್ಧ ಶಾಂತ ರೀತಿಯಲ್ಲಿ ಪ್ರತಿಭಟನೆ ಮಾಡಲು ಸೂಚಿಸಿದ್ದನ್ನು ತಿಳಿಸಿದ್ದಾರೆ. ಆದರೆ ಅದು ಹಿಂಸಾರೂಪಕ್ಕೆ ಹೋಗಿ ಆ ಕೃತ್ಯಕ್ಕೆ ತಾನು ಯಾವುದೇ ರೀತಿಯಲ್ಲಿ ಜವಾಬ್ದಾರನಲ್ಲವೆಂದೂ ಸಹಿತ ನಿವೇದಿಸಿರುತ್ತಾರೆ. ಇದನ್ನು ಆಳವಾಗಿ ಪರಿಶೀಲಿಸಿದಾಗ ಕಾನೂನಿನ ದೃಷ್ಟಿಯಿಂದ ಇಲ್ಲಿ ನಡೆಸ ಹಿಂಸಾತ್ಮಕ ಘಟನೆಯನ್ನು ಅವರು ಒಪ್ಪಿಕೊಂಡಂತೆ ಆಗುತ್ತದೆ. ಹೀಗಾಗಿ ನಂಜುಂಡಸ್ವಾಮಿಯವರ ವಿರುದ್ಧವಾಗಲೀ ಅಥವಾ ಅವರ ಅನುಯಾಯಿಗಳ ವಿರುದ್ಧವಾಗಲೀ ಪೋಲೀಸರು ಸುಳ್ಳು ಪ್ರಕರಣವನ್ನು ಹಾಕಿಲ್ಲವೆಂದು ಸ್ಪಷ್ಟವಾಗಿ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಮೈಸೂರಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೋದಂಥ ಸಂದರ್ಭದಲ್ಲಿ ಕೆಲವು ರೈತ ಸಂಘದ ಕಾರ್ಯಕರ್ತರು ಅಂತ ಹೇಳಿ ಸಭೆಗೆ ಅಡ್ಡಪಡಿಸಿದ್ದರಿಂದ ಅವರನ್ನು ಸಭೆಯಿಂದ ಹೊರಗಡೆ ಹಾಕಿ ಸಭೆಯು ಸುಲಲಿತವಾಗಿ ನಡೆಯಲಿಕ್ಕೆ ಪೋಲೀಸರು ಅವಕಾಶವನ್ನು ಮಾಡಿಕೊಟ್ಟು ಸಾರ್ವಜನಿಕ ಸಭೆಯನ್ನು ನಡೆಸಲಿಕ್ಕೆ ಅಡ್ಡಿಯನ್ನು ಮಾಡಿದ್ದಾರೆಂದು ಅವರ ಮೇಲೆ ಮೊಕದ್ದಮೆಯನ್ನು ಹಾಕಲಾಗಿದೆಯೇ ವಿನಾಃ ಬೇರೆ ಯಾವ ದುರುದ್ದೇಶದಿಂದಲೂ ಈ ಕೇಸನ್ನು ಹಾಕಿಲ್ಲ. ರೈತಸಂಘದವರಿಗೆ ಆಗಲಿ ನಂಜುಂಡಸ್ವಾಮಿಯವರಿಗಾಗಲಿ ಅಥವಾ ಯಾರಿಗೇ ಆಗಲಿ ಅವರ ವಿಚಾರ ಸಿದ್ಧಾಂತಗಳಿಗೆ ಯಾರದ ತಕರಾರಿಲ್ಲ.

ಆದರೆ ಸಾರ್ವಜನಿಕ ಶಾಂತಿಗೆ ಭಂಗ ತರತಕ್ಕ ಸಾರ್ವಜನಿಕ ಆಸ್ತಿಪಾಸ್ತಿಯನ್ನು ಹಾಳು ಮಾಡತಕ್ಕಂಥ ಸಂದರ್ಭದಲ್ಲಿ ಯಾರು ಎಷ್ಟೇ ದೊಡ್ಡವರಾಗಿದ್ದರೂ ಸಹಿತ ಕಾನೂನಿನ ಪ್ರಕಾರವಾಗಿ ಕ್ರಮ ತೆಗೆದುಕೊಳ್ಳಲಿಕ್ಕೆ ನಮಗೆ ಅವಕಾಶ ಇದೆ. ಅದರ ಪ್ರಕಾರವಾಗಿ ನಾವು ಕೇಸುಗಳನ್ನು ದಾಖಲೆ ಮಾಡಿಕೊಂಡು ವಿಚರಣೆ ಮಾಡುತ್ತಿದ್ದೇವೆಯೇ ಹೊರತು ಬೇರೆ ಯಾವುದೇ ರಾಜಕೀಯ ಸೇಡಿನಿಂದ ಯಾವುದೇ ದುರುದ್ದೇಶಗಳಿಂದ ಈ ಕೆಲಸವನ್ನು ಸರ್ಕಾರವಾಗಲೀ ಪೋಲಿಸರಾಗಲೀ ಮಾಡಿಲ್ಲ ಎಂಬುದನ್ನು ನಾನು ಸ್ಪಷ್ಟವಾಗಾ ತಿಳಿಸುವುದಕ್ಕೆ ಇಷ್ಟಪಟ್ಟು ಮಾನ್ಯ ಗೌರವಾನ್ವಿತ ಸದಸ್ಯರುಗಳು ಏನೆಲ್ಲಾ ಆಪಾದನೆಗಳನ್ನು ಮಾಡಿದ್ದಾರೆ ಈ ಆಪಾದನೆಗಳಲ್ಲಿ ತಿರುಳಿಲ್ಲ ಎನ್ನತಕ್ಕಂಥ ವಿಚಾರವನ್ನೂ ಸಹಿತ ಈ ಸಂದರ್ಭದಲ್ಲಿ ಹೇಳಿ ನಿಲುವಳಿ ಸೂಚನೆಗೆ ಇದು ಅರ್ಹವಾದುದಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸಿ ಇವತ್ತು ಈ ಎಲ್ಲಾ ಮೊಕದ್ದಮೆಗಳೂ ಸಹಿತ ವಿಚರಣೆಯ ಹಂತದಲ್ಲಿ ಇರುವುದರಿಂದಾಗಿ ಕಾನೂನಿನ ಪ್ರಕಾರವಾಗಿ, ಅವರು ಹಿಂಸಾಕೃತ್ಯವನ್ನು ಮಾಡಿದ್ದರೆ ಅದಕ್ಕೆ ಶಿಕ್ಷೆಯನ್ನು ಮಾಡಲೇಬೇಕಾಗುತ್ತದೆ. ಯಾರೂ ಸಹಿತ ಕಾನೂನನ್ನು, ಸಂವಿಧಾನವನ್ನು, ನ್ಯಾಯಾಲಯವನ್ನು ತಮ್ಮ ಕೈಗೆ ತೆಗೆದುಕ್ಕೊಂಡು ನಮ್ಮದೇ ವಿಚಾರಧಾರೆ ಇದೆ, ನಾವು ಹೇಳುವುದೇ ಸರಿ ಎಂದು ಹೇಳಿ ಮಾಡಲಿಕ್ಕೆ ಸಾಧ್ಯವಿಲ್ಲ. ಅದನ್ನು ಮಾಡಿದರೆ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಲಿಕ್ಕೆ ನಮಗೆ ಜನ ಇಲ್ಲಿ ಅಧಿಕಾರದಲ್ಲಿ ಕೂರಿಸಿಲ್ಲ. ಯಾರು ಹಿಂಸಾಚಾರದಲ್ಲಿ ತೊಡಗುತ್ತಾರೆ, ಯಾರು ಪ್ರಚೋದನೆ ಮಾಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ. ಈ ಮೊಕದ್ದಮೆಗಳು ಸುಳ್ಳು ಅಲ್ಲ, ನಿಜ ಎನ್ನುವುದನ್ನು ಅವರೇ ಹೇಳಿದ್ದಾರೆ. ನ್ಯಾಯಾಲಯದಲ್ಲಿ ಅವರಿಗೆ ಜಮೀನನ್ನು ಕೊಡತಕ್ಕ ಸಂದರ್ಭದಲ್ಲಿ ಸಹಿತ ಈ ಮಾತನ್ನು ನ್ಯಾಯಾಧೀಶರು ಒತ್ತಿ ಒತ್ತಿ ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ ಎಂಬುದನ್ನು ತಮ್ಮ ಮೂಲಕವಾಗಿ ಈ ಸಭೆಯ ಗಮನಕ್ಕೆ ತರಲಿಕ್ಕೆ ನಾನು ಬಯಸುತ್ತೇನೆ ಸ್ವಾಮಿ.

+ ಶ್ರೀ ಎಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಗೌರವಾನ್ವಿತ ಸದಸ್ಯರುಗಳಾದ ವಾಟಾಳ್ ನಾಗರಾಜ್‌ರವರು ಶ್ರೀಮಾನ್ ಪುಟ್ಟಣ್ಣಯ್ಯನವರು ಹಾಗೂ ಇನ್ನಿತರ ಕೆಲವು ಸ್ನೇಹಿತರುಗಳು ತಮ್ಮ ಅನುಮತಿ ಕೇಳಿ ನಿಲುವಳಿ ಸೂಚನೆ ಮುಖೇನ ಕೆಂಟಕಿ ಚಿಕನ್ ರೆಸ್ಟೋರೆಂಟ್ ಮೇಲೆ ಆದ ಘಟನೆ ಬಗ್ಗೆ ಚರ್ಚೆಗೆ ಅನುಮತಿ ಕೊಡಬೇಕೆಂದು ಹೇಳಿ ಪೂರ್ವಭಾವಿಯಾಗಿ ತಮ್ಮ ವಾದವನ್ನು ಮಂಡನೆ ಮಾಡಿದ್ದಾರೆ. ಹಾಗೆಯೇ ವಾದವನ್ನು ಮಂಡನೆ ಮಾಡಿ ತಮ್ಮ ಮನಸ್ಸನ್ನು ಒಲಿಸತಕ್ಕ ಕಾಲದಲ್ಲಿ ಈ ಸರ್ಕಾರ ಪೂರ್ವಾಗ್ರಹಪೀಡಿತವಾದಂಥ ಹಿನ್ನೆಲೆಯಲ್ಲಿ ಈ ಒಂದು ಘಟನೆ ಬಗ್ಗೆ ಘಟನೆಯ ನಾಯಕತ್ವವನ್ನು ವಹಿಸಿದ್ದಂಥ ಹಿರಿಯರಾದ ಪ್ರೊಫೆಸರ್ ನಂಜುಂಡಸ್ವಾಮಿ ಅವರ ಬಗ್ಗೆ ಸುಳ್ಳು ಮೊಕದ್ದಮೆಗಳನ್ನು ಹೂಡಿದ್ದಾರೆ ಎಂದು ಹೇಳಿದ್ದಾರೆ. ಇದು ನೇರವಾದ ಆಪಾದನೆಯನ್ನು ಗೌರವಾನ್ವಿತ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಮಾಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ಸರ್ಕಾರ ಮಾಡತಕ್ಕಂಥ ಎಲ್ಲಾ ಕಾರ್ಯಕ್ರಮಗಳೂ ಸರಿ ಎಂದು ಒಪ್ಪಿಕೊಳ್ಳಬೇಕೆಂದು ಯಾರೂ ಅಪೇಕ್ಷೆ ಮಾಡುವುದಿಲ್ಲ, ಸರ್ಕಾರದ ನಿರ್ಣಯಗಳನ್ನು ವಿರೋಧ ಮಾಡತಕ್ಕದ್ದಕ್ಕೆ ಸಾರ್ವಜನಿಕ ದೃಷ್ಟಿಯಿಂದ ನಿರ್ಣಯಗಳು ಯೋಗ್ಯವಾದವುಗಳಲ್ಲ ಎಂದು ಗೊತ್ತಾದಾಗ ಅವುಗಳ ಬಗ್ಗೆ ಪ್ರತಿಭಟನೆ ಮಾಡಲಿಕ್ಕೆ, ಹಿಂಸಾಮಾರ್ಗಕ್ಕೆ ಅವಕಾಶ ಕೊಡದೆ ಚಳುವಳಿ ಮಾಡಲಿಕ್ಕೆ ಈ ದೇಶದಲ್ಲಿರತಕ್ಕ ವ್ಯಕ್ತಿಗತ ಸ್ವಾತಂತ್ರ್ಯವನ್ನು ಯಾರೂ ಮೊಟಕು ಮಾಡಲಿಕ್ಕೆ ಸಾಧ್ಯ ಇಲ್ಲ. ರಾಜಕೀಯ ಪಕ್ಷಗಳು ಮಾಡಬಹುದು, ಸಂಘಸಂಸ್ಥೆಗಳು ಮಾಡಬಹುದು, ವ್ಯಕ್ತಿಗತವಾಗಿಯೂ ಮಾಡಬಹುದು. ನನಗೆ ಇಷ್ಟ ಇಲ್ಲದಿದ್ದರೆ ಒಬ್ಬರ ವಿರುದ್ಧ ಕಪ್ಪು ಬಾವುಟ ಹಿಡಿಯಬಹುದು. ಯಾರು ಬೇಡ ಎಂದು ಹೇಳುತ್ತಾರೆ. ಇದರ ಬಗ್ಗೆ ದೇವೇಗೌಡರು ಇಲ್ಲಿದ್ದರೂ ಅಷ್ಟೆ, ಇಲ್ಲಿಂದ

ದೇವೇಗೌಡರು ಹೋದ ಮೇಲೆ ನೀವೇ ಬಂದು ಇಲ್ಲಿ ಕುಳಿತರೂ ಮೊಟಕು ಮಾಡಲಿಕ್ಕೆ ಸಾಧ್ಯವಿಲ್ಲ, ಆದರೆ ಪ್ರತಿಭಟನೆ ಮಾಡಲಿಕ್ಕ ಕೆಲವು ನಿಯಮಗಳನ್ನು ನಾವು ಅನುಸರಿಸಬೇಕಾಗುತ್ತದೆ. ಈ ನಿಯಮಗಳನ್ನು ಬಿಟ್ಟು ಆ ನಿಯಮಗಳ ಚೌಕಟ್ಟಿನಿಂದ ಹೊರಗೆ ಹೋದಾಗ ಕಾನೂನಿನ ಕ್ರಮಕ್ಕೆ ನಾವೆಲ್ಲಾ ತಲೆಬಾಗಲೇಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ಕೆಂಟಕಿ ಚಿಕ್ಕನ್ ಬಗ್ಗೆ ನಮ್ಮದು ಯಾರದ ಸಮರ್ಥನೆ ಇಲ್ಲ, ನಾವೇನೂ ಲೈಸೆನ್ಸ್ ಕೊಡಬೇಕು ಎಂದು ಅದರ ಬಗ್ಗೆ ನಾನು ಸಮರ್ಥನೆ ಮಾಡಲಿಕ್ಕೆ ಹೋಗುವುದಿಲ್ಲ, ಒಂದು ಹಂತದಲ್ಲಿ ಕಾರ್ಪೊರೇಷನ್‌ನವರು ಇದಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ. ಕಾರ್ಪೊರೇಷನ್ ಲೈಸೆನ್ಸ್ ಕೊಡತಕ್ಕ ಹಂತದಲ್ಲಿ ಪ್ರತಿಯೊಂದನ್ನೂ ಸರ್ಕಾರವನ್ನು ಕೇಳಿ ಲೈಸೆನ್ಸ್ ಕೊಡುವುದಿಲ್ಲ, ಅಥವಾ ನಾವೇನಾದರೂ ಮಧ್ಯಪ್ರವೇಶ ಮಾಡಿದಾಗ ಮಾತ್ರ ಅವರು ನಮ್ಮ ಗಮನಕ್ಕೆ ತರಬಹುದು. ಪ್ರತಿಯೊಂದು ರೆಸ್ಟೋರೆಂಟ್‌ಗಳಿಗೆ ಲೈಸೆನ್ಸ್ ಕೊಡುವಾಗ ನಾವು ಅದರಲ್ಲಿ ಪ್ರವೇಶ ಮಾಡುವುದಕ್ಕೆ ಯಾವ ಸರ್ಕಾರವೂ ಆ ಕಡೆ ಅಷ್ಟೊಂದು ತೀರ ಕೆಳಮಟ್ಟಕ್ಕೆ ಹೋಗಲಿಕ್ಕೆ ಸಿದ್ಧರಿಲ್ಲ ಎಂದು ಭಾವಿಸುತ್ತೇನೆ. ಯಾರೇ ಹಿಂದೆ ಸರ್ಕಾರ ನಡೆಸಿರಲಿ ಒಂದು ಹೋಟೆಲ್‌ಗೆ ಲೈಸೆನ್ಸ್ ಕೊಡುವುದು ಸಿನಿಮಾ ನಡೆಸುವುದಕ್ಕೆ ಲೈಸೆನ್ಸ್ ಕೊಡುವುದು ಇದಕ್ಕೆಲ್ಲಾ ನಾವು ಮಧ್ಯಪ್ರವೇಶ ಮಾಡುವುದಕ್ಕೆ ಯಾವ ಸರ್ಕಾರವೂ ಅವರಿಗೆ ಕಾಲವೂ ಇರುವುದಿಲ್ಲ, ಹೋಗಲಿಕ್ಕೆ ಸಾಧ್ಯವೂ ಇರುವುದಿಲ್ಲ.

1.40 ಪಿ.ಎಂ.

ಇದು ಹೈಕೋರ್ಟ್‌ಗೆ ಹೋಗಿ ಸ್ಟೇ ಆದಮೇಲೆ ನಮ್ಮ ಗಮನಕ್ಕೆ ಬಂದಿದೆ. ಇರುವ ವಿಷಯವನ್ನು ಪ್ರಾಮಾಣಿಕವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ರೈತಸಂಘದ ಹೋರಾಟದ ಬಗ್ಗೆ ತಾವು ಹೋರಾಟ ಮಾಡಿದ್ದೀರಿ, ಮಾನ್ಯ ಪುಟ್ಟಣ್ಣಯ್ಯನವರು ಹೋರಾಟ ಮಾಡಿದ್ದಾರೆ. ಹೋರಾಟ ಮಾಡಲೇಬೇಕಾಗುತ್ತದೆ. ರೈತ ಸಂಘದ ಬಗ್ಗೆ ನನ್ನದೇನೂ ಬೇಸರವಿಲ್ಲ, ಪ್ರತಿಭಟನೆ ಮಾಡಬೇಕು, ಮಾಡಬೇಕಾದದ್ದು ನಿಮ್ಮ ಕರ್ತವ್ಯ ನಿಮ್ಮ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ನಾನು ಯಾರು? ಆದರೆ ರೈತಸಂಘದ ಉದ್ದೇಶವೇನು? ಈ ರಾಜ್ಯದಲ್ಲಿರುವ ಮಲ್ಟಿನ್ಯಾಷನಲ್ ವಿದೇಶಿ ಕಂಪನಿಗಳನ್ನು ಒದ್ದು ಹೊರಗೆ ಓಡಿಸುತ್ತೇವೆ ಎಂದು ಹೇಳುವಂಥ ಈ ಉದ್ದೇಶವಿದ್ದಾಗ, ಈ ದೇಶದ ಒಂದು ಆರ್ಥಿಕ ನೀತಿ ಬದಲಾವಣೆಯಾದ ಮೇಲೆ, ಈ ರಾಷ್ಟ್ರದಲ್ಲಿ ಒಂದು ಹೊಸ ಆರ್ಥಿಕ ನೀತಿಯನ್ನು ವ್ಯವಸ್ಥೆಯನ್ನು ಜಾರಿಗೆ ಕೊಟ್ಟಮೇಲೆ ಬಹುಶಃ ಕರ್ನಾಟಕ ಒಂದರಲ್ಲೇ ಅಲ್ಲ ಇಡೀ ಹಿಂದೂಸ್ಥಾನದಲ್ಲೇ ಹಲವಾರು ಹೊಸ ಹೊಸ ಉದ್ದಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅನುವು ಮಾಡಿಕೊಟ್ಟಿದ್ದೇವೆ. ಬೇರೆ ರಾಜ್ಯಗಳಲ್ಲಿ ಅನುವು ಮಾಡಿ ಕೊಟ್ಟಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಅನುವು ಮಾಡಿಕೊಟ್ಟಿದ್ದೇವೆ. 1990ರಿಂದ ಇಲ್ಲಿಯವರೆಗೆ ಕರ್ನಾಟಕದಲ್ಲಿ ಎಷ್ಟು ವಿದೇಶಿ ಕಂಪೆನಿಗಳು ಬಂದಿವೆ ನಮ್ಮ ರಾಜ್ಯಕ್ಕೆ ಸೀಮಿತವಾಗಿ ಈ ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. 47 ಮಲ್ಟಿನ್ಯಾಷನಲ್ಸ್ ಕಂಪನಿಗಳು ಕರ್ನಾಟಕದಲ್ಲಿ ಇವೆ. ಅಂದರೆ ಬಹು ರಾಷ್ಟ್ರೀಯ ಕಂಪೆನಿಗಳು. ನಾನು ಬಾಕಿ ವಿಷಯಗಳಿಗೆ ಆಮೇಲೆ ಹೋಗುತ್ತೇನೆ. ಮೊದಲು ನಾನು ಅವರ ಸ್ಟೇಟ್‌ಮೆಂಟನ್ನು ಓದುತ್ತೇನೆ. ಹಿರಿಯರಾದ ಪ್ರೊ| ನಂಜುಂಡಸ್ವಾಮಿಯವರ ಸ್ಟೇಟ್‌ಮೆಂಟೇ ಓದೋಣ. ನಾವು ಬೇರೆ ಇನ್ನಾವುದಕ್ಕೂ ಹೋಗುವುದು ಬೇಡ. ಮುಂದೆ ನೀವೇ ಭಾಷಣ ಮಾಡಿ ಯಾರಾದರೂ ಭಾಷಣ ಮಾಡಲಿ ಅವರು ಏನೂ ಮಾಡಿಲ್ಲವೆಂದರೆ ನನ್ನದೇನೂ ತಕರಾರು ಇಲ್ಲ, ಹೇಳುವ ಅಧಿಕಾರ ನಿಮಗೆ ಇದೆ. ಕರ್ನಾಟಕ ರಾಜ್ಯ ರೈತಸಂಘದ ಅಧ್ಯಕ್ಷರಾದ ಪ್ರೊ| ನಂಜುಂಡಸ್ವಾಮಿ claimed hee responsibility for the attack. 'Claiming the responsibility for the atttack on Kentucky Fried Chicken outlt on Brigade Road said similar fate awaited

for all muli-naional corporaions entering the state to blunder its bio-wealth and geo-wealth, what he termed was the meeat industry's threat to Indian agriculture and economy...'

ನನಗೂ ಸ್ವಲ್ಪ ರೈತರ ಹಿನ್ನಲೆಯಿದೆ. ನೀವು ಉಕ್ಕೆ ಹೊಡೆದು ಬಂದಿರಬಹುದು, ನಾನೂ ಉಕ್ಕೆ ಹೊಡೆದು ಬಂದು ಅಲ್ಲಿ ಕುಳಿತುಕೊಂಡಿದ್ದೇನೆ. ನಾನು ಸಿಲ್ವರ್‌ಸ್ಪೂನಿನಿಂದ ಬೆಳೆದು ಬಂದವನಲ್ಲ. ಆ ಕಿಂಟಕಿ ಚಿಕನ್ ತಿನ್ನಲಿಕ್ಕೆ ಹೋಗುವವರು ಹಳ್ಳಿಯಲ್ಲಿ ಉಕ್ಕೆ ಹೊಡೆಯುತ್ತಾನಲ್ಲ ಆ ರೈತ ಬ್ರಿಗೇಡ್ ರೋಡ್‌ಗೆ ಹೋಗಿ ಕಿಂಟಕಿ ಚಿಕನ್ ತಿನ್ನುವುದಿಲ್ಲ. ಪಾಪ ಅಗ್ರಿಕಲ್ಚರಿಸ್ಟ್ ಬಗ್ಗೆ ದೊಡ್ಡ ಚರ್ಚೆ ಮಾಡುವುದು, ಮಾನ್ಯ ವಾಟಾಳ್ ನಾಗರಾಜ್‌ರವರೇ, ಆ ಕಿಂಟಕಿ ಚಿಕನ್ ತಿನ್ನಲಿಕ್ಕೆ ಚೆಡ್ಡಿಯಿಲ್ಲದ ಹಳ್ಳಿಯ ರೈತ ಅಲ್ಲಿ ಬ್ರಿಗೇಡ್ ರೋಡ್‌ಗೆ ಹೋಗಿ ಕಿಂಟಕಿ ಚಿಕನ್ ತಿನ್ನಲಿಕ್ಕೆ ಹೋಗುವುದಿಲ್ಲ. ಬಹುಶಃ ವಾಟಾಳ್‌ನಾಗರಾಜ್‌ರವರು ಹೋಗಿಲ್ಲವೆಂದು ನನಗನಿಸುತ್ತದೆ. ಹೊರಗಡೆಯಿಂದ ವಾಸನೆಯನ್ನು ಕೂಡಿದಿದ್ದಾರೋ ಏನೋ ನನಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಆ ವಾಸನೆ ಸಿಕ್ಕಿಲ್ಲ ನಮಗೆ.

ಶ್ರೀ ಹೆಚ್.ಡಿ. ದೇವೇಗೌಡ : ಸರಿ ಆಯಿತು. ರೈತರು ಬೆಳೆಸಿದ ಕೋಳಿಗೆ ವ್ಯಾಪಾರ ಸಿಕ್ಕಿತು ಲಭವಾಯಿತು. ನಾನು ಅಲ್ಲಿಂದ ಮುಂದಕ್ಕೆ ಹೋಗುವುದಿಲ್ಲ. ಬೇರೆ ವಿಷಯ ಬಂದಾಗ ಚರ್ಚೆ ಮಾಡುತ್ತೇನೆ. ಹಳ್ಳಿಯ ರೈತರು ಅವರು ಮೊಟ್ಟೆಯ ಕೋಳಿ, ಮಾನ್ಯ ಪುಟ್ಟಣ್ಣಯ್ಯನವರೇ ನಿಮಗೆ ಗೊತ್ತಿರಬೇಕಲ್ಲ; ಆ ಕೋಳಿಯನ್ನು ಇಲ್ಲಿಗೆ ತಂದು ಮಾರುತ್ತಾರೆ. ಅದನ್ನು ಅವರದೇ ವಿಧಿ ವಿಧಾನದಲ್ಲಿ ತಯಾರು ಮಾಡಿ ಮಾರಾಟ ಮಾಡಬಹುದು. ಪಾಪ ಹೊಸದಾಗಿ ಅನೇಕ ರುಚಿಕರವಾದ ಪದಾರ್ಥಗಳನ್ನು ತಯಾರು ಮಾಡತಕ್ಕ ವಿಧಾನಗಳು ಇದ್ದಾವೆ. ಇದು ಒಂದು ವಿಧಾನ. ಇದರೊಳಗೆ ಹೆಲ್ತ್ ಏನಾಗುತ್ತದೆ ಅದ್ಯಾರೋ ಅಮೇರಿಕನ್ನರು ಹೇಳಿದರು ಆಸ್ಟ್ರೇಲಿಯನ್ ಹೇಳಿದರು ಅದೆಲ್ಲ ದೊಡ್ಡ ಚರ್ಚೆ ಬೇಡ ಇಲ್ಲಿ. Kentucky fried chicken restaurantಗೆ ನಿಜವಾದ ಅಗ್ರಿಕಲ್ಚರಿಸ್ಟ್ ಹೋಗುತ್ತಾನೆಯೇ ನಮ್ಮಂಥಹ ಸ್ಯೂಡೊ ಅಗ್ರಿಕಲ್ಚರಿಸ್ಟ್ ಬರಬಹುದು. ಏಕೆಂದರೆ ವ್ಯವಸಾಯಗಾರರ ಹೆಸರಿನಲ್ಲಿ ಬಂದಿರುವವರು, ನಮ್ಮಂಥವರು ಬ್ರಿಗೇಡ್ ರೋಡ್‌ಗೆ ಹೋಗಬಹುದು. ಹಳ್ಳಿಯಲ್ಲಿ ನಿಜವಾಗಿಯೂ ವ್ಯವಸಾಯ ಮಾಡುವವನು ಅವನು ಯಾರು ಸ್ವಾಮಿ ಅಲ್ಲಿಗೆ ಹೋಗುವನು? ಅಲ್ಲಿಗೆ ಹೋಗಿ 50-60-80 ರೂಪಾಯಿ ಕೊಟ್ಟು ಅದೆಷ್ಟೋ ಗೊತ್ತಿಲ್ಲ; ನನಗೆ ರೇಟು. ಅವನು ಮನೆಯೊಳಗೆ ಒಂದು ಸೇರು ಅಕ್ಕಿ ಸಿಕ್ಕಿದರೆ ಪಾಪ ಊಟ ಮಾಡಿಕೊಂಡು ಇರುವುದೇ ಅವನಿಗೆ ಕಷ್ಟವಿದೆ. ಇಲ್ಲಿಗೆ ಬಂದು ಬ್ರಿಗೇಡ್ ರೋಡ್‌ಗೆ ಹೋಗುವವನು ಅವನು ಯಾವನು ಅಗ್ರಿಕಲ್ಚರಿಸ್ಟ್? ಹೇಳಿದ್ದಾರೆ, ಮಾನ್ಯ ಪುಟ್ಟಣ್ಣಯ್ಯನವರ ಗಮನಕ್ಕೆ ಸುಮ್ಮನೆ ತರುತ್ತೇನೆ. ನೀವು ರೈತರ ಮುಖಂಡರು ಎನ್ನುವುದನ್ನು ನಾನು ಅಲ್ಲಗೆಳೆಯುವುದಿಲ್ಲ, ಆದರೆ ರೈತರ ಹೆಸರಿನಲ್ಲಿ ಪ್ರಯೋಗ ಮಾಡಿದಿರಲ್ಲ ಅದಕ್ಕಷ್ಟೇ ಹೇಳುತ್ತೇನೆ. threat to Indian agriculture and economy.

ಇದು ಒಂದು ಅವರ ಉದ್ದಿಶ್ಯ ಮುಂದಕ್ಕೆ ಹೋಗಿ ಹೇಳುತ್ತಿದ್ದೇನೆ. 'Prof. Nanjunda Swamy said, that the attack was carried out on Gandhiji's death anniversary to tell the world that Gandhiji is still alive.' Under his leadership Ë Gandhiji is still alive under the leadership of Prof. Nanjunda Swamy ಏಕೆಂದರೆ ದೇಶದಲ್ಲಿ ನಾವೆಲ್ಲ ಗಾಂಧೀಜಿಯನ್ನು ಮರೆತುಬಿಟ್ಟಿದ್ದೇವೆ. ಅಲ್ಲಿ ಕುಳಿತಿರುವ ನೀವು ಮರೆತಿದ್ದೀರಿ ನಾವು ಮರೆತಿದ್ದೇವೆ. ಈಗ ಗಾಂಧೀಜಿಯನ್ನು ಈ ದೇಶದ ಜನತೆಗೆ ಅವರು ಸತ್ತ ದಿವಸ ಅವರು ಹೇಳಿ ಕೊಟ್ಟಂತಹ ಮಾರ್ಗ ಇದು. ಅವರು

ಹೇಳಿಕೊಟ್ಟಂತಹ ಮಾರ್ಗ ಏಕೆಂದರೆ ವಿದೇಶಿ ಕಂಪನಿಗಳನ್ನು ಓಡಿಸಿ, ಏಕೆಂದರೆ ಈಸ್ಟ್ ಇಂಡಿಯಾ ಕಂಪನಿಯನ್ನು ಓಡಿಸುವಾಗ ಅವರು ಯಾವ ಮಾರ್ಗವನ್ನು ಅನುಸರಿಸಿದ್ದರೋ ಆ ಮಾರ್ಗವನ್ನು ನವು ಅನುಸರಿಸಿ ನಾವು ಓಡಿಸಲಿಕ್ಕೋಸ್ಕರ ಅವರು ಅಲ್ವೈ ಆಗಿದ್ದಾರೆನ್ನುವುದನ್ನು ನಾವು ತೋರಿಸಲಿಕ್ಕೋಸ್ಕರ ನಾವು ಈ ದಿನ ಈ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆಂದು ಹೇಳಿದ್ದಾರೆ. ಇನ್ನು ಮುಂದೆ ಹೇಳಿಕೊಂಡು ಹೋಗುತ್ತಾರೆ. ನಾನು ಅದರ ಬಗ್ಗೆ ಎಲ್ಲವನ್ನು ಓದಲಿಕ್ಕೆ ಹೋಗುವುದಿಲ್ಲ. ಸ್ವಾಮಿ ಯಾರೇ ಸರ್ಕಾರ ನಡೆಸಿದರೂ ನೀವೇ ಅಧಿಕಾರಕ್ಕೆ ಬಂದು ನಡೆಸಿದರೂ ಕಾನೂನನ್ನು ಮುರಿದಾಗ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. 1992ರಲ್ಲಿ ಕಾರ್ಗಿಲ್ ಕಂಪನಿಯ ಮೇಲೆ ಒಂದು ದಾಳಿಯಾಯಿತು. ಆಗಲೂ ಕೆಲವು ಸೆಕ್ಷನ್ಸ್ ಮೇಲೆ ಅವರು ಕೇಸುಗಳನ್ನು ದಾಖಲು ಮಾಡಿದ್ದಾರೆ.

4 ಸಾವಿರ ರೂಪಾಯಿ ಹಣ ಕಳವು ಮಾಡಲಾಯಿತು. 15 ಸಾವಿರ ರೂಪಾಯಿ ನಷ್ಟವಾಯಿತು. ಇವೆಲ್ಲ ಚಾರ್ಜ್‌ಶೀಟ್‌ನಲ್ಲಿವೆ. ನಂಜುಂಡಸ್ವಾಮಿಯವರು ಸೇರಿದಂತೆ 16 ಜನರ ಮೇಲೆ ಕೇಸ್ ಹಾಕಿದ್ದಾರೆ. 1992ರಲ್ಲಿ ಮುಖ್ಯಮಂತ್ರಿಗಳು ಮಾನ್ಯ ಬಂಗಾರಪ್ಪನವರು ಇದ್ದರು ಎಂದು ನನ್ನ ಭಾವನೆ. 1993 ಬಳ್ಳಾರಿಯಲ್ಲಿ ಚಂದನ್‌ಕಲ್ಪನಾರವರ ಕಾರ್ಗಿಲ್ ಶೀಟ್ಸ್‌ನ ಆವರಣಕ್ಕೆ ನುಗ್ಗಿ ಅಲ್ಲಿದ್ದ ಚಿಕ್ಕ ಪೋಲೀಸ್ ತುಕಡಿಯ ಮೇಲೆ ಬಲಪ್ರಯೋಗ ಮಾಡಿ ಕಾರುಗಳು ಇದ್ದ ಕಟ್ಟಡಕ್ಕೆ ಹಾನಿ ಮಾಡಿದರಲ್ಲದೆ ಸಿಬ್ಬಂದಿ ವರ್ಗದವರ ಮೇಲೆ ಪ್ರಾಣಾಪಾಯವಾಗುವ ಹಾಗೆ ಪ್ರಯೋಗವನ್ನು ಮಾಡಿದರು ಇದು ಅಲಿಗೇಷನ್. ಆವೊತ್ತು ಆ ಸರ್ಕಾರ, ನಾನೇ ಇದ್ದರು ಮಾಡಬೇಕಾಗುತ್ತದೆ. ಅವರು ಇದ್ದರು ಮಾಡಿದ್ದಾರೆ. ನಾನು ದೋಷ ಕೊಡುತ್ತಿಲ್ಲ, ಏಕೆಂದರೆ ಹಿಂದೆಂದೂ ಮಾಡಿದವರಲ್ಲ ಇಂತಹ ಹಿಂಸಾಕೃತ್ಯಕ್ಕೆ ಅವಕಾಶ ಕೊಟ್ಟವರಲ್ಲ, ದೇವೇಗೌಡರಿಗೂ ನಂಜುಂಡಸ್ವಾಮಿಯವರಿಗ ಬಹಳ ದ್ವೇಷವಿದೆ. ಅದಕ್ಕೋಸ್ಕರ ಈ ತರಹ ಸುಳ್ಳು ಮೊಕದ್ದಮೆಗಳನ್ನು ಹೂಡಿದ್ದರೆಂದು ಹೇಳಿದರಲ್ಲ ಅದಕ್ಕೆ ವಿತರಣೆ ಕೊಡುತ್ತಿದ್ದೇನೆ ಅಷ್ಟೆ. ನಾನೇನು ಹಳೆಯರನ್ನು ಇಲ್ಲಿ ಪ್ರವಚನ ಮಾಡಬೇಕಾದ ಅವಶ್ಯಕತೆಯಿಲ್ಲ. ಆವೊತ್ತು ಯಾವ್ಯಾವ ಕಾಲಂ ಹಾಕಿದ್ದಾರೆ ನನಗೆ ಅದು ಗೊತ್ತಾಗುವುದಿಲ್ಲ ಓದುತ್ತೇನೆ ಅಷ್ಟೆ. ನೀವು ಹೇಳಿದರಲ್ಲ ಸೆಕ್ಷನ್ 307 ಅದು ಆವೊತ್ತು ಹಾಕಿದ್ದಾರೆ. ಅವರೇನು ಸೃಷ್ಟಿ ಮಾಡಿ ಹಾಕಿದರು ಎಂದು ಹೇಳಲಿಲ್ಲ. ನಡೆದಿರುವ ಘಟನೆಯ ಹಿನ್ನೆಲೆಯಲ್ಲಿ ಹಾಕಿದ್ದಾರೆ. ನಾವು ಹಾಕಿದ್ದೇವೆಂದು ನೀವು ಏನು ವಾದ ಮಾಡುತ್ತೀರಿ ಆವೊತ್ತು ಹಾಕಿದ್ದರೆ. ದಿನಂಕ 30-1-96ರ ಘಟನೆ ಅದರ ಬಗ್ಗೆ ನಾನು ವಿತರಣೆ ಕೊಡುವುದು ಬೇಡ. ನ್ಯಾಯಾಧೀಶರು ಏನು ಹೇಳಿದ್ದಾರೆ ಆ ಮಾತನ್ನು ಮಾತ್ರ ನಾನು ಓದುತ್ತೇನೆ.

ಏಕೆಂದರೆ ಬಾಕಿಯದನ್ನೆಲ್ಲ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಈ ಘಟನೆ ಜರುಗಿದ ಮೇಲೆ ಅದು ಅಲ್ಲಿಗೇ ನಿಲ್ಲಲಿಲ್ಲ. 19ನೇ ತಾರೀಖು ಮುಂದಕ್ಕೆ ಹೋಗುವುದಿಲ್ಲ, ಈ ಘಟನೆ ಜರುಗಿದ ಮೇಲೆ ಅದು ಅಲ್ಲಿಗೇ ನಿಲ್ಲಲಿಲ್ಲ, 19ನೇ ತಾರೀಖು ಮುಂದಕ್ಕೆ ಶಿವಮೊಗ್ಗ ಜಿಲ್ಲೆಯೊಳಗೆ ಒಬ್ಬ ಇಂಜಿನಿಯರ್ ಪಿಡಬ್ಲ್ಯುಡಿ ಕಛೇರಿಗೆ ನುಗ್ಗಿ ಚೇಪ್ ಸುಟ್ಟು ಅಲ್ಲಿರುವ ಕಾಗದಪತ್ರಗಳನ್ನೆಲ್ಲ ಸುಟ್ಟು ಶಿವಮೊಗ್ಗ ಜಿಲ್ಲೆಯೊಳಗೆ ಇದು ಈ ದೇಶದಲ್ಲಿ ನಾವು ಬಹುರಾಷ್ಟ್ರೀಯ ಕಂಪನಿಗಳನ್ನು ಓಡಿಸುವ ವಿಧಾನ! ಇಲ್ಲಿ ಕಿಂಟಕಿ ಚಿಕನ್ ಸುಟ್ಟಿದ್ದು ಆಯಿತು.

ಅಧ್ಯಕ್ಷರೇ, ದಯಮಾಡಿ ನಾನು ತಮ್ಮ ಕ್ಷಮೆ ಕೇಳುತ್ತೇನೆ. ಅಭಿಪ್ರಾಯ ಬೇಧ ಇರಬಹುದು. ಬಹುರಾಷ್ಟ್ರೀಯ ಕಂಪನಿ ಬಗ್ಗೆ ನಿಮಗೆ ವಿರೋಧ ಇವಬಹುದು. ಆ ವಿರೋಧವನ್ನು ವ್ಯಕ್ತಪಡಿಸುವುದಕ್ಕೆ ಅಥವಾ ಈ ದೇಶದ ಜನತೆಯನ್ನು ಇವತ್ತು ತಮ್ಮ ನಿಲುವಿಗೆ ಸ್ಪಂಧಿಸತಕ್ಕಂಥ ರೀತಿಯಲ್ಲಿ ಸಂಘಟನೆ ಮಾಡಲಿಕ್ಕೆ ನಾನು ಯಾರು

ಅಡ್ಡಿ ಮಾಡಲಿಕ್ಕೆ? ಈ ದೇಶಕ್ಕೆ ಬಹುರಾಷ್ಟ್ರೀಯ ಕಂಪನಿಗಳನ್ನು ಇವತ್ತು ತಂದಿದ್ದು ಅಥವಾ ಅದಕ್ಕೆ ಅವಕಾಶ ಕೊಟ್ಟಿರತಕ್ಕಂಥಾದ್ದು, ಇದರಿಂದ ಈ ರಾಷ್ಟ್ರಕ್ಕೆ ದೊಡ್ಡ ಹಾನಿಯಾಗುತ್ತದೆ ಅಂತ ಹೇಳಿ ಇಡೀ ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡಿ, ಜನಸಂಘಟನೆ ಮಾಡಿ. ಈ ಸರ್ಕಾರವನ್ನು ಕಿತ್ತುಹಾಕತಕ್ಕಂಥದ್ದು ಒಂದು ವಿಧಾನ. ಇದು ಯಾವುದೋ ಪಿ.ಡಬ್ಲ್ಯು.ಡಿ. ಆಫೀಸಿಗೆ ನುಗ್ಗಿ ಜೀಪನ್ನು ಸುಟ್ಟು ಅಲ್ಲಿರುವ ಕಾಗದಪತ್ರಗಳನ್ನು ಸುಟ್ಟರೆ ಈ ಸರ್ಕಾರವನ್ನು ಓಡಿಸಲಿಕ್ಕೆ ಆಗುವುದಿಲ್ಲ. ಇಡೀ ರಾಜ್ಯಾದ್ಯಂತ ಪ್ರವಾಸ ಮಾಡಿ. ನಾನೇ ಹೇಳುತ್ತಿದ್ದೇನೆ, ಇದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ನಿಮ್ಮನ್ನು ತಡೆಯುವುದಕ್ಕೆ ನಾನು ಯಾರು? ಈ ರಾಜ್ಯದಲ್ಲಿ ಇಂತಹ ಒಂದು ಸರ್ಕಾರ ಇರಬಾರದು, ಇದನ್ನು ಹೊರಕಳಿಸಬೇಕಾದದ್ದು ನಿಮ್ಮ ಜವಾಬ್ದಾರಿಯೆಂದು ನಿಮ್ಮ ಮುಂದೆ ಬಂದಿದ್ದೇವೆ ಎಂದು ಹೇಳಿ. ಅವರು ಅಂತಿಮವಾಗಿ ತೀರ್ಪನ್ನು ಕೊಡತಕ್ಕಂಥ ಪ್ರಭುಗಳು ಇದ್ದಾರೆ. ನಮಗೆ ನಿಮಗೆ ಅಂತಿಮವಾಗಿ ಆಶೀರ್ವಾದ ಮಾಡುವುದೂ, ತಿರಸ್ಕಾರ ಮಾಡುವುದೂ ಅವರಿಗೇ ಸೇರಿದ್ದುದು. ಇದಾದ ಮೇಲೆ ಘಟನೆ ಹೇಗೆ ನಡೆಯುತ್ತದೆ ಎಂಬುದನ್ನು ಸೂಕ್ಷ್ಮವಾಗಿ ನಾನು ಹೇಳಿದೆ. ಅಲ್ಲಿಗೆ ಅವರು ನಿಲ್ಲಿಸಲಿಲ್ಲ, ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರವನ್ನು ನಡೆಸುವಾಗ ನಾವು ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. 'ಕಂಟಕಿ ವಿರುದ್ಧ ಮತ್ತೆ ರಹಸ್ಯ ಸ್ವರೂಪದ ಕಾರ್ಯಕ್ರಮ' ಇನ್ನು ಯಾವ ಕಾರ್ಯಕ್ರಮವನ್ನು ಅನುಸರಿಸುತ್ತಾರೋ ಅದಕ್ಕೆ ನಾವು ನಮ್ಮ ಇಂಟಲಿಜೆನ್ಸ್ ಇಲಾಖೆಯವರಿಗೆ ಹೇಳಿ ನಾವೆಲ್ಲ ಏನು ತಯಾರು ಮಾಡಬೇಕೋ ಗೊತ್ತಿಲ್ಲ, 'ರಹಸ್ಯ ಕ್ರಮವನ್ನು ಅನುಸರಿಸುತ್ತೇವೆ' ಎಂದು ಅವರು ಹೇಳಿದ್ದಾರೆ.

ಸನ್ಮಾನ್ಯ ಅಧ್ಯಕ್ಷರೇ, ನ್ಯಾಯಾಧೀಶರು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಅದನ್ನು ಎರಡು ಮಾತುಗಳಲ್ಲಿ ಹೇಳಿ ಆಮೇಲೆ ಕೆಲವು ವಿಷಯ ಮುಂದೆ ಪ್ರಸ್ತಾಪ ಮಾಡುತ್ತೇನೆ.

"ಸದರಿ ದಿನ ಆರೋಪಿತರು ಸದರಿ ಹೋಟೇಲಿಗೆ ಪ್ರವೇಶಿಸಿ ದೊಂಬಿ ಎಬ್ಬಿಸಿ ಪೀಠೋಪಕರಣಗಳನ್ನು ಮತ್ತು ಆಹಾರಪದಾರ್ಥಗಳನ್ನು ನಾಶ ಮಾಡಿರುತ್ತಾರೆ ಎಂಬುದನ್ನು ಆರೋಪಿತರ ಪರ ನ್ಯಾಯವಾದಿಗಳು ಇಲ್ಲಿ ಒಪ್ಪಿಕೊಂಡಿರುತ್ತಾರೆ..."

ಇನ್ನು ಯರು ಆರ್ಗ್ಯು ಮಾಡಿದ್ದಾರೆ ಎಂದು ಬೇಲ್ ಅಪ್ಲಿಕೇಶನ್ ಮೂವ್ ಮಾಡುವಾಗ ಮುಂದೆ ಅವರೇ ನಡೆದಿರುವ ಘಟನೆ ನಿಜವೆಂದು ಒಪ್ಪಿಕೊಂಡಿರುತ್ತಾರೆ.

....."ಮತ್ತು ಆರೋಪಿತರ ನಂಬರ್ 102, ತಮ್ಮ ಜಾಮೀನು ಅರ್ಜಿ ಕಂಡಿಕೆ 5ರಲ್ಲಿ ಇಂತಹ ಒಂದು ಕೃತ್ಯ ನಡೆದಿರುವ ಬಗ್ಗೆ ಒಪ್ಪಿಕೊಂಡಿದ್ದು ಇದೆ. ಆದರೆ ಇವರು ಇದಕ್ಕೆ ತಾವು ಜವಾಬ್ದಾರರು ಅಲ್ಲವೆಂದು ಉಲ್ಲೇಖಿಸಿದ್ದುದು ಇದೆ. ಅಂದರೆ ನಂಜುಂಡಸ್ವಾಮಿಯವರು. ಇದು ನಡೆದಿರುವುದು ನಿಜ, ನಾನು ಜವಾಬ್ದಾರ ಅಲ್ಲವೆಂದು ಹೇಳಿದ್ದಾರೆ."

ಅವರ ಲಾಯರ್ ಆರ್ಗ್ಯು ಮಾಡುತ್ತಾರೆ, ಅಫಿಡಿವಿಟ್ ಹಾಕಿದ್ದಾರೆ. ಅದೆಲ್ಲ ಕಾಪಿ ಇದೆ.

"... ಅದೇನಿದ್ದರ ಸದರಿ ದಿನ ಈ ಸದರಿ ಸ್ಥಳ ಮತ್ತು ವೇಳೆಯಲ್ಲಿ ಆರೋಪಿತ ನಂ.1 ರಿಂದ 101ರವರು ಅಕ್ರಮ ಕೂಟದ ಸದಸ್ಯರು ಇದ್ದು ಹೋಟೇಲಿಗೆ ಹೋಗಿ ಪೀಠೋಪಕರಣಗಳನ್ನು ನಾಶ ಮಾಡಿ ಅವರಿಗೆ ಸುಮಾರು ಹತ್ತು ಲಕ್ಷ ರೂಪಾಯಿಗಳಷ್ಟು ನಷ್ಟ ಉಂಟು ಮಾಡಿರುತ್ತಾರೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ."

ಇದನ್ನು ನ್ಯಾಯಾಧೀಶರು ಬರೆದಿದ್ದಾರೆ, ಅದನ್ನು ನಾನು ಉಲ್ಲೇಖ ಮಾಡಿ ಓದುತ್ತಿದ್ದೇನೆ.

"... ಫೀಯರ್ಮಾದುದಾರರ ವ್ಯವಹಾರ ನಮ್ಮ ದೇಶದ, ನಮ್ಮ ನಾಡಿನ ಹಾಗೂ ಜನರ ಹಿತಕ್ಕೆ ಧಕ್ಕೆ ಉಂಟು ಮಾಡುವುದು ಎಂದು ಅವರು ಭಾವಿಸಿದ್ದರ ಸಹ ಇದನ್ನು ವಿರೋಧಿಸಲು ಅವರು ಅನುಸರಿಸಿದ ವಿಧಾನ ಮಾತ್ರ ಕಾನನುಬಾಹಿರವಾದುದು ಎಂದು ಇಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ ಫೀಯರ್ಮಾದುದಾರರು ನ್ಯಾಯಯುತವಾಗಿ ತಮ್ಮ ವ್ಯವಹಾರವನ್ನು ನಡೆಸುತ್ತಿದ್ದರ ಸಹ ಸದರಿ ದಿನ ಆರೋಪಿತರು ಕಾನೂನು ಬಾಹಿರವಾಗಿರುವ ಕೃತ್ಯವನ್ನು ಅವರು ಹೋಟೇಲಿಗೆ ಹೋಗಿ ಎಸಗಿ ಲಕ್ಷಾಂತರ ರೂಪಾಯಿ ನಷ್ಟ ಉಂಟು ಮಾಡಿದ್ದು ಇದೆ. ಮತ್ತು ಅವರು ಈ ದಿಸೆಯಲ್ಲಿ ಹಿಂಸಾರೂಪ ತಾಳಿದ್ದು ಕಾನೂನಿನ ಉಲ್ಲಂಘನೆ ಕೂಡ ಮಾಡಿದ್ದು ಇದೆ. ಹಿಂಸೆ ನಮ್ಮ ಸಂವಿಧಾನಕ್ಕೆ ಮತ್ತು ಕರ್ನಾಟಕ ರಾಜ್ಯ ರೈತಸಂಘ ಪಕ್ಷದ ಸಂವಿಧಾನಕ್ಕೆ ಕೂಡ ವಿರುದ್ಧವಾದುದು ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ಹೇಳಬೇಕಾಗುತ್ತದೆ. ಯಾವ ವ್ಯಕ್ತಿ ಎಂತಹ ಸ್ಥಾನದಲ್ಲಿದ್ದರೂ ಸಹ ಅವರು ಕಾನೂನನ್ನು ತಮ್ಮ ಕೈಗೆ ಎತ್ತಿಕೊಳ್ಳುವುದು ಸರ್ವಥಾ ಮಾನ್ಯವಲ್ಲ. ರೈತಸಂಘದ ರಾಜಕೀಯ ಸಿದ್ಧಾಂತ, ತತ್ವಗಳು ಏನೇ ಇದ್ದರೂ ಹಿಂಸಾವೃತ್ತಿಯನ್ನು ಅನುಸರಿಸುವುದು ಖಂಡನೀಯವೆಂದು ಹೇಳಬೇಕಾಗುತ್ತದೆ. ಹಿಂಸೆಯಲ್ಲಿ ಎಳ್ಳಷ್ಟೂ ನಂಬಿಕೆ ಇಡದೆ ಅಹಿಂಸಾತ್ಮಕವಾಗಿ ಅನೇಕ ದಶಕಗಳವರೆಗೆ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿ ಮಹಾತ್ಮಾಗಾಂಧೀಜಿಯವರು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು ಎಂಬುದನ್ನು ನಾವು ಇಲ್ಲಿ ಸ್ಮರಿಸಬೇಕು ಮತ್ತು ಅವರ ತತ್ವದಲ್ಲಿಯೇ ರಾಜ್ಯ ರೈತಸಂಘದವರು ಕೂಡ ವಿಶ್ವಾಸ ಇಟ್ಟು ಪಕ್ಷ ರಚನೆ ಮಾಡಿದ್ದರೂ ಸಹ ಸದರಿ ದಿನ ಆರೋಪಿತರಿಂದ ಇಂತಹ ಹಿಂಸಾ ಕೃತ್ಯ ನಡೆದಿದ್ದು ವಿಷಾದನೀಯವಾಗಿದೆ. ಈ ಆರೋಪಿತರನ್ನು ಸರ್ಕಾರದವರು ಬಂಧಿಸಿದ್ದು ಇವರು ಸರ್ಕಾರ ವಿರೋಧಿಗಳು ಎನ್ನುವ ಆಧಾರದ ಮೇಲಿನಿಂದ ಇದ್ದು ಸದರಿ ದಿನ ಕಾನೂನನ್ನು ಉಲ್ಲಂಘನೆ ಮಾಡಿದ್ದುದರಿಂದಾಗಿ ಮತ್ತು ಅವರು ಅಪರಾಧ ಕೃತ್ಯ ಮಾಡಿದ್ದಕ್ಕಾಗಿ ಎಂಬುದನ್ನು ಇಲ್ಲಿ ಮರೆಯಾಗದು. ಕಾನೂನು ಉಲ್ಲಂಘನೆ ಮಾಡಿದ್ದನ್ನು ಯಾರೂ ಸಹಿಸಲಾರದು. ಒಂದು ವೇಳೆ ಕರ್ನಾಟಕ ರಾಜ್ಯ ರೈತಸಂಘದವರು ಅಧಿಕಾರಕ್ಕೆ ಬಂದಲ್ಲಿ ಮತ್ತು ಅವರ ಪಕ್ಷದವರಿಂದ ಕಾನೂನು ಉಲ್ಲಂಘನೆಯಾದಲ್ಲಿ ಅವರ ಪಕ್ಷ ಸಹ ಇಂತಹ ಕಾನೂನು ಉಲ್ಲಂಘನೆಯನ್ನು ಅಥವಾ ಹಿಂಸೆಯನ್ನು ಸಹಿಸಲಾರರು ಎಂದು ಇಲ್ಲಿ ಉಲ್ಲೇಖಿಸಬೇಕಾಗುತ್ತದೆ....

ಇದು ಅವರು ಏನು ಬೇಲ್ ಅಪ್ಲಿಕೇಶನ್ ಮೇಲೆ ಬೇಲ್ ಕೊಡುವಾಗ ಹೇಳಿರತಕ್ಕಂಥ ಮಾತು. ನ್ಯಾಯಾಧೀಶರು ಏನು ಹೇಳಿದ್ದಾರೆ ಅದನ್ನು ಸದನದ ಗಮನಕ್ಕೆ ತಂದಿದ್ದೇನೆ.

... ಸದರಿ ಪ್ರೊಫೆಸರ್ ನಂಜುಂಡಸ್ವಾಮಿಯವರು ತಮ್ಮ ಜಾಮೀನು ಅರ್ಜಿಯಲ್ಲಿ ತಮ್ಮ ಕಾರ್ಯದರ್ಶಿಯವರಿಗೆ ಫೀಯರ್ಮಾದುದಾರರ ವ್ಯವಹಾರವನ್ನು ಪ್ರತಿಭಟಿಸಲು ಮಾತ್ರ ಸೂಚಿಸಿದ್ದುದು ಇತ್ತು. ಆದರೆ ಅದು ಹಿಂಸಾರೂಪ ತಾಳಿದ್ದು ದುರಾದೃಷ್ಟವೆಂದು ಹೇಳಿಸಿ ಈ ಬಗ್ಗೆ ತಾವು ಎಳ್ಳಷ್ಟೂ ಜವಾಬ್ದಾರರು ಅಲ್ಲವೆಂದು ಸ್ಪಷ್ಟವಾಗಿ ನಮೂದು ಮಾಡಿರುತ್ತಾರೆ.

ಇಲ್ಲಿ ನಾನು ಮೊದಲೇ ಓದಿದೆ. ಬೇಲ್‌ಗೆ ಅರ್ಜಿ ಹಾಕುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ, ಹೌದು, ಎರಡು ಗಂಟೆಯಲ್ಲಿ ದೂರವಾಣಿ ಮುಖಾಂತರ ನಾನು ಹೇಳಿದ್ದೇನೆ ಎಂದು ಅವರು ಆಪಾದನೆ ಮಾಡಿದರು. ನಾನು ಎರಡು ಗಂಟೆಗೆ ಹೇಳಿದ್ದುದು ಅಮೇರಿಕಾ ದೇಶದಿಂದ ಅಲ್ಲ; ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ. ಕೇಂದ್ರ ಸರ್ಕಾರದ ಗೃಹ ಇಲಾಖೆಯವರು ಹೀಗೆ ಒಂದು ಕಂಪನಿ ಮೇಲೆ ದಾಳಿ

ನಡೆಯುತ್ತಿದೆ ಎಂದು ನಮಗೆ ಸುದ್ದಿ ಬಂದಿದೆ. ಅಮೇರಿಕನ್ ಎಂಬೆಸ್ಸಿಯವರು ನಮಗೆ ತಿಳಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ದೂರವಾಣಿ ಮೂಲಕ, ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ದಯಮಾಡಿ ತಿಳಿಸಬೇಕು ಎಂದು ಹೇಳಿದ್ದುದು ನಿಜ. ನಾವು ಹೇಳಿದ್ದೆವು, ನಮ್ಮ ಪೋಲೀಸ್ ಅಧಿಕಾರಿಗಳು ಏನೇನು ಆಗಿದೆ ಎಂದು ತಿಳಿದುಕೊಂಡ ಮೇಲೆ ನಾವು ಯಾರೇ ಆಗಲಿ ಕಾನೂನಿನ ಚೌಕಟ್ಟಿನಲ್ಲಿ ಇವತ್ತು ಎಲ್ಲರೂ ತಲೆಬಾಗಬೇಕಾಗುತ್ತದೆ. ಅವರು ಎಷ್ಟೇ ದೊಡ್ಡವರಿರಲಿ, ಕಾನೂನು ಬಾಹಿರವಾಗಿ ನಡವಳಿಕೆ ನಡೆಸಿದರೆ ನಾವು ಕ್ರಮ ತೆಗೆದುಕೊಳ್ಳುವುದರಲ್ಲಿ ಹಿಂದೆ ಬೀಳುವುದಿಲ್ಲ. ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ ಎಂಬ ಮಾತನ್ನು ಹೇಳಿದ್ದುದು ನಿಜ. ಇದರಲ್ಲಿ ಏನೂ ಮುಚ್ಚುಮರೆ 'ಇಲ್ಲ. ಈಗಲೂ ಸಭೆಯಲ್ಲಿ ಹೇಳುತ್ತೇನೆ. ಸುಮಾರು 47ಮಲ್ಟಿನ್ಯಾಷನಲಿಸಟ್ಸ್ ನಮ್ಮ ರಾಜ್ಯದಲ್ಲಿ ಇದ್ದಾರೆ. ಇದಕ್ಕೆಲ್ಲ ಅನುಮತಿಯನ್ನು ದೇವೇಗೌಡರು ಕೊಟ್ಟಿಲ್ಲ. ದೇಶದ ಒಂದು ಆರ್ಥಿಕ ನೀತಿಯಲ್ಲಿ ಬದಲಾವಣೆಯಾಗಿದೆ. ಈಗ ಅದನ್ನು ಇಲ್ಲಿಗೇ ನಿಲ್ಲಿಸೋಣ. ಲಂಡನ್‌ಗೆ ಹೋದರೆ ನೂರಾರು ಜನ ನಮ್ಮವರು ಹೋಟೆಲುಗಳನ್ನು ನಡೆಸುತ್ತಿದ್ದಾರೆ. ಅನೇಕರು ಇದನ್ನು ನೋಡಿರಬಹುದು. ಅಲ್ಲಿ ನಮ್ಮ ರೀತಿಯಲ್ಲೇ ಅವರು ತಂದೂರಿ ಚಿಕನ್ ಮಾರುತ್ತಾರೆ. ಅವರನ್ನೆಲ್ಲ ಅಲ್ಲಿಂದ ಓದ್ದು ಓಡಿಸಿದರೆ? ಆವಾಗ ಅವರನ್ನು ರೆಫ್ಯುಜೀಸ್ ಎಂದು ಹೇಳುತ್ತೀರೋ ನೀವು ಅಧಿಕಾರಕ್ಕೆ ಬಂದಮೇಲೆ ಗೊತ್ತಾಗುತ್ತದೆ. ಅದು ಅಲ್ಲವೆಂದು ಮಾತನಾಡುವುದಕ್ಕೆ ಏನೂ ಅಲ್ಲ. ನನಗೆ ಗೊತ್ತಿದೆ ಯಾವುದು ಆರೋಗ್ಯವೆಂದು. ಯಾವುದನ್ನೇ ಹೆಚ್ಚಿಗೆ ತೆಗೆದುಕೊಂಡರೆ ಅನಾರೋಗ್ಯವೇ? ಇರತಕ್ಕ ವಿಷಯವನ್ನು ನೇರವಾಗಿ ಮಾತನಾಡೋಣ. ಲಂಡ್‌ನಲ್ಲಿ ಯಾವ ಬೀದಿಗೆ ಹೋದರೂ ಬೇಕಾದಷ್ಟು ಇಂಡಿಯನ್ ಹೋಟೆಲುಗಳು ಇವೆ.

ಅಧ್ಯಕ್ಷರು : ನೀವು ವಾಟಾಳರನ್ನು ಲಂಡನ್ನಿಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಕಳುಹಿಸಿಕೊಡುತ್ತೇನೆ, ಬೇಕಾದರೆ ಅರರೂ ನೋಡಿಕೊಂಡು ಬರಲಿ. ಅವರು ತಿನ್ನದೇ ಇದ್ದರೂ ನೋಡಿಕೊಂಡು ಬರಲಿ, ಯಾರು ಬೇಡವೆನ್ನುತ್ತಾರೆ. ಪುಟ್ಟಣ್ಣಯ್ಯನವರನ್ನೂ ಕಳುಹಿಸೋಣ, ಅದರಲ್ಲೇನೂ ತಕರಾರು ಇಲ್ಲ. ಅಲ್ಲಿ ಇಡ್ಲಿ ಸಾಂಬಾರ್ ಮಾಡತಕ್ಕ ಹೋಟೆಲುಗಳೂ ಇವೆ. ಅದರ ಬಗ್ಗೆ ಏನೂ ವಾದ ಮಾಡಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ವಾಟಾಳ್ ನಾಗರಾಜರನ್ನು ಲಂಡನ್ನಿಗೆ ಕಳುಹಿಸಬೇಕಾದರೆ, ಅಲ್ಲಿ ಚಿಕನ್ ತಿಂದು ಬಂದು, ಇಲ್ಲಿ ಹೇಳಬೇಕು. ಅವರನ್ನು ಕಳುಹಿಸಿದರೆ ಉಪಯೋಗವಿಲ್ಲ. ಅದೇ ಇಡ್ಲಿ ಸಾಂಬಾರನ್ನು ವುಡ್‌ಲ್ಯಾಂಡ್‌ನಲ್ಲೇ ತಿಂದು ಬರಬಹುದು.

ಅಧ್ಯಕ್ಷರು : ನಿಮಗೆ ಆ ಚಿಂತೆ ಬೇಡ, ನಮ್ಮ ಜೊತೆಗೆ ಕಳುಹಿಸಿ. ನಾವು ಗುಟ್ಟಾಗಿ ಇಟ್ಟುಕೊಂಡಿದ್ದರೆ, ನೀವು ಅದನ್ನೆಲ್ಲಾ ಬಹಿರಂಗ ಮಾಡುವುದಕ್ಕೆ ಹೋಗುತ್ತೀರಿ. ಅವರು ತಿನ್ನುತ್ತಾರೆಂದು ಯಾರಿಗೂ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಡಿ. ದೇವೇಗೌಡ : ನ್ಯೂಯಾರ್ಕ್‌ನ ನಮ್ಮ ವಿಶ್ವಸಂಸ್ಥೆಯ ಆಫೀಸಿನ ಎದುರು ನಮ್ಮ ವುಡ್‌ಲ್ಯಾಂಡ್‌ನವರು ಒಂದು ಸಣ್ಣ ಹೋಟೆಲು ನಡೆಸುತ್ತಾರೆ. ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯ ಕಟ್ಟಡದ ಎದುರು. 1986ರಲ್ಲಿ ನಾನು ಹೋದಾಗ, ಅಲ್ಲಿ ಒಂದು ರಸಂಗೆ ಒಂದು ಡಾಲರ್ ಇತ್ತು. ಈ ದೇಶದಲ್ಲಿ ಕುವೆಂಪುರವರ "ವಿಶ್ವಮಾನವ" ಆಗಬೇಕೆಂದು ಹೇಳಿ, ಅನೇಕ ಜನ ನಮ್ಮ ಸೋಷಿಯಲಿಸ್ಟ್‌ರು ಹೇಳಿದ್ದಾರೆ. ಈ ಬಗ್ಗೆ ಎಂ.ಪಿ. ಪ್ರಕಾಶ್‌ರವರು ಬೇಜಾರು ಮಾಡಿಕೊಂಡಾರು. ವಿಶ್ವಮಾನವ, ನಾವು ಒಂದು ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕೆಂದು

ಹೇಳಿದೆವು. ಇಲ್ಲಿ ನಮ್ಮವರ ಬಗ್ಗೆಯೇ ಬಹಳ ದಂಧೆಗಳನ್ನು ಮಾಡುತ್ತಿದ್ದಾರೆ. ಅವರಿಗೆ, ಅಲ್ಲಿ ರಕ್ಷಣೆ ಕೊಡಬೇಕೋ ಬೇಡವೋ ಅವರು. ಈ ನೀತಿಯನ್ನು ನೀವು ವಿರೋಧ ಮಾಡುವುದರ ಬಗ್ಗೆ ನನ್ನ ತಕರಾರು ಇಲ್ಲ. ನೀವು ಮಾಡಿ. ಜನಗಳನ್ನು ಸ್ಪಂದಿಸತಕ್ಕಂಥ ನಿಮ್ಮ ನೀತಿಗೆ ಪ್ರೇರಣೆ ಮಾಡಿ. ಆದರೆ, ಇಲ್ಲಿ ಧ್ವಂಸ ಮಾಡಿ, ಇಲ್ಲಿ ಫೋಟೋಗಳು ಇದೆ. ಇವುಗಳನ್ನು ನಾನೇನು ಸೃಷ್ಟಿ ಮಾಡಿಲ್ಲ. ನಾನೇನು ಅಲ್ಲಿ ಕ್ಯಾಮರಾ ಹಿಡಿದುಕೊಂಡು ಹೋಗಿದ್ದೇನೆಯೇ? ಕುರ್ಚಿ ಎತ್ತಿ, ಒಬ್ಬನಿಗೆ ಹೊಡೆಯತಕ್ಕ ಫೋಟೋ ಇದೆ. ವೀಡಿಯೋ ಕ್ಯಾಸೆಟ್ ಕೂಡ ಎಲ್ಲಿ ಬೇಕೋ, ಅಲ್ಲಿ ಪ್ರೊಡ್ಯೂಸ್ ಮಾಡುತ್ತಾರೆ. ಇದಕ್ಕೆ ಏನೆಂದು ಹೇಳಬೇಕೆಂದು ಹೇಳೋಣ. ಈ ಫೋಟೋ ತೆಗೆದಿರುವುದು ತಪ್ಪೋ ಅಥವಾ ಕೃತಕವಾಗಿ ಈ ಫೋಟೋ ನಿರ್ಮಾಣವಾಗಿದೆಯೋ ನನಗೆ ಗೊತ್ತಿಲ್ಲ. ಕುರ್ಚಿಯನ್ನು ಎತ್ತಿ ಹೊಡೆಯುವುದಕ್ಕೆ ಹೋದಾಗ ತೆಗೆದಿದ್ದಾರೆ. ಇದಕ್ಕೆ ಏನು ಹೇಳುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಗಂಗಾಧರರಾವ್ ದೇಶಪಾಂಡೆ, ಕಾರ್ನಾಡ್ ಸದಾಶಿವರಾಯರು ಇದೇ ತರಹ ಆದಾಗ, ಕೋರ್ಟ್‌ನಲ್ಲಿ ಏನು ಹೇಳಿದರು.

ಶ್ರೀ ಹೆಚ್.ಡಿ. ದೇವೇಗೌಡ : ಅದಕ್ಕೇ ನೀವು ಮಹತ್ಮಾಗಾಂಧಿ ಜನ್ಮದಿನಾಚರಣೆಯ ದಿನ ನಾವಿನ್ನೂ ಗಾಂಧಿಗಳು ಇದ್ದೇವೆಂದು ಹೇಳಿ, ಪ್ರತಿಭಟನೆ ಮಾಡುವುದಕ್ಕೆ ಹೋದಿರಿ. ಸನ್ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದ ಜವಾಬ್ದಾರಿ ಕೂಡ ಇದೆ ಅದನ್ನು ತಾವು ಮರೆಯಬಾರದು. ಹೌದು, ನಾನು ಹೇಳಿದ್ದೇನೆ, ನಿಜ, ಈಗಲೂ ಹೇಳುತ್ತೇನೆ. 10 ಜನರು ರಸ್ತೆ ಮಧ್ಯದಲ್ಲಿ ಕುಳಿತು, ಸಹಸ್ರಾರು ಜನ ಪ್ರಯಾಣಿಕರಿಗೆ ತೊಂದರೆ ಕೊಡುವುದು ಇದೆಯಲ್ಲ ಇಂಥಾದ್ದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಕಟ್ಟುನಿಟ್ಟಾಗಿ ಹೇಳುತ್ತೇವೆ, ನಿರ್ದಾಕ್ಷಿಣ್ಯವಾಗಿ ಹೇಳುತ್ತೇವೆ. ನಾನೂ 6 ವರ್ಷಗಳ ಕಾಲ ವಿರೋಧ ಪಕ್ಷದಲ್ಲಿ ಕೆಲಸ ಮಾಡಿದ್ದೇನೆ, ಅವರೂ ಮಾಡಿದ್ದಾರೆ. ಆದರೆ, ನಾವು ಯಾರೂ ರಸ್ತೆ ತಡೆ ಕೆಲಸ ಮಾಡಲಿಲ್ಲ. ನಾವೂ ಕೂಡ ಸಾಕಷ್ಟು ಹೋರಾಟ ಮಾಡಿದ್ದೇವೆ. ಬಂಗಾರಪ್ಪನವರು ರಸ್ತೆ ತಡೆ ಕೆಲಸ ಮಾಡಿದ್ದಾರೆಯೇ? ನೀವು ರಸ್ತೆ ತಡೆ ಮಾಡಿದ್ದೀರೆಂದು ನನಗೆ ಗೊತ್ತಿಲ್ಲ. ಅಥವಾ ಮೊಯಿಲಿಯವರು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ, ಆಳುವ ಪಕ್ಷ ವಿರೋಧಪಕ್ಷವಾಗಬಹುದು, ವಿರೋದಪಕ್ಷ ಆಳುವ ಪಕ್ಷವಾಗಬಹುದು. ನಾವು ರಸ್ತೆ ತಡೆ ಏಕೆ ಮಾಡಬೇಕು? ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುವುದಕ್ಕೆ ಕಪ್ಪು ಫ್ಲಾಗ್ ಡೆಮಾನ್‌ಸ್ಟ್ರೇಷನ್ ಮಾಡಿ, ಪ್ರತಿಕೃತಿ ಸುಡಿ, ಧಿಕ್ಕಾರ ಹಾಕಿ, ಯಾರು ಬೇಡವೆಂದು ಹೇಳುತ್ತಾರೆ. ಅದಕ್ಕೆ ನಾವೇನೂ ಅಡ್ಡಿ ಮಾಡಿಲ್ಲವಲ್ಲ. ಆದರೆ, 10ಜನ ಕುಳಿತುಕೊಂಡು, ಇಡೀ ಪ್ರಯಾಣಿಕರಿಗೆ, ರಸ್ತೆಯುದ್ದಕ್ಕೂ, ಪಾಪ ಯಾವ ಯಾವ ಕೆಲಸಕ್ಕೋ ಹೋಗುವವರು ಇರುತ್ತಾರೆ, ಕೆಲವರು ಆಸ್ಪತ್ರೆಗೆ ಬರುವವರು ಇರುತ್ತಾರೆ, ಕೆಲವರು ಮದುವೆ ಮುಂಜಿಗಳಿಗೆ ಹೋಗುವವರು ಇರುತ್ತಾರೆ. ಒಂದು ಮೈಲಿ, ಎರಡು ಮೈಲಿ ವೆಹಿಕಲ್ಸ್‌ಗಳನ್ನು ನಿಲ್ಲಿಸಿ, 10 ಜನ ಮುಂದೆ ಆಡವಾಡುವುದಾದರೆ, ಏಕೆ, ಅಂತಹ ಫಂಡ್ ಸರ್ಕಾರ ನಡೆಸಬೇಕು ನಾವು? ಹಾಗೆ ನಡೆಸುವುದಕ್ಕಾಗುವುದಿಲ್ಲ ಎಂದು ನಾನು ನೇರವಾಗಿ ಹೇಳುತ್ತೇನೆ. As long as I am going to sit in this chair, I will not allow such a things to happen in Karnataka. There is no question of mercy on this issue.

ನಾವು ಇಲ್ಲಿ ಏಕೆ ಇರಬೇಕು? ಅಧಿಕಾರ ನಡೆಸಬೇಕಾದ ಅವಶ್ಯಕತೆ ಇಲ್ಲ, ಈ ಮಾತು ನೇರವಾಗಿ ಹೇಳುತ್ತೇನೆ. ಪರಿಣಾಮ ಏನೇ ಆಗಲಿ, ಅದನ್ನು ಎದುರಿಸುವುದಕ್ಕೆ ನಾನೂ ಸಿದ್ಧನಿದ್ದೇನೆ. ನಾವೂ ಜನಗಳ ಮುಂದೆ ಹೋಗುತ್ತೇವೆ, ನಾವು ಬೇರೆ ಕಡೆ ಇನ್ನೆಲ್ಲೂ ಹೋಗುವುದಿಲ್ಲ, ಜನಗಳ ಮುಂದೆಯೇ ಹೋಗುತ್ತೇವೆ, ಮಹಾಜನರು ತೀರ್ಮಾನ ಮಾಡಲಿ. ನಿರಪರಾಧಿ, ಜನರು ಬಸ್ಸುಗಳಲ್ಲಿ ಹೋಗುವುದಕ್ಕೆ

ಬರುವುದಿಲ್ಲ, 2-3-4 ಗಂಟೆಗಳ ಕಾಲ ನಿಲ್ಲಿಸಿದರೆ, ಅವರೇನು ಅಪರಾಧ ಮಾಡಿದ್ದಾರೆ? ನೀವು ದೇವೇಗೌಡರಿಗೆ ಧಿಕ್ಕಾರ ಕೂಗಿ, ದೇವೇಗೌಡನಿಗೆ ಎದುರಿಗೆ ಹೊಡೆಯಿರಿ, ದೇವೇಗೌಡನ ವಿರುದ್ಧ ಏನು ಬೇಕಾದರೂ ಮಾಡಿ. Why poor people should suffer; and innocent people should suffer?

ಇದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಸರ್ಕಾರ ನಡೆಸುತ್ತೇವೆಂದು ಹೇಳಿದರೆ, ದಯಮಾಡಿ, ಸ್ವಲ್ಪಮಟ್ಟಿಗೆ ಮೆದುವಾದ ಭಾಷೆಯಲ್ಲಿ ಮಾತನಾಡಿದರೂ ಸಹ, ಅನಿವಾರ್ಯ ಪ್ರಸಂಗ ಬಂದಾಗ, ಬಿಗಿಯಾದ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುವ ಪ್ರಶ್ನೆಯೇ ಇಲ್ಲ. ಇದರೊಳಗೆ ಪೋಲೀಸಿನವರಿಗೆ ಕಟ್ಟುನಿಟ್ಟಾಗಿ ಸೂಚನೆಯನ್ನು ಕೊಟ್ಟಿದ್ದೇನೆ. ಇದರಲ್ಲಿ ಯಾವ ದಾಕ್ಷಿಣ್ಯ ಇಲ್ಲ, ಸನ್ಮಾನ್ಯ ಅಧ್ಯಕ್ಷರೇ, ದಯಮಾಡಿ, ಈಸಭೆಯಲ್ಲಿ ಕ್ಷಮೆ ಕೇಳುತ್ತೇನೆ. ಇದಕ್ಕೆ ಬಹುಶಃ ಸದನದ ಎಲ್ಲಾ ಸದಸ್ಯರು ಇಂತಹ ವಿಷಯದ ಬಗ್ಗೆ ಒಪ್ಪಿಕೊಳ್ಳುತ್ತಾರೆಂದು ನಾನು ಆಶಿಸುತ್ತೇನೆ. ಹೌದು, ಮೈಸೂರಿನ ಘಟನೆ. ಚಾವುಂಡರಾಯರ ಹೆಸರಿನಲ್ಲಿ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ಆ ದಿನ ಒಂದು ಪ್ರಶಸ್ತಿ ಕೊಡುವುದು ಇತ್ತು. ಶ್ಯಾಮರಾಯರಿಗೆ 96 ವರ್ಷ, ಅತ್ಯಂತ ಗಣ್ಯ ವ್ಯಕ್ತಿ. ಅವರನ್ನು ಎತ್ತಿಕೊಂಡು ತೆಗೆದುಕೊಂಡು ಬಂದರು. ಸಾಹಿತ್ಯ ಜಗತ್ತಿನಲ್ಲಿ ದುಡಿದಂಥ ಒಬ್ಬ ಮಹಾನ್ ವ್ಯಕ್ತಿ. ನೀವು ಹೊರಗಡೆ ಬಂದು ಕೂಗಿ. ನನ್ನ ವಿರುದ್ಧ ಏನು ಬೇಕಾದರೂ ಮಾಡಿ. ಆ ಸಭೆಯಲ್ಲಿದ್ದಂಥವರೆಲ್ಲರೂ ಬಹಳ ನೋವು ಮಾಡಿಕೊಂಡರು. ಆ ಹಿರಿಯರನ್ನು ಕೂಡಿಸಿಕೊಂಡು ನಾವು ಸನ್ಮಾನ್ಯ ಮಾಡುವಾಗ, ವೇದಿಕೆ ಮೇಲೆ ಧಾವಿಸಿ ನುಗ್ಗಿ ಬಂದರೆ, ಆಗ ಕೆಲವು ಕಾರ್ಯಕರ್ತರು ಅವರನ್ನು ನೂಕಿಕೊಂಡು ಹೊರಗೆ ತೆಗೆದುಕೊಂಡು ಹೋಗಿದ್ದು ನಿಜ. ನಾನು ಇಲ್ಲವೆಂದು ಹೇಳುವುದಿಲ್ಲ. ಅವರ ಮೇಲೂ ದೂರು ಕೊಟ್ಟಿದ್ದಾರೆ. ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಏಕೆಂದರೆ ಅಲ್ಲಿ ಯಾರೂ ಹೊಡೆಯಲಿಲ್ಲ. ವೇದಿಕೆ ಮೇಲೆ ನುಗ್ಗಲಿಕ್ಕೆ ಬಂದಾಗ, ಅವರನ್ನು ಹಬ್ಬಿಕೊಂಡು ತೆಗೆದುಕೊಂಡು ಹೋದರು. ಪೋಲೀಸಿನವರು ಇದನ್ನು ಅಂಟಿಸಿಪೇಟ್ ಮಾಡಲಿಲ್ಲ. ಅವರನ್ನು ಒಳಗಡೆ ಇಟ್ಟುಕೊಂಡಿದ್ದರು, ಅವರು ಯಾರಿಗೂ ಗೊತ್ತಿಲ್ಲ, ಇಲ್ಲದೇ ಹೋಗಿದ್ದರೆ, ಹಿಡಿದುಕೊಂಡು ಓಡಿ, ನುಗ್ಗಿ ಬಂದಿರುವವರು. ಅಲ್ಲಿ ನಾನೇ ಪ್ರತ್ಯಕ್ಷದರ್ಶಿ, ಬಾಕಿ ಇನ್ನೊಬ್ಬರು ಹೇಳಬೇಕಾದ್ದಿಲ್ಲ. ಏಕೆಂದರೆ ಈ ಜಾಗದಲ್ಲಿ ನಿಂತುಕೊಂಡು ಉತ್ಪ್ರೇಕ್ಷ ಮಾಡಿ ಹೇಳಬೇಕಾದ ಅವಶ್ಯಕತೆ ಇಲ್ಲ. ಅಂತಹ ಒಳ್ಳೆಯ ಸುಂದರವಾದ ಕಾರ್ಯಕ್ರಮ. ಅದೂ ಮೊದಲನೇ ಬಾರಿ. ಚಾರುಕೀರ್ತಿ ಬಟ್ಟಾರಕ ಸ್ವಾಮಿಗಳು, ಇದಕ್ಕಾಗಿ ಒಂದು ಲಕ್ಷ ರೂ.ಗಳ ನಿಧಿಯನ್ನು ಇಟ್ಟಿದ್ದಾರೆ. ಅದರಿಂದ ಬರತಕ್ಕಂಥಾದ್ದನ್ನು ಪ್ರತಿ ವರ್ಷ ಯಾರು ಈ ರಾಜ್ಯದಲ್ಲಿ ಸಾಹಿತ್ಯರಂಗದಲ್ಲಿ ಉತ್ತಮ ಸೇವೆ ಸಲ್ಲಿಸಿರುವವರಿಗೆ ಪ್ರಶಸ್ತಿಯನ್ನು ಕೊಡುತ್ತಿದ್ದಾರೆ.

ಅವತ್ತು ರೈತರನ್ನು ಉಳಿಸುವುದಕ್ಕೆ, ಕೆಂಟಕಿ ಚಿಕನ್ ಬಗ್ಗೆ ಹೋರಾಟ ಮಾಡುವುದಕ್ಕೆ ಆ ವೇದಿಕೆ ಮೇಲೆ ನುಗ್ಗಬೇಕಾಗಿತ್ತದೆ? ಸನ್ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯವಾಗಿ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ಒಂದೇ ಒಂದು ಹೇಳುತ್ತೇನೆ. ಇವತ್ತು ಈ ರಾಜ್ಯದಲ್ಲಿ ಹಲವಾರು ಸಂಸ್ಥೆಗಳು ಬಂಡವಾಳ ಹೂಡಲೇಬೇಕಾಗಿದೆ. ಇದು ಅನಿವಾರ್ಯ. ಸದನದಲ್ಲಿ ಚರ್ಚೆಯಾಗಲೀ, ಇದರೊಳಗೆ ಮುಚ್ಚುಮರೆ ಯಾವುದೂ ಬೇಕಾಗಿಲ್ಲ, ನಾವು ಏನೇನು ಮಾಡಿದ್ದೇವೆಂದು ಹೇಳಿದ್ದಾರೆ, ಗುಪ್ತವಾಗಿ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ನಾವು ಯಾವುದನ್ನೂ ಗುಪ್ತವಾಗಿ ಮಾಡಿಕೊಂಡಿಲ್ಲ. ಈ ಸದನದಲ್ಲಿ ಆ ವಿಷಯವನ್ನು ಇಟ್ಟುಕೊಂಡು ಇಡೀ ದಿನ ಚರ್ಚೆಯಾಗಲಿ. ಯಾವ ಯಾವ ಕಂಪನಿಗೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಒಪ್ಪಂದ ಮಾಡಿಕೊಂಡಿದ್ದೇವೆ. ಉಕ್ಕು ಕಾರ್ಖಾನೆಗಳನ್ನು ಮಾಡಲಿಕ್ಕೆ ಒಪ್ಪಂದ ಮಾಡಿಕೊಂಡಿದ್ದೇವೆ, ಎಲ್ಲಾ ರೀತಿಯ ಚರ್ಚೆ ಈ ಸದನದಲ್ಲಿ ಆಗಲಿ.

2.10 ಪಿ.ಎಂ

ಈ ರಾಜ್ಯದಲ್ಲಿ ಇವತ್ತು ಸುಮಾರು 50-60 ಸಾವಿರ ಕೋಟಿ ರೂಪಾಯಿಗಳ ಖಾಸಗಿ ಬಂಡವಾಳ ಹೂಡತಕ್ಕಂಥ ಉದ್ದಿಮೆದಾರರು ಇರಬಹುದು, ವಿದೇಶಿ ಬಂಡವಾಳ ಹೂಡತಕ್ಕಂಥ ಉದ್ದಿಮೆದಾರರು ಇರಬಹುದು. ಇಲ್ಲಿ ಬಂಡವಾಳ ಹೂಡತಕ್ಕಂಥಾದ್ದಕ್ಕೆ ಹಿಂದಿನ ಸರ್ಕಾರಗಳು ಪರವಾನಿಗೆಯನ್ನು ಕೊಟ್ಟಿದ್ದಾರೆ. ಅವರಿಗೆ ಈ ನಾಡಿನಲ್ಲಿ ಕಾನೂನಿನ ರಕ್ಷಣೆ ಕೊಡುತ್ತೇವೆ ಎನ್ನುವಂತಹ ವಿಶ್ವಾಸವನ್ನು ಮೂಡಿಸದಿದ್ದರೆ ಈ ರಾಜ್ಯದಲ್ಲಿ ಬಂಡವಾಳ ಹೂಡಲು ಯಾರೂ ಮುಂದೆ ಬರುವುದಿಲ್ಲ, ಆದ್ದರಿಂದ ಈ ವಿಷಯದಲ್ಲಿ no question of any liniency that can be shown. Government has categorically given instruction to all the officers not to allow any lawlessness so far as these are concerned. In addition to that I will tell you frankly. ಜನಸಾಮಾನ್ಯರಿಗೆ ರಸ್ತೆ ಮಧ್ಯೆದಲ್ಲಿ ಇಂತಾದ್ದನ್ನು ನಡೆಸಿದಂತಹ ಕಾಲದಲ್ಲಿ ಯಾವುದೇ ಕಾರಣದಿಂದ ಮುಲಾಜು ಇಲ್ಲದೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಇನ್ನು ಎರಡನೇ ಮಾತು ಹೇಳುವುದಾದರೆ ಆಫೀಸಿನಲ್ಲಿ ಹೋಗಿ ರೇಕಾರ್ಡುಗಳು ಸುಟ್ಟು ಹಾಕುವಂಥಾದ್ದು ಆದರೆ ಅದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ, ನೀವು ಯಾರದೋ ಹೆಸರು ಹೇಳುತ್ತಿದ್ದಿರಿ ನಾನು ಹೇಳುವುದಿಲ್ಲ, ನೀವು ಹೇಳಬಹುದು ಯಾರೋ ಒಬ್ಬ ವ್ಯಕ್ತಿಯ ಮೇಲೆ ದ್ವೇಷ ತೆಗೆದುಕೊಂಡುಬಿಟ್ಟಿರಿ ಎಂದು. ಪಾಪ ನಿಮಗೆ ಅವರ ಮೇಲೆ ತುಂಬಾ ಅನುಕಂಪ ಬಂದಿದೆ ಅಲ್ಲ, ನಾನು ಈ ಸದನದ ಒಳಗಡೆ ಬರುವಾಗ ಅವರ ಹೆಸರು ಕೇಳಿ ಬಂತು. ಅನುಕಂಪ ಅಲ್ಲ, ಎರಡು ಗಂಟೆ ರಾತ್ರಿವರೆಗೂ ಅಧಿಕಾರಿಗಳನ್ನು ಕೂಡಿಹಾಕಿ ಬೀಗ ಹಾಕಿ ಇಟ್ಟರೆ ಸರ್ಕಾರ ಕೈ ಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ,

ಶ್ರೀ ವಾಟಾಳ್ ನಾಗರಾಜ್ : ಯಾರು ಅವರ ಹೆಸರು ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಅವರ ಹೆಸರು ಹೇಳುವುದಿಲ್ಲ, ನೀವೇ ಜ್ಞಾಪನ ಮಾಡಿಕೊಳ್ಳಿ. ಪ್ರೊಸೀಡಿಂಗ್ಸ್ ಇದೆ ಓದಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ವೈ.ಕೆ. ರಾಮಯ್ಯ ಅಲ್ಲವೇ?

ಶ್ರೀ ಹೆಚ್.ಡಿ. ದೇವೇಗೌಡ : ನೀವು ಆ ಪ್ರೊಸೀಡಿಂಗ್ಸ್ ಓದಿಕೊಳ್ಳಿ. ಅಂಥದ್ದರ ಬಗ್ಗೆ ಸರ್ಕಾರ ಕೈ ಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ, ಎರಡು ಗಂಟೆ ರಾತ್ರಿವರೆಗೂ ಅಂದರೆ ಏನು. ಸರ್ಕಾರ ನಡೆಸಿದಂತಹ ಮಾಜಿ ಮುಖ್ಯಮಂತ್ರಿಗಳು ಇಲ್ಲೇ ಕುಳಿತುಕೊಂಡಿದ್ದಾರೆ. ಎರಡು ಗಂಟೆ ರಾತ್ರಿಯಲ್ಲಿ ಅವರು ನನಗೆ ಫೋನ್ ಮಾಡುತ್ತಾರೆ. ನಮಗೆ ಇಲ್ಲಿ ಅನ್ನ ನೀರು ಸಿಗದಂತೆ ಬೀಗ ಹಾಕಿ ಇಲ್ಲ ಇಟ್ಟಿದ್ದಾರೆ ಎಂದು. ಹೊರಗಡೆಯಿಂದ ಯಾರೂ ಬರಬಾರದು ಅಂತ. ಆಗ ನಾನು ಡಿ.ಜಿ.ಪಿ.ಗೆ ಹೇಳಬೇಕಾಗಿ ಬಂತು ಇನ್ನು ಅರ್ಧ ಗಂಟೆಯಲ್ಲಿ ರಿಲೀಜ್ ಮಾಡದಿದ್ದರೆ ಪರಿಣಾಮ ಬೇರೆ ಅಧಿತು ಅಂತ. ಏಕೆ ಏನು ಅಪರಾಧ ಮಾಡಿದ್ದಕ್ಕೆ? ಆದ್ದರಿಂದ ಇಂತಹ ಒಂದು ಘಟನೆಗಳು ನಡೆಯಲಿಕ್ಕೆ ಈ ರಾಜ್ಯದಲ್ಲಿ ಅವಕಾಶ ಕೊಡುವುದಿಲ್ಲ, ನಾವು ಸಹ ಜನಸಾಮಾನ್ಯರ ಬಳಿಯಲ್ಲಿಯೇ ಹೋಗುತ್ತೇವೆ. ಜನಸಾಮಾನ್ಯರು ಈ ಸರ್ಕಾರ ತೆಗೆದುಕೊಂಡಿರತಕ್ಕಂಥ ನಿರ್ಣಯ ತಪ್ಪು ಎಂದು ಹೇಳುವುದಾದರೆ ಅವರು ಕೊಡುವಂತಹ ಶಿಕ್ಷೆಗೆ ನಾವೂ ಭಾಗಿಗಳಾಗುತ್ತೇವೆ. ಆದರೆ ಇಂತಹ ಘಟನೆಗಳಿಗೆ ಇನ್ನು ಅವಕಾಶ ಈ ರಾಜ್ಯದಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಮಾತನ್ನು ನೇರವಾಗಿ ಹೇಳಿ ಯಾವುದೇ ಬಂಡವಾಳ ಹೂಡಲಿ ಅವರಿಗೆ ಈ ರಾಜ್ಯದಲ್ಲಿ ಇವತ್ತು ಕಾನೂನಿನ ಭದ್ರತೆ ಇದೆ ಎನ್ನುವುದನ್ನು ನಾವು ಕೃತಿಯಲ್ಲಿ ಸಾಬೀತು ಮಾಡಿ ತೋರಿಸಲೇಬೇಕಾಗುತ್ತದೆ. ಅವರಿಗೆ ವಿಶ್ವಾಸ ಮೂಡಿಸಬೇಕಾಗುತ್ತದೆ. ಅವರ ವಿಷಯದಲ್ಲಿಯೇ ಅಲ್ಲ ರಾಜ್ಯದ

ಜನತೆಯ ಮನಸ್ಸಿನಲ್ಲಿ ಇಂತಹ ಒಂದು ಅಹಿಂಸಾತ್ಮಕ ಮಾರ್ಗವನ್ನು ಬಿಟ್ಟು, ಹಿಂಸಾತ್ಮಕ ಮಾರ್ಗಕ್ಕೆ ಯಾರು ಹೋಗುತ್ತಾರೋ ಅವರ ವಿರುದ್ಧ ಯಾರೇ ಆಗಲಿ ಯಾವುದೇ ಸನ್ನಿವೇಶದಲ್ಲಿ ಆಗಲಿ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ ಎನ್ನುವಂತಹ ಮಾತನ್ನು ಹೇಳಿ ಇದರಲ್ಲಿ ನನಗೆ ದ್ವೇಷ ಇಲ್ಲ, ಯಾರ ಮೇಲೂ ದ್ವೇಷ ಇಲ್ಲ, ವ್ಯಕ್ತಿಗತ ದ್ವೇಷ ಇಲ್ಲ, ಹಿಂದೆ ನಡೆದಿರುವ ಘಟನೆಗಳಿಗೆ ಹಿಂದಿನ ಸರ್ಕಾರಕ್ಕೆ ದ್ವೇಷ ಇತ್ತಾ? ದ್ವೇಷ ಇದ್ದು ಮಾಡಿದ್ದು ಅಲ್ಲ, ಆ ಘಟನೆಗಳ ಸ್ವರೂಪ ಆ ರೀತಿ ಇಟ್ಟು ಮಾಡಿದ್ದಾರೆ. ಆದ್ದರಿಂದ ತಾವು ಇದರಲ್ಲಿ ರಾಜಕೀಯ ಬೆರೆಸುವುದಕ್ಕೆ ಹೋಗಬೇಡಿ ಅಂತ ತಮ್ಮಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡಿ ತಾವು ಕಾನೂನನ್ನು ಈ ರಾಜ್ಯದಲ್ಲಿ ಎಲ್ಲರಿಗೂ ಸಮಾನವಾಗಿ ಅನುಸರಿಸುವಂತಾದ್ದನ್ನು ಮಾಡುವಾಗ ಸಹಕರಿಸಬೇಕೆಂದು ವಿನಂತಿ ಮಾಡುತ್ತೇನೆ. ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಟ್ಟಾರೆ ನಾನು ಈಗ ಗೃಹ ಮಂತ್ರಿಗಳ ಮತ್ತು ಮುಖ್ಯಮಂತ್ರಿಗಳ ಹೇಳಿಕೆಯನ್ನು ಕೇಳಿದೆ. ಅದರಲ್ಲಿ ಶ್ರೀ ನಂಜುಂಡಸ್ವಾಮಿಯವರು ನೇರವಾಗಿ ಈ ಚಳುವಳಿಯಲ್ಲಿ ಭಾಗವಹಿಸಿದ್ದರು ಎಂದು ಎಲ್ಲೂ ಕೇಳಲಿಲ್ಲ, ಕಾಣಲಿಲ್ಲ, ಅವರು ಕೊಟ್ಟ ಹೇಳಿಕೆಯಲ್ಲಿ, ಅಂದ ಮೇಲೆ ತಾವು ಉದ್ದೇಶಪೂರ್ವಕವಾಗಿಯೇ ನಂಜುಂಡಸ್ವಾಮಿಯವರ ಮೇಲೆ ಮೊಕದ್ದಮೆ ಹಾಕಿದ್ದೀರಿ ಬಂಧನ ಮಾಡಿದ್ದೀರಿ ಎಂದು ಹೇಳುವುದರಲ್ಲಿ ಬೇರೆ ಮಾತು ಇಲ್ಲ, ನೀವು ಎಷ್ಟೇ ಸುತ್ತಿ ಬಳಸಿ ಹೇಳಿದರೂ ಪ್ರಶ್ನೆ ಇಲ್ಲ, ಅದು ಸ್ಪಷ್ಟ. ಆದರೆ ನೇರವಾಗಿ ಯಾವುದರಲ್ಲಿ ನಂಜುಂಡಸ್ವಾಮಿಯವರು ನಿಜವಾಗಿಯೂ ಬ್ರಿಗೇಡ್ ರೋಡ್‌ನಲ್ಲಿ ನೇರವಾಗಿ ನಿಂತಿದ್ದಾರೆ? ಅವರೇ ಹೋರಾಟ ಮಾಡಿದರು, ಅವರೇ ದಾಳಿ ಮಾಡಿದರು, ಅವರೇ ದರೋಡೆ ಮಾಡಿದರು ಎನ್ನತಕ್ಕಂಥಾದ್ದು, ಅವರೇ ಕೊಲೆಗೆ ಪ್ರಯತ್ನ ಮಾಡಿದರು ಎಂದು ಎಲ್ಲಿದೆ ಸ್ವಾಮಿ? ಎಲ್ಲೂ ಕಾಣಲಿಲ್ಲ, ಚಳುವಳಿ ನಡೆದಿದೆ ನಿಜ. ಚಳುವಳಿಗಾರರು ಏನು ಮಾಡಿದ್ದಾರೆ ಯಾವ ರೀತಿ ಅಂತ ನಾಳೆ ನ್ಯಾಯಾಲಯ ತೀರ್ಪು ಕೊಡಲಿ, ತೀರ್ಮಾನ ಆಗಲಿ. ಅವರ ಬಳಿ ಏನೇನು ಸಾಕ್ಷ್ಯಾಧಾರಗಳು ಇವೆ ಅದರ ಮೇಲೆ ತೀರ್ಮಾನ ಆಗಲಿ. ಆದರೆ ನಂಜುಂಡಸ್ವಾಮಿಯವರನ್ನು ನಾಲ್ಕು ದಿವಸ ಆದ ನಂತರ ಉದ್ದೇಶಪೂರ್ವಕವಾಗಿ ಬಂಧನ ಮಾಡಿರತಕ್ಕಂಥಾದ್ದಕ್ಕೆ ನಿಮ್ಮಲ್ಲಿ ಏನು ಪುರಾವೆಗಳು ಇದೆ ಹೇಳಿ. ನಂಜುಂಡಸ್ವಾಮಿಯವರು ನೇರವಾಗಿ ಇದರಲ್ಲಿ ಭಾಗಿಗಳಾಗಿದ್ದಾರೆ ಎನ್ನುವುದಕ್ಕೆ ಏನಾದರೂ ಒಂದು ಪುರಾವೆ ಬೇಕಲ್ಲ. ಅದು ಯಾವುದೂ ನಿಮ್ಮಲ್ಲಿ ಇಲ್ಲ, ಗೃಹ ಮಂತ್ರಿಗಳು ಹೇಳಿದ್ದು ಆಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರಲ್ಲಿ ಆಗಲಿ ಒಂದು ಚೂರು ನನಗಂತೂ ಸಿಗಲಿಲ್ಲ, ಆದರೆ ತಾವು ನೇರವಾಗಿ ಚಳುವಳಿಗಾರರ ಮೇಲೆ ಅವತ್ತು ಏನು ನಡೆದಿದೆ ಆ ಮಾಲೀಕರಿಂದ ತಾವೇ ಒಂದು ಕಂಪ್ಲೇಂಟ್ ಬರೆಸಿಕೊಂಡಿದ್ದು, ಇದು ನಡೆದಿರತಕ್ಕಂಥಾದ್ದು ಪೋಲೀಸ್ ಮಾಡತಕ್ಕಂಥ ವ್ಯವಸ್ಥೆ. ಪೋಲೀಸಿನವರು ಸಂಬಂಧಪಟ್ಟಂಥ ಮಾಲೀಕನಿಂದ ಈ ರೀತಿ ಆಯಿತು ನನಗೆ ಹೊಡೆಯುವುದಕ್ಕೆ ಬಂದರು, ನನಗೆ ಬಡಿಯುವುದಕ್ಕೆ ಬಂದರು. ಕತ್ತು ತೆಗೆಯುವುದಕ್ಕೆ ಬಂದರು, ಕಳ್ಳತನ ಮಾಡುವುದಕ್ಕೆ ಬಂದರು, ನನ್ನ ಗಲ್ಲದಲ್ಲಿದ್ದ ದುಡ್ಡು ತೆಗೆದುಕೊಳ್ಳುವುದಕ್ಕೆ ಬಂದರು ಇವೆಲ್ಲಾ ಪೋಲೀಸಿನವರು ಕೇಸಿಗೆ ಮೊದಲಿನಿಂದ ಬರೆಸಿಕೊಳ್ಳತಕ್ಕಂಥ ವ್ಯವಸ್ಥೆ ಇದು. ಅದರಲ್ಲಿ ಏನೂ ಬೇರೆ ಮಾತು ಇಲ್ಲ, ಆದರೆ ನಂಜುಂಡಸ್ವಾಮಿಯವರನ್ನು ಈ ಕೇಸ್‌ನಲ್ಲಿ ಬಂಧನ ಮಾಡುವುದಕ್ಕೆ ಸರ್ಕಾರಕ್ಕೆ ಯಾವುದೇ ವಿಧವಾದಂತಹ ರುಜುವಾತು ಇಲ್ಲ, ಅಂದ ಮೇಲೆ ನಂಜುಂಡಸ್ವಾಮಿಯವರನ್ನು ಬಂಧನ ಮಾಡಬೇಕಾದರೆ ಕಾರಣ ಏನು? ದ್ವೇಷ ಅಂತಲೇ ಹೇಳಬೇಕು ಬೇರೆ ಮಾತೇ ಇಲ್ಲ, ಆ ದೃಷ್ಟಿಯಿಂದ ನಾನು ನೇರವಾಗಿ ಹೇಳುತ್ತಿದ್ದೇನೆ ಆದ್ದರಿಂದ

ಸರ್ಕಾರ ಚಳುವಳಿಯನ್ನು ದಮನ ಮಾಡತಕ್ಕಂಥ ಸರ್ವಾಧಿಕಾರಿ ಸರ್ಕಾರ ಮತ್ತು ನಂಜುಂಡಸ್ವಾಮಿಯವರ ಮತ್ತು ರೈತ ಸಂಘದ ಚಳುವಳಿಯನ್ನು ತುಳಿಯಬೇಕು ಎಂದು ಈ ಸರ್ಕಾರಕ್ಕೆ ಏನು ಉದ್ದೇಶ ಇದೆ ಈ ನೀತಿಯನ್ನು ನಾವು ವಿರೋಧಿಸುತ್ತೇವೆ. ಇವರ ಸರ್ವಾಧಿಕಾರಿ ಸರ್ಕಾರವನ್ನು ನಾವು ವಿರೋಧಿಸುತ್ತೇವೆ. ನಾನು ಮತ್ತು ರೈತ ಸಂಘದವರು ಇಲ್ಲಿ ಧರಣಿ ಮಾಡುತ್ತೇವೆ. ಇವರ ಹೇಳಿಕೆ ಬಹಳ ಅಪ್ರಾಮಾಣಿಕವಾಗಿದೆ. ಪ್ರಾಮಾಣಿಕತೆ ಇಲ್ಲ, ಇದು ರಾಜ್ಯದ ರೈತರನ್ನು ಮತ್ತು ಬಹುರಾಷ್ಟ್ರೀಯ ಕಂಪನಿಗಳು ನಮ್ಮನ್ನು ಆಳತಕ್ಕಂಥ ಮತ್ತು ಅತ್ಯಂತ ಘೋರ ಅಪರಾಧವನ್ನು ರಾಜ್ಯ ಮತ್ತು ದೇಶದವರು ಏನು ಮಾಡುತ್ತಿದ್ದಾರೆ ಇದು ಸರಿಯಲ್ಲ. ಈ ಚಳುವಳಿಯ ಸ್ವರೂಪ ಶಾಂತವಾಗಿ ಇರಬಹುದು ಸ್ವಲ್ಪ ಹೋರಾಟದ ದಿಕ್ಕು ಹಿಡಿದಿರಬಹುದು ಚಳುವಳಿ ದೊಪ ಬೇರೆ ಇರಬಹುದು ಆ ಚಳುವಳಿಗೆ ನಮ್ಮ ಬೆಂಬಲ ಇದೆ. ಆ ಚಳುವಳಿಯನ್ನು ನೀವು ಎಷ್ಟು ದಮನ ಮಾಡುತ್ತೇವೆಂದು ಹೇಳಿದರು ಚಳುವಳಿ ನಿಲ್ಲುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿ ನಂಜುಂಡಸ್ವಾಮಿಯವರ ಮೇಲೆ ಹಾಕಿರತಕ್ಕಂಥ ಕೇಸು ಇದು ಸತ್ಯಕ್ಕೆ ದೂರವಾದುದು ಅಪ್ರಾಮಾಣಿಕವಾದುದು, ಕೇಸ್ ಹಾಕಿರತಕ್ಕಂಥದ್ದು ಸರಿಯಲ್ಲ ಎಂದು ಹೇಳಿ ನಾವು ಧರಣಿ ಮಾಡುತ್ತೇವೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತರು)

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಇಲ್ಲಿ ಇವತ್ತು ಮಾಡಿದಂತಹ ಡಿಬೇಟ್ ಬಗ್ಗೆ ನಾನು ದೊಡ್ಡ ವ್ಯಾಖ್ಯಾನ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಸನ್ಮಾನ್ಯ ಗೃಹ ಮಂತ್ರಿಗಳು ಹೇಳಿದರು. ಪ್ರಚೋದನೆ ಮಾಡುವವರನ್ನು ನಾವು ಕಾನೂನಿನ ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆ ಅಂತ ಹೇಳಿ ಮಾನ್ಯ ಮುಖ್ಯಮಂತ್ರಿಗಳು ಪ್ರಚೋದನೆ ಮಾಡಿದ್ದಾರೆ. ನನ್ನ ಕಡೆಯ ಜನರು ನಿಮ್ಮನ್ನು ನೋಡಿಕೊಳ್ಳುತ್ತೇನೆಂದು ಹೇಳುವುದು ಪ್ರಚೋದನೆಯ ವಿಚಾರ. ಅದ್ದರಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಮೈಸೂರಿನಲ್ಲಿ ನಡೆದಂತಹ ಘಟನೆ ಬಗ್ಗೆ 19ನೇ ತಾರೀಖು, ನಾವು ಚಳುವಳಿ ಪ್ರತಿಭಟನಾ ಸಭೆ ಮಾಡುವುದಕ್ಕೆ ಬಂದಾಗ ಇಡೀ ಮೈಸೂರು ಜಿಲ್ಲೆ ಪೋಲೀಸ್‌ರವರ ಜಿಲ್ಲೆ ಆಗಿತ್ತು. ಪೋಲೀಸ್‌ರವರು ಸುತ್ತಮುತ್ತ ನಿಂತು ಯಾರು ಹಸಿರು ಟವಲ್ ಹಾಕಿಕೊಂಡಿದ್ದಾರೆ ಅವರನ್ನು ಇಳಿಸಿದರು ಯಾರು ಹೆಂಗಸರು ಹಸಿರು ಸೀರೆ ಉಟ್ಟುಕೊಂಡಿದ್ದರು ಅವರನ್ನೂ ಇಳಿಸಿದರು. ದಸ್ತಗಿರಿ ಮಾಡುವುದು ಬಸ್ಸಿನಲ್ಲಿ ಕೂರಿಸುವುದು, 19ನೇ ತಾರೀಖು ನಡೆದಂತಹ ಘಟನೆ. ಆ ದಿನ ನನ್ನನ್ನು ಒಬ್ಬ ಎಸ್.ಐ. ದರ್ಮೇ ಎನ್ನತಕ್ಕಂಥವರು ನಿಮ್ಮನ್ನು ನಾನು ಒಳಗಡೆ ಬಿಡುವುದಿಲ್ಲ ಅಂತ ಹೇಳಿ ನನ್ನ ಕಾರು ತಡೆಹಾಕಿದರು. ಈ ತರಹ ಪೋಲೀಸ್ ಸಾಮ್ರಾಜ್ಯ ರಚನೆ ಮಾಡಿ ಸರ್ವಾಧಿಕಾರಿ ಪ್ರದರ್ಶನ ಅವತ್ತು ನಡೆಯಿತು. ಇಡೀ ಮೈಸೂರು ನಗರ ಅವತ್ತು ಪೋಲೀಸ್‌ರಿಂದ ತುಂಬಿತ್ತು. ಯಾವ ಕಾರಣಕ್ಕೋ ಗೊತ್ತಿಲ್ಲ. ಸನ್ಮಾನ್ಯ ಸಭಾನಾಯಕರು ಹೇಳಿದರು ಮೈಸೂರಿನಲ್ಲಿ ಯಾರ್‍ಯಾರು ಇದ್ದಾರೆ ಅವರನ್ನೆಲ್ಲಾ ದಸ್ತಗಿರಿ ಮಾಡಿದ್ದೇವೆಂದು ಹೇಳಿದರು. ಸೆಕ್ಷನ್ 143 - 147, 341, 323 ಸೆಕ್ಷನ್ 506ಬಿ 392, 324, 149 ಐ ಪಿಸಿ ಇದರಲ್ಲಿ ಬಹಳ ಮುಖ್ಯವಾದಂತಹ ವ್ಯಕ್ತಿಗಳು ಇವತ್ತಿನ ಮೇಯರ್ ಮಣಿರಾಜು ಬನ್ನೂರು ಕುಮಾರ್ ಬಲರಾಮ್ ಶಿವಕುಮಾರ್, ಸೋಮಶೇಖರ್ ವಾಸು, ರವಿ ಇವತ್ತು ಇವರು ಹಾರಿ ಕಾರ್ಪೊರೇಟರ್‌ಗಳು ಮತ್ತು ಮೇಯರ್ ಆಗಿದ್ದಾರೆ. ಅವರ ಮೇಲೆ ಕಾನೂನು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದಿರಿ.

ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಆದರೆ ಇದುವರೆಗೂ ದಸ್ತಗಿರಿ ಮಾಡಿಲ್ಲ. ಏನೂ ಮಾಡಿಲ್ಲ ಸರ್ವಾಧಿಕಾರಿ ಧೋರಣೆಯನ್ನು ತೋರಿಸಿ ಉದ್ದೇಶಪೂರ್ವಕವಾಗಿ ಮಾಡಿದ್ದೀರಿ. ನಾನೇನು ರೈತರ ಮೇಲೆ ಕ್ರಮ ತೆಗೆದುಕೊಳ್ಳಬೇಡಿ ಅಂತ ಹೇಳಿಲ್ಲ.

ರೈತ ಸಂಘದ ಕಾರ್ಯಕರ್ತರ ಮೇಲೆ ನೂರ ಒಂದು ಜನರ ಮೇಲೆ, ಕ್ರಮ ತೆಗೆದುಕೊಳ್ಳಬೇಡಿ ಅಂತ ಹೇಳಿಲ್ಲ. ಅವರೇ ಹೇಳಿದರು ತತಕ್ಷಣ ಅರೆಸ್ಟ್ ಮಾಡಿದರು ಅಂತ. ಏನು ಕಿಂಟಕಿ ಚಿಕನ್ ಮೇಲೆ ನಡೆದಂತಹ ವಿಚಾರಕ್ಕೂ ಅವರನ್ನು ದಸ್ತಗಿರಿ ಮಾಡಿದ್ದಕ್ಕೂ ಕೇವಲ 5-10 ನಿಮಿಷ ವ್ಯತ್ಯಾಸ. ಯಾವುದನ್ನು ದರೋಡೆ ಮಾಡಿದ್ದಾರೆ. ಯಾವ ಪದಾರ್ಥಗಳನ್ನು ದರೋಡೆ ಮಾಡಿರತಕ್ಕಂಥಾದ್ದನ್ನು ರೈತ ಸಂಘದ ಕಾರ್ಯಕರ್ತರಿಂದ ವಶ ಮಾಡಿಕೊಂಡಿದ್ದಾರೆ. ಇದು ಶುದ್ಧ ಸುಳ್ಳು. ದರೋಡೆ ಕೇಸ್ ಹಾಕಿರುವುದು ಶುದ್ಧ ಸುಳ್ಳು. ಅವರ ಮೇಲೆ ಹೊರಿಸಿರತಕ್ಕಂಥಾದ್ದು ಸೆಕ್ಷನ್ 307. ಒಬ್ಬ ವ್ಯಕ್ತಿಗೆ ನಡ ನೋವಿನಿಂದ ನಡೆಯಲಿಕ್ಕೆ ಆಗದೇ ಇರತಕ್ಕಂಥವನಿಗೆ ಕೋಲು ಕೊಟ್ಟುಹೊರಗಡೆ ಕರೆದುಕೊಂಡು ಬಿಟ್ಟಿರತಕ್ಕಂಥಾದ್ದು ಇನ್ಸಿಡೆಂಟ್ಸ್ ಎಲ್ಲ ವೀಡಿಯೋ ಕ್ಯಾಸೆಟ್ ಆಗಿದೆ ಅದನ್ನು ತಾವು ವೀಕ್ಷಣೆ ಮಾಡಬಹುದು. ಇಷ್ಟೆಲ್ಲಾ ಆಗಿದ್ದರು ಚಳುವಳಿಯನ್ನು ಉದ್ದೇಶಪೂರ್ವಕವಾಗಿಯೇ ಸರ್ವಾಧಿಕಾರಿ ಪ್ರವೃತ್ತಿಯಿಂದ ದಮನಮಾಡತಕ್ಕಂಥ ಈ ಸರ್ಕಾರದ ವಿರುದ್ಧ ನಾನು ಸಹ ಧರಣಿ ಕುಳಿತುಕೊಳ್ಳುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಧರಣಿ ಕುಳಿತರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ನಂಜುಂಡಸ್ವಾಮಿಯವರು ಮಾಡಿರತಕ್ಕಂಥ ಹೋರಾಟದ ಸ್ವರೂಪವನ್ನು ನಾನೂ ಕೂಡಾ ಒಪ್ಪುವುದಿಲ್ಲ, ಆದರೆ, ಅವರ ಮೇಲೆ ಸಕ್ಷನ್ 307ರ ಮೇಲೆ ಕೇಸ್ ಹಾಕಿರತಕ್ಕಂಥಾದ್ದು ಮಾತ್ರ ಸರಿಯಲ್ಲ. ಸೆಕ್ಷನ್ 307 ಹಾಕಬೇಕಾದರೆ ಬೇಸಿಕ್ ಇನ್‌ಗ್ರೇಡಿಯೆಂಟ್ಸ್ ಏನು? ಕಾನೂನು ಪ್ರಕಾರ ಮಾತನಾಡುವುದಾದರೂ, ಮಾನ್ಯ ನಂಜುಂಡಸ್ವಾಮಿಯವರು ಆ ಜಾಗದಲ್ಲಿ ಇರಲಿಲ್ಲ. ಪ್ರಚೋದನೆ ಮಾಡಿದ್ದಾದರೆ ಅದಕ್ಕಾಗಿ ಬೇರೆ ಸಕ್ಷನ್ ಮೇಲೆ ಕೇಸ್ ಹಾಕಬಹುದಾಗಿತ್ತು. ಸಕ್ಷನ್ 307 ಹಾಕಿರುವುದಕ್ಕೆ ಸಮರ್ಥನೆ ಮಾಡುವುದು ಸರಿಯಲ್ಲ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಸಭಾಧ್ಯಕ್ಷರೆ, ಇದೇ ವಿಷಯದ ಮೇಲೆ ಚರ್ಚೆ ಮಾಡಲು ನಾವೂ ಕೂಡ ನಿಯಮ 69ರ ಮೇಲೆ ಸೂಚನಾ ಪತ್ರವನ್ನು ಕಳುಹಿಸಿದ್ದೆವು. ಆದರೆ, ಇದರ ಬಗ್ಗೆ ಬಹುತೇಕ ಚರ್ಚೆಯಾಗಿರುವುದರಿಂದ ಅದಕ್ಕೆ ಸರ್ಕಾರ ಉತ್ತರ ಕೂಡ ಕೊಟ್ಟಿದೆ. ಸರ್ಕಾರ ಕೊಟ್ಟಿರುವ ಉತ್ತರ ಮತ್ತು ನಡೆದಂಥ ಘಟನೆಗೆ ತುಂಬಾ ವ್ಯತ್ಯಾಸವಿದೆ. ಅದಕ್ಕಾಗಿ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳು ರಾಜ್ಯದಲ್ಲಿ ಪ್ರವೇಶ ಮಾಡುತ್ತಿರುವುದರ ಬಗ್ಗೆ ವಿರೋಧಿಸುವುದರ ಜೊತೆಗೆ ವಿರೋಧ ಪಕ್ಷಗಳು ಮತ್ತು ಸಂಘ ಸಂಸ್ಥೆಗಳು ಬಹುರಾಷ್ಟ್ರೀಯ ಸಂಸ್ಥೆಗಳ ವಿರುದ್ಧ ಮಾಡತಕ್ಕಂಥ ಹೋರಾಟವನ್ನು ದಮನ ಮಾಡತಕ್ಕಂಥ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಡಿ. ದೇವೇಗೌಡ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಸದಸ್ಯರು ಮಾತನಾಡುವಾಗ ಸುಳ್ಳು ಆರೋಪವನ್ನು ಮಾಡಲಾಗಿದೆಯೆಂದು ಹೇಳಿರುವುದರಿಂದ ಅದಕ್ಕಾಗಿ ನಾನು ಕ್ಲಾರಿಫಿಕೇಷನ್ ಕೊಡುತ್ತೇನೆ. ಯಾವ ಸೆಕ್ಷನ್ ಮೇಲೆ ಪೋಲೀಸ್ ಅಧಿಕಾರಿಗಳು ಕೇಸ್ ಹಾಕಿದ್ದಾರೋ ಅದಕ್ಕೆ ನನಗೆ ಸಂಬಂಧವಿಲ್ಲ. ಪೋಲೀಸ್ ಅಧಿಕಾರಿಗಳ ಹತ್ತಿರ ಏನೇನು ಎವಿಡೆನ್ಸ್ ಇದೆಯೋ ಅದರ ಮೇಲೆ ಅವರು ತನಿಖೆ ಮಾಡಿ ಕೋರ್ಟ್‌ಗೆ ಚಾರ್ಜ್‌ಶೀಟ್ ಕೊಡುವವರಿದ್ದಾರೆ. ಮೈಸೂರಿನಲ್ಲಿ ನಡೆದಂಥ ಘಟನೆ ಬಗ್ಗೆ ಮಾನ್ಯ ಸದಸ್ಯರು ಸೆಕ್ಷನ್ಸ್ ಎಲ್ಲಾ ಓದಿದರು. ಅದು ಕೂಡಾ ನನಗೆ ಸಂಬಂಧವಿಲ್ಲ, ನಾನು ಒಂದು ವಿಷಯವನ್ನು ಹೇಳುತ್ತೇನೆ. ಸರ್ವಾಧಿಕಾರಿ ಸರ್ಕಾರವನ್ನು ಯಾರೂ ಮಾಡುವುದಕ್ಕಾಗುವುದಿಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ಯಾರೂ ಸರ್ವಾಧಿಕಾರಿಗಳಾಗುವುದಕ್ಕೆ ಸಾಧ್ಯವಿಲ್ಲ. ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು

ಜನಕ್ಕೆ ಗೊತ್ತಿದೆ. ಈ ದೇಶದಲ್ಲಿ ಮಲ್ಟಿ ನ್ಯಾಷನಲ್ ಕಂಪನಿಗಳು ಬರಬೇಕೆಂದು ಈ ಮೊದಲು ಅವರು ಸ್ವಾಗತ ಮಾಡಿ ಈ ಸ್ವದೇಶದ ಸ್ಲೋಗನ್ ಹಿಡಿದುಕೊಂಡು ಹೊರಟಿದ್ದಾರೆ. ಈಗ ವಾಕ್‌ಔಟ್ ಮಾಡಿರುವ ಸ್ನೇಹಿತರ ನಾಯಕರೇ ಪಾರ್ಲಿಮೆಂಟ್‌ನಲ್ಲಿ ಮಾತನಾಡಿರುವ ಭಾಷಣದ ಪ್ರತಿಯನ್ನು ಬೇಕಾದರೆ ತರಿಸಿ ನೋಡಿ. ಅವರಿಗೆ ಈಗ ವಿಧಿ ಇಲ್ಲದ ಹಾಗಾಗಿದೆ. ಮೊದಲು ಹಿಂದುತ್ವ ಹಿಡಿದರು, ಆಮೇಲೆ ರಾಮನನ್ನು ಹಿಡಿದರು, ಈಗ ಸ್ವದೇಶಿ ಎಂದು ಹಿಡಿದಿದ್ದಾರೆ. ದೇಶದ ಜನರು ಇಂಥಾ ವಾಕ್‌ಔಟ್ ಗೌರವ ಕೊಡುವುದಿಲ್ಲ ಎನ್ನುವುದನ್ನು ಅರ್ಥ ಮಾಡಿಕೊಂಡರೆ ಒಳ್ಳೆಯದೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಈಗ ಬಿ.ಜೆ.ಪಿ. ಸದಸ್ಯರುಗಳು ವಾಕ್‌ಔಟ್ ಮಾಡಿದ್ದಾರೆ, ಆದರೆ ಅವರದೇ ಪಕ್ಷದ ಸರ್ಕಾರವಿರುವ ಮಹಾರಾಷ್ಟ್ರ, ಗುಜರಾತ್ ಮತ್ತು ರಾಜಾಸ್ಥಾನಗಳಲ್ಲಿ ಮಲ್ಟಿ ನ್ಯಾಷನಲ್ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡು ಕೈಗಾರಿಕೆಗಳನ್ನು ಮಾಡುತ್ತಿದ್ದಾರೆ. ಇಂಥಾ ಅಷಾಡಭೂತಿತನ ಏಕೆ? ನಿಜವಾದ ಆಸಕ್ತಿ ಇದ್ದರೆ ಮೊದಲು ಅಲ್ಲಿ ಹೇಳಲಿ. ಬಿ.ಜೆ.ಪಿ. ಯವರು ಮಕ್ಕಳು ಸಂಬಂಧಿಕರೆಲ್ಲಾ ನ್ಯೂಯಾರ್ಕ್, ಸ್ಟೇಟ್ಸ್‌ನಲ್ಲಿ ವ್ಯಾಪಾರ ಮಾಡುತ್ತಿದ್ದಾರೆ, ಅವರನ್ನೆಲ್ಲಾ ವಾಪಸ್ ಕರೆಸಿಕೊಂಡು ವ್ಯಾಪಾರವನ್ನು ನಿಲ್ಲಿಸಿಬಿಟ್ಟರೆ ಅವರು ನಿಜವಾಗಿ ಸತ್ಯವಂತರೆಂದು ಹೇಳಬಹುದು. ಅದು ಬಿಟ್ಟು ಬರೀ ರಾಜಕೀಯಕ್ಕಾಗಿ ಸ್ವದೇಶಿ ಮಾಡಿತಕ್ಕಂಥ ಅಷಾಡಭೂತಿ ನೀತಿಯನ್ನು ಬಿಟ್ಟು ಶುದ್ಧವಾದ ರಾಜಕಾರಣ ಮಾಡುವಂತ ನೀತಿಯನ್ನು ಇವರು ಅನುಸರಿಸಿದರೆ ನಾವೆಲ್ಲಾ ಒಪ್ಪಿಕೊಳ್ಳಬಹುದು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಡ್ವಾನಿಯವರು ಮತ್ತು ವಾಜಪೇಯಿಯವರು ಮೂರ್‍ನಾಲ್ಕು ವರ್ಷಗಳ ಹಿಂದೆ ಆರ್ಥಿಕ ನೀತಿ ಬಗ್ಗೆ ಚರ್ಚೆ ಮಾಡುವ ಸಂದರ್ಭದಲ್ಲಿ ಮಲ್ಟಿ ನ್ಯಾಷನಲ್ ಕಂಪನಿಗಳು ಭಾರತಕ್ಕೆ ಬರುವುದನ್ನು ಸ್ವಾಗತಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಬಹುರಾಷ್ಟ್ರೀಯ ಕಂಪನಿಯಾದ ಎನ್‌ರಾನ್ ಜೊತೆ ಹೊಂದಾಣಿಕೆ ಮಾಡಿಕೊಂಡು ಕೆಲಸ ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಈ ದೇಶದಲ್ಲಿ ಮಾನ್ಯ ನರಸಿಂಹರಾಯರ ನೇತೃತ್ವದಲ್ಲಿ ಆರ್ಥಿಕ ಹೊಸ ನೀತಿಯನ್ನು ಏನು ತಂದಿದ್ದಾರೋ ಅದನ್ನು ಎಲ್ಲರೂ ಸ್ವಾಗತ ಮಾಡಿದ್ದಾರೆ. ಅದರಲ್ಲಿ ಬಿ.ಜೆ.ಪಿ. ಪಕ್ಷ ಎಂದಾಗಲೀ ಕಮ್ಯುನಿಸ್ಟ್ ಪಕ್ಷ ಎಂದಾಗಲೀ ಇಲ್ಲ. ಪಶ್ಚಿಮ ಬಂಗಾಳದಲ್ಲೂ ಕೆಲವು ರಂಗಗಳಲ್ಲಿ ಖಾಸಗಿ ವಲಯದ ಉದ್ದಿಮೆದಾರರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಅಧ್ಯಕ್ಷರು : ಸನ್ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮತ್ತು ಇತರ ಸದಸ್ಯರುಗಳು ನಿಯಮ 60ರ ವ್ಯಾಪ್ತಿಯಲ್ಲಿ ಒಂದು ಸೂಚನೆಯನ್ನು ಏನು ಕೊಟ್ಟಿದ್ದರು ಆ ವಿಚಾರದಲ್ಲಿ ನನ್ನನ್ನು ಮನವರಿಕೆ ಮಾಡಲಿಕ್ಕೆ ಅವರು ಪ್ರಸ್ತಾವಿಕ ತಮ್ಮ ವಾದವನ್ನು ಮಂಡಿಸಿದ್ದಾರೆ. ಸರ್ಕಾರ ಕೂಡ ತನ್ನ ಉತ್ತರವನ್ನು ನೀಡಿದೆ. ಈ ಸದನದ ಇತಿಹಾಸದಲ್ಲಿ ಇದುವರೆವಿಗೂ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ವಿಚಾರದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶವನ್ನು ಯಾವಾಗಲೂ ಅವಕಾಶವನ್ನು ಕೊಟ್ಟಿಲ್ಲ. ತಾರೀಖು 20-12-1996 ಮತ್ತು 27-1-1970ರಲ್ಲಿ ಇಂಥಾದ್ದೇ ಸನ್ನಿವೇಶದಲ್ಲಿ ವಿಷಯ ಚರ್ಚೆಗೆ ಬಂದಾಗ, ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯವನ್ನು ಸೂಚಿಸಿ ಅದು ಚರ್ಚೆಯ ಹಂತದಲ್ಲಿದ್ದಾಗ ಇಂಥ ವಿಚಾರಗಳನ್ನು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸತಕ್ಕಂಥ ಹಂತದಲ್ಲೂ ಚರ್ಚೆ ಮಾಡಬಹುದೆಂದು ಉಲ್ಲೇಖ ಮಾಡಿ ನನ್ನ ಹಿಂದೆ ಇದ್ದಂಥ ಆಗಿನ ಸಭಾಧ್ಯಕ್ಷರುಗಳು ನಿರ್ಣಯ ಕೊಟ್ಟು ಇದಕ್ಕೆ ಅನುಮತಿಯನ್ನು ನಿರಾಕರಿಸಿರುವುದರಿಂದ ನಾನೂ ಸಹ ಈಗ ಇದಕ್ಕೆ

ಅನುಮತಿಯನ್ನು ನಿರಾಕರಿಸುತ್ತಿದ್ದೇನೆ. ಈಗ ಈ ಸಭೆಯನ್ನು ಮುಂದೂಡಲಾಗಿದೆ. ಪುನಃ ಮೂರಾವರೆ ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವನ್ನು 2.20 ಗಂಟೆ ಸಂದರ್ಭದಲ್ಲಿ ಮುಂದೂಡಲಾಯಿತು)

(ಸಭೆ ಮಧ್ಯಾಹ್ನ 3 ಗಂಟೆ 50 ನಿಮಿಷಕ್ಕೆ ಪ್ರಾರಂಭವಾಯಿತು)

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಿಯಮ 351ರ ಮೇರೆಗೆ

(1) ರಾಜ್ಯ ಸರ್ಕಾರ ಮೋಟಾರು ವಾಹನಗಳ ಮೇಲೆ ವಿಧಿಸಿದ ಜೀವಮಾನ ತೆರಿಗೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪಸಭಾಧ್ಯಕ್ಷರೆ, ರಾಜ್ಯ ಸರ್ಕಾರ ಜಾರಿಗೆ ತಂದ ಮೋಟಾರು ವಾಹನಗಳ ಮೇಲೆ ವಿಧಿಸಿದ ಜೀಮಾನ ತೆರಿಗೆ (ಲೈಫ್ ಟ್ಯಾಕ್ಸ್) ಕಟ್ಟಲು ಕೊನೆಯ ದಿನಾಂಕ 15.3.1996 ಎಂದು ಎಲ್ಲಾ ಕಡೆ ಪ್ರಕಟಣೆಗಳನ್ನು ನೀಡಲಾಗಿದೆ. ಸ್ವ ಉದ್ಯೋಗ ಯೋಜನೆಯ ಅನ್ವಯ ಆರ್ಥಿಕವಾಗಿ ಹಿಂದುಳಿದವರು ಬ್ಯಾಂಕ್ ಸಾಲ ಪಡೆದು ರಿಕ್ಷಾ, ಮ್ಯಾಕ್ಸಿ ಕ್ಯಾಬ್, ಟೂರಿಸ್ಟ್ ಟ್ಯಾಕ್ಸಿಗಳನ್ನು ನಡೆಸುವವರಿಗೆ ಈ ಜೀವಮಾನ ತೆರಿಗೆ ಕಟ್ಟಲು ಮತ್ತೆ ಸಾಲ ಮಾಡಬೇಕಾಗುವಂತಹ ನಿಕೃಷ್ಟ ಪರಿಸ್ಥಿತಿ ಬಂದಿದೆ. ಆದುದರಿಂದ ಈ ದುಡಿಯುವ ವರ್ಗದವರು ಅನುಭವಿಸಬೇಕಾಗಿರುವ ತೊಂದರೆ, ಕಷ್ಟ ನಷ್ಟಗಳಿಂದಾಗಿ ಸರ್ಕಾರ ಈ ಬಗ್ಗೆ ಏನಾದರೂ ರಿಯಾಯಿತಿಯನ್ನು ಪ್ರಕಟಿಸಬೇಕು, ಇಲ್ಲವೇ ಕನಿಷ್ಠ ಇನ್ನೊಂದು ವರ್ಷಕ್ಕಾದರೂ (ದ್ವಿಚಕ್ರ ವಾಹನ ಸಹಿತ) ಈ ಜೀವಮಾನ ತೆರಿಗೆಯನ್ನು ಕಟ್ಟುವ ದಿನಾಂಕವನ್ನು ಮುಂದುವರಿಸಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಉಪಸಭಾಧ್ಯಕ್ಷರೆ ತಮ್ಮ ಅನುಮತಿ ಪಡೆದು ಈ ಹೇಳಿಕೆಯನ್ನು ಸಭೆಯ ಮುಂದೆ ನೀಡಬಯಸುತ್ತೇನೆ.

ಕರ್ನಾಟಕ ಸರ್ಕಾರವು ಕರ್ನಾಟಕ ಕಾಯ್ದೆ 7:95ಅನ್ನು ದಿನಾಂಕ : 1-4-1995ರಿಂದ ಜಾರಿಗೆ ಬರುವಂತೆ ಮೋಟಾರು ಕಾರು, ಜೀಪ್ ಮತ್ತು ಆಟೋರಿಕ್ಷಾ ವಾಹನಗಳಿಗೆ ಜೀವಾವಧಿ, ತೆರಿಗೆಯನ್ನು ವಿಧಿಸಲಾಗುತ್ತಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಜೀವಾವಧಿ ತೆರಿಗೆಯ ಹೊರೆ ಜಾಸ್ತಿಯಾಗಬಾರದೆಂದು ಮತ್ತು ಸಂಘ - ಸಂಸ್ಥೆಗಳ ಮನವಿಯನ್ನು ಪರಿಗಣಿಸಿ ಭಾಗ-ಎ4 ಮತ್ತು ಭಾಗ ಎ5ನಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯನ್ನು ಎರಡು ಕಂತುಗಳಲ್ಲಿ ದಿನಾಂಕ 15-3-1996ರ ಒಳಗಾಗಿ ಪಾವತಿಸಲು ಸರ್ಕಾರವು ಅಧಿಸೂಚನೆ ಸಂಖ್ಯೆ :ಹೆಚ್‌ಟಿಡಿ : 28 : ಟಿಎಂಆರ್ 95 (11) ದಿನಾಂಕ : 21-4-1995ರಂದು ಈ ಅಧಿಸೂಚನೆಯಲ್ಲಿ ಮೊದಲ ಕಂತು ಪಾವತಿಸಿದ ನಂತರ ಎರಡನೆಯ ಕಂತನ್ನು ಪಾವತಿಸಲು 6 ತಿಂಗಳ ಅವಧಿಯನ್ನು ನೀಡಲಾಗಿದೆ. ಈ ಅಧಿಸೂಚನೆಯ ಸೌಲಭ್ಯವನ್ನು ಎಲ್ಲಾ ಮಾಲೀಕರು ಪಡೆದುಕೊಂಡಿರುತ್ತಾರೆ. ಈಗಾಗಲೇ ಹನ್ನೊಂದು ತಿಂಗಳು ಮುಗಿಯುತ್ತಾ ಬಂದಿದ್ದು ಸಾಕಷ್ಟು ಮಾಲೀಕರು ತೆರಿಗೆಯನ್ನು ಪಾವತಿಸಿರುತ್ತಾರೆ.

ಶ್ರೀ ಕುಂಬ್ಳೆ ಸುಂದರರಾವ್ ಮತ್ತು ಶ್ರೀ ಯು.ಆರ್. ಸಭಾಪತಿ, ವಿಧಾನ ಸಭಾ ಸದಸ್ಯರುಗಳು ಮಂಡಿಸಿರುವ ವಿಷಯದ ಬಗ್ಗೆ ವಾಹನ ಮಾಲೀಕರ ಸಮಸ್ಯೆಗಳನ್ನು ಗಮನದಲ್ಲಿ ಇಟ್ಟುಕೊಂಡು ಈಗಾಗಲೇ ಸಾರ್ವಜನಿಕ ಹಿತದೃಷ್ಟಿಯಿಂದ ಎರಡು ಕಂತುಗಳಲ್ಲಿ ತೆರಿಗೆ ಪಾವತಿಸಲು ಅನುಕೂಲ ಮಾಡಿಕೊಟ್ಟಿರುತ್ತದೆ. ಆದ್ದರಿಂದ

ಇನ್ನೂ ಒಂದು ವರ್ಷದ ಅವಧಿಯನ್ನು ವಿಸ್ತರಿಸುವುದು ರಾಜ್ಯದ ಆರ್ಥಿಕ ಹಿತದೃಷ್ಟಿಯಿಂದ ಸೂಕ್ತವಲ್ಲವೆಂದು ಹೇಳಬಯಸುತ್ತೇನೆ.

(2) ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್‌ನ ಕಾರ್ಮಿಕರ ಸಮಸ್ಯೆಗಳು

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಸಭಾಧ್ಯಕ್ಷರೆ, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ ಆಡಳಿತ ವರ್ಗವು ತನ್ನ ಖರೀದಿ ಆದೇಶ - ಸಂಖ್ಯೆ 741 ದಿನಾಂಕ 16.10.95ರಂದು ಮೆ : ಗಾರ್ಡ್‌ನರ್ ಸ್ಮಿತ್ ಪ್ರೈ ಲಿ. ರವರಿಗೆ 400 ಮೆಟ್ರಿಕ್ ಟನ್ ಪಾಮ್ ಫ್ಯಾಟಿ ಆಸಿಡ್ ಎಣ್ಣೆಯ ಸರಬರಾಜಿಗೆ ಆದೇಶ ಕೊಟ್ಟಿದ್ದು ಇದುವರೆವಿಗೂ 298 ಟನ್ ಮಾತ್ರ ಕಾರ್ಖಾನೆಗೆ ಎಣ್ಣೆಯ ಸರಬರಾಜಾಗಿದ್ದು, 102 ಟನ್ ಕಡಿಮೆ ಸರಬರಾಜಾಗಿರುತ್ತದೆ. ಇದರಿಂದಾಗಿ ಈಗಾಗಲೇ ನಷ್ಟ ಅನುಭವಿಸಿ ಪುನಶ್ಚೇತನಗೊಳ್ಳುವ ಪ್ರಯತ್ನ ಮಾಡುತ್ತಿರುವ ಈ ಕಾರ್ಖಾನೆಗೆ 35 ಲಕ್ಷ ರೂ. ನಷ್ಟು ಉಂಟಾಗಿದೆ. ಈ ಪ್ರಕರಣವನ್ನು ಆಡಳಿತ ವರ್ಗ ಒಪ್ಪಿಕೊಂಡಿದ್ದರೂ ಸಹ ಈ ಮೊತ್ತವನ್ನು ಸರಬರಾಜುದಾರರಿಂದ ವಾಪಸ್ಸು ಪಡೆಯಲು ಪ್ರಯತ್ನ ಮಾಡಿರುವುದಿಲ್ಲ. ಇದರಿಂದ ಕಾರ್ಖಾನೆಯ ಉಳಿವಿಗಾಗಿ ಪಣ ತೊಟ್ಟಿರುವ ನೌಕರರು ತೀವ್ರವಾಗಿ ಅಸಮಾಧಾನಗೊಂಡಿದ್ದಾರೆ. ಇದೇ ರೀತಿ 6.2.96ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಕೆ.ಎಸ್.ಡಿ.ಎಲ್ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಲು ಸರ್ಕಾರ ಪ್ರಯತ್ನಿಸಿರುವುದಾಗಿ ಮಾನ್ಯ ಕೈಗಾರಿಕಾ ಸಚಿವರ ಹೇಳಿಕೆ ಪ್ರಕಟವಾಗಿದೆ. ಕಾರ್ಖಾನೆಯಲ್ಲಿ ಅನಾರೋಗ್ಯಕರ ವಾತಾವರಣಕ್ಕೆ ಕಾರಣವಾಗಿರುವ ವ್ಯಾಪಕ ಭ್ರಷ್ಟಾಚಾರ ಹಾಗೂ ಖಾಸಗೀಕರಣದ ಬಗ್ಗೆ ಕೈಗಾರಿಕಾ ಸಚಿವರ ಹೇಳಿಕೆಯಿಂದ ಕಾರ್ಖಾನೆಯ ಸಹಸ್ರಾರು ಕಾರ್ಮಿಕರು ಚಿಂತೆಗೀಡಾಗಿರುವುದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಮಾನ್ಯ ಭಾರೀ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಪರವಾಗಿ) : ಉತ್ತರವನ್ನು ನಂತರ ಒದಗಿಸಲಾಗುವುದು

(3) ಅರಕಲಗೂಡು ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ಅಭಾವದ ಬಗ್ಗೆ

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪ ಸಭಾಧ್ಯಕ್ಷರೆ, ಅರಕಲಗೂಡು ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿದ್ದುದರಿಂದ, ಅಭಿವೃದ್ಧಿಪಡಿಸುವ ಯೋಜನೆಯ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಆದದ್ದು ಯಾವಾಗ? ಈಗ ಯಾವ ಹಂತದಲ್ಲಿದೆ ಮತ್ತು ಕುಡಿಯುವ ನೀರಿನ ಅಭಾವವನ್ನು ನಿವಾರಿಸಲು ಇನ್ನೆಷ್ಟು ದಿಬಸಗಳಲ್ಲಿ ಅಭಿವೃದ್ಧಿ ಯೋಜನೆಯನ್ನು ಪೂರ್ಣಗೊಳಿಸಲಾಗುತ್ತದೆಂದು ತಿಳಿಸಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಸದನದ ಮುಂದೆ ನೀಡಬಯಸುತ್ತೇನೆ.

ಅಧ್ಯಕ್ಷರೇ,

ಹಾಸನ ಜಿಲ್ಲೆ ಅರಕಲಗೂಡು ಮಧ್ಯಂತರ ಮಂಡಲಗಳಲ್ಲಿ ಒಂದಾಗಿದ್ದು, ಅಲ್ಲಿರುವ ಹಾಲಿ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಪುನಶ್ಚೇತನಗೊಳಿಸುವುದಕ್ಕೆ ತಯಾರಿಸಲಾದ ರೂ. 45.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರಿ ಆದೇಶ ಸಂಖ್ಯೆ. ಆರ್‌ಡಿಪಿ : 849 ಆರ್‌ಡಬ್ಲ್ಯೂಎಸ್(3) 92 ದಿನಾಂಕ : 4-6-92ರಲ್ಲಿ ನೀಡಲಾಗಿದೆ. ಈ ಅಂದಾಜು ಪಟ್ಟಿಗೆ ಪ್ರಧಾನ

ಇಂಜಿನಿಯರ್, ಸಾರ್ವಜನಿಕ ಆರೋಗ್ಯ ತಾಂತ್ರಿಕ ವಲಯ ಇವರು ತಾಂತ್ರಿಕ ಮಂಜೂರಾತಿಯನ್ನು 3-1-93ರಂದು ನೀಡಿದ್ದಾರೆ.

ಪ್ರಧಾನ ಇಂಜಿನಿಯರ್ ಈ ಯೋಜನೆಯ ಕಾಮಗಾರಿಯನ್ನು ಪರಿಶೀಲಿಸಿ, ಈ ಯೋಜನೆಯಡಿಯಲ್ಲಿ ಹಾಲಿ ಇರುವ ಶುದ್ಧೀಕರಣ ಘಟಕವನ್ನು ಉತ್ತಮಪಡಿಸಲು ಅವಕಾಶ ಇಲ್ಲದಿರುವುದನ್ನು ಕಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಶುದ್ಧೀಕರಣ ಘಟಕದ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೆಂದು ಮತ್ತು ವಿತರಣೆ ಕೊಳವೆಯ ವಿನ್ಯಾಸವನ್ನು ಇನ್ನೊಮ್ಮೆ ಪರಿಶೀಲಿಸಬೇಕೆಂದು ಆದೇಶಿಸಿದರು. ಅದರಂತೆ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 67.00 ಲಕ್ಷಕ್ಕೆ ಪರಿಷ್ಕರಿಸಲಾಗಿದೆ. ಈ ಪರಿಷ್ಕೃತ ಅಂದಾಜು ಪಟ್ಟಿಯನ್ನು ಪ್ರಧಾನ ಇಂಜಿನಿಯರ್, ಸಾರ್ವಜನಿಕ ಆರೋಗ್ಯ ತಾಂತ್ರಿಕ ವಲಯ ಇವರು ಪರಿಶೀಲಿಸಿದ್ದು ಅದರಲ್ಲಿ ಕೆಲವು ಮಾರ್ಪಾಡು ಮಾಡಲು ಅಧೀಕ್ಷಕ ಅಭಿಯಂತರರು, ಮೈಸೂರು ಇವರಿಗೆ ಕಳುಹಿಸಲಾಗಿದೆ. ಈ ಅಂದಾಜು ಪಟ್ಟಿಗೆ ಬೇಗನೆ ಸರ್ಕಾರದ ವತಿಯಿಂದ ಪರಿಷ್ಕೃತ ಆಡಳಿತಾತ್ಮಕ ಮಂಜೂರಾತಿ ಮತ್ತು ನಂತರ ಪ್ರಧಾನ ಇಂಜಿನಿಯರ್‌ರವರಿಂದ ತಾಂತ್ರಿಕ ಮಂಜೂರಾತಿಯನ್ನು ನೀಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(4) ಕಳ್ಳಂಬೆಳ್ಳ ಕ್ಷೇತ್ರದ ವ್ಯಾಪ್ತಿಯಲ್ಲಿ ನಿವೇಶನಗಳ ಹಂಚಿಕೆ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಸಭಾಧ್ಯಕ್ಷರೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಿರಾ ತಾಲ್ಲೂಕ್, ಕಳ್ಳಂಬೆಳ್ಳ ಹೋಬಳಿ ಹಾಲೀನಹಳ್ಳಿ ಗ್ರಾಮದ ಸರ್ವೆ ನಂ. 13 (ಅಜ್ಜೇನಹಳ್ಳಿ ಕಾಲೋನಿ) ರಲ್ಲಿ ನಿವೇಶನಗಳನ್ನು ವಿಂಗಡಿಸಿದ್ದು ಸದರಿ ನಿವೇಶನಗಳನ್ನು ಅರ್ಹರಲ್ಲದವರಿಗೆ ಮಂಡಲ್ ಪಂಚಾಯಿತಿ ಮತ್ತು ಗ್ರಾಮೀಣ ಪಂಚಾಯಿತಿಯವರು ಹಕ್ಕು ಪತ್ರವನ್ನು ನೀಡಿದ್ದರು. ಅರ್ಹರಲ್ಲದವರಿಗೆ ನೀಡಿರುವುದನ್ನು ಪ್ರಶ್ನಿಸಿ ತುಮಕೂರು ಜಿಲ್ಲಾಪರಿಷತ್ ಮುಖ್ಯ ಕಾರ್ಯದರ್ಶಿಯವರಿಗೆ ಅರ್ಜಿಯನ್ನು ಸಾರ್ವಜನಿಕರು ಸಲ್ಲಿಸಿದಾಗ ಮುಖ್ಯ ಕಾರ್ಯದರ್ಶಿಯವರು ಸ್ಥಳ ಪರಿಶೀಲಿಸಿ ಕೂಲಂಕುಷವಾದ ತನಿಖೆಯನ್ನು ನಡೆಸಿ, ಅರ್ಹರಲ್ಲದವರಿಗೆ ಹಕ್ಕು ಪತ್ರ ನೀಡಿರುತ್ತಾರೆಂದು ತಿಳಿದು ಎಲ್ಲಾವನ್ನು ವಜಾಗೊಳಿಸಿ, ಆಶ್ರಯ ಸಮಿತಿಗೆ ವಿತರಿಸುವಂತೆ ತಿಳಿಸಿದ್ದರು. ಸದರಿ ನಿವೇಶನಗಳು ರಾಷ್ಟ್ರೀಯ ಹೆದ್ದಾರಿ ನಂ (4)ರಲ್ಲಿದ್ದು ಬಹಳ ಬೆಲೆ ಬಾಳುವ ನಿವೇಶನಗಳಾಗಿರುವುದರಿಂದ ಶಿರಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲಾ ನೀತಿ ನಿಯಮಗಳನ್ನು ಉಲ್ಲಂಘನೆ ಮಾಡಿ ತಮ್ಮ ಮನಸ್ಸಿಗೆ ಬಂದಂತೆ, ಅರ್ಹರಲ್ಲದವರಿಗೆ ದಿನಾಂಕ 14.2.96ರಂದು ಹಕ್ಕು ಪತ್ರವನ್ನು ವಿತರಿಸಿರುತ್ತಾರೆ. ಹಕ್ಕು ಪತ್ರಗಳನ್ನು ತಮಗೆ ಬೇಕಾದವರಿಗೆ ವಿತರಿಸಿರುತ್ತಾರೆ ಮತ್ತು ತಾಲ್ಲೂಕ್ ಪಂಚಾಯಿತಿ ಸಮಿತಿಯ ಮುಂದೆಯು ಸಹ ತಂದಿರುವುದಿಲ್ಲ. ಆದ್ದರಿಂದ ಕೂಡಲೇ ತಡೆಯಾಜ್ಞೆ ನೀಡಿ ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ರೆಡ್ಡಿ (ವಸತಿ ರಾಜ್ಯ ಸಚಿವರು) :

ಅಧ್ಯಕ್ಷರೇ,

ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿ, ಕಳ್ಳಂಬೆಳ್ಳ ಗ್ರಾಮ ಪಂಚಾಯತ್, ಹಾಲೇನಹಳ್ಳಿ ಗ್ರಾಮದ ಸರ್ವೆ ನಂ. 143ರಲ್ಲಿ 1972ರ ಸಾಲಿನಲ್ಲಿ 172 ನಿವೇಶನಗಳನ್ನು ಮತ್ತು 1984ರಲ್ಲಿ 128 ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ನಿವೇಶನ ಹಂಚಿರುತ್ತಾರೆ. ಈ ಪೈಕಿ 1972ರಲ್ಲಿ ನೀಡಲಾದ 71 ನಿವೇಶನಗಳು ಹಾಗೂ ತದನಂತರ ನೀಡಲಾದ 27 ನಿವೇಶನಗಳು ಒಟ್ಟು 98 ಫಲಾನುಭವಿಗಳಿಗೆ ನಿವೇಶನ ನೀಡಲಾದ ಜಾಗದಲ್ಲಿ ಮನೆ ಕಟ್ಟಿಲ್ಲದ ಪ್ರಯುಕ್ತ

ದಿನಾಂಕ : 12-7-89ರಂದು ಅಂದಿನ ಮಂಡಲ ಪಂಚಾಯತ್ ಈ ಮಂಜೂರಾತಿಯನ್ನು ರದ್ದುಪಡಿಸಿ ಪುನಃ ಹೊಸದಾಗಿ 79 ಫಲಾನುಭವಿಗಳಿಗೆ ಮಂಡಲ ಪಂಚಾಯತಿ ಹಕ್ಕುಪತ್ರ ನೀಡಿರುತ್ತಾರೆ. ಈ ಬಗ್ಗೆ ಮಂಡಲ ಪಂಚಾಯತಿ ಯಾವುದೇ ನಿಯಮಾವಳಿಗಳನ್ನು ಪಾಲಿಸದೇ ಇದ್ದ ಪ್ರಯುಕ್ತ ದಿನಾಂಕ 20-10-93ರಲ್ಲಿ ತುಮಕೂರು ಜಿಲ್ಲಾ ಪಂಚಾಯತ್ ಹಕ್ಕುಪತ್ರಗಳ ನಡವಳಿಕೆಗಳನ್ನು ರದ್ದುಪಡಿಸಿದ್ದು ಅಲ್ಲದೇ ಅಂದಿನ ಆಶ್ರಯ ಯೋಜನೆ ನಿಯಮಾವಳಿಗಳ ಪ್ರಕಾರ ಹಂಚಲು ಸೂಚಿಸಿದ ಮೇರೆಗೆ ಈ 79 ಫಲಾನುಭವಿಗಳ ಪೈಕಿ 32 ಜನ ಮನೆಗಳನ್ನು ನಿರ್ಮಾಣ ಮಾಡಿದ್ದರಿಂದ ಇವರನ್ನು ಹೊರತುಪಡಿಸಿ ಉಳಿಕೆ ಎಲ್ಲಾ ಮಂಜೂರಾತಿಯನ್ನು ರದ್ದುಪಡಿಸಲಾಗಿತ್ತು.

1995-96ನೇ ಸಾಲಿನ ಇಂದಿರಾ ಅವಾಜ್ ಯೋಜನೆಯಡಿಯಲ್ಲಿ ಕೆಳಕಾಣಿಸಿದ 5 ಜನ ಫಲಾನುಭವಿಗಳ ಹೆಸರು ಸೇರ್ಪಡೆಯಾಗಿದ್ದರಿಂದ, ಅಲ್ಲದೆ ಈ ಐವರು ನಾಲ್ಕೈದು ವರ್ಷಗಳಿಂದ ಈಗ ಮಂಜೂರಾಗಿರುವ ನಿವೇಶನಗಳಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದರು ಎಂದು ದಿನಾಂಕ : 14-2-96ರಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಹಕ್ಕುಪತ್ರ ನೀಡಿದ್ದಾರೆ.

1)	ರಾಮಚಂದ್ರಯ ತಂದೆ ತಿಮ್ಮಯ್ಯ ಬೋವಿ	ಎಸ್.ಸಿ
2)	ರಂಗನಾಥ ತಂದೆ ಗೋವಿಂದಪ್ಪ, ಬೋವಿ	ಎಸ್.ಸಿ
3)	ರಾಜಪ್ಪ ತಂದೆ ರಂಗಯ್ಯ	ಎಸ್.ಸಿ.
4)	ಓಬಳಮ್ಮ ಗಂಡ ಓಬಳಯ್ಯ	ಎಸ್.ಸಿ.
5)	ಚಿತ್ತಯ್ಯ ಪುರಫ್, ಹೊಂಬಳೇಗೌಡ ತಂದೆ ಚಿತ್ರಪ್ಪಗೊಲ್ಲರು (ಅಜೇನಹಳ್ಳಿ ಗೊಲ್ಲರಹಟ್ಟಿ ಗ್ರಾಮಟಾಣ)	

ಈ ನಿವೇಶನ ಹಂಚಿಕೆ ಸಂಬಂಧಪಟ್ಟ ಗ್ರಾಮದಲ್ಲಿ ಮಹಾಜರು ನಡಿಸಿ ನಿವೇಶನ ಹಂಚಿಕೆ ಮಾಡಲಾಗಿದೆ. ಈ ಬಗ್ಗೆ ತಾಲ್ಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಅನುಮೋದನೆ ನೀಡಿರುವುದಿಲ್ಲ, ಕೇವಲ ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಆದೇಶಾನುಸಾರ ಕಾರ್ಯನಿರ್ವಾಹಕ ಅಧಿಕಾರಿಯವರು ದಿನಾಂಕ : 14-2-96ರಂದು ನಿವೇಶನ ಹಕ್ಕುಪತ್ರಗಳನ್ನು ನೀಡಿರುತ್ತಾರೆ. ಈ ಬಗ್ಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಕೂಡಲೇ ಖುದ್ದು ಸ್ಥಳ ತನಿಖೆ ನಡೆಸಿ ಹಂಚಿಕೆ ನಿಯಮಗಳು ಹಾಗೂ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ಅನ್ವಯ ಸೂಕ್ತ ಕ್ರಮ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದಾರೆ.

(5) ಕುಂದಾಪುರ ಕ್ಷೇತ್ರದ ಹುಣ್ಸಮಕ್ಕಿ ಬೇಳೂರು ರಸ್ತೆಯ ಟೆಂಡರ್ ಕುರಿತು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಕುಂದಾಪುರ ಕ್ಷೇತ್ರದ ಹುಣ್ಸಮಕ್ಕಿ ಬೇಳೂರು ರಸ್ತೆ ಕಳೆದ ವರ್ಷ ಟೆಂಡರಿನಲ್ಲಿ ಮಾಡಲಾದ ಟಾರು ರಸ್ತೆ ಈ ವರ್ಷ ಹಾಳಾಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದೆ. ಈ ಬಗ್ಗೆ ತನಿಖೆ ನಡೆಸುವುದರೊಂದಿಗೆ ಸರಿಪಡಿಸುವ ವ್ಯವಸ್ಥೆ ಮಾಡಬೇಕಾಗಿ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಹುಣ್ಸಮಕ್ಕಿ ಬೇಳೂರು ರಸ್ತೆಯನ್ನು 1992-93ನೇ ಸಾಲಿನಲ್ಲಿ ಜಿಲ್ಲಾಪರಿಷತ್ತಿನ ಮುಖ್ಯ ರಸ್ತೆಯನ್ನಾಗಿ ಮೈದರಗಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಲಾಗಿದೆ. ಈ ರಸ್ತೆಯು ಉದ್ದ 13 ಕಿ.ಮೀ. ಇದ್ದು 2.37

ಕಿ.ಮೀ. ರಸ್ತೆ ಡಾಂಬರೀ ರಸ್ತೆ, 3.4 ಕಿ.ಮೀ. ಜೆಲ್ಲಿ ರಸ್ತೆ ಹಾಗೂ 7.20 ಕಿ.ಮೀ. ಉದ್ದ ಮಣ್ಣಿನ ರಸ್ತೆಯಾಗಿದೆ. 1994-95ನೇ ಸಾಲಿನಲ್ಲಿ ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ 1.6 ಕಿ.ಮೀ. ಉದ್ದಕ್ಕೆ ಡಾಂಬರೀಕರಣ ಮಾಡಲಾಯಿತು. ಇದರಲ್ಲಿ ಸುಮಾರು 50 ಮೀಟರ್ ಉದ್ದಕ್ಕೆ ರಸ್ತೆಯು ಮಳೆಗಾಲದಲ್ಲಿ ಕುಸಿದಿದ್ದು ಆ ಭಾಗವನ್ನು ಶಕ್ತಿಯುತವಾಗಿ ಮಾಡಲಾಗುತ್ತದೆ. 1995-96ನೇ ಸಾಲಿನಲ್ಲಿಯೂ ಈ ರಸ್ತೆಯ ಆಯ್ದ ಭಾಗಗಳಲ್ಲಿ ಜಲ್ಲಿ ಹಾಕಿ ಡಾಂಬೀಕರಣ ಮಾಡಲು ಸುಮಾರು ಆರು ಲಕ್ಷ ರೂಪಾಯಿಗಳ ಅಂದಾಜಿಗೆ ಮಂಜೂರಾತಿ ನೀಡಿದ್ದು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಕಾಮಗಾರಿಯನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲಾಗಿದೆ.

(6) ಸರ್ವಜ್ಞನ ಜನ್ಮಸ್ಥಳ ಅಬಲೂರಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು

ಶ್ರೀ ಯು.ಬಿ. ಬಣಕಾರ್ : ಸನ್ಮಾನ್ಯ ಅಧ್ಯಕ್ಷರೇ, ಸರ್ವಜ್ಞನ ಜನ್ಮ ಸ್ಥಳವಾದ ಹಿರೇಕೆರೂರ ತಾಲ್ಲೂಕು ಅಬಲೂರಿನಲ್ಲಿ ಹಿಂದಿನ ಸರಕಾರ 2 ಹಂತದ ಕೆಲಸಗಳನ್ನು ಹಮ್ಮಿಕ್ಕೊಳ್ಳಲಾಗಿತ್ತು. ಅದರಲ್ಲಿ 1ನೇ ಹಂತದ ಕೆಲಸ ಹಿರೇಕೆರೂರ ಅಬಲೂರ, ಕೋಡ ರಸ್ತೆಯನ್ನು ಮೆಟಲಿಂಗ್ ಮಾಡಿ ಅಗಲ ಮಾಡುವುದು. ಈಗ ಮುಗಿಸಿದೆ. ಆದರೆ 2ನೇ ಹಂತದ ಕೆಲಸವಾದ ಡಾಂಬರೀಕರಣ ಇನ್ನೂ ಪ್ರಾರಂಭವಾಗಿಲ್ಲ. ಈಗ ಮಾಡಿದ ಮೆಟಲಿಂಗ್ ರಸ್ತೆ ಕಿತ್ತು ಹೋಗುತ್ತಿದೆ ಕಾರಣ ಬೇಗನೆ ಡಾಂಬರೀಕರಣದ ಕೆಲಸ ಪ್ರಾರಂಭ ಮಾಡಲು ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಉತ್ತರಗಳನ್ನು ನಂತರ ಒದಗಿಸಲಾಗುವುದು.

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗ್ಗಳು ಪ್ರಸ್ತಾವನೆಯನ್ನು ಮಂಡಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾವು ಮೊನ್ನೆ ಬಿಸನೆಸ್ ಅಡ್ವೈಸರಿ ಕಮಿಟಿ ಸೇರಿದಾಗ ಇದೇನು ಪ್ರಸ್ತಾಪ ಆಗಿರಲಿಲ್ಲ. ಮತ್ತು ಇದರ ಬಗ್ಗೆ ನಮ್ಮಲ್ಲಿ ಮಾಹಿತಿ ಇಲ್ಲ ಏಕೆಂದರೆ ಇವೊತ್ತೆ ನೀವು ಕನ್ಸಿಡರೇಶನ್‌ಗೂ ತೆಗೆದುಕೊಳ್ಳುತ್ತಿದ್ದೀರಿ.

ಉಪಾಧ್ಯಕ್ಷರು : ಇಲ್ಲ ಇವೊತ್ತು ಕನ್ಸಿಡರೇಶನ್‌ಗೆ ತೆಗೆದುಕೊಳ್ಳುವುದಿಲ್ಲ, ಇವೊತ್ತು ಮಂಡನೆ ಅಷ್ಟೆ.

ಶಾಸನ ರಚನಾ ಕಾರ್ಯಕಲಾಪಗಳು

ಎ) ವಿಧೇಯಕ ಮಂಡನೆ

ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕ, 1996

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವನೆ ಏನೆಂದರೆ :

"1996ನೇ ಸಾಲಿನ ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಸಲಾಗಿದೆ.

ಉಪಾಧ್ಯಕ್ಷರು : ಕಂದಾಯ ಸಚಿವರು ಪರ್ಯಾಲೋಚನಾ ಪ್ರಸ್ತಾವವನ್ನು ಈ ಸಭೆಯಲ್ಲಿ ಮಂಡಿಸುವುದು.

ಬಿ) ಪರ್ಯಾಲೋಚನಾ ಪ್ರಸ್ತಾವ

(1) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1996

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ ಕಳೆದ ಅಧಿವೇಶನದಲ್ಲಿ ಕೆಲವು ಬದಲಾವಣೆಗಳನ್ನು ಈ ಒಂದು ಲ್ಯಾಂಡ್ ರಿಫಾರ್ಮ್ಸ್‌ಗೆ ತಂದು ಅನುಮೋದನೆಯನ್ನು ಪಡೆದುಕೊಂಡಿದ್ದೇವೆ. ಅದರಲ್ಲಿ ಸೆಕ್ಷನ್ 109 ಒಂದು (ಎ) ಬಹಳ ಹೆಚ್ಚಿನ ಅಧಿಕಾರವನ್ನು ಸರ್ಕಾರ ತೆಗೆದುಕೊಂಡಿದೆ ಎಂದು ಹೇಳಿ ನಮ್ಮ ಮಾನ್ಯ ಕೆಲವು ಸದಸ್ಯರು ಸದನದ ಹೊರಗಡೆ ಮತ್ತು ಒಳಗಡೆ ಕೂಡ ಹೇಳಿರುವ ಟೀಕೆಗಳು ಬಂದಿವೆ ಮತ್ತು ಬೇರೆ ಮೂಲಗಳು ಕೂಡ ಕೆಲವು ಟೀಕೆಗಳು ಮಾಡಿದ ಮೇಲೆ ನಾವು ಇದಕ್ಕೆ Subject to the Town and country planning Act, ಒಂದು ಸಣ್ಣ ಆರ್ಡಿನನ್ಸ್‌ನ್ನು ತಂದಿದ್ದೇವೆ. ಆ ಆರ್ಡಿನನ್ಸ್‌ನ್ನು ಇವೊತ್ತು ಬಿಲ್ಲಿನ ರೂಪವಾಗಿ ಇಲ್ಲಿ ಮಂಡಿಸಿದ್ದೇವೆ. ತಾವು ದಯಮಾಡಿ ಒಪ್ಪಿಕೊಳ್ಳಬೇಕೆಂದು ನಾನು ತಮ್ಮೆಲ್ಲರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಕರ್ನಾಟಕ ಭೂಸುಧಾರಣೆಗಳ ಕಾನೂನಿನ (ತಿದ್ದುಪಡಿ) ವಿಧೇಯಕದ ಒಪ್ಪಿಗೆಗೆ ಏನು ನಮ್ಮ ರಾಜ್ಯಪಾಲರಿಗೆ ಕಳುಹಿಸಿದ್ದೀರಲ್ಲ, ಅವರು ಒಪ್ಪಿಗೆ ಕೊಡತಕ್ಕಂಥ ಕಾಲದಲ್ಲಿ ಏನು ಕಂಡಿಷನ್ ಹಾಕಿದ್ದಾರೆ ಅದನ್ನು ಹೇಳಿ?

ಶ್ರೀ ಆರ್.ಎಲ್. ಜಾಲಪ್ಪ : ಕಂಡಿಷನ್ ಏನೂ ಇಲ್ಲ.

ಶ್ರೀ ವೈ. ರಾಮಕೃಷ್ಣ : ಇದನ್ನು ಹಿಂದೆ 1961ರಲ್ಲಿ ಏನು ಆಕ್ಟ್ ಪಾಸು ಮಾಡಿದರೋ ಅದನ್ನು ಮಾನ್ಯ ರಾಜ್ಯಪಾಲರು ಒಪ್ಪಿಗೆ ಕೊಟ್ಟು ರಾಷ್ಟ್ರಪತಿಗಳಿಗೆ ಕಳುಹಿಸಲಾಗಿತ್ತು. ಆ ಮೇಲೆ ಸಬ್ಸಿಕ್ವೆಂಟಾಗಿ ಮತ್ತೊಂದು ತಿದ್ದುಪಡಿ ಏನು ಬಂತೋ ಅದನ್ನು ಕೂಡ ರಾಷ್ಟ್ರಪತಿಯವರು ಅಂಗೀಕರಿಸಿದರು. ಅವೆರಡನ್ನು ರಾಷ್ಟ್ರಪತಿಯವರು

ಅಂಗೀಕರಿಸಿದ್ದಾರೆ. ಇದೊಂದನ್ನೇ ರಾಜ್ಯಪಾಲರು ಅಂಗೀಕರಿಸುವುದಕ್ಕೆ ತಾವು ರೆಕಮಂಡ್ ಮಾಡುವುದಕ್ಕೆ ಕಾರಣವೇನು?

ಶ್ರೀ ಆರ್.ಎಲ್. ಜಾಲಪ್ಪ : ಏನು ಇವೊತ್ತು ಸೆಕ್ಷನ್‌ಗಳನ್ನು ತಂದಿದ್ದೇವೆ ಅಮೆಂಡ್‌ಮೆಂಡ್‌ಗೆ ಅದನ್ನೇ 1982-83ರಲ್ಲಿ ಬದಲಾವಣೆಗಳನ್ನು ಮಾಡಿದ್ದಾರೆ. ಹನ್ನೆರಡು ಸಾವಿರ ಇದ್ದದ್ದನ್ನು ಐವತ್ತು ಸಾವಿರಕ್ಕೆ ಹೆಚ್ಚಿಸಿದ್ದಾರೆ. ಇಂಡಸ್ಟ್ರೀಸ್‌ಗೆ ಯಾವುದೂ ಇರಲಿಲ್ಲ ಅದನ್ನು ಎರಡು ಹೆಕ್ಟೇರ್‌ಗೆ ಅಲೋ ಮಾಡಬೇಕು ಎಂದು ಮಾಡಿದ್ದಾರೆ. ಆಮೇಲೆ ಎಜುಕೇಶನ್ ಇನ್ಸಿಟಿಟ್ಯೂಶನ್‌ಗೆ ಒಂದು ಹೆಕ್ಟೇರ್ ಇರಬೇಕು ಎಂದು ಅಮೆಂಡ್‌ಮೆಂಟ್ ಮಾಡಿದ್ದಾರೆ. ಅವೆರಡಕ್ಕೂ ರಾಜ್ಯಪಾಲರೇ ಒಪ್ಪಿಗೆ ನೀಡಿದ್ದಾರೆ. ಅದಕ್ಕಾಗಿ ಇದನ್ನು ಕೂಡ ರಾಜ್ಯಪಾಲರಿಗೆ ಕಳುಹಿಸಿದ್ದೇವೆ.

ಶ್ರೀ ವೈ. ರಾಮಕೃಷ್ಣ : ಈಗ ಒಟ್ಟು ಐದು ಆಕ್ಟ್ ಇವೆ. ಐದನ್ನು ಅಂಡರ್ ಆರ್ಟಿಕಲ್ 13(ಬಿ) ಒಂಭತ್ತನೇ ಶೆಡ್ಯೂಲ್‌ನಲ್ಲಿ ಸೇರಿಸಲ್ಪಟ್ಟಿವೆ. ಇದರ ಪೈಕಿ ಮೈಸೂರು ಗೇಣಿದಾರರ ಅಧಿನಿಯಮ 1952, ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) 1952 6ನೇ ಅಧಿನಿಯಮ 1961, ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ 1973 ಕರ್ನಾಟಕ ಭೂ ಸುಧಾರಣಾ ಎರಡನೇ ತಿದ್ದುಪಡಿ ಮತ್ತು ಸಂಕೀರ್ಣ ಉಪನಿಬಂಧಗಳು ಸೇರಿ 74 ಕರ್ನಾಟಕ ಭೂ ಸುಧಾರಣಾ ಎರಡನೇ ತಿದ್ದುಪಡಿ ಅಧಿನಿಯಮ 1972. ಈಗ ಈ ಐದು ಕಾನೂನುಗಳ ಪೈಕಿ 1961ರ ಮೂಲ ಅಧಿನಿಯಮ ಹಾಗೂ 1973ರ ತಿದ್ದುಪಡಿ ಇವೆರಡಕ್ಕೂ ರಾಷ್ಟ್ರಪತಿಗಳು ಕನ್ಸೆಂಟ್ ಕೊಟ್ಟಿದ್ದಾರೆ. ಅವೆರಡಕ್ಕೂ ರಾಷ್ಟ್ರಪತಿಗಳ ಹತ್ತಿರ ಕಳುಹಿಸಿ ಇನ್ನುಳಿದವಕ್ಕೆ ರಾಜ್ಯಪಾಲರ ಹತ್ತಿರ ಕಳುಹಿಸಲು ಕಾರಣವೇನು?

ಶ್ರೀ ಆರ್.ಎಲ್. ಜಾಲಪ್ಪ : ನಾನು ಈಗಾಗಲೇ ಹೇಳಿದ್ದೇನೆ. ರಾಜ್ಯಪಾಲರಿಗೆ ಕನ್ಸೆಂಟ್ ಕೊಡುವುದರಲ್ಲಿ ಅಧಿಕಾರ ಇದೆ. ಅದಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ವೈ. ರಾಮಕೃಷ್ಣ : ಅಧಿಕಾರ ಅವೊತ್ತು ಇತ್ತಲ್ಲ ಸ್ವಾಮಿ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಇವೊತ್ತು ಇಟ್ಟಿರತಕ್ಕಂಥದ್ದು ಒಂದು ಸಣ್ಣ ತಿದ್ದುಪಡಿ ಇಷ್ಟೇ. ಟೌನ್ ಪ್ಲಾನಿಂಗ್ ಮತ್ತು ಕಂಟ್ರಿ ಪ್ಲ್ಯಾನಿಂಗ್‌ಗೆ ಇದನ್ನು ಅಳವಡಿಸಿಕೊಳ್ಳಬೇಕು ಎನ್ನತಕ್ಕಂಥ ಆರ್ಡಿನನ್ಸ್ ಏನು ನಾವು ತಂದಿದ್ದೇವೆ ಅದನ್ನು ಈ ಸಭೆಯಲ್ಲಿ ಅಂಗೀಕಾರಕ್ಕೆ ಈಗ ವಿಧೇಯಕವಾಗಿ ಮಂಡನೆ ಮಾಡಿದ್ದೇವೆ. ಇನ್ನು ಚರ್ಚೆ ಮಾಡಿದ ಮೇಲೆ ನೀವು ಎತ್ತತಕ್ಕಂಥ ಎಲ್ಲಾ ಆರೋಪಗಳಿಗೆ ಸರ್ಕಾರ ಉತ್ತರ ಕೊಡಲಿಕ್ಕೆ ಸಿದ್ಧ ಇದೆ. ಚರ್ಚೆ ಪ್ರಾರಂಭ ಮಾಡಿ. ಏಕೆಂದರೆ ಎಷ್ಟೋ ಅಮೆಂಡ್‌ಮೆಂಟ್ಸ್ 1974 ಅಲ್ಲಿಂದ ಏನೇನಾಗಿದೆ, ಅವೆಲ್ಲವನ್ನೂ ಈ ಸಭೆಯ ಮುಂದೆ ನಾವು ಹೇಳಲಿಕ್ಕೆ ಸಿದ್ಧರಾಗಿದ್ದೇವೆ. ಚರ್ಚೆಯಾಗಲಿ, ಆಗ ಮಾತನಾಡೋಣ, ನೀವು ಹೇಳುವ ಎಲ್ಲಾ ವಿಚಾರಗಳಿಗೂ ನಾವು ಉತ್ತರ ಕೊಡಲಿಕ್ಕೆ ಸಿದ್ಧರಿದ್ದೇವೆ. ನಿಮಗೇನೇನು ಸಂಶಯ ಇದೆಯೋ ಅವೆಲ್ಲಕ್ಕೂ ಕ್ಲಾರಿಫೈ ಮಾಡುವುದಕ್ಕೂ ಸಿದ್ಧರಿದ್ದೇವೆ. ಈಗ piece meal ಈಗದೆಲ್ಲಾ ಬೇಡ ಅದು, ಲೆಟ್ ಅಸ್ ಡಿಸ್‌ಕಸ್,

SRI Y. RAMAKRISHNA : I am raising a Constitutional issue and a legal issue. Before it, Unless it is cleared how can we debate upon. ಈಗ ತಾವು ಅದನ್ನು ಆಲೋಚನೆ ಮಾಡಬೇಕು With all respect to the Chair, I am raising a legal issue and a Constitutional issue.

SRI H.D. DEVEGOWDA : Please allow me.

Y. RAMAKRISHNA : ಮೂಲದಲ್ಲಿ ಲ್ಯಾಂಡ್ ರೀಫಾರ್ಮ್ಸ್ ಆಕ್ಟ್ ತಾವು ಹೇಳಿದ್ದು 1963ರಲ್ಲಿ ಪಾಸ್ ಮಾಡಿದ್ದುದು. ಆದ್ದರಿಂದ ಇದು ಅಡಕವಾಗಿದೆ. ತಾವು ದಯವಿಟ್ಟು ಇದನ್ನು ನೋಡಬೇಕಾಗುತ್ತದೆ, ಅದು ಯಾವುದೆಂದರೆ In accordance with the Country and Town Planning Act ಇದರಲ್ಲೇ ಇದೆ. ಮಧ್ಯೆ ಕೈಬಿಟ್ಟು ಹೋಗುತ್ತೀರಿ, ಏತಕ್ಕೆ? ಇದರಲ್ಲಿ ಇಲ್ಲದಿದ್ದರೆ ನೀವು ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ, Originally it was there.

ಉಪಾಧ್ಯಕ್ಷರು : ಈಗ ಖರ್ಗೆಯವರೇ, ನೀವು ಮಾತನಾಡಿ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ಮುಂದೆ ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ (ಅಮೆಂಡ್‌ಮೆಂಟ್) ಬಿಲ್, 1996 ಎಂದು ಹೇಳಿ ಸೆಕ್ಷನ್ 109ಕ್ಕೆ ಚಿಕ್ಕ ತಿದ್ದುಪಡಿಯನ್ನು ಮಾನ್ಯ ಕಂದಾಯ ಸಚಿವರು ತಂದಿದ್ದಾರೆ ಇದರ Statement of objects and reasons ನಲ್ಲಿಯೂ ಕೂಡ ಅವರು ಸ್ಪಷ್ಟಪಡಿಸಿದ್ದಾರೆ, To enable the industries based on Acqua-culture, flori-culture, horticulture and also the housing industry which hold high potential for drawing outside investment in the State, to obtain land required for their establishment and expansion."

ಈ ಒಂದು ಉದ್ದೇಶದಿಂದ ಅವರು ಇವೊತ್ತು ಇದನ್ನು ಕ್ಲಾರಿಫೈ ಮಾಡುವುದಕ್ಕೋಸ್ಕರ ಮತ್ತು ಜಮೀನನ್ನು ಎಕ್ಸಂಪ್‌ಶನ್ ಕೊಡುವುದಕ್ಕೋಸ್ಕರ ಸೆಕ್ಷನ್ 109 1(ಎ)ಗೆ ಕೆಲವು ಎಕ್ಸ್‌ಪ್‌ಶನ್ ಕೊಡಬೇಕೆಂದು ಹೇಳಿ ಕರ್ನಾಟಕ ಟೌನ್ ಅಂಡ್ ಕಂಟ್ರೀ ಪ್ಲಾನಿಂಗ್ ರೈಡರನ್ನೂ ಹಾಕಿ ಇದಕ್ಕೆ ಎಕ್ಸ್‌ಪ್‌ಶನ್ ಕೊಡಬಹುದು ಎಂದು ಹೇಳಿ ಅವರು ಪ್ರಯತ್ನ ಮಾಡಿ ಈ ತಿದ್ದುಪಡಿಯನ್ನು ತರುತ್ತಿದ್ದಾರೆ. ಆದರೆ ಇದಕ್ಕಿಂತಲೂ ಮುಂದೆ, ಹೋದ ಸದನದಲ್ಲಿ ನಾವು ಕಾರಣಾಂತರಗಳಿಂದ ತಮಗೆಲ್ಲಾ ಗೊತ್ತಿರುವ ಹಾಗೆ ವಾಸುದೇವರವರ ಒಂದು ಕೇಸ್‌ನಲ್ಲಿ ಎಂಟೈರ್ ಅಪೋಸಿಶನ್ ಬಾಯ್ಕಾಟ್ ಮಾಡಿ ಹೊರಗಡೆ ಇತ್ತು. ಆಗ ಭೂ ಸುಧಾರಣಾ ಕಾನೂನಿಗೆ ಮಹತ್ತರವಾದ ತಿದ್ದುಪಡಿಗಳನ್ನು ಈ ಸದನದಲ್ಲಿ ವಿರೋಧ ಪಕ್ಷದವರು ಹೊರಗಡೆ ಇದ್ದಾಗ ಚರ್ಚೆ ಇಲ್ಲದೆಯೇ ಪಾಸ್ ಆಗಿಬಿಟ್ಟರು. ಇದನ್ನು ತರಾತುರಿಯಲ್ಲಿ ರಾತ್ರೋರಾತ್ರಿಯಲ್ಲಿ ಪಾಸ್ ಮಾಡಿಕೊಂಡುಬಿಟ್ಟರು.

ಒಬ್ಬ ಮಾನ್ಯ ಸದಸ್ಯರು : ವಿರೋಧ ಪಕ್ಷದವರು ಚರ್ಚೆ ಮಾಡಿದರು, ಯಾರು ನಿಮಗೆ ಹೊರಗಡೆ ಹೋಗಿ ಎಂದರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಆ ರೀತಿ ಹೇಳಿಕೊಳ್ಳಿ, ಡಿಫೆಂಡ್ ಮಾಡುವುದಕ್ಕಾಗಿಯೇ ನಿಮ್ಮನ್ನು ಕರೆದುಕೊಂಡಿದ್ದಾರೆ. ಶೌಟಿಂಗ್ ಮಾಡಲು ಕೊರತೆ ಇತ್ತು, ಅದಕ್ಕೇ ನಿಮ್ಮನ್ನು ತೆಗೆದುಕೊಂಡಿದ್ದಾರೆ, ಪರವಾಗಿಲ್ಲ ತೆಗೆದುಕೊಳ್ಳಲಿ,

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇದು ಮಹತ್ತರವಾದ ತಿದ್ದುಪಡಿ. ಇದರಲ್ಲಿ ಯಾವುದೇ ರಾಜಕೀಯ ಉದ್ದೇಶ ಇಲ್ಲ. ನಾವು ಈ ತಿದ್ದುಪಡಿಗಳಿಗೆ ಸಂಬಂಧಪಟ್ಟಂತೆ ಪ್ರಾಮಾಣಿಕವಾದ ನಮ್ಮ ಅನಿಸಿಕೆಗಳನ್ನು ಕೊಡಬೇಕು ಮತ್ತು ಪ್ರಾಮಾಣಿಕವಾದ ಸಲಹೆಗಳನ್ನು ಕೊಡಬೇಕು. ಏಕೆ ಆ ತಿದ್ದುಪಡಿಗಳು ಸರಿಯಿಲ್ಲ ಎಂದು ಹೇಳಬೇಕು ಎನ್ನತಕ್ಕಂಥದ್ದರಲ್ಲಿ ನಮ್ಮ ಮನಸ್ಸಿನಲ್ಲಿ ಬಹಳ ವಿಚಾರಗಳು ಇದೆ. ಇದನ್ನು ಕಾರಣಾಂತರಗಳಿಂದ ನಾವು ಈಗಾಗಲೇ ಹೇಳಿದ ಹಾಗೆ

ಹೊರಗಡೆ ಇದ್ದಾಗ ಇಲ್ಲಿ ಪಾಸ್ ಆಗಿ ಹೋಯಿತು. ಆಗ ಒಬ್ಬರು ಮಾತನಾಡಿರಬಹುದು, ಇಬ್ಬರು ಮಾತನಾಡಿರಬಹುದು ಅಥವಾ 10 ಜನರು ಮಾತನಾಡಿರಬಹುದು. ಅವರ ವಿಚಾರಧಾರೆಯಲ್ಲಿ ನಡೆಯತಕ್ಕಂಥ ಚರ್ಚೆಯಲ್ಲಿ ಮಾನ್ಯ ಸದಸ್ಯರು ಏನು ಅಭಿಪ್ರಾಯ ಕೊಟ್ಟರು ಬಹುಶಃ ನಮ್ಮ ಸಿ.ಪಿ.ಎಂ. ಅಸೆಂಬ್ಲಿ ಸದಸ್ಯರನ್ನೊಬ್ಬರನ್ನು ಬಿಟ್ಟರೆ ಬಾಕಿ ಉಳಿದ ಎಲ್ಲರೂ ಕೂಡ ಹೊಗಳಿಕೊಂಡು ಈ ಅಮೆಂಡ್‌ಮೆಂಟ್‌ನ್ನು ಪಾಸ್ ಮಾಡಿಕೊಂಡು ಬಿಟ್ಟಿದ್ದಾರೆ. ಆದರೆ ಇವೊತ್ತು ನಮ್ಮ ಮುಂದೆ ಇರತಕ್ಕಂಥದ್ದು ಒಂದೇ ಒಂದು ಸಣ್ಣ ತಿದ್ದುಪಡಿ ಅಲ್ಲ, ಅವರು ಸೆಕ್ಷನ್ 109ಕ್ಕೆ ಏನು ತಿದ್ದುಪಡಿ ತಂದಿದ್ದಾರೆ, ಇದಲ್ಲದೇ ಇದರ ಹಿಂದೆಯೇ ಇರತಕ್ಕಂಥ ಸೆಕ್ಷನ್ 48(ಎ)ಗೆ ಏನು ತಿದ್ದುಪಡಿ ಮಾಡಿದ್ದಾ, ಸೆಕ್ಷನ್ 61ಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ, ಸೆಕ್ಷನ್ 63ಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಇವೆಲ್ಲಕ್ಕಿಂತ ದೊಡ್ಡದಾದ ತಿದ್ದುಪಡಿ ಎಂದರೆ ಸೆಕ್ಷನ್ 109ಕ್ಕೆ ತಂದಿದ್ದಾರೆ. ಇವೆಲ್ಲಾ ತಿದ್ದುಪಡಿಗಳಿಂದಾಗಿ ಇವೊತ್ತು ಏನಾಗಿದೆಯೆಂದರೆ ಈ ಭೂ ಸುಧಾರಣಾ ಕಾನೂನು ಈ ರಾಜ್ಯದಲ್ಲಿಯೇ ಇಲ್ಲದ ಹಾಗೆ ಆಗಿದೆ. ಇಡೀ ಕಾನೂನನ್ನು ಇದು ಬುಡಮೇಲೂ ಮಾಡತಕ್ಕಂಥ ತಿದ್ದುಪಡಿಗಳು. ಇವೊತ್ತು ಕಾನೂನು ಸೀಲಿಂಗ್ ಲಾ ಅಸ್ತಿತ್ವದಲ್ಲಿಲ್ಲ. ಅವರು ಹೇಳಬಹುದು, ಇದು ಬಹಳ ಒಂದು ಸಣ್ಣ ತಿದ್ದುಪಡಿ, ಕೇವಲ 3-4 ಪುಟ ತಿದ್ದುಪಡಿಯನ್ನು ನೀವು ಏಕೆ ಇಷ್ಟು ಒದ್ದಾಡುತ್ತಿದ್ದೀರಿ ಎನ್ನಬಹುದು. ಇದಲ್ಲದೇ ಇನ್ನೊಂದನ್ನು ಅವರು ಪದೇ ಪದೇ ಹೇಳುತ್ತಾರೆ, ಲಿಬರಲೈಸ್ ಪಾಲಿಸಿಯಡಿಯಲ್ಲಿ ಇಲ್ಲಿಗೆ ಬಹು ರಾಷ್ಟ್ರೀಯ ಕಂಪನಿಗಳು ಬರುತ್ತಿವೆ, ಇದಕ್ಕೆ ನಿಮ್ಮ ಪಕ್ಷದವರೂ ಕೂಡ ಅಲ್ಲಿ ಒಪ್ಪಿಕೊಂಡಿದ್ದಾರೆ, ಈ ಹಿಂದೆ ನಿಮ್ಮ ಸರ್ಕಾರ ಕೂಡ ಇಲ್ಲಿತ್ತು. ನೀವೂ ಕೂಡ ಎಲ್ಲವನ್ನೂ ತಯಾರು ಮಾಡಿದ್ದಿರಿ, ಅದಕ್ಕೋಸ್ಕರ ನಾವು ಇವೊತ್ತು ಇದನ್ನು ತಂದು ನಿಮ್ಮ ಮುಂದೆ ಇಟ್ಟಿದ್ದೇವೆ ಎನ್ನುವ ವಾದವನ್ನು ಅವರು ಹೇಳುತ್ತಾರೆ ಎನ್ನುವುದು ನನಗೆ ಗೊತ್ತು, ಇದಲ್ಲದೇ ಇನ್ನೊಂದು ವಿಚಾರ ಹೇಳುತ್ತಾರೆ, ಹೌದು ಸರಿಯಿದೆ, ಈಗ ನಾವು 2 ಲಕ್ಷ ಮಾಡಿದರೆ ಏನು ತಪ್ಪು ಅಂತ.

1993ರಲ್ಲಿ ನೀವು 50 ಸಾವಿರ ಮಾಡಿದಿರಿ, ಈಗ ನಾವು 2 ಲಕ್ಷ ಮಾಡಿದ್ದೇವೆಂದು ಅವರು ಹೇಳುತ್ತಾರೆ. ಆದರೆ ಇದಕ್ಕೆ ಇವು ನೆಪಗಳು ಅಲ್ಲ, ಮೂಲಭೂತವಾಗಿ ಭೂ ಸುಧಾರಣಾ ಕಾನೂನಿನಲ್ಲಿ ಬದಲಾವಣೆ ಹೇಗಾಗಿದೆ? ಇದರಿಂದ ಏನು ತೊಂದರೆ ಇದೆ, ಗೇಣಿದಾರರಿಗೆ ಏನು ತೊಂದರೆ ಇದೆ ಮತ್ತು ಕಾನೂನು ತಂದಂಥ ಕಾನೂನಿಗೆ ಏನು ಪೆಟ್ಟು ಬೀಳುತ್ತದೆ, ಎಷ್ಟರಮಟ್ಟಿಗೆ ರೈತರಿಗೆ ಅನುಕೂಲವಾಗುತ್ತದೆ, ಎಷ್ಟರಮಟ್ಟಿಗೆ ಉಳುವವರಿಗೆ ಜಮೀನು ಎನ್ನತಕ್ಕಂಥ ತತ್ವ ಅದಕ್ಕೆ ಸಹಾಯವಾಗುತ್ತದೆ ಎನ್ನತಕ್ಕಂಥದ್ದನ್ನು ತಾವು ನೋಡಿಕೊಳ್ಳಬಹುದು. ಇದನ್ನು ಬಿಟ್ಟು ಈ ಕಾನೂನು ತಂದಿದ್ದೇವೆ ಎಂದು ಅದಕ್ಕೆ ಪ್ರೊಟೆಕ್ಷನ್ ಕೊಡುವುದಕ್ಕೋಸ್ಕರ ಅಥವಾ ಅದನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೋಸ್ಕರ ಬಹಳ ಸಲ ನಾನು ಕೇಳಿದ್ದೇನೆ. ಏಕೆಂದರೆ ಯಾವಾಗಲೂ ಅವರ ತಲೆಯಲ್ಲಿರತಕ್ಕಂಥದ್ದೇನೆಂದರೆ ಈ ಬೆಂಗಳೂರು ಸುತ್ತಮುತ್ತ ಮತ್ತು ಸಿಟಿ ಅಕ್ಕಪಕ್ಕದಲ್ಲಿರತಕ್ಕಂಥ ಜಮೀನುಗಳ ಮೇಲೆ ಏಕೆ ಪರವಾನಿಗಿ ಕೊಡಬಾರದು, ಪಾಪ ರೈತ ಮಾರಿಕೊಳ್ಳುತ್ತಾನೆ 2 ಲಕ್ಷ ಅಥವಾ 3 ಲಕ್ಷಕ್ಕೆ, ಅಧ್ಯಕ್ಷರೇ ನಮ್ಮ ನೀತಿ ಅದಲ್ಲ, ಹಿಂದಿನಿಂದಲೂ ತಾವು ಕೂಡ ಅದಕ್ಕೆ ಕಾರಣಕರ್ತರಾಗಿದ್ದೀರಿ, ತಾವೂ ಕೂಡ ಅದೇ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂಥ ಒಬ್ಬ ಮುಖಂಡರಾಗಿದ್ದೀರಿ, ಈ ರೀತಿ ಇದ್ದಾಗ ಯಾವುದನ್ನು ಮಾಡಿದರೆ ನಮ್ಮ ರೈತರಿಗೆ ಅನುಕೂಲವಾಗುತ್ತದೆ, ಯಾವ ಉದ್ದೇಶದಿಂದ ಈ ಭೂಸುಧಾರಣಾ ಕಾನೂನನ್ನು ನಾವು ತಂದಿದ್ದೇವೆ ಎನ್ನತಕ್ಕಂಥದ್ದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. 1974ರಲ್ಲಿ

ಈ ಕಾನೂನು ಬಂದಿದೆ, ಇವೊತ್ತು ಈ ಕಾನೂನು ಇರೀಲೆವೆಂಟ್ ಇದೆ ಎಂದು ತಾವು ಹೇಳಿದರೆ ಇದು ಸತ್ಯಕ್ಕೆ ದೂರವಾದಂಥದ್ದು. ಇವೊತ್ತು ಆ ಕಾನೂನು ಇರೀಲೆವೆಂಟ್ ಇಲ್ಲ ಇವೊತ್ತು ರಿಲೆವೆಂಟ್ ಇದೆ, ಅಧ್ಯಕ್ಷರೇ, ಯಾವತ್ತೂ ಕೂಡ ಜಮೀನು ಜಾಸ್ತಿ ಆಗುವುದಿಲ್ಲ, ಇವೊತ್ತು ಇನ್‌ಕಮ್ ಟ್ಯಾಕ್ಸ್‌ಗೂ ಲಿಮಿಟ್ ಇದೆ, ಇವೊತ್ತಿಗೂ ಭೂಮಿ ಏನು ಅಡ್ಡಗಲವಾಗುವುದಿಲ್ಲ, ಅದು ಬೆಳೆಯುವುದಿಲ್ಲ ಅಥವಾ ನಾವು ಕೇಳಿದಾಗಲೆಲ್ಲಾ ಇದಕ್ಕೂ ಕೂಡ ಪ್ರೋತ್ಸಾಹ ಕೊಟ್ಟರೆ ಜಮೀನು ಬೆಳೆಯುತ್ತದೆ ಎಂದರೆ ಅಡ್ಡಿಯಿಲ್ಲ ಎಂದು ನಾವು ಹೇಳಬಹುದು. ಇರತಕ್ಕಂಥ ಜಮೀನನ್ನು ಯಾವ ರೀತಿಯಾಗಿ ಮತ್ತು ಆರ್ಥಿಕವಾಗಿ ಒಂದು ಎಕನಾಮಿಕ್ ಹೋಲ್ಡಿಂಗ್ ಮಾಡಬೇಕು ಮತ್ತು ಕೃಷಿ ಪ್ರಧಾವಾಗಿರತಕ್ಕಂಥ ಈ ದೇಶದಲ್ಲಿ ಕೃಷಿಗೆ ಮಹತ್ವ ಕೊಡತಕ್ಕಂಥ ವಿಷಯದಲ್ಲಿ ನಾವು ಇದ್ದಾಗ, ಇದರ ಮೇಲೆ ಅವಲಂಬಿಸಿರತಕ್ಕಂಥ ಶೇಕಡ 70 ಲಕ್ಷ ಪಟ್ಟೇದಾರರು ಏನಿದ್ದಾರೆ ಅಂದರೆ ಭೂ ಮಾಲೀಕರು, ಅದರ ಜೊತೆಯಲ್ಲಿಯೇ ಸುಮಾರು 55 ಲಕ್ಷ ಕೃಷಿ ಕಾರ್ಮಿಕರು, ಇವರೆಲ್ಲರ ಜೀವನ ಕೂಡ ಈ ಭೂಮಿಯ ಮೇಲೆ ಅವಲಂಬಿಸಿದೆ.

ಈ ಒಂದು ಜಮೀನಿನ ಮೇಲೆ ಅವರ ಜೀವನ ಅವಲಂಬಿಸಿದೆ. ಎಂದಾಗ ಯಾವಾಗಲೂ ನಾವು ಅದನ್ನು ಟಚ್ ಮಾಡಬೇಕಾದರೆ ಅದಕ್ಕೆ ಸ್ವಲ್ಪ ನೋಡಿಕೊಳ್ಳಬೇಕಾದರೆ ಸುಮಾರು ಒಂದು ಕೋಟಿ, 25 ಲಕ್ಷ ಕುಟುಂಬಗಳ ಬಗ್ಗೆ ಚಿಂತನೆ ಮಾಡಬೇಕಾದರೆ ನಾವು ಮುಟ್ಟಬೇಕೇ ಹೊರತಾಗಿ ಒಂದು ಅಥವಾ ಎರಡು ಲಕ್ಷ ಕುಟುಂಬಗಳಿಗೆ ಅನುಕಲವಾಗುತ್ತದೆಂದು ಹೇಳಿ ಒಂದು ಕೋಟಿ ಕುಟುಂಬಗಳಿಗೆ ಅಥವಾ ಒಂದು ಕೋಟಿ ಜನರಿಗೆ ತೊಂದರೆಯಾಗತಕ್ಕಂಥ ಕಾನೂನನ್ನು ನಾವು ತರಬಾರದು ಕೆಲವು ಸಲ ತೊಂದರೆಯಾಗುತ್ತದೆ. 5 ಪರ್ಸೆಂಟ್, 10 ಪರ್ಸೆಂಟ್ ತೊಂದರೆಯಾಗುತ್ತದೆ. ಎಷ್ಟೋ ಒಳ್ಳೆಯ ಕಾನೂನನ್ನು ಮಾಡುವಾಗಲೂ ಕೂಡ 5-10 ಪರ್ಸೆಂಟ್ ಜನರಿಗೆ ತೊಂದರೆ ಆಗಲೇಬೇಕು. ಅದನ್ನೇ ನಾವು ಮುಂದೆ ಇಟ್ಟುಕೊಂಡು ಅವರಿಗೆ ಅನುಕೂಲವಾಗಲಿ ಆ ರೈತರಿಗೆ ಅನುಕೂಲವಾಗಲಿ, ಅವರು ಬ್ಯಾಂಕಿನಲ್ಲಿ ಹಣ ಇಟ್ಟುಕೊಳ್ಳಲಿ, ಅವರ ಜೀವನವನ್ನು ಅವರು ಸಾಗಿಸಿಕೊಳ್ಳಲಿ ಎಂದು ಹೇಳುತ್ತಿದ್ದೀರಿ ಆದರೆ ಈ ಕಾನೂನನ್ನು ಯಾವ ಉದ್ದೇಶದಿಂದ ಶ್ರೀಮಾನ್ ದೇವರಾಜ್ ಅರಸ್‌ರವರು ಆಗಲಿ, ನೀವು, ನಾವಾಗಲಿ ಬೆಂಬಲ ಕೊಟ್ಟು ತಂದಿದ್ದೇವೆ, ಆ ತತ್ವದ ಬುನಾದಿಗೆ ಕೊಡಲಿ ಏಟು ಹಾಕಿದ ಹಾಗೆ ಆಗುತ್ತದೆ. ಅದು ಅಷ್ಟೇ ಅಲ್ಲ ಮೂಲಭೂತವಾಗಿ ರೈತರಿಗೆ ಇದರಿಂದ ತೊಂದರೆಯಾಗುತ್ತಿದೆ. ಇದು ಒಬ್ಬ ವ್ಯಕ್ತಿಯ ಪ್ರಶ್ನೆ ಅಲ್ಲ, ಒಬ್ಬ ಮುಖಂಡರ ಪ್ರಶ್ನೆ ಅಲ್ಲ. ಆದರೆ ಯಾವ ಉದ್ದೇಶದಿಂದ ಈ ಒಂದು ಕಾನೂನನ್ನು ತಂದಿದ್ದಾರೆ ಇದಕ್ಕೆ ಎಷ್ಟೋ ಜನ ಚಳುವಳಿ ಮಾಡಿದ್ದಾರೆ. ಕಾಗೋಡು ಸತ್ಯಾಗ್ರಹ ಮಾಡಿದ್ದಾರೆ. ಈ ಸದನದಲ್ಲಿ ಅನೇಕ ಸಾರಿ ಪ್ರಸ್ತಾಪವಾಗಿದೆ. ನಾವು ಬಂದಮೇಲೂ ಕೂಡ ಭೂ ಸುಧಾರಣಾ ಕಾನೂನನ್ನು 1973ರಲ್ಲಿ ಇಲ್ಲಿ ಚರ್ಚೆಗೆ ಬಂದಾಗ ಸಾಕಷ್ಟು ಜನ ಸೋಷಿಯಲಿಸ್ಟ್ ಪಾರ್ಟಿಗೆ ಸೇರಿದಂಥವರು, ಈ ಕಡೆ ಇರತಕ್ಕಂಥ ಪ್ರಗತಿಪರವಾದಂತಹ ಜನ ಕಮ್ಯುನಿಸ್ಟ್ ಪಾರ್ಟಿಗೆ ಸೇರಿದಂಥವರು, ಕಕ್ಕಿಲಾಯರವರು ಇಂತಹ ಅನೇಕ ಜನ ಈ ಕಾನೂನಿಗೆ ಸಪೋರ್ಟ್ ಮಾಡಿ, ಚಳುವಳಿ ಮಾಡಿ ಈ ಕಾನೂನಿಗೆ ಒಂದು ರೂಪವನ್ನು ಕೊಟ್ಟಿದ್ದಾರೆ. ಅದನ್ನು ವಿಕೃತಗೊಳಿಸಬೇಡಿ. ದಯವಿಟ್ಟು ನಾನು ಕೈಜೋಡಿಸಿ ಕೇಳಿ ಕೊಳ್ಳುತ್ತೇನೆ, ಇದರಲ್ಲಿ ಯಾವುದೂ ಕೂಡ ರಾಜಕೀಯ ದುರುದ್ದೇಶವಿಲ್ಲವೆನ್ನುವಂತಹ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇದರಿಂದ ಏನು ತಾಪತ್ರಯ ಆಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊದಲನೆಯದಾಗಿ ಸೆಕ್ಷನ್ 48(ಎ) ನಲ್ಲಿ ಏನಿದೆ ಇವರು ತಿದ್ದುಪಡಿ ತಂದದ್ದು-

"After the proviso to sub-section (6) of Section 48A of tthe principal Act, the following proviso shall be insered, namely:

"Provided further that he Tribunal may on its own or on the application of any of the parties, for reasons to be recorded in writing correct the extent of land in any order passed by it after causing actual measurement and after giving an opportunity of being heard to the concerned parties."

ಇದರಿಂದ ಒಂದು ಕಡೆ ಸಹಾಯವಾಗುತ್ತದೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ಈ ನೆಪದಲ್ಲಿ ಅಸಿಸ್ಟೆಂಟ್ ಕಮಿಷನರ್ ಸೋಮೋಟೋ ಅಪ್ಲಿಕೇಷನ್ ತೆಗೆದುಕೊಂಡು ಆ ಟೆನೆಂಟ್‌ಗೆ ತೊಂದರೆ ಕೊಡತಕ್ಕಂಥಾದ್ದು ಆಗಬಾರದು. ಅನೇಕ ಸಾರಿ ನೀವು ತಿದ್ದುಪಡಿ ಮಾಡಿ ನೀವು ಕರೆಕ್ಟ್ ಮಾಡಿಕೊಳ್ಳುವುದು ಮಾಡಿ, ಬೇಡ ಎಂದು ಹೇಳುವುದಿಲ್ಲ, ಆದರೆ ಕೆಲವು ಸಲ ಏನಾಗುತ್ತದೆ ಎಂದರೆ ಇದೇ ಒಂದು ನೆಪದಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಲಿ ಅಥವಾ ಲ್ಯಾಂಡ್ ಲಾರಡ್ಸ್ ಮೀಸ್ ಚೀವರ್ಸ್ ಇದ್ದರೆ ಅವರು ಪುನಃ ಇದನ್ನು ಕೆದಕಿ ತೆಗೆಯುವಂತಹ ಪ್ರಮೇಯ ಬರಬಾರದು. ಅದಕ್ಕೆ ನೀವು ಯಾವ ರೀತಿಯಾಗಿ ಸೇಫ್-ಗಾರ್ಡ್ ಮಾಡುತ್ತೀರಿ ಎನ್ನುವಂತಹ ಸಮಾಧಾನವನ್ನು ಕೂಡ ಈ ಸಂದರ್ಭದಲ್ಲಿ ತಾವು ಕೊಡಬೇಕಾಗುತ್ತದೆ. ಈ ತಿದ್ದುಪಡಿಯನ್ನು ಬಹುಶಃ ನಮ್ಮ ಕಾಗೋಡು ತಿಮ್ಮಪ್ಪನವರು ಒಪ್ಪಿಕೊಂಡೇ ತಂದಿದ್ದಾರೆ. ಆ ಕಾಲದಲ್ಲೇ ಸಜೆಸ್ಟ್ ಮಾಡಿದ್ದರು. ಇದರಲ್ಲಿ ತಾಪತ್ರಯ ಬರತಕ್ಕಂಥಾದ್ದು ಏನೆಂದರೆ ಯಾರೋ ಒಬ್ಬ ಅಸಿಸ್ಟೆಂಟ್ ಕಮಿಷನರ್ ಸಪ್ಪೋಸ್ ಅವನು ಕರೆಪ್ಟ್ ಇದ್ದ ಅಥವಾ ತೊಂದರೆ ಕೊಡಬೇಕು ಎಂದು ಮನಸ್ಸಿನಲ್ಲಿ ಬಂದರೆ, ಅಥವಾ ಲ್ಯಾಂಡ್‌ಲಾರ್ಗ್ಡ್ ಮತ್ತು ಅಸಿಸ್ಟೆಂಟ್ ಕಮಿಷನರ್ ಒಂದಾದಾಗ ಈ ನೆಪದಲ್ಲಿ ಜಿಯಾಗ್ರಫಿಕಲ್ ಅಥವಾ ಡಿ-ಮಾರ್ಕೇಷನ್‌ನಲ್ಲಿ ಮಿ-ಸ್ಟೇಕ್ ಇದೆ ಅಥವಾ ಫಾಣಿಯಲ್ಲಿ ಏನೋ ವ್ಯತ್ಯಾಸವಿದೆ ಎಂದು ಹೇಳಿ ಪುನಃ ಜಗಳ ಆಗಬಾರದು. ಆದುದರಿಂದ ಅದಕ್ಕೆ ಯಾವ ಪ್ರಿಕಾಷನ್ ತೆಗೆದುಕೊಳ್ಳುತ್ತೀರಿ ಎನ್ನುವುದರ ಬಗ್ಗೆ ಸ್ಪಷ್ಟಪಡಿಸಬೇಕು. ನಂತರ ಇನ್ನೊಂದು ಕಾನೂನಿಗೆ ಇಧೇ ಸದನದಲ್ಲಿ ಅನೇಕ ಜನ ಸಲಹೆ ಮಾಡಿದ ಮೇಲೆ ನಾವು ಒಪ್ಪಿಕೊಂಡು ಈ ಅಮೆಂಡ್‌ಮೆಂಟ್ ಸೆಕ್ಷನ್ 61ಕ್ಕೆ ಫ್ರಾಗ್‌ಮೆಂಟೇಷನ್ ಆಕ್ಟ್‌ಗೆ ತಿದ್ದುಪಡಿ ತಂದಿದ್ದೇವೆ. ಏಕೆಂದರೆ ಅನೇಕ ಜನ ಅಣ್ಣತಮ್ಮಂದಿರು ಬೇರೆ ಬೇರೆ ಆಗಿ ಅವರಿಗೆ ಒಂದು ಎಕರೆ ಅಥವಾ ಅರ್ಧ ಎಕರೆ ಬರಬಹುದು, ಅದನ್ನು ಅವನ ಹೆಸರಿನಲ್ಲಿ ಫ್ರಾಗ್‌ಮೆಂಟೇಷನ್ ಮಾಡುವುದಕ್ಕಾಗುವುದಿಲ್ಲ ಎಂದು ತಿಳಿದುಕೊಂಡು ಫ್ರಾಗ್‌ಮೆಂಟೇಷನ್ ಮಾಡಬೇಕು ಎಂದು ಎಲ್ಲರ ಒಪ್ಪಿಕೊಂಡ ಮೇಲೆ ಅವಿರೋಧವಾಗಿ ಇದನ್ನು ತಂದಿದ್ದೇವೆ. ಮತ್ತು ಇದರಲ್ಲಿ ವಿಶೇಷವಾಗಿ ತೊಂದರೆ ಏನಿತ್ತು ಎಂದರೆ ನಾರ್ತ್ ಕೆನರಾ, ಸೌತ್ ಕೆನರಾ ಇಂತಹ ಕಡೆ ಜಮೀನುಗಳು ಬಹಳ ಹಿಡುವಳಿ ಚಿಕ್ಕದಾಗಿರುವುದರಿಂದ ಅಲ್ಲಿ ಒಂದು ಎಕರೆ, ಅರ್ಧ ಎಕರೆ ಹಿಡುವಳಿಗಾರರು ಜಾಸ್ತಿ ಜನ ಇದ್ದಾರೆ ಎಂದು ಹೇಳಿ ಅಂತಹ ಕಡೆ ಈ ಫ್ರಾಗ್‌ಮೆಂಟೇಷನ್ ಇರಬೇಕು ಎನ್ನುವ ದೃಷ್ಟಿಯಿಂದ ಆಗ ಜನರ ಒತ್ತಡದ ಮೇರೆಗೆ ಈ ಒಂದು ತಿದ್ದುಪಡಿಯನ್ನು ತಂದಿದ್ದವು. ಇವತ್ತು ಪುನಃ ನೀವು ಏನು ಮಾಡಿದಿರಿ,

"Amendment of Section 61 Ë In Section 61 of the Principal Act,

"(a) in sub-section (1), the words "Subject to condition that no fragment shall be created by any such partition" shall be omitted."

ಎಂದು ಹೇಳಿ ಇವತ್ತು ಪುನಃ ಹಾಕಿದ್ದೀರಿ. ಎಂದರೆ ಫ್ರಾಗ್‌ಮೆಂಟೇಷನ್ ಅನ್ ಕನ್ಸಾಲಿಡೇಷನ್ ಆಕ್ಟ್‌ನ್ನು ನೀವು ಪುನಃ ತಂದ ಹಾಗೆ ಆಯಿತು. ಇದರಿಂದ

ರೈತರಿಗೆ, ಅತೀ ಸಣ್ಣ ರೈತರಿಗೆ ಅನಾನುಕೂಲವಾಯಿತೇ ಹೊರತಾಗಿ ಅನುಕೂಲ ಏನೂ ಆಗಲಿಲ್ಲ, ನೀವು ಏನು ಮಾಡಿದಿರಿ? ನಾಳೆ ಪಕ್ಕದಲ್ಲಿ ಯಾರಾದರೂ ದೊಡ್ಡ ಜಮೀನ್ದಾರರು ಇದ್ದ ಅಂತ ಇಟ್ಟುಕೊಳ್ಳಿ ಅವನ ಹತ್ತಿರ 10 ಅಥವಾ 20 ಎಕರೆ ಜಮೀನು ಇತ್ತು ಎಂದರೆ ಅವನ ಪಕ್ಕದಲ್ಲಿ ಇದ್ದಂತಹ ರೈತನಿಗೆ ಅರ್ಧ ಅಥವಾ ಒಂದು ಎಕರೆ ಜಮೀನು ಇತ್ತು ಎಂದರೆ ಸಣ್ಣ ರೈತ ದೊಡ್ಡ ಜಮೀನ್ದಾರನಿಗೆ ಕಂಪಲ್ ಸಾರಿಯಾಗಿ ಕೊಡಬೇಕಾಗುತ್ತದೆ. ಸಣ್ಣ ರೈತ ಬೇರೆಯವರಿಗೆ ಕೊಡುವುದಕ್ಕೆ ಆಗುವುದಿಲ್ಲ, No further fragmentation is created. ಮತ್ತೆ ಇದನ್ನು ಬೇರೆಯವರಿಗೆ ಮಾರುವುದಕ್ಕೆ ಬರುವುದಿಲ್ಲ. ಅದಕ್ಕೆ ಆ ಸಣ್ಣ ರೈತ ಏನು ಮಾಡಬೇಕು ಎಂದರೆ ದೊಡ್ಡ ಜಮೀನ್ದಾರ ಎಷ್ಟು ರೇಟ್‌ಗೆ ಕೇಳುತ್ತಾನೋ ಅಷ್ಟಕ್ಕೆ ಕೊಡಬೇಕಾದಂತಹ ಪ್ರಸಂಗ ಇದರಿಂದ ಬರುತ್ತದೆ. ಆದುದರಿಂದ ನೀವು ಸಣ್ಣ ರೈತರಿಗೆ ಕೂಡ ತೊಂದರೆ ಕೊಟ್ಟಹಾಗೆ ಆಗುತ್ತದೆ, ಮತ್ತು ಇದರಿಂದ ಯಾವ ಪ್ರಯೋಜನನೂ ಕೂಡ ಬಡವರಿಗೆ ಮತ್ತು ಅತೀ ಸಣ್ಣ ರೈತರಿಗೆ ಆಗುವುದಿಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಎಲ್ಲಕ್ಕಿಂತಲೂ ಮುಖ್ಯವಾದುದು ಎಂದರೆ ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 63, ಇದರಲ್ಲಿ ಏನು ಮಾಡಿದ್ದಾರೆಂದರೆ,

"In Section 63 of tth principal Act, after subËsection (2), the following shall be inserted, namely:

"(2A) The ceiling area for a person who is tenant under clause (b) of subËsection (2) of section 5 shall be forty units."

ಎಂದರೆ 20 ಯುನಿಟ್ ಇದ್ದದ್ದನ್ನು 40 ಯೂನಿಟ್ ಮಾಡಿದಿರಿ. ಎಂದರೆ ಸುಮಾರು ನೂರು ಎಕರೆ ಮೇಲೆ ಒಬ್ಬ ವ್ಯಕ್ತಿ ಇಟ್ಟುಕೊಳ್ಳಬಹುದು. ಮೊದಲು ಇದು ಒರಿಜಿನಲ್ ಆಕ್ಟ್ ಏನಿದೆ ಎಂದರೆ "SectionË63 Ceiling of holdings Ë "the ceiling area for a person who is not a member of a family or who has no family or for a family shall be 10 units"Ë

Provided that in case of a family consisting of more than 5 members - 10 units.

"The ceiling area shall be 10 units plux the additiional extent of 2 units for every meember in excess of 5 and that ceiling area shall not exceed 20 units in aggregate."

ಎಂದರೆ ಆ ಮನೆಯಲ್ಲಿ ಎಷ್ಟೇ ಜನರು ಇದ್ದರೂ ಕೂಡ ಸಿಲಿಂಗ್ ಇರತಕ್ಕಂಥಾದ್ದು 20 ಯೂನಿಟ್ಸ್ ಮಾತ್ರ. ಈಗ ತಾವು ಮಾಡಿದ್ದುದು ಏನು 40 ಯೂನಿಟ್ಸ್.

SRI R.L JALAPPA : The ceiling area for a person who is a tenant i.e., in Dakshina Kannada, Uttara Kannada. The tenancy land he can take on lease. He will become a tenant.

20 ವರ್ಷದವರಿಗೂ ಟಿನೆಂಟ್‌ಗೆ ತೆಗೆದುಕೊಂಡು 200 ಎಕರೆವರೆಗೂ ಪ್ರಾನ್ ಕಲ್ಚರ್, ಫಿಶ್ ಕಲ್ಚರ್ ಮಾಡಬಹುದು ಎಂದು ಹೇಳಿದ್ದೇವಲ್ಲ ಅದಕ್ಕೆ ಇದು ಅಷ್ಟೆ ಆಗುತ್ತದೆ. not for all the Tenants ಇಲ್ಲಿ ನೋಡಿ.

Tthe Ceiling area for a person who is tenant under clause (b) of sub-sectioı (2) of Section 5 shall be fory units. Then Section 5(2) Nothing in sub-sectioı (1) shall apply to-

(a) a tenancy created or continued by a soldier or seaman if such tenancy increated or continued while he is serving as a soldier or a seaman or within three months before he became a soldier or a seaman:

(b) to any land leased after the commencement of the Karnataka Land Reforms (Amendment) Act, 1995 in the districts of Uttara Kannada and Dakshina Kannada by land owners or persons regustered as occupants under the provisions of this Act, for the purpose of uilising the land for acquaculture for a period not exceeding twenty years, at such lease rent as may be deteremine by mutual agreement betweer the parties and such agreement shall be registered and a copy thereof shall be sent to the Deputy Commissioner within fifteen days from the date of such registration."

ಸ್ವಾಮಿ, ಇಲ್ಲಿ ಹೇಳಿದ್ದೇನೆ ನೋಡಿ... The ceiling area for a person who is tenant under clause (b) of sub-section (2) of Section (5) shall be 40 units. What is that section (5) 2(d). Please refer to that. It is there.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮ್ಮ ಬಿಲ್‌ನ ಪೇಜ್ ನಂ.3 ನೋಡಿದಿರಾ; . ಅದರಲ್ಲಿ ಅಮೆಂಡ್‌ಮೆಂಟ್ 6 ನೋಡಿ.

ಶ್ರೀ ಆರ್.ಎಲ್. ಜಾಲಪ್ಪ : ಅದನ್ನೆ ನಾನು ಹೇಳುತ್ತಿರುವುದು This applied to under clause sub-section (b).

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಮ್ಮಲ್ಲಿ ಇರತಕ್ಕಂಥದ್ದನ್ನು ನಾನು ಓದುತ್ತೇನೆ. ತಾವು ನೋಡಿ. ಈಗ ಇವರು (3)ರಲ್ಲಿ ಕೊಟ್ಟಂಥದ್ದು 6 ಅಮೆಂಡ್‌ಮೆಂಟ್. ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 63 ಏನು ಹೇಳುತ್ತದೆ ಅಂದರೆ-

"In section 63 of the Principal Act, after sub-section (2) the following shall be inserted:

namely: 2(a): The ceiling area for a person who is a tonant undr clause (b) of Sub-section (2) of Section (5) shall be 40 units.

ಶ್ರೀ ಆರ್.ಎಲ್. ಜಾಲಪ್ಪ : Yes. What is thatt under clause (b) of sub-section (2)? What is that?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಟೆನೆಂಟ್ ಅಂದರೆ....

ಶ್ರೀ ಆರ್.ಎಲ್. ಜಾಲಪ್ಪ : ಟೆನೆಂಟ್ ಅಂದರೆ, it is clearly stated here. ನೋಡಿ ಸೆಕ್ಷನ್ 5ರ 2ಬಿ ಒಳಗೆ,

"to any land leased after the commencement of the Karnataka Land Reforms Act, 1995 in the districts of Uttara Kannada, Dakshina Kannada etc." for whom this is referred to.

ಶ್ರೀ ಕಾಗೋಡು ತಿಮ್ಮಪ್ಪ : ಈ ಲೀಸ್ ಕೊಡುವುದಕ್ಕೆ ಬರುವುದಿಲ್ಲ

ಶ್ರೀ ಆರ್.ಎಲ್. ಜಾಲಪ್ಪ : ಇದರೊಳಗೆ ಲೀಸ್ ಕೊಡಬಹುದು ಎಂದು ಮಾಡಿದ್ದೇವಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು ಕಡೆ ನೀವು ಟೆನೆನ್ಸಿ ಕ್ರಿಯೇಟ್ ಮಾಡುವುದಿಲ್ಲ ಎಂದು ಹೇಳುತ್ತೀರಿ. Except you have brought amendment earlier except soldiers, seamen ಇವರಿಗೆ ಮಾತ್ರ ಸೆಕ್ಷನ್ 5ರಲ್ಲಿ ತಾವು ಅಮೆಂಡ್‌ಮೆಂಟ್ ತಂದಿದ್ದೀರಿ. ಬೇರೆಯವರಿಗೆ ಯಾರಿಗೂ ಕೂಡ ಟೆನೆನ್ಸಿ ಕ್ರಿಯೇಟ್ ಮಾಡುವುದಕ್ಕೆ ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಆದರೆ ಇಲ್ಲೇನು ಹೇಳುತ್ತೀರಿ ಎಂದರೆ ಅದನ್ನು ಅಂಥ ಟೆನೆಂಟ್‌ಗಳಿಗೆ 40 ಯೂನಿಟ್ ಎನ್ನತಕ್ಕಂಥದ್ದನ್ನ ಹೇಳಿದಿರಿ. ಮೇಲೆ ಓನರ್ ಇರುವವನು 20 ಯೂನಿಟ್ ಇರಬಹುದು, ಟೆನೆಂಟ್ ಇರುವವರು 40 ಯೂನಿಟ್ ಇರಬಹುದು ಅವನಿಗೆ ಲೀಸ್ ಕ್ರಿಯೇಟ್ ಮಾಡುತ್ತೀರಿ. ಮಾನ್ಯ ಅಧ್ಯಕ್ಷರೆ, ಇದೇನು ನನಗೆ ಅರ್ಥವಾಗಲಿಲ್ಲ. ಅಮೇಲೆ ಲೀಸ್ ಕ್ರಿಯೇಟ್ ಮಾಡುತ್ತೀರಿ. ಮಾನ್ಯ ಅಧ್ಯಕ್ಷರೆ, ಇದೇನು ನನಗೆ ಅರ್ಥವಾಗಲಿಲ್ಲ, ಆಮೇಲೆ ಸೀಲಿಂಗ್ ಲಿಮಿಟ್ ಮೊದಲು ಅದರ ಬಗ್ಗೆ ಏನು ಹೇಳುತ್ತೀರಿ ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ : ಅಮೆಂಟ್‌ಮೆಂಟನ್ನು ತರುವ ಉದ್ದೇಶವೇ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗ ಇರೆಗ್ಯುಲರ್ ಆಗಿ ಏನು ಲೀಸ್‌ಗೆ ಹೋಗುತ್ತಿದ್ದಾರೆ ಅದನ್ನು ರೆಗ್ಯುಲರೈಸ್ ಮಾಡಬೇಕೆಂದು ಇದನ್ನು ತಂದಿರುವುದು. ಇದನ್ನು ನಿಮ್ಮ ಕಾಲದಲ್ಲೂ ಪ್ರಪೋಸ್ ಮಾಡಿದಿರಿ. ನಾನು ಉತ್ತರವನ್ನು ಕೊಡುವಂಥ ಕಾಲದಲ್ಲಿ ಅದನ್ನೆಲ್ಲಾ ಕೊಡುತ್ತೇನೆ, ತಾವು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈ ಮಾತನ್ನು ಮೊದಲೇ ಹೇಳಿದ್ದೇನೆ ಅಧ್ಯಕ್ಷರೆ, ಅವರು ಪದೇ ಪದೇ ನಿಮ್ಮ ಕಾಲದಲ್ಲಿತ್ತು, ನಿಮ್ಮ ಕ್ಯಾಬಿನೆಟ್‌ನಲ್ಲಿತ್ತು ಎಂದು ಹೇಳುತ್ತಾರೆ. ನಾನು ಕೇಳುವುದೇನೆಂದರೆ ನ್ಯಾಯ. ಇನ್ನೊಬ್ಬರು ಯಾರೋ ಅನ್ಯಾಯವನ್ನು ಮಾಡಿದ್ದರು ಎಂದು ತಿಳಿದುಕೊಳ್ಳಿ, ಇಲ್ಲ ಅವರು ಸರಿಯಿಲ್ಲ ಎಂದು ತಿಳಿದುಕೊಳ್ಳಿ ನೀವೇನು ಮಾಡಿದಿರಿ ಎಂದು ನಾನು ತಮ್ಮನ್ನು ಕೇಳುವುದು. ನೀವು ಪದೇ ಪದೇ ಅದನ್ನೇ ಹೇಳುತ್ತಾ ಡಿಫೆಂಡ್ ಮಾಡುವುದು ಬೇಡ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : 5ನೇ ಪ್ರಕರಣದ 2ನೇ ಉಪ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಗೇಣಿದಾರನಾಗಿರುವುದಕ್ಕೆ ಪರಮಾವಧಿ ವಿಸ್ತೀರ್ಣ 40 ಯೂನಿಟ್‌ಗಳಾಗಿರತಕ್ಕದ್ದು ಎಂದು ಹೇಳುತ್ತಾರೆ. ಗೇಣಿದಾರನಿಗೆ ಲ್ಯಾಂಡ್ ಲಿಮಿಟ್ ಹೇಗೆ ಬರುತ್ತೆ. ಅವರು ಹೇಗೆ ಗೇಣಿದಾರ ಆಗಲಿಕ್ಕೆ ಆಗುತ್ತೆ? 40 ಯೂನಿಟ್ ಇರತಕ್ಕಂಥವನು ಗೇಣಿದಾರನಾಗುತ್ತಾನೆ, ಎಲ್ಲಿ ಅದು ಸಾಧ್ಯವಾಗುತ್ತದೆ? 40 ಯೂನಿಟ್‌ಗೆ ಹೇಗೆ ಹಿಡುವಳಿ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ 40 ಯೂನಿಟ್‌ವರೆಗೂ ತೆಗೆದುಕೊಳ್ಳಬಹುದು ಎಂದು ಅಮೆಂಡ್‌ಮೆಂಟ್ ತಂದಿದ್ದೇವೆ. ಎಲ್ಲಿದ್ದಾರೆ ಅಂದರೆ....

SRI KAGODU THIMPPA : Lease means, what is that? ಅದಕ್ಕೂ ಇದಕ್ಕೂ ಹೇಗೆ ಬರುತ್ತದೆ?

ಶ್ರೀ ಆರ್.ಎಲ್. ಜಾಲಪ್ಪ : ಜಮೀನ್ದಾರರ ಹತ್ತಿರ ಲೀಸ್‌ಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆ? ಆ ಲೀಸ್‌ಗೆ ಇಲ್ಲಿ ಪ್ರಾವಿಷನ್ ಮಾಡಿಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಲ್ಯಾಂಡ್ ಲಾರ್ಡ್ ಲೀಸ್ ಕೊಡುವುದಾದರೆ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಅವರೇಜ್ ಹೋಲ್ಡಿಂಗ್ ಎಷ್ಟು ಎಂದು ಹೇಳಿ. Not more than five acres ಈಗ ದಕ್ಷಿಣ ಕನ್ನಡ ಜಿಲ್ಲೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಆವರೇಜ್ ಹೋಲ್ಡಿಂಗ್ ಎಷ್ಟು ಬರುತ್ತದೆ ಎಂಬುದನ್ನು ತೆಗೆಯಿರಿ.

ಶ್ರೀ ಆರ್.ಎಲ್. ಜಾಲಪ್ಪ : ಅಲ್ಲಿ ಒಬ್ಬನಿಗೆ ಎರಡೇ ಎಕರೆ ಇದೆ ಎಂದು ಇಟ್ಟುಕೊಳ್ಳಿ ಅಲ್ಲಿ 40 ಜನ ಸೇರಿಕೊಳ್ಳಬಹುದು;

(ಗೊಂದಲ)

SRI KAGODU THIMAPPA : It could be a contract between individuals ಜಾಯಿಂಟ್ ಲೀಸ್ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ರೀತಿಯಾಗಿ ಜಾಯಿಂಟ್ ಲೀಸ್ ಕೊಡುವುದಕ್ಕೆ ಬರುವುದಿಲ್ಲ.

SRI R.L. JALAPPA : We have made provision for taking the land on lease. It was prohibited earlier. Now we have made a provision. It was prohibited earlier.

SRI M. MALLIKHARJUN KHARGE : Section (5) is about prohibition of lease. You could have amended here.

SRI R.L. JALAPPA : We have relaxed it now. ಇಲ್ಲ ಇದನ್ನು ಇಲ್ಲೇ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲು ನಾನು ಮಾತನಾಡುವುದಕ್ಕೆ ಬಿಡಿ, ತಾವು ಉತ್ತರವನ್ನು ಕೊಡತಕ್ಕಂಥ ಕಾಲದಲ್ಲಿ ಹೇಳಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಸೆಕ್ಷನ್ 5ನಲ್ಲಿ ಏನು ತಂದಿದ್ದಾರೆ ಅಂದರೆ ನಾನು ಓರಿಜಿನಲ್ ಆಕ್ಟ್ ಮತ್ತು ಇಲ್ಲೂ ಹೇಳುತ್ತೇನೆ.

Prohibition of lease etc.

"Save as provided in this Act after the date of commencement Act, no tenancy shall be created or continued in respect of any land nor shall any land be leased for any period whatsoever. Nothing in sub-section on (1) shall by a soldier or a seaman...

ಆಮೇಲೆ ಈಗೇನು ಮಾಡಿದಿರಿ ಅಲ್ಲಿ ಕ್ರಿಯೇಟ್ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿ ಇಲ್ಲಿ ಸೆಕ್ಷನ್ 5ನಲ್ಲಿ ಅಮೆಂಡ್‌ಮೆಂಟ್ ತಂದಿರಿ. ಇಲ್ಲಿ ಏನು ತಂದಿರಿ ಎಂದು ಅಂದರೆ,

"In section (5) of the Principal Act, for sub-section (2) the following shall be substituted, namely:

"nothing in the sub-section shall apply to a tenancy created or continued by a solider or a seaman if such tenancy is creatd or continued while he is serving as a solider or a seaman, or within three months before he becomes a solider or a seaman.

(b) "to any land leased after the commencement of the Karnataka Land Reforms Act, 1995 in the districts of Uttara Kannada, and Dakshina Kannada by land owners or persons registered as occupants under the provisions of this Act for thee purpose of utilising the land for acquaculture for a period of not exceeding twenty years and such leasse as may be determined by mutual agreement between the parties and such agreement shall be registered and a copy thereof shall be sent to the Deputy Commisioner"

ಇದರಿಂದ ಏನಾಯಿತು ಅಂದರೆ, ಇಲ್ಲಿ ನೀವು ಹೇಳಬಹುದಾಗಿತ್ತು, ಅದನ್ನು 40 ಯೂನಿಟ್ ಎಂದು ಅಲ್ಲಿ ಹೇಳಿಬಿಟ್ಟಿರಿ. ಅಂದರೆ ಒಬ್ಬ ಟೆನೆಂಟ್ ಇವೊತ್ತು 200 ಎಕರೆ ಇಟ್ಟುಕೊಳ್ಳಬಹುದು. ಲ್ಯಾಂಡ್ ಲಾರ್ಡ್ ಸುಮಾರು 20 ಯೂನಿಟ್ ಮ್ಯಾಕ್ಸಿಮಂ ಎಂದು ಹೇಳಿದರೆ 100 ಎಕರೆ ಅಥವಾ 110 ಎಕರೆ ಆಗುತ್ತದೆ. ಹೀಗೆ ಇವೊತ್ತಿನ ದಿವಸ ಅದನ್ನು ಹೆಚ್ಚಿಗೆ ಮಾಡಿ ಇಂಡಸ್ಟ್ರಿ ಹೆಸರಿನ ಮೇಲೆ ಅಕ್ವಾಕಲ್ಚರ್ ಹೆಸರಿನ ಮೇಲೆ, ಕೆಲವೇ ಜನರಿಗೆ ಲಾಭ ಮಾಡಿಕೊಡತಕ್ಕಂಥ ಪ್ರಯತ್ನ ಇದರಲ್ಲಿ ನಡೆದಿದೆ. ಅದರಿಂದ ಬಡವರಿಗೆ, ರೈತರಿಗೆ ತೊಂದರೆಯಾಗುತ್ತದೆ ಎಂಬ ಮಾತನ್ನೆ ನಾವು ಪದೇ ಪದೇ ಹೇಳುತ್ತಿದ್ದೇವೆ. ಆದರೆ ಈ ಕಡೆ ನಿಮ್ಮ ಲಕ್ಷ್ಯ ಇಲ್ಲ. ಹೇಗೆ ಅನ್ಯಾಯವಾಗುತ್ತಿದೆ ಎಂಬುದು ಈ ಡಬಲ್‌ದೂ ಸೀಲಿಂಗ್ ಮಾಡಿಯೂ ಕೂಡ ಇವತ್ತು ಯಾರಿಗೂ ಅನ್ಯಾಯವಾಗುವುದಿಲ್ಲ ಎಂಬ ಮಾತನ್ನು ತಾವು ಹೇಳಿಕೊಂಡು ಬರುತ್ತಿದ್ದೀರಿ. ಇಷ್ಟೇ ಅಲ್ಲ, ಒಂದು ಕಡೆ ನಾವು ಇರತಕ್ಕಂಥದ್ದನ್ನು ಪ್ರೊಟೆಕ್ಟ್ ಮಾಡುತ್ತೇವೆ ಎಂದು ಹೇಳುತ್ತೀರಿ. ನಾವು ಯಾವ ಬದಲಾವಣೆ ಮತ್ತು ಇರತಕ್ಕಂಥ ಕಾನೂನಿನ ಸ್ಟ್ರಕ್ಚರೇ ಮಾಡಿಲ್ಲ ಛೇಂಜ್ ಮಾಡಿಲ್ಲ ಎನ್ನತಕ್ಕಂಥದ್ದನ್ನು ಹೇಳುತ್ತಿದ್ದೀರಿ. ಇನ್ನೊಂದು ಕಡೆ ನಮ್ಮ ಸೀಲಿಂಗನ್ನು ಜಾಸ್ತಿ ಮಾಡಿ ಕೊಡುತ್ತಿದ್ದೀರಿ ಅದು ಯಾವ ಭಾಗದಲ್ಲೇ ಇರಲಿ. ಇದರಿಂದ ಏನು ತೋರಿಸುತ್ತಿದೆ ಎಂದರೆ ನಿಮ್ಮ ಧಂದ್ವ ನೀತಿ. ಒಂದು ಕಡೆ ಸೀಲಿಂಗ್‌ಗೆ ಅನುಗುಣವಾಗಿದ್ದೇವೆ ಎಂದು ಹೇಳುತ್ತೀರಿ. ಇನ್ನೊಂದು ಕಡೆ ಸೀಲಿಂಗನ್ನು ರಿಲ್ಯಾಕ್ಸ್ ಮಾಡಿ ಸುಮಾರು 210 ಎಕರೆ, 220 ಎಕರೆ ಅವರಿಗೆ ಕೊಡತಕ್ಕಂಥ ವ್ಯವಸ್ಥೆ ಇದರಲ್ಲಿ ಮಾಡಿಕೊಂಡಿದ್ದೀರಿ.

ಅದು ಅಲ್ಲದೆ ತಾವು ಅಷ್ಟಕ್ಕೆ ಸೀಮಿತವಾಗಿ ನಿಂತಿಲ್ಲ, ಅದನ್ನು ಹೇಗೆ ಡೈಲ್ಯೂಟ್ ಮಾಡಿಕೊಂಡು ಬಂದಿದ್ದೀರಿ ಎಂದರೆ, ಈ ಎರಡು ಜಿಲ್ಲೆಗಳಲ್ಲಿ ಈ ರೀತಿಯಾಗಿ ಡೈಲ್ಯೂಟ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ನಮ್ಮ ದೃಷ್ಟಿಯಿಂದ ನಾಳೆ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆಯೋ ಗೊತ್ತಿಲ್ಲ, ಫರ್‌ದರ್ ಸೆಕ್ಷನ್ 79(ಎ)ನಲ್ಲಿ ಅದನ್ನು 1993ರಲ್ಲಿ ಮಾಡಿದರು. ಇದಕ್ಕೆ ಬಹಳ ಜನರು ಒತ್ತಾಯ ಮಾಡಿದರು. ಈ ಒತ್ತಾಯದ ಮೇರೆಗೆ 1974ರಲ್ಲಿ ಮಾಡಿದರು. ಇದಕ್ಕೆ ಬಹಳ ಜನರು ಒತ್ತಾಯ ಮಾಡಿದರು. ಈ ಒತ್ತಾಯದ ಮೇರೆಗೆ 1974ರಲ್ಲಿ 10 ಸಾವಿರ ರೂಪಾಯಿಗಳು ಆದರೆ ಈಗ 1993ರಲ್ಲಿ ಅದರ ವ್ಯಾಲ್ಯೂ ಹೆಚ್ಚು ಕಡಿಮೆ ಅಂದರೆ 50 ಸಾವಿರ ರೂ.ಗಳಾಗಬಹುದು, ಅಥವಾ ಒಂದು ಲಕ್ಷ ರೂಪಾಯಿಗಳಾಗಬಹುದು. ಇದನ್ನು ಮಿತಿಯಲ್ಲಿರುವಂತಹ ಪ್ರಯತ್ನ ಆಗಲೂ ನಡೆದಿತ್ತು. ಆಗ ನನಗೂ ಕೂಡ ಸಾಕಷ್ಟು ಒತ್ತಡ ಬಂದಿತ್ತು ಇಲ್ಲವೆಂದು ಹೇಳುವುದಿಲ್ಲ, ಆದರೂ ಕೂಡ ಆ ಒತ್ತಡಗಳನ್ನು ತಡೆದು ಕೊನೆಗೆ 50 ಸಾವಿರ ರೂಪಾಯಿಗಳಿಗೆ ಮಾತ್ರ ನಾವು ಲಿಮಿಟ್ ಮಾಡಿದೆವು. ಇವತ್ತು ಅಮೆಂಡ್‌ಮೆಂಟ್ ಆಗಿ ಇನ್ನು ಎರಡು-ಎರಡೂವರೆ ವರ್ಷಗಳಾಗಿಲ್ಲ, ಮತ್ತೆ ತಾವು ತಕ್ಷಣ ಎರಡು ಲಕ್ಷ ರೂಪಾಯಿಗಳಿಗೆ ತಂದಿದ್ದೀರಿ. ಎರಡು ಲಕ್ಷ ರೂಪಾಯಿಗಳನ್ನು ಯಾವ ರೈತನು ಸಂಪಾದನೆ ಮಾಡುತ್ತಾನೆ? ನಾನ್-

ಅಗ್ರಿಕಲ್ಚರ್ ಸೋರ್ಸ್‌ನಿಂದ ಯಾರಿಗೆ ಎರಡು ಲಕ್ಷ ರೂಪಾಯಿಗಳು ಬರುತ್ತದೆ ಅವರು ಧಾರಾಳವಾಗಿ ಜಮೀನನ್ನು ಆರಾಮವಾಗಿ ಖರೀದಿ ಮಾಡಬಹುದು. ಅಂದರೆ ಡಾಕ್ಟರ್‌ಗಳು, ಲಾಯರ್‌ಗಳು, ಗೌರ್ವನರ್ಮೆಂಟ್ ಸರ್ವೆಂಟ್ಸ್, ಕೈಗಾರಿಕೋದ್ಯಮಿಗಳು, ಬಿಸಿನೆಸ್ ಮ್ಯಾನ್‌ಗಳು ಇಂತಹ ಪ್ರತಿಯೊಬ್ಬರು ಜಮೀನನ್ನು ಖರೀದಿ ಮಾಡಬಹುದು. ಆ ಕಡೆ ಬಿಸಿನೆಸ್ ಮಾಡಬಹುದು, ಈ ಕಡೆ ಡಾಕ್ಟರ್ ಕೆಲಸ, ಇಂಜನಿಯರಿಂಗ್ ಕೆಲಸ, ಕಂಟ್ರಾಕ್ಟ್ ಕೆಲಸ ಮಾಡಬಹುದು. ಆ ಬ್ಲಾಕ್ ಮನಿಯನ್ನು ತೆಗೆದುಕೊಂಡು ಬಂದು ಇಲ್ಲಿ ಅಗ್ರಿಕಲ್ಚರ್‌ನಲ್ಲಿ ವೈಟ್ ಮಾಡಿಕೊಂಡು ಹೋಗಬಹುದು. ಇದು ಅವರಿಗೆ ಅನುಕೂಲ ಆಗುತ್ತದೆ. ಈಗ ಎಷ್ಟು ಜನರಿಗೆ ರೈತರಿಗೆ, ಬಡವರಿಗೆ ಲಾಭವಾಗುತ್ತದೆ ಎಂಬುದನ್ನು ನಾವೇ ಮಾತನಾಡೋಣ. ನೀವು ಪ್ರಾಮಾಣಿಕವಾಗಿ ಹೇಳಿ ಈಗ 70 ಲಕ್ಷ ರೈತರು ಏನಿದ್ದಾರೆ. ಈ ರೈತರ ಪೈಕಿ ಎಷ್ಟು ಜನರಿಗೆ ಅನುಕೂಲವಾಗುತ್ತದೆ? ಬೇರೆಯವರು ಹೆಚ್ಚು ಜಮೀನು ಇರುವಂಥಾ ವ್ಯಕ್ತಿಗಳು ಪುನಃ ಜಮೀನನ್ನು ತೆಗೆದುಕೊಳ್ಳಬಾರದೆಂಬ ದೃಷ್ಟಿಯಿಂದಲೇ ನಾವು ಸೀಲಿಂಗ್ ಹಾಕಿದ್ದು. Because it should bee equally distributed. ಎನ್ನುವಂಥಾದ್ದು ಸೋಷಿಯಲ್ ಜಸ್ಟೀಸ್ ಮಾಡಬೇಕೆಂಬ ಅದರ ಆಧಾರದ ಮೇಲೆ ಇದನ್ನು ಮಾಡಿದ್ದುದು. ಅದಕ್ಕೆ ನೀವು ಏನು ಮಾಡಿದ್ದೀರಿ. ನೀವು 10 ಸಾವಿರ ರೂ.ಗಳು ಮಾಡಿಲ್ಲವೆ? ಎಂದು. 50 ಸಾವಿರ ರೂ.ಗಳು ಮಾಡಿದ್ದೀರಿ. ಏಕೆ ಮಾಡಿದ್ದೀರಿ ಎಂದು ಕೇಳುವುದು ಇದು ಏನು ವಾದವೇ? ಇವತ್ತು ಮಾಡುವುದು 2 ಲಕ್ಷ ರೂ.ಗಳು ಇದು ಏನೋ 10-15 ವರ್ಷಗಳಾಗಿತ್ತು ಎಂದರೆ ಮತ್ತೆ ಇದೆ ಕಾನೂನು ಇತ್ತು ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದನ್ನು ಮಾಡಿ ಇನ್ನು ಎರಡು ವರ್ಷಗಳೂ ಕೂಡ ಆಗಿಲ್ಲ, ಈಗ ನಾವು ತಪ್ಪು ಮಾಡಿದೆವು ಎಂದು ನೀವು ದೊಡ್ಡ ತಪ್ಪನ್ನು ಮಾಡುತ್ತೀರೋ? ನಾನು ಕೇಳುವುದೇನೆಂದರೆ? ನಾವು ಮಾಡಿದ ತಪ್ಪಿಗೋಸ್ಕರ ನಮ್ಮ ತಪ್ಪನ್ನು ಕಂಡು ಹಿಡಿದು ನೀವು 50 ಸಾವಿರ ರೂ.ಗಳನ್ನು ಮಾಡಿದ್ದೀರಿ. ಈಗ ಎರಡು ಲಕ್ಷ ಮಾಡುತ್ತೇವೆ ಏನು ಮಾಡುತ್ತೀರೊ ಮಾಡಿಕೊಳ್ಳಿ ಎಂದರೆ ಏನು ಮಾತಿದು?

ಶ್ರೀ ಆರ್.ಎಲ್. ಜಾಲಪ್ಪ : ಏನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ ಎಂದು ಹೇಳಿದ್ದೇವಯಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ವಾದನೇ ಹಾಗೆ ಇದೆ. ನಿಮ ಧಾಟಿ ನೋಡಿದರೆ ಹೌದು, ನಿಮ್ಮ ಕಾಲದಲ್ಲಿ ಆಗಿಲ್ಲ, ನೀವು ಏನು ಮಾಡಿದ್ದೀರಿ, ಎಂದು ಈ ರೀತಿಯಾಗಿ ವಿತ್ತಂಡವಾದ ಇದ್ದರೆ ಏನು ಮಾಡೋಣ. ನಾವು ಹೇಳುವುದೇನೆಂದರೆ ಮಾನ್ಯ ಜಾಲಪ್ಪನವರ ಕಾಲದಲ್ಲಿ ಅವರ ಆಶೀರ್ವಾದದಿಂದಲೂ, ಅವರ ಸಹಕಾರದಿಂದಲೂ ಅವರ ಬೆಂಬಲದಿಂದಲೂ ಈ ಕಾನೂನು ಬಂತು. ಅವತ್ತು ಕೂಡ ನಂಬಿಕೆ ಇತ್ತು. ಆ ಕಾನೂನನ್ನು ಉಳಿಸಿಕೊಂಡು ಹೋಗಿ. ಈ ರಾಜ್ಯದಲ್ಲಿರುವಂತಹ ರೈತರ ರಕ್ಷಣೆ ನೀವು ಮಾಡಿ ಎಂದು ನಾವು ಹೇಳಿಕೊಂಡರೆ ಇನ್ನು ಅದರ ಬೆಲೆ ಎರಡು ಲಕ್ಷ ರೂ.ಗಳನ್ನು ಏಕೆ ಮಾಡಬಾರದು. ಇಲ್ಲೀಗಲ್ ಮಾಡಿಕೊಳ್ಳುತ್ತಾರೆಂದರೆ, ಇವತ್ತು ಇಲ್ಲೀಗಲ್ ಬಹಳ ನಡೆಯುತ್ತಿದೆ. ಟ್ರಾಫಿಕ್‌ಗಳಲ್ಲಿ ವಿದ್ಯಾರ್ಥಿಗಳು ಏನು ಮಾಡುತ್ತಾರೆ ಎಂದರೆ ಮೋಟಾರ್ ಸೈಕಲ್‌ಗಳ ವೇಗ ಇಷ್ಟೆ ಇರಬೇಕೆಂದು ಇದ್ದರೂ ಅವರು ಭರ್ ಎಂದು ಓಡಿಸುತ್ತಾರೆ. ಅಂದರೆ ಅದರ ಅರ್ಥವೇನೆಂದರೆ ಅವರು ಹಾಗೆ ಮಾಡುತ್ತಾರೆಂದು ಟ್ರಾಫಿಕ್ ರೂಲ್ಸ್ ತೆಗೆದುಹಾಕುವುದಕ್ಕೆ ಆಗುತ್ತದೆಯೇ? ಅವರು ಏನು ಮಾಡಿದರೂ ನಡೆದುಕೊಂಡು ಹೋಗುತ್ತದೆಂದು ಎನ್ನುತ್ತಾರೆ. ಹೀಗಾಗಿ ಅವರ ವಾದ ಏನು ಎಂದರೆ, ನಾವು ಇಂತಹ ಕಾನೂನನ್ನು ಇಟ್ಟರೂ ಕೂಡ ಎಷ್ಟೇ ಜನರು ಅಕ್ಕ ಪಕ್ಕದಲ್ಲಿ ಇಲ್ಲೀಗಲ್ ಆಗಿ ಜಮೀನುಗಳನ್ನು

ಮಾಡಿಕೊಂಡಿದ್ದಾರೆ. ಅದಕ್ಕೋಸ್ಕರವೆ ಇದು ಇದ್ದರೆ ಏನು ಲಾಭ ಅಂತ ಹೇಳಿದರೆ ಆ ವಾದ ಸರಿಯಿಲ್ಲ ಆದುದರಿಂದ ಅದನ್ನು ತಡೆಯುವಂತಹ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡೋಣ. ಅವರನ್ನು ಬಲಿ ಹಾಕುವಂಥ ಪ್ರಯತ್ನವನ್ನು ಮಾಡೋಣ. ಆದರೆ ಯಾವುದೇ ಒಂದು ಕಾನೂನು ಎಷ್ಟೇ ಒಳ್ಳೆಯದಿದ್ದರೂ ಕೂಡ ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುವಂತಹ ಜನ ಸರಿಯಾಗಿ ಇಲ್ಲದೆ ಹೋದರೆ ತೋಂದರೆಯಾಗುತ್ತದೆ. ತಪ್ಪುಗಳು ಆಗಬಹುದು ಆ ತಪ್ಪನ್ನು ನೀವು ಸರಿ ಮಾಡಿ ಎಂದು ಹೇಳುತ್ತೇನೆ. ಆ ತಪ್ಪನ್ನು ಎತ್ತಿ ಹಿಡಿದು ಹೇಳಿ ನಾನು ದೊಡ್ಡ ತಪ್ಪನ್ನು ಮಾಡುತ್ತೇನೆಂದು ಏಕೆ ಹೇಳುತ್ತೀರಿ? ಇದರಿಂದ ಏನಾಗುತ್ತದೆ ಎಂದರೆ ನಾನ್‌ಅಗ್ರಿಕಲ್ಚರ್‌ನಲ್ಲಿ ಹೆಚ್ಚಿನ ಪ್ರೋತ್ಸಾಹ ಬಂದಂತೆ ಆಗುತ್ತದೆಯೇ ಹೊರತು ಅಗ್ರಿಕಲ್ಚರ್‌ಗೆ ಅಲ್ಲ. ಇವತ್ತು ಯಾರು ಒಂದು ವರ್ಷಕ್ಕೆ ಎರಡು ಲಕ್ಷ ರೂಪಾಯಿಲಗಳನ್ನು ಸಂಪಾದನೆ ಮಾಡುತ್ತಾರೆ ಯಾರು ಇನ್‌ಕಮ್‌ಟ್ಯಾಕ್ಸ್ ಕಟ್ಟುತ್ತಾರೆ ಅವರಿಗೆ ಯಾರಿಗೆ 25-030 ಸಾವಿರ ರೂ.ಗಳ ಆದಾಯ ವಿರುತ್ತದೆಯೋ ಅಂಥವರು ಜಮೀನುಗಳನ್ನು ಖರೀದಿ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಿರೋ? ಅದು ನಿಮ್ಮ ತತ್ವವೇ? ಅದು ನಿಮ್ಮ ನೀತಿಯೇ ಎಂದು ನಾನು ಕೇಳುತ್ತೇನೆ. ನೀವು ಪ್ರಾಮಾಣಿಕವಾದ ಯೋಚನೆ ಮಾಡಿದ್ದರೆ ಖಂಡಿತವಾಗಿ ನೀವು ಈ ಅಮೆಂಡ್‌ಮೆಂಟ್ ಅನ್ನು ತರುತ್ತಾ ಇರಲಿಲ್ಲ. ಅದಕ್ಕೆ ಮಾನ್ಯ ಮಂತ್ರಿಗಳು ಮಂತ್ರಿಗಳಾದ ಮೇಲೆ ಕೆಟ್ಟು ಹೋಗಿದ್ದಾರೆಂದಲ್ಲ, ಇತ್ತೀಚೆಗೆ ಅವರ ವಿಚಾರ ಧಾರೆ ಬದಲಾಗಿದೆ. ಅವರಿಗೆ ಏನಾಗಿದೆ ಎಂದರೆ ಬೆಂಗಳೂರಿನ ಸುತ್ತಮುತ್ತಲು ನೋಡಿ ಅವರು ಈ ಕನ್‌ಕ್ಲೂಷನ್‌ಗೆ ಬಂದಿದ್ದಾರೆ. ಇದರಿಂದ ಬಹಳ ದೊಡ್ಡ ಪರಿಣಾಮ ರೈತರ ಕುಟುಂಬದ ಮೇಲೆ ಆಗುತ್ತದೆ. ನಾಳೆ ದಿವಸ ಹಣವಿರುವವರು ಜಮೀನುಗಳನ್ನು ಖರೀದಿ ಮಾಡಿಕೊಂಡು ಹೋಗುತ್ತಾರೆ. ಎಲ್ಲೆಲ್ಲಿ ಬಡವರು ಇದ್ದಾರೆ, ಹಣದ ಟೆಂಪ್ಟೇಶನ್ ಎಲ್ಲಿ ಇರುತ್ತದೆ ಅಲ್ಲಿ ಒಂದು ಎಕರೆಗೆ 10 ಸಾವಿರ ರೂಪಾಯಿಗಳಿಗೆ ಸಿಕ್ಕುವ ಕಡೆ 15-20 ಸಾವಿರ ರೂಪಾಯಿಗಳಿಗೆ ತೆಗೆದುಕೊಂಡರೆ ಅವನು ತಕ್ಷಣ ಸಾಕು ಎನ್ನುತ್ತಾರೆ.

ಆದರೆ ನಮ್ಮ ನೀತಿ ಹಾಗೆ ಇರಲಿಲ್ಲ ನಮ್ಮ ನೀತಿ ಏನಿತ್ತು ಎಂದರೆ if he is ready to sell ಅವನು ಮಾರಬಾರದೆಂಬ ದೃಷ್ಟಿಯಿಂದ ಲೇರಿಸ್ಟ್ರಿಕ್ಷನ್ಸ್ ಹಾಕಿದ್ದೇವು. 15 ವರ್ಷಗಳ ಕಾಲ ಇಂಪ್ಲೀಸ್ ಮಾಡಿದೆವು. ಅದ ಒಂದಕ್ಕೆ ಅಲ್ಲ, ಎಸ್.ಸಿ. ಎಸ್.ಟಿ ಆಕ್ಟ್‌ನಲ್ಲೂ ಕೂಡ ಮಾಡಿದೆವು. ನಿಮಗೆ ಹೇಳಬೇಕೆಂದರೆ ಶ್ರೀಮಾನ್ ಬಸವಲಿಂಗಪ್ಪನವರ ಕಾಲದಲ್ಲಿ ಈ ಕಾನೂನು ಬಂತು. The Karnataka Scheduled Castes/Scheued Tribes (Prohibition of Certain Transfer of Lands) Act, 1978 ಅದನ್ನು ಏಕೆ ತಂದದ್ದು ಎಂದರೆ ಅವರು ಟ್ರಾನ್ಸ್‌ಫರ್ ಮಾಡಬಾರದು, ಅವರು ದುಡ್ಡು ಸಿಗುವುದೆಂದರೆ ಮಾಡಿಯೇ ಮಾಡುತ್ತಾರೆ. ರೈತರಿಗೆ ಇರುವಂಥಾದ್ದು ಭೂಮಿ ಅವರ ಆಸ್ತಿಯನ್ನು ಮಾಡಿಕೊಳ್ಳಬಾರದೆಂಬ ಉದ್ದೇಶದಿಂದ ಅವರ ಮೇಲೆ ಪ್ರೆಷರ್ ಇರುವಂತಹ ಅವರು ಇರುವಂತಹ ಕಾನೂನಿನ ಒತ್ತಡದಿಂದ, ಆ ಒತ್ತಡದ ಬೈಕಟ್ಟಿನಲ್ಲಿ ಅವನು ಆ ಜಮೀನನ್ನು ಬಿಟ್ಟು ಕೊಡುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಆಗ ಅನಿವಾರ್ಯವಾಗಿ ಅವನಲ್ಲೇ ಭೂಮಿ ಉಳಿದುಕೊಳ್ಳುತ್ತಿತ್ತು, ಅವರು ಸಣ್ಣಪುಟ್ಟ ಬಂಗಾರ, ಮನೆ ಇಲ್ಲ ಏನೋ ಅವನಲ್ಲಿ ಇರುವುದನ್ನು ಮಾರಿಕೊಳ್ಳುತ್ತಿದ್ದನು. ಆದರೆ ಅವನು ಜಮೀನನ್ನು ಮಾರಿಕೊಳ್ಳುವುದಕ್ಕೆ ಹೆದರುತ್ತಿದ್ದನು. ಇದನ್ನು ತೆಗೆದುಕೊಳ್ಳುವವರೂ ಸಹ ಹೆದರುತ್ತಿದ್ದರು. ಅದಕ್ಕೆ ನಾನು ಹೇಳುವುದೆನೆಂದರೆ ಈ ಎಲ್ಲಾ ಕಂಡೀಷನ್ಸ್ ಹಾಕಿದ್ದು ಏಕೆಂದರೆ ನಾಳೆ ಜಮೀನು ಪರಭಾರೆ ಮಾಡುವುದಕ್ಕೆ ಅವಕಾಶವಿರಬಾರದು ಎಂದು ಮಾಡಿದ್ದುದು. ಇವತ್ತು ಏನಾಗಿದೆ ಎಂದೆರ ನಾವು ಉದಾರೀಕರಣವಿದೆ ಎಂದು ಹೇಳಿಕೊಂಡು ಈ ಕಾನೂನನ್ನು ಸರಳ ಮಾಡಿಕೊಂಡು ಹೋದರೆ ನಾವಾಗಿಯೇ

ರೈತರ ಹೆಸರನ್ನು ಹೇಳಿಕೊಂಡು ಏನು ಬಂದಿದ್ದೇವೆ, ಆ ರೈತರಿಗೆ ನಾವು ದೊಡ್ಡ ಅನ್ಯಾಯ ಮಾಡಿದ ಹಾಗೆ ಆಗುತ್ತದೆ.

ಈ ಮಾತನ್ನು ತಾವು ಕೂಡ ಮರೆಯಬಾರದು. ಇವತ್ತು ಈ ಕಾನೂನು ಸೆಟಲ್ ಆಗಿದೆ.ಈ ಹೊಂದಿಕೊಂಡಿರುವಂತಹ ಕಾನೂನಿಗೆ ನೀವು ಪುನಃ ಪುನಃ ಕೆಣಕುತ್ತಿದ್ದೀರಿ. ಈ ರೀತಿಯಾಗಿ ಕೆಣಕಿ ಅವರಿಗೆ ಪ್ರಚೋದನೆಯನ್ನು ನೀಡಿ ಮಾರುವಂತಹ ಪರಿಸ್ಥಿತಿಗೆ ತರುತ್ತಿದ್ದೀರಿ. ಅವರು ಮಾರಬೇಕೆನ್ನುವ ಕಡೆ ಶ್ರೀಮಂತರು ತೆಗೆದುಕೊಳ್ಳಬೇಕು. ಅವರು ತೆಗೆದುಕೊಂಡು ಮುಂದೆ ಪರಿಸ್ಥಿತಿ ಏನಾಗುತ್ತದೆ ಎಂದರೆ ಇನ್ನೊಂದು ವರ್ಗ ಹುಟ್ಟಿಕೊಳ್ಳುತ್ತದೆ. ಯಾವ ವರ್ಗಕ್ಕೆ 1973ರಲ್ಲಿ ಅಥವಾ 1961ರಲ್ಲಿ ಯಾವ ಒಂದ ಕಾನೂನನ್ನು ತಂದು ಆ ಒಂದು ವರ್ಗದಿಂದ ಜಮೀನನ್ನು ಪಡೆದುಕೊಂಡಿದ್ದೇವೆ. ಈಗ ಪುನಃ ಹೊಸ ಬಿಸಿನೆಸ್ ವರ್ಗ ಹುಟ್ಟುತ್ತದೆ. 100-200-300 ಎಕರೆ ಜಮೀನು ತೆಗೆದುಕೊಂಡು ರೂಲ್ 109ರ ಪ್ರಕಾರ ಸಾವಿರಾರು ಎಕರೆಗಳು ತೆಗೆದಕೊಳ್ಳಬಹುದು. ಈಗ ನೀವು ಹೇಳುತ್ತೀರಿ, ನಾವು ನೋಡಿಕೊಂಡು ಕೊಡುತ್ತೇವೆಂದು ಹೇಳಿ, ಆದರೆ ಏನು ನೋಡಿಕೊಂಡು ಕೊಡುತ್ತಿರೋ ಅಥವ ಇಲ್ಲವೊ? ನಾನು ಮೊನ್ನೆ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಒಂದು ಜಾಹಿರಾತು ನೋಡಿದೆ. Lloyd construction co., or Finance Co., ಅವರು ಏನೋ ಹೌಸಿಂಗ್ ಪ್ರಾಜೆಕ್ಟ್ ಮಾಡುತ್ತೇವೆಂದು ಸಾವಿರಾರು ಎಕರೆ ಜಮೀನು ಕೇಳಿದಾನೆಂದು ಇದೆ. ಒಂದು ಕಡೆ ಬಡವರಿಗೆ ಸಹಾಯ ಮಾಡಬೇಕೆಂದು, ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್ ಬೆಂಗಳೂರು ಅಥವಾ ಡೆವಲಪ್‌ಮೆಂಟ್ ಅಥಾರಿಟಿ ಎಂದು ಒಂದು ಏಜೆನ್ಸಿಯನ್ನು ಕ್ರಿಯೇಟ್ ಮಾಡಿದ್ದೇವೆ. ಏಕೆಂದರೆ ಯಾರಿಗೂ ಕೂಡ ಡೆವಲಪ್ ಪ್ಲಾಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಅಥವಾ ರೆಸಿಡೆನ್ಸಿ ಪ್ಲಾಟ್ ಅನ್ನು ಖರೀದಿ ಮಾಡುವುದಕ್ಕೆ ಆಗುವುದಿಲ್ಲವೆಂದು ತಿಳಿದುಕೊಂಡು ಈ ಏಜೆನ್ಸಿಯನ್ನು ಪ್ರತಿ ಜಿಲ್ಲೆಗಳಲ್ಲಿ ದೊಡ್ಡ ತಾಲ್ಲೂಕುಗಳಲ್ಲಿ ತಾವ ಕ್ರಿಯೇಟ್ ಮಾಡಿದ್ದೀರಿ. ಆ ರೀತಿಯಾಗಿ ಮಾಡಿ ಇನ್ನೊಂದು ಕಡೆ ಹೌಸಿಂಗ್ ಪ್ರಾಜೆಕ್ಟ್‌ಗೆ ಪರವಾನಗಿಯನ್ನು ಕೊಡುತ್ತೇವೆಂದರೆ ಹೇಗೆ? ಅಂಥ un-scrupulous elements ಬರುತ್ತವೆ ಎಂದು ತಿಳಿದುಕೊಂಡೇ ನೀವು ಈ ಏಜನ್ಸಿಗಳನ್ನು ಕ್ರಿಯೇಟ್ ಮಾಡಿದ್ದುದು. ಈ ಏಜೆನ್ಸಿಯ ಮೂಖಾಂತರ ಕೊಟ್ಟರೆ ಬಡವರಿಗೆ ಅಥವಾ ಅಲ್ಲಿರುವಂಥ ನಾಗರಿಕರಿಗೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಮಾಡಿದ್ದೀರಿ. ಆ ಕಾನೂನಿನ ಚೌಕಟ್ಟಿನಲ್ಲಿ ಕುಳಿತು ಸ್ಪಿಡ್ ಆಫ್ ಮಾಡಿ ಅಥವಾ ಅವರಿಗೆ ಟಾರ್ಗೆಟ್ ಫಿಕ್ಸ್ ಮಾಡಿ. ಅಥವಾರ ಅವರಿಗೆ ಪರ್ಚೆಸ್ ಮಾಡುವಂತಹ ಅಧಿಕಾರವನ್ನು ಮಾಡಿ ಕೊಡಿ. ಈ ಆಶ್ರಯ ಯೋಜನೆಯ ಕೆಳಗೆ ಸಾವಿರಾರು ಮತ್ತು ಲಕ್ಷಾಂತರ ಪ್ಲಾಟ್‌ಗಳನ್ನು ನೇರವಾಗಿ ಪರ್ಚೆಸ್ ಮಾಡಿ ಅವರಿಗೆ ಕೊಡುವುದಕ್ಕೆ ಸಾಧ್ಯವಿಲ್ಲವೆ? ಅದೇ ರೀತಿಯಾಗಿ ತಾವು ಮಾಡುವುದು.ಅದೇ ರೀತಿ ಈ ಎಲ್ಲಾ ಹೌಸಿಂಗ್‌ಪ್ರಾಜೆಕ್ಟ್ ಅನ್ನು ಫೈನಲೇಜ್ ಮಾಡುವುದಕ್ಕೆ ಅವರಿಗೆ ಹೇಳಬಹುದು. ಹೌಸಿಂಗ್ ಬೋರ್ಡ್ ಇದೆ, ಡೆವಲಪ್‌ಮೆಂಟ್ ಅಥಾರಿಟಿ ಇದೆ, ಆದರೆ ಈ ನೆಪದಲ್ಲಿ ಕೈಗಾರಿಕೋದ್ಯಮಿಗಳಿಗೆ ಅಥವಾ ಬ್ಲಾಕ್ ಮನಿಯನ್ನು ಇನ್‌ವೆಸ್ಟ್ ಮಾಡಿಕೊಂಡು ಹೌಸಿಂಗ್ ಪ್ರಾಜೆಕ್ಟ್ ತಂದರೆ ಪುನಃ ಅದನ್ನು ಮಾರಿ ವೈಟ್ ಮನಿ ಮಾಡಿಕೊಂಡು ಹೋಗುವವರಿಗೆ ನಾವು ಅವಕಾಶ ಮಾಡಿಕೊಟ್ಟರೆ ಅವರು ಲಾಭವಿಲ್ಲದೆ ನಮಗೆ ಏನು ಮಾರುವುದಿಲ್ಲ,

4.50 ಪಿ.ಎಂ.

ನೀವು ಸಹ ಮಾಡಿದ್ದೇನು, ನೊ ಲಾಸ್ ನೊ ಪ್ರಾಫಿಟ್ ನಲ್ಲಿ ಮಾಡುತ್ತೇವೆಂದು ಈ ಅಥಾರಿಟಿಯನ್ನು ಕ್ರಿಯೇಟ್ ಮಾಡಿದ್ದುದು. ನೀವು ಅಂದರ ಎಲ್ಲಾ ಹಿಂದಿನ ಸರ್ಕಾರದವರು. ಅಂದಾಗ ನಾವು ಆ ತತ್ವವನ್ನೇ ಬಿಟ್ಟು, ಈ ಸಾಮಾಜಿಕ ನ್ಯಾಯದ

ತತ್ವವನ್ನೇ ಬಿಟ್ಟು ಇವತ್ತು ಅವರವರು ಕಟ್ಟಿಕೊಳ್ಳಲಿ, ಅವರವರು ಮಾಡಿಕೊಳ್ಳಲಿ ಹೌಸಿಂಗ್ ಪ್ರಾಬ್ಲಂ ಆದರೂ ಬಗೆಹರಿಯುತ್ತದೆಂದರೆ, ಅಧ್ಯಕ್ಷರೆ ಇದು ಹೇಗೆ ಆಗುತ್ತದೆಂದರೆ ತಲೆ ನೋವಿದೆ ಎಂದು ನಾನು ತಲೆಯನ್ನೇ ಕತ್ತರಿಸಿ ಇಡುತ್ತೇನೆ ಅದಕ್ಕೆ ಔಷಧಿಯೇ ಬೇಡ ಎಂದ ಹಾಗೆ ಆಗುತ್ತದೆ. ಅದು ಹೇಗೆ ಆಗುತ್ತದೆ. ಇದನ್ನು ನೀವು ಇನ್ನೊಮ್ಮೆ ಪರಿಶೀಲಿಸಿ, ಇದರಲ್ಲಿ ಪ್ರತಿಷ್ಠೆಯ ಪ್ರಶ್ನೆ ಏನು ಇಲ್ಲ. ಯಾವುದೇ ಒಂದು ಕಾನೂನು ಅನ್ನು ಕಾನೂನು ತಿದ್ದುಪಡಿಯಿಂದ ಅಥವಾ ನೀವು ವಾಪಸ್ ತೆಗೆದುಕೊಳ್ಳುವುದರಿಂದ ಜನರಿಗೆ ಅನುಕೂಲವಾಗುತ್ತದೆ ಎಂದರೆ ಇವತ್ತು ಕೂಡ ಆ ಕಾನೂನನ್ನು ವಿತ್‌ಡ್ರಾ ಮಾಡಿಕೊಳ್ಳಬಹುದು. ತಾವು ವಾಪಸ್ ತೆಗೆದುಕೊಳ್ಳಬೇಕು. ತಾವು ವಾಪಸ್ ತೆಗೆದುಕೊಂಡರೆ ಖಂಡಿತವಾಗಿ ನಿಮಗೆ ದೊಡ್ಡ ಹೆಸರು ಬರುತ್ತದೆ. ವಿನಪ್ಪ ಜಾಲಪ್ಪನವರು ಕೊನೆಗೆ ಇದನ್ನು ಅರ್ಥ ಮಾಡಿಕೊಂಡು ತಿಳಿದುಕೊಂಡು ಬಡವರ ಪರವಾಗಿ, ಗೇಣಿದಾರರ ಪರವಾಗಿ, ರೈತರ ಪರವಾಗಿ ಮತ್ತು ಕರ್ನಾಟಕದ ರಾಜ್ಯದಲ್ಲಿರುವ ರೈತರ ಹಿತದೃಷ್ಟಿಯಿಂದ ಇದನ್ನು ವಾಪಸ್ ತೆಗೆದುಕೊಂಡರು ಎನ್ನುವ ಒಂದು ಶಹಭಾಷ್‌ಗಿರಿ ತಮಗೆ ಬರುತ್ತದೆ. ಅದಕ್ಕೆ ಆ ಕೆಲಸವನ್ನು ಅವರು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದಿದ್ದರೆ ತಾವು ಇದರಿಂದ ದೊಡ್ಡ ಒಂದು ಎಸ್ಟೇಟ್ ಏಜೆನ್ಸಿಗಳಿಗೆ ಅಥವಾ ಬಿಸಿನೆಸ್ ಕ್ಲಾಸ್‌ಗೆ ಅಥವಾ ಇಂಡಸ್ಟ್ರೀಯಲಿಸ್ಟ್‌ಗಳಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎನ್ನುವ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಈಗ ಇನ್ನೊಂದು ದೊಡ್ಡ ಹೊಡೆತ ಇದೆಲ್ಲಾ ಒಂದರ ಮೇಲೆ ಹೊಡೆತರೆ.

ಅದನ್ನು ಹೇಗೆ ಮಾಡಿದ್ದಾರೆಂದರೆ, ಯಾವುದಾದರೂ ಒಂದು ಗಿಡವನ್ನು ಕತ್ತರಿಸಬೇಕೆಂದರೆ ಸಣ್ಣದಾಗಿ ಒಂದೊಂದು ಹೊಡೆದುಕೊಳ್ಳುತ್ತಾ ಬಂದಂತೆ ದೊಡ್ಡದಾಗಿ ಹೊಡೆದ ಕೂಡಲೇ ಗಿಡ ಕೆಳಗೆ ಬಿದ್ದೇಬೀಳುತ್ತದೆ ಹಾಗೆ ಈ ಸೆಕ್ಷನ್ 109 ದೊಡ್ಡ ಏಟಾಯಿತು ಇದರಲ್ಲಿ ಅವರು ಏನು ಮಾಡಿದ್ದಾರೆಂದರೆ, ಈಗ ಎಲ್ಲಾ ಕಡೆಯೂ ಈ ರೀತಿ ಆಗುತ್ತಿದೆ. ಹಿಂದೆ ಇದನ್ನೆಲ್ಲಾ ಯೋಚನೆ ಮಾಡಿಯೇ ಏನು ಮಾಡಲಾಗಿತ್ತೆಂದರೆ, ಕೆ.ಐ.ಡಿ.ಬಿ. ಅಮೇಲೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಇವುಗಳನ್ನು ತರಲಾಯಿತು. ಇವೆಲ್ಲವನ್ನೂ ತಂದದ್ದು ಏತಕ್ಕೆಂದರೆ ನೇರವಾಗಿ ಇಂಡಸ್ಟ್ರೀಯಲಿಸ್ಟ್‌ಗೆ ಸಹಾಯವಾಗಬೇಕೆಂದು ಈ ಬೋರ್ಡ್‌ಗಳು ಕ್ರಿಯೇಟ್ ಆಗಿದ್ದುದು. ಲ್ಯಾಂಡ್ ರಿಫಾರಮ್ಸ್ ಆಕ್ಟ್‌ನಲ್ಲಿ ಸಾವಿರಾರು ಎಕ್ಕರೆ ಜಮೀನು ಕೊಡುವುದಕ್ಕಾಗುವುದಿಲ್ಲ, ನೂರಾರು ಎಕ್ಕರೆ ಜಮೀನು ಕೊಡುವುದಕ್ಕಾಗುವುದಿಲ್ಲ ಎಂದು ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್, ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಕೆಳಗೆ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ತರಲಾಯಿತು. ಈ ಪ್ರಾಜೆಕ್ಟ್‌ಗಳಲ್ಲಿ ಲಕ್ಷಾಂತರ ಸಾವಿರಾರು ಎಕ್ಕರೆ ಭೂಮಿಯನ್ನು ಅಕ್ವೈರ್ ಮಾಡಿ ಪ್ರಾಜೆಕ್ಟ್ ಮಾಡುತ್ತಿದ್ದೇವೆ. ಅದು ಸಣ್ಣ ನೀರಾವರಿ ಇರಬಹುದು, ದೊಡ್ಡ ನೀರಾವರಿ ಇರಬಹುದು, ದೊಡ್ಡ ದೊಡ್ಡ ಕೈಗಾರಿಕೆಗಳು ಇರಬಹುದು. ಆದರೆ ಲಿಬರಲೈಸೇಷನ್ ಹೆಸರಿನ ಮೇಲೆ ಇದರ ಅವಶ್ಯಕತೆ ಏನು, ಇದನ್ನು ಏತಕ್ಕೆ ಮಾಡುತ್ತಿದ್ದೀರಿ? ಕೇಂದ್ರ ಸರ್ಕಾರದವರು ಕೈಗಾರಿಕೆಗಳ ಅಭಿವೃದ್ಧಿಗೋಸ್ಕರ ಕಾನೂನನ್ನು ಲಿಬರಲೈಸೇಷನ್ ಮಾಡಿ, ಕಾನೂನನ್ನು ಸಡಿಲಗೊಳಿಸಿರಿ ಎಂದು ಹೇಳಿದರೇ ಹೊರತು, ಭೂ ಸುದಾರಣೆ ಕಾನೂನನ್ನು ಸಡಿಲಗೊಳಿಸಿ ಎಂದು ಹೇಳಲಿಲ್ಲ, ಲ್ಯಾಂಡ್ ರಿಫಾರಮ್ಸ್ ಅನ್ನು ಲಿಬರಲೈಸೇಷನ್ ಮಾಡಿ ಎಂದು ಹೇಳಲಿಲ್ಲ, ಕೈಗಾರಿಕೆಗಳಿಗೆ ಪರವಾನಿಗೆ ಕೊಡುವ ಬಗ್ಗೆ ಹಾಗೂ ನೀವು ಅವರಿಗೆ ಸಿಂಗಲ್ ವಿಂಡೊ ಏಜೆನ್ಸಿ ಮಾಡಿ ಒಂದೇ ಕಡೆ ಸೇರಿಸಿ ಯಾವ ರೀತಿಯಾಗಿ ಸಹಾಯ ಮಾಡಬೇಕೆನ್ನುವುದರ ಬಗ್ಗೆ ಹೇಳಿದ್ದೆ ಹೊರತಾಗಿ ಭೂ ಸುಧಾರಣೆ ಕಾನೂನಿನ ಬಗ್ಗೆ ಯಾವತ್ತು ಪ್ರಧಾನ ಮಂತ್ರಿಗಳು ಕರೆದು ನೀವು ಈ ತಿದ್ದುಪಡಿಗಳನ್ನು ತನ್ನಿ, ಈ ರೀತಿಯಾಗಿ ಮಾಡಿ ಎಂದು ಯಾರೂ ಕೂಡ

ಗೈಡ್‌ಲೈನ್ಸ್ ಅನ್ನು ಕಳುಹಿಸಿಲ್ಲ, ಅವರು ಕಳುಹಿಸದೆ ಇದ್ದರೂ ಕೂಡ ಇದು ನಿಮ್ಮ ವ್ಯಾಪ್ತಿ ಯಲ್ಲಿರತಕ್ಕಂಥದ್ದು. ಏಕೆಂದರೆ, ಇದರ ಮೇಲೆ ನಿಮಗೆ ಪ್ರೀತಿ ಇದ್ದಿದ್ದರೆ, ಇದರ ಮೇಲೆ ನಿಮಗೆ ವಿಶ್ವಾಸವಿದ್ದರೆ ಈ ತತ್ವದ ಮೇಲೆ ನಿಮಗೆ ನಂಬಿಕೆ ಇದ್ದರೆ, ಯಾರು ಏನೇ ಹೇಳಲಿ ನೀವು ಖಂಡಿತವಾಗಿಯೂ ಇದನ್ನು ತರುತ್ತಿರಲಿಲ್ಲ. ಅಧ್ಯಕ್ಷರೆ, ಏತಕೆಂದರೆ, ನಮ್ಮ ರಾಜ್ಯದಲ್ಲಿ ಹತ್ತು ಎಕರೆ ನೀರಾವರಿ ಭೂಮಿ ಮತ್ತು ಐವತ್ತು ನಾಲ್ಕು ಎಕರೆ ಲಿಮಿಟ್ ಉಂಟು. ಮಾಹಾರಾಷ್ಟ್ರದಲ್ಲಿ ನೂರು ಎಕ್ಕರೆ ಇದೆ, ಆಂಧ್ರಪ್ರದೇಶದಲ್ಲಿ ಇನ್ನೂ ಜಾಸ್ತಿ ಇದೆ. ನಾವೇಕೆ ಇಷ್ಟು ಕಡಿಮೆ ಮಾಡಿದೆವು ಎಂದರೆ, ಅಂದಿನ ಸಂದರ್ಭಕ್ಕನುಸಾರವಾಗಿ ನಮ್ಮಲ್ಲಿರುವ ಜಮಿನು, ನಮ್ಮಲ್ಲಿರುವ ಈ ಒಂದು ಕೃಷಿ ಕುಟುಂಬಗಳು ಇವನ್ನೆಲ್ಲಾ ಲೆಕ್ಕ ಹಾಕಿಕೊಂಡು ಎಷ್ಟಕ್ಕೆ ನಾವು ಸೀಮಿತಗೊಳಿಸಿದರೆ ಇದರಿಂದ ಎಕನಾಮಿಕ್ ಹೋಲ್ಡಿಂಗ್ ಆಗುತ್ತದೆ, ಹಳ್ಳಿಯಲ್ಲಿರುವ ರೈತರಿಗೂ ಕೂಜ ಅನುಕೂಲವಾಗಬೇಕು ಮತ್ತು ಈ ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ಶೇಕಡ ಎಪ್ಪತ್ತೈದು-ಎಂಬತ್ತರಷ್ಟು ಜನ ಏನು ಈ ಕೃಷಿಯ ಮೇಲೆ ಆಧಾಕಿಸಿದ್ದಾರೆ ಅಥವಾ ಇದೇ ವೃತ್ತಿಯ ಮೇಲೆ ನಂಬಿಕೆ ಇಟ್ಟು ಕೊಂಡ ಇರುವ ಜನ ಯಾರಿದ್ದಾರೆ ಅವರಿಗೆ ಅನುಕೂಲವಾಗಲೆನ್ನುವ ದೃಷ್ಟಿಯಿಂದ ಇದನ್ನು ಮಾಡಿದೆವು. ಅದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆದರೆ ನೀವು ಇವತ್ತು ಏನು ತಿದ್ದುಪಡಿಯನ್ನು ತಂದಿದ್ದೀರಿ ಸ್ವಾಮಿ? ಈ ತಿದ್ದುಪಡಿಯಲ್ಲಿ in Section 19 of the Act for Sub Section (1) the following shall be Substituted, namely : "(1) subject to such rules as may be prescribed and the provisiions of the Karnataka Town & Country Planning Act, 1961, the State Government may by notification, exempt, any land in any area from the provisions of Section 63, 79A, 79B or 80 to be used for, (1) Industrial development the extent of which shall not exceed 20 units."

ಇಪ್ಪತ್ತು ಎಂದರೆ ನೂರು ಎಕರೆ. ನೂರು ಹತ್ತು ಎಕ್ಕರೆಯಷ್ಟು ಭೂಮಿಯನ್ನು ನೀವು ಒಂದು ಕೈಗಾರಿಕೆಗೆ ಕೊಡಬಹುದು. ಎಕ್ಸಮ್ಟ್ ಮಾಡಬಹುದು. ಮತ್ತೆ ಈ ಕೆ.ಐ.ಡಿ.ಬಿ. ಏತಕ್ಕೆ ಇದೆ ಸ್ವಾಮಿ? ಆ ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ನಲ್ಲಿ ಅಕ್ವೈರ್ ಮಾಡಿದಂಥ ಜಮೀನನ್ನು ಹತ್ತಾರು ವರ್ಷಗಳಿಂದ ಯಾರೂ ತೆಗೆದುಕೊಂಡಿಲ್ಲ, ಇವತ್ತು ಕೂಡ ಅನೇಕ ಕಡೆ ಕೊಟ್ಟಂತಹ ಜಮೀನು ಅವತ್ತು ಅಕ್ವೈರ್ ಮಾಡಿದ್ದನೆ. ಕೊಟ್ಟಿರುವಂಥಹದ್ದು. ತಾವು ಹೋದ ಕೂಡಲೇ ರೈತರು ಜಮಿನು ಕೊಡಲು ತಯಾರಿರುತ್ತಾರೇನು? ಆದೆರ, ಅಧ್ಯಕ್ಷರೆ, ಇವತ್ತು ಇದರಿಂದ ಇನ್ನೊಂದು ಏನಾಗುತ್ತದೆಂದರೆ, ಕೃಷಿ ಭೂಮಿಯನ್ನು ಉಧ್ಯಮಿ ನೇರವಾಗಿ ರೈತನಿಂದ ಖರೀದಿ ಮಾಡಿದರೆ ಅಷ್ಟಕ್ಕೆ ಅವನಿಗೆ ಕನ್‌ಸ್ಟ್ರಕ್ಷನ್ ಮಾಡುವುದಕ್ಕೆ ಬರುವುದಿಲ್ಲ, ಅವನು ಪುನಃ ಲ್ಯಾಂಡ್ ರೆವಿನ್ಯೂ ಆಕ್ಟ ಕೆಳಗೆ ಅದನ್ನು ನಾನ್ ಅಗ್ರಿಕಲ್ಚರ್ ಲ್ಯಾಂಡ್ ಎಂದು ಮಾಡಿಕೊಳ್ಳಬೇಕು, ಪುನಃ ಅರ್ಬನ್ ಲ್ಯಾಂಡ್ ಸಿಲಿಂಗ್‌ಗೆ ಪ್ಲಾನ್‌ನಿಂದಲೇ ಬರಬೇಕು. ಅಂದರೆ ಯಾರು ಅವಾಗ ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನಿಂದ ತೆಗೆದುಕೊಂಡಿದ್ದರು ಅವರು ಹೋದ ತಕ್ಷಣ ನೇರವಾಗಿ ಇಂಡಸ್ಟ್ರೀಸ್ ಆಗುತ್ತಿತ್ತೋ ಅವನು ಈಗ ಪುನಃ ಖರೀದಿ ಮಾಡಿ ಅದನ್ನು ನಾನ್ ಅಗ್ರಿಕಲ್ಚರ್ ಮಾಡಿಕೊಂಡು, ಪುನಃ ಅದಕ್ಕೆ ಅರ್ಬನ್ ಲ್ಯಾಂಡ್ ಸಿಲಿಂಗ್ ಏನಾದರೂ ಸಮೀಪವಿದ್ದರೆ ಎಕ್ಸೆಂಪ್ಷನ್ ತೆಗೆದುಕೊಂಡು ಕೃಷಿ ಭೂಮಿಯನ್ನು ಖರೀದಿ ಮಾಡಿದಂಥವನು ಮತ್ತೆ ಸರ್ಕಾರಕ್ಕೆ ಮೂರು ಸಲ ಬರಬೇಕು. ಒಂದು ಕಡೆ ಭೂ ಸುಧಾರಣೆ ಹೊಜೆತ ಇನ್ನೊಂದು ಕಡೆ ನಾವು ಲ್ಯಾಂಡ್ ರೆವಿನ್ಯೂ ಆಕ್ಟ್‌ಗಳನ್ನು ಬದಲಾವಣೆ ಮಾಡಿ ಕೊಳ್ಳಬೇಕು, ಮೂರನೆಯದು, ಅವನು ನಿಮ್ಮಲ್ಲಿ ಅಲೆಯುವುದಲ್ಲದೆ ತಹಸಿಲ್ದಾರ್ ಕಛೇರಿ ಹಾಗೂ ಡೆಪ್ಯೂಡಿ ಕಮೀಷನರ್ ಕಛೇರಿಗೂ ಕೂಡ ಹೋಗಬೇಕು. ಆದರೆ ಕೆ.ಐ.ಡಿ.ಬಿ.ನಲ್ಲಿ

ಏನಾಗುತ್ತಿತ್ತು? ಅವರೆ ನೇರವಾಗಿ ಅಕ್ವೈರಿ ಮಾಡುವುದರಿಂದ ನಿಮಗೆ ಅರ್ಬನ್ ಲ್ಯಾಂಡ್ ಸಿಲಿಂಗ್ ಪ್ರಾಬ್ಲಮ್ ಸಹ ಇರಲಿಲ್ಲ, ನಾನ್ ಆಗ್ರಿಕಲ್ಚರ್ ಪ್ರಾಬ್ಲಮ್ ಸಹ ಇರಲಿಲ್ಲ ಮತ್ತೆ ಬೇರೆ ರೋಡ್ ಪ್ರಾಬ್ಲಮ್ ಸಹ ಇರಲಿಲ್ಲ, ಎಲೆಕ್ಟ್ರಿಸಿಟಿ ಪ್ರಾಬ್ಲಮ್ ಸಹ ಇರಲಿಲ್ಲ, ಹಾಗೂ ವಾಟರ್ ಪ್ರಾಬ್ಲಮ್ ಸಹ ಇರಲಿಲ್ಲ, ಎಲ್ಲಾ ಸೌಲಭ್ಯಗಳೂ ಕೂಡ ಅಲ್ಲಿರುತ್ತದೆ. ಈಗ ಎಲ್ಲವನ್ನೂ ನೀವು ಮಾಡಿಕೊಡಬೇಕಾಗುತ್ತದೆ. ಹೀಗಿರುವಾಗ, ಇವತ್ತಿನ ದಿವಸ ಇಲ್ಲಿ ಅವರಿಗೆ ನೂರು ಎಕರೆ ಜಮೀನು ನೇರವಾಗಿ ಖರೀದಿ ಮಾಡುವುದಕ್ಕೆ ಅವಕಾಶವಿದೆ. ಇನ್ನೊಂದು ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್ಸ್ "(ii) Educational institutions recognised by the State or Central Government to be used for non-agricultural purposes the extent of which shall not exceed 4 units."

ಹಿಂದೆ ಇದಕ್ಕೆ ಬಹಳ ಕಡಿಮೆ ಇತ್ತು. ಒತ್ತಾಯದಿಂದ ಒಂದು ಯೂನಿಟ್ ಮಾಡಿದ್ದರು, ಅಂದರೆ ಐದು ಎಕರೆ ಎಂದು ಇತ್ತು. ಇವತ್ತು ಇಂಡಸ್ಟ್ರೀಸ್‌ಗೆ ಜಮೀನಿದೆ. ಇವತ್ತು ನಾಲ್ಕು ಯೂನಿಟ್ ಎಂದರೆ ಸುಮಾರು ಇಪ್ಪತ್ತೈದು-ಮೂವತ್ತು ಎಕರೆ ಆಗತ್ತದೆ. ಅವರು ಏನು ಮಾಡುತ್ತಾರೆಂಡರೆ, ಅನೇಕ ಕಡೆ ಶಿಕ್ಷಣ ಸಂಸ್ಥೆಗಳವರು ಒಂದೊಂದು ಸಂಸ್ಥೆಯ ಹೆಸರಿನಲ್ಲಿ ಅಂದರೆ, ಈಗ ಯಾವುದೇ ಒಂದು ಕಾಲೇಜಿನಲ್ಲಿ ಇಪ್ಪತ್ತು ಸಂಸ್ಥೆಗಳು ಇದ್ದವೆಂದರೆ ಅವರು ಏನು ಮಾಡುತ್ತಾರೆಂದರೆ, ಹೈಸ್ಕೂಲಿಗೆ ಒಂದು ಇಪ್ಪತ್ತೈದು ಎಕರೆ, ಪ್ರೈಮರಿ ಸ್ಕೂಲಿನ ಹೆಸರಿನಲ್ಲಿ ಒಂದು ಇಪ್ಪತ್ತೈದು ಎಕರೆ, ಕಾಲೇಜಿನ ಹೆಸರಿನಲ್ಲಿ ಒಂದು ಇಪ್ಪತ್ತೈದು ಎಕರೆ, ಹೀಗೆ ಜಮೀನನ್ನು ಹೊಂದಿರುತ್ತಾರೆ. ಹೀಗೆ ಬಂದು ಈ ಕಾನೂನನ್ನು ಡಿಫೀಟ್ ಮಾಡತಕ್ಕಂಥದ್ದು. ಸಿಲಿಂಗ್ ಆಕ್ಟ್‌ಗೆ ಡಿಫೀಟ್ ಮಾಡತಕ್ಕಂಥದ್ದು ಮತ್ತು ಈ ಕಾನೂನಿನ ಮುಖಾಂತರ ಶೋಷಣೆ ಮಾಡತಕ್ಕಂಥದ್ದು ನಡೆಯುತ್ತಿದೆ. ಹೀಗೆ ಮಾಡುವುದರಿಂದ ಮತ್ತೆ ಒಂದು ಹೊಸ ವರ್ಗ ತಯಾರಾಗುತ್ತದೆ. ಯಾವ ವರ್ಗವನ್ನು ಹತ್ತೊಂಬತ್ತು ನೂರ ಅರವತ್ತೊಂದರಲ್ಲಿ, ಎಪ್ಪತ್ತಾಲ್ಕರಲ್ಲಿ ಹತ್ತಿಕ್ಕಿದ್ದೀರಿ ಅದು ಮತ್ತೆ ತಲೆಎತ್ತತಕ್ಕಂಥ ಸಂದರ್ಭ ಇದೆ

ಅದಕ್ಕಾಗಿ ತಾವು ಯೋಚನೆ ಮಾಡಿ. ಎಲ್ಲಿ ಬೇಕು ಅಲ್ಲಿ ಅಕ್ವೈರ್‌ಮಾಡಿಕೊಡಿ. ನೆಸಸಿಟಿ ನೋಡಿಕೊಂಡು, ತಿಳಿದುಕೊಂಡು, ತಾವು ಬೇಕಾದರೆ ಒಂದು ಎಕರೆ ಏನಾದರೂ ಜಾಸ್ತಿ ಬೇಕಾದರೆ ಮಾಡಿಕೊಡಿ. ಆದರೆ ಅವರ ಅವಶ್ಯಕತೆಗನುಸಾರವಾಗಿ ಕೊಡಬೇಕು. ನೀವು ಇಲ್ಲಿ ನೇರವಾಗಿ ಕೊಟ್ಟರೆ ಸಾಕಷ್ಟು ಜನ ಹೋಗುತ್ತಾರೆ, ತರಿಸಿಕೊಳ್ಳುತ್ತಾರೆ. ನಾಳೆ ಏನಾಗುತ್ತದೆ ಎಂದರೆ ಸಾವಿರಾರು ಅಪ್ಲಿಕೇಷನ್ಸ್ ನಿಮ್ಮಲ್ಲಿ ಬಂದಾಗ ಈ ಅಧಿಕಾರ ನೀವು ಇಟ್ಟುಕೊಳ್ಳುವುದಿಲ್ಲ. ನನಗೆ ಈ ತಲೆನೋವು ಏಕೆ ಎಂದು ನೀವು ಏನು ಮಾಡುತ್ತೀರಿ ಅಂದರೆ ಕೊನೆಗೆ ರೆವಿನ್ಯೂ ಸೆಕ್ರೆಟರಿಗೆ ಕೊಡುತ್ತೀರಿ. ರೆವಿನ್ಯೂ ಸೆಕ್ರೆಟರಿ ನನಗೆ ಏಕೆ ತಲೆನೋವು ಎಂದು ಹೇಳಿ ಆ ಜಿಲ್ಲೆಯದು ಲೇಟ್ ಆಗುತ್ತದೆ. ಆ ಜಿಲ್ಲೆಯಲ್ಲೇ ಕೊಟ್ಟು ಬಿಡಿರಿ ಎಂದು ಹೇಳಿ ಆ ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ಗೆ ಕೊಡುತ್ತಾರೆ. ಆಗ ಏನಾಗುತ್ತದೆ, ತರತರದ ಜನ ಜಮೀನನ್ನು ಅಕ್ವೈರ್ ಮಾಡಿಕೊಂಡು ಇವತ್ತಿನ ದಿವಸ ನೂರಾರು ಎಕರೆ ಅವರು ತಮ್ಮಲ್ಲಿ ಇಟ್ಟುಕೊಳ್ಳತಕ್ಕಂಥ ಪ್ರಸಂಗ ಬರುತ್ತದೆ ಅದಕ್ಕಾಗಿ ತಾವು ದಯವಿಟ್ಟು ಕಡೆ ಗಮನವನ್ನು ಕೊಡಿ ಇಲ್ಲದಿದ್ದರೆ ಇದರಿಂದ ತೊಂದರೆ ಇದೆ. ಅದಕ್ಕಾಗಿ ಇಂಥ ತಿದ್ದುಪಡಿಗಳನ್ನು ಕೈಬಿಡುತ್ತೀರಿ ಎನ್ನತಕ್ಕಂಥ ನಂಬಿಕೆ ನನಗೆ ಇದೆ. ಏಕೆಂದರೆ ಬಹುಶಃ ಆಗ ತಮಗೆ ಯಾರೂ ಹೇಳಿರಲಿಲ್ಲ. ಈಗ ನಾವು ಹೇಳುತ್ತಿದ್ದೇವೆ. ಈಗಲಾದರೂ ಇದು ತಮ್ಮ ಮನಸ್ಸಿಗೆ ಬಂದಿದೆ ಅಥವಾ ತಮ್ಮ ಹೃದಯಕ್ಕೆ ನಮ್ಮ ಮಾತುಗಳು ಮುಟ್ಟಿವೆ ಎನ್ನತಕ್ಕಂಥ ಆಸೆ ನನಗೆ ಸ್ವಲ್ಪ ಹುಟ್ಟಿದೆ. ನೋಡೋಣ

ಏನು ಮಾಡುತ್ತೀರಿ. ನಮ್ಮ ಕಳಕಳಿ ಅರ್ಥವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಅಧ್ಯಕ್ಷರೇ, ಮೂರನೆಯದು, 'Places of worship to be specified by the Government by notification whether established or constructed by recognised or registered body for non-agriculture purpose the extent of which shall not exceed one unit.'

ಇದಕ್ಕೂ ಒಂದು ಐದು ಎಕರೆ, ಕೊಡಿ, ಎಲ್ಲಿ ನೆಸೆಸಿಟಿ ಇದೆ ಎಂದು ನೋಡಿ ನೀವೇ ಗ್ರಾಂಟ್ ಮಾಡಿ. ಒಂದು ಐದೈದು ಎಕರೆ ಏಕೆ ಬೇಕು? ನೀವು ಹೀಗೆ ಎಲ್ಲಾ ಕಡೆ 5 ಎಕರೆ, 5 ಎಕರೆ ಕೊಡುತ್ತಾ ಹೋದರೆ,

ಶ್ರೀ ಆರ್.ಎಲ್. ಜಾಲಪ್ಪ : ದುಡ್ಡು ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹಾಗಾದರೆ ಎಲ್ಲವನ್ನೂ ಕೊಟ್ಟು ಬಿಡಿ. ಅದನ್ನು ಬಿಟ್ಟು ದುಡ್ಡು ಬರುತ್ತದೆ ಎಂದು ಖರೀದಿಗೆ ಕೊಟ್ಟರೆ ,ನನ್ನದು ಏನಿದೆ ಬರೀ ಕಾಗದದ ಮೇಲೆ ಬರೆಯುವುದು ಪರ್ಮಿಟೆಡ್ ಎಂದರೆ, ಅಲ್ಲ, you have to use your discretion judiciously in the interest of farmers ಮತ್ತು ಈ ಕಾನೂನು ಸರಿ ಇದೆಯೇ, ಇಲ್ಲವೇ ಎನ್ನುವುದನ್ನು ನೋಡತಕ್ಕಂಥ ಕರ್ತವ್ಯ ನಿಮ್ಮ ಮೇಲೆ ಇದೆ. ನೀವು ರಾಜ್ಯಸಭೆಗೆ ಹೋಗುತ್ತದೆ ಎಂದು ಹೇಳುತ್ತಿದ್ದಿರಿ. ಅದಕ್ಕಾಗಿ ರಾಜ್ಯಸಭೆಗೆ ಹೋಗುವಾಗ ತರಾತುರಿಯಲ್ಲಿ ಇವೆಲ್ಲಾ ಮಾಡಿಬಿಟ್ಟರೇನೋ? ನಾನಂತೂ ರಾಜ್ಯಸಭೆಗೆ ಹೋಗುತ್ತಿದ್ದೇನೆ, ಏನಾದರೂ ಹಾಳಾಗಿ ಹೋಗಲಿ ಇದು ಎಂದು ಹೇಳಿ. ಕಾನೂನು ಮಾಡಿ ಮಹಾರಾಯರೇ. ನಮಗೆ ತೊಂದರೆ ಕೊಡಬೇಡಿ. ಅದೇನೂ ನಮಗೆ ಸಿಕ್ಕುವುದಿಲ್ಲ ಎಂದು ಹೇಳಿ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರಾಜ್ಯ ಸಭಾ ಎಲೆಕ್ಷನ್ ಮುಗಿದು ಹೋಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಸಂತೋಷ ಏನು ಅಂತ ಅಂದರೆ ನಿಮಗೆ ಈಗ 73-74 ವರ್ಷವಾಗಿದೆ. ನೀವು ಸೆಂಚುರಿ ಬ್ಯಾಟ್ಸ್‌ಮೆನ್. ಇವರೆಲ್ಲಾ 75 ಆದರೂ ನಾಟ್ ಔಟ್ ಇವರೆಲ್ಲಾ ಸೆಂಚುರು ಬ್ಯಾಟ್ಸ್‌ಮೆನ್. ಆದರೆ ಒಂದು ಸೆಂಚುರಿತನಕ ಇರತಕ್ಕಂಥ ಜನ ನಿಮ್ಮ ಹೆಸರು ಶಾಶ್ವತವಾಗಿ ಈ ಭೂ ಸುಧಾರಣಾ ಕಾನೂನಿನಲ್ಲಿ ಇರಬೇಕು. ಇಂಥವರು ಬಂದಾಗ ಪುನಃ ನಮ್ಮ ರಕ್ಷಣೆ ಮಾಡಿದರು, ಎಷ್ಟೋ ತೊಂದರೆ ಬಂದರೂ ಕೂಡ ಅದಕ್ಕೆ ಯೀಲ್ಡ್ ಆಗಿಲ್ಲ ಎನ್ನತಕ್ಕಂಥ ಮಾತು ಬರಬೇಕೇ ಹೊರತು, ಲಿಬರಲೈಸ್ ಪಾಲಿಸಿಯಲ್ಲಿ ಅದು ಹೋದಟಿದೆ ಎಂದು ಹೇಳು ನೀವೂ ಅದರಲ್ಲಿ ತೂರಿಕೊಂಡು ಹೋದರೆ ಖಂಡಿತವಾಗಿಯೂ ಅದು ಯಾರಿಗೂ ಕೂಡ ಒಳ್ಳೆಯ ಹೆಸರು ತರುವುದಿಲ್ಲ, ನಿಮಗೂ ತರುವುದಿಲ್ಲ, ನೀವಂತೂ ಪದೇ ಪದೇ ಹೇಳುತ್ತಿದ್ದೀರಿ, ನನಗೆ ಯಾವ ಆಸೆ ಇಲ್ಲ, ಆಕಾಂಕ್ಷೆ ಇಲ್ಲ ಎಂದು. ಅದಕ್ಕಾಗಿ ಆಸೆ. ಆಕಾಂಕ್ಷೆಯ ಪ್ರಶ್ನೆ ಒಂದು ಕಡೆ ಇರಲಿ. ಆದರೆ ನಿಮ್ಮ ಕೈಯಿಂದ ಒಳ್ಳೆಯದು ಮಾಡುವುದಕ್ಕೆ ಅನುವಾದ ಒಳ್ಳೆಯದನ್ನೇ ಮಾಡಿ. ಯಾವುದೇ ಒಂದ ಒಳ್ಳೆಯ ಕೆಲಸವನ್ನು ಮಾಡತಕ್ಕಂಥ ಅಧಿಕಾರ ನಿಮ್ಮ ಕೈಯಲ್ಲ ಸಿಕ್ಕಿದಾಗ ಒಳ್ಳೆಯದು ಮಾಡಬೇಕೇ ವಿನಃ ಅದರಿಂದ ದುರುಪಯೋಗ ಆಗುತ್ತಿತ್ತು, ಕೆಟ್ಟಪು ಆಗುತ್ತಿತ್ತು, ದುಷ್ಪರಿಣಾಮ ಆಗುತ್ತಿತ್ತು ಆ ಕಾನೂನಿನಿಂದ ಅಂತ ಅಂದರೆ ದಯವಿಟ್ಟು ಅದಕ್ಕೆ ಕೈ ಹಾಕುವುದಕ್ಕೆ ಹೋಗಬೇಡಿ ವಯಸ್ಸಿನಲ್ಲಿ,ಇಲ್ಲ ಅಂದರೆ ಜನರ ಶಾಪ ನಿಮಗೆ ತಟ್ಟುತ್ತದೆ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಖಾಂತರ ಅವರಿಗೆ ಹೇಳಬಯಸುತ್ತೇನೆ. ಅದಕ್ಕೆ ಅಧ್ಯಕ್ಷರೆ, ಈ

ತಿದ್ದುಪಡಿ ಕೂಡ, ಒಳ್ಳೆಯದಲ್ಲ, ಇದರಿಂದಲೂ ಕೂಡ ನಾಳೆ ಅನೇಕ ಜನರಿಗೆ ಒಂದು ಎಕ್ಸ್‌ಪ್ಲಾಯಿಟ್ ಮಾಡುತ್ತಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆಮೇಲೆ ನಾಲ್ಕನೆಯ ತಿದ್ದುಪಡಿ.

ಇದು ಏನು? 'A housing project approved by the Stated Government the extent of which shall not exceed 10 units." ಅಂದರೆ, ಇದರಲ್ಲಿ ಸುಮಾರು 55 ಎಕರೆ ನೇರವಾಗಿ ಒಬ್ಬ ಎಸ್ಟೇಟ್ ಏಜೆಂಟ್‌ನ ಹತ್ತಿರ ಹಣ ಇದ್ದರೆ ಸರ್ಕಾರದ ಹತ್ತಿರ ಬಂದು ಒಂದೊಂದು ಪ್ರಾಜೆಕ್ಟ್‌ಗೆ 50-50ಎಕರೆಯದು ನೂರನ್ನೂ ಮಾಡಬಹುದು ಅವನು in the interest of housing, in the interest of solving the problem of the houseless people, ಅದಕ್ಕೆ ಮಾಡುತ್ತಿದ್ದೇವೆ ಎಂದು ನೀವು ಹೇಳಬಹುದು. ಆದರೆ ಅವನು ಏನು ಮಾಡುತ್ತಾನೆ ಎಂದರೆ 55 ಎಕರೆ 55 ಎಕರೆಯದು ಇರಥವು ನೂರಾರಿ ಯೂನಿಟ್‌ಗಳನ್ನು ಮಾಡಿಕೊಳ್ಳುತ್ತಾನೆ. ಮಾಡಿ, ಒಬ್ಬನೇ ಬನ್ನೇರುಘಟ್ಟ ರೋಡಿನ ಕಡೆಗೆ, ಯಲಹಂಕ ಕಡೆ, ಹೊಸೂರು ರೋಡಿಗೆ, ಕೋಲಾರಕ ರೋಡಿಗೆ ಹೀಗೆ ಎಲ್ಲಿ ಸಿಗುತ್ತದೆ, ಅಲ್ಲೆಲ್ಲಾ ತೆಗೆದುಕೊಂಡು ಬಿಡುತ್ತಾನೆ. ತೆಗೆದುಕೊಂಡು ಅವನೇ ಲೇಔಟ್ ಮಾಡಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಮಾಡುತ್ತಾನೆ. ಅವನಿಗೆ ನಿಮ್ಮ ಅಕೌಂಟ್ ಏನೂ ಕೂಡ ಇರುವುದಿಲ್ಲ, ಅದಕ್ಕೇ ನೀವು ಮಾಡಿದ್ದು ಏನು? ಕಾನೂನೇ ಇದೆ. ಏನೆಂದು, ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿ. ಅದು ಕೆಲಸ ಮಾಡುತ್ತಿಲ್ಲ ಅಂದರೆ ಮಾಡಿಸಿ. ಆದರೆ ತಲೆಯ ಮೇಲೆ ಕುಳಿತು ಹೊಡೆದು ಮಾಡಿಸಿ.

ಅದನ್ನು ಬಿಟ್ಟು ನೀವು ಈ ಕಾನೂನನ್ನು ಆ ಕಡೆ ಬಿಟ್ಟುಬಿಟ್ಟು ಇನ್ನೊಬ್ಬರಿಗೆ ಪ್ರೋತ್ಸಾಹಕ ಕೊಡುವುದಕ್ಕೆ ಹೊರಟರೆ ಇದು ಯಾವ ನ್ಯಾಯ? ಇದರಿಂದ ಬಡವರಿಗೆ ಏನು ಪ್ರಯೋಜನವಾಗುತ್ತದೆ? ಇದು ಕೊನೆಗೆ ಪರ್ಚೇಸ್ ಮಡುವುದಕ್ಕೆ ಯಾರು ಬರುತ್ತಾರೆ ಅಂದರೆ ಬೊಂಬಾಯಿಯಿಂದಲೋ, ಕಲ್ಕತ್ತಾದಿಂದಲೋ, ದೆಹಲಿಯಿಂದಲೋ, ಜನ ಬಂದು ಇಲ್ಲಿ ಬೇಸಿಗೆಯಲ್ಲಿ ಸ್ವಲ್ಪ ತಂಪು ಇರುತ್ತದೆ ಎಂದು ತಿಳಿದುಕೊಂಡು ಅಥವಾ ಒಳ್ಳೆಯ ವಾತಾವರಣ ಇದೆ ಸುಮ್ಮನೆ ಒಂದು ಗೆಸ್ಟ್ ಹೌಸ್ ಇದ್ದಹಾಗೆ ಇರಲಿ ಎಂದು ಹೇಳಿ ಎಲ್ಲರೂ ಒಂದೊಂದು ಫ್ಲಾಟ್ ಪರ್ಚೇಸ್ ಮಾಡಿಕೊಂಡು ಇಲ್ಲಿ ಇರುತ್ತಾರೆ. ಅಲ್ಲಿ ಕೋಟಿಗಟ್ಟಲೆ ಹಣದಲ್ಲಿ ಒಂದು ಫ್ಲಾಟ್ ಮಾಡಿಕೊಂಡು, ಇಲ್ಲಿ ಹತ್ತಾರು ಫ್ಲಾಟ್‌ಗಳನ್ನು ಕಟ್ಟಿಕೊಂಡು ಇಲ್ಲಿ ಸುಖವಾಗಿ ಇರುತ್ತಾರೆ. ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ. ಇದರ ದುಷ್ಪರಿಣಾಮ ಬಹಳ ಆಗುತ್ತದೆ. ಇದರಿಂದ ನಮ್ಮ ಜನರಿಗಂತೂ ಏನೂ ಸಿಕ್ಕುವುದಿಲ್ಲ, ಕರ್ನಾಟಕದವರಿಗೆ ಸಿಗುವುದಿಲ್ಲ, ಕನ್ನಡಿಗರು ಅಷ್ಟೊಂದು ಹಣ ಕೊಟ್ಟು ಪರ್ಚೇಸ್ ಮಾಡುವುದಕ್ಕೆ ಸಾಧ್ಯವಿಲ್ಲ, ಖರೀದಿ ಮಾಡುವುದಕ್ಕೆ ಸಾಧ್ಯತೆ ಇಲ್ಲ ಎಂದು ತಿಳಿದುಕೊಂಡೇ ಇವತ್ತಿನ ದಿವಸ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಹುಟ್ಟಿದ್ದು. ಏಕೆಂದರೆ ಇಲ್ಲಿರತಕ್ಕಂಥವರಿಗೆ ಚೀಪ್‌ನಲ್ಲಿ, 16 ಸಾವಿರದಲ್ಲಿ, 20 ಸಾವಿರದಲ್ಲಿ, ಒಂದು ಲಕ್ಷದಲ್ಲಿ ಸೈಟ್ ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಅದನ್ನು ಮಾಡಿದಿರಿ. ನಾಳೆ ಈ ಪ್ರೈವೇಟ್ ಲೇಔಟ್‌ನವರು ಮಾಡಿದರೆ, 4 ಲಕ್ಷ, 5 ಲಕ್ಷ ಮಾರ್ಕೆಟ್ ವ್ಯಾಲ್ಯೂನಲ್ಲಿ ಮಾಡುತ್ತಾರೆ.

ಆಗ ಯಾರು ತೆಗೆದುಕೊಳ್ಳುತ್ತಾರೆ ಸ್ವಾಮಿ? ಅಂಥವರಿಗೆ ಏನಾದರೂ ಗ್ಯಾರಂಟಿ ಇದೆಯೇ? ನೀವೇನಾದರೂ ನಮಗೆ 50 ಪರ್ಸೆಂಟ್ ಕೊಟ್ಟು ನೀವು ತೆಗೆದುಕೊಳ್ಳಬೇಕು ಎಂದು ಏನಾದರೂ ಇದೆಯೇ? ಇಲ್ಲ, ಫ್ರೀ ಕೊಟ್ಟು ತೆಗೆದುಕೊಳ್ಳಬೇಕು ಅಂತ

ಇದ್ದಾನೆ. ಅಂದರೆ ಪ್ರತಿಯೊಂದಕ್ಕೂ ಕೂಡ ಬಡವರ ವಿರುದ್ಧ ಕರ್ನಾಟಕ ಜನತೆಯ ವಿರುದ್ಧ ಕನ್ನಡಿಗರ ವಿರುದ್ಧ ಈ ಕಾನೂನನ್ನು ತಂದು ನೀವು ಪುನಃ ರಾಜ್ಯದ ಒಳ್ಳೆಯದಕ್ಕಾಗಿ ನಾವು ತಂದಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರೆ ನಾವು ಯಾವ ಭಾಷೆಯಲ್ಲ ಈ ಬಿಲ್ಲನ್ನು ಸ್ವಾಗತ ಮಾಡುವುದಕ್ಕೆ ಆಗುತ್ತದೆ.? ನಾನು ಹೇಳಬೇಕಾಗುತ್ತದೆ ಇದು ಸಂಪೂರ್ಣವಾಗಿ ಶ್ರೀಮಂತರ ಪರ, ಎಸ್ಟೇಟ್ ಏಜೆಂಟರ ಪರ ಮತ್ತು ಯಾರು ಇಲ್ಲಿ ಕಪ್ಪು ಹಣವನ್ನು ಹಾಕಿ ವೈಟ್ ಮನಿ ಮಾಡಿಕೊಳ್ಳಬೇಕು ಎನ್ನುತ್ತಾರೆ ಅವರಿಗೆ ಇದೊಂದು ಸದವಕಾಶ. ಇದು ದುಬೈ ಅವರಿಗೆ. ಈ ಕಡೆ ಲಕ್ಷ್ಯ ಕೊಡಬೇಕು. ಅದಕ್ಕೆ ಏಕೆ ಚಿಂತನೆ ಮಾಡಿಲ್ಲ ಎನ್ನತಕ್ಕಂಥಾದ್ದು ನನ್ನ ಕೊರಗು.

ಇವತ್ತು ಈ ಒಂದು ಅಮೆಂಟ್‌ಮೆಂಟ್ ತಂದು ಬಡವರಿಗೆ ದೊಡ್ಡ ಅನಾಹುತ ಮಾಡಿದ್ದಾರೆ. ಏಕೆಂದರೆ ನಾಳೆ ನಿಮ್ಮ ಕಾರ್ಯಕ್ರಮಗಳು ನಿಂತು ಹೋಗುತ್ತವೆ, ಪ್ರೈವೇಟ್ ಜಮೀನುಗಳೆಲ್ಲಾ ಅವರು ಕೊಂಡುಕೊಂಡುಬಿಡುತ್ತಾರೆ. ನಾಳೆ ನೀವೇ ಗವರ್ನಮೆಂಟ್ ಲೇಔಟ್ ಮಾಡುವುದಕ್ಕೆ ಹೋದರೆ ಎಲ್ಲಿ ಸಿಗುತ್ತದೆ ಸ್ವಾಮಿ, ಈ ಕೂಲಿಕಾರನಿಗೆ ನಿಮಗೆ ನಿವೇಶನ ಕೊಡುವುದಕ್ಕಾಗುತ್ತದೆಯೇ? ಕ್ಲಾಸ್ (4) ಸರ್ವೆಂಟ್‌ಗಳಿಗೆ ಕೊಡುವುದಕ್ಕಾಗುತ್ತದೆಯೇ ಅಥವಾ ಒಬ್ಬ ಕ್ಲರ್ಕ್‌ಗೆ ಕೊಡುವುದಕ್ಕಾಗುತ್ತದೆಯೇ? ಗೆಜೆಟೆಡ್ ಆಫೀಸರ್‌ಗಳಿಗೂ ಕೂಡ ಒಂದು ಸೈಟ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಇದೆಲ್ಲವನ್ನೂ ಕೂಡ ಜಮೀನುಗಳನ್ನು ಅವರು ಖರೀದಿ ಮಾಡಿದರು ಎಂದರೆ ನೀವು ಅವರಲ್ಲಿ ಖರೀದಿ ಮಾಡುವತಕ್ಕಂಥ ಪ್ರಸಂಗ ಬರುತ್ತದೆ. ಅದಕ್ಕೆ ದಯವಿಟ್ಟು ಇಂಥ ತಿದ್ದುಪಡಿಗಳನ್ನು ವಾಪಸ್ಸು ತೆಗೆದುಕೊಳ್ಳಿ. ತೆಗೆದುಕೊಂಡು ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿಯಿಂದ ಬೇಕದರೆ ಶಾರ್ಟ್ ನೋಟೀಸ್‌ನಲ್ಲಿ ಅಕ್ವಿಸಿಷನ್ ಮಾಡಿಕೊಂಡು, ಡೆವಲಪ್ ಮಾಡಿಕೊಂಡು, ಹುಡ್ಕೋ ಲೋನ್ ಕೊಡುತ್ತಾರೆ, ಅನೇಕ ಫೈನಾಷಿಯಲ್ ಏಜೆನ್ಸಿಗಳು ಇವತ್ತು ಲೋನ್ ಕೊಡುತ್ತವೆ. ಲೋನ್ ತೆಗೆದುಕೊಂಡು ಸಾವಿರಾರು ಮನೆಗಳನ್ನು ಕಟ್ಟಿಸಿ. ಆಟಕ್ಕೋಸ್ಕರ ಇವತ್ತು ಕಟ್ಟಿಸುತ್ತಿಲ್ಲವೇ? ಇಲ್ಲಿ ನಮ್ಮ ವರ್ಲ್ಡ್ ಗೇಮ್ಸ್ ಆಗುತ್ತದೆ, ಅದಕ್ಕೋಸ್ಕರ ಸುಮಾರು ಸಾವಿರಾರು ಮನೆಗಳನ್ನು ತಾವು ತರಾತುರಿಯಲ್ಲಿ ಕಟ್ಟಿಸುತ್ತಿಲ್ಲವೇ? ಅದೇ ರೀತಿಯಾಗಿ ಒಂದು ಪ್ಲಾನ್, ಒಂದು ಸ್ಕೀಮ್ ಹಾಕಿಕೊಂಡು, ವರ್ಷಕ್ಕೋ, ಎರಡು ವರ್ಷಕ್ಕೋ ಒಂದು ಯೋಜನೆಯನ್ನು ಹಾಕಿಕೊಂಡು ಸಾವಿರಾರು ಮನೆಗಳನ್ನು ಕಟ್ಟಿ ತಾವು ಅಲಾಟ್‌ಮಾಡಿ. ಅದು ಆಗುವುದಿಲ್ಲ, ಇದು ಆಗುತ್ತದೆ. ಮತ್ತು ಇದರಿಂದಲೂ ಎಷ್ಟು ತೊಂದರೆ ಎಂದರೆ ಅವರು ಹತ್ತಾರು ಕಡೆ ಓಡಾಡಿ ತೊಂದರೆಗೀಡಾಗಿ ಕೊನೆಗೆ ಅವರು ಏನು ಹೇಳುತ್ತಾರೆಂದರೆ 10 ಲಕ್ಷ ಅಥವಾ 4 ಲಕ್ಷ ರೂಪಾಯಿಗೆ ಒಂದು ಎಕರೆ ಜಮೀನು ತೆಗೆದುಕೊಂಡರೆ, ಅವರು 50-60 ಲಕ್ಷ ರೂಪಾಯಿಗೆ ಮಾರುತ್ತಾರೆ. ಏಕೆಂದರೆ, ಸ್ವಲ್ಪ ಡೆವೆಲಪ್ ಮಾಡುತ್ತಾರೆ, ನಾನ್ ಅಗ್ರಿಕ್ಚರ್ ಮಾಡಿಕೊಂಡಿರುತ್ತಾರೆ. ಮಾಡಿಕೊಂಡು ಅದೇ ಜಮೀನನ್ನು ಫ್ಲಾಟ್‌ಗಳಾಗಿ ಮಾಡಿ ಎಸ್ಟೇಟ್ ಏಜೆನ್ಸಿ ಮುಖಾಂತರ ಮಾರುತ್ತಾರೆ. ಅಂದರೆ ನಮ್ಮ ದುಡ್ಡಿನಿಂದಲೇ ಮತ್ತು ನಮ್ಮ ಬೆಂಬಲದ ಮೇಲೆ ಅವನು ಇವತ್ತು ಮಜಾ ಮಾಡಿಕೊಂಡು, ದುಡ್ಡು ತೆಗೆದುಕೊಂಡು ಹೋಗುತ್ತಾರೆ. ಅದೇ ಕೆಲಸ ನೀವು ಮಾಡಿ. ನಿಮ್ಮ ಏಜೆಂಟ್‌ಗಳು ಇದ್ದಾರೆ. ಹೌಸಿಂಗ ಬೋರ್ಡ್ ಇದೆ, ಅಥಾರಿಟಿಗಳು ಇವೆ, ಅದನ್ನು ಬಿಟ್ಟು ಇವತ್ತು ಇಷ್ಟು ಏಜೆನ್ಸಿಗಳನ್ನು ಇಟ್ಟುಕೊಂಡು ನಾವು ಅಸಹಾಯಕರು ಇದ್ದೇವೆ ಎನ್ನತಕ್ಕಂಥಾದ್ದನ್ನು ತೋರಿಸುತ್ತಿದ್ದೀರಿ ಎಂದರೆ ನಿಜವಾಗಿಯೂ ಇದಕ್ಕಿಂತ ದುರ್ದೈವ ಮತ್ತೆ ಯಾವುದೂ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು 5ನೇ ತಿದ್ದುಪಡಿ ಬಗ್ಗೆ, ಇದು ಏನು ಎಂದರೆ, 'the purpose of horticulture including floriculture and agro-based industry, the extent of which shall not exceed 30 units.' ಇದಕ್ಕೂ ಕೂಡ ಸುಮಾರು 110 ಎಕರೆಯನ್ನು ಕೊಡತಕ್ಕಂಥದ್ದನ್ನು ಮಾಡಿದ್ದೀರಿ. ಫ್ಲೋರಿಕಲ್ಚರ್ ಬೆಳೆಸುವುದಕ್ಕೆ ನಮ್ಮದು ಏನೂ ತೊಂದರೆ ಇಲ್ಲ, ತೋಟಗಾರಿಕೆಯನ್ನು ಬೆಳೆಸುವುದಕ್ಕೆ ನಮ್ಮದು ಏನೂ ತೊಂದರೆ ಇಲ್ಲ, ಆದರೆ ಇದನ್ನು ಯಾರಿಗೆ ತಾವು ಕೊಡಬೇಕು ಎಂದರೆ, ಆ ಉದ್ದೇಶ ಇರುವವರಿಗೆ ನೀವು ಅಕ್ವೈರ್ ಮಾಡಿ ಕೊಡಿ. ಬೇಕದರೆ ಅದರ ಅವಧಿಯನ್ನು ಕಡಿಮೆ ಮಾಡಿ. ಆರು ತಿಂಗಳು ಇರುವುದನ್ನು ಮೂರು ತಿಂಗಳನಲ್ಲಿ ಮಾಡಿ, ಅದೂ ಸಹ ಕೊಡಿ. ಆದರೆ ನಿಮ್ಮ ಹತೋಟಿಯಲ್ಲಿ ಇಟ್ಟುಕೊಂಡು ಮಾಡಿದರೆ ಸರಿ, ಇಲ್ಲದಿದ್ದರೆ ನಾಳೆ, ಏನಾಗುತ್ತದೆ, ದೊಡ್ಡ ದೊಡ್ಡ ಬಂಡವಾಳಷಾಹಿಗಳು, ಹಣವಂತರು ತೋಟಗಾರಿಕೆಯ ಹೆಸರಿನ ಮೇಲೆ ಸಾವಿರಾರು ಎಕರೆ ಜಮೀನನ್ನು ಖರೀದಿ ಮಾಡಿ, ಕೊನೆಗೆ ಇಲ್ಲಿರತಕ್ಕಂತಹ ರೈತರನ್ನು ಕಂಗಾಲು ಮಾಡುತ್ತಾರೆ ಎನ್ನತಕ್ಕಂಥ ಮಾತುಗಳನ್ನು ನನು ಹೇಳುತ್ತೇನೆ. ಏಕೆಂದರೆ ರೈತರಲ್ಲಿರತಕ್ಕಂಥ ಜಮೀನನ್ನು ಹೆಚ್ಚಿಗೆ ದುಡ್ಡನ್ನು ಕೊಟ್ಟು, ಹೆಚ್ಚಿಗೆ ಹಣ ಬರುತ್ತದೆಂದು ನಮ್ಮ ರೈತರು ಟೆಂಪ್ಟ್ ಆಗುತ್ತಾರೆ. ಏಕೆಂದರೆ ಒಂದು ಎಕರೆ 15,000 ಅಥವಾ 20,000 ಮಾರಾಟವಾಗುತ್ತದೆ ಎಂದರೆ ಇವತ್ತು ಹಣವಂತರು ರೈತರಿಗೆ ಟೆಂಪ್ಟ್ ಮಾಡಿಸಿ 20,000 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದಾಗ ಅದನ್ನು ತನ್ನ ಜಮೀನನ್ನು ಮಾಡಿ ಆ ಹಣದಲ್ಲಿ ಕುಡಿದು ತಿಂದು ಎಲ್ಲ ಹಣವನ್ನು ಹಾಳುಮಾಡಿ ಹೋಗುತ್ತಾನೆ. ಆದರೆ ಶ್ರೀ ಜಾಲಪ್ಪನವರು ಏನು ಹೇಳುತ್ತಾರೆ ಎಂದರೆ ಎರಡು ಲಕ್ಷ ರೂಪಾಯಿಗಳಿಗೆ ಒಂದು ಎಕರೆಯ ಬೆಲೆಲ ಬಂದರೆ ಜಮೀನನ್ನು ಮಾರಿ ಆ ಹಣವನ್ನು ಬ್ಯಾಂಕಿನಲ್ಲಿ ಠೇವಣಿಯಾಗಿ ಇಡಬೇಕೆಂದು ಅನೇಕ ಸಾರಿ ಹೇಳಿದ್ದಾರೆ. ಬ್ಯಾಂಕ್‌ನಲ್ಲಿ ಇಟ್ಟ ಹಣದಿಂದ ಬಂದಂತಹ ಬಡ್ಡಿಯಿಂದ ರೈತರು ಜೀವನವನ್ನು ಮಾಡಬೇಕು. ಎಲ್ಲಿಯಾದರೂ ರೈತರು ಈ ರೀತಿಯಾಗಿ ಮಾಡುತ್ತಾರೆ ಏನು? ತಮಗೆ ಇದರ ಬಗ್ಗೆ ಗೊತ್ತಿದೆ. ಬಾಗಲಕೋಟೆಯ ಅಪ್ಪರ್ ಕೃಷ್ಣ ಯೋಜನೆಯ ಅಡಿಯಲ್ಲಿ ಸಾವಿರಾರು ಎಕರೆ ಭೂಮಿಯು ಮುಳುಗಡೆಯಾಗಿದೆ. ಹಾಗೆ ಮುಳುಗಡೆಯಾಗಿರತಕ್ಕಂತಹ ಜಾಗದ ಒಡೆಯರು ಪರಿಹಾರವನ್ನು ತೆಗೆದುಕೊಂಡವರು ಇನ್ನೂ ಸಹ ಅವರು ಆ ಜಾಗಕ್ಕೆ ಹೋಗುವುದಕ್ಕ ಸಾಧ್ಯವಾಗುತ್ತಿಲ್ಲ, ಅವರುಗಳು ಇನ್ನೂ ಸಹ ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಾಗಿಲ್ಲ, ಏಕೆಂದರೆ ಅವತ್ತು ಸರ್ಕಾರದವರು ಕೊಟ್ಟ ಹಣವನ್ನು ಸಾಕಷ್ಟು ಪ್ರಮಾಣದಲ್ಲಿ ತಿಂದು ಬಿಟ್ಟರು. ಈಗ ಅವರ ಬಳಿಯಲ್ಲಿ ಹಣವಿಲ್ಲ, ಅದುದರಿಂದ ನೀವು ಬದಲಿ ಜಾಗಕ್ಕೆ ಅವರುಗಳನ್ನು ಕಳುಹಿಸಬೇಕಾದರೆ ನೀವು ಮನೆಗಳನ್ನು ಕಟ್ಟಿಸಿ ಹೆಬಲಿಟೇಷನ್ ಮಾಡಿ ಸಹಾಯ ಮಾಡಿ ಕಳುಹಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿಯು ನಮ್ಮ ರೈತರು ಇರಬೇಕಾದರೆ ರೈತರು ತಮ್ಮ ಜಮೀನನ್ನು ಮಾರಿಕೊಂಡು ಹಣವನ್ನು ಬ್ಯಾಂಕಿನಲ್ಲಿ ಇಟ್ಟುಕೊಂಡು ಬಡ್ಡಿಯಲ್ಲಿ ಸುಖವಾಗಿ ಇರಬೇಕು ಎಂದರೆ ಎಲ್ಲಿ ಸಾಧ್ಯವಾಗುತ್ತದೆ. ನಮ್ಮಂಥ ವಿದ್ಯಾವಂತರ ಮಕ್ಕಳೇ ಹಣವನ್ನು ಇಟ್ಟುಕೊಂಡು ನೀನು ಸುಖವಾಗಿ ಇರಪ್ಪ ಎಂದರೆ ಇರುವುದಿಲ್ಲ, ಅಂಥದರಲ್ಲಿ ಹಳ್ಳಿಯ ಬಡ ರೈತರ ಮಕ್ಕಳು ಹಣವನ್ನು ಬ್ಯಾಂಕಿನಲ್ಲಿ ಇಟ್ಟುಕೊಂಡು ಜೀವನ ಸಾಗಿಸಿ ಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ, ಶ್ರೀಮಾನ್ ಜಾಲಪ್ಪನವರು ಏಕೆ ಈ ರೀತಿಯಾಗಿ ಹೇಳುತ್ತಾರೋ ಗೊತ್ತಿಲ್ಲ, ಮತ್ತು ಇದರ ಬಗ್ಗೆ ಅವರಿಗೆ ಚನ್ನಾಗಿ ಗೊತ್ತಿದೆ. ಶ್ರೀ ಜಾಲಪ್ಪನವರು ಹಳ್ಳಿಯ ಜನರ ಜೊತೆಯಲ್ಲಿಯೇ ಇರುವುದು. ಆದರೆ ದುರ್ದೈವದಿಂದ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಎಂದು ಇಷ್ಟೇ ಅವರಿಗೆ ಗೊತ್ತಿರುವುದು. ಅದಕ್ಕಾಗಿ ಅವರು ಏನು ಹೇಳುತ್ತಾರೆ ಎಂದರೆ ಒಂದು ಎಕರೆಗೆ ಎರಡು ಲಕ್ಷ ರೂಪಾಯಿಗೆ ಇತ್ತು ಆದರೆ ಇವತ್ತು 4 ಲಕ್ಷ ರೂಪಾಯಿಗಳಾಯಿತು,.

ನಾಳೆ 8 ಲಕ್ಷ ರೂಪಾಯಿಗಳಾಗುತ್ತದೆ ಎಂದು ಹೇಳುತ್ತಾರೆ. ಇರಬಹುದು. ದರೆ 5 ಪರ್ಸೆಂಟ್ ಜನರಿಗೆ ತೊಂದರೆಯಾಗಬಹುದು. ನೀವು ಬೇಕಾದರೆ ಒಂದು ಲಿಮಿಟೇಷನ್ ಅನ್ನು ಹಾಕಿ ಬಿಜಡಿ ಏನೆಂದರೆ ಬೆಂಗಳೂರಿನ 20 ಕಿ.ಮೀ. ಸುತ್ತಮುತ್ತ ಒಳಗೆ: ಸರ್ಕಾರಿ ಅಜ್ಞೆ ಇಲ್ಲದೆ ಮಾಡಬಾರದು ಎಂದು. ಅಥವಾ ಪವರ್ ಅಫ್ ಅಟಾರ್ನಿಯನ್ನು ಸಹ ತಗೆದುಕೊಳ್ಳಬಾರದು. ಹಾಗೆ ತೆಗೆದುಕೊಂಡವನಿಗೆ ಶಿಕ್ಷೆಗೆ ಗುರುಪಡಿಸುತ್ತೇವೆಂದು ಬೇಕಾದರೆ ಮಾಡಿ. ಇಲ್ಲ ಜೈಲಿಗೆ ಅವನ್ನನ್ನು ಹಾಕಿ ಅಥವಾ ಸರ್ಕಾರದವರೇ ಅದನ್ನು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಆದರೆ ಮಾಡಿ. ಅಥವಾ ನಿಮ್ಮ ಮುಖಾಂತರ ಆ ರೈತನಿಗೆ ಸಹಾಯವನ್ನು ಮಾಡತಕ್ಕಂಥದ್ದನ್ನು ಮಾಡಿ. ಅಥವಾ ಒಂದು ಲ್ಯಾಂಡ್ ಬ್ಯಾಂಕ್ ಎಂದು ಮಾಡಿ ಅದರ ಮುಖಾಂತರ ಮಾಡಿ.

ಅದನ್ನು ಬಿಟ್ಟು, ನೀವು ರೈತರು ಮಾರಿಕೊಂಡು ಸುಖವಾಗಿ ಇರುತ್ತಾನೆಂದು ಹೇಳಿದರೆ ಈ ಅಸಹಾಯಿತನವನ್ನು ತೋರಿದರೆ ರೈತರು ಜಮೀನನ್ನು ಕಳೆದುಕೊಳ್ಳಲಿ, ಆ ಶ್ರೀಮಂತರು ಜಮೀನನ್ನು ತಗೆದುಕೊಳ್ಳಲಿ, ಆ ಹಣವಂತರು ಆ ಜಮೀನನ್ನು ತಗೆದುಕೊಳ್ಳಲಿ, ಆ ಕೈಗಾರಿಕ ಉದ್ಯಮಿ ಆ ಜಮೀನನ್ನು ತೆಗೆದುಕೊಳ್ಳಲಿ ಎಂದು ಹೇಳಿ ನೀವು ಅವನಿಗೆ ಪ್ರತ್ಯಕ್ಷವಾಗಿ ಅಪ್ರತಯ್ಯಕ್ಷವಾಗಿ ಸಹಾಯವನ್ನು ಮಾಡಿದರೆ ಇದು ಎಷ್ಟರ ಮಟ್ಟಿಗೆ ನ್ಯಾಯವಾಗಿರುತ್ತದೆ? ಇದರಿಂದ ರೈತರಿಗೆ ಏನಾದರೂ ಪ್ರಯೋಜನವಾಗುತ್ತದೆಯೇ? ಇವತ್ತು ರೈತರಿಗೆ ನೀವೇ ಅಪ್ರತ್ಯೇಕ್ಷವಾಗಿ ಬೀದಿಪಾಲು ಮಾಡುತ್ತಿರುವಿರಿ. ಇನ್ನೊಂದು ಸೆಕ್ಷನ್ 1ಎ ಇದಂತೂ ಮಾನ್ಯ ಅಧ್ಯಕ್ಷರೆ, ಕಂಟ್ರಿ ಅಂಡ್ ಟೌನ್ ಪ್ಲಾನಿಂಗ್ ಈಗ ತಂದಿದ್ದೇವೆ. ಇದು ಏಕೆಂದರೆ

'Notwithstanding anything contained in sub-section (1), the State Government may in public interest and for reasons to be recorded in writing, by notification,, exempt any extent of land for any specific purpose.' ಅಂದರೆ blank cheque ನೀವು ಏನಾದರೂ ಮಾಡಬಹುದು. ಇಡೀ ಕರ್ನಾಟಕ ರಾಜ್ಯದಲ್ಲಿ ಒಬ್ಬರು ಯಾರದರೂ ಇಲ್ಲಿರತಕ್ಕಂಥಹ ಅಗ್ರಿಕಲ್ಚರ್ ಜಮೀನನ್ನು ಖರೀದಿ ಮಾಡುವುದಕ್ಕೆ ಬಂದರೆ, they can grant.

ಏಕೆಂದರೆ blank cheque any extent for any purpose. ಇದು ಗೊತ್ತಿದ್ದು ಹವಾಲಾನು ಬರಬಹುದು ಇನು ಯಾವುದಾದರೂ ಅವ್ಯವಹಾರದ ಪ್ರಕರಣದವನೂ ಬರಬಹುದು.ಏಕೆಂದರೆ ಪ್ರಾವಿಷನ್ ಇದೆ ಎಂದರೆ ಅವನು ಅರ್ಜಿಯನ್ನು ಹಾಕುತ್ತಾನೆ. ಅರ್ಜಿಯನ್ನು ಹಾಕಿದಾಗ ಒತ್ತಡ ಬಂದಾಗ ನೀವು ಕೂಡ Involve ಆಗಬೇಕಾಗುತ್ತದೆ. ಮತ್ತೆ ನೀವು ಈ ಕಾನೂನನ್ನು ತಂದಾಗ ನೀವೇ ಪರ್ಮನೆಂಟ್ ಆಗಿ ರೆವಿನ್ಯೂ ಮಿನಿಸ್ಟರ್ ಆಗಿ ಇರುತ್ತೀರಿ ಎಂದು ಏನು? ನಾಳೆ ನೀವು ಹೋಂ ಮಿನಿಸ್ಟರ್ ಆಗಬಹುದು, ಮತ್ತೆ ನಿವೇ ಮುಖ್ಯಮಂತ್ರಿಗಳು ಆಗಬಹುದು. ಮುಖ್ಯಮಂತ್ರಿಗಳ ಸ್ಥಾನದಿಂದ ಶ್ರೀ ದೇವೇಗೌಡರು ಅಲ್ಲಿಂದ ಹೋಗಬಹುದು. ಯಾರದರೂ ಆಗಬಹುದು. ಈ ಕಾನೂನು ಇದ್ದಾಗ ಇದರ ದುರುಪಯೋಗವನ್ನು ಪಡೆದುಕೊಂಡು ಸಾವಿರಾರು ಎಕರೆಯನ್ನು ಇಟ್ಟುಕೊಂಡು, ಇದರ ಬಗ್ಗೆ ಮಾನ್ಯ ಶ್ರೀ ದೇಶಪಾಂಡೆಯವರಿಗೆ ಗೊತ್ತಿದೆ, ತಮಗೂ ಕೂಡ ಇದರ ಬಗ್ಗೆ ಗೊತ್ತಿದೆ. ಹೊಸಪೇಟೆಯಲ್ಲಿ ಹಿಂದೆ ಅನೇಕ ಶುಗರ್ ಫ್ಯಾಕ್ಟರಿಗಳು ಇದ್ದವು. ಮಾನ್ಯ ಅಧ್ಯಕ್ಷರೆ, ತಮಗೂ ಕೂಡ ಈ ಬಗ್ಗೆ ಗೊತ್ತಿದೆ ಏನೆಂದರೆ ಶುಗರ್ ಫ್ಯಾಕ್ಟರಿಯ ಮಾಲೀಕರದು ಶಿವಮೊಗ್ಗದಲ್ಲಿ ಆಗಲಿ, ಅಥವಾ ಹೊಸಪೇಟೆಯಲ್ಲಿ 3000-4000 ಎಕರೆ ಆ ಶುಗರ್ ಫ್ಯಾಕ್ಟರಿಯ ಹೆಸರಿನಲ್ಲಿತ್ತು. ಪುನಃ ಯಾರಾದರೂ ಒಂದು ಶುಗರ್ ಫ್ಯಾಕ್ಟರಿಯನ್ನು ಹೊಸದಾಗಿ ಪ್ರಾರಂಭ ಮಾಡುತ್ತೇನೆ ನನಗೆ ಅವಶ್ಯಕತೆ ಇದೆ ಆ ಜಮೀನಿನಿಂದ ನನಗೆ ಕಬ್ಬು ಬರುತ್ತದೆಂದು ಹೇಳಿ sugarcane growing industry. ಗಾಗಿ ಅರ್ಜಿಯನ್ನು ಕೊಟ್ಟು

ಆ ಇಂಡಸ್ಟ್ರಿಯ ಹೆಸರಿನ ಮೇಲೆ ಕೇಳಿದರೆ ಅದನ್ನು ಕೊಡಬೇಕಾಗುತ್ತದೆ. ಏಕೆಂದರೆ to promote industry, any extent for any purpose. ಕೂಡ ಬಹುದಾಗಿದೆ ಇದರಲ್ಲಿ specific purpose is to grow the sugarcane. ಕೊಡಬಹುದಲ್ಲ ಇದರಲ್ಲಿ 'Notwithstanding anything contained in sub-section (1), the State Government may in public interest and for reasons to be recorded in writing, by notification, exempt any extent of land for any specific purpose.' ಇದು ನನಗೆ ತಿಳಿದಿರುವುದು. Ceiling Law, - Ceiling Act, 1963 - ಅದಕ್ಕೆ ಇಂತಹ ಒಂದು ತಿದ್ದುಪಡಿಯನ್ನು ತಂದು, ಇದನ್ನು ಯಾರಿಗೋಸ್ಕರವಾಗಿ ತಂದಿದ್ದೀರಿ ಸ್ವಾಮಿ? ಮತ್ತೆ ಏನು ಹೇಳುತ್ತೀರ ಸೀಲಿಂಗ್. ಎಲ್ಲಿ ಉಳಿಯಿತು ಸ್ವಾಮಿ ಸೀಲಿಂಗ್ ಸೀಲಿಂಗ್ ಆಕ್ಟ್ ಹೋಯಿತು. ಮೊದಲನೆಯದಾಗಿ ಸೆಕ್ಷನ್ 63ರಲ್ಲಿ ಸೀಲಿಂಗ್ ಹೋಯಿತು. ಎರಡನೇಯದಾಗಿ ಸೆಕ್ಷನ್ (5) ರಲ್ಲಿ ಹೋಯಿತು. ಮೂರನೇಯದಾಗಿ 79(ಸಿ)'ಲ್ಲಿ ಹೋಯಿತು. ನಾಲ್ಕನೆಯದಾಗಿ ಸೆಕ್ಷನ್ 109ನ್ನು ಪೂರ್ಣ ಸಮಾಧಿ ಮಾಡಿ ಅದನ್ನು ಮುಚ್ಚಿ ನಾಲ್ಕು ಕಲ್ಲು ಇಟ್ಟ ಹಾಗೆ ಆಗಿದೆ. ಏನೋ ಹೇಳುತ್ತಾರಲ್ಲ ಹೆಣ ಒಳಗೆ ಹುಳಿ ಮೇಲೆ ಏನಪ್ಪ ಎಂದು ಮಣ್ಣನ್ನು ಮುಚ್ಚಿ ಬರುವ ಮುನ್ನ ನಾಲ್ಕು ಕಲ್ಲನ್ನು ಇಡುತ್ತಾರೆ. ಹಾಗೆ ಈ ಭೂ ಸುಧಾರಣೆಯ ಕಾನೂನು ಏನಾಗಿದೆ ಎಂದರೆ ಗುಳಿಯ ಒಳಗೆ ಹಾಕಿ ಮೇಲೆ ಮಣ್ಣನ್ನು ಹಾಕಿಸಿ ಮುಚ್ಚಿಸಿ ಮೇಲೆ ದೊಡ್ಡ ದೊಡ್ಡ ಕಲ್ಲುಗಳನ್ನು ಇಟ್ಟು ಹೋಗಬೇಕಾಗುತ್ತದೆ. ಈ ರೀತಿಯಾದಂತಹ ತಿದ್ದುಪಡಿಗಳನ್ನು ತಂದು ಇದು ಜನರಿಗೆ ಸಹಾಯವಾಗುತ್ತದೆ, ಇದು ಡೆವಲಪ್‌ಮೆಂಟ್ ಆಗುತ್ತದೆ ಎಂದು ಎಂದರೆ ಇದು retrograde step, ಪದೇ ಪದೇ ಎಷ್ಟು ಇಂಡಸ್ಟ್ರೀ ಬರುತ್ತದೆ ಎಂದರೆ there are number of ways to help industrialists ಹಿಂದಿನ ಸರ್ಕಾರದವರು ಕೂಡ ಅನೇಕ ಅಗ್ರಿಮೆಂಟ್‌ಗಳನ್ನು ಮಾಡಿದರು. ಸಿಂಗಲ್‌ವಿಂಡೋ ಏಜೆನ್ಸಿಯ ಕೆಳಗೆ ಸಾಕಷ್ಟು ಕಾರ್ಖಾನೆಗಳನ್ನು ತಂದಿದ್ದರು. ಆಗ ಭುಸುಧಾರಣೆಗೆ ತಿದ್ದುಪಡಿಯನ್ನು ಮಾಡಿದಾಗ ಮಂಗಳೂರಿನಲ್ಲಿ ರಿಫೈನರಿ ಇಂಡಸ್ಟ್ರೀ ಬಂತು ಆಗ ಈ ಭೂ ಸುಧಾರಣೆಯ ಕಾನೂನು ಅಡ್ಡ ಬಂತಾ? ಅನೇಕ ಕಡೆ ಕೆ.ಐ.ಡಿ.ಬಿ.ನಲ್ಲಿಯೇ ಸಾವಿರಾರು ಎಕರೆ ಜಮೀನು ಇತ್ತು. ಈಗ ರಾಯಚೂರಿನಲ್ಲಿಯೇ ಮೂರು ಸಾವಿರ ಎಕರೆ ಇದೆ ಅದನ್ನೇ ಕೇಳುವವರು ಯಾರೂ ಇಲ್ಲ. ಇದೂ ಸಹ ತಮಗೆ ಗೊತ್ತಿದೆ. ಅಲ್ಲಿ ಅಕ್ವೈರ್ ಮಾಡಿದರು. ಅದೇ ರೀತಿಯಾಗಿ ಹಾಸನದಲ್ಲಿ, ಧಾರವಾಡದಲ್ಲಿ ಅಕ್ವೇರ್ ಮಾಡಿದ್ದಾರೆ. ಕೇಳುವವರೇ ಗತಿ ಇಲ್ಲ, ಹಾಗೆಯೇ ಎಲ್ಲೆಲ್ಲಿ ಕೇಳುತ್ತಾರೆ ಅಲ್ಲಿ ಕಡಿಮೆ ಅವಧಿಯಲ್ಲಿ ಅಕ್ವೈರ್ ಮಾಡಿ ಕೊಡಿ. ನೆಗೊಶಿಯೇಷನ್ ಮಾಡಿ ಕೊಡಿ ಆಗುವುದಿಲ್ಲ ನಿಮ್ಮ ಕೈಯಲ್ಲಿ ಅದನ್ನು ಬಿಟ್ಟು ನೇರವಾಗಿ ಪ್ರೈವೇಟ್ ಏಜೆನ್ಸಿಗೆ ನೇರವಾಗಿ ಪರ್ಚೆಸ್ ಮಾಡತಕ್ಕಂತಹ ಅಧಿಕಾರವನ್ನು ಬಿಟ್ಟರೆ ಪುನಃ ಈ ದೇಶದಲ್ಲಿ ಹಿಂದಿನ ಹಾಗೆ ಜಹಗೀರ್‌ದಾರರುಗಳು ಹುಟ್ಟುತ್ತಾರೆ. ದೇಶಮುಖ್‌ಗಳು ಹುಟ್ಟುತ್ತಾರೆ. ಸಾವಿರಾರು ಎಕರೆ ಜಮೀನನ್ನು ಇಟ್ಟು ಕೊಂಡು ಪುನಃ ಅವರ ಹತ್ತಿರ ಉಳಿದ ರೈತರು ಬಾಡಿಗೆದಾರರಾಗಬೇಕು ಅಥವೀ ಜೀತದಾಳುಗಳಾಗಬೇಕು.

ಆ ಪರಿಸ್ಥಿತಿ ಬರುತ್ತದೆ. ತಮಗೆ ಗೊತ್ತಿರುವ ಹಾಗೆ ಕರ್ನಾಟಕ ರಾಜ್ಯದಲ್ಲಿ ಮ್ಯಾಕ್ಸಿಮಮ್ ಸ್ಮಾಲ್ ಹೋಲ್ಡರ್ಸ್ ಇದ್ದಾರೆ, 70 ಲಕ್ಷ ರೈತರ ಪೈಕಿ ಸುಮಾರು 40-50ಲಕ್ಷ ಜನ ಸ್ಮಾಲ್ ಹೋಲ್ಡರ್ಸ್ ಇದ್ದಾರೆ. ಅಂದಾಗ ಅವರದ್ದು ಎಲ್ಲಾ ಸಮಾಧಿಯಾಗುತ್ತದೆ. ಈ ಎಲ್ಲಾ ಪ್ರಾವಿಷನ್ ಕೆಳಗಡೆ ಕೆಲವರು ವಿದ್ಯಾಭ್ಯಾಸಕ್ಕಾಗಿ ತೆಗೆದುಕೊಳ್ಳಬಹುದು, ಗುಡಿ ಗುಂಡಾರಗಳ ಹೆಸರಿನಲ್ಲಿ ತೆಗೆದುಕೊಳ್ಳಬಹುದು, ಕೆಲವು ಜನ ತೋಟಗಾರಿಕೆಯ ಹೆಸರಿನಲ್ಲಿ ತೆಗೆದುಕೊಳ್ಳಬಹುದು. ಕೆಲವು ಜನ ಹೂವು ತೋಟದ ಹೆಸರಿನಲ್ಲಿ ತೆಗೆದುಕೊಳ್ಳಬಹುದು. ಕೆಲವು ಜನ ಇಂಟಸ್ಟ್ರೀಸ್ ಪರ್ಚೆಜ್ ಎಂದು ಹೇಳಿ ತೆಗೆದುಕೊಳ್ಳಬಹುದು ಅದರಲ್ಲಿ ಅರ್ಧವನ್ನು ಇಂಡಸ್ಟ್ರೀಸ್ ಮಾಡಬಹುದು

ಇನ್ನ ಅರ್ಧ ಭಾಗವನ್ನು ಅವರು ಹಾಗೆಯೇ ಇಟ್ಟುಕೊಳ್ಳಬಹುದು. ಒಂದು ಮಾವಿ ಗಿಡವನ್ನೋ ಹಾಕಿಕೊಂಡು ಸಾವಿರಾರು ಎಕರೆಯನ್ನು ಮುಂದೆ ಮಾಡಿ ಕೊಳ್ಳಬಹುದು. ಅದಕ್ಕಾಗಿ ನೀನು ಇವತ್ತು ತಮಗೆ ಸ್ಪಷ್ಟವಾಗಿ ಹೇಳತಕ್ಕಂಥದು ಏನು ಎಂದರೆ ಈ ಎಲ್ಲಾ ತಿದ್ದುಪಡಿಗಳು ರೈತರ ಹಿತದೃಷ್ಟಿಯಿಂದ ಸರಿಯಿಲ್ಲ ಮತ್ತು ವಾಪಸ್ಸು ತೆಗೆದುಕೊಳ್ಳಬೇಕು.

5.20 ಪಿ.ಎಂ.

ಮತ್ತು ತಮಗೆ ಕೇವಲ ತಾಪತ್ರಯವಿದೆ, ಬಾಕಿ ಎಲ್ಲಾ ಸರಿಯಿದೆ ಎನ್ನುವ ವಾದು ಅದು ಸರಿಯಲ್ಲ ಇಡೀ 3-4 ತಿದ್ದುಪಡಿಗಳು ಏನಿವೆ ಅದು ಸೆಕ್ಷನ್ 79ಬಿ ಆಗಲಿ, 109 ಆಗಲಿ 63 ಆಗಲಿ ಇವೆಲ್ಲವುಗಳನ್ನೂ ಕೂಡ ತಿದ್ದುಪಡಿಯನ್ನು ತಾವು ವಾಪಸ್ಸು ತೆಗೆದುಕೊಂಡು, ಯಾವ ರೀತಿಯಾಗಿ ಕಾನೂನು ಇತ್ತು ಅದೇ ರೀತಿಯಾಗಿ ಇರತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿದರೆ ಬಡವರಿಗೆ ಇದರಿಂದ ಒಳ್ಳೆಯದಾಗುತ್ತದೆ, ರೈತರಿಗೆ ಒಳ್ಳೆಯದಾಗುತ್ತದೆ, ಇಲ್ಲದಿದ್ದರೆ ನಾನು ಒಂದು ವಿಷಯವನ್ನು ಹೇಳಬೇಕಾಗುತ್ತದೆ. ಹಿಂದೆ ದೇವೇಗೌಡರು 21-5-1973ರಲ್ಲಿ ಭಾಷಣ ಮಾಡಿದರು. ಆ ಸಂದರ್ಭದಲ್ಲಿಯೇ ಅವರು ಸ್ವಲ್ಪ ಹೆಚ್ಚು ಕಡಿಮೆ ಸೀಲಿಂಗ್‌ಗೆ ವಿರುದ್ಧವಾಗಿಯೇ ಇದ್ದರು. ಆ ಸಂದರ್ಭದಲ್ಲಿ ಯಾರೋ ರಾಮಯ್ಯ ಎನ್ನುವವರು ಈ ಬಗ್ಗೆ ಭಾಷಣ ಮಾಡಿದರು, ಆ ಸಂದರ್ಭದಲ್ಲಿ ದೇವೇಗೌಡರು ಅವರಿಗೆ ಬೆಂಬಲ ಸೂಚಿಸುತ್ತಾ...., ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಕೆಲವು ಜನ ಆ ಕಾಲದಲ್ಲೂ ಕೂಡ ಈ ಕಾನೂನಿಗೆ ಗೇಲಿ ಮಾಡತಕ್ಕಂಥವರು ಇದ್ದರು. ಉಳುವವನೇ ಭೂಮಿಯ ಒಡೆಯ ಎಂದರೆ ಅದಕ್ಕೆ ಕೆಲವು ಜನ ಏನು ಹೇಳಿದರೆಂದರೆ, ದೇವೇಗೌಡರು ಅಲ್ಲ ಹಾಗೆ ಹೇಳಿದ್ದು ಅದಕ್ಕೆ ಆಮೇಲೆ ಬರುತ್ತೇನೆ ಆ ಸದನದಲ್ಲಿ ಇರತಕ್ಕಂಥವರನ್ನು ಯಾವ ರೀತಿಯಾಗಿ ಗೇಲಿ ಮಾಡಿ ಹೇಳಿದರು ಎಂದರೆ "dweller of the House is the owner of the House; driver of the car is the owner of the car; rider of the horse is the owner of the Horse; labourers of the industries are the owners of the industries". ಅಂದರೆ ಇಂತಹ ವಿಚಾರಧಾರೆ ಇರತಕ್ಕಂಥವರು ಕೂಡ ಈ ಸದನದಲ್ಲಿ ಇದ್ದರು. ಇಂತಹವರು ಇದ್ದರೂ ಕೂಡ ಅವರೆಲ್ಲವನ್ನು ಮೈಮೇಲೆ ಹಾಕಿಕೊಂಡು ಇದು ಸರಿಯಲ್ಲ ನೀವು ಹೇಳತಕ್ಕಂಥದ್ದು ಎಂದು ಅವರಿಗೆ ಸಮಜಾಯಿಸಿ ನೀಡಿ ಉಳುವವನೇ ಭೂಮಿಯ ಒಡೆಯ ಎನ್ನುವ ಈ ಕಾನೂನನ್ನು ನಾವು ತರಲೇಬೇಕು ಇದನ್ನು ಪಾಸ್ ಮಾಡಲೇಬೇಕೆಂದು ಹೇಳಿ ಜಂಟಿ ಸಮಿತಿಯನ್ನು ರಚಿಸಿ ಇದನ್ನು ಅಲ್ಲಿ ಚರ್ಚೆ ಮಾಡಿ ತಂದು ಒಪ್ಪಿಕೊಂಡು ಅಂದಿನ ದಿವಸ ಪಾಸಾದಂಥ ಕಾನೂನು ಇದು. ಇದು ಬಹುಶಃ 1973-74ರಲ್ಲಿ ಪಾಸಾದದ್ದು; ಜಾರಿಗೆ ಬಂದದ್ದು. ಆ ಸಂದರ್ಭದಲ್ಲಿಯೂ ಕೂಡ ದೇವೇಗೌಡರು ಇದರಲ್ಲಿ ಕೇಳಿದ್ದಾರೆ. ಅದೇನೆಂದರೆ ಅವರ ಊರಲ್ಲಿ ಯಾರೋ ಕಾಸಿಮ್ ಸಾಹೇಬ ಇದ್ದನಂತೆ. ಅವರೇ ಹೇಳಿದ ಹಾಗೆ ಅವನಿಗೆ 63 ಮಕ್ಕಳಿದ್ದರಂತೆ. ಅಂತಹವರ ಪರಿಸ್ಥಿತಿ ಏನು? ಅದರ ಅರ್ಥ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಏನೆಂದರೆ ಸೀಲಿಂಗ್ ಹೆಚ್ಚಿಗೆ ಮಾಡಬೇಕಾಗುತ್ತದೆ ಎನ್ನುವಂಥ ವಾದವನ್ನು 1973ರಲ್ಲಿಯೇ ಅವರು ಪ್ರಸ್ತಾಪ ಮಾಡಿದ್ದರು ಈಗ ಹೆಚ್ಚು ಕಡಿಮೆ 1996ನೇ ಇಸವಿ ಅಂದರೆ 23-24 ವರ್ಷ ಕಳೆದುಹೋಗಿದೆ. ಅವರಿಗೆ ಸಮಯ ಸಿಕ್ಕಿದೆಯೆಂದು ಹೇಳಿ ಕೊಟ್ಟು ಬಿಡೋಣವೆಂದು ಹೇಳಿ ಕೊಟ್ಟುಬಿಟ್ಟರೋ ಏನೋ ಗೊತ್ತಿಲ್ಲ, ಬಹುಶಃ ಆ ಒಂದು ವಿಚಾರಧಾರೆಯನ್ನು ಇಟ್ಟುಕೊಂಡು, ನಡೆಯಿರಿ ಅವಕಾಶ ಸಿಕ್ಕಿದೆ ಇದನ್ನು ಮಾಡಿಬಿಡಿ ಜಾಲಪ್ಪನವರೆ ಎಂದು ಹೇಳಿ ಜಾಲಪ್ಪನವರ ಮನವನ್ನು ಒಲಿಸಿಕೊಂಡು ಕ್ಯಾಬಿನೆಟ್‌ನಲ್ಲಿ ಇದನ್ನು ಇಟ್ಟು ಮಾಡುವುದಕ್ಕೆ

ಪ್ರೋತ್ಸಾಹ ನೀಡಿದ್ದಾರೆ ಎನ್ನತಕ್ಕಂಥ ಸಂಶಯವನ್ನು ಈ ಡಿಬೆಟ್‌ನ್ನು ಬಂದ ಮೇಲೆ ನನಗೆ ಗೊತ್ತಾಯಿತು...

ನಮ್ಮ ಸರ್ಕಾರ ಇದ್ದಾಗ ಮಾಡಿರಲಿ, ಆದರೆ ಅದು ಕಾನೂನಾಗಿ ಬಂದಿಲ್ಲ, ಅದು ಕಾನೂನಾಗಿ ಬಂದಾಗ ನೀವು ವಿನಂತಿ ಮಾಡಿದ್ದರೆ ನಾನು ಹೇಳುತ್ತಿದ್ದೆ. ಪ್ರಪೋಸಲ್ ಸಾವಿರ ಇರುತ್ತವೆ. ಪ್ರತಿಯೊಂದನ್ನು ಒಪ್ಪಿಕೊಳ್ಳಬಹುದು, ಪ್ರತಿಯೊಂದನ್ನು ಬಿಡಬಹುದು. ಆಲ್‌ರೈಟ್. ನಾನು ಪ್ರಪೋಸಲ್ ತಂದಿದ್ದೇನೆ. ನಾನು ಹೇಳುತ್ತಿದ್ದೇನೆ ಇದು ಸರಿಯಿಲ್ಲವೆಂದು. ನಾನು ಹೇಳಿದಂಥ ಮಾತು ನಿಮ್ಮ ಹೃದಯಕ್ಕೆ ಮುಟ್ಟಿದ್ದರೆ ಇದು ಸರಿಯೆಂದು ನೀವು ತಿಳಿದುಕೊಂಡಿದ್ದರೆ ಇದನ್ನು ವಿತ್‌ಡ್ರಾ ಮಾಡಿ. ಇಲ್ಲವೇ ನಾನು ಮಾಡಿದ್ದೇ ಮಾಡುತ್ತೇನೆಂದು ಹೇಳಿದರೆ ನಾನೇನು ಮಾಡುವುದಕ್ಕಾಗುತ್ತದೆ, ಆದರೆ ಅದು ವಿವೇಕದ ಮಾತಲ್ಲ, ಅದು ನೀವು ರೈತರಿಗೆ ಸಹಾಯ ಮಾಡಿತಕ್ಕಂಥ ಮಾತಲ್ಲ. ನೀವು ಮಾಡಿದಿರಿ ಅದಕ್ಕೆ ನಾವು ಮಾಡುತ್ತೇವೆ ಎಂದು ಯಾರದೋ ಮಾತನ್ನು ಹೇಳಿಕೊಂಡು ಹೋದರೆ, ನಾವು ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದೇವೆ ನೀವು ಏನು ಮಾಡಿದಿರಿ? ಅದನ್ನು ಹೇಳುತ್ತೀರಾ? 50 ಸಾವಿರ ನೀವು ಮಾಡಿದಿರಿ, 2 ಯೂನಿಟ್ ನೀವು ಮಾಡಿದಿರಿ, ನಿಮ್ಮ ಕಾಲದಲ್ಲಿ ಕ್ಯಾಬಿನೆಟ್ ನೋಟ್ ಹೀಗೆ ಆಗಿತ್ತು, ಲಾಡಿಪಾರ್ಟ್‌ಮೆಂಟ್‌ನಲ್ಲಿ ಪ್ರೋಸೆಸ್ ಆಗಿತ್ತು, ನಾನು ಎತ್ತಿಕೊಂಡು ಬಂದು ನಿಮ್ಮ ಮುಂದೆ ಕೊಡುತ್ತೇನೆಂದು ನೀವು ಹೇಳಬಹುದು. ಈ ಮಾತನ್ನು ಹೇಳುವುದಕ್ಕೆ ಮೊದಲೇ ನಾನು ಹೇಳುತ್ತಿದ್ದೇನೆ. ನೀವು ಆ ವಿಚಾರವನ್ನು ಬದಿಗಿಟ್ಟು ಪ್ರಾಮಾಣಿಕತೆಯಿಂದ ನಿಮ್ಮ ಹೃದಯಕ್ಕೆ ಇದು ಒಪ್ಪಿಗೆಯಾಗುವಂಥ ರೀತಿಯಲ್ಲಿ ಪುನಃ ಪರಿಶೀಲಿಸಿ ಎನ್ನತಕ್ಕಂಥ ಮಾತನ್ನು ನಾನು ಪದೇ ಪದೇ ಹೇಳಿಕೊಂಡು ಬಂದಿದ್ದೇನೆ. ಅದನ್ನು ಬಿಟ್ಟು ನೀವು ಹೇಳಿದ್ದನ್ನೇ ಹೇಳಿಕೊಂಡು ಇದ್ದರೆ. ಅದರ ಅರ್ಥ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ವೈ. ರಾಮಕೃಷ್ಣ : ಅಲ್ಲಿ ರೆವಿನ್ಯೂ ಮಿನಿಸ್ಟರ್ ಆಗಿ ನಿಂತುಕೊಂಡಿದ್ದಾಗ ಈ ಪ್ರಮೋಸರ್ ನಾನು ಮಾಡಿದ್ದೇನೆ, ಆದರೆ ಇಲ್ಲಿ ಅದಕ್ಕೆ ವಿರೋಧ ಮಾಡುತ್ತೇನೆ ಎನ್ನುವ ಅಭಿಪ್ರಾಯವೇ ನಿಮ್ಮದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಹಾಗಲ್ಲ, ಅದು ನಾನು ಇದ್ದಾಗ ಮಾಡಿಲ್ಲ ಕಾನೂನೇ ಅಸ್ತಿತ್ವದಲ್ಲಿಲ್ಲ, ಅದನ್ನು ಹೇಳಿಕೊಂಡು ಇವತ್ತಿನ ದಿವಸ ಮಾಡುತ್ತೇವೆಂದು ಹೇಳಿದರೆ ಹೇಗೆ? ಅದಕ್ಕಾಗಿ ಕಾನೂನು ಬಂದು.

ಅಧ್ಯಕ್ಷರು : ಈಗ ಇವರಿಬ್ಬರು ಒಂದಾಗಿದ್ದಾರೋ? ನಾನು ಸ್ವಲ್ಪ ತಡವಾಗಿ ಬಂದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾನೂನು ಇದ್ದಾಗ ಈ ರೀತಿ ನಾವು ಜಾರಿಯಲ್ಲಿ ತರುತ್ತೇವೆ ಎಂದು ಹೇಳಿದರೆ ಸಂತೋಷ. ಅದರ ಪರಿಣಾಮ ಏನು? ದುಷ್ಪರಿಣಾಮ ಏನು? ಎನ್ನತಕ್ಕಂಥ ಮಾತನ್ನು ನಾನು ನಿಮಗೆ ಹೇಳುತ್ತಿದ್ದೇನೆ. ಈಗಲೂ ಕೂಡ ತಡವಾಗಿಲ್ಲ, ಈ ಸೆಕ್ಷನ್ 109ಗೆ ಏನು ತಾವು ಸಣ್ಣ ತಿದ್ದುಪಡಿ ತಂದಿದ್ದೀರಿ ಅದರ ಬದಲು ಸಮಗ್ರವಾದ ತಿದ್ದುಪಡಿಯನ್ನು ತನ್ನಿ. ಮಾನ್ಯ ಅಧ್ಯಕ್ಷರ ಮುಖಾಂತರ ಈ ಮಾತನ್ನು ತಮಗೆ ಪುನಃ ಕೇಳುತ್ತೇನೆ ಅದೇನೆಂದರೆ ಬಹುಶಃ ಈಗಲಾದರೂ ಸ್ವಲ್ಪಮಟ್ಟಿಗೆ ಅವರು ಕನ್‌ವಿನ್ಸ್, ಆಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಹೇಳಿದ್ದನ್ನು ಕೇಳಿಸಿಕೊಂಡಿಲ್ಲ ಎಂದರೆ ಈ ಸರ್ಕಾರ ಕಿವುಡು ಇದೆ ಎಂದು ಹೇಳಬಹುದು. ಸ್ಪಂದಿಸತಕ್ಕಂಥ ಭಾವನೆ ಅವರಿಗೆ ಇಲ್ಲ ಎಂದು ನಾನು ತಿಳಿದುಕೊಳ್ಳಬೇಕಾಗುತ್ತದೆ. ಕನಿಷ್ಠ ಪಕ್ಷ ಇಂತಹ ವಿಷಯಗಳನ್ನು ಕೇಳುವುದಕ್ಕಾದರೂ

ಕಿವಿ ಇದೆಯೆಂದು ತಿಳಿದುಕೊಂಡಿದ್ದೇನೆ. ಇಂತಹ ಪ್ರಗತಿವಲ್ಲದಂಥ ಕಾನೂನುಗಳನ್ನು ಏನು ತಂದಿದ್ದೀರಿ ಇದರಿಂದ ರೈತರಿಗೆ ತೊಂದರೆಯಾಗುತ್ತದೆ, ಆದ್ದರಿಂದ ಹಿಂದೆ ಇದ್ದ ಹಾಗೆಯೇ ಇಟ್ಟರೆ ರೈತರಿಗೆ ಸಹಾಯವಾಗುತ್ತದೆಂದು ನಾನು ಹೇಳುತ್ತಾ ಇದ್ದೆ. ಅದು ಆದರೂ ಅವರ ಕಿವಿಗೆ ತಟ್ಟಬಹುದೆಂದು ನಾನು ಹೇಳಿದ್ದುದು. ತಪ್ಪೆ?

ಶ್ರೀ ವಾಟಾಳ್ ನಾಗರಾಜ್ : ನೀವು ಎಷ್ಟಾದರೂ ಹೇಳಿ, ಅವರ ಕಿವಿಗೆ ತಟ್ಟುವುದಿಲ್ಲ. ಈ ಮಂತ್ರಿಮಂಡಲಕ್ಕೆ ಕಿವಿ ಇಲ್ಲದ ಮೇಲೆ ಇವರಿಗೆ ಒಬ್ಬರಿಗೆ ಹೇಳಿ ಏನು ಪ್ರಯೋಜನ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಿವಿ ಇಲ್ಲದೆ ಕಿವುಡು ಇದ್ದರೆ ಜನ ಮುಂದೆ ಅದನ್ನು ಆಪರೇಷನ್ ಮಾಡುತ್ತಾರೆ. ಆವಾಗಲಾದರೂ ಗೊತ್ತಾಗುವುದಿಲ್ಲವೇ? ಮುಂದೆ ಜನ ಕಿವಿ ಆಪರೇಷನ್ ಮಾಡುತ್ತಾರೆ. ಕಣ್ಣು ಕಾಣುವುದಿಲ್ಲ ಎಂದರೆ ಕಣ್ಣು ಆಪರೇಷನ್ ಮಾಡುತ್ತಾರೆ.

ಅಧ್ಯಕ್ಷರು : ನಾನು ಏನೋ ಮೆನೇಜ್ ಓದುತ್ತಾ ಇದ್ದೆ. ರೆವಿನ್ಯೂ ಮಿನಿಸ್ಟರ್ ಹೇಳಿದ್ದುದನ್ನು ನಾನು ಕೇಳಿಸಿಕೊಳ್ಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನಮ್ಮ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ಅವರಿಗೆ ಏನೇನು ಇಲ್ಲವೋ ಅದು ನಮಗೂ ಇಲ್ಲ ಎಂದು ಅವರು ಅಂದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನು ಅಂದುಕೊಳ್ಳಲೇ ಇಲ್ಲ. ನನಗೆ ಚೆನ್ನಾಗಿ ಕಿವಿ ಕೇಳಿಸುತ್ತದೆ. ಇವರಿಗೆ ಕೇಳಿಸುತ್ತಿಲ್ಲವಲ್ಲವೆಂದು ನನಗೆ ಬಹಳ ವ್ಯಥೆಯಾಗುತ್ತಿದೆ. ಅವರು ಒಂದು ಗಂಟೆಯಿಂದ ಒಳ್ಳೆಯ ಕಿನ್ನರಿ ಬಾರಿಸದ ಹಾಗೆ ಆಗಿದೆ. ಇನ್ನೂ ಮಂತ್ರಿಗಳಿಗೆ ಏನೂ ಅರ್ಥವೇ ಆಗಿಲ್ಲವೆಂದು ನಾನು ಇಲ್ಲಿ ಕುಳಿತುಕೊಂಡು ನೋಡುತ್ತಲೇ ಇದ್ದೇವೆ. ಬಹಳ ಸುಂದರವಾಗಿ, ಎಳೆಎಳೆಯಾಗಿ, ಬಿಡಿಸಿ ಸಮಗ್ರವಾಗಿ ಚರ್ಚೆ ಮಾಡುತ್ತಿದ್ದಾರೆ. ಅವರ ಮೈಗೆ ಏನೂ ತಟ್ಟಲೇ ಇಲ್ಲ. ಅಂದರೆ ಅವರಿಗೆ ಯಾವ ಪಂಚೇಂದ್ರಿಯಗಳೂ ಅದನ್ನು ಎಳೆಯುತ್ತಿಲ್ಲ. ಇವರು ಹೇಳತಕ್ಕಂಥ ಪದಗಳು ಅವರಿಗೆ ಗೊತ್ತಾಗುತ್ತಲೇ ಇಲ್ಲ. ಆದ್ದರಿಂದ ಇವರನ್ನು ಏನು ಎನ್ನಬೇಕೆಂದರೆ ಕಿವಿ ಇಲ್ಲ, ಕಣ್ಣು ಇಲ್ಲ, ಹೃದಯ ಇಲ್ಲ ಯಾವುದೂ ಇವರಿಗೆ ಇಲ್ಲ. ಅದರ ಬಗ್ಗೆ ಬೇರೆ ಮಾತೇ ಇಲ್ಲ.

ಒಬ್ಬ ಮಾನ್ಯ ಸದಸ್ಯರು : ಕಿಂದ್ರಿ ಯಾರ ಮುಂದೆ ಬಾರಿಸಿದರು?

ಶ್ರೀ ವಾಟಾಳ್ ನಾಗರಾಜ್ : ಕಿಂದ್ರಿ ಇದು ಒಂದು ಗಾದೆ. ನಾನು ಜಾಲಪ್ಪನವರ ಕುರಿತು ಒಂದು ಗಾದೆ ಹೇಳುತ್ತೇನೆ. ಕೋಣನ ಮುಂದೆ ಕಿಂದ್ರಿ ಬಾರಿಸಿದ ಹಾಗೆ ಎಂದು. ಅದು ಕಷ್ಟವೇ ನಿಜ. ಕೋಣನ ಮುಂದೆ ನೀವು ಕಿನ್ನರಿ ಬಾರಿಸಿದರೆ ಅದು ತಲೆಯಾಡಿಸಿ ತಿವಿಯುವುದಕ್ಕೆ ಬರುತ್ತದೆ. ಅದಕ್ಕೆ ಕೇಳುವುದಕ್ಕೆ ಆಲಿಸುವುದಕ್ಕೆ ಬರುತ್ತದೆಯೇನು? ಆ ಪರಿಸ್ಥಿತಿ ನಿರ್ಮಾಣ ಆಗಿದೆ ಈಗ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸ್ವಾಮಿ, ನನ್ನ ಪರಿಸ್ಥಿತಿ ಅಲ್ಲಿಗೆ ಬಂದಿದೆ.

ಶ್ರೀ ಆರ್.ಎಲ್. ಜಾಲಪ್ಪ : ಕೋಣನ ಮುಂದೆ ಕಿನ್ನರಿ ಬಾರಿಸುವವನು ಈಡಿಯೆಟ್ ಇರಬೇಕು ಅಲ್ಲವೇ ಸ್ವಾಮಿ?

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಪಿಟೀಲು ಬಾರಿಸಿದರೆ ಕತ್ತೆಗಳು ತಲೆ ಅಲ್ಲಾಡಿಸುತ್ತವೆ. ಅದರಿಂದ ಈ ಕೋಣನ ಮುಂದೆ ಕಿನ್ನರಿ ಬಾರಿಸಿದರೆ ಕೇಳಬಹುದೆಂದು ತಿಳಿದುಕೊಂಡರು. ಅದಕ್ಕೆ ಗಾದೆ ಬಂದಿರುವುದು. ಕೋಣನ ಮುಂದೆ ಕಿನ್ನರಿ ಬಾರಿಸಬಾರದು ಎಂದರೆ ಖಂಡಿತ ಅಲ್ಲ ಎಂದು.

ಅಧ್ಯಕ್ಷರು : ಅವರು ಕೋಣ ಆದರೂ ಪರವಾಗಿಲ್ಲ, ನೀವು ಏನಾದರೂ ಕಿನ್ನರಿ ಬಾರಿಸಿದಿರಾ ಖರ್ಗೆಯವರೆ, ಎಂತಹ ಸೊಗಸಾದ ಭಾಷಣ ಮಾಡಿದಿರಿ? ನೀವು ಅವರಿಗೆ ಅಪಮಾನ ಮಾಡಿಬಿಟ್ಟಿರಿ?

ಶ್ರೀ ವಾಟಾಳ್ ನಾಗರಾಜ್ : ಗಾದೆ ಎನ್ನುವುದು ವೇದಕ್ಕೆ ಸಮಾನವಾಗಿರತಕ್ಕಂಥದ್ದು. ಗಾದೆ ಎಂದರೆ ಒಂದು ಸಂದರ್ಭ. ಒಂದು ಕೋಣನ ಮುಂದೆ ಕಿನ್ನರಿ ಅಂದರೆ ಆ ಸಂದರ್ಭಕ್ಕೆ ಕಿನ್ನರಿ ಬಹಳ ಮಹತ್ತರವಾದದ್ದು. ಇದರ ಭಾಷಣ ಬಹಳ ಸ್ಪಷ್ಟವಾದದ್ದು. ವಸ್ತುಸ್ಥಿತಿಯನ್ನು ಚೆನ್ನಾಗಿ ಸಭೆಯ ಮುಂದೆ ಮಂಡಿಸುತ್ತಿದ್ದರೆ ಅದರಲ್ಲಿ ಅನುಮಾನವೇನು ಇಲ್ಲ. ಅವರು ಕಂದಾಯ ಸಚಿವರಾಗಿದ್ದರು. ಪ್ರಗತಿದಾಯಕವಾದ ಭಾಷಣ ಮಾಡುತ್ತಿದ್ದಾರೆ.

ಅಧ್ಯಕ್ಷರು : ನೀವು ಆ ರಮೇಶ್ ಜಿಗಜಿಣಗಿಯವರನ್ನು ನೋಡಿ ಹೇಳಿದ್ದರೆ, ಆ ಕೃಷ್ಣ ನದಿ ತೀರದಲ್ಲಿ ಹೆಚ್ಚು ಇರುತ್ತವೆ ಆ ಕೋಣಗಳು. ಇಷ್ಟು ಹೇಳಿದ್ದರೆ ಸರಿಯೆಂದು ಹೇಳಬಹುದು. ನೀವು ಜಾಲಪ್ಪನವರನ್ನು ನೋಡಿ ಹೇಳಿದರೆ ದೊಡ್ಡಬಳ್ಳಾಪುರದಲ್ಲಿ ಎಲ್ಲಾ ಜರ್ಸಿ ಕಣಗಳು ಇರುವುದು ಅಲ್ಲಿ.

ಶ್ರೀ ಕುಂಬ್ಳೆ ಸುಂದರರಾವ್ : ನನ್ನ ಅಭಿಪ್ರಾಯವೇನೆಂದರೆ ಅವರಿಗೆ ಕೋಣ ಎನ್ನುವುದಕ್ಕಿಂತ ಕೇಳಿಯೂ ಕೇಳಿಸದ ಹಾಗೆ ಇರುವವನು ಜಾಣ ಎಂದು ತೋರಿಸುತ್ತದೆ.

ಅಧ್ಯಕ್ಷರು : ಇದು ನಿಜ. ಏಕೆಂದರೆ ಇವರೆಲ್ಲ ಒಂದು ಹ್ಯಟ್ ನೋಡಿ. ಅವರಿಗೆ ಒಬ್ಬರ ವಿಷಯ ಒಬ್ಬರಿಗೆ ಗೊತ್ತಾಗುತ್ತದೆ.

(ನಗು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಇಷ್ಟು ಮಾತ್ರ ತಮ್ಮ ಮೂಲಕ ಹೇಳಬಯಸುತ್ತೇನೆ. ಇದನ್ನು ಪುನರ್ ಪರಿಶೀಲಿಸಬೇಕು. ಇಲ್ಲದೇ ಹೋದರೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಇವೆರಡನ್ನೂ ಸೇರಿಸಿ ಒಟ್ಟಿಗೇ ಕಳುಹಿಸಿಕೊಡಿ. ಇಲ್ಲದಿದ್ದರೆ ಇದನ್ನು ವಿತ್‌ಡ್ರಾ ಮಾಡಿಕೊಳ್ಳಿ. ನಾನು ಇದರ ಬಗ್ಗೆ ಪ್ರಾಮಾಣಿಕವಾಗಿರುವುದರಿಂದ ಸೀರಿಯಸ್ ಆಗಿ ಹೇಳುತ್ತಿದ್ದೇನೆ. ನೀವು ಕೋಣ ಎನ್ನಿ, ಕಿನ್ನರಿ ಎನ್ನಿ ಆದರೆ ಅದು ನನ್ನ ತಲೆಗೆ ಹೋಗಲಿಲ್ಲ. ಇದು ನಮ್ಮ ಭೂ ಸುಧಾರಣಾ ಕಾನೂನನ್ನು ಸಂಪೂರ್ಣವಾಗಿ ಎರಾಡಿಕೇಟ್ ಮಾಡುತ್ತಿದೆ. ನಮ್ಮ ಭೂ ಸುಧಾರಣಾ ಕಾನೂನನ್ನು ಸಂಪೂರ್ಣ ಸಮಾಧಿ ಆಗುತ್ತಿದೆ. ಇದನ್ನು ಪುನರ್ ಪರಿಶೀಲಿಸಲು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟರೆ ಅಲ್ಲಿ ಇಂಡಸ್ಟ್ರೀಸ್‌ಗೆ ಸಹಾಯ ಮಾಡಬಹುದೆಂಬುದರ ಬಗ್ಗೆ ಚಿಂತನೆ ಮಾಡೋಣ. ಇಲ್ಲಿ ಇಂಡಸ್ಟ್ರೀಸ್ ಬರಬಾರದೆಂದು ಯಾರದ್ದೂ ಇಚ್ಛೆ ಇಲ್ಲ. ಇಂಡಸ್ಟ್ರಿಯಲಿಸ್ಟ್‌ಗಳಿಗೆ ಸಹಾಯ ಮಾಡಬಾರದೆಂದು ಯಾರಿಗೂ ಇಚ್ಛೆ ಇಲ್ಲ, ಆದರೆ ಇಂಡಸ್ಟ್ರಿಯಲಿಸ್ಟ್‌ಗಳಿಗೆ ಸಹಾಯ ಮಾಡುವುದಕ್ಕೆ ಹೋದರೆ ಈಗಾಗಲೇ 6-7 ಲಕ್ಷ ಗೇಣಿದಾರರಿಗೆ ನಮ್ಮ ರಾಜ್ಯದಲ್ಲಿ ಏನು ಪಟ್ಟಾವನ್ನು ಕೊಟ್ಟಿದ್ದೇವೆ ಅಥವಾ 70 ಲಕ್ಷ ಪಟ್ಟಾದಾರರಿದ್ದಾರೆ ಅವರಿಗೆ ದ್ರೋಹ, ಅನ್ಯಾಯ ಆಗಬಾರದು. ಇದನ್ನು ಗಮನದಲ್ಲಿಟ್ಟುಕೊಂಡು ಮುಂದುವರೆಯಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ಈಗಲಾದರೂ ಇದನ್ನು ಅವರು ವಿತ್‌ಡ್ರಾ ಮಾಡುತ್ತಾರೆಂದು ಭಾವಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಅಧ್ಯಕ್ಷರೆ, ಈ ವಿಚಾರ ಚರ್ಚೆಗೆ ಬರುವುದಕ್ಕೆ ಮುಂಚೆಯೇ ನಾನು ಕೆಲವು ಅಬ್ಜೆಕ್ಷನ್ಸ್‌ನ್ನು ಹಾಕಿದ್ದೆ. ಅದೇನೆಂದರೆ, ಇಲ್ಲಿ ತಂದಿರತಕ್ಕ 5 ತಿದ್ದುಪಡಿಗಳ ಪೈಕಿ ಎರಡನ್ನು ಮಾತ್ರ ಮಾನ್ಯ ರಾಷ್ಟ್ರಾಧ್ಯಕ್ಷರಿಗೆ

ಕಳುಹಿಸಿ ಅವರ ಒಪ್ಪಿಗೆಯನ್ನು ಪಡೆದು ಇನ್ನುಳಿದವುಗಳಿಗೆ ಏತಕ್ಕೆ ಅವರ ಒಪ್ಪಿಗೆಯನ್ನು ಪಡೆಯಲಿಲ್ಲ? ಇದರ ಉದ್ದೇಶ ಏನೆಂದರೆ, ಬಹುಶಃ ಇದನ್ನು ಕೇಂದ್ರಸರ್ಕಾರ ಕೂಡ ವಿರೋಧ ಮಾಡಿದೆ. ಆಗ ಮಂತ್ರಿಗಳ ಬಾಯಿಂದ ಏನು ಸ್ಟೇಟ್‌ಮೆಂಟ್ ಬಂತು ಎಂಬುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆ ಹಿನ್ನಲೆಯಲ್ಲಿ ಹೇಳುವುದಾದರೆ ಪಶ್ಚಿಮ ಬಂಗಾಳದ ಬಿಲ್ಲು, ಉತ್ತರ ಪ್ರದೇಶದ ಬಿಲ್ಲು ಕೂಡ ಕೇಂದ್ರ ಸರ್ಕಾರದ ಮುಂದಿವೆ. ಏಕೆಂದರೆ, ಇದು ಭೂಮಿಗೆ ಸಂಬಂಧಪಟ್ಟ ಕಾಯಿದೆ ಇದಾಗಿರುವುದರಿಂದ ಇದು ಸ್ಟೇಟ್ಸ್ ಸಬ್ಜೆಕ್ಟ್ಸ್ ಆದರೂ ಕೂಡ ಇಡೀ ರಾಷ್ಟ್ರಕ್ಕೇ ಸಂಬಂಧಪಟ್ಟಂಥ ವಿಚಾರ ಹಿಂದಿನ ನಾಯಕರು ಒಂದು ಕಾನ್ಷಿಯಸ್‌ನ್ನು ಕ್ರಿಯೇಟ್ ಮಾಡಿದ್ದಾರೆ. ಇದನ್ನು ನ್ಯಾಯವಾಗಿ ನೋಡಿದರೆ ಭೂಮಿ 'ಎ' ಲಿಸ್ಟ್‌ನಲ್ಲೇ ಸೇರಿಸಬೇಕಾಗಿತ್ತು. ಆದರೆ ಒಂದೊಂದು ರಾಜ್ಯದ ಹಿಡುವಳಿ ಪದ್ಧತಿ ಒಂದೊಂದು ರೀತಿಯಲ್ಲಿ ಇರುತ್ತದೆ. ಅದನ್ನು ಮನಗಂಡು ಈ ವಿಚಾರವನ್ನು ಸ್ಟೇಟ್‌ಲಿಸ್ಟ್‌ನಲ್ಲೇ ಇರಿಸಿದರೆ ಉತ್ತಮವಾಗುತ್ತದೆ ಎಂಬ ಅಭಿಪ್ರಾಯಕ್ಕೆ ಅವರು ಬಂದರು. ತಾವು ಕಾನ್‌ಸ್ಟಿಟ್ಯೂಯಂಟ್ ಅಸೆಂಬ್ಲಿಯ ಡಿಬೇಟ್ಸ್‌ನ್ನು ತೆಗೆದುಕೊಂಡು ನೋಡಿ. ಗೊತ್ತಾಗುತ್ತದೆ ಅದಕ್ಕೆ ನಾನು ಹೇಳಿದೆ.

MR. SPEAKER : There is no uniform policy with regard to the land. Even Land Reforms, it varies from State to State. ನಮ್ಮದು very progressive Land Reforms.

SRI Y. RAMAKRISHNA : This subject which deservs to be in the 'A' List... ಏಕೆ ಎಂದು ಕೇಳಿ. ಸಕಲ ಸಂಪತ್ತನ್ನೂ ಸೃಷ್ಟಿ ಮಾಡಿರತಕ್ಕದ್ದು ಈ ಭೂಮಿ. ಮೊದಲನೆಯದು ಭೂಮ, ಎರಡನೆಯದು ಇಂಡಸ್ಟ್ರೀಸ್, ಮೂರನೆಯದು ಬ್ಯಾಂಕ್. ಈ ಮೂರರ ಬಗ್ಗೆ ನ್ಯಾಷನಲ್ ಪ್ಲಾನಿಂಗ್ ಕಮಿಷನ್‌ನವರೂ ಮತ್ತು ಹಿರಿಯ ನಾಯಕರೂ ಯೋಚನೆ ಮಾಡಿ ಈ ಮೂರನ್ನೂ ನ್ಯಾಷನಲೈಸೇಷನ್ ಅರ್ಥ ಬರುವ ಹಾಗೆ ಜನತೆಯ ಸ್ವತ್ತನ್ನಾಗಿ ಮಾಡಿದ್ದಾರೆ. ನ್ಯಾಷನಲೈಸ್‌ಸೇಷನ್ ಆಫ್ ಲ್ಯಾಂಡ್ ಎಂದರೇನು? ಭೂಸುಧಾರಣೆಯ ಮೂಲಕ ಬ್ಯಾಂಕ್ ನ್ಯಾಷನಲೈಸೇಷನ್ ಮೂಲಕ ಅದೇ ರೀತಿ ಇಂಡಸ್ಟ್ರಿಗಳನ್ನು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಮೂಲಕ ಸಾಮಾನ್ಯ ಜನತೆಯ ಕೈಗೆ ಕೊಟ್ಟಿದ್ದಾರೆ. ಇದು ಭಾರತ ಸರ್ಕಾರದ ಬಹಳ ಮುಖ್ಯವಾದ ಮೂಲ ಉದ್ದೇಶಗಳು. ತಾವು 9ನೇ ಷೆಡ್ಯೂಲನ್ನು ತೆಗೆದುನೋಡಿ. 9ನೇ ಷೆಡ್ಯೂಲ್ 31(ಬಿ)ನಲ್ಲಿ ಇರತಕ್ಕ 257ಐಟಂಗಳ ಪೈಕಿ 227ಐಟಂಗಳು ಭೂಮಿಗೆ ಸಂಬಂಧಪಟ್ಟಂಥವು.

MR. SPEAKER : Nationalisation of land did not take place. Where as the nationalisation of land taken place in the country.

ಶ್ರೀ ವೈ. ರಾಮಕೃಷ್ಣ : ಆ ಅರ್ಥದಲ್ಲಿ ಎಂದು ನಾನು ಹೇಳಿದೆ. 9ನೇ ಶೆಡ್ಯೂಲ್‌ನ್ನು ತೆಗೆದುನೋಡಿ. ಎಲ್ಲ ರಾಜ್ಯಗಳಿಗೂ ಸಂಬಂಧಪಟ್ಟಂತೆ 257 ಐಟಂಗಳೂ ಬರೀ ಭೂಮಿಗೆ ಸಂಬಂಧಪಟ್ಟವು...

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾಗೇಗೌಡರು ಮಾತನಾಡಬೇಕೆಂದು ಇದ್ದರೆ ದಯವಿಟ್ಟು ಅವರು ಎದ್ದು ನಿಂತು ಮಾತನಾಡಲಿ. ಏಕೆಂದರೆ ಅವರು ಮಧ್ಯೆ ಮಧ್ಯೆ ಎದ್ದುನಿಂತು ಮಾತನಾಡಿ ನಮಗೆ ತೊಂದರೆ ಕೊಡುತ್ತಾರೆ. ತಾವು ಅವರಿಗೆ ಎಚ್ಚರಿಕೆ ಕೊಟ್ಟರೆ ಒಳ್ಳೆಯದು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನ್ಯಾಷನಲೈಸೇಷನ್ ಬಗ್ಗೆ ಮಾತನಾಡುತ್ತಾ ಪಬ್ಲಿಕ್ ಸೆಕ್ಟಾರ್ಸ್ ಬಗ್ಗೆ ಹೇಳಿದರು. ಅದಕ್ಕೆ ನಾನು ಹೇಳಿದೆ. ಸಾಮಾನ್ಯವಾಗಿ ಎಲ್ಲ ಪಬ್ಲಿಕ್ ಸೆಕ್ಟಾರ್ಸ್ ಕೂಡ ಫೇಲ್ಯೂಡ್

ಆಗಿವೆ. ನೀವು ಲೇಬರ್ ಲೀಡರ್ ಆಗಿ ಏತಕ್ಕೆ ಹೀಗೆ ಮಾತನಾಡುತ್ತೀರಿ ಕೂತುಕೊಳ್ಳಿ ಎಂದು ನಾನು ಹೇಳಿದೆ. ಪಬ್ಲಿಕ್ ಸೆಕ್ಟಾರ್ಸ್ ಫೇಲ್ ಆಗಿಲ್ಲವೆಂದು ಹೇಳುವುದಾದರೆ ತಾವು ಹೇಳಿ. except Government of India's few Public Sector Undertakings, all the Statee Public Sector Undertakings failed. ಎಲ್ಲಾ ಪಬ್ಲಿಕ್ ಸೆಕ್ಟಾರ್ಸ್ ಕೂಡ ಫೇಲ್ ಆಗಿವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ಮಾನ್ಯ ನಾಗೇಗೌಡರ ಅಭಿಪ್ರಾಯ ಆದರೆ ಅವರು ಹೇಳಲಿ. ಇದಕ್ಕೆ ನನ್ನ ಅಬ್ಜೆಕ್ಷನ್ ಇಲ್ಲ. ನನ್ನ ಪ್ರಶ್ನೆ ಇಷ್ಟೆ. ಅವರ ಅಭಿಪ್ರಾಯವನ್ನು ಅವರು ಹೇಳಲಿ. ಆದರೆ ಬೇರೆಯವರು ಮಾತನಾಡುವಾಗ ಇವರು ಇಲ್ಲಿ ಕೂತುಕೊಂಡು ಎಲ್ಲರಿಗೂ ಹೇಳುವುದು ಬೇಡ. ನೇರವಾಗಿ ಎಲ್ಲರಿಗೂ ಅವರ ಅಭಿಪ್ರಾಯವನ್ನು ಹೇಳಲಿ. ಇಷ್ಟೇ ನಾನು ಹೇಳುವುದು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಕೃಷ್ಣರವರು ಇದು ಬಹಳ ಕ್ರೂಷಿಯಲ್ ಎನ್ನತಕ್ಕ ಅಬ್ಜೆಕ್ಷನ್‌ನ್ನು ಎತ್ತಿದ್ದಾರೆ. ಈ ತಿದ್ದುಪಡಿಗೆ ಮಾನ್ಯ ರಾಷ್ಟ್ರಾಧ್ಯಕ್ಷರೇ ಒಪ್ಪಿಗೆಯನ್ನು ಕೊಡಬೇಕಾಗಿತ್ತು, ನೀವು ಮಾನ್ಯ ರಾಜ್ಯಪಾಲರಿಗೆ ಏತಕ್ಕೆ ಕಳುಹಿಸಿಕೊಟ್ಟಿರಿ ಎಂದು ಹೇಳಿದರು. ಹಿಂದೆ 1992-93ರಲ್ಲಿ ಇದೇ ಆಕ್ಟ್ ಮತ್ತು ಇದೇ ಸೆಕ್ಷನ್ಸ್‌ಗೆ ಕೆಲವು ತಿದ್ದುಪಡಿಗಳಾಗಿವೆ. ಆಗ ಮಾನ್ಯ ರಾಜ್ಯಪಾಲರೇ ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ, ಆದ್ದರಿಂದ ನಾವು ಈಗಲೂ ಕೂಡ ಅವರಿಗೇ ಕಳುಹಿಸಿಕೊಟ್ಟಿದ್ದೇವೆ. ಈಗ ಇಲ್ಲಿ ಇದರ ಬಗ್ಗೆ ಮಾತನಾಡಿದರೆ ನಾವು ಮಾನ್ಯ ರಾಜ್ಯಪಾಲರ ಅಥಾರಿಟಿಯನ್ನು ಪ್ರಶ್ನೆ ಮಾಡಿದಂತೆ ಆಗುತ್ತದೆ. ಆದ್ದರಿಂದ ಅದನ್ನು ಬಿಟ್ಟು ಮುಂದಿನ ವಿಚಾರವನ್ನು ಪ್ರಸ್ತಾಪ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಇದಕ್ಕೆ ತಾವು ಏನು ಹೇಳುತ್ತೀರೋ ಹೇಳಬಹುದು.

ಶ್ರೀ ವೈ. ರಾಮಕೃಷ್ಣ : ತಾವು ತಮ್ಮ ರೆಕಮೆಂಡೇಷನ್‌ನಲ್ಲಿ ತಿಳಿಸಬೇಕಾಗಿತ್ತು.

ಶ್ರೀ ಆರ್.ಎಲ್. ಜಾಲಪ್ಪ : ಅದು ಅನಾವಶ್ಯಕ. ಏಕೆಂದರೆ 1992-93ರಲ್ಲಿ ಮಾನ್ಯ ರಾಜ್ಯಪಾಲರೇ ಅಪ್ರೂವ್ ಮಾಡಿರತಕ್ಕದ್ದು ಇಲ್ಲಿದೆ. ಇದನ್ನು ಮಾನ್ಯ ರಾಜ್ಯಪಾಲರೇ ಮಾಡಿರುವುದರಿಂದ ಮತ್ತೆ ನಾವೇನು ಅವರಿಗೆ ಅದನ್ನೇ ತಿಳಿಸುವುದು?

ಶ್ರೀ ವೈ. ರಾಮಕೃಷ್ಣ : ನೀವೇ ಸಲಹೆಯನ್ನು ಕೊಡಬಹುದಾಗಿತ್ತು ಎಂದು ನಾನು ಹೇಳಿದೆ ಅಷ್ಟೆ. ಮಾನ್ಯ ರಾಜ್ಯಪಾಲರ ನಡವಳಿಕೆಯ ಬಗ್ಗೆ ನಾನು ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಆ ಕಾರ್ಯವನ್ನು ಮಾಡಬಹುದಿತ್ತು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ತಾವು ಇದುವರೆಗೂ ನಮ್ಮ ಅಭಿಪ್ರಾಯವನ್ನು ಕೇಳಿದಿರಿ. ಉದಾಹರಣೆಗೆ ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : 1992-93ರಲ್ಲಿ ಇದೇ ಮಾನ್ಯ ರಾಜ್ಯಪಾಲರೇ ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿರುವುದರಿಂದ, ಮತ್ತೆ ಇದಕ್ಕೆ ಮಾನ್ಯ ರಾಜ್ಯಪಾಲರು ತಮ್ಮ ಒಪ್ಪಿಗೆಯನ್ನು ಕೊಡುವುದಕ್ಕೆ ಅಧಿಕಾರ ಇಲ್ಲವೆಂದು ನಾವು ಅಲ್ಲಿ ಹೋಗಿ ಹೇಳಬೇಕೇ? ನೀವು ಹಿಂದೆ ಲಾ ಮಿನಿಸ್ಟರ್ ಆಗಿದ್ದವರು.

ಶ್ರೀ ವೈ. ರಾಮಕೃಷ್ಣ : ನೀವು ಈ ರೀತಿ ಕಾಮೆಂಟ್ ಮಾಡುವುದಾದರೆ...

ಶ್ರೀ ಆರ್.ಎಲ್. ಜಾಲಪ್ಪ : ಹೌದು, ನೀವು ಹಿಂದೆ ಲಾ ಮಿನಿಸ್ಟರ್ ಆಗಿರಲಿಲ್ಲವೆ?

SRI Y. RAMAKRISHNA : I have got liberty to tell you.. What all I knew.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ನೀವು ಹಿಂದೆ ಲಾ ಮಿನಿಸ್ಟರ್ ಆಗಿರಲಿಲ್ಲವೆ? ಎಂದು ಕೇಳಿದ್ದು ತಪ್ಪೇ?

ಶ್ರೀ ವೈ. ರಾಮಕೃಷ್ಣ : ಲಾಮಿನಿಸ್ಟರ್ ಆಗಿದ್ದುದಕ್ಕೂ ಇದಕ್ಕೂ ಏನು ಸಂಬಂಧ? ನಾನು ಲಾ ಮಿನಿಸ್ಟರ್ ಆದರೆ ನಮ್ಮ ಸೆಕ್ರೆಟರಿಯವರು ಏನು ಕೊಡುತ್ತಾರೋ ಅದನ್ನು ನಾನು ಹೇಳಬೇಕಾಗುತ್ತದೆ. ಈಗ ನನಗೆ ಸ್ವಾತಂತ್ರ್ಯ ಇದೆ, ನಾನು ಹೇಳುತ್ತಿದ್ದೇನೆ. ಇಲ್ಲಿ ನೀವು ತಂದಿರತಕ್ಕ ತಿದ್ದುಪಡಿಗಳ ಪೈಕಿ '2ನ್ನು ಮಾನ್ಯ ರಾಷ್ಟ್ರಪತಿಯವರಿಗೆ ಕಳುಹಿಸಿಕೊಟ್ಟಿದ್ದೀರಿ. ಅವರು ಅಕ್ಸೆಪ್ಟ್ ಮಾಡಿದ್ದಾರೆ. ಮೂಲ ತಿದ್ದುಪಡಿಗಳನ್ನು ಅವರಿಗೆ ಕಳುಹಿಸಿಕೊಟ್ಟಿದ್ದೀರಿ. ನಂತರ ಮಾಡಿದ ತಿದ್ದುಪಡಿಗಳನ್ನು...

ಅಧ್ಯಕ್ಷರು : ಇದರ ಇನ್‌ಫರೆನ್ಸ್ ಎಂದರೆ, ಇಲ್ಲಿದ್ದರೆ ನೀವು ಥಿಂಕ್ ಮಾಡುತ್ತೀರಿ, ಅಲ್ಲಿದ್ದರೆ ಆಫೀಸರ್ಸ್ ಥಿಂಕ್ ಮಾಡುತ್ತಾರೆ...

ಶ್ರೀ ವೈ. ರಾಮಕೃಷ್ಣ : ಈಗ ಅವರು ಮಾಡುತ್ತಿರುವುದು.

ಅಧ್ಯಕ್ಷರು : ಅಂದರೆ ದೇ ಡೋಂಟ್. ಥಿಂಕ್ ಎಂದು....

ಶ್ರೀ ವೈ. ರಾಮಕೃಷ್ಣ : ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈಗ ಇವರು ಲ್ಯಾಂಡ್ ರಿಫಾರಂಸ್ ಆಕ್ಟ್‌ಗೆ ಏನು ತಿದ್ದುಪಡಿಯನ್ನು ತಂದಿದ್ದಾರೆ, ಇದರ ಉದ್ದೇಶಗಳಾದರೂ ಏನು? ಎಂಬುದನ್ನು ಓದಿ ಹೇಳುತ್ತೇನೆ.

"Whereas it is expedient to enact a Uniform Law in the State of Karnataka relating to aggrerian relations."

ನೀವು ಇಲ್ಲಿ ತಂದಿರತಕ್ಕ ತಿದ್ದುಪಡಿಗಳು ಅಗ್ರೇರಿಯನ್ ರಿಲೇಷನ್ಸ್‌ಗಾ? ನಿಮ್ಮ ಹೃದಯದ ಮೇಲೆ ಕೈ ಇಟ್ಟುಕೊಂಡು ಹೇಳಿ. ಇದು ಅಗ್ರೇರಿಯನ್ ರೆವಲ್ಯೂಷನ್ಸ್ ಎಂದು ಹೇಳುತ್ತೀರೋ? ಇನ್ನು ಎರಡನೆಯದು, conferment of ownership on tenants.

ಇದು ಇದಕ್ಕೆ ಸಂಬಂಧಪಟ್ಟಿದ್ದೇ? ಮೂರನೆಯದು, "ceiling on land, land holding and for certain other matters herein appearing in favour of land."

ಇದಕ್ಕೆ ಸಂಬಂಧಪಟ್ಟಿದ್ದೇ? ಇದಕ್ಕೆ ತದ್ವಿರುದ್ಧವಾಗಿ ಈ ತಿದ್ದುಪಡಿಗಳನ್ನು ತಂದಿದ್ದೀರಿ. ನಾನು ಇದಕ್ಕೆ ಏನಾದರೂ ಹೇಳಿದರೆ, ನೀವು ಲಾ ಮಿನಿಸ್ಟರ್ ಆಗಿದ್ದವರು ಎಂದು ಹೇಳುತ್ತೀರಿ. ಮೂಲ ಉದ್ದೇಶಗಳಿಗೆ ತದ್ವಿರುದ್ಧವಾಗಿ ನೀವು ತಂದಿರತಕ್ಕ ತಿದ್ದುಪಡಿಗಳು ಇವು ಎಂದು ನಾನು ಹೇಳುತ್ತಿದ್ದೇನೆ. ಸೆಕ್ಷನ್ 109ರಲ್ಲಿ ಏನು ಹೇಳುತ್ತಿದ್ದೀರಿ? In accordance with the Mysore Town and Country Planning Act, 1961.

ಇದರ ಮೂಲ ಉದ್ದೇಶ ಏನು ಸ್ವಾಮಿ? ಇದರ ಅರ್ಥ ಬಹಳ ವಿಶಾಲವಾಗಿದೆ. ಇದನ್ನು ತಾವು ಅರ್ಥಮಾಡಿಕೊಳ್ಳಿ. ಇದಕ್ಕೂ ಮತ್ತು ಲ್ಯಾಂಡ್ ರೀಫಾರಂಸ್ ಆಕ್ಟ್‌ಗೂ ಏನು ಸಂಬಂಧ ಎಂಬುದನ್ನು ನೀವೇ ಹೇಳಿ.

"Whereas an Act providing for the regulations of land use and development and for making execution of town planning schemees in the State of Mysore, ಮುಂದಕ್ಕೆ....

"Thereas it is necessary and expendient to create within favourable planning and replanning in urban and rural areas inthe State of Mysore."

"With a view to provide civic amentions etc., and to stop uncontrolled development of land and profiteering in land...

ಇದು 2ನೇ ಮೂಲ ಉದ್ದೇಶ. ಈಗ ನೀವು ಏನು ತಿದ್ದುಪಡಿಯನ್ನು ತಂದಿದ್ದೀರಿ ಅದನ್ನೇ ನಾನು ಓದುತ್ತಿದ್ದೇನೆ. ನಾನು ಇದನ್ನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ಇನ್ನು ಮೂರನೆಯದಾಗಿ ಏನು ಹೇಳಿದ್ದೀರಿ. "To preserve and improve the existing recreational facilities and other amenities and contribution towards planned use of land."

ಅಂದರೆ ಇದು ಲ್ಯಾಂಡ್ ರೀಫಾರಂಸ್‌ಗೆ ಸಂಬಂಧಪಟ್ಟದ್ದೇ? ಇನ್ನು ಕೊನೆಯಲ್ಲಿ "To direct future growth of population of the area etc.,"

ನೀವು ತಂದಿರತಕ್ಕ ತಿದ್ದುಪಡಿಗಳು ಯಾವುದೋ ಒಂದೊಂದು ಕಂಟ್ರಿ ಪ್ಲಾನಿಂಗ್ ಹೆಸರನ್ನು ಹಾಕಿ ಅದರಲ್ಲಿರತಕ್ಕ ಮೂಲ ಉದ್ದೇಶಗಳನ್ನೇ ನೀವು ಮರೆತಾಗ ನಾವು ಅಭಿಪ್ರಾಯ ವ್ಯಕ್ತಪಡಿಸಲು ಎದ್ದುನಿಂತಾಗ ನೀವು ನಮ್ಮನ್ನು ಟೀಕೆ ಮಾಡಿದರೆ ನಾವು ಹೇಗೆ ಸುಮ್ಮನಿರಬೇಕು? ಇದರ ಬಗ್ಗೆ ವಾದ ಮಾಡತಕ್ಕದ್ದು ನನ್ನ ಧರ್ಮ. ಆದರೆ ಅದನ್ನು ಸ್ವೀಕಾರ ಮಾಡುವುದು ಬಿಡುವುದು ತಮಗೆ ಸೇರಿದ್ದು. ಇದರ • ಮೂಲ ಉದ್ದೇಶಗಳ ಬಗ್ಗೆ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. 1961ನೇ ಇಸವಿಯಲ್ಲಿ ಪಾಸ್ ಆಗಿರತಕ್ಕ ಒರಿಜಿನಲ್ ಲ್ಯಾಂಡ್ ರೀಫಾರಂಸ್ ಆಕ್ಟ್‌ನ ಸೆಕ್ಷನ್ 109ನ್ನು ತಾವು ದಯವಿಟ್ಟು ತೆಗೆದುನೋಡಿ. ಇವತ್ತು ಇವರು ಏನು ಹೇಳಿದ್ದಾರೆ ಇದನ್ನೇ ಅವರು ಅವತ್ತೇ ಹೇಳಿದ್ದಾರೆ. ಹೊಸದಾಗಿ ಇವರು ಏನನ್ನು ತಂದಿಲ್ಲ, ಅದರಲ್ಲಿ ಏನಿದೆ ಎಂದರೆ:

Section 109 :

Certain land to be exempted from provisions subject to the provisions of the Karnataka Town and Country Planning Act, 1961 and Karnataka Act, 11 of 1963, the State Government may by a notification exempt from provisions of Section 80, land area to be used for non-agricultural use."

ಏನು ಸ್ವಾಮಿ ಇದು? ಇದ್ದುದನ್ನು ಕಿತ್ತು ಹಾಕಿದಿರಿ, ತಿರುಗಿ ಈಗ ಅದಕ್ಕೆ ಸೇರಿಸಿದಿರಿ. Should I not know the purpose why you have done it?

ಏಕೆಂದರೆ ನಾನು ಆಕ್ಟ್ ಓದಿ ಹೇಳುತ್ತಿದ್ದೇನೆ. ಇದಕ್ಕಿಂತ ಮೊದಲು ಯಾವ ಉದ್ದೇಶಗಳಿಗೋಸ್ಕರ ತಾವು ಆಕ್ಟನ್ನು ತಂದಿದ್ದಿರೋ ಅದು ಆಗಲೇ ಆಚೀವ್ ಆಗಿದೆ. ನೋಡಿ ಸ್ವಾಮಿ,

Karnataka Industrial Area Development Board Act, Chapter (4) Section (14) ತೆಗೆದು ನೋಡಿ. ನೀವು ಏನೇನು ಈ ತಿದ್ದುಪಡಿ ಆಕ್ಟ್ ಹೇಳಿದ್ದೀರೋ ಆ ಆಕ್ಟನ್ನು ನಾನು ಓದುತ್ತಿದ್ದೇನೆ. ಈ ಆಕ್ಟ್ ಪ್ರಕಾರ ನೀವು ಎಷ್ಟು ಲ್ಯಾಂಡ್ ಬೇಕಾದರೂ ತೆಗೆದುಕೊಳ್ಳಬಹುದು. ಇಂಡಸ್ಟ್ರಿಯಲ್ ಪರ್ಪಸ್‌ಗೆ; ಎಷ್ಟು ಲ್ಯಾಂಡ್ ಬೇಕಾದರೂ ಕೊಡಬಹುದು. ಅದಕ್ಕೆ ಯಾವ ರೀತಿ ಈ ತಿದ್ದುಪಡಿ ಸಮರ್ಥನೀಯವಾಗಿದೆ. ಈ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಅಮೆಂಡ್ ಮಾಡುವ ಉದ್ದೇಶ ಏನಿತ್ತು? ಅಂದ ಮೇಲೆ ಈ ಆಕ್ಟ್ ಮಾಡಿ ನೀವು ಅದರಲ್ಲಿ ಪ್ರಾವಿಷನ್ ತೆಗೆದುಕೊಂಡ ಮೇಲೆ ಇಲ್ಲಿ ಏಕೆ ಇದನ್ನು ತಂದಿದ್ದೀರಿ ಸ್ವಾಮಿ, ಎರಡನೆಯದಾಗಿ, ಇನ್ನೊಂದು ಆಕ್ಟ್ ಇದೆ, ಬಡವರಿಗೆ ಸಂಬಂಧಪಟ್ಟ ಆಕ್ಟ್, ಹೌಸ್ ಗ್ರಾಂಟ್ ಆಕ್ಟ್. ದಿ| ದೇವರಾಜ ಅರಸು ಅವರು 1972ರಲ್ಲಿ ಮಾಡಿದ್ದು. ಅದರಲ್ಲಿ ನೀವು ಯಾವ ಭೂಮಿ

ಬೇಕಾದರೂ ಕೂಡ ಮಾರುಕಟ್ಟೆಯ ಬೆಲೆಗೆ ಕೊಂಡುಕೊಂಡು ಅದನ್ನು ಸೈಟು ಇಲ್ಲದವರಿಗೆ ಹಂಚಬಹುದು. ಇದಕ್ಕೆ ವಿಶೇಷ ಕಾನೂನು ಇದೆ ಅಂದ ಮೇಲೆ ನೀವು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಲ್ಯಾಂಡ್ ಅಕ್ವಿಸಿಷನ್ ಆಕ್ಟ್. ಯಾವ ಉದ್ದೇಶಕ್ಕೆ ಬೇಕಾದರೂ ತಾವು ಭೂಮಿಯನ್ನು ಅಕ್ವೈರ್ ಮಾಡಬಹುದು. Public purpose can never be questioned in any Court of law by any one. The discretion lies with the Government.

ಅದನ್ನು ಉಪಯೋಗಿಸಿಕೊಂಡು ನೀವು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬಹುದು ಹಾಗೆ ಮಾಡಬಹುದು. ನೀವು ಈ 3 ವಿಶೇಷ ಕಾನೂನುಗಳನ್ನು ಇಟ್ಟುಕೊಂಡು ಪುನಃ ಲ್ಯಾಂಡ್ ರಿಫಾರ್ರಮ್ಸ್ ಮೇಲೆ ಎನ್‌ಕ್ರೋಚ್ ಮಾಡಿ ಇದಕ್ಕೆ ತಿದ್ದುಪಡಿ ತಂದು ಭೂ ಸುಧಾರಣೆಯನ್ನು ವಿಕೃತ ಮಾಡಲು ಹೊರಟಿದ್ದೀರಲ್ಲ; ಇದು ಸರಿಯೇ? ನ್ಯಾಯವೇ? ಇದಕ್ಕಿಂತ ಅನ್ಯಾಯ ಮತ್ಯಾವುದು ಇಲ್ಲ, These are all the legal aspecs.

ಸ್ವಾಮಿ, ನನ್ನನ್ನು ತಾವು ಅನ್ಯಥಾ ಭಾವಿಸಬೇಡಿ. ಇದ್ದುದ್ದು ಇದ್ದ ಹಾಗೆ ನಾನು ಹೇಳುತ್ತಿದ್ದೇನೆ.

ಹೌಸಿಂಗ್ ಕೋ-ಆಪರೇಟೀವ್ ಸೊಸೈಟೀಸ್‌ಗೆ ಜಮೀನು ಕೊಡತಕ್ಕದ್ದು ಯಾವ ಆಕ್ಟ್‌ನಲ್ಲೂ ಇರಲಿಲ್ಲ, ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಮೊದಲೇ ಇಲ್ಲ. ನಿಮ್ಮ ಪಿಪ್‌ಕಲ್ಚರ್, ಅಗ್ರಿಕಲ್ಚರ್, ಹಾರ್ಟಿಕಲ್ಚರ್ ಇವುಗಳ ಡೆಫನಿಷನ್-(2) ನೋಡಿ:

"In this Act unless context otherwise provided agriculture includes Horticulture, raising of crops, grass land etc. dairy farming, poultry farming, breeding livestock, grazing"

ಇದೆಲ್ಲ ಅದರಲ್ಲಿ ಬರುತ್ತದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಂದೇ ಒಂದು ಮಾತ್ರ ಬಂದಿರಲಿಲ್ಲ; ಯಾವುದು ಅದು? ಹೌಸಿಂಗ್ ಪ್ರಶ್ನೆ ಯಾವ ಆಕ್ಟ್‌ನಲ್ಲೂ ಕೂಡ ಬಂದಿರಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಏನಾಯಿತೆಂದರೆ, ಬೇಕಾದಷ್ಟು ಹೌಸಿಂಗ್ ಸೊಸೈಟಿಗಳು ತಲೆಯೆತ್ತಿದವು; ಲೆಕ್ಕ ಇಲ್ಲದಷ್ಟು ಸೊಸೈಟಿಗಳು ತಲೆಯೆತ್ತಿದವು. ಸರ್ಕಾರ ಅನೇಕ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್‌ಗೆ ಇರತಕ್ಕ ಕಾನೂನಿಗೆ ವಿರುದ್ಧವಾಗಿ, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗೆ ಇರಬಹುದು, ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗೆ ಇರಬಹುದು, ಲೋಕಲ್ ಬಾಡೀಸ್‌ಗೆ ಇರಬಹುದು ಇದನ್ನೆಲ್ಲ ಬಿಟ್ಟು ಎಷ್ಟು ಆಕ್ಟ್ ಮಾಡಬೇಕೋ ಅದಕ್ಕಿಂತ ಹತ್ತರಷ್ಟು ಆಕ್ಟ್ ಮಾಡುವುದೆ?

ಅಧ್ಯಕ್ಷರು : ನೋಡ ಒಂದು ಮಾತು ಹೇಳುತ್ತೇನೆ, You are a senior member, Politicians as a whole, ನಮಗೆ ಏನು ಕಷ್ಟ ಎಂದರೆ mudslinging process ನಲ್ಲಿ ಜನಸಾಮಾನ್ಯರ ದೃಷ್ಟಿಯಲ್ಲಿ ರಿಡಿಕುಲ್ ಆಗಿದ್ದೇವೆ; ಅವಹೇಳನಕ್ಕೆ ಗುರಿಯಾಗಿದ್ದೇವೆ. This I am telling without any reference to any political party or individual, all of us collectively. ಹೌಸಿಂಗ್ ಸೊಸೈಟಿಗಳ ಹಾವಳಿ ಇದು ಯಾವಾಗ ಪ್ರಾರಂಭವಾಯಿತು? ಆಗ ಯಾರ್‍ಯಾರು ಎಲ್ಲೆಲ್ಲಿದ್ದರು, ಇಲ್ಲಿ ಯಾರ್‍ಯಾರು ಎಲ್ಲೆಲ್ಲಿದ್ದರು?

ಶ್ರೀ ವೈ. ರಾಮಕೃಷ್ಣ : ನಾನು ಅದರ ಬಗ್ಗೆ ಕಾಮೆಂಟ್ ಮಾಡುತ್ತಿಲ್ಲ. ಅದಕ್ಕೆ ಪ್ರಾವಿಷನ್ ಇರಲಿಲ್ಲವೆಂದರೆ.

ಅಧ್ಯಕ್ಷರು : ನಾನು ಏನು ಹೇಳಿದೆ ಎಂದರೆ, The more you get into it, it reflects more on each one of us.

ಶ್ರೀ ವೈ. ರಾಮಕೃಷ್ಣ : ನಾನು ಏನು ಹೇಳಿದೆ ಎಂದರೆ, The more you get into it, it reflects more on each one of us.

ಶ್ರೀ ವೈ. ರಾಮಕೃಷ್ಣ : ನಾನು ಏನು ಹೇಳಿದೆ ಎಂದರೆ, The more you get into it, it reflects more on each one of us.

ಶ್ರೀ ವೈ. ರಾಮಕೃಷ್ಣ : ನಾನು ಮೆರಿಟ್ಸ್ ಅಂಡ್ ಡೀಮೆರಿಟ್ಸಗೆ ಹೋಗುತ್ತಿಲ್ಲ. ಅದಕ್ಕೆ ಪ್ರವಿಷನ್ ಇರಲಿಲ್ಲ. ನಾನು ಇದ್ದದ್ದು ಸತ್ಯಾಂಶ ಹೇಳುತ್ತಿದ್ದೇನೆ. ಏನು ಹೇಳುತ್ತೇನೆ ಎಂದರೆ Amarjyothi Housing and Jayanagar Housing Cooperative Societies have approached the High Court. ಅವರು ಸರ್ಕಾರದ ಕ್ರಮ ಬದ್ಧತೆಯನ್ನು ಪ್ರಶ್ನಿಸಿ ಅರ್ಜಿ ಹಾಕಿದರು. ಹೈಕೋರ್ಟಿನಲ್ಲಿ ಕೇಸ್ ಹೊರಟು ಹೋಯಿತು. ಅವರು ಏನು ಹೇಳಿದರೆಂದರೆ, "The Government has no power to acquire land for the benefit of housing society share holders." ಇದನ್ನು ಪ್ರಶ್ನೆ ಮಾಡಿದ ಮೇಲೆ ಇದು ಪುನಃ ಸುಪ್ರೀಂ ಕೋರ್ಟಿಗೆ ಕೇಸ್ ಹೋಯಿತು.

ಶ್ರೀ ಆರ್.ಎಲ್. ಜಾಲಪ್ಪ : ಹೈಕೋರ್ಟಿನಲ್ಲಾಗಲಿ ಸುಪ್ರೀಂ ಕೋರ್ಟಿನಲ್ಲಾಗಲಿ ಯಾವುದೇ ವಿಧವಾದ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುವ ಅಧಿಕಾರ ಸರ್ಕಾರಕ್ಕೆ ಇಲ್ಲವೆಂದು ಎಲ್ಲಿಯೂ ಹೇಳಲಿಲ್ಲ. ಅವರು ಹೇಳಿದ್ದೇನು?

"it is a colourable exercise of power' ಅಂತ ಹೇಳಿದರು. ಕೆಲವು. ಏಜೆಂಟ್ಸ್ ಮಧ್ಯೆ ಜಮೀನು ಕೊಳ್ಳುವುದು ಸೆಕ್ಷನ್ 4(1), 6(1) ನೋಟಿಫಿಕೇಷನ್ಸ್ ಸರ್ಕಾರದಿಂದ ಮಾಡಿಸುವುದು, ಅವರು ಇನ್‌ಫ್ಲುಯೆನ್ಸ್ ಮಾಡಿ ಮಾಡಿಸಿದ್ದಾರೆಂದು 4 ಸೊಸೈಟಿಗಳಿಗೆ They said they cannot be given land, the land should be rturned to the land lords. ಅಂತ ಹೇಳಿದ್ದಾರೆ. ಬೇರೆಯವರಿಗೆ ಹೇಳುವುದು ಎಲ್ಲೆಲ್ಲಿ colourable exercise of power ಇರಲಿಲ್ಲ ಅಲ್ಲೆಲ್ಲ ಅಲೋ ಮಾಡಿದ್ದಾರೆ. ಸೊಸೈಟಿಯವರಿಗೆ ಜಮೀನು ಅಕ್ವೈರ್ ಮಾಡಿ ಕೊಡಬಹುದೆಂದು ಅಲೋ ಮಾಡಿದ್ದಾರೆ. ನಾವು ಹೌಸಿಂಗ್ ಆಕ್ಟ್ ತರಬೇಕಾದರೆ ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆ. ಇವತ್ತು ಆ ಜಡ್ಜ್‌ಮೆಂಟ್ ಕಾಪಿ ನನ್ನ ಹತ್ತಿರ ಇದೆ. ನಾನು ಅದನ್ನು ಓದಿದ್ದೇನೆ ಮತ್ತು ಬರೆದುಕೊಂಡು ಬಂದಿದ್ದೇನೆ. ತಮಗೂ ಗೊತ್ತಿದೆ, ತಮಗೆ ನನಗಿಂತ ಜಾಸ್ತಿ ಅರ್ಥವಾಗುತ್ತದೆ. ಬೇರೆ ಬೇರೆ ಸೊಸೈಟಿಗಳು ಏನಿವೆ ಇವತ್ತು ಹೌಸಿಂಗ್ ಸೊಸೈಟಿ ಆಕ್ಟ್ ಕೆಳಗೆ ತರುವುದಕ್ಕೆ ಇದು ಒಂದು ಕಾರಣ, ಆಗ ಏನಿತ್ತು ಎಂದರೆ ನೇರವಾಗಿ ಜಮೀನು ಕೊಂಡುಕೊಳ್ಳುವ ಅವಕಾಶ ಸೊಸೈಟಿಗಳಿಗೆ ಇರಲಿಲ್ಲ. ಅವರಿಗೆ ಅಗ್ರಿಕಲ್ಚರಲ್ ಲ್ಯಾಂಡ್ ಕೊಳ್ಳುವ ಅವಕಾಶ ಇರಲಿಲ್ಲ. ಆಗ ಏನು ಮಾಡುತ್ತಿದ್ದರು? ಯಾರೋ ಒಬ್ಬ ಅಗ್ರಿಕಲ್ಚರ್ ಹತ್ತಿರ ಜಿ.ಪಿ.ಎ. ಮಾಡಿಸಿಕೊಳ್ಳುವುದು, ಅಗ್ರಿಮೆಂಟ್ ಬರೆಸಿಕೊಳ್ಳುವುದು, ಸ್ವಲ್ಪ ಕಾಸು ಹಾಕಿಬಿಡುವುದು, ಅವರು ಅವನಿಗೆ ದುಡ್ಡು ಕೊಡದೆ ಸತಾಯಿಸುವುದು; ಹೀಗೆಲ್ಲ ಮಾಡುತ್ತಿದ್ದರು ಎಂದು, ಜಿಪಿಎ ಹೋಲ್ಡರ್ ಇದನ್ನೆಲ್ಲ ಮಾಡುತ್ತಾನೆಂದು "colourable exercise of power" ಎಂದು ಹೈಕೋರ್ಟಿನವರು ಮತ್ತು ಸುಪ್ರೀಂ ಕೋರ್ಟಿನವರು ಹೇಳಿದರು.

ಅಧ್ಯಕ್ಷರು : ನಾನು ಏನು ಹೇಳುವುದೇನೆಂದರೆ, You have to criticize it. What are these Housing Socieeties? They have rendered a mighty organisation like BDA totally redundant. All of us are guilt of these things. What is that?

ಶ್ರೀ ವೈ. ರಾಮಕೃಷ್ಣ : ನಾನು ನೇರವಾಗಿ ಒಂದು ಪ್ರಶ್ನೆ ಕೇಳುತ್ತಿದ್ದೇನೆ. ಸುಪ್ರೀಂ ಕೋರ್ಟ್ ಜಜ್‌ಮೆಂಟ್ ಬಂದಮೇಲೆ ಪುನಃ ನೀವು ಲ್ಯಾಂಡ್ ರಿಫಾರ್ಮ್ಸ್

ಆಕ್ಟ್‌ಗೆ ತಿದ್ದುಪಡಿ ಮಾಡಿ ಪುನಃ ಸೊಸೈಟಿಗಳಿಗೆ ಲ್ಯಾಂಡ್ ಕೊಡುತ್ತೇವೆಂದು ಹೊರಟಿದ್ದೀರಲ್ಲ ಇದು ಸರಿಯೇ? Are we correct? You please tell me.

ಶ್ರೀ ಆರ್.ಎಲ್. ಜಾಲಪ್ಪ : ನಾವು ಏನು ಏಜೆಂಟ್‌ಗಳನ್ನು ಇಡುತ್ತಿಲ್ಲ ನೇರವಾಗಿ ನೀವು ಡೆವಲಪ್‌ಮೆಂಟ್ ಮಾಡುವವರು, ನೇರವಾಗಿ ರೈತ ಎಷ್ಟು ಕೇಳುತ್ತಾನೆ ಅಷ್ಟು ಕೇಳುತ್ತಾನೆ ಅಷ್ಟು ದುಡ್ಡು ಕೊಟ್ಟು ಕೊಂಡುಕೊಳ್ಳಿ ಎಂದು ಹೇಳುತ್ತೇವೆ.

SRI Y. RAMAKRISHNA : The State has really became a biggest rea estate agent. This is my charge ನನ್ನ ಕ್ಷೇತ್ರವಾದ ಸರ್ಜಾಪುರದಲ್ಲಿ 5-6 ಲಕ್ಷ ರೂಪಾಯಿಗಳಿಗೆ ಲ್ಯಾಂಡನ್ನು ಕೊಂಡುಕೊಳ್ಳುತ್ತಿದ್ದಾರೆ. ಬೇರೆಯವರಿಗೆ ಎಷ್ಟು ಕೊಟ್ಟಿದ್ದೀರಿ ಒಂದು ಕೋಟಿ, ಎರಡು ಕೋಟಿ. Are you not an agent? Is not the State Governmentanagent?ಅಲ್ಲವೇ ಹೇಳಿ. ಹೌಸಿಂಗ್ ಬೋರ್ಡಿಗೆ ಎಂದು ಕೊಡುತ್ತಿದ್ದೀರಲ್ಲ ಸರ್ಜಾಪುರದಲ್ಲಿ, ಹೌಸಿಂಗ್ ಕಾಲೋನಿ ಎಂದು ತರುತ್ತಿದ್ದೀರಲ್ಲ ಅಲ್ಲಿ ಯಾವ ರೇಟ್‌ಗೆ ಕೊಡುತ್ತಿದ್ದೀರಿ? ನೀವು ಅಲ್ಲಿ ಕಟ್ಟುತ್ತಿರುವ ಮನೆಗಳನ್ನು ಅವರಿಗೆ ಯಾವ ರೇಟ್ ಕೊಡುತ್ತಿದ್ದೀರಿ? Is it not an agency work? ಅದನ್ನೆಲ್ಲ ನೀವು ಪವಿತ್ರವಾದ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ತಿದ್ದುಪಡಿ ತರುತ್ತಿದ್ದೀರಲ್ಲ? ಇದು ನ್ಯಾಯವೇ?

ಶ್ರೀ ಆರ್.ಎಲ್. ಜಾಲಪ್ಪ : ಇದೆಲ್ಲ ಮೊದಲಿನಿಂದ ಮಾಡಿಕೊಂಡು ಬಂದಿರುವುದು.

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ : ಹೌಸಿಂಗ್ ಬೋರ್ಡಿಗೆ ನಾವು ಸರ್ಜಾಪುರದಲ್ಲಿ ಲ್ಯಾಂಡ್ ತೆಗೆದುಕೊಳ್ಳುತ್ತಿಲ್ಲ.

ಶ್ರೀ ವೈ. ರಾಮಕೃಷ್ಣ : ಅದು ನನ್ನ ಕ್ಷೇತ್ರ. ನನಗೆ ಗೊತ್ತಿಲ್ಲವೇ? ಅವರಿಗೆ ಚೆನ್ನಾಗಿ ಗೊತ್ತೇ. I am very sorry for it.

ಅಧ್ಯಕ್ಷರು : ಚೆಕ್‌ಅಪ್ ಮಾಡಿ ಹೇಳಿ. ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳುತ್ತಾರೆ ಅವರು.

ಶ್ರೀ ಎಂ. ಶ್ರೀನಿವಾಸ್ : ಹೌಸಿಂಗ್ ಮಿನಿಸ್ಟರ್ ಲ್ಯಾಂಡ್ ತೆಗೆದುಕೊಳ್ಳದೆ 20 ಲಕ್ಷ ಸೈಟು ಕೊಡುತ್ತೇವೆಂದು ಹೇಳುತ್ತಾ ಇರುತ್ತಾರೆ. ಹೇಗೆ ಹೇಳುತ್ತಾರೆ?

ಶ್ರೀ ಬಸವರಾಜ್ ರಾಯರೆಡ್ಡಿ : ಹೌಸಿಂಗ್ ಬೋರ್ಡ್ ಆದರೂ ಹೌಸಿಂಗ್ ಬೋರ್ಡಿಗೆ ಸರ್ಜಾಪುರದಲ್ಲಿ ನಾವು ಏನೂ ತೆಗೆದುಕೊಂಡಿಲ್ಲವೆಂದು ಅಷ್ಟೇ ಹೇಳಿದೆ

ಶ್ರೀ ಎಂ. ಶ್ರೀನಿವಾಸ್ : ನಾವು ಯಾವುದೇ ಲ್ಯಾಂಡ್ ಅಕ್ವಿಸಿಷನ್ ಮಾಡುವುದಿಲ್ಲ, 20 ಲಕ್ಷ ಸೈಟು ಕೊಡುತ್ತೇವೆಂದು ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜಾಲಪ್ಪನವರೆ, ನಿಮ್ಮಂಥ ಅನುಭವಿ ವ್ಯಕ್ತಿಗಳು ಆ ಸ್ಥಾನದಲ್ಲಿದ್ದಾಗ ಅದು ಹೇಗೆ ನಿಮಗೆ ಮನಸ್ಸು ಒಪ್ಪಿತು ಈ ತಿದ್ದುಪಡಿ ತರುವುದಕ್ಕೆ? ಇವತ್ತು ರೈತರಿಗೂ 50 ಸಾವಿರ ಅಲ್ಲ ಒಂದೆರಡು ಲಕ್ಷ, ನಾಲ್ಕೈದು ಲಕ್ಷ ಸಿಗಬಹುದೆಂದು ಅವರಿಗೆ ಸಮಾಧಾನವಾಗುತ್ತದೆ ಎಡಿಯೂರಪ್ಪನವರೆ ಎಂದು ತಾವು ಹೇಳಬಹುದು. ಆದರೆ 3-4 ವರ್ಷಗಳಲ್ಲಿ ಸಂಪೂರ್ಣ ಜಮೀನು ಮಾರಿಕೊಂಡು ರೈತ ತಬ್ಬಲಿಯಾಗುತ್ತಾನೆ. ನಿಮ್ಮ ಅಭಿವೃದ್ಧಿಗೋಸ್ಕರ ಒಬ್ಬ ಬಡವನಿಗೆ ಒಂದು ಸೈಟು ಕೊಡುವುದಕ್ಕೆ ಒಂದು ಜಾಗ ಸಿಗುವುದಿಲ್ಲ, ಯಾರೋ ಕೋಟ್ಯಾಧಿಪತಿಗಳು ಇಂಡಸ್ಟ್ರಿಗಳಿಗೆ

ಮಾಡಿಕೊಡುವುದಕ್ಕೆ ಪಾಪದ ಕೆಲಸ ಮಾಡುತ್ತಿದ್ದೀರಿ. ಈಗಲಾದರೂ ಚಿಂತನೆ ಮಾಡಿ ನಿಮ್ಮ ಪರ್ಟಿ ಮೀಟಿಂಗ್‌ನಲ್ಲಿ ಚರ್ಚೆ ಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಿ. ನಿಮ್ಮ ಕಾಲದಲ್ಲಿ ಇಂಥ ಕರಾಳ ಶಾಸನ ತಂದು ಪಾಸ್ ಆಯಿತೆಂದರೆ ಬಹುಶಃ ಮುಂದಿನ ಪೀಳಿಗೆ ನಿಮ್ಮನ್ನು ಕ್ಷಮಿಸುವುದಿಲ್ಲ, ಇದನ್ನು ಚಿಂತನೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ನಮ್ಮ ರಾಜ್ಯದಲ್ಲಿ ಈಗಾಗಲೇ ಖರ್ಗೆಯವರು ಹೇಳುತ್ತಾ ಒಂದು ಸೆಕ್ಷನ್ ಹೇಳುತ್ತಾರೆ, ಅದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

5.50 ಪಿ.ಎಂ

ನಮ್ಮ ಕರ್ನಾಟಕ ರಾಜ್ಯದಲ್ಲಿ ಒಟ್ಟು ಭೂಮಿ ಎಷ್ಟಿದೆ ಅದರಲ್ಲಿ ಮೂರನೇ ಒಂದು ಭಾಗಾನೋ ನಾಲ್ಕನೇ ಒಂದು ಭಾಗಾನೋ ಫಾರೆಸ್ಟ್‌ಗೆ ರಿಸರ್ವ್ ಮಾಡಿದ್ದಾರೆ. ಅಷ್ಟನ್ನು ರಿಸರ್ವ್ ಮಾಡಬೇಕು. ಅದರ ಮೇಲೆ ನಮ್ಮ ಕಂಟ್ರೋಲ್ ಇಲ್ಲ, ಕಾರು ಬೆಳೆಸುವುದಕ್ಕೆ ಬೇಕು. ಎರಡನೆಯದು 43 ಲಕ್ಷ ಅನ್‌ಕಲ್ಟಿವಬಲ್ ವೇಸ್ಟ್ ಲ್ಯಾಂಡ್. ಅದೆರಡೂ ಸೇರಿದರೆ ಎಷ್ಟು ಲಕ್ಷ ಆಗುತ್ತದೆ? ಗುಂಡುತೋಪು, ಗೋಮಾಳ, ಕೆರೆ ಅಂಗಳ, ಈ ಮೂರೂ ಸೇರಿದರೆ... ಮೊನ್ನೆ ತಾವು ಉತ್ತರ ಕೊಟ್ಟದ್ದೀರಿ 25,80,214 ಎಕರೆ ಎಂದು ಬರೀ ಗೋಮಾಳಕ್ಕೆ ಸಂಬಂಧಪಟ್ಟಹಾಗೆ ನೀವು ಉತ್ತರ ಕೊಟ್ಟದ್ದೀರಿ. ಇನ್ನು ಗುಂಡುತೋಪು ಕೆರೆ ಅಂಗಳ ಎಷ್ಟಿದೆಯೋ? ಬಹುಶಃ ಅಷ್ಟೇ ಬರಬಹುದು ಅಥವಾ ಅದಕ್ಕಿಂತ ಜಾಸ್ತಿ ಬರಬಹುದು. ಇದರ ಜೊತೆಗೆ ಕೈಗಾರಿಕಾ ಲ್ಯಾಂಡ್. ಅವರು ಹೇಳಿದರು. ಆದರೆ ನಾನು ವಿಶದವಾಗಿ ಹೇಳುತ್ತೇನೆ, ದಯವಿಟ್ಟು ಜ್ಞಾಪಕ ಮಾಡಿಕೊಳ್ಳಿ, ಕೈಗಾರಿಕೆಗಳನ್ನು ಮಾಡುವುದಕ್ಕೆ ಲ್ಯಾಂಡ್ 110 ಎಕರೆ ಬೇಕು ಎಂದು ಕೇಳುತ್ತಿದ್ದೀರಿ. ಒಂದೇ ಸಂಸಾರದವರು ಅವರು ಕೋಟ್ಯಾಧೀಶ್ವರರಾದರೆ ನಾಲ್ಕೈದು ಜನ ಕೊಂಡುಕೊಳ್ಳಬಹುದಲ್ಲ? 110 ಎಕರೆ ಅಂದರೆ ಅವರು ಒಂದು ಸಾವಿರ ಎಕರೆಯನ್ನೂ ಕೊಂಡುಕೊಳ್ಳಬಹುದು. ಅದಕ್ಕೇನೂ ಸೀಲಿಂಗ್ ಲಿಮಿಟ್ ಹಾಕಿಲ್ಲವಲ್ಲ ಇದರಲ್ಲಿ? ಇವತ್ತೂ ಹಿಂದೆ ಕೊಟ್ಟಂಥ ಜಮೀನುಗಳು ಬೇಕಾದಷ್ಟು ಕೈಗಾರಿಕೆ ಸ್ಥಾಪನೆಯಾಗದೆ ಬಿದ್ದಿದೆ ಸ್ವಾಮಿ. ಇವತ್ತು ನಮ್ಮ ಅನೇಕಲ್‌ನಲ್ಲಿ ತಾವು ಬಂದು ನೋಡಿ, ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳ ಖರ್ಚಿನಲ್ಲಿ ಇಂಡಸ್ಟ್ರೀಸ್ ನಾವು ಕಟ್ಟಿದ್ದು ಒಂದು ಔಟ್‌ಹೌಸ್ ಹಾಕಿಬಿಟ್ಟು ಜಮೀನು ಹಾಗೇ ಬಿಟ್ಟು ಇವತ್ತು ಜಮೀನುಗಳನ್ನು ಮಾರಿಕೊಳ್ಳುತ್ತಿದ್ದಾರೆ. ಪೀಣ್ಯದಲ್ಲೂ ಹಾಗೆ ಮಾರಿಕೊಳ್ಳುತ್ತಿದ್ದಾರೆ. ನಾನು ಯಾತಕ್ಕೆ ಹೇಳುತ್ತೇನೆ ಅಂದರೆ ಸೀಲಿಂಗ್ ಲಿಮಿಟ್ ಹಾಕುವುದಕ್ಕಿಂತ ಮುಂಚೆ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು ನೀವು.

ಎರಡನೆಯದು, ವಿದ್ಯಾ ಇಲಾಖೆಗೆ 22 ಎಕರೆ. ವಿದ್ಯಾ ಇಲಾಖೆಗೆ 22 ಎಕರೆ ಅದು ಯಾವುದನ್ನು ರೆಕಗ್ನೈಸ್ ಮಾಡುತ್ತೀರೋ ಅದು. ಸ್ವಾಮಿ, ಇವತ್ತು ನಾಲ್ಕು ಅರ್ಜಿ ಬರುತ್ತವೆ. ನೀವು ಒಂದೇ ರೆಕಗ್ನೈಸ್ ಮಾಡುತ್ತೀರಿ. ಉಳಿದವರು ಹೈಕೋರ್ಟಿಗೆ ಹೋಗುತ್ತಾರೆ. ನಮಗೆ ಏತಕ್ಕೆ ರೆಕಗ್ನಿಷನ್ ಕೊಡುವುದಿಲ್ಲ, ನಮ್ಮದು ರಿಜಿಸ್ಟರ್ಡ ಸೊಸೈಟಿ ನಮ್ಮ ಹತ್ತಿರ ಎಷ್ಟು ಹಣ ಇದೆ, ನಾವು ಸ್ಕೂಲ್ ಕಟ್ಟುತ್ತೇವೆ ಅಂತ ಬರುತ್ತಾರೆ. ಹೇಗೆ ಅವರಿಗೆ ಅನ್ಯಾಯ ಮಾಡುತ್ತೀರಿ? ಮಾಡುವುದಕ್ಕೆ ಅಡ್ಡಿ ಏನೂ ಇಲ್ಲವಲ್ಲ ಈ ತಿದ್ದುಪಡಿಯಲ್ಲಿ ಅದಕ್ಕೋಸ್ಕರ ನೂರಾರು ಎಕರೆ ಬೇಕಾದರೂ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಇವೊತ್ತು ಕೊಟ್ಟೂ ಕೊಡುತ್ತೀರಿ. ಪೂಜಾ ಸ್ಥಳಗಳಿಗೆ ಐದೂವರೆ ಎಕರೆ. ಇದು ಬಹಳ ಇಂಟರೆಸ್ಟಿಂಗ್. ಸ್ವಾಮಿ, ಪೂಜಾಸ್ಥಳ ಅಂದರೆ ಒಂದು ಊರಿನೊಳಗೆ ಹಿಂದೂಗಳಿರುತ್ತಾರೆ, ಮುಸ್ಲಿಂಗಳಿರುತ್ತಾರೆ. ಕ್ರಿಶ್ಚಿಯನ್ನರಿರುತ್ತಾರೆ,

ಪಾರ್ಸಿ ಇರುತ್ತಾರೆ ಎಲ್ಲಾ ಇರುತ್ತಾರೆ. ಪ್ರತಿಯೊಬ್ಬರಿಗೂ ಕೂಡ ಐದೂವರೆ ಎಕರೆ, ಐದೂವರೆ ಎಕರೆ, ಐದೂವರೆ ಎಕರೆ ಕೊಡಬೇಕಾಗುತ್ತದೆ. ಪೂಜೆ ಮಾಡುವುದಕ್ಕೆ ಒಂದು ಊರಿನಲ್ಲಿ ಎಷ್ಟು ಭೂಮಿ ಬೇಕಾಗುತ್ತದೆ ತಾವು ಆಲೋಚನೆ ಮಾಡಿ ಇದೆಲ್ಲಾ ಅಗ್ರಿಕಲ್ಚರಲ್ ಲ್ಯಾಂಡೇ. ಚರ್ಚ್ ಕಟ್ಟುವುದಕ್ಕೂ ಕೊಡಬೇಕು, ಮಸೀದಿ ಕಟ್ಟುವುದಕ್ಕೂ ಕೊಡಬೇಕು, ದೇವಸ್ಥಾನ ಕಟ್ಟುವುದಕ್ಕೂ ಕೊಡಬೇಕು, ಎಲ್ಲಾದಕ್ಕೂ ಕೊಡಬೇಕು. ಅದರಲ್ಲೂ ಬೇಕಾದಷ್ಟು ದೇವಸ್ಥಾನಗಳನ್ನು ಬೇಕಾದಷ್ಟು ದೇವರ ಹೆಸರಿನಲ್ಲೂ ಕಟ್ಟುತ್ತೇವೆ. ಕೊಡಬೇಕಲ್ಲಾ ಕೊಡದಿದ್ದರೆ ಕಾನೂನು ಅಡ್ಡಿ ಬರುತ್ತೆ. ಮುಂದೆ ಗೃಹ ನಿರ್ಮಾಣ ಸಂಘಗಳು. ಅದರ ವಿಚಾರದಲ್ಲಿ ನಾನು ಅನೇಕ ಸಾರಿ ವ್ಯಾಖ್ಯಾನ ಮಾಡಿದ್ದೇನೆ. ತೋಟಗಾರಿಕೆ - 110 ಎಕರೆ. ಏನು ಸ್ವಾಮಿ ತೋಟಗಾರಿಕೆ 110 ಎಕರೆ? ತರಕಾರಿಗೆ 110 ಎಕರೆ. ಐದು ಎಕರೆ ಬೆಳೆದು ಜೀರ್ಣಿಸಿಕೊಳ್ಳುವುದೇ ಕಷ್ಟ. 110 ಎಕರೆ ಕೊಂಡುಕೊಳ್ಳುವುದಕ್ಕೆ ಇವರು ಅನುಮತಿ ಕೊಡುತ್ತಾರೆ. ಕನ್ನಡ ಮಾತನಾಡತಕ್ಕ ಜನ ಕರ್ನಾಟಕದವರು ಇಷ್ಟೊಂದು ಹ್ಯೂಜ್ ಕ್ಯಾಪಿಟಲ್ಲನ್ನು ಖರ್ಚು ಮಾಡಿ ತೆಗೆದುಕೊಳ್ಳುವುದಕ್ಕೆ ಶಕ್ತಿ ಇದೆಯಾ ಅಂತ ತಾವು ಆಲೋಚನೆ ಮಾಡಬೇಕಾಗಿತ್ತು. ಇದು ಎಷ್ಟು ಇಂಪ್ರಾಕ್ಟಿಕಬಲ್ ಎಂದು ತಾವು ಆಲೋಚನೆ ಮಾಡಿ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಮಂತ್ರಿ) : ಮಾನ್ಯ ಅಧ್ಯಕ್ಷರೆ, ಈಗ ಫ್ಲಾರಿಕಲ್ಚರ್, ಪುಷ್ಪಾಭಿವೃದ್ಧಿ ಬರುತ್ತಿದೆ. ಪುಷ್ಪಾಭಿವೃದ್ಧಿಯಿಂದ ಅನೇಕ ರೈತರಿಗೆ ಅನುಕೂಲವಾಗುತ್ತದೆ. ಅದಕ್ಕೆ ಹೆಚ್ಚು ಜಮೀನು ಬೇಕಾಗುತ್ತದೆ ಮತ್ತು ತಾಳೆ ಬೆಳೆ ಯೋಜನೆಗೆ ಬೇಕಾಗುತ್ತದೆ. ನಮ್ಮ ತೋಟಗಾರಿಕೆ ಇಲಾಖೆಯಿಂದ ಇದಕ್ಕೆಲ್ಲಾ ಬಹಳ ಬೇಕಾಗುತ್ತದೆ. ಇದರಿಂದ ನಮಗೆ ಕರ್ನಾಟಕಕ್ಕೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ವೈ. ರಾಮಕೃಷ್ಣ : ನಾನು ಅಡ್ಡಿಪಡಿಸುತ್ತಿಲ್ಲ. ನಾನು ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇಷ್ಟಕ್ಕೆ ಅವಕಾಶ ಇದೆ, ಇದಕ್ಕೇನಾದರೂ ರಿಸ್ಟ್ರಿಕ್ಷನ್ ಮಾಡಬೇಕಾಗಿತ್ತು ಅಂತ ನಾನು ಹೇಳುತ್ತಾ ಇರುವುದು.

ಶ್ರೀ ಆರ್.ಎಲ್. ಜಾಲಪ್ಪ : ತಾವು ಹೇಳುವುದು ಕರ್ನಾಟಕದ ಜನತೆ ಇಷ್ಟೊಂದು ಇನ್‌ವೆಸ್ಟ್ ಮಾಡುವವರು ಯಾರಿದ್ದಾರೆ ಅಂದಿರಿ. ಯಾರೂ ಇಲ್ಲವೇ ಇಲ್ಲವೇ ಕರ್ನಾಟಕದ ಜನತೆ?

ಶ್ರೀ ವೈ. ರಾಮಕೃಷ್ಣ : ಇರಬಹುದು ಸ್ವಾಮಿ, ಯಾರೋ ಅಪರೂಪಕ್ಕೆ ಇರಬಹುದು. ನೀವು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಕರ್ನಾಟಕಕ್ಕೆ ಪ್ರತಿಯೊಂದು ಜಮೀನಿಗೂ ಪ್ರತಿಯೊಂದು ಹಳ್ಳಿಗೂ ಇದನ್ನು ಎಕ್ಸ್‌ಟೆಂಡ್ ಮಾಡಿರುವುದರಿಂದ ಯಾರಿಗೆ ಅಷ್ಟೊಂದು ಶಕ್ತಿ ಇದೆಯೋ ನನಗಂತೂ ಗೊತ್ತಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಸರ್ಕಾರ ರೂಲ್ಸ್ ಫ್ರೇಮ್ ಮಾಡುತ್ತದೆ. ಆ ರೂಲ್ಸ್‌ಗೆ ಅವರು ಅನುಗುಣವಾಗಿರಬೇಕು. ಹಾಗೆ ಮಾಡುತ್ತೇವೆ.

ಶ್ರೀ ವೈ. ರಾಮಕೃಷ್ಣ : ಸ್ವಾಮಿ, ಆಕ್ಟ್‌ನಲ್ಲಿ ಇಲ್ಲದೇ ಇರುವುದನ್ನು ರೂಲ್ಸ್‌ನಲ್ಲಿ ಮಾಡುವುದಕ್ಕಾಗುತ್ತದಾ?

ಶ್ರೀ ಆರ್.ಎಲ್. ಜಾಲಪ್ಪ : ಆಕ್ಟ್‌ನಲ್ಲಿರುವುದಕ್ಕೇನೇ 100 ಎಕರೆ ಕೊಡಬೇಕೆಂದು ಹೇಳಿದರೆ ಅದಕ್ಕೆ ಏನೇನು ಕಂಡೀಷನ್ಸ್ ಹಾಕುತ್ತಿದ್ದೇವೆ ಅದನ್ನೆಲ್ಲಾ ಅವರು ಸ್ಯಾಟಿಸ್‌ಫೈ ಮಾಡಬೇಕು. ಅದನ್ನೆಲ್ಲಾ ಮಾಡದಿದ್ದರೆ ಎರಡು ವರ್ಷದೊಳಗೆ ಜಮೀನನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಅದನ್ನೆಲ್ಲಾ ಹಾಕುತ್ತೇವೆ ಸ್ವಾಮಿ. ಸುಮ್ಮಸುಮ್ಮನೆ ಬಂದವರಿಗೆಲ್ಲಾ ಜಮೀನು ಕೊಡುವುದಕ್ಕೆ ಧರ್ಮರಾಯನ ಛತ್ರಾನಾ ಇದು?

ಶ್ರೀ ವೈ. ರಾಮಕೃಷ್ಣ : ಇದು ಅವರದೂ ತಪ್ಪಲ್ಲ, ನಮ್ಮದೂ ತಪ್ಪಲ್ಲ. ಕೆಲವಾರು ಸಮಸ್ಯೆಗಳು ಇದರಲ್ಲಿದ್ದು ಈ ಬಿಲ್ ಬಂದಾಗ ಹೆಚ್ಚಿನ ರೀತಿಯಲ್ಲಿ ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ. ಎರಡನೆಯದಾಗಿ ಪರ್ಯಾಲೋಚನೆ ತಾವು ಮಾಡಬೇಕಾಗಿತ್ತು. ಇವತ್ತು ಬಿಲ್ ಪಾಸ್ ಆಗಿದೆ. ಖರ್ಗೆಯವರು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಎಂದು ಹೇಳುತ್ತಿದ್ದಾರೆ. ಇಷ್ಟೇ ಇಷ್ಟು ಅಮೆಂಡ್‌ಮೆಂಟನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕಾಗುತ್ತದಾ? ಅದಕ್ಕೇನು ಮಾಡಬೇಕು? ಸದನದ ಸಮಿತಿ ಮಾಡಿ. ನಾನೇನೂ ನಿಮ್ಮ ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿ ಬರುತ್ತಿಲ್ಲ, ಲಿಬರಲೈಸೇಷನ್ ಆಗಬೇಕು, ಇಂಡಸ್ಟ್ರಿಯಲೈಸೇಷನ್ ಆಗಬೇಕು. ಪ್ರಾಕ್ಟಿಕಲ್ಲಾಗಿ ಅದು ಆಗಬೇಕು. ಅದಕ್ಕೇನು ಮಾಡಬೇಕು ಅಂದರೆ ಸದನದ ಸಮಿತಿ ಮಾಡಿ ಪರ್ಯಾಲೋಚನೆ ಮಾಡಿ. ಸಮಗ್ರವಾದ ತಿದ್ದುಪಡಿಗಳನ್ನು ಯಾವರೀತಿ ತರಬೇಕು ನೋಡಿ ಪ್ರಾಕ್ಟಿಕಲ್ಲಾಗಿ ಮತ್ತು ಅದು ನೆರವೇರುವಂತೆ ನೀವು ಮಾಡಿದ್ರೆ ಆದರೆ ನೀವು ತಂದಂಥ ಈ ತಿದ್ದುಪಡಿ ಸಾರ್ಥಕವಾಗುತ್ತದೆ. ಅದು ಬಿಟ್ಟು ಈ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ಗೆ ಈ ಕಾನೂನು ತಂದಿರುವುದು ಬಹಳ; ಇದು ಅನೇಕ ಲಿಟಿಗೇಷನ್‌ಗೆ ಅವಕಾಶ ಕೊಟ್ಟಂತಾಗುತ್ತದೆ ಮತ್ತು ಅನಾವಶ್ಯಕವಾಗಿ ಗ್ಯಾಟ್ ಅಗ್ರಿಮೆಂಟಿನಲ್ಲಿರತಕ್ಕ ಲಿಬಿರಲೈಸೇಷನ್ ಮತ್ತು ಗ್ಲೋಬಲೈಸೇಷನ್ ಹೆಸರಿನಲ್ಲಿ ಬಹುರಾಷ್ಟ್ರೀಯರ ಬಂಡವಾಳ ಶಾಹಿಗಳನ್ನು ಬರಮಾಡಿಕೊಂಡು ಅವರಿಗೆ ನೆರವಾಗುವ ಉದ್ದೇಶದಿಂದ ಭೂಸುಧಾರಣೆ ಕಾನೂನಿಗೆ ತಿದ್ದುಪಡಿ ತಂದಿರುವುದು ರೈತನನ್ನು ಬೀದಿಪಾಲು ಮಾಡುವುದಕ್ಕೆ ಹೊರಟಿರುವ ತಿದ್ದುಪಡಿ ಇದು ಎಂದು ವಿಧಿಯಿಲ್ಲದೆ ಹೇಳಬೇಕಾಗುತ್ತದೆ. ಈ ಸರ್ಕಾರದ ವೈಫಲ್ಯವನ್ನು ಜನತೆ ಖಂಡಿತ ನೋಡುತ್ತದೆ. ಕಡೆಗೆ ನಿಮ್ಮ ಸರ್ಕಾರದ ಕೊನೆ ಇದರಿಂದಾಗುತ್ತದೆಂದು ಹೇಳುತ್ತೇನೆ. ಇದಕ್ಕೆ ಬಹಳ ಮಹನೀಯರು ದುಡಿದಿದ್ದಾರೆ. ನನಗೆ ಜ್ಞಾಪಕ ಇದೆ, ಚನ್ನಬಸಪ್ಪನವರು 3-4 ದಿವಸ ಭಾಷಣ ಮಾಡಿರುವ ಪ್ರೊಸೀಡಿಂಗ್ಸ್ ನಾನು ಓದಿದ್ದೇನೆ. ಕಡಿದಾಳ್ ಮಂಜಪ್ಪನವರ ಭಾಷಣ ಓದಿ, ಬಿ.ಡಿ. ಜತ್ತಿಯವರ ಭಾಷಣ ಓದಿ. ಈ ಹಿನ್ನೆಲೆಯಲ್ಲಿ ಭೂಸುಧಾರಣೆ ಕಾನೂನು ಮುಟ್ಟಬೇಕಾದರೆ ಬಹಳ ಭಯಭಕ್ತಿಯಿಂದ ನೀವು ಮುಟ್ಟಬೇಕಾಗುತ್ತದೆ. ರೈತನನ್ನು ಮುಟ್ಟುವುದು, ಬಡರೈತನನ್ನು ಮುಟ್ಟುವುದು ಎಷ್ಟು ಕಷ್ಟವೊ ಈ ಆಕ್ಟ್ ಮುಟ್ಟುವುದೂ ಅಷ್ಟೇ ಕಷ್ಟ ಎಂದು ಮನಗಂಡು ದಯವಿಟ್ಟು ನಾನು ಹೇಳಿದಂಥ ಸಲಹೆಗಳನ್ನು ಒಪ್ಪಿಕೊಳ್ಳುತ್ತೀರಿ ಎಂದು ಭಾವಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೆಪಲ್ಲಿ) : ಸನ್ಮಾನ್ಯ ಸಭಾಧ್ಯಕ್ಷರೆ, ಭೂಸುಧಾರಣಾ ಕಾನೂನನ್ನು ಮೊದಲಿಗೆ ಈ ಸದನದಲ್ಲಿ ತಂದಾಗ ನಾನೇ ಒಪ್ಪಲಿಲ್ಲ. ವಿರೋಧ ಮಾಡಿದೆ. ಇವತ್ತು ಮುಖ್ಯವಾಗಿ ಭೂಸುಧಾರಣಾ ಕಾನೂನನ್ನು ತಿದ್ದುಪಡಿ ಮಾಡತಕ್ಕ ಅವಶ್ಯಕತೆ ಇವರಿಗೇನಿತ್ತು? ಏತಕ್ಕಿತ್ತು? ಇವರ ವಾದವನ್ನು ಎಲ್ಲಾ ಕೇಳಿದ್ದೇನೆ. ಕಾರ್ಖಾನೆಗಳಿಗೆ ಭೂಮಿ ಬೇಕು. ಹೌಸಿಂಗ್ ಕನ್‌ಸ್ಟ್ರಷನ್‌ಗೆ ಭೂಮಿ ಬೇಕು. ಹಾರ್ಟಿಕಲ್ಚರ್‌ಗೆ ಭೂಮಿ ಬೇಕು. ನಾವು ಭೂಮಿಯನ್ನು ಎಲ್ಲಿಂದ ತಂದುಕೊಂಡುವುದು ಎಂದು ಇವರು ವಾದ ಮಾಡುತ್ತಾರೆ. ಅದೆಲ್ಲಾ ನಿಜ. ಬೇಡ ಎಂದು ಹೇಳುವುದಿಲ್ಲ. ಆದರೆ ಇವೆಲ್ಲವೂ ಬೇಕು ಎಂದು ಹೇಳಿ ಉಳುವವನಿಗೇ ಭೂಮಿ ಎಂಬ ಘೋಷಣೆ ಮತ್ತು ಆ ಘೋಷಣೆ ಆಧಾರದ ಮೇಲೆ ಇಡೀ ದೇಶದಲ್ಲಿ ಬಂದ ರಾಷ್ಟ್ರೀಯ ಒಂದು ಕಾರ್ಯಕ್ರಮದ ಹಿನ್ನೆಲೆಯಲ್ಲಿ ಇಡೀ ದೇಶದಲ್ಲಿ ಭೂಸಂಬಂಧಗಳ ಬದಲಾವಣೆ ಆಗುವುದಕ್ಕೆ ಭೂಸುಧಾರಣಾ ಕಾನೂನು ತಂದಿದ್ದು. ಅದನ್ನು ಏತಕ್ಕೆ ತಂದಿದ್ದು ಎಂದರೆ ವ್ಯವಸಾಯ ರಂಗದಲ್ಲಿ ತೀವ್ರವಾದಂಥ ಭೂಸಂಬಂಧಗಳ ಬದಲಾವಣೆ ಆದರೆ ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚಾದರೆ ಗ್ರಾಮೀಣ ಪ್ರದೇಶದಲ್ಲಿ ಇರತಕ್ಕ ಜನತೆಯು ಕೊಂಡುಕೊಳ್ಳತಕ್ಕ ಶಕ್ತಿ ಹೆಚ್ಚಾಗುತ್ತದೆ. ಇದರಿಂದ ಕೈಗಾರಿಕೆಗಳಲ್ಲಿ ಆದಂಥ ಉತ್ಪನ್ನಗಳಿಗೆ ನಮ್ಮ ದೇಶದಲ್ಲಿ

ಆಂತರಿಕ ಮಾರುಕಟ್ಟೆ ಸಿಗುತ್ತದೆ. ಆದ್ದರಿಂದ ಇಡೀ ದೇಶ ಎಲ್ಲಾ ರಾಜ್ಯದಲ್ಲೂ ಅಭಿವೃದ್ಧಿಯಾಗುವುದಕ್ಕೆ ಇದು ಮೂಲಭೂತವಾಗಿ ಕಾರಣವಾಗುತ್ತದೆ ಎಂದು. ಏಕೆಂದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಸಾಮಾನ್ಯ ಜನರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗದಿದ್ದರೆ ನಾವು ಏನು ಹೊಸ ಕೈಗಾರಿಕೆಗಳನ್ನು ಮಾಡಿ ಉತ್ಪಾದನೆ ಹೆಚ್ಚು ಮಾಡುತ್ತೇವೆ, ನಿರುದ್ಯೋಗಿಗಳಿಗೆ ಕೆಲಸ ಕೊಡುತ್ತೇವೆ ಎಂದು ಹೇಳುತ್ತಿದ್ದೇವೋ ಅದು ಬರೀ ಪೊಳ್ಳು ಭರವಸೆಯಾಗುತ್ತದೆ ಮತ್ತು ಉತ್ಪಾದನೆ ಹೆಚ್ಚಾಗುವುದಕ್ಕೂ ಸಾಧ್ಯವಾಗುವುದಿಲ್ಲ, ನಿರುದ್ಯೋಗ ಸಮಸ್ಯೆ ಪರಿಹಾರ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಏಕೆಂದರೆ ಅವರು ಕನಸು ಕಾಣತಕ್ಕ ಭವ್ಯ ಕೈಗಾರಿಕೆಗಳೇನಿವೆ ಅದು ಉತ್ಪಾದನೆ ಮಾಡತಕ್ಕ ಸರಕುಗಳನ್ನು ಕೊಂಡುಕೊಳ್ಳತಕ್ಕ ಜನ ಗ್ರಾಮೀಣ ಪ್ರದೇಶದಲ್ಲಿ ಇಲ್ಲದಿದ್ದರೆ ಕಾರ್ಖಾನೆಗಳು ಮುಚ್ಚಿಹೋಗುತ್ತವೆ.

ಮೈಸೂರಿನಲ್ಲಿ ಮುಚ್ಚುತ್ತಿದ್ದಾರೆ. ಏತಕ್ಕೆ ಎಂದು ನಾಳೆ ಬಹುಶಃ ಗೊತ್ತಾಗಬಹುದು. ಆ ಉದ್ದೇಶದಿಂದ, ಗ್ರಾಮಾಂತರ ಜನತೆಯ ಕೊಂಡುಕೊಳ್ಳತಕ್ಕ ಶಕ್ತಿ ಹೆಚ್ಚಾಗಬೇಕಾದರೆ ಉಳುವವನಿಗೆ ಭೂಮಿ ಸಿಗಬೇಕು, ಸಣ್ಣಸಣ್ಣ ಹಿಡುವಳಿದಾರರಿಗೆ ಎರಡು ಎಕರೆ ಮೂರು ಎಕರೆ ನಾಲ್ಕು ಎಕರೆ ಭೂಮಿ ಇರತಕ್ಕ ಬಡರೈತರು ಮಧ್ಯಮವರ್ಗದ ರೈತರು ವ್ಯವಸಾಯದಲ್ಲಿ ತೊಡಗಿ ಉತ್ಪಾದನೆ ಮಾಡಿ ಅವರ ಕೈಯಲ್ಲಿ ನಾಲ್ಕು ಕಾಸು ಸಿಕ್ಕಿದರೆ ಕೊಂಡುಕೊಳ್ಳತಕ್ಕ ಶಕ್ತಿ ಹೆಚ್ಚಾಗುತ್ತದೆ ಎಂಬ ಮೂಲ ಉದ್ದೇಶ ಇದ್ದಂಥ ಭೂಸುಧಾರಣಾ ಕಾಯಿದೆಯನ್ನು ತರಲಿಕ್ಕೆ ಈ ರಾಷ್ಟ್ರದಲ್ಲಿ ಬಹಳ ದೀರ್ಘವಾದ ತ್ಯಾಗಮಯವಾದ ಹೋರಾಟವನ್ನು ನಡೆಸಿ ಸಾವಿರಾರು ಜನ ತಮ್ಮ ಪ್ರಾಣಗಳನ್ನೂ ಬಲಿ ಕೊಟ್ಟು ಅದರ ಫಲದಿಂದ ತಂದಂಥ ಭೂಸುಧಾರಣಾ ಕಾಯಿದೆ ಉಳುವವನಿಗೇ ಭೂಮಿ ಎಂದು. ಅದರಲ್ಲಿ ಬಹುಶಃ ಈ ಕಡೆಯಲ್ಲಿರತಕ್ಕವರು ಆ ಹೋರಾಟದಲ್ಲಿ ಭಾಗವಹಿಸಿದ್ದವರು ಇದ್ದಾರೆ. ಆದರೆ ಇವತ್ತು ಅವರ ತಲೆಯಲ್ಲಿ ಏನು ಬಂದುಬಿಟ್ಟಿದೆ ಅಂದರೆ ಕಾರ್ಖಾನೆಗಳು, ಹಾರ್ಟಿಕಲ್ಚರ್ ಫ್ಲೋರಿಕಲ್ಚರ್ ಆಗಬೇಕೆಂದು ಹೇಳಿ, ಕರೆಕ್ಟ್ ಅದು ಆಗಬೇಕು, ಇದೆಲ್ಲ ಆದರೂ ಕೂಡ ಜನ ನಾವು ತಿನ್ನತಕ್ಕದ್ದು ಅನ್ನ. ಅದಕ್ಕೆ ಬೇಕಾಗಿರತಕ್ಕ ಆಹಾರಸಾಮಗ್ರಿ ಉತ್ಪಾದನೆಯಾಗಿರತಕ್ಕದ್ದು ಬಹಳ ಮುಖ್ಯ. ಇವರು ತರುತ್ತಿರತಕ್ಕ ಈ ತಿದ್ದುಪಡಿಯಿಂದಾಗಿ ಸಣ್ಣಹಿಡುವಳಿದಾರರೆಲ್ಲ ಭೂಮಿಯನ್ನು ಕಳೆದುಕೊಂಡು ಬಿಟ್ಟರೆ ಆಹಾರಸಾಮಗ್ರಿ ಉತ್ಪಾದನೆ ಸಂಪೂರ್ಣ ನಾಶವಾಗುತ್ತದೆ. ಈಗಲೇ ಇರತಕ್ಕ ಪರಿಸ್ಥಿತಿ ಹೇಗಿದೆಯೆಂದರೆ 8ನೇ ಪಂಚವಾರ್ಷಿಕ ಮುಗಿಯುತ್ತಿರುವಾಗ 85 ಲಕ್ಷ ಟನ್ ಆಹಾರಸಾಮಗ್ರಿ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದೆ. 2000ದ ಇಸವಿಗೆ ಕರ್ನಾಟಕ ರಾಜ್ಯದ ಜನತೆಗೆ ಆಹಾರವನ್ನು ಒದಗಿಸಬೇಕಾದರೆ ಕನಿಷ್ಠ 150 ಲಕ್ಷ ಟನ್ ಆಹಾರಸಾಮಗ್ರಿಗಳು ಬೇಕು.

ಈಗ ಭೂಸುಧಾರಣಾ ಕಾನೂನಿಗೆ ತಿದ್ದುಪಡಿಯನ್ನು ಮಾಡಿದರೆ ಕೃಷಿ ಭೂಮಿ ಕೃಷಿಯೇತರ ಉದ್ದೇಶಕ್ಕೋಸ್ಕರ ಮಾರಾಟವಾದರೆ ಆ ಕೃಷಿ ಉತ್ಪನ್ನ ಕಡಿಮೆಯಾಗುತ್ತೆ. ಹಾರ್ಟಿಕಲ್ಚರ್, ಫ್ಲೋರಿಕಲ್ಚರ್ ಇವುಗಳಿಂದ ಹಣ ಬರುತ್ತೆ ಅಷ್ಟೇ ವಿನಃ ಆಹಾರ ಸಾಮಗ್ರಿಗಳು ಉತ್ಪಾದನೆಯಾಗುವುದಿಲ್ಲ, ಹಾರ್ಟಿಕಲ್ಚರ್, ಫ್ಲೋರಿಕಲ್ಚರ್ ಮಾಡತಕ್ಕವರು ಶ್ರೀಮಂತ ರೈತರು ಮಾತ್ರ. ಬಡ ರೈತರು ಅದನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಲಕ್ಷಾಂತರ ರೂಪಾಯಿ ಯಾರು ಬಂಡವಾಳವನ್ನು ಹಾಕಲಿಕ್ಕೆ ಸಾಧ್ಯವಿದೆಯೋ ಅವರು ಮಾತ್ರ ಹಾರ್ಟಿಕಲ್ಚರ್, ಫ್ಲೋರಿಕಲ್ಚರ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದರ ಅರ್ಥ ಇವರು ಭೂಮಾಲೀಕ ವರ್ಗವನ್ನು ಮತ್ತೆ ಸೃಷ್ಟಿ ಮಾಡುತ್ತಿದ್ದಾರೆ. ಇವರು ಹಾರ್ಟಿಕಲ್ಚರ್ ಫ್ಲೋರಿಕಲ್ಚರ್ ನೀರಾವರಿ ಪ್ರದೇಶದಲ್ಲಿ ಮಾಡಬಹುದು. ಕೆಲವು ಕಡೆ ಸಣ್ಣ ಹಿಡುವಳಿಗಳು ಹೆಚ್ಚಾಗಿರತಕ್ಕದ್ದು. ಎರಡು ಮೂರು ಎಕರೆ ಇಟ್ಟುಕೊಂಡಿರುತ್ತಾರೆ. ಹಳ್ಳಿಗಾಡಿನ ಪ್ರದೇಶದಲ್ಲಿ ಕಾರ್ಖಾನೆಗೋಸ್ಕರ ಯಾರೂ ಭೂಮಿಯನ್ನು ಕೊಂಡುಕೊಳ್ಳುವುದಿಲ್ಲ,

ಇವರು ಕಾನೂನು ತಿದ್ದುಪಡಿ ಮಾಡಿದರೆ. ಒಬ್ಬ ಭೂಮಾಲೀಕ ಕಾನೂನು ತಿದ್ದುಪಡಿಯಾಗಿದೆ ಭೂ ಪರಿಮಿತಿ ಹೆಚ್ಚಾಗಿಬಿಟ್ಟಿದೆ ನಾನು ಎಷ್ಟು ಬೇಕಾದರೂ ಭೂಮಿಯನ್ನು ಇಟ್ಟುಕೊಳ್ಳಬಹುದೆಂದು ಹೇಳಿ ಸಣ್ಣ ಸಣ್ಣ ರೈತರು ಬಡ ರೈತರ ಎಲ್ಲ ಜಮೀನನ್ನು ನಿರಾಯಾಸವಾಗಿ ಕೊಂಡುಕೊಂಡು ದೊಡ್ಡ ಭೂಮಾಲೀಕನಾಗುತ್ತಾನೆ. ಏಕೆಂದರೆ ಇದು ಭೂಪರಿಮಿತಿಯಲ್ಲಿಲ್ಲ, ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಇಲ್ಲ, ಲ್ಯಾಂಡ್ ಟ್ರಿಬ್ಯುನಲ್ ಇಲ್ಲ ಅವನು ಎಷ್ಟು ಬೇಕಾದರೂ ಭೂಮಿಯನ್ನು ಇಟ್ಟುಕೊಳ್ಳಬಹುದು. ಸಣ್ಣ ಸಣ್ಣ ರೈತರೆಲ್ಲ ಭೂಮಿಯನ್ನು ಮಾರಾಟ ಮಾಡಿಕೊಳ್ಳುತ್ತಾರೆ. ದೊಡ್ಡ ಭೂಮಾಲೀಕರನ್ನು ಇವರು ಸೃಷ್ಟಿ ಮಾಡುತ್ತಾರೆ. ಯಾವ ಭೂಮಾಲೀಕ ಪದ್ಧತಿಯನ್ನು ರದ್ದು ಮಾಡಬೇಕೆಂದು ಹೇಳಿ ಭೂಸುಧಾರಣಾ ಕಾನೂನನ್ನು ತಿದ್ದುಪಡಿ ಮಾಡಿದ್ದರೋ ಹೊಸ ಭೂ ಮಾಲೀಕರನ್ನು ಅಂದರೆ ಶ್ರೀಮಂತ ಭೂಮಾಲೀಕರನ್ನು ಸೃಷ್ಟಿ ಮಾಡಲಿಕ್ಕೆ ಈ ಕಾನೂನು ತಿದ್ದುಪಡಿಯಿಂದ ಪ್ರಯೋಜನವಾಗುತ್ತದೆಯೇ ಹೊರತು ವ್ಯವಸಾಯ ರಂಗಕ್ಕೆ ಕೃಷಿಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚಾಗಲಿಕ್ಕೆ ಈ ಭೂಸುಧಾರಣಾ ತಿದ್ದುಪಡಿ ಸಹಾಯಕವಾಗುವುದಿಲ್ಲ.

ಈ ಭೂಸುಧಾರಣಾ ತಿದ್ದುಪಡಿಯನ್ನು ತಂದಂತಹ ಉದ್ದೇಶವೇ ವ್ಯವಸಾಯ ರಂಗದಲ್ಲಿ ಕ್ರಾಂತಿಕಾರಕವಾದ ಬದಲಾವಣೆಯಾಗಬೇಕೆಂದು ಹೇಳಿ. ಇವರು ತರತಕ್ಕ ತಿದ್ದುಪಡಿ ಏನಾಗುತ್ತಿದೆಯೆಂದರೆ ವ್ಯವಸಾಯ ರಂಗವನ್ನು ಬಿಟ್ಟು ಕೈಗಾರಿಕಾ ಕ್ಷೇತ್ರಕ್ಕೆ ಸಹಾಯವಾಗಬೇಕೆಂದು ಹೇಳಿ. ಅಂದರೆ ಕೃಷಿಯೆಲ್ಲ ಹಾಳಾಗಬೇಕೆಂದು ಹೇಳಿ. ಇದರಲ್ಲಿ ಸೆಕ್ಷನ್ 109ಮುಖ್ಯವಾಗಿರತಕ್ಕದ್ದು. ಈ ಹಿನ್ನಲೆಯಲ್ಲಿ ನಾವು ಇದನ್ನು ನೋಡಬೇಕಾಗುತ್ತದೆ. ಬಹುಶಃ ಇವರು ಇವತ್ತು ತೀರ್ಮಾನ ಮಾಡಿಕೊಂಡಿರಬಹುದು. ನಾವು ಭೂಮಾಲೀಕರ ಪರವಾದಂತಹ ಸರ್ಕಾರ, ಬಂಡವಾಳಗಾರರ ಪರವಾಗಿರತಕ್ಕ ಸರ್ಕಾರ ಕೋಟ್ಯಾಂತರ ರೂಪಾಯಿ ಬಂಡವಾಳವನ್ನು ಹಾಕಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವವರಿಗೆ ಸಹಾಯ ಮಾಡುವುದಕ್ಕೆ ನಾವು ಇದನ್ನು ತಿದ್ದುಪಡಿ ಮಾಡುತ್ತಿದ್ದೇವೆನ್ನುವುದು ಇದರಿಂದ ಸ್ಪಷ್ಟವಾಗಿದೆ. ಇದರ ಬಗ್ಗೆ ಯಾವುದೇ ಅನುಮಾನವಿಲ್ಲ. ಇವರು ಏನೇ ತತ್ವ ಹೇಳಿದರೂ ಏನೇ ಥೀರಿ ಹೇಳಿದರೂ ಇವರು ಯಾರ ಪರವಾಗಿದ್ದಾರೆಂದು ಈ ತಿದ್ದುಪಡಿ ಮುಖಾಂತರ ಗೊತ್ತಾಗಿಬಿಡುತ್ತದೆ. ಈ ತಿದ್ದುಪಡಿಯಲ್ಲಿರತಕ್ಕ ಅಪಾಯಕರವಾದ ಅಂಶಗಳು ಈ ಸೆಕ್ಷನ್ 109 ಏನಿದೆ ಅದರಲ್ಲಿರತಕ್ಕದ್ದು ಬಹಳ ಅಪಾಯಕರವಾದದ್ದು. ಒಂದು ಕಡೆ ಹೇಳುತ್ತಾರೆ ಕೊನೆಯಲ್ಲಿ ಸರ್ಕಾರ ಇಚ್ಛೆಪಟ್ಟರೆ ಎಷ್ಟು ಭೂಮಿ ಬೇಕಾದರೂ ತೆಗೆದುಕೊಳ್ಳಬಹುದು.

A sweeping power to the state. ಅವರಿಗೆ ಇಷ್ಟಬಂದಾಗ, ಅವರಿಗೆ ಯಾವರೀತಿ ಯಾವಾಗ ಇಷ್ಟಬರುತ್ತೊ ಏನು ಗೊತ್ತಿಲ್ಲ, ಅವರಿಗೆ ಇಷ್ಟಬಂದಾಗ ಎಷ್ಟು ಭೂಮಿ ಬೇಕಾದರೂ ತೆಗೆದುಕೊಳ್ಳಬಹುದೆಂದು ಹೇಳತಕ್ಕದ್ದು. ಇದು ಇಡೀ ಕೃಷಿ ಭೂಮಿಯನ್ನು ಅವರು ಕೃಷಿಯೇತರ ಉದ್ದೇಶಕ್ಕೋಸ್ಕರ ಮಾಡಬಹುದಂತೆ. ಕೈಗಾರಿಕೆಗಳಿಗೆ ಭೂಮಿ ಬೇಕು, ಹೌಸಿಂಗ್‌ಗೆ ಭೂಮಿ ಬೇಕೆಂದರೆ ಈಗಾಗಲೇ ಲ್ಯಾಂಡ್ ಅಕ್ವಿಜಿಶನ್ ಆಕ್ಟ್ ಇದೆ. ಆ ಲ್ಯಾಂಡ್ ಅಕ್ವಿಜಿಶನ್ ಆಕ್ಟ್ ಪ್ರಕಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು. ಆದರೆ ಅವರು ವಾದ ಏನು ಮಾಡುತ್ತಾರೆಂದರೆ ಲ್ಯಾಂಡ್ ಅಕ್ವಿಜಿಶನ್ ಆಕ್ಟ್ ರೂಲ್ಸ್‌ನಲ್ಲಿ ಹೆಚ್ಚು ಹಣ ಭೂಮಿ ಕಳೆದುಕೊಳ್ಳುವವನಿಗೆ ಸಿಗುವುದಿಲ್ಲ, ಕಡಿಮೆ ಹಣ ಸಿಗುತ್ತದೆ. ಆದ್ದರಿಂದ ಅದು ಪ್ರಯೋಜನವಿಲ್ಲವೆಂದು ಹೇಳುತ್ತಾರೆ. ಆ ಆಕ್ಟನ್ನು ನೀವು ಅಮೆಂಡ್ ಮಾಡಿ. ಲ್ಯಾಂಡ್ ಅಕ್ವಿಜಿಶನ್ ಆಕ್ಟ್‌ನ್ನು ನೀವು ತಿದ್ದುಪಡಿ ಮಾಡಿ. ತಿದ್ದುಪಡಿ ಮಾಡಿ ಬೂಮಿ ಕಳೆದುಕೊಳ್ಳತಕ್ಕಂಥ ಜನರಿಗೆ ಹೆಚ್ಚು ಹಣ ಬರುವ ರೀತಿಯಲ್ಲಿ ಏಕೆ ನೀವು ತಿದ್ದುಪಡಿ ಮಾಡಬಾರದು? ನೀವೇ ತೆಗೆದುಕೊಳ್ಳಿ, ಯಾರು ಕೈಗಾರಿಕೆಗೆ ಬೇಕೋ ಅವರು ತೆಗೆದುಕೊಳ್ಳಲಿ.

ಶ್ರೀ ಆರ್.ಎಲ್. ಜಾಲಪ್ಪ : ಅಕ್ವೈರ್ ಮಾಡಿ ಯಾರ ಜಮೀನು ತೆಗೆದುಕೊಳ್ಳುವುದು? ಯಾರು ಜಮೀನು ಕಳೆದುಕೊಳ್ಳುತ್ತಾರೆ ಅವರಿಗೆ ಭೂಮಿ ಬೆಲೆಯ ಕಾಲು ಭಾಗ ಹಣವನ್ನು ಕೊಟ್ಟು 28 ಜಾಗಗಳಲ್ಲೆಲ್ಲ ಲಂಚ ಕೊಟ್ಟು ಅಕ್ವೈರ್ ಮಾಡಿಸಿಕೊಂಡು, ಅದೇ ರೈತನಿಗೆ ಕಾಸಿಗೆ ಸ್ವಲ್ಪ ಕೊಸರಿಗೆ ಸ್ವಲ್ಪವೆಂದು ಹಣ ಕೊಟ್ಟುಬಿಟ್ಟು ತೆಗೆದುಕೊಳ್ಳುವುದು ಅಕ್ವೈರ್ ಅಕ್ವಿಜಿಶನ್‌ನಲ್ಲಿ ಏನೇನು ತಾಪತ್ರೆಗಳಿವೆ ತೊಂದರೆಗಳಿವೆ ಅಲ್ಲಿ ಲಂಚವಿದೆ ಅದನ್ನು ತಪ್ಪಿಸಬೇಕೆಂದು ಹೇಳಿ ಇದನ್ನು ಯೋಚನೆ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳು ದೇವನಹಳ್ಳಿ ತಾಲ್ಲೂಕು, ರಾಮನಗರ ತಾಲ್ಲೂಕುಗಳನ್ನು ತಲೆಯಲ್ಲಿಟ್ಟುಕೊಂಡು ತಾವು ಯೋಚನೆ ಮಾಡಬೇಡಿ. ಇಡೀ ಕರ್ನಾಟಕ ರಾಜ್ಯದ ಬಗ್ಗೆ ಆಲೋಚನೆ ಮಾಡಿ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಇಡೀ ರಾಜ್ಯದ ಬಗ್ಗೆ ಯೋಚನೆ ಮಾಡಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದನ್ನೆಲ್ಲ ನೀವು ಆಲೋಚನೆ ಮಾಡುತ್ತಿಲ್ಲ. ಲ್ಯಾಂಡ್ ಅಕ್ವಿಜಿಶನ್ ಮಾಡಬೇಕಾದ್ದು ಎಲ್ಲಿ ಎಂದು ನೀವು ಕೇಳಿ. ನಾನು ಹೇಳುತ್ತೇನೆ ಕೇಳಿ. ಎಲ್ಲಿ ಕಾರ್ಖಾನೆ ಮಾಡಬೇಕೋ ಅಲ್ಲಿ ಭೂಮಿ ಬೇಕಾಗಿರತಕ್ಕದ್ದು ನಿಮಗೆ.

ಶ್ರೀ ಆರ್.ಎಲ್. ಜಾಲಪ್ಪ : ಪಶ್ಚಿಮ ಬಂಗಾಳದಲ್ಲಿ ಏನು ಮಾಡುತ್ತಿದ್ದಾರೆ? ಅಲ್ಲಿ ಇಂಡಸ್ಟ್ರೀಸ್‌ಗೆ ಜಮೀನು ಕೊಡುತ್ತಿಲ್ಲವೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದಕ್ಕೆ ಅವರು ಲ್ಯಾಂಡ್ ರಿಫಾರ್ಮ್ಸ್ ಆಕ್ಟನ್ನು ಬಿಲ್ಲನ್ನು ಅವರು ಅಮೆಂಡ್‌ಮೆಂಟ್ ಮಾಡಿಲ್ಲ, ಅದು ನನಗೂ ಗೊತ್ತಿದೆ, ಮಾನ್ಯ ಜಾಲಪ್ಪನವರೇ ಅಲ್ಲಿ ಲ್ಯಾಂಡ್ ರಿಫಾರ್ಮ್ಸ್ ಆಕ್ಟನ್ನು ಅಮೆಂಡ್‌ಮೆಂಟ್ ಮಾಡಿ ಅಲ್ಲಿ ಕೈಗಾರಿಕೆಗಳಿಗೆ ಭೂಮಿಯನ್ನು ಕೊಟ್ಟಿಲ್ಲ. ನನಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದೆ. ತಮಗೆ ಗೊತ್ತಿರುವ ಹಾಗೆ ಇಡೀ ಭಾರತದೇಶದಲ್ಲೇ ಕರ್ನಾಟಕ ಭೂಸುಧಾರಣಾ ಕಾನೂನು ಪ್ರಗತಿಪರವಾಗಿದೆಯೆಂದು ಹೇಳಿ, ಪಶ್ಚಿಮಬಂಗಾಳ ಮತ್ತು ಕೇರಳ ರಾಜ್ಯದವರೇ ಅದನ್ನು ಒಪ್ಪಿಕೊಂಡಿದ್ದಾರೆ. ಅವರಿಗೆ ಏಕೆ ನೀವು ಕಂಪೇರ್ ಮಾಡುತ್ತೀರಿ? ಪಶ್ಚಿಮ ಬಂಗಾಳದಲ್ಲಿ ಏನಿದೆ, ಕೇರಳದಲ್ಲಿ ಏನಿದೆ ನೀವು ಏನು ಮಾಡಿದ್ದೀರಿ That is not the argument. The argument here is ನಮ್ಮ ಆಕ್ಟ್ ಎಲ್ಲರಿಗಿಂತ ಚೆನ್ನಾಗಿರತಕ್ಕದ್ದು ಅದನ್ನು ನೀವು ಜೋಪಾನ ಮಾಡಿ. ಅದಕ್ಕೆ ಇನ್ನು ಶಕ್ತಿ ತುಂಬಿ, ಜನರಿಗೆ ಇನ್ನು ಹೆಚ್ಚು ಸಹಾಯವಾಗುವ ರೀತಿಯಲ್ಲಿ ಮಾಡಿಯೆಂದು ಹೇಳಿದರೆ ಆರ್ಗ್ಯುಮೆಂಟ್‌ಗೋಸ್ಕರ ಒಂದೊಂದು ಪೇಪರ್ ತರುವುದು ಇದು ಪಶ್ಚಿಮ ಬಂಗಾಳದ್ದು ಇದೆ. ಇದು ಕೇರಳದ್ದು ಅದೆ What is this? This is not the solution.

ಶ್ರೀ ಆರ್.ಎಲ್. ಜಾಲಪ್ಪ : ಅವರು ಹೇಳಿದ್ದಾರೆ, ನನ್ನ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಇನ್ನು ಪೂರ್ಣ ಮಾಡಿಲ್ಲ, ಲ್ಯಾಂಡ್ ಅಕ್ವಿಜಿಶನ್ ಮಾಡಬೇಕಾದರೆ ಭೂಮಿಯನ್ನು ಎಲ್ಲಿಂದ ತರಬೇಕೆಂದು ಕೇಳಿದ್ದಕ್ಕೆ ನಾನು ಹೇಳುತ್ತೇನೆ, ಎಲ್ಲಿ ಕಾರ್ಖಾನೆ ಮಾಡುತ್ತಿರೋ ಅಲ್ಲಿ ಭೂಮಿಯನ್ನು ಅಕ್ವೈರ್ ಮಾಡಿ. ಅದಕ್ಕೋಸ್ಕರ ಇಡೀ ಕರ್ನಾಟಕ ಭೂಸುಧಾರಣಾ ಆಕ್ಟನ್ನು ತಿದ್ದುಪಡಿ ಮಾಡತಕ್ಕ ಅವಶ್ಯಕತೆಯಿಲ್ಲ. ಏಕೆಂದರೆ ಕಾರ್ಖಾನೆಗಳನ್ನು ನೀವು ಎಲ್ಲಾ ಕಡೆ ಮಾಡುತ್ತಿಲ್ಲ.

ಫ್ಲೋರಿಕಲ್ಚರನ್ನು ನೀವು ಎಲ್ಲಾ ಕಡೆ ಮಾಡುತ್ತಿಲ್ಲ, ಹಾರ್ಟಿಕಲ್ಚರನ್ನು ನೀವು ಎಲ್ಲಾ ಕಡೆ ಮಾಡುತ್ತಿಲ್ಲ. ಹಾರ್ಟಿಕಲ್ಚರ್ ಮಾಡತಕ್ಕದ್ದು ಕರಾವಳಿ ಜಿಲ್ಲೆಗಳಲ್ಲಿ, ಫ್ಲೋರಿಕಲ್ಚರ್ ಮಾಡತಕ್ಕದ್ದು ಎಲ್ಲಿ ನೀರು ಕಡಿಮೆ ಇರುತ್ತದೆ ಅಲ್ಲಿ ನೀವು ಮಾಡುತ್ತೀರಿ. ಎಲ್ಲಿ ಅವಶ್ಯಕತೆಯಿದೆಯೋ ಅಲ್ಲಿ ಲ್ಯಾಂಡ್ ಅಕ್ವಿಜಿಶನ್ ಮಾಡಿ. ಆ ಆಕ್ಟನ್ನು ಅಮೆಂಡ್‌ಮೆಂಟ್ ಮಾಡಿ. ಹೆಚ್ಚು ಬಲ ಬರುವ ರೀತಿಯಲ್ಲಿ ಆ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡಿ. ಹೆಚ್ಚು ಪರಿಹಾರ ಕೊಡುವ ರೀತಿಯಲ್ಲಿ ಅಮೆಂಡ್‌ಮೆಂಟ್ ಮಾಡಿ. ಕೋರ್ಟ್‌ಗೆ ಹೋಗಿ ಸ್ಟೇ ತರಲಿಕ್ಕೆ ಸಾಧ್ಯವಿಲ್ಲದ ರೀತಿಯಲ್ಲಿ ಅಮೆಂಡ್‌ಮೆಂಟ್ ಮಾಡಿ. ಅಥವಾ ಬೇಗ ಒಂದೆರಡು ತಿಂಗಳುಗಳಲ್ಲಿ ಭೂಮಿ ಬೇಕು, ನಿಮ್ಮ ತೊಂದರೆ ಏನೆಂದರೆ ಕೋರ್ಟ್‌ಗೆ ಹೋದರೆ ಐದಾರು ವರ್ಷಗಳಾಗುತ್ತದೆ ಕೋರ್ಟ್‌ಗೆ ಹೋಗುತ್ತಾರೆಂದು ಹೇಳುತ್ತೀರಿ. ಆ ಆಕ್ಟನ್ನು ಅಮೆಂಡ್‌ಮೆಂಟ್ ಮಾಡಿ ಅವರು ಕೋರ್ಟ್‌ಗೆ ಹೋಗುತ್ತಾರೆಂದು ಹೇಳುತ್ತೀರಿ. ಆ ಆಕ್ಟನ್ನು ಅಮೆಂಡ್‌ಮೆಂಟ್ ಮಾಡಿ ಅವರು ಕೋರ್ಟ್‌ಗೆ ಹೋಗದ ಹಾಗೆ ಮಾಡಿ. ನಿಮಗೆ ಎಲ್ಲಿ ಅವಶ್ಯಕತೆಯಿದೆ ಅಲ್ಲಿ ಅಕ್ವೈರ್ ಮಾಡಿ. ಅದಕ್ಕೋಸ್ಕರ ಇಡೀ ಭೂಸುಧಾರಣಾ ಕಾನೂನನ್ನು ತಿದ್ದುಪಡಿ ಮಾಡಿ ಮಾಡತಕ್ಕ ಅವಶ್ಯಕತೆಯಿಲ್ಲ. ಇದರಲ್ಲಿ ಏನಾಗುತ್ತದೆಂದರೆ ಮಾನ್ಯ ಕಂದಾಯ ಸಚಿವರಾದ ಜಾಲಪ್ಪನವರು ಸ್ವಲ್ಪ ತಾಳ್ಮೆಯಿಂದ ಕೇಳಬೇಕು. ಹಳ್ಳಿಗಾಡಿನಲ್ಲಿ ಒಂದೆರಡು ಎಕರೆ ಭೂಮಿಯನ್ನು ಇಟ್ಟುಕೊಂಡಿರುತ್ತಾರೆ. ಅಲ್ಲಿ ಕಾರ್ಖಾನೆ ಮಾಡುವುದಿಲ್ಲ, ಈ ಆಕ್ಟನ್ನು ಅಮೆಂಡ್ ಮಾಡಿದರೆ ಏನಾಗುತ್ತದೆಂದರೆ ಅಲ್ಲಿ ಲೋಕಲ್ ಆಗಿರತಕ್ಕ ಶ್ರೀಮಂತರು ಅವರಿಗೆ ಅನುಕೂಲವಾಗುತ್ತದೆ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ. ಇವತ್ತು ತಾವೇನು ವಾದ ಮಾಡುತ್ತೀರಿ, ವ್ಯವಸಾಯದಿಂದ ಲಾಭವಿಲ್ಲ, ಆದ್ದರಿಂದ ಭೂಮಿಯನ್ನು ಮಾರಾಟ ಮಾಡಿ ಹಣವನ್ನು ಬ್ಯಾಂಕಿನಲ್ಲಿಟ್ಟುಕೊಂಡರೆ ಬಡ್ಡಿ ಬರುತ್ತದೆ ಜೀವನ ಮಾಡಬಹುದೆಂದು. ಅದಕ್ಕೆ ಮಾನ್ಯ ಖರ್ಗೆಯವರು ಒಳ್ಳೆಯ ಉದಾಹರಣೆಯನ್ನು ಕೊಟ್ಟಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ : ಭೂಮಿಯನ್ನು ಮಾರಲೇಬೇಕೆಂದು ಏನೂ ಕಂಪಲ್‌ಷನ್ ಇಲ್ಲ, ಬೇಕಾದರೆ ಕೊಡಬಹುದು ಇಲ್ಲದಿದ್ದರೆ ಇರಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾರಲೇಬೇಕೆಂದು ಕಂಪಲ್‌ಷನ್ ಎಲ್ಲೂ ಇಲ್ಲ. ಆದರೆ ಪರಿಸ್ಥಿತಿಯನ್ನು ಆ ರೀತಿ ಸೃಷ್ಟಿ ಮಾಡಿದಾಗ ಮಾರಿಯೇ ಮಾರುತ್ತಾರೆ. ಹಾಗಾದರೆ ಈ ರೀತಿ ಕಂಪಲ್‌ಷನ್ ಇಲ್ಲವೆಂದರೆ, ಲ್ಯಾಂಡ್ ರಿಫಾರ್ಮ್ಸ್ ಬಿಲ್ಲನ್ನು ತರತಕ್ಕ ಅವಶ್ಯಕತೆಯಿರಲಿಲ್ಲ, ಲ್ಯಾಂಡ್ ಸೀಲಿಂಗ್ ಬಿಲ್ಲನ್ನು ತರತಕ್ಕ ಅವಶ್ಯಕತೆ ಇರಲಿಲ್ಲ, ಕಂಪಲ್‌ಷನ್ ಪ್ರಶ್ನೆಯಿಲ್ಲ, ಇವತ್ತು ಪರಿಸ್ಥಿತಿ ಏನಾಗಿದೆಯೆಂದರೆ ಹಣ ಸಿಗುತ್ತದೆಂದು ಹೇಳುವಾಗ...

MR. SPEAKER : You please bear with me. The primary objective of bringing the Land Reforms Act was, earlier huge extent of land holdings were with feudal lords. That was the social life in the villages. To liberate the people who were dependent on those feudal lords, this Act was brought about.

ಈಗ the impact of this, whatever we are discussing here, I leave it to the wisdom of the House.

ಎಕನಾಮಿಕ್ ಆಸ್ಪೆಕ್ಟ್ - ಅಷ್ಟೇ ಈಗ. ಸೋಶಿಯಲ್ ಆಸ್ಪೆಕ್ಟ್ ಬರುವುದಿಲ್ಲ, ಈಗ ಅವರು ಲಿಬರೇಟ್ ಆಗಿ ಆಯಿತು. ನೀವು ಹೇಳಿದಂತೆ ಶ್ರೀನಿವಾಸಪುರದಲ್ಲೋ, ಬಾಗೇಪಲ್ಲಿಯಲ್ಲೋ ಒಂದು ಎಕರೆಯೋ, ಎರಡು ಎಕರೆಯೋ ಯಾರಾದರೂ ದುಡ್ಡಿಗೆ

ತೆಗೆದುಕೊಂಡರೂ ಕೂಡ he cannot become a fedual lord because lordship has been demolished. Hats off to late Deveraj Urs, he has demolished the feudal lordship in Karnataka. No lord can again take birth now. It is only economic lordship.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ತಮ್ಮ ಭಾವನೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಕನಾಮಿಕ್ ಆಸ್ಪೆಕ್ಟ್ ಮಾನವೀಯತೆಯನ್ನು ಕಳೆದುಕೊಂಡಿರಬೇಕಾಗಿಲ್ಲ.

MR. SPEAKER : I am not substantiating, it is left to the wisdom of the House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ನಾವು ಅರ್ಥ ಮಾಡಿಕೊಂಡಿದ್ದೇವೆ. ಆದರೆ ಈ ಪುನಃ ಪರಿಸ್ಥಿತಿ ಏನು ಬರುತ್ತದೆ ಎಂದರೆ, ಯಾವುದೇ ಒಂದು ರೀತಿಯಲ್ಲಿ ಹಾರ್ಟಿಕಲ್ಚರಲ್ ಹೆಸರಿನಲ್ಲಿ ಅಲ್ಲಿರತಕ್ಕಂಥ ಜಮೀನುದಾರನು ಪುನಃ ನೂರು ಎಕರೆ ತೆಗೆದುಕೊಂಡು ತನ್ನ ಲ್ಯಾಂಡ್‌ಲಾರ್ಡ ಸಿಮ್‌ನ್ನು ಕ್ರಿಯೇಟ್ ಮಾಡತಕ್ಕಂಥ ಸಾಧ್ಯತೆ ಇದೆ. ಅದಕ್ಕಾಗಿ...

ಅಧ್ಯಕ್ಷರು : ಖರ್ಗೆಯವರೇ, ತಾವು ರೆವಿನ್ಯೂ ಮಿನಿಸ್ಟರ್ ಆಗಿದ್ದರಂಥವರು. ಮೊದಲೇ ನಾವು 54 ಎಕರೆ ಸೀಲಿಂಗ್ ಅಂತ ಇಟ್ಟರೂ ಕೂಡ, ಬಹಳ ಪ್ರೋಗ್ರೆಸ್ಸಿವ್ ಲ್ಯಾಂಡ್ ರಿಫಾರ್ಮ್ಸ್ ನಮ್ಮದು ಅಂತ ಹೇಳಿಕೊಂಡರೂ ಕೂಡ, ಅನೇಕ ಜನ ಶ್ರೀಮಂತರು ಹಲವಾರು ಜನರ ಹೆಸರು ಇಟ್ಟುಕೊಂಡು ಇವತ್ತಿಗೂ ನೂರಾರು ಎಕರೆ ಭೂಮಿಯನ್ನು ಇಟ್ಟುಕೊಂಡಿರುವುದನ್ನು ನಾವು ನೋಡಿದ್ದೇವೆ.

(ಗೊಂದಲ)

MR. SPEAKER : They still continue. Despite the best Act in force still a few families have managed to retain a huge extent of land. That is not possible in old Mysore area, that is possible only in integrated Karnataka.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗೆಂದು ಹೇಳಿ ಸೀಲಿಂಗ್ ಏಕೆ?

MR. SPEAKER : I am not substantiating.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ತಾವು ಇರಲಿಲ್ಲ, ಅದಕ್ಕೇ ನಾನು ಹೇಳಿದೆ. ತಲೆನೋವು ಇದೆ ಅಂತ ತಿಳಿದುಕೊಂಡರೆ ಔಷಧಿ ಉಪಯೋಗಿಸುವ ಬದಲು ತಲೆಯನ್ನೇ ಕಟ್ ಮಾಡಿದರೆ ಹೇಗೆ?

ಅಧ್ಯಕ್ಷರು : ತಲೆ ತೆಗೆಯಬೇಕೆಂದು ನಾನು ಹೇಳುತ್ತಿಲ್ಲ, please don't attribute it to me.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಹಾಗಾದರೆ ಪರೋಕ್ಷವಾಗಿ ಅವರ ಪರವಾಗಿ ಇದ್ದೀರಿ ಎಂದು ತಾವೇ ಒಪ್ಪಿಕೊಂಡುಬಿಟ್ಟಿರಿ.

MR. SPEAKER : No, impossible. I said, I leave it to the wisdom of the House. I was explaining to you that under the changed circumstances we have achieved one thing. Now there cannot be a feudal lords. Even if he has huge extents of land he cannot wield that lordship over his subjects in

the village. That social awareness has come about. We have passed that stage. ಅದರ ಅಸ್ಪೆಕ್ಟ್ ಬಗ್ಗೆ ನಾನು ಹೇಳುತ್ತಿದ್ದೇನೆ.

SRI G.V. SREERAMA REDDY : Feudalism has been demolished but capitalist agriculture has been introduced.

ಅಧ್ಯಕ್ಷರು : ಡಾ॥ ಶಂಕರನಾಯಕ್ ಏನೋ ಹೇಳಬೇಕೆಂದು ಇದ್ದಾರೆ.

ಡಾ॥ ಶಂಕರನಾಯಕ್ : ವಿರೋಧಪಕ್ಷದವರ ವಾದ ಕೇಳುತ್ತಾ ಇದ್ದರೆ, ಇವರೇನು ಪ್ರಧಾನಮಂತ್ರಿಯವರ ಉದಾರೀಕರಣ ಇದೆಯಲ್ಲ, ಅದರ ವಿರುದ್ಧವಾಗಿ ಮಾತನಾಡುತ್ತಿದ್ದಾರೋ ಅದರ ಪರವಾಗಿ ಮಾತನಾಡುತ್ತಿದ್ದೀರೋ, ಅಂತ ನಮಗಂತೂ ಗೊತ್ತಾಗುತ್ತಿಲ್ಲ. ಪ್ರಧಾನ ಮಂತ್ರಿಯವರು ತಂದಿರತಕ್ಕಂಥ ಉದಾರೀಕರಣದ ಬಗ್ಗೆ ನಾವು ವಿರುದ್ಧವಾಗಿ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ರಧಾನಮಂತ್ರಿಗಳು ಹಾಗೆ ಹೇಳಿಲ್ಲ, ಅವರು ಹೇಳಿದ್ದುದು ಇಂಡಸ್ಟ್ರಿಯಲ್ ಲಿಬರ್ಲೈಸೇಶನ್ ಆಗಬೇಕು ಎಂದು. Hon'ble member has not understood it.

ಡಾ॥ ಶಂಕರನಾಯಕ್ : ವಾದಮಾಡಲಿ, ಆದರೆ ಮೊಂಡುವಾದ ಏಕೆ? ಈಗ ತಾವು ಹೇಳಿದಿರಿ ಪ್ರಧಾನಮಂತ್ರಿಗಳು ಉದಾರೀಕರಣ ಮಾಡಿದ್ದಾರೆ, ದೇಶ ಉದ್ಧಾರವಾಗುತ್ತದೆ ಅಂತ. ಇಲ್ಲಿ ನೋಡಿದರೆ ಬೇಡ ಅಂತ ಹೇಳುತ್ತೀರೋ?

ಶ್ರೀ ಆರ್.ಎಲ್. ಜಾಲಪ್ಪ : ಈ ತರಹ ಅಮೆಂಡ್‌ಮೆಂಟ್ ಮಾಡಿದ್ದರಿಂದ ಲ್ಯಾಂಡ್ ರೇಟ್ ಜಾಸ್ತಿಯಾಗುತ್ತಿದೆ. ಎಲ್ಲರೂ ಜಮೀನು ಕೊಂಡು ಬಿಡುತ್ತಾರೆ ಅಂತ ಹೇಳುತ್ತಿದ್ದೀರಿ. ಸೀಲಿಂಗ್ ಲಿಮಿಟ್ 54 ಎಕರೆ ಅಂತ ನಾವು ಮಾಡಿದ್ದೇವಲ್ಲ, ಎಷ್ಟು ಜನ ಈಗ 54 ಎಕರೆ ಕೊಂಡುಕೊಂಡು ಬಿಟ್ಟಿದ್ದಾರೆ? ಅಲ್ಲೇ ಒಂದು ಡಿಫೆಕ್ಟ್ ಇತ್ತು. ನಾನೂನು 54. ಎಕರೆ ಇಟ್ಟುಕೊಳ್ಳಬಹುದು, ನನ್ನ ಮೇಜರ್ ಸನ್ಸ್ ಕೂಡ 54 ಎಕರೆ ಇಟ್ಟುಕೊಳ್ಳಬಹುದು. ಇದು ಲಿಬರಲೈಸೇಶನ್ ಮಾಡಿದ ತಕ್ಷಣಾನೇ ಎಲ್ಲರೂ ಜಮೀನು ಕೊಂಡುಕೊಂಡು ಬಿಡುತ್ತಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ, This is subject to certain conditions and rules to be framed.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಅಧ್ಯಕ್ಷರೇ Subject to certain conditions ಅಂತ ಹೇಳತಕ್ಕಂಥಾದ್ದು, ನಾನೂ ನಿಮಗೆ ಹೇಳುತ್ತಿದ್ದೇನೆ. ನಿಮಗೆ ಇಂಡಸ್ಟ್ರೀಸ್‌ಗೆ ಭೂಮಿ ಬೇಕಾದರೆ ಎಲ್ಲಿ ಇಂಡಸ್ಟ್ರೀಯನ್ನು ಪ್ರಾರಂಭ ಮಾಡಬೇಕೆಂದು ಇದ್ದೀರೋ, ಅಲ್ಲಿ ಲ್ಯಾಂಡ್ ನೀವು ಅಕ್ವೈರ್ ಮಾಡಿ ಅಂತ ನಾನು ಹೇಳಿದ್ದುದು. ಒಂದು ಮಾತಂತೂ ಸತ್ಯ ಹೇಳಿರತಕ್ಕಂಥಾದ್ದು By the previous land reforms Act Fedualism has been abolished by an amendment, to that Act, new agriculture capitalist has been introduced by this Government. There is no question of social justice involved here social problem is involved here. It is only a question of business. We want money, that is their policy.

ಆದ್ದರಿಂದ ಆ ರೀತಿ ಅವರದ್ದು ಧೋರಣೆ ಇದ್ದರೆ ನಮ್ಮದೇನೂ ಅಭ್ಯಂತರ ಇಲ್ಲ. ಸನ್ಮಾನ್ಯ ಸಭಾಧ್ಯಕ್ಷರೇ, ಪ್ರಧಾನಮಂತ್ರಿಗಳು ತಂದಂಥ ಲ್ಯಾಂಡ್ ರಿಫಾರ್ಮ್ಸ್‌ನ್ನು ನಾವು ಅವತ್ತು ವಿರೋಧ ಮಾಡಿದ್ದೆವು. ನಾವು ಅದಕ್ಕೇನೂ ಬೆಂಬಲ ಕೊಟ್ಟಿಲ್ಲ. ಇಲ್ಲಿ ವಿಪರ್ಯಾಸ ಏನು ಎಂದರೆ ಇವರು ಹೊಸಹೊಸ ಇಂಡಸ್ಟ್ರೀಸ್ ಬರುತ್ತಾ ಇವೆ, ಕಾರ್ಖಾನೆಗಳು ಆಗಬೇಕೆಂದು ಹೇಳುತ್ತಿದ್ದಾರೆ, Unfortunately the Prime

Minister who introduced the new economic policy, that Prime Minister has not at all asked any State Government for land reforms.

MR. SPEAKER : You don't have to say to a person who is dieing by consumming pollidol.

ಪಾಯಿಸನ್ ಕೊಟ್ಟುಬಿಟ್ಟು ಕುಡಿರಿ ಅಂತ ಹೇಳಿದರೆ you don't ask him to die ಅಂತ ಹೇಳಿದ ಹಾಗೇನೂ ಆಗುವುದಿಲ್ಲ. the resultant effect of consuming posion is death. If you administer poison to a person you don't have to tell that you are asking him to die. The resultant effect is death.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ವಿಷ ಎಂದು ಮಾತನಾಡಿದಂಥ ಜನ ವಿಷವನ್ನು ಕುಡಿಯುವುದಕ್ಕೆ ನಾವೇ ಮುಂದೆ ಹೋಗುತ್ತೇವೆ ಎಂದು ಹೇಳುತ್ತಿದ್ದಾರೆ. ಯಾವ ಜನ ನ್ಯೂ ಎಕನಾಮಿಕ್ ಪಾಲಿಸಿಯನ್ನು ವಿಷ ಅಂತ ಹೇಳಿದರೋ, ಅವರು ಆ ವಿಷಯವನ್ನು ನಾವೇ ಮೊದಲು ಕುಡಿಯುವುದಕ್ಕೆ ಅರ್ಹರಿದ್ದೀವಿ ಅಂತ ಹೇಳುತ್ತಿದ್ದಾರೆ. ಅದನ್ನು ಇಲ್ಲಿ ಪ್ರಶ್ನೆ ಮಾಡಬೇಕಾಗುತ್ತದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಸಾಮಾಜಿಕ ನ್ಯಾಯ ಎಂದು ಹೇಳತಕ್ಕಂಥ ಪ್ರಶ್ನೆಯನ್ನು ಇಲ್ಲಿ ಕೈಬಿಟ್ಟಿದ್ದಾರೆ. ಬಂಡವಾಳ ಶಾಹಿಗಳನ್ನು ತಯಾರು ಮಾಡುವುದಕ್ಕೆ ಈ ಬಿಲ್‌ನ್ನು ತರುತ್ತಿದ್ದಾರೆ. ಬ್ಲಾಕ್‌ಮನಿಯನ್ನು ಇಟ್ಟುಕೊಂಡಿರತಕ್ಕಂಥ ಇಂಡಸ್ಟ್ರಿಯಲಿಸಟ್ಸ್, ಬ್ಲಾಕ್ ಮಾರ್ಕೆಟ್ ಮಾಡಿದಂಥ ಜನ ಕಪ್ಪು ಹಣವನ್ನು ಬೆಳ್ಳಗೆ ಮಾಡಿಕೊಳ್ಳುವುದಕ್ಕೆ ಭೂಮಿ ಮೇಲೆ ಹಾಕುವುದಕ್ಕೆ ಇದಕ್ಕೆ ಒಂದು ಅವಕಾಶ ಇದೆ. ನ್ಯಾಷನಲ್ ಹೈವೇ ನಂ. 7ರಲ್ಲಿ ಸುಮಾರು ಎಸ್ಟೇಟ್‌ಗಳು ಇವೆ. ನಿವೃತ್ತ ಐ.ಎಸ್.ಎಸ್. ಅಧಿಕಾರಿಗಳು, ಅವರು ಇವರು ಎಲ್ಲ ಸೇರಿ ಎಸ್ಟೇಟ್‌ಗಳನ್ನು ತೆಗೆದುಕೊಂಡಿದ್ದಾರೆ. ಇಲ್ಲಿ ಸಂಪಾದನೆ ಮಾಡಿದ ಕಪ್ಪು ಹಣವನ್ನೆಲ್ಲ ತೆಗೆದುಕೊಂಡು ಹೋಗಿ ಭೂಮಿಮೇಲೆ ಹಾಕಿ, ಕಪ್ಪು ಹಣವನ್ನು ಬಿಳಿ ಹಣ ಮಾಡುವುದಕ್ಕೆ ಈ ಬಿಲ್ ಅವಕಾಶ ಮಾಡಿಕೊಡುತ್ತಾ ಇದೆ. ಅದರ ಜೊತೆಗೆ ಇಡೀ ಕೃಷಿ ರಂಗವನ್ನು ದಿವಾಳಿ ಎಬ್ಬಿಸಿ ಆಹಾರಸಾಮಗ್ರಿಗಳ ಬೆಳವಣಿಗೆ ಕುಂಠಿತವಾಗಿ ಇಡೀ ರಾಜ್ಯದ ಜನತೆಗೆ ಈ ತಿದ್ದುಪಡಿಯಿಂದ ದ್ರೋಹ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಈ ತಿದ್ದುಪಡಿಯನ್ನು ಯಾವುದೇ ರೀತಿಯಿಂದ ಸಮರ್ಥನೆ ಮಾಡಲಿಕ್ಕೆ ಸಾಧ್ಯತೆ ಇಲ್ಲ ಅಂತ ಹೇಳಿ ನಾನು ಸ್ಪಷ್ಟವಾಗಿ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಶ್ರೀ ಕಾಗೋಡು ತಿಮ್ಮಪ್ಪ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ. ಇನ್ನೂ ತುಂಬಾ ಜನರು ಮಾತನಾಡುವವರು ಇದ್ದಾರೆ. ಸಾಕಷ್ಟು ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮಾಡಿದಮೇಲೂ ತುಂಬಾ ಜನ ಮಾತನಾಡುವವರು ಇದ್ದಾರೆ.

MR. SPEAKER : I am not willing to undermine the importance of this House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಹಳ ಮುಖ್ಯವಾದ ವಿಷಯ ಇದೆ.

MR. SPEAKER : I have confidence in your capacity.

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ಏನಾಗಿದೆ ಎಂದರೆ ಮಾತನಾಡಿದವರೇ ಮಾತನಾಡಿದ್ದು. ಈಗ ಸರ್ಕಾರಕ್ಕೆ ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಬೇರೆಯವರ ಅಭಿಪ್ರಾಯವನ್ನು ಕೊಡಬೇಕಾಗುತ್ತದೆ. ಆದರೆ ಮಾನ್ಯ ಖರ್ಗೆಯವರು ಹಿರಿಯ ಸದಸ್ಯರು ಇದ್ದಾರೆ. ಅವರು ನನ್ನ ಹಾಗೆ, ಮಾತನಾಡಿದ್ದೇ ಮಾತನಾಡಿದ್ದು. ದಯವಿಟ್ಟು ಅದಕ್ಕೆ ಕಡಿವಾಣ ಹಾಕಬೇಕೆಂದು ನನ್ನ ಅಭಿಪ್ರಾಯ.

ಅಧ್ಯಕ್ಷರು : ಇಲ್ಲ, ಈ ಸೆಶನ್ ನಲ್ಲಿ ಅವರು ಮಾತನಾಡಿದ್ದನ್ನು ನಾನು ನೋಡಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, ಅವರು ಎಷ್ಟು ಮಾತನಾಡಿದರೂ ನಾನು ಕನ್ವಿನ್ಸ್ ಆಗುವ ಸ್ಥಿತಿಯಲ್ಲಿ ಇಲ್ಲ, ಮಾತನಾಡುವುದಕ್ಕೆ ನನ್ನದೇನೂ ಅಡ್ಡಿಯಿಲ್ಲ. ಟೈಮ್ಸ್ ಫಿಕ್ಸ್ ಮಾಡುವುದು ತಮ್ಮ ಅಭಿಪ್ರಾಯ. ಅದು ತಮಗೆ ಬಿಟ್ಟಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಷ್ಟು ಆರ್ಗ್ಯುಮೆಂಟ್ಸ್ ಕೇಳಿ ನಾನು ಇದಕ್ಕೆ ಕನ್ವಿನ್ಸ್ ಆಗುವುದಿಲ್ಲವೆಂದು ನೀವೇ ಹೇಳಿದ ಮೇಲೆ ಇನ್ನು ಏನು ಹೇಳಬೇಕು?

(ಗೊಂದಲ)

SRI M.P. PRAKASH : Mr. Kharge, hon'ble Minister is trying to convince you.

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ, ಇನ್ನು ಎಷ್ಟು ಸಮಯ ಬೇಕಾಗಬಹುದು?

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೆ, When everybody wants fresh air, I cannot shut down the doors to an agriculturist and make him suffort from T.S. The things have changed ಅವನಿಗೆ ವ್ಯವಸಾಯದಲ್ಲೂ ಜೀವನ ಮಾಡುವುದಕ್ಕೆ ಆಗುತ್ತಿಲ್ಲ, ಕೂಲಿ ಮಾಡಿ ಜೀವನ ಮಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬಹಳ ಜನ ಮಾತನಾಡಬೇಕಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ನಾವು ಏನು ತಂದಿದ್ದೇವೆ, ಇಂ: ಠ ಒಂದು ಆಕ್ಟ್ ಇಡೀ ರಾಷ್ಟ್ರದಲ್ಲೇ ಇಲ್ಲ. Nowhere in India, except in Kashm.r, ಅಲ್ಲೇನೂ ಈ ನಿರ್ಬಂಧಗಳು ಇಲ್ಲ, 50 ಸಾವಿರ ಇರಬೇಕು, ರೆವಿನ್ಯೂ ಮಿನಿಸಟ್ ಹತ್ತಿರ ಆರ್ಡರ್ ತೆಗೆದುಕೊಳ್ಳಬೇಕೆಂದು ಏನೂ ಇಲ್ಲ, ಇದೆಲ್ಲ ನಾಳೆ ಹೇಳುತ್ತೇನೆ. ಆಂಧ್ರದಲ್ಲಿ ಇಂಡಸ್ಟ್ರೀ ಬರಬಹುದು, ಮಹಾರಾಷ್ಟ್ರದಲ್ಲಿ ಇಂಡಸ್ಟ್ರೀ ಬರಬಹುದು, ತಮಿಳುನಾಡಿನಲ್ಲಿ ಇಂಡಸ್ಟ್ರೀ ಬರಬಹುದು. ನಮಗೆ ಮಾತ್ರ ಇಂಡಸ್ಟ್ರೀ ಬೇಡ. ಎಷ್ಟು ಚೆನ್ನಾಗಿದೆ ಇದು ನೋಡಿ. ಮಾನ್ಯ ಅಧ್ಯಕ್ಷರೇ, ಟೈಮ್ ಫಿಕ್ಸ್ ಮಾಡುವುದು ತಮಗೆ ಬಿಟ್ಟಿದ್ದು. ನನ್ನ ಅಭಿಪ್ರಾಯವನ್ನು ನಾನು ಹೇಳಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್ : ಅನೇಕ ಜನ ಫ್ಲಾರಿಕಲ್ಚರ್ ನವರು ಬಂದು ಅವರಿಗೆ ಜಮೀನು ಸಿಗದೇನೆ ಸುಮಾರು ಜನ ಪಕ್ಕದ ಹೊಸೂರಿಗೆ ಹೋದರು. ಅಲ್ಲಿ ಅವರಿಗೆ ಈ ಅವಕಾಶ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ಕಳೆದ 18 ತಿಂಗಳಲ್ಲಿ 15 ಯೂನಿಟ್ ಹಾರ್ಟಿಕಲ್ಚರ್ ನಲ್ಲಿ ಬಂದಿದೆ. 730 ಎಕರೆ 232 ಕೋಟಿ ರೂಪಾಯಿಗಳನ್ನು Investment ಮಾಡಿದ್ದಾರೆ. ನಮ್ಮಲ್ಲಿ ಮಾಡಬಾರದೇ?

ಅಧ್ಯಕ್ಷರು: ಅಲ್ಲ ನನ್ನ ಯೋಚನೆ ಏನೆಂದರೆ ಮಾನ್ಯ ಪ್ರತಿಪಕ್ಷದ ನಾಯಕರು ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ. ಅಲ್ಲಿ ಸುಮಾರು ಜನ ಮಾತನಾಡುವವರು ಇದ್ದಾರೆ. ಆದ್ದರಿಂದ ಇವತ್ತು Sabhapathi, I have noticed it. I will give an opportunity. I will take into consideration, to the feelings of all his members.

ಹೇಗೆ ಮಾಡೋಣ ಹೇಳಿ. ತಾವೆಲ್ಲ ಒಪ್ಪುವುದಾದರೆ ಸಭೆಯನ್ನು ನಾಳೆಗೆ ಮುಂದೋಡೋಣ. ಸಭೆ ಈಗ ಮುಂದೂಡಿ ಮತ್ತೆ ಬೆಳಿಗ್ಗೆ 10-00 ಗಂಟೆಗೆ ಸೇರುತ್ತದೆ.

(ಸಭೆಯು 6-22 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 27-2-96 ರಂದು ಬೆಳಿಗ್ಗೆ 10-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಅನುಬಂಧ-I

ಕರ್ನಾಟಕ ವಿಧಾನ ಸಭೆ

ಹತ್ತನೆಯ ವಿಧಾನ ಸಭೆ

(ಐದನೆಯ ಅಧಿವೇಶನ)

ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು

(ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕ, 1996

(1996ರ ವಿಧಾನ ಸಭಾ ವಿಧೇಯಕ ಸಂಖ್ಯೆ 4)

ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು, 1972ನ್ನು ತಿದ್ದುಪಡಿ ಮಾಡಲು ಮತ್ತು ಮಾನ್ಯಗೊಳಿಸಲು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಮಯಗಳು 1972ನ್ನು ತಿದ್ದುಪಡಿ ಮಾಡುವುದು ಮತ್ತು ಮಾನ್ಯಗೊಳಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ಅಧಿನಿಯಮ, 1996 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **ಕರಡು ಅಭಿವೃದ್ಧಿ ಯೋಜನೆಗೆ ಲಗತ್ತಿಸಿರುವ ವಲಯ ವಿನಿಮಯಗಳಿಗೆ ತಿದ್ದುಪಡಿ.-** ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಯಾವುದೇ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಇದ್ದರೂ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 11) ಅಡಿಯಲ್ಲಿ ರಚಿಸಿದ ಕರಡು ಅಭಿವೃದ್ಧಿ ಯೋಜನೆಗೆ ಲಗತ್ತಿಸಿದ 1972ರ ಮೇ 22ರಿಂದ 1984ರ ಅಕ್ಟೋಬರ್ 12ರವರೆಗಿನ ಅವಧಿಯಲ್ಲಿದ್ದ ವಲಯ ವಿನಿಮಯಗಳನ್ನು (ಇಲ್ಲಿ ಇನ್ನು ಮುಂದೆ ಸದರಿ ವಲಯ ವಿನಿಮಯಗಳೆಂದು ಉಲ್ಲೇಖಿಸಲಾಗುವುದು) 1972ರ ಮೇ 22ರಿಂದ ಜಾರಿಗೆ ಬರವಂತೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಮಾರ್ಪಾಟು ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

3. **ಕೆಲವು ನಿರ್ಮಾಣಗಳನ್ನು ಸಕ್ರಮಗೊಳಿಸುವುದು.-** (1) 1961ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದಲ್ಲಿ (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 11) ಅಥವಾ ಈ ಅಧಿನಿಯಮದ ಮೂಲಕ ಮಾರ್ಪಾಟು ಮಾಡಲಾದ ಸದರಿ ವಲಯ ವಿನಿಮಯಗಳಲ್ಲಿ ಏನೇ ಇದ್ದರೂ, 1972ರ ಮೇ 22ರಿಂದ 1994ರ ಅಕ್ಟೋಬರ್ 12ರವರೆಗಿನ ಅವಧಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುಮತಿಯನ್ನು ಪಡೆದ ತರುವಾಯ ಈ ಅಧಿನಿಯಮದ ಮೂಲಕ ಮಾರ್ಪಾಟಾದಂಥ ವಲಯ ವಿನಿಮಯಗಳಲ್ಲಿ ಅಥವಾ ಬೆಂಗಳೂರು ಮಹಾನಗರ

ಪಾಲಿಕೆಯು ನೀಡಿದ ಅನುಮತಿಯಲ್ಲಿ ತಿಳಿಸಿರುವುದಕ್ಕಿಂತ ಭಿನ್ನವಾಗಿ ಯಾವುದೇ ಕಟ್ಟಡವನ್ನು ನಿರ್ಮಿಸಿರುವ ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಅಂಥ ನಿರ್ಮಾಣವನ್ನು ಸಕ್ರಮಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ನಿರ್ಮಾಣಗಳನ್ನು ಸಕ್ರಮಗೊಳಿಸುವ ಉದ್ದೇಶಕ್ಕಾಗಿ ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ಸಮಿತಿ ಇರತಕ್ಕದ್ದು, ಎಂದರೆ :-

(i)	ಸರ್ಕಾರದ ಕಾರ್ಯದರ್ಶಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ	-	ಅಧ್ಯಕ್ಷ
(ii)	ಕಮೀಷನರ್ ಬೆಂಗಳೂರು ಮಹಾ ಮಹಾನಗರ ಪಾಲಿಕೆ	-	ಸದಸ್ಯ
(iii)	ಕಮೀಷನರ್ ಬೆಂಗಳೂರು, ಅಭಿವೃದ್ಧಿ ಪ್ರಾಧಿಕಾರ	-	ಸದಸ್ಯ
(iv)	ಪಟ್ಟಣ ಯೋಜನಾ ನಿರ್ದೇಶಕರು	-	ಸದಸ್ಯ ಕಾರ್ಯದರ್ಶಿ

(3) ಸಮಿತಿಯು (1)ನೇ ಉಪ-ಪ್ರಕರಣದ ಅಡಿ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅದು ಸೂಕ್ತವೆಂದು ಕಂಡುಬಂದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅದಕ್ಕೆ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಭಿನ್ನವಾದ ನಿರ್ಮಾಣವು ಅಧಿನಿಯಮದ ಮೂಲಕ ಮಾರ್ಪಾಟಾದಂಥ ಸದರಿ ವಲಯ ವಿನಿಯಮಗಳಲ್ಲಿ ಅಥವಾ ಬೆಂಗಳೂರು ಮಹಾನಗರ ಪಾಲಿಕೆಯು ನೀಡಿದ ಅನುಮತಿಯಲ್ಲಿ ತಿಳಿಸಿರುವುದಕ್ಕಿಂತ ವಾಸ್ತವಿಕವಾಗಿ ಭಿನ್ನವಾಗಿಲ್ಲವೆಂದು ಮನವರಿಕೆಯಾದರೆ, ಅದು,-

(i) ಕಟ್ಟಡ ಇರುವ ಸ್ಥಳ

(ii) ಭಿನ್ನವಾದ ನಿರ್ಮಾಣದ ಸ್ವರೂಪ ಮತ್ತು ವಿಸ್ತೀರ್ಣ,

(iii) ಇತರ ಯಾವುದೇ ಸುಸಂಗತ ಅಂಶಗಳು.

ಇವುಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸಬಹುದಾದಷ್ಟು ಮೊಬಲಗನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟು ಸಕ್ರಮಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು.

(4) ರಾಜ್ಯ ಸರ್ಕಾರವು, ಸಮಿತಿಯ ಶಿಫಾರಸ್ಸುಗಳನ್ನು ಸ್ವೀಕರಿಸಿದ ತರುವಾಯ ಮತ್ತು ಅಂಥ ನಿರ್ಮಾಣಗಳನ್ನು ಸಕ್ರಮಗೊಳಿಸುವ ಬಗ್ಗೆ ಅರ್ಜಿದಾರನು ಮೊಬಲಗನ್ನು ಸಂದಾಯ ಮಾಡಿದ ತರುವಾಯ ನಿರ್ಮಾಣವನ್ನು ಸಕ್ರಮಗೊಳಿಸುವಂತೆ ಆದೇಶಿಸಬಹುದು.

4. ಮಾನ್ಯತೆ : ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆಜ್ಞೆಯಲ್ಲಿ ಏನೇ ಇದ್ದರೂ, 1972ರ ಮೇ 22 ರಿಂದ 1984ರ ಅಕ್ಟೋಬರ್ 12 ರವರೆಗಿನ ಅವಧಿಯಲ್ಲಿ ಮಹಾನಗರ ಪಾಲಿಕೆಯು ಕಟ್ಟಡ ನಿರ್ಮಾಣಕ್ಕೆ ನೀಡಿದ ಯಾವುದೇ ಅನುಮತಿ ಮತ್ತು ಅಂಥ ಅನುಮತಿಗೆ ಅನುಗುಣವಾಗಿ ನಿರ್ಮಿಸಲಾದ ಮತ್ತು 3ನೇ ಪ್ರಕರಣದ ಅಡಿ ಸಕ್ರಮಗೊಳಿಸಲಾದ ಕಟ್ಟಡ ನಿರ್ಮಾಣವು ಸಿಂಧುವೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೂಲಕ ಮಾರ್ಪಾಟಾದಂತೆ ಸದರಿ ವಲಯ ವಿನಿಯಮಗಳಿಗೆ ಅನುಗುಣವಾಗಿ ಅನುಮತಿ ನೀಡಲಾಗಿದ್ದರೆ ಮತ್ತು ಕಟ್ಟಡಗಳನ್ನು ನಿರ್ಮಿಸಲಾಗಿದ್ದರೆ

ಹೇಗೋ ಹಾಗೆ, ಎಲ್ಲಾ ಉದ್ದೇಶಗಳಿಗಾಗಿ ಪರಿಣಾಮವನ್ನು ಹೊಂದಿರತಕ್ಕದ್ದು, ಮತ್ತು ತದನುಸಾರವಾಗಿ,

(ಎ) ಹಾಗೆ ನೀಡಲಾದ ಎಲ್ಲಾ ಅನುಮತಿಗಳನ್ನು, ನಿರ್ಮಿಸಲಾದ ಕಟ್ಟಡಗಳನ್ನು ಅಥವಾ ಮಾಡಲಾದ ವ್ಯವಹರಣೆಗಳು ಅಥವಾ ಕೃತ್ಯಗಳನ್ನು ಅಥವಾ ಕೈಗೊಳ್ಳಲಾದ ಕ್ರಮಗಳನ್ನು ಕಾನೂನಿಗೆ ಅನುಸಾರವಾಗಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಯಾವಾಗಲೂ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಬೆಂಗಳೂರು ಮಹಾನಗರ ಪಾಲಿಕೆಯ ಅನುಮತಿ ಪಡೆದು ನಿರ್ಮಿಸಲಾಗಿದ್ದಂಥ ಮತ್ತು 3ನೇ ಪ್ರಕರಣದಡಿ ಸಕ್ರಮಗೊಳಿಸಲಾದ ಕಟ್ಟಡಗಳ ಸಂಬಂಧದಲ್ಲಿ ಅಂಥ ಅನುಮತಿಯನ್ನು ರದ್ದುಗೊಳಿಸಲು ಅಥವಾ ಕಟ್ಟಡಗಳನ್ನು ಕೆಡವಿ ಹಾಕಲು ಅಥವಾ ಈ ಅಧಿನಿಯಮದಿಂದ ಮಾರ್ಪಾಟು ಮಾಡಲಾದ ಸದರಿ ವಲಯ ವಿನಿಯಮಗಳಿಗನುಸಾರವಾಗಿ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಯಾವುದೇ ಕೃತ್ಯದ ಸಿಂಧುತ್ವವನ್ನು ಪ್ರಶ್ನಿಸಲು ಯಾವುದೇ ನ್ಯಾಯಾಲಯ ಅಥವಾ ಯಾವುದೇ ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ಯಾವುದೇ ದಾವೆ ಅಥವಾ ಮುಂದುವರಿಸಿಕೊಂಡು ಬರತಕ್ಕದ್ದಲ್ಲ ಮತ್ತು ಈ ಅಧಿನಿಯಮದಿಂದ ಮಾರ್ಪಾಟು ಮಾಡಲಾದ ಸದರಿ ವಲಯ ವಿನಿಯಮಗಳಿಗನುಸಾರವಾಗಿ ನೀಡಲಾದ ಯಾವುದೇ ಅಂಥ ಅನುಮತಿ ಅಥವಾ ನಿರ್ಮಿಸಲಾದ ಕಟ್ಟಡ, ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಯಾವುದೇ ಕೃತ್ಯವನ್ನು ಅನೂರ್ಜಿತವೆಂದು ಅಥವಾ ಕಾನೂನುಬಾಹಿರವೆಂದು ಘೋಷಿಸುವ ಯಾವುದೇ ಡಿಕ್ರಿ, ತೀರ್ಪು ಅಥವಾ ಆಜ್ಞೆಯನ್ನು ಯಾವುದೇ ನ್ಯಾಯಲಯವು ಜಾರಿಗೊಳಿಸತಕ್ಕದಲ್ಲ ಅಥವಾ ಮನ್ನಣೆ ನೀಡತಕ್ಕದ್ದಲ್ಲ.

ಅನುಸೂಚಿ

(2ನೇ ಪ್ರಕರಣ ನೋಡಿ)

ಬೆಂಗಳೂರು ನಗರ ಯೋಜನಾ ಪ್ರದೇಶದ ಕರಡು ಅಭಿವೃದ್ಧಿ ಯೋಜನೆಗೆ ಲಗತ್ತಿಸಲಾದ ಎ, ಬಿ ಮತ್ತು ಸಿ ವಲಯಗಳಿಗೆ ಅನ್ವಯಿಸುವ ಮಾರ್ಪಾಡು ಮಾಡಲಾದ ವಲಯ ವಿನಿಯಮಗಳು.

ನಿವೇಶನದ ವಿಸ್ತೀರ್ಣ	ಗರಿಷ್ಠ ಸಂಖ್ಯೆಯ ಅಂತಸ್ತುಗಳು	ಅನುಮತಿಸ ಬಹುದಾದ ಗರಿಷ್ಟ ವ್ಯಾಪ್ತಿ	ಅನುಮತಿಸ ಬಹುದಾದ ಗರಿಷ್ಠ (ಎಫ್.ಎ.ಆರ್.)	ಕಟ್ಟಡಗಳು ಗರಿಷ್ಠ ಎತ್ತರ	ಕನಿಷ್ಠ ರಸ್ತೆ ಅಗಲ
500 ಚದರ ಮೀಟರುಗಳ ವರೆಗೆ	ಕೆಳ ಅಂತಸ್ತು + ನೆಲ ಅಂತಸ್ತು +7	ಶೇ. 80	2-00	25 ಮೀಟರುಗಳು	7.5 ಮೀಟರು ಗಳು
500 ಚದರ ಮೀಟರು ನೆಲ ಗಳಿಗೂ ಮೇಲ್ಪಟ್ಟು	ಕೆಳ ಅಂತಸ್ತು + ಅಂತಸ್ತು + 13	ಶೇ.70	3-00	5 ಮೀಟರುಗಳು	9.0 ಮೀಟರು ಗಳು

ದಿನಾಂಕ :

ಉದ್ದೇಶ ಮತ್ತು ಕಾರಣಗಳ ಹೇಳಿಕೆ

1984ರ ಅವಧಿಯಲ್ಲಿದ್ದ ಬೆಂಗಳೂರು ನಗರ ಯೋಜನಾ ಪ್ರದೇಶವಲಯ ವಿನಿಯಮಗಳು, 1972 - ಇದು ನೆಲ ಅಂತಸ್ತೂ ಸೇರಿದಂತೆ ಐದು ಅಂತಸ್ತುಗಳ ನಿರ್ಮಾಣಕ್ಕೆ ಉಪಬಂಧ ಕಲ್ಪಿಸಿತ್ತು. ಕೆಲವು ಪ್ರಕರಣಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯು ಐದು ಅಂತಸ್ತುಗಳಿಗೂ ಹೆಚ್ಚಿನ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಿತ್ತು. ಕೆಲವು ಕಟ್ಟಡಗಳ ಸಂಬಂಧದಲ್ಲಿ ಆಗ ಜಾರಿಯಲ್ಲಿದ್ದ ವಲಯ ವಿನಿಯಮಗಳಿಗೆ ವಿರುದ್ಧವಾಗಿ ನಗರಪಾಲಿಕೆಯು ನೀಡಿದ ಅನುಮತಿಯನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿತ್ತು ಮತ್ತು ವಲಯ ವಿನಿಯಮಗಳನ್ನು ಉಲ್ಲಂಘಿಸಿ ನೀಡಲಾದ ಅನುಮತಿಯು ಕಾನೂನುಬಾಹಿರವೆಂದು ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠ ತೀರ್ಪು ನೀಡಿತ್ತು. ವಿಶೇಷ ಅನುಮತಿಯ ರಿಟ್ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಹಾಗೂ ಉಚ್ಚನ್ಯಾಯಾಲಯದ ತೀರ್ಪನ್ನು ಪರಿಣಾಮಗೊಳಿಸಬೇಕೆಂಬ ನಿರ್ದೇಶನದೊಂದಿಗೆ 19-1-1987ರಂದು ಸರ್ವೋಚ್ಚ ನ್ಯಾಯಾಲಯ ರಿಟ್ ಅರ್ಜಿಯನ್ನು ರದ್ದುಗೊಳಿಸಿತು.

ಹೆಚ್ಚಿನ ಅಂತಸ್ತುಗಳ ಹಂಚಿಕೆ ಪಡೆದವರು ಪ್ರಕರಣವನ್ನು ಉಚ್ಚ ನ್ಯಾಯಾಲಯಕ್ಕೆ ಕೊಂಡೊಯ್ದುದರಿಂದ ಅನೇಕ ರಿಟ್ ಅರ್ಜಿಗಳು ಉಚ್ಚ ನ್ಯಾಯಾಲಯಕ್ಕೆ ಬಂದವು. ಇದರಲ್ಲಿ ಕೆಲವು ರಿಟ್ ಅರ್ಜಿಗಳನ್ನು ವಜಾ ಮಾಡಲಾಯಿತು ಮತ್ತು ಉಚ್ಚ ನ್ಯಾಯಾಲಯ ಅಧಿಕ ಅಂತಸ್ತುಗಳನ್ನು ಕೆಡವಿ ಹಾಕುವ ಆಜ್ಞೆಯನ್ನು ಸ್ಥಿರೀಕರಿಸಿತು.

ಅಂಥ ಒಂದು ಕಟ್ಟಡದ ಸಂಬಂಧದಲ್ಲಿ ಅಧಿಕ ಅಂತಸ್ತುಗಳನ್ನು ಕೆಡವಿ ಹಾಕುವ ಕಾರ್ಯ ನಿರ್ವಹಿಸದಿದ್ದುದಕ್ಕಾಗಿ ನ್ಯಾಯಾಲಯ ನಿಂದನೆ ಅರ್ಜಿಯನ್ನು ಬೆಂಗಳೂರು ಮಹಾನಗರ ಪಾಲಿಕೆಯ ಕಮೀಷನರ ವಿರುದ್ಧ ಸಲ್ಲಿಸಲಾಗಿತ್ತು. ಮೊದಲ ಐದು ಅಂತಸ್ತುಗಳ ಭದ್ರತೆ ಮತ್ತು ಸುರಕ್ಷತೆಗೆ ಭಂಗ ಬಾರದಂತೆ ಅಧಿಕ ಅಂತಸ್ತುಗಳನ್ನು ಕೆಡವಿ ಹಾಕುವ ಕಾರ್ಯ ಬಹಳ ಕಷ್ಟಕರವದುದರಿಂದ ಉದ್ದೇಶಿತ ರೀತಿಯಲ್ಲಿ ಕೆಡವಿ ಹಾಕುವ ಕಾರ್ಯ ನಿರ್ವಹಿಸಬಲ್ಲ ಸೂಕ್ತ ತಂಡವನ್ನು ಹುಡುಕಲು ನಗರ ಪಾಲಿಕೆ ಸಾಕಷ್ಟು ಪ್ರಯತ್ನ ನಡೆಸುತ್ತಿದೆ. ಆದರೆ ಇದುವರೆಗೆ ಈ ಕಾರ್ಯ ನಿರ್ವಹಿಸಲು ಯಾರೂ ಮುಂದೆ ಬಂದಿಲ್ಲ. ಅಷ್ಟೇ ಅಲ್ಲದೆ, ಕೆಡವಿ ಹಾಕುವ ಕಾರ್ಯದ ವೆಚ್ಚ ಒಂದು ಕಟ್ಟಡಕ್ಕೆ ಸಂಬಂಧಿಸಿದಂತೆ ಒಂದು ಕೋಟಿ ರೂ.ಗಳಿಗೂ ಹೆಚ್ಚಾಗಬಹುದಾದ್ದರಿಂದ ವೆಚ್ಚ ಭರಿಸಲಾಗದಷ್ಟು ಅಧಿಕವಾದುದಾಗಿದೆ.

ಹೀಗೆ ಕಟ್ಟಡಗಳನ್ನು ಕೆಡವಿ ಹಾಕುವ ಕಾರ್ಯ ಅತ್ಯಂತ ಕಷ್ಟಕರವಾದುದು. ಆದರೆ ನಿರ್ದೇಶನವನ್ನು ಪಾಲಿಸದಿದ್ದರೆ ನ್ಯಾಯಾಲಯ ನಿಂದನೆಗೆ ಗುರಿಯಾಗಬೇಕಾಗುತ್ತದೆ. ಅಲ್ಲದೆ ಫ್ಲಾಟುಗಳನ್ನು ಪಡೆದ ಅಧಿಕ ಸಂಖ್ಯೆಯ ವ್ಯಕ್ತಿಗಳ ಹಿತಾಸಕ್ತಿಯೂ ಅಪಾಯದಲ್ಲಿದೆ ಎಂಬುದನ್ನು ಗಮನಿಸಬೇಕಾಗಿದೆ.

ಈ ಸಂದರ್ಭದಲ್ಲಿ, ಬೆಂಗಳೂರು ನಗರ ಯೋಜನಾ ಪ್ರದೇಶದ ಕರಡು. ಅಭಿವೃದ್ಧಿ ಯೋಜನೆಗೆ ಅನುಬಂಧಿಸಲಾದ 1972-1984ರಲ್ಲಿ ಜಾರಿಯಲ್ಲಿದ್ದ ವಲಯ ವಿನಿಯಮಗಳನ್ನು ಪೂರ್ವಾನ್ವಯವಾಗಿ ತಿದ್ದುಪಡಿ ಮಾಡುವುದು ಮತ್ತು ಮೇಲಿನ ಉದ್ದೇಶಕ್ಕಾಗಿ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯವು ಕಾನೂನುಬಾಹಿರವೆಂದು. ಘೋಷಿಸಿರುವಂಥ ಬೆಂಗಳೂರು ಮಹಾನಗರದ ಪಾಲಿಕೆಯು ನೀಡಿದ್ದ ಅನುಮತಿಯನ್ನು ಮಾನ್ಯಗೊಳಿಸುವುದು ಅವಶ್ಯವೆಂದು ಭಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಉದ್ದೇಶಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಹೆಚ್.ಡಿ. ದೇವೇಗೌಡ,
ಮುಖ್ಯಮಂತ್ರಿ.

(B) 025206

ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ.

L. A. Vol. 1
No. of Copies 350

KARNATAKA LEGISLATURE SECRETARIAT

Published under Rule 356 of the Rules of Procedure and Conduct of Business in the Legislative Assembly.

AND

Printed by the Director, Printing, Stationery and Publications Govt. Press, Bangalore-560 001